Registered No. 408 M.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ೧ಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0.

ಪುಸ್ತಕ IX | ಮಂಗಳೂರು ತಾ. 2ನೇ ಎಪ್ರಿಲ್ ಶುಕ್ರವಾರ 1915. | ಸಂಚಿಕೆ 14.

PUBLIC ACCOUNTANT & AUDITOR,

(Certified under section 144 (2) of the Indian Companies Act, VII of 1913 to audit accounts in English, Canarese and Tamil).

M. S. Krishna Rau,

Coelho Street, Mangalore.

For Sale.

A Second-hand Remington Type-writer No. 8 in good working order. Price very moderate.

Apply to:—

M. Rama Rao,

Somaya Karnik Street, Mangalore.

ನೋಟೀಸು.

ಉಡುಪಿ ಡಿಸ್ಟ್ರಿಕ್ಟ ಮುನ್ಸೀಫ ಕೋರ್ಟಿನಲ್ಲಿ.

ದಿವಾಳಿ ಅರ್ಜಿ ನಂಬ್ರ 4/1915.

ತೋಮರ ಯಾನೆ ಶಿಮೊಂ ಕುತಿಂಞ ಅಮ್ಮು ಬಾಯಿ ಮಗ, ಉಡುಪಿ ತಾಲೂಕು ಶಿರ್ವಾ ಗ್ರಾಮದಲ್ಲಿರುವವ. — ಅರ್ಜೀದಾರ.

ಸೀನಪ್ಪ ಹೆಗ್ಗಡೆ ಕೂಡಾ ಐದು ಜನರು— ಲೇಣೆದಾರರು.

ಮೇಲ್ಕಂಡ ಅರ್ಜಿದಾರನು ತನ್ನನ್ನು ದಿವಾಳಿಯೆಂತ ಸ್ಥಾಪಿಸಬೇಕೆಂತ ಈ ಕೋರ್ಟಿಗೆ ಮನವಿಮಾಡಿದ್ದಾನೆಂತಲೂ ಆತನ ಅರ್ಜಿಯು 1915ನೇ ಇಸವಿ ಎಪ್ರಿಲ್ ತಿಂಗಳು 15ನೇ ತಾರೀಕಿಗೆ ತನಖಿಗೆ ಇಡಲ್ಪಟ್ಟದೆಯೆಂತಲೂ ಈ ಮೂಲಕ ತಿಳಿಯಪಡಿಸಲಾಗುತ್ತದೆ.

District Munsif's Court, Udipi, 19th March 1915. | **C. N. Kuppuswami Aiyar,** *District Munsif.*

ವಿಕರಿಗೆ ಸಿದ್ಧವಾಗಿದೆ! ಬಿಡಬೇಡಿರಿ!! ಮುಂದೆ ಸಿಗಲಾರದು!!

ಪ್ರಪಂಚ ಯುದ್ಧ.

ಘನಘೋರ ಸಂಗ್ರಾಮ. ಸೊಗಸಾದ ಚಿತ್ರರೂಪ.

ಯುದ್ಧಾಗ್ರಣಿಗಳ ಭಾವಚಿತ್ರ.

ಯೂರೋಪ್ ಖಂಡದಲ್ಲೆಲ್ಲಾ ಅಲ್ಲೋಲಕಲ್ಲೋಲ ಮಾಡಿ ರಕ್ತಪ್ರವಾಹವನ್ನೇ ಹೊರಳಿಸುತ್ತ ಜಗತ್ಪ್ರಳಯ ಸ್ವರೂಪವಾಗಿ ಸಾಕ್ಷಾತ್ ಕಾಲಭೈರವನಂತೆ ಕೇಳಿರುವ ಭೀಕರ ಯುದ್ಧದ ನಾಯಕರನ್ನೂ ಆಯಾ ದೇಶದ ರಾಜಾಧಿರಾಜರನ್ನೂ ಚಕ್ರವರ್ತಿಗಳನ್ನೂ ಪ್ರತ್ಯಕ್ಷದಿಂದ ನೋಡಿದಂತೆ ತೋರಿಸುವ ಸುಂದರವಾದ ಚಿತ್ರಗಳು ಥಳಥಳಿಸುವ ಬೆಣ್ಣೆ ಕಾಗದದಲ್ಲಿ ಎರಡು ಬಣ್ಣಗಳಿಂದ ಮುದ್ದಾಗಿ ಮುದ್ರಿಸಿ ಕ್ರಯಕ್ಕೆ ಸಿದ್ಧವಾಗಿವೆ. ತ್ವರೆಮಾಡಿರಿ, ಸ್ವಲ್ಪವೇ ಪ್ರತಿಗಳಿವೆ, ತ್ವರೆಮಾಡಿರಿ.

ಬಾಲ ಸುಟ್ಟ ಕೋತಿಯಂತೆ ಅತ್ತಿತ್ತ ತಿರುಗುತ್ತ ವ್ಯಾಪಾರದ ಹಡಗುಗಳನ್ನೂ ಯುದ್ಧದ ಹಡಗುಗಳನ್ನೂ ಹತಮಾಡಿ ಕಡೇಗೆ ತಾನೂ ಉರಿದು ಸಮುದ್ರದಡಿಗೆ ಏಪಾತವಾದ ಎಮ್ಡನ್ನನ್ನು ನೋಡಿರುವಿರಾ, ಅದರ ನಾಯಕನನ್ನು ಬಲ್ಲಿರಾ, ಅದು ಮದರಾಸನ್ನು ಮುತ್ತಿ ಮಾಡಿದ ಅನಾಹುತಗಳನ್ನು ನೋಡಿರುವಿರಾ, ಕಡೆಗೆ ಅದಕ್ಕೆ ಗತಿ ಕಾಣಿಸಿದ ಸಿಡ್ನಿ ಎಂಬ ಹಡಗನ್ನು ಕಂ[illegible]ರಾ, ಅದರ ನಾಯಕ ಶಿಖಾಮಣಿಯನ್ನು ನೋಡಿರುವಿರಾ, ಧೀರಾಧಿವೀರನೆಂದೆನ್ನಿಸಿದ ಪ್ರತಾಪೋದ್ದೀಪಿತನಾದ ಪ್ರತಾಪಸಿಂಗನನ್ನು ಕಂಡಿರುವಿರಾ.

ಪಂಚಪಾಂಡವರಂತಿರುವ ಇಂಗ್ಲಂಡ್, ರಷ್ಯಾ, ಫ್ರಾನ್ಸ್, ಬೆಲ್ಜಿಯಮ್, ಜಪಾನ್ ಚಕ್ರವರ್ತಿಗಳನ್ನೂ, ದುರ್ಯೋಧನ, ದುಶ್ಯಾಸನ, ದುಶ್ಶಳೆಗಳಂತೆ ಕಾಲಾಗ್ನಿಗೆ ತುತ್ತಾಗುವದಕ್ಕಿರುವ ಜರ್ಮನಿ, ಆಸ್ಟ್ರಿಯಾ, ತುರ್ಕಿ ಚಕ್ರವರ್ತಿಗಳನ್ನೂ ನೋಡಿರುವಿರಾ, ಆಯಾ ರಾಷ್ಟ್ರಗಳ ಸೇನಾನಾಯಕರನ್ನೂ ನೌಕಾನಾಯಕರನ್ನೂ ವಾಯುವಿಮಾನ ನಾಯಕರನ್ನೂ ನೋಡಿರುವಿರಾ, ಇಲ್ಲವಾದರೆ ನಮ್ಮಲ್ಲಿ ಕ್ರಯಕ್ಕೆ ಸಿದ್ಧವಾಗಿರುವ ಚಿತ್ರವನ್ನು ತರಿಸಿ ನೋಡಿ ಈ ಚಿತ್ರಗಳ ಸಹಾಯದಿಂದ ಯುದ್ಧ ಸಂಗತಿಗಳು ಮನಸ್ಸಿನಲ್ಲಿ ಬಲು ಸುಲಭವಾಗಿ ನಾಟುವವು. ಪಕ್ಷಿಯಂತೆ ಆಕಾಶದಲ್ಲಿ ಹಾರಾಡುತ್ತಿರುವ ವಾಯುವಿಮಾನವನ್ನೂ, ಮತ್ಸ್ಯಗಳಂತೆ ಸಮುದ್ರದಲ್ಲಿ ಅಲೆದಾಡುತ್ತಿರುವ ಯುದ್ಧದ ಹಡಗವನ್ನೂ ಜರ್ಮನರು ಹೊಸದಾಗಿ ರಚಿಸಿದ ಫಿರಂಗಿಯನ್ನೂ ಈ ಚಿತ್ರಗಳ ಸಹಾಯದಿಂದ [illegible] ನೋಡಬಹುದು. ಸಮಸ್ತರೂ ನೋಡಬೇಕಾದ ವಿಷಯ.

ಬೆಲೆ 1 ರೂಪಾಯಿ 4 ಆಣೆ ಮಾತ್ರ.

ಷರಾ. ಯುದ್ಧವಾರಂಭವಾದಮೇಲೆ ರಣರಂಗದಿಂದ ಈಚೆಗೆ ಹೊಸದಾಗಿ ಎತ್ತಿದ ಫೋಟೋಗಳನ್ನು ಸೀಮೆಯಿಂದ ತರಿಸಿ ಅಚ್ಚು ಮಾಡಿಸಿದ್ದೇವೆ. ಪ್ರತಿಯೊಂದು ಪಟವನ್ನೂ ನಲುಗದಂತೆ ಮರದ ಕಟ್ಟಿಗೆಯಲ್ಲಿ ಸುತ್ತಿ ಭದ್ರವಾಗಿ ಸೇರುವಂತೆ ರವಾನಿಸಿಕೊಡುತ್ತೇವೆ. ಈ ದಿನವೇ ಬರೆಯಿರಿ. ಅಂಚೆ ಹಾಸಲು ಫ್ರೀ.

ನಮಗೆ ಬರೆಯತಕ್ಕ ಆರ್ಡರುಗಳನ್ನು ಸ್ವಹಸ್ತಾಕ್ಷರಗಳಿಂದ ಬರೆಯತಕ್ಕದ್ದು ಮತ್ತು ವಿಳಾಸಗಳನ್ನು ವಿವರವಾಗಿ ಬರೆಯತಕ್ಕದ್ದು.

ವಿಳಾಸ:—ಮ್ಯಾನೇಜಿಂಗ್ [illegible]

NOTICE.

Stany Brothers,

Candle Garden, Mangalore,

ಬಲ್ಮಠ ಕದ್ರಿ ರಸ್ತೆ ಬಳಿ ನಮ್ಮ "ಕೇಂಡಲ್ ಗಾರ್ಡನ್" ಎಂಬ ಸ್ಥಳದಲ್ಲಿ 908ನೇ ಇಸವಿ ಆಗಸ್ಟ್ ತಿಂಗಳಿಂದ ಈ ವರೆಗೆ ನಡೆಸುತ್ತಿರುವ ಯಂತ್ರದಿಂದ ಹುರಿದು ತಯಾರಿಸುವ ನಮ್ಮ ಕಾಫಿ ಪುಡಿ ವ್ಯಾಪಾರವು ಸರ್ವ ಪಾಠಕರಿಗೆ ಗೋಚರವಾಗದ್ದ ಕಾರಣ ಈಗ ನಾವು ಪ್ರಕಟಿಸಿರುತ್ತೇವೆ

ನಮ್ಮಲ್ಲಿ ನಾನಾ ಬಗೆಯ ಶಾಲಾ ಹುಡುಗರಿಗೆ ಅವಶ್ಯವುಳ್ಳ ಕೋಪಿ ಬುಕ್ ಇತ್ಯಾದಿ ಶಾಲಾ ಪುಸ್ತಕಗಳೂ, ಹೊಸವಾದ ಅನೇಕ ವಿಧದ **ತಿರುಚಿನಾಪಳ್ಳಿ ಚುರುಟುಗಳೂ, ನೀಲಗಿರಿ ಚಾ,** ಇತರ ಸಾಮಾನುಗಳೂ ಕೂಡ ವ್ಯಾಪಾರಸ್ಥರಿಗೆ ಕುಲಭವಾದ ಖರೀದಿಯಲ್ಲಿ ದೊರಿಯುತ್ತದೆ

ಕಾಪಿ ಪುಡಿಯು ರಾತ್ತಲು ಒಂದಕ್ಕೆ 0—10—0ಯಿಂದ 0—5—0 ದರದ ವರೇಗೂ ದೊರಿಯುತ್ತದೆ.

ಇತರ ಅನುಭವಗಳಿಗೆ ನಮ್ಮ ಮೆನೇಜರರ ಮೇಲಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು

Piedade Pinto,

Manager.

ಸಚಿತ್ರ ಆಂಗ್ಲಭಾಷಾ ಪ್ರಕಾಶಿಕಾ.

ಇದು ಹೊಸ ತರದ ಬೋಧ ಕ್ರಮ, ಅಂದವಾದ ಅತಿ ವಿದ್ವಾಂಸರಿಂದ ತಯಾರಾದದ್ದು, ಇದನ್ನು ಗುರುವಿನಂತೆ ಭಾವಿಸಿ ಬೇಕಾದ ಕಲಿತು ಕೊಳ್ಳಬಹುದು. ಪುಸ್ತಕಗಳೂ ಅಡಗಿರುವ ದೊಡ್ಡ ಪುಸ್ತಕ 1—12—0 1ನೇ ಪುಸ್ತಕ 1 ಭಾಗಗಳ ಕ್ರಯ 0—14—0

ಅಪೂರ್ವ ಪುಸ್ತಕಗಳು.

ವೈದ್ಯಸಾರ ಸಂಗ್ರಹ ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನ ಪಂಡಿತರಿಂದ ಮರ್ಯಾದಿಸಲ್ಪಟ್ಟಿರುತ್ತೆ ರೂ 3

ರೆವಿನ್ಯು ಸರ್ವೆ ಮೋಜಣಿ ಕ್ಲಾಸಿಫಿಕೇಷನ್ ಕಲಿಯತಕ್ಕ ಬುಕ್ಕು. ಇದು ಮೋಜಣಿದಾರರಿಗೂ, ಪಟೇಲರಿಗೂ, ಶ್ಯಾನುಭೋಗರಿಗೂ ಅಗತ್ಯವಾಗಿ ಬೇಕಾದ ಪುಸ್ತಕ ಬೆಲೆ 1—4—0.

ರಾಬಿನ್‌ಸನ್ ಕ್ರೂಸೋ ಎಂಬ ಮನುಷ್ಯನ ಚರಿತ್ರೆ ಕನ್ನಡ ಎಡಿಷನ್ ಬೆಲೆ ರೂಪಾಯಿ 1—0—0,

ನಮ್ಮಲ್ಲಿ ವಿಶೇಷವಾಗಿ ಸರಕಾರಿ ಸ್ಕೂಲು ಪುಸ್ತಕ, ಸಂಸ್ಕೃತ, ಕನ್ನಡ, ತೆಲುಗು, ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳೂ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಕಥೆ ಪುಸ್ತಕಗಳೂ, ಹುಡುಗರಿಗೆ ಉಪಯುಕ್ತವಾದ ಸ್ಟೇಷನರಿ ಸಾಮಾನುಗಳೂ ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ.

	ರೂ ಆ		ರೂ ಆ		ರೂ ಆ
ದಯಾನಂದ ಸರಸ್ವತಿಯವರ ಚರಿತ್ರೆ	0—4	ಸೀತಾ ಚರಿತ್ರೆ	1—0	ಮಾಡಿದ್ದುಣ್ಣೋ ಮಹಾರಾಯ	0-10
ಧನ ಆರ್ಜನ ಪದ್ಧತಿ	0—12	ಶಾಕುಂತಲ ನಾಟಕ	0—8	ಕುಣಿಗಲು ರಾಮಶಾಸ್ತ್ರಿಗಳವರ ಚರಿತ್ರೆ	1—0
ಇಂಡ್ಯನ್ ಪೆನಲ್ ಕೋಡ	2—0	ಸ್ತ್ರೀ ಧರ್ಮನೀತಿ	0—8	ಸುಮತಿ ಮದನಕುಮಾರರ ಚರಿತ್ರೆ I	0—8
ಅರೆಬಿಯನ್ ನೈಟ್ಸ್	2—4	ಶೋಭನೆ	0—8	,, II	0—7
ಸುರಸ	0—4	ಚಂದ್ರಕಳಾ	0—4	ಶಿವಗೀತೆ	0—6
ಶ್ಯಾಮು	0—1	ಕಲಾನಾಥ	0—6	ಪಾಕಶಾಸ್ತ್ರ	0—8
ಇಂದ್ರ ವಜ್ರ	0—4	ಸ್ತ್ರೀ ಲೆಂಖ್ಯಬೋಧಿನಿ	1—4	ಸನಾತನಧರ್ಮ ದೀಪಿಕೆ	1—0
ಚೆಕ್ಕೋಜಿ	0—3	ವಿಷವೃಕ್ಷ	1—4	ಉದಾರರಾಮಾಯಣ	0—4
ಕನಕಾಂಬುಕ	0—6	ಮುದ್ರಾಮಂಜೂಷ	1—8	ಕಥಾ ಮಂಜರಿ	0—6
ಶಿವಾನಂದಲಹರಿ	0—6	ಶುಕಸಪ್ತತಿ	2—0		
ಗೆದ್ದಕ್ತೆ ಸೋತಳೆಯು	0—4				

ಪ್ರಸಿದ್ಧ ಪತ್ತೇದಾರಿ ಕಥೆಗಳು, ದುಷ್ಟ ಚತುಷ್ಟಯ, ನಂಬಲಿ, ನೀಲಾಂಬರಿ, ವಿಷಮಪರಿಣಾಮ, ವನ್ಯಕುಸುಮ, ಅತ್ಯಾಚಾರ, ಚೋರ ಚಕ್ರವರ್ತಿ, ನರರಾಕ್ಷಸಿ, ಪ್ರತಿಯೊಂದು ಪ್ರತಿಯೂ 2 ಆಣೆ

ವಿಳಾಸ:— **ವಿದ್ಯಾಸಾಗರ ಬುಕ್ ಡಿಪೋ,**

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಯುನಿವರ್ಸೆಲ್ ಎಸ್ಯುರನ್ಸ್ ಕೋ, ಲಿಮಿಟೆಡ್.

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ.

ಸರಕಾರದ ಭದ್ರತೆಯ ಮೇಲ್ವಿಚಾರದಲ್ಲಿ ನಡಿಯುತ್ತಿರುವುದು.

ಬಂಡವಾಳ ರೂ 10,00,000.

ಈ ತನಕ ಕೊಡೋಣಾದ ವಿಮೆ ಹಕ್ಕುಗಳ ಮೊಬಲಗು ಕುಮಾರು 8,00,000.

ಫಂಡು— ರೂ. 3,00,000ಕ್ಕೆ ಮೀರಿದೆ.

ಸರಕಾರದವರ ಬದ್ರತೆಯಲ್ಲಿ ರೂ. 50,000ವಿರುವುದು.

ಚೀಪ್ ಇನ್ಸೂರೆನ್ಸ್ ಸ್ಕೀಮ್ ಎಂಬ ವೈದ್ಯಪರೀಕ್ಷೆ ಇಲ್ಲದೆ ವಿಮೆ ಉತ್ತರಾಯಿಸಿ ಕೊಳ್ಳಬಹುದಾದ ಸರ್ವರಿಗೂ ಸಾಧ್ಯವಾದ ಸುಲಭ ಕ್ರಮ

ಈ ಪ್ರಾಂತ್ಯಗಳಲ್ಲಿ ಯಾವ ವಿಮೆ ಕಂಪೆನಿಗಳಲ್ಲಾದರೂ ಈತನಕ ಇಂಥಾ ಅಗ್ಗ ದರಗಳ ವಿಮೆ ಉತ್ತರಾಯಿಸುವ ಏರ್ಪಾಡೇ ಇರುವದಿಲ್ಲ ಭಾರತೀಯರಲ್ಲಿ ವಿಶೇಷವಾಗಿರುವ ಬಡವರಿಗೋಸ್ಕರವೇ ಈ ಕ್ರಮವು ಏರ್ಪಡಿಸಲ್ಪಟ್ಟಿರುತ್ತದೆ ಪ್ರೊವಿಡೆಂಟ ಫಂಡುಗಳ ಕ್ರಮದ ಪ್ರಕಾರ ಮುಂದಕ್ಕೆ ಸಂಭವಿಸಬಹುದಾದ ಅನನುಕೂಲತೆಗಳು ಇದರಲ್ಲಿರವು ವಿಮೆ ಉತ್ತರಾಯಿಸಿಕೊಳ್ಳುವ ಈ ನವೀನ ಅಗ್ಗ ದರಗಳ ಏರ್ಪಾಡು ಬಹಳ ಉಪಯುಕ್ತವಾದದ್ದು ಎಂತ ವಿಮೆ ಸಂಘಗಳ ವಿಶೇಷ ಮಾಹಿತಿದಾರರ ಅಭಿಪ್ರಾಯವಿರುವುದು ನಿಶ್ಚಿತವಾದ ವಿಮೆ ಮೊಬಲಗುಗಳ ರೂಪಾಯಿ ಮತ್ತು ಅರ್ಧ ರೂಪಾಯಿಗಳ ಪೋಲಿಸಿಗಳು ಈ ಕ್ರಮದ ಮೇರೆಗೆ ಕೊಡೋಣಾಗುವವು

ಸಾಮಾನ್ಯ ವಿಮೆ ಇಲಾಖೆ.

ಈ ಕಂಪೆನಿಯ ಈ ಇಲಾಖೆಯಲ್ಲಿ ವಿಮೆ ಉತ್ತರಾಯಿಸಿಕೊಳ್ಳುವವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಲಿರುವುದ ಸಾಧ್ಯವಿರುವ ಅತ್ಯಂತ ಕಡಿಮೆಯ ದರಗಳು ಸಂಪೂರ್ಣವಾದ ಬದ್ರತೆಯು ಈ ಇಲಾಖೆಯ ವಿಶೇಷ ಪ್ರಯೋಜನಗಳಾಗಿರುವುದು. ಕಂಪೆನಿಯ ಲೆಕ್ಕದ ಸ್ಥಿತಿಗತಿಯನ್ನು ತೋರಿಸುವ ಮೊಖಾಬಿಲೆ ಪಟ್ಟಿಗಳನ್ನು ಈ ಕಂಪೆನಿಯ ವಿಷಯ ಪತ್ರಗಳ ಅಭಿಪ್ರಾಯವೇನೆಂಬುದನ್ನೂ ತರಿಸಿ ನೋಡಿರಿ

ಒಳ್ಳೇ ಚಟುವಟಿಕೆಯ ಜಾಣರಾದ ಏಜಂಟರುಗಳು ಬೇಕಾಗಿರುವರು ಶರ್ತಗಳ ಬಗ್ಗೆ ಕೆಳಗಣ ವಿಳಾಸಕ್ಕೆ ಬರೆಕೊಳ್ಳಬಹುದು.

ವಿಳಾಸ— **ಲಕ್ಷ್ಮಣ ರಾವ್ ಬ್ರದರ್ಸ್,**

ಚೀಫ್ ಏಜಂಟ್ಸ್, ಕೆನರಾ, ಮೈಸೂರು, ಕೊಡಗು ಪ್ರೋಸ್ಸು, ಉಡುಪಿ ಇವರಿಗೆ ಬರೆದುಕೊಳ್ಳಿರಿ.

ರಾಕ್ಷಸ ಸಂವತ್ಸರದ ಉಡುಪಿ ಪಂಚಾಂಗವು.

ಈ ಆರ್ಯಸಿದ್ಧಾಂತ ಪಂಚಾಂಗದಲ್ಲಿ ವಿವಾಹೋಪನಯನಾದಿ ಮುಹೂರ್ತಗಳೇ ಮೊದಲಾದ ಅನೇಕ ಉಪಯುಕ್ತ ವಿಷಯಗಳಿರುವದಲ್ಲದೆ ಸೂರ್ಯಸಿದ್ಧಾಂತ ಪ್ರಕಾರ ತಿಥಿ ನಕ್ಷತ್ರಗಳನ್ನೂ ಕೊಟ್ಟದೆ ಪಂಚಾಂಗವು 60 ಪುಟಗಳಿಂದ ಕೂಡಿರುವದು. ಬೆಲೆ 0—2—6 ಮಾತ್ರ. ವ್ಯಾಪಾರಿಗಳಿಗೆ ಡಿಸ್ಕೌಂಟು ಕೊಡಲಾಗುವದು.

ಕನ್ನಡ ಲಿಪಿಯ ಪುಸ್ತಕಗಳು.

ಋ ತ್ರೈಕಾಲಿಕ ಸಂಧ್ಯಾವಂದನ 3 ಆಣೆ, ಯ. ತ್ರೈಕಾಲಿಕ ಸಂಧ್ಯಾವಂದನ 4 ಆಣೆ, ಆಶ್ವಲಾಯನ ಸಂಧ್ಯಾವಂದನ (ಮತತ್ರಯದವರಿಗೆ) 3ಆಣೆ; ಯಜುರ್ವೇದ ಸಂಧ್ಯಾವಂದನ (ಮತತ್ರಯದವರಿಗೆ) 2 ಆಣೆ, ಋ ಬ್ರಹ್ಮಯಜ್ಞ ವೈಶ್ವದೇವ ಔಪಾಸನ 3 ಆಣೆ, ಪ್ರಾತರಾಹ್ನಿಕ ಪದ್ಧತಿ 3 ಆಣೆ, ದೇವಪೂಜಾ ಪದ್ಧತಿ 3 ಆಣೆ, ವಾಯುಸ್ತುತಿ 2 ಆಣೆ, ದ್ವಾದಶಸ್ತೋತ್ರ 2 ಆಣೆ, ವಿಷ್ಣುಸಹಸ್ರನಾಮ ಕೃಷ್ಣಾಷ್ಟೋತ್ತರ ವೆಂಕಟೇಶಸ್ತೋತ್ರಂ 2 ಆಣೆ, ವಿ ಸಹಸ್ರಕೃಷ್ಣಾಷ್ಟೋತ್ತರನಾಮಾವಳಿ 0-2-6; ಅಭಿಷೇಕ ಸೂಕ್ತಗಳು 0-2-0, ಶ್ರೀಸೂಕ್ತ ಪುರುಷಸೂಕ್ತ 9-1-0; ಸುಂದರ ಕಾಂಡ ಕಥಾಸಾರಸಂಗ್ರಹ ವಗೈರೆ 0 2-0, ಗಜೇಂದ್ರ ಮೋಕ್ಷ 0-1-6; ಗೋಪಿಕಾಗೀತೆ ವಗೈರೆ 0 1 0, ಪಾಂಡವಗೀತೆ ವಗೈರೆ 0-1-6, ಅಣುಭಾಷ್ಯ ವಗೈರೆ 0-0-9; ರಾಘವೇಂದ್ರಸ್ತೋತ್ರ ವಾದಿರಾಜ ಕವಚ 0-2-0, ಪುರಂದರದಾಸರ ಕೀರ್ತನೆಗಳು 0-6-0, ಉದಯರಾಗ 0-4-0; ಹರಿಭಕ್ತಿಸಾರ 0-1-0; ಕೃಷ್ಣಪದ ಮಧ್ವನಾಮ 0-1-6; ಲಕ್ಷ್ಮೀ ಶೋಭನ ಹಾಡು 0-2-0, ತುಲಸಿಸಂಕೀರ್ತನೆಗಳು 0-2-0. ಉಡುಪಿ ಶ್ರೀ ಕೃಷ್ಣ ಚರಿತ್ರೆ 0-3-0. ಇವೇ ಮೊದಲಾದ ಪುಸ್ತಕಗಳು ದೊರಕುತ್ತವೆ.

ಪಾವಂಜೆ ಗುರುರಾವ್

ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ

ಉಡುಪಿ, ದ. ಕ.

ಮಾರಾಟಕ್ಕೆ ಸಿದ್ಧವಿರುವುದು! ಮಾರಾಟಕ್ಕೆ ಸಿದ್ಧವಿರುವುದು!

ವೇಂಕಟಗಿರಿ ಮಹಾತ್ಮ್ಯೆ.

ಪದ್ಮಾವತೀ ಕಲ್ಯಾಣದಿಂದ ಪೂರ್ಣವಾಗಿರುವುದು.

(ಸಂಸ್ಕೃತ ಭವಿಷ್ಯತ್ಪುರಾಣದಿಂದ)

ಮಂಗಳೂರಲ್ಲಿ ಸ್ವರ್ಗಸ್ಥರಾಗಿ ಹೋದ ಮುಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿರುವುದು.

959 ಪದ್ಯಗಳಿರುವ 15 ಅಧ್ಯಾಯಗಳಿಂದ ಕೂಡಿರುವುದು. ಕಾವ್ಯರಚನೆಯು ಬಹು ಮೃದುರವೂ ಸುಲಭವೂ ಆಗಿರುವುದರಿಂದ ಸರ್ವರಿಗೂ ಅನುನಿತ್ಯದ ಪಠಣಪುಸ್ತಕವಾಗಿರಲು ಉಚಿತವಾಗಿರುವುದು. ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ವೃತ್ತಾಂತಗಳು ವಾಚಕರ ಮನಃಖಚಿತವಾಗುವಂತೆ ಈ ಗ್ರಂಥವು ಯಥೋಚಿತ ಚಿತ್ರಪಟಗಳಿಂದ ಕೂಡಿರುವುದು. ಕ್ರಯ ಪ್ರತಿಯೊಂದಕ್ಕೆ ರೂ. 1—8—0. ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್,
ಮಂಗಳೂರು

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕಡದ ಬಣ್ಣ, ಒಳಳ ಅಗ್ಗ. ಕಪ್ ಮತ್ತು ಬ್ರಷ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲು ಚಾರ್ಜು 0—4—0.

Dr. Navaratna & Sons,
Kalbadevi Road BOMBAY.

ಏಜಂಟರು:—ದಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಅರ್ಧ ಬೆಲೆ!

ಒಂದು ತಿಂಗಳ ತನಕ ಮಾತ್ರ.



ನಮ್ಮ 'ಪೆರ್ಫೆಕ್ಷನ್ ಪ್ಲೂಟ್' ಹಾರ್ಮೋನಿಯಮ್ ಎಂಬ ರಾಗದ ಪೆಟ್ಟಿಗೆಯಿಂದ ಸರ್ವ ಗಾಯನಗಳನ್ನು ಹಾಡಲಿಕ್ಕಾಗುತ್ತದಲ್ಲದೆ ಎಲ್ಲಾ ವಾಯುಗುಣಗಳಲ್ಲಿಯೂ ಬಾಳುವಂಥಾದ್ದಾಗಿದೆ. ಇದರ ಪೆಟ್ಟಿಗೆಯು ಸಾಗುವಾನಿ ಮರದಿಂದ ಮಾಡಿದ್ದಾಗಿದೆ. ಗಾಳಿ ಬರುವ ಪೆಟ್ಟಿಗೆಯು ಎಂಥಾ ಶೆಖೆಯನ್ನೂ ತಡೆಯುವದು. ಖಾಯಸಾಗದಿದ್ದರೆ 7 ದಿವಸಗಳೊಳಗೆ ಹಿಂದಕ್ಕೆ ಕಳುಹಿಸಿದರೆ ಹಣ ಹಿಂದಕ್ಕೆ ಕೊಡೋಣಾಗುವದು.

ಕ್ರಯ ಸಿಂಗಲ್ ರೀಡ್ ರೂ. 38, 44, 50; ಈಗ ರೂ. 19, 22, 25ಕ್ಕೆ ಕೊಡಲ್ಪಡುವದು. ಡಬ್ಬಲ್ ರೀಡ್ ರೂ. 60, 70, 80; ಈಗ ರೂ. 30, 35, 40ಕ್ಕೆ ಕೊಡೋಣಾಗುವದು. ಆರ್ಡರಿನೊಂದಿಗೆ ರೂ. 5 ಅಡ್ವಾನ್ಸ್ ಕಳುಹಿಸಬೇಕಾಗಿದೆ.

ವಿಳಾಸ:— ನೇಶನಲ್ ಹಾರ್ಮೋನಿಯಮ್ ಕೊ,
ಸಿಮ್ಲಾ ಪೋಸ್ಟು (ಬಿ) ಕಲ್ಕತ್ತ.

National Harmonium Co.,
Simla P. O. (B) CALCUTTA.

ವಿನೋದ! ಮಾಸಪತ್ರಿಕೆ!

"ಚಾತುರ್ಯ."

ಈ ಮಾಸಪತ್ರಿಕೆಯಲ್ಲಿ ಪತ್ತೇದಾರಿ ಕಥೆಗಳು, ಹಾಸ್ಯಲಹರಿಯು, ಹಾಸ್ಯ, ವಿನೋದ, ನೀತಿಸಂಬಂಧ ಲೇಖನಗಳೂ, ಕಥೆಗಳು, ಕಾದಂಬರಿಗಳೂ ಪ್ರಕಟಿಸಲ್ಪಡುತ್ತೆ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ 8 ಆಣೆ. ಮಾದರಿ ಸಂಚಿಕೆಗೆ ೧ ಆಣೆ ಸ್ಟಾಂಪು ಕಳುಹಿಸಿರಿ.

ವಿಳಾಸ:—ಮ್ಯಾನೇಜರ್ "ಚಾತುರ್ಯ"
ಬೆಂಗಳೂರು, ಸಿಟಿ.

ಕರ್ನಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು.

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ ಮುಂಬಯಿ ಕರ್ನಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೊಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ. ೩—೪—೦ ಆಗಿರುತ್ತದೆ; ಚಂದಾದಾರರಾಗಿ ಸೇರಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಮ್ಯಾನೇಜರ್, ಕರ್ನಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ, ಧಾರವಾಡ.

ನರಳುವದೇತಕ್ಕೆ?

ಮನೆಯಲ್ಲಿಯೇ ವೈದ್ಯನಂತಿರುವ

ಇಕ್ಲಿಪ್ಸ್ ಬಾಮ್ ಎಂಬ ಔಷಧವಿರುವಾಗ!

ಇದು ತಲೆನೋವು, ಸೊಂಟದ ನೋವು, ಉಳುಕು, ಸಂಧಿ ದೌರ್ಬಲ್ಯ, ವಾತ, ಮೇಹ ವಾತ, ನೆಗಡಿ, ಕೆಮ್ಮು, ಗಂಟಲು ನೋವು, ವಾತಶೂಲೆ, ಹಲ್ಲು ನೋವು, ಎದೆನೋವು ಇತ್ಯಾದಿ ನೋವುಗಳನ್ನು ಗುಣಪಡಿಸುವದು! ಚೇಳು, ಜಾದರ ಹುಳ, ನಾಯಿ ಮೊದಲಾದವುಗಳ ಕಡಿತ ಇದರಿಂದ ಖಂಡಿತವಾಗಿ ಪರಿಹಾರ! ಕುರು, ರಾಜಕುರು, ಹುಣ್ಣು, ದದ್ದು, ಘಾಯ, ಬೆಂಕಿ ಹಾಗಿದ ಸುಟ್ಟ ಘಾಯ, ಬಾಣಂತಿಗಳ ಮೊಲೆ ಒಡೆಯುವದು, ಮೊಡವೆ, ಕಾಲು ಒಡೆಯುವದು, ಇತ್ಯಾದಿ ವ್ಯಾಧಿಗಳಿಗೆ ಸಿದ್ಧೌಷಧ!!

ಕ್ರಯ ಕರಡಿಗೆ 1ಕ್ಕೆ 8 ಆಣೆ. ವಿ. ಪಿ. ಬೇರೆ. ಡಜನ್ ಕರಡಿಗೆಗೆ 4—12—0. ವಿ. ಪಿ. ಬೇರೆ.

ಸಿಫಾರಸು ಪತ್ರ:—ಬಿ. ಸಿ. ಎಸ್. ಶೆಟ್ಟಿ—ನನ್ನ ಸ್ನೇಹಿತರೊಬ್ಬರಿಗೆ ಸೊಂಟ ತುಂಬಾ ಕೊಳಕು ಹುಣ್ಣು ಗಳಾದ್ದವು. ಎಂಥೆಂಥಾ ಔಷಧಿಗಳನ್ನು ಮಾಡಿದರೂ ನಾಲ್ಕು ವರ್ಷಗಳಿಂದಲೂ ಈ ಹುಣ್ಣು ಗುಣವಾಗಲೇ ಇಲ್ಲ. ನಿಮ್ಮಿಂದ ತರಿಸಿ ಒಂದು ಕರಡಿಗೆ ಬಾಮನ್ನು ನಾನು ಪರೀಕ್ಷೆ ಬಗ್ಗೆ ಅವರಿಗೆ ಕೊಟ್ಟಲ್ಲಿ ಆ ಹುಣ್ಣು ಒಂದೇ ವಾರದಲ್ಲಿ ಮಾಯವಾಗಿರುವದು. ಕೂಡಲೇ 1 ಡಜನ್ ಬಾಮ್ ವಿ. ಪಿ. ಮೂಲಕ ಕಳುಹಿಸಿರಿ.

☞ ಹೆಚ್ಚಿನ ವಿವರಕ್ಕೆ ಮಾಹಿತಿಗೋಸ್ಕರ ಚೀಟು ಇಟ್ಟು ಬರೆಕೊಳ್ಳುವದು.

ವಿಳಾಸ:— ದಿ ಇಕ್ಲಿಪ್ಸ್ ಏಜನ್ಸಿ, ಕೊಡಿಯಾಲಬೈಲ್, ಮಂಗಳೂರು.

ಏಜಂಟರು:— ಸುಗಂಧವಿಲಾಸ, ರಥಬೀದಿ, ಮಂಗಳೂರು.

ESTABLISHED JULY 1906.

THE CANARA BANK, LIMITED, MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲೈಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು „	225,000—0—0
Subscribed Capital	217,400—0—0	ಪ್ರತಿಜ್ಞಾತ ಮೂಲ ಧನವು „	217,400—0—0
Paid up Capital	192,400—0—0	ಆಗತ ಮೂಲ ಧನವು „	192,400—0—0
Deposits	447,559—6—11	ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	447,559—6—11
Reserve Fund	33,500—0—0	ರಕ್ಷಿತ ಧನವು	33,500—0—0

Besides the uncalled capital of Rs. 25,000/ 25% of the net profits are added annually to the Reserve Fund. Rs. 21,685/ have been invested in Government Paper of the face value of Rs. 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/-and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½%. per annum at the discretion of the managing committee

Current Deposit Account opened free of charge.

Savings Bank Account opened for any sum not less than 4 As and multiples thereof and interest paid @ 4½%.

Loans granted on proper securities and pledges

Sealed Parcels for safe custody received on a moderate charge.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು

"ಕರೆಂಟ್ ಎಕೌಂಟ್" ಎಂಬ ಇಲ್ಲಿ ಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd.,
Mangalore, 1st. March 1915.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ, ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯ ಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ ನಿಮಿರಾಯನ ಶರೀರತ್ಯಾಗ, ಜನಕವಂಶ ಕರ್ತ್ಯಾತಿಚರಿತ್ರೆ, ಕಕುತ್ಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಕಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸ್ತಾವವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದ್ದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲ್ಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರಿಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡ ಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ೧ಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—೩—೦.

ತನ್ನ ವಿಳಾಸ:— ಎಂ. ದೇವರಾಯ ಕಂಪೆನಿ,
[illegible]

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 2ನೇ ಎಪ್ರಿಲ್ 1915

ಮಂಗಳೂರಲ್ಲಿ ಕೂಡುವ ಕೊಯಂಬುತ್ತೂರು ಸರ್ಕಲ್ ಕೋಒಪರೇಟಿವ್ ಕೊನ್ಫರೆನ್ಸ್.

—o—

ಕೊಯಂಬುತ್ತೂರು, ನೀಲಗಿರಿ, ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿರುವ ಪರಸ್ಪರ ಸಹಾಯಕ ಸಂಘಗಳ ಮಹಾ ಸಭೆಯು ಈ ಮೊದಲು ತಿಳಿಸಿರುವಂತೆ ನಾಡದು ತಾ. ೫ ಮತ್ತು ೬ನೇ ಸೋಮವಾರ ಮತ್ತು ಮಂಗಳವಾರ ದಿನಗಳಲ್ಲಿ ಇಲ್ಲಿಯ ಗವರ್ನಮೆಂಟ್ ಕೊಲೇಜಿನ ಸಭಾಸದನದಲ್ಲಿ ಕೂಡುವುದು. ಪರಸ್ಪರ ಸಹಾಯಕ ಸಂಘಗಳ ಚಳವಳದ ಶಕ್ತಿಯು ಬಹಳ ಅದ್ಭುತಕರವಾದದ್ದೇ ಸರಿ. ಜಾತಿ ಸಂಸ್ಥೆಗಳಿಗೆ ಪ್ರಖ್ಯಾತಪಟ್ಟ ಈ ಕ್ಷೇತ್ರದಲ್ಲಿ ಇಲ್ಲಿ ನಿವಾಸಿಸಿರುವ ಸಾಲ್ಕಾರು ಜಾತಿಯವರು ಒಟ್ಟು ಕೂಡುವ ಸಂಘಟನೆಗಳು ಕಷ್ಟಸಾಧ್ಯವಾದ ಈ ಪ್ರಾಂತ್ಯದಲ್ಲಿ ಈ ಊರಿನ ಆಯಾ ಜಾತಿಯವರನ್ನು ಒಟ್ಟು ಕೂಡಿಸಿ, ಇಷ್ಟೇ ಅಲ್ಲ, ಹೊರಗಿನ ಜಿಲ್ಲೆಗಳಿಂದ ಸಹ ಪ್ರತಿನಿಧಿಗಳನ್ನು ಈ ಊರಿನವರಿಂದ ಒರಮಾಡಿಸಿದ ಈ ಅದ್ಭುತಕರ ಶಕ್ತಿಯು ಬಹಳ ವಿಶೇಷವಾದದ್ದಾಗಿದೆ. ಮಂಗಳೂರಿನ ಕ್ರೈಸ್ತರು, ಮಹಮ್ಮದೀಯರು, ಬ್ರಾಹ್ಮಣರು, ಬ್ರಾಹ್ಮಣರಲ್ಲದ ಹಿಂದುಗಳು ನಾಡದಿನ ಸಭೆಯಲ್ಲಿ ಒಟ್ಟು ಕೂಡುವರು. ಜಿಲ್ಲೆಯ ಇತರ ಪ್ರಾಂತ್ಯಗಳ ಪ್ರತಿನಿಧಿಗಳೂ ಸಹ ಒಂದು ಮಂಗಳೂರಿನಲ್ಲಿ ಈ ತನಕ ಕೂಡದ ಈ ನವೀನ ಸಭೆಯನ್ನು ನೋಡಿ ಆನಂದಗೊಳ್ಳುವರು. ನಮ್ಮ ಪ್ರಾಂತ್ಯಗಳಿಗೆ ಬರುವ ಅತಿಥಿಗಳೆಲ್ಲರಿಗೂ ಈ ಸಂದರ್ಭದಲ್ಲಿ ಸ್ವಾಗತ ಹೇಳುವ!

"ಪರಸ್ಪರ ಸಹಾಯ"ದ ಉದಯವು ಪ್ರಥಮತದಲ್ಲಿ ನಮ್ಮ ಜಿಲ್ಲೆಯ ಪೂರ್ವ ಪ್ರಾಂತ್ಯವಾದ ಪುತ್ತೂರಿನಲ್ಲಿ ಆಯಿತೆಂಬ ವಿವರವನ್ನು ವಾಚಕರು ತಿಳಿದಿರುವರು. ಪುತ್ತೂರಿನ ರಾ| ವಕೀಲ ಮೊಳಹಳ್ಳಿ ಶಿವರಾವ್ ಮೊದಲಾದವರ ಉತ್ಸಾಹದಿಂದ ಇದು ಕೆಲವು ಸಮಯದಲ್ಲಿಯೇ ಜಿಲ್ಲೆಯ ಆಯಾ ಪ್ರಾಂತ್ಯಗಳಲ್ಲಿ ಹರಡಿತು. ಪರಸ್ಪರ ಸಹಾಯಕ ಸಂಘಗಳು ಇನ್ನೂ ಹೆಚ್ಚಾಗಿ ಸ್ಥಾಪಿಸಲ್ಪಡುವಂತೆಯೂ, ಸಂಘಗಳ ಮೇಲ್ವಿಚಾರವು ಸರಿಯಾಗಿ ನಡಿಸಲ್ಪಡುವಂತೆಯೂ ಈ ಸಂಘಗಳಿಗೆಲ್ಲಾ ತಕ್ಕ ಪ್ರೋತ್ಸಾಹವು ದೊರಕುವಂತೆಯೂ ಪುತ್ತೂರಿನಲ್ಲಿ ಸೆಂಟ್ರಲ್ ಬೇಂಕು ಸ್ಥಾಪಿಸಲ್ಪಟ್ಟಿತು. ಹೆಚ್ಚೇನು? ಮಂಗಳೂರಿನ ಆಯಾ ಜಾತಿಗಳ ಮುಂದಾಳುಗಳು ಪರಸ್ಪರ ಸಹಾಯದ ಗೋಜಿಗೆ ಈ ತನಕ ಹೋಗದೆ ಇದ್ದರೂ ಈ ಜಿಲ್ಲೆಯ ಇತರ ಪ್ರಾಂತ್ಯಗಳಲ್ಲಿ ಪ್ರಾರಂಭಿಸಿರುವ ಈ ಸಂಬಂಧವಾದ ಪ್ರಯತ್ನಗಳು ಬಲಗೊಂಡು ಪ್ರಕೃತ ಮಂಗಳೂರಲ್ಲಿ ಕೊನ್ಫರೆನ್ಸ್ ಸಭೆಯನ್ನು ಆಮಂತ್ರಿಸಲು ಸಾಧ್ಯವಾಯಿತು.

ನಾಡದು ಕೂಡುವ ಸಭೆಯಲ್ಲಿ ಪರಸ್ಪರ ಸಹಾಯಕ ಸಂಘದ ಬೆಳವಣಿಕೆಗೆ ಇರುವ ಪ್ರತಿಬಂಧಗಳೇನು ಎಂಬೀ ಮೊದಲಾದ ವಿಷಯಗಳು ಪರ್ಯಾಲೋಚಿಸಲ್ಪಟ್ಟು ಈ ಪ್ರತಿಬಂಧಗಳು ಮಾಜಿ ಹೋಗುವಂತೆ ಸರಕಾರದವರೂ ಪ್ರಜಾವರ್ಗಗಳೂ ನಡೆಸಬೇಕಾದ ಪ್ರಯತ್ನಗಳು ನಿರ್ಣಯಿಸಲ್ಪಡುವವು. ಸಂಘಗಳು ಈ ತನಕ ನಡೆಸಿರುವ ಕಾರ್ಯವೃತ್ತಾಂತಗಳ ವಿವರವು ಸಭೆಯಲ್ಲಿ ತಿಳಿಸೋಣಾಗುವುದು. ಯಾವ ಯಾವ ಭಾಗಗಳಲ್ಲಿ ಪರಸ್ಪರ ಸಹಾಯವು ಪ್ರಸರಿಸಿದೆ; ಇನ್ನು ಯಾವ ಯಾವ ವಿಷಯಗಳಲ್ಲಿ ಇದು ಅಗತ್ಯವಾಗಿರುವುದು ಎಂಬದನ್ನು ತಿಳಕೊಳ್ಳಲು ಈ ಸಭೆಯಲ್ಲಿ ಸಂದರ್ಭ ದೊರಕುವುದು: ಸಾಲಗಳಲ್ಲಿ ಮುಣುಗಿಹೋಗಿ ಗತಿ ಕಾಣದ ರೈತರೂ ವಿವಿಧ ಕೈಕಸಬುದಾರಿಕೆಯ ಜನರೂ ಪರಸ್ಪರ ಸಹಾಯದಿಂದ ನಿವೃತ್ತಿಯನ್ನು ಹೇಗೆ ಹೊಂದಲು ಪ್ರಯತ್ನಿಸಿರುವರು, ಇಂಥವರಿಗೆ ಶಿಕ್ಷಿತ ಮುಂದಾಳುಗಳು ಪರಸ್ಪರ ಸಹಾಯದ ಮೂಲಕ ಹೇಗೆ ಕೈನೀಡಿರುವರು ಎಂಬೀ ವಿವರಗಳು ಈ ಸಭೆಯಲ್ಲಿ ಗೊತ್ತಾಗುವವು. ನಮ್ಮ ಜಿಲ್ಲೆಯ ಹೊರ ಪ್ರಾಂತ್ಯಗಳ ಪರಸ್ಪರ ಸಹಾಯದ ಚಟುವಟಿಕೆಯನ್ನು ತಿಳಕೊಂಡು ನಮ್ಮಲ್ಲಿಯ ಮುಂದಣ ಕಾರ್ಯಸಾಧನೆಯನ್ನು ನಿರ್ಣಯಿಸುವರೆ ಅನುಕೂಲ ಸಂದರ್ಭವು ಸಹ ಈ ಸಭೆ ದೊರಕುತ್ತದೆ. ಇಂಥಾ ಸಂದರ್ಭದ ಪ್ರಯೋಜನವನ್ನು ಮಂಗಳೂರಿನವರು ಈಗಲಾದರೂ ಪತ್ತೆ, ಅರಿತುಕೊಂಡು ಸಾರ್ವಜನಿಕ ವಿಷಯಗಳಲ್ಲಿ ಈ ತನಕ ತೋರಿಸಿರುವ ಅಭಾವವನ್ನು ಇದೇ ಸಮಯದಲ್ಲಿ ಕಳೆದು ಬಿಡಲು ಪ್ರಯತ್ನಿಸಬೇಕಾಗಿ ವಿಜ್ಞಾಪಿಸಿಕೊಳ್ಳುತ್ತೇವೆ.

ಪರಸ್ಪರ ಸಹಾಯದ ಮೂಲಕ ಏನೇನೆಲ್ಲಾ ಸಾಧಿಸಬಹುದೆಂಬುದನ್ನು ಶಿಕ್ಷಿತರೆಲ್ಲರೂ ಅರಿತಿರುವರು. ಜನಸಾಮಾನ್ಯರನ್ನೂ ಶಿಕ್ಷಿತರನ್ನೂ ಒಟ್ಟು ಕೂಡಿಸಲು ಪರಸ್ಪರ ಸಹಾಯಕ್ಕಿಂತ ಒಲವಾದ ಸಾಧನವು ಮತ್ತೊಂದಿರದು. ದೀನ ಸ್ಥಿತಿಯಲ್ಲಿರುವ ಸಾಮಾನ್ಯರನ್ನು ಉದ್ಧರಿಸಲಿರುವ ಉಪಾಯಗಳಲ್ಲಿ ಇದು ಅತಿ ಶ್ರೇಷ್ಠವಾದುದು. ಸಾಮಾನ್ಯರು ಗತಿಹೀನರಾಗಿರುವುದರಿಂದ ಶಿಕ್ಷಿತರು ನಿರ್ಬಲರಾಗಿರುವರೆಂಬುದನ್ನು ಸರಿಯಾಗಿ ಲಕ್ಷ್ಯಕ್ಕೆ ತಂದುಕೊಂಡು, ದೇಶದ ಏಳಿಗೆಗೆ ಇತರ ಕಡೆಗಳಲ್ಲಿ ಮಾಡೋಣಾಗುವ ಪ್ರಯತ್ನಗಳನ್ನೂ ಮಂಗಳೂರಿನವರು ಇನ್ನಾದರೂ ಇಲ್ಲಿ ಪ್ರಾರಂಭಿಸಿ ನಾಡದು ಕೂಡುವ ಸಭಾಕಾರ್ಯಗಳು ನಿರ್ವಿಘ್ನವಾಗಿ ನೆರವೇರಲು ತಮ್ಮಿಂದಾಗುವ ಸಹಕಾರವನ್ನು ನೀಡ ಬೇಕೆಂದಾಗಿ ಕೋರುತ್ತೇವೆ

—o—

ಬರೋಡಾ ಮಹಾರಾಜರವರೂ, ಸಂಸ್ಕೃತ ವಿದ್ಯೆಯೂ.

—o—

ಸಂಸ್ಕೃತ ಭಾಷೆಯು ಮೃತಭಾಷೆಯಾಗಿದೆ, ಪ್ರಕೃತ ಸಂಸ್ಕೃತ ಪಂಡಿತರಿಂದ ಸಮಾಜಕ್ಕೂ ದೇಶಕ್ಕೂ ವಿಶೇಷ ಪ್ರಯೋಜನವಿಲ್ಲದೆಂದು ತರ್ಕಿಸುವಂಥವರು ಇತ್ತಲಾಗೆ ಬರೋಡಾದಲ್ಲಿ ಜರುಗಿದ ಸಂಸ್ಕೃತ ಪಂಡಿತರ ಮಹಾ ಸಭೆಯ ವೃತ್ತಾಂತವನ್ನೂ, ಆ ಕಾಲದಲ್ಲಿ ಮಹಾರಾಜರವರು ಅಪ್ಪಣೆ ಕೊಡಿಸಿದ ಮಾತುಗಳನ್ನೂ ತಿಳಕೊಳ್ಳುವುದು ಅಗತ್ಯವಾಗಿರುವುದು. ಪ್ರಕೃತ ಸಂಸ್ಕೃತ ವಿದ್ಯೆಯನ್ನು ಹೇಗೆ ಕಲಿಯುತ್ತಿರುವರೆಂಬುವ ವಿಷಯ ಮಹಾರಾಜರವರ ಅಭಿಪ್ರಾಯವೇನು? "ಈ ವಿದ್ಯೆಯನ್ನು ಧಾರ್ಮಿಕಶ್ರದ್ಧೆಯಿಂದ ಕಲಿಯುತ್ತಿರುವರು. ತಾರ್ಕಿಕ, ನೈಯಾಯಿಕ, ವೇದಾಂತಿಗಳಾಗಬೇಕೆಂಬುದೇ ಇವರ ಉದ್ದೇಶಗಳಾಗಿವೆ. ಆದ್ದರಿಂದ ನಿಷ್ಪ್ರಯೋಜನವಾದ ಶಾಬ್ದಿಕ ಚರ್ಚೆಯಲ್ಲಿಯೂ, ಕ್ರಮಗೊಳಿಸಿದ ಪದ್ಧತಿಗನುಸರಿಸಿ ವಿಷಯಗಳ ಖಂಡನೆ ಮಂಡನೆಗಳಲ್ಲಿಯೂ ಪರಿಶ್ರಮಪಡುತ್ತಿರುವರು. ಈ ವಿಧವಾದ ಉದ್ದೇಶ ಮತ್ತು ಪರಿಶ್ರಮಗಳಿಂದ ಇವರ ಜ್ಞಾನವು ಕೇವಲ ಏಕಮುಖವಾಗಿ ಕೂಪಮಂಡೂಕ ನ್ಯಾಯದಂತೆ ಸಂಕುಚಿತ ವಿಚಾರದ್ದಾಗುವುದು. ಇಂತಹ ಅಧ್ಯಯನದಿಂದ ಸ್ವತಂತ್ರ ವಿಚಾರವು ಕುಂಠಿತವಾಗಿ ತಾರತಮ್ಯ ಶಕ್ತಿಯು ಲೋಪವಾಗುತ್ತದೆ. ಈ ಪ್ರಕಾರ ಕಲಿತ ಪಂಡಿತರಿಂದ ಸಮಾಜಕ್ಕಾಗಲೀ ದೇಶಕ್ಕಾಗಲೀ ಯಾವ ಪ್ರಯೋಜನವೂ ಆಗದೆ, ಮತಭೇದಗಳು ಮಾತ್ರ ಅಧಿಕವಾಗುತ್ತವೆ." ಬರೋಡೆಯ ಮಹಾರಾಜರವರ ಈ ವಚನಗಳು ಸರ್ವರ ಮನ್ನಣೆಗೆ ಪಾತ್ರವಾಗಿರುವವು. ಪ್ರಜಾಜನರ ಉನ್ನತಿಯನ್ನು ಹೇಗೆ ಸಾರ್ಥಕವಾದ ರೀತಿಯಲ್ಲಿ ಸಾಧಿಸಬಹುದೆಂಬ ವಿಚಾರದೃಷ್ಟಿಯಿಂದ ಪಾಶ್ಚಾತ್ಯ ದೇಶಗಳನ್ನು ಬಿಗಿಂದಾಗ್ಯೆ ಸಂಚರಿಸಿ ತಮ್ಮ ಸಂಚಾರದ ಅನುಭವವನ್ನು ತಮ್ಮ ಸಂಸ್ಥಾನದ ಪ್ರಜಾಪಾಲನೆಯಲ್ಲಿ ಹೇಗೆ ಉಪಯೋಗಿಸುತ್ತಿರುವರೆಂಬುದು ವಾಚಕರೆಲ್ಲರಿಗೂ ಗೊತ್ತಿರಬಹುದು. ಜರ್ಮನಿ, ಇಂಗ್ಲೆಂಡು, ಫ್ರಾನ್ಸು ಮೊದಲಾದ ದೇಶಗಳನ್ನು ಸಂಚರಿಸುತ್ತಿದ್ದಾಗ ಪಾಶ್ಚಾತ್ಯ ಪಂಡಿತರು ಸಂಸ್ಕೃತವನ್ನು ಕಲಿತು ಅನೇಕ ಶೋಧನೆಗಳನ್ನು ಮಾಡಿರುವ ವೃತ್ತಾಂತಗಳನ್ನು ಮಹಾರಾಜರವರು ಪ್ರತ್ಯಕ್ಷ ಕಂಡಿರಬಹುದು. ಸಂಸ್ಕೃತ ವಿದ್ಯೆಯ ಪರಿಚಿತಿಯನ್ನು ಮಾಡಿಕೊಳ್ಳುವ ಲವಲವಿಕೆಯು ಪಾಶ್ಚಾತ್ಯ ಜನಗಳಲ್ಲಿ ಈಗ ತಾನೇ ಉದ್ಭವಿಸಿರುವುದನ್ನು ಮಹಾರಾಜರವರು ತಿಳಿದಿರಬಹುದು. ಆದ್ದರಿಂದ ಸಂಸ್ಕೃತ ವಿದ್ಯೆಯನ್ನು ನೂತನ ಪದ್ಧತಿಯ ಪ್ರಕಾರ ಭಾರತೀಯರು ಸಹ ಕಲಿಯಬೇಕೆಂದು ಸುಧಾರಕರ ಅಗ್ರಗಣ್ಯರಾದ ಈ ಮಹನೀಯರು ಅಪ್ಪಣೆ ಕೊಡಿಸಿರುವರು. ಇವರು ಸಂಸ್ಕೃತ ಕೊನ್ಫರೆನ್ಸ್ ಸಂದರ್ಭದಲ್ಲಿ ಮಾಡಿದ ಭಾಷಣದ ಇನ್ನು ಕೆಲವು ಅಂಶಗಳಿಂದ ಮಹಾರಾಜರವರ ಸೂಚನೆಗಳೇನೆಂಬುದನ್ನು ತಿಳಿಯಬಹುದು. ಧನುರ್ಧಾರಿಯಲ್ಲಿ ಪ್ರಕಟಿಸಲ್ಪಟ್ಟ ಈ ಭಾಷಣದ ಸಾರಾಂಶವೇನಂದರೆ—ಯಾವ ವಿಷಯಕವಾದ ಜ್ಞಾನವು ಸಮಾಜಕ್ಕೆ ಪ್ರಯೋಜನಕಾರಿಯಾಗಿಲ್ಲವೋ ಅದು ಎಷ್ಟು ಶ್ರೇಷ್ಠವಾಗಿದ್ದಾಗ್ಯೂ ನಿರರ್ಥಕವಾದುದೇ ಸರಿ. ಆಚರಣೆಯಲ್ಲಿಯೂ ಪದ್ಧತಿಯಲ್ಲಿಯೂ ಕಾಲಾನುಗುಣ್ಯವಾಗಿ ಹೆಚ್ಚು ಕಡಿಮೆ ಮಾಡುತ್ತಿರಬೇಕು. ಸೃಷ್ಟಿಯ ನಿಯಮವನ್ನನುಸರಿಸಿ ಆಗುತ್ತಿರುವ ಈ ವ್ಯತ್ಯಾಸವನ್ನು ಪ್ರತಿಬಂಧಪಡಿಸಲು ಪ್ರಯತ್ನಿಸುತ್ತಿರುವವರ ಪ್ರಯತ್ನವು ವ್ಯರ್ಥವಾಗುತ್ತದೆಂದು ಸಮಾಜ ಶಾಸ್ತ್ರದಿಂದ ವ್ಯಕ್ತವಾಗುತ್ತದೆ. ಈ ವಿಧವಾದ ಪ್ರತಿಬಂಧವು ಎಷ್ಟು ಪ್ರಬಲವಾಗಿ ಆಗುತ್ತದೆಯೋ ಅಷ್ಟು ಸುಧಾರಣೆಯ ವೇಗವು ಕುಂಠಿತವಾಗುತ್ತದೆ. ಕಾಲ ಸ್ಥಿತಿಗೆ ಅನುಸಾರವಾಗಿ ವ್ಯತ್ಯಾಸವನ್ನು ಮಾಡಿಕೊಳ್ಳುವುದೇ ಸುಧಾರಣೆಗೆ ಮುಖ್ಯ ಉಪಾಯವು. ಸಾಮಾನ್ಯವಾಗಿ ದೇಶ

ಗಿರುವ ಸುಧಾರಣೆಯ ವಿಶೇಷತ್ವವನ್ನು ಸಭೆಯಲ್ಲಿ ನೆರೆದ ಸಂಸ್ಕೃತ ಪಂಡಿತರಿಗೆ ಈ ರೀತಿ ಸೂಚಿಸಿಕೊಟ್ಟು ಸಂಸ್ಕೃತ ವಿದ್ಯೆಯನ್ನು ಕಲಿತುಕೊಳ್ಳುವ ನವೀನ ಸುಧಾರಣೆಯ ಉಪಾಯವನ್ನು ತೋರಿಸಿಕೊಟ್ಟಿರುತ್ತಾರೆ— "ಯಾವ ಭಾಷೆಯಾದರೂ ಸರಿಯೆ; ಆ ಭಾಷೆಗಳನ್ನಾಡುವ ಜನಗಳ ಆಚಾರ ವಿಚಾರಗಳನ್ನು ತೋರಿಸುವ ಅದೊಂದು ಕನ್ನಡಿಯಂತಿದೆ. ಆದರೆ ಆ ಭಾಷೆಯ ಅಧ್ಯಯನವನ್ನು ಶೋಧಕ ಬುದ್ಧಿಯಿಂದಲೂ, ಸ್ವತಂತ್ರ ವಿಚಾರದಿಂದಲೂ, ತಾರತಮ್ಯ ದೃಷ್ಟಿಯಿಂದಲೂ ಮಾಡಬೇಕು. ಸಂಸ್ಕೃತ ಪಂಡಿತರಿಗೆ ಮಹದಾಶ್ರಯವಿಲ್ಲದ್ದರಿಂದ ಇಂತಹ ನೂತನ ವಿಚಾರಗಳುಂಟಾಗಲವಕಾಶವಿಲ್ಲದಾಗಿದೆಯೆಂದು ಕೆಲವರು ಹೇಳಬಹುದು ಇದು ಯುಕ್ತವಾದುದಲ್ಲ. ಅನೇಕ ಸಂಸ್ಥಾನಗಳಿಂದ ತುಂಬಾ ಪ್ರೋತ್ಸಾಹ ದೊರಿಯುತ್ತಿದೆ. ನಮ್ಮ ಸಂಸ್ಥಾನದಲ್ಲಿಯೇ ಕಳೆದ ನೂರಾರು ವರುಷಗಳಿಂದಲೂ ಸಂಸ್ಕೃತ ಪಂಡಿತರಿಗೆ ದಕ್ಷಿಣೆ ವರ್ಷಾಶನಗಳ ಮೂಲಕ ಲಕ್ಷಾಂತರ ರೂಪಾಯಿಗಳು ವ್ಯಯವಾಗಿವೆ ಈ ವರೆಗೆ ಒಬ್ಬರಾದರೂ ಶೋಧಕ ಬುದ್ಧಿಯಿಂದ ಅಧ್ಯಯನ ಮಾಡಿರುವರೇ? ಸಮಾಜಕ್ಕೆ ತಮ್ಮ ಜ್ಞಾನದಿಂದ ಏನಾದರೊಂದು ಪ್ರಯೋಜನವನ್ನು ಮಾಡುತ್ತಿರುವರೇ? ಒಬ್ಬರಾದರೂ ಒಂದು ನೂತನ ಶೋಧನವನ್ನಾಗಲಿ ಹೊಸ ಮಾರ್ಗವನ್ನಾಗಲಿ ಕಲ್ಪಿಸಿರುವರೇ? ಯಾವ ಕಾರ್ಯವು ವ್ಯಯಕ್ಕೆ ಸಮಾನವಾದ ಪ್ರಯೋಜನವನ್ನುಂಟುಮಾಡುವದಿಲ್ಲವೊ ಆ ಕಾರ್ಯವು ಬಹು ದಿವಸ ನಡಿಯಲಾರದು. ವಿದ್ಯೆ ಧರ್ಮಜ್ಞಾನಗಳು ಸಕಲರ ಸಂಪತ್ತುಗಳಾಗಿರುವದರಿಂದ ಅವು ಸಕಲರಿಗೂ ಪ್ರಾಪ್ತವಾಗುವ ಅವಕಾಶವಿರಬೇಕು. ಮತಾಭಿಮಾನ, ಜಾತ್ಯಾಭಿಮಾನ, ಧರ್ಮಾಭಿಮಾನಗಳನ್ನು ಬಿಟ್ಟು ಶಾಸ್ತ್ರೀಯ ಪದ್ಧತಿಯನ್ನನುಸರಿಸಿ ಪ್ರಯತ್ನಿಸಿದ ವಿನಹ ನಮ್ಮ ಪ್ರಾಚೀನ ಭಾಂಡಾರದ ನಿಜಜ್ಞಾನವಾಗುವದಿಲ್ಲ. × × × × × ಪಾಶ್ಚಾತ್ಯ ಪಂಡಿತರ ಪ್ರಯತ್ನದಿಂದಲೂ, ಪಾಶ್ಚಾತ್ಯ ಜ್ಞಾನದಿಂದಲೂ ಈ ಪದ್ಧತಿಯು ನಮಗೆ ಗೊತ್ತಾಗಿದೆ. ಈ ಪದ್ಧತಿಯನ್ನು ಸಕಲರು ಅನುಸರಿಸುವದು ಯುಕ್ತವು ಹಿಂದೂಸ್ಥಾನದಲ್ಲಿರುವ ಹಿಂದೂಗಳಿಗೆ ತಮ್ಮ ಧರ್ಮವೂ ಅದರ ನಿಜವಾದ ತತ್ವವೂ ತಿಳಿದಿಲ್ಲವೆಂದು ಹೇಳಬಹುದು. ತಮ್ಮ ಧರ್ಮದ ಶಿಕ್ಷಣವು ತಮ್ಮ ಜನಾಂಗಕ್ಕೇನೇ ಇಲ್ಲದ ಸ್ಥಿತಿಯು ಸುಧಾರಿಸಿದ ಯಾವ ದೇಶದಲ್ಲಿಯೂ ಇಲ್ಲ."

ಮಹಾರಾಜರವರು ಹೇಳಿದ ಸೂಚನೆಗಳೆಲ್ಲಾ ಬೇಗ ಆಚರಣೆಗೆ ಬರುವಂತೆ ಬರೋಡಾದಲ್ಲಿ ಒಂದು ಸಂಸ್ಕೃತ ಕೊಲೇಜನ್ನು ಸ್ಥಾಪಿಸಲ್ಪಡುವದೆಂಬುದಾಗಿ ಕೇಳುತ್ತೇವೆ ಈ ಸುಧಾರಕ ಮಹಾರಾಜರ ಅರ್ಥಗರ್ಭಿತವಾದ ಮಾತುಗಳನ್ನು ಈ ಪ್ರಾಂತ್ಯಗಳ ಧರ್ಮಗುರುಗಳೂ, ಪ್ರಮೋಹಕರೂ ಆಗತ್ಯವಾಗಿ ತಿಳಕೊಳ್ಳಬೇಕಾಗಿದೆ.

ವಿದ್ಯಾರ್ಥಿಗಳ ರಜೆಕಾಲವು.

ಸ್ವರ್ಗಸ್ಥ ಗೋಖಲೆಯವರ ಸ್ಮಾರಕವನ್ನು ಏರ್ಪಡಿಸುವ ಚಳವಳವು ಪ್ರಕೃತ ದೇಶದಲ್ಲೆಲ್ಲಾ ಹಬ್ಬಿದೆ. ವಿದ್ಯಾರ್ಥಿಗಳು ಮುಖ್ಯವಾಗಿ ಈ ಚಳವಳದಲ್ಲಿ ಹೆಚ್ಚಿನ ಉತ್ಸಾಹವನ್ನು ತೋರಿಸುತ್ತಿದ್ದಾರೆ ಗತಿಸಿದ ಮಹನೀಯರ ಭಾವಚಿತ್ರಗಳನ್ನು ಶಾಲಾ ಭವನಗಳಲ್ಲಿ ಸ್ಥಾಪಿಸುವದು, ಅಲ್ಲಲ್ಲಿ ತರುಣರ ಸಭೆಗಳನ್ನು ಕೂಡಿಸಿ ಅವರ ಪರಿಶುದ್ಧ ಜೀವನ ವೃತ್ತಾಂತವನ್ನು ಒಲ್ಲವರಿಂದ ಕೇಳಿ ಆಹ್ಲಾದಪಡುವದು, ಸಾಧ್ಯವಾದ ಮಟ್ಟಿನ ಚಂದಾ ಎತ್ತಿಕೊಂಡು ಅದನ್ನು ಗೋಖಲೆಯವರ ಭಾರತ ಸೇನಾ ಸಂಘಕ್ಕೆ ಕಳುಹಿಸುವ ಪ್ರಯತ್ನಗಳಲ್ಲಿ ಭಾಗಿಗಳಾಗುವದು, ಈ ಮೊದಲಾದ ಕಾರ್ಯ ಸಾಧನೆಗಳಿಂದ ಭರತ ಮಾತೆಗೆ ಅತಿ ಪ್ರಿಯಕರನಾದ ಪುತ್ರನ ವಿಯೋಗದಿಂದ ಉಂಟಾದ ಸಂತಾಪವನ್ನು ತಣಿಸಲು ಇತರ ಪ್ರಜಾಜನರಂತೆ ವಿದ್ಯಾರ್ಥಿಗಳೂ ಸಹ ಅಲ್ಲಲ್ಲಿ ಶ್ರಮಪಡುತ್ತಿರುವರು. ಇದೆಲ್ಲವೂ ಸಂತೋಷಕರ ವೃತ್ತಾಂತ. ಸರ್ವರೂ ಕೂಡಿಕೊಂಡು ನೆರವೇರಿಸಬೇಕಾದ ಏರ್ಪಾಡುಗಳು ಆದರೆ ಗೋಖಲೆಯವರ ಸ್ಮರಣೆಯು ಚಿರಕಾಲ ವಿದ್ಯಾರ್ಥಿಗಳಲ್ಲಿ ಮತ್ತು ಇವರ ಮೂಲಕ ಪ್ರಜಾಸಾಮಾನ್ಯರಲ್ಲಿ ಇರಗೊಡಿಸುವ ಒಂದು ಹಂಚಿಕೆಯನ್ನು ಪ್ರಕೃತ ವಿದ್ಯಾರ್ಥಿಗಳಿಗೆ ರಜೆ ದೊರಕಿದ ಸಂದರ್ಭದಲ್ಲಿ ಸೂಚಿಸಬಹುದು. ಎಲ್ಲಾ ಅಭಿವೃದ್ಧಿ ಸಾಧನೆಗೆ ಪ್ರಜಾಸಾಮಾನ್ಯರಲ್ಲಿ ವಿದ್ಯಾಪ್ರಸರಣೆಯ ಅವಶ್ಯಕತೆಯನ್ನು ತಿಳಕೊಂಡು ತಮ್ಮ ದೃಢವಾದ ಮನೋಸಂಕಲ್ಪದಿಂದ ಈ ವಿದ್ಯಾ ಉದ್ದೇಶವನ್ನು ಕೈಗೂಡಿಸಲು ಗೋಖಲೆಯವರು ನಡೆಸಿದ ಸಾಧನವೇನೆಂಬುದನ್ನು ಪ್ರತಿ ವಿದ್ಯಾರ್ಥಿಯೂ ತಿಳಿದಿರಬಹುದು. ಈ ಸಾಧನವನ್ನು ಮತ್ತಷ್ಟು ಮುಂದೊತ್ತಲು ನಡೆಸಬೇಕಾದ ಪ್ರಯತ್ನವನ್ನು ವಿದ್ಯಾರ್ಥಿಗಳು ಕೈಕೊಂಡರೆ, ಗೋಖಲೆಯವರ ಆತ್ಮವು ಸಂತೋಷವನ್ನು ತಾಳುವದೆಂಬುದರಲ್ಲಿ ಸಂಶಯವಿರದು. ಗೋಖಲೆಯವರ ಈ ಸ್ಮಾರಕಕ್ಕೆ ವಿದ್ಯಾವರ್ಧನೆಯ ದೊಡ್ಡ ದೊಡ್ಡ ಸಂಘಗಳನ್ನು ಏರ್ಪಡಿಸುವ ಆಗತ್ಯವಿಲ್ಲ. ಶಾಲೆಗಳನ್ನು ಸ್ಥಾಪಿಸಿ ಬಹಳ ವೆಚ್ಚವನ್ನು ಮಾಡುವದೂ ಬೇಡ. ರಿಕೊಗ್‌ನಿಶನ್ ಮೊದಲಾದವುಗಳ ಭಗ್ಯೆ ಸಿಕ್ಕಿದ್ದವರಿಗೆ ಸಾಷ್ಟಾಂಗವೆರಗಬೇಕೆಂತಲೂ ಇಲ್ಲ. ರಜೆಕಾಲದಲ್ಲಿ ತಮ್ಮ ಶಾಲಾ ಕೊಲೇಜುಗಳನ್ನು ಬಿಟ್ಟು ಹೊರಡುವ ಮುಂಚೆ ಕೆಲವು ಮೂಲಪಾಠಗಳನ್ನೂ ಮೊದಲನೆಯ ಪುಸ್ತಕಗಳನ್ನೂ ತಕ್ಕೊಂಡು ತಮ್ಮ ಮನೆಗಳಿರುವ ಗ್ರಾಮಗಳಲ್ಲಿ ಬರಹ ಗೊತ್ತಿಲ್ಲದ ಪ್ರತಿ ಮೂರು ಯಾ ಐದು ಜನರಲ್ಲಿ ಅಕ್ಷರ ಮಾಹಿತಿಯನ್ನುಂಟು ಮಾಡುವದೆಂಬ ಸಂಕಲ್ಪವನ್ನು ವಿದ್ಯಾರ್ಥಿಗಳು ಮಾಡಿಕೊಂಡು ಆ ರೀತಿ ವರ್ತಿಸಬಹುದು. ಪ್ರತೀ ರಜಾ ಕಾಲದಲ್ಲಿ ಅತ್ತಿತ್ತ ನಿರರ್ಥಕವಾಗಿ ತಿರುಗಾಡಿ ಕಳೆಯುವ ಸಮಯವನ್ನು ಈ ಉದ್ದೇಶದ ಬಗ್ಯೆ ವಿನಿಯೋಗಿಸಿದರೆ ಅಕ್ಷರಹೀನರಾದವರ ಸಂಖ್ಯೆಯು ಕಡಿಮೆಯಾಗಿ ದೇಶದ ಉನ್ನತಿಯ ಸಾಧನಾ ಕಾರ್ಯವು ಸುಲಭವಾಗುವದು.

ಇಂಥಾ ಏರ್ಪಾಡಿನಿಂದ ವಿದ್ಯಾರ್ಥಿಗಳಿಗೆ ಸಹ ತಮ್ಮ ಮುಂದಿನ ಜೀವನದಲ್ಲಿ ಪ್ರಯೋಜನವಿದೆ ಪ್ರಜಾ ಸೇವೆಯ ಪಾಠವನ್ನು ಇವರು ಪುಸ್ತಕ ಪಾಠದೊಂದಿಗೆ ಕಲಿಯಲು ಇದರಿಂದ ಅನುಕೂಲವಾಗುತ್ತದೆ.

ಆರೋಗ್ಯದಾಯಿನಿ ಔಷಧಾಲಯವು. ಮಂಗಳೂರು.

ಜನರ ಪ್ರಯೋಜನಾರ್ಥವಾಗಿ ಏರ್ಪಡಿಸಿರುವ ಈ ಔಷಧಾಲಯದ ದ್ವಿತೀಯ ವರುಷದ ವೃತ್ತಾಂತವು ರಾ। ಮೇಲೋತ್ತ ರಾಮನ್ ನಂಬಿಯಾರರವರಿಂದ ಇತ್ತಲಾಗೆ ಪ್ರಕಟಿಸಲ್ಪಟ್ಟಿರುವದು ದ್ವಿತೀಯ ವರುಷದಲ್ಲಿ ಸಹ ಈ ಔಷಧಾಲಯದಿಂದ ಬಡ ಜನರು ಧರ್ಮಾರ್ಥವಾಗಿ ವಿಶೇಷ ಸಹಾಯವನ್ನು ಪಡದಿರುವರು. ಆಯಾ ಪ್ರಾಂತ್ಯಗಳಿಂದ ರೂ ೩೦೯—೧೨—೦ ದ್ರವ್ಯ ಸಹಾಯವಾಗಿ ದೊರಕಿರುತ್ತದೆ. ಔಷಧಿಗಳ ಮಾರಾಟದಿಂದ ರೂ. ೧೫೫೪—೮—೯ ಸಂಗ್ರಹಿಸಲ್ಪಟ್ಟಿರುವದು. ಔಷಧಿಗಳನ್ನು ತಯ್ಯಾರಿಸುವ ಬಗ್ಯೆ ರೂ. ೧೭೪೯—೧೦—೧೧ ಖರ್ಚಾಗಿರುವದು. ಮನೆ ಬಾಡಿಗೆ ಸಿಬ್ಬಂದಿಯ ಸಂಬಳ ಇತ್ಯಾದಿ ಇತರ ಖರ್ಚು ರೂ. ೩೦೦ಕ್ಕೆ ಮಿಕ್ಕಿರುವದು. ಔಷಧಾಲಯಕ್ಕೆ ತಕ್ಕ ಕಟ್ಟಡವು ಇಲ್ಲದ್ದರಿಂದ ಇದರ ಕಾರ್ಯನಿರ್ವಾಹಕ್ಕೆ ಆಗಿಂದಾಗ್ಯೆ ಅಭ್ಯಂತರಗಳು ಪ್ರಾಪ್ತಿಸುತ್ತಿರುವವೆಂಬುದಾಗಿ ತಿಳಿಯುತ್ತೇವೆ. ಈ ಅಭ್ಯಂತರಗಳನ್ನು ಹೋಗಗೊಳಿಸಲು ತಕ್ಕವಾದ ಕಟ್ಟೋಣವನ್ನು ಕಟ್ಟಿಸಲಿಕ್ಕೆ ಮಹಾ ಜನರಿಂದ ಈ ಔಷಧಾಲಯದ ವ್ಯವಸ್ಥಾಪಕರು ಸಹಾಯವನ್ನು ನಿರೀಕ್ಷಿಸುತ್ತಿರುವರು. ಈ ಸಂಸ್ಥೆಯ ಉದ್ದೇಶಗಳನ್ನು ಲಕ್ಷ್ಯಕ್ಕೆ ತಂದುಕೊಂಡು ಇದಕ್ಕೆ ಯುಕ್ತವಾದ ಸಹಾಯವನ್ನು ಜನರು ಮಾಡಬೇಕೆಂದು ಅಪೇಕ್ಷಿಸುತ್ತೇವೆ.

ಈ ಸಂದರ್ಭದಲ್ಲಿ ಔಷಧಾಲಯದ ವೃತ್ತಾಂತದಲ್ಲಿರುವ ಮತ್ತೊಂದು ವಿಜ್ಞಾಪನೆಯನ್ನು ನಮ್ಮ ವಾಚಕರು ತಿಳಿಯುವದು ಅಗತ್ಯ. ಔಷಧಾಲಯಕ್ಕೆ ಸಂಬಂಧಪಟ್ಟ ಲೆಕ್ಕ ವೃತ್ತಾಂತ ಇತ್ಯಾದಿಗಳು ಮಹಾ ಜನರ ಪರಿಶೋಧನೆ ಬಗ್ಯೆ ಔಷಧಾಲಯದ ಆಫೀಸಿನಲ್ಲಿರುವವು ಆದ್ದರಿಂದ ಔಷಧಾಲಯದ ಯಥಾರ್ಥ ಸ್ಥಿತಿಯನ್ನು ಇದರಿಂದ ಸರ್ವ ಜನರಿಗೂ ತಿಳಿಯಲು ಸಾಧ್ಯವಿದೆ ಅಲ್ಲದೆ ಇದನ್ನು ಯಾರಾದರೂ ವಹಿಸಿಕೊಂಡು ತಾವೇ ನಡಿಸುವೆವೆಂಬ ಉತ್ಸಾಹವುಳ್ಳವರಿಗೆ ಇದನ್ನು ವಹಿಸಿಕೊಡಲಿಕ್ಕೂ ಅಥವಾ ಇತರ ಯಾರನ್ನಾದರೂ ಕೂಡಿಕೊಂಡು ಈ ಔಷಧಾಲಯವನ್ನು ನಡಿಸಲಿಕ್ಕೂ ಇದರ ವ್ಯವಸ್ಥಾಪಕರು ಸಿದ್ಧವಿರುವರೆಂಬುದನ್ನು ವಾಚಕರು ಮನಸ್ಸಿಗೆ ತಂದುಕೊಳ್ಳಬೇಕು.

ಪಂಚಮರು.

(ದೇಶಾಯಿ ಶೇಷಗಿರಿರಾವ್, ನಂದಿ)

ನಮ್ಮ ದೇಶದಲ್ಲಿರುವ ನೀಚ ಜಾತಿಗಳೊಳಗೆಲ್ಲಾ ಪಂಚಮರು ನಮ್ಮಿಂದ ಬಹು ನೀಚವಾಗಿ ನೋಡಲ್ಪಡುತ್ತಿರುವರು. ಹೊಲೆಮಾದಿಗ ಮೊದಲಾದವರು ಪಂಚಮರೆಂದು ಹೇಳಲ್ಪಡುತ್ತಿರುವರು. ಆರ್ಯರು ಈ ದೇಶಕ್ಕೆ ಬರುವ ವೇಳೆಗೇ ಅನಾಗರಿಕ ಜಾತಿಯವರು ಬೆಟ್ಟಗಳಲ್ಲಿ ವಾಸವಾಗಿದ್ದರೆಂದೂ ಬೆಟ್ಟಗಳಿಗೆ ಮಲೆಗಳೆಂದು ಹೆಸರಿದ್ದುದರಿಂದ ಬೆಟ್ಟಗಳಲ್ಲಿದ್ದ ಇವರಿಗೆ ಹೊಲೆಯರೆಂಬುದಾಗಿ ಹೆಸರು ಬಂದಿದೆಯೆಂದೂ ಚರಿತ್ರಜ್ಞರು ಹೇಳುವರು. ಸಂಕರರು ಪಂಚಮ ಜಾತಿಯೆಂದು ಮನುವು ಹೇಳಿರುವುದರಿಂದಲೂ ಮತಂಗನು ಸಂಕರನೆಂದು ಪುರಾಣಾದಿಗಳಿಂದ ತಿಳಿಯಬರುತ್ತಿರುವುದರಿಂದಲೂ ಮತಂಗನ ಸಂತತಿಗೆ ಮಾತಂಗ (ಮಾದಿಗ)ರೆಂದು ಹೆಸರು ಬಂದುದೆ ಹೇಳುವರು.

ಪಂಚಮರಲ್ಲಿ ಕೆಲವರು ಶ್ವಮಾಂಸವನ್ನು (ನಾಯಿಯ ಮಾಂಸವನ್ನು) ತಿನ್ನುವುದರಿಂದ ಶ್ವಪಚರೆಂದೂ, ಶ್ವಪಾಕರೆಂದೂ ಅಮರಕೋಶ ಮೊದಲಾದವುಗಳಲ್ಲಿ ಉಂಟು (ನು...)

ಬಾರದವರೆಂದೂ, ನೀಚರಾದುದರಿಂದ ಹೇಳಬಾರದವರೆಂದೂ ಗ್ರಾಮಕ್ಕೆ ಅಂತ್ಯ (ದೂರ)ದಲ್ಲಿ ವಾಸಮಾಡುತ್ತಿರುವುದರಿಂದ ಅಂತ್ಯವಾಸರೆಂದೂ ಕೋಪ ಸ್ವಭಾವವನ್ನು ಳ್ಳವನು ಚಂಡಾಲನೆಂದೂ, ಶಾಸ್ತ್ರಗಳು ಹೇಳುತ್ತಿರುವುದರಿಂದಲೂ, ಮತಂಗ ಋಷಿ ಕೋಪಿಷ್ಟನಾದುದರಿಂದಲೂ ಆತನಿಗೆ ಚಂಡಾಲನೆಂದು ಹೆಸರುಂಟಾಗಿ ಆ ಮೂಲಕ ಮಾತಂಗರಿಗೂ ಚಂಡಾಲರೆಂಬ ಹೆಸರು ಬಂದಿತೆಂದೂ ತಿಳಿದುಬರುತ್ತಿರುವುದು.

ಈ ರೀತಿಯಾಗಿ ಏರ್ಪಟ್ಟ ಪಂಚಮ ಜಾತಿಯು ವಿದ್ಯಾವಿಹೀನತ್ವದಿಂದಲೂ, ಅಪರಿಶುಭ್ರತ್ವದಿಂದಲೂ, ಅನಾಗರಿಕತೆಯಿಂದಲೂ ಆರ್ಯರಿಂದ ಅತಿಹೇಯವಾಗಿ ನೋಡಲ್ಪಡುತ್ತಾ ತುಂಬಾ ಶೋಚನೀಯವಾದ ಸ್ಥಿತಿಗೆ ಬರಬೇಕಾದುದಾಯಿತು. ಆರ್ಯರಿಂದ ನೀಚ ಜಂತುಗಳೆಂದು ಹೇಳಲ್ಪಟ್ಟ ನಾಯಿ, ಕೋಳಿ, ಬೆಕ್ಕು, ಮೊದಲಾದವುಗಳಿಗಿಂತಲೂ ನೀಚವಾಗಿ ಪಂಚಮರನ್ನು ನೋಡುತ್ತಿರುವೆವು. ಹಿಂದೂಜಾತಿಯೊಳಗಿನ ಅಗ್ರವರ್ಣಸ್ಥರ ಬಾಗಿಲುಗಳಲ್ಲಿ ಸಹಿತ ಕೋಳಿಗಳು ಸಂಚರಿಸುತ್ತಲೇ ಇರುವವು. ನಾಯಿಗಳನ್ನು ಬಹು ಮಂದಿ ಬ್ರಾಹ್ಮಣರೇ ಸಾಕುತ್ತಾ ಮನೆಯೊಳಕ್ಕೆ ಬರಗೊಡಿಸುತ್ತಿರುವರು. ತಮ್ಮೊಡನೆ ಹಾಸುಗೆಯಲ್ಲಿ ಮಲಗಿಸಿಕೊಳ್ಳುತ್ತಲೂ ಇರುವರು. ಬೆಕ್ಕುಗಳು ಸ್ವೇಚ್ಛೆಯಾಗಿ ಪ್ರತಿ ಮನೆಯಲ್ಲಿಯೂ ವಾಸವಾಗುತ್ತಲಿವೆ. ಆದರೆ ತಮಗೆ ಸಮಾನ ಮನುಷ್ಯರಾದ ಪಂಚಮರನ್ನು ಮಾತ್ರ ದೂರವಾಗಿ ತಳ್ಳಿಹಾಕುತ್ತಿರುವರು. ಕಾಗೆಗಳು, ಬೆಕ್ಕುಗಳು ಹಿಂದುಗಳ ಭೋಜನ ಪದಾರ್ಥಗಳನ್ನು ಮುಟ್ಟಿ ಮೈಲಿಗೆ ಮಾಡುತ್ತಿರುವುವಲ್ಲದೆ ಎಂಜಲುಮಾಡಿಬಿಡುತ್ತಿರುವುವು. ಆದರೆ ಅದನ್ನು ಮಾತ್ರ ಅಷ್ಟು ಅಸಹ್ಯವಾಗಿ ನೋಡುತ್ತಿರುವುದಿಲ್ಲವು. ಪಂಚಮರು ಸಮೀಪದಲ್ಲಿರುವುದಕ್ಕಾದರೂ ಯೋಗ್ಯರಲ್ಲವು. ಅವರ ಗಾಳಿಯಾದರೂ ತಗಲ (ಸೋಕ) ಬಾರದು. ಅವರ ನೆಳಲನ್ನು ಸಹಿತ ತುಳಿಯಬಾರದು. ಅವರು ನೋಡಿದ ಮಾತ್ರದಿಂದಲೇ ಭೋಜನ ಪಥಾರ್ಥಗಳು ಮೈಲಿಗೆಯಾಗುತ್ತಿರುವುವು. ಇವು ತುಂಬಾ ಪರಿಹಾಸಪಾತ್ರವಾದ ಸಂಗತಿಗಳು. ಪಂಚಮರಲ್ಲಿದ್ದಷ್ಟು ಅಪರಿಶುದ್ಧತೆಯಾದರೂ ಕಾಗೆ, ನಾಯಿ, ಬೆಕ್ಕು ಮೊದಲಾದುವುಗಳಲ್ಲಿ ಇಲ್ಲವೇ?

ಪಕ್ಷಿಗಳ, ಮೃಗಗಳು ಮೊದಲಾದ ಪ್ರಾಣಿಗಳಲ್ಲಿ ತೋರಿಸುವಷ್ಟು ದಯೆಯನ್ನಾದರೂ ಪಂಚಮರಲ್ಲಿ ನಾವುಗಳು ತೋರಿಸುತ್ತಿರುವುದಿಲ್ಲವು. ಬಹು ಬಡವರೂ, ಅಂಗಹೀನರೂ, ವ್ಯಾಧಿಗ್ರಸ್ತರೂ ಆದ ಪಂಚಮರಿಗೆ ಸಹಿತ ದಾನಧರ್ಮಗಳನ್ನು ಮಾಡುವುದಕ್ಕೆ ನಾವು ಸಮ್ಮತಿಸುವುದಿಲ್ಲವು. ಅವರಿಗೆ ಸಹಾಯಮಾಡುವುದರಿಂದ ಪುಣ್ಯವಿಲ್ಲವೆಂದು ಹೇಳುವುದರಲ್ಲಿ ಹಿಂಜರಿಯುತ್ತಿರುವುದಿಲ್ಲವು. ಪಂಚಮರು ವಾಂತಿಭೇದಿ ಮೊದಲಾದ ಭಯಂಕರ ರೋಗಗಳಿಂದ ಪೀಡಿತರಾಗಿ ಮಡಿಯುತ್ತಿದ್ದರೂ ವೈದ್ಯ ಸಹಾಯ ಮಾಡದೆಯೂ ಆರೋಗ್ಯ ಧರ್ಮಗಳನ್ನು ಬೋಧಿಸದೆಯೂ ನಿರ್ದಯಹೃದಯರಾಗಿ ಸುಮ್ಮನೆ ನೋಡುತ್ತಾ ನಿರ್ಲಕ್ಷ್ಯವಾಗಿರುವೆವು. ಅಯ್ಯೋ! ಇದಕ್ಕಿಂತಲೂ ಪಾಪಕೃತ್ಯವೂ ವಿರುದ್ಧ ಧರ್ಮವೂ ಇರುವುದೇ?

ಪಂಚಮರ ಸಹಾಯವಿಲ್ಲದೆ ನಮಗೆ ಯಾವ ಕೆಲಸವೂ ಜರುಗುತ್ತಿರುವುದಿಲ್ಲವು. ಕಷ್ಟಬಿದ್ದು ವ್ಯವಸಾಯವನ್ನು ಮಾಡಿ ಬೆಳೆಯನ್ನು ಬೆಳಿಸುವವರು ಪಂಚಮರು. ಗ್ರಾಮ ಪಾರಿಶುದ್ಧ್ಯಕ್ಕೆ ಸಹಾಯಮಾಡುವವರು ಪಂಚಮರು. ಪಾದರಕ್ಷೆಗಳನ್ನು ಬಿನು ಕೂಲಪಡಿಸುವವರು ಪಂಚಮರು. ರಾತ್ರಿಕಾಲದಲ್ಲಿ ಗಸ್ತು ತಿರುಗಿ ಗ್ರಾಮರಕ್ಷಣೆಯನ್ನು ಮಾಡುವವರು ಪಂಚಮರು. ಕಂದಾಯದ ಹಣವನ್ನು ಬದ್ರವಾಗಿ ತಾಲೂಕುಗಳಿಗೆ ತೆಗೆದುಕೊಂಡು ಹೋಗುವ ನಂಬಿಕೆಯ ನೌಕರರು ಪಂಚಮರು. ಅನಾಥ ಪ್ರೇತಸಂಸ್ಕಾರವನ್ನು ಮಾಡುವ ಪುಣ್ಯಾತ್ಮರು ಪಂಚಮರು. ಪಶುಗಳು ಮೊದಲಾದುವುಗಳ ಮೃತ ಕಳೇಬರಗಳನ್ನು ಗ್ರಾಮಗಳಿಂದ ತೊಲಗಿಸುವವರು ಪಂಚಮರು. ಇದು ಅದು ಎಂದು ಹೇಳುವುದೇಕೆ? ಪ್ರತಿ ಗ್ರಾಮದಲ್ಲಿಯೂ ಹಗಲೆನ್ನದೆ ರಾತ್ರಿಯೆನ್ನದೆ ಯಂತ್ರಗಳಂತೆ ಶ್ರಮೆಯೆನ್ನದೆ ವಿಶ್ರಾಂತಿಯಿಲ್ಲದೆ ಕೆಲಸಮಾಡುವ ಮಾನವ ಸೇವಾಪರಾಯಣರು ಪಂಚಮರು. ಇಂತಹ ಪಂಚಮರನ್ನು ನಾವು ಹೇಳಬಾರದವರೆಂದು ಕರೆಯುತ್ತಾ ಹೇಳಲಾಗದಷ್ಟು ಬಾಧೆಗಳನ್ನಿಡುತ್ತಾ ಬಾನಿಸರಿಗಿಂತಲೂ ಅಧಮಾಧಮರನ್ನಾಗಿ ನೋಡುತ್ತಿರುವುದು ಕೃತಘ್ನತೆಯೂ ಕ್ರೂರತ್ವವೂ ಕೃಪಣತ್ವವೂ ಅಲ್ಲವೇ?

ಈ ದೇಶದಲ್ಲಿ ಅನಾದಿಯಿಂದಲೂ ಇದ್ದು ಹಿಂದುಗಳಾಗಿ ನಮ್ಮ ಮತದಲ್ಲಿಯೇ ಇದ್ದು ನಮ್ಮ ಆಚಾರಗಳನ್ನೇ ಅವಲಂಬಿಸಿ ನಮ್ಮ ದೇವತೆಗಳನ್ನೇ ಆರಾಧಿಸುತ್ತ ನಮಗೆ ವಿಧೇಯರಾಗಿ ದಾಸರಾಗಿ ಸಹಾಯಕರಾಗಿ ಇರುವ ಪಂಚಮರನ್ನು ದಯಾ ಧರ್ಮ ದಾಕ್ಷಿಣ್ಯಗಳನ್ನು ತ್ಯಜಿಸಿ ದೈವಭೀತಿಯಿಲ್ಲದೆ ಹಿಂಸಿಸುತ್ತಿದ್ದು ಪರದೇಶಗಳ ಅನ್ಯಜಾತಿಗಳವರಾದರೋ ನಮ್ಮ ದೇಶೀಯರನ್ನು ಹಿಂಸಿಸುತ್ತಿರುವರೆಂದು ನಿಂದಿಸುತ್ತಿರುವುದೂ [illegible] ಪರಿಹಾಸಾಸ್ಪದವಾದಗಿರುವುದಿಲ್ಲವೇ?

ಹಿಂದುಗಳೇ! ಮತ್ತೊಂದು ವಿಚಿತ್ರವು!! ವಿಚಿತ್ರವಲ್ಲ ವಿರುದ್ಧವು!!! ಈ ಪಂಚಮರೇ ಈ ಹೇಳಬಾರದವರೇ ಮಹಮ್ಮದೀಯ ಕ್ರೈಸ್ತಮತಗಳನ್ನು ಸ್ವೀಕರಿಸಿದ ಮಾತ್ರದಿಂದಲೇ ಇತರ ಹಿಂದುಗಳಿಗೆ ಸರಿಸಮಾನವಾಗಿ ಗೌರವಿಸಲ್ಪಡುತ್ತಿರುವರು! ಅವರೊಡನೆ ಮಿಳಿತವಾಗಿ ತಿರುಗುತ್ತಿರುವೆವು!! ಇದರಿಂದಲೇ ಬಹುಮಂದಿ ಪಂಚಮರು ಪರಮತಗಳಲ್ಲಿ ಸೇರಿಹೋಗುತ್ತಲಿರುವರು. ಬರಬರುತ್ತಾ ಹಿಂದುಗಳ ಸಂಖ್ಯೆಯು ತಗ್ಗಿಹೋಗುತ್ತಿರುವುದು. ಇದು ನಮ್ಮ ಜಾತೀಯ ಬಲಕ್ಕೆ ಲೋಪವಲ್ಲವೇ? ಇನ್ನಾದರೂ ಈ ನಷ್ಟವನ್ನೂ ಈ [illegible]ವನ್ನೂ ಗ್ರಹಿಸಿ ಅವರನ್ನು ಸಂಸ್ಕರಿಸಿ ಆದರಿಸುವುದು ಕರ್ತವ್ಯವಲ್ಲವೆ? ಪಂಚಮರಿಗುಂಟಾದ ಈ ದೀನತ್ವ ಹೀನತ್ವಗಳೆಲ್ಲಕ್ಕೂ ವಿದ್ಯಾವಿಹೀನತ್ವವೇ ಹೇತುವು. ವಿದ್ಯೆಯೇ ಸಕಲ ಸಂಪತ್ತುಗಳಿಗೂ ಮೂಲವು. ಅದೇ ಸರ್ವೌನ್ನತ್ಯ ಸಾಧನವು. ಆದುದರಿಂದ ಪಂಚಮರಿಗೆಲ್ಲ ವಿದ್ಯೆಯನ್ನು ಕಲಿಸಿ ಜ್ಞಾನವಂತರನ್ನಾಗಿ ಮಾಡಬೇಕು. ಒಂದೇ ಸಾರಿ ಕೋಟ್ಯನುಕೋಟಿಗಟ್ಟಲೆಯಿರುವ ಇಷ್ಟು ಮಂದಿಗೆ ವಿದ್ಯಾದಾನವನ್ನು ಮಾಡುವುದು ಕಷ್ಟಸಾಧ್ಯವು. ಅವರೆಲ್ಲರೂ ಕಲಿತುಕೊಳ್ಳುವುದೂ ಅದಕ್ಕಾಗಿ ಅವರಿಗವಕಾಶ ದೊರಕುವುದೂ ಕಷ್ಟಸಾಧ್ಯವೇ. ಆದುದರಿಂದ ಕೈಲಾದಮಟ್ಟಿಗೂ ಪಾಠಶಾಲೆಗಳನ್ನು ಸ್ಥಾಪಿಸಿ ಮಿಕ್ಕವರಿಗೆ ಉಪನ್ಯಾಸಗಳ ಮೂಲಕವಾಗಿ ಜ್ಞಾನವನ್ನುಂಟುಮಾಡಬೇಕು. ಶುಚಿತ್ವವನ್ನು ಕಲಿಸಬೇಕು. ಲೋಕಜ್ಞಾನವನ್ನು ತಿಳಿಸಬೇಕು. ದುರಾಚಾರಗಳನ್ನು ಬಿಡಿಸಬೇಕು.

ಆವಾಗ ನಾವು ಹೀನಜಾತಿಯವರ ವಿಷಯದಲ್ಲಿ ಕರುಣೆಪಟ್ಟು ಅವರನ್ನು ಉದ್ಧರಿಸುವೆವೋ ಆಗಲೇ ಹಿಂದೂದೇಶವು ಉದ್ಧರಿಸಲ್ಪಡುವುದು. ಭಾರತಜಾತಿಯು ಇತರ ಸಮಾನವಾದ ಜಾತಿಗಳಲ್ಲಿ ಅತ್ಯಧಿಕೌನ್ನತ್ಯ ಸ್ಥಿತಿಯನ್ನು ಹೊಂದುವುದು. ಆಗಲೇ ನಾವುಗಳು ನಿಜವಾದ ಹಿಂದುಗಳಾಗುವೆವು.

ಮ್ಯ. ಸ್ವಾ.

ಕಣಗಲ ಗಿಡ (ಕಾಡುಗೆಣಸು).

ಮದರಾಸಿನ ವ್ಯವಸಾಯ ಮತ್ತು ಉದ್ಯಾನವಿದ್ಯಾ ಪಟುವಾದ ಎಚ್. ಇ. ಹಾಟನ್ ಸಾಹೇಬರು ಕಣಾಲು (ಕಾಡುಗೆಣಸು) ಗಿಡದ ವಿಷಯವಾಗಿ 'ಇಂಡಿಯನ್ ಅಗ್ರಿಕಲ್ಚರಲ್ ವರ್ಲ್ಡ್' ಎಂಬ ಮಾಸಪತ್ರಿಕೆಯ ಡಿಸೆಂಬರು ಸಂಚಿಕೆಯಲ್ಲಿ ಸ್ವಾರಸ್ಯವಾದ ಒಂದು ಲೇಖನವನ್ನು ಬರೆದಿರುತ್ತಾರೆ. ಅದರ ಸಾರಾಂಶವೇನಂದರೆ:—

ಕಣಗಲು (ಕಾಡ ಗೆಣಸು) ಗಿಡದಲ್ಲಿ ಕಹಿ, ಸೀ ಎಂಬ ಎರಡು ಜಾತಿಗಳುಂಟು. ಇವೆರಡೂ ದಕ್ಷಿಣ ಅಮೆರಿಕಾದಲ್ಲಿ ಬೆಳೆಯುತ್ತವೆ. ಪೂರ್ವದಲ್ಲಿ ಅಲ್ಲಿನ ಜನರಿಗೆ ಇದೇ ಮುಖ್ಯ ಆಹಾರವಾಗಿತ್ತು. ಇದರಿಂದ ಅಲ್ಲಿನ ಜನರಿಗೆ ಬೇಕಾದ ಆಹಾರವೂ ತಲೆಗೆ ಹತ್ತೇರುವ ಪಾನವೂ ದೊರಿಯುತ್ತಿತ್ತು. ಇದು ಈಗ ನಮ್ಮ ದೇಶದ ಕೆಲವು ಕಡೆಗಳಲ್ಲಿದೆ. ಇತರ ಬೆಳೆಗಳು ಕೆಟ್ಟುಹೋದಾಗ ಇದರ ವ್ಯವಸಾಯದಿಂದ ಬಡ ರೈತರಿಗೂ ಅವರಲ್ಲಿರುವ ದನಗಳಿಗೂ ಒಳ್ಳೆಯ ಆಹಾರವು ಒದಗುತ್ತದೆ. ಅಕ್ಕಿ, ರಾಗಿ ಮೊದಲಾದ ಧಾನ್ಯಗಳ ಬೆಳೆಯು ಏರಿದಾಗ ಈ ಗಿಡದಿಂದ ತುಂಬಾ ಪ್ರಯೋಜನವಿದೆ. ಇದನ್ನು ಎಲ್ಲಿಯಾದರೂ, ಯಾವಾಗ ಬೇಕಾದರೂ ಬೆಳೆಯಬಹುದು. ಇದರ ವ್ಯವಸಾಯ ಬಹು ಸುಲಭ. ಇದರಲ್ಲಿ ಚೆನ್ನಾಗಿ ಬೆಳೆದಿರುವ ದಂಟುಗಳನ್ನು ಕಿತ್ತು, ತುಂಡುಮಾಡಿ ನಾಲ್ಕು ನಾಲ್ಕು ಅಡಿಗಳ ದೂರದಲ್ಲಿ ಭೂಮಿಯ ಮೇಲೆ ಎರಡು ಅಂಗುಲ ಕಾಣುವಂತೆ ನಾಟಬೇಕು. ಮರಳೂ ಜೇಡಿಮಣ್ಣೂ ಮಿಶ್ರವಾದ ನೆಲವು ಸಿಕ್ಕಿದರಂತೂ ಮತ್ತಷ್ಟು ಉತ್ತಮ. ಕೇವಲ ಬಡವರೂ ಇದನ್ನು ತಮ್ಮ ಹಿತ್ತಲಿನಲ್ಲಿ ಬೆಳೆಯಿಸಬಹುದು. ಇದಕ್ಕೆ ಬೂದಿಯನ್ನು ಗೊಬ್ಬರವಾಗಿ ಹಾಕಬಹುದು. ನಾಟಿದ ಒಂದೆರಡು ವಾರಗಳೊಳಗಾಗಿ ತುಂಡುಗಳು ಬೆಳೆದುಬಿಡುತ್ತವೆ. ಕಳೆಗಳನ್ನು ಚೆನ್ನಾಗಿ ಕೀಳಬೇಕು. ಆಳವಾಗಿ ಗುದ್ದಲಿಗಳನ್ನು ಹಾಕಕೂಡದು. ಒಂದು ಎಕರೆ ಜಮೀನಿಗೆ ಕಣಗಲ (ಕಾಡುಗೆಣಸು) ಗಿಡವನ್ನು ಹಾಕಿದರೆ ೪೫೦ ಮಣ ಗಡ್ಡೆಯೂ, ೨೪೦ ಮಣ ಹಸುರು ಮೇವೂ, ಮುಂದಿನ ವರುಷ ನಾಟುವುದಕ್ಕೆ ಕಡ್ಡಿಗಳನ್ನು ಇಟ್ಟುಕೊಂಡರೂ, ಸುಮಾರು ೨೦೦ ಮಣ ಒಲೆಗೆ ಹಾಕುವ ಕಡ್ಡಿ ಸವಿದೆಯೂ ಸಿಕ್ಕುತ್ತದೆ. ಹಸುರು ಮೇವು, ಸವಿದೆ ಇವುಗಳು ಸೇರದೆಯೇ ಬರಿಯ ಗಡ್ಡೆಯಿಂದಲೇ ಉತ್ತರ ಹಿಂದುಸ್ಥಾನದಲ್ಲಿ ೫೦೦ ರೂಪಾಯಿಗಳು ಉತ್ಪತ್ತಿಯಾಗುವವು. ಹಸಿಯ ಗಡ್ಡೆಯಲ್ಲಿ ಅಪಾಯಕರವಾದ "ಹೈಡ್ರೋಸಯಾನಿಕ್ ಆಸಿಡ್" ಎಂಬ ಒಂದು ಬಗೆ ಅಮ್ಲವು (ವಿಷದ ಹುಳಿಯು) ಇರುವುದರಿಂದ, ಗಡ್ಡೆಗಳನ್ನು ಬೇಯಿಸಿ ತಿನ್ನಬೇಕು. ಕಾಲಾಡೆಯ ಗಡ್ಡೆಯನ್ನು ಕಾಡಿಯ ಮಜ್ಜಿಗೆಗೆ ಹಾಕಿ ಕುಡಿದರೆ ಸೊಗಸಾಗಿರುವುದು. ಇದು ಆಗವಾಗಿರುವುದರಿಂದ [illegible] ಬಡವರಿಗೆ ಬಹು ಮೆಚ್ಚುವ ಆಹಾರವಾಗುವುದು.

ಪತ್ರವ್ಯವಹಾರ.

ಅಯ್ಯಾ ಪತ್ರಕರ್ತರೇ,

ಕಳೆದ ತಾ [illegible]ನೇಯ ತಮ್ಮ ಪತ್ರದಲ್ಲಿ ಮಕ್ಕಳ ವಿದ್ಯಾಭಿವೃದ್ಧಿಗೆ ಉಪಯುಕ್ತವಾದ ಕೆಲವು ಅಗತ್ಯವುಳ್ಳ ವಿಷಯಗಳನ್ನು ಸೂಚಿಸಿತ್ತಷ್ಟೆ ಅದೇ ವಿಷಯಕ್ಕೆ ಅಗತ್ಯವಾದ ಇನ್ನೂ ಕೆಲವು ಸೂಚನೆಗಳಿಗೆ ತಮ್ಮ ಪತ್ರದಲ್ಲಿ ಎಡೆಕೊಡುವಿರಾಗಿ ನಂಬುತ್ತೇನೆ

ಪರವೂರುಗಳಿಂದ ತಮ್ಮ ವಿದ್ಯಾಭ್ಯಾಸದ ಸಲುವಾಗಿ ಹೆತ್ತವರನ್ನಗಲಿ ಬಂದ ತಮ್ಮ ಉದ್ದೇಶ ನಿರ್ವಾಹಕ್ಕಾಗಿ ನಿರುಪಾಯವಾಗಿ ಹೋಟೆಲುಗಳಲ್ಲಿದ್ದು ಅಲ್ಲಿ ಅವರ ವಿಷಯವಾದ ಅಗತ್ಯವುಳ್ಳ ಜಾಗ್ರತೆಗಳನ್ನು ತೆಗೆದುಕೊಳ್ಳುವವರಿಲ್ಲದ ಕಾರಣ ನಿರಂಕುಶರಾಗಿ ನಾನಾ ಪರಿಪಾಟಲುಗಳನ್ನನುಭವಿಸಲು ಪಾತ್ರರಾಗುವ ಮಕ್ಕಳ ಈ ತೊಂದರೆಗಳನ್ನು ಪರಿಹರಿಸಿ ವೃದ್ಧಿಗೆ ತರಲು ಅಗತ್ಯವಾಗುವುದಾ [illegible] ಕೆಲವು ಏರ್ಪಾಡುಗಳನ್ನು ಅಂಥಾ ಮಕ್ಕಳ ಹೆತ್ತವರು ಸೂಚಿಸಿದಲ್ಲಿ ಅವರ ಮಕ್ಕಳಿಗೆ ಬಹು ಉಪಯುಕ್ತವಾಗುವದಲ್ಲದೆ ಜನೋಪಕಾರವಾಗುವದೆಂದು ಪ್ರಕಟಿಸಿತ್ತಷ್ಟೆ ಅಂಥಾ ವಿಶೇಷ ಸೂಚನೆಗಳೇನೂ ತಮ್ಮ [illegible] ತಾ [illegible]ನೇಯ ಪತ್ರದಲ್ಲಿ ಸೂಚಿಸಿದ್ದು ಕಂಡುಬರಲಿಲ್ಲ, [illegible] ವಿಷಯಗಳನ್ನು ಸೂಚಿಸುವ ಅಗತ್ಯವುಳ್ಳ ಹೆತ್ತವರು ನಮ್ಮ ಪ್ರಿಯ ವಾಚಕರಲ್ಲಿ [illegible] ವಿರಳವಾಗಿರುವ ಕಾರಣದಿಂದಲೋ ಅವರು [illegible]ಗಳೇನೂ ಬೇಕಿಲ್ಲವೆನ್ನುವ ಅಭಿಪ್ರಾಯದಿಂದ ಲಕ್ಷಿಸದಿರುವುದರಿಂದಲೋ ಏನೋ ತಿಳಿದುಬರುವದಿಲ್ಲ [illegible] ಹ್ಯಾಗಿದ್ದರೂ ಒಮ್ಮೆಂದೊಮ್ಮೆ ಯಾವದರೂ ಯಾರಿಗಾದರೂ ಅವುಗಳಿಂದ ಉಪಯೋಗ [illegible] ಬರುವ ಸಂಭವ [illegible] ಮೊದಲಿನ ಸೂಚನೆಗಳಿಗೆ ಇನ್ನೂ ಅಗತ್ಯವುಳ್ಳ ಹೆಚ್ಚಿನ ಸೂಚನೆಗಳ ಕೆಲವನ್ನು ಇಲ್ಲಿ ಸೇರಿಸಿ ಬರೆಯಲು ಉಪಕ್ರಮಿಸಿರುವೆನು [illegible] ನಿಷ್ಫಲವಾಗದೆ ಹೋಗಲಾರದೆಂದು ತಿಳಿಯುವೆನು

ಮಕ್ಕಳಿಗೆ ಈಗ ಇರುವ ಅನಾನುಕೂಲತೆಗಳೂ ಅವುಗಳ ಪರಿಹಾರಾರ್ಥವಾಗಿ ಅಗತ್ಯಮಾಡಲುಳ್ಳ ಕೆಲವು ಏರ್ಪಾಡುಗಳೂ—

ಹೆತ್ತವರನ್ನಗಲಿ [illegible] ತರುವ ಅವರ ಜಾಗ್ರತೆಯನ್ನು ನೋಡಲು ಯಾರೂ ಇಲ್ಲದಿರುವರು ಈ ಕಾರಣದಿಂದ ಅವರು ಸ್ವೇಚ್ಛಾವಿಹಾರಿಗಳಾಗಿ [illegible] ಗಳೊಡನೆ [illegible] ದ [illegible]ಗಳಾಗಿ ತಮ್ಮ ಅಭ್ಯಾಸವನ್ನು ಲಕ್ಷಿಸಿ ನಿಷ್ಪ್ರಯೋಜನಕರಾಗುವರು ಅಭ್ಯಾಸಕ್ಕೆ ತಕ್ಕಷ್ಟು [illegible] ಕೆಲವರು ಹೋಟೆಲಗಳಲ್ಲಿ ಅವರ ಇತರ ಕೆಲಸಗಳ ಜಾಗ್ರತೆಮಾಡುವವರಿಲ್ಲದೆ ತಾವು ತಾವೇ ಮಾಡಬೇಕಾಗುವ ಕಾರಣದಿಂದ ಅಭ್ಯಾಸಕ್ಕೆ ಉಪಯೋಗಿಸುವ ಅಮೂಲ್ಯ ಸಮಯವನ್ನು ಇತರ ಕಾರ್ಯಗಳಿಗಾಗಿ [illegible] ಮತ್ತು ಈ ದೆಸೆಯಿಂದ ಅಭ್ಯಾಸಕ್ಕೆ ತೊಡಕು ಉಂಟಾಗುವದು ಮಕ್ಕಳಿಗೆ ಹೆಚ್ಚಾಗಿ [illegible] ತಿಂಡಿತಿನಸುಗಳಲ್ಲಿ ಆಸಕ್ತಿ ಇರುವದು ಸಹಜ ಗುಣವಾದ್ದರಿಂದ ಹೋಟೆಲುಗಳಲ್ಲಿ ಅವರಿಗೆ [illegible] ಹೊಟ್ಟೆ [illegible] ಆಸೆಗಳನ್ನು ಪೂರೈಸಲು [illegible] ತಮ್ಮ [illegible] ಕುತೂಹಲ ಉಂಟಾಗಿ ಆ ಸಂಬಂಧ ವಿದ್ಯಾಭ್ಯಾಸಕ್ಕೆ [illegible] ತೋರಿ [illegible] ಆರೋಗ್ಯ ರಕ್ಷಣೆಗೆ ಅಗತ್ಯವುಳ್ಳ ತೈಲಾಭ್ಯಂಗ ಮೊದಲಾದ ಉಪಚಾರಗಳು ತಕ್ಕ ರೀತಿಯಿಂದ ನಡೆಯದಿರುವುದರಿಂದ ಆರೋಗ್ಯಕ್ಕೆ ತೊಂದರೆಯುಂಟಾಗುವದು ಆದ್ದರಿಂದ ಈ ವಿಷಯ ಈ ಕೆಳಗಿನ ಏರ್ಪಾಡುಗಳನ್ನು ಮಾಡುವದು ಅಗತ್ಯವಾಗಿದೆ

ಅಂಥಾ ಮಕ್ಕಳ ಹೆತ್ತವರು ಮಾಡಬೇಕಾದ ಅವರ ವಿಷಯದ ಜಾಗ್ರತೆಗಳನ್ನು ಆ ಮಕ್ಕಳು ಇರುವ ಹೋಟೆಲಿನ ಮೆನೇಜರನು ಮಾಡುವದು ಮತ್ತು ಅವರ ಅಭ್ಯಾಸದ ಕುರಿತು ಅಗತ್ಯವುಳ್ಳ ಜಾಗ್ರತೆಯನ್ನು ತೆಗೆದುಕೊಂಡು ಅವರು ದುಃಸಹವಾಸದೊಡನೆ ಬೆರೆಯದಂತೆ ಎಚ್ಚರವಿಡುವದು ಅವರ ಉಡಿಗೆತೊಡಿಗೆಗಳ [illegible]ವಂತೆ ಆಗಾಗ್ಯೆ ಆ ಕುರಿತು ಜಾಗ್ರತೆಯನ್ನು ಮಾಡುವದಲ್ಲದೆ ಅವರ ಅಭ್ಯಾಸಕ್ಕೆ ಅಗತ್ಯವುಳ್ಳ ಅವರ ದೀಪಗಳನ್ನು ಸ್ವಚ್ಛವಿಡುವ ಜಾಗ್ರತೆಮಾಡುವದು ಈ ಬಗ್ಗೆ ಪ್ರತ್ಯೇಕ ಜನವಿಟ್ಟು ಅನುಕೂಲಿಸುವದು ಅವರ ಆರೋಗ್ಯ ರಕ್ಷಣೆ ಬಗ್ಗೆ ವಾರಕ್ಕೊಮ್ಮೆ ತೈಲಾಭ್ಯಂಗ ಮಾಡಿಸುವ ಏರ್ಪಾಡು ಇಡುವದಲ್ಲದೆ ತಿಂಡಿತಿನಸುಗಳ ಹೆಚ್ಚಿನ ಆಶೆ ಹುಟ್ಟಿ ಅಭ್ಯಾಸದಲ್ಲಿ ಅಸಡ್ಡೆ ಉಂಟಾಗದಂತೆ ವಾರಕ್ಕೊಮ್ಮೆ ಯಾ ಎರಡು ವಾರಕ್ಕೊಮ್ಮೆ ಯಾದರೂ ತಿಂಡಿಗಳಿಂದ ಅವರ ಮನಸ್ಸನ್ನು ತೃಪ್ತಿಗೊಳಿಸುವದು ಇವೇ ಮತ್ತು ಇನ್ನೂ ಅವರಿಗೆ ಅನುಕೂಲವಾದ ಅಗತ್ಯ ಏರ್ಪಾಡುಗಳಿರುವ ಒಂದು ಯೋಗ್ಯ ಹೋಟೆಲು ಮುಖ್ಯವಾಗಿ ಇಂಥ ಮಕ್ಕಳಗೋಸ್ಕರವೇ ಸ್ಥಾಪಿಸುವದು ಅತಿ ಅಗತ್ಯ ಮತ್ತು ಅನೇಕರಿಗೆ ಬಹು ಉಪಯೋಗಕರವಾಗುವದು ಆದರೆ ಈ ಏರ್ಪಾಡುಗಳೊಡನೆ ಇಡುವ ಹೋಟೇಲಿನ ವೆಚ್ಚವು ಪ್ರಕೃತ ಇರುವ ಸಾಧಾರಣ ಹೋಟೇಲುಗಳ ಖರ್ಚಿಗಿಂತಲೂ ಜಾಸ್ತಿಯಾಗಬಹುದು ಆದುದರಿಂದ ಹಾಗೆ ಹೋಟೆಲುಗಳಲ್ಲಿದ್ದು ಅಭ್ಯಾಸಿಸತಕ್ಕ ಮಕ್ಕಳ ಹೆತ್ತವರು ತಮ್ಮ ಮಕ್ಕಳ ಸೌಕರ್ಯಕ್ಕಾಗಿ ಇದಕ್ಕೆ ತಕ್ಕ ಪ್ರೋತ್ಸಾಹಗೊಳಿಸಿದರೆ ಅಂಥವರ ಮಕ್ಕಳಿಗೆ ಮಾತ್ರವಲ್ಲದೆ ಇತರ ಅನೇಕರಿಗೆ ಉಪಯೋಗವಾಗುವದಾದ್ದರಿಂದ ನಮ್ಮ ಪ್ರಿಯ ವಾಚಕರಲ್ಲಿ ಈ ಅಭಿಪ್ರಾಯಕ್ಕೆ ಅನುಮೋದಿಸಲು ಅನುಕೂಲವುಳ್ಳ ಸದ್ಗೃಹಸ್ಥರು ಈ ಸೂಚನೆಗಳಿಗೆ ಗಮನ ಕೊಟ್ಟರೆ ಜನೋಪಕಾರವಾಗುವದಾಗಿ ಬರೆದಿತ್ತು. ಈ ಕ್ರಮಗಳಂತೆ ಏರ್ಪಡಿಸಲು ಆಲೋಚಿಸುವವರಿಗೆ ಅವರ ಸಹಾಯದಿಂದ ಆ ಕಾರ್ಯದಲ್ಲಿ ಮತ್ತಷ್ಟು ಉತ್ಸುಕತೆ ಉಂಟಾಗಿ ಅಂಥಾ ಹೋಟೆಲ ಯೋಗ್ಯರೀತಿಯಿಂದ ನಡೆಯಲು ಅನುಕೂಲವಾಗುವದಲ್ಲವೇ? ಈ ಕಾರ್ಯದಲ್ಲಿ ಮುಂದರಿಯುವವರ್ಯಾರು ಎಂಬ ವಿಷಯ ಮೇಲಣ ಸಂಗತಿಗಳಿಗೆ ಅನುಮೋದಿಸುವವರ ಅಭಿಪ್ರಾಯ ನೋಡಿ ನಂತರ ತಿಳಿಸಲಾಗುವದು.

ಸಾರಸ್ವತ ಹಿತೇಚ್ಛು.

~~~~~~~~

ಸ್ವಾಮಿ ಪತ್ರಾಧಿಪರೇ,

ತಮ್ಮ ಪತ್ರಿಕೆಯ ಹಿಂದಿನ ಸಂಚಿಕೆಗಳೊಂದರಲ್ಲಿ ಪಿಡೂರಿನಲ್ಲಿ ದನಕರು ಸಂತೆಯು ಕೆಲವು ದಿವಸಗಳ ಹಿಂದೆ ಕೂಡುವುದೆಂತ ತಿಳಿಸೋಣಾಗಿತ್ತು ಪಿಡೂರಿನಲ್ಲಿ ಈ ಸಂತೆಯು ಇಷ್ಟರಲ್ಲಿಯೇ ಕೂಡಿರಬೇಕಾದುದರಿಂದ ಸಂತೆಯ ವಿವರಗಳೆಲ್ಲವನ್ನು ನಿಮ್ಮ ಆ ಪ್ರಾಂತ್ಯದ ವಾಚಕರಲ್ಲಿ ಯಾರಾದರೂ ತಿಳಿಸಿದರೆ ಉಪಕಾರವಾಗುತ್ತಿತ್ತು [illegible]ನಕರುಗಳ ಸರಬರಾಯಿಯ ವಿಷಯವು ಈ ಜಿಲ್ಲೆಗೆ ಬಹಳ ಅಗತ್ಯವಾಗಿದೆ ಅವುಗಳ ಪಾಲನೆಯ ಬಗ್ಗೆ ವಿಶೇಷವಾದ ಏರ್ಪಾಡುಗಳನ್ನು ಮಾಡುವದು ಸಹ ಅಗತ್ಯವಾಗಿರುವುದು ಆದ್ದರಿಂದ ದಯಾಳುಗಳಾದ ಡಿಸ್ಟ್ರಿಕ್ಟ್ ಪ್ರೆಸಿಡೆಂಟರು ನಮ್ಮ ಜಿಲ್ಲೆಯಲ್ಲಿ ಪ್ರಾರಂಭಿಸಿರುವ ಸಂತೆಯ ಏರ್ಪಾಡನ್ನು ಜನರು ಲಕ್ಷ್ಯಕ್ಕೆ ತಂದುಕೊಳ್ಳುವಂತೆ ಅದರ ಪ್ರಸ್ತಾಪವನ್ನು ತಕ್ಕ ಕಾಲದಲ್ಲಿ ಪ್ರಕಟಿಸುವಂತೆ ಈ ಮೂಲಕ ಸೂಚಿಸುವರೆ ತಮ್ಮ ಅಪ್ಪಣೆಯನ್ನು ಬೇಡಿಕೊಳ್ಳುವೆನು

ಗ್ರಾಮನಿವಾಸಿ.

~~~~~~~~

ಅಯ್ಯಾ,

ನನ್ನ ಕೆಲವು ವಚನಗಳಿಗೆ ದಯಮಾಡಿ ಸ್ವಲ್ಪ ಸ್ಥಳ ಕೊಡಿರಿ ಸತ್ತುಹೋದವರ ಸ್ಮರಣೆಯನ್ನು ಜ್ಞಾಪಕದಲ್ಲಿಟ್ಟುಕೊಳ್ಳುವದು ಅಗತ್ಯವೋ ಎಂಬ ಪ್ರಶ್ನೆಯನ್ನು ಮಂಗಳೂರಿನವರಿಗೆ ವಿವರಿಸಿ ಹೇಳಿ ಅವರಿಂದ ಈ ಪ್ರಶ್ನೆಗೆ ಉತ್ತರವನ್ನು ಬರಮಾಡಿಕೊಳ್ಳುವದು ಅಗತ್ಯವಿಲ್ಲ ಯಾಕಂದರೆ ಇಲ್ಲಿಯವರು ಸ್ಮಾರಕಗಳನ್ನು ಏರ್ಪಡಿಸುವದರಲ್ಲಿ ವಿಶೇಷ ಕುತೂಹಲವುಳ್ಳವರಾಗಿರುವರು ನನ್ನ ಈ ಮಾತನ್ನು ರುಜುಪಡಿಸಬೇಕಾದರೆ ಮಂಗಳೂರಲ್ಲಿ ಆಯಾ ಜಾತಿಯವರಿಂದ ಸ್ಥಾಪಿಸಲ್ಪಟ್ಟ ಶಾಲೆಗಳು, ವಿದ್ಯಾರ್ಥಿ ಭವನಗಳು ಇತ್ಯಾದಿಗಳನ್ನು ಹೋಗಿ ನೋಡಿದರೆ ಸಾಕು ಆದರೆ ವಿವಿಧ ಜಾತಿಗಳವರು ತನ್ನ ಬಾಂಧವರು ಎಂತ ದೇಶವಾತ್ಸಲ್ಯದಿಂದ ಸರ್ವರಗೋಸ್ಕರ ತನ್ನ ಪ್ರಾಣವನ್ನು ಅರ್ಪಿಸಿರುವ ಮಹಾನುಭಾವರ ಸ್ಮರಣೆಯನ್ನು ಚಿರಕಾಲ ಇರಗೊಡಿಸುವ ಚಿತ್ರಪಟಕ್ಕಾಗಲಿ, ಇತರ ಏರ್ಪಾಡಿಗಾಗಲಿ ಇಲ್ಲಿಯ ಜಾತಿಗಳ ಪ್ರತ್ಯ ಪ್ರತ್ಯೇಕ ಸಂಸ್ಥೆಗಳಲ್ಲಿ ಈ ತನಕ ಎಡೆ ದೊರಕದೆ ಇದೆ ಇದರ ಕಾರಣವೇನು? ಜಾತಿಯ ಹೊರಗಿನ ಏರ್ಪಾಡಿನ ಆಲೋಚನೆಯು ಯಾರಲ್ಲಿಯಾದರೂ ಇಲ್ಲವೆಂತ ಹೇಳಬಹುದೋ? ಗೋಖಲೆಯವರು ಇತ್ತಲಾಗೆ ಸ್ವರ್ಗಸ್ಥರಾದರು ಇಂಥವರ ಸ್ಮರಣೆಯು ಶಾಲಾ ವಿದ್ಯಾರ್ಥಿಗಳಲ್ಲಿರುವಂತೆ ಇವರ ಚಿತ್ರಪಟವನ್ನು ಯಾವ ಶಾಲೆಯಲ್ಲಿ ಅಥವಾ ಯಾವ ವಿದ್ಯಾರ್ಥಿ ಭವನಗಳಲ್ಲಿ ಇಡೋಣ ಇದಕ್ಕೆ ಗೋಖಲೆಯವರ ಜಾತಿಯನ್ನು ಪ್ರಥಮ ನಿಶ್ಚಯಿಸಿಕೊಳ್ಳುವುದು ಅಗತ್ಯವೋ? ಪುರಜನರೇ ನಮ್ಮ ಅಂತರ್ಯದ ಸ್ಥಿತಿಯೇನು? ವಿಚಾರಿಸಿಕೊಳ್ಳಿರಿ

ಜಾತಿ.

~~~~~~~~

ಸ್ವಾಮಿ,

ಇಲ್ಲಿಯ ಮುನ್ಸಿಪಾಲಿಟಿಯವರ ಪ್ಲೇಗು ಆಸ್ಪತ್ರೆಯು ಈಗಿನ ಪೆಂಟ್‌ಲೆಂಡ್ ಪೇಟೆಯ ಎದುರು ಇರುವುದೆಂತ ತಿಳಿದಿರುವರಷ್ಟೆ ಇಲ್ಲಿ ಇತ್ತಲಾಗೆ ಒಂದು ಅಡಚಣೆಯು ಎದ್ದಿತ್ತೆಂತ ಕೇಳಿದೆನು ಏನಂದರೆ ಪ್ಲೇಗಿನ ಆಸ್ಪತ್ರೆಯಲ್ಲಿ ಪ್ಲೇಗು ತಗಲಿದ ರೋಗಿಯು ಗುಣಹೊಂದುತ್ತ ಬರುತ್ತಿದ್ದಾಗ ಈ ರೋಗಿಯು ಇದ್ದ ಕಟ್ಟಡಕ್ಕೆ ಸಮೀಪದಲ್ಲಿರುವ ಮತ್ತೊಂದು ಕಟ್ಟಡದಲ್ಲಿ ಸಿಡುಬು ರೋಗಿಯೊಬ್ಬನನ್ನು ಚಿಕಿತ್ಸೆ ಬಗ್ಗೆ ತಂದಿದ್ದರಂತೆ ಸಿಡುಬು ರೋಗದ ಅಂಟುಗಾಳಿಯ ಮೂಲಕ ಪ್ರಸರಿಸುತ್ತದಾದ್ದರಿಂದ ಪ್ಲೇಗು ರೋಗದಿಂದ ಗುಣ ಹೊಂದುತ್ತಿರುವವನಿಗೆ ಸಿಡುಬು ಹಿಡಿಯುವ ಸಂಭವವು ಈ ರೀತಿ ಕಾಣಬಂತು ಆದರೆ ದೇವರ ದಯೆಯಿಂದ ಈತನಿಗೆ ಸಿಡುಬು ಹತ್ತಲಿಲ್ಲ. ಇಂಥಾ ಸಂದರ್ಭಗಳಲ್ಲಿ ಪ್ಲೇಗು ರೋಗದ ಮತ್ತು ಇತರ ಅಂಟು ರೋಗದ ಚಿಕಿತ್ಸೆಯ ಕೇಂಪಗಳನ್ನು ಒಂದೇ ವಠಾರದಲ್ಲಿ ಇರಗೊಡಿಸುವದು ಉಚಿತವೋ ಎಂತ ಮುನ್ಸಿಪಲ್ ಕೌನ್ಸಿಲಿನವರೂ ಸ್ಥಳೀಕ ಅಧಿಕಾರಿಗಳೂ ಆಲೋಚಿಸುವದು ಅಗತ್ಯವಲ್ಲವೇ? ಅದಲ್ಲದೆ ಪೆಂಟ್‌ಲೆಂಡ್ ಪೇಟೆಯ ಎದುರು ಸ್ವಲ್ಪ ದೂರದಲ್ಲಿಯೇ ಈ ಅಂಟುರೋಗಗಳ ಕೇಂಪುಗಳನ್ನೂ ಇನ್ನೂ ಇರಗೊಡಿಸುವದು ಉಚಿತವೋ? ಪೆಂಟ್‌ಲೆಂಡ್ ಪೇಟೆಯನ್ನು ವ್ಯವಸ್ಥೆಗೊಳಿಸುವ ಈ ಸಮಯದಲ್ಲಿಯೇ ಈ ವಿಷಯವನ್ನು ಆಲೋಚಿಸಬೇಕಾಗಿ ಪ್ರಾರ್ಥಿಸುವೆ.

ಹಿತಚಿಂತಕ.
~~~~~~~~

ಯುದ್ಧ ಸಮಾಚಾರ.

ತಾ. ೨೪ನೇ ಮಾರ್ಚಿ.

ಬ್ರಿಟಿಷರ "ಕೊಂಕರ್ಡ್" ಎಂಬ ವ್ಯಾಪಾರ ಹಡಗವನ್ನು ಜರ್ಮನಿಯ ಜಲಾಂತರ್ಗಾಮಿ ನಾವೆಯು ಮುಣುಗಿಸಿರುವದು. ಇದರ ೨೭ ನಾವಿಕರು ಡೋವರಿನಲ್ಲಿ ಇಳಿದಿರುವರು.

ಶತ್ರುಗಳು ರೈವಿಸ್ಗೆ ಗುಂಡು ಹಾರಿಸುತ್ತಲಿದ್ದಾರೆ. ಶತ್ರುಗಳ ವಾಯುನಾವೆಯು ರೈಮ್ಸ್ ಪಟ್ಟಣದ ಮೇಲೆ ಹಾಕಿದ ಬೊಂಬು ೩ ಪಟ್ಟಣಿಗರಿಗೆ ತಗಲಿರುವದು. ಶಂಪೇನಿನಲ್ಲಿ ಮಿತ್ರರು ಮುಂದರಿಸಿರುವರು. ಬಗಟೆಲ್ಲೆ ಎಂಬಲ್ಲಿ ಜರ್ಮನರು ಕಳಕೊಂಡ ಸ್ಥಳಗಳನ್ನು ಪುನಃ ಪಡೆದುಕೊಳ್ಳುವ ಉದ್ದೇಶದಿಂದ ಕಠಿಣವಾಗಿ ಫ್ರೆಂಚ ಸೇನಿಕರ ಮೇಲೆ ಹಲ್ಲಾ ಮಾಡಿದರು. ಆದರೆ ಪೂರ್ಣವಾಗಿ ಹಿಂದೆ ಅಟ್ಟಲ್ಪಟ್ಟರು. ಲೊಬ್ಬೆಸೆಲ್ಲೆ ಎಂಬಲ್ಲಿ ಜರ್ಮನರು ಸೋಲಿಸಲ್ಪಟ್ಟಿದ್ದರಿಂದ ಅವರು ಉರಿಗೊಂಡು ಒಂದು ಸಿವಿಲ್ ಆಸ್ಪತ್ರೆಯ ಮೇಲೆ ಗುಂಡು ಹಾರಿಸಿದರು. ಇದರಿಂದ ೫ ಮುದುಕರೂ ಆಸ್ಪತ್ರೆಯ ಶ್ರೇಷ್ಠ ದಾದಿಯೂ ಹತರಾದರು.

ನಿನ್ನೆಯ ದಿನ ಸಾಯಂಕಾಲ ಜರ್ಮನರ ಜೆಫಲಿನ್ ವಾಯುನಾವೆಯು ವಿಲ್ಲರ್‌ಕೊಟ್ಟೆರೆಟ್ಸ್ ಎಂಬಲ್ಲಿಗೆ ಬೊಂಬು ಹಾಕಿತು. ಈ ಗ್ರಾಮವು ಪಾರಿಸಿಗೆ ಹತ್ತಿರ ಗ್ರಾಮವಾದುದರಿಂದ ರಾತ್ರಿ ೯ ಗಂಟೆಗೆ ಪಾರಿಸ್ ನಗರದ ಎಲ್ಲಾ ದೀಪಗಳನ್ನು ನೊಂದಿಸಿದರು. ಪೋಲಿಸಿನವರು ತಡೆ ಮಾಡಿದರೂ ಪಟ್ಟಣದ ಜನರು ದಾರಿಗಳಿಗೆ ಬಂದು ಜೆಫಲಿನ್ ನಾವೆಯ ಬರೋಣವನ್ನು ಕಾಯುತ್ತಿದ್ದರು. ಆದರೆ ಜೆಫಲಿನ್ ನಾವೆಯು ಬಾರದ್ದರಿಂದ ರಾತ್ರಿ ೧೦॥ ಗಂಟೆಗೆ ಪುನಃ ಪಟ್ಟಣದ ದೀಪಗಳನ್ನು ಉರಿಸಿದರು. ಅನಂತರ ೧೧ ಗಂಟೆಗೆ ಒಂದು ಜೆಫಲಿನ್ ನಾವೆಯು ಬ್ಯಸಿನಲ್ಲಿಯೂ ಮತ್ತೊಂದು ಶಂಪೇನಿನಲ್ಲಿಯೂ ಕಾಣಿಸಿಕೊಂಡಿತು ಎಂಬ ವಾರ್ತೆ ಬಂದದರಿಂದ ಪುನಃ ಪಟ್ಟಣದ ದೀಪಗಳು ಆರಿಸಲಾದವು. ಬೆಲ್ಜಿಯನರಿಗೆ ಸಹಾಯಾರ್ಥವಾಗಿ ಆಹಾರ ಜಿನಸುಗಳನ್ನು ಕೊಂಡು ಹೋಗುತ್ತಿದ್ದ ಒಂದು ಹಡಗವನ್ನು ಉತ್ತರ ಕಡಲಲ್ಲಿ ಜರ್ಮನರ ವಾಯುನಾವೆಗಳು ಮುಣುಗಿಸಲು ಪ್ರಯತ್ನಿಸಿದವು. ಹಡಗವು ಡಿಸ್ಟ್ರೋಯರ್ ನಾವೆಗಳ ಸಹಾಯದಿಂದ ತಪ್ಪಿಸಿ ಕೊಂಡಿತು.

ಕರ್‌ಪಥೇನಿಯದ ಬಾರ್ಟ್‌ಫೆಲ್ಡ್ ಎಂಬಲ್ಲಿಗೆ ಹೋಗುವ ದಾರಿಯಲ್ಲಿ ರುಶ್ಯನರಿಗೂ ಆಸ್ಟ್ರಿಯನರಿಗೂ ಕಠಿಣ ಕಾಳಗ ನಡೆಯುತ್ತಿದೆ. ರುಶ್ಯನರು ರೈಫಲ್ ಕೋವಿಗಳ ಮತ್ತು ಸನೀನುಗಳ ಸಹಾಯದಿಂದ ತಮ್ಮ ದಾರಿಯಲ್ಲಿ ಮುಂದೊತ್ತಿರುವರು. ರುಶ್ಯನರು ಸೋಮವಾರ ದಿನ ೨೫೦೦ ಸೇನಿಕರನ್ನು ಸೆರೆ ಹಿಡಿದಿರುವರು. ಇತರ ಕಡೆಯಲ್ಲಿ ಹಲ್ಲಾ ಮಾಡಿದ ಜರ್ಮನರು ಹಿಮ್ಮೆಟ್ಟಿರುವರು.

ಇಟಲಿ ಮತ್ತು ಆಸ್ಟ್ರಿಯನರೊಳಗೆ ವ್ಯಾಪಾರ ವ್ಯವಹಾರವು ನಿಂತಿರುವದು ಎಂತ ಪಾರಿಸಿನ ಒಂದು ಪತ್ರಿಕೆಗೆ ತಂತೀ ಬಂದಿರುವದು. ಆಸ್ಟ್ರಿಯನರೊಡನೆ ವ್ಯಾಪಾರ ಮಾಡುವ ಪ್ರತಿ ಒಂದು ಹಡಗವು ಹಿಡಿಯಲ್ಪಡುವದೆಂತ ಇಟಲಿ ನೌಕಾಧಿಪತಿಯು ಪ್ರಕಟಿಸಿರುವನೆಂತ ವಾರ್ತೆ ಇದೆ. ಆಸ್ಟ್ರಿಯನರು ಟ್ರಿಸ್ಟೆಯಲ್ಲಿ ತಮ್ಮ ದೊಡ್ಡ ಸೇನೆಯನ್ನು ಕೂಡಿಸುತ್ತಲಿರುವರು. ಇಟಲಿಯನರು ಕಳದ ೬ ತಿಂಗಳಲ್ಲಿ ೨೦ ಹೊಸ ಜಲಂತರ್ಗಾಮಿ ನಾವೆಗಳನ್ನು ತಮ್ಮ ನೌಕಾವಳಿಗೆ ಕೂಡಿಸಿದರು. ೨೩೦ ವಿಮಾನಗಾಮಿಗಳಿಗೆ ಸರ್ಟಿಫಿಕೇಟು ಕೊಟ್ಟರು. ಇಟಲಿ ಸೇನೆಗೆ ಈಗ ೩೦೦ ವಾಯು ನಾವೆಗಳಿರುವವು.

ತಾ. ೨೫ನೇ ಮಾರ್ಚಿ.

ಡರ್ಡನೆಲ್ಸಿನಲ್ಲಿ ಕಠಿಣ ಬಿರುಗಾಳಿಯು ಎದ್ದದರಿಂದ ಕೋಟೆಗಳ ಮೇಲೆ ಹಲ್ಲಾ ಮಾಡುವ ಕೆಲಸವು ಸದ್ಯಾ ನಿಲ್ಲಿಸಲ್ಪಟ್ಟಿರುವದು. ಬ್ರಿಟಿಷ ವಾಯುನಾವಿಕರು ಎಂಟವರ್ಪ ಪಟ್ಟಣದ ಮೇಲೆ ಹಲ್ಲಾ ಮಾಡಿ ಜರ್ಮನರು ಜಲಂತರ್ಗಾಮಿ ನಾವೆಗಳನ್ನು ಸಿದ್ಧ ಗೊಳಿಸುತ್ತಿರುವ ಸ್ಥಳಕ್ಕೆ ಬೊಂಬುಗಳನ್ನು ಹಾಕಿರುವರು. ಇದರಿಂದ ಜಲಂತರ್ಗಾಮಿ ನಾವೆಗಳ ನೆಲೆಗಳಲ್ಲಿ ವಿಶೇಷ ಹಾನಿಯಾಗಿರುವದು. ವಾಯು ನಾವಿಕರು ಹಲ್ಲಾ ಮಾಡುವಾಗ ಜರ್ಮನರು ತಮ್ಮ ನೆಲೆಯಿಂದ ವಿಶೇಷವಾಗಿ ಗುಂಡು ಹಾರಿಸಿದರೂ ವಾಯುನಾವಿಕರು [illegible] ತಪ್ಪಿಸಿಕೊಂಡು ಹಿಂದಿರುಗಿದರು.

ಪ್ರಿಜೆಮ್ಸಿಸ್ [illegible] ಇಲ್ಲದೆ ರುಶ್ಯನರಿಗೆ [illegible] ಮುಂದರಿಯುತ್ತಿದ್ದ ರುಶ್ಯನರ ಸೇನಾಪಾಳೆಯವು ರುಶ್ಯನರ ಸರಹದ್ದಿಗೆನೇ ಹಿಂದೆರಳಿರುವದು. ಕರ್‌ಪಥೇನಿಯದಲ್ಲಿರುವ ರುಶ್ಯನರು ಡ್ಯೂಕ್ಲ ಕಣಿವೆಯ ಮಾರ್ಗವಾಗಿ ಮುಂದೆ ಸಾಗುತ್ತಿದ್ದಾರೆ. ರುಶ್ಯನರು ಇಲ್ಲಿ ೩೫೦೦ ಸೇನಿಕರನ್ನು ಸೆರೆ ಹಿಡಿದಿರುವರು.

ಪ್ರಿಜೆಮ್ಸಿಸ್ಲಿನಲ್ಲಿ ರುಶ್ಯನರಿಗೆ ೯ ಜನರಲರು, ೯೩ ಮೇಲ್ತರಗತಿಯ ಆಫೀಸರರು, ೨೫೦೦ ಆಫೀಸರರು, ೧೧೭,೦೦೦ ಸೇನಿಕರ ಬಲವಿತ್ತು. ಈ ಪೈಕಿ ೪೦,೦೦೦ ಹತರಾದರು. ಈ ನೊದಲೇ ಸೆರೆ ಬಿದ್ದ ಮತ್ತು ಘಾಯ ಒಡದೆ ಸೇನಿಕರ ಸಂಖ್ಯೆ ಒಟ್ಟಿಗೆ ೨೦,೦೦೦.

ರುಶ್ಯನರಿಗೆ ಪ್ರಿಜೆಮ್ಸಿಸ್ಲಿನಲ್ಲಿ ಆದ ಜಯದಿಂದ ರುಶ್ಯನರ ೧೫೦,೦೦೦ ಸೇನಿಕರಿಗೆ ಇತರ ರಣರಂಗಕ್ಕೆ ಹೋಗುವ ಹಾಗಾಗುವದು. ಬರ್ಲಿನ್ ಮತ್ತು ವಿಯಾನ್ನದಿಂದ ಗೆಲೀಸಿಯ ರಣರಂಗಕ್ಕೆ ಕೂಡಲೇ ಹೆಚ್ಚಿನ ಬೆಂಬಲ ಸೇನೆಯು ಬಾರದಿದ್ದರೆ ಆಸ್ಟ್ರಿಯನರು ಪಲಾಯನ ಸೂಕ್ತವನ್ನು ಕೈಕೊಳ್ಳಬೇಕಾಗುವದೆಂತ ಇಟಲಿಯವರು ಹೇಳುತ್ತಿರುವರು.

ನಿನ್ನೆಯ ದಿನ ಬೆಳಗ್ಗೆ ತುರ್ಕರು ಪುನಃ ಈಜಿಪ್ತಿಗೆ ಮುಂದರಿಯುವ ಪ್ರಯತ್ನ ಮಾಡಿದರು. ಶತ್ರುಗಳು ಸೂವೆಜ್ ಕಾಲುವೆಯ ಎದುರ್ಗಡೆಯಲ್ಲಿರುವ ಎಲ್ಕ್ಯುಬ್ರಿ ಎಂಬಲ್ಲಿರುವದನ್ನು ಬ್ರಿಟಿಷರ ಬೀಟಿನ ಸೇನಿಕರು ಕಂಡು, ಶತ್ರುಗಳ ಮೇಲೆ ಬಿದ್ದರು. ಸುಮಾರು ೧೦೦೦ ಕಾಲಾಳು ಮತ್ತು ಕೋವುಸೇನಿಕರೂ ಸ್ವಲ್ಪ ಮಂದಿ ಅಶ್ವಸೇನಿಕರೂ ಅಲ್ಲಿದ್ದರೆಂತ ವಾಯು ನಾವಿಕರು ಕಂಡುಕೊಂಡರು. ಎಲ್ಕ್ಯುಬ್ರಿಯಲ್ಲಿದ್ದ ಬ್ರಿಟಿಷ ಫಿರಂಗಿಗಳಿಂದ ಶತ್ರುಗಳ ಮೇಲೆ ಗುಂಡು ಹಾರಿಸೋಣಾಯಿತು. ಶತ್ರುಗಳು ೮ ಮೈಲು ದೂರ ಓಡಿಹೋದರು. ಈ ದಿನ ಬೆಳಗ್ಗೆ ಜನರಲ್ ಸರ್ ಜಿ. ಯಂಗ್‌ಹಸ್‌ಬೇಂಡರವರು ಶತ್ರುಗಳ ಸೇನೆಯ ಮೇಲೆ ಹಲ್ಲಾ ಮಾಡಿದರು. ಶತ್ರುಗಳು ಓಡುತ್ತಿದ್ದಾರೆ. ಈ ಸೇನೆಯು ಬಯರ್ಸ್‌ಬಾದಿಂದ ೧೨ ದಿವಸಗಳ ದಾರಿ ನಡೆದು ಬಂದದ್ದಾಗಿದೆಂತಲೂ ಜರ್ಮನರ ಆಫೀಸರರು ಈ ಸೇನೆಯಲ್ಲಿರುವರೆಂತಲೂ ಸೆರೆಬಿದ್ದವರು ಹೇಳಿದ ಮಾತಿನಿಂದ ತಿಳಿದುಬರುತ್ತದೆ.

ಸಿಂಗಾಪುರದಲ್ಲಿ ನಡೆದ ಸೇನಿಕರ ದಂಗೆಯು ಪೂರ್ಣವಾಗಿ ನಿಲ್ಲಿಸಲ್ಪಟ್ಟಿರುವದು. ದಂಗೆಗಾರರಲ್ಲಿ ೧೧ ಮಂದಿಯ ವಿನಹ ಉಳಿದವರೆಲ್ಲರೂ ಕೈದು ಮಾಡಲ್ಪಟ್ಟಿರುವರು. ದಂಗೆಗಾರರಲ್ಲಿ ೫ ಮಂದಿಯನ್ನು ಯುದ್ಧ ಕಾನೂನಿಗನುಸಾರವಾಗಿ ಗುಂಡು ಹಾಕಿ ಕೊಂದರು. ಉಳಿದವರಿಗೆ ಬಂದಿಖಾನೆ ಶಿಕ್ಷೆ ವಿಧಿಸೋಣಾಗಿರುವದು. ದಂಗೆಗಾರರಲ್ಲಿ ೧೭ ಜರ್ಮನ ಬಂದಿಗಳು ತಪ್ಪಿಸಿಕೊಂಡರು. ಈ ಪೈಕಿ ೬ ಮಂದಿ ಪುನಃ ಕೈದು ಮಾಡಲ್ಪಟ್ಟರು ಎಂತ ಪ್ರಕಟವಾಗಿದೆ.

ತಾ. ೨೬ನೇ ಮಾರ್ಚಿ.

ಅರ್‍ರ್ಯಾಸಿನ ಉತ್ತರದಲ್ಲಿ ಹಲ್ಲಾ ಮಾಡಿದ ಜರ್ಮನರು ಹಿಮ್ಮೆಟ್ಟಿರುವರು. ಲುನೆವಿಲ್ಲೆಯಲ್ಲಿ ಶತ್ರುಗಳಿಗೆ ವಾರ್ತೆಯನ್ನು ಕೊಡುತ್ತಿದ್ದ ಒಬ್ಬ ಗೂಢಾಚಾರ ಹೆಂಗಸು ಹಿಡಿಯಲ್ಪಟ್ಟಳು. ಇವಳನ್ನು ಫ್ರೆಂಚರು ಯುದ್ಧಕಾನೂನಿಗನುಸಾರವಾಗಿ ಗುಂಡುಹೊಡೆದು ಕೊಂದರು.

ನೇರು ಮತ್ತು ಒರ್ಜಿಟ್ಸ್ ನದಿಗಳ ದಡಗಳಲ್ಲಿ ಕಠಿಣ ಕಾಳಗವು ನಡೆಯುತ್ತಿದೆ. ಇಲ್ಲಿ ಜರ್ಮನರ ಬಲವಾದ ಬೆಂಬಲ ಸೇನೆಯು ಬಂದು ಕೂಡಿರುವದು. ರುಶ್ಯನರು ಮೆಲ್ಲನೆ ಕಂದಕ ಇತ್ಯಾದಿಗಳನ್ನು ಸ್ವಾಧೀನ ಮಾಡಿಕೊಂಡು ಮುಂದರಿಯುತ್ತಲಿರುವರು.

ರುಶ್ಯನರು ಕರ್‌ಪಥೇನಿಯದಲ್ಲಿ ಮುಂದರಿದು ಬಾರ್ಟ್‌ಫೆಲ್ಡ್ ಮತ್ತು ಅಸ್ಟಿಕಿನ ಕೋಟೆಕೊತ್ತಲುಗಳನ್ನು ಸ್ವಾಧೀನ ಮಾಡಿಕೊಂಡು ೪೦೦೦ ಸೇನಿಕರನ್ನು ಸೆರೆಹಿಡಿದಿರುವರು.

ಉತ್ತರ ಪೋಲೇಂಡಿನಲ್ಲಿ ಭಯಂಕರ ಕಾಳಗವು ನಡೆದಿರುವದು. ಜರ್ಮನರು ಏಳಾವರ್ತಿ ರುಶ್ಯನರ ಮೇಲೆ ಹಲ್ಲಾ ಮಾಡಿದರು. ಜರ್ಮನರ ಎರಡು ಸೇನಾಂಗಗಳು ನಿರ್ನಾಮವಾದವು. ಒಂದು ಸೇನಾಂಗವು ಅಟ್ಟಲ್ಪಟ್ಟಿರುವದು. ಗೆಲೀಸಿಯದಲ್ಲಿ ರುಶ್ಯನರ ಕಾಲಾಳು ಸೇನೆಯು ಸನೀನು ಕಾಳಗ ಮಾಡಿ ಜರ್ಮನ ಸೇನೆಯನ್ನು ಹಡಬಡಿದಿರುವದು. ಜರ್ಮನರ ೬ ಸ್ಕ್ವೇಡ್ರನ್ ಯುದ್ಧ ನಾವೆಗಳು ೨೮ ಡಿಸ್ಟ್ರೋಯರ್ ನಾವೆಗಳು ಕೋರ್ಲೇಂಡಿನ [illegible] ಹಾರಿಸಿರುವವು.

ದಕ್ಷಿಣ ಪಶ್ಚಿಮ ಆಫ್ರೀಕದ ಪ್ರಸ್ತಾಪದಲ್ಲಿ ಜರ್ಮನರಿಗೆ ೧೨೦ ಫೀಲ್ಡ್-ಗನ್ಸ್ ಗಳೆಂಬ ಫಿರಂಗಿಗಳೂ ೧೦,೦೦೦ ತರಬೇತಾದ ಸೇನಿಕರೂ ಇದ್ದರು. ಅಮೇರಿಕದಿಂದ ೧೫,೦೦೦ ರಿಸರ್ವಿಸ್ಟರು ಬರಲಿಕ್ಕಿದ್ದರು. ಇವರು ದಂಗೆಗಾರರ ಸಹಾಯದಿಂದ ಬ್ರಿಟಿಷ ಆಫ್ರೀಕವನ್ನು ಸ್ವಾಧೀನ ಮಾಡಿಕೊಳ್ಳಲು ಯತ್ನಿಸಲಿಕ್ಕಿದ್ದರು. ಆದರೆ ಜನರಲ್ ಬೋಥರವರ ಸಾಹಸದಿಂದ ಇವರ ಬರೋಣಕ್ಕೆ ತಡೆಕಟ್ಟಲ್ಪಟ್ಟಿರುವದು. ಇಲ್ಲಿರುವ ಜರ್ಮನರಿಗೆ ದನ ಕುರಿಗಳು ಇವೆ. ಆದರೆ ದವಸಧಾನ್ಯಗಳು ಇಲ್ಲ. ಧಾನ್ಯಗಳು ಬರಲು ತಡೆಕಟ್ಟಿರುವದರಿಂದ ಇಲ್ಲಿಯ ಜರ್ಮನ ಸೇನಿಕರನ್ನು ಸೋಲಿಸುವದು ಸುಲಭಸಾಧ್ಯವಾದರೂ ಬಹಳ ದೊಡ್ಡದಾದ ಈ ಪ್ರದೇಶವನ್ನು ಪೂರಾ ವಶಮಾಡಿಕೊಳ್ಳಲು ಕೆಲವು ಕಾಲ ಹೋಗುವದೆಂತ ಪ್ರಕಟವಾಗಿದೆ.

ತಾ. ೨೭ನೇ ಮಾರ್ಚಿ.

ಡರ್ಡನೆಲ್ಸನ್ನು ಬಿಟ್ಟು ಹೋದ ಪಟ್ಟಣ ನಿವಾಸಿಕರು ಹೇಳುವ ಮಾತಿನಿಂದ, ಮಿತ್ರರ ನಾವೆಗಳು ಹೊಡೆದ ಗುಂಡುಗಳಿಂದ ಡರ್ಡನೆಲ್ಸಿನ ಕೋಟೆಗಳಿಗೆ ಹೆಚ್ಚಿನ ನಷ್ಟವಾಗಿರುವದೆಂತ ತಿಳಿದು ಬರುತ್ತದೆ.

ಜರ್ಮನರ U ೨೯ ಜಲಂತರ್ಗಾಮಿ ನಾವೆಯು ಮಿತ್ರರಿಂದ ಮುಣುಗಿಸಲ್ಪಟ್ಟಿರುವದೆಂಬ ವಾರ್ತೆ ಬಂದಿರುವದು.

ಡಚ್ಚರ "ಮೆಡಿಯ" ಎಂಬ ವ್ಯಾಪಾರ ಹಡಗವು ಜರ್ಮನರ ಜಲಂತರ್ಗಾಮಿ ನಾವೆಯಿಂದ ಮುಣುಗಿಸಲ್ಪಟ್ಟಿರುವದು.

ಜೋರ್ಜ ಸಾರ್ವಭೌಮರವರು ಹಾರ್‌ವಿಚಿಗೆ ಸಂದರ್ಶಿಸಿ ಅಲ್ಲಿರುವ ಯುದ್ಧ ಹಡಗಗಳನ್ನು ನೋಡಿ ಸಂತೃಪ್ತರಾಗಿ ಬಂದಿರುವರು.

ರುಶ್ಯನರು ನಿಮೇನಿನ ಮಧ್ಯ ಮತ್ತು ಪಶ್ಚಿಮದಲ್ಲಿ ಮುಂದರಿಯುತ್ತಲಿರುವರು. ಲಫ್‌ಕೊಫ್ ಕಣಿವೆ ದಾರಿಯಲ್ಲಿ ರುಶ್ಯನರಿಗೆ ದೊಡ್ಡ ಜಯವಾಗಿರುವದು. ರುಶ್ಯನರು ಇಲ್ಲಿ ೫೭೦೦ ಸೈನಿಕರನ್ನೂ ಕೆಲವು ಡಜನ್ ಆಯುಧಗಳನ್ನೂ ಸೆರೆಹಿಡಿದಿರುವರು.

ಕ್ರಾಕೋ ಕೋಟೆಯನ್ನು ರುಶ್ಯನರು ಬೇಗನೇ ಮುತ್ತಲಿಕ್ಕಿದ್ದಾರೆಂತ ವಾರ್ತೆ ಇದೆ. ಅಲ್ಲಿಯ ನಿವಾಸಿಗಳಿಗೆ ಪಟ್ಟಣವನ್ನು ಬಿಟ್ಟು ಹೋಗಲು ಆಸ್ಟ್ರಿಯನರು ಹುಕುಂ ಮಾಡಿರುವರು.

ರುಶ್ಯನರು ಪ್ರಿಜೆಮ್ಸಿಸ್ಲ್ ಕೋಟೆಯನ್ನು ವಶಮಾಡಿಕೊಂಡು ಒಳಗೆ ಪ್ರವೇಶಿಸಿದಾಗ ಒಂದು ಕಾಫಿ ಹೋಟೇಲಲ್ಲದೆ ಇತರ ಎಲ್ಲಾ ಅಂಗಡಿಗಳು ಮುಚ್ಚಲ್ಪಟ್ಟಿದ್ದವು. ರುಶ್ಯನರು ಬಹಳ ಆಹಾರವನ್ನು ತಂದಿದ್ದರು. ರುಶ್ಯನರು ೩೦ ಸಾವಿರ ಸೆರೆಯವರನ್ನು ಲೆಂಬರ್ಗಿಗೆ ಕಳುಹಿಸಿಕೊಟ್ಟರು.

ತಾ. ೨೮ನೇ ಮಾರ್ಚಿ.

ಡರ್ಡನೆಲ್ಸಿನಲ್ಲಿ ಬಿರುಗಾಳಿಯು ನಿಂತಿರುವದರಿಂದ ಸಿಡಿಮದ್ದಿನ ಗಣಿಗಳನ್ನು ಹೆಕ್ಕಿ ತೆಗೆಯುವ ಕೆಲಸವು ಪುನಃ ಪ್ರಾರಂಭವಾಗಿದೆ. ಡರ್ಡನೆಲ್ಸ್ ಪಟ್ಟಣದ ವರೆಗೆ ಜಲಸಂಧಿನ ಸಿಡಿಮದ್ದುಗಳು ತೆಗೆಯೋಣಾಗಿರುವದು. ಕನ್‌ಸ್ಟಂತಿನೋಪಲಿನಿಂದ ಸ್ಮಿರ್ನಕ್ಕೆ ಜರ್ಮನ್ ಆಫೀಸರರೂ ದೊಡ್ಡ ಫಿರಂಗಿಗಳೂ ಕಳುಹಿಸಲ್ಪಟ್ಟಿರುವರು ಎಂಬ ವಾರ್ತೆ ಇದೆ. ಬ್ರಿಟಿಷರ ಕ್ವೀನ್ ಎಲೀಜಬೇಥ್ ನಾವೆಯು ಸರ್ರೋಕೊಲ್ಲಿಯಿಂದ ಡರ್ಡನೆಲ್ಸಿಗೆ ಗುಂಡು ಹಾರಿಸುತ್ತಿದೆಂತ ಅಥೆನ್ಸಿನಲ್ಲಿ ಪ್ರಕಟವಾಗಿದೆ. ಎರಡು ಲಿವರ್‌ಪೂಲ್ ಹಡಗಗಳು ಜರ್ಮನರ ಜಲಂತರ್ಗಾಮಿನಾವೆಗಳಿಂದ ಮುಣುಗಿಸಲ್ಪಟ್ಟವು ಎಂಬ ವಾರ್ತೆ ಬಂದದೆ. ಜರ್ಮನರ ಜಲಂತರ್ಗಾಮಿನಾವೆಗಳು ಬ್ರಿಟಿಷ ಹಡಗುಗಳನ್ನು ಮುಣುಗಿಸಿದವು. ಬ್ರಿಟಿಷರ ಬಂದರಗಳಿಗೆ ೧೪೫೦ ಹಡಗುಗಳು ಹೋಗಿ ಬರುತ್ತಿವೆಂತ ಪ್ರಕಟವಾಗಿದೆ.

ಜರ್ಮನರ ಜಲಂತರ್ಗಾಮಿನಾವೆಯನ್ನು "[illegible]" ಎಂಬ ಬ್ರಿಟಿಷರ ನಾವೆಯು ಮುಣುಗಿಸಿರುವದು.

ಬಾಲ್ಟಿಕ್ ಸಮುದ್ರದಲ್ಲಿ ರುಶ್ಯನರ ಜಲಂತರ್ಗಾಮಿನಾವೆಗಳು ಜರ್ಮನರ ಕಬ್ಬಿಣ ತುಂಬಿದ್ದ ೩ ಹಡಗಗಳನ್ನು ಮುಣುಗಿಸಿರುವವು ಎಂಬ ವಾರ್ತೆ ಇದೆ.

ನ್ಯೂಪೊರ್ಟ್ ಪ್ರಾಂತ್ಯದಲ್ಲಿ ತೋಪು ಕಾಳಗವು ನಡೆಯುತ್ತಿದೆ. ಮಿತ್ರರು ಕೆಲವು ಕಡೆಗಳಲ್ಲಿ ಮುಂದೊತ್ತಿರುವರು. ಅಲ್ಸೇಸಿನಲ್ಲಿ ಜರ್ಮನರು ಕಂದಕಗಳ ಮೇಲೆ ಉರಿಯುವ [illegible] ವನ್ನು ಹಸಾಡಿ [illegible] ಮಾಡ ನೋಡಿದರು. ಆದರೆ ಪ್ರಯೋಜನವಾಗಲಿಲ್ಲ. ಫ್ರೆಂಚರಿಗೆ [illegible] [illegible]

ಫ್ರೆಂಚರ ೬ ವಾಯುನಾವೆಗಳು ಮೆತ್ಸನ ಮೇಲೆ ಬೊಂಬುಗಳನ್ನು ಬಿಸಾಡಿ ಸುರಕ್ಷಿತವಾಗಿ ಹಿಂತಿರುಗಿ ಬಂದಿರುವದು. ಇದರಿಂದ ೩ ಸೇನಿಕರು ಸತ್ತರೆಂತ ಜರ್ಮನರು ಪ್ರಕಟಿಸಿರುವರು.

ಬ್ರಿಟಿಷ ವಾಯುನಾವಿಕರು ಬಿಸಾಡಿದ ಬೊಂಬಿನಿಂದ ಹೊಬೊಕೆನಿನಲ್ಲಿ ಜರ್ಮನರ ಜಲಾಂತರ್ಗಾಮಿ ನಾವೆಗಳ ಹಂದರಗಳಲ್ಲಿ ಕೆಲಸ ಮಾಡುತ್ತಿದ್ದವರಲ್ಲಿ ೩೦೦ ಮಂದಿ ಘಾಯ ಒಡೆದಿರುವರು ಎಂತ ಅಮ್‌ಸ್ಟರ್‌ಡಮಿನಲ್ಲಿ ಪ್ರಕಟವಾಗಿದೆ. ಜರ್ಮನರ ಜಲಾಂತರ್ಗಾಮಿನಾವೆಗಳಲ್ಲಿ ಎರಡು ಹಾಳಾಗಿರುವವು.

ಪೂರ್ವ ರಣರಂಗದಲ್ಲಿ ಕಠಿಣ ಕಾಳಗ ನಡೆಯುತ್ತಿದೆ ಪ್ರಿಜೆಮ್ಸ್‌ಲ್ ಕೋಟೆಯು ನಾಶವಾದಾಗ ಆಸ್ಟ್ರಿಯನರ [illegible] ಸೇನಿಕರು ರಷ್ಯನರ ಕೈಬಿದ್ದಿರುವರು.

ಘಾಯ ಒಡೆದ ೩೦೦ ಭಾರತೀಯ ಸೇನಿಕರು 'ಲೊಯಲ್ಟಿ' ಆಸ್ಪತ್ರೆ ಹಡಗದಲ್ಲಿ ಮುಂಬಾಯಿಗೆ ಬಂದಿರುವರು.

ಅಮೇರಿಕಾದಲ್ಲಿ ಹಿಂದೂ ದೇವಾಲಯು ಧ್ವಂಸ

ಅಮೇರಿಕಾಕ್ಕೆ ಸೇರಿದ ಕ್ಯಾಲಿಫೋರ್ನಿಯಾದ ಸಾನ್ ಫ್ರಾನ್ಸಿಸ್ಕೋ ಪಟ್ಟಣದಲ್ಲಿ ಶ್ರೀ ರಾಮಕೃಷ್ಣ ಸಂಘದವರು ಒಂದು ದೊಡ್ಡ ಕೃಷ್ಣದೇವಾಲಯವನ್ನು ಕಟ್ಟಿಸಿದ್ದಾರೆ ಸ್ವಾಮಿ ವಿವೇಕಾನಂದರಿಂದೀಚೆಗೆ ಅಲ್ಲಿ ಹಿಂದೂ ತತ್ವಗಳು ಪ್ರಚಾರದಲ್ಲಿ ಬರುತ್ತಿರುವ ಸಂಗತಿಯು ಸುಪ್ರಸಿದ್ಧವಷ್ಟೆ. ಈಗ ಅಲ್ಲಿ ಸ್ವಾಮಿ ತ್ರಿಗುಣಾತೀತರವರು ವೇದಾಂತ ವಿದ್ಯಾಪ್ರಸಾರವನ್ನು ಮಾಡುತ್ತ ವಾಸವಾಗಿದ್ದರು. ಆ ದೇವಾಲಯದಲ್ಲಿ ಈ ಸ್ವಾಮಿಗಳು [illegible] ಮಾಡುವ ಉಪನ್ಯಾಸಗಳನ್ನು ಕೇಳುವುದಕ್ಕೆ ಅನೇಕ ಮಂದಿ ಅಮೇರಿಕದ ಸ್ತ್ರೀಪುರುಷರು ಅಲ್ಲಿಗೆ ಬರುತ್ತಿರುವುದುಂಟು. ಕಳೆದ ಜನವರಿ ತಾ ೧೮ರ ಹಗಲು ಸ್ವಾಮಿಗಳು ಯಥಾಪ್ರಕಾರ ಉಪನ್ಯಾಸ ಮಾಡುತ್ತಿರುವಾಗ್ಗೆ ಒಬ್ಬ ಮನುಷ್ಯನು ಬುದ್ಧಿಭ್ರಮೆಗೊಂಡವನಂತೆ ಉಪನ್ಯಾಸ ವೇದಿಕೆಯ ಎಡಗಡೆ ಬಾಗಿಲಿನಿಂದ ಬಂದು, ತನ್ನ ಟೊಪ್ಪಿಯನ್ನು ತೆಗೆದು ಮೂರಾವೃತ್ತಿ ವೇದಿಕೆಯ ಮೇಲೆ ಒಡೆದನು ಮೂರನೆಯಾವೃತ್ತಿ ಏಟು ಬಿದ್ದಾಗ್ಗೆ ಮಹಾ ಭಯಂಕರವಾದ ಶಬ್ದದೊಡನೆ ಬೆಂಕಿ ಉರಿದೆದ್ದಿತು ದೇವಾಲಯದಲ್ಲೆಲ್ಲಾ ಜ್ವಾಲೆಯು ಕಾಣಿಸಿಕೊಂಡಿತು. ಕುಳಿತಿದ್ದವರೆಲ್ಲಾ ದಿಗ್ಭ್ರಾಂತರಾಗಿ ಹಾಹಾಕಾರ ಮಾಡುತ್ತ ಹೊರಕ್ಕೆ ಓಡಲು ಆತುರಿಸಿದರು ಅದಕ್ಕೆ ಎರಡು ಪಕ್ಕದಲ್ಲಿ ಎರಡು ಬಾಗಿಲಿದ್ದುವು. ಜನರೆಲ್ಲಾ ಒಂದೇ ಕಡೆ ನುಗ್ಗಿದರು ಅನೇಕರಿಗೆ ಮೈ ಕೈ ಗಾಯಗಳಾದುವು ಬೆಂಕಿಯನ್ನಾರಿಸುವ ಯಂತ್ರಸಾಧನಗಳನ್ನು ತಂದು ಆರಿಸಿದ ಬಳಿಕ ಒಳಕ್ಕೆ ಹೋಗಿ ನೋಡುವಲ್ಲಿ ಸ್ವಾಮಿಗಳು ಆ ಸಿಡಿತದಿಂದ ಎಷ್ಟೋ ದೂರ ಬಿಸುಡಲ್ಪಟ್ಟು ಸ್ಮೃತಿತಪ್ಪಿದ್ದರು ಎರಡು ಕಾಲುಗಳೂ ಸೀಳಿಹೋಗಿದ್ದುವು ಆ ಸಿಡಿಮದ್ದನ್ನು ಹಾಕಿದ ಲೂಯಿಸ್‌ವೇವ್ರಾ ಎಂಬಾತನ ಹೆಣವು ಅರೆಬೆಂದು, ಏಟು ತಿಂದು ನರಳುತ್ತಿದ್ದವರ ಮಧ್ಯದಲ್ಲಿ ಬಿದ್ದಿದ್ದಿತು ನಾಲ್ಕು ಮಂದಿ ಹೆಂಗಸರಿಗೂ ಇಬ್ಬರು ಗಂಡಸರಿಗೂ ಏಟು ಬಲವಾಗಿ ತಗುಲಿದ್ದಿತು. ದೇವಾಲಯದ ಗೋಡೆಗಳ ಹೊರತು ಮರದ ಸಾಮಗ್ರಿಗಳೆಲ್ಲಾ ಸುಟ್ಟುಹೋಗಿದ್ದುವು. ಹೊಗೆಯು ದೇವಾಲಯದಲ್ಲಿ ತುಂಬಾ ದಟ್ಟವಾಗಿ ವ್ಯಾಪಿಸಿದ್ದಿತು. ಒಳಗಿದ್ದ ಪುಸ್ತಕಗಳ ಬೀರುಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಬಿದ್ದುಹೋಗಿದ್ದುವು. ಶ್ರೀ ಸ್ವಾಮಿ ವಿವೇಕಾನಂದರವರ ದೊಡ್ಡ ಛಾಯಾಚಿತ್ರಪಟವು ಪೂರ್ಣವಾಗಿ [illegible] ಗಡಿಯಾರಗಳೂ [illegible] ಹೋಗಿದ್ದುವು. [illegible] ಗಳೂ ಪೋಲೀಸರುಗಳೂ ಕೂಡಲೇ ಬಂದು ಒಳಗಿದ್ದವರನ್ನು ವೈದ್ಯಶಾಲೆಗೆ ಸಾಗಿಸಿದರು ಸ್ವಾಮಿಗಳಿಗೆ ನೋವು ಅಪರಿಮಿತವಾಗಿದ್ದುದರಿಂದ ನಡೆದ ವೃತ್ತಾಂತವನ್ನೆಲ್ಲಾ ಸಾಂಗವಾಗಿ ಹೇಳಲಾರದೆ ಹೋದರು. ಕಡೆಗೆ ವೈದ್ಯಶಾಲೆಯಲ್ಲಿ ಅವರು ಆ ದಿನವೇ ನಿರ್ಯಾಣಹೊಂದಿದರು ಈ ಸ್ವಾಮಿಗಳು ಬಂಗಾಳದವರು ಇವರು ಇಲ್ಲಿದ್ದಾಗಲೇ ಬಹುವಿಧ ವೇದಾಂತ ವಿದ್ಯೆಯಲ್ಲೂ [illegible] ಪಾಂಡಿತ್ಯವನ್ನು ಸಂಪಾದಿಸಿದ್ದರು ಪ್ರಚಾರ ಸೇವಾ ಕಾರ್ಯದಲ್ಲಿ ಅವರಿಗಿದ್ದ ಅಮಿತಾಸಕ್ತಿಯನ್ನು ಕಂಡು ಜನರೆಲ್ಲಾ ಅವರನ್ನು ಬಹಳವಾಗಿ ಗೌರವಿಸುತ್ತಿದ್ದರು ಇವರು "ಉದ್ಬೋಧ" ಎಂಬ ವಿಜ್ಞಾನ ಸಂಬಂಧವಾದ ಪತ್ರಿಕೆಯೊಂದನ್ನು ಸ್ಥಾಪಿಸಿದ್ದರು. ಸ್ವಾಮಿ ವಿವೇಕಾನಂದರವರ ಹಿಂದೂಮತ ಗ್ರಂಥಗಳನ್ನು ವಂಗಭಾಷೆಯಲ್ಲಿ ಪ್ರಕಟಪಡಿಸಿದವರು ಇವರೇ. ಇವರು ಅಮೇರಿಕಾದಲ್ಲಿ ವೇದಾಂತ ವ್ಯಾಸಂಗಕ್ಕಾಗಿ [illegible] ಶ್ರಮಪಡುತ್ತಿದ್ದರು ಆ ದೇಶದಲ್ಲಿ ಒಂದು ತೆರದ ವಿಪ್ಲವಕಾರರು ಯಾವಾಗಲೂ ಹೀಗೆ ದೇವಾಲಯಗಳಲ್ಲೂ ಸಭಾಸ್ಥಳಗಳಲ್ಲೂ ಬ್ಯಾಂಕುಗಳಲ್ಲೂ ಶ್ರೀಮಂತರ ಮನೆಗಳ ಮೇಲೂ ನ್ಯಾಯಾಲಯಗಳಲ್ಲೂ ಸಿಡಿಮದ್ದುಗಳನ್ನು ಹಾಕುವುದು ಸಾಮಾನ್ಯ ಪದ್ಧತಿಯಾಗಿದೆ ಎಂದು ಗೊತ್ತಾಗುತ್ತದೆ. ವೇವ್ರಾ ಎಂಬಾತನು ಕೂಡ [illegible] ಗುಂಪಿಗೆ ಸೇರಿದವನಾಗಿದ್ದ ಮತ್ತು ಈ ಅನ್ಯಾಯದ ಘಟನೆಯನ್ನು ಮಾಡಿದನೆಂದು ಪ್ರಕಟವಾಗಿದೆ. ಪೋಲೀಸರು ಆ [illegible] ಸಂಘದ ನಿರ್ಮೂಲನಕ್ಕೆ ತೊಡಗಿದ್ದಾರೆ.

ಉತ್ತರ ಹಿಂದೂಸ್ಥಾನ.

ಮಹಮ್ಮದೀಯರ ಪಕ್ಷ ಸಹಿತ ಬರ್ಮಾದಿಂದ ಹಿಂದೂಸ್ಥಾನಕ್ಕೆ ಹಿಂತಿರುಗಿರುವರು.

ಭೋಪಾಲಿನ ಬೇಗಮ ರವರು ಭಾರತೀಯ ಸೇನಿಕರಿಗೆ ಬೇಕಾದ ಉಡುಗೆಗಳನ್ನು ಒದಗಿಸಿಕೊಡುವ ಫಂಡಿಗೆ [illegible] ೨೫೦೦೦ ರೂಪಾಯಿ ದಾನಮಾಡಿರುವರು.

ತಾ ೨೧ ಮತ್ತು ೨೨ರಲ್ಲಿ ಲಾಹೋರ ಡಿಸ್ಟ್ರಿಕ್ಟಿನ ಜಮಾಲಶಾಹ ಎಂಬ ದೊಡ್ಡ ಸಾಹುಕಾರನ ಮನೆಗೆ ಆಯುಧ ಪಾಣಿಗಳಾದ ೫೦-೬೦ ದಕಾಯಿತರು ನುಗ್ಗಿ ಸುಮಾರು ಒಂದು ಲಕ್ಷ ರೂಪಾಯಿ ಕ್ರಯ ಬಾಳುವ ಒಡವೆಗಳನ್ನು ಕೊಂಡು ಹೋಗಿರುವರು. ದಕಾಯಿತರು ಈ ಸಾಹುಕಾರನ ಲೆಕ್ಕ ಪುಸ್ತಕಗಳನ್ನು ಬಾವಿಗೆ ಬಿಸಾಡಿರುವರು.

ವೈಸರಾಯ ಹಾರ್ಡಿಂಜ ಪ್ರಭುಗಳವರ ಆಡಳಿತೆಯ ಅವಧಿಯನ್ನು ಕನಿಷ್ಠಪಕ್ಷಕ್ಕೆ ಯುದ್ಧವು ಮುಗಿಯುವವರೆಗಾದರೂ ಹೆಚ್ಚಿಸಬೇಕೆಂಬದಾಗಿ ಜೋರ್ಜ ಸಾರ್ವಭೌಮರವರಿಗೆ ಮನವಿ ಮಾಡಿಕೊಳ್ಳುವ ಬಗ್ಗೆ ಡಿಲ್ಲಿಯಲ್ಲಿ ಪ್ರಜಾಮುಂದಾಳುಗಳ ಸಭೆಯು ಇದೇ ಕಳೆದ ತಾ ೨೩ ರಲ್ಲಿ ಕೂಡಿ ಬಂದಿರುವದು.

ಅಫಘಾನರವರು ತಾ ೨೭ ರಲ್ಲು ಸೀಮೆಗೆ ಹೊರಟು ಹೋಗಿರುವರು.

ಬಂಗಾಳದ ನೌಪಾರಾ ಗ್ರಾಮದಲ್ಲಿ ಕೆಲವು ದಕಾಯಿತರು ಒಂದು ಮನೆಯ ಬಾಗಿಲನ್ನು ಒಡೆದು ಬಲತ್ಕಾರದಿಂದ ಒಳನುಗ್ಗಿ ಮನೆಯ ಗಂಡಸರನ್ನು ಕಟ್ಟಿಹಾಕಿ ಸುಲಿಗೆ ಮಾಡಲಿಕ್ಕಿರುವಾಗ ನೆರೆಹೊರೆಯವರು ಸಹಾಯಕ್ಕೆ ಬಂದುದರಿಂದ ದಕಾಯಿತರಿಗೂ ನೆರೆಹೊರೆಯವರಿಗೂ ಕಠಿಣ ಕಾಳಗ ನಡೆದು ಉಭಯತರಲ್ಲಿಯೂ ಕೆಲವರು ಘಾಯ ಒಡೆದರು. ದಕಾಯಿತರು ಘಾಯಪೊಡೆದ ತಮ್ಮ ಜತೆಗಾರರನ್ನೂ ಸುಲಿಗೆ ಮಾಡಿದ ಒಡವೆಗಳನ್ನೂ ಬಿಟ್ಟು ಓಡಿಹೋದರು.

ಬಾರಿಸಾಲಿನ ಅವ್ವಾಲಿ ಪೂರಾಲಿ ಎಂಬುವರ ಮನೆಗೆ ಆಯುಧ ಪಾಣಿಗಳಾದ ೪೦ ದಕಾಯಿತರು ನುಗ್ಗಿ ಅವರ ಖಜಾನೆ ಪೆಟ್ಟಿಗೆಯನ್ನು ಒಡೆದು ೨೫೦೦೦ ರೂಪಾಯಿ ಸುಲಿಗೆ ಮಾಡಿರುವರು.

ಯೂರೋಪ್ ಖಂಡದಲ್ಲೆಲ್ಲಾ ಅಲ್ಲೋಲಕಲ್ಲೋಲ ಮಾಡಿ ರಕ್ತಪ್ರವಾಹವನ್ನೇ ಹೊರಳಿಸುತ್ತ ಜಗತ್ಪ್ರಳಯ ಸ್ವರೂಪವಾಗಿ ಸಾಕ್ಷಾತ್ ಕಾಲಭೈರವನಂತೆ ಕೇಳಿರುವ ಭೀಕರ ಯುದ್ಧದ ನಾಯಕರನ್ನೂ ಆಯಾ ದೇಶದ ರಾಜಾಧಿರಾಜರನ್ನೂ ಚಕ್ರವರ್ತಿಗಳನ್ನೂ ಪ್ರತ್ಯಕ್ಷದಿಂದ ನೋಡಿದಂತೆ ತೋರಿಸುವ ಸುಂದರವಾದ ಚಿತ್ರಗಳು ಥಳಥಳಿಸುವ ಬೆಣ್ಣೆ ಕಾಗದದಲ್ಲಿ ಎರಡು ಬಣ್ಣಗಳಿಂದ ಮುದ್ದಾಗಿ ಮುದ್ರಿಸಿ ಕ್ರಯಕ್ಕೆ ಸಿದ್ಧವಾಗಿವೆ ತ್ವರೆಮಾಡಿರಿ, ಸ್ವಲ್ಪವೇ ಪ್ರತಿಗಳಿವೆ, ತ್ವರೆಮಾಡಿರಿ.

ಬಾಲ ಸುಟ್ಟ ಕೋತಿಯಂತೆ ಅತ್ತಿತ್ತ ತಿರುಗುತ್ತ ವ್ಯಾಪಾರದ ಹಡಗುಗಳನ್ನೂ ಯುದ್ಧದ ಹಡಗುಗಳನ್ನೂ ಹತಮಾಡಿ ಕಡೇಗೆ ತಾನೂ ಉರಿದು ಸಮುದ್ರದಡಿಗೆ ಏಪಾತವಾದ ಎಮ್‌ಡನ್ನನ್ನು ನೋಡಿರುವಿರಾ, ಅದರ ನಾಯಕನನ್ನು ಬಲ್ಲಿರಾ, ಅದು ಮದರಾಸನ್ನು ಮುತ್ತಿ ಮಾಡಿದ ಅನಾಹುತಗಳನ್ನು ನೋಡಿರುವಿರಾ, ಕಡೆಗೆ ಅದಕ್ಕೆ ಗತಿ ಕಾಣಿಸಿದ ಸಿಡ್ನಿ ಎಂಬ ಹಡಗನ್ನು ಕಂಡಿರುವಿರಾ, ಅದರ ನಾಯಕ ಶಿಖಾಮಣಿಯನ್ನು ನೋಡಿರುವಿರಾ, ಧೀರಾದಿವೀರನೆಂದೆನ್ನಿಸಿದ ಪ್ರತಾಪೋದ್ದೀಪಿತನಾದ ಪ್ರತಾಪ್‌ಸಿಂಗನನ್ನು ಕಂಡಿರುವಿರಾ.

ಪಂಚಪಾಂಡವರಂತಿರುವ ಇಂಗ್ಲಂಡ್, ರಷ್ಯಾ, ಫ್ರಾನ್ಸ್, ಬೆಲ್ಜಿಯಮ್, ಜಪಾನ್ ಚಕ್ರವರ್ತಿಗಳನ್ನೂ, ದುರ್ಯೋಧನ, ದುಶ್ಯಾಸನ, ದುಶ್ಶಳೆಗಳಂತೆ ಕಾಲಾಗ್ನಿಗೆ ತುತ್ತಾಗುವದಕ್ಕಿರುವ ಜರ್ಮನಿ, ಆಸ್ಟ್ರಿಯಾ, ತುರ್ಕಿ ಚಕ್ರವರ್ತಿಗಳನ್ನೂ ನೋಡಿರುವಿರಾ, ಆಯಾ ರಾಷ್ಟ್ರಗಳ ಸೇನಾನಾಯಕರನ್ನೂ ನೌಕಾನಾಯಕರನ್ನೂ ವಾಯುವಿಮಾನ ನಾಯಕರನ್ನೂ ನೋಡಿರುವಿರಾ, ಇಲ್ಲವಾದರೆ ನಮ್ಮಲ್ಲಿ ಕ್ರಯಕ್ಕೆ ಸಿದ್ಧವಾಗಿರುವ ಚಿತ್ರವನ್ನು ತರಿಸಿ ನೋಡಿ ಈ ಚಿತ್ರಗಳ ಸಹಾಯದಿಂದ ಯುದ್ಧ ಸಂಗತಿಗಳು ಮನಸ್ಸಿನಲ್ಲಿ ಬಲು ಸುಲಭವಾಗಿ ನಾಟುವವು. ಪಕ್ಷಿಯಂತೆ ಆಕಾಶದಲ್ಲಿ ಹಾರಾಡುತ್ತಿರುವ ವಾಯುವಿಮಾನವನ್ನೂ, ಮತ್ಸ್ಯಗಳಂತೆ ಸಮುದ್ರದಲ್ಲಿ ಅಲೆದಾಡುತ್ತಿರುವ ಯುದ್ಧದ ಹಡಗವನ್ನೂ ಜರ್ಮನರು ಹೊಸದಾಗಿ ರಚಿಸಿದ ಫಿರಂಗಿಯನ್ನೂ ಈ ಚಿತ್ರಗಳ ಸಹಾಯದಿಂದ ಚನ್ನಾಗಿ ನೋಡಬಹುದು. ಸಮಸ್ತರೂ ನೋಡಬೇಕಾದ ವಿಷಯ.

ಬೆಲೆ 1 ರೂಪಾಯಿ 4 ಆಣೆ ಮಾತ್ರ.

ಷರಾ. ಯುದ್ಧವಾರಂಭವಾದಮೇಲೆ ರಣರಂಗದಿಂದ ಈಚೆಗೆ ಹೊಸದಾಗಿ ಎತ್ತಿದ ಫೋಟೋಗಳನ್ನು ಸೀಮೆಯಿಂದ ತರಿಸಿ ಅಚ್ಚು ಮಾಡಿಸಿದ್ದೇವೆ. ಪ್ರತಿಯೊಂದು ಪಟವನ್ನೂ ನಲುಗದಂತೆ ಮರದ ಕಟ್ಟಿಗೆಯಲ್ಲಿ ಸುತ್ತಿ ಭದ್ರವಾಗಿ ಸೇರುವಂತೆ ರವಾನೆ ಕೊಡುತ್ತೇವೆ. ಈ ದಿನವೇ ಬರೆಯಿರಿ. ಅಂಚೆ ಹಾಸಲು ಫ್ರೀ.

ನಮಗೆ ಬರಿಯತಕ್ಕ ಆರ್ಡರುಗಳನ್ನು ಸ್ಪಷ್ಟಾಕ್ಷರಗಳಿಂದ ಬರಿಯತಕ್ಕದು ಮತ್ತು ವಿಳಾಸಗಳನ್ನು ವಿವರವಾಗಿ ಬರಿಯತಕ್ಕದ್ದು.

ವಿಳಾಸ:— ಮ್ಯಾನೇಜಿಂಗ್ ಪ್ರೊಪ್ರೈಟರ್ ಚಿತ್ರಕಲಾನಿಧಿ ಭವನ,

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	218,800—0—0
Paid up Capital	193,800—0—0
Deposits	441,934—0—11
Reserve Fund	33,500—0—0

Besides the uncalled capital of Rs. 25,000/- 25% of the net profits are added annually to the Reserve Fund. Rs. 21,685/ have been invested in Government Paper of the face value of Rs. 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/ and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½% per annum at the discretion of the managing committee

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges

Sealed Parcels for safe custody received on a moderate charge.

Canara Bank Ltd.,
Mangalore, 1st. April 1915.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು „	225,000—0—0
ಪ್ರತಿಜ್ಞಾತ ಮೂಲ ಧನವು „	218,800—0—0
ಆಗತ ಮೂಲ ಧನವು „	193,800—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	441,934—0—11
ರಕ್ಷಿತ ಧನವು	33,500—0—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯು ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಪಾಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು ಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಇತ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಮೊಹರು ಹಾಕಲ್ಪಟ್ಟ ತಪ್ಪಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿ ಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯುಗಳು ಅಡಗಿರುವುವು ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ಸನತ್ಸುಜಾತರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ, ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಪರಶುರಾಮಾದ್ಯವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ ನಿಮಿರಾಯನ ಶರೀರತ್ಯಾಗ, ಜನಕವಂಶಖ್ಯಾತಿಚರಿತ್ರೆ, ಕಳಸ್ವನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸ್ತಾನವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದ್ದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲ್ಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರಿಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯುಗಳು ಇನ್ನು ಅನೇಕ ವಿಷಯುಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡ ಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ಒಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—೩—೦.

ತಮ್ಮ ವಿಳಾಸ:— ಎಂ. ದೇಶಾಯಿ ಕಂಪೆನಿ,
ಕರ್ನಾಟಕ ಬುಕ್ ಡಿಪೋ ಬಳ್ಳಾರಿ

ಪೆರೊನ್ನೆಯಲ್ಲಿ ಶತ್ರುಗಳ ಹಲವು ಕಂದಕಗಳು ಸಿಡಿಮದ್ದಿನ ಮೂಲಕ ಹಾರಿಸಲ್ಪಟ್ಟವು. ಸೊಸ್ಸೊನ್ಸಿನ ಪೂರ್ವದಲ್ಲಿ ಜರ್ಮನರ ಒಂದು ವಾಯುನಾವೆಯು ಕೆಳದೊಬ್ಬಲ್ಪಟ್ಟಿರುವದು. ವೈಸರ್ ರಣ ರಂಗದಲ್ಲಿ ಕಠಿಣ ಕಾಳಗ ನಡೆಯುತ್ತಿದೆ. ಘಾಯ ಒಡೆದ ಬಹಳ ಮಂದಿ ಜರ್ಮನ್ ಸೇನಿಕರು ಒಸ್ಟೆಂಡ್, ಬ್ರುಗೆಸ್ ಮೊದಲಾದ ಸ್ಥಳಗಳಿಗೆ ತರಲ್ಪಟ್ಟಿರುವರು.

ರುಶ್ಯನರು ನಿಮೆನಿನ ಪಶ್ಚಿಮದಲ್ಲಿ ಜರ್ಮನರನ್ನು ಸೋಲಿಸಿರುವರು. ಕ್ರಸ್ನದ ಪ್ರಾಂತ್ಯದಲ್ಲಿ ಜರ್ಮನರನ್ನು ರುಶ್ಯನರು ಹಿಂದಟ್ಟುತ್ತಿದ್ದಾರೆ. ಕಾರ್ಪಥೇನಿಯದಲ್ಲಿ ರುಶ್ಯನರು ವಿಶೇಷ ಸಾಹಸ ಪ್ರಯತ್ನಗಳನ್ನು ತೋರಿಸಿ, ಆಸ್ಟ್ರಿಯನರ ಬಲವಾದ ಫಿರಂಗಿಗಳ ಏಟನ್ನೂ, ದಪ್ಪವಾಗಿ ಬಿದ್ದಿದ್ದ ಹಿಮರಾಶಿಯನ್ನೂ ಲಕ್ಷ್ಯಮಾಡದೆ ಆಸ್ಟ್ರಿಯನರನ್ನು ಸೋಲಿಸಿ ೫೭,೮೦೦ ಸೇನಿಕರನ್ನು ಸೆರೆ ಹಿಡಿದಿರುವರು. ಕೋಟೆ ಕೊತ್ತಲುಗಳ ಕಾವಲಿಯಲ್ಲಿದ್ದ ಆಸ್ಟ್ರಿಯ ಸೇನಿಕರು ರುಶ್ಯನರಿಗೆ ಶರಣಾಗತರಾಗಿರುವರು. ಒಟ್ಟಿಗೆ ಆಸ್ಟ್ರಿಯನರ ೧೫,೦೦೦ ಹತಶೇಷರು ಶರಣಾಗತರಾಗಿರುವರು

ನಿನ್ನೆಯ ದಿನ ರುಶ್ಯನರು ಕಾರ್ಪಥೇನಿಯದಲ್ಲಿ ೨೩೦೦ ಸೇನಿಕರನ್ನು ಸೆರೆ ಹಿಡಿದಿರುತ್ತಾರೆ.

ದಕ್ಷಿಣ ಆಫ್ರಿಕದಲ್ಲಿ ಜನರಲ್ ಬೋಥರವರ ಸೇನೆಯು ಆಸ್ ಎಂಬ ಜರ್ಮನರ ಮುಖ್ಯ ನೆಲೆಯನ್ನು ವಶಮಾಡಿಕೊಂಡಿರುವದು.

ಉತ್ತರ ಹಿಂದೂಸ್ಥಾನ.

ಬ್ರಿಟಿಷ್ ಇಂಡಿಯನ್ ಅಸೋಷಿಯೇಶನಿನ ವಾರ್ಷಿಕೋತ್ಸವವು ಕಲ್ಕತ್ತಾ ಪಟ್ಟಣದಲ್ಲಿ ಇದೇ ಕಳದ ತಾ. ೨೯ರಲ್ಲು ನೆರವೇರಿತು ಈ ಸಂದರ್ಭದಲ್ಲಿ ಸಭಾಧ್ಯಕ್ಷರಾಗಿದ್ದ ಬದ್ರ್ವಾನ್ ಮಹಾರಾಜರವರು ಕೊಟ್ಟ ಭಾಷಣವು ಅತ್ಯುಪಯುಕ್ತವಾಗಿದ್ದಿತು ಬಂಗಾಳದಲ್ಲಿ ಈಗ ವಿಶೇಷವಾಗಿ ನಡೆಯುತ್ತಿರುವ ಅರಾಜಕ ಪ್ರವೃತ್ತಿಯನ್ನು ಕುರಿತು ಮಹಾರಾಜರವರು ಹೇಳಿದ ಸೂಚನೆಗಳು ಅತ್ಯಂತ ಪ್ರಶಸ್ತವಾಗಿರುವದರಿಂದ ಇವನ್ನು ನಮ್ಮ ವಾಚಕರೂ ತಿಳಿದುಕೊಳ್ಳಬೇಕಾಗಿದೆ.

"ಬಂಗಾಳದಲ್ಲಿ ಈಗ ವಿಶೇಷವಾಗಿ ನಡೆಯುತ್ತಿರುವ ರಾಜಕೀಯವಾದ ಕೊಲೆ ಸುಲಿಗೆಗಳನ್ನೂ ಇತರ ಅಪರಾಧ ಕೃತ್ಯಗಳನ್ನೂ ನೋಡಿ ಕೆಲವರು ಭಯಪಡುತ್ತಿರುರುವರು. ನಾನು ಅದಕ್ಕೆ ಅಂಜುವದಿಲ್ಲವಾದರೂ ಅವು ಹೀಗೆ ನಡೆಯುತ್ತಿರುವುದಕ್ಕಾಗಿ ವಿಷಾದಿಸುತ್ತೇನೆ. ಇದರ ತಡೆಕಟ್ಟುವುದಕ್ಕಾಗಿ ಕ್ರೂರ ಶಾಸನಗಳು ಏರ್ಪಡುವಂತೆ ಆದದ್ದಕ್ಕಾಗಿ ನಾಚಿಕೆಗೊಳ್ಳುತ್ತೇನೆ. ಆದರೆ ಇಂಥಾ ಅಪರಾಧಗಳು ಮುಂದೆ ನಡೆಯದಂತೆ ಮಾಡುವದಕ್ಕಾಗಿ, ಉತ್ತಮವಾದ ಏರ್ಪಾಡುಗಳನ್ನು ಕುರಿತಾಗಿ ಆಲೋಚಿಸುವ ಸಮಯವು ನಮ್ಮ ಪ್ರಜಾಜನರಿಗೆ ಬಂದದೆ. ಪಾಠಶಾಲೆಗಳೂ, ಪ್ರೌಢ ವಿದ್ಯಾಲಯಗಳೂ ಇರುವ ಪಟ್ಟಣಗಳಿಗೆ ಹೋಗಿ ಅರಾಜಕ ಕೃತ್ಯಗಳಿಂದ ಭರತ ಖಂಡಕ್ಕೆ ಸ್ವರಾಜ್ಯವು ದೊರೆತು ಇದು ಇತರ ಆಂಗ್ಲ ಸ್ವಾಸ್ಥ್ಯಗಳಂತೆ ಗೌರವ ಪದವಿಯನ್ನು ಪಡೆದುಕೊಳ್ಳಲಾರದೆಂತಲೂ, ಈಗ ವಿದ್ಯಾರ್ಥಿಗಳಾಗಿರುವವರೇ ಮುಂದೆ ಪ್ರಜಾನಾಯಕರಾಗಿ ಈಗಿನವರ ಕೋರಿಕೆಯ ಫಲವನ್ನು ಅವರು ಅನುಭವಿಸುವರೆಂತಲೂ, ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಬೋಧಿಸಬೇಕು. ದೇಶಕ್ಕೆ ಸ್ವಾತಂತ್ರ್ಯವನ್ನೂ ವಿಮುಕ್ತಿಯನ್ನೂ ಉಂಟುಮಾಡಬೇಕೆಂಬ ದುರಭಿಪ್ರಾಯವನ್ನು ಯೌವನಸ್ಥರು ಬಿಟ್ಟುಬಿಡಬೇಕು. ರಾಜಕೀಯ ನಾಯಕರು ಗಮನಿಸಬೇಕಾದ ಮುಖ್ಯ ವಿಷಯ ಒಂದಿದೆ—ನಾವು ಎಷ್ಟು ವಿದ್ಯಾವಂತರಾದರೂ, ಎಷ್ಟು ನಾಗರೀಕರಾದರೂ ನಮ್ಮ ದೇಶದಲ್ಲಿ ಎಂದಿನ ವರೆಗೆ ... ಕೃತ್ಯಗಳು ನಡೆಯುತ್ತಿರುವವೋ ಅಲ್ಲಿಯ ... ಇಂಗ್ಲೆಂಡು ಎಷ್ಟು ಸ್ವಾತಂತ್ರ್ಯ ಪ್ರಿಯವೂ ಉದಾರ... ವುಳ್ಳದ್ದು ಆಗಿದ್ದರೂ ಈಗಿನ ಯುದ್ಧವು ಮುಗಿದ ಮೇಲೆ ನಮ್ಮ ದೇಶಕ್ಕೆ ನೂತನ ಸ್ವಾತಂತ್ರ್ಯವನ್ನು ಅದು ಕೊಡದು ಈ ವಿಷಯವನ್ನು ಪ್ರಜಾ ನಾಯಕರು ಗ್ರಹಿಸಿಕೊಳ್ಳಬೇಕು ಮತ್ತೊಂದು ಮುಖ್ಯ ವಿಷಯವೇನಂದರೆ—ಪ್ರಜೆಗಳಿಗೂ ಪೋಲಿಸಿನವರಿಗೂ ಸ್ನೇಹವು ನೆಲಸುವವರೆಗೆ ಇಂಥಾ ಅಪರಾಧಾಚರಣೆಗಳು ತಗ್ಗಲಾರವು ಅಪರಾಧಿಗಳು ಸಿಕ್ಕರು ಪೋಲಿಸರಿಗೂ, ಪ್ರಜೆಗಳಿಗೂ ಪರಸ್ಪರ ವಿಶ್ವಾಸ ಉಂಟಾದ ಹೊರತು ಎಷ್ಟು ಕಠಿಣ ಶಾಸನಗಳನ್ನೇರ್ಪಡಿಸಿದರೂ, ಎಷ್ಟು ಅಟ್ಟಹಾಸವನ್ನು ಮಾಡಿದರೂ ಪತ್ರಿಕೆಗಳಲ್ಲಿ ಎಷ್ಟು ಲೇಖನಗಳನ್ನು ಬರೆದರೂ ಸಭೆಗಳಲ್ಲಿ ರಾಜಭಕ್ತಿ ಪ್ರೇರಕವಾದ ಉಪನ್ಯಾಸಗಳೆಷ್ಟನ್ನು ಮಾಡಿದರೂ ನಾವು ಕೋರುವ ಫಲವು ಲಭಿಸಲಾರದು. ಅದುಕಾರಣ ಪೋಲಿಸರಿಗೂ ಪ್ರಜೆಗಳಿಗೂ ಪರಸ್ಪರ ಮನೋವೈಷಮ್ಯಗಳಿರುವದಕ್ಕೆ ಕಾರಣವೇನೆಂಬದನ್ನು ವಿಚಾರಿಸಿ ತಿಳಿಯುವದಕ್ಕಾಗಿ ಅಧಿಕಾರಿಗಳೂ, ಅಧಿಕಾರಿಗಳಲ್ಲದವರೂ, ಯುರೋಪಿಯರೂ ಕೂಡಿರುವ ಒಂದು ಸಂಘವನ್ನೇರ್ಪಡಿಸಬೇಕೆಂದು ಬ್ರಿಟಿಷ ಇಂಡಿಯನ್ ಎಸೋಷಿಯೇಶನ್ ಸಂಘದವರು ಬಂಗಾಳ ಸರಕಾರವನ್ನು ವಿಜ್ಞಾಪಿಸಿಕೊಳ್ಳಬೇಕಾಗಿದೆ ಹೀಗೆ ವಿಚಾರಣೆಗಾಗಿ ಏರ್ಪಡಾಗುವ ಸಂಘವು ಒಳ್ಳೇ ಧೈರ್ಯವುಳ್ಳದ್ದಾಗಿಯೂ ಪೋಲಿಸ್ ಇಲಾಖೆಯಲ್ಲಿರುವ ಕುಂದು ಕೊರತೆಗಳನ್ನು ನಿರ್ಭೀತಿಯಿಂದ ಹೊರ ಹಾಕಲು ಸಮರ್ಥವಾಗಿಯೂ ಇರಬೇಕು ಪ್ರಜೆಗಳು ಹಿಂಸೆ ಮಾಡುತ್ತಿದ್ದರೂ ಪೋಲಿಸರಿಗೆ ಸಹಾಯ ಮಾಡಿ ಅಪರಾಧಿಗಳನ್ನು ತೋರಿಸಿ ಕೊಡುವುದರಲ್ಲಿ ಏತಕ್ಕೆ ಮುಂದಾಗುವದಿಲ್ಲವೆಂಬದರ ಕಾರಣವನ್ನು ಅವರು ಕಂಡುಹಿಡಿದು ಹೊರಪಡಿಸಬೇಕು.

ಪ್ರೊಫೆಸರ್ ಗೆಡ್ಡಿಸರವರು ಪಟ್ಟಣ ರಚನೆ ಮತ್ತು ಆರೋಗ್ಯ ವಿಷಯವಾದ ಭಾಷಣಗಳನ್ನು ಈಗ ಮುಂಬಾಯಲ್ಲಿ ಕೊಡಲು ಪ್ರಾರಂಭಿಸಿದ್ದಾರೆ ಹೆಚ್ಚು ಕಡಿಮೆ ಮದ್ರಾಸಿನಲ್ಲಿ ಕೊಟ್ಟ ಭಾಷಣಗಳಿಗೆ ಈ ಭಾಷಣಗಳು ಸರಿ ಹೋಲುತ್ತವೆ

ವೈಸರಾಯ ಪ್ರಭುಗಳವರು ಗ್ವಾಲಿಯಾರ್ ರಾಜ್ಯವನ್ನು ಸಂದರ್ಶಿಸಿರುವರು

ಬಡೋದೆ ಸಂಸ್ಥಾನದ ಲ್ಯಾಬ್ರೇರಿಯನ್ ಯಾನೆ ಗ್ರಂಥ ಶಾಲಾಧ್ಯಕ್ಷ ಜೆ ಯಸ್ ಕುಡಾಲಕಾರ ಎಮ್. ಎ. ಎಲ್. ಎಲ್. ಬಿ ಇವರು ಶ್ರೀಮತಿ ಹೀರಾಬಾಯಿ ವೇದಕ್ ಎಂಬ ವಿಧವೆಯನ್ನು ಇದೇ ತಿಂಗಳ ೫ನೇ ತಾರೀಕಿನ ದಿನ ಮುಂಬಾಯಿಯಲ್ಲಿ ಬ್ರಹ್ಮವಿಧಿ ಪ್ರಕಾರ ವಿವಾಹ ಮಾಡಿಕೊಂಡರು ಶ್ರೀಧರ ರಾಮಕೃಷ್ಣ ಭಂಡಾರಕಾರರು ಮತ್ತು ದ್ವಾರಕಾನಾಥ ಗಂಗಾದರ ವೈದ್ಯಾ ಎಂಬವರು ಪೌರೋಹಿತ್ಯ ನಡಿಸಿದರು.

ದಕ್ಷಿಣ ಕನ್ನಡ.

ಒಬ್ಬ ಬಾತ್ಮಿದಾರರಿಂದ:—ಪರಊರುಗಳಿಂದ ಮಂಗಳೂರಲ್ಲಿ ವಿದ್ಯಾಭ್ಯಾಸಕ್ಕೆ ಬರುವ ದ್ರಾವಿಡ ಬ್ರಾಹ್ಮಣರ ಮಕ್ಕಳಿಗೆ ಬಿಡಾರದ ಅನುಕೂಲತೆ ವದಗಿಸಿ ಕೊಡುವುದಕ್ಕೂ, ಅವರ ಆರೋಗ್ಯ, ನಡತೆ, ವಿದ್ಯಾಭಿವೃದ್ಧಿ ಮೇಲುವಿಚಾರಕ್ಕೂ ಒಂದು ಭವನವು ಈ ... ಮುಂಚೆಯೇ ಸ್ಥಾಪಿಸಲ್ಪಟ್ಟಿರುತ್ತದೆಯಷ್ಟೆ. ಈ ... ಯಾವುದೊಂದು ಸಂಸ್ಥಾಪನೆಗೆ ಮನಃಪೂರ್ತಿಯಾಗಿ ಸಹಾಯ ... ಬುದ್ಧಿಯುಳ್ಳವರೂ ಈ ಜಿಲ್ಲೆಯಲ್ಲಿ ಇನ್ನ್ಯಾರು ಇರುವರು? ಇವರ ... ಸರಣಿಯೂ, ಗಾಂಭೀರ್ಯವೂ, ಅದರಲ್ಲಿ ಗರ್ಭಿತವಾದ ... ಸ್ಥೆಗಳ ಪ್ರಚಾರದ ಚರಿತ್ರೆಯೂ, ಈ ಸಂಸ್ಥೆಗಳನ್ನು ಭೇಡ್ ಕೊಟ್ಟ ಸೂಚನೆಗಳೂ ಇವೆಲ್ಲವನ್ನು ಪರಿ... ಈ ಭವನವು ಯೋಗ್ಯ ಮಾತುಗಳು ಯುಕ್ತವೆಂದು ಹವು ಬೇಡ, ಹೊರಪ್ರಾಂತ್ಯೋದಾಗ ಅವು ಸಹಕಾ... ಇಲ್ಲಿರುವ ಬೇರೆ ಬೇರೆ ಹೊಟೇಲುಗಳಲ್ಲಿ ...ಉತ್ಸಾಹವೂ ವನ್ನೂ, ನಡತೆಯನ್ನೂ, ವಿದ್ಯಾಭ್ಯಾಸವನ್ನೂ ಸಹ ಕಗ್ಗು!" ವಿದ್ಯಾರ್ಥಿಗಳ ತಾಯಿತಂದೆಗಳು ಮತ್ತು ರಕ್ಷಕರು ಈ ಭವನದಿಂದ ಉಂಟಾಗುವ ಮೇಲ್ತರವಾದ ಪ್ರಯೋಜನಗಳೊಂದದೆ ಇರಲಾರರು ಎಂಬುದನ್ನು ನಾವು ಆಶಿಸುತ್ತೇವೆ.

ಹೆಚ್ಚಿನ ಮಾಹಿತಿಗಳನ್ನು ರಾ| ವಕೀಲ ಕೇಶವಭಟ್ಟಯವರಿಂದ ಖುದ್ದಾಗಿ ಯಾ ಪತ್ರದ್ವಾರ ಪಡೆಯಬಹುದು.

ದಾಭೊಳಕರ ಸ್ಕಾಲರಸಿಪ್ಸ ಅಡ್ವೈಜರಿ ಬೋರ್ಡ್.

ಮೇಲಿನ ಬೋರ್ಡಿನವರು ೧೯೧೫ನೆ ಜನವರಿ ತಾ. ೧ನೇ ಲಾಗಾಯಿತು ತಾ ೩೧ ಮಾರ್ಚ ೧೯೧೬ರ ವರೆಗೆ ಯಾವ ವಿದ್ಯಾರ್ಥಿಗಳಿಗೆ ಮತ್ತು ವಿದ್ಯಾರ್ಥಿನಿಗಳಿಗೆ ವಿದ್ಯಾರ್ಥಿ ವೇತನ ಕೊಡುವರೆ ನಿಶ್ಚಯಿಸಿದ್ದಾರೋ ಅವರ ಹೆಸರುಗಳು:—

ಕಾಲೇಜ್ ವಿದ್ಯಾರ್ಥಿಗಳು (ಮಹೆಯಾನೆ ೨೪ರ ರೂಪಾಯಿಗಳು)

ಮೆಸರ್ಸ ವಿ ಎಮ್ ಗಾಯಕೊಂಡ, ಎ ಎಸ್ ರೆಡಕರ ಎಸ್ ಎಮ್ ರಾಕೂರು, ಡಿ ಎಮ್ ಜೊತಾಡ, ವಿ. ಬಿ. ದಿವೆಕರ, ಆರ್. ಎನ್ ಲೊಟ್ಲಿಕರ್, ಎಸ್. ಎನ್ ಗುಲ್ವಾಡಿ, ಟಿ. ಬಿ. ಶ್ಯಾನಭಾಗ, ಜಿ ಎನ್. ಪಾಲೆಕರ, ಎಸ್ ಎನ್. ಕಾಸರಕೋಡ, ವಿ ವಿ. ಸರಾಫ್, ವಿ ಎ ದೆಸಾಯಿ, ಪಿ. ಡಬ್ಲ್ಯು ರೇಗೆ, ಎಸ್. ಎ ಕಡ್ಲಿ, ಎಸ್ ವಿ. ಡಬಿ, ವಿ ಜಿ. ಬಿಡಕರ, ಬಿ ಎ. ರಾವ್, ವಿ ಪಿ. ಖಾನೋಲಕರ, ಜಿ. ಡಿ. ಶಂಕರ, ಎಸ್. ವಿ. ನಾಯಕ, ಪಿ. ಬಿ ಆಚಾರ್ಯ, ಟಿ. ಎಸ್. ನಾಯಿಕ, ಎನ್. ಜಿ. ಶ್ಯಾನಭಾಗ ವಿ ಕೆ. ನಾಬರ, ಕೆ. ಡಬ್ಲ್ಯು ಭಟ್ಟ, ಬಿ. ಬಿ. ಪಾರಕರ, ಬಿ. ಆರ್. ಕಾಗಲ, ಜಿ. ವಿ. ನಾಡಕರ್ಣಿ, ವಿ. ಟಿ. ಪ್ರಭು, ಆರ್ ಎನ್ ರಾವ್

ಹ್ಯಾಸ್ಕೂಲ್ ವಿದ್ಯಾರ್ಥಿಗಳು (ಮಹೆಯಾನ್ ೬೫ ರೂಪಾಯಿಗಳು)

ಮೆಸರ್ಸ ಪಿ. ಕೆ ಸಂಜಗಿರಿ, ಡಿ ವಿ. ಕಾನವಿಂದ, ಬಿ. ಕೆ ದೇಶಪಾಂಡೆ, ಎಮ್ ವಿ. ಸರಾಫ್, ವಿ ಎಸ್ ಹೆಜಮಾಡಿ, ಆರ್ ಡಿ ಶ್ಯಾನಭಾಗ, ಡಿ ಎನ್, ಕೊಪ್ಪಿಕರ, ಎನ್. ವಿ. ಕೆಳೊಸಕರ, ಆರ್. ಪಿ ಬಾಳವಾಟಿ, ವಿ. ಯನ್ ಕಾಮತ, ಆರ್. ಕೆ ಖಾನೋಲಕರ, ಎಸ್. ಬಿ ನಾಯನೆಕರ, ವ್ಹಾ ಆರ್ ತೆಂಡುಲಕರ, ಎಮ್ ಆರ್ ವಾಗಳೆ

ವಿದ್ಯಾರ್ಥಿನಿಗಳು (ಮಹೆಯಾನಾ ೪ರ ರೂಪಾಯಿಗಳು)

ಮಿಸೆಸ್ ಕೃಷ್ಣಾಬಾಯ ವೈದ್ಯ, ಮಿಸ್ ಸುಂದರಾಬಾಯಿ ಯಲಿಮೊಂಢಕರ, ಮಿಸೆಸ್ ಕೃಷ್ಣಾಬಾಯಿ ಪಾಯಿ, ಮಿಸೆಸ್ ದುರ್ಗಾಬಾಯಿ ವಾಗಳೆ, ಮಿಸೆಸ್ ಚಂಪುಬಾಯಿ ಆರ್. ಗೊಪಾರಕರ, ಮಿಸೆಸ್. ಗಂಗುಬಾಯಿ ಪಿನಕರ, ಮಿಸೆಸ್. ಅವದಾಬಾಯಿ ಸಾಮಂತ,

ಮೊಗೇಯರರ ಶ್ರೀ ಜ್ಞಾನೋದಯ ಸಮಾಜ ಮಂಗಳೂರು.

ಸಮಾಜದ ಜ್ಞಾನೋದಯ ಶಾಲಾ ಮಂದಿರ ಮತ್ತು ಗ್ರಂಥ ಸಂಗ್ರಹ ಆಲಯ ಸಂಸ್ಥಾಪನಾ ... ದಾನವಾಗಿ ಕೊಟ್ಟದಾತರು:—

ಮ ರಾ| ರಾ| ಜಿ. ಡಿ. ಗಾಂಧಿ, ಬಿ. ಎ. ... ರೂ. ೫, ಬಾಟಸಪ್ಪ ಮತ್ತು ಕಂಪನಾಯ ... ರೂ. ೫, ಮ ರಾ| ರಾ| ... [illegible]

ESTABLISHED JULY 1906.

THE CANARA BAN[K]

ಕೆನರಾ ಬ್ಯಾಂ[ಕ್]

Authorised Capital Rs ... , ಪಿ
Issued Capital ... ೬. ಲಾಮ್ಸ್ ರೂ
Subscribed Capit[al] ಕೃಷ್ಣಾಯರು ರೂ ೧, ಹೊಸ
Paid up Ca[pital] ಕೇರರು ರೂ. ೧, ಮುಲ್ಕಿ ಲಿಂಗ
Deposits
Res[erve] ರೂ ೧, ಆರ್ ಮಾಸ್ತರ್ ಆಣೆ ೮, ಆರ್

ಡೇವಿ ಆಣೆ ೮, ಜಮ್ನದಾಸ್ ಆಣೆ ೮ ಎಸ್ ಯನ್ ಗಾಂಧಿ ಆಣೆ ೮, ಸಿ ಗಾಂಧಿ ಆಣೆ ೮, ಸಾವಳ್ಷ ಆಣೆ ೪, ಸಿ ಯಸ್. ವಾಡ್ಲಿ ಆಣೆ ೪, ಬೈಯ್ಯಚ ಹೋರಿ ಆಣೆ ೪ ಬೈಯೂಜಿ ಕಗಿ ಆಣೆ ೪, ಇದಕ್ಕಾಗಿ ದಾತರನ್ನು ಕೃತಜ್ಞತೆಯಿಂದ ವಂದಿಸುತ್ತೇವೆ.

ಎಚ್ ಸೋಮಯ್ಯ ಮಂದಣ್ಣಾಯ
ಉಪಪ್ರಧಾನಜ

~~~~~

ಕುಂಬಳೆ —ಇಲ್ಲಿ ಸಬ್ ರಿಜಿಸ್ಟ್ರಿ ಆಫೀಸು ಇಡಿಸೋಣಾಗಬೇಕಾಗಿ ಈ ಪ್ರಾಂತ್ಯದವರು ಈಚೆಗೆ ಸರ್ಕಾರಕ್ಕೆ ಮಾಡಿಕೊಂಡ ಮನವಿಗೆ ಯಾವ್ಯಾವ ಗ್ರಾಮಗಳು ಕೂಡಬೇಕಾದೀತೆಂಬ ತನಿಕೆ ಈ ವರೇಗೆ ನಡಿಯುತ್ತಾ ಇದ್ದು ಇದೇ ತಾ. ೫ರಲ್ಲು ಕಾಸರಗೋಡಿನ ಸಬ್ ರಿಜಿಸ್ಟ್ರಾರರಾದ ಮ ಜ ರೋಬಟ್ಸ್ ರವರು ಸದರಿ ಆಫೀಸಿನ ಬಗ್ಗೆ ಕಟ್ಟೋಣವನ್ನು ನೋಡುವರೆ ಇಲ್ಲಿಗೆ ದಯಮಾಡಿ ರಾ ಗೋಪಾಲಕೃಷ್ಣಭಟ್ಟರ ಹೊಸ ಕಟ್ಟೋಣವು ಯೋಗ್ಯವಂತ ಪಾಸ್ ಮಾಡಿರುವದರಿಂದ ತ್ವರ್ಯದಲ್ಲೇ ಇಲ್ಲಿ ಆಫೀಸ ತೆರಿಯುವ ಮುಹೂರ್ತವನ್ನು ಸರ್ವರೂ ಹಾರೈಸುತ್ತಿರುವರು.

ಈಗ ಮಂಗಳೂರು ಕಣ್ಣಾನೂರು ವರೇಗೆ ಓಡ್ಯಾಡುವ ೨ ೩ನೇ ಕ್ಲಾಸ್ ಮೋಟರ್ ರೈಲ ಗಾಡಿಗಳಲ್ಲಿ ೨ನೇ ಕ್ಲಾಸ್ ಗಾಡಿಯು ಇಡೀ ಇಲ್ಲದೆ ಬರೇ ಒಂದು ಕಂಪಾರ್ಟಮೆಂಟು ಮಾತ್ರ ಇರುವ ಕಾರಣ ೨ನೇ ಕ್ಲಾಸ್ ಟಿಕೇಟು ಪಡಕೊಂಡ ಪ್ರಯಾಣಸ್ಥರನೇಕರು ಸ್ಥಳವಿಲ್ಲದೆ ೩ನೇ ಕ್ಲಾಸ್ ಗಾಡಿಗಳಲ್ಲಿ ಪ್ರಯಾಣ ಮಾಡಿ ಕಷ್ಟನಷ್ಟಗಳನ್ನನುಭವಿಸುವದರಿಂದ ಕಂಪೆನಿಯವರ ೨ನೇ ಕ್ಲಾಸ್ ಇಡೀ ಗಾಡಿಯನ್ನಿಡುವದು ಅತೀ ಅಗತ್ಯವಾಗಿದೆ

ಕೆಲವು ದಿವಸಗಳ ಹಿಂದೆ ಇಲ್ಲಿಗೆ ಸಮಿಪ ಇಚ್ಲಂಪಾಡಿ ಗ್ರಾಮದಲ್ಲಿ ಒಂದು ಹುಲಿಯು ಸಂಚರಿಸುವ ವರ್ತಮಾನವನ್ನು ಅಲ್ಲಿಯ ಜಮಿನುದಾರರಾದ ರಾ। ರಾಮಯ್ಯ ಆಳ್ವರು ಕೇಳಿ ಶಿಕಾರಿಗೆ ಹೋದಾಗ್ಯೆ ಒಂದು ಗುಡ್ಡೆಯಲ್ಲಿದ್ದ ಆ ಹುಲಿಯನ್ನು ಮಹಮ್ಮತೆಬ್ಯಾರಿ ಎಂಬವನು ಕಂಡು ಹುಲಿಯು ಇಲ್ಲಿಯೇ ಇದೆ ಎಂತ ರಾಮಯ್ಯ ಆಳ್ವರನ್ನು ಕರೆಯುತ್ತಲೇ ಹುಲಿಯು ಮಹಮ್ಮದೆ ಬ್ಯಾರಿಯ ಮೇಲೆ ಹಾರಿ ಉಗುರಿಂದ ಮಾತ್ರ ಘಾಯಪಡಿಸಿ ಪುನಹಾ ತನ್ನ ಸ್ಥಾನ ಸೇರಿತು ಆನಂತರ ರಾಮಯ ಆಳ್ವರು ಒಂದು ಸ್ಥಳದಲ್ಲಿ ನಿಂತು ಕೋವಿ ಹೊಡಿಯುತ್ತಲೇ ಪೆಟ್ಟಿನ ಘಾಯಕ್ಕೆ ಕೋವಿಯ ಶಬ್ದ ಬಂದ ಸ್ಥಳದಲ್ಲಿ ಹಾರಿ ಆಳ್ವರನ್ನು ಎಳದು ಹಾಕಿತು ಆದರೆ ಆಳ್ವರು ಮೇಲೆ ಹುಲಿ ಕೆಳಗಾಗಿ ಬಿದ್ದ ಕಾರಣ ಹುಲಿಯು ಗಾಬರಿಯಾಗಿ ಅವರನ್ನು ಬಿಟ್ಟು ಮುಂಚಿನಂತೆ ಅದೇ ಗುಡ್ಡೆಯನ್ನು ಸೇರಿತು ಇದನ್ನು ಅನೇಕರು ಕೂಡಿ ತಕ್ಷಣವೇ ಕೊಂದು ಹಾಕಿದರು ಬಾಯಿ ಮತ್ತು ಬೇರೆ ಒಂದೆರಡು ಕಡೆಯಲ್ಲಿ ಘಾಯ ಹೊಂದಿದ ಆಳ್ವರು ದೇವರ ದಯೆಯಿಂದ ಕಾಸರಗೋಡು ಆಸ್ಪತ್ರಿಯಲ್ಲಿ ಗುಣಹೊಂದುತ್ತಿರುವರು

~~~~~

ಮಂಗಳೂರು

~~~~~

ಪುತ್ತೂರಿನ ಹೆಡ್ ಎಕೌಂಟೆಂಟ್ ಮತ್ತು ಟ್ರೆಜರರಾಗಿರುವ ಮ। ರಾ। ಕಾಪು ರಾಮರಾಯರು ಮಂಗಳೂರಿನ ಹೆಡ್ ಎಕೌಂಟಾಂಟ ಮತ್ತು ಟ್ರೆಜರರಾಗಿ ನೇಮಿಸಲ್ಪಟ್ಟಿರುವದರಿಂದ ಮಂಗಳೂರಿನ ಹೆಡ್ ಎಕೌಂಟಾಂಟ ಮತ್ತು ಟ್ರೆಜರರಾಗ್ಗಿರುವ ಮ। ರಾ। ಯು ವೆಂಕ್ಕಪ್ಪನವರು ಪುತ್ತೂರಿಗೆ ವರ್ಗಾಯಿಸಲ್ಪಟ್ಟಿದ್ದಾರೆ.

ಮಂಗಳೂರು ಡಿವಿಜನಲ್ ಆಫೀಸಿನ ಆಕ್ಟಿಂಗ್ ಹೆಡ್ ಕ್ಲಾರ್ಕರಾಗ್ಗಿರುವ ಮ। ರಾ। ಜಿ. ಮಾಧವಪ್ರಭುಗಳವರು ಒಂದು ತಿಂಗಳ ಪ್ರಿವಿಲೇಜ್ ರಜೆ ತಕ್ಕೊಂಡಿರುವದರಿಂದ ಕಲೆಕ್ಟರ ಆಫೀಸಿನ ಲೋಕಲ್ ಒಡಿಟ್ ಮತ್ತು ಎಕೌಂಟ್ಸ್ ಶಾಖೆಯ ಆಕ್ಟಿಂಗ್ ಹೆಡ್ ಎಕೌಂಟಾಂಟರಾದ ರಾ। ಎಸ್. ರಾಮಕೃಷ್ಣ ಕಾಮ್ತಿಕರರವರು ಡಿವಿಜನಲ್ ಹೆಡ್ ಕ್ಲಾರ್ಕರಾಗ್ಗಿಯೂ II ಗ್ರೇಡ್ [ಸ]ಬ್ ಎಕ್ಸರರಾದ ರಾ। ಎಮ್ ರಾಮಪ್ಪರವರು ಆ[ಕ್ಟಿಂಗ್] ಎಕೌಂಟಾಂಟರಾಗಿಯೂ ನೇಮಿಸಲ್ಪಟ್ಟಿರುವರು

ಕುಂದಾಪುರ ರವಿನ್ಯೂ ಡಿವಿಜನಲ್ ಆಫೀಸರರಾದ ಮ। ಜಿ ಡಬ್ಲ್ಯು ಫ್ರಿಸ್ಟ್ ದೊರೆಗಳವರು ಇದೇ ತಾ ೧೦ ಕುಂದಾಪುರದಿಂದ ವಂಡಸೆ, ತಾ. ೧೧ ೧೨ ಜಡ್ಕಾಲ್, ತಾ ೧೩ ೧೫ ನಾಗೋಡಿ, ತಾ ೧೬ ೧೭ ಹನ್ನಾರ, ತಾ ೧೮ ೧೯ ನಾಗೋಡಿ, ತಾ ೨೦ ೨೧ ಗೋಳಿಹೊಳಿ ತಾ ೨೨ ಬೈಂದೂರು, ತಾ ೨೩ ಶಿರಿ ಮಂಜೇಶ್ವರ, ಈ ಸ್ಥಳಗಳಲ್ಲಿ ಸರ್ಕೀಟ ಬೆಳಸಿ ತಾ ೨೪ಕ್ಕೆ ಕುಂದಾಪುರಕ್ಕೆ ಹಿಂತಿರುಗಿ ಬರುವರು

ಕುಂದಾಪುರ ಡಿವಿಜನಲ್ ಆಫೀಸಿನ ೨ನೇ ಕ್ಲಾರ್ಕ ರಾ। ಪಿ ಆನಂದರಾಯರು ರಜೆಯಮೇಲಿರುವದರಿಂದ ಕಾಪು ರೆವಿನ್ಯೂ ಇನ್ಸ್‌ಪೆಕ್ಟರರಾದ ರಾ। ಆರ್ ವಾಸುದೇವರಾಯರು ಕುಂದಾಪುರ ಡಿವಿಜನಲ್ ಆಫೀಸಿನ ೨ನೇ ಕ್ಲಾರ್ಕರಾಗಿಯೂ ಉಡ್ಪಿ ತಾಲೂಕ ಆಫೀಸಿನ ಆಕ್ಟಿಂಗ್ ಹೆಡ್ ಕ್ಲಾರ್ಕರಾದ ರಾ। ಕೆ ನರಸಿಂಗರಾಯರು ಕಾಪಿನ ಆಕ್ಟಿಂಗ್ ರೆವಿನ್ಯೂ ಇನ್ಸ್‌ಪೆಕ್ಟರರಾಗಿಯೂ ನೇಮಿಸಲ್ಪಟ್ಟಿದ್ದಾರೆ

ಬೈಟೋಬಿಲ್ಡಿಂಗಿನಲ್ಲಿ ತೆರೆಯಲ್ಪಟ್ಟ ಕೊಡಂಗ್ ಆರ್ಟ್ ಸ್ಟುಡಿಯೋ ಎಂಬ ಕಲಾಭವನದ ಮಾಲಿಕರಾದ ರಾ। ಎಮ್ ಆರ್ ಕೊಡಂಗರವರ ಚಿತ್ರಾಪುರ ಮಠದ ಪಾಂಡ ರಂಗಾಶ್ರಮ ಸ್ರೀ ಪಾದಂಗಳವರ ತಸಬೀರಿನ ಎನ್‌ಲಾರ್ಜಮೆಂಟ್ ಒಂದನ್ನು ಗಣಪತಿ ಸೆಕಂಡರಿ ಶಾಲೆಗೆ ಉಚಿತವಾಗಿ ಕೊಟ್ಟಿರುತ್ತಾರೆ. ಈ ಎನ್‌ಲಾರ್ಜಮೆಂಟ ಶ್ರೀ ಪಾದಂಗಳವರ ಯಥಾರೂಪದಂತಿರುವದರಿಂದ ಸದರಿ ಶಾಲಾ ಮೆನೇಜಿಂಗ್ ಕಮಿಟಿಯ ಅಧ್ಯಕ್ಷರವರು ಒಂದು ಸಿಫಾರಸು ಪತ್ರವನ್ನು ಕೊಟ್ಟಿರುತ್ತಾರಲ್ಲದೆ ಇತರ ಶಾಲಾ ಅಧಿಕಾರಿಗಳ ಒಮ್ಮ ಚಿನ್ನದ ಪದಕವನ್ನು ರಾ। ಕೊಡಂಗರವರಿಗೆ ದಾನ ಮಾಡಲಿಕ್ಕಿದ್ದಾರೆಂತ ತಿಳಿಯುತ್ತೇವೆ

ನಾಟ್ಯಕಲಾ ಪ್ರವರ್ತಕ ಕರ್ಣಾಟಕ ನಾಟಕಮಂಡಲಿ, ಮಂಗಳೂರು ಈ ಕಂಪೆನಿಯ ಪ್ರೊಪ್ರೈಟರರಾದ ರಾ। ಕಾರ್ಕಳ ನಾರಾಯಣ ಹೆಗ್ಗಡೆಯವರು ಇದೇ ತಾ ೬ನೇ ಮಂಗಳವಾರ ಹೃದ್ರೋಗದಿಂದ ವಿಧಿವಶರಾದರು ಎಂತ ತಿಳಿದು ವಿಷಾದಿಸುತ್ತೇವೆ

ಪಟ್ಟಣದಲ್ಲಿ ಬೀದಿಬೀದಿಗಳಲ್ಲಿ ಇಡಲ್ಪಟ್ಟಿರುವ ಕಚ್ರಾ ಡಬ್ಬಿಗಳಲ್ಲಿ ಈ ವಿವಾಹ ಕಾಲದಲ್ಲಿ ತುಂಬಿರುವ ಎಂಜಲಿನ ಬಾಳೆ ಎಲೆ ಇತ್ಯಾದಿ ಹೊಲಸು ವಸ್ತುಗಳು ಒಂದೆರಡು ದಿನಗಳಾದರೂ ಹೊರಹೋಗುವದಿಲ್ಲವಾದುದರಿಂದ ಈ ಎಂಜಲು ಬಾಳೆಎಲೆ ಇತ್ಯಾದಿಗಳನ್ನು ಕಾಗೆ ನಾಯಿ ಇತಾದಿಗಳು ದಾರಿ ತಂಬಾ ಎಳದ ಹಾಕುವದರಿಂದ ಮುನಿಸಿಪಾಲಿಟಿಯೊಳಗಣ ಕೆಲವು ಓಣಿದಾರಿಗಳ ಸ್ಥಿತಿಯು ಭೀಕರವಾಗಿರುವದೆಂತ ಒಬ್ಬ ಬಾತ್ಮೀದಾರರು ತಿಳಿಸಿರುವರು ಸಂಬಂಧಪಟ್ಟ ಮುನಿಸಿಪಾಲ್ ಅಧಿಕಾರಿಗಳು ಈ ವಿಷಯ ನಿಗಾ ಕೊಡಬೇಕಾಗಿದ

ಕಳದ ತಿಂಗಳ ೧೬ನೆ ತಾರೀಕಿನ ದಿನ ಮಂಗಳೂರು ಮಹಿಳಾ ಸಭೆಯವರು ಮಿಸ್ ತಾರಾಬಾಯಿ ಯವರಿಗೆ ಆಮಂತ್ರಣ ಕೊಟ್ಟು ಕರತರಿಸಿ ಸಭೆನಡೆಯಿಂದ ಶ್ರೀಮತಿ ನಯಂಪಳ್ಳಿ ಲಲಿತಾಬಾಯಿಯವರು ಅವರ ಯೋಗ್ಯತೆ ಹೊಗಳಿ ಸ್ವಾಗತ ಭಾಷಣಮಾಡಿದ ತರುವಾಯ ಕಾರ್ಯದರ್ಶಿ ಶ್ರೀಮತಿ ಕಾರ್ನಾಡ ಕಾಂತಾಬಾಯಿಯವರು ಅತಿಧಿಗೆ ಹೂಮಾಲೆಯನ್ನು ಹಾಕಿದರು ತದನಂತರ ಸಭಾಧ್ಯಕ್ಷ ಧಾರೇಶ್ವರ ಗಿರಿಜಮ್ಮನವರು ಚಿನ್ನದ ಪದಕವನ್ನು ಬಹುಮಾನವಾಗಿ ಅರ್ಪಿಸಿದರು ತಾರಾಬಾಯಿಯವರು ಅದನ್ನು ಸ್ವೀಕರಿಸಿ ಕಾಯಬಲವನ್ನು ವೃದ್ಧಿಸುವ ಅಗತ್ಯತೆ ಕುರಿತು ಸಭಗೆ ಬುದ್ಧಿವಾದ ಹೇಳಿ ಸಭೆಯು ಮುಕ್ತಾಯವಾಯಿತು

ಇದೇ ತಿಂಗಳ ೨೧ನೆ ಆದಿತ್ಯವಾರ ಬೆಳಿಗ್ಯೆ ೭॥ ಘಂಟೆಗೆ ಮಂಗಳೂರ ಬ್ರಹ್ಮಮಂದಿರದಲ್ಲಿ ರಾ। ಗಂಗೊಳ್ಳಿ ಕೃಷ್ಣರಾಯರು ದೇವಾರಾಧನೆ ಮತ್ತು ಉಪನ್ಯಾಸ ನಡಿಸುವರು

ಇದೇ ತಾ ೩ರಲ್ಲು "ಕೆನರಾ ಹೈಸ್ಕೂಲುಡೇ" ಸಮಾರಂಭವು ವಿಶೇಷ ವಿಜೃಂಭಣೆಯಿಂದ ಡಿಸ್ಟ್ರಿಕ್ಟ್ ಕಲೆಕ್ಟರರಾದ ಎಮ್ ಇ ಕೌಚ್‌ಮನ್ ಐ. ಸಿ ಎಸ್ ರವರ ಅಧ್ಯಕ್ಷತೆಯಲ್ಲಿ ಜರಗಿತು ಈ ದಿನ ಬೆಳಿಗ್ಗೆ ಹೈಸ್ಕೂಲಿನ ಈಗಿನ ಮತ್ತು ಹಿಂದಿನ ವಿದ್ಯಾರ್ಥಿಗಳಿಗೆಲ್ಲಾ ಪಲಹಾರವು ಶಾಲೆಯಲ್ಲಿಯೇ ಕೊಡಿಸೋಣಾಯಿತು ಬೆಳಿಗ್ಗೆ ೯ ಗಂಟೆಗೆ ಕಾರ್ಯನಿರ್ವಾಹಕ ಸಭೆಯ ಮೀಟಿಂಗ್ ನಡೆಯಿತು. **ಈ ಸಮಾರಂಭ ಸಂಬಂಧ ರೂ ೨೦೦ ಒದಗಿಸಿಕೊಡಬೇಕೆಂಬ ಸ್ಕೂಲು ಡೇ ಕಮಿಟಿಯ ವಿಜ್ಞಾಪನೆಗೆ ೩೫೦ಕ್ಕಿಂತಲೂ ಹೆಚ್ಚಿನ ರೂಪಾಯಿ ಕೂಡಿ ಬಂತು. ಈ ಶಾಲೆಯ ಹೆಡ್‌ಮಾಸ್ತರರಾಗಿದ್ದ ರಾ। ಎ. ವಾಸುದೇವರಾವ್ ಬಿ. ಎ ಎಲ್. ಟಿಯವರು ಶಾಲೆಯಲ್ಲಿ ಮಾಡಿದ 'ಉತ್ತಮ ಕೆಲಸದ' ಜ್ಞಾಪಕವನ್ನು ಶಾಶ್ವತಗೊಳಿಸುವರೆ ರೂ. ಗ್ರಾಂಟನ್ನು ಮದ್ರಾಸಿನ ವಕೀಲರಾದ ರಾ। ಕೆ. ಯು. ಶ್ಯಾಮ**ರಾಯರು ದಾನವಾಗಿ ಕೊಟ್ಟಿರುವರು. **ಹೆಡ್ ಮಾಸ್ತರರು** ಮತ್ತು ಶಾಲೆಯಲ್ಲಿ ೨೦ ವರ್ಷಗಳಿಂದ ಸೈಯನ್ಸ್ ಮಾಸ್ತರರಾಗಿದ್ದ ರಾ। ಎ ಶ್ರೀನಿವಾಸರಾಯರ ಕೆಲಸದ ಜ್ಞಾಪಕಾರ್ಥವನ್ನು ಸ್ಥಿರಗೊಳಿಸುವರೆ ರೂ. ೨೫೦೦ ಕೂಡಿಸಬೇಕೆಂಬ ನಿರ್ಣಯವು ಕಮಿಟಿಯಲ್ಲಿ ಆಗಿ ಇವರ ಒಯಿಲ್ ಪೈಂಟಿಂಗ್ ಭಾವ ಚಿತ್ರಗಳನ್ನೂ ವೇತನ ಫಂಡನ್ನೂ ಸ್ಥಾಪಿಸಬೇಕೆಂಬ ನಿರ್ಣಯವಾಗಿರುವದು ಸಾಯಂಕಾಲ ಶಾಲಾ ಭುವನೇಂದ್ರ ಸಭಾಸದನದಲ್ಲಿ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಊರ ಮಾನ್ಯಗೃಹಸ್ಥರ ಸಭೆಕೂಡಿತು. ಶಾಲಾ ಹೆಡ್ ಮಾಸ್ತರರಿಂದ ೧೯೧೩-೧೪ನೇ ಇಸವಿಯ ರಿಪೋರ್ಟು ಓದಿ ಆದನಂತರ ಅಧ್ಯಕ್ಷರು ಕಾಲೋಚಿತ ಭಾಷಣವನ್ನು ಕೊಟ್ಟರು ಅಂದೇ ಮಾಜಿ ಅ ವಾಸುದೇವ ಪೈಗಳವರ ಭಾವಚಿತ್ರವು ಶಾಲೆಯಲ್ಲಿ ಪ್ರತಿಷ್ಠೆ ಮಾಡಲಾಯಿತು.

ಕೊಡಗಿನ ಅಸಿಸ್ಟಾಂಟ ಇನ್ಸ್‌ಪೆಕ್ಟರಾದ ರಾ। ಅಮ್ಮೆಂಬಳ ರಾಮರಾಯರು ದಕ್ಷಿಣಕನ್ನಡಾ ಜಿಲ್ಲೆಯ ಶಾಲೆಗಳ ಅಸಿಸ್ಟಾಂಟ ಇನ್ಸ್‌ಪೆಕ್ಟರಾಗಿ ನೇಮಿಸಲ್ಪಟ್ಟಿರುವರು ಇವರು ಇತರ ಡ್ಯೂಟಿಯ ಮೇಲಿರುವದರಿಂದ ರಾ। ಸವೂರು ರಾಮರಾವ್ ಮಂಗೇಶರಾಯರು ಬದಲಿ ನೋಡಬೇಕಾಗುವದು. ಸವೂರ್ ರಾಮರಾಯರು ಕೆಲಸಕ್ಕೆ ಹಾಜರಾಗುವ ವರೆಗೆ ಮಂಗಳೂರು ರೇಂಜ ಶಾಲೆಗಳ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರರಾದ ರಾ। ಪಂ। ಮಂಗೇಶರಾಯರು ಅಸಿಸ್ಟಾಂಟ ಇನ್ಸ್‌ಪೆಕ್ಟರರ ಚಾರ್ಜನಲ್ಲಿರವರು

ನೇಪಾಳ ಪ್ರಿನ್ಸರ ಕಳವಾದ ಸುಮಾರು ೫೦,೦೦೦ ರೂಪಾಯಿ ಕ್ರಯ ಬಾಳುವ ಮುತ್ತು ಮತ್ತು ಕರೆನ್ಸಿ ನೋಟಗಳನ್ನು ಕದ್ದುಕೊಂಡು ಬೈಂದೂರಿಗೆ ಬಂದು ಅಟ್ಟಾಹಾಸದಲ್ಲಿ ಜೀವನ ಮಾಡುತ್ತಿರುವಾಗ ಅನುಮಾನದ ಮೇಲೆ ಕುಂದಾಪುರ ಸರ್ಕಲ್ ಇನ್ಸ್‌ಪೆಕ್ಟರ್ ರಾ। ಕೆ ಲಕ್ಷ್ಮಣರವರಿಂದ ಕೈದುಮಾಡಲ್ಪಟ್ಟ ಬಂಕೀ ರಾಮರಾಯನಲ್ಲಿ ಸಿಕ್ಕಿದ ೩೮,೦೦೦ ರೂಪಾಯಿ ಕ್ರಯ ಬಾಳುವ ಸರವನ್ನು ಪ್ರಿನ್ಸರ ಏಜಂಟರಾದ ರಾ। ಗೋವರ್ಧನರವರು ಕುಂದಾಪುರಕ್ಕೆ ಬಂದು ಗುರ್ತಿಸಿ ಹೋಗಿರುವರು ಬಂಕೀ ರಾಮರಾಯನೆಂಬವನು ನೇಪಾಳ ಪ್ರಿನ್ಸರಲ್ಲಿ ೪೦ ರೂಪಾಯಿಯ ಇಂಗ್ಲಿಷ್ ಕ್ಲಾರ್ಕನಾಗಿದ್ದು ಪ್ರಿನ್ಸರು ಬನಾರಿಸಿನ ಹೋಟಲಿನಲ್ಲಿರುವಾಗ ಈ ಕಳವನ್ನು ಮಾಡಿ ತಪ್ಪಿಸಿಕೊಂಡು ಬಂದಿದನಂತೆ ಈ ಮೊಕದಮೆ ತನಕಿಯು ಮಂಗಳೂರು ಡಿವಿಜನಲ ಆಫೀಸಿನಲ್ಲಿ ನಡಿಯುವ ಏರ್ಪಾಡು ಮಾಡಿರುವದರಿಂದ ನೇಪಾಳ ಪ್ರಿನ್ಸರವರು ಪರಿವಾರ ಸಹಿತ ಮಂಗಳೂರಿಗೆ ಬರುವ ಸಂಭವವಿದೆ

ಬಂಕೀ ರಾಮರಾಯನಲ್ಲಿ ಸಿಕ್ಕಿದ ೧೬ ತೊಲೆ ಅಫೀಮು, ಮೊಕದಮೆಯ ತನಕಿಯು ತಾ ೨ರಲ್ಲು ಕುಂದಾಪುರ ಡಿವಿಜನಲ ಆಫೀಸರರಿಂದ ನಡೆದ ತೀರ್ಮಾನವನ್ನು ಬಾಕಿ ಇಟ್ಟಿರುತ್ತಾರೆ

ರಥಬೀದಿಯಲ್ಲಿಯ ಒಂದು ಮನೆಯಲ್ಲಿ ಹಗಲಲ್ಲೇ ಜುಗರಾಡುತ್ತಿರುವಾಗ ಪೋಲಿಸಿನವರಿಂದ ಹಿಡಿಯಲ್ಪಟ್ಟ ೧೬ ಜನರಲಿ ಮನೆ ಮ್ಹಾಲಿಕನಾದ ಚಿರ್ದಪ್ಪ ಶೆಣಯಿಗೆ ಒಂದು ತಿಂಗಳ ಕಠಿಣ ಸಜೆಯೂ, ೭ ಮಂದಿಯಲ್ಲಿ ಒಬ್ಬೊಬ್ಬನಿಗೆ ೧೫ ರೂಪಾಯಿ ಜುಲುಮಾನೆಯೂ ಉಳಿದವರಲ್ಲಿ ಒಬ್ಬೊಬ್ಬನಿಗೆ ಹತ್ತತ್ತು ರೂಪಾಯಿ ಜುಲುಮಾನೆಯನ್ನು ವಿಧಿಸೋಣಾಗಿರುವದು.

ದಕ್ಷಿಣಕನ್ನಡಾ ಡಿಸ್ಟ್ರಿಕ್ಟ ಪೋಲಿಸ ಸುಪರಿಂಟೆಂಡೆಂಟರಜಾ ಕಾಲ ಅಸಿಸ್ಟಾಂಟ ಸುಪರಿಂಟೆಂಡೆಂಟರಾದ ಮ। ರಾ ಗೋವಿಂದನ್ನಾಯರರು ಆಕ್ಟಿಂಗ್ ಡಿಸ್ಟ್ರಿಕ್ಟ ಪೋಲಿಸ ಸುಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟಿರುವರು

ಎಲ್ಲೂರಿನಲ್ಲಿ ಸಬ್ ಜಡ್ಜರಾಗಿರುವ ಮ। ವಿ. ಸಿ ಮುಕರೇಂದ್ರ ...ವರು ಇಲ್ಲಿಯ ಸಬ್ ಜಡ್ಜರಾಗಿ ನೇಮಿಸಲ್ಪಟ್ಟಿದ್ದಾರೆ

ಇದೇ ತಿಂಗಳ ತಾರೀಕು ೧೩ನೇ ಮಂಗಳವಾರ ದಿನ ಹಗಲು ೪ ಘಂಟೆ ಆಕ್ಕೆ ಬೋಳೂರು ಸುಲ್ತಾನ ಬತ್ತೇರಿಯ ... ಯಲ್ಲಿ ಮೊಗೇಯರರ ಶ್ರೀ ಜ್ಞಾನೋದಯ ಸಮಾಜದ ಐದ ವಾರ್ಷಿಕೋತ್ಸವವು ನೆರವೇರಿಸೋಣಾಗುವುದು ಈ ಸಂದರ್ಭದಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಲು ಮದ್ರಾಸ್ ಗವರ್ನಮೆಂಟ್ ಫಿಶರೀಸ್ ಡಿಪಾರ್ಟಮೆಂಟಿನ ಅಸಿಸ್ಟಾಂಟ ಡೈರೆಕ್ಟರರಾದ ಮ। ರಾ। ರಾ। ವಿ. ಗೋವಿಂದನ್ ಅವರ್ಗಳ್ ಬಿ ಎ. ಎಫ್ ಜೆಡ್. ಯಸ್‌ರವರು ಸಮ್ಮತಿಸಿರುತ್ತಾರೆ. ಸರ್ವ ಜನರಿಗೂ ಸುಸ್ವಾಗತವಿದೆ.

ಕಾಶೀಮಠದ ಶ್ರೀಮತ್ ಸುಕೃತೀಂದ್ರತೀರ್ಥ ಸ್ವಾಮಿಯವರಿಗೆ ಪ್ರಾಯ ತುಂಬಿದ್ದಾಗಿ ಮುಂಬಾಯಿ ಹೈಕೋರ್ಟಿನವರು ನಿಶ್ಚಯಿಸಿ ಮುಂಬಾಯಿಯಲ್ಲಿರುವ ಕಾಶಿಮಠದ ಆಸ್ತಿಗಳ ಅಧಿಕಾರವನ್ನು ವಹಿಸಿಕೊಳ್ಳಬಹುದೆಂತ ತೀರ್ಮಾನಿಸಿರುವರೆಂದೂ ಶ್ರೀಗಳವರು ತ್ವರ್ಯದಲ್ಲಿ ಕಾಶೀಯಾತ್ರೆಗೆ ಯಾತ್ರಸ್ಥರಾಗಿ ತೆರಳುವರೆಂದೂ ತಿಳಿಯುತ್ತೇವೆ.
~~~~~

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 9ನೇ ಎಪ್ರಿಲ್ 1915

ಕೊಯಮುತ್ತೂರು ಸರ್ಕಲ್ ಪರಸ್ಪರ ಸಹಾಯಕ ಸಂಘಗಳ ಪರಿಷತ್ತು

೩ನೆ ಸಭೆ

ಈ ಪರಿಷತ್ತು ಇದೇ ಎಪ್ರಿಲ್ ೫.೬ನೇ ತಾರೀಕುಗಳಲ್ಲಿ ಪೂರ್ವಾಹ್ನ ೧೧ ಗಂಟೆಯಿಂದ ಅಪರಾಹ್ನ ೨ ಗಂಟೆವರೆಗೆ ಗವರ್ನಮೆಂಟ್ ಕೊಲೇಜಿನ ಕೋಣೆಯಲ್ಲಿ ಜರಗಿತು. ಕಾಲವು ಸುಕಾಲವಾಗಿರಲಿಲ್ಲ

ಸ್ವಾಗತ ಕಮಿಟಿಯ ಅಧ್ಯಕ್ಷರಾದ ಖಾನ್ ಸಾಹೆಬ್ ಹಾಜಿ ಅಬ್ದುಲ್ಲಾ ಹಾಜಿ ಕಾಸಿಮ್ ಸಾಹೇಬ ಬಹದ್ದೂರವರು ಸ್ವಾಗತಪತ್ರದಲ್ಲಿ ಹೇಳಿದ ಮಾತುಗಳನ್ನೆ ಪುನರುಚ್ಚರಿಸುವುದಾದರೆ "ರಣರಂಗದ ಕೇಳಿಯಲ್ಲಿ ಒಂದು ನವೀನ ಯುರೋಪಖಂಡವು ನಿರ್ಮಿತವಾಗಲ್ಪಡುತ್ತದೆ ದ್ವೇಷ, ಅಸೂಯೆ, ಮಾತ್ಸರ, ಅಹಂಕಾರ, ಮುಂತಾದವುಗಳ ಮೂರ್ತಿಮಂತವಾದ ಪಿಶಾಚಿಗಳು ಈಗ ಆಡಿಸುವ ನರಬಲಿಯು ಯಾವಾಗ ಅಂತ್ಯವಾದೀತು ಎಂದು ಹೇಳಲಾರೆವು, ಆದರೂ ಕೊನೆಗೆ ನ್ಯಾಯನೀತಿಗಳ ಶ್ರೇಷ್ಠ ತತ್ವಗಳೇ ಜಯಹೊಂದುವುವೆಂದು ಮನಸ್ಯನಾದವನ ಚಿತ್ತಕ್ಕೆ ಹೊಳೆಯುವುದು ಇಂತಹ ಪರಿಣಾಮದಲ್ಲಿಯೇ ಯುರೋಪಿನ ಶಾಂತಿಯೂ, ಇಂಗ್ಲೆಂಡಿನ ಯಶಸ್ಸೂ, ನಮ್ಮ ಮಾತೃಭೂಮಿಯ ಭದ್ರತೆಯೂ ಆಧರಿಸಿರುವುವು" ಎಂದು ಕಾಣುವುದು ಆದರೆ ತತ್ಕಾಲದಲ್ಲಿ ಈ ಯುದ್ಧದ ನಿಮಿತ್ತವಾಗಿ ಜನರಲ್ಲಿರುವ ಕಳವಳವೂ, ಮಾತೃಭೂಮಿಯ ಸುಪುತ್ರರಲ್ಲಿ ತಿಲಕಪ್ರಾಯರಾದ ಬಹುಮಾನಪಟ್ಟ ಗೋಪಾಲಕೃಷ್ಣ ಗೋಖಲೆ ಸಿ ಐ ಇ. ಇವರ ಅಕಾಲಿಕ ಮರಣವೂ ಹಿಂದು ದೇಶದಲ್ಲೆಲ್ಲಾ ಜನರ ಮನಸ್ಸನ್ನು ಕುಗ್ಗಿಸಿರುವುದು. ಇದರೊಂದಿಗೆ ಮಂಗಳೂರಿನಲ್ಲಿ ಈ ಪರಿಷದದ ಕೆಲವು ದಿನಗಳ ಹಿಂದೆಯೇ ನಮ್ಮ ಜನಪ್ರೀತರಾದ ಸಬ್‌ಜಡ್ಜ್ ಮ| ರಾ| ಬಿ ಕೃಷ್ಣರಾವ್ ಬಿ ಎ ಬಿ ಎಲ್ ಇವರು ಪ್ಲೇಗುರೋಗದಿಂದ ಮೃತರಾದುದರಿಂದ, ಪರಜಿಲ್ಲೆಗಳಿಂದ ಪ್ರತಿನಿಧಿಗಳೂ ಪ್ರೇಕ್ಷಕರೂ ಬರುವುದರಲ್ಲಿ ಅನುಮಾನವುಂಟಾಯಿತು ಆದರೆ ಈ ಅಮೋಘವಾದ ಕಾರ್ಯದಲ್ಲಿ ಅನೇಕರಿಗೆ ಆಂತರಿಕ ಪ್ರೇಮವು ತೋರಿದ್ದುದರಿಂದಲೂ, ಪ್ಲೇಗಿನ ಹಾವಳಿಯು ತಗ್ಗಿದೆ ಎಂದು ಸ್ವಾಗತ ಕಮ್ಮಿಟಿಯ ಸೆಕ್ರೆಟರಿಗಳಾದ ಮ| ರಾ| ಎಮ್ ಶಿವರಾಯರು ವರ್ತಮಾನ ಪತ್ರಗಳಲ್ಲಿ ಪ್ರಕಟಿಸಿದ್ದರಿಂದಲೂ ಸುಮಾರು ೧೫ರಷ್ಟು ಮಿಕ್ಕಿ ಪ್ರತಿನಿಧಿಗಳೂ, ಅನೇಕಾನೇಕ ಮಾನ್ಯ ಪ್ರೇಕ್ಷಕರೂ ಬಂದಿದ್ದರು

ಮಂಗಳೂರಿನಲ್ಲಿ ಒಂದೇ ಒಂದಾಗಿರುವ ಸಾರ್ವಜನಿಕ ಸಂಸ್ಥೆಯಾದ ಕೊಸ್ಮೊಪೊಲಿಟನ್ ಕ್ಲಬ್ಬಿನ ಕಾರ್ಯನಿರ್ವಾಹಕರಲ್ಲಿ ಸಹ ಆಗಾಗ ತಲೆ ಎತ್ತಿಕೊಂಡು, ಮಂಗಳೂರಿನಲ್ಲಿ ಬಹು ಕಾಲದಿಂದಲೂ ನೆಲಗೊಂಡು ಬಂದಿರುವ ಜಾತಿದ್ವೇಷವು, ಪರಸ್ಪರ ವೈರತಾತ್ಸಾರಗಳೂ ಈ ಪರಿಷತ್ತಿನ ಕಾರ್ಯಕ್ಕೆ ಅಭ್ಯಂತರವಾಗುವುದೋ ಎಂದು ಹಲವರಲ್ಲಿ ಸಂದೇಹವಿತ್ತು ಇದಲ್ಲದೆ ಈ ದುಸ್ತರ ಸಮಯದಲ್ಲಿ ಅಲಿಪ್ತತೆ ಎಂಬ "ಅಧ್ಯಾತ್ಮನಿದ್ರೆಯ" ಸುಖವನ್ನು ಅನುಭವಿಸುವ ಮಂಗಳೂರಿನ ಭ್ರಾತೃವರ್ಗವು ೩೧ ಮೈಲು ದೂರವಾದ ಪುತ್ತೂರು ಎಂಬ ಹಳ್ಳಿಯಿಂದ ಮಾಡಿದ ಶಂಖನಾದದಿಂದ 'ಎದ್ದೇಳುವರೇ' ಎಂದೂ ಅನುಮಾನವಿತ್ತು ಆದರೆ ಸಹಕಾರಕ್ಕೆ ದೈವಬಲವಿದೆ ಎಂದು ಸ್ಪಷ್ಟಗೊಳಿಸುವಂತೆ ಎಲ್ಲರೂ ಎಚ್ಚತ್ತಿದ್ದರು ಮತ್ತು ತಮ್ಮ ಕೈಲಾದ ಬಗೆಯಿಂದ ಸಹಾಯ ಮಾಡಿ ಈ ಮಹಾಕಾರ್ಯವನ್ನು ಛಂದಗಾಣಿಸಿದ ಕಾರಣ ಸ್ವಾಗತ ಕಮ್ಮಿಟಿಯವರು ಇವರಿಗೆ ಆಭಾರಿಯಾಗಿರಬೇಕು

ವಿಲೆವಾರಿಗಳಲ್ಲಿ ವಿಶೇಷ ಕುಂದುಕುಂದುಗಳೇನೂ ಕಂಡುಬರುವುದಕ್ಕೆ ಬದಲಾಗಿ ಎಲ್ಲವೂ ಚೆಲೋರೀತಿಯಲ್ಲಿ ನಡೆಯಿತು. ಕೋಓಪರೇಟಿವ ಸಂಘಗಳ ವೃದ್ಧಿಯನ್ನು ಕೃಪಾದೃಷ್ಟಿಯಿಂದ ನೋಡುತ್ತಲೆ ಮದ್ರಾಸ ಗವರ್ನರವರ ಕಾರ್ಯನಿರ್ವಾಹಕ ಸಭೆಯ (Executive Council) ಮೆಂಬರರಾದ ಬಹುಮಾನಪಟ್ಟ ಎ. ಜಿ. ಕಾರ್ಡ್ಯೂ ಎಮ್ ಎ. ಸಿ. ಎಸ್. ಐ. ಐ. ಸಿ. ಎಸ್ ಇವರು ಈ ಸಭೆಯ ಅಧ್ಯಕ್ಷರಾಗಲಿಕ್ಕೆ ಸಮ್ಮತಿಸಿದ್ದು ಈ ಸ್ವಾಗತಕಮ್ಮಿಟಿಯವರ ಪೂರ್ವಪುಣ್ಯದಫಲ. ಸ್ವಾಗತಕಮ್ಮಿಟಿಗೆ ಖಾನಸಾಹೇಬರನ್ನು ಅಧ್ಯಕ್ಷರಾಗಿ ಆಯ್ದುಕೊಂಡುದರಿಂದ ಕಮ್ಮಿಟಿಯವರು ವಿವೇಕಶಾಲಿಗಳೆಂದೇ ಹೇಳಬೇಕು. ಜನಸಾಮಾನ್ಯದ ಗೌರವಕ್ಕೂ ಸರಕಾರದ ಪ್ರೀತಿಗೂ ಪಾತ್ರರಾಗಿ, ಧಾರಾಳಗಳೂ, ಸಾರ್ವಜನಿಕ ಯಾವುದೊಂದು ಸಂಸ್ಥಾಪನೆಗೆ ಮನಃಪೂರ್ತಿಯಾಗಿ ಸಹಾಯ ಮಾಡುವ ಉತ್ಸಾಹ ಬುದ್ಧಿಯುಳ್ಳವರೂ ಈ ಜಿಲ್ಲೆಯಲ್ಲಿ ಇನ್ಯಾರು ಇರುವರು? ಇವರ ಸ್ವಾಗತ ಪತ್ರದ ವಾಕ್ಸರಣಿಯೂ, ಗಾಂಭೀರ್ಯವೂ, ಅದರಲ್ಲಿ ಗರ್ಭಿತವಾದ ದಕ್ಷಿಣ ಕನ್ನಡದ ಸಹಕಾರ ಸಂಸ್ಥೆಗಳ ಪ್ರಚಾರದ ಚರಿತ್ರೆಯೂ, ಈ ಸಂಸ್ಥೆಗಳನ್ನು ಮುಂದೆ ಅಭಿವೃದ್ಧಿಗೆ ತರುವುದಕ್ಕೆ ಇವರು ಕೊಟ್ಟ ಸೂಚನೆಗಳೂ ಇವೆಲ್ಲವನ್ನು ಪರಿಶೀಲಿಸಿದರೆ ಸಭಾಧ್ಯಕ್ಷರು ಇವರ ಪರವಾಗಿ ಹೇಳಿದ ಮಾತುಗಳು ಯುಕ್ತವೆಂದು ಕಾಣಬಹುದು. "ಈ ಪತ್ರದ ವಿಷಯಗಳನ್ನು ಕಿವಿಯಾರೆ ಕೇಳಿದಾಗ ಅವು ಸಹಕಾರದ ಸಂಸ್ಥೆಗಳಲ್ಲಿ ನಿಜವಾದ ಮಾಹಿತಿಯೂ ಈ ಮಹತ್ಕಾರ್ಯದಲ್ಲಿ ಉತ್ಸಾಹವೂ ಉಳ್ಳವರ ಸ್ವಾನುಭವದ ಮಾತುಗಳಾಗಿವೆ ಎಂದು ಯಾರು ತಾನೇ ಹೇಳಲಾರರು!" ಎಂದು ಸಭಾಧ್ಯಕ್ಷರು ಹೇಳುತ್ತಾರೆ ಇಲ್ಲಿ ಮುಖ್ಯಪಟ್ಟಣಕ್ಕೆ ಬಲುದೂರವಾದ ಒಂದು ಮೂಲೆಯಲ್ಲಿ ೧೯೦೯ನೆ ಇಸವಿಯ ಒಕ್ಟೋಬರ್ ತಿಂಗಳಲ್ಲಿ ಒಂದೇ ಒಂದು ಸಂಘವು ಆರಂಭಿಸಿದಂದಿನಿಂದ ಜಿಲ್ಲೆಯ ಅನೇಕ ಮುಖ್ಯ ಮುಖ್ಯ ಊರುಗಳಲ್ಲಿ ಸುಮಾರು ೫೧ ಸಂಘಗಳು ಏರ್ಪಟ್ಟವೆಂತಲೂ, ಇವುಗಳ ಪೈಕಿ ಪುತ್ತೂರಿನ ಧಾನ್ಯ ಸಂಗ್ರಹ ಸಂಘವೂ, ಕಾಸರಗೋಡಿನ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘವೂ ಬೇರೆ ಬೇರೆ ಜಾತಿಗಳ ಅನುಕೂಲತೆಗಾಗಿ ಸ್ಥಾಪಿಸಿದ ೧೭ ಸಂಘಗಳೂ, ಯೋಗ್ಯ ರೀತಿಯಿಂದ ಏರ್ಪಡಿಸಿದ ಸೆಂಟ್ರಲ್ ಬೇಂಕು ಇವೇ ವಿಶೇಷ ಲಕ್ಷಣವೆಂದು ಖಾನಸಾಹೇಬರು ತಮ್ಮ ಸ್ವಾಗತ ಪತ್ರದಲ್ಲಿ ಹೇಳುತ್ತಾರೆ ಇದಲ್ಲದೆ ಜಾತಿಗಳಿಗೆ ಬೇರೆ ಸಂಘಗಳನ್ನು ಏರ್ಪಡಿಸುವುದು ಈ ಮೊದಲೇ ಇಲ್ಲಿ ಬೇರೂರಿಕೊಂಡಿರುವ ಜಾತಿ ವೈಷಮ್ಯಕ್ಕೆ ಇನ್ನೂ ಪುಟಕೊಟ್ಟಂತಾಗುವುದು ಎಂದು ಒಂದು ಬಾರಿಗೆ ಕಂಡರೂ ಆಯಾಯ ಜಾತಿಯವರು ತಮ್ಮ ಸ್ಥಿತಿಗತಿಗಳಿಗೆ ಅನುಸಾರವಾಗಿ ಮತ್ತು ತಮ್ಮನ್ನು ಚೆನ್ನಾಗಿ ಅರಿತ ಮತ್ತು ಆ ಜಾತಿಯ ಶ್ರೇಯೋಭಿವೃದ್ಧಿಯನ್ನು ಸದಾ ಚಿಂತಿಸುವ ಪಂಚಾಯತರಿಂದ ಈ ಸಂಸ್ಥೆಗಳ ಕೆಲಸವನ್ನು ನಿರ್ವಹಿಸುವುದರಿಂದ ಆಯಾಯ ಜಾತಿಯ ವೃದ್ಧಿಗೆ ಕಾರಣವಾಗುವುದೆಂತ ತಿಳಿದು ಬರುವ ಕಾರಣ, ಜೈನರಲ್ಲಿಯೂ ಬಂಟರಲ್ಲಿಯೂ ಇಂಥ ಸಂಘಗಳು ಸ್ಥಾಪಿಸುವುದು ಅಗತ್ಯವೆಂದು ಅವರು ಸೂಚಿಸುತ್ತಾರೆ ಯಾವಾಗ ಪ್ರತಿಯೊಂದು ಜಾತಿಯ ಮುಖಂಡರ ತನ್ನ ಜಾತಿಯ ಏಳಿಗೆಯನ್ನು ಚಿಂತಿಸಿ ನೀತಿನ್ಯಾಯಕ್ಕೆ ಅನುಸಾರವಾಗಿ ಕೆಲಸಮಾಡುತ್ತಾರೊ ಆಗ ಅಂಥ ಮುಖಂಡರೂ ಅವರ ಹಿಂದೆ ಅವರ ಬೆನ್ನೊತ್ತಿಕೊಂಡು ಬರುವವರೂ ಒಬ್ಬರಿಗೊಬ್ಬರು ಪ್ರೇಮಭಾವದ ಕೈಚಾಚಿ, ಸಹಕಾರವನ್ನು ಸಾಧಿಸಿಕೊಂಡು ಸಾರ್ವಜನಿಕ ಶಾಂತಿ ಸೌಭಾಗ್ಯದ ದಾರಿಯನ್ನು ಹುಡುಕಿಕೊಳ್ಳುವುದು ಕಷ್ಟತರವಲ್ಲವೆಂದು ಅವರ ಅಭಿಪ್ರಾಯ ಇನ್ನೂ ಶಾಲಾ ಮಕ್ಕಳ ಸಂಘಗಳೂ, ಮುನ್ಸಿಪಲ್ ನವುಕರರ ಸಂಘ, ಪೆಂಟೆಕೋಸ್ಟ್ ಪೇಟೆಯಲ್ಲಿ ಕಟ್ಟೋಣಗಳನ್ನು ಕಟ್ಟಿಸಿ ಬಡ ಜನರಿಗೆ ಸಲಿಬ ಭಾಡಿಗೆಯಲ್ಲಿ ಕೊಡುವ ಸಂಘ, ಧವಸಧಾನ್ಯಗಳನ್ನು ಸಂಗ್ರಹಿಸಿ ಮಾರುವ ಸಂಘ, ಸಾಲದಲ್ಲಿ ಮುಳುಗಿರುವ ಚಿಕ್ಕ ಚಿಕ್ಕ ವರ್ಗದಾರರನ್ನು ಸಾಲದಿಂದ ವಿಮೋಚನೆ ಮಾಡುವ ಸಂಘ, ಈ ಬಗೆಯ ಹಲವು ಸಂಘಗಳ ಸ್ಥಾಪನೆಗೆ ಈ ಜಿಲ್ಲೆಯಲ್ಲಿ ಅವಕಾಶವಿದೆ ಎಂದು ಅವರು ಸೂಚಿಸಿದರು.

ಇದು ವಿನಹಾ ಸಹಕಾರದ ಮಹಾತ್ಮ್ಯವನ್ನು ಇನ್ನೂ ಚೆನ್ನಾಗಿ ತಿಳಿಯದೆ ಒಬ್ಬನು ಮೆಂಬರನಾದೊಡನೆ ಅತೀ ಕಡಿಮೆ ಬಡ್ಡಿಯಿಂದ ಸಾಲಪಡೆಯುವುದಕ್ಕೆ ಹಕ್ಕುದಾರನಾಗುತ್ತಾನೆಂದು ಕೆಲವರು ಭಾವಿಸುವುದರಿಂದಲೂ ಕೆಲವು ಕಡೆಯಲ್ಲಿ ಪಂಚಾಯತರು ತಮ್ಮ ಜವಾಬ್ದಾರಿಯನ್ನು ಚೆನ್ನಾಗಿ ಅರಿಯದಿರುವುದರಿಂದಲೂ ಇಂಥವರಿಗೆ ಬೋಧನೆ ಕೊಡುವುದಕ್ಕೆ ಅಗತ್ಯವಿರುವ ಉಪನ್ಯಾಸಗಳೂ, ಪ್ರಕಟಣಾ ಪತ್ರಗಳೋ ಮುಂತಾದ ಉಪಾಯಗಳಿಂದ ಮೆ| ಇಂಗ್ಲಿಷ್ ಎಂಬ ಹೆಸರಿನ ರಿಜಿಸ್ಟ್ರಾರರೊಬ್ಬರು ಬರ್ಮಾ ದೇಶದಲ್ಲಿ ಈ ಸಹಕಾರ ಸಂಸ್ಥೆಗಳನ್ನು ಪ್ರಚಾರಗೊಳಿಸಿದಂತೆ ನಾವೂ ಮಾಡುವುದು ಅಗತ್ಯವೆಂತಲೂ, ಸಾಲ ತೆಗೆದುಕೊಳ್ಳುವುದಕ್ಕಿಂತಲೂ ಮಿತವ್ಯಯವನ್ನು ಆಚರಿಸುವುದೇ ಮುಖ್ಯ ವೇದಮಂತ್ರನೆಂದು ಜನರಲ್ಲಿ ಉಪದೇಶ ಮಾಡಬೇಕೆಂತಲೂ ಅವರು ಸೂಚಿಸಿದರು ಸರಿಯಾಗಿ ಕೆಲಸ ಮಾಡುವ ಸಂಘಗಳ ಪಂಚಾಯತರಿಗೆ ವ್ಯಾಜ್ಯಸಾಜ್ಯಗಳು ತೀರ್ಮಾನಿಸುವ ಅಧಿಕಾರಗಳನ್ನು ಪೂರ್ವಕಾಲದಲ್ಲಿ ಗ್ರಾಮ ಪಂಚಾಯತರಿಗೆ ಇದ್ದ ಹಲವು ಅಧಿಕಾರಗಳನ್ನು ಕೊಟ್ಟಲ್ಲಿ ಈ ಮೊದಲೇ ಡಿಸೆಂಟ್ರಲೈಜೇಶನ್ ಕಮಿಶನ್ನಿನವರು ಇಂಡಿಯಾ ಗವರ್ನಮೆಂಟಿಗೆ ಕೊಟ್ಟ ಸೂಚನೆಗಳನ್ನು ಜಾರಿಗೆ ತಂದಂತಾಗುವುದರಿಂದ, ಈಗ ಪರೀಕ್ಷಾರ್ಥವಾಗಿ ಮದ್ರಾಸ್ ಸಂಸ್ಥಾನದಲ್ಲಿ ೨೦ ಸಂಘಗಳಿಗೆ ಕೆಲವು ಆರೋಗ್ಯ ರಕ್ಷಣೆಯ ಅಧಿಕಾರಗಳನ್ನು ದಯಪಾಲಿಸಿದ್ದಕ್ಕೆ ಸರಕಾರದ ಉಪಕಾರವನ್ನು ನಾವು ಸ್ಮರಿಸಬೇಕೆಂದೂ ಹೇಳಿ ಅವರು ಮುಗಿಸಿದರು.

ಸಭೆಯಲ್ಲಿ ಓದಿದ ನಾಲ್ಕು ವರದಿಗಳೂ ಇತರ ಪತ್ರಗಳೂ ಬಹು ಗಹನ ವಿಷಯಗಳನ್ನು ಒಳಕೊಂಡಿರುವುದರಿಂದ ಅವುಗಳನ್ನು ಬೇರೆಯಾಗಿ ವಿಮರ್ಶಿಸುವುದು ನಮಗೆ ಅಗತ್ಯ ಕಾಣುತ್ತದೆ, ಮುಖ್ಯನಾಗಿ ಅವುಗಳಲ್ಲಿ ಈಗಲೇ ಇಲ್ಲಿಯ ಸಂಘಗಳ ಮೊದಲ್ಗೈಮಾಡಿಕೊಳ್ಳಬೇಕಾದ ಮೂಲ ಮಂತ್ರವೇನಂದರೆ:— (1) [illegible]

ಕೋಒಪರೇಟಿವ್ ಸಂಘಗಳ ರಿಜಿಸ್ಟ್ರಾರರ ಮಾತುಗಳನ್ನೇ ಉಚ್ಚರಿಸುವುದಾದರೆ— ಸಾಲ ಕೊಡುವವನ ಅತಿರೇಕವಾದ ಲೋಭತ್ವವನ್ನು ಅಣಗಿಸುವುದಕ್ಕೆ ಹೆಣಗಾಡುವ ಬದಲಾಗಿ ಸಾಲಪಡಕೊಳ್ಳುವವನು ವಾಯಿದೆ ತಪ್ಪಿಹೋಗದಂತೆ ನೋಡಿಕೊಳ್ಳುವುದು ಅತ್ಯಾವಶ್ಯವಾಗಿದೆ" (2) ಸಂಘಗಳು ಏರ್ಪಟ್ಟಿರುವುದರಿಂದ ಸುಲಭ ಬಡ್ಡಿಯಲ್ಲಿ ಹಣ ಸಿಕ್ಕೀತು ಎಂದು ಸಂತೋಷಪಡುವುದಕ್ಕೆ ಬದಲಾಗಿ, ಕಿಂಚಿತ್ತಾಗಿ ಆದರೂ ನಮ್ಮಿಂದ ಹಣ ಉಳಿಸಿಕೊಳ್ಳುವ ಉಪಾಯವನ್ನು ನಾವು ಸಾಧಿಸಿಕೊಂಡೆವು ಎಂದು ಜನರು ತಿಳಿದುಕೊಳ್ಳುವುದು. (3) ಇವೆಲ್ಲ ಸಹಕಾರದ ಮುಖ್ಯ ಉದ್ದೇಶಕ್ಕೆ ಹೇತುವಾಗಿದ್ದರೂ ಇವೇ ಉದ್ದೇಶವೆಂದು ಜನರಲ್ಲಿರುವ ಕಲ್ಪನೆಯನ್ನು ಹೋಗಲಾಡಿಸುವುದು. (4) ಜನರಲ್ಲಿ ಸಭಾಧ್ಯಕ್ಷರ ಭಾಷಣದಲ್ಲಿ ಸೂಚಿಸಿದಂತೆ ಧೀರತೆ, ಆತ್ಮಸಂಯಮ, ಮುಂತಾದ ಸಾತ್ವಿಕ ಗುಣಗಳನ್ನು ಅಂಕುರಿಸಿ ಅವುಗಳು ಸರಾಗವಾಗಿ ಬೆಳೆಯುವಂತೆ ನೋಡಿಕೊಳ್ಳುವುದು; ಮತ್ತು ಸ್ವಾರ್ಥಪರತೆ, ಅಲಿಪ್ತತೆ, ದುಃಖ ಮುಂತಾದ ಒಹು ಭದ್ರವಾಗಿ ಕೋಟೆಗಳನ್ನು ಕಟ್ಟಿಕೊಂಡು ಯುದ್ಧ ಮಾಡುವ ದುರ್ಗುಣಗಳನ್ನು ನಿಗ್ರಹಮಾಡಲು ಪ್ರಯತ್ನಿಸಲು ಒಂದೆರಡು ಸೋಲು ಬಂತೆಂದು ಕಾಲು ಹಿಂತೆಗೆಯದೆ, "ಪರರು ತನಗೆ, ತಾನು ಪರರಿಗೆ" (All for each, Each for all) ಎಂಬ ಬೀಜಾಕ್ಷರಗಳನ್ನು ಜಪಿಸುತ್ತ ಧೀರತೆಯನ್ನು ತಾಳುವುದು.

ಸಭಾ ಕಾರ್ಯವೆಲ್ಲ ಬಹು ಚೆನ್ನಾಗಿ ಪರಿಣಮಿಸಿತು. ಆದರೆ ಎರಡನೆ ದಿನದಲ್ಲಿ ಠರಾವುಗಳನ್ನು ಚರ್ಚಿಸುವ ಸಮಯ ಮ॥ ರಾ॥ ಯು. ಸಿ. ಕೃಷ್ಣಭಟ್ಟರು ಧಾರಾಳವಾಗಿಯೂ ಶಾಂತವಾಗಿಯೂ ಹರಿಯುವ ಪ್ರವಾಹದಲ್ಲಿ ಒಂದೆರಡು ತೆರೆಗಳನ್ನು ಎಬ್ಬಿಸಿ ಬಿಟ್ಟರು. ಮ॥ ರಾ॥ ವಿಟ್ಠಲಕಾಮತರು ಸಭೆಯ ಮುಂದಿಟ್ಟ ಠರಾವಿನಲ್ಲಿ ಈಗ ಇರುವ ಪರಸ್ಪರ ಸಂಘಗಳ ಇಲಾಖೆಯು ದಿನೇ ದಿನೇ ವರ್ಧಿಸುವ ಸಂಘಗಳ ಸಂಖ್ಯೆಯ ಮೇಲ್ವಿಚಾರವನ್ನು ಸಮಾಧಾನಕರವಾದ ರೀತಿಯಲ್ಲಿ ಮಾಡುವುದಕ್ಕೆ ಸಾಕಾಗಿಲ್ಲವೆಂತಲೂ, ಈಗಲೇ ಈ ಇಲಾಖೆಗೆ ಖರ್ಚು ಹೆಚ್ಚು ತಗಲುತ್ತದೆಂತಲೂ, ಪೆನ್‌ಶನ್ ಹೊಂದಿದವರನ್ನೂ, ಇತರ ಸದ್ಗೃಹಸ್ಥರನ್ನೂ, ಅಸಿಸ್ಟಾಂಟ ರಿಜಿಸ್ಟ್ರಾರರಾಗಿ ಗೌರವಾರ್ಥವಾಗಿ ನೇಮಿಸಬಹುದೆಂತಲೂ ಸೂಚಿಸಿದರು. ನೆರೆದ ಜನರಿಗೆ ತನ್ನಲ್ಲಿ ಸರಕಾರದವರ ಮೇಲೆ ಇರುವ ವಿಶ್ವಾಸವು ಅಪಾರವಾದ್ದೆಂತ ಹೇಳುವದೇ ಮ॥ ರಾ॥ ಕೃಷ್ಣಭಟ್ಟರ ಉದ್ದೇಶವಾಗಿದ್ದರೆ ನಾವು ಅದಕ್ಕೆ ಪ್ರತ್ಯುತ್ತರ ಹೇಳಲಾರೆವು. ಆದರೆ ಅನೇಕಾನೇಕ ಪೆನ್‌ಶನದಾರರು ಸರಕಾರಿ ಕೆಲಸದಿಂದ ನಿವೃತ್ತರಾದ ಮೇಲೂ ಬೇರೆ ಬೇರೆ ರೀತಿಗಳಲ್ಲಿ ಜನೋಪಕಾರದ ಸಂಸ್ಥೆಗಳಲ್ಲಿ ಮನಃಪೂರ್ತಿಯಾಗಿ ಪ್ರಯತ್ನಗೊಳ್ಳುತ್ತಿರುವಾಗ ಪೆನಶನ್‌ದಾರರು ಈ ಕೆಲಸಕ್ಕೆ ಅಯೋಗ್ಯರೆಂಬದಾಗಿ ವಾದಿಸುವುದು ಪ್ರಶಸ್ತವೆಂದು ನಮಗೆ ಗೊತ್ತಾಗುವುದಿಲ್ಲ. ಆದರೆ ಈ ವಿಷಯವಾಗಿ ಸಭಾಧ್ಯಕ್ಷರೇ ಖಂಡಿಸಿ ಮಾತನಾಡಿರುವುದರಿಂದ ನಾವು ಬೇರೆ ಹೇಳಬೇಕಾದ್ದಿಲ್ಲ.

ಕೆಲವು ಉಪನ್ಯಾಸಗಳನ್ನು ಓದಲಿಕ್ಕೆ ಸಮಯವಿಲ್ಲದ ಕಾರಣ ಅವುಗಳನ್ನು ಮುದ್ರಿಸಿ ಹಂಚಿಸಿರುವರು. ಅಂಥವುಗಳಲ್ಲಿ ಮುಖ್ಯವಾದವುಗಳನ್ನು ಕನ್ನಡಿಸಿ ಪ್ರಕಟಗೊಳಿಸುವುದು ಅತಿ ಅಗತ್ಯ.

ಸಭೆಯ ಮುಂದೆ ಎರಡನೆ ದಿನ ಇಟ್ಟ ಠರಾವುಗಳಲ್ಲಿ ಶಾಲಾ ಮಕ್ಕಳ ಸಂಘಗಳ ವಿಷಯವಾಗಿ ಆದ ನಿರ್ಣಯವನ್ನು ಸಭಾಧ್ಯಕ್ಷರು ಅಷ್ಟು ಮನ್ನಿಸಿದಂತೆ ತೋರುವುದಿಲ್ಲ. ಶಾಲಾ ಮಕ್ಕಳಲ್ಲಿ ಒಂದೊಂದು ಸಲ ಶಾಲೆಯಲ್ಲಿ ಕಲಿತ ವಿಷಯಗಳ ಮೇಲೆ ಅಗೌರವತೆಯು ಉಂಟಾಗುವದುಂಟು. ಇದಲ್ಲದೆ ಶಾಲಾ ಮಕ್ಕಳಿಗೆ ಅಗತ್ಯವಿರುವ ದ್ರವ್ಯಾನುಕೂಲವನ್ನು ಮಾಡುವ ಸಾಹುಕಾರರು ವಿರಳವೆಂಬುದಾಗಿ ಅವರು ಅಭಿಪ್ರಾಯಪಡುತ್ತಾರೆ. ಆದರೆ ಈ ಕಾರಣಗಳು ವಿಶೇಷಕರವಾಗಿ ಬಾಧಿಸಲಾರದೆಂದು ನಾವು ತಿಳಿಯುತ್ತೇವೆ. ರಾವ್‌ಸಾಹೇಬ್ ಆರ್. ಜಿ ನಾಯಕರು ಈ ವಿಷಯವಾಗಿ ಬರೆದ ಉಪನ್ಯಾಸವನ್ನು ಓದಿದಲ್ಲಿ 'ಬೆಳೆಯ ಸಿರಿ ಮೊಳೆಯಲ್ಲಿಯೆ ಕಾಣಬೇಕ' ಎಂದು ಅವರು ಪಡುವ ಅಭಿಪ್ರಾಯವು ಸರಿಯಾದ್ದೆಂದು ಕಾಣುತ್ತದೆ.

ಮ॥ ರಾ॥ ಸದಾಶಿವ ಭಟ್ಟರು (ಕಾರ್ಕಳ) ಮುಂದಿಟ್ಟ ಠರಾವಿನಲ್ಲಿ ೪ನೆ ಭಾಗವು ಸರಕಾರಿ ಸಹಾಯವನ್ನು ಅಪೇಕ್ಷಿಸುತ್ತದೆ. ಈಗ ಒಪ್ಪಂದದ ಪ್ರಕಾರ ಸಾಲಗಾರನು ಸಂಘಕ್ಕೆ ೯ ರೂ. ೬ ಆಣೆ ದರದಲ್ಲಿ ಬಡ್ಡಿ ಕೊಡುವವನಾಗಿದ್ದರೆ ಅವನ ಮೇಲೆ ವ್ಯಾಜ್ಯ ಮಾಡಿದಾಗ ಡಿಕ್ರಿ ತಾರೀಕಿನಿಂದ ೬ ರೂ. ದರದಲ್ಲಿ ಬಡ್ಡಿ ಹೊರಿಸಿ ಮುನ್ಸಿಫರು ತೀರ್ಪು ಮಾಡುವುದಾದರೆ ಕ್ಲಪ್ತಕಾಲದಲ್ಲಿ ಸಾಲವನ್ನು ಪರಿಹರಿಸಬೇಕೆಂಬ ಬುದ್ಧಿ ಸಾಲಗಾರನಿಗೆ ಎಲ್ಲಿ ಬಂದೀತು? ಇದಕ್ಕೆ ಸರಕಾರವು ಸಹಾಯಮಾಡಿದಂತಾಗುವ ಕಾರಣ ಕಾಯಿದೆಯಲ್ಲಿ ಬದಲಾವಣೆ ಮಾಡಬೇಕೆಂದು ಸಭೆಯವರು ಕೇಳಿಕೊಂಡುದು ನ್ಯಾಯವಾಗಿದೆ. ಈ ವಿಷಯದಲ್ಲಿ ಸರಕಾರದವರು ಗಮನಕೊಡುವುದೂ ಸಹಜವಾಗಿದೆ.

ಈ ಎರಡು ದಿನಗಳಲ್ಲಿ ಎಲ್ಲವನ್ನು ಸರಿಯಾಗಿ ನಡೆಯಿಸಿದ ಮಾತ್ರದಿಂದಲೇ ಕೃತಕೃತ್ಯರಾದೆವೆಂದು ಭಾವಿಸಿದರೆ ಸಹಕಾರ ಸಮಾಜವು ತಮ್ಮ ಜವಾಬ್ದಾರಿಗಳನ್ನು ಪೂರ್ಣ ತಿಳಿಯಲಿಲ್ಲವೆಂದೇ ಹೇಳಬೇಕು. ಅವರು ಈ ವರೆಗೆ ಮಾಡಿದ ಕಾರ್ಯಭಾಗವು ಕೊಂಚವೇ ಸರಿ. ಅಧ್ಯಾತ್ಮ ನಿದ್ರೆಯಿಂದ ಫಕ್ಕನೆ ಶಂಖ ನಾದ ಕೇಳ್ಕಿ ಎಚ್ಚರಿಸಿದವರು ಮೈಮುರಿದು ಏಳದೆ, ಅಲ್ಲೆ ಇನ್ನೊಮ್ಮೆ ಗಾಢನಿದ್ರಾವಶರಾದರೆ ಇವರ ಪ್ರಯತ್ನಗಳೆಲ್ಲ ನಿಷ್ಫಲವೇ ಸರಿ.

"ಋಣಜಾಲದಲಿ ಸಿಲುಕಿ, ಹಣದುಮ್ಮಳದಿ ಕಲುಕಿ |

ಕ್ಷಣಕ್ಷಣಕೆ ಕಷ್ಟದಲಿ ಬಳಲಿದ"ವರಿಗೆ 'ಕೈಗೊಟ್ಟು, ಸಾಹಾಯ್ಯಧ್ವಜನೆಟ್ಟು, ಕೊಳುಗುಳದಿ ದಾರಿದ್ರ್ಯ ವೈರಿಯನು ಕೊಂದು, ಇಳೆಯು ಶಾಂತಿಯ ತಾಳೆ, ಬಳೆದು ತೃಪ್ತಿಯ ಬಾಳೆ, ಭಳಿರೆ! ಭಾರತ ವರ್ಷ ಸೌಭಾಗ್ಯವೆಂದು!!" ಎಂಬುದನ್ನು ಚೆನ್ನಾಗಿ ದಿಟಮಾಡಿಕೊಂಡು, ಒಬ್ಬನನ್ನು ನೋಡಿದಾಗಲೇ, ಅವನ ವರ್ತನೆಯಿಂದಲೇ ಅವನು ಸಹಕಾರ ಸಮಾಜದಿಂದ ಉದ್ಧರಿಸಲ್ಪಟ್ಟವನು ಎಂದು ಕಂಡು ಹಿಡಿಯಲು ಸಾಧ್ಯವಾಗುವಂತೆ ಪ್ರಯತ್ನಿಸಿ, "ಪರರು ತನಗೆ, ತಾನು ಪರರಿಗೆ" "All for each, Each for all" ಎಂಬ ಬೀಜಾಕ್ಷರಗಳನ್ನು ಸದಾ ಸಾರ್ವದಾ ಈ ಸಹಕಾರ ಸಮಾಜವು ಜಪಿಸುತ್ತಿರಲೆಂದು ನಾವು ಕೋರುತ್ತೇವೆ.

~~~~~~

The following is the text of the speech delivered by Mr M. E. Couchman, I. C. S., Collector of S. Canara on 3rd Apri, when he presided over the School Day in the Canara High School. On that occasion he also unveiled the portrait of the late Mr. A. Vasudeva Pai.

I think it was a good idea of Mr. A. Srinivasa Pai of combining the School Day and the unveiling of the portrait of the late Mr. A. Vasudeva Pai. I know Mr. Vasudeva Pai myself although he was not Sheristedar under me. I have great pleasure in having an opportunity of paying a tribute to the memory of one who was a man of honour and unusual tact. He entered public service on a very humble salary which a man of the present day would despise as being quite insufficient even to pay the cost of his clothes, and simply by his own merit he became Hazur Sheristedar. He had great innate abilities and force of character. The efficiency and continuity of the District administration depends to a great extent upon the Hazur Sheristedar who is the Mantri of the Collector. Mr. Vasudeva Pai made in many respects an ideal Sheristedar, and the younger generation will do well to study and copy the traits which enabled him to succeed in life.

I say that your school, where the members of your community are educated, has done much useful work; and the one thing which I look upon with dissatisfaction is its financial condition. The small amount of income from endowment received by you is a matter for regret. I will suggest, however, that the amount of Rs. ೪೦,೦೦೦ or so which was remitted to Tirupati may have been usefully diverted in aid of the School.

As this is the last opportunity I may have to do so, I should like to offer a little advice to the Community which started the School. I think you are the leading community in the District, in Government service, in the learned professions and in trade. Whatever enemies say, this position has been won by many sterling qualities—industry, perseverance, and frugality and simplicity of life, added to natural abilities. Though I am a Government servant myself, I believe Government service and the learned professions have a debilitating influence upon a community; and resource and initiative are developed by the trading classes, as they can never be in Government service. I am told that something of a barrier is growing in your community between the official class, and the merchant class, between worshippers of Laxmi and the worshippers of Saraswati. You have both to learn much from each other. The merchant classes do not realise that it is only the man of liberal education that can understand the
~~~~~~

onomic currents going on outside India, a right appreciation of which alone will enable him to carry on commerce successfully on a large scale. I hope the merchant will in future retain the son of bright university career in his own business, and send the duller son to Government service. I have sometimes asked young men "Who is your father?" and the answer came in an apologetic tone, "Oh, he is a petty trader!" Then I think I can see before my mind's eye, the hardworking and frugal father of the boy sitting all day in his shop and doling his articles to the passers by. He spares even from his necessaries to provide for the education of his boy, who wastes his time and spends on luxuries, the hard earned mounds of his father. Both the official classes and the merchant classes have a great deal to learn from each other, and the sooner they do so, the better.

Your community will in all probability, find life's struggle harder in the near future and you must therefore search your weak-points, and buckle yourselves up, to get rid of them. One of these points is female education. The death of leaders like Messrs. A. Subba Rau and A. Vasudeva Pai is a great loss to your community. Advice can be given by anybody; but the advice of only that man will be followed who is distinctly conspicuous for his self-sacrifice, as were these two leaders of yours. I hope such persons will again be born to uplift their fellow country-men.

ಕೆನರಾ ಹೈಸ್ಕೂಲು ವರ್ಧಂತಿ ದಿನ ಕಲೆಕ್ಟರ ದೊರೆಗಳವರು ಕೊಟ್ಟ ಭಾಷಣದ ಸಾರಾಂಶ.

ಮ! ರಾ! ಅ. ಶ್ರೀನಿವಾಸಪೈಗಳು ಶಾಲಾ ವರ್ಧಂತಿಯನ್ನೂ ಕೀರ್ತಿಶೇಷ ಮ! ರಾ! ಅ. ವಾಸುದೇವಪೈಗಳ ಭಾವಚಿತ್ರ ಪ್ರತಿಷ್ಠೆಯನ್ನೂ ಒಂದೇ ದಿವಸ ಜರಗಿಸಿದ್ದು ಚೆಲೋದಾಯಿತೆಂತ ಎಣಿಸುತ್ತೇನೆ. ಮ! ರಾ! ವಾಸುದೇವಪೈಗಳವರು ನನ್ನ ಕೈಕೆಳಗೆ ಶಿರಸ್ತೆದಾರರಾಗಿರಲಿಲ್ಲವಾದರೂ ನಾನು ಅವರನ್ನು ಸ್ವತಹಾ ಬಲ್ಲೆನು. ಮಾನ್ಯನೂ ಅಸಾಧಾರಣ ಪ್ರತ್ಯುತ್ಪನ್ನಮತಿಯೂ ಆಗಿದ್ದ ಪುರುಷನನ್ನು ಪ್ರಶಂಸಿಸಲು ಸಂದರ್ಭ ದೊರಕಿದ ಕುರಿತು ಬಹಳ ಸಂತೋಷಪಡುತ್ತೇನೆ. ಈಗಿನವರಾದರೋ ಅದು ತನ್ನ ಉಡುಪಿನ ಖರ್ಚಿಗೆ ಸಾಲದೆಂದು ತುಚ್ಛೀಕರಿಸುವಷ್ಟು ಅತ್ಯಲ್ಪ ತಲಪಿನ ಸರಕಾರಿ ಹುದ್ದೆಯನ್ನು ಮ! ರಾ! ಪೈಗಳು ಪ್ರಥಮದಲ್ಲಿ ಅಂಗೀಕರಿಸಿ ತನ್ನ ಯೋಗ್ಯತೆಯ ಬಲದಿಂದಲೇ ಹಜೂರ ಶಿರಸ್ತೆಯನ್ನೇರಿದರು. ಅವರಲ್ಲಿ ಹೆಚ್ಚಿನ ಸ್ವಾಭಾವಿಕ ಸಾಮರ್ಥ್ಯವೂ ಗುಣದಾರ್ಢ್ಯವೂ ಇದ್ದವು. ಜಿಲ್ಲೆಯ ಆಡಳಿತೆಯು ನಿರ್ದುಷ್ಟವಾಗಿಯೂ ಸಂಬದ್ಧವಾಗಿಯೂ ಸಾಗಬೇಕಾದರೆ ಬಲುಮಟ್ಟಿಗೆ ಕಲ್ಲೆಕ್ಟರರಿಗೆ ಮಂತ್ರಿಯಂತಿರುವ ಹಜೂರ ಶಿರಸ್ತೆದಾರರು ಸಮರ್ಥರಾಗಿರಬೇಕು. ಮ! ರಾ! ವಾಸುದೇವಪೈಗಳು ಅನೇಕ ವಿಷಯಗಳಲ್ಲಿ ಅಗ್ರಗಣ್ಯ ಶಿರಸ್ತೆದಾರರಾಗಿದ್ದರು. ಮತ್ತು ಅವರ ಶ್ರೇಯಸ್ಸಿಗೆ ಕಾರಣವಾದ ಗುಣಗಳನ್ನು ಲಕ್ಷಕೊಟ್ಟು ಪರಿಶೀಲಿಸಿ ಅವನ್ನನುಸರಿಸುವದು ಯುವಕರಿಗೆ ಯುಕ್ತ ಕೆಲಸವಾಗಿದೆ.

ನಿಮ್ಮವರಿಗೆ ವಿದ್ಯಾಭ್ಯಾಸವೀಯುವ ನಿಮ್ಮ ಶಾಲೆಯು ಹೆಚ್ಚು ಪ್ರಯೋಜನಕರ ಕಾರ್ಯವಾಗಿದೆ. ಆದರಲ್ಲಿ ಅಸಂತುಷ್ಟಿಗೆ ಕಾರಣವಾದ ವಿಷಯವು ಸಂಸ್ಥೆಯ ಸಾಂಪತ್ತಿಕ ಸ್ಥಿತಿಯೇ. ದಾನ ಮೂಲಕವಾಗಿ ನಿಮಗೆ ದೊರೆತ ಅಲ್ಪ ಆದಾಯವು ಶೋಚನೀಯವಾಗಿದೆ. ತಿರುಪತಿಗೆ ಪಾಖರ್ವಣೆ ಮಾಡಿದ ಹೆಚ್ಚು ಕಡಿಮೆ ೪೦,೦೦೦ ರೂಪಾಯಿಗಳನ್ನು ಈ ಶಾಲೆಯ ವೃದ್ಧಿಗೆ ವಿನಿಯೋಗಿಸುವದು ಪ್ರಯೋಜನಕರವಾಗುತ್ತಿತ್ತು.

ನನಗೆ ಇನ್ನು ಸಂದರ್ಭ ದೊರಕದಿರಬಹುದಾದ ಕಾರಣ ಈ ಶಾಲೆಯನ್ನು ಸ್ಥಾಪಿಸಿದ ಜಾತಿವರ್ಗಕ್ಕೆ ಸ್ವಲ್ಪ ಬುದ್ಧಿವಾದ ಹೇಳಲಿಚ್ಛಿಸುವೆನು. ಸರಕಾರಿ ನೌಕರಿಯಲ್ಲಿಯಾಗಲಿ, ವಕೀಲಿ ಉದ್ಯೋಗಗಳಲ್ಲಿಯಾಗಲಿ, ವ್ಯಾಪಾರದಲ್ಲಿಯಾಗಲಿ ನಿಮ್ಮ ಸಮಾಜವು ಜಿಲ್ಲೆಯಲ್ಲಿ ಅಗ್ರಗಣ್ಯವೆಂದು ನಾನು ಎಣಿಸುತ್ತೇನೆ. ಪರಪಕ್ಷದವರು ಏನೂ ಹೇಳಲಿ, ಈ ಪದವಿಯನ್ನು ನೀವು—ಸ್ವಾಭಾವಿಕ ಸಾಮರ್ಥ್ಯ, ಉದ್ಯೋಗ ಸ್ಥಿರಪ್ರಯತ್ನ, ಮಿತವ್ಯಯ ಮೊದಲಾದ ಘನ ಗುಣಗಳಿಂದಲೇ ಸಂಪಾದಿಸಿರುವಿರಿ. ನಾನು ಸ್ವತಃ ಸರಕಾರಿ ನೌಕರನಾಗಿದ್ದರೂ ಸರಕಾರಿ ನೌಕರಿ, ವಕೀಲ ಉದ್ಯೋಗಗಳ ಪರಿಣಾಮವು ಸಮಾಜವನ್ನು ದುರ್ಬಲ ಪಡಿಸುವದು ಎಂದು ನಾನಾಗಿ ನಂಬುತ್ತೇನೆ. ಸರಕಾರಿ ನೌಕರಿಯಲ್ಲಿ ಸಾಧ್ಯವಿಲ್ಲದ ಸ್ವತಂತ್ರಮತಿಯನ್ನೂ ಸ್ವಾವಲಂಬನವನ್ನೂ ವ್ಯಾಪಾರಿಗಳು ಬೆಳಸುವರು. ಲಕ್ಷ್ಮಿಯ ಉಪಾಸಕರಾದ ವರ್ತಕವರ್ಗವೂ ಸರಸ್ವತಿಯ ಉಪಾಸಕರಾದ ಹುದ್ದೇದಾರರ ವರ್ಗಗಳೊಳಗೆ ವೈಷಮ್ಯವು ಬೆಳೆಯುವದೆಂದು ನಾನು ಕೇಳಿದ್ದೇನೆ. ನಿಮ್ಮಲ್ಲಿ ಒಂದು ವರ್ಗದವರು ಇನ್ನೊಂದು ವರ್ಗದವರಿಂದ ಹೆಚ್ಚು ಕಲಿಯಲಿಕ್ಕಿದೆ. ಪ್ರೌಢವಿದ್ಯಾಭ್ಯಾಸ ಮೂಲಕವೇ ಹಿಂದೂಸ್ಥಾನದ ಹೊರಗಣ ಸಾಂಪತ್ತಿಕ ವಿಷಯಗಳನ್ನು ತಿಳಿಯಬಹುದೆಂದೂ ಆ ತಿಳುವಳಿಕೆಯೇ ದೊಡ್ಡ ವ್ಯಾಪಾರಕ್ಕೆ ಆವಶ್ಯಕವೆಂದೂ ವ್ಯಾಪಾರಿ ವರ್ಗದವರು ಗ್ರಹಿಸುವದಿಲ್ಲ. ಇನ್ನು ಮುಂದೆ ವರ್ತಕರು ಪ್ರೌಢವಿದ್ಯೆಯಲ್ಲಿ ಪ್ರವೀಣರೆನಿಸಿದ ಮಕ್ಕಳನ್ನು ತಮ್ಮ ಕಸಬಿಗೆ ಇಟ್ಟುಕೊಂಡು ಇವರಷ್ಟು ಚುರುಕಲ್ಲದವರನ್ನು ಸರಕಾರಿ ನೌಕರಿಗೆ ಕಳುಹಿಸುವರೆಂದು ನಂಬುತ್ತೇನೆ. ನಾನು ಕೆಲವು ಸಾರೆ ಯುವಕರಿಗೆ ನಿಮ್ಮ ತಂದೆ ಯಾರು ಎಂತ ಕೇಳಿದಾಗ್ಯೆ "ಅವನು ಅಲ್ಪ ವ್ಯಾಪಾರಸ್ಥ"ನೆಂದು ದೀನಸ್ವರದಿಂದ ಉತ್ತರ ಕೊಡುತ್ತಿದ್ದರು. ಆಗ್ಯೆ ದಿನ ಇಡೀ ಶ್ರಮಪಡುವ ಕೈ ಎಳದು ಖರ್ಚುಮಾಡುವ ಆ ಹುಡುಗನ ತಂದೆಯು ಇಡೀ ಹಗಲು ತನ್ನ ಅಂಗಡಿಯಲ್ಲಿ ಕೂತು ಅತ್ತಿತ್ತ ಹೋಗುವ ಗಿರಾಕಿಗಳನ್ನು ಕರೆದು ಸಾಮಗ್ರಿಗಳನ್ನು ಮಾರುವುದು ನನ್ನ ಕಣ್ಣೆದುರು ಬರುತ್ತಿತ್ತು.

ಅವನು ತನ್ನ ಉದರಪೋಷಣದಿಂದ ಸಹ ಎಳದು ಮಗನ ವಿದ್ಯೆಗೆ ಕೂಡಿಸಿಡುತ್ತಾನೆ. ಈ ಮಗನು ತನ್ನ ಕಾಲವನ್ನು ವೃಥಾ ಕಳೆದು ತಂದೆಯು ಕಷ್ಟದಿಂದ ಕೂಡಿಟ್ಟ ಕಾಸನ್ನು ಮಂದುಗಾರಿಕೆಯಲ್ಲಿ ಖರ್ಚುಮಾಡುವನು. ನೌಕರರೂ ಸಾವುಕಾರರೂ ಒಬ್ಬರಿಂದೊಬ್ಬನು ಹೆಚ್ಚು ತಿಳಕೊಳ್ಳಲಿಕ್ಕಿದೆ. ಇದಕ್ಕೆ ಅವರು ಆದಷ್ಟು ಬೇಗ ಮನಸ್ಸು ಕೊಟ್ಟರೆ ಅದಷ್ಟು ಒಳ್ಳೆಯದು.

ಸ್ವಲ್ಪ ಕಾಲದಲ್ಲಿಯೇ ಜೀವನ ಕಲಹವು ನಿಮ್ಮ ಸಮಾಜಕ್ಕೆ ಕಷ್ಟಕರವಾಗಿ ತೋರಿಬರುವದು. ಆದ್ದರಿಂದ ನೀವು ನಿಮ್ಮ ಕೊರತೆಗಳನ್ನು ಕಂಡುಕೊಂಡು ಅವನ್ನು ಹೋಗಲಾಡಿಸಲು ಸೊಂಟಕಟ್ಟಬೇಕು. ಇವುಗಳಲ್ಲಿ ಒಂದು ಸ್ತ್ರೀ ಶಿಕ್ಷಣವು. ಮ! ರಾ! ಅ. ಸುಬ್ರಾಯಪೈಗಳು ವಾಸುದೇವ ಪೈಗಳಂತಹರ ನಿರ್ಯಾಣವು ನಿಮ್ಮ ಸಮಾಜಕ್ಕೆ ದೊಡ್ಡ ನಷ್ಟವೇ ಸರಿ. ಬುದ್ಧಿವಾದವನ್ನು ಯಾರೂ ಹೇಳಬಲ್ಲರು. ಆದರೆ ಈ ಮಹಾತ್ಮರಂತೆ ಬುದ್ಧಿವಾದದೊಡನೆ ಪ್ರತ್ಯಕ್ಷವಾದ ಸ್ವಾರ್ಥತ್ಯಾಗವನ್ನು ಯಾರು ತೋರುವರೋ ಅಂಥವರ ಮಾತನ್ನು ಜನರು ಅನುಸರಿಸುವರು. ತಮ್ಮ ದೇಶಬಾಂಧವರ ಅಭಿವೃದ್ಧಿಗಾಗಿ ಅಂತಹ ಪುರುಷರು ಇನ್ನೊಮ್ಮೆ ಜನಿಸುವರೆಂದು ಕೋರುವೆನು.

ಕೊಯಮುತ್ತೂರು ಸರ್ಕಲ್ ಪರಸ್ಪರ ಸಹಾಯಕ ಪರಿಷತ್ತು.

ತೃತೀಯ ಸಭೆ.

ಈ ಸಭೆಯು ಮಂಗಳೂರು ಗವರ್ನಮೆಂಟ್ ಕಾಲೇಜ್ ಸಭಾಸದನದಲ್ಲಿ ಇದೇ ಎಪ್ರಿಲ್ ೫, ೬ನೇ ತಾರೀಕುಗಳಲ್ಲಿ ಮಹಾ ಸಮಾರಂಭದಿಂದ ಜರಗಿತು. ಕೊಯಮುತ್ತೂರು ಸರ್ಕಲಿನ ಪರಸ್ಪರ ಸಹಾಯ ಸಂಘಗಳ ಪರವಾಗಿ ಸುಮಾರು 150ಕ್ಕೆ ಮಿಕ್ಕಿ ಪ್ರತಿನಿಧಿಗಳೂ, ಇಲಾಖೆಯ ಪರವಾಗಿ ಇಲಾಖೆಯ ರಿಜಿಸ್ತ್ರಾರರಾದ ಬಹುಮಾನಪಟ್ಟ ಎಲ್. ಡಿ. ಸ್ವಾಮಿಕಣ್ಣುಪಿಳ್ಳೆ ಎಮ್. ಎ. ಎಲ್. ಎಲ್. ಡಿ. ಇವರೂ ಇವರ ಕೈಕೆಳಗಿನ ಅಸಿಸ್ಟಾಂಟ ರಿಜಿಸ್ತ್ರಾರರೂ, ಕೊಚ್ಚಿ ರಾಜ್ಯದ ರಿಜಿಸ್ತ್ರಾರರೂ, ಮೈಸೂರಿನ ರಿಜಿಸ್ತ್ರಾರರೂ ದಯಮಾಡಿಸಿದ್ದರು. ಈ ಜಿಲ್ಲೆಯ ಕಲೆಕ್ಟರರು, ಜಡ್ಜರು ಮುಂತಾದ ಹಲವು ಸರಕಾರಿ ಉದ್ಯೋಗಸ್ಥರೂ, ಪೆನ್‌ಶನ್‌ದಾರರೂ, ಇತರ ಸದ್ಗೃಹಸ್ಥರೂ, ಪ್ರೇಕ್ಷಕರಾಗಿ ಬಂದಿದ್ದರು. ೫ನೇ ತಾರೀಕಿನ ದಿನ ಪೂರ್ವಾಹ್ನ ೧೧ ಗಂಟೆಗೆ ಸರಿಯಾಗಿ ಎಲ್ಲರೂ ನೆರದೊಡನೆ ಪರಸ್ಪರ ಸಹಾಯವನ್ನು ಉದ್ದೇಶಿಸಿ ಕೆಲವು ಪದ್ಯಗಳನ್ನು ಗಣಪತಿ ಸೆಕಂಡರಿ ಶಾಲೆಯ ಕೆಲವು ಮಕ್ಕಳು ಹಾಡಿದನಂತರ, ಖಾನ್‌ಸಾಹೇಬ್ ಹಾಜಿ ಅಬ್ದುಲ್ಲಾ ಹಾಜಿ ಕಾಸಿಮ್ ಸಾಹೇಬ ಬಹದ್ದೂರರವರು ಈ ಪರಿಷದಕ್ಕೆ ಅಧ್ಯಕ್ಷರಾಗಲು ಸಮ್ಮತಿಸಿದ, ಮದ್ರಾಸು ಸರಕಾರದಕಾರ್ಯನಿರ್ವಾಹಕ ಸಭೆಯ (Executive Council) ಮೆಂಬರರಾದ ಬಹುಮಾನಪಟ್ಟ ಎ. ಜಿ. ಕಾರ್ಡ್ಯೂ ಎಮ್. ಎ. ಸಿ. ಯಸ್. ಐ. ಐ. ಸಿ. ಎಸ್ ಇವರ ಹೃದಯ ವಿಕಾಸವನ್ನೂ, ಉದಾರ ಬುದ್ಧಿಯನ್ನೂ ಕೊಂಡಾಡಿ, ಈ ಮಹಾ ಪುರುಷರ ಆಗಮನಕ್ಕೂ ಇತರ ಎಲ್ಲಾ ಪ್ರತಿನಿಧಿಗಳೂ ಪ್ರೇಕ್ಷಕರೂ ಪ್ರಯಾಣದ ತೊಂದರೆಗಳನ್ನು ಮನಸ್ಸಿಗೆ ತಾರದೆ ಇಷ್ಟು ದೂರ ಬಂದು ಈ ಸುಕಾರ್ಯವನ್ನು ಛಂದಗಾಣಿಸಿದ್ದಕ್ಕೂ ಈ ಜಿಲ್ಲೆಯ ಸ್ವಾಗತ ಕಮಿಟಿಯವರು ತಮ್ಮ ಹೃತ್ಪೂರ್ವಕವಾದ ವಂದನೆಯನ್ನು ಅರ್ಪಿಸುತ್ತಾರೆಂದು ಸೂಚಿಸುವ ಸ್ವಾಗತ ಪತ್ರವನ್ನು ಗಂಭೀರ ಸ್ವರದಿಂದ ಓದಿದರು. ಈ ಸ್ವಾಗತ ಪತ್ರದಲ್ಲಿ ಪರಸ್ಪರ ಸಹಾಯದ ಸಂಘಗಳ ಉದ್ಭವ, ಪ್ರಕೃತದ ಸ್ಥಿತಿ, ಇವುಗಳ ಮುಂದಿನ ವೃದ್ಧಿಯ ಉಪಾಯ ಮುಂತಾದ ಅನೇಕ ವಿಷಯಗಳು [illegible] ಯಾಗಿ ವಿಮರ್ಶಿಸಲಾಗುವುದು.

ಅನಂತರ ಉಡುಪಿಯ ವಕೀಲ ಮ॥ ರಾ॥ ಎಮ್. ವಿಟ್ಠಲ ಕಾಮತ್ ಬಿ. ಎ. ಬಿ. ಎಲ್. ಇವರು ಸುರಸವಾದ ಕೆಲವು ಮಾತುಗಳಿಂದ ಅಧ್ಯಕ್ಷರನ್ನು ಅಧ್ಯಕ್ಷಸ್ಥಾನ ವಹಿಸಬೇಕಾಗಿ ಕೇಳಿಕೊಂಡರು. ಕೊಯಮುತ್ತೂರು ಅರ್ಬನ್ ಬೇಂಕಿನ ಸೆಕ್ರೆಟರಿಗಳಾದ ಸಿ. ಎಸ್. ಕೃಷ್ಣಸ್ವಾಮಿ ಅಯ್ಯರ್ ಎಮ್. ಎ. ಎಲ್. ಟಿ ಇವರು ಈ ಪ್ರಾರ್ಥನೆಯನ್ನು ತಾನೂ ಅನುಮೋದಿಸುವುದಾಗಿ ಹೇಳಿದ ಮೇಲೆ, ಕೈಚಪ್ಪಾಳೆಯಿಂದೊಡಗೂಡಿದ ಸರ್ವಾನುಮತಿಯಿಂದ ಮಿ। ಕಾರ್ಟ್ರ್ಯು ಸಾಹೇಬರವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು.

ಅನಂತರ ಸ್ವಾಗತ ಕಮಿಟಿಯ ಮಿ। ಸ್ವಾಮಿನ್ ಅಲ್ವಾರೀಸರು ತಮಗೆ ಸಂಸ್ಥಾನದ ಹಲವು ಕಡೆಗಳಿಂದ ಬೇರೆ ಬೇರೆ ಸದ್ಗೃಹಸ್ಥರು ಈ ಸಭೆಯಲ್ಲಿ ಹಾಜರಿರಲಿಕ್ಕೆ ಉಂಟಾದ ಅನಾನುಕೂಲತೆಯನ್ನು ಸೂಚಿಸಿಯೂ ಈ ಸಭೆಯ ಕಾರ್ಯಗಳು ಏನೊಂದು ಅಭ್ಯಂತರವಿಲ್ಲದೆ ನಡೆಯಲೆಂದು ಬಯಸಿಯೂ ಕಳುಹಿಸಿದ ತಂತೀ ಸಮಾಚಾರಗಳನ್ನು ಸಭೆಯ ಮುಂದಿಟ್ಟರು.

ಅನಂತರ ಬಹುಮಾನಪಟ್ಟ ಅಧ್ಯಕ್ಷರವರು ತಮ್ಮ ಭಾಷಣವನ್ನು ಕೊಟ್ಟರು. ಅವರ ಮಾತುಗಳ ತಾತ್ಪರ್ಯವೇನೆಂದರೆ.—ಪರಸ್ಪರ ಸಹಾಯದ ಮೂಲತತ್ವಗಳನ್ನು ಕರತಲವಾಗಿ ಮಾಡಿಕೊಂಡಿರುವುದನ್ನು ವ್ಯಕ್ತಪಡಿಸುವ, ಮತ್ತು ಪರಸ್ಪರ ಸಹಾಯದ "ಪೂಜ್ಯ ಉದ್ದೇಶ"ಗಳಲ್ಲಿ ತಮಗಿರುವ ಆಸಕ್ತಿಯನ್ನು ಸ್ಪಷ್ಟಗೊಳಿಸುವ ಸ್ವಾಗತ ಕಮಿಟಿಯ ಅಧ್ಯಕ್ಷರ ವಾಗ್ಮಿತೆಯಿಂದ ಪ್ರೇಕ್ಷಕರಲ್ಲಿಯೂ ಇದೇ ರೀತಿಯ ಉತ್ಸಾಹವನ್ನು ಅಂಕುರಿಸದೆ ಇರಲಾರದು. ಉತ್ಸಾಹಕ್ಕೆ ಬೆಂಬಲವಾಗಿ ಜನರಲ್ಲಿ ಕರ್ತವ್ಯದಕ್ಷತೆಯೂ ಅಗತ್ಯವಾಗಿರುವುದರಿಂದ, ಅಂಥಾ ಕಾರ್ಯನಿಪುಣತೆಯೂ ಸ್ವಾರ್ಥತ್ಯಾಗ, ನಿಷ್ಕಲಂಕವಾದ ಸ್ವದೇಶಪ್ರೇಮವೂ ಉಳ್ಳ ಹಲವು ಗೃಹಸ್ಥರು ಈ ಉದ್ದೇಶಕ್ಕೆ ಕಂಕಣಬದ್ಧರಾಗಿ ಈ ಭಾಗಗಳಲ್ಲಿ ಮುಂದುವರಿಸಿರುವರು. ಈ ಸ್ವಾಗತ ಕಮಿಟಿಯ ಸೆಕ್ರೆಟರಿಯಾಗಿ ನನ್ನನ್ನು ಇಲ್ಲಿಗೆ ಆಮಂತ್ರಿಸಿದ ಪುತ್ತೂರಿನ ವಕೀಲ ಮ॥ ರಾ॥ ಎಮ್ ಶಿವರಾಯರು ಮುಂದಾಳಾಗಿರುವರು. ಪರಸ್ಪರ ಸಹಾಯದ ವಿಮರ್ಶೆಗಾಗಿ ಬಹುಮಾನಪಟ್ಟ ಇಂಡಿಯಾ ಗವರ್ನಮೆಂಟಿನವರಿಂದ ಏರ್ಪಡಿಸಿದ ಕಮಿಶನಿನವರ ಸಭೆಗೆ ಮದ್ರಾಸು ಗವರ್ನಮೆಂಟಿನ ಪರವಾಗಿ ಸರಕಾರಿ ಉದ್ಯೋಗಸ್ಥರಲ್ಲದ ಪ್ರತಿನಿಧಿಗಳನ್ನು ಕಳುಹಿಸುವುದಕ್ಕೆ ಸಾಧ್ಯವಿದ್ದರೆ ಮ॥ ರಾ॥ ಶಿವರಾಯರಷ್ಟು ಯೋಗ್ಯರಾದವರು ಗವರ್ನಮೆಂಟಿನವರಿಗೆ ದೊರಕಲಾರರು ಎಂದು ತಾನು ಹೇಳಿದರೆ ಈ ಶಿವರಾಯರ ಮುಖಸ್ತುತಿ ಮಾಡಿದಂತಾಗದು. ಈ ಸಭೆಗೆ ಅಧ್ಯಕ್ಷನಾಗಲಿಕ್ಕೆ ನನ್ನ ಯೋಗ್ಯತೆಯನ್ನು ವರ್ಣಿಸುವುದರಲ್ಲಿ ನನ್ನ ಮೇಲಿನ ಪ್ರೇಮವನ್ನು ನೀವು ತೋರ್ಪಡಿಸಿದ್ದಕ್ಕೆ ನಾನು ತುಂಬಾ ಋಣಿಯಾಗಿರುವೆನು. ಮತ್ತು ನನಗೆ ಮನಕಂಡ ಕೆಲವು ಸೂಚನೆಗಳನ್ನು ನಿಮ್ಮ ಮುಂದಿಡುವೆನು.

ವ್ಯವಸಾಯ ಮತ್ತು ಕೈಗಾರಿಕೆಗಳ ವೃದ್ಧಿಗೆ ಅತ್ಯಗತ್ಯವಾದ ದ್ರವ್ಯ ಸಹಾಯವನ್ನು ಒದಗಿಸಿಕೊಡುವ ಕೆಲಸವು ಈಗಿನ ಹಿಂದೂಸ್ಥಾನದ ಹಿಂದುಳಿದ ಸ್ಥಿತಿಯಲ್ಲಿ ಸುಲಭಸಾಧ್ಯವಲ್ಲ. ಅರ್ಧ ಶತಮಾನದಿಂದ ಈಚೆಗೆ ಪರರಾಜ್ಯಗಳಿಂದ ಈ ಪರವಾಗಿ ಒಕ್ಕಿದ ದ್ರವ್ಯವು ಬಹಳವಾಗಿದ್ದರೂ ಅದು ಸಾಕಾಗಲಿಲ್ಲ. ಇಂತಹ ಸಂದರ್ಭಗಳಲ್ಲಿ ಗ್ರೇಟ್ ಬ್ರಿಟನಿನಿಂದ ಹೆಚ್ಚು ಹಣವು ಇಲ್ಲಿಗೆ ಒಂದುದು ಯೋಚನೀಯವಾಗಿದೆ. ಇದನ್ನು ತಗ್ಗಿಸುವುದು ಬೇಗನೇ ಸಾಧ್ಯವಾಗದಿದ್ದರೂ, ಹಿಂದುಸ್ಥಾನದಲ್ಲಿ ಚಿನ್ನ ಬೆಳ್ಳಿಯು ಒಡವೆಗಳ ಮೇಲೆ ವ್ಯಯ ಮಾಡುವ ಒಂದೇ ಒಂದು ಅಂಶವನ್ನಾದರೂ ಈ ವ್ಯವಸಾಯ ಕೈಗಾರಿಕೆಗಳ ಉದ್ಧರಣೆಗಳ ಕೆಲಸಕ್ಕೆ ಹಚ್ಚುವುದು ಅತ್ಯಗತ್ಯವೆಂದು ಜನಸಾಮಾನ್ಯದವರು ತಿಳಿದುಕೊಳ್ಳಬೇಕು. ಈ ಕೆಲಸದಲ್ಲಿ ಈ ಪರಸ್ಪರ ಸಹಾಯ ಸಂಘಗಳು ಉದ್ಯುಕ್ತರಾದುದು ಇಷ್ಟರ ವರೆಗೆ ವಿಶೇಷ ಫಲಕಾರಿಯಾಗದಿದ್ದರೂ ಮುಂದೆ ಹಿಂದುಸ್ಥಾನದ ಶ್ರೇಯೋಭಿವೃದ್ಧಿಗೆ ಕಾರಣವಾಗಬಹುದು.

ಸುಲಭ ದರದ ಬಡ್ಡಿಯಲ್ಲಿ ಹಣವನ್ನು ಸಾಲವಾಗಿ ಕೊಡುವುದೊಂದೇ ಈ ಪರಸ್ಪರ ಸಹಾಯ ಸಂಘಗಳ ಕರ್ತವ್ಯವಲ್ಲ. ಆ ಕೆಲಸಕ್ಕೆ ರಿಜಿಸ್ಟರಾದ ಬೇಂಕುಗಳನ್ನು ಮಾತ್ರ ಏರ್ಪಡಿಸಿದರೆ ಸಾಕಾಗಬಹುದಿತ್ತು. ಇದಲ್ಲದೆ ಸಾಲದ ಹೇತುವನ್ನು ತಿಳಿಯದೆ ಸುಲಭ ಬಡ್ಡಿಯಿಂದ ಹಣವನ್ನು ಒದಗಿಸಿದರೆ ಸುಲಭದಲ್ಲಿ ಸಿಕ್ಕಿದ ಹಣವನ್ನು ವಿಚಾರವಿಲ್ಲದೆ ದುರ್ವ್ಯಯಮಾಡಿಸಿ, ಸಾಲದ ಮೊಬಲಗನ್ನು ಹೆಚ್ಚಿಸುವುದೇ ರೀತಿಯಲ್ಲದೆ ಬಡರೈತರಿಗೆ ಅವರ ನೆಲಹೊಲಗಳನ್ನು ವೃದ್ಧಿ ಮಾಡುವುದಕ್ಕೂ ಬಡತನದಿಂದ ಉತ್ತೀರ್ಣರಾಗುವುದಕ್ಕೂ ಆಸ್ಪದ ಸಿಕ್ಕದು.

ಈ ಪರಸ್ಪರ ಸಹಾಯ ಸಂಸ್ಥೆಯ ಮುಖ್ಯ ಉದ್ದೇಶವು ಕೆಲವು ಸಾತ್ವಿಕ ಗುಣಗಳ ವೃದ್ಧಿಗೆ ಬರಬೇಕೆಂಬುದೇ. ಈ ಗುಣಗಳ ಮೂಲಬೀಜವು ಜನಸಾಮಾನ್ಯರಲ್ಲಿದ್ದರೆ ಮಾತ್ರವೇ ಈ ಸಂಸ್ಥೆಯು ಫಲದಾಯಕವಾಗುವುದು. 'ಆ ಗುಣಗಳು ಯಾವು? ಧೀರತೆ. ಪ್ರತಿಯೊಬ್ಬ ಸಹಕಾರಿಯು ತನ್ನ ಮನಸ್ಸಿನ ಅಭಿಪ್ರಾಯಗಳನ್ನು ಮರೆಮಾಚದೆ ನುಡಿಯುವುದಕ್ಕೆ ಧೀರತೆಬೇಕು. ಚಿತ್ತಸ್ವಾತಂತ್ರ್ಯ. ಇದು ಹತ್ತು ಜನರಿಂದ ಒಂದುಗೂಡಿಸಿದ ದ್ರವ್ಯ ಸಂಗ್ರಹದಿಂದ ಒಬ್ಬನಿಗಿಂತ ಇನ್ನೊಬ್ಬನು ವಿಶೇಷ ಪ್ರಯೋಜನ ಹೊಂದದಂತೆ ನೋಡಿಕೊಳ್ಳುವುದು. ಆತ್ಮಸಂಯಮ. ಒಬ್ಬರನ್ನು ಮೂಲೆಗೆ ತಳ್ಳಿ, ಇನ್ನೊಬ್ಬನು ಅಧಿಕಾರವನ್ನು ಒಲಕಾಯಿಸುವುದಕ್ಕೆ ಪ್ರಯತ್ನಿಸದಿರುವುದಕ್ಕೆ ಇದೇ ಅನುಕೂಲ. ಇಂಥಾ ಗುಣಗಳಿಗೆ ಪುಟವಿಟ್ಟಂತೆ ಆಗುವುದೇ ಈ ಸಂಘಗಳ ಮುಖ್ಯ ಹೇತು, ಮತ್ತು ಈ ಸಂಘಗಳ ಉದ್ದೇಶವು ಸಂಪೂರ್ಣ ನೆರವೇರಬೇಕಾದರೆ ಅವುಗಳನ್ನು ನಡಿಸುವವರ ಧೀರತೆ, ಸ್ವಾರ್ಥತ್ಯಾಗಗಳೇ ಕಾರಣವಾಗಿವೆ. ನಿಮ್ಮ ಸ್ವಾಗತ ಕಮಿಟಿಯ ಅಧ್ಯಕ್ಷರು ಯಾವ ಬೀಜಾಕ್ಷರಗಳನ್ನು ಉಚ್ಚರಿಸಿ ತಮ್ಮ ಪತ್ರವನ್ನು ಮುಗಿಸಿದರೋ ಆ "ಪರರು ತನಗೆ, ತಾನು ಪರರಿಗೆ" (All for each, and each for all) ಎಂಬ ಮಂತ್ರವು ಒಂದು ಬಾರಿಗೆ ಅತಿಶಯೋಕ್ತಿ ಎಂತಲೂ ಡಾಂಭಿಕನೆಂತಲೂ ಹಲವರು ಯೋಚಿಸಬಹುದು. ಯಾಕೆಂದರೆ ಲೋಕವ್ಯವಹಾರಗಳಲ್ಲಿ ಇತರರ ಪ್ರಯೋಜನಕ್ಕಾಗಿಯೇ ಎಲ್ಲರೂ ಸಾಹಸ ಮಾಡುವುದೂ ಅಥವಾ ಒಬ್ಬನು ಇತರರ ಹಿತಕ್ಕಾಗಿ ತನ್ನ ಸರ್ವಸ್ವವನ್ನೂ ವಿನಿಯೋಗಿಸುವುದೂ ವಿರಳ. ಆದರೆ ಸಹಕಾರವು ನಿಜವಾಗಿಯೂ ಬೇರೂರ ಬೇಕಾದರೆ ಪ್ರತಿಯೊಬ್ಬ ಸಹಕಾರಿಯೂ ಸರ್ವರ ಹಿತದಲ್ಲಿ ತನ್ನದೊಂದೇ ಹಿತವನ್ನು ಮರೆಮಾಚಬೇಕು. ಈ ಸಾತ್ವಿಕ ತತ್ವಗಳು ಪ್ರಚಾರಕ್ಕೆ ಬಂದ ವಿನಹಾ ಸಂಘಗಳಲ್ಲಿ ಬರೆ ದ್ರವ್ಯಾನುಕೂಲವನ್ನು ಮಾತ್ರ ಹೆಚ್ಚಿಸುವುದರಿಂದ ಹೆಚ್ಚಿನ ಪ್ರಯೋಜನವಾಗಲಾರದು.

ಈಗ ಮದ್ರಾಸು ಸಂಸ್ಥಾನದಲ್ಲಿ ಈ ಸಂಸ್ಥೆಗಳಲ್ಲಿರುವ ಕುಂದುಗಳನ್ನು ಪರ್ಯಾಲೋಚಿಸೋಣ. ಸೆಂಟ್ರಲ್ ಅರ್ಬನ್ ಬೇಂಕುಗಳಿಗೆ ಹಣ ಒದಗಿಸಿದವರು ತಮಗೆ ಸರಿಯಾದ ಬಡ್ಡಿ ಏನೊಂದು ತೊಡಕಿಲ್ಲದೆ ಸಿಕ್ಕಬಹುದೆಂಬ ಒಂದು ಅಭಿಲಾಷೆಯಿಂದಿರುವರಲ್ಲದೆ ನಿಷ್ಕಲವಾದ ಸಹಕಾರ ಬುದ್ಧಿಯಿಂದೊಡಗೂಡಿದವರಲ್ಲ. ಅವರಲ್ಲಿ ಆ ತಿಳಿವಳಿಕೆ ನಿಜವಾಗಿಯೂ ಬಂದಿದ್ದರೆ ಅವರು ತಮ್ಮ ಹಣವನ್ನು ಸಾಲವಾಗಿ ಪಡೆಯುವ ಸಂಘಗಳ ಮೇಲ್ವಿಚಾರಣೆಯ ಕೆಲಸವನ್ನು ತಾವೇ ಕೈಕೊಳ್ಳುತ್ತಿದ್ದರು. ಹಾಗೆ ಮಾಡದಿದ್ದರೆ ಈ ಸೆಂಟ್ರಲ್ ಬೇಂಕುಗಳಿಗೂ ಇತರ ಬೇಂಕುಗಳಿಗೂ ಭೇದವೇನು? ಯಾವ ಸಹಕಾರದ ಕರ್ತವ್ಯವನ್ನು ಸಂಘಗಳು ಕೈಕೊಂಡಿರುವವೋ ಆ ಕಾರ್ಯಕ್ಕೆ ಹಾನಿಬಾರದಂತೆಯೂ ಸರಿಯಾದ ಉತ್ತೇಜನ ಸಿಕ್ಕುವಂತೆಯೂ ಆ ಸಂಘಗಳ ಮೇಲೆ ಕಣ್ಣಿಡುವುದೇ ಅರ್ಬನ್ ಸೆಂಟ್ರಲ್ ಬೇಂಕುಗಳ ಮುಖ್ಯ ಹೇತುವಾಗಿರಬೇಕು.

ಈ ವಿಷಯವನ್ನು ಮಧುರೆಯ ರಾವ್ ಸಾಹೇಬ್ ಕೆ ರಾಮಸ್ವಾಮಿ ಅಯ್ಯರರು ಬರೆದು ಇಲ್ಲಿ ಓದುವ ಬಗ್ಗೆ ಕಳುಹಿಸಿದ ಒಂದು ಉಪನ್ಯಾಸವು ಯೋಗ್ಯ ರೀತಿಯಿಂದ ಚರ್ಚಿಸುತ್ತದೆ. ಆದರೆ ಸಣ್ಣ ಸಂಘಗಳ ಎಲ್ಲಾ ವಹಿವಾಟುಗಳಲ್ಲಿಯೂ ಸೆಂಟ್ರಲ್ ಸಂಘದವರು ಪ್ರವೇಶವಾಗುವುದು ಅಗತ್ಯವೆಂದು ಅವರು ಹೇಳುವುದನ್ನು ಒಪ್ಪಲಾರೆವು. ಹಾಗೆ ಮಾಡುವುದರಿಂದ ಸಣ್ಣ ಸಂಘಗಳಿಗೆ ಇರುವ ಒಂದಿಷ್ಟು ಸ್ವಾತಂತ್ರ್ಯವೂ ತೊಲಗಿಹೋಗಿ, ಅದಕ್ಕೆ ಸೇರಿದವರ ಸ್ವಬುದ್ಧಿಯ ಹೊಳಪನ್ನು ಮುಸುಕು ಮಾಡಿಬಿಡುವುದು.

ಈ ಸಂದರ್ಭದಲ್ಲಿ ಸರಕಾರದವರ ಮೇಲ್ವಿಚಾರವು ಎಷ್ಟರ ಮಟ್ಟಿಗೆ ಇರಬೇಕೆಂಬುದನ್ನು ಆಲೋಚಿಸಬೇಕಾಗಿದೆ. ಇದಕ್ಕೆ ಅಗತ್ಯವಿರುವ ಕಾನೂನುಗಳನ್ನು ಏರ್ಪಡಿಸುವುದು, ಇದರ ಬಾಲ್ಯಾವಸ್ಥೆಯಲ್ಲಿ ಅಗತ್ಯವಿರುವ ಲಾಲನೆ ಪಾಲನೆ ಮಾಡುವುದು ಸರಕಾರದ ಕರ್ತವ್ಯವೆನ್ನಬಹುದು. ಆಗಾಗ ಈ ಸಂಸ್ಥೆಗಳ ಲೆಕ್ಕ ತನಿಖೆ ನಡಿಸಿ, ಅಂಥಾ ಕೆಲಸವನ್ನು ಅವು ತಾವಾಗಿಯೇ ಮಾಡುವಷ್ಟು ಸಮರ್ಥರಾಗುವ ವರೆಗೆ ಅವುಗಳನ್ನು ಸರಕಾರದವರು ಆಧರಿಸಲೂ ಬಹುದು. ಆದರೆ ಸದಾ ಸರ್ವದಾ ಅವು ಸರಕಾರಿ ಸಹಾಯವನ್ನು ಅವಲಂಬಿಸಿ ಜೀವಿಸುವುದಾದರೆ ಸ್ವಾವಲಂಬನಕ್ಕೆ ಎಡೆ ಎಲ್ಲಿದೆ? ಸಾಲಕೊಡುವ ಅಥವಾ ಯಾವುದೊಂದು ಬಗೆಯ ಸಂಘವು ಪರಸ್ಪರ ಸಹಕಾರದಿಂದ ಯಾವ ಚಿತ್ತಸ್ವಾತಂತ್ರ್ಯವನ್ನು ಹೊಂದಬೇಕೋ ಅದಕ್ಕೆ ಸರಕಾರಿ ಸಹಾಯವೆಂಬುದೇ ವಿರೋಧವಾಗಿದೆ. ಈ ಕಾರಣದಿಂದಲೇ ನಿಮ್ಮ ಸಂಘಗಳ ಕಾರ್ಯನಿರ್ವಾಹಕ್ಕೆ ಪರಸಹಾಯ ಅಪೇಕ್ಷಿಸದೆ ಮುಂದರಿಸಬೇಕು.

ಹಲವು ಸಂಘಗಳು ಕೂಡಿ ಒಂದು "ಯೂನಿಯನ್" ಆಗುವುದು ಒಳ್ಳೇದೆಂದು ನಿಮಗೆ ಸೂಚಿಸಲಿಕ್ಕೆ ಇದೇ ಮುಖ್ಯ ಕಾರಣವಾಗಿದೆ. ಸರಕಾರದವರು 'ಮಾಡುವಷ್ಟೆ ಭದ್ರವಾದ ರೀತಿಯಿಂದ ಈ "ಯೂನಿಯನ್"ಗಳು ಮೊತ್ತಮೊದಲು ಮೇಲ್ವಿಚಾರ ನಡೆಯಿಸಲಿಕ್ಕೆ ಶಕ್ತಿಯುಳ್ಳವರಾಗಲಿಕ್ಕಿಲ್ಲ. ಆದರೂ ಮೆಲ್ಲಮೆಲ್ಲಗೆ ಸರಕಾರದವರು ತಮ್ಮ ಅಧಿಕಾರವನ್ನು ಒಂದೊಂದಾಗಿ ಈ "ಯೂನಿಯನ್"ಗಳ [illegible]

ಕೊಟ್ಟು ಅವುಗಳನ್ನು ಸಾಕಷ್ಟು ತರಬೇತು ಮಾಡಿದರೆ ಈ ಸ್ವಾವಲಂಬನೆಯು ಮೆಲ್ಲ ಮೆಲ್ಲಗೆ ವೃದ್ಧಿಯಾಗುತ್ತ ಬರುವುದು. ಯಾವ ಕೆಲಸವೂ ಸರ್ಕಾರದಿಂದಲೇ ಆಗಬೇಕು ಎಂದು ಹೆಚ್ಚಾಗಿ ಜನರು ಹೇಳುವ ವಾಡಿಕೆಯಾಗಿದೆ. ಜನರಲ್ಲಿರುವ ಈ ಮೂಢತ್ವವನ್ನು ಹೋಗಲಾಡಿಸುವುದೇ ಈ ಸಹಕಾರ ಸಂಸ್ಥೆಗಳ ಪ್ರಥಮ ಉದ್ದೇಶ. ಯಾವ ವರೆಗೆ ಈ ಸಂಸ್ಥೆಗಳು ಕಾರ್ಯನಿರ್ವಾಹಕ್ಕೆ ಪೂರ್ಣವಾಗಿ ಸರಕಾರದ ಮೇಲೆಯೇ ಹೊಂದಿಕೊಂಡಿರುತ್ತವೋ ಆ ವರೆಗೆ ಸಹಕಾರ ಬುದ್ಧಿಯು ಇನ್ನೂ ಜನರಲ್ಲಿ ಅಂಕುರಿಸಲಿಲ್ಲವೆಂತಲೇ ಹೇಳಬೇಕಾಗಿದೆ.

ಪೂರ್ವ ಚರಿತೆಯನ್ನು ನೋಡಿದರೆ ಈ ಪರಸ್ಪರ ಸಹಕಾರವು ಹಿಂದುಸ್ಥಾನದಲ್ಲಿ ಗ್ರಾಮ ಪಂಚಾಯತರ ಸಂಸ್ಥೆಗಳಲ್ಲಿ ಪ್ರಬಲವಾಗಿ ಬಹುಕಾಲದಿಂದಲೂ ನೆಲೆಗೊಂಡಿತ್ತು ಎಂತ ಕಾಣುವುದು. ಮತ್ತು ಈ ಗ್ರಾಮ ಪಂಚಾಯತರ ಸಭೆಗಳಿಂದ ಗ್ರಾಮದ ಎಲ್ಲಾ ಸಮಾಜ ಹಿತದ ಕೆಲಸಗಳು ನಿರ್ವಹಿಸಲ್ಪಡುತ್ತಿದ್ದವು ಎಂತಲೂ ಸ್ಪಷ್ಟವಾಗಿದೆ. ಕಳೆದ ಶತಮಾನದಲ್ಲಿ ಉಂಟಾದ ರಾಜ್ಯಭಾರ ಪರಿವರ್ತನದಿಂದ ಈ ಸಭೆಗಳ ಅಧಿಕಾರವೆಲ್ಲ ಕಳಚಿಹೋಗಿ ಜಿಲ್ಲೆ ಅಥವಾ ಸಂಸ್ಥಾನಾಧಿಕಾರಿಗಳಲ್ಲಿ ಮೂರ್ತಿಮಂತವಾಯಿತು. ಇದಲ್ಲದೆ ಪಾಶ್ಚಾತ್ಯ ಸ್ವಾಭಿಮಾನದ ಪ್ರಥೆಯಿಂದ ಕರಗಿ ಈ ಐಕ್ಯಮತ್ಯದ ಅಣುಗಳು ಶಿಥಿಲವಾಗುತ್ತ ಬಂದುವು. ಅಂಥ ಅಣುಗಳು ಹೊಸ ವಿಧದ ಸಂಯೋಜನದಿಂದ ಈಗ ಒಂದುಗೂಡಬೇಕಾಗಿದೆ. ಈ ವರೆಗೆ ದಾರಿದ್ರ್ಯದ ಅಧ್ಯಾತ್ಮ ನಿದ್ರೆಯಲ್ಲಿರುವವರಿಗೆ ಕಾಲಕ್ರಮೇಣ ವೃದ್ಧಿಯಾಗುವ ಸೌಭಾಗ್ಯ, ವಿದ್ಯಾಭಿವೃದ್ಧಿಯ ಉದಯದ ಹಿಂದೆಯೇ ಒತ್ತಿ ಒತ್ತಿ ಬರುವ ಪರಸ್ಪರ ಸಹಾಯವೆಂಬ ಸೂರ್ಯನಿಂದ ಜೀವಕಲೆಯುಂಟಾಗುವುದೆಂದು ತುಂಬಾ ಭರವಸೆಯುಂಟಾಗಿದೆ. ಸ್ವಾರ್ಥ, ನಿಸ್ತೇಜಸ್ಕತೆ, ಕ್ಲೇಶ ಮುಂತಾದ ತಾಮಸಿಕ ರಾಜಸಿಕ ಗುಣಗಳು ಭದ್ರವಾಗಿ ಕೋಟೆಗಳನ್ನು ಕಟ್ಟಿಕೊಂಡು ಯುದ್ಧ ಮಾಡುವಾಗ, ಅಂಥವುಗಳನ್ನು ಬೇಗನೇ ಮುರಿಯುವುದು ಯಾರಿಗೂ ಸಾಧ್ಯವಲ್ಲ. ಅಪಾಯಕ್ಕೆ ಹಿಂಜರಿಯದೆ ಏಕೋಭಾವದಿಂದಲೂ ದೃಢ ಮನಸ್ಸಿನಿಂದಲೂ ಕ್ರಮವಾಗಿ ಹೆಜ್ಜೆ ಇಡುತ್ತ ಹಿಮ್ಮೆಟ್ಟದೆ ನಿರ್ದಿಷ್ಟವಾದ ಸದುದ್ದೇಶವನ್ನು ಯಾವಾಗಲೂ ಮನಸ್ಸಿನಲ್ಲಿ ಜಪಿಸುತ್ತಲೇ ಇದ್ದಲ್ಲಿ ಮೇಲೆ ಹೇಳಿದ ಸಾತ್ವಿಕ ಗುಣಗಳಿಗೆ ಜಯವಾಗುವುದೇನೋ ನಿಶ್ಚಯ. ಹೀಗಾದುದರಿಂದ ಸಂಘಗಳನ್ನು ಸ್ಥಾಪನೆ ಮಾಡುವುದರಲ್ಲಿ, ಅವುಗಳ ವಹಿವಾಟುಗಳನ್ನು ಕಾಲತಪ್ಪದೆ ನಡಿಸುವುದರಲ್ಲಿ ಹೃತ್ಪೂರ್ವಕ ಪ್ರಯತ್ನವೂ ಎಚ್ಚರವೂ ಇದ್ದರೆ ಹಿಂದುಸ್ಥಾನದ ಜನರಲ್ಲಿ ಆ ಸಾತ್ವಿಕ ಗುಣಗಳ ವೃದ್ಧಿಯು ಎಂದೆಂದಿಗೂ ಪ್ರಬಲವಾಗುತ್ತಲೇ ಬರುವುದು ನಿಸ್ಸಂದೇಹವಾಗಿದೆ.

ಅಧ್ಯಕ್ಷರು ಹೀಗೆ ಹೇಳಿ ಕುಳಿತನಂತರ ಈ ಕೆಳಗೆ ಕಾಣಿಸಿದ ನಾಲ್ಕು ಸಂಘಗಳ ವರದಿಗಳನ್ನು ಓದಲಾಯಿತು:—

(೧) ಕೊಯಮುತ್ತೂರು ಕಟ್ಟಡಗಳ ಸಂಘದ ರಿಪೋರ್ಟನ್ನು ಮ| ರಾ| ಸಿ. ಎನ್. ಕೃಷ್ಣಸ್ವಾಮಿ ಅಯ್ಯರ್ ಎಮ್. ಎ. ಎಲ್. ಟಿ. ಇವರು ಓದಿದರು.

(೨) ಕಾಸರಗೋಡು ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘದ ವರದಿಯನ್ನು ಮಂಗಳೂರು ರೇಂಜ ಶಾಲೆಗಳ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರ್ ಮ| ರಾ| ಪಂಜೆ ಮಂಗೇಶರಾವ್ ಬಿ. ಎ. ಎಲ್. ಟಿ ಯವರು ಓದಿದರು.

(೩) ಕಲ್ಲಿಕೋಟೆಯ ಮುನ್ಸಿಪಾಲಿಟಿಯ ನವುಕರರ ಸಂಘದ ರಿಪೋರ್ಟನ್ನು ಮ| ರಾ| ರಾರಿಚ್ಚನ್ ಮೂಪನ್ ಇವರು ಓದಿದರು.

(೪) ಪುತ್ತೂರು ಗ್ರೈನ್ ಬೇಂಕ್ (ಧಾನ್ಯ ಸಂಗ್ರಹ ಸಂಘ) ರಿಪೋರ್ಟನ್ನು ಮ| ರಾ| ಮೊಳಹಳ್ಳಿ ಶಿವರಾಯರು ಓದಿದರು.

ಸಭೆಯಲ್ಲಿ ಓದಲಿಕ್ಕಾಗಿ ೭ ಉಪನ್ಯಾಸಗಳನ್ನು ಕಾಲವಿಳಂಬವಾದುದರಿಂದಲೂ, ಅವುಗಳನ್ನು ಮುದ್ರಿಸಿ ಅಲ್ಲಿ ನೆರೆದ ಗೃಹಸ್ಥರೆಲ್ಲರಿಗೆ ಹಂಚಲಿಕ್ಕೆ ಅನುಕೂಲವಾದುದರಿಂದಲೂ ಅವುಗಳನ್ನು ಎಲ್ಲರೂ ಓದಿಕೊಳ್ಳಬೇಕೆಂದು ಅಧ್ಯಕ್ಷರವರು ಸೂಚಿಸಿದರು. ಉಪನ್ಯಾಸಗಳು ಯಾವುವೆಂದರೆ:—

(೧) **ಸಹಕಾರವೂ ಶಾಲಾ ಮಕ್ಕಳೂ:**— ಹೈಕೋರ್ಟು ವಕೀಲ ಮತ್ತು ಗೌರವಾರ್ಥವಾಗಿ ಪರಸ್ಪರ ಸಹಾಯ ಸಂಘಗಳನ್ನು ಏರ್ಪಡಿಸುವ ನಿರ್ಮಾಣಕರ್ತರಾದ ರಾವ್ ಸಾಹೇಬ ಆರ್. ಜಿ. ನಾಯಕ್, ಬೆಳಗಾಂವ್.

(೨) **ಕಾಲವಿಳಂಬ ನಿಗ್ರಹ:**—ಶಾಮರಾವ್ ವಿಟ್ಠಲ್ ಅರ್ಬನ್ ಕೋಓಪರೇಟಿವ್ ಸೊಸೈಟಿ ಲಿಮಿಟೆಡ್ ಇದರ ಚೆಯರ್ಮನ್, ರಾವ್ ಸಾಹೇಬ್ ಎಸ್. ಎಸ್. ತಾಳಮಕ್ಕಿ ಬಿ. ಎ. ಎಲ್. ಎಲ್. ಬಿ. ಮುಂಬಾಯಿ.

(೩) **ಕ್ಲಪ್ತ ಕಾಲದಲ್ಲಿ ಸಾಲ ಪರಿಹಾರ:**—ಇದರ ಬಗೆ ಹೇಗೆ? ಮ| ರಾ| ಸಿ. ಎನ್. ಕೃಷ್ಣಸ್ವಾಮಿ ಅಯ್ಯರ್ ಎಮ್. ಎ. ಎಲ್. ಟಿ. ಕೊಯಮುತ್ತೂರು ಡಿಸ್ಟ್ರಿಕ್ಟ್ ಅರ್ಬನ್ ಬೇಂಕ್ ಲಿಮಿಟೆಡ್ ಇದರ ಸೆಕ್ರೆಟರಿಗಳು, ಕೊಯಮುತ್ತೂರು.

(೪) **ಮೂಲಸಂಘಗಳ ಮೇಲೆ ಸೆಂಟ್ರಲ್ ಸಂಘಗಳು ನಡಿಸುವ ಮೇಲ್ವಿಚಾರ:**—ರಾವ್ ಸಾಹೇಬ್ ಕೆ. ರಾಮಸ್ವಾಮಿ ಅಯ್ಯರ್, ಬಿ. ಎ. ಬಿ. ಎಲ್. ಮಧುರಾ ರಾಮನಾಡ್ ಸೆಂಟ್ರಲ್ ಕೋಓಪರೇಟಿವ್ ಬೇಂಕಿನ ಸೆಕ್ರೆಟರಿಗಳು, ಮಧುರೆ.

(೫) **ಸಹಕಾರವೂ ಮಿತವ್ಯಯವೂ:**—ಮ| ರಾ| ಎಮ್. ಗಿರಿಯಪ್ಪಾ, ಬಿ. ಎ. ಕೋಓಪರೇಟಿವ್ ಸಂಘಗಳ ಇನ್ಸ್‌ಪೆಕ್ಟರರು, ದಕ್ಷಿಣ ಕನ್ನಡ.

(೬) **ಗ್ರಾಮ ಚಾವಡಿಗಳೂ, ಗ್ರಾಮದ ಆರೋಗ್ಯ ರಕ್ಷಣೆಯೂ:**— ರೆವರೆಂಡ್ ಡಿ. ಡಿ. ಎಫ್. ಕೋಯಿಲೊ ಎಸ್. ಜೆ. ಸುರತಕಲ್ಲು ಕೋಓಪರೇಟಿವ್, ದಕ್ಷಿಣ ಕನ್ನಡ.

(೭) ಸಹಕಾರ, **ಪೂರ್ವಾಪರ ವಿಚಾರ (ಕನ್ನಡದಲ್ಲಿ):**—ಮ| ರಾ| ಬಿ. ಆನಂದರಾವ್, ಪುತ್ತೂರು ಸಂಘದವರು, ದಕ್ಷಿಣ ಕನ್ನಡ.

ಇದಾದ ನಂತರ ಸೆಕ್ರೆಟರಿಗಳಾದ ಮ| ರಾ| ಎಮ್. ಶಿವರಾಯರು ಆ ಸಾಯಂಕಾಲ ಕೂಡಲಿಕ್ಕಿರುವ ವಿಷಯ ವಿಮರ್ಶೆಯ ಸಭೆ (Subjects Committee)ಯ ಮೆಂಬರುಗಳ ಹೆಸರುಗಳನ್ನು ಓದಿ ಹೇಳಿದರು. ಹೀಗೆ ಮಧ್ಯಾನ್ಹ ೨ ಗಂಟೆಯ ಸಮಯಕ್ಕೆ ಪ್ರಥಮ ದಿನದ ಸಭೆಯು ಅಧ್ಯಕ್ಷರವರ ಸೂಚನೆಯ ಮೇರೆಗೆ ಮುಕ್ತಾಯವಾಯಿತು.

ಎರಡನೇ ದಿನ:—ಏಪ್ರಿಲ್ ತಾ. ೬, ಮಂಗಳವಾರ ಈ ದಿನ ಸಭೆಯು ಪುನಃ ಪೂರ್ವಾನ್ಹ ೧೧ ಗಂಟೆಯ ಸಮಯಕ್ಕೆ ಜರಗಿತು. ಅಧ್ಯಕ್ಷರು ಸ್ಥಾನವನ್ನು ವಹಿಸಿದ ಮೇಲೆ ಈ ಕೆಳಗಿನ ಠರಾವುಗಳು ಸಭೆಯ ಮುಂದೆ ಇಡಲ್ಪಟ್ಟು ಮಂಜೂರಾದುವು.

1. ಕಾಲವಿಳಂಬ:—ರಿಜಿಸ್ಟ್ರಾರವರು ಕಳೆದ ವರ್ಷಾವಧಿ ರಿಪೋರ್ಟಿನಲ್ಲಿ ಸಾಲಗಳ ಮರುಪಾವತಿಯ ವಿಷಯವಾಗಿ ಕಂಡುಬಂದ ಕಾಲ ವಿಳಂಬದ ಬೆಳವಣಿಗೆಯನ್ನು ಕುರಿತು ಎಚ್ಚರಿಸಿದ ಸಂಗತಿಯಲ್ಲಿ ಈ ಪರಿಷತ್ತು ಪಶ್ಚಾತ್ತಾಪಪಟ್ಟು, ಈ ಚಾಳಿಯನ್ನು ಕಿತ್ತುಬಿಡುವುದಕ್ಕೆ ಈ ಕೆಳಗೆ ವಿವರಿಸೋಣಾದ ತಕ್ಕ ಹಂಚಿಕೆಯನ್ನು ಎಲ್ಲಾ ಸಂಘಗಳು ಕೈಕೊಳ್ಳಬೇಕಾಗಿ ಆಗ್ರಹಪೂರ್ವಕವಾಗಿ ಸೂಚಿಸುತ್ತದೆ:—

(೧) ಸಾಲಗಳ ಉದ್ದೇಶಗಳನ್ನು ಕಂಡುಹಿಡಿದು ವಾಯಿದೆಯನ್ನು ಕೊಡುವುದು.

(೨) ಸಂಘದ ವರ್ಗ ಊಳಿಗ ಪುಸ್ತಕಗಳಲ್ಲಿ ಲೆಕ್ಕವನ್ನು ವರ್ಗಾಯಿಸಿ ಮರುಸಾಲಗಳನ್ನು ಕೊಡುವ ಕ್ರಮವನ್ನು ನಿಲ್ಲಿಸಿಬಿಡುವುದು.

(೩) ಬೇರೆ ಬೇರೆ ಉಪಾಯಗಳಿಂದ ಈ ಚಟವನ್ನು ಕಿತ್ತುಬಿಡುವುದಕ್ಕೆ ಆಗದ ಸಂದರ್ಭಗಳಲ್ಲಿ ಆಯಾ ಸಾಲಗಳನ್ನು ಕ್ಲಪ್ತ ಕಾಲದಲ್ಲಿ ಪರಿಹರಿಸಿದವರಿಗೆ ಬಡ್ಡಿಯಲ್ಲಿ ಉತಾರು ಬಿಟ್ಟು ಅವರನ್ನು ಉತ್ತೇಜನಗೊಳಿಸುವುದು.

(೪) ವಾಯಿದೆ ಮೀರುವಂಥವರನ್ನು ಅಮಾನತು ಮಾಡುವುದು; ಮತ್ತು ಸದರಿ ಸಂಘವು ಹೊರಗಿನಿಂದ ಪಡಕೊಳ್ಳುವ ಸಾಲದ ಮಿತಿಯನ್ನು ತಗ್ಗಿಸುವುದು.

ಈ ಠರಾವನ್ನು ಮ| ರಾ| ಸಿ. ಎನ್. ಕೃಷ್ಣಸ್ವಾಮಿ ಅಯ್ಯರ್ ಎಮ್. ಎ., ಎಲ್. ಟಿ., ಇವರು ಇಂಗ್ಲೀಷಿನಿಂದಲೂ ತಮಿಳಿನಿಂದಲೂ ವಿವರಿಸಿ ಸಭೆಯ ಮುಂದಿಟ್ಟರು. ಮಲಬಾರಿನ ಮ. ರಾ. ಉದಯವರ್ಮ ರಾಜರವರು ಮಲೆಯಾಳಿ ಭಾಷೆಯಲ್ಲಿಯೂ, ಕಾರ್ಕಳ ವಕೀಲ ಮ| ರಾ| ಇಡ್ಯ ವಾಸುದೇವಯ್ಯ ಬಿ. ಎ. ಬಿ. ಎಲ್. ಇವರು ಕನ್ನಡದಲ್ಲಿಯೂ ವಿವರಿಸಿ ಅನುಮೋದಿಸಿದ ನಂತರ ಸರ್ವಾನುಮತದಿಂದ ಈ ಠರಾವು ಮಂಜೂರಾಯಿತು.

2. ಮಿತವ್ಯಯ:—ಪ್ರತಿ ಒಬ್ಬ ಮೆಂಬರನು ಮಾಸಿಕ ಅಥವಾ ವಾರ್ಷಿಕ ಸಂಚಯದ ಠೇವಣಾತಿಗಳನ್ನು ಕಟ್ಟಬೇಕಾಗಿ ಎಲ್ಲಾ ಸಂಘಗಳು ಕೈಲಾದ ಪ್ರಯತ್ನಗಳನ್ನು ನಡಿಸಬೇಕೆಂಬುದೇ ಈ ಪರಿಷತ್ತಿನ ಅಭಿಪ್ರಾಯವಾಗಿದೆ; ಇದಕ್ಕಾಗಿಯೇ ಎಲ್ಲಾ ಸಂಘಗಳಲ್ಲಿಯೂ ಪ್ರೊವಿಡೆಂಟ್ ಡಿಪೋಜಿಟುಗಳ ಕ್ರಮಗಳನ್ನು ಏರ್ಪಡಿಸಿ ಜಾರಿಗೆ ತರಬೇಕಾಗಿ ಈ ಪರಿಷತ್ತು ಸೂಚಿಸುತ್ತದೆ.

3. ಪರಸ್ಪರ ಸಹಾಯದ ತತ್ವಗಳ ಪ್ರಸರಣೆ:—ಪರಸ್ಪರ ಸಹಾಯ ದ ತತ್ವಗಳು ಜನರಲ್ಲಿ ಪ್ರಚಾರಕ್ಕೆ ಬರುವಂತೆ ಸಾಧಾರಣವಾಗಿ ಎಲ್ಲಾ ಸಂಘಗಳು ಮುಖ್ಯವಾಗಿ ಸೆಂಟ್ರಲ್ ಬೇಂಕುಗಳು ಕೆಳಗೆ ಸೂಚಿಸೋಣಾದ ಏರ್ಪಾಡುಗಳ ಮೂಲಕವಾಗಿ ಶೀಘ್ರ ಪ್ರಯತ್ನಗಳನ್ನು ಮಾಡುವುದು ಅತ್ಯಾವಶ್ಯಕವೆಂಬುದಾಗಿ ಈ ಪರಿಷತ್ತು ಅಭಿಪ್ರಾಯಪಡುತ್ತದೆ.

(೧) ಆಗಾಗ ಸಂಘಗಳ ಮಹಾ ಸಭೆಗಳನ್ನು ಜರಗಿಸಿ ಸಹಕಾರ ಜ್ಞಾನವನ್ನು ಬೋಧಿಸುವುದು.


ಬಿಸ್ಕುಟು ವ ಕೇಕುಗಳನ್ನು ತಯಾರಿಸುವವರು, ಮಂಗಳೂರು.

ಏಜಂಟರು:—ಅಂತೋನಿ ಎಸ್. ರೇಗೊ, ಸ್ಟ್ರೀಟ್‌ವಾಟ್ ಬಜಾರ್, ಕಲ್ಲಿಕೋಟೆ.
ಸ್ವದೇಶಿ ಎಂಪೋರಿಯಮ್, ಸೇಲಂ.
ಕಣಕಾಸಬೈ ಚೆಟ್ಟಿಯಾರ್, ಲಾಲ್‌ಗುಡಿ, ಪುವಲೂರ್, ತಿರುಚಿನಾಪಳ್ಳಿ.
ಎಸ್. ನ್ಯಾಸ್ ಸ್ಟೋರ್ಸ್, ಮಡಿಕೇರಿ.
ವಿ. ಬಾಲಕೃಷ್ಣ ನ್ಯಾಡು, ಬಿಗ್ ಬಜಾರ್ ಸ್ಟ್ರೀಟ್, ಕೊಯಂಬುತ್ತೂರು.
ಅಸೋಸಿಯೇಟ್ ಎಂಡ್ ಐಮಸ್ ಶೋಪ್, ಉಡ್ಪಿ.

ನೀವು ನಮ್ಮ ಬಿಸ್ಕುಟು ಇತ್ಯಾದಿಗಳಿಂದ ತೃಪ್ತಿಹೊಂದಿದರೆ ಇತರರಿಗೆ ಹೇಳಿರಿ. ಇಲ್ಲವಾದರೆ ನಮಗೆ ತಿಳಿಸಿರಿ ನಿಮ್ಮನ್ನು ತೃಪ್ತಿಪಡಿಸುವೆವು.

ವಿಳಾಸ:— ಸ್ಟೀವನ್ ಎಂಡ್ ಸನ್ಸ್, ಮಂಗಳೂರು

S. U. N. & CO.,

BENARES CITY, U. P.

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲ್ಲಿ ನೇಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗನ್ನು ಇನಾಮಾಗಿ ಕಳುಹಿಸಲಾದೀತು.

ನಮ್ಮ ವಿಳಾಸ:— ಎಸ್. ಯು. ಯನ್ ಮತ್ತು ಕಂಪೆನಿ, ಕಾಶಿ

ವಿಕಟಪ್ರತಾಪವೆಂಬ ಮಾಸಿಕ ಪತ್ರಿಕೆ.

ಹಾಸ್ಯರಸದಿಂದ ಕೂಡಿದ ಈ ಮಾಸಪತ್ರಿಕೆಯ ವಾರ್ಷಿಕ ಚಂದಾ ಮುಂಗಡ ವಿ. ಪಿ. ಮೂಲಕ ಒಂದೇ ರೂಪಾಯಿ. ಹಾಸ್ಯವನ್ನೇ ಹೆಚ್ಚಾಗಿ ಬರೆದು ವಾಚಕರನ್ನು ಮೆಚ್ಚಿಸುವ ಈ ಪತ್ರಿಕೆಗೆ ಎಲ್ಲರ ಪ್ರೋತ್ಸಾಹವು ಅವಶ್ಯಕವಾಗಿದೆ. ಚಂದಾದಾರರಾಗುವವರಿಗೆ ಯಯಾತಿ ಚರಿತ್ರಂ ಎಂಬ ಪುಸ್ತಕವೂ ಮತ್ತು 1915ನೇ ಇಸವಿಯ ಸುಂದರವಾದ ಕ್ಯಾಲೆಂಡರೂ ಉಚಿತವಾಗಿ ದೊರೆಯುವುದು.

ನಮ್ಮ ವಿಳಾಸ:— ವಿ. ಪಿ. ಆಫೀಸ್, ಕೋಲಾರ್.

ಪ್ಲೀಡರ್ ಎಂ. ಮಲ್ಲಾರಾಧ್ಯರಿಂದ ರಚಿತವಾದವುಗಳು.

ವ್ಯವಹಾರ ನಿರ್ಣಯ.

ಕನ್ನಡದ ಲಾ ಪುಸ್ತಕವು.

ತೃತೀಯ ಮುದ್ರಣ, 616 ಪುಟಗಳುಳ್ಳದ್ದು.

ಕ್ರಯ, ದಪ್ಪ ಕಾಗದದ ಪ್ರತಿಗೆ ... 1—8—0.
ಕ್ರಯ, ಗ್ಲೇಜ್ ,, ,, ... 2—4—0.

ಪೋಸ್ಟೇಜು ಪ್ರತಿ 1ಕ್ಕೆ 4 ಆಣೆ.

ಇದರಲ್ಲಿ ಹಿಂದೂ ಲಾ, ಮುಹಮ್ಮದೀಯ ಲಾ, ಪೀನಲ್‌ಕೋಡು ಇವು ವಿಸ್ತಾರವಾಗಿ ಬರೆಯಲ್ಪಟ್ಟಿವೆ. ಮೈಸೂರು, ಮದ್ರಾಸು, ಬೊಂಬಾಯಿ ದೇಶಗಳಿಗೆಲ್ಲಾ ಸಾಮಾನ್ಯವಾದ ಲಾ. ವೃತ್ತಸ್ವತ್ತಿನ ವಿಲೇವಾರಿ, ಅನಾಥ ರಕ್ಷಣೆ ಕ್ರೈಸ್ತರ ವಾರಸ್ಸು ಹಕ್ಕು ಈ ವಿಷಯಕವಾದ ಖಾನೂನುಗಳೂ, ಕ್ರಯ, ದಾನ, ವಿಲ್ಲು, ಹುಂಡಿ, ಗೇಣಿ ಮೊದಲಾದ ಸಮಸ್ತ ವ್ಯವಹಾರವನ್ನೊಳಗೊಂಡಿರುವ 92 ವಿಧದ ದಸ್ತಾವೇಜು ನಮೂನೆಗಳೂ, ಲಾ ಪ್ರಕಾರ ಸಿವಿಲ್ ಕ್ರಿಮಿನಲ್ ಕೋರ್ಟುಗಳಿಗೂ ಪೋಲೀಸಿಗೂ ಬರೆಯುವ ಅರ್ಜಿಗಳ 49 ನಮೂನೆಗಳೂ, ಅವುಗಳ ಸಂಬಂಧವಾದ ವಿಶೇಷ ವಿಷಯ ವಿಚಾರಗಳೂ ಬಹಳ ಚೆನ್ನಾಗಿ ಬರೆಯಲ್ಪಟ್ಟಿವೆ. ಇಷ್ಟು ದೊಡ್ಡ ಉಪಯುಕ್ತವಾದ ಗ್ರಂಥವನ್ನು ಇಷ್ಟು ಕಡಿಮೆ ಬೆಲೆಗೆ ಯಾರೂ ಮಾರುವುದಿಲ್ಲ.

"ತಖಾವಿ ಲಾ."

ಇದು ಕೃಷಿಯ ಅಭಿವೃದ್ಧಿಗಾಗಿಯೂ, ರೈತರ ಸಹಾಯಾರ್ಥವಾಗಿಯೂ ಸರಕಾರದವರು ಕೊಡುವ ಸಾಲ ಮೊದಲಾದ ಸಹಾಯ ವಿಷಯಕವಾದ ಲಾವನ್ನು ವಿವರಿಸುವ ಉಪಯುಕ್ತವಾದ ಪುಸ್ತಕ. ಬೆಲೆ 8 ಆಣೆ. ಪೋಸ್ಟೇಜು 2 ಆಣೆ.

ನಮ್ಮ ವಿಳಾಸ:— ಎಂ. ಎಂ. ಪಂಡಿತಾರಾಧ್ಯ ಮೈಸೂರು.

Estd. 1888. ಸ್ಥಾಪನೆ 1888.

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇಪ್ಪುಗಳ ಮೇಲೆ ಮುಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ **ಗಜಕರ್ಣವು** ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦–೨೫ ವರ್ಷಗಳ ಹಳತ, ಮೈಮನ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾಸಾರ್ಸಪರಿಲ್ಲಾಯು.

ಇದರಲ್ಲಿ ಪಾರಜವಿಲ್ಲಾ!

ಈ **ಸಾಸಾರ್ಸಪರಿಲ್ಲಾಯಿಂದ** ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟಿಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರಿ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ **ಸಾಸಾರ್ಸಪರಿಲ್ಲಾಯು.** ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾಕಾಂತ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳ ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ ೩ ಬಾಟ್ಲಿಗೆ ೨ ರೂ ೧೦ ಆಣೆ

೨ ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು ಬಾಟ್ಲಿಗೆ ೨ ೮ ೦

೩. ಶಂಖಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು ರಾತಲಿಗೆ ೨ ರೂ

೪ ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ ರಾತಲಿಗೆ ೨ ರೂ

೫ ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಬಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ ೧೦ ತೊಲೆಗೆ ೧೦ ಆಣೆ.

೭ ಸರಳಭೇದಿ ಮಾತ್ರೆ ಆಯಾಸವನ್ನುಂಟುಮಾಡದ ಸುಖ ವಿರೇಚಕವು ತೊಲೆಗೆ ೨ ರೂ.

ಪ್ರಸ್ತು ವಿಳಾಸ—ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸ್ಥೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮಕ್ಷಯ, ಕಫ, ಕ್ಷಯಗಳ ಮೇಲೆ ರಾಮಬಾಣವು ರಾತಲಿಗೆ ೨ ರೂ

೧೦ ಕಾಲ್ಮಲೀ ಪಾಕ ಸ್ವಪ್ನಸ್ಖಲನ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ತೇಜ, ಕಾಂತಿ, ಬುದ್ಧಿ ... ಕೊಡುವದು ರಾತಲಿಗೆ ೨ ರೂ

೧೧ ವಾತಮುರಾರಿ ಬಾಮ್ ತಲೆನೋವು ಎದೆನೋವು, ಸೊಂಟನೋವು ... ಹೀಗು, ... ಕೂಡಲೆ ಗೆಲ್ಲುವದು ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ ೬ ಆಣೆ

೧೨ ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದಿಂದಲೇ ಗೆಲ್ಲುವದು ಉರಿಯಿಲ್ಲ ಸುವಾಸಿಕವಾಗಿದೆ ಡಬ್ಬಿಗೆ ೪ ಆಣೆ

೧೩ ಸವ್ವೀರಾಂಜನ (ಸುರುಮಾ) ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪ ಬ್ರಾಹ್ಮೀ ಸಾರಸ್ವತ ಚೂರ್ಣ ಉನ್ಮಾದ, ಅಪಸ್ಮಾರ, ಉಗ್ರುಮಾತು ಬುದ್ಧಿಮಾಂದ್ಯಗಳನ್ನು ಪರಿಹರಿಸುವದು ಸ್ಮರಣಶಕ್ತಿಯನ್ನು ಬೆಳೆಯಿಸುವದು. ನಾಲಿಗೆ ಪಟುತ್ವವನ್ನು ಕೊಡುವದು ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೩ ರೂ ೮ ಆಣೆ.

ಪ್ರತಿ ಮೇಲಿನ ಬೆಲೆಗಳಲ್ಲಿ ಅಂಚೆಯ ಖರ್ಚು ಸೇರಿಲ್ಲ ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

3 M Nath & Co , *Ayurvedic Chemists*,

Vepery Post, MADRAS.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಕಲ್ಕತ ಮಿಶ್ಶನ್ ಚೇಕುಗಳೂ ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಶನ್ ಟೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿ ಚಕ್ಕಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ, ಸೀರೆ ಶೀಟಿಗಳೂ, ಧೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ.—... ಎಸ್. ಸೋಜ ಎಂಡ್ ಕಂಪೆನಿ,

ಹಂಪನ್‌ಕಟ್ಟಾ, ಮಂಗಳೂರು.

ದಿ ಕೆನರಾ ಸ್ಯಾಕಲ್ ಮಾರ್ಟ್, ಉಡುಪಿ.



1 ಮೇಲಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸದಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ. ಸದರಿ ಕಾರಖಾನೆಯಲ್ಲಿ ಪ್ರಸಿದ್ಧವಾದ ಬಿ ಎಸ್. ಎ ಸಿಂಗರ್ ಹಂಬರ್, ರಜವಿಟ್‌ವರ್ತ ಅಲ್ಲದೆ ಸುಲಭ ದರದ ಬೆನ್ಸನ್. ರೊಯಲ್, ಮಿನೋರಾ, ಸ್ಪಾರ್ಕ್ಲಿ ಇತ್ಯಾದಿ ಸ್ಯಾಕಲುಗಳು ಅದಕ್ಕೆ ಬೇಕಾಗುವ ಬಿ ಎಸ್. ಎ ಬ್ರೆಂಪ್ಟನ್, ಬ್ರುಕ್ಸ್, ಲೂಕಸ್, ಪೆರ್ರಿ ಮುಂತಾದ ಉಪಕರಣಗಳೂ, ಡನ್‌ಲೊಪ್ ಪಾಮರ್, ಕೆಂಬ್ರಿಜ್, ಇಂಗ್ಲೀಷ ಟಾಯರ್ಸ್ ಮತ್ತು ಟ್ಯೂಬುಗಳೂ ಸಹಾ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಸೀದಾ ವಿಲಾಯತಿಯಿಂದ ತರಿಸುವದರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಸಹಾ ದೊರೆಯುವದು

2 ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲ್ಲಿ ಖಾತ್ರಿಯಾದೀತು

3 ಸ್ಯಾಕಲ್ ಕಲಿಯಲಪೇಕ್ಷೆ ಉಳ್ಳವರಿಗೆ ಮೂರೇ ದಿವಸಗಳಲ್ಲಿ ಪೂರ್ಣ ಟ್ರೈನ್ ಮಾಡಿ ಬಿಡಲಾದೀತು.

4 ನಾದುರುಸ್ತಿಯಾಗಿರುವ ಸ್ಯಾಕಲುಗಳನ್ನು ... ತೃಪ್ತಿಕರವಾಗಿ ದುರುಸ್ತಿ ಮಾಡಿಕೊಡಲಾದೀತು.

5. ಸ್ಯಾಕಲುಗಳನ್ನು ಬಾಡಿಗೆಗೆ ಕೊಡತಕ್ಕ ಏರ್ಪಾಟೂ ಮಾಡಿಯದೆ.

ಹೆಚ್ಚಿನ ಮಾಹಿತಿಗೂ ಬೇಕಾಗುವ ಸಾಮಾನುಗಳಿಗೂ ಕೆಳಗಿನ ವಿಳಾಸಕ್ಕೆ ಬರದುಕೊಳ್ಳಿರಿ.

K. K. Shanbhog, *Proprietor*
THE CANARA CYCLE MART,
Udipi, S. Canara.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದ್ದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟದೆ.

1. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ, ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2. ನೋವಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತು ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತ ಬಂದಲ್ಲಿ ತಿಂದನ್ನವು ಜೀರ್ಣವಾಗುವದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು.

6. ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಆದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45 ಮಾತ್ರೆಗಳ ಪೊಟ್ಟ 1ಕ್ಕೆ 0—2—0	200 ಮಾತ್ರೆಗಳ ಪೊಟ್ಟ 1ಕ್ಕೆ 0—7—0	80 ಮಾತ್ರೆಗಳ ಟಿನ್ 1ಕ್ಕೆ 0—4—0	550 ಮಾತ್ರೆಗಳ ಮರದಪೆಟ್ಟಿಗೆ 1ಕ್ಕೆ 1—0—0
95 ,, ,, ,, 0—4—0	200 ,, ಟಿನ್ ,, 0—9—0	100 ,, ಶೀಸೆ ,, 0—4—6	1200 ,, ,, ,, 2—0—0

1 ರೂಪಾಯಿಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಭರತಖಂಡ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ.

ಸೋಲ್ ಏಜಂಟ್ಸ್:—ಸೆಶಿಂತಾನ್ ಡಿಪೊ,

ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ. 2.

ವೃಥಾ ವೆಚ್ಚಮಾಡುವದೇಕೆ?

ಐಶ್ವರ್ಯವಂತರೂ ಬಡವರೂ ಕೊಂಡುಕೊಳ್ಳಲು ಸಾಧ್ಯವಾಗಿರುವ

ಯುಕಲಿಪ್ಟಸ್ ತೈಲವು.

ತಲೆನೋವು, ಕಣ್ಣು ಉರಿ, ಗಾಯ, ಸಕಲ ವಿಧವಾದ ವಾಯುರೋಗ, ಕೆಮ್ಮು, ಉಬ್ಬಸ, ಶೀತಬೇಧಿ, ಉಷ್ಣಬೇಧಿ, ಹೊಟ್ಟೆಯಲ್ಲಿ ಜ್ವರಗಡ್ಡೆ, ಸ್ತ್ರೀಯರ ವ್ಯಾಧಿಸಂಬಂಧ ಬಿಳುಪು ಮೊದಲಾದ ಮೇಹ ರೋಗಗಳು, ಕಿವಿಯಲ್ಲಿ ಕೀವು ಬರುವದು, ಹೆಂಗಸರ ಹೊಟ್ಟೆನೋವು ಮೊದಲಾದ ರೋಗಗಳನ್ನು ಗುಣಪಡಿಸುವದಿಲ್ಲವೆಂದು ಖಾತ್ರಿಪಡಿಸುವವರಿದ್ದಾರೋ? ಔನ್ಸ್ ಸೀಸೆ 1ಕ್ಕೆ 0—5—0. ವಿ. ಪಿ. ಬೇರೆ. ಡಜನ್ ಸೀಸೆಗಳಿಗೆ ವಿ. ಪಿ. ಸಹಿತ ರೂ. 3—12—0. ಅನುಪಾನ ಪತ್ರಿಕೆ ಸೀಸೆಯೊಂದಿಗೆ.

ಗೃಹಣೀಯಂತಕ ತೈಲ:—ಮಕ್ಕಳ ಚೇಷ್ಟೆ, ಮಕ್ಕಳು ಬಡವಾಗುತ್ತಾ ಬರುವದು, ನೇವಸ ಮೊದಲಾದ ಮಕ್ಕಳ ರೋಗಕ್ಕೆ ಸಿದ್ಧೌಷಧ. 2 ಔನ್ಸಿನ ಸೀಸೆ 1ಕ್ಕೆ 0—10—0 ವಿ. ಪಿ. ಸಹಿತ 0—15—0.

ಇಕ್ಲಿಪ್ಸ್ ಬಾಮ್:—ತಲೆನೋವು, ಸೊಂಟದ ನೋವು, ಸಂಧುವಾತ, ಮೇಹವಾತ, ನೆಗಡಿ, ಶೈತ್ಯ, ಚೇಳು, ಜಾಡರಹುಳ ಕಡಿತ, ಕುರು, ರಾಜಕುರು, ಮೊಡವೆ, ಘಾಯಗಳು, ಹಲ್ಲುನೋವು, ಆನೆಕಾಲು ಇತ್ಯಾದಿ ರೋಗಗಳಿಗೆ ಬಾಹ್ಯ ಲೇಪನವಾಗಿ ಉಪಯೋಗಿಸಬಹುದಾದ ಬಾಮಿನ ಕರಡಿಗೆ. 1ಕ್ಕೆ ಆಣೆ 8. ವಿ. ಪಿ. ಬೇರೆ. ಡಜನ್ ಕರಡಿಗೆಗಳಿಗೆ ರೂ. 4—12—0 ವಿ. ಪಿ. ಬೇರೆ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಮಂಗಳೂರು.

ಏಜಂಟರು:— ಸುಗಂಧವಿಲಾಸ, ರಥಬೀದಿ, ಮಂಗಳೂರು.

ಅನೇಕ ಯೋಗ್ಯತಾಪತ್ರಿಕೆಗಳನ್ನು ಪಡದಿರುವ (ರಿಜಿಸ್ಟರ್ಡ್)

ರಾಜಸುಂದರಿ ರೋಜ.

ಕೂದಲು ಬೆಳೆಯುವ ಪರಿಮಳ ತೈಲವು. 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1ಕ್ಕೆ ರೂ. 1 ಮಾತ್ರ.

ಸ್ತ್ರೀಗಳು ತಲೆಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು, ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವರು ಬಜಾರಿನಲ್ಲಿ ದೊರಿಯುವ ಕೀಳುತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ, ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ ಸುವಾಸನೆ ಹೇಳುವದಕ್ಕೆ ಬರಿಯುವದಕ್ಕೆ ಆಗುವದಿಲ್ಲ ಮತ್ತು ಇದರ ಪರಿಮಳ ವಾಸನೆ ಸುತ್ತು ಇರುವ ಮನೆಗಳಿಗೆ ಹೋಗುವದು. ಇದಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿ ಇರುವ ಮೊದಡನ್ನು ಸರಿ ಮಾಡುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ. ಬೇರೊಂದಿಲ್ಲ, ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. 1ನ್ನು ತರಿಸಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಶೀಲು. ಸ್ತ್ರೀಯರು ಧರಿಸಿಕೊಳ್ಳುವ ಕೊಂಡಗಣೆ 6, ವೃಭರಣೆ 1, ಅದ್ದಾ 1, ತಾಂಬೂಲ ಮಾತ್ರೆ 30, ಬಂಗದ ಬಟ್ಟೆ ಬಗೆ 1, ಸೊಗಸಾದ ರಾಜರಾಣಿ ಕಾರನೇಷನ್ ಪೆಟ್ಟಿಗೆ 1, ರವಿವರ್ಮ ಫೋಟೋಕಾರ್ಡ್ 6, ಸುವಾಸನೆ ಅತ್ತರು ಬಿಲ್ಲೆ 1, ಗಂಧ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೋಚ್ 1.

ನಮ್ಮ ವಿಳಾಸ:— ಮ್ಯಾನೇಜರ್ ಧೈರ್ಯಲಕ್ಷ್ಮಿ ಅಂಡು ಕಂಪೆನಿ.

ನಂ. 3 [illegible] ರೋಡಿ, ಮದ್ರಾಸು.

Printed & Published by V. S. Kamath at the Mangalore Trading Association's Sharada Press, Mangalore

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರ್ಷಕ್ಕೆ ರೂ 1—4—0. ಟಪ್ಪಾಲು ಹಾಶಿಲು ಸೇರಿ ರೂ 2—1—0.

ಪುಸ್ತಕ IX ಮಂಗಳೂರು ತಾ 16ನೇ ಎಪ್ರಿಲ್ ಶುಕ್ರವಾರ 1915. ಸಂಚಿಕೆ 16

The Universal Assurance Co., Ltd.
Head Office: 191, Bow Bazar Street, CALCUTTA

NOTICE.

It is hereby informed to all the Agents, the subscribers of the Company and the public in general that the existing Provident scheme having been declared un sound by the actuary to the Goverument of India for its various inconveniences, the company has decided not to accept any proposal under the said scheme, and the same has been abolished since 1st January 1915. All the old members are hereby requested to continue their policies and diplomas which will be governed by the old rules and the bonus be distributed according to the dividing system hence they need not be frightened.

For the convenience of the intending subscribers and the public in general a new scheme called "Cheap Insurance" under the scientific principles of the Ordinary Insurance scheme has been introduced. For further particulars please see the Company's seperate advertisement.

(*Sd.*) **J. Sarkar**, *Secretary*
M. Laxman Rao Brothers,
Chief Agents, UDIPI, S. C.

ದಿ ಯುನಿವರ್ಸಲ್ ಎಸ್ಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಹೆಡ್ ಆಫೀಸು 191 ಬೊ ಬಜಾರ್ ಸ್ಟ್ರೀಟ್, ಕಲ್ಕತ್ತಾ.

ನೋಟೀಸು.

ಈ ಮೂಲಕ ಕಂಪೆನಿಯ ಮೆಂಬರರಿಗೂ ಸರ್ವ ಜನರಿಗೂ ತಿಳಿಯಪಡಿಸುವದೇನಂದರೆ:—ಈ ಕಂಪೆನಿಯ ಪ್ರೊವಿಡೆಂಟ ಫಂಡಿನ ಏರ್ಪಾಡನ್ನು ಅದರ ಒಗೆ ಬಗೆಯ ಅನಾನುಕೂಲತೆಯ ಕಾರಣದಿಂದ ಸರಕಾರದವರು ಈ ಏರ್ಪಾಡನ್ನು ಘಟ್ಟಿ ಇಲ್ಲದ್ದು ಎಂಬದಾಗಿ ತೀರ್ಮಾನಿಸಿರುವದರಿಂದ ಕಂಪೆನಿಯವರು ಪ್ರೊವಿಡೆಂಟ ಏರ್ಪಾಡು ಕ್ರಮದ ಮೇಲೆ ವಿಮೇದಾರರನ್ನು ಕಂಪೆನಿಗೆ ಸೇರಿಸುವದಿಲ್ಲ, ಮತ್ತು ಈ ಕ್ರಮವು 1915ನೇ ಇಸವಿ ಜನವರಿ ತಾ. 1ರಿಂದ ಕಂಪೆನಿಯಿಂದ ತೆಗೆದು ಹಾಕಲ್ಪಟ್ಟಾಗಿರುವದು. ಹಳೇ ಮೆಂಬರರ ತಮ್ಮ ಪೊಲಿಸಿ ಮತ್ತು ಡಿಪ್ಲೊಮಗಳು ಹಳೇ ರೂಲಿನ ಪ್ರಕಾರ ಅಧಿಕರಿಸಲ್ಪಟ್ಟು "ಬೊನಸ್" ಎಂಬ ಲಾಭೋಚಿತವು ಕ್ರಮ ಪ್ರಕಾರ ಹಂಚಲ್ಪಡುವದರಿಂದ ಹಳೇ ಮೆಂಬರರು ಭಯಪಡಲು ಕಾರಣವಿಲ್ಲವೆಂಬದಾಗಿ ಈ ಮೂಲಕ ವಿಜ್ಞಾಪಿಸಲ್ಪಟ್ಟಿಗಿದೆ.

ಕಂಪೆನಿಯ ಮೆಂಬರರಾಗಲು ಯೋಚಿಸಿರುವವರಿಗೂ ಜನಸಾಮಾನ್ಯರ ಬಗ್ಗೆಯೂ "ಚೀಪ್ ಇನ್ಶೂರೆನ್ಸ್" ಎಂಬ ಒಂದು ಹೊಸ ಕ್ರಮವು ಸರ್ವಸಾಧಾರಣವಾಗಿರುವ ಇನ್ಶೂರೆನ್ಸ್ ಕ್ರಮದ ಮೂಲಸೂತ್ರದ ಪ್ರಕಾರ ತೆರೆಯಲ್ಪಟ್ಟಾಗಿರುವದು. ಹೆಚ್ಚಿನ ಮಾಹಿತಿಯನ್ನು ಈ ಪತ್ರಿಕೆಯಲ್ಲಿ ಕಾಣುವ ಕಂಪೆನಿಯ ಪ್ರಕಟಣೆಯನ್ನು ಓದಿಕೊಂಡರೆ ತಿಳಿಯುವದು.

(*Sd.*) ಜೆ. ಸರ್ಕಾರ, ಸೆಕ್ರೆಟರಿ.
ಎಮ್. ಲಕ್ಷ್ಮಣರಾವ್ ಬ್ರದರ್ಸ್, ಚೀಫ್ ಏಜಂಟ್, ಉಡುಪಿ, ದ.ಕ.

PUBLIC ACCOUNTANT & AUDITOR,

(Certified under section 144 (2) of the Indian Companies Act, VII of 1913 to audit accounts in English, Canarese and Tamil)

M. S. Krishna Rau,
Coelho Street, Mangalore.

ನೋಟೀಸು.

ಉಪ್ಪಿನಂಗಡಿ ತಾಲೂಕು ಅಮರ ಮಾಗಣೆ ದೇವಚಳ್ಳ ಗ್ರಾಮದಲ್ಲಿರುವ ಅಂಬೆಕಲ್ಲು ಲಿಂಗಪ್ಪಗೌಡರ ಮಗ ಸೋಮಪ್ಪಗೌಡನು ಈ ಮೂಲಕ ಸರ್ವೇ ಜನರಿಗೆ ತಿಳಿಯಪಡಿಸುವದೇನಂದರೆ:—

ಗುತ್ತಿಗಾರು ಗ್ರಾಮದ ಒಳ್ಳಕ ತಿಮ್ಮಪ್ಪಗೌಡನು ಜಬಳೆ ಅಂಗಡಿ ಇಸ್ಮಾಲಿಬ್ಯಾರಿಗಳಿಗೆ ತಾ. 6-11-1912ರಲ್ಲು ರಿಜಿಸ್ತ್ರಿ ಶಿವಾಯಿ ರೂಪಾಯಿ 206-11-0ಕ್ಕೆ ಬರಿಸಿಕೊಟ್ಟ ಡಿಮಾಂಡ ನೋಟಿನ ಮೇಲಚೀಟು ಆ ಇಸ್ಮಾಲಿಬ್ಯಾರಿಯು ನನ್ನಿಂದ ಪ್ರತಿಫಲ ಪಡದು ನನಗೆ ಕೊಟ್ಟ ತರುವಾಯ ಆ ತಿಮ್ಮಪ್ಪಗೌಡಗೆ ರಿಜಿಸ್ತ್ರಿನೋಟೀಸು ಬಿಟ್ಟದ್ದಕ್ಕೆ ಆತ ಜವಬು ಕೊಡದ್ದರಿಂದ ನಾನು ಕೈಫೇತಿನ ಬಗ್ಗೆ ಸದರಿ ನೋಟು ಪುತ್ತೂರಿಗೆ ವಕೀಲರು ಇದ್ದಲ್ಲಿ ಕೊಂಡುಹೋಗಿ ಕೈಫೇತು ತಯಾರಿಸ್ಸಿದ ಸಂಗತಿ ಆತ ತಿಳದು ರಾಜಿಯಿಂದ ತೀರಿಸುವದಾಗಿ ಹೇಳಿಕಳುಹಿಸಿದ್ದರಿಂದ ಆ ನೋಟು ನಾನು ವಾಪಾಸು ಪಡದು ಊರಿಗೆಹೋಗಿ ಜವಬು ಕೊಡಬೇಕಾಗಿ ಕೇಳಿದ್ದಕ್ಕೆ ಆತ ರಾಜಿಯಿಂದ ತೀರಿಸಲಿಕ್ಕೆ ಪುನಹಾ ತೊಂದರೆಪಡಿಸಿದ ಕಾರಣ ವಾಜ್ಯ ಮಾಡುವ ಬಗ್ಗೆ ಸದರಿ ನೋಟು, ಮತ್ತು ಪೈದುರಿನ ಬೊಮ್ಮಣ್ಣಗೌಡನು ನನಗೆ ಬರಿಸಿಕೊಟ್ಟ ಡಿಮಾಂಡ ನೋಟು, ತಾಳೂರು ದೊಡ್ಡಗೌಡನು ನನಗೆ ಬರಿಸಿಕೊಟ್ಟ ಡಿಮಾಂಡ ನೋಟು ಮತ್ತು ಇತರ ಕೆಲವು ರಿಕಾರ್ಡು ಸಮೇತ ಇದೇ ಎಪ್ರಿಲ್ ತಾ. 10ರಲ್ಲು ನಾನು ಪುತ್ತೂರಿಗೆ ಗಾಡಿಮೇಲೆ ಬರುತ್ತಾ ಸದರಿ ರಿಕಾರ್ಡು ಇರುವ ಕಟ್ಟು ಎಲ್ಲಿಯೋ ಬಿದ್ದು ಗೈರವಿಲೆಯಾಗಿ ಹೋಗಿರುತ್ತದೆ. ಸದರಿ ರಿಕಾರ್ಡು ಕಟ್ಟು ಯಾರಿಗಾದರೂ ಸಿಕ್ಕಿದರೆ ಅವರು ಅದನ್ನು ಮಹಾರಾಜಶ್ರೀ ಉಪ್ಪಿನಂಗಡಿ ತಾಲೂಕು ತಹಸಿಲ್ದಾರರವರ ಮುಂದೆ ಹಾಜರುಪಡಿಸಿ ಕೊಟ್ಟರೆ ನಾನು ಅಂಥವರಿಗೆ ರೂಪಾಯಿ 10—0—0 ಹತ್ತು ರೂಪಾಯಿಗಳನ್ನು ಇನಾಮು ಕೊಡುತ್ತೇನೆ.

ಪುತ್ತೂರು,
ತಾ. 11—4—1915.

A. Annappa Gouda.

NOTICE.

Stany Brothers,

Candle Garden, Mangalore,

ಬಲ್ಮಠ ಕದ್ರಿ ರಸ್ತೆ ಬಳಿ ನಮ್ಮ "ಕೆಂಡಲ್ ಗಾರ್ಡನ್" ಎಂಬ ಸ್ಥಳದಲ್ಲಿ 908ನೇ ಇಸವಿ ಆಗಸ್ಟ್ ತಿಂಗಳಿಂದ ಈ ವರೆಗೆ ನಡೆದು ಬಂದಿರುವ ಯಂತ್ರದಿಂದ ಹುರಿದು ಯಾರಿಸುವ ನಮ್ಮ ಕಾಫಿ ಪುಡಿ ವ್ಯಾಪಾರವು ನಮ್ಮ ವಾಚಕರಿಗೆ ಗೋಚರವಾಗದ್ದಕ್ಕೆ ಕಾರಣ ಈಗ ನಾವು ಪ್ರಕಟಿಸಿರುತ್ತೇವೆ.

ನಮ್ಮಲ್ಲಿ ನಾನಾ ಬಗೆಯ ಶಾಲಾ ಹುಡುಗರಿಗೆ ಅವಶ್ಯವುಳ್ಳ ಕೋಪಿ ಬುಕ್ ಇತ್ಯಾದಿ ಶಾಲಾ ಪುಸ್ತಕಗಳೂ, ಸೊಗಸಾದ ಅನೇಕ ವಿಧದ ತಿರುಚಿನಾಪಳ್ಳಿ ಚುರುಟುಗಳೂ, ನೀಲಗಿರಿ ಚಾ, ಇತರ ಸಾಮಾನುಗಳೂ ಕೂಡ ವ್ಯಾಪಾರಸ್ಥರಿಗೆ ಸುಲಭವಾದ ಖರೀದಿಯಲ್ಲಿ ದೊರಿಯುತ್ತದೆ.

ಕಾಪಿ ಪುಡಿಯು ರಾತ್ಲು ಒಂದಕ್ಕೆ 0—10—0ಯಿಂದ 0—5—0 ದರದ ವರೇಗೂ ದೊರಿಯುತ್ತದೆ.

ಇತರ ಅನುಭವಗಳಿಗೆ ನಮ್ಮ ಮೆನೇಜರರ ಮೇಲಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

Piedade Pinto,

Manager.

ಸಚಿತ್ರ ಆಂಗ್ಲಭಾಷಾ ಪ್ರಕಾಶಿಕಾ.

ಇದು ಹೊಸ ತರಹ, ಹೊಸ ಕ್ರಮ, ಆಂದವಾದ ಅಚ್ಚು, ವಿದ್ವಾಂಸರಿಂದ ತಯಾರಾದದ್ದು, ಇದನ್ನು ಗುರುವಿನಂತೆ ಭಾವಿಸಿ ಬೆಲೆ ಕಡಿಮೆ ಮಾಡಿದೆ. 1 ಪುಸ್ತಕಗಳೂ ಅಡಗಿರುವ ದೊಡ್ಡ ಪುಸ್ತಕ 1—12—0 1ನೇ ಪುಸ್ತಕ 3 ಭಾಗಗಳುಳ್ಳದ್ದು 0—14—0.

ಅಪೂರ್ವ ಪುಸ್ತಕಗಳು.

ವೈದ್ಯಸಾರ ಸಂಗ್ರಹ ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನ ಪಂಡಿತರಿಂದ ಮರ್ಯಾದಿಸಲ್ಪಟ್ಟಿರುತ್ತೆ. ರೂ. 3.

ರೆವಿನ್ಯು ಸರ್ವೆ ಮೊಂಡಳಿ ಕ್ಲಾಸಿಫಿಕೇಷನ್ ಕಲಿಯತಕ್ಕ ಬುಕ್ಕು. ಇದು ಮೋಜಣಿದಾರರಿಗೂ, ಪಟೇಲರಿಗೂ, ಶ್ಯಾನುಭೋಗರಿಗೂ ಅಗತ್ಯವಾಗಿ ಬೇಕಾದ ಪುಸ್ತಕ ಬೆಲೆ 1—4—0.

ರಾವ್ ಬಹದ್ದೂರ್ ವೀರೇಶಲಿಂಗಂ ಪಂತುಲು ಅವರ ರಾಜಶೇಖರ ಚರಿತ್ರೆ ಕನ್ನಡ ಎಡಿಷನ್ ಬೆಲೆ ರೂಪಾಯಿ 1—0—0.

ನಮ್ಮಲ್ಲಿ ವಿಶೇಷವಾಗಿ ಸರಕಾರಿ ಸ್ಕೂಲ ಪುಸ್ತಕ, ಸಂಸ್ಕೃತ, ಕನ್ನಡ, ತೆಲುಗು, ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳೂ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಕಥೆ ಪುಸ್ತಕಗಳೂ, ಹುಡುಗರಿಗೆ ಉಪಯುಕ್ತವಾದ ಗೇಮ್ಸ್ ಸಾಮಾನುಗಳೂ ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ.

	ರೂ. ಆ.		ರೂ. ಆ.		ರೂ. ಆ.
ದಯಾನಂದ ಸರಸ್ವತಿಯ ವರ ಚರಿತ್ರೆ	0—4	ಸೀತಾ ಚರಿತ್ರೆ	1—0	ಮಾಡಿದುಣ್ಣೋ ಮಹಾರಾಯ	0-10
ಅಮೂ ಖರ್ಜನ ಪದ್ಧತಿ	0—12	ಶಾಕುಂತಲ ನಾಟಕ	0—8	ಕುಳಗಲು ರಾಮಾಶಾಸ್ತ್ರಿಗಳವರ ಚರಿತ್ರೆ	1—0
ಇಂಡ್ಯನ್ ಪೆನಲ್ ಕೋಡ	2—0	ಸ್ತ್ರೀ ಧರ್ಮನೀತಿ	0—8	ಸುಮತಿ ಮದನಕುಮಾರರ ಚರಿತ್ರೆ I	0—8
ಅರೆಬಿಯನ್ ನೈಟ್ಸ್	2—4	ಶೋಭನೆ	0—8	,, II	0—7
ಸುರಸ	0—4	ಚಂದ್ರಕಳಾ	0—4	ಶಿವಗೀತೆ	0—6
ಶ್ಯಾಮು	0—1	ಕಲಾನಾಥ	0—6	ಪಾಕಶಾಸ್ತ್ರ	0—8
ಇಂದ್ರ ವಜ್ರ	0—4	ಪ್ರಶ್ನೋತ್ತರ ಬೋಧಿನಿ	1—4	ಸನಾತನಧರ್ಮ ದೀಪಿಕೆ	1—0
ಚಿಕ್ಕೋಜಿ	0—3	ವಿಷವೃಕ್ಷ	1—4	ಲಘುರಾಮಾಯಣ	0—4
ಕನಕಾಲುಕ	0—6	ಮುದ್ರಾಮಂಜೂಷ	1—8	ಕಥಾ ಮಂಜರಿ	0—6
ಶಿವಾನಂದಲಹರಿ	0—6	ಶುಕಸಪ್ತತಿ	2—0		
ಗೆದ್ದತ್ತೆ ಸೋತಳಿಯ	0—4				

ಪ್ರಸಿದ್ಧ ಪತ್ತೇದಾರಿ ಕಥೆಗಳು, ದುಷ್ಟ ಚತುಷ್ಟಯ, ನರಬಲಿ, ನೀಲಾಂಬರಿ, ವಿಷಮಯಕುರ್ಕ ಮಾಯ್ರಾವಿಯು, ಅತ್ಯಾಚಾರ, ಚೋರ ಚಕ್ರವರ್ತಿ, ನರರಾಕ್ಷಸ, ಪ್ರತಿಯೊಂದು ಪ್ರತಿಯೊ 2 ಆಣೆ

ವಿಳಾಸ:— **ವಿದ್ಯಾಸಾಗರ ಬುಕ್ ಡಿಪೋ,**

ಚಿಕ್ಕಪೇಟೆ ಬೆಂಗಳೂರು 1[illegible]

ಯುನಿವರ್ಸೆಲ್ ಎಸ್ಯುರೆನ್ಸ್ ಕಂ, ಲಿಮಿಟೆಡ್.

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ

ಸರಕಾರದ ಭದ್ರತೆಯ ಮೇಲ್ವಿಚಾರದಲ್ಲಿ ನಡೆಯುತ್ತಿರುವುದ

ಭಂಡವಾಳ ರೂ. 10,00,000.

ಈ ತನಕ ಕೊಡೋಣಾದ ವಿಮೆ ಹಕ್ಕುಗಳ ಮೊಬಲಗು ಶುಮಾರು 8,00,000.

ಫಂಡು— ರೂ. 3,00,000ಕ್ಕೆ ಮಿಕ್ಕಿದೆ.

ಸರಕಾರದವರ ಭದ್ರತೆಯಲ್ಲಿ ರೂ. 50,000ವಿರುವುದು.

ಜೀಫ್ ಇನ್ಸೂರೆನ್ಸ್ ಸ್ಕೀಮ್ ಎಂಬ ವೈದ್ಯಪರೀಕ್ಷೆ ಇಲ್ಲದೆ ವಿಮೆ ಉತ್ತರಾಯಿಸಿ ಕೊಳ್ಳಬಹುದಾದ ಸರ್ವರಿಗೂ ಸಾಧ್ಯವಾದ ಶುಲಭ ಕ್ರಮ.

ಈ ಪ್ರಾಂತ್ಯಗಳಲ್ಲಿ ಯಾವ ವಿಮೆ ಕಂಪೆನಿಗಳಲ್ಲಾದರೂ ಈತನಕ ಇಂಥಾ ಅಗ್ಗ ದರಗಳ ವಿಮೆ ಉತ್ತರಾಯಿಸುವ ಏರ್ಪಾಡೇ ಇರುವದಿಲ್ಲ. ಭಾರತೀಯರಲ್ಲಿ ವಿಶೇಷವಾಗಿರುವ ಬಡವರಗೋಸ್ಕರವೇ ಈ ಕ್ರಮವು ಏರ್ಪಡಿಸಲ್ಪಟ್ಟಿರುತ್ತದೆ. ಪ್ರೊವಿಡೆಂಟ ಫಂಡುಗಳ ಕ್ರಮದ ಪ್ರಕಾರ ಮುಂದಕ್ಕೆ ಸಂಭವಿಸಬಹುದಾದ ಅನನುಕೂಲತೆಗಳು ಇದರಲ್ಲಿರವು. ವಿಮೆ ಉತ್ತರಾಯಿಸಿಕೊಳ್ಳುವ ಈ ನವೀನ ಅಗ್ಗ ದರಗಳ ಏರ್ಪಾಡು ಬಹಳ ಉಪಯುಕ್ತವಾದದ್ದು ಎಂತ ವಿಮೆ ಸಂಘಗಳ ವಿಶೇಷ ಮಾಹಿತಿದಾರರ ಅಭಿಪ್ರಾಯವಿರುವದು. ನಿಶ್ಚಿತವಾದ ವಿಮೆ ಮೊಬಲಗುಗಳ ರೂಪಾಯಿ ಮತ್ತು ಅರ್ಧ ರೂಪಾಯಿಗಳ ಪೊಲಿಸಿಗಳು ಈ ಕ್ರಮದ ಮೇರೆಗೆ ಕೊಡೋಣಾಗುವವು.

ಸಾಮಾನ್ಯ ವಿಮೆ ಇಲಾಖೆ.

ಈ ಕಂಪೆನಿಯ ಈ ಇಲಾಖೆಯಲ್ಲಿ ವಿಮೆ ಉತ್ತರಾಯಿಸಿಕೊಳ್ಳುವವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಲಿರುವುದು. ಸಾಧ್ಯವಿರುವ ಅತ್ಯಂತ ಕಡಿಮೆಯ ದರಗಳು ಸಂಪೂರ್ಣವಾದ ಭದ್ರತೆಯು ಈ ಇಲಾಖೆಯ ವಿಶೇಷ ಪ್ರಯೋಜನಗಳಾಗಿರುವುದು. ಕಂಪೆನಿಯ ಲೆಕ್ಕದ ಸ್ಥಿತಿಗತಿಯನ್ನು ತೋರಿಸುವ ಮೊಖಾಬಿಲೆ ಪಟ್ಟಿಗಳನ್ನು ಈ ಕಂಪೆನಿಯ ವಿಷಯ ಪತ್ರಗಳ ಅಭಿಪ್ರಾಯವೇನೆಂಬುದನ್ನೂ ತರಿಸಿ ನೋಡಿರಿ

ಒಳ್ಳೇ ಚಟುವಟಿಕೆಯ ಜಾಣರಾದ ಏಜಂಟರುಗಳು ಬೇಕಾಗಿರುವರು. ಶರ್ತಗಳ ಬಗ್ಗೆ ಕೆಳಗಣ ವಿಳಾಸಕ್ಕೆ ಬರಕೊಳ್ಳಬಹುದು.

ವಿಳಾಸ:— **ಲಕ್ಷ್ಮಣ ರಾವ್ ಬ್ರದರ್ಸ್**

ಚೀಫ್ ಏಜಂಟ್ಸ್, ಕೆನರಾ, ಮೈಸೂರು, ಕೊಡಗು; ಪೋಸ್ಟು, ಉಡುಪಿ ಇವರಿಗೆ ಬರೆದುಕೊಳ್ಳಿರಿ.

ಜಯವಿಜಯ

ಅಥವಾ

ತೂಗಾಡುವ ಅಸ್ಥಿಪಂಜರ.

ಗುಜರಾಥಿ ಭಾಷೆಯಿಂದ ಕನ್ನಡದಲ್ಲಿ ಹೊಸತಾಗಿ ಭಾಷಾಂತರವಾದದ್ದು,

ಈ ಗ್ರಂಥದ ಕುರಿತು "ಸತ್ಯದೀಪಿಕೆ" ಎಂಬ ವಾರಪತ್ರಿಕೆಯು ಪಡುವ ಅಭಿಪ್ರಾಯ:—"ಇದು ಬಹಳ ರಸಿಕವಾದ ಆಶ್ಚರ್ಯವುಳ್ಳ ಒಂದು ಕಥೆಯಾಗಿದೆ. ಅದನ್ನು ಓದತೊಡಗಿದವರಿಗೆ ಅದನ್ನು ತೀರಿಸುವ ತನಕ ವಿಶ್ರಾಂತಿ ದೊರಕದು. ದೇಶಸ್ಥರು ಸಹಾ ವಿಲಾಯತಿ ಕಾದಂಬರಿಗಳಂತೆ ಚೆಲೋ ಕಥೆಗಳನ್ನು ಬರೆಯಬಲ್ಲರೆಂದು ಇದರಿಂದ ಪ್ರಕಟವಾಗುತ್ತದೆ. ಇದರ ಸಾರಾಂಶವೂ ನೀತಿಯೂ ಕೂಡಾ ಘನವಾದದ್ದು. ನೀತಿವಂತರು ಅನೇಕಸಾರಿ ಶ್ರಮೆಪಡುವಾಗ ದುಷ್ಟರು ಕೆಲವು ಸಮಯ ಮೆರೆಯುವರೆಂದೂ ಆದರೆ ದುಷ್ಟರ ದುಷ್ಟತನವು ಬೈಲಾಗಿ ಅವರು ತಮ್ಮ ದುಷ್ಟತನಕ್ಕೆ ತಕ್ಕ ಪ್ರತಿಫಲವನ್ನು ಹೊಂದುವಾಗ ನೀತಿಯು ಕಡೆಗೆ ಜಯಿಸಿ ಬಾಳುವದೆಂದೂ ಈ ಕಥೆಯ ಕವಿಯು ತೋರಿಸುವನು. ಇದಲ್ಲದೆ ಈ ಕಥೆಯ ಶೂರ್ಧರಲ್ಲಿ ಒಪ್ಪಳಾದ ಜಯೆಯಲ್ಲಿ ಪತಿವ್ರತಾ ಧರ್ಮವೂ ಇತರರಲ್ಲಿ ಬೇರೆ ಸದ್ಗುಣಗಳೂ ಹೊಳೆಯುವವು. ಕರ್ನಾಟಕ ಬಲ್ಲವರೆಲ್ಲರೂ ಈ ಕಥೆಯನ್ನು ಓದಿಕೊಂಡು ಈ ಕಥೆಯ ನೀತಿಯಿಂದ ಲಾಭವನ್ನು ಪಡೆದಾರೆಂತ ನಂಬುತ್ತೇವೆ." ಇತ್ಯಾದಿ. ಪುಸ್ತಕ ಕ್ರಯ 0—12—0. ವಿ. ಪಿ. ಬೇರೆ.

ವಿಳಾಸ:—

V. C. Amin,
C/o E. A. Goll Esq.
Sirdar Palace, Apollo Street,
BOMBAY

ಆರಾಟಕ್ಕೆ ಸಿದ್ಧವಿರುವುದು! ಮಾರಾಟಕ್ಕೆ ಸಿದ್ಧವಿರುವುದು!

ವೇಂಕಟಗಿರಿ ಮಹಾತ್ಮೆ.

ಪದ್ಮಾವತೀ ಕಲ್ಯಾಣದಿಂದ ಪೂರ್ಣವಾಗಿರುವುದು
(ಸಂಸ್ಕೃತ ಭವಿಷ್ಯತ್ಪುರಾಣದಿಂದ)

ಮಂಗಳೂರಲ್ಲಿ ಸ್ವರ್ಗಸ್ಥರಾಗಿ ಹೋದ ಮುಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿರುವುದು

959 ಪದ್ಯಗಳಿರುವ 15 ಅಧ್ಯಾಯಗಳಿಂದ ಕೂಡಿರುವುದು ಕಾವ್ಯರಚನೆಯು ಬಹು ಮೃದುರವೂ ಸುಲಭವೂ ಆಗಿರುವುದರಿಂದ ಸರ್ವರಿಗೂ ಅನುನಿತ್ಯದ ಪರಣಪುಸ್ತಕವಾಗಿರಲು ಉಚಿತವಾಗಿರುವುದು ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ವೃತ್ತಾಂತಗಳು ವಾಚಕರ ಮನಃಖಚಿತವಾಗುವಂತೆ ಈ ಗ್ರಂಥವು ಯಥೋಚಿತ ಚಿತ್ರಪರಗಳಿಂದ ಕೂಡಿರುವುದು. ಕ್ರಯ ಪ್ರತಿಯೊಂದಕ್ಕೆ ರೂ 1—8—0 ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್,
ಮಂಗಳೂರು

ಕರ್ನಾಟಕ ವೃತ್ತ ಮತ್ತು ಧನಂಜಯ.

ಕಳದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು.

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ ಮುಂಬಯಿ ಕರ್ನಾಟಕದ ಉತ್ತಮ ಕರಗತಿಯು ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೋಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ. ೨—೪—೦ ಆಗಿರುತ್ತದೆ; ಚಂದಾದಾರರಾಗಿ ಸೇರಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಮ್ಯಾನೇಜರ್, ಕರ್ನಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ, ಧಾರವಾಡ

ಡಾಕ್ಟರ್ ನವರತ್ನರ ಕೇಶಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ, ಒಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1 ಟಪ್ಪಾಲು ಚಾರ್ಜು 0—4—0

Dr. Navaratna & Sons,
Kalbadevi Road, BOMBAY

ಏಜಂಟರು:—ಡಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಅರ್ಧ ಬೆಲೆ!

ಒಂದು ತಿಂಗಳ ತನಕ ಮಾತ್ರ



ನಮ್ಮ ಸೆಟಿಸ್‌ಫೇಕ್ಷನ್ ಫ್ಲೂಟ್ ಹಾರ್ಮೋನಿಯಮ್ ಎಂಬ ರಾಗದ ಪೆಟ್ಟಿಗೆಯಿಂದ ಸರ್ವ ಗಾಯನಗಳನ್ನು ಹಾಡಲಿಕ್ಕಾಗುತ್ತದಲ್ಲದೆ ಎಲ್ಲಾ ವಾಯುಗುಣಗಳಲ್ಲಿಯೂ ಬಾಳುವಂಥಾದ್ದಾಗಿದೆ ಇದರ ಪೆಟ್ಟಿಗೆಯು ಸಾಗುವಾನಿ ಮರದಿಂದ ಮಾಡಿದ್ದಾಗಿದೆ. ಗಾಳಿ ಒರುವ ಪೆಟ್ಟಿಗೆಯು ಎಂಥಾ ಶಿಖೆಯನ್ನೂ ತಡೆಯುವದು. ಖಾಯುಸಾಗದಿದ್ದರೆ 7 ದಿವಸಗಳೊಳಗೆ ಹಿಂದಕ್ಕೆ ಕಳುಹಿಸಿದರೆ ಹಣ ಹಿಂದಕ್ಕೆ ಕೊಡೋಣಾಗುವದು.

ಕ್ರಯ ಸಿಂಗಲ್ ರೀಡ್ ರೂ. 38, 44, 50; ಈಗ ರೂ. 19, 22, 25ಕ್ಕೆ ಕೊಡಲ್ಪಡುವದು. ಡಬ್ಬಲ್ ರೀಡ್ ರೂ. 60, 70, 80, ಈಗ ರೂ. 30, 35, 40ಕ್ಕೆ ಕೊಡೋಣಾಗುವದು. ಆರ್ಡರಿನೊಂದಿಗೆ ರೂ. 5 ಅಡ್ವಾನ್ಸ್ ಕಳುಹಿಸಬೇಕಾಗಿದೆ

ವಿಳಾಸ:— ನೇಶನಲ್ ಹಾರ್ಮೋನಿಯಮ್ ಕೊ,
ಸಿಮ್ಲಾ ಪೋಸ್ಟು (ಬಿ) ಕಲ್ಕತ್ತ.
National Harmonium Co,
Simla P. O. (B) CALCUTTA.

ಬಿಕರಿಗೆ ಸಿದ್ಧವಾಗಿದೆ! ಬಿಡಬೇಡಿರಿ!! ಮುಂದೆ ಸಿಗಲಾರದು!!

ಪ್ರಪಂಚ ಯುದ್ಧ.

ಘನಘೋರ ಸಂಗ್ರಾಮ. ಸೊಗಸಾದ ಚಿತ್ರ

ಯುದ್ಧಾಗ್ರಣಿಗಳ ಭಾವಚಿತ್ರ.

ಯೂರೋಪ್ ಖಂಡದಲ್ಲೆಲ್ಲಾ ಉಲ್ಲೋಲಕಲ್ಲೋಲ ಮಾಡಿ ರಕ್ತಪ್ರವಾಹವನ್ನೇ ಹೊರಳಿಸುತ್ತ ಜಗತ್‌ಪ್ರಳಯ ಸ್ವರೂಪವಾಗಿ ಸಾಕ್ಷಾತ್ ಕಾಲಭೈರವನಂತೆ ಕೇಳಿರುವ ಭೀಕರ ಯುದ್ಧದ ನಾಯಕರನ್ನೂ ಆಯಾ ದೇಶದ ರಾಜಾಧಿರಾಜರನ್ನೂ ಚಕ್ರವರ್ತಿಗಳನ್ನೂ ಪ್ರತ್ಯಕ್ಷದಿಂದ ನೋಡಿದಂತೆ ತೋರಿಸುವ ಸುಂದರವಾದ ಚಿತ್ರಗಳು ಥಳಥಳಿಸುವ ಬೆಣ್ಣೆ ಕಾಗದದಲ್ಲಿ ಎರಡು ಬಣ್ಣಗಳಿಂದ ಮುದ್ದಾಗಿ ಮುದ್ರಿಸಿ ಕ್ರಯಕ್ಕೆ ಸಿದ್ಧವಾಗಿವೆ. ತ್ವರೆಮಾಡಿರಿ, ಸ್ವಲ್ಪವೇ ಪ್ರತಿಗಳಿವೆ, ತ್ವರೆಮಾಡಿರಿ

ಬಾಲ ಸುಟ್ಟ ಕೋತಿಯಂತೆ ಅತ್ತಿತ್ತ ತಿರುಗುತ್ತ ವ್ಯಾಪಾರದ ಹಡಗುಗಳನ್ನೂ ಯುದ್ಧದ ಹಡಗುಗಳನ್ನೂ ಹತಮಾಡಿ ಕಡೇಗೆ ತಾನೂ ಉರಿದು ಸಮುದ್ರದಡಿಗೆ ವಿಪಾತವಾದ ಎಮ್‌ಡನ್ನನ್ನು ನೋಡಿರುವಿರಾ, ಅದರ ನಾಯಕನನ್ನು ಬಲ್ಲಿರಾ, ಅದು ಮದರಾಸನ್ನು ಮುತ್ತಿ ಮಾಡಿದ ಅನಾಹುತಗಳನ್ನು ನೋಡಿರುವಿರಾ, ಕಡೆಗೆ ಅದಕ್ಕೆ ಗತಿ ಕಾಣಿಸಿದ ಸಿಡ್ನಿ ಎಂಬ ಹಡಗನ್ನು ಕಂಡಿರುವಿರಾ, ಅದರ ನಾಯಕ ಶಿಖಾಮಣಿಯನ್ನು ನೋಡಿರುವಿರಾ, ಧೀರಾದಿವೀರನೆಂದೆನ್ನಿಸಿದ ಪ್ರತಾಪೋದ್ದೀಪಿತನಾದ ಪ್ರತಾಪಸಿಂಗನನ್ನು ಕಂಡಿರುವಿರಾ

ಪಂಚಪಾಂಡವರಂತಿರುವ ಇಂಗ್ಲಂಡ್, ರಷ್ಯಾ, ಫ್ರಾನ್ಸ್, ಬೆಲ್ಜಿಯಮ್, ಜಪಾನ್ ಚಕ್ರವರ್ತಿಗಳನ್ನೂ, ದುರ್ಯೋಧನ, ದುಃಶ್ಯಾಸನ, ದುಷ್ಟರುಗಳಂತೆ ಕಾಲಾಗ್ನಿಗೆ ತುತ್ತಾಗುವದಕ್ಕಿರುವ ಜರ್ಮನಿ, ಆಸ್ಟ್ರಿಯಾ, ತುರ್ಕಿ ಚಕ್ರವರ್ತಿಗಳನ್ನೂ ನೋಡಿರುವಿರಾ, ಆಯಾ ರಾಷ್ಟ್ರಗಳ ಸೇನಾನಾಯಕರನ್ನೂ ನೌಕಾನಾಯಕರನ್ನೂ ವಾಯುವಿಮಾನ ನಾಯಕರನ್ನೂ ನೋಡಿರುವಿರಾ, ಇಲ್ಲವಾದರೆ ನಮ್ಮಲ್ಲಿ ಕ್ರಯಕ್ಕೆ ಸಿದ್ಧವಾಗಿರುವ ಚಿತ್ರವನ್ನು ತರಿಸಿ ನೋಡಿ ಈ ಚಿತ್ರಗಳ ಸಹಾಯದಿಂದ ಯುದ್ಧ ಸಂಗತಿಗಳು ಮನಸ್ಸಿನಲ್ಲಿ ಬಲು ಸುಲಭವಾಗಿ ನಾಟುವವು. ಪಕ್ಷಿಯಂತೆ ಆಕಾಶದಲ್ಲಿ ಹಾರಾಡುತ್ತಿರುವ ವಾಯುವಿಮಾನವನ್ನೂ, ಮತ್ಸ್ಯಗಳಂತೆ ಸಮುದ್ರದಲ್ಲಿ ಅಲೆದಾಡುತ್ತಿರುವ ಯುದ್ಧದ ಹಡಗವನ್ನೂ ಜರ್ಮನರು ಹೊಸದಾಗಿ ರಚಿಸಿದ ಫಿರಂಗಿಯನ್ನೂ ಈ ಚಿತ್ರಗಳ ಸಹಾಯದಿಂದ ಚನ್ನಾಗಿ ನೋಡಬಹುದು. ಸಮಸ್ತರೂ ನೋಡಬೇಕಾದ ವಿಷಯ.

ಬೆಲೆ 1 ರೂಪಾಯಿ 4 ಅಣೆ ಮಾತ್ರ.

ತರಾ. ಯುದ್ಧವಾರಂಭವಾದಮೇಲೆ ರಣರಂಗದಿಂದ ಈಚೆಗೆ ಹೊಸದಾಗಿ ಎತ್ತಿದ ಫೋಟೋಗಳನ್ನು ಸೀಮೆಯಿಂದ ತರಿಸಿ ಅಚ್ಚು ಮಾಡಿಸಿದ್ದೇವೆ. ಪ್ರತಿಯೊಂದು ಪರವನ್ನೂ ನಲುಗದಂತೆ ಮರದ ಕಟ್ಟಿಗೆಯಲ್ಲಿ ಸುತ್ತಿ ಭದ್ರವಾಗಿ ಸೇರುವಂತೆ ರವಾನಿಸಿ ಕೊಡುತ್ತೇವೆ ಈ ದಿನವೇ ಬರಿಯಿರಿ. ಅಂಚೆ ಹಾಸಲು ಫ್ರೀ.

ನಮಗೆ ಬರಿಯತಕ್ಕ ಆರ್ಡರುಗಳನ್ನು ಸ್ಪಷ್ಟಾಕ್ಷರಗಳಿಂದ ಬರಿಯತಕ್ಕದ್ದು ಮತ್ತು ವಿಳಾಸಗಳನ್ನು ವಿವರವಾಗಿ ಬರಿಯತಕ್ಕದ್ದು.

ವಿಳಾಸ:—ಮ್ಯಾನೇಜಿಂಗ್ ಪ್ರೊಪ್ರೈಟರ್, ಚಿತ್ರಕಲಾನಿಧಿ ಭವನಂ,
ಶ್ರೀಕ್ಷೇತ್ರ ಉಡುಪಿ, ದ. ಕನ್ನಡ.

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	218,800—0—0
Paid up Capital	193,800—0—0
Deposits	441,934—0—11
Reserve Fund	33,500—0—0

Besides the uncalled capital of Rs. 25,000/- 25% of the net profits are added annually to the Reserve Fund. Rs. 21,685/ have been invested in Government Paper of the face value of Rs. 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs 50/-and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½% per annum at the discretion of the managing committee

Current Deposit Account opened free of charge.

Savings Bank Account opened for any sum not less than 4 As and multiples thereof and interest paid @ 4½%.

Loans granted on proper securities and pledges

Sealed Parcels for safe custody received on a moderate charge.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು „	225,000—0—0
ಪ್ರತಿಜ್ಞಾತ ಮೂಲ ಧನವು „	218,800—0—0
ಆಗತ ಮೂಲ ಧನವು „	193,800—0—0
ರೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	441,934—0-11
ರಕ್ಷಿತ ಧನವು	33,500—0—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ವಾಲ್ಯಗಳಿಂದ ಕೇಳಲ್ಪಡದಿರುವ ರೂ 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿ ಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಗಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಇಲ್ಲಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd.,
Mangalore, 1st. April 1915.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯುಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ ನಿಮಿರಾಯನ ಶರೀರತ್ಯಾಗ, ಜನಕವಂಶಖ್ಯಾತಿಚರಿತ್ರೆ, ಕಕುಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸ್ತಾವವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದ್ದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲ್ಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರೀಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯ ಋಷಿನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡ ಅಕ್ಷರಗಳಿಂದ, ದಪ್ಪನಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರೆದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ಒಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—೩—೦

ತಮ್ಮ ವಿಳಾಸ:— [illegible]

ಕರ್ನಾಟಕ ಬುಕ್ ಡಿಪೋ [illegible]

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 16ನೇ ಎಪ್ರಿಲ್ 1915

ಪೆಂಟ್‌ಲೆಂಡ್ ಪೇಟೆ ಮತ್ತು ಕಟ್ಟಡಗಳನ್ನು ಕಟ್ಟಿಸುವ ಪರಸ್ಪರ ಸಹಾಯಕ ಸಂಘಗಳು.

ಇಲ್ಲಿ ಕೂಡಿದ ಕೊಯಮುತ್ತೂರು ಸರ್ಕಲ್ ಪರಸ್ಪರ ಸಹಾಯಕ ಸಂಘಗಳ ಪರಿಷದದ ಸ್ವಾಗತ ಕಮಿಟಿಯ ಅಧ್ಯಕ್ಷರ ಭಾಷಣದಲ್ಲಿ ಮಂಗಳೂರಿನವರು ಸಹಕಾರ ಪ್ರಾರಂಭವನ್ನು ಹೇಗೆ ಕೂಡಲೆ ಮಾಡಬಹುದೆಂಬುದು ಸೂಚಿಸೋಣಾಗಿರುವುದು. ಪೆಂಟಲೇಂಡ್ ಪೇಟೆಯಲ್ಲಿ ಕಟ್ಟೋಣಗಳನ್ನು ಕಟ್ಟಿಸಿ ಸಾಲದ ಬಾಟಿಯ ದರದಲ್ಲಿ ಈ ಕಟ್ಟೋಣಗಳ ಬಗ್ಗೆ ಖರ್ಚಾದ ಮೊಬಲಗುಗಳನ್ನು ವಸೂಲುಮಾಡಿಕೊಳ್ಳುವ ಪರಸ್ಪರ ಸಹಾಯ ಸಂಘ ಒಂದನ್ನು ಇಲ್ಲಿ ನಿರ್ಮಿಸಬೇಕೆಂದು ಅಧ್ಯಕ್ಷರ ಸೂಚನೆ ಇದೆ. ಇಂಥಾ ಸಂಘಗಳು ಕಟ್ಟಡಗಳ ಕೆಲಸವನ್ನು ಕೈಕೊಳ್ಳುವಂತೆ ಸರಕಾರದವರು ಬಹಳ ಕಡಮೆ ಬಡ್ಡಿಯ ದರದಲ್ಲಿ ಹಣವನ್ನು ಕೊಡಬಹುದೆಂಬ ಅಪ್ಪಣೆಯನ್ನು ಇತ್ತಲಾಗೆ ದಯಪಾಲಿಸಿರುವರು. ಇಂಥಾ ಅನುಕೂಲವಾದ ಸಂದರ್ಭದ ಪ್ರಯೋಜನವನ್ನು ಮಂಗಳೂರಿನವರು ಕಳಕೊಳ್ಳದಂತೆ ಇಲ್ಲಿ ಪ್ರಜಾ ಮುಂದಾಳುಗಳೂ ಮುನ್ಸಿಪಲ್ ಕೌನ್ಸಿಲಿನವರೂ ಕಟ್ಟಡಗಳ ಪರಸ್ಪರ ಸಹಾಯಕ ಸಂಘವೊಂದನ್ನು ಏರ್ಪಡಿಸುವುದು ಅಗತ್ಯವಾಗಿರುವುದು.

ಪೆಂಟ್‌ಲೇಂಡ್ ಪೇಟೆಯ ನಿರ್ಮಾಣದಿಂದ ಬಡ ಜನರಿಗೆ ಸಿಕ್ಕಿದ ಸಹಾಯವೇನು, ಈ ಪೇಟೆಯ ರಚನೆಯಿಂದ ಮಂಗಳೂರು ಪಟ್ಟಣದ ಆರೋಗ್ಯದ ಸ್ಥಿತಿಯು ಹೇಗೆ ಒಳ್ಳಿತಾಗುವುದು ಎಂಬೀ ವಿಷಯಗಳಲ್ಲಿ ಜನರ ಅಭಿಪ್ರಾಯವು ನಾನಾ ವಿಧವಾಗಿರುವುದು. ಪೆಂಟ್‌ಲೇಂಡ್ ಪೇಟೆಯಲ್ಲಿ ಇತ್ತಲಾಗೆ ಏಲಮಿನಲ್ಲಿ ಸ್ಥಳಗಳನ್ನು ಪಡಕೊಂಡವರಲ್ಲಿ ಬಡವರು ಬಹಳ ಮಂದಿ ಇರರು. ಸ್ಥಳಗಳನ್ನು ಹೆಚ್ಚಾಗಿ ಮಧ್ಯಮ ತರಗತಿಯವರೂ ಐಶ್ವರ್ಯವಂತರೂ ಪಡಕೊಂಡಿರುವರು. ಆದ್ದರಿಂದ ಬಡ ಜನರಿಗೆ ಈ ಪೇಟೆಯ ನಿರ್ಮಾಣದಿಂದ ಪ್ರಯೋಜನವಿರದೆಂದು ಹಲವರು ಅನ್ನುವರು. ಮಂಗಳೂರು ಪಟ್ಟಣದಲ್ಲಿ ಪ್ರಕೃತ ಹೊಲಸು ಸ್ಥಳಗಳಲ್ಲಿ ಮನೆಮಾಡಿಕೊಂಡಿರುವಂಥವರಲ್ಲಿ ಯಾರಾದರೂ ಪೆಂಟ್‌ಲೇಂಡ್ ಪೇಟೆಯಲ್ಲಿ ಸ್ಥಳಗಳನ್ನು ಪಡೆಯದ್ದರಿಂದ ಹೊಲಸು ಸ್ಥಳಗಳನ್ನು ನಿರ್ಮೂಲಗೊಳಿಸುವ ಸಂದರ್ಭಗಳಲ್ಲಿ ನಿವಾಸಿಕರಿಗೆ ಮನೆಕಟ್ಟಲು ಸ್ಥಳಗಳನ್ನು ಒದಗಿಸಿ ಕೊಡಲು ಪೆಂಟ್‌ಲೆಂಡ್ ಪೇಟೆಯಲ್ಲಿ ಅವಕಾಶ ಇರದು. ಆದ್ದರಿಂದ ಈ ಪೇಟೆಯ ಏರ್ಪಾಡಿನಿಂದ ಮಂಗಳೂರು ಪಟ್ಟಣದ ಆರೋಗ್ಯದ ಸ್ಥಿತಿಯು ಹೇಗೆ ಒಳ್ಳಿತಾಗುವದೆಂದು ಇನ್ನು ಕೆಲವರು ಅನ್ನುವರು. ಇಂಥಾ ಅಭಿಪ್ರಾಯಗಳನ್ನು ಆದರಿಸಿಕೊಂಡು ಸರಕಾರದವರು ಈ ಪೇಟೆಯಗೋಸ್ಕರ ಖರ್ಚು ಮಾಡುತ್ತಿರುವ ಸಾವಿರ ಕಟ್ಟಳೆಯ ಹಣಕ್ಕೆ ಸಮತುಲ್ಯವಾದ ಪ್ರಯೋಜನವು ಈ ಪಟ್ಟಣದ ನಿವಾಸಿಗಳಿಗೆ ಸಿಕ್ಕದೆ ಹೋಯಿತೆಂತ ಹೇಳಬಹುದೇ?

ಎಂಥಾ ಏರ್ಪಾಡುಗಳನ್ನಾದರೂ ಜಾರಿಗೆ ತರುವಾಗ ಅವುಗಳ ಕಾರ್ಯಕ್ರಮಗಳು ಏನೂ ಕುಂದುಕಗಳಿಲ್ಲದೆ ಸಂಪೂರ್ಣವಾಗಿರುವವೆಂತ ಹೇಳಲು ಎಂದೂ ಸಾಧ್ಯವಿರದು. ಪೆಂಟ್‌ಲೆಂಡ್ ಪೇಟೆಯ ನಿರ್ಮಾಣ ಕ್ರಮದಲ್ಲಿ ಕುಂದುಕಗಳು ಇರಬಹುದು. ಸ್ಥಳೀಯ ಅಧಿಕಾರಿಗಳು ಈ ಪೇಟೆಯ ನಿರ್ಮಾಣದ ಏರ್ಪಾಡನ್ನು ಮುನ್ಸಿಪಲ್ ಕೌನ್ಸಿಲಿನೊಂದಿಗೆ ಮತ್ತು ಈ ವಿಷಯದಲ್ಲಿ ಒಳ್ಳೇ ಅನುಭವಸ್ಥರಾದ ಮಂಗಳೂರಿನ ಇತರ ಗೃಹಸ್ಥರೊಂದಿಗೆ ಪರ್ಯಾಲೋಚಿಸಿಕೊಂಡು ನಂತರ ಈ ಏರ್ಪಾಡಿನ ಜಾರಿಯನ್ನು ನಡಿಸಿದ್ದಾದರೆ ಈಗ ಕಂಡು ಬರುವ ಕೆಲವು ಕುಂದುಕಗಳಿಗೆ ಆಸ್ಪದ ದೊರಕಲಿಕ್ಕಿಲ್ಲವಿತ್ತು. ನೂತನ ಪಟ್ಟಣ ವಿಸ್ತಾರದ ಕ್ರಮವನ್ನು ಬೆಂಗಳೂರು ಅಥವಾ ಈ ಸಂಸ್ಥಾನದ ಇತರ ಕಡೆಗಳಲ್ಲಿ ಹೇಗೆ ಕಾರ್ಯರೂಪಗೊಳಿಸಿರುವರೆಂಬ ಮಾಹಿತಿಯನ್ನು ಸಂಗ್ರಹಿಸಿಕೊಂಡು ಮಂಗಳೂರಿನ ಸ್ಥಳೀಕ ವಿದ್ಯಮಾನಗಳಿಗನುಸಾರವಾಗಿ ಈ ಅನುಭವವನ್ನು ತಿದ್ದಿ ಪೆಂಟ್‌ಲೆಂಡ್ ಪೇಟೆಯ ರಚನೆಯನ್ನು ಅಧಿಕಾರಿಗಳು ಕೈಕೊಂಡಿರುವದೆಂತ ತೋರಿ ಬರುವದಿಲ್ಲ. ಆದ್ದರಿಂದ ಈ ಪೇಟೆಯ ನಿರ್ಮಾಣಕ್ರಮದಲ್ಲಿ ಕುಂದುಕಗಳು ಇರಬಹುದು. ಈ ಕುಂದುಕಗಳನ್ನು ಹೋಗಗೊಳಿಸಲು ಈಗ ಸಹ ಸಾಧ್ಯವಿರುವದರಿಂದ ಮುನ್ಸಿಪಲ್ ಕೌನ್ಸಿಲಿನವರೂ ಸ್ಥಳೀಯ ಅಧಿಕಾರಿಗಳೂ ಕುಂದುಕಗಳೇನೆಂಬ ವಿಷಯವನ್ನು ಶೀಘ್ರದಲ್ಲಿ ಲಕ್ಷ್ಯಕ್ಕೆ ತಂದುಕೊಳ್ಳುವುದು ಅಗತ್ಯ.

ಇತ್ತಲಾಗೆ ನೂತನ ಪಟ್ಟಣಗಳನ್ನು ರಚಿಸುವ ವಿಷಯದಲ್ಲಿ ಮದ್ರಾಸು ಸರಕಾರದವರು ಹಲವು ಉಪಯುಕ್ತ ಸೂಚನೆಗಳಿಂದ ಕೂಡಿರುವ ಒಂದು ಹುಕುಮನ್ನು ಲೋಕಲ್ ಬೋರ್ಡುಗಳ ಮತ್ತು ಮುನ್ಸಿಪಲ್ ಕೌನ್ಸಿಲಿನವರ ಅನುಭವದ ಬಗ್ಗೆ ಪ್ರಕಟಿಸಿರುತ್ತಾರೆ. ಪೆಂಟ್‌ಲೆಂಡ್ ಪೇಟೆಯ ರಚನೆಯು ಸರಕಾರದವರು ದಯಪಾಲಿಸಿದ ಈ ಸೂಚನೆಗಳಿಗೆ ಎಷ್ಟರ ಮಟ್ಟಿಗೆ ಅನುಗುಣವಾಗಿರುವುದೆಂಬುದನ್ನು ಪ್ರಥಮದಲ್ಲಿ ನೋಡಿಕೊಳ್ಳುವುದುಚಿತ. ನಂತರ ಪ್ರೊಫೆಸ್ಸರ್ ಗೆಡ್ಡಿಸ್‌ರವರ ಉಪನ್ಯಾಸಗಳನ್ನು ಕೇಳಿ ಬಂದ ಇಲ್ಲಿಯ ಲೋಕಲ್ ಬೋರ್ಡುಗಳ ಪ್ರತಿನಿಧಿಗಳು ಈ ವಿಷಯದಲ್ಲಿ ಹೇಳಲಿಕ್ಕಿರಬಹುದಾದ ಅಭಿಪ್ರಾಯಗಳನ್ನು ಕೇಳಿಕೊಳ್ಳಬಹುದು. ಸ್ವದೇಶಾಭಿಮಾನಿಯ ಹಿಂದಿನ ಕೆಲವು ಸಂಚಿಕೆಗಳಲ್ಲಿ ನಮ್ಮ ಲೇಖಕರಲ್ಲೊಬ್ಬರು ಪೆಂಟ್‌ಲೆಂಡ್ ಪೇಟೆಯ ಕುರಿತು ಬರೆದಿರುವ ಕೆಲವು ಸೂಚನೆಗಳನ್ನು ಸಹ ಪರ್ಯಾಲೋಚನೆಗೆ ತಂದುಕೊಳ್ಳಬಹುದು. ಪೆಂಟ್‌ಲೆಂಡ್ ಪೇಟೆಯಲ್ಲಿ ಸ್ಥಳಗಳು ಮಾರೋಣಾದ ಮೇಲೆ ಈಗ ಈ ವಿಷಯವನ್ನು ಯೋಚಿಸಿಕೊಂಡು ಫಲವೇನು ಎಂತ ಅಧಿಕಾರಿಗಳಾಗಲೀ ಪ್ರಜಾ ಮುಂದಾಳುಗಳಾಗಲೀ ಸುಮ್ಮನಿರುವುದು ನಮಗೆ ಉಚಿತ ಕಾಣದು. ಏಕಂದರೆ ಪೆಂಟ್‌ಲೆಂಡ್ ಪೇಟೆಯಲ್ಲಿ ಮಾರೋಣಾಗದ ಸ್ಥಳಗಳು ಇನ್ನೂ ಹಲವಿರುವವು. ಈಗ ಸ್ಥಳಗಳನ್ನು ಕ್ರಯಕ್ಕೆ ಪಡಕೊಂಡವರು ಸಹ ಪಟ್ಟಣದ ಹಿತದ ಸೂಚನೆಗಳನ್ನು ಸ್ವೀಕರಿಸಲು ಸಿದ್ಧರಾಗಿರಬಹುದೆಂತ ನಮಗೆ ಭರವಸೆ ಇದೆ. ಆದ್ದರಿಂದ ಪೆಂಟ್‌ಲೆಂಡ್ ಪೇಟೆಯಿಂದ ಬಡವರಿಗೆ ಪ್ರಯೋಜನವಿಲ್ಲದೆ ಹೋಯಿತು, ಪಟ್ಟಣದ ಆರೋಗ್ಯವು ಇದರಿಂದ ನೆಟ್ಟಗಾಗುವ ಬಗೆ ಹೇಗೆ ಎಂತ ಸುಮ್ಮನೆ ನಿರರ್ಥಕವಾದ ಹಾಹಾಕಾರಗಳಿಂದ ಜನರಲ್ಲಿ ಅಭಾವವನ್ನು ಹುಟ್ಟಿಸುವ ಬದಲಿಗೆ ಈಗ ಈ ಪೇಟೆಯ ರಚನಾಕ್ರಮದಲ್ಲಿ ತೋರಿ ಬರುವ ಕುಂದುಕಗಳನ್ನು ಅಧಿಕಾರಿಗಳ ಲಕ್ಷ್ಯಕ್ಕೆ ತಂದು ಅವುಗಳನ್ನು ಸರಿಪಡಿಸಲು ಪ್ರಯತ್ನಿಸುವುದು ಕರ್ತವ್ಯವಾಗಿದೆ. ಮಂಗಳೂರಿನ ಅನಾರೋಗ್ಯ ಸ್ಥಿತಿಯನ್ನು ಮನಸ್ಸಿಗೆ ತಂದುಕೊಂಡು ಪೆಂಟ್‌ಲೆಂಡ್ ಪೇಟೆಯ ಏರ್ಪಾಡಿಗೆ ಸರಕಾರದವರು ತಮ್ಮ ಸಮ್ಮತಿಯನ್ನು ಕೊಡುವಂತೆ ಪ್ರಯತ್ನಿಸಿದ ನಮ್ಮ ಈಗಿನ ಮಾನ್ಯ ಕಲೆಕ್ಟರ ದೊರೆಗಳವರು ಪ್ರಕೃತ ಈ ಏರ್ಪಾಡಿನ ಜ್ಯಾರಿಯಲ್ಲಿ ಕಂಡು ಬರುವ ಕುಂದುಕಗಳನ್ನು ಹೋಗಲಾಡಿಸುವುದರಲ್ಲಿ ಬೇಕಾದ ಸಹಾಯವನ್ನು ಮಾಡ್ಯಾರಾದ್ದರಿಂದ ಮುನ್ಸಿಪಲ್ ಕೌನ್ಸಿಲಿನವರೂ ಇತರ ಪ್ರಜಾ ಹಿತ ಚಿಂತಕರೂ ಈ ವಿಷಯದಲ್ಲಿ ಬೇಕಾದ ಪ್ರಯತ್ನಗಳನ್ನು ಶೀಘ್ರದಲ್ಲಿ ನಡಿಸಬೇಕಾಗಿ ವಿಜ್ಞಾಪಿಸಿಕೊಳ್ಳುತ್ತೇವೆ. ಕಟ್ಟಡಗಳನ್ನು ಕಟ್ಟಿಸುವ ಪರಸ್ಪರ ಸಹಾಯಕ ಸಂಘವನ್ನು ಪೆಂಟ್‌ಲೆಂಡ್ ಪೇಟೆಯ ಬಗ್ಗೆ ವ್ಯವಸ್ಥೆಗೊಳಿಸಿದ್ದಲ್ಲಿ ಈ ಪೇಟೆಯ ರಚನಾಕ್ರಮದಲ್ಲಿ ಈಗ ಕಂಡು ಬರುವ ಕುಂದುಕಗಳಲ್ಲಿ ಹಲವನ್ನು ಹೋಗಗೊಳಿಸಲು ಸಾಧ್ಯವಾಗುವುದರಿಂದ ಪರಸ್ಪರ ಸಹಾಯಕ ಸಂಘಗಳ ಪರಿಷತ್ತಿನಿಂದ ಜನರಲ್ಲಿ ಉಂಟಾದ ಉತ್ಸಾಹವು ಬತ್ತಿಹೋಗುವ ಮೊದಲೇ ಪೆಂಟಲೆಂಡ್ ಪೇಟೆಯ ಪ್ರಸ್ತಾಪವನ್ನು ಪ್ರಜಾಮುಖಂಡರ ಮತ್ತು ಅಧಿಕಾರಿಗಳ ಲಕ್ಷ್ಯಕ್ಕೆ ಈ ಮೂಲಕ ತಂದಿರುತ್ತೇವೆ.

ಪುನೆಯ ಅನಾಥ ಬಾಲಿಕಾಶ್ರಮ.

ಈ ಆಶ್ರಮದ ೧೯ನೇ ವರ್ಷದ ವೃತ್ತಾಂತವು ಇತ್ತಲಾಗೆ ಪ್ರಕಟಿಸಲ್ಪಟ್ಟಿರುವುದು. ಸ್ತ್ರೀಸಮಾಜದ ಮೇಲ್ಮೆಯ ಬಗ್ಗೆ ಪುನೆಯಲ್ಲಿ ಮಹಿಳಾ ವಿದ್ಯಾಲಯ, ನಿಷ್ಕಾಮಕರ್ಮ ಮಠವೆಂಬ ಎರಡು ಸಂಸ್ಥೆಗಳು ಮೂರು ಯಾ ನಾಲ್ಕು ವರುಷಗಳ ಹಿಂದೆ ಸ್ಥಾಪಿಸಲ್ಪಟ್ಟಿದ್ದವು. ಈ ಎರಡು ಸಂಸ್ಥೆಗಳನ್ನು ಸಹ ಅನಾಥ ಬಾಲಿಕಾಶ್ರಮಕ್ಕೆ ಗತವರುಷದಲ್ಲಿ ಸೇರಿಸಿರುತ್ತಾರೆ. ನಿಷ್ಕಾಮಕರ್ಮ ಮಠದ ಮುಖ್ಯ ಉದ್ದೇಶವು ಮಹಿಳಾ ವಿದ್ಯಾಲಯದ ಮತ್ತು ಬಾಲಿಕಾಶ್ರಮದ ಕಾರ್ಯನಿರ್ವಾಹಕ್ಕೆ ಬೇಕಾದವರನ್ನು ಸಿದ್ಧಗೊಳಿಸುವುದಾಗಿರುತ್ತದೆ. ಅನಾಥ ಬಾಲಿಕಾಶ್ರಮದ ಮತ್ತು ಇತರ ಬಾಲಿಕೆಯರಿಗೆ ಮಹಿಳಾ ವಿದ್ಯಾಲಯದಲ್ಲಿ ಬೇಕಾದ ಶಿಕ್ಷಣವು ಕೊಡೋಣಾಗುತ್ತದೆ. ಈ ರೀತಿ ಪುನೆಯ ಅನಾಥ ಬಾಲಿಕಾಶ್ರಮವು ನಿರ್ಗತಿಕರಾದ ವಿತಂತುಗಳಿಗೆ ಮಾತ್ರವಲ್ಲ, ಇತರ ಸ್ತ್ರೀ ವರ್ಗಕ್ಕೂ ವಿಶೇಷ ಉಪಯೋಗಕರವಾದ ಸಂಸ್ಥೆಯಾಗಿದೆ. ದೇಶದ ನಾನಾ ಪ್ರಾಂತ್ಯಗಳಿಂದ ವಿಧವೆಯರೂ, ವಿವಾಹವಾಗದ ಕನ್ನೆಯರೂ ಈ ಸಂಸ್ಥೆಯಲ್ಲಿ ಶಿಕ್ಷಣವನ್ನು ಹೊಂದುತ್ತಿರುವರು. ಆಶ್ರಮದ ಶಾಲೆಯಲ್ಲಿ ಈ ಪ್ರಾಂತ್ಯದವರು ಸಹ ಕೂಡಿ ಸಾರಸ್ವತರು ಮತ್ತು ಗೌಡ ಸಾರಸ್ವತ ೧೪ ಜನ ಬಾಲಿಕೆಯರು ವಿದ್ಯಾಭ್ಯಾಸವನ್ನು ಹೊಂದುತ್ತಿರುವರು. ಗೌಡ ಸಾರಸ್ವತ ವಿತಂತುಗಳಲ್ಲಿ ಇಬ್ಬರು ಶಾಲೆಯನ್ನು ಸೇರುವಾಗ ಶಾಲಾ ಹುಡುಗಿಯ ಪ್ರಾಯಕ್ಕಿಂತ ಅಧಿಕ ಪ್ರಾಯಸ್ಥರಾದರೂ ಮರಾಠಿ ಭಾಷೆಯ ಕಡೆ ಪರೀಕ್ಷೆಯನ್ನು ತೇರಿದ ವಿಷಯವು ಈ ವೃತ್ತಾಂತದಲ್ಲಿ ಪ್ರಶಂಸಿಸಲ್ಪಟ್ಟಿರುವುದು. ಇವರಲ್ಲಿ ತುಳಸಿಬಾಯಿಯೆಂಬವರು ಪ್ರಕೃತ ಇಲ್ಲಿಯ ಕೆನರಾ ಬಾಲಿಕಾ ಪಾಠಶಾಲೆಯಲ್ಲಿ ಶಿಕ್ಷಕ ವೃತ್ತಿಯನ್ನು ಕೈಕೊಂಡಿರುವರು. ಇನ್ನೊಬ್ಬರು ಆನಂದಿಬಾಯಿಯವರು ಆಶ್ರಮದ ವಿದ್ಯಾಲಯದಲ್ಲಿ ಇಂಗ್ಲಿಷು ವಿದ್ಯಾಭ್ಯಾಸವನ್ನು ಪಡಿಯುತ್ತಿದ್ದಾರೆ. ಹೀಗೆ ಪುನೆಯ ಅನಾಥ ಬಾಲಿಕಾಶ್ರಮದ ಪ್ರಯೋಜನವು ಈ ಪ್ರಾಂತ್ಯಗಳಲ್ಲಿ ಸಹ ವ್ಯಕ್ತವಾಗುತ್ತ ಬರುತ್ತಿದೆ. ಉದ್ಯೋಗಹೀನರಾದ ವಿತಂತುಗಳು ಅನೇಕರಿರುವ ಈ ಪ್ರಾಂತ್ಯದವರು ಪುನೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಈ ಸಂಸ್ಥೆಯ ಪ್ರಯೋಜನವನ್ನು ಇನ್ನೂ ವಿಶೇಷವಾಗಿ ಪಡಿಯಬೇಕೆಂಬುದಾಗಿ ಅಪೇಕ್ಷಿಸುತ್ತೇವೆ.

ಪುರುಷಾರ್ಥವು.

ಪುರುಷನ್ಯಾರು, ಅವನ ಸ್ವರೂಪವೇನು, ಅವನಿಗೆ ಬೇಕಾದ ಅರ್ಥವಾವುದು? ಎಂಬ ಸಂಗತಿಗಳನ್ನು ವಿಚಾರಿಸದೆ ಕಣ್ಣು ಮುಚ್ಚಿಕೊಂಡು ಏನೇನೋ ಮಾಡಿ ಏನೇನೋ ಅನುಭವಿಸುವುದಕ್ಕಿಂತ, ತಾವ್ಯಾರು, ಯಾತಕ್ಕೆ ಹುಟ್ಟಿರುವೆವು, ಏನು ಮಾಡಬೇಕು ಎಂಬ ಸಂಗತಿಗಳನ್ನು ವಿಚಾರಿಸಿ ತಿಳಿದು ಅದಕ್ಕೆ ಅನುಸಾರವಾಗಿ ಕೆಲಸ ಮಾಡುವುದು ಅತ್ಯುತ್ತಮವು.

ನಾವ್ಯಾರು?

ಶಾಶ್ವತರಾದ ಪುರುಷರಾದ ನಾವು ಪುರುಷೋತ್ತಮನಾದ ಭಗವಂತನ ಮಕ್ಕಳು. ಆತನ ಅಂಶಸಂಭೂತರಾದ ಜೀವರು ನಾವು. ನಾವು ಯಾವಾಗಲೂ ಇರತಕ್ಕವರು, ಈ ದೇಹಗಳು ನಾವಲ್ಲವು. ನಾವು ಹಾಕಿಕೊಳ್ಳುವ ಅಂಗಿಗಳ ಹಾಗೆ ಇರತಕ್ಕವು ಈ ದೇಹಗಳು. ಇವು ಶಾಶ್ವತವಲ್ಲವು. ನಾವು ಭಗವಂತನೆಂಬ ಸಿಂಹದ ಮರಿಗಳು. ದೇಹಗಳೆಂಬ ಕುರಿಯ ಮರಿಗಳಲ್ಲವು. ಇದಕ್ಕೊಂದು ಕಥೆಯುಂಟು

ಸಿಂಹದ ಮರಿಯ ಕಥೆ.

ಒಂದಾನೊಂದು ಹೆಣ್ಣು ಸಿಂಹವು ಮರಿಯನ್ನು ಹಾಕಿ ಸತ್ತುಹೋಯಿತು. ಯಾರೂ ಪಾಲಕರಿಲ್ಲದೆ ಆ ಸಿಂಹದ ಮರಿಯು ಕುರಿಗಳ ಮಂದೆಯೊಳಗೆ ಸೇರಿ ಅವುಗಳ ಜತೆಯಲ್ಲಿ ಬೆಳೆಯುತ್ತಾ ಬಂತು. ಒಂದಾನೊಂದು ದಿನ ಒಂದು ದೊಡ್ಡ ಸಿಂಹವು ಆ ಮಾರ್ಗವಾಗಿ ಹೋಗುತ್ತಾ ಕುರಿಗಳೊಡನೆ ಆಡುತ್ತಿರುವ ಸಿಂಹದ ಮರಿಯನ್ನು ಕಂಡು ಅಚ್ಚರಿಗೊಂಡು ಅದನ್ನು ಕುರಿತು, ಅಯ್ಯಾ, ವ್ಯಾಘ್ರರಾಜನೇ, ನೀನು ಸಿಂಹದ ಮರಿಯು, ಕುರಿಗಳ ಜತೆಯಲ್ಲಿ ಕುರಿಯಂತೆ ಹೀಗೆ ಇರಬಹುದೆ? ಎಂದಿತು. ಅದಕ್ಕೆ ಆ ಸಿಂಹದ ಮರಿಯು ಸಿಂಹವನ್ನು ಕುರಿತು, ಅಯ್ಯಾ ನಾನು ಕುರಿಯ ಮರಿಯು, ಸಿಂಹದ ಮರಿಯಲ್ಲ, ನೋಡು! ಕುರಿಯಂತೆಯೇ ಹುಲ್ಲು ಮೇಯುವೆನು, ನೀರು ಕುಡಿಯುವೆನು, ತಿರುಗಾಡುವೆನು, ಎಂದಿತು. ಆ ಮಾತನ್ನು ಕೇಳಿ ಸಿಂಹವು ಕನಿಕರಗೊಂಡು, ಅದನ್ನು ಒಂದು ಕೆರೆಯ ಒಳಗೆ ಕರೆದುಕೊಂಡು ಹೋಗಿ ನೀರಿನೊಳಗೆ ಇಣಿಕಿನೋಡೆಂದಿತು. ಸಿಂಹದ ಮರಿಯು ಕೆಳಗಡೆ ನೀರಿನಲ್ಲಿ ಬಗ್ಗಿನೋಡಿತು. ಕುರಿಯ ಮರಿಯು ಕಾಣಲಿಲ್ಲ, ಸಿಂಹದ ಮರಿಯನ್ನು ಕಂಡಿತು. ಕೂಡಲೇ ಮಹಾ ಸಂತೋಷದಿಂದ ಒಂದು ಸಿಂಹನಾದವನ್ನು ಮಾಡಿತು. ಆ ಘರ್ಜನೆಯನ್ನು ಕೇಳಿದೊಡನೆಯೇ ಕುರಿಮರಿಗಳೆಲ್ಲವೂ ಮಹಾ ಭಯದಿಂದ ಓಡಿಹೋದವು ಅಂದಿನಿಂದ ಸಿಂಹದ ಮರಿಯು ತಾನು ಸಿಂಹವೆಂದರಿತು ವನದಲ್ಲಿ ಸ್ವತಂತ್ರವಾಗಿ ಆನಂದದಿಂದ ವಿಹರಿಸಲು ಪ್ರಾರಂಭಿಸಿತು.

ಇದೇ ಮೇರೆಗೆ ನಾವೂ ಸಹ ಭಗವಂತನೆಂಬ ಸಿಂಹದ ಮರಿಗಳೆಂಬುದನ್ನು ಅನೇಕವೇಳೆ ಮರೆತು ಕುರಿಮರಿಗಳಂತಿಹ ದೇಹೇಂದ್ರಿಯಾದಿಗಳನ್ನೇ ನಾವೆಂದು ಭಾವಿಸಿ ಕೆಲಸ ಮಾಡುತ್ತಿರುವೆವು ಆದ್ದರಿಂದ ಶಾಶ್ವತರಾದ ಭಗವದಂಶರಾದ ನಿಜವಾದ ನಮಗೆ ಬೇಕಾದದ್ದು ಏನೆಂಬುದನ್ನು ವಿಚಾರಿಸುವುದು ಕೂಡ ಇಲ್ಲದೆ, ಅನೇಕ ವೇಳೆ ನಮ್ಮ ಅಂಗಿಗಳಂತ ಈ ದೇಹಗಳ ಯೋಗ ಕ್ಷೇಮ ವಿಚಾರಣೆಯಲ್ಲಿ ಮಗ್ನರಾಗಿ ನಿಜವಾದ ನಮ್ಮನ್ನೂ ನಮ್ಮ ಯೋಗ ಕ್ಷೇಮವನ್ನೂ ಮರೆತು ನರಕುರಿಗಳಂತೆ ವರ್ತಿಸುತ್ತಿರುವೆವು.

ನಮ್ಮ ಸ್ವರೂಪವೇನು?

ಭಗವಂತನು ದೊಡ್ಡ ಜ್ವಾಲೆಯಂತೆ ಇರುವನು; ನಾವು ಅದರಲ್ಲಿನ ಕಿಡಿಗಳಂತೆ ಇರುವೆವು. ಆತನು ವೃಕ್ಷದಂತೆ ಇರುವನು, ನಾವು ಬೀಜದಂತೆ ಇರುವೆವು. ಆತನು ತಂದೆಯು; ನಾವು ಆತನ ಮಕ್ಕಳು. ಆತನು ಸಚ್ಚಿದಾನಂದ ಸ್ವರೂಪನು; ಸತ್=ಇರುವವನು, ಚಿತ್=ಜ್ಞಾನಸ್ವರೂಪನು, ಆನಂದ=ಸುಖಸ್ವರೂಪನು, ಅಂದರೆ ಯಾವಾಗಲೂ ಎಲ್ಲದರಲ್ಲಿಯೂ ಇರುವವನು, ಎಲ್ಲವನ್ನೂ ಬಲ್ಲವನು, ಅನಂತಸುಖಮಯನು. ನಾವಾದರೋ ಆತನ ಅಂಶರು. ಆದ್ದರಿಂದ ನಾವೂ ಸಹ ಸಚ್ಚಿದಾನಂದ ಸ್ವರೂಪ ಅಂಶರೇ; ಆತನಲ್ಲಿರುವ ಶಕ್ತಿಗಳೆಲ್ಲವೂ ನಮ್ಮಲ್ಲಿ ಬೀಜರೂಪದಲ್ಲಿ ಅಡಗಿರುವುವು.

ಜ್ವಾಲೆಯಲ್ಲಿ ಎಲ್ಲ ಕೆಲಸಗಳನ್ನೂ ಮಾಡುವ ಶಕ್ತಿಯು ಈಗ ಇರುವುದು; ಕಿಡಿಯು ಅಷ್ಟು ಕೆಲಸವನ್ನು ಈಗ ಮಾಡಲಾರದು. ಆದರೆ ಹುಲ್ಲು ಎಲೆಕಡ್ಡಿಗಳನ್ನು ಹಾಕಿ ಉರಿಯನ್ನು ದೊಡ್ಡದು ಮಾಡುತ್ತಾ ಬಂದರೆ ಕಾಲಕ್ರಮದಲ್ಲಿ ಕಿಡಿಯೂ ಕೂಡ ದೊಡ್ಡ ಜ್ವಾಲೆಯಾಗಿ ಅಷ್ಟು ಕೆಲಸವನ್ನು ಮಾಡುವುದು. ಭಗವಂತನು ದೊಡ್ಡ ಜ್ವಾಲೆಯಂತೆಯೂ, ನಾವು ಅದರೊಳಗಿನ ಕಿಡಿಗಳಂತೆಯೂ ಇರುವೆವು ಅದರಂತೆಯೇ ನಾವೂ ಕೂಡ ಕ್ರಮಕ್ರಮವಾಗಿ ಬೆಳೆದು ಒಳಗಿರುವ ಶಕ್ತಿಗಳೆನ್ನೆಲ್ಲಾ ಬೆಳೆಸಿಕೊಂಡು ಭಗವಂತನಂತೆ ಕೆಲಸ ಮಾಡತಕ್ಕವರಾಗುವೆವು. ಸಾಮಾನ್ಯವಾದ ಬೆಂಕಿಯ ಕಿಡಿಯು ಆರಿಹೋಗಬಹುದು. ಆದರೆ ಶಾಶ್ವತನಾದ ಭಗವಂತನ ಕಿಡಿಗಳು ನಾವಾದ್ದರಿಂದ ನಾವು ಆರಿಹೋಗತಕ್ಕವರಲ್ಲ. ಎಂದೋ ಒಂದು ದಿನ ಅಷ್ಟು ದೊಡ್ಡವರಾಗಲೇ ಬೇಕು.

ಮರದಲ್ಲಿರುವ ಶಕ್ತಿ ಎಲ್ಲವೂ ಬೀಜದಲ್ಲಿ ಅಡಗಿರುವುದು. ಬೀಜವನ್ನು ಒಡೆದು ಚೆನ್ನಾಗಿ ನೋಡಿದರೆ ಮುಂದೆ ಆಗುವ ಮರವೆಲ್ಲವೂ ಅದರಲ್ಲಿ ಸೂಕ್ಷ್ಮರೂಪದಲ್ಲಿ ಅಡಗಿರುವುದನ್ನು ನೋಡಬಹುದು. ಭೂಮಿಯಲ್ಲಿ ಬಿತ್ತಿ ಅದನ್ನು ಸರಿಯಾಗಿ ಬೆಳೆಸಿದರೆ ಕಾಲಕ್ರಮದಲ್ಲಿ ಆ ಬೀಜವು ದೊಡ್ಡ ಮರವಾಗಿ ಬೆಳೆದು ತಾಯಿಮರದಂತೆಯೇ ಹೇಗೆ ಫಲದಾಯಕವಾಗುವುದೋ ಹಾಗೆಯೇ ಭಗವದ್ಬೀಜರಾದ ನಾವು ಈ ಲೋಕಗಳೆಂಬ ಭೂಮಿಯಲ್ಲಿ ಬಿತ್ತಲ್ಪಟ್ಟ ತಾಯಿಮರವಾದ ಭಗವಂತನಂತೆ ಬೆಳೆಯಲು ಬಂದಿರುವೆವು. ಹೊರಗಿನ ಬೀಜವು ಹುಳಿತುಕೊಳೆತು ಕೆಟ್ಟುಹೋಗಬಹುದು. ಆದರೆ ಶಾಶ್ವತ ಬೀಜರಾದ ನಾವು ಎಂದಿಗೂ ನಾಶವಾಗತಕ್ಕವರಲ್ಲ ಎಂದೋ ಒಂದು ದಿನ ಅಷ್ಟು ದೊಡ್ಡದಾಗಿ ಬೆಳೆದೇ ತೀರಬೇಕು.

ಮಗುವು ಸರಿಯಾಗಿ ಬೆಳೆದರೆ ಕೊನೆಗೆ ತಂದೆಯಂತೆ ಆಗಿ ಆತನಂತೆ ಕಾರ್ಯನಿರ್ವಾಹಕನಾಗುವನು. ಭಗವಂತನು ತಂದೆಯು, ನಾವು ಆತನ ಮಕ್ಕಳು ನಾವು ಕೂಡ ಬೆಳೆದು ಆತನಂತಾಗಿ ಆತನ ಕಾರ್ಯನಿರ್ವಾಹಕರಾಗಬೇಕು. ಇಲ್ಲಿನ ತಂದೆಯು ಲೋಪದೋಷಯುತನು. ಆದರೆ ಭಗವಂತನಾದ ತಂದೆಯು ನಿರ್ದೋಷಿಯು, ಸಕಲ ಕಲ್ಯಾಣಗುಣ ಪರಿಪೂರ್ಣನು. ಆದ್ದರಿಂದ ಎಂದೋ ಒಂದು ದಿನ ನಾವು ಅಂತಹ ಕಲ್ಯಾಣಗುಣಪೂರ್ಣರಾಗಲೇ ಬೇಕು.

ನಾವು ಹುಟ್ಟಿದ್ದೇಕೆ?

ಎಂದಾದರೂ ಒಂದು ದಿನ ಪೂರ್ಣರಾಗಿ ಬೆಳೆಯುವ ಪಕ್ಷದಲ್ಲಿ ಸುಖವಾಗಿ ಸುಮ್ಮನಿರುವುದು ಬಿಟ್ಟು ಏಕೆ ಕಷ್ಟಪಟ್ಟು ಕೆಲಸ ಮಾಡಬೇಕೆಂದು ಕೇಳಬಹುದು. ಎಷ್ಟು ಕಷ್ಟಪಟ್ಟು ನಾವು ಕೆಲಸ ಮಾಡುವೆವೋ ಅಷ್ಟು ಬೇಗ ನಾವು ಬೆಳೆಯುವೆವು, ಎಷ್ಟು ಜಾಗ್ರತೆಯಾಗಿ ಬೆಳೆಯುವೆವೋ ಅಷ್ಟು ಹೆಚ್ಚಾಗಿ ಇತರರಿಗೆ ಸಹಾಯ ಮಾಡಬಹುದು ನಾವು ಭಗವದಂಶರಾದ್ದರಿಂದ ಅದೇ ನಮ್ಮ ನಿಜವಾದ ಸ್ವಭಾವವು. ಆತನು ಯಾವಾಗಲೂ ಲೋಕಹಿತಕ್ಕಾಗಿ ಕೆಲಸ ಮಾಡುತ್ತಿರುವನು. ಆತನ ಮಕ್ಕಳಾದ ನಾವು ಸಹ ಬೆಳೆದ ಹಾಗೆಲ್ಲಾ ಹೆಚ್ಚುಹೆಚ್ಚಾಗಿ ಲೋಕಹಿತಕ್ಕಾಗಿ ಭೂತಸೇವೆಯನ್ನು ಮಾಡುವುದೇ ಜೀವರಾದ ನಮ್ಮ ಸಹಜ ಸ್ವಭಾವವಲ್ಲವೇ? ನಾವು ಮಾತ್ರ ಯಾವಾಗಲೂ ಇತರರಿಂದ ಜ್ಞಾನವನ್ನೂ ಸುಖವನ್ನೂ ಸಹಾಯವನ್ನೂ ಹೊಂದಲು ಅಪೇಕ್ಷಿಸುತ್ತಾ ಇತರರಿಗೆ ಮಾತ್ರ ನಾವು ಅವುಗಳನ್ನು ಕೊಡುವುದಿಲ್ಲವೆಂಬುವುದು ಸಹಜವೇ? ತನ್ನ ಸುಖವನ್ನು ತಾನು ಎಷ್ಟರ ಮಟ್ಟಿಗೆ ಮರೆತು ಇತರರ ಹಿತಕ್ಕಾಗಿ (ಪರಾರ್ಥಕ್ಕಾಗಿ) ಕೆಲಸ ಮಾಡುವನೋ ಆತನು ಅಷ್ಟು ದೊಡ್ಡವನು. ಲೋಕದಲ್ಲಿ ಇಷ್ಟು ಜನರು ಇಷ್ಟು ದಾರಿದ್ರ್ಯರೋಗ ಅಜ್ಞಾನಗಳಿಂದ ದುಃಖಪಡುತ್ತಿರುವದನ್ನು ನೋಡಿ ಮನಕರಗಿ ಅವುಗಳ ನಿವಾರಣೆಗಾಗಿ ಕೆಲಸ ಮಾಡುತ್ತಾ ಮಾಡುತ್ತಾ ಕೊನೆಗೆ ತನ್ನ ಸುಖದುಃಖಗಳೆಲ್ಲವನ್ನೂ ಮರೆತು ಲೋಕಸಂಗ್ರಹಕಾರ್ಯವೊಂದರಲ್ಲೇ ಮಗ್ನನಾಗಿ ಐಕ್ಯಹೊಂದುವನು. ಭಗವಂತನ ಜ್ಞಾನದಲ್ಲಿ ಐಕ್ಯಹೊಂದಿ, ಅಜ್ಞಾನವನ್ನು, ಲೋಕದ ಅಜ್ಞಾನವನ್ನು ಹೋಗಲಾಡಿಸುವುದಕ್ಕೆ ಉಪಯೋಗಿಸುತ್ತಾ ಜ್ಞಾನಿಯೆನಿಸಿಕೊಳ್ಳುವನು. ಅನಂತಶಕ್ತಿಯಲ್ಲಿ ಸೇರಿ ಆ ಶಕ್ತಿಯನ್ನು ಲೋಕದ ದಾರಿದ್ರ್ಯ ನಿವಾರಣೆಗಾಗಿ ಉಪಯೋಗಿಸುತ್ತಾ ಯೋಗಿಯೆನ್ನುವನು. ಪೂರ್ಣಾನಂದದಲ್ಲಿ ಐಕ್ಯಹೊಂದಿ ಆ ಪ್ರೀತಿ ಎಲ್ಲವನ್ನೂ ಲೋಕದ ದುಃಖನಿವಾರಣೆಗಾಗಿ ಉಪಯೋಗಿಸುತ್ತಾ ಭಕ್ತನಾಗುವನು. ಕೊನೆಗೆ ಭಕ್ತಿಜ್ಞಾನ ವೈರಾಗ್ಯಗಳಿಂದ ಪರಿಪೂರ್ಣನಾಗಿ ಭಗವಂತನಂತೆ ಆಗುವನು. ಅಥವಾ ಭಗವಂತನಲ್ಲಿ ಸೇರಿಹೋಗುವನು, ಇಲ್ಲವೇ ಭಗವಂತನೇ ಆಗುವನು. ಯಾವ ವಿಧದಲ್ಲಿ ಹೇಳಿದರೂ ಸರಿ. ಪೂರ್ಣನಾಗುವನು. ಇದೇ ಪುರುಷಾರ್ಥವು. ಮನುಷ್ಯನಾಗಿ ಹುಟ್ಟಿದ್ದಕ್ಕೆ ಸಾರ್ಥಕವು.

ಕೆ. ನರಹರಿಶಾಸ್ತ್ರಿ.

ಯುದ್ಧವೂ ಮದ್ಯಪಾನವೂ.

ಯುದ್ಧವು ಪ್ರಾರಂಭವಾಗುವ ಮೊದಲು ಮದ್ಯಪಾನದ ವ್ಯಸನವು ರುಶ್ಯಾ ಫ್ರೆಂಚ ಮೊದಲಾದ ದೇಶದಲ್ಲಿ ಉಚ್ಚಸ್ಥಾನವನ್ನು ಪಡೆದಿತ್ತು. ಆದರೆ ಯುದ್ಧ ಪ್ರಾರಂಭವಾದ ಕೂಡಲೇ ರುಶ್ಯನರು ಮದ್ಯಪಾನ ವ್ಯಸನದಿಂದ ಉಂಟಾಗುವ ಅನರ್ಥವನ್ನು

ಅರಿತು ಈ ವ್ಯಸನವನ್ನು ಬಿಟ್ಟು ಬಿಡಲು ಮುಂದರಿದ್ದರಿಂದ ಝಾರರವರೂ ಮಂತ್ರಿಯವರೂ ಕೂಡಿ ಯಾರೂ ಮದ್ಯವನ್ನು ತಕ್ಕೊಳ್ಳಬಾರದೆಂಬ ಕಟ್ಟಪ್ಪಣೆ ಮಾಡಿದರು. ಫ್ರೆಂಚರೂ ರುಶ್ಯನರ ಮಾರ್ಗವನ್ನೇ ಅವಲಂಬಿಸಿದರು. ಇದರಿಂದ ಯೂರೋಪದ ಇತರ ರಾಜ್ಯಗಳವರು ಆಶ್ಚರ್ಯಚಕಿತರಾದರು ಇಂಗ್ಲಾಂಡಿನಲ್ಲಿ ಮದ್ಯಪಾನದ ವ್ಯಸನವು ಶಿಖರವನ್ನೇರಿದ್ದುದರಿಂದ ಇದರಿಂದುಂಟಾದ ಕೆಲವು ಅನಿಷ್ಟ ಪರಿಣಾಮಗಳು ಯುದ್ಧಕಾಲದಲ್ಲಿ ಪ್ರತ್ಯಕ್ಷವಾದವು ಮದ್ದು ಗುಂಡು ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕೆಲಸದವರು ಈ ವ್ಯಸನದಿಂದ ತ ಲಪಿದವರಾದುದರಿಂದ ತಮ್ಮ ಕರ್ತವ್ಯವನ್ನು ಮರೆಯಲಾರಂಭಿಸಿದರು. ಇದನ್ನೆಲ್ಲಾ ನೋಡಿದ ಇಂಗ್ಲಾಂಡಿನ ರಾಜ್ಯನೀತಿ ವಿಶಾರದರು ಇಂಗ್ಲಾಂಡಿನಲ್ಲಿ ಈ ವ್ಯಸನಕ್ಕೆ ತಡೆಕಟ್ಟುವ ಬಗೆ ಹ್ಯಾಗೆಂತ ಆಲೋಚಿಸ ತೊಡಗಿ, ಈಗಿನ ಸ್ಥಿತಿಯಲ್ಲಿ ಮದ್ಯಪಾನದ ವ್ಯಸನವನ್ನು ನಿಲ್ಲಿಸುವದು ಅತಿ ಅಗತ್ಯವೆಂದು ಜನಸಾಮಾನ್ಯರಿಂದ ತಿಳಿದು ಹೇಳಿದರು. ಕಿಚನರ್ ಪ್ರಭುಗಳವರೂ ಇತರ ಮಂತ್ರಿಗಳವರೂ ಮದ್ಯಪಾನ ವ್ಯಸನದಿಂದ ಗುಂಡುಮದ್ದು ಕಾರ್ಖಾನೆಗಳಲ್ಲಿ ಕೆಲಸ ಮಾಡುವವರಿಂದ ಉಂಟಾಗುವ ತೊಂದರೆಗಳನ್ನು ಜೋರ್ಜ ಸಾರ್ವಭೌಮರವರಿಗೂ ತಿಳಿಸಿ ಮದ್ಯಪಾನದ ತಡೆ ಮಾಡುವ ಉಪಾಯವನ್ನು ಆಲೋಚಿಸ ತೊಡಗಿದರು ಕಡೆಗೆ ಜೋರ್ಜ ಸಾರ್ವಭೌಮರವರು ಒಂದು ಉಪಾಯವನ್ನೆತ್ತಿ ತಮ್ಮ ಅರಮನೆಯಲ್ಲಿ ಮದ್ಯಪಾನದ ಉಪಯೋಗ ಮಾಡಲಾಗುವದಿಲ್ಲವೆಂದೂ ಜನಸಾಮಾನ್ಯರೂ ಇದೇ ದಾರಿಯನ್ನು ಹಿಡಿಯಬೇಕೆಂದೂ ತಿಳಿಸಿ ಇಡೀ ಜನಾಂಗಕ್ಕೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟರು. ಇವರ ಮೇಲ್ಪಂಕ್ತಿಯನ್ನು ಇಂಗ್ಲಾಂಡಿನ ಮಂತ್ರಿಗಳೂ ಪ್ರಭುಮಂತಾನದವರೂ ಜನಸಾಮಾನ್ಯರೂ ಮಾನ್ಯಮಾಡಿ ಮದ್ಯಪಾನವನ್ನು ವರ್ಜಿಸಲು ತೊಡಗಿದ್ದಾರೆ. ಗುಂಡುಮದ್ದುಗಳನ್ನು ಮಾಡುವ ಕಾರ್ಖಾನೆಗಳ ಕೆಲಸಗಾರರಲ್ಲಿಯೂ, ಗಣಿಗಳ ಕೆಲಸಗಾರರಲ್ಲಿಯೂ ಮದ್ಯಪಾನ ವರ್ಜನೆ ಮಾಡುವ ಚಳವಳವು ಉಂಟಾಗಿರುವದು. ಹಿಂದೂಸ್ಥಾನದಲ್ಲಿಯೂ ಈ ವಾರ್ತೆಯು ಮುಟ್ಟಿ ಕಲ್ಕತ್ತೆ ಮೊದಲಾದ ದೊಡ್ಡ ದೊಡ್ಡ ಸ್ಥಳಗಳ ಕ್ಲಬ್ ಮೊದಲಾದವುಗಳಲ್ಲಿ ಯೂರೋಪಿಯಾನರೂ ಭಾರತೀಯರೂ ಮದ್ಯಪಾನದ ವ್ಯಸನವನ್ನು ತಗ್ಗಿಸಲು ಪ್ರಯತ್ನಿಸಿರುವರು. ಜೋರ್ಜ ಸಾರ್ವಭೌಮರವರ ಈ ಮಹತ್ವವಾದ ಮೇಲ್ಪಂಕ್ತಿಯ ಪರಿಣಾಮವು ದೇಶಕ್ಕೆ ಕ್ಷೇಮಕರವಾಗುವದರಲ್ಲಿ ಅನುಮಾನವಿಲ್ಲ ನಮ್ಮ ಭರತಖಂಡದಲ್ಲಿಯೂ ಈ ಚಕ್ರವರ್ತಿಯರ ಮೇಲ್ಪಂಕ್ತಿಯು ಕಾರ್ಯರೂಪುಗೊಳ್ಳುವಂತೆ ಪ್ರಜಾಮುಂದಾಳುಗಳೂ, ಆಯಾ ಜಾತಿಯ ಮುಖಂಡರೂ ಪ್ರಯತ್ನಿಸಿದರೆ ನಮ್ಮ ದೇಶವೂ ಮೇಲ್ಮೆಯನ್ನು ಹೊಂದುವದೆಂದು ಬೇರೆ ಹೇಳಬೇಕೇ?

ಬ್ರಿಟಿಷ್ ವಸಾಹತಿಗಳಲ್ಲಿರುವ ಭಾರತೀಯರೊಳಗೆ ನಡಿಯುವ ಆತ್ಮಹತ್ಯ ಮತ್ತು ಅನಾಚಾರ.

ಬ್ರಿಟಿಷ್ ವಸಾಹತಿಗಳಲ್ಲಿರುವ ಭಾರತೀಯರ ಸ್ಥಿತಿಗತಿಗಳನ್ನು ತಿಳಕೊಳ್ಳುವರೆ ಇಂಡಿಯಾ ಸರಕಾರದವರಿಂದ ನೇಮಕವಾದ ಮೆಸ್ಸರ್ಸ್ ಮೆಕಾನ್ನೈಲ್ ಮತ್ತು ಚಿಮ್ಮನ್ ಲಾಲರು ಮಾಡಿದ ವರದಿಯಿಂದ ಈ ಕೆಳಗಿನ ವಿಷಯವು ತಿಳಿಯಬರುವದು:—

ಕಳದ ಹತ್ತು ವರ್ಷಗಳಲ್ಲಿ ಟ್ರಿನಿದಾದಿನಲ್ಲಿದ್ದ ಸ್ವಾತಂತ್ರಿಕರಾದ ಭಾರತೀಯರ ಸಂಖ್ಯೆಯು ೧,೦೬,೦೦೦. ಹಿಂದೂಸ್ಥಾನದಿಂದ ಕರಾರು ಬರಕೊಟ್ಟು ಹೋದ ಭಾರತೀಯರ ಸಂಖ್ಯೆ ೧೦ ೭೦೦. ಅಲ್ಲಿ ಸ್ವತಂತ್ರರಾಗಿರುವ ಭಾರತೀಯರ ಒಟ್ಟು ಸಂಖ್ಯೆಯಲ್ಲಿ ಒಂದು ಮಿಲಿಯ ಜನರಲ್ಲಿ ೧೩೪ರಂತೆ ಆತ್ಮಹತ್ಯ ಮಾಡಿಕೊಂಡಿರುವರು ಕರಾರು ಬರಕೊಟ್ಟು ಹೋದ ಭಾರತೀಯರಲ್ಲಿ ಒಂದು ಮಿಲಿಯಕ್ಕೆ ೪೦೦ರಂತೆ ಆತ್ಮಹತ್ಯ ಮಾಡಿಕೊಂಡಿರುವರು.

ಬ್ರಿಟಿಷ್ ಗಿಯಾನ್ನದಲ್ಲಿರುವ ಸ್ವಾತಂತ್ರಿಕರಾದ ೧೨,೦೦೦ ಭಾರತೀಯರಲ್ಲಿ ಮಿಲಿಯ ಜನಕ್ಕೆ ಸರಾಸರಿ ೧೦೦ರಂತೆ ಆತ್ಮಹತ್ಯ ಮಾಡಿಕೊಂಡಿರುವರು ಅಲ್ಲಿಗೆ ಹೋದ ಭಾರತೀಯರ ೧,೦೮,೦೦೦ ಸಂಖ್ಯೆಯಲ್ಲಿ ಹತ್ತು ವರ್ಷಗಳ ಮಧ್ಯಕಾಲ ಮಿಲಿಯಕ್ಕೆ ೫೨ ಜನರಂತೆ ಮಾತ್ರ ಆತ್ಮಹತ್ಯ ಮಾಡಿಕೊಂಡಿರುತ್ತಾರೆ. ಕರಾರು ಬರಕೊಟ್ಟು ಹಿಂದೂಸ್ಥಾನದಿಂದ ಹೋಗಿ ಜಮಾಯಿಕದಲ್ಲಿರುವ ಭಾರತೀಯರಲ್ಲಿ ಕಳದ ಹತ್ತು ವರ್ಷ ಮಧ್ಯಕಾಲ ೧೦ ಆತ್ಮಹತ್ಯಗಳು ನಡೆದಿರುವವು. ಹತ್ತುವರ್ಷ ಕಾಲದಲ್ಲಿ ಒಂದು ಮಿಲಿಯಕ್ಕೆ ೩೯೬ ಮಂದಿ ಆತ್ಮಹತ್ಯ ಮಾಡಿಕೊಂಡಂತಾಯಿತು.

ಡಚ್ಚ ಗಿಯಾನ್ನದಲ್ಲಿರುವ ಕರಾರು ಬರಿಸಿಕೊಟ್ಟು ಇರುವ ಮತ್ತು ಕರಾರು ಬರಿಸದೆ ಅಲ್ಲಿಯೇ ವಾಸವಾಗಿರುವ ಭಾರತೀಯರಲ್ಲಿ ಹತ್ತುವರ್ಷ ಕಾಲ ೪ ಮತ್ತು ೯ರಂತೆ ಆತ್ಮಹತ್ಯಗಳು ನಡೆದಿರುವವು. ಮಿಲಿಯಕ್ಕೆ ೯೧ ಮತ್ತು ೪೯ರಂತೆ ಆತ್ಮಹತ್ಯ ನಡದ ಹಾಗಾಯಿತು.

ಫಿಜಿದ್ವೀಪದಲ್ಲಿ ಕಳದ ಪ್ರತಿ ಹತ್ತು ವರ್ಷದಲ್ಲಿ ನಡೆದ ಆತ್ಮಹತ್ಯವು ಕರಾರು ಬರಿಸಿಕೊಟ್ಟ ಭಾರತೀಯರಲ್ಲಿ ೧೦೯ರಂತೆಯೂ ಸ್ವತಂತ್ರರಾದ ಭಾರತೀಯರಲ್ಲಿ ೩೬ರಂತೆಯೂ ಇತ್ತು. ಆತ್ಮಹತ್ಯ ಮಾಡಿಕೊಂಡವರಲ್ಲಿ ಮದ್ರಾಸಿನ ಕೂಲಿಯಾಳುಗಳ ಸಂಖ್ಯೆ ಹೆಚ್ಚು. ಫಿಜಿದ್ವೀಪದಲ್ಲಿ ಮಲೇರಿಯ ಎಂಬ ಛಳಿಜ್ವರ ಇಲ್ಲದೆ ಇರುವದರಿಂದಲೂ ಆರೋಗ್ಯ ಸಂಬಂಧವಾದ ವಿಚಾರ ನಡಿಸುವರೆ ತಕ್ಕ ವೈದ್ಯರ ಏರ್ಪಾಡು ಇರುವದರಿಂದಲೂ ಅಲ್ಲಿರುವ ಭಾರತೀಯರ ಆರೋಗ್ಯಸ್ಥಿತಿಯು ಬಹಳ ಒಳ್ಳೇದಿದೆ. ಇತರ ವಸಾಹತಿಗಳಿಗಿಂತಲೂ ಇಲ್ಲಿ ಕೆಲಸ ಕಮ್ಮಿಯಾದರೂ ಕೂಲಿ ಹೆಚ್ಚು ಸಿಗುತ್ತದೆ. ಮದ್ಯಪಾನವನ್ನು ಭಾರತೀಯರಿಗೆ ಮಾರಕೂಡದೆಂಬ ಕಟ್ಟು ಇದೆ. ಆದರೂ ಕಳದ ೫ ವರ್ಷಗಳಲ್ಲಿ ಸ್ವಘಾತಮಾಡಿಕೊಂಡವರ ಸಂಖ್ಯೆಯು ಮಿಲಿಯಕ್ಕೆ ೯೨೬ರಂತೆ ಇದೆ. ಇತರ ಭಾರತೀಯರಲ್ಲಿ ಸ್ವಘಾತ ಮಾಡಿಕೊಂಡವರ ಸಂಖ್ಯೆಯು ಮಿಲಿಯಕ್ಕೆ ೧೪೭ರಂತೆ ಇದೆ

ಗೃಹಕೃತ್ಯದ ರಗಳೆಗಳೂ ಸವತಿ ಮತ್ಸರಗಳೂ ಈ ಆತ್ಮಹತ್ಯಗಳಿಗೆ ಕಾರಣವಾಗಿದೆ ಫಿಜಿದ್ವೀಪದಲ್ಲಿ ಪ್ರತಿ ೧೦೦ ಗಂಡಸರಿಗೆ ೪೩ ಹೆಂಗಸರಂತೆ ಇದ್ದಾರೆ. ಹೆಂಗಸರ ಸಂಖ್ಯೆಯು ಕಮ್ಮಿಯಾಗಿರುವದರಿಂದ ತೋಟಗಳಲ್ಲಿ ಕೆಲಸಮಾಡುವ ಹೆಂಗಸರಲ್ಲಿ ಪತಿವ್ರತಾ ಧರ್ಮವು ಇಲ್ಲ ಹೆಂಗಸರಲ್ಲಿ ಹೆಚ್ಚಿನವರನ್ನು ಗಂಡಸರು ವಿವಾಹ ಮಾಡಿಕೊಳ್ಳದೆ ಇಟ್ಟುಕೊಳ್ಳುವ ಪದ್ಧತಿಯು ಹೆಚ್ಚಾಗಿದೆ. ಕೆಲವು ಹೆಂಗಸರು ಇಟ್ಟುಕೊಂಡವರನ್ನು ಬಿಟ್ಟು ಇತರ ಗಂಡಸರೊಡನೆ ಹೋಗಿಬಿಡುವದರಿಂದ ಅನೇಕ ರಗಳೆಗಳು ಹುಟ್ಟುತ್ತವೆ ಹಿಂದೂಸ್ಥಾನದಿಂದ ವಸಾಹತಿಗಳಿಗೆ ಕಳುಹಿಸಲ್ಪಡುವ ಹೆಂಗಸರ ಸಂಖ್ಯೆಯು ಹೆಚ್ಚಿದರೆ ಇಂಥಾ ತೊಂದರೆಗಳು ಕಮ್ಮಿಯಾಗುವವು.

ಹೀಗೆ ಮಾಡುವದರಿಂದ ಬ್ರಿಟಿಷ್ ವಸಾಹತಿಗಳಲ್ಲಿರುವ ಭಾರತೀಯ ಹೆಂಗಸರಲ್ಲಿ ಪತಿವ್ರತಾ ಧರ್ಮವು ಹೆಚ್ಚಾಗುವದಲ್ಲದೆ ಆತ್ಮಹತ್ಯಗಳೂ ವಿವಿಧ ಅನಾಚಾರಗಳೂ ಕಡಿಮೆಯಾಗುವದರಲ್ಲಿ ಅನುಮಾನವಿಲ್ಲ

ಇಟಲಿ

ಈಗಿನ ಯುದ್ಧದಲ್ಲಿ ಇಟಲಿಯು ತೊಡಗುವುದೋ? ಅಥವಾ ತಟಸ್ಥವಾಗಿರುವುದೋ? ಒಂದು ವೇಳೆ ತೊಡಗಿದರೆ ಮಿತ್ರರ ಮಂಡಲಿಯವರ ಕಡೆಗೆ ಸೇರುವುದೋ? ಎಂಬ ಸಂದೇಹವು ಪ್ರಪಂಚಕ್ಕೆಲ್ಲಾ ಉಂಟಾಗಿದೆ ಅದು ಮಿತ್ರಮಂಡಲಿಯೊಡನೆ ಕೂಡಿಕೊಂಡರೆ ಈ ಪಕ್ಷಕ್ಕೆ ಹೊಸದಾಗಿ ೪,೦೬೦,೦೦೦ ಮಂದಿ ಸೈನಿಕರ ಸಹಾಯವು ಲಭಿಸಿದಂತಾಗುವುದು. ಇಟಲಿಯವರಲ್ಲಿರುವ ಅಷ್ಟು ಸೈನಿಕರಲ್ಲಿ ೧,೦೬೦,೦೦೦ ಮಂದಿಯು ಮೊದಲಿನ ತರಗತಿಗೆ ಸೇರಿದವರು ಸಕಲ ವಿಧದ ಸೌಕರ್ಯಗಳೂ ಈ ಸೈನಿಕರಿಗಿರುವುವು. ಇನ್ನುಳಿದ ೩೦ ಲಕ್ಷ ಸೈನ್ಯವು ಸಹ ಸುಶಿಕ್ಷಿತವಾಗಿರುವ ರಿಜರ್ವ್ ಸೈನ್ಯವಾಗಿರುವುದು ಇಟಲಿ ದೇಶಕ್ಕೆ ಇಂಥ ಉತ್ತಮವಾದ ಭೂಸೈನ್ಯ ಒಂದು ಮಾತ್ರವೇ ಅಲ್ಲದೆ ನೌಕಾಸೈನ್ಯವು ಕೂಡ ಇರುವುದು ಆ ದಳದಲ್ಲಿ ೧೮ ಯುದ್ಧದ ಹಡಗುಗಳೂ, ೩೧ ಕ್ರುಯಿಝರುಗಳೂ, ೪೫ ಡಿಸ್ಟ್ರಾಯರುಗಳೂ ೨೩ ಸಬ್‌ಮೆರೀನುಗಳೂ ಇರುವುವು. ಕಳೆದ ೬ ತಿಂಗಳಿಂದೀಚೆಗೆ ಆ ದೇಶದಲ್ಲಿ ಹೊಸದಾಗಿ ಮತ್ತು ೨೦ ಸಬ್‌ಮೆರೀನುಗಳನ್ನು ಕಟ್ಟಿರುವರು. ಇದಲ್ಲದೆ ಈ ದೇಶದಲ್ಲಿ ೨೦೦ ವಿಮಾನಗಳೂ ಕೂಡ ಇರುವುವು. ಅವುಗಳಲ್ಲಿ ಸಂಚರಿಸುವ ಶಿಕ್ಷಣವನ್ನು ಹೊಸದಾಗಿ ಹೊಂದಿರುವವರು ೨೨೫ ಮಂದಿಗಳಿರುವರು.

ಈ ದೇಶದಲ್ಲಿರುವವರೆಲ್ಲರೂ ಸೈನ್ಯದಲ್ಲಿ ಸೇರಿ ಕೆಲಸವನ್ನೇ ಮಾಡಬೇಕೆಂಬ ನಿರ್ಬಂಧವಿಧಿಯಿರುವುದು ೨೦ ವರ್ಷ ವಯಸ್ಸಿನಿಂದ ೩೯ನೇಯ ವಯಸ್ಸಿನ ವರೆಗೂ ಪುರುಷರು ಸೈನ್ಯದಲ್ಲಿ ಸೇರಿ ಶಿಕ್ಷಣವನ್ನು ಹೊಂದಬೇಕೆಂಬ ಕಟ್ಟಪ್ಪಣೆಯಿರುವುದು. ಇಟಲಿಯ ರಾಜನು ಕೂಡ ಒಳ್ಳೆಯ ಶೂರಯೋಧನಾಗಿರುವನು. ಗುರಿಹಿಡಿದು ಗುಂಡುಹೊಡೆಯುವುದರಲ್ಲಿ ಬಹು ನಿಪುಣನು. ತನ್ನ ದೇಶದ ಸೈನ್ಯವನ್ನು ಒಳ್ಳೆಯ ಉತ್ತಮಸ್ಥಿತಿಗೆ ತಂದಿಡುವಲ್ಲಿ ಆ ರಾಜನು ಬಹಳ ಶ್ರಮಪಟ್ಟಿದ್ದಾನೆ. ಈ ಇಟಲಿ ರಾಜನಿಗೆ ರುಷ್ಯದ ಕಡೆ ಬಹಳ ಅಭಿಮಾನವಿರುವುದು. ಈತನ ಪತ್ನಿಯು ಮಾಂಟಿನೀಗ್ರೊ ರಾಜನ ಮಗಳು. ಈಕೆಯು ವೈದ್ಯಸಹಾಯವನ್ನು ಮಾಡಿ ರೋಗಿಗಳನ್ನು ಉಪಚರಿಸುವುದರಲ್ಲಿ ಬಹಳ ಉತ್ಸಾಹಶೀಲಳು, ೧೮೯೬ನೇಯ ವರ್ಷದಲ್ಲಿ ಈಕೆಯ ವಿವಾಹವಾಯಿತು. ಈ ದೇಶದ ರಾಜ್ಯವ್ಯವಹಾರವನ್ನು ೨ ಸಭೆಗಳು ನಿರ್ವಹಿಸುತ್ತಿರುವವು. ಒಂದನೇಯದು ಸೆನೇಟ್ ಸಭೆ, ೨ನೇಯದು ಪ್ರಜಾಪ್ರತಿನಿಧಿ ಸಭೆ. ಮೊದಲನೇ ಸಭೆಯಲ್ಲಿ ರಾಜಕುಟುಂಬಿಕರು ಮಾತ್ರವೇ ಸಭಿಕರಾಗಿರುವರು, ೨ನೇಯ ಪಾರ್ಲಿಮೆಂಟ್ ಮಹಾಸಭೆಯು ವರ್ಷಕ್ಕೊಂದು ಸಲ ಕೂಡುವುದು. ಒಂದು ಸಲ

ಸಭಿಕರಾಗಿ ಏರ್ಪಟ್ಟವರು ೫ ವರ್ಷಗಳ ಕಾಲ ಕಾರ್ಯನಿರ್ವಾಹ ಮಾಡುವರು. ಈ ಮಧ್ಯದಲ್ಲಿ ರಾಜನಿಗೆ ಇಷ್ಟಬಂದಾಗ ಈ ಸಭೆಯನ್ನು ನಿಯಮಿಸಿಕೊಳ್ಳಬಹುದು.

ಈ ದೇಶದ ಜನಸಂಖ್ಯೆಯು ೩,೬೦೦,೦೦೦೦. ವಿಸ್ತೀರ್ಣವು ೧೧೦೬೪೫ ಚದರ ಮೈಲುಗಳು. ಈ ಪ್ರಜೆಗಳಲ್ಲಿ ೧೧ ಸಾವಿರ ಮಂದಿ ಜರ್ಮನರಿರುವರು. ೧೨ ಸಾವಿರ ಮಂದಿ ಆಸ್ಟ್ರಿಯನರಿರುವರು. ಒಟ್ಟು ಪ್ರಜೆಗಳಲ್ಲಿ ೩೦೦,೦೦೦ ಮಂದಿ ಕೆಥೋಲಿಕ್ ಕ್ರೈಸ್ತ ಪಂಗಡಕ್ಕೆ ಸೇರಿದವರು.

ಈ ದೇಶವು ಮೂರು ಕಡೆಯಲ್ಲೂ ಸಮುದ್ರದಿಂದ ಸುತ್ತಲ್ಪಟ್ಟಿದೆ. ಮೆಡಿಟರೇನಿಯನ್, ಅಡ್ರಿಯಾಟಿಕ್, ಇಂಡಿಯನ್ ಸಮುದ್ರಗಳು ಇದರ ಮೂರುಕಡೆಯೂ ಇವೆ. ಇದಕ್ಕೆ ಎಲ್ಲಕಡೆಯೂ ಇರುವ ರೇವುಗಳಲ್ಲಿ ನೇಪಲ್ಸ್ ಪಟ್ಟಣವು ಅತ್ಯಂತ ಮುಖ್ಯವಾದುದು. ಇಲ್ಲಿ ಸಮುದ್ರ ವ್ಯಾಪಾರದ ಆಯಾತನಿರ್ಯಾತವು ಬಹಳವಾಗಿ ನಡೆಯುತ್ತದೆ. ೧೮೭೦ನೇಯ ವರ್ಷದಿಂದ ಈ ದೇಶಕ್ಕೆ ರೋಮ್ ಪಟ್ಟಣವು ರಾಜಧಾನಿಯಾಗಿದೆ. ಇಲ್ಲಿರುವಷ್ಟು ವಿಶ್ವವಿದ್ಯಾಲಯಗಳು ಪ್ರಪಂಚದ ಮತ್ತಾವ ದೇಶದಲ್ಲೂ ಇರುವುದಿಲ್ಲ. ವಿದ್ಯಾಲಯಗಳಲ್ಲಿ ೨೧ ಸಾವಿರ ಮಂದಿ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಾರೆ. ಈ ದೇಶದ ಪ್ರಜೆಗಳಲ್ಲಿ ಬಹು ಜನರಿಗೆ ವ್ಯವಸಾಯವೂ ರೇಶ್ಮೆಯ ಪರಿಶ್ರಮವೂ ಮುಖ್ಯ ಜೀವನಾಧಾರಗಳಾಗಿವೆ. ಈ ದೇಶದಲ್ಲಿ ವರ್ಷ ೧ಕ್ಕೆ ೧೧೪,೩೦೦,೦೦೦ ಪೌನುಗಳ ರೇಶ್ಮೆಯು ಉತ್ಪತ್ತಿಯಾಗುತ್ತದೆ. ವೈ. ಸ್ವಾ.

ಪತ್ರವ್ಯವಹಾರ.

ಮುಂಬಾಯಿಯಲ್ಲಿರುವ ಬಂಟರ ಯಾನೆ ನಾಡವರ ಪರಸ್ಪರ ಸಹಾಯಕ ಸಂಘ.

ಅಯ್ಯಾ,

ಈ ಪತ್ರಿಕೆಯ ಹಿಂದಿನ ಒಂದು ಸಂಚಿಕೆಯಲ್ಲಿ, ಮುಂಬಾಯಿಗೆ ತಮ್ಮ ಜೀವನಾರ್ಜನೆಗಾಗಿ ಹೋಗಿ ನೆಲಸಿದ ಬಂಟ ಯಾನೆ ನಾಡವರು ಸ್ಥಾಪಿಸಿದ ಸಂಘದ ಕುರಿತು ಪ್ರಕಟಿಸಲ್ಪಟ್ಟ ಬಾತ್ಮಿಯನ್ನು ವಾಚಕರು ಕಂಡಿರಬಹುದು. ಪರಸ್ಪರ ಸಹಾಯಕ ಸಂಘಗಳಿಂದ ಏನೇನು ಪ್ರಯೋಜನಗಳು ಲಭಿಸುತ್ತವೆಂಬುವದು ಹಿಂದೂ ದೇಶದ ಸರ್ವ ಭಾಗಗಳಲ್ಲಿಯೂ ಈ ತರದ ಸಂಘಗಳು ಈಗೀಗ್ಗೆ ಸ್ಥಾಪಿಸಲ್ಪಡುವದರಿಂದಲೂ ನಮ್ಮ ಸರಕಾರದವರು ಅವಕ್ಕೆ ಎಷ್ಟು ಪ್ರೋತ್ಸಾಹ ಕೊಡುತ್ತಿರುವರೆಂಬುದರಿಂದಲೂ ದರ್ಶನೀಯವಾಗಿದೆ. ಇದರ ಪ್ರಯೋಜನಗಳನ್ನು ಪರಿಶೀಲಿಸಿದವರಾಗಿ ಸದರಿ ಮುಂಬಾಯಿಯಲ್ಲಿರುವ ಬಂಟಯಾನೆ ನಾಡವರು ಕೂಡಾ ಈ ಪ್ರಕಾರದ ಒಂದು ಸಂಘವನ್ನು ಏರ್ಪಡಿಸಿದ್ದು ಶ್ಲಾಘ್ಯನೀಯವಾದದ್ದೇ ಸರಿ. ಈ ಸಂಘವು ೧೯೧೫ನೆ ಇಸವಿ ಫೆಬ್ರವರಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು. ಆರಂಭದಲ್ಲಿ ಮೆಂಬರರ ಸಂಖ್ಯೆಯು ೨೦ ಮಾತ್ರವಿತ್ತು. ಆದರೆ ಸಮಯ ಹೋದಂತೆ ಅದರಿಂದ ಲಭಿಸುವ ಪ್ರಯೋಜನಗಳನ್ನು ಆ ಜಾತಿಯ ಇತರ ಗೃಹಸ್ಥರೂ ತಿಳಿದವರಾಗಿ, ಮೆಂಬರರ ಸಂಖ್ಯೆಯು ಅಧಿಕವಾಗುತ್ತಾ ಈಗ ೩೨ಕ್ಕೆ ಬಂದು ಮುಟ್ಟಿಯದೆ. ಸಾಧಾರಣ ೩೦೦ ರೂಪಾಯಿ ತನಕ ಚಲಾವಣೆಯಾಗುತ್ತಿದೆ. ಪ್ರಕೃತ ಮುಂಬಾಯಿಯಲ್ಲಿ ಆ ಜಾತಿಬಂಧುಗಳ ಸಂಖ್ಯೆಯು ಅಂದಾಜು ೨೦೦ಕ್ಕೆ ಕಡಿಮೆಯಿಲ್ಲ. ಇದುವರೇಗೆ ಆ ಸಂಘಕ್ಕೆ ಸೇರದೆ ಉಪೇಕ್ಷೆಯಲ್ಲಿದ್ದ ಇತರ ಬಂಧುಗಳೂ ಅದರ ಪ್ರಯೋಜನಗಳನ್ನು ಅರಿತವರಾಗಿ ಕ್ರಮೇಣವಾದರೂ ಸೇರಿ ಅದರಿಂದ ದೊರೆಯುವ ಲಾಭಗಳನ್ನು ಅನುಭವಿಸದೆ ಇರಲಾರರಾಗಿ ಕೋರುತ್ತೇನೆ.

ಮೆಂಬರರಲ್ಲೊಬ್ಬ

ಉಡುಪಿ ಫಲಿಮಾರು ಮಠಕ್ಕಾದ ಆಶ್ರಮ

ಇದೇ ತಿಂಗಳ ತಾ. ೨ನೇ ಶುಕ್ರವಾರ ದಿವಸ ಸುಮುಹೂರ್ತದಲ್ಲಿ ಶ್ರೀ ಅದಮಾರು ಮಠದ ಶ್ರೀಪಾದಂಗಳವರು ತಮ್ಮ ದ್ವಂದ್ವ ಮಠವಾದ ಫಲಿಮಾರು ಮಠದ ಬಗ್ಗೆ ಸನ್ಯಾಸ ಆಶ್ರಮ ಕೊಟ್ಟು, ಪಟ್ಟಾಭಿಷೇಕ ಮಾಡಿ ಮಂತ್ರೋಪದೇಶ ಮಾಡಿ ರಘುಮಾನ್ಯ ತೀರ್ಥರೆಂಬದಾಗಿ ನಾಮಕರಣವನ್ನು ಮಾಡಿದರು. ಈ ವಟುವು ಕಾಲವಾದ ಫಲಿಮಾರು ಸ್ವಾಮಿಗಳವರ ಪೂರ್ವಾಶ್ರಮದಲ್ಲಿ ಸಾಕ್ಷಾತ್ ಚಿಕ್ಕ ತಾಯಿಯ ಪೌತ್ರರು. ಕುಲೀನರು ಮತ್ತು ಯೋಗ್ಯರು. ಪ್ರಕೃತ ವಿದ್ಯಮಾನಗಳಿಂದ ಶ್ರೀ ಅದಮಾರು ಶ್ರೀಪಾದಂಗಳವರು ಮಾಡಿದ ಈ ಚುನಾವಣೆಯು ಸ್ತೋತ್ರಾರ್ಹವಾದದ್ದು. ಜಾತಿವಿಜಾತಿಯವರೂ," ಸ್ವಕೀಯ ಪರಕೀಯರೂ ಏಕರೀತಿಯಾಗಿ ಅನುಮೋದಿಸುತ್ತಿರುವರು. ಇವರು ಈಗ ಸುಮಾರು ೧೨ ವರುಷ ಮಾತ್ರ ಪ್ರಾಯದವರಾಗಿರುವದರಿಂದ ಇವರ ವಿದ್ಯಾಭ್ಯಾಸದ ಏರ್ಪಾಡನ್ನೂ ನಿರೀಕ್ಷಿಸಬೇಕಾಗಿದೆ. ಗೀರ್ವಾಣದಲ್ಲಿ ಪ್ರೌಢ ವಿದ್ಯಾಭ್ಯಾಸ ಕೊಡಿಸಬೇಕಾದ ವಿಷಯವನ್ನು ಸೂಚಿಸುವದು ಅಗತ್ಯವಿಲ್ಲ. ಲೌಕಿಕ ವಿದ್ಯೆಯಲ್ಲಿ ತಕ್ಕಷ್ಟು ಶಿಕ್ಷಣವು ಅಗತ್ಯ. ಲೌಕಿಕ ಜ್ಞಾನ ಕಡಿಮೆಯಾಗಿರುವ ಸನ್ಯಾಸಿಗಳ ಮಠಗಳು ಎಷ್ಟು ನಿಕೃಷ್ಟಾವಸ್ಥೆಯನ್ನು ಪ್ರಾಪ್ತಿಸಿರುವವು, ಮತ್ತು ಪ್ರಾಪ್ತಿಸುತ್ತಿರುವವೆಂಬುದು ಎಲ್ಲವರಿಗೂ ತಿಳಿದಿರುವ ಸಂಗತಿಯಾಗಿದೆ. ಅಂಥವರ ಮಠಗಳಲ್ಲಿ ಸ್ವಾರ್ಥಪರರಿಗೂ, ವಂಚಕರಿಗೂ, ದುಂದುಗಾರರಿಗೂ ಆಸ್ಪದ ಸಿಕ್ಕಿ ಮಠದ ಸೊತ್ತುಗಳೆಲ್ಲ ನಾಶವಾಗುತ್ತಿರುವದು ಅನುಭವಸಿದ್ಧವಾಗಿದೆ. ಆದುದರಿಂದ ಈ ಬಾಲ ಯತಿಗಳಿಗೆ ಯಾರೇನಂದರೂ ಗಮನಿಸದೆ ಸುಮಾರು ಮೆಟ್ರಿಕ್ಯುಲೇಶನ್ ಪರೀಕ್ಷೆ ವರಿವಿಗಾದರೂ ಎಲ್ಲಾ ಪಾಠಗಳನ್ನೂ ಕ್ರಮವಾಗಿ ಕೊಡಿಸುವದು ಅತ್ಯಗತ್ಯವಾಗಿದೆ. ಅದಲ್ಲದೆ ಅವರ ಆವರಣವು ಯಾವಾಗಲೂ ಪರಿಶುದ್ಧವಾಗಿರುವಂತೆ ಹೆಚ್ಚಿನ ನಿಗಾ ಕೊಡತಕ್ಕದ್ದು. ಏಕಾಂತವಾಸಕ್ಕೂ, ಅಶಿಕ್ಷಿತರ ಒಡನಾಟಕ್ಕೂ ಆಸ್ಪದ ಕೊಡಲೇ ಬಾರದು. ಈ ರೀತಿಯಾಗಿ ಆರಂಭದಿಂದಲೇ ಸಾಧ್ಯವಿರುವಷ್ಟಾದರೂ ಮುಂಜಾಗ್ರತೆ ತೆಗೆದುಕೊಂಡರೆ ಸಂಸ್ಥಾನವು ದಿನೇ ದಿನೇ ಅಭಿವೃದ್ಧಿಯಾಗಿ ಇವರಿಗೂ ಗುರುಗಳಿಗಿಂತಲೂ ಅಧಿಕವಾಗಿ ಪುಣ್ಯಕೀರ್ತಿಗಳು ಪ್ರಾಪ್ತವಾಗುವದೆಂಬದರಲ್ಲಿ ಸಂದೇಹವಿಲ್ಲ. ಶ್ರೀ ಅದಮಾರು ಶ್ರೀಗಳವರು ಕೊಟ್ಟ ಆಶ್ರಮವೂ ಸಾರ್ಥಕವಾಗಿ ಎಲ್ಲವರೂ ಕೊಂಡಾಡುವರು.

ಉಡುಪಿ. ತಾ. 11–4–1915. ಮಠೀಯ.

ಶ್ರೀ ಜ್ಞಾನೋದಯ ಸಮಾಜದವರ ಐದನೇ ವಾರ್ಷಿಕೋತ್ಸವವು.

ಕಳೆದ ಸೌರಮಾನ ಯುಗಾದಿ ದಿನ ಬಹೂ ಉಲ್ಲಾಸದಿಂದ ನೆರವೇರಿಸಲ್ಪಟ್ಟಿತು. ಸುಲ್ತಾನಬತ್ತೇರಿ ಬಳಿಯ ಮೈದಾನಿನಲ್ಲಿ ಈ ಬಗ್ಗೆ ತಯಾರಿಸಿದ ಅಲಂಕೃತವಾದ ಸಭಾ ಮಂಟಪದಲ್ಲಿ ಅದೇ ದಿನ ಸಾಯಂಕಾಲ ಮೊಗೇಯರರ ಸ್ತ್ರೀ ಪುರುಷರು ಮಹಾ ಸಭೆ ನೆರದು ಬಂದಿದ್ದರಲ್ಲದೆ ಇತರ ಅನೇಕ ಹಿಂದೂ, ಮುಸಲ್ಮಾನ, ಕ್ರೈಸ್ತ ಬಾಂಧವರೂ ಸಭೆಯನ್ನಲಂಕರಿಸಿದ್ದರು. ಪ್ರಥಮತಾ ರಾ. ಬಿ. ಯಂ. ತಿಂಗಳಾಯರು ದೇವರ ಪ್ರಾರ್ಥನೆ ಮಾಡಿ ಕಾರ್ಯಾರಂಭಮಾಡಿದರು. ರಾ. ಯಂ. ತ್ಯಾಂಪಣ್ಣ ಕರ್ಕೇರರು ಸಭಾಕಾರ್ಯ ಕ್ರಮವನ್ನು ವಿವರಿಸಿದರು. ರಾ. ಮಹಾಲಿಂಗ ತಿಂಗಳಾಯರು ಸ್ವಾಗತ ಭಾಷಣಕೊಟ್ಟರು. ರಾ. ಪೂವಪ್ಪ ಅಮ್ಮಣ್ಣಾಯರು ವಾರ್ಷಿಕ ವರದಿಯನ್ನು ಓದಿದರು. ಬೆಂಗರೆಯ ಚೋಲ ಐತಸಾಲ್ಯಾನ್ ಎಂಬ ಶುಮಾರು ೭೫ ವರುಷ ಪ್ರಾಯದ ಮುದುಕನೊಬ್ಬನು ಮದ್ಯಪಾನ ವರ್ಜನೆಯಿಂದ ತನಗಾದ ಆಶ್ಚರ್ಯಕರ ಬದಲಾವಣೆಯ ಸ್ವಾನುಭವ ವೃತ್ತಾಂತಗಳನ್ನು ಸಭಿಕರಿಗೆಲ್ಲಾ ಹೃದಯಂಗಮವಾಗುವಂತೆ ವಿವರಿಸಿ ಹೇಳಿದನು. ನಂತರ ರಾ. ಪೂವಪ್ಪ ಅಮಣ್ಣಾಯರೂ, ಕೃಷ್ಣಪ್ಪ ತಿಂಗಳಾಯರೂ, ಪದ್ಮಪ್ಪ ತಿಂಗಳಾಯರೂ ಮತ್ತು ಯಂ. ತ್ಯಾಂಪಣ್ಣ ಕರ್ಕೇರರೂ, ಯಚ್. ಐತಪ್ಪ ತಿಂಗಳಾಯರೂ, ಬಿ. ಯಂ. ತಿಂಗಳಾಯರೂ ಎರಡು ಪಕ್ಷವಾಗಿ ನಿತ್ತು ಮದ್ಯಪಾನದ ಹಿತಾಹಿತದ ಕುರಿತು ವಾದ ವಿವಾದಗಳನ್ನು ಮಾಡಿದರು. ಈ ಸಭೆಯಲ್ಲಿ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ ಗವರ್ನಮೆಂಟ ಫಿಶರೀಸ್ ಡಿಪಾರ್ಟಮೆಂಟಿನ ಅಸಿಸ್ಟಾಂಟ್ ಡೈರೆಕ್ಟರರು ಇಂಗ್ಲಿಷ್ ಭಾಷೆಯಿಂದ ಮಾತಾಡಿದ ಕಾಲೋಚಿತವಾದ ಮತ್ತು ಒಳ್ಳೇ ಬೋಧಪ್ರದವಾದ ಮಾತುಗಳನ್ನು ಮಹಾರಾಜಶ್ರೀ ಕೆ. ರಂಗರಾಯರವರು ತುಳುಭಾಷೆಯಲ್ಲಿ ಸಭೆಗೆ ವಿವರಿಸಿ ಹೇಳಿದರು. ಈ ಸಭಾಕಾರ್ಯದ ನಡುನಡುವೆ ಸಮಾಜದ ಸಂಗೀತ ಕೂಟದವರು ಬಹು ರಸಿಕವಾದ ತುಳು ಪದಗಳನ್ನು ಹಾಡುತ್ತಾ ಇದ್ದು ಸಭಿಕರನ್ನೆಲ್ಲಾ ಆನಂದಗೊಳಿಸುತ್ತಿದ್ದರು. ಕಡೆಗೆ ರಾಜಗೀತೆ ಮತ್ತು ಮಂಗಲಾಚರಣೆಯಿಂದ ಸಭಾಕಾರ್ಯ ಸಮಾಪ್ತಿಯಾಗಿ ಸಮಾಜದ ಸದಸ್ಯರು ನೆರದ ಸಭಿಕರನ್ನೆಲ್ಲಾ ಪನ್ನೀರು, ಗಂಧ, ಪುಷ್ಪ, ತಾಂಬೂಲಾದಿಗಳಿಂದ ಸತ್ಕರಿಸಿದರು.

ಸಭೆಯ ಕಾರ್ಯ ನಡಿಯುತ್ತಿರುವಾಗಲೇ ಮುಂಬಾಯಿಯ ವೆಲ್ಡ್‌ಯೆಂಡ್ ಕಂಪೆನಿಯವರು ಈ ಸಮಾಜದ ಮಂದಿರ ನಿರ್ಮಾಣದ ಬಗ್ಗೆ ರೂಪಾಯಿ ಐವತ್ತನ್ನು ದಾನ ಕೊಟ್ಟಿರುವರೆಂಬ ತಂತೀ ಸಮಾಚಾರವು ತಲ್ಪಿದರಿಂದ ಸಭಸ್ಯರಿಗೆಲ್ಲಾ ಅಧಿಕ ಸಂತೋಷವನ್ನುಂಟುಮಾಡಿತು.

ಯುದ್ಧ ಸಮಾಚಾರ.

ತಾ. ೫ನೇ ಎಪ್ರಿಲ್.

ರುಶ್ಯನರ ಯುದ್ಧನಾವೆಗಳು ಬೊಸ್ಪರಸಿನಲ್ಲಿ ಸಿಡಿಮದ್ದಿನ ಗಣಿಗಳ ಸ್ಥಳಕ್ಕೆ ಹತ್ತಿರ ಪ್ರವೇಶಿಸಿರುವದು. ತುರ್ಕರ ಮೆಡ್ಜಿಡಿಯ ಎಂಬ ಕ್ರೂಜರ್ ನಾವೆಯು ರುಶ್ಯನರ ಕರಾವಳಿಯಲ್ಲಿ ಸಿಡಿಮದ್ದಿಗೆ ತಾಗಿ ಮುಳುಗಿ ಹೋಯಿತು.

ಜರ್ಮನರು ಲಿಬೊಗೆ ಗುಂಡು ಹಾರಿಸುವಾಗ ನೋರ್ವೆ ದೇಶದ ಒಂದು ನಾವೆಗೆ ಹಾನಿ ಸಂಭವಿಸಿರುವದು. ಹಡಗದ ಕೆಪ್ಟನನು ಹತನಾಗಿರುವನು.

ಡಚ್ಚರ ಒಂದು ಹಡಗವು ಉತ್ತರ ಸಮುದ್ರದಲ್ಲಿ ಸಿಡಿಮದ್ದಿನ ಗಣಿಗೆ ತಾಗಿ ಸಿಡಿದು ಹೋಗಿರುವದು.

ಮಿತ್ರರ ಯುದ್ಧನಾವೆಗಳು ಕಳೆದ ವಾರ ಜರ್ಮನಿಗೆ ಹೋಗುವ ಐದು ಹಡಗಗಳನ್ನು ಹಿಡಿದು ತಂದಿರುವವು.

ಜರ್ಮನ ಜಲಂತರ್ಗಾಮಿ ನಾವೆಯು 'ಸ್ಟಾರ್ಟ್ ಪ್ಯೊಂಟ್' ಎಂಬಲ್ಲಿ ಲೊಕ್‌ವೂಡ್ ಎಂಬ ನಾವೆಯನ್ನು ಮುಳುಗಿಸಿರುವದು. ನ್ಯೂಫೌಂಡ್‌ಲೇಂಡಿನ ಒಂದು ದೋಣಿಯೂ ಜಲಂತರ್ಗಾಮಿಯ ತುತ್ತಾಗಿರುವದು.

ಮಿತ್ರರು ಇತ್ತಲಾಗ್ಗೆ ಬ್ಯೂಸ್‌ಲಿ ಪ್ರಿಟ್ಟಿ ಎಂಬಲ್ಲಿ ೨೦೦೦ ಸೇನಿಕರನ್ನು ಸೆರೆಹಿಡಿದಿರುವರು. ಈ ಪೈಕಿ ೬ ಆಫೀಸರರು. ರೆಮ್ಸಿನ ಮೇಲೆ ಬೊಂಬು ಹಾಕುತ್ತಿದ್ದ ಜರ್ಮನರ ವಾಯುನಾವೆಯು ಕೆಳದೊಬ್ಬಲ್ಪಟ್ಟಿರುವದು, ಇದರ ನಾವಿಕರಿಗೆ ಹಾನಿಯಾಗಲಿಲ್ಲ. ಲೆಸಿಗ್ನೆಯಲ್ಲಿ ಜರ್ಮರ ಚಟುವಟಿಕೆಯು ನಿಲ್ಲಿಸಲ್ಪಟ್ಟಿದೆ. ಮೇಲಿನ ಆಲ್ಸೆಸಿನಲ್ಲಿಯೂ ಜರ್ಮನರು ಹಿಮ್ಮೆಟ್ಟಿರುವರು. ಜರ್ಮನರು ವೈಸರಿನಲ್ಲಿ ಅಣೆಕಟ್ಟುಗಳನ್ನು ಬಿಚ್ಚಿ ಸೇನಾ ನೆಲೆಗಳನ್ನು ನೀರಿನಿಂದ ತುಂಬಿಸಿ, ಅಲ್ಲಿಂದ ತಮ್ಮ ಸಾವಿರಾರು ಸೇನಿಕರನ್ನು ಇತರ ಕಡೆಗೆ ರಣರಂಗಕ್ಕೆ ಒಯ್ಯಬೇಕೆಂದಿರುವರು.

ರುಶ್ಯನರು ಕರ್‌ಪಥೇನಿಯದಲ್ಲಿ ದಿನೇ ದಿನೇ ಅಭಿವೃದ್ಧಿ ಹೊಂದುತ್ತಲಿದ್ದಾರೆ.

ಆಸ್ಟ್ರಿಯನರು ರುಶ್ಯನರೊಡನೆ ಗುಟ್ಟಾಗಿ ಪ್ರತ್ಯೇಕ ಸಂಧಾನ ಮಾಡಿಕೊಳ್ಳಲಿಕ್ಕಿದ್ದಾರೆಂಬ ವಾರ್ತೆ ಇದೆ.

ತಾ. ೬ನೇ ಎಪ್ರಿಲ್.

ಜರ್ಮನರು ಮಾರ್ಚ ತಿಂಗಳಲ್ಲಿ ವಾಯುನಾವೆಗಳು ಕೂಡಿದ ಕೆಲವು ಯುದ್ಧನಾವೆಗಳನ್ನು ತುರ್ಕರಿಗೆ ಒದಗಿಸಿಕೊಟ್ಟಿರುವರು.

ತುರ್ಕರ "ಮೆಡ್ಜಿಡಿಯ" ಕ್ರೂಜರ್ ನಾವೆಯು ಒಡೇಸದ ಸಮೀಪ ರುಶ್ಯನರ ನಾವೆಗಳನ್ನು ಹುಡುಕುತ್ತಿರುವಾಗ ಸಿಡಿಮದ್ದಿನ ಗಣಿಗೆ ತಾಗಿ ಮುಳುಗಿರುವದು ಎಂತ ತುರ್ಕರು ಪ್ರಕಟಿಸಿರುವರು.

ರುಶ್ಯನರ ಹಡಗುಪಡೆಯು ತುರ್ಕರ ಗಿಯೊಬೆನ್ ಮತ್ತು ಬ್ರೆಸ್‌ಲೋ ನಾವೆಗಳಿಗೆ ಬಹು ದೂರದಿಂದ ಗುಂಡು ಹಾರಿಸಿ ರಾತ್ರಿ ಆಗುವ ವರೆಗೆ ಅವನ್ನು ಅಟ್ಟಿಕೊಂಡು ಹೋಗಿರುವದೆಂತ ರುಶ್ಯಾ ಸರಕಾರದವರು ಪ್ರಕಟಿಸಿರುವರು.

ಡೆನ್‌ಮಾರ್ಕಿನ ಎರಡು ಹಡಗುಗಳನ್ನು ಜರ್ಮನರ ಜಲಂತರ್ಗಾಮಿ ನಾವೆಗಳು ಮುಳುಗಿಸಿದ್ದರಿಂದ ಜರ್ಮನಿಗೂ ಡೆನ್ಮಾರ್ಕಿಗೂ ನಡೆಯುವ ವ್ಯಾಪಾರವು ನಿಲ್ಲಿಸಲ್ಪಟ್ಟಿದೆ. ಜರ್ಮನರ ಒಂದು ಹಡಗವು ಸಿಡಿಮದ್ದಿನ ಗಣಿಗೆ ತಾಗಿ ಮುಳುಗಿಹೋಗಿರುವದು. ಜರ್ಮನರ ಜಲಂತರ್ಗಾಮಿ ನಾವೆಯು "ಸಿಟಿ ಆಫ್ ಬ್ರೆಮೆನ್" ಎಂಬ ವ್ಯಾಪಾರ ಹಡಗವನ್ನು ಮುಳುಗಿಸಿರುವದು. ರುಶ್ಯನರ ಒಂದು ಸಣ್ಣ ಹಡಗವೂ, ಗ್ಲಾಸ್ಗೊ ಕಂಪೆನಿಯ ಒಂದು ಸಣ್ಣ ಹಡಗವೂ ಜರ್ಮನರ ಜಲಂತರ್ಗಾಮಿಯಿಂದ ಮುಳುಗಿಸಲ್ಪಟ್ಟಿರುವವು.

ಈ ದಿನ ಫ್ರಾನ್ಸ್ ರಣರಂಗದಲ್ಲಿ ವಿಶೇಷ ಕೃತ್ಯಗಳೇನೂ ಸಂಭವಿಸಲಿಲ್ಲ.

ಪೂರ್ವ ರಣರಂಗ.

ನಿಮೇನಿನ ಸಮೀಪ ನಡೆಯುವ ಕದನಗಳು ರುಶ್ಯನರಿಗೆ ಜಯಪ್ರದವಾಗಿಯೇ ನಡೆಯುತ್ತಿವೆ. ಎಪ್ರೀಲ್ ತಾ. ೨ರಲ್ಲು ೨೦೦೦ ಶತ್ರುಗಳ ಸೈನಿಕರು ರುಶ್ಯನರ ಸೆರೆ ಬಿದ್ದಿರುವರು. ನೀಮೆನಿನ ಪಶ್ಚಿಮದಲ್ಲಿ ಕಠಿಣ ಕಾಳಗ ನಡೆದಿರುವದು. ರುಶ್ಯನರು ಕೆಲವು ಕಡೆಗಳಲ್ಲಿ ಮುಂದರಿದಿರುವರು. ಕಾರ್ಪಥೇನಿಯದ ಉತ್ತರದಲ್ಲಿ ಕಠಿಣ ಕಾಳಗ ನಡೆದು ೧೨೦೦ ಶತ್ರು ಸೈನಿಕರು ಸೆರೆಬಿದ್ದಿರುವರು.

ತಾ. ೭ನೇ ಎಪ್ರೀಲ್.

ಜರ್ಮನರ ಜಲಂತರ್ಗಾಮಿ ನಾವೆಯು "ನೋರ್ತ್ ಲೇಂಡ್" ಎಂಬ ವ್ಯಾಪಾರ ಹಡಗವನ್ನು ಮುಳುಗಿಸಿರುವದು. ನಾವಿಕರಿಗೆ ೫ ನಿಮಿಷಗಳ ಸಮಯ ಕೊಟ್ಟಿದ್ದರಿಂದ ಅವರು ಬೆಲ್ಜಿಯುನ್ ಹಡಗದಲ್ಲಿ ಡೀಲ್ ಎಂಬಲ್ಲಿಗೆ ತಲಪಿರುವರು. ಜರ್ಮನರು ಸ್ವೀಡೇನಿಗೆ ಸೇರಿದ "ಇಂಗ್ಲಂಡ್" ಎಂಬ ಹಡಗವನ್ನು ಹಿಡಿದಿರುವರು.

ದಕ್ಷಿಣ ಆಫ್ರೀಕದ ಬ್ರಿಟಿಷ ಸೇನೆಯು ವಾರ್ಮ್ಬಾಡ್ ಎಂಬ ಜರ್ಮನರ ಸ್ಥಳವನ್ನು ಸ್ವಾಧೀನಮಾಡಿಕೊಂಡರು.

ತಾ. ೮ನೇ ಎಪ್ರೀಲ್.

ಬ್ರಿಟಿಷರು ಪುನಃ ಸ್ಮಿರ್ನದ ಮೇಲೆ ಹಲ್ಲಾ ಮಾಡಲು ಪ್ರಾರಂಭಿಸಿದ್ದಾರೆಂತಲೂ, ಸ್ಮಿರ್ನದ ವಾಲಿಯು ಅಲ್ಲಿರುವ ಯೂರೋಪಿಯನರಿಗೆ ಪಟ್ಟಣವನ್ನು ಬಿಟ್ಟು ಹೋಗಬೇಕೆಂತ ಹುಕುಂ ಮಾಡಿರುವನೆಂತಲೂ ಅಥೆನ್ಸಿನಲ್ಲಿ ವಾರ್ತೆ ಇದೆ.

ಜರ್ಮನರ ಎರಡು ಹೊಸ ಜಲಂತರ್ಗಾಮಿ ನಾವೆಗಳು ಉತ್ತರ ಕಡಲಿನತ್ತ ಕಡೆ ಹೋಗಿರುವವು ಎಂತ ಡಚ್ಚ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಜರ್ಮನರ ೨೮ ಜಲಂತರ್ಗಾಮಿ ನಾವೆಯು ಮುಳುಗಿಸಲ್ಪಟ್ಟಿರುವದೆಂತ ಜರ್ಮನರು ಪ್ರಕಟಿಸಿರುವರು.

ಮಿತ್ರರು ವೈಸರಿನ ಎಡಪಾರ್ಶ್ವದಲ್ಲಿ ಜಯಪ್ರದರಾಗುತ್ತ ಬರುತ್ತಿದ್ದಾರೆ.

ಮಾರ್ಚ ತಾ. ೨೨ರಿಂದ ಎಪ್ರೀಲ್ ತಾರೀಕು ೩ರ ವರೆಗೆ ರುಶ್ಯನರು ಕರ್ಪಥೇನಿಯದಲ್ಲಿ ೩೮೯ ಆಫೀಸರರನ್ನೂ, ೩೩೧೫೫ ಸೈನಿಕರನ್ನೂ, ೧೭ ಫಿರಂಗಿಗಳನ್ನೂ, ೧೧೧ ಯಂತ್ರ ಫಿರಂಗಿಗಳನ್ನೂ ಸೆರೆಹಿಡಿದರೆಂತ ರುಶ್ಯನರು ಪ್ರಕಟಿಸಿದ್ದಾರೆ.

ಪ್ರಿಜೆಮ್ಯೆಸ್ಲ ಕೋಟೆಯಿಂದ ರುಶ್ಯನರು ಆಸ್ಟ್ರೀಯನರ ೯ ಜನರಲ್, ೨೩೦೭ ಆಫೀಸರರು, ೧೧೩,೮೯೦ ಸೇನಿಕರನ್ನು ರುಶ್ಯ ದೇಶದ ಒಳಪ್ರಾಂತ್ಯಕ್ಕೆ ಕಳುಹಿಸಿಕೊಟ್ಟಿರುವರು. ಅಸ್ವಸ್ಥದಲ್ಲಿರುವ ೬,೧೦೦ ಶತ್ರು ಸೇನಿಕರು ರಣರಂಗದ ಆಸ್ಪತ್ರೆಗಳಲ್ಲಿ ಸೆರೆಹಿಡಿಯಲ್ಪಟ್ಟ ೨೨೯ ವೈದ್ಯರಿಂದ ಉಪಚರಿಸಲ್ಪಡುತ್ತಿದ್ದಾರೆ. ಈ ವರೆಗೆ ಆಸ್ಟ್ರೀಯನರ ೮೦೦,೦೦೦ ಸೇನಿಕರು ರುಶ್ಯನರಿಗೆ ಸೆರೆಬಿದ್ದಿರುವರೆಂತ ಇಂಗ್ಲಾಂಡಿನಿಂದ ನಿಮ್ಮಕ್ಕೆ ತಂತೀ ಬಂದದೆ.

ದಕ್ಷಿಣ ಆಫ್ರೀಕದ ಬ್ರಿಟಿಷ ಸೇನಿಕರು ಜರ್ಮನರ ಇತರ ಎರಡು ಪಟ್ಟಣಗಳನ್ನೂ ಸ್ವಾಧೀನ ಮಾಡಿಕೊಂಡಿರುತ್ತಾರೆ.

ತಾ. ೧೦ನೇ ಎಪ್ರಿಲ್.

ಜರ್ಮನರ ಜಲಂತರ್ಗಾಮಿ ನಾವೆಗಳ ಕಾಟವು ಪ್ರಾರಂಭಿಸಿದಂದಿನಿಂದ ಬ್ರಿಟಿಷರ ೫ ಹಡಗಗಳು ಮುಳುಗಿಸಲ್ಪಟ್ಟವು. ೫ ಹಡಗಗಳ ಒಟ್ಟು ಭಾರಾವಣೆಯು ೭,೯೦೪ಟನ್ ಮತ್ತು ಇತರ ಐದು ಮೀನುಗಾರರ ಸಣ್ಣ ಹಡಗಗಳು ಮುಳುಗಿಸಲ್ಪಟ್ಟವು. ಇವುಗಳ ಒಟ್ಟು ಭಾರಾವಣೆ ೯೧೪ ಟನ್. ಈಸ್ಟರ್ ಹಬ್ಬವಾದರೂ ೧೨೩೪ ಹಡಗಗಳು ಬ್ರಿಟಿಷ ಬಂದರುಗಳಿಗೆ ಹೋಗುತ್ತಾ ಬರುತ್ತಾ ಇವೆ ಎಂತ ಪ್ರಕಟವಾಗಿದೆ.

ಮ್ಯೂಸ್ ಮತ್ತು ಮೊಸಲ್ಲೆಯ ಮಧ್ಯೆ ಹೊಸ ಕದನಗಳಿಗೆ ಪ್ರಾರಂಭಿಸಿ ಜರ್ಮನರ ೧೦೦೦ಕ್ಕಿಂತಲೂ ಹೆಚ್ಚಿಗೆ ಹೆಣಗಳು ಬಿದ್ದವು. ಇತರ ಕಡೆಗಳಲ್ಲಿಯೂ ಮಿತ್ರರಿಗೆ ಜಯ ಉಂಟಾಗಿರುವದು. ಪುನಃ ಮೇಲ್ಹಾಯಿದ ಜರ್ಮನರು ಹಿಮ್ಮೆಟ್ಟಿರುವರು.

ಕರ್ಪಥೇನಿಯದಲ್ಲಿ ಆಸ್ಟ್ರೀಯನರಿಗೆ ಮತ್ತು ಜರ್ಮನರಿಗೆ ಹೊಸ ಬೆಂಬಲ ಸೇನೆಗಳು ಬಂದು ಕೂಡಿರುವವು.

ಈಜಿಪ್ಟಿನ ಹೊಸ ಸುಲ್ತಾನರನ್ನು ಕೊಲ್ಲಲೆತ್ನಿಸಿದ ೨೫ ವರ್ಷ ಪ್ರಾಯದ ಒಬ್ಬ ಈಜಿಪ್ಟಿನ ಸಾಹುಕಾರನು ಹಿಡಿಯಲ್ಪಟ್ಟಿರುತ್ತಾನೆ. ಸುಲ್ತಾನರು ಅರಮನೆಯಿಂದ ಹೊರಹೋಗಲಿಕ್ಕಿರುವಾಗ ಘಾತುಕನು ಗುಂಡು ಹಾರಿಸಿದನು. ಆದರೆ ಅದು ಸುಲ್ತಾನರಿಗೆ ತಗಲಲಿಲ್ಲ.

ತಾ. ೧೧ನೇ ಎಪ್ರೀಲ್.

ಸಿಡಿಮದ್ದಿನ ಗಣಿಗಳನ್ನು ಹೆಕ್ಕಿ ತೆಗೆಯುವ ಕೆಲಸವು ನಡೆಯುತ್ತಿದೆ. ಜನರಲ್ ಹಾಮಿಲ್ಟನವರ ಕೈಕೆಳಗಿರುವ ಫ್ರೆಂಚರ ಸೇನೆಯು ಡರ್ಡನೆಲ್ಸಿನಲ್ಲಿರುವ ಮಿತ್ರ ಸೇನೆಗೆ ಸಹಾಯ ಮಾಡುವ ಬಗ್ಗೆ ಈಜಿಪ್ಟಿನಲ್ಲಿ ಬಂದಿಳಿದಿರುವದು.

ಫ್ರೆಂಚರ ಒಂದು ವ್ಯಾಪಾರ ಹಡಗವು ಜರ್ಮನರ ಜಲಂತರ್ಗಾಮಿ ನಾವೆಯಿಂದ ಮುಳುಗಿಸಲ್ಪಟ್ಟಿರುವದು. ಕಷ್ಟದಲ್ಲಿರುವ ಬೆಲ್ಜಿಯನರಿಗೆ ಸಹಾಯ ಮಾಡುವರೆ ಆಹಾರ ಇತ್ಯಾದಿಗಳನ್ನು ಕೊಂಡುಹೋಗುತ್ತಿದ್ದ ಬ್ರಿಟಿಷರ "ಹಾರ್ಪ್ಲೈಸ್" ಎಂಬ ಹಡಗವು ಮುಳುಗಿಸಲ್ಪಟ್ಟಿರುವದು. ೨೬ ಮಂದಿ ಮುಳುಗಿದರು.

ಫ್ರೆಂಚರಿಗೆ ವೊವ್ರೆಯಲ್ಲಿ ಒಂದು ವಿಶೇಷ ಜಯವಾಗಿರುವದು. ಮ್ಯೂಸ್ ಮತ್ತು ಮೊಸಲ್ಲೆಯಲ್ಲಿ ಫ್ರೆಂಚರು ಪಡಕೊಂಡ ಸ್ಥಳಗಳನ್ನು ಜರ್ಮನರು ಹಿಂದೆ ಪಡಕೊಳ್ಳಲು ಪ್ರಯತ್ನಿಸಿ ಹಿಮ್ಮೆಟ್ಟಿದರು. ಫ್ರೆಂಚರು ಪುನಃ ವೊವ್ರೆಯಲ್ಲಿ ಕೆಲವು ಕಂದಕಗಳನ್ನು ಸ್ವಾಧೀನಮಾಡಿಕೊಂಡರು. ಇಲ್ಲಿ ನಡೆದ ಕದನಗಳು ಅತೀ ತೀಕ್ಷ್ಣವಾಗಿದ್ದವು. ಕೈದುಡುಕಿನ ಕಾಳಗವೂ, ಸನೀನು ಕಾಳಗವೂ ನಡೆದು ಜರ್ಮನರಲ್ಲಿ ವಿಶೇಷ ನಷ್ಟವಾಗಿ ಹಿಮ್ಮೆಟ್ಟಿದರು.

ಪ್ರಿನ್ಸ್ ಆಫ್ ವೇಲ್ಸರು ರಣರಂಗದಿಂದ ಲಂಡನಿಗೆ ಹಿಂತಿರುಗಿ ಹೋಗಿರುವರು.

ಕಸ್ಟಂ ಕಾಣದ ಶಾಯಿಯಿಂದ ಬರದು ಇಂಗ್ಲಾಂಡಿನಿಂದ ಜರ್ಮನಿಗೆ ವಾರ್ತೆ ಕಳುಹಿಸುತ್ತಿದ್ದ ಮೂವರು ಗೂಢಚಾರರು ಹಿಡಿಯಲ್ಪಟ್ಟು ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದಾರೆ.

ಕರ್ಪಥೇನಿಯದಲ್ಲಿ ರುಶ್ಯನರ ಮೇಲೆ ಹಲ್ಲಾ ಮಾಡಲು ನೋಡಿದ ಆಸ್ಟ್ರೀಯನರ ಮತ್ತು ರುಶ್ಯನರ ದೊಡ್ಡ ಸೇನೆಯು ಹಿಮ್ಮೆಟ್ಟಿರುವದು. ಆಸ್ಟ್ರೀಯನರು ಈಗ ಸುಮಾರು ೭೭ ಮೈಲು ದೂರದ ವರೆಗಿರುವ ಪರ್ವತ ಸಾಲನ್ನು ಹಿಡಿದುಕೊಂಡಿದ್ದಾರೆ.

ನಿಮೇನಿನ ಪಶ್ಚಿಮದಲ್ಲಿ ರುಶ್ಯನರ ೨ ಸಾಲು ಕಂದಕಗಳನ್ನು ಸ್ವಾಧೀನ ಮಾಡಿಕೊಂಡರು. ಇಲ್ಲಿ ಕಠಿಣ ಸನೀನು ಕಾಳಗ ನಡೆದು ೬೦೦ ಸೇನಿಕರು ರುಶ್ಯನರ ಸೆರೆಬಿದ್ದರು. ಕರ್ಪಥೇನಿಯದಲ್ಲಿ ನಡೆದ ಕದನಗಳಲ್ಲಿ ಆಸ್ಟ್ರೀಯನರ ೩೦೦,೦೦೦ ಸೇನಿಕರು ಪ್ರಾಣಾಪಾಯ ಹೊಂದಿದರು. ರುಶ್ಯನರು ಇಲ್ಲಿ ಹಿಡಕೊಂಡ ಆಸ್ಟ್ರೀಯನರ ಕ್ರೈಸಲ್ ಕೋವಿಗಳ ಸಂಖ್ಯೆಯು ಧಾರಾಳವಾಗಿದೆ. ಈಗ ಆಸ್ಟ್ರೀಯನರು ಜರ್ಮನರ ಹಳೇ ನಮೂನೆಯ ಕೋವಿಗಳನ್ನು ಪ್ರಯೋಗಿಸುತ್ತಿದ್ದಾರೆ.

ಜಯಪುರದ ಮಹಾರಾಜರು ಯುದ್ಧದ ಖರ್ಚಿನ ಬಗ್ಗೆ ೫ ಲಕ್ಷ ರೂಪಾಯಿ ದಾನ ಮಾಡಿರುವರು.

ಉತ್ತರ ಹಿಂದೂಸ್ಥಾನ.

ಸಿಂಗಾಪುರದ ಸೇನಿಕರ ದಂಗೆಯು ಈಗ ಪೂರ್ಣವಾಗಿ ಅಣಗಿಸಲ್ಪಟ್ಟಿರುವದು.

ಕಲ್ಕತ್ತೆಯ ಡಾಕ್ಟರ್ ಬೋಸರವರು ಈಗ ಅಮೇರಿಕದಲ್ಲಿರುವರು. ಚಿಕಾಗೋ ಯುನಿವರ್ಸಿಟಿಯ ಪ್ರಾಣಿಮಾತ್ರ ಶಾಸ್ತ್ರೀಯ ಶಾಖೆಯವರು ಡಾಕ್ಟರ್ ಬೋಸರವರ ವನಸ್ಪತಿಗಳ ವಿಷಯವಾದ ಭಾಷಣಗಳನ್ನು ಕೇಳುವ ಬಗ್ಗೆ ಕೂಡಿಬಂದರು. ಡಾಕ್ಟರ್ ಬೋಸರವರ ಗಿಡಗಳಲ್ಲಿ ಜೀವವಿದೆಂಬದನ್ನು ತೋರಿಸಿಕೊಡುವ ಭಾಷಣವನ್ನು ಕೇಳಿ ಅಲ್ಲಿಯ ಯುನಿವರ್ಸಿಟಿ ವಿದ್ವಾಂಸರೆಲ್ಲರೂ ಅತ್ಯಾಶ್ಚರ್ಯ ಭರಿತರಾದರು. ಕ್ಲಾರ್ಕ ಯುನಿವರ್ಸಿಟಿಯ ಪ್ರೆಸಿಡೆಂಟ ಸ್ಟೇನ್ಲಿಹೋಲರವರು ಬೋಸರವರನ್ನು ತನ್ನ ಯುನಿವರ್ಸಿಟಿಯಲ್ಲಿ ಭಾಷಣ ಕೊಡುವಬಗ್ಗೆ ಆಮಂತ್ರಿಸಿರುವರು. ಡಾಕ್ಟರ್ ಬೋಸರವರು ಕಂಡುಕೊಂಡ ಗಿಡಗಳ ಸಂಬಂಧವಾದ ಹೊಸ ವಿದ್ಯೆಯ ಮಾಹಿತಿಯನ್ನು ಪ್ರೆಸಿಡೆಂಟ ಸ್ಟೇನ್ಲಿಯವರು ಕೇಳಿ ಡಾಕ್ಟರ್ ಬೋಸರವರನ್ನು ಬಹಳವಾಗಿ ಶ್ಲಾಘಿಸಿದರು. ಗಿಡಗಳ ಮತ್ತು ಪ್ರಾಣಿಗಳ ವಿಷಯವಾಗಿ ಕೆಲವು ಭಾಷಣಗಳನ್ನು ಕೊಡಬೇಕೆಂದು ಹಾರ್ವಾರ್ಡ್ ಯುನಿವರ್ಸಿಟಿಯವರು ಡಾಕ್ಟರ್ ಬೋಸರವರನ್ನು ಕೇಳಿಕೊಂಡಿದ್ದಾರೆ. ಅಮೇರಿಕದ ಪ್ರಾಮುಖ್ಯ ವಿದ್ವಾಂಸರೆಲ್ಲರೂ ಡಾಕ್ಟರ್ ಬೋಸರವರ ಭಾಷಣಗಳನ್ನು ಕೇಳಿ ಆಶ್ಚರ್ಯಚಕಿತರಾದರು.

ಕಲ್ಕತ್ತೆಯಲ್ಲಿ ಒಬ್ಬ ಕಾನ್‌ಸ್ಟೇಬಲನು [illegible] ಮಾಡುವ ಒಬ್ಬನ ಮೇಲೆ ನ್ಯೂಸೆನ್ಸ್ [illegible] ಸ್ಟೇಶನಿಗೆ ಕೊಂಡುಹೋಗುತ್ತಿರುವಾಗ [illegible] ಡಾಕ್ಟರ್ [illegible] [illegible]

ಹೊಡೆದು, ಹಣ್ಣುಮಾರುವವನನ್ನು ಬಿಡಿಸಿದ್ದರೆಂಬದಾಗಿ ಆಪಾದಿಸಲ್ಪಟ್ಟಿದ್ದರು. ಈ ಮೊಕದ್ದಮೆಯ ತನಿಕೆನಡೆದು ಮೇಜಿಸ್ಟ್ರೇಟರು ಡಾಕ್ಟರ್ ಘೋಸಾಲರವರಿಗೆ ರೂ ೧೦೦ ಜುಲುಮಾನೆ, ೨ನೇ ಆಪಾದಿತನಿಗೆ ೩೦ ರೂಪಾಯಿ ಜುಲುಮಾನೆ ೩ನೇ ಆಪಾದಿತನಿಗೆ ಒಂದು ತಿಂಗಳ ಕಠಿಣ ಸಜಾ ವಿಧಿಸಿದರು.

ಹಿಂದೂ ಯುನಿವರ್ಸಿಟಿ ಸಂಬಂಧವಾದ ಮಸೂದೆಯ ಕುರಿತು ಸಂಸ್ಥಾನಿಕ ಸರಕಾರಗಳ ಆಲೋಚನೆ ಮತ್ತು ಅಭಿಪ್ರಾಯಗಳನ್ನು ಇಂಡಿಯಾ ಸರಕಾರದವರು ಕೇಳಿದ್ದಾರೆ.

ಇದೇ ಎಪ್ರೀಲ್ ತಾ ೩ ೪ರಲ್ಲಿ ಬಂಗಾಳದ ಬ್ರಾಹ್ಮಣರ ಮಹಾಸಭೆಯು ಸ್ಕಂಧಿಯ ಎಂಬಲ್ಲಿ ಕೂಡಿಬಂದಿತು. ಈ ಸಭೆಗೆ ವಿದ್ವಾಂಸರಾದ ಸುಮಾರ ೭೦೦ ಪಂಡಿತರು ಬಂಗಾಳ, ಅಸ್ಸಾಮು, ಒರಿಸ್ಸಾ ದೇಶಗಳಿಂದ ಪ್ರತಿನಿಧಿಗಳಾಗಿ ಬಂದಿದ್ದರು. ಪ್ರತಿನಿತ್ಯ ೨೦೦೦ಕ್ಕೆ ಮಿಕ್ಕಿದ ಸಭಿಕರು ಸಭೆಯಲ್ಲಿ ಹಾಜರಾದರು. ಸಭಾಧ್ಯಕ್ಷರಾದ ಮಾನ್ಯ ಪಂಡಿತ ಶಶಾಧರ್ ತಾರಕ ಚೂಡಾಮಣಿಯವರು ಅತಿ ಗಂಭೀರವಾದ ಭಾಷಣಕೊಟ್ಟು 'ವರದಕ್ಷಿಣೆ'ಯನ್ನು ಶಾಸ್ತ್ರೀಯ ರೀತಿಯಾಗಿ [illegible] ಕಡೆಗೆ ಈ ವ[illegible] ಸಭೆಯಲ್ಲಿ ವರದಕ್ಷಿಣೆಯ [illegible] ಪದ್ಧತಿ[illegible]ವಾದದ್ದರಿಂದ ಅದನ್ನು ನಿಲ್ಲಿಸುವರೆ ತಕ್ಕ ಏರ್ಪಾಡು ಮಾಡಬೇಕೆಂದು ನಿರ್ಣಯವಾಯಿತು.

ಮುಂಬಾಯಿಯಲ್ಲಿ ವಕೀಲರಾಗಿದ್ದ ರಸ್ತೊಮ್ಜಿ ಬೆಜೋನ್ಜಿ ಸೊನವಾಲ ಎಂಬ ಬ್ಯಾರಿಸ್ಟರು ೧೯೧೦ನೇ ಇಸವಿಯಲ್ಲಿ ಕೊಲ್ಹಾಪುರ ಬೊಂಬು ಮೊಕದ್ದಮೆಯಲ್ಲಿ ೧೨ ಆಪಾದಿತರ ಪರವಾಗಿ ವ್ಯವಹರಿಸಿ, ಅಪೀಲ್ ತನಿಕೆಯಾಗುವಾಗ ವ್ಯವಹರಿಸದೆ ಆಪಾದಿತರಿಂದ ಇನಾಮು ಕೇಳಿದ್ದರೆಂಬ ತಪ್ಪಿಗಾಗಿ ಗುರಿಮಾಡಲ್ಪಟ್ಟು ಜೀವಕಾಲ ವ್ಯವಹರಿಸಕೂಡದೆಂಬ ಶಿಕ್ಷೆಯನ್ನು ಹೊಂದಿದ್ದರು. ಸೊನವಾಲರು ಹೈಕೋರ್ಟಿಗೆ ಅಪೀಲು ಮಾಡಿಕೊಂಡಲ್ಲಿ ಶಿಕ್ಷೆಯ ಅವಧಿಯು ೩ ವರ್ಷವೆಂದಾಯಿತು. ಈ ೩ ವರ್ಷದ ಅವಧಿಯು ತೀರಿ ಮಿ। ಸೊನವಾಲರವರು ಪುನಃ ವಕೀಲಪಟ್ಟಿಗೆ ದಾಖಲು ಮಾಡಲ್ಪಟ್ಟಿದ್ದಾರೆ.

ಇದೇ ತಾ ೯ರಲ್ಲು ಹರಿದ್ವಾರದಲ್ಲಿ 'ಆಲ್ ಇಂಡಿಯಾ ಹಿಂದೂ ಕನ್ಫರೆನ್ಸ್' ಎಂಬ ಮಹಾಸಭೆಯು ಕೂಡಿಬಂತು. ಈ ಸಭೆಗೆ ಸುಮಾರು ೫೦೦ ಪ್ರತಿನಿಧಿಗಳು ಹಾಜರಿದ್ದರು. ಪ್ರಖ್ಯಾತ ಪಂಡಿತರೂ ಪಂಜಾಬಿನ ಹೆಸರು ಪಡೆದ ಅನೇಕ ಗೃಹಸ್ಥರೂ ಮಿ। ಗಂಧಿಯವರೂ ಈ ಸಭೆಗೆ ಹಾಜರಿದ್ದರು. ಕಾಶಿಂಬಜಾರಿನ ಮಹಾರಾಜರವರೇ ಸಭಾಧ್ಯಕ್ಷರಾಗಿದ್ದರು. ಅಧ್ಯಕ್ಷರವರು ಬಹು ಗಂಭೀರವಾದ ಅರ್ಥ ಗರ್ಭಿತವಾದ ಭಾಷಣಕೊಟ್ಟು ಹಿಂದೂ ಮತದ ಮಹತ್ವವನ್ನು ಸಭಿಕರಲ್ಲಿ ಹುಟ್ಟಿಸಿದರು. ಮಧ್ಯಾಹ್ನದ ನಂತರ ಕೆಲವು ನಿರ್ಣಯಗಳು ಸಭೆಯ ಮುಂದಿಟ್ಟು ಚರ್ಚಿಸಲಾಯಿತು.

ತಾ ೯ಲ್ಲಿ ಸಂಸ್ಕೃತಭಾಷಾ ಅಭಿವೃದ್ಧಿ ಸಭೆಯು ಶಂಕರಾಚಾರ್ಯರ ಅಧ್ಯಕ್ಷತೆಯಲ್ಲಿ ಹರಿದ್ವಾರದಲ್ಲಿ ಕೂಡಿಬಂದಿರುವದು. ಈ ಸಭೆಗೆ ಅನೇಕ ಪಂಡಿತರು ಹಾಜರಿದ್ದರು. ಯೋಗಸಂಬಂಧವಾಗಿ ಪಂಡಿತ ಶಾಸ್ತ್ರಿದತ್ತರವರ ಒಂದ ಪ್ರಬಂಧವನ್ನು ಓದಿದರು. ಸ್ವಾಮಿ ದಯಾನಂದ ಬಿ ಎ ರವರು ಪ್ರಾಚೀನ ಕಾಲದ ವಿದ್ಯಾಭ್ಯಾಸದ ಕುರಿತು ಮಹತ್ವವಾದ ಭಾಷಣಕೊಟ್ಟರು. ಇನ್ನು ಇತರ ಪಂಡಿತರೂ ಹಲವು ಭಾಷಣಗಳನ್ನು ಕೊಟ್ಟು, ಸಂಸ್ಕೃತ ಭಾಷೆಯ ಮಹತ್ವವನ್ನು ಹೊರಪಡಿಸಿದರು.

ವೈಸರಾಯರ ಆಳಿಕೆಯ ಅವಧಿಯನ್ನು ಹೆಚ್ಚಿಸಬೇಕೆಂಬದಾಗಿ ಆಲೋಚಿಸುವ ಪ್ರಜಾ ಮುಂದಾಳುಗಳ ಸಭೆಯು ಇದೇ ತಾ. ೧೦ರಲ್ಲು ಲಾಹೋರಿನಲ್ಲಿ ಕೂಡಿಬಂದಿರುವದು.

ಈಗ ಗೋದುವೆಯ ಬೆಳೆಯು ಬಹಳ ಇಳಿದುಹೋಗಿ ಜಬಲ್‌ಪುರ ಮೊದಲಾದ ಜಿಲ್ಲೆಗಳಲ್ಲಿ ರೂ ೧ಕ್ಕೆ ೮ ಸೇರಿನಂತೆ ಮಾರಲ್ಪಡುತ್ತಿದೆ.

ಶ್ರೇಷ್ಠ ನ್ಯಾಯವಿಧಾಯಕ ಸಭೆಯ ವಿದ್ಯಾಖಾತೆಯ ಮೆಂಬರರಾದ ಸರ್ ಹಾರ್ಕೋರ್ಟ್ ಬಟ್ಲರವರು ರಜೆಯ ಮೇಲೆ ಶೀಮೆಗೆ ತೆರಳುವದರಿಂದ ಇದೇ ತಾ. ೧೦ರಲ್ಲು ಮುಂಬಾಯಿಯ ಬಹುಮಾನಪಟ್ಟಿ ಮಿ। ಕ್ಲಾಡಹಿಲ್ಲರವರಿಗೆ ಚಾರ್ಜು ಕೊಟ್ಟರು. ಬಹುಮಾನಪಟ್ಟಿ ಕ್ಲಾಡೆಹಿಲ್ಲರವರು ಮುಂಬಾಯಿಂದ ಪರಿವಾರ ಸಹಿತ ಸಿಮ್ಲಕ್ಕೆ ಹೊರಟುಹೋದರು.

ಮದ್ಯಪಾನವು ಯಾವ ಯಾವ ಪ್ರಾಂತ್ಯದಲ್ಲಿ ಹೆಚ್ಚುಕೊಂಡಿದೆಯೋ ಅಲ್ಲಿ ದೇಶೀಯ ಮದ್ಯಗಳ ಮೇಲಿನ ಕಂದಾಯವನ್ನು ಹೆಚ್ಚಿಸಿ ಮದ್ಯಪಾನ ಪ್ರಾಬಲ್ಯವನ್ನು ಅಡಗಿಸಬೇಕೆಂತ ಮುಂಬಾಯಿ ಸರಕಾರದವರು ಪ್ರಯತ್ನಿಸಿರುವರು. ೧೫ ಜಿಲ್ಲೆಗಳ ಅನೇಕ ತಾಲೂಕಗಳಲ್ಲಿ ಈ ಕೆಲಸವು ಆರಂಭಿಸಲ್ಪಟ್ಟಿರುವದು.

ಮಿ। ಗಂಧಿಯವರ ಪತ್ನಿಸಹಿತ ಇದೇ ತಾ ೮ರಲ್ಲು ಹರಿದ್ವಾರಕ್ಕೆ ಚಿತ್ತೈಸಿದರು. ಗುರುಕುಲದ ಪ್ರೊಫೆಸರ್ ಮಹೀಂದ್ರಚರಣ ಸಿನ್ಹರವರ ಬ್ರಹ್ಮಚಾರಿಗಳೊಡನೆ ಮಿ। ಗಂಧಿಯವರನ್ನು ಇದಿರುಗೊಂಡು ಸ್ವಾಗತ ಪತ್ರವನ್ನು ಓದಿದರು. ಮಿ। ಗಂಧಿಯವರು ಸ್ವಾಗತ ಪತ್ರಕ್ಕೆ ಕಾಲೋಚಿತ ಉತ್ತರವನ್ನು ಕೊಟ್ಟು ಗುರುಕುಲದ ಬ್ರಹ್ಮಚಾರಿಗಳ ಕೆಲಸವನ್ನು ಪ್ರಶಂಸಿಸಿದರು.

ಕಳೆದ ತಿಂಗಳಾಂತ್ಯದಲ್ಲಿ ಹಿಂದೂಸ್ಥಾನ ವಾಯುವ್ಯ ಸರಹದ್ದಿನ ತೋಚಿ ಕಣಿವೆಯಲ್ಲಿ ಜಾದ್ರಲ್ ಮತ್ತು ಮಂಗಲ ಎಂಬ ಗುಂಪಿನ ಜನರು ಸುಮಾರು ೧೦೦೦ ಮಂದಿ ಆಯುಧಪಾಣಿಗಳಾಗಿ ಡೂರಾಂಡ್ ಎಲ್ಲೆಯನ್ನು ದಾಟಿ ಬಂದು ಗುಡ್ಡಗಳ ಮೇಲೆ ಠಾಣ್ಯ ಮಾಡಿಕೊಂಡರು. ಬ್ರಿಟಿಷ ಸೈನ್ಯಗಳು ಅವರನ್ನು ಓಡಿಸುವದಕ್ಕೆ ಮಿರಾನ್‌ಶ್ಯಾರಾಣ್ಯದಿಂದ ಅಲ್ಲಿಗೆ ಕಳುಹಿಸಲ್ಪಟ್ಟವು. ಈ ಸೈನಿಕರು ಅವರ ಮೇಲೆ ನುಗ್ಗಿ ಹೋಗಿ ಕದನಮಾಡಿ ಅವರನ್ನು ಡೂರಾನ್ ಎಲ್ಲೆಯಿಂದಾಚೆಗೆ ಓಡಿಸಿದರು. ಅವರ ಕಡೆ ಸುಮಾರು ೨೦೦ ಜನರು ಕೊಲೆಯಾದರೆಂದೂ ೩೦೦ ಜನರು ಗಾಯಪಡೆದರೆಂದೂ ತಿಳಿಯುತ್ತದೆ. ನಮ್ಮ ಕಡೆಯವರು ಅವರಲ್ಲಿ ಅನೇಕರನ್ನು ಕೈಸೆರೆ ಹಿಡಿದುತಂದರು. ಅನೇಕ ಬಂದೂಕುಗಳೂ ಕತ್ತಿಗಳೂ ಬರ್ಚಿಗಳೂ ಬಾವುಟಗಳೂ ಸಿಕ್ಕಿರುತ್ತವೆ. ರಣರಂಗದಲ್ಲಿ ಗಾಯಪಟ್ಟು ಬಿದ್ದಿದ್ದ ಶತ್ರುಗಳನ್ನು ಮಿರಾನ್‌ಶ್ಯಾರಾಣ್ಯಕ್ಕೆ ತಂದು ಚಿಕಿತ್ಸೆ ಮಾಡುತ್ತಿದ್ದಾರೆ.

ಮುಂಬಾಯಿ ಪಟ್ಟಣದಲ್ಲಿ ಬಟ್ಟೆ ವ್ಯಾಪಾರಿಯಾದ ಹಾಜಿ ಅಬ್ದುಲ್ಲ ರಹಿಮಾನ್ ಎಂಬವನು ಕಳೆದ ವಾರ ಮಂಗಳವಾರ ೪೦೦ ರೂಪಾಯಿ ಥೈಲಿಯನ್ನು ಕೈಯಲ್ಲಿ ಹಿಡಕೊಂಡು ಬೀದಿಯಲ್ಲಿ ಹೋಗುತ್ತಿದ್ದಾಗ ಅವನ ಕಣ್ಣಿಗೆ ಯಾರೋ ಮಣ್ಣು ಎರಚಿ ಅವನು ಅದನ್ನು ಒರಸಿಕೊಳ್ಳುತ್ತಿರುವಲ್ಲಿ ಕೈಯಲ್ಲಿದ್ದ ಹಣದ ಗಂಟನ್ನು ಕಿತ್ತುಕೊಂಡು ಓಡಿಹೋದನು. ಅಷ್ಟರಲ್ಲೇ ಅವನು ಗಲಭೆ ಮಾಡಿದಾಗ ಓಡಿಹೋಗುತ್ತಿದ್ದ ಒಬ್ಬ ಹಿಂದೂ ಹುಡುಗನನ್ನು ಜನರು ಹಿಡಿದು ಶೋಧನೆ ಮಾಡಿದರು. ಅವನ ಬಳಿ ಹಣದ ಗಂಟು ಇರಲಿಲ್ಲ. ಆದರೂ ಅವನನ್ನು ಪೋಲಿಸಿಗೆ ಒಪ್ಪಿಸಿರುತ್ತಾರೆ.

ಕಾಶೀ ಪಟ್ಟಣದಲ್ಲಿರುವ ಘನವೈದಿದ ಮೆ। ಬಿ. ಮೋತಿಚಂದ್ ಎಂಬ ಭಾರೀ ಜಮಿನ್ದಾರರಿಗೆ ಕಾಶಿ, ಫೈಜಾಬಾದ್, ಜಾನ್‌ಪುರ, ಅಜಾಂಘಡ, ಆರಾ ಡಿಸ್ಟ್ರಿಕ್ಟುಗಳಲ್ಲಿ ಅನೇಕ ಜಮಿನುಗಳು ಇರುತ್ತವೆ. ಅವರಿಗೆ ಸೇರಿದ ಗ್ರಾಮಗಳಲ್ಲಿರುವ ಅನೇಕ ಜನರು ಬ್ರಿಟಿಷ ಸೈನ್ಯದಲ್ಲಿ ಸೇರಿ ಈಗ ಯುದ್ಧಭೂಮಿಯಲ್ಲಿ ಕಡಿದಾಡುತ್ತಲೂ ಸ್ವರಾಜ ಸಂರಕ್ಷಣಾರ್ಥವಾಗಿ ಪ್ರಾಣ ಕೊಡುತ್ತಲೂ ಇದ್ದಾರೆ. ಈಗಲೂ ಅನೇಕ ರೈತ ಪ್ರಜೆಗಳು ಸೈನ್ಯಕ್ಕೆ ಸೇರಿಕೊಳ್ಳುತ್ತಲೂ ಇರುವರು. ಇಂಥವರಿಗೆಲ್ಲಾ ವಿಶೇಷ ಪ್ರೋತ್ಸಾಹ ಮಾಡಬೇಕೆಂದು ರಾಜಭಕ್ತಿಯುಳ್ಳ ಆ ಜಮಿನ್ದಾರರು ಕಂದಾಯುಕೌಳಿಗೆಗಳನ್ನು ವಸೂಲು ಮಾಡದೆ ಮಾಫಿ ಬಿಡಬೇಕೆಂದೂ ಪರಾಕ್ರಮಿಗಳಾಗಿ ಗಾಯಪಟ್ಟು ಬರುವವರಿಗೂ ಬಿರುದು ಪಡೆದು ಬಂದವರಿಗೂ ಕೊಲೆಯಾದವರ ವಾರಿಸುದಾರರಿಗೂ ಇನ್ನೂ ಅನೇಕ ರಿಯಾಯತಿಗಳನ್ನು ತೋರಿಸಲಾಗುವದೆಂದೂ ತಮ್ಮ ಕೈಕೆಳಗಣ ಅಧಿಕಾರಿಗಳಿಗೆ ಹುಕುಂ ಕೊಟ್ಟು ಈ ತಮ್ಮ ಹುಕುಮನ್ನು ಆ ಗ್ರಾಮಗಳಲ್ಲೆಲ್ಲಾ ಇಸ್ತಿಹಾರು ಹಾಕಿಸಿರುತ್ತಾರೆ.

ಕಳೆದ ಫೆಬ್ರವರಿ ಆಖೈರಿ ವರೆಗೆ ಹಿಂದೂಸ್ಥಾನಕ್ಕೆ ಹೊರಗಿನಿಂದ ೬,೮೮,೪೬,೧೮೮ ರೂಪಾಯಿನ ಚಿನ್ನದ ಗಟ್ಟಿಗಳೂ, ೮,೧೭,೬೨,೪೧೩ ರೂಪಾಯಿನ ಬೆಳ್ಳಿ ಗಟ್ಟಿಗಳೂ ರವ್ವಾಗಿ ಬಂದಿರುತ್ತವೆ. ಇದಲ್ಲದೆ ಕಲ್ಕತ್ತಾ ಮುಂಬಾಯಿ ಟಂಕಶಾಲೆಗಳಿಗೆ ವರ್ತಕರು ಚಿನ್ನ ಬೆಳ್ಳಿ ತಂದುಕೊಟ್ಟು ೨೬,೧೯,೯೫ ರೂಪಾಯಿ ನಾಣ್ಯಗಳನ್ನು ಟಂಕಾಹೊಡಿಸಿ ತೆಗೆದುಕೊಂಡು ಹೋದರು. ಇದಲ್ಲದೆ ಆ ಟಂಕಶಾಲೆಗಳಲ್ಲಿ ೧,೮೧,೯೧,೨೦೫ ರೂಪಾಯಿಗಳನ್ನೂ ಚಿಲ್ಲರೆ ಬೆಳ್ಳಿ ನಾಣ್ಯಗಳನ್ನೂ ಟಂಕಾಹೊಡಿಸಿ ಚಲಾವಣೆಗೆ ಕೊಟ್ಟರು.

ಯೂರೋಪಿನಲ್ಲಿ ಯುದ್ಧಾರಂಭವಾದಂದಿನಿಂದ ಹಿಂದೂಸ್ಥಾನದಲ್ಲಿ ೪೫,೦೦೦ ಜನರು ಸೈನ್ಯಕ್ಕೆ ಸೇರಿಕೊಂಡರು. ಈ ಪೈಕಿ ಪಂಜಾಬಿನವರೇ ಅರ್ಧಕ್ಕಿಂತ ಹೆಚ್ಚು. ರಾವಲ್ ಪಿಂಡಿಯವರು ೧೦,೦೦೦ಕ್ಕೆ ಮೇಲ್ಪಟ್ಟು ಸೈನಿಕರಾದರು. ವಿಕ್ಟೋರಿಯ ಕ್ರಾಸ್ ಎಂಬ ಬಿರುದನ್ನು ಪಡೆದ ಹಿಂದೂಸ್ಥಾನದ ಸೈನಿಕರಲ್ಲಿ ಖುದಾದಾದ್ ಖಾನ ಎಂಬಾತನು ಜೀಲಂ ಪ್ರಾಂತ್ಯದವನು ಎಂಬದಾಗಿ ಲೆಫ್ಟನೆಂಟ ಗವರ್ನರರವರು ರಾವಲ್ ಪಿಂಡಿಯಲ್ಲಿ ನಡೆದ ಒಂದು ದರ್ಬಾರಿನಲ್ಲಿ ಅಪ್ಪಣೆ ಕೊಡಿಸಿದ್ದಾರೆ.

ದಕ್ಷಿಣ ಹಿಂದೂಸ್ಥಾನ.

ಮದ್ರಾಸ್ ಸಂಸ್ಥಾನದ ಬಗ್ಗೆ ಸ್ಟೇಟ್ ಸೆಕ್ರಟರಿಯವರು ವ್ಯವಸಾಯ ಇಲಾಖೆಯಲ್ಲಿ ಮೂರು ಡೆಪ್ಯುಟಿ ಡೈರೆಕ್ಟರರ ನೇಮಕವನ್ನು ಮಂಜೂರು ಮಾಡಿರುವರು.

ಶ್ರೀ ಉತ್ತರಾದಿ ಮಠದ ಸ್ವಾಮಿಗಳು ಮೈಸೂರು ದೇಶಕ್ಕೆ ಚಿತ್ತೈಸಿರುವದರಿಂದ ಅಲ್ಲಿಗೆ ಹೋಗಿರುವ ಅವರ ಕಡೆಯ ವೈದಿಕ ಮಂಡಲಿಯವರಿಂದ ಪ್ರೌಢವಿವಾಹ ವಿಧಿಯ ಸಂಬಂಧ ಚರ್ಚೆಯು ಪ್ರಬಲವಾಗಿದೆ. ಪ್ರೌಢವಿವಾಹವನ್ನು ಖಂಡಿಸಿ ಕನ್ಯಾ ವಿವಾಹವನ್ನು ಅನುಮೋದಿಸುವ ಮೂರು ನಾಲ್ಕು ಉಪನ್ಯಾಸಗಳು ಮೈಸೂರಿನ ಟೌನ್ ಹೋಲಿನಲ್ಲಿ ಉತ್ತರಾದಿ ಮಠದ ವೈದಿಕ ಪಂಡಿತರೊಬ್ಬರಿಂದ ಕೊಡಲ್ಪಟ್ಟಿರುವದು. ಪ್ರೌಢವಿವಾಹ ಖಂಡನ ವಿಷಯದಲ್ಲಿ ವೈದಿಕ ಮಂಡಲಿಯ ಉಪನ್ಯಾಸವಾದ ದಿನ ಪ್ರೌಢವಿವಾಹವು ವಿಧಿವಚನದಿಂದ ವೇದಶಾಸ್ತ್ರಾದಿಗಳಲ್ಲಿ ವಿಹಿತವಾಗಿರುವದೆಂಬದನ್ನು ಯಾರಾದರೂ ತೋರಿಸಿ ಕೊಟ್ಟರೆ ಅವರಿಗೆ ಹತ್ತು ಸಾವಿರ ರೂಪಾಯಿಗಳನ್ನು ಕೊಡುವೆವೆಂದೂ ಈಗ ಬಂದಿರುವ ಉತ್ತರಾದಿ ಮಠದ ಸ್ವಾಮಿಗಳವರು ೪ ಸಹಸ್ರ ರೂಪಾಯಿಗಳನ್ನು ಕೊಡಲು ವಾಗ್ದಾನ ಮಾಡಿರುವರೆಂದೂ ಮ. ರಾ. ರಾಮಶಾಸ್ತ್ರಿಗಳು ಸಭಾಮಧ್ಯದಲ್ಲಿ ತಿಳಿಯಿಸಿರುವರು.

ಅರ್ಥಸಾಧಕ ಸಭೆಯ ವಿದ್ಯಾಭ್ಯಾಸ ಕಾರ್ಯಶಾಖೆಯವರು ಕನ್ನಡದ ಏಳಿಗೆಗಾಗಿ ಮಾಡಿಕೊಂಡಿರುವ ಸಂಕಲ್ಪವನ್ನನುಸರಿಸಿ ಮೇ ತಿಂಗಳ ತಾ. ೩-೪ರಲ್ಲಿ ಬೆಂಗಳೂರಲ್ಲಿ ಒಂದು ಸಮ್ಮೇಲನವು ಕೂಡುವದು. ಇದಕ್ಕೆ ಎಲ್ಲಾ ಕಡೆಯ ಕನ್ನಡಿಗರನ್ನು ಬರಮಾಡಿ

ಕೊಳ್ಳುವರು. (೧) ಕನ್ನಡ ನಾಡಿನ ಬೇರೆ ಬೇರೆ ಭಾಗಗಳಲ್ಲಿರುವ ಭಾಷಾಭಿಜ್ಞರಲ್ಲಿ ಪರಸ್ಪರ ಸೌಹಾರ್ದವನ್ನು ಹೆಚ್ಚಿಸುವದು; (೨) ಗ್ರಾಂಥಿಕಭಾಷೆಯನ್ನು ಒಂದೇ ರೂಪಕ್ಕೆ ತರುವದು. (೩) ಶಾಲೆಗಳಲ್ಲಿ ಒಂದೇ ವಿಧವಾದ ಪಾಠಪುಸ್ತಕಗಳನ್ನು ನಿಯಮಿಸುವದು. (೪) ಜನಸಾಮಾನ್ಯರಲ್ಲಿ ಉಪಯುಕ್ತ ಜ್ಞಾನವು ಸುಲಭವಾಗಿ ಹರಡುವಂತೆ ಸಣ್ಣ ಸಣ್ಣ ಪುಸ್ತಕಗಳನ್ನು ಹರಡಿಸುವದು. (೫) ಶಾಸ್ತ್ರೀಯ ಪುಸ್ತಕಗಳಿಗೆ ತಕ್ಕ ಪಾರಿಭಾಷಿಕ ಶಬ್ದಗಳನ್ನು ನಿರ್ಣಯಿಸುವದು— ಇವೇ ಮೊದಲಾದವುಗಳ ವಿಚಾರದಲ್ಲಿ ಚರ್ಚೆ ನಡೆಯುವದು.

ಉತ್ತರ ತಿರುವಂಕೋಡಿನ ಒಂದು ಗ್ರಾಮದಲ್ಲಿ ೧೨೭ ವರ್ಷ ವಯಸ್ಸಿನ ಪುರುಷನೊಬ್ಬನು ಒಳ್ಳೆಯ ಆರೋಗ್ಯ ಸ್ಥಿತಿಯಲ್ಲಿ ಜೀವಿಸಿಕೊಂಡಿರುವನೆಂತ ತಿಳಿದು ಬಂದದೆ

ಮೈಸೂರು ಸಂಸ್ಥಾನದಲ್ಲಿ ಸಾಬೂನು ಕೈಗಾರಿಕೆಯನ್ನು ಸ್ಥಾಪಿಸುವದಕ್ಕೆ ಎಷ್ಟು ಅನುಕೂಲವಿದೆ ಎಂಬುದನ್ನೂ, ಅದರಿಂದ ಎಷ್ಟು ಪ್ರಯೋಜನವಾಗಬಹುದೆಂಬದನ್ನೂ ವಿಚಾರ ಮಾಡಿ ಕಂಡು ಹಿಡಿಯುವದಕ್ಕಾಗಿ ಹಿಂದೆ ಕಲ್ಕತ್ತಾ ಪಟ್ಟಣದ ಒರಿಯಂಟಲ್ ಸೋಪು ಕಾರಖಾನೆಯ ಸರ್ವಾಧಿಕಾರಿಯಾದ ಮಿ| ಜೆ. ಚಕ್ರವರ್ತಿ ಬಿ. ಎ ಇವರನ್ನು ಮೈಸೂರು ಸರಕಾರದವರು ನೇಮಕ ಮಾಡಿರುತ್ತಾರೆ.

ನೆಲ್ಲೂರಲ್ಲಿ ಬರುವ ತಿಂಗಳ ಮೊದಲನೇ ವಾರ ಸಂಘ ಪರಿಷ್ಕರಣ ಸಮಾಜವು ನಡೆಯುತ್ತದೆ. ಈ ಸಭೆಯಲ್ಲಿ ಮೈಸೂರು ಒರಿಯಂಟಲ್ ಲೈಬ್ರರಿ ಕ್ಯೂರೆಟರವರಾದ ಮ| ರಾ| ಎ. ಮಹಾದೇವಶಾಸ್ತ್ರಿಗಳು ಅಗ್ರಾಸನವನ್ನು ವಹಿಸುವಂತೆ ಒಪ್ಪಿಕೊಂಡಿದ್ದಾರೆ ಸಂಘ ಪರಿಷ್ಕರಣ ಕಾರ್ಯದಲ್ಲಿ ಇವರು ತುಂಬಾ ಉತ್ಸಾಹಶಾಲಿಗಳು ಸಂಸ್ಕೃತದಲ್ಲೂ ಇಂಗ್ಲಿಷಿನಲ್ಲೂ ಪಂಡಿತರೆನಿಸಿಕೊಂಡಿದ್ದಾರೆ.

ಒಂದು ಬ್ರಿಟಿಷ ಹಡಗವು ಕಳೆದ ವಾರ ಯುದ್ಧಭೂಮಿಯಲಿ ಕೈಸೆರೆ ಹಿಡಿದ ಕೆಲವು ಟರ್ಕಿ ಮತ್ತು ಅರಬಿ ಸೈನಿಕರನ್ನು ಬರ್ಮ ಅಧಿಪತ್ಯಕ್ಕೆ ಸೇರಿದ ಥೆಯಟ್ಮೆಯೋ ಎಂಬ ಪಟ್ಟಣಕ್ಕೆ ಕರೆತಂದಿದೆ.

ರಂಗೂನು ಪಟ್ಟಣದ ಗ್ರಾಹಂ ಕಂಪೆನಿಯ ಮೆನೇಜರನಾಗಿದ್ದ ಎಚ್. ಸಿ. ಎಲ್ಲ ಎಂಬಾತನು ಕಂಪೆನಿಯ ಲೆಕ್ಕಗಳನ್ನು ತಿದ್ದಿ ಸುಮಾರು ೨೧ ಲಕ್ಷ ರೂಪಾಯಿಗಳನ್ನು ತಿಂದುಹಾಕಿದನೆಂದು ಮೊಕದಮೆ ಬಂದು ಈಗ ವಿಚಾರಣೆ ನಡೆಯುತ್ತಿದೆ.

ಮಲಬಾರ್ ಪ್ರಾಂತ್ಯಕ್ಕೆ ಸೇರಿದ ಎರ್ನಾಡ್ ತಾಲೂಕಿನಲ್ಲಿ ಮತಭ್ರಾಂತರಾದ ಮಾಪಿಳ್ಳೆಯರು ಕಲೆಕ್ಟರರನ್ನು ಕೊಲ್ಲಬೇಕೆಂದು ಯತ್ನನಡಿಸಿದ್ದರಷ್ಟೆ. ಈಚೆಗೂ ಅಲ್ಲಿನ ಮಾಪಿಳ್ಳೆಗಳು ಜನರಲ್ಲಿ ವೀರವೈಶಮ್ಯಗಳನ್ನು ಹುಟ್ಟಿಸುವಂಥಾ ಕೃತ್ಯಗಳನ್ನು ಮಾಡುತ್ತಿದ್ದಾರೆ. ಸರಕಾರದವರು ಕಳೆದ ವಾರವೂ ಕೆಲವರನ್ನು ದಸ್ತಗಿರಿ ಮಾಡಿದರು. ಆ ಪ್ರಾಂತ್ಯದಲ್ಲಿ ಪ್ರಜಾ ನೆಮ್ಮದಿಯನ್ನು ಕಾಪಾಡುವ ಹೊಸ ಕಾನೂನನ್ನು ಜಾರಿಗೆ ತರಬೇಕೆಂದು ಸೂಚಿಸಲಾಗಿದೆ.

ಮಲಬಾರ್ ಜಿಲ್ಲೆಗೆ ಸೇರಿದ ಪೊಥುಕಳ ಎಂಬ ಕಾಡಿನಲ್ಲಿ ಒಂದು ಕಾಡಾನೆಯು ಒಬ್ಬ ಮಾಪಿಳ್ಳೆಯನ್ನೂ, ಮೂರು ಮಂದಿ ಹೆಂಗಸರನ್ನೂ ಕೊಂದುಬಿಟ್ಟಿತು. ಅದರ ದೇಹದಲ್ಲಿ ೧೪ ಗುಂಡು ಏಟುಗಳೂ ಬಿದ್ದರೂ ಅದು ತಪ್ಪಿಸಿಕೊಂಡು ಅಲೆಯುತ್ತಿದೆ.

ಮೈಸೂರಿಗೆ ಸೇರಿರುವ ಸಿಟಿನಾಗರಥ ಪೇಟೆಯಲ್ಲಿ ೭ ಕಾಲಿರುವ ಒಂದು ಆಡು ಪ್ರದರ್ಶಿಸಲ್ಪಟ್ಟಿರುವದು. ಸ್ವಭಾವಿಕವಾಗಿ ನಾಲ್ಕು ಕಾಲುಗಳಿರುವದಲ್ಲದೆ ಎಡದ ಭುಜದ ಭಾಗಕ್ಕೆ ೩ ಕಾಲುಗಳು ಸೇರಿಕೊಂಡು ಅಲ್ಲಾಡುತ್ತಿರುವವು.

ಕಳೆದ ಕೆಲವು ವರುಷಗಳಿಂದಲೂ ಮದರಾಸಾಧಿಪತ್ಯದ ತಿನ್ನವೆಲ್ಲಿ ಡಿಸ್ಟ್ರಿಕ್ಟಿನಲ್ಲಿ ಬೆಳೆಯತಕ್ಕ ತಿನ್ನವೆಲ್ಲಿ ಹತ್ತಿಯ ಉತ್ಪತ್ತಿಯು ಹೆಚ್ಚುವಂತೆ ಮಾಡುವದಕ್ಕಾಗಿ ಕೆಲಸಗಳು ನಡೆಸಲ್ಪಡುತ್ತಿದ್ದವು. ಮೂರು ಜಮೀನುಗಳ ಬೆಳೆಯಲ್ಲಿ ಬಹಳ ಚೆನ್ನಾಗಿ ಬೆಳೆದು ಹೇರಳವಾಗಿ ಫಲಬಿಟ್ಟಿದ್ದ ಮೂರು ಗಿಡಗಳ ಬಿತ್ತವನ್ನೇ ಆರಿಸಿ ಅವುಗಳಿಂದಲೇ ಬೇರೆ ಬೆಳೆಯನ್ನು ಬೆಳೆಯುವದು. ಅದರಲ್ಲಿ ಉತ್ತಮವಾದ ಗಿಡಗಳ ಬೀಜವನ್ನೇ ಪುನಃ ಉಪಯೋಗಿಸುವದು. ಈ ರೀತಿಯಲ್ಲಿ ಶೇಖರಿಸಲ್ಪಟ್ಟ ಮೂರು ತರದ ಬಿತ್ತನೆ ಬೀಜಗಳಲ್ಲಿ ಒಂದುಮಾದರಿಯನ್ನು ಕಳೆದ ಸಾಲಿನಲ್ಲಿ ಒಬ್ಬ ರೈತನಿಗೆ ಕೊಟ್ಟು ಅವನ ಹಿಡುವಳಿಜಾಮೀನು ಸುಮಾರು ೩೦ ಎಕ್ಕರೆ ವಿಸ್ತೀರ್ಣದಲ್ಲಿ ಬೆಳೆಯನ್ನಿಡಿಸಿದ್ದರು ಇದು ಬಹಳ ಉತ್ತಮಬೆಳೆಯಾಗಿರುವದನ್ನು ನೋಡಿ ಅಡುಬಾಜಿನ ಇತರ ರೈತರುಗಳೂ ಬಿತ್ತನೆಗೆ ಇದರ ಬೀಜವನ್ನು ಅಪೇಕ್ಷಿಸುತ್ತಿದ್ದಾರೆ ಈ ಬೆಳೆಯಲ್ಲಿ ಎಕರೆಗೆ ಸಾಧಾರಣ ಹತ್ತಿಬೆಳೆಗಿಂತಲೂ ರೂಪಾಯಿ ೧೬| ಬಾಳುವಷ್ಟು ಜಾಸ್ತಿ ಉತ್ಪತ್ತಿಯಾಗುವದೆಂದು ಗೊತ್ತುಮಾಡಲ್ಪಟ್ಟಿದೆ ಈ ರೀತಿ ಲೆಕ್ಕಾಚಾರ ಹಾಕಿದರೆ ಅದೊಂದು ಹಳ್ಳಿಯಲ್ಲಿ ಪರ ಪಕ್ಕೆ ಇದುವರೆಗೂ ಆಗುತ್ತಿದ್ದದಕ್ಕಿಂತಲೂ ೧೫ ಸಾವಿರ ರೂಪಾಯಿಯ ಹತ್ತಿಯು ಹೆಚ್ಚು ಉತ್ಪತ್ತಿಯಾದಂತಾಗುವದು

ಕಲಿಕೋಟೆಯ ಬಾಸೆಲ್ ಮಿಶ್ಯನಿನ ಮೆಡಿಕಲ್ ಡಾಕ್ಟರರಾಗಿದ್ದ ಮಿ| ಡಬ್ಲು, ಸ್ಟೋಕ್ಸ್‌ದೊರೆಗಳವರನ್ನು ಸರಕಾರದವರು ಆಕ್ಟಿಂಗ್ ಡಿಸ್ಟ್ರಿಕ್ಟ್ ಸರ್ಜನರಾಗಿಯೂ ಸೆನಿಟರಿ ಆಫೀಸರರಾಗಿಯೂ ನೇಮಿಸಿದ್ದಾರೆ

ಮೈಸೂರ ಸರಕಾರದವರು ನಂದಿಬೆಟ್ಟದ ಮೇಲೆ ವಿಹಾರಾರ್ಥವಾಗಿ ಹೋಗತಕ್ಕ ಜನಗಳಿಗೆ ಬೇಕಾಗ ವಂಥಾ ಅನುಕೂಲಗಳನ್ನು ಕಲ್ಪಿಸಿಕೊಡಬೇಕೆಂದು ಹುಕುಂ ಕೊಟ್ಟು ೧೫೦೦ ರೂಪಾಯಿ ಸೆಂಕ್ಷನ್ ಮಾಡಿರ ತ್ತಾರೆ

ಮದ್ರಾಸಿನಲ್ಲಿ ಕೆಲಸಮಾಡುವ ವಿವಿಧ ಮಿಶ್ಯನ್ ಸಂಘಗಳು ಒಟ್ಟುಕೂಡಿ ಮದ್ರಾಸಿನಲ್ಲಿ ಸ್ತ್ರೀ ವಿದ್ಯಾರ್ಥಿಗಳಿಗೆಂದು ಕ್ರಿಶ್ಚನ್ ಕಾಲೇಜನ್ನು ಸ್ಥಾಪಿಸುವರೆ ನಿರ್ಣಯಿಸಿದ್ದಾರೆ. ಈ ಕಾಲೇಜು ಬರುವ ಜುಲಾಯಿ ತಿಂಗಳಿನಿಂದ ಶುರುವಾಗುವದು. ಈ ಕಾಲೇಜಿನಲ್ಲಿ ಸ್ತ್ರೀ ವಿದ್ಯಾರ್ಥಿಗಳನ್ನು ಇಂಟರ್‌ಮಿಡಿಯೆಟ್ ಪರೀಕ್ಷೆಗೆ ಗ್ರೂಪ್ ೩ನೇಯಲ್ಲಿಯೂ ಬಿ ಎ. ಪರೀಕ್ಷೆಗೆ ಗ್ರೂಪು ೪ ಮತ್ತು ೫ನೇಗಳಲ್ಲಿಯೂ ತರಬೇತುಮಾಡುವರು ಇದರಲ್ಲಿಯೇ ವಿದ್ಯಾರ್ಥಿಗಳು ವಾಸವಾಗಿದ್ದು ವಿದ್ಯಾಭ್ಯಾಸ ಪಡೆಯುವರು ಇದಕ್ಕೆ ೪-೬ ಯುರೋಪಿಯ ಅಥವಾ ಅಮೇರಿಕದ ಉಪಾಧ್ಯಾಯಿನಿಗಳು, ಒಬ್ಬಳು ಅಥವಾ ಹೆಚ್ಚು ಭಾರತೀಯ ಉಪಾಧ್ಯಾಯಿನಿಗಳೂ ನೇಮಕವಾಗುವರು. ಇದರ ಪ್ರಿನ್ಸಿಪಲ್ ಮಿಸ್ ಎಲಿಯನೊರ್ ಮೆಕ್‌ಡೊಂಗಲ್, ಎಮ್ ಎ ಎಂಬವರು. ಹೆತ್ತವರು ಮದ್ರಾಸಿನಲ್ಲಿ ವಾಸವಾಗಿರದಿದ್ದರೆ ಅಂಥಾ ವಿದ್ಯಾರ್ಥಿಗಳನ್ನು ಅದರಲ್ಲಿ ಸೇರಿಸಿಕೊಳ್ಳುವರು ೫-೧೦ ರೂಪಾಯಿಗಳ ಕೆಲವು ವೇತನಗಳೂ ಕೊಡೋಣಾಗವವು.

ದಕ್ಷಿಣ ಕನ್ನಡ.

ಪೊಳಲಿ:— ಶ್ರೀ ರಾಜರಾಜೇಶ್ವರಿ ದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ಸಂಬಂಧಪಟ್ಟ ಅನೇಕ ಬ್ರಾಹ್ಮಣರ ಮನೆಗಳು ಇದ್ದಾಗ್ಯೂ ಇಲ್ಲಿ ಸರಿಯಾದ ಕನ್ನಡ ಶಾಲೆಗಳೇ ಅಪರೂಪವಾಗಿರುತ್ತಿತ್ತು. ಆದರೆ ಈಗ ಕೆಲವು ವರ್ಷಗಳಿಂದ ಅಮುಣಂಜೆ ಶಾಲೆಯು ಉತ್ತಮಕ್ರಮದಲ್ಲಿ ನಡೆಯುವುದರಿಂದಲೂ ಕರಿಯಂಗಳ ಗುತ್ತು ಮ| ರಾ| ಮುತ್ತಯ್ಯ ಶೆಟ್ಟರವರು ಸ್ಥಾಪಿಸಿದ ಎಲಿಮೆಂಟರಿ ಶಾಲೆಯಿಂದಲೂ ತಕ್ಕ ಮಟ್ಟಿಗೆ ಕನ್ನಡ ವಿದ್ಯಾಭ್ಯಾಸವು ಬಾಲಕರಿಗೆ ದೊರೆಯುವಾಗ್ಯೆ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಅತ್ಯಗತ್ಯವುಳ್ಳ ಮಾತೃ ಭಾಷೆಯಾದ ಸಂಸ್ಕೃತದ ಹೆಸರನ್ನು ಕೂಡಾ ಹೇಳುವ ಬ್ರಾಹ್ಮಣರ ಸಂಖ್ಯೆಯು ಕಡಿಮೆಯಾಗಿತ್ತು. ಆದರೆ ಊರಿನ ಅನೇಕ ಮಹನೀಯರು ಹಲವು ಸರ್ತಿ ಹಲವು ಶಾಲೆಗಳನ್ನು ತೆರಯಲಿಕ್ಕೆ ಪ್ರಯತ್ನಿಸಿದರೂ ಕೂಡಾ ಪೂರ್ಣ ಮಾಡದ ಕಾರಣ ಈಗ ವೇದಮೂರ್ತಿ ಕರಿಯಂಗಳ ಸುಬ್ರಾಯ ತಂತ್ರಿಗಳವರು ಸ್ವಂತ ಖರ್ಚಿನಿಂದ ಈಗ "ಪೊಳಲಿ ಸಂಸ್ಕೃತ ಪಾಠ ಶಾಲೆ" ಎಂಬ ಹೆಸರಿನಿಂದ ಒಂದು ಶಾಲೆಯನ್ನು ಪ್ರತಿಷ್ಠೆ ಮಾಡಿದರು. ಈ ವಾರ್ತೆಯು ಸಕಲರಿಗೂ ಆನಂದಕರವಾದುದರಿಂದ ಆ ದಿವಸ ನೂರಾರು ಬ್ರಾಹ್ಮಣೇತರ ಸಭಿಕರು ನೆರದಿದ್ದರು ಬೆಳಗ್ಗೆ ೧೦ ಗಂಟೆಗೆ ಸರಿಯಾದ ವೃಶಭ ಲಗ್ನದಲ್ಲಿ ಮುಹೂರ್ತವಾಗಿ ಗಣಹೋಮ ವಗೈರೆ ವಿಧಿ ಪ್ರಕಾರ ನಡದು ಸಭಿಕರಿಗೆ ಯೋಗ್ಯತೋಪಚಾರಗಳು ನಡದ ತರುವಾಯ ನಮ್ಮ ಚಕ್ರವರ್ತಿಯವರಾದ ೫ನೇ ಜಾರ್ಜ ಸಾರ್ವಭೌಮರಿಗೆ ತ್ರೀದೇವಿಯು ಸದಾನಂದವನ್ನು ದಯ ಪಾಲಿಸಬೇಕೆಂತ ವಿದ್ಯಾರ್ಥಿಗಳು ವೇದೋಕ್ತ ಮಂತ್ರಗಳಿಂದ ಪ್ರಾರ್ಥಿಸಿದರು. ಪ್ರಕೃತ ಪರ ಊರಿನ ವಿದ್ಯಾರ್ಥಿಗಳು ಹೆಚ್ಚಿಗೆ ಇಲ್ಲದಿದ್ದರೂ ಉತ್ಸಹದ ಗಲಾಟೆಯು ತಾ. ೧೫ರ ವರೇಗೆ ಇರುವದರಿಂದ ಉದಾರ ಗುಣವಾದಿಗಳು ಈ ಸಂಸ್ಕೃತ ಪಾಠ ಶಾಲೆಗೆ ತಮ್ಮ ಯಥಾನುಶಕ್ತಿ ದ್ರವ್ಯ ಸಹಾಯಮಾಡಿ ಪುಣ್ಯ ಕೀರ್ತಿಗಳ ಉತ್ತರ ಭಾಗಿಗಳಾಗುವರಾಗಿ ನಂಬುತ್ತೇವೆ.

ಪೊಳಲಿಯೆಂಬಲ್ಲಿ ಶ್ರೀ ರಾಜರಾಜೇಶ್ವರಿ ದುರ್ಗಾಪರಮೇಶ್ವರಿ ದೇವಸ್ಥಾನದ ಕಾಲಾವಧಿ ಆಗತಕ್ಕ ಚೆಂಡಿನ ಉತ್ಸಹವು ತಾ. ೧೦ಕ್ಕೆ ಆಖೈರಿಯಾಯಿತು. ಈ ವರ್ಷ ವಿಪರೀತ ಜನ ಸಮೂಹಗಳು ನೆರೆದಿದ್ದು ಚೆಂಡಿಗೆ ಇಳಿದವರಲ್ಲಿ ಕೆಲವರು ಸ್ಮೃತಿತಪ್ಪಿ ಬಿದ್ದದ್ದರಿಂದ ಕೆಲವು ತಾಸುಗಳ ವರೆಗೆ ಅದೇ ಗಲಾಟೆಯಾಯಿತು. ಆದರೆ ಮೂರು ಚೆಂಡಿನಲ್ಲಿ ಒಂದು ಅಮುಣಂಜೆ ಪಕ್ಷಕ್ಕೂ ಎರಡು ಮಳಲಿ ಕಡೆಗೂ ತಾಗಿದ್ದರಿಂದ ಅಮುಣಂಜೆ ಪಕ್ಷದವರು ಈವರ್ಷ ಗೆದ್ದರು ಎಂದು ತಿಳಿಸಲು ಸಂತೋಷಪಡುತ್ತೇವೆ.

ಇಲ್ಲಿ ಅನಾದಿಯಿಂದ ಬಿಡದೆ ನಡೆಯುತ್ತಿದ್ದ ಗಿರಿಗಿಟಿ, ಪರಿಮಳುಗಳಿ, ಇಸ್ಪೀಟು, ಜಗಾರಿ, ಗಿಡಿ ವಗೈರೆ ಆಟಗಳಲ್ಲಿ ಈ ವರ್ಷದ ಉತ್ಸವಕಾಲದಲ್ಲಿ ಯಾವದೊಂದು ನಡೆಯದೆ ಇದ್ದದ್ದು ಸಂತೋಷಕರವಾಗಿರುತ್ತದೆ. ಇಲ್ಲಿಯ ಜುಗಾರಾಟವನ್ನು ಪೂರ್ಣವಾಗಿ ನಿಲ್ಲಿಸಿದ್ದು ಜಗಾರಿಖೋರರಿಗೆ ಬಹಳ ವ್ಯಸನವಾದರೂ ಯಾತ್ರಿಕರಿಗೆ ತುಂಬಾ ಸಂತೋಷಕರ

ಮಂಗಳೂರು

ಕುಂದಾಪುರದಲ್ಲಿ ಬಂಕೇಶ್ವರ ರಾಮರಾಯನಲ್ಲಿ ಅಲ್ಲಿಯ ಸರ್ಕಲ್ ಇನ್ಸ್‌ಪೆಕ್ಟರ್ ಮ. ರಾ ಕೆ ಲಕ್ಷ್ಮಣರವರು ಬಹು ಸಾಹಸದಿಂದ ಕಂಡು ಹಿಡಿದ ೧೬| ತೊಲೆ ಅಫೀಮಿನ ಮೊಕದಮೆಯಲ್ಲಿ ಆಪಾದಿತನಿಗೆ ೬ ವಾರಗಳ ಸಜಾ ವಿಧಿಸೋಣಾಗಿರುವದು, ನೇಪಾಳ ದೇಶದ ಪ್ರಿನ್ಸರ ೫೦,೦೦೦ ರೂಪಾಯಿಯ ಮುತ್ತಿನ ಸರ ಇತ್ಯಾದಿಗಳ ಕಳವು ಮೊಕದಮೆಯ ತನಿಕೆಯು ಬಾಕಿಯಲ್ಲಿದೆ.

ಹೆಕ್ನಿ ಕೆರೇಜುಗಳಿಗೆ ಅರ್ಧ ದಿವಸಕ್ಕೆ ನಿಯಮಿತ ರೂಪಾಯಿ ಒಂದು ಬಾಡಿಗೆ ಇರುತ್ತಾ ಜಟ್ಕಾ ಡ್ರೈವರರಾದ ಕೊರಗ ಮತ್ತು ನಾಗಪ್ಪ ಎಂಬ ಇಬ್ಬರು ತೀರ್ಥಹಳ್ಳಿ ತಹಸೀಲದಾರರಿಗೆ ಅರ್ಧ ದಿವಸಕ್ಕೆ ೨॥ ರೂಪಾಯಿ ಬಾಡಿಗೆ ಹೇಳಿ ನಿಯಮಿತ ಬಾಡಿಗೆಗೆ ಜಟ್ಕಾ ತರಲು ನಿರಾಕರಿಸಿದ್ದರೆಂಬದಾಗಿ ಹೆಕ್ನಿ ಕೆರೇಜು ಆಫೀಸರ್ ಮಿ| ಡೇಸರವರಿಗೆ ತಿಳಿದು ಬಂದದರಿಂದ ಮಿ| ಡೇಸರವರು ಈ ಇಬ್ಬರು ಡ್ರೈವರರ ಮೇಲೆಯೂ ಮೊಕದಮೆಯನ್ನು ಏರ್ಪಡಿಸಿದ್ದರಿಂದ ತನಕಿ ನಡಿಸಿ ಒಬ್ಬೊಬ್ಬನಿಗೆ ಐದೈದು ರೂಪಾಯಿ ಪ್ರಕಾರ ಜುಲುಮಾನೆ ವಿಧಿಸಿದರು ನಿಯಮಿತ ದರಕ್ಕಿಂತಲೂ ಹೆಚ್ಚಿಗೆ ಬಾಡಿಗೆ ಹೇಳಿ ಜಟ್ಕಾಗಳನ್ನು ತಾರದಿರುವ ಚಾಳಿಯು ಇಲ್ಲಿ ದಿನೇ ದಿನೇ ಹೆಚ್ಚಾಗುತ್ತಿರುವದರಿಂದ ಮಿ| ಡೇಸರವರು ಈ ವಿಷಯ ಇನ್ನಷ್ಟು ನಿಗಾ ಕೊಟ್ಟರೆ ಜನಸಾಮಾನ್ಯರಿಗೆ ಕೂಡಾ ವಿಶೇಷ ಪ್ರಯೋಜನವಾಗುತ್ತಿತ್ತು.

ಕುಂದಬಾರಂದಾಡಿ ಗ್ರಾಮದಲ್ಲಿ ಒಂದು ದರೋಡೆಯತ್ನ ನಡೆದಿರುವದು. ಸದರಿ ಗ್ರಾಮದ ಕಾಡಿ ಕೊಂಕಣಿಗರ ಜಾತಿಯವರ ಒಂದು ಮನೆಯಲ್ಲಿ ನಗದಿ ರೂ. ೫೦೦೦, ಮತ್ತು ಸುಮಾರು ೬೦೦ ರೂಪಾಯಿ ಕ್ರಯ ಬಾಳುವ ಚಿನ್ನಾಭರಣಗಳನ್ನು ಮನೆಯವರು ಹೂತಿಟ್ಟಿದ್ದಾರೆಂಬದಾಗಿ ತಿಳಿದು ಇಬ್ಬರು ಬ್ರಾಹ್ಮಣರು, ೫ ಮಹಮದೀಯರು, ಇಬ್ಬರು ಹಳೇ ಪೈಕಿ ಜಾತಿಯವರು ಒಟ್ಟುಕೂಡಿ ರಾತ್ರಿಕಾಲ ಸದರಿ ಮನೆಯ ಬಾಗಿಲುಒಡದು ಹೊರ ಚಾವಡಿಯಲ್ಲಿ ಮಲಗಿದ್ದ ಮೂರುಮಂದಿಯ ಕುತ್ತಿಗೆ ಹಿಸುಕುತ್ತಿರುವಲ್ಲಿ ಒಳಗೆ ಮಲಗಿದ್ದ ಇವರ ಸಹೋದರನು ಹಿಂದಿನ ಬಾಗಲಿನಿಂದ ಮೆಲ್ಲನೆ ಹೊರ ಹೋಗಿ ಬೊಬ್ಬಿಟ್ಟದ್ದರಿಂದ ನೆರೆಹೊರೆಯವರು ಸಹಾಯಕ್ಕೆ ಬಂದದನ್ನು ನೋಡಿ ದರೋಡೆಯವರು ಓಡಿ ಹೋದರು. ಸರ್ಕಲ್ ಇನ್ಸ್‌ಪೆಕ್ಟರ್ ಮ| ರಾ| ಕೆ. ಲಕ್ಷ್ಮಣರವರು ಇಬ್ಬರು ಬ್ರಾಹ್ಮಣರನ್ನೂ, ಇಬ್ಬರು ಹಳೇ ಪೈಕಿ ಜಾತಿಯವರನ್ನೂ ಈ ದರೋಡೆಗೆ ಸೇರಿದ ಮಹಮ್ಮದೀಯರನ್ನೂ ಹಿಡಿದು ವಿಚಾರಣೆಗೆ ಗುರಿಪಡಿಸಿರುವರು.

ಮಿ| ಎಫ್. ಎಕ್ಸ್. ಸಾಲ್ಡಾಂಜ್ಞರ ಡೊಗ್‌ಕಾರ್ಟ ಹೋಗುತ್ತಿರುವಾಗ ಶಂಕರ ಎಂಬವನು ನಾಗಾಲೋಟದಿಂದ ಓಡಿಸುತ್ತಿದ್ದ ಜಟ್ಕವು ಮಿ| ಸಲ್ಡಾಂಜ್ಞರ ಬಂಡಿಗೆ ತಾಗಿದ್ದುದರಿಂದ ಶಂಕರನ ಮೇಲೆ ಮೊಕದಮೆ ನಡೆದು ಅವನಿಗೆ ಒಂದು ತಿಂಗಳ ಕಠಿಣ ಸಜಾ ವಿಧಿಸೋಣಾಯಿತು

ಕೆ. ಡಿ. ಸಾಯಿಬನು ಒಂದು ಜೋಡು ಮೆಟ್ಟು ಕಳವು ಮಾಡಿದ್ದಾನೆಂಬದಾಗಿ ಕೈದು ಮಾಡಲ್ಪಟ್ಟು ಸೆಶ್ಶನ್ಸಿಗೆ ಕಮಿಟ್ ಮಾಡಲ್ಪಟ್ಟಿದ್ದಾನೆ.

ಮ| ರಾ| ಸಾಂತಯ್ಯ ಕಿಣಿಯರಲ್ಲಿ ಸೋಮಪ್ಪ ಮತ್ತು ಇಬ್ರಾಹಿಮ್ ಎಂಬ ಇಬ್ಬರು ರೂ ೩೫೦ ರೂಪಾಯಿ ಕ್ರಯದ ಕಾಫಿ ಕದ್ದುಕೊಂಡಿದ್ದರು ಇವರನ್ನು ಪೋಲಿಸಿನವರು ಕಾಫಿ ಸಹಿತ ಹಿಡಿದು ವಿಚಾರಣೆಗೆ ಗುರಿಪಡಿಸಿರುವರು

ಕಣ್ಣುಪಿಳ್ಳೆಚೆಟ್ಟಿ ಎಂಬವರೊಬ್ಬರ ಸುಮಾರು ಸಾಯಂಕಾಲ ೭ ಗಂಟೆಗೆ ಹಂಪನಕಟ್ಟೆಯಲ್ಲಿ ಹೋಗುತ್ತಿರುವಾಗ ಕೇಶಿ ಸಂಕಪ್ಪ ಮತ್ತು ಗೋಂಟು ದೂಜಿಕಾಲ್ರ ಎಂಬ ಇಬ್ಬರು ಕೂಡಿ ಅವರ ಕಿಸೆಯಲ್ಲಿದ್ದ ರೂಪಾಯಿಗಳನ್ನು ಜಾರಿಸಿ ಓಡಿಹೋದರೆಂಬದಾಗಿ ಪೋಲಿಸಿನವರಿಗೆ ವರದಿ ಬಂದದರಿಂದ ಪೋಲಿಸಿನವರು ಕೇಶಿ ಸಂಕಪ್ಪನನ್ನೂ ಗೋಂಟು ದೂಜಿಯನ್ನೂ ಕೈದುಮಾಡಿರುವರು

ಪುತ್ತೂರು ಸರ್ಕಲಿನ ಪೋಲಿಸ್ ಇನ್ಸ್‌ಪೆಕ್ಟರರು ಎರಡು ತಿಂಗಳ ರಜೆ ಪಡಕೊಂಡಿರುವದರಿಂದ ಮ| ರಾ| ಶಾಂತರಾಮ ರಾಯರು ಪುತ್ತೂರ ಸರ್ಕಲ್ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿದ್ದಾರೆ

ಇಲ್ಲಿಯ ಕಂಕಾನಾಡಿ ತ್ಯಾಂಪಣ್ಣನಿಗೆ ನಾಲ್ಕು ವರ್ಷಗಳ ಹಿಂದೆ ಮಲಬಾರಿನ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ವಾರೆಂಟು ಆಗಿತ್ತು. ಇವನನ್ನು ಹಿಡಿದ ಕೊಟ್ಟವರಿಗೆ ರೂ ೫೦ ಇನಾಮು ಕೊಡೋಣಾಗುವದಾಗಿ ಪ್ರಕಟವಾಗಿದ್ದು ಕಳೆದ ವರ್ಷ ಇಲ್ಲಿಯ ಒಬ್ಬ ಕಾನ್ಸ್ಟೇಬಲನು ಅವನನ್ನು ಎರಡಾವರ್ತಿ ಹಿಡಿದರೂ ಅವನು ಕಾನ್ಸ್ಟೇಬಲನಿಗೆ ಹೊಡೆದು ಜಖಂ ಮಾಡಿ ತಲೆ ತಪ್ಪಿಸಿಕೊಂಡಿದ್ದನು ಕಳೆದ ವಾರ ತಾಲೂಕು ಹೆಡ್‌ಕಾನ್ಸ್ಟೇಬಲ್ ಎಸ್ ಪಿಂಟೋರವರು ಸದರಿ ತ್ಯಾಂಪಣ್ಣನನ್ನು ಬನಂದಲೆ ಗ್ರಾಮದಲ್ಲಿ ಕಂಡು ಅಲ್ಲಿಯ ಯುವಕರ ಸಹಾಯದಿಂದ ಅವನನ್ನು ಹಿಡಿದು ತಂದಿರುತ್ತಾರೆ

ಹೊಸ ಗಡ್ಡೆಕೇರಿ ರಸ್ತೆಯ ಬದಿಯಲ್ಲಿರುವ ಬಾವಿಯೊಂದರಲ್ಲಿ ಕಳೆದ ಆದಿತ್ಯವಾರ ಸಾಯಂಕಾಲ ಹಾರೆಟ್ಟಿ ಜಾತಿಯ ನಾರಾಯಣ ಬಾಗವತರ ಸೊಸೆಯ ಒಂದು ಹೆಣವು ಸಿಕ್ಕಿರುವದು ಸೋಮವಾರ ದಿವಸ ಪೋಲಿಸಿನವರು ಹೆಣವನ್ನು ತೆಗೆದು ಡಾಕ್ತಾರರ ಪರೀಕ್ಷೆಗೆ ಕಳುಹಿಸಿಕೊಟ್ಟಿರುತ್ತಾರೆ

ಇದೇ ತಿಂಗಳ ತಾರೀಕು ೧೮ ೧೯ರಲ್ಲು ದಕ್ಷಿಣಕನ್ನಡಾ ಡಿಸ್ಟ್ರಿಕ್ಟ ಥಿಯೋಸೊಫಿಕಲ್ ಸಭೆಯು ಕೂಡಿಬರುವದು.

ಮುನ್ಸಿಪಾಲ್ ಕಟ್ಟ ಡಬ್ಬಿಗಳಿಂದ ಹೊಲಸು ಕಚ್ರಾಗಳು ಹಿಂದೆ ಗಾಡಿಗಳ ಮೂಲಕ ಪಟ್ಟಣದ ಹೊರಗೆ ಒಯ್ಯೋಣಾಗುತ್ತಿತ್ತು ಈಗ ಇಂಥಾ ಒಂದೆರಡು ಗಾಡಿಗಳ ಮೂಲಕ ಮಾತ್ರ ಕಚ್ರಾಗಳು ಸಾಗಿಸಲ್ಪಡುತ್ತಿದ್ದು ಉಳಿದ ಕಚ್ರಾಗಳು ಕೂಲಿಯಾಳುಗಳು ತಲೆ ಹೊರೆಯಿಂದ ಬೀದಿ ಬದಿಗಳಲ್ಲಿರುವ ತೋಟಗಳ ಮೂಲೆಗಳಿಗೆ ಬಿಸಾಡಲ್ಪಡುವ ಹೊಸ ವಾಡಿಕೆಯ ಪ್ರಾರಂಭವಾಗಿದೆಂತಲೂ ಬೋಳೂರು, ಬೋಳಾರ, ಸೇಡಿಗುಡ್ಡೆಯ ತ್ಯಕವೆಯ ಕಚ್ರಾಗಳು ಕ್ರಮ ಪ್ರಕಾರ ಸಾಗಿಸಲ್ಪಡುವದಿಲ್ಲವೆಂತಲೂ ಒಬ್ಬ ಬಾತ್ಮಿದಾರರು ತಿಳಿಸಿರುವರು ಕಚ್ರಾಗಳು ತೋಟಗಳಿಗೆ ಬಿಸಾಡಲ್ಪಡುವದರಿಂದ ಪಟ್ಟಣಗಳ ಆರೋಗ್ಯವು ಕೆಡುವ ಸಂಭವ ಉಂಟಾಗ ವರೆಂತ ಇಲ್ಲಿ ಬೇರೆ ಹೇಳಬೇಕೆಂತಿಲ್ಲ ಆದದರಿಂದ ಸಂಬಂಧಪಟ್ಟ ಆಪೀಸರರು ಈ ವಿಷಯ ತಕ್ಕ ಮುಂಜಾಗ್ರತೆ ತಕ್ಕೊಳ್ಳಬೇಕಾಗಿದೆ

IIನೇ ಗ್ರೇಡ್ ತಹಸೀಲದಾರರಾದ ಮ| ರಾ| ರಾ| ಎ ದೇವಪ್ಪ ಪೂಂಜರವರು ಕೆಲಸದಿಂದ ನಿವೃತ್ತರಾಗುವದರಿಂದ ಇವರ ಬದಲಿಗೆ III ಗ್ರೇಡ್ ತಹಸೀಲದಾರರಾದ ಮ| ರಾ| ಕೆ ಶ್ರೀನಿವಾಸ ರಾವ್ ಅವರ್ಗಳರವರು ರೂ. ೨೫೦ರ II ಗ್ರೇಡ್ ತಹಸೀಲದಾರರಾಗಿ ನೇಮಿಸಲ್ಪಟ್ಟಿದ್ದಾರೆ ಆದರೆ ಮ. ರಾ. ಕೆ ಶ್ರೀನಿವಾಸ ರಾಯರು ಈಗಲಿರುವ III ಗ್ರೂಫಿನ ಲೇಂಡ್ ರಿಕೋರ್ಡ್ಸ ಸುಪರಿಂಟೆಂಡೆಂಟ ಕೆಲಸದಲ್ಲಿ ಇರಬೇಕಾಗುವದು

III ಗ್ರೇಡ್ ತಹಸೀಲದಾರರಾದ ಮ| ರಾ| ರಾ| ಕೆ ರಾಮವರ್ಮ ರಾಜರವರು ಮ| ರಾ| ರಾ| ಕೆ ಶ್ರೀನಿವಾಸರಾಯರ ಬದಲಿಗೆ ಆಕ್ಟಿಂಗ್ II ಗ್ರೇಡ್ ತಹಸೀಲದಾರರಾಗಿ ನೇಮಿಸಲ್ಪಟ್ಟಿರುವರು.

ಲೇಂಡ್‌ರಿಕೋರ್ಡ್ಸ ತಹಸೀಲದಾರ ಮತ್ತು ಆಕ್ಟಿಂಗ್ II ಗ್ರೇಡ್ ತಹಸೀಲದಾರರಾಗಿರುವ ಮ| ರಾ| ಡಿ ಆನಂದರಾಯರು III ಗ್ರೇಡ್ ತಹಸೀಲದಾರರಾಗಿ ನೇಮಿಸಲ್ಪಟ್ಟಿದ್ದಾರೆ. ಆದರೆ ಮ| ರಾ| ರಾಮವರ್ಮ ರಾಜರು ರಜೆಯ ಮೇಲಿರುವದರಿಂದ ಇವರು ಆಕ್ಟಿಂಗ್ 2ನೇ ಗ್ರೇಡ್ ತಹಸೀಲದಾರರ ಕೆಲಸದಲ್ಲಿಯೇ ಇರಬೇಕಾಗುವದು

ಕನ್ನಡ ಕ್ರೈಸ್ತ ಕುಟುಂಬ ಸಹಾಯ ಸಂಘದ ಇಪ್ಪತ್ತನಾಲ್ಕನೇ ವರದಿಯು ಪ್ರಕಟವಾಗಿರುವದು ಈ ಸಂಘದಲ್ಲಿ ಈಗ ಒಟ್ಟು ೧೬೫ ಮೆಂಬರರಿರುವರು. ಸಂಘಕ್ಕೆ ರೂ ೩೭೦೮–೭–೫ ಆಸ್ತಿ ಇದೆ ಸರಕಾರದ ಕಾನೂನಿಗನುಸಾರವಾಗಿ ಈ ಸಂಘವು ರಜಿಸ್ತ್ರಿಯಾಗಿ ಕಳೆದ ವರ್ಷದಲ್ಲಿಯೂ ಅದರ ಕೆಲಸಗಳನ್ನು ಕ್ರಮವಾಗಿ ನಡಿಸಿರುತ್ತದೆ ಎಂಬದಾಗಿ ಈ ವರದಿಯಿಂದ ತೋರಬರುತ್ತದೆ ಈ ಸಂಘಕ್ಕೆ ರಿಟಾಯರ್ಡ ಮೆಜಿಸ್ಟ್ರೇಟ ಮ| ಟಿ ಮೊಂಟೈರರವರು ಪ್ರೆಸಿಡೆಂಟರಾಗಿಯೂ ಮ| ಡಿ ಓ ಸ್ಕ್ರೇಗರವರು ಕಾರ್ಯದರ್ಶಿಗಳಾಗಿಯೂ ಇರುವರು

ಕಳೆದ ವಾರ ಮಂಗಳೂರು ಮುನ್ಸಿಪಾಲಿಟಿಯಲ್ಲಿ ಒಂದು ಪ್ಲೇಗು ಮರಣ ಇತ್ತು

ದಕ್ಷಿಣಕನ್ನಡ ಡಿಸ್ಟ್ರಿಕ್ಟ್ ಕಲೆಕ್ಟರರಾದ ಮ| ಎಮ್ ಇ. ಕೌಚ್‌ಮನ್ ದೊರೆಗಳವರಿಗೆ ಇದೇ ಬರುವ ಮೇ ತಾ ೧೦ರಿಂದ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ೬ ತಿಂಗಳ ರಜೆ ಕೊಡೋಣಾಗಿರುವದು

ಕಾಪಿ ಮೊಕದಮೆಯಲ್ಲಿ ಆಪಾದಿಸಲ್ಪಟ್ಟ ರಾ| ಬೊಳಂತೂರ ಸರ್ವೋತ್ತಮ ಪ್ರಭುರು ಮಾಡಿಕೊಂಡ ಅಪೀಲು ತನಿಕಿಯು ಪುತ್ತೂರು ಡಿವಿಜನ್ ಡೆಪ್ಯುಟಿ ಕಲೆಕ್ಟರರವರಿಂದ ನಿನ್ನೆಯ ದಿನ ಕಾಸರಗೋಡಿನಲ್ಲಿ ನಡೆಯಲು ಪ್ರಾರಂಭವಾಗಿದೆ

ಬೈಂದೂರಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರರಾದ ರಾ| ಎಮ್ ಹರಿ ಕಾಮತರವರಿಗೆ ೨ ತಿಂಗಳ ಪ್ರಿವಿಲೇಜ್ ರಜೆ ಕೊಡೋಣಾಗಿದೆ

ವಿವಿಧ ವಿಷಯ.

ಗೋವಾ ದೇಶದಲ್ಲಿ ಬತ್ತದ ಪೈರಿಗೆ ಉಪ್ಪನ್ನು ಗೊಬ್ಬರವಾಗಿ ಹಾಕುತ್ತಾರೆ ಇದರಿಂದ ಫಸಲುತ್ಪತ್ತಿಯು ಜಾಸ್ತಿಯಾಗುತ್ತೆ ಅಲ್ಲದೆ ನಿಂಬೆ, ಹಲಸು ಮುಂತಾದ ಗಿಡಗಳಿಗೂ ಉಪ್ಪನ್ನು ಹಾಕುತ್ತಾರೆ ಉಪ್ಪಿನ ಮೇಲೆ ಸುಂಕವಿರುವುದರಿಂದ ಇದನ್ನು ಕೊಂಡುಕೊಂಡು ಉಪಯೋಗಿಸಲು ಆಗುವದು ದುಬಾರಿಯಾಗುತ್ತೆ. ತಿರುವಾಂಕೂರಿನಲ್ಲಿ ರೋಗ ತಗಲಿದ ಗಿಡಗಳಿಗೆ ಉಪ್ಪನ್ನು ಉಪಯೋಗಿಸಿದ್ದರಿಂದ ರೋಗವು ಪರಿಹಾರವಾಗಿ ಗಿಡಗಳು ಸರಿಯಾದವು

ಸಾವಲ್‌ಕೋಟಾ ವ್ಯವಸಾಯ ಫಾರಂನಲ್ಲಿ ಕಬ್ಬಿನ ಫಸಲಿಗೆ ದನವಿನ ಗೊಬ್ಬರವನ್ನು ಕಡಿಮೆಮಾಡಿ ನಂತರ ಹರಳು ಹಿಂಡಿಯನ್ನು ಉಪಯೋಗಿಸಿದರಲ್ಲಿ ಪ್ರಯೋಜನವು ಏಕರೀತಿಯಾಗಿತ್ತು. ಒಂದು ತಾಕಿಗೆ ೩೦ ಟನ್ನು ದನವಿನ ಗೊಬ್ಬರವನ್ನು ಹಾಕಿದರು, ಮತ್ತೊಂದು ತಾಕಿಗೆ ೧೦ ಟನ್ ದನದ ಗೊಬ್ಬರವನ್ನು ಹಾಕಿ ನಂತರ ೫ ಮೂಟೆ ಹರಳು ಹಿಂಡಿಯನ್ನು ಹಾಕಿ ಬೆಳಯಿಟ್ಟರು. ಹೀಗೆ ಮಾಡಿದ್ದರಲ್ಲಿ ಫಸಲುತ್ಪತ್ತಿಯು ಒಂದೇ ರೀತಿಯಾಗಿತ್ತು.

ಗತ ಸಾಲಿನ ಈ ದೇಶಕ್ಕೆ ೯೦ ಲಕ್ಷ ರೂಪಾಯಿಗಳ ಬೆಂಕಿಕಡ್ಡಿಗಳು ತರಿಸಲ್ಪಟ್ಟವು ಹಿಂದಿನ ವರ್ಷದಲ್ಲಿ ತರಿಸಿದ್ದಕ್ಕಿಂತ ಈ ವರ್ಷ ೯ ಲಕ್ಷ ರೂಪಾಯಿಯಷ್ಟು ಕಮ್ಮಿಯಾಗಿರುತ್ತೆ. ಸರಬರಾಜು ಮಾಡಿದ ದೇಶಗಳು ಯಾವುವೆಂದರೆ—ಜಪಾನ್, ಸ್ಕ್ಯಾಂಡಿನೇವಿಯಾ, ಆಸ್ಟ್ರಿಯಾ, ಜರ್ಮನಿ, ಬೆಲ್ಜಿಯಂ ಮುಂತಾದವುಗಳು. ಹಾಲಿ ಯೂರೋಪು ಖಂಡದಲ್ಲಿ ನಡಿಯುತ್ತಿರುವ ಯುದ್ಧದಿಂದ ಬೆಂಕಿಕಡ್ಡಿಯ ಬೆಲೆಯು ಇನ್ನೂ ಏರುವ ಸಂಭವವು ಇದೆ. ಇಂಡಿಯಾ ದೇಶದಲ್ಲಿ ಬೆಂಕಿಕಡ್ಡಿ ತಯಾರಿಸುವುದಕ್ಕೆ ಬೇಕಾದ ಸಾಮಗ್ರಿಗಳು ಹೇರಳವಾಗಿ ಇರುವುದೆಂದು ಶಾಸ್ತ್ರಜ್ಞರು ಹೇಳುತ್ತಾರೆ. ಅಹಮದಾಬಾದಿನಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪಿಸಲು ಏರ್ಪಾಡುಗಳು ನಡೆಯುತ್ತಿವೆ ೧೯೧೫ನೆಯ ಸಾಲಿನಲ್ಲಿ ಈ ದೇಶದಲ್ಲಿ ೭ ಕಾರ್ಖಾನೆಗಳು ಮಾತ್ರ ಇದ್ದ ಹಾಗೆ ತಿಳಿದುಬರುತ್ತೆ.

ಕೊಂಕನ್ ಡಿವಿಜನ್‌ನಲ್ಲಿ ರೈತರು ಉಪ್ಪು ಮತ್ತು ಉಪ್ಪುಮಣ್ಣು ಇವುಗಳನ್ನು ಮಾವಿನ ಫಸಲಿಗೂ ತೆಂಗಿನ ಫಸಲಿಗೂ ಗೊಬ್ಬರವಾಗಿ ಉಪಯೋಗಿಸುತ್ತಾರೆ. ಮಾವಿನ ಗಿಡಗಳು ಹೂವ್ವು ಬಿಡದೆ ಇದ್ದರೆ ಉಪ್ಪನ್ನು ಗೊಬ್ಬರವಾಗಿ ಹಾಕುತ್ತಾರೆ ಹೀಗೆ ಮಾಡುವುದರಿಂದ ಗಿಡವು ಫಲಿಸುವುದಕ್ಕೆ ಪ್ರಾರಂಭಿಸುತ್ತವೆ ರತ್ನಗಿರಿಯಲ್ಲಿರುವ ರೈತನೊಬ್ಬನು ತೆಂಗು ಮತ್ತು ಮಾವು ಗಿಡಗಳಿಗೆ ಕೆಳಗೆ ಕಂಡ ಮೇರೆ ಗೊಬ್ಬರವನ್ನು ಹಾಕುವುದು ವಾಡಿಕೆ ಮೊದಲನೇ ವರ್ಷ ದನವಿನ ಗೊಬ್ಬರ, ಎರಡನೆಯ ವರ್ಷ ಮೀನು ಗೊಬ್ಬರ, ಮೂರನೆಯ ವರ್ಷ ಗಿಡ ಒಂದಕ್ಕೆ ೧೦ ಪೌಂಡಿನಷ್ಟು ಉಪ್ಪು.

ಜೀನಸು ಧಾರಣೆ. (ರಖಂ)

ಹೊಸ ಮುಸ್ಕತಿ ಅಕ್ಕಿ	5– 2–0	5–10–0
ಹೊಸ ಗಾಡಿ ವಾರೆ ,,	4– 6–0	4– 8–0
ಹೊಸ ಗುಡ್ಡು ,,	4–12–0	5– 0–0
ಅವ್ವಲ್ ಬೆಳ್ತಿಗೆ ,,	5– 6–0	5–10–0
ಗುಡ್ಡು ಬೆಳ್ತಿಗೆ ,,	5– 1–0	5– 2–0
ರಂಗೂನು ಬೆಳ್ತಿಗೆ ಗೋಣಿ ೧ರ	8– 0–0	8– 6–0
ಗೋದಿ ಗೋಣಿ ೧ರ	13– 4–0	14– 0–0
ಹುರುಳಿ ಗೋಣಿ ೧ರ ...	6– 0–0	7– 4–0
ಕಡಲೆ ಗೋಣಿ ೧ರ. ...		10– 0–0
ತೊಗರಿ ಗೋಣಿ ೧ರ ..	10– 0–0	11– 8–0
ತೊಗರಿ ಬೇಳೆ ಗೋಣಿ ೧ರ.	12–8– 0	16– 0–0
ಉದ್ದು ಗೋಣಿ ೧ರ		10– 0–0
ಊರುಬೆಲ್ಲ ಖಂಡಿ ೧ರ ...		60– 0–0
ಉಪ್ಪು ಗೋಣಿ ೧ರ		3– 6–0
ಕೊಬ್ರಿ ಖಂಡಿ ೧ರ	80– 0–0	84– 0–0
ಕೊಬ್ರಿ ಹಿಂಡಿ ಖಂಡಿ ೧ರ		17– 0–0
ಎಳ್ಳಿಂಡಿ ಖಂಡಿ ೧ರ	26– 8–0	36– 4–0
ಕೊಬ್ರಿ ಎಣ್ಣೆ ಮುಡಿ ೧ರ	5–14–0	6– 0–0
ಎಳ್ಳೆಣ್ಣೆ ಮುಡಿ ೧ರ(ಕುರಾಸನ)	3–10–0	3–14–0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ		6– 0–0
ಮೋರಿಸ್ ಸಕ್ಕರೆ ಮುಡಿ ೧ರ		4– 7–0
ಕಾಫಿ ಖಂಡಿ ೧ರ	208–0–0.	220– 0–0
ಬೆಳೆಗೋಟು ಖಂಡಿ ೧ರ	113–0–0	115– 0–0
ಹೊಸಬೆಳೆಗೋಟು ಖಂಡಿ೧ರ	105–0–0	107– 0–0
ಹಳೆ ಗೇರುಬೀಜ ಮುಡಿ ೧ರ		1– 4–0
ಹೊಸ ಗೇರುಬೀಜ ಮುಡಿ ೧ರ		1–10–0
ಕಬ್ಬಿಣ ಖಂಡಿ ೧ರ		50– 0–0
ತಾಂಬ್ರ ತಗಡುಮುಡಿ ೧ರ		17– 2–0
ತಾಂಬ್ರ ಪಾತ್ರಗಳು ಮುಡಿ ೧ರ		22– 0–0
ಚೀನ ಬೆಳ್ಳಿ ಸೇರು ೧ರ		18–12–0

Box Locks.



Padlocks.



ಧಾರಣೆ ಸುಲಭ! ಆಲಿಗರ್ ಬೀಗಗಳು. ಧಾರಣೆ ಸುಲಭ!

ಭದ್ರವಾಗಿಯೂ, ಭಾರವಾಗಿಯೂ ಇರುವುದು ಒಂದರ ಬೀಗದಕ್ಕೆ ಮತ್ತೊಂದಕ್ಕೆ ಆಗುವದಿಲ್ಲ. ನೋಡುವುದಕ್ಕೆ ಅಂದವಾಗಿಯೂ ಇರುವುದು ಇದೇ ಮಾದರಿ ಬೀಗಗಳನ್ನು ಇಂಜಿನಿಯರ್ ಇಲಾಖೆಗಳಿಗೂ, ಬ್ಯಾಂಕುಗಳಿಗೂ, ಸರಕಾರಿ ಆಫೀಸುಗಳಿಗೂ ಸಪ್ಲೈಮಾಡಿದೆ

ನಾಲ್ಕು ಚಕ್ರಗಳಿರುವ ಬೀಗಗಳು

ನಂಬ,	1	2	3	4	೫
	1–12–0	015–0	1–4–0	1–10–0	..

ಆರು ಚಕ್ರಗಳಿರುವ ಬೀಗಗಳು

1–2–0 1|8–0 2–4–0 3–0–0 3–8–0

ಲ್ಲರ್ ಬೀಗಗಳು.

–04–00–5–0ವಿ 0–6–0 0–8–0 0–10–0

ಟ್ರಂಕುಗಳಿಗೆ ಹಾಕುವ ಕೊಂಡಿ ಬಗ್ಗಿಸಿರುವ ಬೀಗ ೧ಕ್ಕೆ 0–13–0

೩, ೪, ೫ನೇ ನಂಬರು ಬೀಗಗಳನ್ನು ಬಾಗಲುಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು. ಏಜೆಂಟರುಗಳಿಗೆ ಕಮಿಷನ್ ದೊರೆಯುತ್ತೆ ಹಾಸಲು ಪ್ರತ್ಯೇಕ

ಮರದ ಪೆಟ್ಟಿಗೆಗಳಿಗೂ, ಮೇಜುಗಳಿಗೂ, ಬೀರೂಗಳಿಗೂ ಹಾಕುವ ೪ ಚಕ್ರಗಳಿರುವ ಬೀಗಗಳು ೧ಕ್ಕೆ 1–8–0, 1–12–0.

ವಿಳಾಸ:— ಎಚ್. ಎನ್. ರಾವ್ ಅಂಡ್ ಬ್ರದರ್ಸ್,

ಚಿಕ್ಕಪೇಟೆ, ಬೆಂಗಳೂರು ಸಿಟಿ

೬೦

ಪುಗಸಟ್ಟೆ! ಪುಗಸಟ್ಟೆ!!

144 ಪುಟಗಳ ವೈದ್ಯ ಪುಸ್ತಕವು

ಜೀವಿತಕಾಲದ ವರೆಗೂ ನಮ್ಮ ಶರೀರವನ್ನು ರೋಗಗಳು ಹತ್ತರ ಬಾರದೆ ಮಾಡಿಕೊಳ್ಳುವದೇ ನಮ್ಮ ಮೊಟ್ಟಮೊದಲ ಕರ್ತವ್ಯವು ಆರೋಗ್ಯವು ಯಾವ ರೀತಿ ಕೆಡುತ್ತದೆ, ಕೆಟ್ಟುಹೋದ ಆರೋಗ್ಯವನ್ನು ಪುನಹ ಹೇಗೆ ಪಡೆಯುವದು ಎಂಬ ವಿಷಯಗಳಲ್ಲಿ ಸಂಪೂರ್ಣ ಜ್ಞಾನವನ್ನು ಪಡೆಯಬೇಕಾದರೆ ನಮ್ಮ

ವೈದ್ಯವಿದ್ಯ

ಎಂಬ ಗ್ರಂಥವನ್ನು ಓದಿರಿ. ಈ ಗ್ರಂಥವನ್ನು ಪ್ರಜೆಗಳ ಕ್ಷೇಮಾರ್ಥವಾಗಿ ಕೋರಿದವರಿಗೆ ಕ್ರಯವೂ ಅಂಚೆ ಹಾಸಲೂ ಇಲ್ಲದೆ ಉಚಿತವಾಗಿ ಕಳುಹಿಸಲ್ಪಡುವದು. ಈ ಪುಸ್ತಕವು ಒಂಭತ್ತು ಭಾಷೆಗಳಲ್ಲಿ ಛಾಪಿಸಲ್ಪಟ್ಟು ಇದುವರಿಗೆ ನಾಲ್ಕು ಲಕ್ಷ ಪ್ರತಿಗಳು ಕಳುಹಿಸಲ್ಪಟ್ಟಿರುವದೇ ಇದು ಎಷ್ಟು ಉಪಯೋಗಕರವಾದದ್ದು ಎಂಬುವದಕ್ಕೆ ಸಾಕ್ಷಿಯಾಗಿರುತ್ತದೆ.

ಕಲಿಯುಗದ ಕಾಮಧೇನು.

ಕೃತಯುಗದಲ್ಲಿ ಕಾಮಧೇನು ಹೇಗೆ ಮನುಷ್ಯರ ಇಷ್ಟಾರ್ಥಗಳನ್ನು ಕೊಡುತ್ತಿತ್ತೋ ಹಾಗೆಯೇ ನಮ್ಮ

ಮದನಮಂಜರಿ ಮಾತ್ರೆಗಳು

ಕಲಿಯುಗದಲ್ಲಿ ಮನುಷ್ಯರ ಇಷ್ಟಾರ್ಥಗಳನ್ನು ಕೊಡುತ್ತವೆ ಮದನಮಂಜರಿ ಮಾತ್ರೆಗಳು ರಕ್ತವನ್ನೂ ವೀರ್ಯವನ್ನೂ ಶುದ್ಧಮಾಡಿ ಹೆಚ್ಚು ಮಾಡುತ್ತವೆ. ಜ್ಞಾನತಂತುಗಳನ್ನು ಉಜ್ಜೀವನ ಮಾಡಿ ಮೂತ್ರಸ್ರಾವ, ಸ್ವಪ್ನಸ್ಖಲಿತ ಮುಂತಾದವುಗಳನ್ನು ಪರಿಹರಿಸುತ್ತವೆ. ಜೀರ್ಣಶಕ್ತಿಯನ್ನು ವೃದ್ಧಿಮಾಡಿ ಸುಖವಾಗಿ ಮಲವಿಸರ್ಜನೆಯಾಗುವಂತೆ ಮಾಡುವದು. ಅಕಾಲದಲ್ಲಿ ಬರುವ ಮುಪ್ಪನ್ನು ತಡೆದು ನಷ್ಟವಾದ ಜ್ಞಾಪಕಶಕ್ತಿಯನ್ನು ಪುನಃ ಕೊಡುತ್ತದೆ. ಬಾಲ್ಯದಲ್ಲಿ ಬುದ್ಧಿಹೀನತೆಯಿಂದ ಮಾಡಿದ ದುಶ್ಚೇಷ್ಟೆಗಳಿಂದುಂಟಾದ ನಪುಂಸಕತ್ವವನ್ನು ನಿರ್ಮೂಲಮಾಡಿ ಶಾಶ್ವತವಾದ ಪುರುಷತ್ವವನ್ನು ಕೊಡುತ್ತದೆ.

40 ಮಾತ್ರೆಗಳಿರುವ ಡಬ್ಬಿ 1ರ ಕ್ರಯ ರೂಪಾಯಿ 1–0–0.

ರಾಜವೈದ್ಯ. ನಾರಾಯಣಜಿ ಕೇಶವಜಿ

20 ಚೀನಾ ಬಜಾರ್ ರೋಡ್,

ಮದರಾಸು.

ಕೊಡ್ ಲಿವರ್ ಎಣ್ಣೆ.

ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ [illegible] ಯಕೃತ್ತಿಂದ ಪಕ್ವಗೈದುದು. ಅದರಿಂದ ದೇಹಕ್ಕೆ ಲಾಭವಾದರೋ ಅದರಿಯ ಎಣ್ಣೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ಖಾತೇ ಅವಲಂಬಿಸಿರುತ್ತದೆ. ಆಜ್ಞ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗದಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಅದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಪೋರ್ಟರ್ ಐರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತಮ ಫಲವು ಆಶ್ಚರ್ಯಕರವಾಗಿದೆ ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ಪೋರ್ಟರ್ ಐರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ ಈ ಮಿಶ್ರಣವು ಸುರಸವಾಗಿರುತ್ತದೆ ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3–4–0, ಅರ್ಧಬಾಟ್ಲಿಗೆ 1–12–0

ದಿ. ಊಲನ್ ಮಾರ್ಟ್ ಮಂಗಳೂರು,

ದಕ್ಷಿಣ ಕನ್ನಡಾ

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧ ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರೆಯಾಗಿ ಗುಣಪಡಿಸುವದು. 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8–0–0

೨ ಶತಮೂಲಿಕಾ ಅಮರಸಂಜೀವನಿ—ಈ ಟೊನಿಕ್ ದ್ರಾವಕವು ನಿತ್ರಾಣಿಗಳಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ ಬಾಟ್ಲಿ 1ಕ್ಕೆ 1–0–0.

೩. ಬಾಲಸಂಜೀವನಿ—ಮಧುರ ಟೊನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳಗಿಸುತ್ತದೆ ಬಾಟ್ಲಿ 1ಕ್ಕೆ 0–12–0.

೪ ವಸಂತ ಕುಸುಮಾಕರ – ಈ ಸುವಾಸಿಕ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ. ಬಾಟ್ಲಿ 1ಕ್ಕೆ 1–0–0

೫ ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸಾಧ್ಯ ವ್ರಣಗಳನ್ನು 7-8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು ಕ್ರಯ 4–0–0

೬ ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳು, ಇಲಿ ಇತ್ಯಾದಿ ಸರ್ವ ಕಠಿಣ ವಿಷಗಳಿಗೆ ಸಂಜೀವನವಾಗಿರುತ್ತದೆ ಅನುಭವಸಿದ್ಧ 2–0–0

೭ ಆನಂದವನವಿಲಾಸ—ಇದುಡ್ಯಾಬಿಟಿಸ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5–0–0.

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಕಲ್ಪ ಭೈರಾಗಿ ಪ್ರಯೋಗಗಳಿಂದ ತಯಾರಿಸಿದ ಔಷಧ ಮಾತ್ರೆಗಳು, ಲೇಹ ಚೂರ್ಣಗಳು, ತೈಲ್ಯ ಘೃತಗಳು, ಆಸವಾರಿಷ್ಟಗಳೂ ತುಂಬಾ ಇರುತ್ತವೆ. ಕ್ರಯವಿಲ್ಲದ ನಮ್ಮ ಕೆಟಲಗನ್ನು ತರಿಸಿಕೊಳ್ಳಿರಿ. ಏಜಂಟರು ಬೇಕು. ಹೆಚ್ಚು ಡಿಸ್‌ಕೌಂಟ್ ಸಿಕ್ಕುವದು.

ಎಮ್ ವಿ. ಶಂಕರ್, ಉಗ್ರಾಣಕಾರ್, ಮೆ.ನೇಜರ್.

150 ಪುಟಗಳ ಪುಸ್ತಕವು.

ಉಚಿತವು

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿಸಿ. ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಅತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ

ನಮ್ಮ ಏಜಂಟರು:— 1. ಮೆಸ್ಸರ್ಸ್. ರಷಯೇಲ್ ಎಂಡ್ ಕೊ., ಬ್ರಿಟೋಬಿಲ್ಡಿಂಗ್ [illegible] ಬಜಾರ್. ಬೆಂಗಳೂರು. ಮಂಗಳೂರು.

ಬಹುಮಾನ! ಬಹುಮಾನ!!

25 ಸಾವಿರ ರೂಪಾಯಿಗಳು ಹಂಚಲ್ಪಡುವವು.

ಸರ್ವಜನ ಮನೋಲ್ಲಾಸಿನಿ ಅಂಡ್ ಕೋ.

ಬಳ್ಳಾರಿ, ಇವರ ನಾರಸಿಂಹಚೂರ್ಣವು.

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಆರೋಗ್ಯಭಾಗ್ಯವನ್ನು ಬಯಸುತ್ತಾನೆ ಎಂಬುವದು ಸಹಜವಾದುದಷ್ಟೆ? ಆದರೆ ಅನೇಕ ದುರ್ವರ್ತನೆಗಳಿಂದ ಮೂಲಕಾರಣವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲವು ವಿಧ ರೋಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನು ಕಣ್ಣಾರೆ ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ ಅನೇಕಾನೇಕ ವೈದ್ಯರು ಹಲವು ವಿಧ ಔಷಧಗಳನ್ನು ವಿಶೇಷವಾದ ಬೆಲೆಯನ್ನಿಟ್ಟು ವಿಕ್ರಯಿಸಿದರೂ ಪ್ರಯೋಜನವು ಮಾತ್ರ ಕಡಿಮೆಯಾಗುತ್ತಿರುವದು ವಿಷಾದಕರವಾಗಿರುವದು. ಈ ಲೋಪವನ್ನು ಹೋಗಲಾಡಿಸುವದಕ್ಕಾಗಿ "ನಾರಸಿಂಹಚೂರ್ಣವು" ಎಂಬ ಒಂದಾನೊಂದು ಸಶಾಸ್ತ್ರೀಯವಾದ ಚೂರ್ಣವನ್ನು ಸಿದ್ಧಪಡಿಸಿರುವೆವು. ಈ ಚೂರ್ಣವನ್ನು ಒಬ್ಬ ಮನುಷ್ಯನು ೧೪ ದಿನಗಳು ಸೇವಿಸಿದರೆ ಮುದುಕತನ, ಅನೇಕ ತರಹೆಯ ಮೇಹ ರೋಗಗಳು, ಪಾಂಡುರೋಗ, ಪೀನಸ, ಹದಿನೆಂಟು ಬಗೆಯ ಕುಷ್ಠಗಳು, ಎಂಟು ವಿಧ ಉದರ ರೋಗಗಳು, ಭಗಂದರವು, ಮೂತ್ರಕೃಛ್ರವು, ಗೃಧ್ರಸೀವಾತವು, ಕಾಮಿಲೆ, ಕ್ಷಯವು, ಮಹಾಶ್ವಾಸಗಳು, ದಾರುಣವಾದ ಐದು ಬಗೆಯ ಕಾಸಗಳು, ಎಂಬತ್ತು ವಿಧಗಳಾದ ವಾತರೋಗಗಳು, ನಲವತ್ತು ಬಗೆಯ ಪಿತ್ತಗಳು, ಇಪ್ಪತ್ತು ಬಗೆಯ ಶ್ಲೇಷ್ಮರೋಗಗಳು, ದ್ವಂದ್ವಸನ್ನಿಪಾತ ರೋಗಗಳು, ಮೂಲರೋಗಗಳು ಇವೇ ಮುಂತಾದ ಸಮಸ್ತ ರೋಗಗಳು ಶಿಡಿಲಿನಿಂದ ಗಿಡಗಳು ನಾಶವಾಗುವಂತೆ ನಾಶವಾಗುತ್ತಿವೆ. ಇದರ ಸೇವನೆಯಿಂದ ಚಿನ್ನದಂಥಾ ಕಾಂತಿಯು, ಸಿಂಹನಂತೆ ಪರಾಕ್ರಮವು, ಕುದುರೆಯಂಥಾ ವೇಗವು, ಹಕ್ಕಿಗಳ ದೃಷ್ಟಿಯಂತೆ ದೃಷ್ಟಿಯುಳ್ಳವರಾಗುವರು. ಇದರಲ್ಲಿ ಯಾವ ವಿಧವಾದ ರಸಗಳಾಗಲಿ ಮಿಶ್ರವಾಗಿ ಇಲ್ಲ. ಇನ್ನಾವ ದೋಷಗಳೂ ಇಲ್ಲ. ನಿರ್ದುಷ್ಟವಾದವು. ಫಕ್ತಾ ವನಸ್ಪತಿಗಳಿಂದಲೇ ಸಿದ್ಧಮಾಡಿದ ದಿವ್ಯವಾದ ಔಷಧ. ಅನೇಕ ಪಂಡಿತರು, ಧನಿಕರು, ಸರ್ಟಿಫಿಕೇಟುಗಳನ್ನು ಕೊಟ್ಟಿರುವರು.

14 ದಿನ ಉಪಯೋಗಕ್ಕೆ ಬರುವ ಡಬ್ಬಿ ಒಂದಕ್ಕೆ ಬೆಲೆ ರೂಪಾಯಿ 1—0—0.

ಬಹುಮಾನಗಳನ್ನು ಹಂಚುವ ವಿಧಾನ.

1 ಡಜನ್ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ರೂ. 10000. 6 ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ರೂ. 6000. 3 ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ರೂ. 4000. 2 ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ರೂ. 3000. 1 ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ರೂ. 2000.

1914ನೇ ಜುಲೈ 1ನೇ ತೇದಿ ಮೊದಲು 1915ನೇ ಜುಲೈ 1ನೇ ತೇದಿವರೆಗೆ ಈ ಔಷಧವು ಒಂದು ಲಕ್ಷ ಡಬ್ಬಿಗಳು ಖರ್ಚಾದ ಕೂಡಲೇ ಈ ಲೆಕ್ಕವನ್ನು ಅಲ್ಲಿಗೆ ಸಂಕ್ಷೇಪಮಾಡಿ ಬಹುಮಾನಗಳನ್ನು ಹಂಚುತ್ತೇವೆ. ಒಂದುಪಕ್ಷದಲ್ಲಿ ಮೇಲಣ ನಿಯಮಿತ ದಿನಕ್ಕೆ ಸರಿಯಾಗಿ ಒಂದು ಲಕ್ಷ ಡಬ್ಬಿಗಳು ಖರ್ಚಾಗದಿದ್ದರೆ ಮತ್ತು ವಾಯಿದೆಯನ್ನು ಹೆಚ್ಚಿಸದೆ ಎಷ್ಟು ಡಬ್ಬಿಗಳು ಖರ್ಚಾಗಿರುತ್ತವೆಯೋ ಅಷ್ಟಕ್ಕೆ ದಾಮಾಷಾ ಪ್ರಕಾರ ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ. ಪ್ರತಿಯೊಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯೌಷಧವನ್ನು ಪಡಿಯುವದಲ್ಲದೆ ಬಹುಮಾನವನ್ನು ಸಹಾ ಹೊಂದುವದಕ್ಕೆ ಅರ್ಹನಾಗಿರುತ್ತಾನೆ. ಈ ವಿಷಯದಲ್ಲಿ ತಿಲಮಾತ್ರವಾದರೂ ಸಂಶಯವಿಲ್ಲ. ಬಹುಮಾನದ ಮೊತ್ತವನ್ನು ನಿಷ್ಪಕ್ಷಪಾತವಾಗಿ ಒಂದೇಸಮವಾಗಿ ಹಂಚಲ್ಪಡುವವು. ಇದು ಮೋಸವಲ್ಲ, ಲಾಟರಿಯಲ್ಲ, ಯಾವ ವಿಧವಾದ ಕುಹಕತನವೂ ಇಲ್ಲ. ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ. ಅಸೂಯಾಂಧರ ಮಾತುಗಳಿಗೆ ನಿಗಾಕೊಡಲಾಗದು. ಜಾಗ್ರತೆಯಾಗಿ ತರಿಸಿಕೊಳ್ಳಿರಿ. ಔಷಧಗುಣವನ್ನು ಪರೀಕ್ಷಿಸಿರಿ. ಅಪೇಕ್ಷಕರು ಈ ಕೆಳಗಣ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಿರಿ.

ಇದರ ಅನುಪಾನಪತ್ರಿಕೆಯನ್ನೂ ಬಹುಮಾನದ ಟಿಕೇಟನ್ನೂ ಡಬ್ಬಿಯ ಸಂಗಡ ಕಳುಹಿಸುವೆವು. ನಮ್ಮ ಕಂಪೆನಿಯ ಕಾಶಿ ವಿಶ್ವನಾಥ ಮಾರ್ಕು ಇಲ್ಲದ ಡಬ್ಬಿಯನ್ನು ತೆಗೆದುಕೊಳ್ಳಲಾಗದು.

ನಮ್ಮ ಅಡ್ರೆಸ್ಸು:—

ಸರ್ವಜನ ಮನೋಲ್ಲಾಸಿನಿ ಅಂಡ್ ಕೋ.

ಬಳ್ಳಾರಿ.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 4 ರೂ. ತೂಕದ ಶೇರು 1ಕ್ಕೆ ರೂ, 12-0-0, 5-0-0, 3-0-0. 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0-0, 1—0—0, 0—12—0, 0—6—0.

ರಾಯಲ್ ಸುಗಂಧಿ ಶೀಸೆ 1ಕ್ಕೆ 0—8—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಕಸ್ತೂರಿ ಮಾತ್ರೆ** ಶೀಸೆ 1ಕ್ಕೆ 0-4-0, ಇವಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್.

ಸುಗಂಧಕಾರಿ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಪಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಶೀತಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಾಯಿ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಹೆರಿಗೆ ಶೂಲೆ, ಮಕ್ಕಳ ಎಳವು, ಜ್ವರ, ನಡುಕಜ್ವರ, ಕೈಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ.

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನಿಯಾಗಿದೆ. ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ. ಕೊಟ್ಟ ಕೂಡಲೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುದ್ದಿಯು ನಿಮ್ಮಲ್ಲಿರಲಿ! ವೈದ್ಯೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಮಾಡುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ

ಮೈಸೂರು.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ ೩ ಬಾಟ್ಲಿಗೆ ೨ ರೂ. ೧೦ ಆಣೆ

೨ ಪ್ರಮೇಹರಿಪು ಬಿಂದು ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು ಬಾಟ್ಲಿಗೆ ೨-೮-೦

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು ತೊಲೆಗೆ ೨ ರೂ.

ತಮ್ಮ ವಿಳಾಸ.—**ಬಿ ಎಮ್. ನಾಥ್ ಮತ್ತು ಕಂಪೆನಿ,**

ವೆಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವಲೇಹ. ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦ ಶಾಲ್ಮಲೀ ಪಾಕ ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ

೧೧. **ವಾತಮುರಾರಿ ಬಾಮ್,** ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತಬಾಧೆಗಳನ್ನೂ ಕೂಡಲೆ ಗೆಲ್ಲುವದು ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ ೬ ಆಣೆ.

೧೨ ಗಜಕರ್ಣ ಕೇಸರಿ ಮುಲಾಮು. ತುಳುಕಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು ಉರಿಯೂ ಇದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩ ಸಪ್ತಿರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪ ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ ರೂ ೮ ಆಣೆ.

☞ ನೇಲಿತ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು

B. M. Nath & Co, *Ayurvedic Chemists,*

Vepery Post, MADRAS.

ಓದಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಹಾರ ಮಿತ್ತನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿತ್ತನ್ ಟೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಬೆಳ್ಳೆ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶಾಲುಗಳೂ, ಧೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾ ಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— **ಜೆ. ಎಸ್. ಸೋಜ ಎಂಡ್ ಕಂಪೆನಿ,**

ಹಂಪನ್‌ಕಟ್ಟಾ, ಮಂಗಳೂರು

ದಿ ಕೆನರಾ ಸ್ಯಾಕಲ್ ಮಾರ್ಟ, ಉಡುಪಿ.



1. ಮೇಲಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸದಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ. ಸದರಿ ಕಾರ್ಖಾನೆಯಲ್ಲಿ ಪ್ರಸಿದ್ಧವಾದ ಬಿ. ಎಸ್. ಎ. ಸಿಂಗರ್ ಹಂಬರ್, ರಜವಿಟ್‌ವರ್ತ ಅಲ್ಲದೆ ಸುಲಭ ದರದ ಬೆನ್ಸನ್, ರೊಯಾಲ್, ಮಿನೋರಾ, ಸ್ಟಾರ್ಲಿ ಇತ್ಯಾದಿ ಸ್ಯಾಕಲುಗಳು ಅದಕ್ಕೆ ಬೇಕಾಗುವ ಬಿ ಎಸ್. ಎ. ಬ್ರೆಂಪ್ಟನ್, ಬ್ರೂಕ್ಸ, ಲೂಕಸ್, ಪೆರ್ರಿ ಮುಂತಾದ ಉಪಕರಣಗಳೂ, ಡನ್‌ಲೊಪ್ ಪಾಮರ್, ಕೆಂಬ್ರಿಜ್, ಇಂಗ್ಲೀಷ ಟಾಯರ್ಸ್ ಮತ್ತು ಟ್ಯೂಬುಗಳೂ ಸಹಾ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಸೀದಾ ವಿಲಾಯತಿಯಿಂದ ತರಿಸುವದರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ಸಹಾ ದೊರೆಯುವದು.

2. ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲಿ ಖಾತ್ರಿಯಾದೀತು.

3. ಸ್ಯಾಕಲ್ ಕಲಿಯಲಪೇಕ್ಷೆ ಉಳ್ಳವರಿಗೆ ಮೂರೇ ದಿವಸಗಳಲ್ಲಿ ಪೂರ್ಣ ಟ್ರೈನ್ ಮಾಡಿ ಬಿಡಲಾದೀತು.

4. ನಾದುರುಸ್ತಿಯಾಗಿರುವ ಸ್ಯಾಕಲುಗಳನ್ನು ಕಡಿಮೆ ಚಾರ್ಜಿನಿಂದ ತೃಪ್ತಿಕರವಾಗಿ ದುರುಸ್ತಿ ಮಾಡಿಕೊಡಲಾದೀತು.

5. ಸ್ಯಾಕಲುಗಳನ್ನು ಬಾಡಿಗೆಗೆ ಕೊಡತಕ್ಕ ಏರ್ಪಾಟೂ ಮಾಡಿಯದೆ.

ಹೆಚ್ಚಿನ ಮಾಹಿತಿಗೂ ಬೇಕಾಗುವ ಸಾಮಾನುಗಳಿಗೂ ಕೆಳಗಿನ ವಿಳಾಸಕ್ಕೆ ಬರದುಕೊಳ್ಳಿರಿ.

K. K. Shanbhog. *Proprietor*

THE CANARA CYCLE MART.

Udipi, S. Canara.

ಚಿನ್ನ ಮತ್ತು ಬೆಳ್ಳಿಯ ಮೆಡಲುಗಳನ್ನು ಬಹುಮಾನವಾಗಿ ಪಡೆದ

ಸ್ಟೀವನ್ ಎಂಡ್ ಸನ್

ಬಿಸ್ಕುಟು ವ ಕೇಕುಗಳನ್ನು ತಯಾರಿಸುವವರು, ಮಂಗಳೂರು.

ಏಜಂಟರು:—ಆಂತೋನಿ ಎಲ್ ರೇಗೊ, ಸ್ಟೇಟ್‌ಮಾಟ್ ಬಜಾರ್, ಕಲ್ಲಿಕೋಟೆ.

ಸ್ವದೇಶಿ ಎಂಪೋರಿಯಮ್, ಸೇಲಂ.

ಕಣಕಾಸಬಾ ಚೆಟ್ಟಿಯರ್, ಲಾಲ್‌ಗುಡಿ, ಪುವಲೂರ್, ತಿರುಚಿನಾಪಳ್ಳಿ

ಎಸ್ ಸ್ಟ್ಯಾರ್ ಶೋಪ್, ಮಡಿಕೇರಿ

ವಿ ಬಾಲಕೃಷ್ಣ ನ್ಯತು, ಬಿಗ್ ಬಜಾರ್ ಸ್ಟ್ರೀಟ್, ಕೊಯಂಬತ್ತೂರು

ಆಂತೋನ್ ಎಂಡ್ ಸಿಮನ್ ಶೋಪ್, ಉಡುಪಿ.

ನೀವು ನಮ್ಮ ಬಿಸ್ಕುಟು ಇತ್ಯಾದಿಗಳಿಂದ ತೃಪ್ತಿಹೊಂದಿದರೆ ಇತರರಿಗೆ ಹೇಳಿರಿ ಇಲ್ಲವಾದರೆ ತಿಳಿಸಿದರೆ ನಾವು ತೃಪ್ತಿಪಡಿಸುವೆವು

ವಿಳಾಸ:— ಸ್ಟೀವನ್ ಎಂಡ್ ಸನ್ಸ್, ಮಂಗಳೂರು

S. U. N. & CO.,

BENARES CITY, U. P.

ದೊಡ್ಡ ಕಂಪನಿ ಸೂಗಸಾದ ಸಂಶುಗಳು!!

ಈ ನಮ್ಮ ಕಂಪೆನಿಯಲ್ಲಿ ನೇಯಿಡು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗನ್ನು ಇನಾಮಾಗಿ ಕಳುಹಿಸಲಾದೀತು

ನಮ್ಮ ವಿಳಾಸ — ಯಸ್.ಯು.ಯನ್ ಮತ್ತು ಕಂಪೆನಿ, ಕಾಶಿ

ವಿಕಟಪ್ರತಾಪವೆಂಬ ಮಾಸಿಕ ಪತ್ರಿಕೆ.

ಹಾಸ್ಯರಸದಿಂದ ಕೂಡಿದ ಈ ಮಾಸಪತ್ರಿಕೆಯ ವಾರ್ಷಿಕ ಚಂದಾ ಮುಂಗಡ ವಿ. ಪಿ. ಮೂಲಕ ಒಂದೇ ರೂಪಾಯಿ. ಹಾಸ್ಯವನ್ನೇ ಹೆಚ್ಚಾಗಿ ಬರೆದು ವಾಚಕರನ್ನು ಮೆಚ್ಚಿಸುವ ಈ ಪತ್ರಿಕೆಗೆ ಎಲ್ಲರ ಪ್ರೋತ್ಸಾಹವು ಅವಶ್ಯಕವಾಗಿದೆ. ಚಂದಾದಾರರಾಗುವವರಿಗೆ ಯಯಾತಿ ಚರಿತ್ರಂ ಎಂಬ ಪುಸ್ತಕವೂ ಮತ್ತು 1915ನೇ ಇಸವಿಯ ಸುಂದರವಾದ ಕ್ಯಾಲೆಂಡರೂ ಉಚಿತವಾಗಿ ದೊರೆಯುವುದು.

ನಮ್ಮ ವಿಳಾಸ:— ವಿ. ಪಿ. ಆಫೀಸ್, ಕೋಲಾರ್.

ಪ್ಲೀಡರ್ ಎಂ. ಮಲ್ಲಾರಾಧ್ಯರಿಂದ ರಚಿತವಾದವುಗಳು.

ವ್ಯವಹಾರ ನಿರ್ಣಯ.

ಕನ್ನಡದ ಲಾ ಪುಸ್ತಕವು.

ತೃತೀಯ ಮುದ್ರಣ. 616 ಪುಟಗಳುಳ್ಳದ್ದು

ಕ್ರಯ, ದಪ್ಪ ಕಾಗದದ ಪ್ರತಿಗೆ .. 1—8—0.

ಕ್ರಯ, ಗ್ಲೇಜ್ ,, ,, .. 2—4—0.

ಪೋಸ್ಟೇಜು ಪ್ರತಿ 1ಕ್ಕೆ 4 ಆಣೆ

ಇದರಲ್ಲಿ ಹಿಂದೂ ಲಾ, ಮಹಮ್ಮದೀಯ ಲಾ, ಪೀನಲ್‌ಕೋಡು ಇವು ವಿಸ್ತಾರವಾಗಿ ಬರೆಯಲ್ಪಟ್ಟಿವೆ. ಮೈಸೂರು, ಮದ್ರಾಸು, ಬೊಂಬಾಯಿ ದೇಶಗಳಿಗೆಲ್ಲಾ ಸಾಮಾನ್ಯವಾದ ಲಾ ಸ್ವತಸ್ವತ್ತಿನ ವಿಲೇವಾರಿ, ಅನಾಥ ರಕ್ಷಣೆ ಕ್ರೈಸ್ತರ ವಾರಸ್ಸು ಹಕ್ಕು ಈ ವಿಷಯಕವಾದ ಕಾನೂನುಗಳೂ, ಕ್ರಯ, ದಾನ, ವಿಲ್ಲು, ಹುಂಡಿ, ಗೇಣಿ ಮೊದಲಾದ ಸಮಸ್ತ ವ್ಯವಹಾರವನ್ನೊಳಗೊಂಡಿರುವ 92 ವಿಧದ ದಸ್ತಾವೇಜು ನಮೂನೆಗಳೂ, ಲಾ ಪ್ರಕಾರ ಸಿವಿಲ್ ಕ್ರಿಮಿನಲ್ ಕೋರ್ಟುಗಳಿಗೂ ಪೋಲೀಸಿಗೂ ಬರೆಯುವ ಅರ್ಜಿಗಳ 49 ನಮೂನೆಗಳೂ, ಅವುಗಳ ಸಂಬಂಧವಾದ ವಿಶೇಷ ವಿಷಯ ವಿಚಾರಗಳೂ ಬಹಳ ಚೆನ್ನಾಗಿ ಬರೆಯಲ್ಪಟ್ಟಿವೆ. ಇಷ್ಟು ದೊಡ್ಡ ಉಪಯುಕ್ತವಾದ ಗ್ರಂಥವನ್ನು ಇಷ್ಟು ಕಡಿಮೆ ಬೆಲೆಗೆ ಯಾರೂ ಮಾರುವುದಿಲ್ಲ.

"ಕೃಷಿ ವಿಲಾಸ"

ಇದು ಕೃಷಿಯ ಅಭಿವೃದ್ಧಿಗಾಗಿಯೂ, ರೈತರ ಸಹಾಯಾರ್ಥವಾಗಿಯೂ ಸರಕಾರದವರು ಕೊಡುವ ಸಾಲ ಮೊದಲಾದ ಸಹಾಯ ವಿಷಯಕವಾದ ಲಾವನ್ನು ವಿವರಿಸುವ ಉಪಯುಕ್ತವಾದ ಪುಸ್ತಕ. ಬೆಲೆ 8 ಆಣೆ ಪೋಸ್ಟೇಜು 2 ಆಣೆ.

ನಮ್ಮ ವಿಳಾಸ.— ಎಂ ಎಂ. ಪಂಡಿತಾರಾಧ್ಯ ಮೈಸೂರು.

Estd 1888 ಸ್ಥಾಪನೆ 1888.

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ಕಜ್ಜಿ, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦-೨೫ ವರ್ಷಗಳ ಹಳತ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ಒಕ್ಕೆ ೪ ಆಣೆ ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳಷ್ಟು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಹಟ್ಟೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕಟಿ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ಒಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಸಾಲಾಮಿಸ್ರಿ"ಯಲ್ಲಿ ತಯಾರಿಸಲ್ಪಟ್ಟದ್ದು ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಬೆಂಗಳೂರು ಸಿಟಿ ಟಪ್ಪಾಲು ಆಫೀಸಿನ ಸೇವಿಂಗ್ಸ್ ಬ್ಯಾಂಕಿನಲ್ಲಿ 15—3—15ರಲ್ಲು ಡಿಪಾಜಿಟು ಇಟ್ಟಿರುತ್ತೇವೆ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!!

ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯುಳ್ಳ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ಶಾಮಗಡೆ ಇವುಗಳನ್ನು ಪಕ್ವ ಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಸಾಲಾಮಿಸ್ರಿಯೇ ಅಥವಾ ಬೇರೆ ತರಹಾದ್ದೇ ಎಂಬುವುದು ತಿಳಿದು ಬರುತ್ತೆ.

ಈ ಮುರಬ್ಬಾವನ್ನು ಪ್ರತಿಯೊಬ್ಬರು ಸೇವಿಸುವ ಹಾಗೆ
ಜ್ಯೋತಿ ಮುಟ್ಟಿ ತಯಾರು ಮಾಡಲ್ಪಟ್ಟಿರುವದು.

ಸಾಲಾಮಿಸ್ರಿ ಮುರಬ್ಬಾವು —	ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು -	ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವದು
ಸಾಲಾಮಿಸ್ರಿ ಮುರಬ್ಬಾವು —	ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು
ಸಾಲಾಮಿಸ್ರಿ ಮುರಬ್ಬಾವು	ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು
ಸಾಲಾಮಿಸ್ರಿ ಮುರಬ್ಬಾವು —	ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು
ಸಾಲಾಮಿಸ್ರಿ ಮುರಬ್ಬಾವು —	ಮೆದುಳಿಗೆ ಬಲವನ್ನು ಕೊಡುವದು
ಸಾಲಾಮಿಸ್ರಿ ಮುರಬ್ಬಾವು —	ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು —	ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು
ಸಾಲಾಮಿಸ್ರಿ ಮುರಬ್ಬಾವು —	ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು —	ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು —	ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು —	ತಾಂಬ್ರ ಮತ್ತು ಭಂಗಾರ ಭಸ್ಮಕಿಂತಲು ಉತ್ತಮವಾದದ್ದು
ಸಾಲಾಮಿಸ್ರಿ ಮುರಬ್ಬಾವು —	ಸ್ತ್ರೀಸಂಗಕ್ಕೆ ಮೊದಲು ಸ್ಖಲನವಾಗುವುದನ್ನು ನಿಲ್ಲಿಸುವದು.

ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋ
ಗಿಸುವದರಿಂದ ಪೂರ ಗುಣಕೊಡುತ್ತೆ. 2—3 ಡಬ್ಬಿ
ಮುರಬ್ಬಾವನ್ನು ಉಪಯೋಗಿಸುವದರಿಂದ ಶಾಶ್ವತವಾದ
ಆರೋಗ್ಯ ಗುಣಕೊಡುತ್ತೆ.

15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2 ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿ ವರೆಗೆ ಆಣೆ 6.

ಏಜಂಟರು.— ಡಿ ಸಯ್ಯದ್ ಉಸ್ಮಾನ್ ಎಂಡ್ ಕೊ
ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲೀ ವೈದ್ಯರು,
5 ಹಾಜಿಸಾಹೇಬ್ ಮಹಡಿ ಅವೆನ್ಯು ರೋಡ್, ಬೆಂಗಳೂರು ಸಿಟಿ.

ನರೆಕೂದಲಿಟ್ಟುಕೊಂಡು
ಮುದುಕರಾಗಿ ಕಾಣುವುದೇಕೆ?

ದರ್ಬಾರ್ ಕೂದಲು ರಂಗು

ಒಂದು ಸಲ ಹಚ್ಚಿದರೆ 20 ವರುಷ ಪ್ರಾಯದ ಸಮರ್ಥರಂತೆ ಕಾಣುತ್ತಿರಿ. ಈ ರಂಗು ಹಚ್ಚಿಕೊಂಡರೇ ಕೂದಲು ಅಚ್ಚ ಕಪ್ಪಾಗಿ ಹೊಳೆಯುತ್ತೆ. ಈಗ ಮಾರಿಕೆಗೆ ಬಂದಿರುವ ಅಲ್ಪತರದ ಕೂದಲಿಗೆಹಚ್ಚುವ ಬಣ್ಣಗಳೂ ರಂಗುಗಳೂ ತುಂಬ ಕೀಳು ಜಾತಿಯವು; ಹಚ್ಚಿದಮೇಲೆ ಕೂದಲು ಕೆಂಚು ತಿರುಗಿ ಅಸಹ್ಯವಾಗಿ ಕಾಣುತ್ತದೆ. ನಮ್ಮ "ದರ್ಬಾರ್ ಕೂದಲು ರಂಗು" ಅಂಥಾದ್ದಲ್ಲ, ಬಹು ಮೇಲಾದದ್ದು. ಒಂದಾವರ್ತಿ ತರಿಸಿ ಪರೀಕ್ಷೆಮಾಡಿದರೆ ನೀವೇ ಸಂತೋಷಪಡುವಿರಿ. ಕ್ರಯ ಬುರುಸು ಸಮೇತ ಬಾಟ್ಲಿ ಒಂದಕ್ಕೆ ರೂ. 1, ಅಂಚೆ ಹಾಸಲು 4 ಆಣೆ.

ವಿಳಾಸ:— ವಿ ಎ. ಎಸ್. ಪಾಣಿ ಕಂಪೆನಿ.
ನಂಬ್ರ 3 ಇರುಳಪ್ಪನ್ ಬೀದಿ, ಮದರಾಸು.

ಕಟೀಲ ನರಸಿಂಹಪೈ ಎಂಡ್ ಸನ್ಸ್,

ರಥಬೀದಿ, ಮಂಗಳೂರು.

ಇತರ ಕಡೆಗಳಿಂದ ವಸ್ತ್ರ ಇತ್ಯಾದಿಗಳನ್ನು ತಕ್ಕೊಳ್ಳುವ ಮೊದಲು ನಮ್ಮಲ್ಲಿಯ ದರಗಳನ್ನೂ ಸನಗುಗಳನ್ನೂ ಪರೀಕ್ಷಿಸಿ ನೋಡಿರಿ.

ನಗದಿ ಗಿರಾಕಿಗಳಿಗೆ ವಿಶೇಷ ಪ್ರಯೋಜನ ದೊರಕುವಂತೆ ನಮ್ಮ ದರಗಳನ್ನು ಇಟ್ಟಿರುತ್ತೇವೆ.

ಮಧುರಾ, ತಿರುಚಿನಾಪಳ್ಳಿ, ಸೇಲಂ, ಮದ್ರಾಸು, ಮುಂಬಾಯಿ, ಪೂನಾ, ಸೂರತ್, ಬೆಂಗಳೂರು, ಬನಾರಿಸ ಮೊದಲಾದ ನಾನಾ ವಿಧದ ವಸ್ತ್ರ ನೇಯಿಗೆಯಲ್ಲಿ ಪ್ರಖ್ಯಾತಪಟ್ಟ ಪ್ರಾಂತ್ಯಗಳಿಂದ ಎಲ್ಲಾ ಬಗೆಯ ಸನಗುಗಳನ್ನು ತರಿಸಿರುವೆವು. ಗಿರಾಕಿಗಳು ಬಂದು ಪರೀಕ್ಷಿಸಿ ನೋಡಬೇಕಾಗಿ ವಿಜ್ಞಾಪನೆ.

Kateel Narasimha Pai & Sons,
Cloth Merchants,
Car Street, Mangalore.

ಮನೋಹರವೂ ಮೋಹಕರವೂ ಆದ

ಚಂದ್ರಪ್ರಭಾವತಿ ಹೇರಾಯಿಲ್.

ಈ ತೈಲದ ಸುವಾಸನೆ ಮೂರು ದಿನಗಳ ವರಿಗೂ ಹೋಗದೆ ಘಮುಘಮಿಸುತ್ತಿರುವದು. ಇದರ ಸುವಾಸನೆಯು ಮೂರು ದಿನಗಳಲ್ಲಿ ಹೋದರೆ 100 ರೂಪಾಯಿಗಳು ಬಹುಮಾನವಾಗಿ ಕೊಡುತ್ತೇವೆ.

ಕಡಿಮೆ ತರದ ಹೇರಾಯಿಲ್‌ಗಳನ್ನು ಉಪಯೋಗಿಸಿ ನಿಮ್ಮ ಕೂದಲನ್ನು ಮೆದುಳನ್ನೂ ಹಾಳು ಮಾಡಿಕೊಳ್ಳಬೇಡಿರಿ. ಸುಂದರವಾದ ಕೇಶರಾಶಿಯೂ, ಅಂದವಾದ ಕೂದಲುಗಳೂ ಇವೇ ಪ್ರತಿಯೊಬ್ಬ ಸ್ತ್ರೀಪುರುಷರಿಗೂ ಸೌಭಾಗ್ಯವಾದ ಅಲಂಕಾರವಾಗಿದೆ. ಕೂದಲುಗಳು ಸುಂದರವಾಗಿ ಕಾಣಬರಬೇಕಾದರೆ ಅವು ರೇಷ್ಮೆಯಂತೆ ಮೃದುವಾಗಿ ಕಂಗೊಳಿಸತಕ್ಕದ್ದು ಬೇಕು. ಇಲ್ಲವೆ ತಲೆಗೆ ಯಾವ ರೀತಿಯಿಂದಾದರೂ ಕಟ್ಟಿದಂತೆ ನಯವಾಗಿರಬೇಕು.

ಈ ತೈಲವನ್ನು ಉಪಯೋಗಿಸುತ್ತಲೆ ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸಿ ನಿದ್ರಾಭಂಗವನ್ನು ಪರಿಹರಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಕೂದಲುಗಳಿಗೆ ಈ ತೈಲವನ್ನು ಸವರುವುದರಿಂದ ಎಂದಿಗೂ ಬಿದ್ದುಹೋಗಲಾರವು. ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮನೋಹರವೂ ಮೋಹಕರವೂ ಆಗಿ ಮನಸ್ಸನ್ನು ಉಲ್ಲಾಸಪಡಿಸುತ್ತದೆ. ಈ ಚಂದ್ರಪ್ರಭಾವತಿ ಹೇರಾಯಿಲನ್ನು ಉಪಯೋಗಿಸುತ್ತಲೆ ಮೆದುಳಿಗೆ ಬಲವನ್ನು ಕೊಡುವದು. ಕೂದಲನ್ನು ಕೆಂಚಾಗಿಸದೆ ಕಪ್ಪು ಬಣ್ಣದಿಂದೊಡಗೂಡಿಸಿ ಗುಂಗುರು ಗುಂಗುರಾಗಿ ಬೆಳೆಯಿಸುವುದು. ಕಣ್ಣಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುವುದು. ಈ ತೈಲವನ್ನು ತಲೆಗೆ ಸವರುವುದರಿಂದ ತಲೆನೋವನ್ನು ತಕ್ಷಣವೇ ಹೋಗಲಾಡಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು. ನಿದ್ರೆಯು ಚೆನ್ನಾಗಿ ಬರುವುದು. ಈ ಚಂದ್ರಪ್ರಭಾವತಿ ಹೇರಾಯಿಲ್ ಔಷಧಕ್ಕೆ ಔಷಧವೂ, ಸುಗಂಧದ್ರವ್ಯಕ್ಕೆ ಸುಗಂಧದ್ರವ್ಯವೂ ಆಗಿರುವದು. ಈ ತೈಲವು ಸ್ತ್ರೀಪುರುಷರಿಗೆ ಬಹಳ ಉಪಕಾರಿಯಾದದ್ದು. ಒಂದು ಚಂದ್ರಪ್ರಭಾವತಿ ಹೇರಾಯಿಲ್ ಶೀಸೆಯು ಬಹು ದಿನಗಳವರಿಗೂ ಬರುವುದು. ಕ್ರಯ ಶೀಸೆ ಒಂದಕ್ಕೆ 1 ರೂಪಾಯಿ ಟಪ್ಪಾಲು ಖರ್ಚು 4 ಆಣೆ

ನರೆತ ಕೂದಲುಗಳಿಗೆ ಏಕೆ ಕೊಂಡು ಮುದುಕರಾಗಿ ಕಾಣುವುದೇಕೆ?

ದರ್ಬಾರ್ ರಂಗು.

ಒಂದು ಸಲ ಹಚ್ಚಿದರೆ 25 ವರುಷದ ಯೌವನದವರಂತೆ ಕಾಣುತ್ತೀರಿ. ಈ ರಂಗು ಹಚ್ಚಿಕೊಂಡರೆ ಕೂದಲು ಕಪ್ಪಾಗಿ ಹೋಗುವುತ್ತೆ. ಈಗ ಮಾರಾಟಕ್ಕೆ ಬಂದಿರುವ ಅಲ್ಪ ತರದ ಕೂದಲು ರಂಗುಗಳು ತುಂಬಾ ಕೀಳ್ ಜಾತಿಯವು. ಹಚ್ಚಿದ ಕೂಡಲೆ ಕೂದಲು ಕೆಂಚಾಗಿ ಅಸಹ್ಯವಾಗಿ ಕಾಣುತ್ತದೆ. ನಮ್ಮ ದರ್ಬಾರ್ ರಂಗು ಅಂಥಾದ್ದಲ್ಲ, ಬಹು ಮೇಲಾದದ್ದು. ಒಂದಾವರ್ತಿ ಹಚ್ಚಿದರೆ ಕೂದಲು ಕಪ್ಪಾಗಿ ರೇಷ್ಮೆಯ ಹಾಗೆ ಕಂಗೊಳಿಸುವುವು. ಕ್ರಯ ಬುರುಡೆ ಸಮೇತ ರೂ 1—4—0

ಉಪಯೋಗಿಸುವ ವಿಧಾನ ಬಾಟ್ಲಿಯ ಜೊತೆಯಲ್ಲಿರುತ್ತೆ.

ಮುಖ ವಿಕಾರ ದೂರ ಶಕ್ತಿ.

ಮುಖಕಾಂತಿ.

ಇದು ಒಂದೇ 1,000 ರೂಪಾಯಿಗಳು ಬಾಳುವುದು.

ಅಂದಗೆಡಿಸಿ ಎಲ್ಲರಿಗೂ ನಗು ಬರುವ ಹಾಗೆ ಕಂಡಂತೆ ಮಾಡುತ್ತಾ ಹೇಗೂ ವಾಸಿಯಾಗದ ಅಸಹ್ಯದ ಗುರುತುಗಳು, ಮಚ್ಚೆಗಳು, ಗಂಧೆಗಳು, ಎಂಜಲು ಹುಣ್ಣುಗಳು, ಬೆಮ್ಮು, ಇನ್ನೂ ಇತರ ವಿಧವಾದ ಮಚ್ಚೆಗಳು, ನವೆ ಮುಂತಾದವುಗಳಿಗೆ ಈ ಔಷಧವನ್ನು ೧೫ ದಿನಗಳು ಹಚ್ಚುವುದರಿಂದ ಗುಣವಾಗಿ ಮುಖಕ್ಕೆ ಕಾಂತಿಯನ್ನು ಕೊಟ್ಟು ಹಸನ್ಮುಖಿಯಾಗಿ ಮಾಡುವುದು. ಕ್ರಯ ಡಬ್ಬಿ ಒಂದಕ್ಕೆ 8 ಆಣೆ

ವಜ್ರಾಂಗಚೂರ್ಣ. — ಧಾತುವು ನೀರಿನಂತಿದ್ದರೂ, ಮೂತ್ರದಲ್ಲಿಯೂ, ನಿದ್ರೆಯಲ್ಲಿಯೂ ಧಾತುವು ಹೋಗುತ್ತಿದ್ದರೂ, ಸೊಂಟನೋವು, ಮೂತ್ರದಲ್ಲಿ ಉರಿ, ಹಸಿವು ಇಲ್ಲದೆ ಇರುವುದು, ಕೈಕಾಲುಗಳಲ್ಲಿ ನೋವಿದ್ದರೂ, ಶರೀರದಲ್ಲಿ ನಿಶ್ಶಕ್ತಿ ಆಗಿದ್ದರೂ, ತಲೆ ತಿರುಗುವುದು, ನಡೆಯುವಾಗ ಮೇಲುಸಿರು ಬರುವುದು ಸಹ ಇದನ್ನು ಉಪಯೋಗಿಸಿದರೆ ಇಲ್ಲಿ ಹೇಳುವುದು ನಿಜವೆಂದು ವ್ಯಕ್ತವಾಗುವುದು. ಇದರ ಗುಣಗಳ ಪ್ರಖ್ಯಾತಿಯಿಂದ ಇದರ ಬೆಲೆಯು ೧೦ ರೂಪಾಯಿ ಇಟ್ಟರೂ ಬಹಳ ಅಲ್ಪವೆಂದರಿಯಬೇಕು. ಈ ಬೆಲೆಯನ್ನು ಇಡುವದರಿಂದ ಬಡವರು ಕೊಳ್ಳಲಾರರು. ಆದ್ದರಿಂದ ಇದರ ಬೆಲೆಯು ಡಬ್ಬಾ ೧ಕ್ಕೆ ೧೦ ಆಣೆ ಇಟ್ಟಿರುತ್ತೆ

ಪಂಡಿತ್ ಡಿ. ಎಂ. ರವರ ಭಸ್ಮವು. — ಉಷ್ಣದಿಂದ ಮೂತ್ರದಲ್ಲಿ ಉರಿ, ಮೂತ್ರದಲ್ಲಿ ಕೀವೂ ಇದು ಹಳೆದಾಗಲಿ ನೂತನವಾಗಲಿ ಆಗಿದ್ದರೂ ೨೪ ಗಂಟೆಯೊಳಗಾಗಿ ನಿವಾರಣೆಯಾಗುತ್ತವೆ. ಕ್ರಯ ಡಬ್ಬಿ ೧ಕ್ಕೆ ೧೨ ಆಣೆ.

ಉಷ್ಣಕಾರಕಕ್ಕೆ ಮಾತ್ರೆಗಳು: — ಉಷ್ಣಕಾರಕದಿಂದ ಶರೀರದಲ್ಲಿ ಪಡೆಗಳಿದ್ದರೂ, ಗಾಯಗಳಿದ್ದರೂ ಈ ದೆಸೆಯಿಂದ ಶರೀರವನ್ನೇ ತ್ಯಜಿಸಲುದ್ಯುಕ್ತವಾದ ರೋಗಿಗಳಾದರೂ ಸಹ ಈ ಔಷಧವನ್ನು ಸೇವಿಸುವುದರಿಂದ ಖಂಡಿತವಾಗಿಯೂ ಗುಣವಾಗುವುದು. ಕ್ರಯ ಡಬ್ಬಿ 1ಕ್ಕೆ 1 ರೂಪಾಯಿ.

ದಿಲ್‌ಖುಷ್ ತೈಲವು: — ಅನೇಕರಿಗೆ ಕೂದಲನ್ನು ಬೆಳಿಸುವ ಇಚ್ಛೆಯಿರುವುದು. ಈ ತೈಲವನ್ನು 10-15 ದಿನಗಳು ಹಚ್ಚುವದರಿಂದ ಕೂದಲು ಬಹಳವಾಗಿ ಬೆಳೆಯುವವು. ತೈಲವು ಬಹಳ ಸುವಾಸನೆಯಾಗಿರುವುದು. ಮೆದುಳಿಗೆ ತಂಪನ್ನುಂಟುಮಾಡುವುದು. ಕ್ರಯ ಶೀಸೆ 1ಕ್ಕೆ 12 ಆಣೆ.

ಆಶ್ಚರ್ಯಕರವಾದ ದ್ರಾವಕ: — ಇದನ್ನು ಸ್ವಲ್ಪ ಮೂಸಿ ನೋಡುವುದರಿಂದ ಒಂದು ನಿಮಿಷದಲ್ಲಿ ತಲೆನೋವು ನಿಲ್ಲುತ್ತೆ. ಔಷಧವು ಖರ್ಚಾಗದೆ ಹಾಗೆಯೇ ಇರುವುದು. ಚೇಳು, ಹಾವು ಇತ್ಯಾದಿ ವಿಷಜಂತುಗಳ ಕಡಿತಕ್ಕೆ ಹಚ್ಚಿದರೆ ಗುಣಪಡಿಸುತ್ತೆ. ಕ್ರಯ ಶೀಸೆ 1ಕ್ಕೆ 8 ಆಣೆ.

ರೋಮನಾಶಿಕ, ವೃಶ್ಚಿಕ ದಂಷ್ಟ: — ಈ ಔಷಧವು ಚೇಳಿನ ಹೊಡತಕ್ಕೂ ಕೂದಲು ತೆಗೆಯುವುದಕ್ಕೂ ಬಹಳ ಅನುಕೂಲವಾಗಿರುವುದು. ಇದು ಪ್ರತಿಯೊಬ್ಬರಲ್ಲಿಯೂ ಇರಬೇಕಾದ ಔಷಧವು. ಕ್ರಯ ಶೀಸೆ 1ಕ್ಕೆ 4 ಆಣೆ.

ವಾತದಿವಾರಣೆ ತೈಲವು: — ಎದೆಯಲ್ಲಿಯೂ, ಪಕ್ಕೆಗಳಲ್ಲಿಯೂ, ಸೊಂಟದಲ್ಲಿಯೂ, ಕೈಕಾಲುಗಳಲ್ಲಿಯೂ ನೋವಿದ್ದರೆ ಈ ತೈಲವನ್ನು ಉಪಯೋಗಿಸುವುದರಿಂದ ತಕ್ಷಣ ಗುಣವಾಗುವುದು. ಕ್ರಯ ಶೀಸೆ 1ಕ್ಕೆ 4 ಆಣೆ.

ಅದ್ಭುತಗೊಂಡ ಮೂಲವ್ಯಾಧಿ ಔಷಧ...	...	ಶೀಸೆ 1ಕ್ಕೆ	0-12—0
ಕಣ್ಣಿಗೆ ಸುರ್ಮ...	...	,, ,,	0—4—0
ದಂತ ಚೂರ್ಣ ...	...	ಡಬ್ಬಿ ,,	0—4—0
ಕಜ್ಜಿ, ಹುಳುಕಡ್ಡಿ ಔಷಧ ...	...	,, ,,	0—4—0
ಹೊಟ್ಟೆನೋವಿಗೆ ಔಷಧ ...	...	ಶೀಸೆ ,,	0—4—0
ತಲೆನೋವಿಗೆ ತೈಲವು ...	...	,, ,,	0—4—0
ಕೆಮ್ಮಲು ರೋಗಕ್ಕೆ ಔಷಧವು ...	...	ಡಬ್ಬಿ ,,	0—4—0

ಗಾಯಕ್ಕೆ ಔಷಧ: — ಇದನ್ನು ದಿನಕ್ಕೆರಡಾವರ್ತಿಯಂತೆ 8-10 ದಿನಗಳು ಹಚ್ಚುವುದರಿಂದ ಹಳೇ ಮತ್ತು ಹೊಸ ಗಾಯಗಳು, ಗಾಯದಲ್ಲಿ ಉಳಿದಿರುವ ಕಲೆಗಳು ಗುಣಪಡಿಸುವುದು. ಕ್ರಯ ಡಬ್ಬಿ 1ಕ್ಕೆ 8 ಆಣೆ

ಅನುಪಾನ ಪತ್ರಿಕೆಯು ಔಷಧದ ಜೊತೆಯಲಿರುವದು.

ಒಂದು ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಯಲ್ಲಿ ಕಳುಹಿಸುವದಿಲ್ಲ.

ವಿಳಾಸ: — ಡಿ. ಮನ್ನಾಲಾಲ್,

ಢಿಲ್ಲಿ ವೈದ್ಯರು, ೫ ಅವನ್ಯೂ ರೋಡ್, ಬೆಂಗಳೂರು ಸಿಟಿ.

ನ್ಯಾಯದರ್ಪಣ.

ಹೊಸ ಪುಸ್ತಕ.

ಇಂಡಿಯಾ ದೇಶದ ಸಮಸ್ತ ಹಿಂದೂ ಜನರ ಸಾಮಾನ್ಯ ಧರ್ಮಗಳು, ಅವುಗಳನ್ನು ಅತಿಕ್ರಮಿಸಿ ನಡೆಯುವವರಿಗೆ ಉಂಟಾಗತಕ್ಕ ಫಲಗಳು, ಇವುಗಳನ್ನು ಕುರಿತು, ಗವರ್ನಮೆಂಟಿನವರಿಂದ ಅನೇಕ ಆಕ್ಟುಗಳು, ರೆಗ್ಯುಲೇಷನ್‌ಗಳು, ಶಾಸನಗಳು ವಗೈರೆ ವಿಧಾಯಕವಾಗಿ ಇರುತ್ತೆ. ಇವುಗಳೆಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೇ ಅಪಾರವಾಗಿ ಇರುತ್ತವೆ. ಇವುಗಳಲ್ಲಿ, "ಕಂಟ್ರಾಕ್ಟ್" ಅಂದರೆ ಕರಾರುಗಳು, "ಬ್ರೀಚ್ ಆಫ್ ಕಂಟ್ರಾಕ್ಟ್" ಅಂದರೆ ಒಪ್ಪಂದಕ್ಕೆ ತಪ್ಪಿ ನಡೆಯೋಣ, ದ್ರೋಹ, ಲಿಮಿಟೇಷನ್, ಛಾಪಾ ಕಾಗದ, ರಿಜಿಸ್ಟ್ರೇಷನ್, ಸಿವಿಲ್ ಪ್ರೊಸಿಡ್ಯೂರ್, ಕ್ರಿಮಿನಲ್ ಪ್ರೊಸಿಡ್ಯೂರ್, ಪೀನಲ್ ಕೋಡ್, ಹಿಂದೂ ಲಾ, ಮುಂತಾದ ಧರ್ಮಶಾಸ್ತ್ರಗಳಿಂದ, ಮನುಷ್ಯರ ನಿತ್ಯಾಚರಣೆಗೆ ಅವಶ್ಯಕವಾದ ಲೌಕಿಕ ವ್ಯವಹಾರ ಧರ್ಮಗಳ ಮುಖ್ಯ ಸಂಗತಿಗಳನ್ನೆಲ್ಲಾ ಆರಿಸಿ ಈ ಸಣ್ಣ ಪುಸ್ತಕವನ್ನು ರಚಿಸಿರುತ್ತೆ ಮತ್ತು ವಾಡಿಕೆಯಲ್ಲಿ ಇರತಕ್ಕ ನಾನಾ ವಿಧಗಳಾದ ದಸ್ತೈವಜುಗಳ ಅನೇಕ ನಮೂನೆಗಳು ಮತ್ತು ಕ್ರಿಮಿನಲ್ ರಿವಿನ್ಯು ಗ್ರಾಮ ಮುನಸೀಫ್ ಕೋರ್ಟುಗಳ ಮುಂದಿನ ದಾವಾ ವಗೈರೆ ಅರ್ಜಿಗಳ ಮಾದರಿಗಳು ಅಡಕವಾಗಿ ಇರುತ್ತೆ. ಬೆಲೆ 1—8—0 ವಿ ಪಿ 1—12—0

ಲಾಯರ್ ಯಂ ಯಸ್ ನಂಜಪ್ಪನವರು,

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಪೋಸ್ಟೇಜು ಸೇರಿ 15-0-0 ಆಗುತ್ತೆ

ಅಚ್ಚಾಗುತ್ತಲಿದೆ! ಪುರಾತನ ಸಂಗ್ರಹ!! ನವೀನ ಗ್ರಂಥ!!

ಭೂತಾಳಪಾಂಡ್ಯರಾಯನ

ಸಂಪೂರ್ಣ ಕಟ್ಟುಗಳು ಇರುವ

ದಕ್ಷಿಣಕನ್ನಡ ಜಿಲ್ಲೆಯ ಚರಿತ್ರೆ.

ಈ ಪುಸ್ತಕವು ಮಕ್ಕಳ ಕಟ್ಟಿನ ಬ್ರಾಹ್ಮಣರ ಮನೆತನ ಮರ್ಯಾದೆಗಳ ಮೂಲ, ಅಳಿಯ ಕಟ್ಟಿನವರ ಆದಿ, ಪೂರ್ವದ ಎಲ್ಲಾ ಜಾತಿಗಳ ಮತ್ತು ರಾಜರುಗಳ ಚರಿತ್ರೆ ಸಹಿತವಿರುವ ಹೊಸ ಪುಸ್ತಕ.

(ಎಲ್ಲಾ ವಿವರಗಳು ಜನವರಿಯ ಸ್ವದೇಶಾಭಿಮಾನಿಯಲ್ಲಿರುವದು)

ಪ್ರತಿ 1ಕ್ಕೆ . . 1 4 0

ಸ್ವದೇಶಾಭಿಮಾನಿ ಚಂದಾದಾರರಿಗೂ, ಉಪಾಧ್ಯಾಯರುಗಳಿಗೂ, ವಿದ್ಯಾರ್ಥಿಗಳಿಗೂ, ಮುಂದಾಗಿ ತಿಳಿಸಿದವರಿಗೂ 1—2—0. ಟಪ್ಪಾಲು ಹಾಸಲು ಪ್ರತ್ಯೇಕ ಚಂದಾದಾರರು ನಂಬ್ರ ತಿಳಿಸಬೇಕು.

ವಿಳಾಸ:—

"ಕುಶಲಮಂದಿರ"	ಎನ್ ಎ ಶೀನಪ್ಪ ಹೆಗಡೆ
ಶ್ರೀ ರಾಜರಾಜೇಶ್ವರಿ ದೇವಸ್ಥಾನ,	ಅಮುಣಿಂಜೆ ಗುತ್ತು.
ಪೊಳಲಿ	ಪೋಸ್ಟು ಗುರ್ಪುರ, ದ. ಕನ್ನಡ

ರೂ 501 ಉಚಿತ!

ಬಲೂನ್ ಬ್ರೇಂಡ್ ಸಾಬೂನ್.

5 ನಿಮಿಷದೊಳಗೆ ಕೂದಲನ್ನು ಉದುರಿಸಿಬಿಡುವದಿಲ್ಲವೆಂಬದನ್ನು ಖಚಿತಪಡಿಸುವವರಿಗೆ ರೂ 501 ಉಚಿತವಾಗಿ ಕೊಡೋಣಾಗುವದು ಇದರಿಂದ ಚರ್ಮವು ಕೆಡದು. 3 ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ 0—12—0, 2 ಪೆಟ್ಟಿಗೆಗಳ ವರೆಗೆ ವಿ. ಪಿ ಚಾರ್ಜು 0—5—0

ರೂ. 2500 ಉಚಿತ!

ಸಿರಾಜ್ ಹೇರ್ ಡೈ ಎಂಬ ಕೇಶತೈಲವು ಬಿಳೀ ಮತ್ತು ನರೆತ ಕೂದಲನ್ನು ಕಪ್ಪು ಮಾಡುವದಿಲ್ಲವೆಂದು ತೋರಿಸುವವರಿಗೆ ರೂ. 2500 ಉಚಿತ.

ಈ ತೈಲವನ್ನು ಏನೊಂದು ಬಾಧಕಬಾರದಂತೆ ಅತಿ ನಿಪುಣತೆಯಿಂದ ತಯಾರು ಮಾಡಿರುತ್ತದೆ. ಇದರಿಂದ ಚರ್ಮದಲ್ಲಿ ಕಲೆಯಾಗದು ಪೆಟ್ಟಿಗೆ 1ಕ್ಕೆ ರೂಪಾಯಿ 1—0—0; ವಿ. ಪಿ. ಬೇರೆ

ವಿಳಾಸ:— ಎಫ್. ಎಲ್. ದವಾವಾಲಾ,

ಮಿರ್ಜಾ ಸ್ಟ್ರೀಟ್, ಮುಂಬಾಯಿ.

ಇಂಗ್ಲೀಷಿನಲ್ಲಿ ಪತ್ರವ್ಯವಹಾರ ನಡಿಸಬೇಕಾಗಿದೆ.

F. L. Davawala,

Mirza Street, BOMBAY.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಮಹಾ ಗೋರೋಜನ ಮಾತ್ರೆ:—ಎಲ್ಲಾ ವಿಧವಾದ ಜ್ವರಗಳಿಗೂ, ವಿಷಮ ಶೀತಜ್ವರ, ಎರಡರ ಜ್ವರ, ಪ್ರತಿದಿನಜ್ವರ, ಇವುಗಳಿಗೆ ಅದ್ವಿತೀಯವಾದ ಔಷಧವು. ಮಲನಾಡು ಜ್ವರ, ಹೊಟ್ಟೆಯಲ್ಲಿ ಗಡ್ಡೆ ಆಗಿದ್ದರೆ, ಮಕ್ಕಳಿಗೆ ಬರುವ ಜ್ವರ, ಆಮಶಂಕೆ, ಅತಿಸಾರ, ನರಗಳ ಸೆಳೆತ, ನಿದ್ರೆಬಾರದಿರೋಣ, ಹೆಚ್ಚಾಗಿ ಹೊಸುವದು ಛಳಿ, ಕೆಮ್ಮಲು ತಲೆನೋವು, ಮಕ್ಕಳಿಗೂ ದೊಡ್ಡವರಿಗೂ ಅಜೀರ್ಣ ಇವುಗಳನ್ನು ಪರಿಹಾರಮಾಡುವುದು ಸೀಸೆ 1—ಕ್ಕೆ 10 ಆಣೆ ವಿ ಪಿ 9 ಸೀಸೆ ವರಿಗೂ 5 ಆಣೆ

ಚರ್ಮರೋಗಕ್ಕೆ ಔಷಧಿ:—ಮಕ್ಕಳಿಗೆ ಬರುವ ಕರಪಾನು, ತುರಿ, ಹುರುಕಾಲು, ಗಜ್ಜಿ, ಮತ್ತು ದೊಡ್ಡವರಿಗೆ ಗಜ್ಜಿ ಸಂಬಂಧವಾದ ವ್ಯಾಧಿಗಳು, ಸೊಂಡು ತಲೆಯಲ್ಲಿಯೂ ಇತರ ಕಡೆಗಳಲ್ಲಿಯೂ ನೋವನ್ನೂ ಅನಂತರ ಉರಿಯನ್ನೂ ಉಂಟುಮಾಡುವ ಎಲ್ಲಾ ಹುಣ್ಣುಗಳಿಗೆ, ಹೊರಗೆ ಹಚ್ಚುವುದರಿಂದಲೇ ಬಹು ಶೀಘ್ರತೆಯಾಗಿ, ವಾಸಿಯಾಗುವವು ಬೆಲೆ ಸೀಸೆ 1—ಕ್ಕೆ 8 ಆಣೆ ವಿ ಪಿ ಚಾರ್ಜು 2 ಸೀಸೆ ವರಿಗೂ 5 ಆಣೆ

ಕೇಶ ಸುವಾಸಿನಿ:- ಈ ತೈಲವು ಪೂರ್ವ ಪಶ್ಚಿಮ ದೇಶಗಳ ಅಮೂಲ್ಯ ಸುವಾಸನಾದ್ರವ್ಯಯುಕ್ತವಾಗಿ ತುಂಬಾ ಪರಿಮಳ ಕೊಡುವಂಥಾದ್ದಾಗಿರುತ್ತದೆ ಇದರಿಂದ ಕೂದಲು, ಮೀಸೆಗಳು ಕಣ್ಣುರೆಪ್ಪೆಗಳು ಸಮೃದ್ಧಿಯಿಂದ ಬೆಳೆಯುತ್ತವೆ ತಲೆಗೂ, ಮಿದುಳಿಗೂ, ಕಣ್ಣುಗಳಿಗೂ ತಂಪುಕೊಡುತ್ತದೆ ಬೋಳುತಲೆ, ಸೊಂಡು ಮುಂತಾದ್ದನ್ನು ವಾಸಿಮಾಡುತ್ತದೆ ವಿಲಾಯತಿಯ ಪರಿಮಳ ವಸ್ತುಗಳಮೇಲೆ ಪ್ರೀತಿ ಇರುವವರಿಗೆ ಅಚ್ಚುಮೆಚ್ಚಿನದ್ದಾಗಿರುತ್ತದೆ ಬೆಲೆ ಸೀಸೆ 1 ಕ್ಕೆ ರೂ 1 ವಿ ಪಿ ಚಾರ್ಜು 2 ಸೀಸೆ ವರಿಗೂ 5 ಆಣೆ

ರಕ್ಷಾಮೃತ:—ಕಾಪಿ ಟೀ ಇವುಗಳಿಗೆ ಬದಲಾಗಿ ಉಪಯೋಗಿಸುವ ಚೂರ್ಣವು ಅನೇಕ ಬೇರುಗಳಿಂದಲೇ ಮಾಡಲ್ಪಟ್ಟಿದೆ—ಕಾಪಿ, ಟೀ, ಇವುಗಳಿಂದುಂಟಾಗುವ ಕೇಡುಗಳೊಂದೂ ಇಲ್ಲದೇ ಜೀರ್ಣಶಕ್ತಿಯನ್ನು ಹೆಚ್ಚಿಸಿ, ಕ್ಷಯರೋಗ, ತಲೆನೋವು ಮುಂತಾದ್ದನ್ನು ಹೋಗಲಾಡಿಸುವದು ರಕ್ತಶುದ್ಧಿಯನ್ನು ಮಾಡಿ ನರಸಂಬಂಧವನ್ನು ಬಲಪಡಿಸುತ್ತದೆ ಇದನ್ನು ಬಿಡದೆ ಉಪಯೋಗಿಸುತ್ತಿದ್ದರೆ, ಅಜೀರ್ಣದಿಂದಲೂ ಮಧುಮೂತ್ರದಿಂದಲೂ ಕಷ್ಟಪಡುವವರು ಶೀಘ್ರದಲ್ಲಿ ಗುಣ ಹೊಂದುವರು ಜ್ವರದವರಿಗೂ ಬಸಿರು ಬಾಣಂತಿಯರಿಗೂ, ವಾಂತಿಭೇದಿ ಮುಂತಾದ ರೋಗಕಾಲಗಳಲ್ಲಿಯೂ ಶರೀರದ ಉಷ್ಣವನ್ನು ನಿಶ್ಚಯವಾಗಿ ತಗ್ಗಿಸುವದು ವಿದ್ಯಾರ್ಥಿಗಳಿಗೂ, ಉದ್ಯೋಗಸ್ಥರಿಗೂ, ಅನಿಷ್ಟವಾದ ಕಾಪಿ, ಟೀ ಮುಂತಾದುವುಗಳಿಗೆ ಬದಲಾಗಿ ಮಕ್ಕಳು ದೊಡ್ಡವರೆಲ್ಲರೂ ಉಪಯೋಗಿಸಬಹುದು ಅರ್ಧ ತೊಲ ಚೂರ್ಣವು ಒಂದು ಒಟ್ಟೆಲು ಕಷಾಯಕ್ಕೆ ಸಾಕು 20 ಸಲಕ್ಕೆ ಉಪಯೋಗಿಸುವಷ್ಟು ಚೂರ್ಣವಿರುವ ಟಿನ್ 1ಕ್ಕೆ 6 ಆಣೆ ವಿ ಪಿ ಚಾರ್ಜು 3 ಆಣೆ 8 ಆಣೆ ತಪಾಲ ಸ್ಟಾಂಪುಗಳನ್ನು ನಮಗೆ ಕಳುಹಿಸುವವರಿಗೆ 1 ಟಿನ್ ಮುಂದಾಗಿ ಪಾರ್ಸಲ್ ಕೊಟ್ಟು ಕಳುಹಿಸಲ್ಪಡುವದು

☞ ಈ ಪ್ರಾಂತ್ಯ ಕನ್ನಡ, ತೆಲುಗು, ಮಲಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು

MY ADDRESS.	ನಮ್ಮ ವಿಳಾಸ:—
P. SUBBA ROY,	ಪಿ ಸುಬ್ಬರಾಯಿ,
Ayurvedic Pharmacy,	ಆಯುರ್ವೇದ ಔಷಧಶಾಲ,
Sri Perumalkoil,	ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
SANNATHY, TANJORE.	ಸನ್ನಿಧಿ, ತಂಜಾವೂರು.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1 ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ, ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2 ನೋವುಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತು ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲಿಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತ ಬಂದಲ್ಲಿ ತಿಂದನ್ನವು ಜೀರ್ಣವಾಗುವದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು.

6. ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು

7 ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಆದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45 ಮಾತ್ರೆಗಳ ಪೊಟ್ಟ 1ಕ್ಕೆ	0—2—0	200 ಮಾತ್ರೆಗಳ ಪೊಟ್ಟ 1ಕ್ಕೆ	0—7—0	80 ಮಾತ್ರೆಗಳ ಟಿನ್ 1ಕ್ಕೆ	0—4—0	550 ಮಾತ್ರೆಗಳ ಮರದಪೆಟ್ಟಿಗೆ 1ಕ್ಕೆ	1—0—0
95 „ „	0—4—0	200 „ ಟಿನ್ „	0—9—0	100 „ ಶೀಸೆ „	0—4—6	1200 „ „ „	2—0—0

1 ರೂಪಾಯಿಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಭರತಖಂಡ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ.

ಸೋಲ್ ಏಜಂಟ್ಸ್:—ಸೆಶಿಂತಾನ್ ಡಿಪೋ,

ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ. 2.

ವೃಥಾ ವೆಚ್ಚಮಾಡುವದೇಕೆ?

—o—

ಐಶ್ವರ್ಯವಂತರೂ ಬಡವರೂ ಕೊಂಡುಕೊಳ್ಳಲು ಸಾಧ್ಯವಾಗಿರುವ

ಯುಕಲಿಪ್ಟಸ್ ತೈಲವು.

ತಲೆನೋವು, ಕಣ್ಣು ಉರಿ, ಗಾಯ, ಸಕಲ ವಿಧವಾದ ವಾಯುರೋಗ, ಕೆಮ್ಮು, ಉಬ್ಬಸ, ಶೀತಬೇದಿ, ಉಷ್ಣಬೇದಿ, ಹೊಟ್ಟೆಯಲ್ಲಿ ಜ್ವರಗಡ್ಡೆ, ಸ್ತ್ರೀಯರ ವ್ಯಾಧಿಸಂಬಂಧ ಬಿಳುಪು, ಮೊದಲಾದ ಮೇಹ ರೋಗಗಳು, ಕಿವಿಯಲ್ಲಿ ಕೀವು ಒರುವದು, ಹೆಂಗಸರ ಹೊಟ್ಟೆನೋವು ಮೊದಲಾದ ರೋಗಗಳನ್ನು ಗುಣಪಡಿಸುವದಿಲ್ಲವೆಂದು ಖಾತ್ರಿಪಡಿಸುವವರಿದ್ದಾರೋ? ಔನ್ಸ್ ಸೀಸೆ 1ಕ್ಕೆ 0—5—0 ವಿ. ಪಿ. ಬೇರೆ. ಡಜನ್ ಸೀಸೆಗಳಿಗೆ ವಿ ಪಿ ಸಹಿತ ರೂ. 3—12—0. ಅನುಪಾನ ಪತ್ರಿಕೆ ಸೀಸೆಯೊಂದಿಗೆ.

ಗೃಹಣೀಯಂತಕ ತೈಲ:—ಮಕ್ಕಳ ಚೇಷ್ಟೆ, ಮಕ್ಕಳು ಒಡವಾಗುತ್ತಾಬರುವದು, ನೇವಸ ಮೊದಲಾದ ಮಕ್ಕಳ ರೋಗಕ್ಕೆ ಸಿದ್ಧೌಷಧ. 2 ಔನ್ಸಿನ ಸೀಸೆ 1ಕ್ಕೆ 0—10—0 ವಿ. ಪಿ ಸಹಿತ 0—15—0

ಇಕ್ಲಿಪ್ಸ್ ಬಾಮ್:—ತಲೆನೋವು, ಸೊಂಟದ ನೋವು, ಸಂಧುವಾತ, ಮೇಹವಾತ, ನೆಗಡಿ, ಶೈತ್ಯ, ಚೇಳ್, ಜೇಡರಹುಳ ಕಡಿತ, ಕುರು, ರಾಜಕುರು, ಮೊಡವೆ, ಘಾಯಗಳು, ಹಲ್ಲುನೋವು, ಆನೆಕಾಲು ಇತ್ಯಾದಿ ರೋಗಗಳಿಗೆ ಬಾಹ್ಯ ಲೇಪನವಾಗಿ ಉಪಯೋಗಿಸಬಹುದಾದ ಬಾಮಿನ ಕರಡಿಗೆ 1ಕ್ಕೆ ಆಣೆ 8 ವಿ. ಪಿ. ಬೇರೆ. ಡಜನ್ ಕರಡಿಗೆಗಳಿಗೆ ರೂ. 4—12—0 ವಿ. ಪಿ. ಬೇರೆ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಮಂಗಳೂರು.

ಏಜಂಟರು:— ಸುಗಂಧವಿಲಾಸ, ರಥಬೀದಿ, ಮಂಗಳೂರು.

ಅನೇಕ ಯೋಗ್ಯತಾಪತ್ರಿಕೆಗಳನ್ನು ಪಡದಿರುವ (ರಿಜಿಸ್ಟರ್ಡ್)

ರಾಜಸುಂದರಿ ರೋಜ.

ಕೂದಲು ಬೆಳೆಯುವ ಪರಿಮಳ ತೈಲವು. 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1ಕ್ಕೆ ರೂ. 1 ಮಾತ್ರ

ಸ್ತ್ರೀಗಳು ತಲೆಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು, ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವರು ಬಜಾರಿನಲ್ಲಿ ದೊರೆಯುವ ಕೀಳುತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ, ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ ಸುವಾಸನೆ ಹೇಳುವದಕ್ಕೆ ಬರೆಯುವದಕ್ಕೆ ಆಗುವದಿಲ್ಲ ಮತ್ತು ಇದರ ಪರಿಮಳ ವಾಸನೆ ಸುತ್ತು ಇರುವ ಮನೆಗಳಿಗೆ ಹೋಗುವದು. ಇದಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತೆಗದು ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿ ಇರುವ ಮೆದಡನ್ನು ಸರಿ ಮಾಡುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ ಬೇರೊಂದಿಲ್ಲ, ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ 1ನ್ನು ತರಿಸಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಶೀಲು. ಸ್ತ್ರೀಯರು ಧರಿಸಿಕೊಳ್ಳುವ ಕೊಂಡಗಿಣಿ 6, ಮೈಭರಣ 1, ಅದ್ದಾ 1, ತಾಂಬೂಲ ಮಾತ್ರೆ 30, ದಂತದ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರನೇಷನ್ ಪೆಟ್ಟಿಗೆ 1, ರವಿವರ್ಮ ಪೋಸ್ಟುಕಾರ್ಡ್ 6, ಸುವಾಸನೆ ಅತ್ತರು ಬಿಲ್ಲೆ 1, ಗಂಧ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೋಚ್ 1.

ನಮ್ಮ ವಿಳಾಸ:— ಮ್ಯಾನೇಜರ್ ಧೈರ್ಯ ಲಕ್ಷ್ಮಿ ಅಂಡು ಕಂಪೆನಿ,

ನಂ. 3 ಇರುಲಪ್ಪನ್ ಬೀದಿ, ಮದ್ರಾಸು.

Printed & Published by V S Kamath at the Mangalore Trading Association's Sharada Press, Mangalore

Registered No. 405 M.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:--ವರುಷಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ 2—1—0.

ಪುಸ್ತಕ IX ಮಂಗಳೂರು ತಾ 23ನೇ ಎಪ್ರಿಲ್ ಶುಕ್ರವಾರ 1915. ಸಂಚಿಕೆ 17

The Universal Assurance Co., Ltd.
Head Office. 191, Bow Bazar Street, CALCUTTA

NOTICE.

It is hereby informed to all the Agents, the subscribers of the Company and the public in general that the existing Provident scheme having been declared unsound by the actuary to the Government of India for its various inconveniences, the company has decided not to accept any proposal under the said scheme, and the same has been abolished since 1st January 1915. All the old members are hereby requested to continue their policies and diplomas which will be governed by the old rules and the bonus be distributed according to the dividing system hence they need not be frightened.

For the convenience of the intending subscribers and the public in general a new scheme called "Cheap Insurance" under the scientific principles of the Ordinary Insurance scheme has been introduced. For further particulars please see the Company's seperate advertisement. (*Sd.*) **J. Sarkar**, *Secretary*

M. Laxman Rao Brothers,
Chief Agents, Udipi, S. C

ದಿ ಯುನಿವರ್ಸಲ್ ಎಸ್ಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಹೆಡ್ ಆಫೀಸು 191 ಬೊ ಬಜಾರ್ ಸ್ಟ್ರೀಟ್, ಕಲ್ಕತ್ತಾ.

ನೋಟೀಸು.

ಈ ಮೂಲಕ ಕಂಪೆನಿಯ ಮೆಂಬರರಿಗೂ ಸರ್ವ ಜನರಿಗೂ ತಿಳಿಯಪಡಿಸುವದೇನೆಂದರೆ:—ಈ ಕಂಪೆನಿಯ ಪ್ರೊವಿಡೆಂಟ ಫಂಡಿನ ಏರ್ಪಾಡನ್ನು ಅದರ ಬಗೆ ಬಗೆಯ ಅನಾನುಕೂಲತೆಯ ಕಾರಣದಿಂದ ಸರಕಾರದವರು ಈ ಏರ್ಪಾಡನ್ನು ಥಟ್ಟಿ ಇಲ್ಲದ್ದು ಎಂಬದಾಗಿ ತೀರ್ಮಾನಿಸಿರುವದರಿಂದ ಕಂಪೆನಿಯವರು ಪ್ರೊವಿಡೆಂಟ ಏರ್ಪಾಡು ಕ್ರಮದ ಮೇಲೆ ವಿಮೇದಾರರನ್ನು ಕಂಪೆನಿಗೆ ಸೇರಿಸುವದಿಲ್ಲ, ಮತ್ತು ಈ ಕ್ರಮವು 1915ನೇ ಇಸವಿ ಜನವರಿ ತಾ. 1ರಿಂದ ಕಂಪೆನಿಯಿಂದ ತೆಗೆದು ಹಾಕೋಣಾಗಿರುವದು. ಹಳೇ ಮೆಂಬರರ ತಮ್ಮ ಪೊಲಿಸಿ ಮತ್ತು ಡಿಪ್ಲೊಮಗಳು ಹಳೇ ರೂಲಿನ ಪ್ರಕಾರ ಅಧಿಕರಿಸಲ್ಪಟ್ಟು "ಬೊನಸ್" ಎಂಬ ಲಾಭೋಚಿತವು ಕ್ರಮ ಪ್ರಕಾರ ಹಂಚಲ್ಪಡುವದರಿಂದ ಹಳೇ ಮೆಂಬರರು ಭಯಪಡಲು ಕಾರಣವಿಲ್ಲವೆಂಬದಾಗಿ ಈ ಮೂಲಕ ವಿಜ್ಞಾಪಿಸೋಣಾಗಿದೆ.

ಕಂಪೆನಿಯ ಮೆಂಬರರಾಗಲು ಯೋಚಿಸಿರುವವರಿಗೂ ಜನಸಾಮಾನ್ಯರ ಬಗ್ಗೆಯೂ "ಚೀಪ್ ಇನ್ಶೂರೆನ್ಸ್" ಎಂಬ ಒಂದು ಹೊಸ ಕ್ರಮವು ಸರ್ವಸಾಧಾರಣವಾಗಿರುವ ಇನ್ಶೂರೆನ್ಸ್ ಕ್ರಮದ ಮೂಲಸೂತ್ರದ ಪ್ರಕಾರ ತೆರೆಯೋಣಾಗಿರುವದು. ಹೆಚ್ಚಿನ ಮಾಹಿತಿಯನ್ನು ಈ ಪತ್ರಿಕೆಯಲ್ಲಿ ಕಾಣುವ ಕಂಪೆನಿಯ ಪ್ರಕಟಣೆಯನ್ನು ಓದಿಕೊಂಡರೆ ತಿಳಿಯುವದು.

(*Sd.*) ಜೆ. ಸರ್ಕಾರ್, ಸೆಕ್ರೆಟರಿ.

ಎಮ್. ಲಕ್ಷ್ಮಣರಾವ್ ಬ್ರದರ್ಸ್, ಚೀಫ್ ಏಜಂಟ್, ಉಡುಪಿ, ದ.ಕ.

NOTICE.

Applications in the prescribed form for scholarships out of the Ammembal Subba Rao Pai Memorial Fund from deserving poor students of the Gowd Saraswath Brahmin community should reach the Secretary before the end of May 1915.

16th April 1915.

M MUKUNDA RAO,
Secretary.

ಈಗಲೇ ತಯಾರಾಗಿವೆ!

ಗ್ರಾಮ ಮುನ್ಸಿಫ ಕೋರ್ಟುಗಳಿಗೆ ಸಂಬಂಧಿಸಿದ ಫೋರ್ಮುಗಳು.

100ಕ್ಕೆ ಆಣೆ 6 ಮಾತ್ರ.

ಕುರಿಫಂಡಿನ ರಶೀದಿ		100ರ	ಪುಸ್ತಕ	1ಕ್ಕೆ	0—8—0
,,	,,	50ರ	,,	,,	0—4—0
ಇಂಗ್ಲೀಸು	,,	50ರ	,,	,,	0—8—0
,,	,,	25ರ	,,	,,	0—4—0
ಗೇಣಿ	,,	50ರ	,,	,,	0—6—0
,,	,,	25ರ	,,	,,	0—3—0
ಖಾಲಿ	,,	50ರ	,,	,,	0—4—0
,,	,,	25ರ	,,	,,	0—2—0
ಡೆಲಿವರಿ ಪುಸ್ತಕ 1ರ	.	.	.		0—8—0
ವಕಾಲತ್ ನಾಮೆ ವಗೈರೆ	.	.	100ಕ್ಕೆ		0—10—0.
ಗೇಣಿಚೀಟು ಫೋರ್ಮು	.	.	,,		0-12—0.
ಪರ್ಮಿಟು ಫೋರ್ಮು	.	.	,,		0-12—0.

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಬಹುಮಾನ! ಬಹುಮಾನ!!

25 ಸಾವಿರ ರೂಪಾಯಿಗಳು ಹಂಚಲ್ಪಡುವವು.

ಸರ್ವಜನ ಮನೋಲ್ಲಾಸಿನಿ ಅಂಡ್ ಕೋ.

ಬಳ್ಳಾರಿ, ಇವರ ನಾರಸಿಂಹಚೂರ್ಣವು.

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಆರೋಗ್ಯಭಾಗ್ಯವನ್ನು ಬಯಸುತ್ತಾನೆ ಎಂಬುವದು ಸಹಜವಾದುದಷ್ಟೆ? ಆದರೆ ಅನೇಕ ದುರ್ವರ್ತನೆಗಳಿಂದ ಮೂಲಕಾರಣವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲವು ವಿಧ ರೋಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನು ಕಣ್ಣಾರೆ ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ ಅನೇಕ ವೈದ್ಯರು ಹಲವು ವಿಧ ಔಷಧಗಳನ್ನು ವಿಶೇಷವಾದ ಬೆಲೆಯನ್ನಿಟ್ಟು ವಿಕ್ರಯಿಸಿದರೂ ಪ್ರಯೋಜನವು ಮಾತ್ರ ಕಡಿಮೆಯಾಗುತ್ತಿರುವದು ವಿಷಾದಕರವಾಗಿರುವದು. ಈ ಲೋಪವನ್ನು ಹೋಗಲಾಡಿಸುವದಕ್ಕಾಗಿ "ನಾರಸಿಂಹಚೂರ್ಣವು" ಎಂಬ ಒಂದಾನೊಂದು ಸಶಾಸ್ತ್ರೀಯವಾದ ಚೂರ್ಣವನ್ನು ಸಿದ್ಧಪಡಿಸಿರುವೆವು. ಈ ಚೂರ್ಣವನ್ನು ಒಬ್ಬ ಮನುಷ್ಯನು ೧೪ ದಿನಗಳು ಸೇವಿಸಿದರೆ ಮುದುಕತನ, ಅನೇಕ ತರಹೆಯ ಮೇಹರೋಗಗಳು, ನಾಂಡುರೋಗ, ಪೀನಸ, ಹಡಿನೆಂಟು ಬಗೆಯ ಕುಷ್ಠಗಳು, ಎಂಟು ವಿಧ ಉದರ ರೋಗಗಳು, ಭಗಂದರವು, ಮೂತ್ರಕೃಚ್ಛ್ರವು, ಸ್ವಪ್ನಸ್ಖಲಿತವು, ಕಾಮಿಲೆ, ಕ್ಷಯವು, ಮಹಾಶ್ವಾಸಗಳು, ದಾರುಣವಾದ ಐದು ಬಗೆಯ ಕಾಸಗಳು, ಎಂಬತ್ತು ವಿಧಗಳಾದ ವಾತರೋಗಗಳು, ನಲವತ್ತು ಬಗೆಯ ಪಿತ್ತಗಳು, ಇಪ್ಪತ್ತು ಬಗೆಯ ಶ್ಲೇಷ್ಮರೋಗಗಳು, ದ್ವಂದ್ವಸನ್ನಿಪಾತ ರೋಗಗಳು, ಮಲಬದ್ಧರೋಗಗಳು ಇವೇ ಮುಂತಾದ ಸಮಸ್ತ ರೋಗಗಳು ಶಿವನಿಂದ ಗಿಡಗಳು ನಾಶವಾದಂತೆ ನಾಶವಾಗುತ್ತವೆ. ಇದರ ಸೇವನೆಯಿಂದ ಚಿನ್ನದಂಥಾ ಕಾಂತಿಯು, ಸಿಂಹದಂತೆ ಪರಾಕ್ರಮವು, ಕುದುರೆಯಂಥಾ ವೇಗವು, ಹಕ್ಕಿಗಳ ದೃಷ್ಟಿಯಂತೆ ದೃಷ್ಟಿಯೂ ಉಂಟಾಗುವದು. ಇದರಲ್ಲಿ ಯಾವ ವಿಷವಾದ ರಸಗಳೂ ಮಿಶ್ರವಾಗಿ ಇಲ್ಲ. ಇನ್ನಾವ ದೋಷಗಳೂ ಇಲ್ಲ. ನಿರ್ದುಷ್ಟವಾದ್ದ ಪಕ್ವಾ ವನಸ್ಪತಿಗಳಿಂದಲೇ ಸಿದ್ಧಮಾಡಿದ ದಿಶ್ಯವಾದ ಔಷಧ. ಅನೇಕ ಪಂಡಿತರು, ಧನಿಕರು, ಸರ್ಟಿಫಿಕೇಟುಗಳನ್ನು ಕೊಟ್ಟಿರುವರು.

14 ದಿನ ಉಪಯೋಗಕ್ಕೆ ಬರುವ ಡಬ್ಬಿ ಒಂದಕ್ಕೆ ಬೆಲೆ ರೂಪಾಯಿ 1—0—0

ಬಹುಮಾನಗಳನ್ನು ಹಂಚುವ ವಿಧಾನ.

1 ಡಜನ್ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ರೂ. 10000 6 ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ರೂ 6000 3 ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ರೂ 4000. 2 ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ರೂ. 3000 1 ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ರೂ 2000

1914ನೇ ಜುಲೈ 1ನೇ ತೇದಿ ಮೊದಲು 1915ನೇ ಜುಲೈ 1ನೇ ತೇದಿವರೆಗೆ ಈ ಔಷಧವು ಒಂದು ಲಕ್ಷ ಡಬ್ಬಿಗಳು ಖರ್ಚಾದ ಕೂಡಲೇ ಈ ಲಕ್ಷವನ್ನು ಅಲ್ಲಿಗೆ ಸಂಕ್ಷೇಪಮಾಡಿ ಬಹುಮಾನಗಳನ್ನು ಹಂಚುತ್ತೇವೆ. ಒಂದು ಪಕ್ಷದಲ್ಲಿ ಮೇಲಣ ನಿಯಮಿತ ದಿನಕ್ಕೆ ಸರಿಯಾಗಿ ಒಂದು ಲಕ್ಷ ಡಬ್ಬಿಗಳು ಖರ್ಚಾಗದಿದ್ದರೆ ಮತ್ತು ಮಾಯಿದೆಯನ್ನು ಹೆಚ್ಚಿಸದೆ ಎಷ್ಟು ಡಬ್ಬಿಗಳು ಖರ್ಚಾಗಿರುತ್ತವೆಯೋ ಅಷ್ಟಕ್ಕೆ ದಾಮಾಷಾ ಪ್ರಕಾರ ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ. ಪ್ರತಿಯೊಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯೌಷಧವನ್ನು ಪಡೆಯುವದಲ್ಲದೆ ಬಹುಮಾನವನ್ನು ಸಹಾ ಹೊಂದುವದಕ್ಕೆ ಅರ್ಹನಾಗುತ್ತಾನೆ. ಈ ವಿಷಯದಲ್ಲಿ ತಿಲಮಾತ್ರವಾದರೂ ಸಂಶಯವಿಲ್ಲ. ಬಹುಮಾನದ ಮೊತ್ತವನ್ನು ನಿಷ್ಪಕ್ಷಪಾತವಾಗಿ ಒಂದೇಸಮನಾಗಿ ಹಂಚಲ್ಪಡುವವು. ಇದು ಮೋಸವಲ್ಲ, ಲಾಟರಿಯಲ್ಲ, ಯಾವ ವಿಧವಾದ ಕುಹಕತನವೂ ಇಲ್ಲ. ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ. ಅಸೂಯಾಂಧರ ಮಾತುಗಳಿಗೆ ಕಿವಿಗೊಡಲಾಗದು. ಜಾಗ್ರತೆಯಾಗಿ ತರಿಸಿಕೊಳ್ಳಿರಿ. ಔಷಧಗುಣವನ್ನು ಪರೀಕ್ಷಿಸಿರಿ. ಅಪೇಕ್ಷಕರು ಈ ಕೆಳಗಣ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಿರಿ.

ಇದರ ಅನುಪಾನಪತ್ರಿಕೆಯನ್ನೂ ಬಹುಮಾನದ ಟಿಕೇಟನ್ನೂ ಡಬ್ಬಿಯ ಸಂಗಡ ಕಳುಹಿಸುವೆವು. ನಮ್ಮ ಕಂಪೆನಿಯ ಕಾಶಿ ವಿಶ್ವನಾಥ ಮಾರ್ಕು ಇಲ್ಲದ ಡಬ್ಬಿಯನ್ನು ತೆಗೆದುಕೊಳ್ಳಲಾಗದು.

ನಮ್ಮ ಅಡ್ರೆಸ್ಸು: —

ಸರ್ವಜನ ಮನೋಲ್ಲಾಸಿನಿ ಅಂಡ್ ಕೋ.

ಬಳ್ಳಾರಿ.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡೆದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ

ಊದಬತ್ತಿಗಳು 4 ರೂ ತೂಕದ ಶೇರು 1ಕ್ಕೆ ರೂ, 12-0-0, 5-0-0, 3-0-0. 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0-0, 1—0—0, 0—12—0, 0—6—0.

ಸುಗಂಧಿ ಕಾಪುರ 1ಕ್ಕೆ 0—1—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಸುವಾಸನೇ ಸುಣ್ಣ** ಶೀಸೆ 1ಕ್ಕೆ 0-2-0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಒಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

೧

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಶೀತಜ್ವರ, ಜ್ವರ, ಹೊಟ್ಟೇ ಶೂಲೆ, ಸಂಧುಗಳ ನೋವು, ಮೈ ಕಾಲು ಶೊಡೆತ (ಬಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಾಯಿ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಹೆರಿಗೆ ಶೂಲೆ, ಮಕ್ಕಳ ಎರವು, ಜ್ವರ, ನಡ್ಡುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ. 220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, ೧ ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ.



೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವಿನಿಯಾಗಿದೆ. ಕ್ಷಣಮಾತ್ರದಿಂದ ತೋರಿದಾಗಲೂ ಆಶ್ಚರ್ಯಕರವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಕೂಡಲೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಕೇಳಾಡಬೇಡಿ! ಒಂದೇ ಒಂದು ಬುದ್ಧಿಯು ನಿಮ್ಮಲ್ಲಿರಲಿ! ಇತರೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ...

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ

ಮೈಸೂರು.

Box Locks.



Padlocks.



ಧಾರಣೆ ಸುಲಭ! ಆಲಿಗರ್ ಬೀಗಗಳು. ಧಾರಣೆ ಸುಲಭ!

ಭದ್ರವಾಗಿಯೂ, ಭಾರವಾಗಿಯೂ ಇರುವುದು. ಒಂದರ ಬೀಗದಕ್ಕೆ ಮತ್ತೊಂದಕ್ಕೆ ಆಗುವ ದಿಲ್ಲ. ನೋಡುವುದಕ್ಕೆ ಅಂದವಾಗಿಯೂ ಇರುವುದು. ಇದೇ ಮಾದರಿ ಬೀಗಗಳನ್ನು ಇಂಜಿನಿಯರ್ ಇಲಾಖೆಗಳಿಗೂ, ಬ್ಯಾಂಕುಗಳಿಗೂ, ಸರಕಾರಿ ಆಫೀಸುಗಳಿಗೂ ಸಪ್ಲೈಮಾಡಿದೆ.

ನಾಲ್ಕು ಚಕ್ರಗಳಿರುವ ಬೀಗಗಳು.

ನಂಬ್ರ	1	2	3	4	5
	0–12–0	015–0	1–4–0	1–10–0	.....

ಆರು ಚಕ್ರಗಳಿರುವ ಬೀಗಗಳು.

1–2–0 1|8–0 2–4–0 3–0–0 3–8–0

ಲ್ಲರ್ ಬೀಗಗಳು.

–04–00–5–0ವಿ 0–6–0 0–8–0 0–10–0

ಟ್ರಂಕುಗಳಿಗೆ ಹಾಕುವ ಕೊಂಡಿ ಬಗ್ಗಿಸಿರುವ ಬೀಗ ೧ಕ್ಕೆ 0–13–0

೩, ೪, ೫ನೇ ನಂಬರು ಬೀಗಗಳನ್ನು ಬಾಗಲುಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು. ಏಜೆಂಟರುಗಳಿಗೆ ಕಮೀಷನ್ ದೊರೆಯುತ್ತೆ. ಹಾಸಲು ಪ್ರತ್ಯೇಕ.

ಮರದ ಪೆಟ್ಟಿಗೆಗಳಿಗೂ, ಮೇಜುಗಳಿಗೂ, ಬೀರೂಗಳಿಗೂ ಹಾಕುವ ೪ ಚಕ್ರಗಳಿರುವ ಬೀಗಗಳು ೧ಕ್ಕೆ 1–8–0, 1–12–0.

ವಿಳಾಸ:— ಎಚ್. ಎನ್. ರಾವ್ ಅಂಡ್ ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶಾಶ್ವತವಾದ ಆರೋಗ್ಯವನ್ನು
ಹೊಂದುವದಕ್ಕೆ ಸುಲಭವಾದ ಮಾರ್ಗವು.

ಮದನಮಂಜರಿ ಮಾತ್ರೆಗಳು

ಉಪಯೋಗಿಸುವದೇ ಆಗಿರುವದು. ಈ ಮಾತ್ರೆಗಳು ಅಜೀರ್ಣವು ಮಲಬಂಧ, ಮನೋವ್ಯಥೆ, ಜ್ಞಾಪಕಶಕ್ತಿ ಇಲ್ಲದಿರುವದು, ನರಗಳ ಬಲ ಕ್ಷೀಣತೆ, ಅಶಕ್ತಿ, ಸ್ವಪ್ನಸ್ಖಲಿತ, ಬಹುಮೂತ್ರ, ಮೂತ್ರಕೋಶ ಸಂಬಂಧವಾದ ವ್ಯಾಧಿಗಳು, ನಪುಂಸಕತ್ವ ಮುಂತಾದ ವ್ಯಾಧಿಗಳನ್ನು ಶೀಘ್ರದಲ್ಲಿಯೇ ಬೇರು ಸಹಿತವು ಕಿತ್ತು ಹಾಕಿ ಪುರುಷರಿಗೆ ಸಂತತ ಪುರುಷತ್ವವನ್ನು ಕೊಡುವವು ಇದು ಸಾಟಿಯಿಲ್ಲದ ಟಾನಿಕ್ಕು ಔಷಧಿಯಾಗಿರುತ್ತದೆ. ಕಳೆದ 25 ವರುಷ ಕಾಲದಲ್ಲಿ ಸಾವಿರಾರು ರೋಗಿಗಳನ್ನು ಸ್ವಸ್ಥಪಡಿಸಿದೆ. ನಿಮ್ಮನ್ನು ಕೂಡ ಸ್ವಸ್ಥ ಮಾಡುವದು. 40 ಮಾತ್ರೆಗಳುಳ್ಳ ಡಬ್ಬಿ ಕ್ರಯ ರೂ. 1—0—0.

ಉಚಿತ ಕ್ರಯವು ಇಲ್ಲ ಹಾಸಲು ಇಲ್ಲ

144 ಪುಟಗಳುಳ್ಳ ವೈದ್ಯಸಾರಸಂಗ್ರಹವಾದ

ವೈದ್ಯವಿದ್ಯ

ಪುಸ್ತಕದಲ್ಲಿ ಶಾಶ್ವತವಾದ ಆರೋಗ್ಯವನ್ನು ಪಡೆಯಲು ಅತ್ಯವಶ್ಯವಾದ ವಿಷಯಗಳು ಭರಿತವಾಗಿವೆ. ನಿಮ್ಮ ವಿಳಾಸವನ್ನು ತಿಳಿಸಿದರೆ ನಿಮಗೆ ಒಂದು ಪ್ರತಿ ಉಚಿತವಾಗಿ ಕಳುಹಿಸಲ್ಪಡುವದು.

ರಾಜವೈದ್ಯ ನಾರಾಯಣಜಿ ಕೇಶವಜಿ
20 ಚೀನಾ ಬಜಾರ್ ರೋಡ್,
ಮದರಾಸು.

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ತೆಗೆಯಲ್ಪಟ್ಟದ್ದು. ಇದರಿಂದ ದೊರಕತಕ್ಕ ಲಾಭವಾದರೋ ಇದರ ಲಿಯ ಎಣ್ಣೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಚ್ಚ ಕೊಡಲೀವರ್ ಎಣ್ಣೆಯೂ ಅದರಿಂ ತೆಗೆಯಲ್ಪಟ್ಟ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗದಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾ ಮಿಶ್ರಣವು ವೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದೊ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತಮ ಫಲವು ಆಶ್ಚರ್ಯಕರವಾಗಿದೆ. ಶ್ವಾಸಕಾಸ ಕ್ಷಯ ಯಾವ ತರ್ಹ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವೆಂದೋ ಅಂಥಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿ ಬೇಕಾಗುವದೋ ಆಗ್ಗೆ ವೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3–4–0. ಅರ್ಧ ಬಾಟ್ಲಿಗೆ 1–12–0.

ದಿ. ಊಲನ್ ಮಾರ್ಟ್. ಮಂಗಳೂರು,
ದಕ್ಷಿಣ ಕನ್ನಡಾ

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧. ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರಿತವಾಗಿ ಗುಣಪಡಿಸುವದು. 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0.

೨. ಶತಮೂಲಿಕಾ ಅಮರಸಂಜೀವನಿ—ಈ ಟೋನಿಕ್ ದ್ರಾವಕವು ನಿಶ್ಶಕ್ತರಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ. ಬಾಟ್ಲು 1ಕ್ಕೆ 1—0—0.

೩. ಬಾಲಸಂಜೀವನಿ—ಮಧುರ ಟೋನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳಗಿಸುತ್ತದೆ. ಬಾಟ್ಲಿ 1ಕ್ಕೆ 0—12—0.

೪. ವಸಂತ ಕುಸುಮಾಕರ.—ಈ ಸುವಾಸಿತ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ. ಬಾಟ್ಲು 1ಕ್ಕೆ 1—0—0

೫. ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸ್ಸಾಧ್ಯ ವ್ರಣಗಳನ್ನು 7-8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4—0—0.

೬. ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳು, ಇಲಿ ಇತ್ಯಾದಿ ಸರ್ವ ಕಠಿಣ ವಿಷಗಳಿಗೆ ಸಂಜೀವನವಾಗಿರುತ್ತದೆ. ಅನುಭವಸಿದ್ಧ 2—0—0

೭. ಆನಂದವನವಿಲಾಸ—ಇದು ಡಯಾಬಿಟಿಸ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5—0—0.

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಕಲ್ಪ ಭೈರಾಗಿ ಪ್ರಯೋಗಗಳಿಂದ ತಯಾರಿಸಿದ ಪೌಷ್ಟರ ಮಾತ್ರೆಗಳು, ಲೇಹ ಚೂರ್ಣಗಳು, ತೈಲ ಘೃತಗಳು, ಆಸವಾರಿಷ್ಟಗಳೂ ತುಂಬಾ ಇರುತ್ತವೆ. ಕ್ರಯವಿಲ್ಲದ ನಮ್ಮ ಕೆಟಲಗನ್ನು ತರಿಸಿಕೊಳ್ಳಿರಿ. ಏಜಂಟರು ಬೇಕು. ಹೆಚ್ಚು ಡಿಸ್‌ಕೌಂಟ್ ಸಿಕ್ಕುವದು,

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

150 ಪುಟಗಳ ಪುಸ್ತಕವು.

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರೆಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ
ನಮ್ಮ ಏಜಂಟರು:— 1. ಮೆಸ್ಸರ್ಸ್. ಕಥಯೆಲ್ ಎಡ್ ಕೊ., ದ್ವಿಟೋದಿಲ್ಲಿಂಗ್
2. ಜುಬಿಲಿ ಸ್ಟೋರ್ ಬಜಾರ್, ಬೆಂಗಳೂರು. ಮಂಗಳೂರು

ESTABLISHED JULY 1906.

THE CANARA BANK, LIMITED, MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	218,800—0—0
Paid up Capital	193,800—0—0
Deposits	441,934—0—11
Reserve Fund	33,500—0—0

Besides the uncalled capital of Rs. 25,000/- 25% of the net profits are added annually to the Reserve Fund. Rs. 21,685/ have been invested in Government Paper of the face value of Rs 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/-and above in multiples of Rs. 5/ received for 3, 6, 12 and 24 months @ 4, 4½, 5 and 5½%. respectively at the discretion of the managing committee

Short-notice Deposits requiring one weeks notice of withdrawal after one month received @ 2½%. per annum at the discretion of the managing committee

Current Deposit Account opened free of charge

Savings Bank Account opened for any sum not less than 4 As and multiples thereof and interest paid @ 4½%.

Loans granted on proper securities and pledges

Sealed Parcels for safe custody received on a moderate charge.

Canara Bank Ltd.,
Mangalore, 1st. April 1915.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು ,,	225,000—0—0
ಪ್ರತಿಜ್ಞಾತ ಮೂಲ ಧನವು ,,	218,800—0—0
ಆಗತ ಮೂಲ ದನವು ,,	193,800—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	441,931—0-11
ರಕ್ಷಿತ ಧನವು	33,500—0—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯು ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಪಾಲುಗಳಿಂದ ಕೇಳಲ್ಪಡದಿರುವ ರೂ 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯು ಮೇಲೆ ಮತ್ತು ಒಡವೆ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿ ಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯತಕ್ಕುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ, ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯುಮುಖ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ಪ್ರಜಾವಂಶವರ್ಣನ, ಸೂರ್ಯವಂಶಚರಿತ್ರೆ ನಿಮಿರಾಯನ ಶರೀರತ್ಯಾಗ, ಜನಕವಂಶಕರ್ಮಾತಿಚರಿತ್ರೆ, ಅಂಬರೀಷನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸ್ತಾಪವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲ್ಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರಿಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡ ಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. . ಹೀಗೆ ಸ ಈ ಗ್ರಂಥವು ಪ್ರತಿಯೊಬ್ಬರಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ೧ಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—೩—೦.

ತಮ್ಮ ವಿಳಾಸ:— ಎಂ. ದೇಶಾಯಿ ಕಂಪೆನಿ,
ಕರ್ನಾಟಕ ಬುಕ್ ಡಿಪೋ ಧಾರವಾಡ.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 23ನೇ ಎಪ್ರಿಲ್ 1915

ಹರಿದ್ವಾರದಲ್ಲಿ ಕೂಡಿದ ಹಿಂದೂ ಮಹಾಸಭೆಯು

ಹರಿದ್ವಾರದಲ್ಲಿ ಹಿಂದೂಗಳ ಮಹಾ ಸಭೆಯು ಕೂಡಿತೆಂಬ ವರ್ತಮಾನವನ್ನು ಓದಿದ ಹಿಂದೂಗಳೆಲ್ಲವರಲ್ಲಿಯೂ ಈ ಸಭೆಯ ಕಾರ್ಯ ವೃತ್ತಾಂತವು ಏನೆಂಬುದಾಗಿ ತಿಳಕೊಳ್ಳುವ ಕುತೂಹಲವು ವಾಸ್ತವಿಕವಾಗಿದೆ. ಈ ಸಭೆಯು ಸಕಲ ಹಿಂದೂ ಸಮಾಜದ ಏಳಿಗೆಯು ಕಾರ್ಯತಃ ಶೀಘ್ರದಲ್ಲಿ ನೆರವೇರಬೇಕು ದೆಂಬ ಕೋರಿಕೆಗೆ ಸಭಾ ವೃತ್ತಾಂತದಲ್ಲಿ ವಿಶೇಷ ಆಸ್ಪದವು ತೋರಿಬರುವುದಿಲ್ಲವಾದರೂ ಉತ್ತರ ಪ್ರಾಂತ್ಯದಲ್ಲಿಯ ಮಹನೀಯರ ಯೋಚನೆಯು ನಮ್ಮೆಲ್ಲವರ ಮೋಕ್ಷಕ್ಕೆ ಕಾರಣವಾಗಿ ಹೇಗಿರುವುದೆಂಬುದನ್ನು ತಿಳಕೊಳ್ಳಬಹುದು. ಆದ್ದರಿಂದ ಮಹಾ ಸಭೆಯ ಅಧ್ಯಕ್ಷರು ತಮ್ಮ ಭಾಷಣ ಮೂಲಕ ಏನು ಅಪ್ಪಣೆಕೊಟ್ಟಿರುವರು, ಸಭೆಯಲ್ಲಿ ಮಂಜೂರಾದ ನಿರ್ಣಯಗಳೇನೆಂಬುದನ್ನು ಪರಿಶೀಲಿಸಿದರೆ ಉತ್ತರ ಪ್ರಾಂತ್ಯಗಳಲ್ಲಿರುವ ನಮ್ಮ ಭ್ರಾತೃವರ್ಗದಲ್ಲಿ ಹಲವರ ಮನೋಭಾವವೇನೆಂಬುದು ವ್ಯಕ್ತವಾಗುವುದು.

ಹಿಂದೂಗಳು ದಿನೇ ದಿನೇ ಕ್ಷಯಿಸುತ್ತಿರುವರೆಂಬ ವಿಷಯವು ಸಭೆಯವರ ಲಕ್ಷ್ಯಕ್ಕೆ ಬಂದಿದೆ. ಸಭಾಧ್ಯಕ್ಷ ಕಾಶಿಂಬಜಾರಿನ ಮಹಾರಾಜರಾದ ಮಣೀಂದ್ರ ಚಂದ್ರನಂದಿಯವರ ಭಾಷಣದಲ್ಲಿ ಇದರ ಪ್ರಸ್ತಾಪವಿರುವುದು. ಹಿಂದೂಗಳಲ್ಲಿ ಕೀಳು ಜಾತಿಯ ನಿರಾಶ್ರಿತರನ್ನು ಆದರಿಸಬೇಕು, ಬೌದ್ಧ ಬ್ರಹ್ಮಸಮಾಜ, ಸಿಕ್ ಮತ್ತು ಜೈನ ಮತಸ್ಥರನ್ನು ಹಿಂದೂಗಳೆಂತ ಗಣಿಸಬೇಕು, ಎಂಬೀ ಸೂಚನೆಗಳು ಸಭೆಯ ಉದ್ದೇಶಗಳಲ್ಲಿಯೂ, ಅಧ್ಯಕ್ಷರ ಭಾಷಣದಲ್ಲಿಯೂ ಇವೆ. ಹಿಂದೂ ಮತವು ಕ್ಷಯಿಸಿ ಹೋಗುವದೆಂದು ತಾನು ಎಂದೂ ಅಂಜುವದಿಲ್ಲವೆಂತಲೂ ಅನಾದಿಕಾಲದಿಂದ ನಾನಾ ವಿಧದ ದುರವಸ್ಥೆಯು ಹಿಂದೂಗಳಿಗೆ ಪ್ರಾಪ್ತವಾದರೂ ಹಿಂದೂ ಸಮಾಜವು ಇನ್ನೂ ಸಜೀವಸ್ಥಿತಿಯಲ್ಲಿರುವದೆಂದೂ ಅಧ್ಯಕ್ಷರು ಹೇಳಿರುವರು. ಕ್ರೈಸ್ತ ಮತ್ತು ಮಹಮ್ಮದೀಯರ ಮತವನ್ನು ಸೇರಿದ ಹಿಂದೂಗಳನ್ನು ಪ್ರಾಯಶ್ಚಿತ್ತಗಳ ಮೂಲಕ ಆರ್ಯ ಸಮಾಜದವರು ತಮ್ಮ ಸಮಾಜಕ್ಕೆ ಸೇರಿಸಿಕೊಳ್ಳುವ ಹಿಂದೂ ಸಮಾಜ ರಕ್ಷಣೆಯ ಕೆಲಸವನ್ನು ಈ ಸಮಾಜದವರು ಸ್ವೀಕರಿಸರು. ಹಿಂದೂ ಮಹಾ ಸಭೆಯವರ ಈ ನಿರ್ಧಾರವು ಈಗಿನ ಕಾಲದಲ್ಲಿ ಯುಕ್ತ ತೋರದು. ಕ್ಷಾಮಗಳಿಂದಲೂ, ಮಾರಿ ಬೇನೆಗಳಿಂದಲೂ ಅನಾಥರಾಗಿ ಹೋದಂಥವರು ಹೊಟ್ಟೆ ಹಸಿವನ್ನು ತೃಪ್ತಿ ಪಡಿಸುವ ಬಗ್ಗೆ ಅನ್ಯಮತವನ್ನವಲಂಬಿಸಿದರೆ ಇಂಥಾ ನಿರ್ದೋಷಿಗಳನ್ನು ಪುನಹ ಹಿಂದೂ ಸಮಾಜಕ್ಕೆ ಸೇರಿಸಿಕೊಳ್ಳುವುದರಿಂದ ಆಕ್ಷೇಪವೇನು? ಸಮಾಜ ರಕ್ಷಣೆಯ ಈ ಹಂಚಿಕೆಯನ್ನು ಬಿಟ್ಟುಬಿಟ್ಟರೆ ಹಿಂದೂ ಸಮಾಜದವರ ಸಂಖ್ಯೆಯು ತಗ್ಗಲು ಬಿಡದಂತೆ ಮತ್ಯಾವ ಸಾಧನವಿರುವುದು? ಹಿಂದಿನ ಖಾನೆಶುಮಾರಿ ಲೆಖ್ಖದಿಂದ ಪ್ರತಿ ವರುಷದಲ್ಲಿಯೂ ಶುಮಾರು ೬೦ ಸಾವಿರದ ಪ್ರಕಾರ ಕ್ಷೀಣವಾಗುತ್ತ ಬರುವ ಹಿಂದೂ ಸಮಾಜದ ದುರ್ದಶೆಯನ್ನು ನೀಗಲು ಬೇಕಾದ ಬಲವಾದ ಸಾಧನದ ಪ್ರಸ್ತಾಪವು ಅಧ್ಯಕ್ಷರ ಭಾಷಣದಲ್ಲಾಗಲಿ ಸಭಾ ನಿರ್ಣಯಗಳಲ್ಲಾಗಲಿ ತೋರಿ ಬರುವದಿಲ್ಲ. ಮತಸಂಸ್ಥೆಗಳಾದ ದೇವಸ್ಥಾನ ಗುರುಮಠಗಳಲ್ಲಾಗುವ ದುರ್ವ್ಯಯವನ್ನು ನಿಲ್ಲಿಸುವ ಬಗ್ಗೆ ಪ್ರಜಾ ಮುಂದಾಳುಗಳು ಶ್ರೇಷ್ಠ ನ್ಯಾಯನಿರ್ಮಾಣ ಸಭೆಯ ಮುಂದೆ ತಂದು, ಬಿದ್ದು ಹೋದಂಥಾ ಕಾನೂನುಮಸೂದೆಯು ಅಗತ್ಯವಲ್ಲವೆಂಬ ಅಭಿಪ್ರಾಯವು ಅಧ್ಯಕ್ಷರ ಭಾಷಣದಲ್ಲಿ ವ್ಯಕ್ತವಾಗುತ್ತದೆ. ನಮ್ಮ ಧರ್ಮಸಂಸ್ಥೆಗಳ ವ್ಯವಸ್ಥೆಯು ನಮ್ಮಿಂದಲೇ ನೈಸರ್ಗಿಕವಾಗಿ ಆಗಬೇಕು ವಿನಹ ಈ ಬಗ್ಗೆ ಕಾನೂನು ರಚಿಸಿ ಪ್ರಯೋಜನವಿಲ್ಲವೆಂತ ಅಧ್ಯಕ್ಷರ ಅಭಿಪ್ರಾಯವಾಗಿದೆ. ಇದು ಸಮಾಧಾನಕರವೆಂತ ಕಾಣಬರುವದಿಲ್ಲ.

ಸಭೆಯಲ್ಲಿ ಮಂಜೂರಾದ ನಿರ್ಣಯಗಳು ಬಹಳವಾಗಿದೆ. ದೇಶದ ಅಭ್ಯುದಯಕ್ಕಾಗಿ ಪ್ರಕೃತ ವಾದಿಸಲ್ಪಡುವ ವಿಷಯಗಳೆಲ್ಲವೂ ಈ ನಿರ್ಣಯಗಳಲ್ಲಿರುವವು. ನಿರ್ಣಯಗಳನ್ನು ಕಾರ್ಯತಃ ಸಾಧಿಸುವ ಬಗೆಯು ಮಾತ್ರ ಈ ನಿರ್ಣಯಗಳ ರಾಶಿಯಲ್ಲಿ ಅಡಗಿ ಹೋಗಿರುವುದು. ಹಿಂದೂಗಳಿರುವ ಎಲ್ಲಾ ಪ್ರಾಂತ್ಯಗಳಲ್ಲಿ ಉಪಸಭೆಗಳನ್ನು ಸ್ಥಾಪಿಸಬೇಕೆಂದೂ ಡಿಲ್ಲಿ ಪಟ್ಟಣದಲ್ಲಿ ಸಭೆಯ ಮುಖ್ಯ ಕಾರ್ಯಸ್ಥಾನವನ್ನು ಇರಗೊಡಿಸಬೇಕೆಂದೂ ನಿರ್ಣಯಿಸಿದ್ದಾರೆ. ಈ ಸಭೆಯ ಚಂದಾದಾರರಾಗಬೇಕಾದರೆ ವರ್ಷಕ್ಕೆ ರೂ ೬ರ ಪ್ರಕಾರ ಚಂದಾಹಣ ಕೊಡಬೇಕು. ೨೧ ವರುಷ ಪ್ರಾಯಕ್ಕೆ ದಾಟಿದ ಹಿಂದುಗಳು ಮೆಂಬರರಾಗಿ ಸೇರಬಹುದು. ಬಹುಮಾನಪಟ್ಟ ಸುರೇಂದ್ರನಾಥ ಬೆನರ್ಜಿ, ಸರ್ ಗುರು ದಾಸ ಬೆನರ್ಜಿ, ಮದನಮೋಹನ ಮಾಲವ್ಯ, ಸರ್ ನಾರಾಯಣ ಗಣೇಶ ಚಂದಾವರಕಾರ್ ಮೊದಲಾದವರನ್ನು ಲೌಕಿಕರಿಂದಲೂ, ಶಂಕರಾಚಾರ್ಯ ಮಠದ ನಾಲ್ವರು ಮಠಾಧಿಪತಿಗಳನ್ನು ವೈದಿಕರಿಂದಲೂ ಕಾರ್ಯನಿರ್ವಾಹಕ ಸಭೆಯ ಮೆಂಬರನ್ನಾಗಿ ಆರಿಸಿರುವರು.

ಈರೀತಿ ಎರಡು ದಿನಗಳಲ್ಲಿ ಸಭಾಕಾರ್ಯವು ತೀರಿದೆ. ಇನ್ನು ಸಭೆಯ ಬಗ್ಗೆ ಹನ್ನೆರಡು ತಿಂಗಳ ಕಾಲವೂ ಕೆಲಸಮಾಡುವ ಮುಂದಾಳುಗಳು ಯಾರೆಂತ ಗೊತ್ತು ಮಾಡಿದ್ದು ಸಭಾವೃತ್ತಾಂತದಲ್ಲಿ ಕಂಡುಬರುವದಿಲ್ಲ.

ಉತ್ತರ ಮಲೆಬಾರದಲ್ಲಿಯ ಗೌಡಸಾರಸ್ವತರು

ಉತ್ತರಮಲೆಬಾರಿನ ಇತರ ಪ್ರಾಂತ್ಯಗಳಿಗಿಂತ ತಲಚೇರಿಯಲ್ಲಿ ಗೌಡಸಾರಸ್ವತರು ಹೆಚ್ಚು ಇದ್ದಾರೆ. ಇವರಲ್ಲಿ ವಿದ್ಯಾವಂತರು ಕೆಲವರು ಕೂಡಿಕೊಂಡು ಏಳು ವರುಷಗಳ ಹಿಂದೆ ಗೌಡಸಾರಸ್ವತ 'ಲಿಟರರಿ' ಯುನಿಯನ್ ಎಂಬ ಸಂಘವನ್ನು ಸ್ಥಾಪಿಸಿರುವರು. ಸಂಘದ ಉದ್ದೇಶವು ಅದರ ಮೆಂಬರರಲ್ಲಿ ಬುದ್ಧಿವಿಕಾಸವನ್ನು ಉಂಟುಮಾಡಿ ಜಾತಿಯ ಇತರ ಅಭಿವೃದ್ಧಿಯ ಸಾಧನೆಯನ್ನು ಮಾಡುವದಾಗಿರುತ್ತದೆ. ಕಳದ ಏಳು ವರುಷಗಳಿಂದ ಮಂಗಳೂರಿನ ವಿದ್ಯಾವಂತರಲ್ಲಿ ಒಬ್ಬರು ಉಪನ್ಯಾಸಕರಾಗಿಯೂ ಮತ್ತೊಬ್ಬರು ಅಧ್ಯಕ್ಷರಾಗಿಯೂ ಹೋಗಿ ಆ ಸಂಘದ ವಾರ್ಷಿಕೋತ್ಸವವನ್ನು ನೆರವೇರಿಸಿ ಕೊಡುವುದು ವಾಡಿಕೆಯಾಗಿರುವುದು. ಏಳನೇ ವರುಷದ ವರ್ಧಂತಿಯು ಕಣ್ಣಾನೂರಿನ ಡಿಸ್ಟ್ರಿಕ್ಟ್ ಮುನ್ಸೀಫರಾಗಿರುವ ಮ. ರಾ. ರಾ. ಮುಲ್ಕಿ ನರಸಿಂಗರಾವ್, ಬಿ. ಎ., ಎಮ್. ಎಲ್. ಇವರ ಅಧ್ಯಕ್ಷತೆಯಲ್ಲಿ ಈ ತಿಂಗಳ 17ರಲ್ಲಿ ನೆರವೇರಿತು. ರಾ| ವಿ. ಎಸ್. ಕಾಮತ್‌ರವರು ಉಪನ್ಯಾಸಕರಾಗಿದ್ದರು. ಸಭಿಕರಿಗೆ ಓದಿಹೇಳಿದ ವೃತ್ತಾಂತದ ಪ್ರಕಾರ ಸಂಘದ ಮೆಂಬರರ ಉಪಯೋಗದ ಬಗ್ಗೆ ಒಂದು ವಾಚನಾ ಮಂದಿರವೂ ಗ್ರಂಥಾಲಯವೂ ಇರುವುದೆಂತ ತೋರಿಬರುತ್ತದೆ. ಹೆಚ್ಚು ಕಡಿಮೆ ೪೧ ಜನ ಮೆಂಬರರು ಸಂಘದಲ್ಲಿರುವರು. 'ಬೆಡಮಿಂಟನ್' ಪಂದ್ಯದಾಟವನ್ನು ಜರುಗಿಸಿ ಗೆದ್ದವರಿಗೆ ಇನಾಮನ್ನು ಹಂಚುವ ಏರ್ಪಾಡು ಪ್ರತಿವರುಷದ ವಾರ್ಷಿಕೋತ್ಸವ ಕಾಲದಲ್ಲಿದೆ. ಸಭಾಕಾರ್ಯಗಳು ಮನೋಹರವಾದ ರೀತಿಯಲ್ಲಿ ನೆರವೇರುವಂತೆ ಆಗಿಂದಾಗ್ಯೆ ವಾರ್ಷಿಕ ದಿನಕ್ಕೋಸ್ಕರವೇ ರಚನಿಸಲ್ಪಟ್ಟ ಹಾಡುಗಳ ಇಂಪಾದ ಗಾಯನವು ಇತ್ತು. ಸಂಘದ ಅಧ್ಯಕ್ಷರಾದ ಮ| ರಾ| ರಾ| ಮುಕುಂದಮಲ್ಯರ್ ಬಿ. ಎ. ಎಲ್. ಟಿ. ಇವರ ಮತ್ತು ಇತರ ಮೆಂಬರರ ಶ್ರಮದಿಂದ ವಾರ್ಷಿಕ ದಿನೋತ್ಸವವು ಬಹಳ ಸಂಭ್ರಮದಲ್ಲಿ ಆಚರಿಸಲ್ಪಟ್ಟಿರುವುದು.

ಉಪನ್ಯಾಸಕರ ಭಾಷಣವು ಗೌಡಸಾರಸ್ವತ ಜಾತಿಯ ಅಭಿವೃದ್ಧಿ ಸಾಧನೆಯ ಕುರಿತಾಗಿತ್ತು. ಆಗಿಂದಾಗ್ಯೆ ಗೌಡಸಾರಸ್ವತರಲ್ಲಿ ತೋರಿಬರುವ ಅನೈಕ್ಯವನ್ನು ಉಪನ್ಯಾಸಕರು ಸಭಿಕರಿಗೆ ತೋರಿಸಿಕೊಟ್ಟು ಗೌಡಸಾರಸ್ವತರಲ್ಲಿ ವಿದ್ಯಾಸಂಪನ್ನರೂ ಧನಸಂಪನ್ನರೂ ಆದಂಥವರು ತಮ್ಮ ಸಂಪನ್ನತೆಗಳ ಜವಾಬ್ದಾರಿಕೆಗಳನ್ನರಿತುಕೊಂಡು ಈ ವಿಷಾದಕರ ಅನೈಕ್ಯವನ್ನು ಹೋಗಗೊಳಿಸಲು ಪ್ರಯತ್ನಿಸಬೇಕೆಂತ ಸಭಿಕರನ್ನು ವಿಜ್ಞಾಪಿಸಿಕೊಂಡರು. ಸಭಾಧ್ಯಕ್ಷರ ಭಾಷಣವು ಸಭಾ ಸಂಭ್ರಮಕ್ಕೆ ತಕ್ಕಂತೆ ರಸಭರಿತವಾಗಿತ್ತು. ಸಭಾ ಮಂದಿರದಲ್ಲಿ ಇರಗೊಡಿಸಿದ ಸ್ವರ್ಗಸ್ಥ ಅಮ್ಮೆಂಬಳ ಸುಬ್ರಾಯ ಪೈಗಳವರ ಚಿತ್ರಪಟವನ್ನು ನೋಡುತ್ತ ಆ ಮಹನೀಯರು ಗತಿಸಿ ಹೋದರೂ ಅವರ ಸತ್ಕ್ರಿಯೆಗಳ ಫಲದಿಂದ ಅವರು ಈಗಲೂ ಹೇಗೆ ಸಜೀವರಾಗಿರುವರೆಂಬುದನ್ನು ಅಧ್ಯಕ್ಷರು ವಿವರಿಸಿ ಹೇಳಿದರು. ಏಕಾನುಮತಿಗೂ, ಐಕ್ಯಕ್ಕೂ ಇರುವ ಭೇದ, ಇವು ಎಲ್ಲಿ ಮತ್ತು ಹೇಗೆ ಅಗತ್ಯವೆಂಬುದನ್ನು ಅಧ್ಯಕ್ಷರು ಸಭಿಕರಿಗೆ ಉದಹರಿಸಿ ಹೇಳಿ ಅಭಿಪ್ರಾಯ ಭೇದದಿಂದ ಕಾರ್ಯಸಾಧನಗಳಲ್ಲಿ ಅನೈಕ್ಯಕ್ಕೆ ಆಸ್ಪದ ದೊರಕದಂತೆ ಜಾಗರೂಕರಾಗಿರಬೇಕೆಂತ ಸೂಚಿಸಿರುತ್ತಾರೆ. ಗೌಡಸಾರಸ್ವತ ಸಮಾಜದಲ್ಲಿ ಅಭಿವೃದ್ಧಿಯ

8ನೇ ಪುಟಕ್ಕೆ ಮುಂದರಿಸಿದೆ.

ಪರಸ್ಪರ ಸಹಾಯವೂ ಶಾಲಾ ಮಕ್ಕಳೂ.

ಬೆಳಗಾವಿಯ ಹೈಕೋರ್ಟ ವಕೀಲರೂ, ಪರಸ್ಪರ ಸಹಾಯ ಸಂಘಗಳ ಗೌರವಾರ್ಥವಾಗಿ ನೇಮಿಸಲ್ಪಟ್ಟ ಸಂಸ್ಥಾಪಕರೂ ಆದ ರಾವ್ ಸಾಹೇಬ ಆರ್. ಜಿ. ನಾಯಕರವರು ಕೊಯಮುತ್ತೂರು ಸರ್ಕಲಿನ ಪರಸ್ಪರ ಸಹಾಯ ಪರಿಷದದ ಮಂಗಳೂರಿನಲ್ಲಿ ಜರಗಿದ ಮೂರನೆಯ ಸಭೆಗೆ ಬರೆದು ಕಳುಹಿಸಿದ ಉಪನ್ಯಾಸ.

ಈ ಉಪನ್ಯಾಸವು ಬರೇ ಗ್ರಂಥಗಳ ಅಥವಾ ಬೇರೆ ದೇಶಗಳಿಂದ ಬಂದ ವರದಿಗಳ ಪಠಣದ ಮೇಲೆ ಆಧರಿಸದೆ, ರಾವ್ ಸಾಹೇಬ ನಾಯಕರ ಸ್ವಾನುಭವದ ಫಲವಾಗಿದೆ. ಈಗಲೂ ಇನ್ನು ಮುಂದೆಯೂ ಸಹಕಾರ ಪ್ರಸರಣೆ ಮಾಡಲುಳ್ಳವರು ಅದರ ಮೂಲ ತತ್ವಗಳನ್ನು ತಾವೇ ಚೆನ್ನಾಗಿ ಕರತಲಮಾಡಿಕೊಳ್ಳುವುದಲ್ಲದೆ ದೇಶೋನ್ನತಿಗೆ ಅಗತ್ಯವಿರುವ ಎಲ್ಲಾ ಕಸಬು ಕೈಗಾರಿಕೆಗಳಿಗೂ ಈ ತತ್ವಗಳನ್ನು ಹಚ್ಚಿ ಅವುಗಳನ್ನು ವೃದ್ಧಿಗೆ ತರುವ ಸಾಮರ್ಥ್ಯವುಳ್ಳವರಾಗಿರಬೇಕೆಂದು ಅವರ ಅಭಿಪ್ರಾಯ. ಇದಲ್ಲದೆ ರೈತನಲ್ಲಿ ವ್ಯವಸಾಯ ಜ್ಞಾನವು ಎಷ್ಟೆ ಇರಲಿ, ಕ್ಷೇತ್ರವು ನಿಸ್ತೇಜವಾದರೆ ಪೀಜವೆಲ್ಲಿ ಫಲಿಸೀತು? ನಿರಕ್ಷರಕುಕ್ಷಿಗಳಾದ ಬಡ ಬೇಸಾಯಗಾರರಿಗೆ ಸಹಕಾರ ಜ್ಞಾನವನ್ನು ಬೋಧಿಸಿದರೆ ಅದು ಮನಸ್ಸಿಗೆ ಅಂಟಿಕೊಂಡೀತೆ? ಹಾಗಾದರೆ ಕೊಂಚಕಾಲದೊಳಗೆ ಇಷ್ಟೆಲ್ಲ ಸಂಘಗಳು ಈ ಬಡ ಹಳ್ಳಿ ಜನರಲ್ಲಿ ಹೇಗೆ ತಲೆಯೆತ್ತಿದುವು? ಈ ಜನರು ಪರಸ್ಪರ ಸಹಾಯ ಸಂಘಗಳ ಮೂಲಕ ಮಿತವ್ಯಯ, ಪರಸ್ಪರ ಸಹಕಾರ ಬುದ್ಧಿ, ಮತ್ತು "ತಾನು ಪರರಿಗೆ ಪರರು ತನಗೆ" "All for each, and each for all" ಎಂಬ ಪರಸ್ಪರ ಸಹಕಾರದ ಬೀಜಾಕ್ಷರಗಳನ್ನು ಹೇಗೆ ಹೆಕ್ಕಿಕೊಳ್ಳುವರು? ಈ ಪ್ರಶ್ನೆಗಳನ್ನು ಚರ್ಚಿಸಿ ಅವರು ಹೇಳುವದೇನಂದರೆ:—ಈ ಸಂಘಗಳಿಗೆ ಸೇರಿದ ಅನೇಕರು ವಿದ್ಯೆಯ ವಾಸನೆಯೇ ಇಲ್ಲದೆ ಬುದ್ಧಿಯಲ್ಲಿ ಪಶುಪ್ರಾಯರು. ಸರಕಾರದವರು ಈ ಸಹಕಾರ ಸಂಸ್ಥೆಗಳ ಸೂತ್ರಗಳನ್ನು ತಮ್ಮ ಬಲವಾದ ಕೈಗಳಿಂದ ಹಿಡಿದಿರುವುದರಿಂದ ಈ ಸಂಘಗಳಲ್ಲಿ ಸೇರಿದ ಗೊಂಬೆಗಳು ಹೇಳಿದಂತೆ ಕುಣಿಯುವುದಲ್ಲದೆ, ಸರಕಾರಿ ಸಹಾಯವು ಒಮ್ಮೆಲೆ ಹಿಂತೆಗೆದರೆ, ಅವು ನೆಲಕ್ಕೆ ದೊಪ್ಪನೆ ಬಿದ್ದು ತುಮುರತುಮುರಾಗುತ್ತಿದ್ದುವು. ಆದ್ದರಿಂದ ಇವು ಗೊಂಬೆಗಳಾಗಿರುವುದಕ್ಕೆ ಬದಲಾಗಿ ತನ್ನ ಸ್ವಂತ ಬುದ್ಧಿಯನ್ನೂ ಧೈರ್ಯಸ್ಥೈರ್ಯಗಳನ್ನೂ ಉಪಯೋಗಿಸುವ ಮನುಷ್ಯರಾಗುವಂತೆ ಮಾಡಬೇಕು. ಇದಕ್ಕೆ ಸರ್ವರಿಗೂ ವಿದ್ಯೆಕೊಡುವುದೆ ಮುಖ್ಯ ಉಪಾಯ. ಇದು ಸಾಧ್ಯವಾಗಬೇಕಾದರೆ ಸರಕಾರಿ ನಿರ್ಬಂಧವಿರಬೇಕು ಎಂದು ಮು॥ ರಾ॥ ನಾಯಕರು ಪ್ರತಿಪಾದಿಸುತ್ತಾರೆ.

ಈ ಸಹಕಾರದ ಮೂಲತತ್ವಗಳನ್ನು ಶಾಲಾ ಮಕ್ಕಳಲ್ಲಿ ಆಗಲೇ ಬಿತ್ತಿಬಿಡುವುದೆ ಅವರು ಕಂಡ ಎರಡನೆ ಉಪಾಯ. ಇದಕ್ಕೋಸ್ಕರ ಪಾಠಪುಸ್ತಕಗಳಲ್ಲಿ ಇಂಥ ವಿಷಯಗಳಲ್ಲಿ ಬೋಧನೆಯು ಇರಬೇಕು. ಈ ವಿಷಯವನ್ನು ಹಿಂದಿನ ಹಲವು ಪರಿಷದಗಳಲ್ಲಿ ಚರ್ಚಿಸಿರುವರು. ದೃಷ್ಟಾಂತಪೂರ್ವಕವಾಗಿ ನಿದರ್ಶಿಸದೆ ಬರೇ ಪಾಠಗಳನ್ನು ಓದಿಸುವುದರಿಂದಲೆ ಮಕ್ಕಳಲ್ಲಿ ಸಹಕಾರಜ್ಞಾನವು ಬೇರೂರಲಾರದು. ಪುಸ್ತಕಪಾಠವಾದ ಜ್ಞಾನವು ಕೊಂಚದಿನಗಳಲ್ಲಿಯೇ ಮರೆತುಬಿಡುವ ಸಂದರ್ಭವಿದೆ. ಇದಕ್ಕೊಂದು ಉಪಾಯವನ್ನು ಕಾಣಬೇಕೆಂದು ರಾವ್ ಸಾಹೇಬ ನಾಯಕರು ಮನಸ್ಸಿನಲ್ಲಿಯೆ ಮಥಿಸುತ್ತಲಿದ್ದಾಗ ಬೆಳಗಾವಿ ಜಿಲ್ಲೆಯ ಮುಸ್ತಿಕಾನ್ ಹುಬ್ಳಿ ಎಂಬ ಗ್ರಾಮದಲ್ಲಿ ಬೇಸಾಯಗಾರರ ಪರಸ್ಪರ ಸಹಾಯ ಸಂಘವನ್ನು ಅವರು ಸಂದರ್ಶಿಸಿದರು. ಅಲ್ಲಿಯ ಶಾಲೆಯಲ್ಲಿ ಈ ಸಹಕಾರಿಗಳ ಸಭೆ ಸೇರಿದಾಗ ಉಪಾಧ್ಯಾಯರು ತಮ್ಮ ಶಾಲಾ ಮಕ್ಕಳು ಏರ್ಪಡಿಸಿದ ಒಂದು ಚಿಕ್ಕ ಸಂಘದ ವಿಷಯವಾಗಿ ಪ್ರಸ್ತಾಪವೆತ್ತಿದರು. ಈ ಬಾಲಕರ ಸಂಘಕ್ಕೆ ಪರಸ್ಪರ ಸಹಾಯ ಸಂಘದ ಕಾರ್ಯದರ್ಶಿಗಳ ಮನೆಯಲ್ಲಿದ್ದ ಒಬ್ಬ ಬಾಲಕನು ಕಾರ್ಯದರ್ಶಿಯಾಗಿದ್ದನು. ಈ ಹುಡುಗನು ಪರಸ್ಪರ ಸಹಾಯದ ತತ್ವಗಳನ್ನು ಆ ಕಾರ್ಯದರ್ಶಿಗಳ ಮನೆಯಲ್ಲಿದ್ದು ಒಂದಿಷ್ಟು ಹೆಕ್ಕಿಕೊಂಡು ಶಾಲೆಯ ಮಕ್ಕಳಿಂದ ೧೦ ರೂಪಾಯಿಗಳನ್ನು ಠೇವಣಾತಿಯಾಗಿ ಸಂಗ್ರಹಿಸಿ, ಅದರಿಂದ ಮಕ್ಕಳಿಗೆ ಆಗತ್ಯವಿರುವ ಸ್ಲೇಟು, ಪೆನ್ಸಿಲ್, ಕಾಗದ, ಪುಸ್ತಕಗಳು ಮುಂತಾದವನ್ನು ತನ್ನ ಗ್ರಾಮಕ್ಕೆ ೧೭ ಮೈಲು ದೂರವಿರುವ ಶಹರಿನಿಂದ ಕಡಿಮೆ ಕ್ರಯಕ್ಕೆ ತರಿಸಿ, ಅವನ್ನು ಆ ಹಳ್ಳಿಯ ದರಕ್ಕಿಂತ ಕಡಿಮೆ ಬೆಲೆಗೆ ಮಾರಲಾರಂಭಿಸಿದನು. ಠೋಕ್ ವ್ಯಾಪಾರಿಗಳಿಂದ ಚಿಲ್ರೆ ವ್ಯಾಪಾರಿಗಳಿಗೆ ಸಿಕ್ಕುವ ಡಿಸಕೌಂಟ್ ಈ ಮಕ್ಕಳಿಗೆ ಸಿಕ್ಕಲಾರಂಭಿಸಿತು. ಇದನ್ನು ತಿಳಿದು ಶಾಲೆಯ ಮಕ್ಕಳ ಹಿರಿಯರು ತಮ್ಮ ಮಕ್ಕಳಿಗೆ ಈ ಸಂಘದ ಮೆಂಬರರಾಗಲಿಕ್ಕೆ ಉತ್ತೇಜಿಸಿದರು. ಒಳ್ಳೆ ಕ್ರಮದಿಂದ ಈ ಸಂಘದ ಲೆಕ್ಕಪತ್ರಗಳನ್ನು ಮಕ್ಕಳೇ ಇಡಲಾರಂಭಿಸಿದರು. ಇದಕ್ಕೆ ಆ ಶಾಲೆಯ ಉಪಾಧ್ಯಾಯರೂ, ತಕ್ಕಮಟ್ಟಿಗೆ ಕೈಕೊಟ್ಟರು. ಇದರ ಸಮಾಚಾರವನ್ನು ರಾವ್ ಸಹೇಬ ನಾಯಕರು ತಿಳಿದು ಈ ರೀತಿಯಾಗಿ ಸಹಕಾರ ಬೀಜವನ್ನು ಬಿತ್ತುವುದು ಫಲಕಾರಿಯಾಗುವದೆಂದು ನಿರ್ಧರಿಸಿ, ಪರಸ್ಪರ ಸಹಾಯ ಸಂಘಗಳ ರಿಜಿಸ್ಟ್ರಾರರ ಮೂಲಕ ವಿದ್ಯಾ ಇಲಾಖೆಯ ಅನುಮೋದನೆಯನ್ನು ಕೇಳಿದರು. ಇದರಿಂದ ಒಂದೇ ವರ್ಷದೊಳಗೆ ಆ ಜಿಲ್ಲೆಯಲ್ಲಿ ೭೭ ಸಂಘಗಳು ಜನ್ಮವೆತ್ತಿದುವು. ಇವುಗಳ ಪೈಕಿ ಸಂಕೇಶ್ವರದ ಸಂಘವು ಅತಿ ಉತ್ಕೃಷ್ಟ ಸ್ಥಿತಿಯಲ್ಲಿದೆಯಂತೆ. ಆ ಸಂಘದ ಬಂಡವಾಳವು ೧೦೦ ರೂಪಾಯಿ. ಕಳೆದ ವರ್ಷಾವಧಿ ಪರೀಕ್ಷೆಯು ಮುಗಿದ ನಂತರ ಮಕ್ಕಳಿಗೆ ಅವಶ್ಯವಿರುವ ಹೊಸ ಪುಸ್ತಕಗಳು ವಗೈರೆಗೆ ಈ ಮೊಬಲಗು ಸಾಕಾಗಲಿಲ್ಲ. ಅಲ್ಲಿಯ ಒಬ್ಬ ಸಾಹುಕಾರರು ಆ ಸಂಘಕ್ಕೆ ೨೦೦ ರೂಪಾಯಿ ಎರವಾಗಿ ಇತ್ತರು. ಮಕ್ಕಳು ಠೋಕಾಗಿ ಪುಸ್ತಕಗಳನ್ನು ತರಿಸಿ ಒಳ್ಳೆ ಮುನಾಫೆ ಹೊಂದಿದರು. ಸಾಲವು ಎರಡೇ ತಿಂಗಳಲ್ಲಿ ಪರಿಹಾರವಾಯಿತು. ವರ್ಷಾಂತ್ಯದಲ್ಲಿ ಈ ವ್ಯಾಪಾರದಲ್ಲಿ ಆ ಮಕ್ಕಳಿಗೆ ರೂಪಾಯಿಗೆ ೩ ಆಣೆ ೭ ಪೈ ಪ್ರಕಾರ ನಫೆ ಉಳಿಯಿತು; ಅಂದರೆ ಸೇಕಡಾ ೨೨ರ ಮೇರೆಗೆ ಮುನಾಫೆ ಎಣಿಸಬಹುದು. ಈ ೭೭ ಸಂಘಗಳಲ್ಲಿ ೫೬ ಸಂಘಗಳ ಲೆಕ್ಕವನ್ನು ತಾನು ಪರಿಶೋಧಿಸಲಾಗಿ ಅವರ ಬಂಡವಾಳವು ರೂ. ೧೧೦೭--೯--೨ ಮತ್ತು ನಫೆಯು ರೂ. ೧೬೦-೮-೩ ಅಂದರೆ ಸರಾಸರಿ ಸೇಕಡಾ ೧೪॥ರಂತೆ ನಫೆ ಸಿಕ್ಕಿತು.

ಈ ಸಂಘಗಳಿಗೆ ಸೇರುವವರು ಅಪ್ರಾಯಸ್ಥರಾದ ಕಾರಣ ಈ ಸಂಘಗಳನ್ನು ರಿಜಿಸ್ಟ್ರಿ ಮಾಡಲು ಕಾನೂನು ಇಲ್ಲ. ಆದರೆ ವಿದ್ಯಾ ಇಲಾಖೆಯವರು ಈ ಸಂಘಗಳ ಪ್ರಯೋಜನವನ್ನು ಕಂಡು ತಿಳಿದರೆ ಇವುಗಳ ಮೂಲಕವಾಗಿ ಹಳ್ಳಿ ಪಳ್ಳಿಗಳಲ್ಲಿ ಸಹಕಾರ ತತ್ವಗಳನ್ನು ಪಸರಿಸುವುದು ಬಹು ಸುಲಭವಾಗಿದೆ. ಈ ಕೆಲಸದಲ್ಲಿ ಮಕ್ಕಳು ಒಂದುಗೂಡುವುದರಿಂದ ಐಕ್ಯಮತ್ಯದ ಪ್ರಯೋಜನವನ್ನು ತಿಳಿದುಕೊಳ್ಳುವರು. ಉಪಾಧ್ಯಾಯರು ಈ ಮೂಲಕವಾಗಿ ಮಿತವ್ಯಯವನ್ನು ಮಕ್ಕಳಿಗೆ ಬೋಧಿಸಲು ಸಾಧ್ಯವಿದೆ. ಇದರಿಂದ ಶಾಲಾ ಕೆಲಸಕ್ಕೆ ಅಡ್ಡಿಯಾಗಬಹುದೆಂದು ಕೆಲವರು ವಾದಿಸಬಹುದು. ಆದರೆ ಶಾಲೆಯ ಕ್ಲುಪ್ತ ಸಮಯದ ನಂತರ ಈ ಕೆಲಸವನ್ನು ನಿರ್ವಹಿಸುವ ಏರ್ಪಾಡಿನಿಂದ ಈ ಸಂದೇಹವು ನಿವೃತ್ತಿಯಾಗುವುದು. ಕ್ಲುಪ್ತ ಕಾಲಕ್ಕೆ ಸಾಲಪರಿಹಾರಮಾಡಬೇಕೆಂಬ ಮನೋನಿರ್ಧಾರ, ಲೆಕ್ಕಪತ್ರಗಳನ್ನು ಇಡುವ ಕ್ರಮ, ಮಿತವ್ಯಯದ ಪ್ರಯೋಜನ, ಸ್ವಾವಲಂಬನ ಮುಂತಾದ ಶಕ್ತಿಗಳನ್ನು ಹೆಚ್ಚಿಸುವುದು ಒಂದು ಬಗೆಯ ವಿದ್ಯಾಭ್ಯಾಸವಲ್ಲವೇ ಎಂದು ರಾವ್ ಸಾಹೇಬ ನಾಯಕರು ಹೇಳುತ್ತಾರೆ. ಈ ಸಂಸ್ಥೆಗಳ ವಿಷಯವಾಗಿ ಬೊಂಬಾಯಿ ಸಂಸ್ಥಾನದ ಡಿರೆಕ್ಟರ್ ಸಾಹೇಬರೂ ಒಳ್ಳೆ ಅಭಿಪ್ರಾಯವನ್ನೇ ಮಾಡಿರುವುದರಿಂದಲೂ ಹಲವು ಕಡೆಗಳಿಂದ ಈ ಸಂಘಗಳ ವಿಷಯವಾಗಿ ಅವರಿಗೆ ಪತ್ರಗಳು ಬರುವುದರಿಂದಲೂ ಅಂಥವರ ಮಾಹಿತಿಯ ಬಗ್ಗೆ ಅವರು ಕೆಲವು (ರೂಲ್ಸ್) ಕ್ರಮಗಳನ್ನು ಈ ಕೆಳಗೆ ಕೊಟ್ಟಿರುತ್ತಾರೆ. ಅನೇಕ ಹಳ್ಳಿಗಳಲ್ಲಿ ಉಪಾಧ್ಯಾಯರೇ ವಿದ್ಯೆಯ ವ್ಯಾಸಂಗವುಳ್ಳವರು. ಅವರಷ್ಟು ತಿಳುವಳಿಕೆಯ ಜನಗಳು ಬೇರೆ ಇಲ್ಲ. ಆದ್ದರಿಂದ ಉಪಾಧ್ಯಾಯರು ಈ ಕ್ರಮಗಳನ್ನು ಚೆನ್ನಾಗಿ ಓದಿಕೊಂಡು ಅಂಥ ಸಂಘಗಳನ್ನು ದೊಡ್ಡ ದೊಡ್ಡ ಊರುಗಳಲ್ಲಿ ಮೊದಲು ಮೊದಲು ಸ್ಥಾಪಿಸಿ ಅನಂತರ ಹಳ್ಳಿ ಪಳ್ಳಿಗಳಲ್ಲಿಯೂ ಅವುಗಳನ್ನು ಪಸರಿಸಬೇಕೆಂಬ ಇರುವ ರಾವ್ ಸಾಹೇಬರ ಸದುದ್ದೇಶವು ಶುಭಫಲಕಾರಿಯಾಗಲೆಂದು ನಾವು ಕೋರುತ್ತೇವೆ.

ಶಾಲಾ ಮಕ್ಕಳ ಸಂಘಗಳ ಕ್ರಮಗಳು.

1. ಈ ಸಂಘಕ್ಕೆ ಸೇರುವ ಮಕ್ಕಳಿಗೆ ಸುಲಭ ಕ್ರಯಕ್ಕೆ ಪುಸ್ತಕಗಳು ವಗೈರೆ ತರಿಸಿ ಕೊಡುವುದು ಈ ಸಂಘದ ಉದ್ದೇಶ.

2. (a) ಪ್ರವೇಶ ಹಾಸಲು (b) ಕ್ರಮವಾಗಿ ಶಾಲೆಗೆ ಬರುವ ಮಕ್ಕಳು ಆಗಾಗ ಠೇವಣಾತಿ ಇಡುವ ಸಣ್ಣ ಸಣ್ಣ ಮೊಬಲಗು (c) ಉಚಿತಗಳು ಇವೇ ಮುಂತಾದ ಉಪಾಯಗಳಿಂದ ಈ ಸಂಘಗಳಿಗೆ ಹಣವೆತ್ತಬಹುದು.

3. ಸರಿಯಾಗಿ ಶಾಲೆಗೆ ಬರುವ ಯಾವನೊಬ್ಬನು ಒಂದು ಆಣೆ ಪ್ರವೇಶ ಹಾಸಲನ್ನು ತೆತ್ತೊಡನೆ ಈ ಸಂಘದ ಮೆಂಬರನಾಗಬಹುದು.

4. ಶಾಲೆಯಿಂದ ಹೆಸರು ತೆಗೆದು ಹಾಕಿದ ಮೇಲೆ ಆ ಹುಡುಗನು ಈ ಸಂಘದ ಮೆಂಬರನಾಗಿರಲಾರನು.

5. ಮೆಂಬರರು ಸಭೆ ಸೇರಿ ಬಹುಮತದಿಂದ ಆಯ್ದುಕೊಂಡವನೊಬ್ಬನು ಈ ಸಂಘದ ಸೆಕ್ರೆಟರಿಯಾಗಿರತಕ್ಕದ್ದು. ಅವನು ೩ ತಿಂಗಳ ವರೆಗೆ ಕೆಲಸ ನೋಡಬೇಕು. ಅನಂತರ ಅವನನ್ನೇ ಪುನಃ ಆಯ್ದುಕೊಳ್ಳಬಹುದು. ಅಥವಾ ಬೇರೊಬ್ಬನನ್ನು ಚುನಾಯಿಸಬಹುದು. ಪ್ರತಿಯೊಬ್ಬ ಮೆಂಬರನಿಗೂ ಒಂದು ವೋಟ್ ಇದೆ.

6. **ಶಾಲೆಯ ಹೆಡ್ ಮಾಸ್ತರರ ಅಧಿಕಾರ ಮತ್ತು ಆಲೋಚನೆಗೆ ಒಳಪಟ್ಟು ಸಂಘದ ಸೆಕ್ರೆಟರಿಯು ಈ ಕೆಲಸವನ್ನು ನಿರ್ವಹಿಸತಕ್ಕದ್ದು.**

7. ಸೆಕ್ರೆಟರಿಯ ಕರ್ತವ್ಯಗಳು:—

(a) ಹೆಡ್‌ಮಾಸ್ತರರ ಆಲೋಚನೆ ಪಡಕೊಂಡು ಸಾಧ್ಯವಿದ್ದಷ್ಟು ಕಡಿಮೆ ದಯದಲ್ಲಿ ಪುಸ್ತಕಗಳು ಮುಂತಾದ್ದನ್ನು ಕೊಂಡುಕೊಳ್ಳುವದು.

(b) ಉಪಾಧ್ಯಾಯರು ತೋರಿಸಿಕೊಟ್ಟ ಕ್ರಮದಲ್ಲಿ ಖರೀದಿ ವಿಕ್ರಿತದ ಲೆಕ್ಕನ್ನು ಇಡುವುದು.

(c) ಸಂಘಕ್ಕೆ ಸಂಬಂಧಪಟ್ಟ ಎಲ್ಲಾ ಸಾಮಾನುಗಳ ಭದ್ರವಾಗಿಡುವ ಜವಾಬ್ದಾರಿ ವಹಿಸುವುದು

(d) ಹೆಡ್ ಮಾಸ್ತರರ ಮಂಜೂರಾತಿಗೆ ಒಳಪಟ್ಟ ಸಂಘದ ಬಗ್ಗೆ ಅಗತ್ಯವಿರುವ ಹಣ ಖರ್ಚು ಮಾಡುವುದು, ಪುಸ್ತಕ ವಗೈರೆಯ ವಿಕ್ರಿತದ ಬೆಲೆ ನಿರ್ಣಯಿಸುವುದು

(e) ಮುಖ್ಯ ಉಪಾಧ್ಯಾಯರು ಹೇಳಿದ ಕಾಲಕ್ಕೆ ಸಂಘದ ಸಭೆ ಏರ್ಪಡಿಸುವುದು

8 ಸಂಘಕ್ಕೆ ಸಂಬಂಧಪಟ್ಟ ಎಲ್ಲಾ ಸಾಮಾಗ್ರಿಗಳನ್ನು ಶಾಲೆಯಲ್ಲಿಯೇ ಹೆಡ್ ಮಾಸ್ತರರು ತೋರಿಸುವ ಸ್ಥಳದಲ್ಲಿ ಭದ್ರವಾಗಿರಿಸಬೇಕು

9 ಹೆಡ್ ಮಾಸ್ತರರು ಸಂಘದ ಖಜಾನಜಿಯಾಗಿರತಕ್ಕದ್ದು ಆದರೆ ಯಾವ ಕಾಲದಲ್ಲಿಯೂ ಅವರ ಕೈಯಲ್ಲಿ ೧೦ ರೂಪಾಯಿ ಗಿಂತ ಹೆಚ್ಚಿನ ಮೊಬಲಗು ಇರಗೊಡಿಸಬಾರದು, ೫ ರೂಪಾಯಿಗೆ ಮಿಕ್ಕಿದ ಮೊಬಲಗನ್ನು ಪೋಸ್ಟು ಆಫೀಸು ಸೇವಿಂಗ್ಸ್ ಬೇಂಕಿನಲ್ಲಾಗಲೀ ಇತರ ಯೋಗ್ಯ ಸಾಹುಕಾರರ ಬಳಿಯಲ್ಲಾಗಲೀ ಠೇವಣಾತಿಯಾಗಿರಗೊಡಿಸಬೇಕು

10 ವಿಕ್ರಿತವೆಲ್ಲ ನಗದಿಗೆನೇ ಇರಬೇಕು, ಆದರೆ ಮೆಂಬರನು ಇಟ್ಟ ಠೇವಣಾತಿಯ ಮೊಬಲಿಗಿನಷ್ಟು ಬೆಲೆಯ ಸಾಮಾನನ್ನು ಅವನಿಗೆ ಕಡವಾಗಿ ಕೊಡಬಹುದು

11 ಸಂಘದ ವಾರ್ಷಿಕ ಸಭೆಯನ್ನು ಪ್ರತಿ ವರ್ಷವೂ ಮಾರ್ಚಿ ತಿಂಗಳಲ್ಲಿ ಸೇರಿಸಿ,

(a) ಗತವರ್ಷದ ವಹಿವಾಟಿನ ವರದಿಯನ್ನು ಸಭೆಯ ಮುಂದೆ ಚರ್ಚೆಗೆ ಇಡುವುದು

(b) ಗತವರುಷದ ಆದಾಯ ನಷ್ಟದ ಪಟ್ಟಿಯನ್ನು ತಯಾರಿಸಿ, ಸಭೆಯ ಮುಂದಿಟ್ಟು ಮಂಜೂರು ಮಾಡಿದನಂತರ ಅದರ ದ್ವಿಪ್ರತಿಯನ್ನು ವಿದ್ಯಾ ಇಲಾಖೆಯ ಅಧಿಕಾರಿಗಳಿಗೆ ಕಳುಹಿಸಿಕೊಡುವುದು, ಮೊದಲಾದ ಕೆಲಸಗಳನ್ನು ಈ ಸಭೆಯಲ್ಲಿ ನಿರ್ವಹಿಸತಕ್ಕದ್ದು

12 ಸಂಘದ ಏನ್ ಮುನಾಫಯಲ್ಲಿ ¼ ಅಂಶವನ್ನು ಆಪತ್‌ಧನವಾಗಿ ವಿಂಗಡಿಸಿಟ್ಟು ಉಳಿದ ನಫೆಯನ್ನು ಮೆಂಬರರು ಪಡಕೊಂಡ ಸಾಮಾನಿನ ಬೆಲೆಯ ದಾಮಾಶಾಯದಲ್ಲಿ ಅವರಿಗೆ ಹಂಚಿಕೊಡಬೇಕು

13 ಹೆಡ್ ಮಾಸ್ತರರು ಈ ಸಂಘದ ಲೆಕ್ಕಪತ್ರಗಳನ್ನು ತನಖಿನೋಡುವುದಲ್ಲದೆ, ಯಾವ ಸರಕಾರಿ ಹುದ್ದೆದಾರರೂ ಅಥವಾ ಮಕ್ಕಳ ಹಿರಿಯರೂ ಈ ಲೆಕ್ಕ ತನಖಿನೋಡುವಲ್ಲಿ ಮೆಂಬರರು ಲೆಕ್ಕಪತ್ರಗಳನ್ನು ಹಾಜರುಪಡಿಸಬೇಕು

ಈ ಕ್ರಮಗಳನ್ನು ಸ್ಥಳೀಯ ಅನುಕೂಲತೆಗೆ ಸರಿಯಾಗಿ ಅಲ್ಪಸ್ವಲ್ಪ ಬದಲಾಯಿಸಿ ಜಾರಿಗೆ ತಂದಲ್ಲಿ ಮತ್ತು ವಿದ್ಯಾ ಇಲಾಖೆಯ ಆಫೀಸರುಗಳು ಮನಃಪೂರ್ವಕವಾಗಿ ಈ ಸಂಸ್ಥೆಗಳಿಗೆ ಬೆಂಬಲಕ್ಕೆ ಇದ್ದಲ್ಲಿ ಇಂಥ ಸಂಘಗಳು ಬಹು ಬೇಗನೇ ವೃದ್ಧಿಯಾಗುವುದೆಂದು ನಾವು ತಿಳಿಯುತ್ತೇವೆ.

ಮಾದಾಳದ ಹಣ್ಣಿನ ವ್ಯವಸಾಯ.

ಇದು ಹೇರಳೆ ನಿಂಬೆಗಳ ಜಾತಿಗೆ ಸೇರಿದ್ದು ಸಾಧಾರಣವಾಗಿ ಎಲ್ಲಾ ತರಹ ಜಮೀನುಗಳಲ್ಲಿಯೂ ಈ ಹಣ್ಣನ್ನು ಬೆಳೆಯಬಹುದು. ನೀರು ಸಲೀಸಾಗಿ ಬಸಿದು ಹೋಗದೆ ಇರತಕ್ಕ ಜಮೀನುಗಳಲ್ಲೂ ನೀರು ವಸತಿಯಾದ ಜಮೀನುಗಳಲ್ಲೂ ಈ ಪೈರು ಬೆಳವಳಿಕೆಯನ್ನು ಹೊಂದುವದಿಲ್ಲ. ತನುವು ಸಿಲ್ಲದೆ ಇರತಕ್ಕ ಹಗುರವಾದ ಭೂಮಿಯೂ ಇದರ ಬೆಳತೆಗೆ ಅನುಕೂಲವಲ್ಲ ತಳದಲ್ಲಿ ಬಂಡೆ ಇದ್ದರೆ ಬೆಳತೆಯು ಕೆಡುತ್ತೆ. ಒಂದು ತೋಟದಲ್ಲಿ ಬಂಡೆಯು ೧½ ಅಡಿ ಕೆಳಗೆ ಇದ್ದರಿಂದ ಪೈರು ಬೆಳವಳಿಕೆಯನ್ನು ಹೊಂದಲಿಲ್ಲ. ಎರಡು ಅಡಿ ಕೆಳಗೆ ಬಂಡೆ ಸಿಕ್ಕಿದರೆ ಗಿಡವು ಸುಮಾರು ಎರಡು ವರ್ಷಗಳ ಕಾಲ್ಲ ಹುಲುಸಾಗಿರುತ್ತೆ. ನಂತರ ಬೇರಿನಲ್ಲಿ ಬಲವು ಕಮ್ಮಿಯಾಗಿ ಗಿಡದಲ್ಲಿ ಹೂವು ಉದರುವುದಕ್ಕೆ ಶುರುವಾಗುತ್ತೆ ಮತ್ತು ಗಿಡಕ್ಕೆ ಸಸ್ಯಾಹಾರವು ಒದಗದೆ ಗಿಡವು ಒಣಗಿಹೋಗುತ್ತೆ

ನದಿಯ ದಡಗಳಲ್ಲಿ ಅಂಥರೆ ಒಂದು ಪ್ರದೇಶಗಳಲ್ಲಿ ಈ ಗಿಡವು ಚೆನ್ನಾಗಿ ಬೆಳವಳಿಕೆಯನ್ನು ಹೊಂದುತ್ತೆ. ಇದರ ಹಣ್ಣು ಪಕ್ವವಾದಾಗ ಕೆಂಪು ಬಣ್ಣವನ್ನು ಹೊಂದುತ್ತೆ. ಈ ತೋಟಗಳು ಎಕರೆ ಒಂದಕ್ಕೆ ೭೫೦ ರೂಪಾಯಿವರಿವಿಗೆ ಬೆಲೆ ಬಾಳುತ್ತವೆ.

ಬಿತ್ತನೆ ಹಾಕಿ ಪೈರನ್ನು ಬೆಳೆಯುವದು ಅನುಕೂಲವಿಲ್ಲ. ನಾಗಪೂರ್‌ನಲ್ಲಿ ಬಿತ್ತನೆಹಾಕಿ ಸಸಿಗಳನ್ನು ಮಾಡಿದ್ದರಲ್ಲಿ ಇವುಗಳು ಮುಳ್ಳುಕೂಡಿದ್ದವು. ಆದರೆ ಈ ಸಸಿಗಳನ್ನು ಮರಗಳಮೇಲೆ ಹಬ್ಬಿಸಿದರೆ ಮುಳ್ಳುಗಳು ಕಮ್ಮಿಯಾಗುತ್ತವೆ ಮುಳ್ಳುಗಳಿಲ್ಲದೆ ಇರುವದರಿಂದ ಅನೇಕ ವಿಧದಲ್ಲಿ ಅನುಕೂಲಗಳುಂಟು ಅಗತೆಮಾಡುವದಕ್ಕೂ ಗೊಬ್ಬರ ಹಾಕುವದಕ್ಕೂ ತೊಂದರೆಗಳು ಕಡಿಮೆ ಗೊಬ್ಬರ ಮುಂತಾದ್ದು ಸರಿಯಾಗಿ ಹಾಕಿ ವ್ಯವಸಾಯ ಮಾಡಿದ ಗಿಡಗಳು ಕೂಡ ಕೆಲವು ವೇಳೆ ಚೆನ್ನಾಗಿ ಫಲಿಸುವುದಿಲ್ಲ ಇದಕ್ಕೆ ಕಾರಣವು ಸುಲಭವಾಗಿ ತಿಳಿಯುವುದಿಲ್ಲ ಪ್ರಾಯಶಃ ನಾಟಿದ ಸಸಿಗಳು ಸರಿಯಾಗಿಲ್ಲದೆ ಇರುವಿಕೆಯು ಇದಕ್ಕೆ ಕಾರಣವಾಗಿರಬಹುದು

ಬಿತ್ತನೆ — ಗಿಡದ ಮೇಲೆಯೇ ಪಕ್ವವಾದ ಹಣ್ಣುಗಳನ್ನು ಆರಿಸಿ ಹತ್ತು ದಿನಗಳವರಿವಿಗೆ ಕೊಳೆಯಿಸಬೇಕು ನಂತರ ಅವುಗಳಲ್ಲಿರುವ ಬೀಜಗಳನ್ನು ತೆಗೆದುಕೊಳ್ಳಬೇಕು ದಪ್ಪನಾಗಿ ಬಲಿತಿರುವ ಬೀಜಗಳನ್ನು ಚುನಾಯಿಸಿ ಇಟ್ಟುಕೊಳ್ಳಬೇಕು ಬೀಜಗಳನು ನೀರಿನಲ್ಲಿ ತೋಯಿಸಲು ಹಗುರವಾದವುಗಳು ಮೇಲಕ್ಕೆ ಬರುತ್ತವೆ ಭಾರವಾದ ಬೀಜಗಳು ತಳದಲ್ಲಿ ನಿಲ್ಲುತ್ತವೆ ಇವುಗಳು ಬಿತ್ತನೆಗೆ ಅನುಕೂಲವಾದವುಗಳು ಬೀಜಗಳನ್ನು ಕಾಲವಿಳಂಬ ಮಾಡಿ ಬಿತ್ತನೆ ಹಾಕಿದರೆ ಸರಿಯಾಗಿ ಬರುವದಿಲ್ಲ ಬೀಜಗಳನ್ನು ಪಾತಿಗಳಲ್ಲಿ ಬಿಸಲಿನ ಝಳಕ್ಕೆ ಸಿಕ್ಕದಹಾಗೆ ನೆಡಬೇಕು ಸಸಿಗಳು ೫ ಅಂಗುಲ ಎತ್ತರವಾದ ಮೇಲೆ ನಾಟಿಹಾಕಬೇಕು. ನಾಟಿಹಾಕುವ ಬೇರನ್ನು ಕೊಂಚ ಮಟ್ಟಿಗೆ ಕತ್ತರಿಸಬೇಕು ಹೀಗೆ ಮಾಡುವದರಿಂದ ಕೊಂಬೆಗಳು ಹೊರಟು ಗಿಡವು ಬೆಳತೆಯನ್ನು ಹೊಂದುತ್ತೆ ಒಂದು ಸಸಿಯಿಂದ ಮತ್ತೊಂದು ಸಸಿಗೆ ಹನ್ನೆರಡು ಅಂಗುಲ ಅಂತರವಿರಬೇಕು ಸಸಿಯು ಬೆಳತೆಯನ್ನು ಹೊಂದಿದ ಮೇಲೆ ಬುಡದಿಂದ ೩ ಅಂಗುಲ ವರಿಗೆ ತಳದ ರೆಂಬೆಗಳನ್ನು ಕತ್ತರಿಸಿ ತೆಗದುಹಾಕಬೇಕು

ಪತ್ರವ್ಯವಹಾರ

ಕೆಟ್ಟ ಮೇಲೆ ಬುದ್ಧಿ, ಆಟ್ಟಮೇಲೆ ಬೆಂಕಿ.

ಅಯ್ಯಾ,

ಗೌಡಸಾರಸ್ವತ ಪರಿಷದಗಳ "ಏಕಿ ಬೇಕಿ" ನ್ಯಾಯವು ನಮ್ಮಲ್ಲಿ ತೀರ್ಮಾನವಾಯಿತು. ಮುಲ್ಕಿಕಾರರಂತೆ ಪರರ ಮಾತುಗಳನ್ನು ಕೇಳಿ ವಿಶೇಷ ದ್ರವ್ಯ ನಷ್ಟವನ್ನು ಮಾಡುವ ಮುಂಚೆ ಏಕೀ ಪರಿಷದವನ್ನು ಹೋಗಿ ಸೇರಿದವರನ್ನು ಕೂಡಿ ನಡಿಯುವುದು ಆಕ್ಷೇಪಕರವಲ್ಲವೆಂಬದನ್ನು ನಮ್ಮಲ್ಲಿಯ ಗೌಡಸಾರಸ್ವತರು ಪ್ರತ್ಯಕ್ಷ ತೋರಿಸಿ ಕೊಟ್ಟರು ಇದು ಹ್ಯಾಗೆ ಎಂಬುದನ್ನು ಒಂದೇ ಮಾತಿನಲ್ಲಿ ಹೇಳಿ ಬಿಡುವೆನು ಕೆಲವು ದಿವಸಗಳಿಂದ ಮುಲ್ಕಿಯ ಸಾವುಕಾರ ರಾ। ಬಂಗ್ಲೆಕಾರರು ಈ ಊರಲ್ಲಿರುವರು ಕೆ ಪಿ ಕಾರರ ಕಡೆಯಿಂದ ಇಲ್ಲಿಯ ದೇವಸ್ಥಾನದಲ್ಲಿ ಒಂದು ಉತ್ಸವ ಸಮಾರಾಧನೆಯಿತ್ತು ಸಮಾರಾಧನೆ ಕಾಲದಲ್ಲಿ ದೇವಸ್ಥಾನಕ್ಕೆ ಬಂದಿದ್ದ ರಾ। ಬಂಗ್ಲೆಕಾರರಿಗೆ ಊಟಕ್ಕೆ ಆಮಂತ್ರಣ ಕೊಡೋಣಾಗಿ ಏಕೀ ಪರಿಷದದ ನಾಯಕರಾದ ಇವರೊಡನೆ ಸರ್ವರೂ ಸಹಪಂಕ್ತಿಯಲ್ಲಿ ಉಂಡರು

ಮುಲ್ಕಿಯವರು ಈ ನ್ಯಾಯದಲ್ಲಿ ಕೆಟ್ಟರೂ ಇದರಿಂದ ಬುದ್ಧಿಯು ಕಾಸರಗೋಡಿನಲ್ಲಿ ತೋರಿ ಬಂತು. ಆದರೆ ಅಡಿಗೆ ತೀರಿ ಹೋದರೂ ಮುಲ್ಕಿಯಲ್ಲಿ ನಿರರ್ಥಕವಾಗಿ ಉರಿಯುತ್ತಿರುವ ಬೆಂಕಿಯನ್ನು ನೋಡಿ ಮನಕರಗುತ್ತಿರುವುದು ವಾಚಕರೇ, ಈಗಿನ ಸ್ವಾಮಿರಾಯರ ರಾಯಸ ಪತ್ರದ ಈ ಚಿತ್ರಪ್ರದರ್ಶನವನ್ನು ಊಹಿಸಿರಿ.

ಕಾಸರಗೋಡು, ತಾ 16 – 4 – 15 ವಿರಾಮ.

ಕ್ಲಬ್ಬುಗಳು ಅಗತ್ಯ, ಯಾಕೆ?

ಸ್ವಾಮಿ,

ಮಂಗಳೂರಿಗೆ ಕುಬಪರೇಟಿವ್ ಕನ್ಫರೆನ್ಸಿನ ಬಗ್ಗೆ ಕೆಲವು ದಿನಗಳ ಹಿಂದೆ ಬಂದಿದ್ದೆನು. ಮಂಗಳೂರಿಗೆ ಬಾರದೆ ಕೆಲವು ವರುಷಗಳು ಆದವು. ನಮ್ಮಲ್ಲಿ ಕ್ಲಬ್ಬು ಕ್ಲಬ್ಬು ಅನ್ನುವಂಥಾ ಏರ್ಪಾಡು ಮಂಗಳೂರಿನಲ್ಲಿ ಆಗಿದೆ. ಇಲ್ಲಿದ್ದಕ್ಕೆ ಕೆಲವು...

ಲಿಟನ್ ಕ್ಲಬ್ಬ್ ಅನ್ನುತ್ತಾರೆ. ಕನ್ಫರೆನ್ಸು ತೀರಿದ ಮೇಲೆ ಸಾಯಂಕಾಲ ಎರಡು ದಿನಗಳಲ್ಲಿಯೂ ಇಲ್ಲಿಗೆ ಬಂದಿದ್ದೆ. ಕೊಸ್ಮೊಪೊಲಿಟನ್ ಕ್ಲಬ್. ಬಹಳ ರಮಣೀಯವಾದ ನೋಟ. ಎಲ್ಲಾ ವೃತ್ತಿಯವರೂ ಇಲ್ಲಿ ನೋಡಸಿಕ್ಕುವರು. ಸಾಯಂಕಾಲ ಇಲ್ಲಿ ಬಂದವರು ರಾತ್ರೆ ಗಂಟೆ ೮ಕ್ಕೆ ಮನೆಗೆ ಹೋಗುವರು. ಕ್ಲಬ್ಬನ್ನು ಸಂದರ್ಶಿಸಿದ ಮೇಲೆ ನನ್ನ ಸ್ನೇಹಿತರೊಬ್ಬರು ನನ್ನ ಬಗ್ಗೆ ಸಿದ್ಧಗೊಳಿಸಿದ ಕುರ್ಚಿಯೊಂದರ ಮೇಲೆ ಕೂತುಕೊಂಡೆನು. ತರುಣ ಪ್ರಾಯದವರಿಬ್ಬರು ಒಂದು ಬೆಂಚಿನ ಮೇಲೆ ಕೂತುಕೊಂಡು ಮಾತಾಡುವುದನ್ನು ನೋಡಿದೆನು. ಅವರ ಮಾತು ನನಗೆ ಸರಿಯಾಗಿ ಕೇಳಿಸುತ್ತಿತ್ತು. ಆದರೆ ನಾನು ಅವರು ಮಾತಾಡಿದ್ದೆಲ್ಲವನ್ನು ಕೇಳುತ್ತಿರುವೆನೆಂತ ಅವರು ತಿಳಿದರೆ ತಮ್ಮ ಮಾತುಕಥೆಯನ್ನು ನಿಲ್ಲಿಸಿಬಿಡುವರೆಂತ ಊಹಿಸಿಕೊಂಡು ಸಮೀಪ ಮೇಜಿನ ಮೇಲಿರುವ ಪತ್ರವನ್ನು ಕೈಯಲ್ಲಿ ಹಿಡಕೊಂಡು ಅದನ್ನು ಓದುತ್ತಿರುವೆನೆಂತ ನಟಿಸಿ ಆ ತರುಣರಿಬ್ಬರ ಸಂಭಾಷಣೆಯನ್ನು ಕೇಳುತ್ತಿದ್ದೆನು.

ಈ ತರುಣರಿಬ್ಬರು ಆಡಿದ ಮಾತುಗಳನ್ನು ಕೊಸ್ಮೊಪೊಲಿಟನ್ ಕ್ಲಬ್ಬಿನ ಮೆಂಬರರೂ ಇತರ ಕಡೆಗಳಲ್ಲಿರುವ ಕ್ಲಬ್ಬಿನವರೂ ಏನೆಂತ ತಿಳಿಯುವುದು ಅಗತ್ಯವೆಂತ ನನಗೆ ಕಂಡು ಬಂದದ್ದರಿಂದ ಆ ಇಬ್ಬರು ತರುಣರು ನನ್ನನ್ನು ಕ್ಷಮಿಸುವರೆಂಬ ಭರವಸೆಯಿಂದ ಅವರ ಸಂಭಾಷಣೆಯ ಸಾರಾಂಶವನ್ನು ನಾನು ಕೇಳಿರುವ ಮಟ್ಟಿಗೆ ಬರೆದು ಪ್ರಕಟಣೆ ಬಗ್ಗೆ ತಮ್ಮಲ್ಲಿಗೆ ರವಾನಿಸಿರುವೆನು. ದಯಮಾಡಿ ಇದನ್ನು ಪ್ರಕಟಗೊಳಿಸಿರಿ.

ಕುಬಪರೇಟಿವ್ ಕನ್ಫರೆನ್ಸಿನಲ್ಲಿ ರಾ ಮೊಳಹಳ್ಳಿ ಶಿವರಾಯರ ಮೋಹನತ್ವನ್ನು ಕೊಂಡಾಡಿದ ಬಳಿಕ ಮಂಗಳೂರಲ್ಲಿ ಶಿವರಾಯರಂಥವರು ಇಲ್ಲ ಇಲ್ಲವೆಂತ ಇಬ್ಬರೂ ವಿಷಾದಿಸಿದರು.

"ಕ್ಲಬ್ಬು ಇಂಥವುಗಳಲ್ಲಿ ತಮ್ಮ ಸಮಯವನ್ನೆಲ್ಲಾ ವ್ಯರ್ಥ ಮಾಡುವವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿರುವ ಈ ಊರಿಗೆ ಶಿವರಾಯರಂಥವರು ನೋಡಸಿಕ್ಕಲಿಕ್ಕಿಲ್ಲ. ಇತ್ತನೋಡಿ, ಆ ಬದಿಯ ಗಲಾಟೆ. ಇದು ಮಧ್ಯಾಹ್ನ ೭ ಘಂಟೆಯಿಂದ ಶುರುವಾಗುತ್ತಿದೆ. ಮಧ್ಯಾಹ್ನ ೩ ಘಂಟೆಯ ಸಮಯ—ವೃತ್ತಿಯ ಸಮಯ. ಅದನ್ನು ಬಿಟ್ಟು ಇವರು ಏಕೆ ಹೀಗೆ ಸಮಯವನ್ನು ವ್ಯರ್ಥ ಮಾಡುತ್ತಿರುವರು? ಆ ಬದಿ ಸಿಗರೇಟಿನ ಹೊಮಕುಂಡವನ್ನು ನಿರ್ಮಿಸಿ ಏನೋ ಒಂದು ಆಟದಲ್ಲಿ ಕಳೆದ ಆರು ತಾಸುಗಳಿಂದ ಮಗ್ನರಾಗಿರುವಂಥವರ ಮುಖಗಳನ್ನು ಚೆನ್ನಾಗಿ ನೋಡಿ ಬಿಡಿ. ವಯೋವೃದ್ಧರು ತಮ್ಮ ಕಾಲು ಬಿಡದಲ್ಲಿದ್ದರೂ ಆ "ಇಜಿತೇಯರು"ಗಳ ಮೇಲೆ ಕಾಲ್ನೀಡಿ ಬಿದ್ದಿರುವ ಆ ಮೂರ್ತಿಗಳ ಪ್ರತಾಪವನ್ನು ತಿಳಿದಿರುವಿರಾ! ಕ್ಲಬ್ಬಿಗೆ ಜನರನ್ನು ಆಕರ್ಷಿಸುವಂಥಾದ್ದು ಎಂಥಾದ್ದು? ಇಂಥವುಗಳ ಪ್ರಯೋಜನವೇನು?"

"ಗೆಳೆಯ, ಕ್ಲಬ್ಬುಗಳು ಪ್ರಯೋಜನವಿಲ್ಲದವುಗಳೆಂತ ಹಾಗೆ ಬಿಮ್ಮಯೇ ಅಭಿಪ್ರಾಯ ಪಡಬೇಡ. ನೀನು ತೋರಿಸಿಕೊಟ್ಟ ದೋಷಗಳು ಕೆಲವರಲ್ಲಿ ಕಂಡು ಬಂದದ್ದರಿಂದ ಕ್ಲಬ್ಬುಗಳೇ ಪ್ರಯೋಜನವಿಲ್ಲದವುಗಳೆಂತ ಹೇಳಬೇಡ. ಯುರೋಪಿಯರಿಂದ ನಾವು ಕಲಿತುಕೊಂಡ ಹಲವು ನವೀನ ವಿಷಯಗಳಲ್ಲಿ ಕ್ಲಬ್ಬು ಒಂದಾಗಿದೆ. ದಿನವೆಲ್ಲಾ ವೃತ್ತಿಯಲ್ಲಿ ಕಳೆದ ಬಳಿಕ ಆರಾಮವನ್ನು ಯುರೋಪಿಯರು ಕ್ಲಬ್ಬುಗಳಲ್ಲಿ ಹೊಂದುತ್ತಿರುವರು. ವಿಶ್ರಾಂತಿ ಕಾಲದಲ್ಲಿ ಯುರೋಪಿಯರು ಕ್ಲಬ್ಬುಗಳಲ್ಲಿ ಹ್ಯಾಗೆ ವರ್ತಿಸುತ್ತಿರುವರೆಂಬುದನ್ನು ನೋಡಿಕೊಂಡು ನಾವೂ ಸಹ ಅದೇ ರೀತಿ ವರ್ತಿಸುತ್ತಿದ್ದೇವೆ. ಆದರೆ ವೃತ್ತಿಯಲ್ಲಿ ನಿರತರಾಗಿರುವ ಯುರೋಪಿಯರ ಶೀಲವನ್ನು ನಾವು ಇನ್ನೂ ಅರಿತವರಲ್ಲ. ವ್ಯಾಪಾರ ಬಂದಸಾಲೆಗಳಲ್ಲಿ, ಆಫೀಸುಗಳಲ್ಲಿ ಕೆಲಸ ನಿರ್ವಹಿಸುತ್ತಿರುವಾಗ ಅನಾವಶ್ಯಕ ಮಾತುಕಥೆಯಲ್ಲಿ ಯುರೋಪಿಯರು ಸಮಯವನ್ನು ವೆಚ್ಚ ಮಾಡರು. ವ್ಯವಸ್ಥೆಯಿಂದ, ಕ್ರಮದಿಂದ ವೃತ್ತಿಯನ್ನು ನಡೆಸಿದ ಮೇಲೆ ಕ್ಲಬ್ಬುಗಳ ವಿಶ್ರಾಂತಿಯು ಇವರಿಗೆ ಅಗತ್ಯವಾಗಿದೆ. ನಮ್ಮವರು ಬಂದಸಾಲೆಗಳಲ್ಲಿ "ಪಟ್ಟಂಗ", ಆಫೀಸುಗಳಲ್ಲಿ "ಅಂತರಂಗ" ಇವುಗಳಲ್ಲಿ ಸಮಯವನ್ನು ವಿಶೇಷವಾಗಿ ಕಳೆದು ಕ್ಲಬ್ಬಿಗೆ ಬಂದು ಈ ರೀತಿ ವರ್ತಿಸುವುದನ್ನು ನೋಡಿ ಅದು ದೋಷಕರವೆಂತ ಕಂಡು ಬರಬಹುದು. ಇದರಿಂದ ಕ್ಲಬ್ಬುಗಳಿಂದ ಪ್ರಯೋಜನವಿಲ್ಲದೆಂದು ಹೇಳಲಾಗದು. ಗೆಳೆಯ, ಜೀವನ ಹೋರಾಟದಿಂದ ನಮ್ಮವರೂ ಸಹ ಒಬ್ಬೊರಿಗೊಬ್ಬರು ಕಾಣಸಿಕ್ಕುವುದು ಅಪರೂಪವಾಗಿದೆ. ಇಂಥಾ ಕಾಲಗಳಲ್ಲಿ ನಮಗೂ ಕ್ಲಬ್ಬುಗಳಂಥವುಗಳು ಬೇಕಾಗಿವೆ."

"ಇದೆಲ್ಲವೂ ನಿಜ. ಆದರೆ ಯುರೋಪಿಯರು ವರ್ತಿಸಿದಂತೆ ಕ್ಲಬ್ಬುಗಳಲ್ಲಿ ನಾವೂ ವರ್ತಿಸುವುದು ನನಗೆ ಯುಕ್ತ ತೋರದು. ಯುರೋಪಿಯರ ಆಚಾರ ಪದ್ಧತಿಗಳನ್ನು ಅವರ ನವೀನಜೀವನಾಕ್ರಮಗಳನ್ನು ಅಕ್ಷರಶಃ ನಾವು ಅನುಸರಿಸುವುದು ಉಚಿತವಲ್ಲ. ನಮ್ಮ ಸ್ವಭಾವಗಳಿಗೆ, ಸರಿಯಾಗಿ ನಮ್ಮ ಅಭ್ಯಾಸಗಳನ್ನು ತಿದ್ದಲು ಅವಕಾಶಕೊಡುವಂತೆ ಯುರೋಪಿಯ ಏರ್ಪಾಡುಗಳಲ್ಲಿ ನಮಗೆಪ್ರಯೋಜನವುಳ್ಳವುಗಳನ್ನು ಅನುಸರಿಸಬೇಕು. ನೋಡಿ, ಈ ದಿನ ಕೊನ್ಫರೆನ್ಸ್ ಸಭೆಯಲ್ಲಿ ಜನರ ಮನಸ್ಸನ್ನು ಆಕರ್ಷಿಸುವಂತೆ ಮಾತಾಡುವಂಥವರನ್ನು ಒಬ್ಬರನ್ನಾದರೂ ನೀವು ಕಂಡಿರಾ? ವಕೀಲರು ಇದ್ದರು, ಸರಕಾರದ ನೌಕರರು, ಇನ್ನೂ ವಿದ್ಯಾವಂತರನೇಕರು ಇದ್ದರು. ಸಭಾಸದರ ಉಡುಪುತೊಡುಪುಗಳ ಶೃಂಗಾರವನ್ನು ನೋಡಿದರೆ ಬೆನರ್ಜಿಗಳೋ ಗೋಖಲೆಯವರೋ ಅಥವಾ ಲಾಲಾಲಜಪತ್ ರೈಗಳೋ ಎಂತ ಕಾಣಬರುತ್ತಿದ್ದರು. ಇಂಥಾ ನಮ್ಮ ದೋಷವನ್ನು ಕಂಡುಹಿಡಿಯಬೇಕು. ಕೆಲಸ ವಿಶೇಷವಿಲ್ಲದ ತರುಣ ವಕೀಲರೂ ಇತರ ವೃತ್ತಿಯವರೂ ಅನೇಕರಿದ್ದಾರೆ. ಪಟ್ಟಣದ ವಿಷಯಗಳಲ್ಲಿ, ಮುನ್ಸಿಪಲ್ ವಿಷಯಗಳಲ್ಲಿ, ಸಾಮಾಜಿಕ ವಿಷಯಗಳಲ್ಲಿ ವಾದಗಳನ್ನು ನಡೆಸಿ ಭಾಷಣಗಳನ್ನು ಕೊಟ್ಟು ವಾಕ್ಪಟುತ್ವವನ್ನು ಬೆಳಿಸಿಕೊಳ್ಳಲು ಇಂಥಾ ಕ್ಲಬ್ಬುಗಳಲ್ಲಿ ಬೇಕಾದಂಥಾ ಏರ್ಪಾಡುಗಳನ್ನು ಯಾಕೆ ಮಾಡಕೂಡದು?

ಬೆಂಚಿನ ಮೇಲೆ ಕೂತುಕೊಂಡಿದ್ದ ಗೆಳೆಯರ ಈ ಮಾತುಗಳು ಮುಗಿಯುವಷ್ಟರಲ್ಲಿ ಏನೋ ಯಂತ್ರದ ನಾದವು ರಸ್ತೆಯಲ್ಲಿ ಕೇಳಬಂತು. ನಿಮಿಷಾರ್ಧದಲ್ಲಿ ಮೊಟರ್ ಬಂಡಿ ಕ್ಲಬ್ಬಿನ ಹತ್ತಿರ ಸೇರಿತು. ತರುಣರಿಬ್ಬರು ಕೆಳಗಿಳಿದು ಮೈದಾನಿನತ್ತ ಕಡೆ ಹೋಗಿ ಬಿಟ್ಟರು.

ತಾಲೂಕು ಊರಿನವ.

ಅಯ್ಯಾ ಪತ್ರಕರ್ತರೇ,

ಗವರ್ನರ ದೊರೆಗಳವರು ನಮ್ಮ ಪಟ್ಟಣವನ್ನು ಸಂದರ್ಶಿಸಿ ಹೋಗಿ ಕೆಲವು ತಿಂಗಳುಗಳಾದವು. ದೊರೆಗಳವರ ಸತ್ಕಾರದ ಬಗ್ಗೆ ಸ್ವಾಗತ ಕಮಿಟಿಯೊಂದು ಏರ್ಪಡಿಸಲ್ಪಟ್ಟಿತ್ತು. ಅಲ್ಪ ಸ್ವಲ್ಪ ದ್ರವ್ಯವನ್ನು ಈ ಕಮಿಟಿಯವರು ಪಟ್ಟಣಿಗರಿಂದ ಕೂಡಿಸಿದ್ದಾರೆ. ಹೀಗೆ ಕೂಡಿಸಿದ ಹಣದ ಲೆಕ್ಕ ವೃತ್ತಾಂತವನ್ನು ಶೀಘ್ರದಲ್ಲಿ ಪ್ರಕಟಿಸಿದರೆ ವಂತಿಗೆ ಕೊಟ್ಟವರಲ್ಲಿ ಇಂಥಾ ಕಾರ್ಯಗಳಿಗೆ ಇನ್ನೂ ದ್ರವ್ಯ ಸಹಾಯ ಕೊಡಲು ಪ್ರೋತ್ಸಾಹ ಉಂಟಾಗುವದು. ಆದ್ದರಿಂದ ಕಮ್ಮಿಟಿಯವರು ಈ ವಿಷಯಕ್ಕೆ ತಕ್ಕ ನಿಗಾ ಕೊಡುವರೆಂತ ಕೋರುವ,

ತಮ್ಮ ವಿಧೇಯ ಸೇವಕ, ಗೋವಿಂದ.

೨ನೇ ಪುಟದಿಂದ ಮುಂದರಿದುದು.

ಎಲ್ಲಾ ಕಾರ್ಯಸಾಧನೆಗಳಿಗೆ ಬಾಲಿಕಾ ಶಿಕ್ಷಣ ಪ್ರಸರಣೆಯು ಅಗತ್ಯವಾದುದರಿಂದ ಜಾತಿ ಬಂಧುಗಳು ಈ ಬಗ್ಗೆ ತಮ್ಮಿಂದಾಗುವ ಪ್ರಯತ್ನಗಳನ್ನು ನಡಿಸಬೇಕೆಂದು ಸಭಾಧ್ಯಕ್ಷರು ಆಜ್ಞಾಪಿಸಿರುವರು. ಇನ್ನು ಕೆಲವು ಬುದ್ಧಿವಾದವನ್ನು ಕೊಟ್ಟು ಅಧ್ಯಕ್ಷರು ತಮ್ಮ ಭಾಷಣವನ್ನು ಮುಗಿಸಿದ ಬಳಿಕ ರಾ| ಮುಕುಂದ ಮಲ್ಯರವರು ಸಭಾಧ್ಯಕ್ಷರನ್ನೂ ಇತರರನ್ನೂ ವಂದಿಸಿ ಮಾತಾಡಿದರು. ನಂತರ ಸಭೆಯು ಮುಕ್ತಾಯವಾಯಿತು.

ಉತ್ತರ ಮಲಬಾರಿನಲ್ಲಿರುವ ಗೌಡಸಾರಸ್ವತರಲ್ಲಿ ಹೆಚ್ಚಿನವರು ದಕ್ಷಿಣಕನ್ನಡದಿಂದ ಆ ಪ್ರಾಂತ್ಯಗಳಿಗೆ ಜೀವನ ವೃತ್ತಿಗಳ ಬಗ್ಗೆ ಹೋದವರೆಂತ ತೋರಿಬರುತ್ತದೆ. ತಲಚೇರಿಯಲ್ಲಿ ಸುಮಾರು ೬೦೦ ಯಾ ೭೦೦, ಕಣ್ಣಾನೂರಿನಲ್ಲಿ, ೨೦೦ ಯಾ ೩೦೦ ಕಲ್ಲಿಕೋಟೆಯಲ್ಲಿ ಸುಮಾರು ೧೦೦ ಯಾ ೨೦೦ ಜನ ಗೌಡಸಾರಸ್ವತರ ಜನಸಂಖ್ಯೆಯಿದೆ. ರೈಲ್ವೆ ದಾರಿಯ ಸೌಕರ್ಯವು ಈ ಪ್ರಾಂತ್ಯಗಳಲ್ಲಿರುವದರಿಂದ ಎಲ್ಲಾ ಕಾರ್ಯಸಾಧನೆಗಳಲ್ಲಿ ಈ ಪ್ರಾಂತ್ಯದವರಿಗೆ ಕೂಡಿ ನಡೆಯಲು ತುಂಬಾ ಆಸ್ಪದವಿರುವುದು. ಗೋಮಂತಕದಲ್ಲಿ ತಮ್ಮ ಕುಲದೇವತೆಗಳ ದೇವಸ್ಥಾನಗಳನ್ನು ಬಿಟ್ಟು ಈ ದಕ್ಷಿಣ ಪ್ರಾಂತ್ಯಗಳಿಗೆ ಬಂದ ಗೌಡಸಾರಸ್ವತರಲ್ಲಿ ತಾವು ಹೋದಕಡೆಯಲ್ಲೆಲ್ಲಾ ದೇವಸ್ಥಾನಗಳನ್ನು ಸ್ಥಾಪಿಸುವ ವಿಶೇಷ ಗುಣವಿರುವುದು. ಇದಕ್ಕನುಗುಣವಾಗಿ ತಲಚೇರಿ ಮತ್ತು ಕಣ್ಣಾನೂರು ಪಟ್ಟಣಗಳಲ್ಲಿ ಸ್ಥಾಪಿಸಲ್ಪಟ್ಟ ಗೌಡಸಾರಸ್ವತರ ದೇವಸ್ಥಾನಗಳಿವೆ. ಹಿಂದೂ ಸಮಾಜದ ಈಗಿನ ದೀನಸ್ಥಿತಿಯನ್ನು ಬಹಳ ಮಟ್ಟಿಗೆ ದೇವಸ್ಥಾನ ಮತ್ತು ಗುರುಮಠಗಳು ಸೂಚಿಸುವವು. ಉತ್ತರ ಮಲೆಬಾರದಲ್ಲಿಯ ಗೌಡಸಾರಸ್ವತರ ಸ್ಥಿತಿಗತಿಯನ್ನು ಈ ಮೂಲಕ ನಿರ್ಧರಿಸುವುದಾದರೆ ಅಲ್ಲಿಯವರು ಇಲ್ಲಿಯ ಗೌಡಸಾರಸ್ವತರ ಸ್ಥಿತಿಗಿಂತ ನಿಕೃಷ್ಟ ಸ್ಥಿತಿಯಲ್ಲಿರುವರೆಂತ ಹೇಳಬಹುದು. ಆದ್ದರಿಂದ ತಲಚೇರಿಯ ಗೌಡಸಾರಸ್ವತರ ಲಿಟರೆರಿ ಯುನಿಯನ್ ಎಂಬ ಸಂಘವನ್ನು ಉತ್ತರ ಮಲಬಾರಿನ ಸಂಘವನ್ನಾಗಿ ಏರ್ಪಡಿಸಿ ಅಲ್ಲಿಯ ಸಾರಸ್ವತ ಸಮಾಜದ ಏಳಿಗೆಯ ಪ್ರಯತ್ನಗಳನ್ನು ಇಂಥಾ ಸಂಘವು ಕೈಕೊಳ್ಳಬಹುದು. ಇದು ಸಾಧ್ಯವಲ್ಲವೆಂತಾದರೆ ಈ ಬಗ್ಗೆ ಒಂದು ಪ್ರತ್ಯೇಕ ಏರ್ಪಾಡನ್ನು ಮಾಡುವುದು ಅಗತ್ಯವಾಗಿದೆ. ಈ ಪ್ರಾಂತ್ಯದವರು ಸಹ ಗತಿಸಿಹೋದ ಪರಿಷದಗಳ ಅನುಭವದಿಂದ ಸಮಾಜದ ಅಭಿವೃದ್ಧಿಯ ಮಾರ್ಗಗಳನ್ನು ಗೊತ್ತುಮಾಡಿಕೊಂಡು ಸಮಾಜವನ್ನು ಅಧೋಗತಿಗೆ ತಳ್ಳಿಬಿಡುವ ತಟಸ್ಥಭಾವವನ್ನು ಶೀಘ್ರದಲ್ಲಿ ತ್ಯಜಿಸುವಂತೆ ಪ್ರಯತ್ನಿಸುವರಾಗಿ ಕೋರುತ್ತೇವೆ.

ಯುದ್ಧ ಸಮಾಚಾರ.

ತಾ. ೧೫ನೇ ಎಪ್ರಿಲ್,

"ರೆನಾರ್ಡ್" ಎಂಬ ಡಿಸ್ಟ್ರೋಯರ್ ನಾವೆಯು ಬೇಹು ನೋಡುವ ಉದ್ದೇಶದಿಂದ ಡರ್ಡನೆಲ್ಸಿನ ಒಳನುಗ್ಗಿ ಪೂರ್ಣ ವೇಗದಿಂದ ೧೦ ಮೈಲುಗಳ ವರೆಗೆ ಮುಂದರಿಸಿತ್ತು. ಇಷ್ಟು ದೂರ ಈ ವರೆಗೆ ಯಾವ ನಾವೆಯೂ ಹೋದದಿಲ್ಲ. ವಿಶೇಷ ತರದ ಗುಂಡುಗಳು ಈ ನಾವೆಯ ಮೇಲೆ ಹಾರಿಸಲಾದವು. ಆದರೆ ನಾವೆಗೆ ತಗಲಲಿಲ್ಲ. "ಲಂಡನ್" ಎಂಬ ಯುದ್ಧ ನಾವೆಯು "ರೆನಾರ್ಡ್" ನಾವೆಯನ್ನು ಹಿಂಬಾಲಿಸಿಕೊಂಡು ಹೋಯಿತು. ಆಸ್ಯದ ಕಡೆಯಲ್ಲಿದ್ದ ಕೋಟೆಗಳಿಂದ ಇದರ ಮೇಲೆ ಗುಂಡುಗಳು ಬಿದ್ದವು. ಆದರೆ ಯೂರೋಪು ಕಡೆಯ ಕೋಟೆಗಳು ಸುಮ್ಮನಿದ್ದವು. "ಟ್ರಿಯಂಫ್" ಎಂಬ ಯುದ್ಧ ನಾವೆಯು ಡರ್ಡನೆಲ್ಸಿನ ಬತ್ತೇರಿಯೊಂದಕ್ಕೆ ಗುಂಡು ಹಾರಿಸಿ ಅದನ್ನು ಹಾನಿಪಡಿಸಿರುತ್ತದೆ. ಮಳೆಬರುತ್ತಿರುವದರಿಂದ ವಾಯು ನಾವೆಗಳ ಕೆಲಸಕ್ಕೆ ಅಡ್ಡಿಯಾಗಿರುತ್ತದೆ.

ಜರ್ಮನರ "ಕ್ರಾನ್‌ಪ್ರಿನ್ಸ್" ನಾವೆಯ ಕೆಪ್ಟನನು ಅದನ್ನು ಪರಿಶೋಧಿಸಿ, ದುರುಸ್ತಿಮಾಡತಕ್ಕ ಸಮಯವನ್ನು ನಿಯಮಿಸಬೇಕೆಂದು ಅಮೇರಿಕ ಸರಕಾರದವರನ್ನು ಕೇಳಿಕೊಂಡಿರುವನು. ಈ ನಾವೆಯಲ್ಲಿರುವ ಬ್ರಿಟಿಷ ಸೆರೆಯಾಳುಗಳು ಈ ಹಡಗದ ಜರ್ಮನರು ತಮ್ಮನ್ನು ನಡಿಸುವ ವಿಧಾನವನ್ನು ಬಹಳವಾಗಿ ಖಂಡಿಸುತ್ತಲಿದ್ದಾರೆ. ಜರ್ಮನಂಗೆ ಬೇಕಾದಷ್ಟು ಮಾಂಸವಿದೆ. ಆದರೆ ಬ್ರಿಟಿಷರಿಗೆ ಬರೇ ಅಕ್ಕಿ ಮತ್ತು ಹುಳಿ, ರೊಟ್ಟಿ ಮಾತ್ರ ಕೊಡುವರು, ಸಾಯಂಕಾಲ ೬ ಗಂಟೆಯಾದ ಕೂಡಲೇ ಬ್ರಿಟಿಷರನ್ನು ಕತ್ತಲೆಯಾದ ಒಂದು ಕೋಣೆಗೆ ದೂಡಿಬಿಡುವರು, ತಮಗೆ ಶೀಮೆಗೆ ಹೋಗಿ ಜರ್ಮನರಿಗೆ ವಿರೋಧವಾಗಿ ಕಾದಾಡಲು ಮನಸ್ಸಿದೆಂತ ಈ ಬ್ರಿಟಿಷ ಸೆರೆಯಾಳುಗಳು ಹೇಳುವರೆಂತ ವಶಿಂಗ್ಟನಿನಿಂದ ವಾರ್ತೆ ಬಂದದೆ.

ಮಾರ್ಚಿ ತಿಂಗಳಲ್ಲಿ ನ್ಯೂವೆಚಪಲ್ಲೆಯಲ್ಲಿ ಆದ ಕದನದಲ್ಲಿ ಬ್ರಿಟಿಷರಲ್ಲಿ ೧೯೦ ಆಫೀಸರರೂ, ೨೩೩೭ ಸೈನಿಕರೂ ಹತರಾದರು; ೩೫೯ ಆಫೀಸರರೂ, ೮೧೭೪ ಸೇನಿಕರೂ ಘಾಯ ಒಡೆದರು; ೨೩ ಆಫೀಸರರೂ ೧,೭೫೧ ಸೇನಿಕರೂ ಕಾಣೆಯಾಗಿರುವರು. ಜರ್ಮನರಲ್ಲಿ ಕೆಲವು ಸಾವಿರ ಮಂದಿ ರಣರಂಗದಲ್ಲಿ ಸತ್ತು ಬಿದ್ದಿದ್ದರು. ಘಾಯ ಒಡೆದ ೧೨,೦೦೦ಕ್ಕಿಂತಲೂ ಹೆಚ್ಚಿಗೆ ಮಂದಿಯನ್ನು ಜರ್ಮನರು ಟ್ರೈನ್ ಮೂಲಕ ಒಯ್ದಿರುವರು. ೩೦ ಆಫೀಸರರೂ, ೧೬೫೭ ಸೇನಿಕರೂ ಸೆರೆಹಿಡಿಯಲ್ಪಟ್ಟಿರುವರು. ಬ್ರಿಟಿಷ ಸೇನೆಯಲ್ಲಿ ಕಮ್ಮಿಯಾದ ಸಂಖ್ಯೆಯು ಕೆಲವು ದಿವಸಗಳೊಳಗೆ ಭರ್ತಿ ಮಾಡಲ್ಪಟ್ಟಿರುವದು ಎಂತ ಸರ್ ಜ್ಹಾನ್ ಫ್ರೆಂಚರವರು ಕಳುಹಿಸಿದ ಪತ್ರದಿಂದ ತಿಳಿದುಬರುತ್ತದೆ.

ಜರ್ಮನರ ಜೆಪಲಿನ ನಾವೆಯು ಬ್ಲೈಯುಲಿ ಎಂಬಲ್ಲಿಗೆ ಬೊಂಬು ಬಿಸಾಡಿದ ವಿಷಯವು ಈ ದಿನದ ವಾರ್ತೆಯಲ್ಲಿದೆ. ಪಶ್ಚಿಮ ರಣರಂಗದಲ್ಲಿ ವಿಶೇಷ ಸಂಗತಿಗಳು ಸಂಭವಿಸಲಿಲ್ಲ. ಜರ್ಮನರ ೨ ವಾಯು ನಾವೆಗಳು ನಿರ್ವಾಹವಿಲ್ಲದೆ ಕೆಳಗೆ ಇಳಿಯಬೇಕಾಗಿ ಬಂದಿತು. ಆದರೆ ನಾವಿಕರು ಸೆರೆ ಹಿಡಿಯಲ್ಪಟ್ಟಿರುವರು. ವೆರ್ಡನಿನ ಉತ್ತರದಲ್ಲಿ ಜರ್ಮನರ ಮತ್ತೊಂದು ವಾಯುನಾವೆಯನ್ನು ಮಿತ್ರ ಸೇನಿಕರು ಕೆಳದೊಬ್ಬಿರುವರು. ವಾಯುನಾವಿಕರು ಘಾಯಪಟ್ಟಿರುತ್ತಾರೆ.

ಯುದ್ಧದ ಕಾಲ ಆಯಾ ಕೆಲಸಗಳನ್ನು ಮಾಡುವರೆ ಲಂಡನಿನ ಹೆಂಗಸರಲ್ಲಿ ಮಾರ್ಚಿ ತಾ. ೩೧ರ ವರೆಗೆ ೩೩ ಸಾವಿರ ಮಂದಿ ತಮ್ಮ ಹೆಸರನ್ನು ಬರಸಿಕೊಟ್ಟಿರುವರು.

ಹೊಲ್ಲೆಂಡಿನ ಮೇಲೆ ಹಾರುತ್ತಿದ್ದ ಒಂದು ವಾಯುನಾವೆಯನ್ನು ಹೊಲ್ಲೆಂಡಿನವರು ರೈಫಲ್ ಕೋವಿ ಹೊಡೆದು ಕೆಳಗಿಳಿಸಿರುವರು ಎಂಬ ವಾರ್ತೆ ಬಂದಿರುವದು.

ಕರ್‌ಪಥೇನಿಯದಲ್ಲಿ ಆಸ್ಟ್ರೀಯನರ ಸೇನೆಗೆ ಜರ್ಮನ ಸೇನೆಯ ಆಫೀಸರರು ಸೇರಿರುವರೆಂತಲೂ ಕೈಸರರು ಖುದ್ದಾಗಿ ಆಸ್ಟ್ರೋ-ಜರ್ಮನ ಸೇನೆಯ ಹಿಂಭಾಗದ ಸೇನೆಯನ್ನು ನಡಿಸುತ್ತಿದ್ದಾರೆಂದೂ ವಾರ್ತೆ ಇದೆ. ಹಂಗೇರಿಯಕ್ಕೆ ನುಗ್ಗಬೇಕೆಂದು ಪ್ರಯತ್ನಿಸುತ್ತಿರುವ ರುಶ್ಯನರ ಸೇನೆಯ ನೆಲೆಯನ್ನು ಮುರಿಯಲು ಆಸ್ಟ್ರಿಯನರ ೫ ಬಲವಾದ ಸೇನಾಂಗಗಳು ಯತ್ನ ನಡಿಸುತ್ತಿವೆಂತಲೂ ವಾರ್ತೆ ಇದೆ.

ಟರ್ಕಿ ಸುಲ್ತಾನರಿಗೆ ಜರ್ಮನ್ ಜನರಲ್ ವನ್ ಡರ್ ಗೊಲ್ಟ್ಜರವರು ಒಂದನೇ ತರಗತಿಯ ಐಯರ್ನ್ ಕ್ರೊಸ್ ಎಂಬ ಬಿರುದನ್ನು ಕೊಟ್ಟಿರುತ್ತಾರೆ.

ತಾ. ೧೬ನೇ ಎಪ್ರೀಲ್.

ಪರ್ಸ್-ಲೆಸ್ ಎಪಾರ್ಗೆಸ್, ಬ್ಯೂಸ್ ಡ್ಯೆಲಿ, ಬ್ಯೂಸ್ ಮೂರೆ ಎಂಬ ಸ್ಥಳಗಳಲ್ಲಿ ಪುನಃ ಮೇಲ್ಬಾಯಿದ ಜರ್ಮನರು ಹಿಮ್ಮೆಟ್ಟಿರುವರು. ಮಿತ್ರ ಸೇನಿಕರು, ಶತ್ರು ಸೇನಿಕರನ್ನೂ, ಅನೇಕ ಫಿರಂಗಿ ಮತ್ತು ರೈಫಲ್ ಕೋವಿಗಳನ್ನೂ ಸೆರೆಹಿಡಿದಿರುವರು.

ಅರ್ಗೋನ್ನೆಯ ಕಂದಕಗಳಲ್ಲಿ ಮಿತ್ರ ಸೇನಿಕರಿಗೂ ಜರ್ಮನರಿಗೂ ಕದನ ನಡೆದಿರುವದು. ಲ್ಯಾಬ್ಯೊಸಲ್ಲೆ ಎಂಬಲ್ಲಿ ಫ್ರೆಂಚರ ಫಿರಂಗಿಗಳು ಜರ್ಮನರ ಕಂದಕಗಳನ್ನೂ ಮರೆ ನುಗ್ಗಿಕೊಳ್ಳುವ ಸ್ಥಳಗಳನ್ನೂ ಪೂರ್ಣವಾಗಿ ವಶ ಮಾಡಿಕೊಂಡಿರುವವು.

ಯ್ಪ್ರೆಸಿನ ಬಳಿ ಜರ್ಮನರ ಒಂದು ಜೆಫಲಿನ್ ನಾವೆಯು ಫಿರಂಗಿಗಳ ಗುಂಡಿನೇಟಿನಿಂದ ಹಾಳಾಗಿ ಬೆಲ್ಜಿಯಮಿನಲ್ಲಿ ಕೆಳಗಿಳಿದಿರುವುದು.

ಮೈಸರಿನಲ್ಲಿ ಕಳೆದ ವಾರಾಂತ್ಯದಲ್ಲಿ ಜರ್ಮನರ ಸಣ್ಣದೊಂದು ಸೇನೆಯು ಮೈಸರ್ ಕಾಲಿವೆಯನ್ನು ದಾಟಿ ಬೆಲ್ಜಿಯನರ ಮೇಲೆ ಬೀಳಲಿಕ್ಕಿದ್ದರು. ಈ ಸಣ್ಣ ಸೇನೆಯ ಹಿಂದೆ ದೊಡ್ಡ ಬೆಂಬಲ ಸೇನೆಯು ಇದ್ದುದರಿಂದ ಬೆಲ್ಜಿಯನರು ಕಷ್ಟಕ್ಕೊಳಗಾಗುವ ಹಾಗಿದ್ದರು. ಆದರೆ ಫ್ರೆಂಚರು ಬೆಲ್ಜಿಯನರಿಗೆ ಸಹಾಯಕ್ಕೆ ಬಂದರು. ಜರ್ಮನರ ಮುಖ್ಯ ಸೇನಾಂಗವು ಮುಂದೊತ್ತುವಾಗ ಮತ್ತೊಂದು ಕಡೆಯಲ್ಲಿ ಬ್ರಿಟಿಷರು ಜರ್ಮನರ ಮೇಲೆ ಬಿದ್ದು ಸನೀಸು ಕಾಳಗದಿಂದ ಅವರನ್ನು ಮೈಸರ್ ಕಾಲಿವೆಯ ಬಲ ದಡದತ್ತಕಡೆ ಅಟ್ಟಿದರು. ಇದರಿಂದ ಶತ್ರುಗಳ ಬಲ ಕುಂದಿತು. ಹೀಗೆ ಫ್ರೆಂಚರೂ ಬೆಲ್ಜಿಯನರೂ ಜರ್ಮನರನ್ನು ಹಿಂದಕ್ಕೆ ಓಡಿಸುವ ಉಪಾಯವಾಯಿತು. ಇಲ್ಲಿ ಮಿತ್ರ ಸೇನಿಕರ ತೋಪುಗಳು ಶತ್ರುಗಳಲ್ಲಿ ಭಯಂಕರವಾದ ನಾಶವನ್ನುಂಟು ಮಾಡಿದವು. ಈ ಕದನದಿಂದ ಮೈಸರಿನಲ್ಲಿ ಮಿತ್ರರ ನೆಲೆಯು ಒಂದು ಮೈಲಿಗೆ ಹೆಚ್ಚಾಯಿತು.

ಬ್ರಿಟಿಷ ಸೇನೆಯಲ್ಲಿ ಎಪ್ರೀಲ್ ತಾ. ೧೧ರ ವರೆಗೆ ೧೩೯,೩೪೭ ಮಂದಿ ಪ್ರಾಣಾಪಾಯ ಹೊಂದಿದರೆಂತ ಮಿ| ಟೆನಾಂಟರವರು ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿ ಹೇಳಿರುತ್ತಾರೆ.

ಮೆಸಪೊಟಾಮಿಯಕ್ಕೆ ಸೇರಿದ ಶೈಬ ಎಂಬಲ್ಲಿ ೨೦ ಸಾವಿರ ತುರ್ಕರೂ ಕುರ್ಡ್ಸರೂ ಮತ್ತು ಅರಬಿ ಸೇನಿಕರೂ ೨೮ ಫಿರಂಗಿಗಳ ಸಹಿತ ಬ್ರಿಟಿಷರ ಮೇಲ್ಬಾಯಿದರು. ಬ್ರಿಟಿಷರು ಕದನಕ್ಕೆ ನಿಂತು ಶತ್ರುಗಳನ್ನು ಉತ್ತರಕ್ಕೆ ಓಡಿಸಿ ೧೮ ಆಫೀಸರರನ್ನೂ ೩೦೦ ಸೇನಿಕರನ್ನೂ, ೨ ಫಿರಂಗಿಗಳ ಸಹಿತ ಸೆರೆಹಿಡಿದರು. ಬ್ರಿಟಿಷ ಸೇನೆಯಲ್ಲಿ ೪ ಬ್ರಿಟಿಷ ಆಫೀಸರರೂ, ೨೩ ಸೇನಿಕರೂ, ೬೫ ಭಾರತೀಯರೂ ಘಾಯ ಒಡೆದರು. ತಾ. ೧೩ನೇ ತಾರೀಕಿನಲ್ಲಿ ಇಲ್ಲಿ ನಡೆದ ಕದನದಲ್ಲಿ ೪೬೦ ಶತ್ರು ಸೇನಿಕರೂ, ೨ ಫಿರಂಗಿಗಳೂ ತಾ. ೧೪ರಲ್ಲಿ ನಡೆದ ಕದನದಲ್ಲಿ ೨೦೦ ಸೇನಿಕರೂ ಬ್ರಿಟಿಷರ ಸೆರೆ ಬಿದ್ದಿರುವರೆಂತ ಬಸ್ರಾದಿಂದ ವಾರ್ತೆ ಬಂದಿರುತ್ತದೆ.

ಉಸ್ಸಕ್ ಕಣಿವೆ ದಾರಿಯಲ್ಲಿ ರುಶ್ಯನರಿಗೂ ಶತ್ರುಗಳಿಗೂ ಕಠಿಣ ಕಾಳಗ ನಡೆಯುತ್ತಿದೆ. ಶತ್ರುಗಳು ಹಿಮ್ಮೆಟ್ಟಿದರು. ರುಶ್ಯನರು ೧೦೦೦ ಸೇನಿಕರನ್ನು ಸೆರೆಹಿಡಿದಿರುವರು.

ತಾ. ೧೭ನೇ ಎಪ್ರೀಲ್.

ಜರ್ಮನರ ಜಲಂತರ್ಗಾಮಿ ನಾವೆಯು ಬ್ರಿಟಿಷರ ಒಂದು ನಾವೆಯನ್ನು ಡಚ್ಚ ಕರಾವಳಿಯಲ್ಲಿ ಮುಳುಗಿಸಿರುವದು. ತಾ. ೧೪ಕ್ಕೆ ಅಂತ್ಯವಾಗುವ ವಾರದಲ್ಲಿ ಬ್ರಿಟಿಷರ ಎರಡು ನಾವೆಗಳನ್ನು ಜರ್ಮನರ ಜಲಂತರ್ಗಾಮಿ ನಾವೆಗಳು ಮುಳುಗಿಸಿದವು. ಗ್ರೇಟ್ ಬ್ರಿಟನಿಗೆ ಆ ವಾರ ಬಂದು ಹೋದ ನಾವೆಗಳ ಸಂಖ್ಯೆ ೧೪೩೨ ಎಂದು ಪ್ರಕಟವಾಗಿದೆ.

ಡಚ್ಚರ "ಕಟ್‌ವಿಟ್ಜ್" ಎಂಬ ನಾವೆಯೂ ಒಂದು ಟ್ರವಲರ್ ನಾವೆಯೂ ಜರ್ಮನರ ಜಲಂತರ್ಗಾಮಿ ನಾವೆಯಿಂದ ಮುಳುಗಿಸಲ್ಪಟ್ಟಿರುವದು. ಇದರಿಂದ ಡಚ್ಚ ದೇಶದವರು ಜರ್ಮನರ ಮೇಲೆ ಹುರಿದುಂಬಿರುತ್ತಾರೆ. ಎಲ್ಲಾ ವರ್ತಮಾನ ಪತ್ರಿಕೆಗಳು ಜರ್ಮನರ ಈ ವರ್ತನವನ್ನು ಖಂಡಿಸುತ್ತಿವೆ.

ಅರ್ರಾಸಿನ ಉತ್ತರದಲ್ಲಿ ಮಿತ್ರ ಸೇನಿಕರಿಗೆ ದೊಡ್ಡ ಜಯವಾಗಿರುವದು. ೧೬೦ ಸೇನಿಕರು ಸೆರೆಬಿದ್ದಿರುವರು. ಹಲವು ಯುದ್ಧ ಸಾಮುಗ್ರಿಗಳೂ ದೊರಕಿರುವವು. ಫ್ರೆಂಚರ ತೋಪುಗಳು ಜರ್ಮನರ ಒಂದು ವಾಯುನಾವೆಗೆ ಗುಂಡು ಹಾರಿಸಿದ್ದರಿಂದ ಅದು ಯ್ಪ್ರೆಸಿನ ಬ್ರಿಟಿಷ ನೆಲೆಯ ಮತ್ತೊಂದು ಕಡೆಯಲ್ಲಿ ಕೆಳಗೆ ಬಿದ್ದಿರು

ಜರ್ಮನರ ಜೆಫಲಿನ್ ನಾವೆಗಳು ನೋರ್ಥ್ ಹಂಬರ್‌ಲೇಂಡಿಗೆ ಹೋಗಿ ಬೊಂಬುಗಳನ್ನು ಬಿಸಾಡಿರುವವು. ಆದರೆ ವಿಶೇಷ ಹಾನಿಯಾಗಲಿಲ್ಲ. ಕೆಲವು ಮನೆಗಳು ಮಾತ್ರ ಸುಟ್ಟು ಹೋಗಿರುವವು. ಪ್ರಾಣಾಪಾಯವೂ ಸಂಭವಿಸಲಿಲ್ಲ.

ತಾ. ೧೮ನೇ ಎಪ್ರೀಲ್.

ಸಿರಿಯದ ಒಳ ಪ್ರಾಂತ್ಯಕ್ಕೆ ಸಮ್ಮಂಧಿಲ್ಪಟ್ಟ ರೈಲ್ವೆ ಸಂಕವನ್ನು ಫ್ರೆಂಚರ ಕ್ರೂಜರ್ ನಾವೆಯು ಹಾಳುಪಡಿಸಿರುವದು ಎಂತ ಪ್ರಕಟವಾಗಿದೆ. ತುರ್ಕಿಯ ಸೇನೆಯು ಒಟ್ಟು ಕೂಡಿರುವ ಎಲ್ರಿಸ್ ಎಂಬ ಸ್ಥಳದ ಮೇಲೆ ಫ್ರೆಂಚ ಯುದ್ಧ ನಾವೆಗಳು ಗುಂಡು ಹಾರಿಸಿರುವವು.

'ಬ್ಲೆಕ್ ಸೀ'ಯಲ್ಲಿ ರುಶ್ಯನರ ಯುದ್ಧ ನಾವೆಗಳು ತುರ್ಕರ ನಾಲ್ಕು ಹಡಗಗಳನ್ನೂ, ಕೆಲವು ನಾವೆಗಳನ್ನೂ ಮುಳುಗಿಸಿ ಸಂಗೋಲ್ಡಿಕನಲ್ಲಿರುವ ತುರ್ಕರ ಬತ್ತೇರಿಗಳ ಮೇಲೆ ಗುಂಡು ಹಾರಿಸಿರುವವು.

ಮಿತ್ರರ ಯುದ್ಧನಾವೆಗಳು ಡರ್ಡನೆಲ್ಸಿನ ಎನೊಸಿನ ಸಮೀಪ ಹೋಗಿ ೨ ಯುದ್ಧನಾವೆಗಳು ಆಖಾತವನ್ನು ನುಗ್ಗಿ ತುರ್ಕರ ಹಂದರಗಳನ್ನು ನಾಶಪಡಿಸಿರುವವು ಎಂತಲೂ ಮಿತಲೀನ ಮತ್ತು ಸ್ಮಿಯೋ ಎಂಬ ಸ್ಥಳಗಳು ಬೇಗನೇ ಮಿತ್ರರಿಗೆ ವಶವಾಗುವ ಹಾಗೆ ಇದೆಂತಲೂ ವಾರ್ತೆ ಬಂದದೆ.

ಜರ್ಮನರ ಜಲಂತರ್ಗಾಮಿ ನಾವೆಯು ಡಚ್ಚರ "ಕಟ್‌ವಿಡ್ಜ್" ನಾವೆಯನ್ನು ಮುಳುಗಿಸಿದ್ದರಿಂದ ಡಚ್ಚ ಸರಕಾರದವರು ಜರ್ಮನರ ಈ ವರ್ತನೆಯನ್ನು ಖಂಡಿಸಿ, ಜರ್ಮನ ಸರಕಾರಕ್ಕೆ ಪತ್ರ ಕಳುಹಿಸಿಕೊಟ್ಟಿರುವರು.

"ನೋರ್ಥ್ ಸೀ"ಯಲ್ಲಿ ಗ್ರೀಕರ ಒಂದು ಹಡಗವು ಜರ್ಮನಿಯ ಜಲಂತರ್ಗಾಮಿ ನಾವೆಯಿಂದ ಮುಳುಗಿಸಲ್ಪಟ್ಟಿರುವದು

ಮೆಶ್ಸ ಪಟ್ಟಣಕ್ಕೆ ಬೆಳಕನ್ನು ಒದಗಿಸಿಕೊಡುವ ವಿದ್ಯುಚ್ಛಕ್ತಿ ಸ್ಟೇಶನಿಗೆ ಮಿತ್ರರ ವಾಯುನಾವಿಕರು ೪೦ ಬೊಂಬುಗಳನ್ನು ಬಿಸಾಡಿ ಸುರಕ್ಷಿತವಾಗಿ ಹಿಂದೆರಳಿರುವರು. ಇತರ ಕಡೆಗಳಲ್ಲಿಯೂ ಕದನವು ನಡೆಯುತ್ತಿದೆ ಆಲ್ಸೆಸಿನ ಒರ್ಬೆ ಎಂಬಲ್ಲಿ ಜರ್ಮನರು ಫ್ರೆಂಚರ ಮೇಲ್ಬಾಯಿದು ಹಿಮ್ಮೆಟ್ಟಿರುವರು. ಮೈಸರ್ ಮೊದಲಾದ ಕಡೆಗಳಲ್ಲಿಯೂ ಮಿತ್ರರು ಜಯಪ್ರದರಾಗುತ್ತಿದ್ದಾರೆ.

ಜರ್ಮನರ ವಾಯುನಾವಿಕರು ಪುನಃ ಸ್ವಿಸ್ ಪ್ರಾಂತ್ಯದ ಮೇಲೆ ಬೊಂಬು ಬಿಸಾಡಿರುವರು.

ಮಿತ್ರರ ವಾಯುನಾವೆಗಳು ಸ್ಟ್ರಾಸ್‌ಬರ್ಗಿನ ಮೇಲೆ ೧೨ ಬೊಂಬುಗಳನ್ನು ಬಿಸಾಡಿ ಹೋಗಿರುವವು. ೨ ಮಂದಿಗೆ ಗಾಯವಾಗಿದೆ. ಹೆಚ್ಚಿನ ಆಸ್ತಿಗೆ ನಷ್ಟ ಸಂಭವಿಸಿರುವುದೆಂತ ಆಮ್‌ಸ್ಟರ್‌ಡಮಿನಲ್ಲಿ ಪ್ರಕಟವಾಗಿದೆ.

ತಾ. ೧೬ನೇ ರಾತ್ರಿ ೧ ಘಂಟೆಗೆ ಜರ್ಮನರ ಜೆಫಲಿನ್ ನಾವೆಯು ಬ್ರಿಟಿಷ ಕರಾವಳಿಯಲ್ಲಿರುವ ಲೊಸ್ಟೊಪ್ಟ್ ಪ್ರಾಂತ್ಯದಲ್ಲಿ ಬೊಂಬು ಬಿಸಾಡಿರುವದು. ಮರಗಳನ್ನು ಇಡುವ ಸ್ಥಳಕ್ಕೆ ಈ ಬೊಂಬುಗಳು ಬಿದ್ದು ದೊಡ್ಡ ಬೆಂಕಿಯುಂಟಾಗಿರುವದು. ಒಬ್ಬ ಹೆಂಗಸಿಗೆ ಸ್ವಲ್ಪ ಜಖಂ ಆಗಿದೆ. ೩ ಕುದುರೆಗಳು ಸತ್ತುಹೋದವು.

ಪಾರ್ಲಿಮೆಂಟ್ ಮೆಂಬರರಾಗಿದ್ದ ಮಿ| ಗ್ಲೇಡ್‌ಸ್ಟನರವರು ಯುದ್ಧದಲ್ಲಿ ಹತರಾದರೆಂಬ ವಾರ್ತೆ ಬಂದದೆ.

ಹಂಗೇರಿಯದ ಜನರು ಒಪ್ಪಂದವಾಗಬೇಕೆಂಬ ಚಳವಳವನ್ನು ಎಬ್ಬಿಸಿರುವರು. ಅಲ್ಲಿಯ ವರ್ತಮಾನ ಪತ್ರಿಕೆಗಳಲ್ಲಿ ಈ ವಿಷಯ ಚರ್ಚೆ ನಡೆಯುತ್ತಿದೆ. ಒಂದು ಪತ್ರಿಕೆಯು ಈ ರೀತಿ ಹೇಳುವದು — ಒಪ್ಪಂದವಾಗುವ ಸಮಯವು ಈಗ ಬಂತು. ಜನರಿಗೆ ಒಪ್ಪಂದ ಬೇಕಾಗಿದೆ. ಆದದರಿಂದ ಸರಕಾರದವರು ಜನರ ಈ ಅಪೇಕ್ಷೆಯನ್ನು ಈಡೇರಿಸಬೇಕು. ಮತ್ತೊಂದು ಪತ್ರಿಕೆಯು ಜನರಿಗೆ ಸಂಧಾನವು ಬಹಳ ಅಗತ್ಯವಿದೆ ಎಂಬಿತ್ಯಾದಿ ಮಾತುಗಳಿಂದ ಯುದ್ಧವನ್ನು ಖಂಡಿಸುತ್ತಿದೆ.

ಕರ್‌ಪಥೇನಿಯದಲ್ಲಿ ರುಶ್ಯನರು ಶತ್ರುಗಳನ್ನು ಎರಡು ಕಡೆಗಳಲ್ಲಿ ಸೋಲಿಸಿ ೧,೧೪೦ ಮಂದಿಯನ್ನು ಸೆರೆಹಿಡಿದಿರುವರು. ಈ ಪೈಕಿ ೩೪ ಆಫೀಸರರು. ಶತ್ರುಗಳಿಗೆ ವಿಶೇಷ ನಷ್ಟವಾಗಿದೆ.

ಪ್ರಿಜೆಮ್ಸ್ಲ ಕೋಟೆಯಲ್ಲಿ ರುಶ್ಯನರಿಗೆ ಒಟ್ಟಿಗೆ ಆಸ್ಟ್ರಿಯನರ ೧೦೧೦ ಫಿರಂಗಿಗಳು ದೊರಕಿರುವವು.

ಸುವೆಜ್ ಕಾಲಿವೆಯಿಂದ ಮೂರು ವಾಯುನಾವೆಗಳು ತಾ. ೧೫ರಲ್ಲಿ ಎಲ್‌ಎಂಶಿನ ಪಶ್ಚಿಮದಲ್ಲಿ ಎಲ್‌ಸಿನಲ್ಲಿರುವ ತುರ್ಕರ

೧೫೦ ೨೦೦ ದೇರೆಗಳಿಗೆ ಬೊಂಬುಗಳನ್ನು ಬಿಸಾಡಿರುವದು. ಶತ್ರುಗಳ ಸೇನೆಯು ತೋರಿಬರಲಿಲ್ಲ. ವಾಯು ನಾವೆಗಳಿಗೂ ಈ ದೇರೆಗಳಿಗೂ ಸುಮಾರು ೧೯೦ ಮೈಲು ದೂರವಿತ್ತು.

೧೫ ಆಸ್ಟ್ರೀಯ ಸೇನಿಕರು ಇಟಲಿ ಪ್ರದೇಶವನ್ನು ರಾತ್ರಿ ಕಾಲ ನುಗ್ಗಿರುವರೆಂತಲೂ ಇಟಲಿ ಕಸ್ಟಮ್ಸ್ ಆಫೀಸರರು ಅವರನ್ನು ಹಿಂದಟ್ಟಿರುವರೆಂತಲೂ ರೋಮು ನಗರದಲ್ಲಿ ಪ್ರಕಟವಾಗಿದೆ. ಝಾರರವರು ರಣರಂಗಕ್ಕೆ ಹೋಗಿರುವರು.

ತಾ ೨೦ ಎಪ್ರಿಲ್

ಡರ್ಡನೆಲ್ಸಿನಲ್ಲಿದ್ದ ಬ್ರಿಟಿಷರ E ೧೫ ಜಲಂತರ್ಗಾಮಿ ನಾವೆಯೊಂದು ಉಪಾಯವಿಲ್ಲದೆ ದಡ ಸೇರಿತು. ತುರ್ಕರು ಅದರಲ್ಲಿದ್ದ ಆಫೀಸರರನ್ನೂ ಸೇನಿಕರನ್ನೂ ಸೆರೆಹಿಡಿದಿರತ್ತಾರೆ.

ಡರ್ಡನೆಲ್ಸಿನಲ್ಲಿ ಮಿತ್ರ ನಾವೆಗಳು ಪುನಃ ಗುಂಡು ಹಾರಿಸಲು ಪ್ರಾರಂಭಿಸಿಯವೆ. ಟಿನೆಡೊಸಿನಲ್ಲಿ ತುರ್ಕರ ವಾಯುನಾವೆಗಳು ಮಿತ್ರರ ಯುದ್ಧನಾವೆಗಳ ಮೇಲೆ ಗುಂಡು ಬಿಸಾಡಿದವು. ಆದರೆ ಗುರಿ ತಪ್ಪಿರುವದು. ಮಿತ್ರರ ನಾವೆಗಳ ವಾಯುನಾವೆಗಳು ಅವನ್ನು ಓಡಿಸಿ ಬಿಟ್ಟಿರುತ್ತವೆ.

ಒಬ್ಬ ಇಂಗ್ಲೀಷ ವಿಮಾನಿಯು ಆಲ್ಸೇಸಿನ ಹೆಲ್ಪೋಗೆನಿಸ ಮೇಲೆ ಒಂದು ಬಾಂಬು ... ದೂರದ ವರೆಗೆ ರೈಲ್ವೇ ಸ್ಟೇಶನನ್ನು ಹಾಳು ಮಾಡಿ ... ದರಳಿದನು.

ರುಷ್ಯನರು ಮಾರ್ಚಿ ... ದ ಏಪ್ರಿಲ್ ತಾ. ೧೨ರ ವರೆಗೆ ೭೦ ಸಾವಿರ ಶತ್ರು ಸೇನಿಕರನ್ನು ಸೆರೆಹಿಡಿದರು. ಈ ಪೈಕಿ ೧೦೦ ಆಫೀಸರರೂ ೩೦ ಫಿರಂಗಿಗಳೂ ೨೦೦ ಮೆಶಿನ್‌ಗನ್ ಎಂಬ ಫಿರಂಗಿಗಳೂ ರುಷ್ಯನರಿಗೆ ದೊರಕಿರುವವು.

ಶೈಬದಲ್ಲಿ ಬ್ರಿಟಿಷರೊಡನೆ ಕದನಕ್ಕೆ ನಿಂತ ತುರ್ಕಿ ಸೇನಿಕರು ಯುಪ್ರಟಿಸಿನ ಕಡೆಗೆ ಓಡಿಹೋಗಿರುವರು. ತಾ ೧೪ರಲ್ಲಿ ನಡೆದ ಕದನದಲ್ಲಿ ತುರ್ಕಿ ಸೇನೆಯಲ್ಲಿ ೨೫೦೦ ಮಂದಿ ನಷ್ಟ ಹೊಂದಿರುವರೆಂತ ಅಂದಾಜಾಗಿಯದೆ.

ವಿದೇಶ ವೃತ್ತಾಂತ

ಘಾಯಪಟ್ಟ ಒಬ್ಬ ರುಷ್ಯಾ ಹುದ್ದೆದಾರನ ರಣರಂಗದಿಂದ ರಾಜಧಾನಿಗೆ ಹೋಗಿ ಕದನದ ಸುದ್ದಿಯನ್ನು ವಿವರಿಸುವಾಗ್ಗೆ ಹೇಳಿದ್ದೇನಂದರೆ— ರುಷ್ಯಾ ಸೈನ್ಯದಲ್ಲಿ ಯಾರೂ ಮದ್ಯಪಾನ ಮಾಡದ ಹಾಗೆ ಹುದ್ದೆದಾರರು ಜಾಗರೂಕತೆ ತಕ್ಕೊಳ್ಳುತ್ತಾರೆ. ಒಂದು ಕಡೆ ರುಷ್ಯಾದವರು ಜರ್ಮನಿಯ ಒಂದು ಗ್ರಾಮವನ್ನು ನುಗ್ಗಿ ಆಕ್ರಮಿಸಿಕೊಂಡರು. ಗ್ರಾಮವನ್ನೆಲ್ಲಾ ಶೋಧನೆ ಮಾಡಿದಾಗ ೩೦೦ ಶೀಪಾಯಿಗಳ ಮದ್ಯ ಸಿಕ್ಕಿತು. ರುಷ್ಯಾ ಹುದ್ದೆದಾರನು ಅದನ್ನೆಲ್ಲಾ ಪೀಪಾಯಿಗಳ ಒಂದು ಕೊಳಕ್ಕೆ ಸುರಿದನು. ಕೊಳದಲ್ಲಿದ್ದ ಮೀನುಗಳು ಪ್ರಜ್ಞೆ ತಪ್ಪಿ ನೀರಿನ ಮೇಲೆ ಬಂದಾಗ ರುಷ್ಯಾ ಸೈನಿಕರು ಅವುಗಳನ್ನೆಲ್ಲಾ ಹಿಡಿದು ಕೂಡಿಸಿ, ಅಡಿಗೆ ಮಾಡಿಕೊಂಡು ಹಲವು ದಿನಗಳ ತನಕ ಉಂಡ ತೃಪ್ತರಾದರು.

ಕಳೆದ ಮಾರ್ಚಿ ೨೦ರಲ್ಲಿ ಟರ್ಕಿ ಸರಕಾರದ ಮಂತ್ರಿಗಳು ಸಭೆ ನಡಿಸಿ ಸಂಧಾನ ಮಾಡಿಕೊಳ್ಳಬೇಕೆಂದು ಮಾತನ್ನಾಡಿಕೊಂಡು ಅಮೇರಿಕದ ರಾಯಭಾರಿಯನ್ನು ಕರೆದು ಶತ್ರುಗಳು ಡಾರ್ಡನೆಲ್ಸ್ ಮತ್ತು ಕನ್‌ಸ್ಟಂಟಿನೋಪಲನ್ನು ಬಿಟ್ಟುಕೊಡುವ ವಿಷಯದಲ್ಲಿ ಮಧ್ಯಸ್ಥಿಕೆ ಮಾಡಬೇಕೆಂದ ಕೇಳಿಕೊಂಡ ಹಾಗೂ, ಅಷ್ಟರಲ್ಲಿ ಜರ್ಮನಿಯ ಸೇನಾಪತಿಯು ಸಭೆಯೊಳಕ್ಕೆ ನುಗ್ಗಿ ಶತ್ರುಗಳ ಕೂಡ ಸಂಧಾನಕ್ಕೆ ಪ್ರಾರಂಭಿಸಿದರೆ ಮಂತ್ರಿಗಳನ್ನೆಲ್ಲಾ ಗುಂಡಿನಿಂದ ಹೊಡೆಯುತ್ತೇನೆಂದು ಹೆದರಿಸಿದ ಹಾಗೂ ಪ್ರಕಟವಾಗಿದೆ.

ಗ್ರೇಟ್ ಬ್ರಿಟನ್ ರಾಜ್ಯದಲ್ಲಿ ಕಳೆದ ಮಾರ್ಚಿ ಅಖೈರಿಗೆ ಮುಗಿದ ವರ್ಷದಲ್ಲಿ ೨೨,೬೬,೯೪,೦೮೦ ಪವನುಗಳ ರಾಜಾದಾಯ ಹುಟ್ಟುವಳಿ ಆಯಿತು. ಅಂದರೆ ಹಿಂದಿನ ವರ್ಷಕ್ಕಿಂತ ೨,೮೪,೫೧,೧೮೩ ಪವನುಗಳ ಹುಟ್ಟುವಳಿ ಜಾಸ್ತಿಯಾಯಿತು. ಜಾಸ್ತಿಯಾದ ವಿಷಯಗಳು ಯಾವವಂದರೆ— ಸುಂಕ ೩,೨೨,೦೦೦ ಪವನು, ಎಕ್ಸೈಸ್ ೨೫,೨೨,೦೦೦ ಪವನು, ವಾರಸ್ ಸರ್ಟಿಫಿಕೇಟುಗಳಿಂದ ೧೦,೩೩,೦೦೦ ಪವನು. ಆದಾಯದ ಮೇಲಣ ಕರ ೨,೨೧,೫೦,೦೦೦ ಪವನು, ಸ್ಟಾಂಪು ಒಂದು ಬಾಬಿನಲ್ಲಿ ಹುಟ್ಟುವಳಿ ಮಾತ್ರ ಸ್ವಲ್ಪ ಕಡಿಮೆಯಾಗಿದೆ.

ಪೋರ್ಚುಗಲ್ ಸಂಸ್ಥಾನದಲ್ಲಿ ಕಾಲ್ಡಾಸ್ ,ಡಾರೈನ್‌ಹಾ ಎಂಬ ಪಟ್ಟಣದಲ್ಲಿ ಕೆಳೆದ ವಾರ ಮತ ಸಂಬಂಧವಾದ ಒಂದು ಮೆರವಣಿಗೆ ನಡೆದಾಗ ಒಬ್ಬನು ಜನರ ಗುಂಪಿಗೆ ಸಿಡಿಮದ್ದಿನ ಗುಂಡು ಹಾಕಿದ್ದರಿಂದ ನೂರಾರು ಪ್ರಜೆಗಳಿಗೆ ಗಾಯಗಳಾದವು. ಕೂಡಲೇ ದೊಂಬಿ ಕಲಹವಾಯಿತು. ಸರಕಾರದವರು ಗಲಭೆಯನ್ನು ಅಡಗಿಸಿ ಅನೇಕ ಜನರನ್ನು ವಶಗಿರಿ ಮಾಡಿ ಮನೆಮಾರುಗಳನ್ನು ಜಪ್ತಿ ಮಾಡಿರುತ್ತಾರೆ.

ಬೆಲ್ಜಿಯನರ ಅನೇಕ ಕುಟುಂಬಗಳು ಇಂಗ್ಲಾಂಡಿಗೆ ಬಂದು ನೆಲಸಿರುತ್ತವೆ. ಆ ಪರಿವಾರಗಳಲ್ಲಿ ಇರಬಹುದಾದ ೧೮ರಿಂದ ೩೫ ವಯಸ್ಸಿನ ಯೌವ್ವನಸ್ಥರು ಸೈನ್ಯಕ್ಕೆ ಸೇರಿಕೊಳ್ಳುವದಕ್ಕೆ ಫ್ರಾನ್ಸಿಗೆ ಬಂದು ಇಳಿಯಬೇಕೆಂದ ಬೆಲ್ಜಿಯಮ್ ಅರಸರು ರಾಜಾಜ್ಞೆಯನ್ನು ಕೊಟ್ಟಿರುತ್ತಾರೆ. ಅವರನ್ನೆಲ್ಲಾ ತರ್ಬೀತು ಮಾಡಲು ಏರ್ಪಾಡಾಗಿಯದೆ.

ಯುದ್ಧಾರಂಭವಾದ ದಿನದಿಂದ ಜರ್ಮನಿಯಲ್ಲಿ ಪ್ರಕಟವಾಗುತ್ತಿದ್ದ ವರ್ತಮಾನ ಪತ್ರಿಕೆಗಳಲ್ಲಿ ೮೬೪ ನಿಂತುಹೋದವೆಂದು ಪ್ರಕಟವಾಗಿದೆ.

ಜರ್ಮನರು ರೋಮು ನಗರದಲ್ಲಿರುವ ಪೋಪ ಜಗದ್ಗುರುಗಳೊಡನೆ ಮಾತನ್ನಾಡಿ ಅವರು ಅಮೇರಿಕದವರೊಡನೆ ಪತ್ರಬೆಳಸಿ ಈಗಿನ ಯುದ್ಧವನ್ನು ಬೇಗನೇ ಮುಗಿಸುವ ಹಾಗೆ ಮಧ್ಯಸ್ಥಿಕೆ ಮಾಡಬೇಕೆಂದು ಕೇಳಿಕೊಂಡಿದ್ದಾರೆಂತ ಅಮೇರಿಕದ ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ಭರತಖಂಡಕ್ಕೆ ಜರ್ಮನಿಯಿಂದಲೂ ಆಸ್ಟ್ರಿಯದಿಂದಲೂ ಯಾವ ಯಾವ ಸರಕುಗಳು ವಿಶೇಷವಾಗಿ ಬರುತ್ತಿದ್ದವೋ ಅಂಥಾ ಸರಕುಗಳನ್ನೆಲ್ಲಾ ಇಟ್ಟು ಲಂಡನ್ ಪಟ್ಟಣದಲ್ಲಿ ಒಂದು ಪ್ರದರ್ಶನವನ್ನು ನೆರವೇರಿಸಿದರು. ಇವನ್ನು ನೋಡಿದವರು ಇನ್ನು ಮುಂದೆ ಇಂಥವುಗಳನ್ನೇ ಇಂಗ್ಲಂಡಿನಲ್ಲಿ ನಿರ್ಮಿಸಿ, ಭರತಖಂಡಕ್ಕೆ ಕಳಹಿಸಿಕೊಡುವಂತೆ ಮಾಡಬೇಕೆಂಬದೇ ಈ ಪ್ರದರ್ಶನದ ಉದ್ದೇಶವಾಗಿರುವದೆಂಬ ಅಭಿಪ್ರಾಯಪಟ್ಟಿರುವರು.

ವಿಯಾನ್ನದಲ್ಲಿ ಗೋದಿ ಹಿಟ್ಟು ಸಿಕ್ಕುವದು ಕಷ್ಟವಾದುದರಿಂದ ರೊಟ್ಟಿ ಮಾಡುವ ೧೫೦ ಮಂದಿ ತಮ್ಮ ಕೆಲಸ ಮಾಡುವದನ್ನು ನಿಲ್ಲಿಸಿ ಬಿಟ್ಟಿದ್ದಾರೆ. ಇತರ ಕೆಲವರು ಬೆಳಿಗ್ಗೆ ೭ ಗಂಟೆ ಮಾತ್ರ ರೊಟ್ಟಿಯನ್ನು ಮಾರುತ್ತಿದ್ದಾರೆ, ೮-೯ ಡಿಸ್ಟ್ರಿಕ್ಟುಗಳಿಗೆ ಕಳೆದ ಶುಕ್ರವಾರ ರೊಟ್ಟಿಯೇ ದೊರಕಲಿಲ್ಲ. ಅನೇಕರು ಹೊಟೇಲುಗಳಿಗೆ ನುಗ್ಗಿ ರೊಟ್ಟಿಯನ್ನು ಬೇಡಿದರು. ಕೆಲವರು ಮಿಠಾಯಿ ಅಂಗಡಿಗೆ ನುಗ್ಗಿ ತಮ್ಮ ಮಕ್ಕಳನ್ನು ಮಿಠಾಯಿಗಳಿಂದ ತೃಪ್ತಿಪಡಿಸಿದರು. ವರ್ತಮಾನ ಪತ್ರಿಕೆಗಳು ಜನರು ರೊಟ್ಟಿಯ ಖರ್ಚನ್ನು ಕಡಿಮೆ ಮಾಡುವಂತೆ ನೋಡಬೇಕೆಂದೂ, ಮುನ್ಸಿಪಾಲಿಟಿಯವರು ೧೦೦ ಗಾಡಿ ಹಿಟ್ಟನ್ನು ರೊಟ್ಟಿಗಾರರಿಗೆ ಒದಗಿಸಿ ಕೊಟ್ಟಿರುವರೆಂದೂ ಪ್ರಕಟಿಸಿರುತ್ತಾರೆ. ಅನಂತರ ಮರುದಿನ ಪಟ್ಟಣಿಗರು ರೊಟ್ಟಿಗಾರರ ಅಂಗಡಿಗಳನ್ನು ಮುತ್ತಿ ದಂಗೆ ನಡಿಸಿದರು. ಈಗ ಪೋಲಿಸಿನವರು ಈ ಅಂಗಡಿಗಳನ್ನು ಕಾಯುತ್ತಿದ್ದಾರೆ. ಹಂಗೇರಿಯದವರು ಆಸ್ಟ್ರಿಯಕ್ಕೆ ಹಿಟ್ಟನ್ನು ಕಳುಹಿಸಿ ಕೊಡುವದನ್ನು ನಿಲ್ಲಿಸಿದುದೇ ಹೀಗಾಗಲು ಕಾರಣವಾಗಿರುವದು.

ಕೂಚ್‌ಬಿಹಾರಿನ ಗತ ಮಹಾರಾಜರಾಗಿದ್ದ ಸರ್ ನೃಪೇಂದ್ರ ನಾರಾಯಣರವರ ಮಗಳಾದ ಪ್ರಿನ್ಸೆಸ್ ಸುಧಿರ ಮಂದರ್ ಎಂಬವರ ಮೇಲೆ ಲಂಡನಿನಲ್ಲಿ ಉಡಿಗೆ ತೊಡಿಗೆಗಳನ್ನು ಮಾಡುವ ಒಂದು ಅಂಗಡಿಯವರು ೭೦೦ ಪವನುಗಳ ದಾವೆ ತಂದಿದ್ದರು. ಈ ದಾವೆಯು ತನಕಿಯಾಗಿ ವಾದಿಗೆ ಪ್ರತಿವಾದಿಯು ೪೦೦ ಪವನು, ೧೬ ಶಿಲಿಂಗು, ೭ ಪೆನ್ಸು ಕೊಡಬೇಕೆಂಬ ತೀರ್ಮಾನವಾಗಿರುವದು.

ರೂಟರ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಾದ್ದ ಬೆರನ್ ಹರ್ಬರ್ಟ್ ರೂಟರ್ಸರು ತನ್ನ ಮನೆಯಲ್ಲಿ ತಾ. ೧೫ರಲ್ಲು ಸತ್ತುಬಿದ್ದಿದ್ದರು. ಒಂದು ರಿವೋಲ್ವರೂ ಅವರ ಹತ್ತಿರ ಬಿದ್ದಿತ್ತು. ಬಹಳವಾಗಿ ಪ್ರೀತಿಮಾಡುತ್ತಿದ್ದ ಅವರ ಪತ್ನಿಯು ತೀರಿಹೋದದರಿಂದ ಅವರು ಸ್ವಗಾತ ಮಾಡಿಕೊಂಡರೆಂತ ಪ್ರಕಟವಾಗಿದೆ. ಇಬ್ಬರ ಶವ ಸಂಸ್ಕಾರವೂ ಒಂದೇ ದಿನ ನಡೆಯುವದು.

ಉತ್ತರ ಹಿಂದೂಸ್ಥಾನ.

ಪಟಿಯಾಲದಲ್ಲಿ ಆರ್ ರಾಮ ಮತ್ತು ವಿಶ್ವಂಬರ ದತ್ತ ಎಂಬವರು ಕೂಡಿ ಖಲಾಸ ಪಂಥರ ವಿಷಯವಾದ ನಿಜ ಸಂಗತಿ ಎಂಬ ಹೆಸರಿನಿಂದ ಒಂದು ಪುಸ್ತಕವನ್ನು ಛಾಪಿಸಿ ಸಿಕ್ಕರ ಮತವನ್ನು ದೂಷಿಸಿದ್ದಾರೆಂಬಿದಾಗಿ ಅಪಾದಿಸಲ್ಪಟ್ಟಿದ್ದರು. ನ್ಯಾಯಾಧೀಶರು ಅಪಾದಿತರಲ್ಲಿ ಒಬ್ಬೊಬ್ಬನಿಗೆ ಒಂದೊಂದು ವರ್ಷದ ಕಠಿಣ ಸಜೆಯನ್ನೂ, ೨೦೦ ರೂಪಾಯಿಗಳ ಜುಲುಮಾನೆಯನ್ನೂ ವಿಧಿಸಿದರು.

ಕಲ್ಕತ್ತೆಯ ಡೈಮಂಡ ಹಾರ್ಬರ್ ಸಬ್ ಡಿವಿಜನಿನಲ್ಲಿರುವ ಪಂಚಾಯತ ಸಭೆಯ ಪ್ರೆಸಿಡೆಂಟರಾದ ಬಾಬು ಮಾಧವ ಚಟರ್ಜಿಯವರ ಮನೆಯಲ್ಲಿ ಒಂದು ಅಪೂರ್ವ ದಕಾಯತಿಯು ನಡೆದಿರುವದು. ಪಂಚಾಯತ ಪ್ರೆಸಿಡೆಂಟರೂ ಅವರ ಮನೆಯ ಇತರರೂ ಮಧ್ಯ ರಾತ್ರಿ ನಿದ್ರೆಯಲ್ಲಿರುವಾಗ ಹೊರಗಿನಿಂದ ಕೆಲವು ಜನರು ಚಟರ್ಜಿಯವರನ್ನು ಪೋಲೀಸ್ ಸಬ್ ಇನ್ಸ್‌ಪೆಕ್ಟರರು ಏನೋ ಒಂದು ಜಂಬರದ ಮೇಲೆ ಕರೆಯುತ್ತಾರೆಂದು ಹೇಳಿ ಅವರನ್ನು ಎಬ್ಬಿಸಿದರು. ಚಟರ್ಜಿಯವರು ಮನೆಯಿಂದ ಹೊರ ಒಂದಾಕ್ಷಣ ೫-೬ ಮಂದಿ ದಕಾಯಿತರು ಅವರನ್ನು ಹಿಡಿದು ಪುನಃ ಒಳಗೆ ಎಳಕೊಂಡು ಹೋದರು. ಉಳಿದ ದಕಾಯಿತರು ಹೊರಗಿನಿಂದ ಸಿಡಿಮದ್ದುಗಳನ್ನು ಬಿಸಾಡಿ "ನಾವು ಜರ್ಮನರು ನಿಮ್ಮ ಮನೆಯನ್ನು ಸುಲಿಗೆ ಮಾಡಲು ಬಂದಿದ್ದೇವೆ" ಅಂದರು. ನಂತರ ಖಜಾನೆ ಪೆಟ್ಟಿಗೆಯ ಬೀಗದಕ್ಕೈ ಕೇಳಿ ತಕೊಂಡು ವಿಶೇಷ ಮೌಲ್ಯದ ಆಭರಣಗಳನ್ನು ಸೂರೆ ಮಾಡಿಕೊಂಡು ಹೋದರು.

ಬಂಕೀಪುರದ ಡಿಸ್ಟ್ರಿಕ್ಟ್ ಇಂಜನಿಯರರಾಗಿದ್ದ ಮಿ। ಬುಲ್ಲರವರು ಕುದುರೆ ಸವಾರಿ ಮಾಡುತ್ತಿರುವಾಗ ಕೆಳಗೆ ಬಿದ್ದು ಮೃತರಾದರು.

ಕಲ್ಕತ್ತಾ ಬಳಿ ಹೌರಾ ಸ್ಟೇಶನಿನಲ್ಲಿ ಒಬ್ಬ ಹೆಂಗಸು ಭಯಂಕರವಾದ ಕಣ್ಣು ಗುಡ್ಡೆಗಳುಳ್ಳವಳಾಗಿದ್ದು ಒಂದು ದಿನ ೨ ಮಕ್ಕಳನ್ನು ಗಾಯಮಾಡಿ ರಕ್ತವನ್ನು ಹೀರುತ್ತಾ ಕುಳಿತಿದ್ದುದನ್ನು ಪೋಲಿಸರು ಕಂಡು ಹಿಡಿದು ಅವಳನ್ನು ಸೆರೆಯಲ್ಲಿಟ್ಟಿರುವರು.

ಬಂಗಾಳದ ನಿಯಮನಿರ್ಮಾಣ ಸಭೆಯಲ್ಲಿ ಸಭಿಕರಾಗಿದ್ದ ನೆ॥ ಷಮ್ಸುಲ್ ಉಲ್ಮಾ ಖಾನ್ ಬಹದ್ದೂರ ಮೌಲ್ವಿ ಮಹಮ್ಮದ್ ಯೂಸಫ್ ಖಾನರವರು ಕಳೆದ ತಾ ೨೫ರಲ್ಲಿ ತಮ್ಮ ೭೦ನೇ ವಯಸ್ಸಿನಲ್ಲಿ ಮೃತರಾದರು. ಇವರು ಒಂದು ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದವರು. ಚಿಕ್ಕಂದಿನಲ್ಲೇ ಜನನೀ ಜನಕರು ಕಾಲವಾದುದರಿಂದ ಒಬ್ಬ ಮಹಮ್ಮದೀಯೋಪಾಧ್ಯಾಯನ ಕೈಗೆ ಸಿಕ್ಕಿ ಪರಿಪೋಷಿತರಾಗಿ ಮಹಮ್ಮದೀ ಮತಕ್ಕೆ ಆತನಿಂದ ಸೇರಿಸಿಕೊಳ್ಳಲ್ಪಟ್ಟವರಂತೆ.

ಹರಿದಯಾಲರವರಿಂದ ಬರೆಯಲ್ಪಟ್ಟ "ನ್ಯಾಶನಲ್ ಐಡಿಯಲ್ಸ್ ಆಫ್ ನ್ಯಾಶನ್" ಎಂಬ ದೇಶಭಾಷೆಯ ಪುಸ್ತಕಗಳಿಗೆ ಪಂಜಾಬು ಸರಕಾರದವರು ಮುಟ್ಟುಗೋಲು ಹಾಕಿರುವರು.

ಮುಂಬಾಯಿ ಮ್ಯುನ್ಸಿಪಾಲ್ ಗಾಡಿಯನ್ನು ಹೊಡೆಯುತ್ತಿದ್ದ ಒಬ್ಬನು ಗಾಡಿ ತುಂಬಾ ಸರಕನ್ನು ತುಂಬಿಸಿದ್ದರಿಂದ ಅದು ಹಿಂದಕ್ಕೆ ಬಾಗಿ ಕೆಳಬಿದ್ದು ಒಂದು ಪಾರ್ಶಿ ಹುಡಿಗಿಯು ಮೃತಳಾದಳು. ಮುಂಬಾಯಿಯ ಪಶು ಹಿಂಸೆ ನಿವಾರಣಾ ಸಂಘದವರು ಈ ಗಾಡಿಯವನನ್ನು ವಿಚಾರಣೆಗೆ ಗುರಿಮಾಡಿದ್ದಲ್ಲಿ ಮೇಜಿಸ್ಟ್ರೇಟರು ಗಾಡಿಯವನಿಗೆ ೨೦ ರೂಪಾಯಿ ಜುಲುಮಾನೆ ವಿಧಿಸಿ, ಮ್ಯುನ್ಸಿಪಾಲಿಟಿಯವರು ಈ ವಿಧವಾಗಿ ಎತ್ತುಗಾಡಿಗಳಿಗೆ ಸರಕು ತುಂಬಿಸುವದು ಬಹು ಕ್ರೂರವಾದ ಕೆಲಸವಾಗಿದೆಂದು ಖಂಡಿಸಿದರು.

~~~~~

೧೨ ವರ್ಷಕ್ಕೆ ಒಮ್ಮೆ ಹರಿದ್ವಾರದಲ್ಲಿ ನಡೆಯುವ ಕುಂಭ ಮೇಳಕ್ಕೆ ಸಾವಿರಾರು ಜನ ಯಾತ್ರಿಕರು ಬಂದಿದ್ದರು. ತಾ. ೧೩ ರಲ್ಲು ಜನಸಮೂಹವು ಒತ್ತಿ ಒತ್ತಿ ಹೋಗುತ್ತಿರುವಾಗ ಇಬ್ಬರು ಮುದೀ ಹೆಂಗಸರು ಅಲ್ಲಿದ್ದ ಒಂದು ಹೊಂಡದಲ್ಲಿ ಬಿದ್ದರು. ಅವರನ್ನು ರಕ್ಷಿಸುವದಕ್ಕೆ ಪ್ರಯತ್ನಪಟ್ಟು ಜನರ ಒತ್ತಾಟವನ್ನು ಪೋಲಿಸಿನವರು ತಡೆಯುವಷ್ಟರಲ್ಲಿ ೨೨ ಜನರು ಈ ಹೊಂಡದಲ್ಲಿ ಬಿದ್ದರು. ಪೋಲಿಸಿನವರು ಹ್ಯಾಗೂ ಜನರ ಒತ್ತಾಟವನ್ನು ತಡೆದು ಬಿದ್ದ ಜನರನ್ನು ಮೇಲಕ್ಕೆ ಎತ್ತಿದರು. ೯ ಹೆಂಗಸರೂ, ೧೩ ಗಂಡಸರೂ ಹತರಾದರು.

~~~~~

ವೈಸರಾಯ ಹಾರ್ಡಿಂಜ ಪ್ರಭುಗಳವರ ಆಡಳಿತೆಯ ಅವಧಿಯನ್ನು ಹೆಚ್ಚಿಸಬೇಕೆಂತ ಸ್ಟೇಟ್ ಸೆಕ್ರೆಟರಿಯವರನ್ನು ಕೇಳುವರೆ ಮುಂಬಾಯಿಯಲ್ಲಿ ಪ್ರಜಾಮುಂದಾಳುಗಳ ಸಭೆಯು ಕೂಡಿರುವದು. ಈ ಸಭೆಯಲ್ಲಿ ಸರ್ ಬಾಲಚಂದ್ರ ಕೃಷ್ಣರವರು ಅಧ್ಯಕ್ಷರಾಗಿದ್ದರು. ಹಾರ್ಡಿಂಜ ಪ್ರಭುಗಳವರ ಆಡಳಿತೆಯ ಅವಧಿಯನ್ನು ಹೆಚ್ಚಿಸಬೇಕೆಂಬದು ಹಿಂದೂಸ್ಥಾನದವರೆಲ್ಲರ ಅಪೇಕ್ಷೆಯಾಗಿರುವದರಿಂದ ಸಾರ್ವಭೌಮರವರು ತಮ್ಮ ವಿಜ್ಞಾಪನೆಯನ್ನು ಕೇಳುವರೆಂಬ ನಂಬಿಕೆ ಇದೆ ಎಂಬ ಪತ್ರವನ್ನು ಮಿ। ದಾಧಾಭಾಯಿ ನೌರೋಜಿಯವರು ಈ ಸಭೆಯ ಅಧ್ಯಕ್ಷರವರಿಗೆ ಕಳುಹಿಸಿಕೊಟ್ಟರು.

~~~~~

ಕಲ್ಕತ್ತೆಗೆ ಸೇರಿದ ಹಾಕ್‌ಕೊಲ ಥಾನದಲ್ಲಿ ಸಣಬು ಕೊಠಡಿಗೆ ಬೆಂಕಿ ಬಿದ್ದು ವಿಶೇಷ ನಷ್ಟ ಸಂಭವಿಸಿರುವದು.

~~~~~

ಆಲಿಪುರದಲ್ಲಿ ಒಂದು ದೊಡ್ಡ ದಕಾಯಿತಿಯು ನಡೆದಿರುವದು. ಬಾಬು ಅಪೂರ್ವ ಕ್ರಿಷ್ಟೊಪಾಲ ಎಂಬ ದೊಡ್ಡ ಕಂಟ್ರಾಕ್ಟರರ ಮನೆಯ ತೋಟದಲ್ಲಿ ರಾತ್ರಿ ೧೦ ಗಂಟೆಗೆ ಸ್ವಲ್ಪ ಗುಜು ಗುಜು ಶಬ್ದವಾದುದರಿಂದ ಕ್ರಿಸ್ಟೊಪಾಲರವರು ಮನೆಯ ಮಾಳಿಗೆಯಿಂದ ಕೆಳಗೆ ಹಣಕಿ, ಕೆಲವು ಜನರು ಇದ್ದುದ್ದನ್ನು ಕಂಡು, ಮನೆಯ ಎಲ್ಲಾ ಬಾಗಲು ಕಿಡಿಕಿಗಳನ್ನು ಹಾಕಿ ತನ್ನ ಮನೆಯವರನ್ನೆಲ್ಲಾ ಮಾಳಿಗೆಗೆ ಕರಕೊಂಡು ಹೋದರು. ಸುಮಾರು ೩೦ ದಕಾಯಿತರು ಆಯುಧಗಳ ಸಹಿತ ಇವರ ಮನೆಯ ಕಡೆಗೆ ಓಡಿ ಬಂದು ಬಾಗಲು ಒಡೆಯ ಪ್ರಯತ್ನಿಸಿದರು. ಕ್ರಿಸ್ಟೊಪಾಲರವರು ಮಾಳಿಗೆಯಿಂದ ಇಟ್ಟಿಗೆ ಇತ್ಯಾದಿಗಳನ್ನು ಈ ದಕಾಯಿತರ ಗುಂಪಿಗೆ ಬಿಸಾಡಿದರೂ ಪ್ರಯೋಜನವಾಗದೆ ದಕಾಯಿತರು ಬಾಗಲನ್ನು ಒಡೆದು ಮನೆಯ ಜನರಿಗೆ ಹೊಡೆದು ಸುಮಾರು ೨೦೦೦ ರೂಪಾಯಿಯ ಚಿನ್ನಾಭರಣಗಳ ಸಹಿತ ಪರಾರಿಯಾದರು.

~~~~~

ಭಾವ್‌ನಗರದಲ್ಲಿ ೨ ತಲೆ, ೪ ಕೈಗಳು, ೪ ಕಾಲುಗಳು ಒಂದು ಹೆಣ್ಣು ಕೂಸು ಜನಿಸಿರುವದು. ಇದನ್ನು ನೋಡಿದ ವೈದ್ಯರೆಲ್ಲರೂ ಆಶ್ಚರ್ಯ ಪಡುತ್ತಲಿದ್ದಾರೆ.

~~~~~

ಎಪ್ರೀಲ್ ತಾ. ೧೦ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೨೬,೬೪೫ ಮಂದಿ ಪ್ಲೇಗ ಬೇನೆಗೆ ತುತ್ತಾದರು. ಈ ಪೈಕಿ ಮುಂಬಾಯಿಯಲ್ಲಿ ೫೬೪; ಮದ್ರಾಸ್ ೧೮; ಬಂಗಾಳ ೩೦; ಬಿಹಾರ್ ೧,೬೦೫; ಸಂಯುಕ್ತ ಸಂಸ್ಥಾನ ೪೮೦೮; ಪಂಜಾಬು ೧೮,೮೦೯; ಬರ್ಮ ೬೧; ಮಧ್ಯಸಂಸ್ಥಾನ ೪೫೮; ಮೈಸೂರು ೫೮; ಹೈದರಾಬಾದ್ ೧೫; ಮಧ್ಯಹಿಂದೂಸ್ಥಾನ ೫೪; ರಜಪುತಾನ ೪೫; ಜಮ್ಮು ೧೨೫ ಮರಣಗಳಾದವು.

~~~~~

ಬಸ್ರಾದಿಂದ ೧೫ ಟರ್ಕಿ ಸೆರೆಯಾಳುಗಳು ಹೌರ ಸ್ಟೇಶನಿಗೆ ಬಂದು ತಲಪಿರುವರು. ಇವರನ್ನು ವಿಲಿಯಂ ಕೋಟೆಯಲ್ಲಿ ಇಟ್ಟಿರುತ್ತಾರೆ. ಇವರಲ್ಲಿ ನಾಲ್ಕು ಮಂದಿಗೆ ಗುಂಡಿನ ಗಾಯಗಳು ಇವೆ.

ತಾ. ೧೩ನೇ ರಾತ್ರಿ ೧೦॥ ಗಂಟೆಗೆ ಆಲಿಪುರ ಡಿಸ್ಟ್ರಿಕ್ಟಿನ ಬಾಬು ನಾರಾಯಣ ಚಂದ್ರಘೋಸರ ಮನೆಯಲ್ಲಿ ಒಂದು ದಕಾಯಿತಿಯು ನಡೆದಿರುವದು. ಸುಮಾರು ೨ ಡಜನ್ ಮಂದಿ ದಕಾಯಿತರು ರಾತ್ರಿ ೧೦॥ ಗಂಟೆಗೆ ಮನೆಯನ್ನು ಮುತ್ತಿದರು. ವಿಶೇಷ ಸೆಖೆ ಇದ್ದುದರಿಂದ ನಾರಾಯಣರೂ ಅವರ ಪತ್ನಿಯೂ ಹೊರಗೆ ಮಲಗಿದ್ದರು. ದಕಾಯಿತರು ಬರುವದು ಇವರಿಗೆ ತಿಳಿದ ಕೂಡಲೇ ಹಿಂದಿನ ಬಾಗಲಿಂದ ಇದ್ದ ಆಭರಣಗಳನ್ನೆಲ್ಲಾ ಹಿಡಕೊಂಡು ಪತ್ನಿ ಸಹಿತ ತಪ್ಪಿಸಿಹೋಗಿ ಹತ್ತಿರದ ಪೋಲಿಸ್ ಸ್ಟೇಶನಿಗೆ ತಿಳಿಸಿದರು. ಪೋಲಿಸರು ಬರುವದರೊಳಗೆ ದಕಾಯಿತರು ಮನೆಯ ಬಾಗಿಲು ಒಡೆದು ಮನೆಯವರಲ್ಲಿದ್ದವರ ಕಣ್ಣು ಕಟ್ಟಿ ಸುಮಾರು ೮೦೦ ರೂಪಾಯಿಯ ಚಿನ್ನಾಭರಣಗಳನ್ನು ಸುಲಿಗೆ ಮಾಡಿ ತಪ್ಪಿಸಿ ಹೋಗಿದ್ದರು.

~~~~~

ಕಾಶ್ಮೀರ ಸಂಸ್ಥಾನಕ್ಕೆ ಸೇರಿದ ಜ್ಹೇಲಮಿಗೆ ೨೫ ಮೈಲು ದೂರದಲ್ಲಿರುವ ಒಂದು ಗ್ರಾಮದಲ್ಲಿ ಗುಜರಾಥಿ ಡಿಸ್ಟ್ರಿಕ್ಟಿನ ಮೂರು ಮಂದಿ ದಕಾಯಿತರು ರಿಟಾಯರ್ಡ್ ಸುಬೇದಾರ ತುಳಸಿ ದಾಸರ ಮನೆಗೆ ನುಗ್ಗಿ ಸುಬೇದಾರನನ್ನು ಕೊಂದು, ಅವನ ಪತ್ನಿಯು ಬೀಗದ ಕೈ ಕೊಟ್ಟದ್ದರಿಂದ ಆಕೆಯನ್ನು ಬಿಟ್ಟು ಮನೆಯಲ್ಲಿದ್ದ ಚಿನ್ನಾಭರಣಗಳನ್ನು ವೈಯಸ್ತುತ್ತಿರುವಲ್ಲಿ ಒಬ್ಬ ಸೇವಕನು ತಪ್ಪಿಸಿಕೊಂಡು ಬೊಬ್ಬಿಟ್ಟದ್ದರಿಂದ ಜನರು ಸಹಾಯಕ್ಕೆ ಬಂದು ದಕಾಯಿತರನ್ನು ಹಿಡಿದರು. ಇವರು ಈಗ ಲಾಕಪ್ಪಿನಲ್ಲಿದ್ದಾರೆ.

~~~~~

ಹರಿದ್ವಾರದ ಕುಂಭಮೇಳದ ಕಾಲ ಜನಸಮ್ಮರ್ದದಲ್ಲಿ ೪೦ ಜನರು ಸಿಕ್ಕಿ ಹತರಾದರು ಎಂತ ರಾಯ ಬಹದ್ದೂರು ಹರ್ಜಿಮ್ಮಾಲರವರು ವರದಿ ಮಾಡಿರುತ್ತಾರೆ.

~~~~~

ಬಂಗಾಳದ ಬಕರ್‌ಗಂಜ ಡಿಸ್ಟ್ರಿಕ್ಟಿನಲ್ಲಿ ಸುಮಾರು ೧೨ ದಕಾಯಿತರು ಒಂದು ಮನೆಗೆ ನುಗ್ಗಲು ಯತ್ನಿಸಿದಾಗ ಆ ಮನೆಯ ಗಂಡಸರು ಹಿಂದಿನ ಬಾಗಲಿಂದ ತಪ್ಪಿಸಿಕೊಂಡು ಹೋದರು. ಇದರಿಂದ ದಕಾಯಿತರು ಹುರಿದುಂಬಿ ಮನೆಗೆನೇ ಬೆಂಕಿ ಕೊಟ್ಟರು. ಒಳಗೆ ಮಲಗಿದ್ದ ಎರಡು ಮಕ್ಕಳೂ ತಾಯಿಯೂ ಹೊರಗಿನಿಂದ ಬಾಗಲಿಗೆ ಬೀಗ ಹಾಕಿದ್ದರಿಂದ ಹೊರಬರಲು ಸಾಧ್ಯವಿಲ್ಲದೆ ಜೀವಿತರಾಗಿ ಸುಟ್ಟುಹೋದರು. ಗ್ರಾಮಸ್ಥರು ಆ ಮನೆಯ ಹತ್ತಿರ ಸೇರಿದಾಗ ಆಯುಧಪಾಣಿಗಳಾದ ದಕಾಯಿತರು ಅವರನ್ನು ಹಿಂಸಿಸಿದ್ದರಿಂದ ಅವರು ಓಡಿಹೋದರು. ದಕಾಯಿತರು ನಂತರ ಮನೆಯನ್ನು ನುಗ್ಗಿ ಹುಡುಕಿದರೂ ಅಡಗಿಸಿಟ್ಟಿದ್ದ ದ್ರವ್ಯವು ಅವರಿಗೆ ಸಿಕ್ಕದೆ ಹಿಂದೆ ಹೋದರು.

~~~~~

ಸೂವೆಜ್ ಕಾಲಿವೆಯಿಂದ ಗಾಯ ಒಡೆದ ಸೈನಿಕರು ಮುಂಬಾಯಿಗೆ ತರಲ್ಪಟ್ಟಿರುತ್ತಾರೆ.

~~~~~

ದಕ್ಷಿಣ ಹಿಂದೂಸ್ಥಾನ.

ಜ. ಆರ್. ಮೊಕಾಸಿ ಎಂಬವರು ಈಗ್ಗೆ ೧ ತಿಂಗಳ ಕೆಳಗೆ ಸಾಧ್ವೀ ಪತ್ರಿಕೆಗೆ ಒಂದು ಲೇಖನವನ್ನು ಬರೆದು, ಅದರಲ್ಲಿ— ಭಾಗವತದ ಕಥೆಯು ಅಸಂಭವನೀಯವಾದ ಅನೇಕ ವಿಷಯಗಳಿಂದ ಕೂಡಿರುವ ಕಾರಣ, ಅದು ಕಲ್ಪಿತ ಕಾದಂಬರಿಯಲ್ಲದೆ ವಾಸ್ತವ್ಯವಾದ ಇತಿಹಾಸವಲ್ಲ; ಶ್ರೀ ಕೃಷ್ಣನಿದ್ದುದೇ ಸುಳ್ಳು; ಎಂದು ಮೊದಲಾಗಿ ಬರೆದು, ಇದನ್ನು ಸಪ್ರಮಾಣವಾಗಿ ಖಂಡಿಸಿ ಭಾಗವತದ ಶ್ರೀ ಕೃಷ್ಣ ಜನ್ಮ ಚರಿತ್ರವನ್ನು ಯಥಾರ್ಥವಾದುದೆಂದು ಶ್ರೀ ಉತ್ತರಾದಿ ಮಠದ ಸ್ವಾಮಿಗಳು ಸ್ಥಾಪಿಸುವದಾದರೆ ತಾನು ಅನ್ನ ವಸ್ತ್ರಗಳನ್ನು ಕೇಳದೆ ಯಾವಜ್ಜೀವ ಅವರ ಶಿಷ್ಯನಾಗಿ ಸೇವೆಯನ್ನು ಮಾಡಿಕೊಂಡಿರುವೆನೆಂದೂ ಇದು ವರೆಗೂ ಈ ವಿಷಯವಾಗಿ ಅನೇಕ ವಿದ್ವಜ್ಜನರಲ್ಲಿ ತಾನು ಈ ವಿಷಯವನ್ನು ಕುರಿತು ಪ್ರಶ್ನೆ ಮಾಡಿದಾಗ ಯಾರಿಂದಲೂ ಸಮಾಧಾನವು ಹೇಳಲ್ಪಡಲಿಲ್ಲವೆಂದೂ ಬರೆದಿದ್ದರು. ಈಚೆಗೆ ಒಂದು ತಿಂಗಳಾದರೂ ಆ ಸ್ವಾಮಿಗಳಾಗಲೀ ಅವರ ಶಿಷ್ಯ ಕೋಟಿಯ ಪಂಡಿತರೇ ಆಗಲೀ ಯಾರೂ ಈ ವಿಷಯದಲ್ಲಿ ಉತ್ತರವನ್ನು ಕೊಡಲಾರದೆ ಹೋದುದರಿಂದ ತಾನು ಬರೆದಿರುವ ಸಂಗತಿಯೇ ನಿಜವಾದುದೆಂದೂ ಶ್ರೀ ಕೃಷ್ಣ ಪ್ರತಿಮಾ ಪೂಜನಾದಿಗಳು ವ್ಯರ್ಥವಾದುದೆಂದೂ ಶ್ರೀ ಕೃಷ್ಣನ ವಿಷಯವಾಗಿ ಸ್ವಾಮಿಗಳು ಬೋಧಿಸುವ ಧರ್ಮಗಳು ಸುಳ್ಳೆಂದೂ ಮತ್ತೊಂದು ಲೇಖನವನ್ನು ಬರೆದಿದ್ದಾರೆ.

~~~~~

"ಮದ್ರಾಸ್" ಆಸ್ಪತ್ರಿ ಹಡಗವು ಇದೇ ತಾ. ೧೫ನೇ ಬ್ರಸ್ಪತಿವಾರ ಸಾಯಂಕಾಲ ೩ ಗಂಟೆಗೆ ಮದ್ರಾಸ್ ಬಂದರಕ್ಕೆ ಬಂದು ತಲಪಿತು. ಹಡಗದಲ್ಲಿ ಸುಮಾರು ೨೫೦ ಮಂದಿ ವ್ಯಾಧಿತರಿದ್ದರು. ಇವರೆಲ್ಲರೂ ಮೆಸೊಪೊಟೇಮಿಯದಿಂದ ತರಲ್ಪಟ್ಟವರು. ಹಡಗವು ಬಂದರಕ್ಕೆ ತಲಪುತ್ತಲೇ ಗವರ್ನರ ಪ್ರಭುಗಳವರು ಎಡಿಕೆಂಗರ ಮತ್ತು ಮಿಲಿಟರಿ ಸೆಕ್ರೆಟರಿಗಳವರ ಪರಿವಾರ ಸಹಿತ ಹಡಗವನ್ನು ಸಂದರ್ಶಿಸಿ ಕೆಲವು ಸಮಯ ಹಡಗದಲ್ಲಿದ್ದರು. ಗಾಯ ಒಡೆದವರಲ್ಲಿ ಕೆಲವರನ್ನು ಹಡಗದಿಂದ ಇಳಿಸಿ ಸ್ಪೆಶ್ಯಲ್ ಟ್ರೇನಿನಲ್ಲಿ ಬೆಂಗಳೂರಿಗೆ ಕಳುಹಿಸಿ ಕೊಡೋಣಾಗಿದೆ. "ಮದ್ರಾಸ್" ಹಡಗವು ಮರುದಿನ ಬಸ್ರಾಕ್ಕೆ ಹೊರಟು ಹೋಯಿತು. ಅಂದೇ ಸಾಯಂಕಾಲ "ಮದ್ರಾಸ್" ಹಡಗದ ಮುಖ್ಯ ಆಫೀಸರರಾದ ಕರ್ನೆಲ್ ಗಿಫ್ಫರ್ಡರವರು "ಮದ್ರಾಸ್" ಹಡಗದಿಂದ ಮಾಡಲ್ಪಟ್ಟ ಕೆಲಸಗಳ ಕುರಿತು ಮೆಜಿಕ್ ಲಾಂದರಿನ ಮೂಲಕ ಅರ್ಥಗರ್ಭಿತವಾದ ಭಾಷಣವನ್ನು ಕೊಟ್ಟರು. ಲಾಂದರಿನ ಮೂಲಕ ಹಡಗವು ಸಂದರ್ಶಿಸಿದ ಸ್ಥಳಗಳ ವರ್ಣನೆಯನ್ನೂ ಅವು ಮಾಡಿದ ಕೆಲವು ಕೆಲಸಗಳ ವರ್ಣನೆಗಳನ್ನೂ ಪ್ರದರ್ಶಿಸಿದರು.

~~~~~

"ಮದ್ರಾಸ್" ಹಡಗದಿಂದ ಪೂರ್ವ ಆಫ್ರೀಕದಿಂದ ತರಲ್ಪಟ್ಟ ಸುಮಾರು ೫೦ ಮಂದಿ ವ್ಯಾಧಿತರಾದ ಸೇನಿಕರು ತಾ. ೧೬ರಲ್ಲು ಬೆಂಗಳೂರಿಗೆ ತಲಪಿರುತ್ತಾರೆ.

~~~~~

ಮದ್ರಾಸ್ ಗವರ್ನರರಾದ ಪೆಂಟಲೇಂಡ ಪ್ರಭುಗಳವರು ತಾ. ೧೬ರಲ್ಲು ಉದಕ ಮಂಡಲಕ್ಕೆ ಹೊರಟು ಹೋದರು.

~~~~~

ಮಾನ್ಯ ಗಂಧಿಯವರು ಪತ್ನಿ ಸಹಿತ ಹರಿದ್ವಾರದಿಂದ ಡಿಲ್ಲಿ ಎಕ್ಸ್‌ಪ್ರೆಸ್ ಮೈಲ್ ಬಂಡಿಯಲ್ಲಿ ಪ್ರಯಾಣಮಾಡಿ ಇದೇ ತಾ. ೧೬ನೇ ಸಾಯಂಕಾಲ ಮದ್ರಾಸಿಗೆ ಚಿತ್ತೈಸಿದರು. ರೈಲ್ವೇ ನಿಲ್ದಾಣವು ಮಿ। ಗಂಧಿಯವರನ್ನೂ ಅವರ ಪತ್ನಿಯವರನ್ನೂ ಸ್ವಾಗತ ಮಾಡಲು ಬಂದಿದ್ದ ಜನ ಸಂದಣಿಯಿಂದ ತುಂಬಿ ಹೋಗಿತ್ತು. ದೊಡ್ಡ ದೊಡ್ಡ ಗೃಹಸ್ಥರಲ್ಲನೇಕರು ನಿಲ್ದಾಣದಲ್ಲಿ ಕೂಡಿದ್ದರು. ಬಂಡಿಯು ತಲಪುತ್ತಲೇ ನಿಲ್ದಾಣದಲ್ಲಿದ್ದ ಜನರು ಮಾನ್ಯ ಗಂಧಿಯವರನ್ನೂ ಅವರ ಪತ್ನಿಯರನ್ನೂ ೧—೨ನೇ ತರಗತಿಯ ಗಾಡಿಗಳಲ್ಲಿ ಹುಡುಕಿ ಕಾಣದೆ ಹೋದುದರಿಂದ ಅವರು ಬರಲಿಲ್ಲವೆಂದು ನೆನಸಿ ಶೋಕಾಮಯರಾದರು. ಆದರೆ ರೈಲ್ವೆ ಗಾರ್ಡನು ! ಮಾನ್ಯ ಗಂಧಿಯವರು ಟ್ರೇನಿನ ಕೊನೆಯ ೩ನೇ ತರಗತಿಯ ಬಂಡಿಯಲ್ಲಿ ಇದ್ದಾರೆಂದು ತಿಳಿಸಿದನು. ನಂತರ ಮಾನ್ಯ ಗಂಧಿಯವರೂ ಅವರ ಪತ್ನಿಯವರೂ ೩ನೇ ತರಗತಿಯ ಗಾಡಿಯಲ್ಲಿ ಸಿಕ್ಕಿದರು; ಜನ ಸಂದಣಿಯ ಒತ್ತಾಟದಿಂದ ಮಾನ್ಯ ಗಂಧಿಯವರಿಗೆ ಕೆಳಗಿಳಿಯಲು ಕಷ್ಟಸಾಧ್ಯವಾಯಿತು. ಪೋಲಿಸರು ಕಷ್ಟದಿಂದ ದಾರಿ ಬಿಡಿಸಿದ್ದಲ್ಲಿ ಮಿ। ರಾ। ಎಲ್. ಎ. ಗೋವಿಂದ ರಾಘವಯ್ಯರರು ಮಾನ್ಯ ಗಂಧಿಯವರಿಗೂ ಅವರ ಪತ್ನಿಯರಿಗೂ ಹೂ ಮಾಲೆಯನು ಹಾಕಿ "ಮಾನ್ಯ ಗಂಧಿಯವರೂ, ಅವರ ಪತ್ನಿಯವರೂ ದೀರ್ಘ ಕಾಲ ಬಾಳಲಿ", ಎಂದು ಧನ್ಯವಾದವನ್ನಿತ್ತರು. ಜನಸಂದಣಿಯು "ನಮ್ಮ ವೀರನಿಗೆ ದೀರ್ಘಾಯುಷ್ಯವಾಗಲಿ" ಮತ್ತು ವಂದೇ ಮಾತರಂ" ಎಂತ ಆರ್ಭಟಿಸಿತು. ಮಾನ್ಯ ಗಂಧಿಯವರು ತಲೆ ಬಗ್ಗಿಸಿ ಕೂಡಿದ ಜನರಿಗೆ ವಂದನೆಮಾಡಿ ಅವರಿಗಾಗಿ ತರಲ್ಪಟ್ಟಿದ್ದ ಗಾಡಿಯಲ್ಲಿ ಕುಳಿತರು. ಕೂಡಲೇ ಅಲ್ಲಿದ್ದ ವಿದ್ಯಾರ್ಥಿಗಳು ಗಾಡಿಯನ್ನು ಎಳಕೊಂಡು ಮಿ। ನಾಟೇಸನರ ಬಂಗ್ಲೆಗೆ ಹೋದರು. ಮಾನ್ಯ ಗಂಧಿಯವರು ಮದ್ರಾಸಿಗೆ ಚಿತ್ತೈಸಿದ ಬಹುಮಾನಾರ್ಥವಾಗಿ ಮೆಸ್ಸರ್ಸ್ ಗಣೇಶ ಎಂಡ್ ಕಂಪೆನಿಯವರು ಗಂಧಿಯವರ ಜೀವಚರಿತ್ರೆಯ ೧೦,೦೦೦ ಪುಸ್ತಕಗಳನ್ನು ಧರ್ಮಾರ್ಥವಾಗಿ ಹಂಚಿದರು.

~~~~~

ದಕ್ಷಿಣ ಕನ್ನಡ.

ಮಂಗಳೂರು

ಬಲ್ಮಠ ಬಾಸೆಲ್ ಮಿಶ್ಶನ್ ನೇಯುವ ಕಾರ್ಖಾನೆಯಲ್ಲಿ ಹೆಡ್ ಕ್ಲಾರ್ಕರಾಗಿದ್ದ ಮಾಜಿ ಮೇಜಿಸ್ಟ್ರೇಟ ಕೊರಗಪ್ಪರವರ ಮಗ ಜೋರ್ಜ ಹೆರ್ಬರ್ಟರವರು ಕಾರಖಾನೆಯ ಹಣವನ್ನು ದುರುಪಯೋಗ ಮಾಡಿ ವಿಶ್ವಾಸಘಾತುಕ ಮಾಡಿದ್ದರಾಗಿ ಸದರಿ ಕಾರ್ಖಾನೆಯ ಮೆನೇಜರರಾದ ಮಿ। ವಿತ್ತ್ರಿಕ್ತ ದೊರೆಗಳವರು ಇದೇ ತಾ. ೧೬ರಲ್ಲು ಜೋರ್ಜ ಹೆರ್ಬರ್ಟರ ಮೇಲೆ ಡ್ಯುಟಿ ಕಲೆಕ್ಟರರಲ್ಲಿ ಇ. ಪಿ. ಕೋಡಿನ ೪೦೫, ೪೦೮, ೪೭೦ನೇ ಪ್ರಕರಣಗಳ ಮೇಲೆ
~~~~~

ಫಿರ್ಯಾದು ದಾಖಲು ಮಾಡಿರುತ್ತಾರೆ. ತಾ. ೧೬ರಲ್ಲು ಡ್ಯುಪಿಟಿ ಕಲೆಕ್ಟರವರು ಜೋರ್ಜ ಹೆರ್ಬರ್ಟರ ಮೇಲೆ ವಾರಾಂಟು ಕೊಟ್ಟಲ್ಲಿ ಪೋಲೀಸರು ಮನೆ ಜಪ್ತಿ ಮಾಡಿದರು. ನಂತರ ಡ್ಯುಪಿಟಿ ಕಲೆಕ್ಟರರು ಜೋರ್ಜ ಹೆರ್ಬರ್ಟರನ್ನು ಜಾಮಿನಿನ ಮೇಲೆ ಬಿಟ್ಟಿರುತ್ತಾರೆ. ಮೊಕದ್ದಮೆ ತನಿಕೆಯು ಬಾಕಿಯಲ್ಲಿದೆ.

ಇಲ್ಲಿಯ ಕಾಫಿ ಮೊಕದ್ದಮೆಯಲ್ಲಿ ಅಪಾದಿಸಲ್ಪಟ್ಟು ೩ ತಿಂಗಳ ಸಜಾ ಮತ್ತು ೨೦೦ ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟ ಪಸಾರಿ ವಿಟ್ಠಪ್ಪ ಬಾಬುಪ್ರಭುಗಳವರು ಮಾಡಿಕೊಂಡ ಅಪೀಲು ತನಿಕೆಯು ಪುತ್ತೂರು ಡಿವಿಜನಲ್ ಆಫೀಸರರಲ್ಲಿ ನಡದು ಹಿಂದಿನ ಶಿಕ್ಷೆಯೇ ಕಾಯಂ ಆಯಿತು. ಸದರಿ ಮೊಕದ್ದಮೆಯಲ್ಲಿ ಶಿಕ್ಷೆ ಹೊಂದಿದ ಬೋಳಂತೂರ ಸರ್ವೋತ್ತಮ ಪ್ರಭುಗಳವರ ಅಪೀಲು ತನಿಕೆಯನ್ನು ಇತರ ಕೋರ್ಟಿನಲ್ಲಿ ಮಾಡುವರೆ ಹುಕುಂ ಆಗಬೇಕೆಂದು ಹೈಕೋರ್ಟಿಗೆ ಬರಕೊಂಡಿರುವದರಿಂದ ಇವರ ಅಪೀಲು ತನಿಕೆಯು ಬಾಕಿಯಲ್ಲಿದೆಂತ ಕೇಳುತ್ತೇವೆ.

ರಾ| ವಾಮನಕಾಮ್ತಿಯರಲ್ಲಿ ರೂಪಾಯಿ ೧-೧೦-೩ ಕ್ರಯದ ಕೋಟು ವಗೈರೆ ಕಳವು ಮಾಡಿದ ಹರಿಕಳ ಅಮದೆ ಬ್ಯಾರಿಗೆ ಸೆಶ್ಯನ್ಸ್ ಜಡ್ಜರು ೨ ವರ್ಷಗಳ ಕಠಿಣ ಸಜಾ ವಿಧಿಸಿದರು.

ರಾ| ಸಾಂತಯ್ಯ ಕಿಣಿಯಲ್ಲಿ ಕಾಫಿ ಕಳವು ಮಾಡಿದ ಸೋಮಪ್ಪನಿಗೆ ೨ ತಿಂಗಳ ಸಜೆ, ಇಬ್ರಾಹಿಂ ಬ್ಯಾರಿಗೆ ೨ ತಿಂಗಳ ಸಜೆ ವಿಧಿಸೋಣಾಯಿತು.

ಕಳದ ವಾರದಿಂದ ಇಲ್ಲಿ ವಾರಕ್ಕೆ ಎರಡಾವರ್ತಿ ಮುಂಬಾಯಿಂದ ಹಡಗ ಬರಲು ಪ್ರಾರಂಭವಾಗಿದೆ.

ಮಿ| ಕಾಮಿಲ್ ಸಾಲ್ದಾನ್ಹರ ಮನೆಯ ಕಳವು ಮೊಕದ್ದಮೆಯಲ್ಲಿ ಆಪಾದಿಸಲ್ಪಟ್ಟು ನಂತರ ಬಿಡುಗಡೆ ಹೊಂದಿದ ಅಂತೋನಿ ಲೋಬೋ ಎಂಬವನು ಹಳೇ ಅಪರಾಧಿ ಪೌಲು ನಜರೇಥ ಎಂಬವನನ್ನು ತನ್ನ ಮನೆಯಲ್ಲಿಟ್ಟುಕೊಂಡಿದ್ದನು. ಈ ಪೌಲು ನಜರೇಥನು ಅಂತೋನಿಯ ಮನೆಯ ಸುಮಾರು ೪೦ ರೂಪಾಯಿ ಕ್ರಯಬಾಳುವ ಚಿನ್ನಾಭರಣಗಳನ್ನು ಕದ್ದುಕೊಂಡು ಪರಾರಿಯಾದನು. ಪೋಲಿಸಿನವರು ಇವನನ್ನು ಕೈದುಮಾಡಿದಲ್ಲಿ ಅಂತೋನಿಲೋಬನು ತನ್ನನ್ನು ಬಿಜೈ ಗುರುಗಳ ಕೋಳಿ ಇತ್ಯಾದಿಗಳನ್ನು ಕಳವು ಮಾಡಲು ಪ್ರೇರೇಪಿಸಿದ್ದನೆಂದೂ ಅಂತೋನಿಯ ಮನೆಯಲ್ಲಿ ತಾನು ಕಳವು ಮಾಡಲಿಲ್ಲವೆಂದೂ ವಾಗ್ಮೂಲ ಕೊಟ್ಟಿರುತ್ತಾನೆ. ಕಳವಾದ ಮ್ಯಾಲುಗಳು ದೊರಕಲಿಲ್ಲ.

ಇದೇ ತಾ. ೧೯ರಲ್ಲು ಡಿಸ್ಟ್ರಿಕ್ಟ್‌ಬೋರ್ಡು ಮೀಟಿಂಗ್ ಕೂಡಿ ಬಂತು. ಮಂಗಳೂರು ವೆನ್‌ಲಾಕ್ ಆಸ್ಪತ್ರಿ ಬಗ್ಗೆ ಹೊಸ ಕಟ್ಟೋಣವನ್ನು ಕಟ್ಟಿಸುವರೆ ತಗಲುಬಹುದಾದ ೧½ ಲಕ್ಷ ರೂಪಾಯಲ್ಲಿ ಡಿಸ್ಟ್ರಿಕ್ಟ ಬೋರ್ಡಿನವರಿಂದ ಎಷ್ಟು ಕೊಡಲು ಸಾಧ್ಯವಿದೆಂಬದಾಗಿ ಕಲೆಕ್ಟರರು ಬರೆದ ಪತ್ರವು ಸಭೆಯ ಮುಂದಿಡಲಾಗಿ ಬೋರ್ಡಿನವರು ಈ ಬಗ್ಗೆ ಬೋರ್ಡಿನಿಂದ ೧೫,೦೦೦ ರೂಪಾಯಿ ಕೊಡಬಹುದೆಂಬದಾಗಿ ನಿರ್ಣಯಿಸಿದರು.

ಮಂಗಳೂರು ಉಡ್ಪಿ ರೈಲ್ವೆ ಲೈನು ಸರ್ವೆ ಮಾಡುವರೆ ಡಿಸ್ಟ್ರಿಕ್ಟ್ ಬೋರ್ಡಿನವರು ಹಣಕೊಡುವರೆ ಮನಸ್ಸು ಮಾಡಿರುವರೋ ಎಂಬ ಸರಕಾರದ ಪತ್ರವೂ ಎಸ್. ಐ. ರೈಲ್ವೇ ಕಂಪೆನಿಯ ಏಜಂಟರಿಂದ ಕಳುಹಿಸೋಣಾದ ಈ ಸರ್ವೆ ಬಗ್ಗೆ ತಗಲಬಹುದಾದ ಖರ್ಚಿನ ೧೯,೦೦೦ ರೂಪಾಯಿಯ ಮತ್ತು ೮೦೦೦ ರೂಪಾಯಿಯ ಎರಡು ಅಂದಾಜು ಪಟ್ಟಿಗಳೂ ಸಭೆಯ ಮುಂದಿಡಲಾಗಿ ಡಿಸ್ಟ್ರಿಕ್ಟ್‌ಬೋರ್ಡಿನವರು—ಮಂಗಳೂರು ಉಡ್ಪಿ ರೈಲ್ವೆ ಲೈನು ಸರ್ವೆ ಬಗ್ಗೆ ರೂ. ೮೦೦೦ನ್ನು ಕೊಡಲು ನಿರ್ಣಯಿಸಿದರು.

ಡಿಸ್ಟ್ರಿಕ್ಟಿನ ಉಪಯೋಗದ ಬಗ್ಗೆ ದಾರಿಗಳನ್ನು ಸಜ್ಜುಗೊಳಿಸುವ ಉಗಿ ಮೂಲಕ ನಡೆಯುವ ಒಂದು ರೋಲ್ಲರನ್ನು ತರಿಸುವರೆ ೬೯೮೦ ರೂಪಾಯಿ ಸೆಂಕ್ಷನ್ ಆಯಿತು.

ನಾರಾವಿಯಿಂದ ಗುರುವಾಯನಕೆರೆಯ ವರೆಗೆ ಒಂದು ದಾರಿಯನ್ನು ತೆರೆಯುವರೆ ೪೮೭೦ ರೂಪಾಯಿ ಸೆಂಕ್ಷನ್ ಆಗಿರುವದು.

ಮಂಗಳೂರು ಪಾಣೆಮಂಗಳೂರು ರೈಲ್ವೆ ಲೈನ್ ಸರ್ವೆ ಮಾಡುವರೆ ರೂ. ೮೦೦೦ ಬೇಕೆಂತ ಎಸ್. ಐ. ರೈಲ್ವೆ ಏಜಂಟರಿಂದ ಕಳುಹಿಸಲ್ಪಟ್ಟ ಅಂದಾಜು ಪಟ್ಟಿಯ ಪ್ರಕಾರ ರೂ. ೮೦೦೦ನ್ನು ಬೋರ್ಡಿನವರು ಕೊಡಲು ನಿರ್ಣಯಿಸಿದರು.

ಅರಸಿಕೆರೆ, ಮಂಗಳೂರು ಮತ್ತು ಮಂಗಳೂರು-ಪಾಣೆಮಂಗಳೂರು ರೈಲ್ವೆ ಲೈನನ್ನು ತೆರೆಯುವ ಸಂಬಂಧವಾದ ಸರಕಾರದವರಿಂದ ಕಳುಹಿಸೋಣಾದ ಹುಕುಂ ಸಹಾ ಸಭೆಯ ಮುಂದಿಡೋಣಾಗಿರುವದು

ನೇತ್ರಾವತಿ ರೈಲ್ವೇ ಸಂಕದ ಕಾಲುದಾರಿ ಬಗ್ಗೆ ಡಿಸ್ಟ್ರಿಕ್ಟ ಬೋರ್ಡಿನವರಿಂದ ಕೊಡಲ್ಪಡುವ ೮೦೯೦ ರೂಪಾಯಿಯಿಂದ ಆ ಬಗ್ಗೆ ಆದ ಖರ್ಚಿನ ಪಟ್ಟಿಯು ಎಸ್. ಐ. ರೈಲ್ವೆ ಕಂಪೆನಿಯ ಅಡಿಟರರವರಿಂದ ಬೋರ್ಡಿನವರಿಗೆ ಕಳುಹಿಸೋಣಾಗಿರುವದು. ಈ ಲಿಕ್ಕ ಪತ್ರವೂ ನೇತ್ರಾವತಿ ರೈಲ್ವೆ ಸಂಕದ ಕಾಲುದಾರಿಯ ದುರುಸ್ತಿ ಇತ್ಯಾದಿಗಳ ಬಗ್ಗೆ ೧೯೧೧ನೇ ಇಸವಿ ಜುಲಾಯಿ ತಿಂಗಳಿಂದ ಮಾತ್ರ ಬೋರ್ಡಿನವರಿಂದ ಖರ್ಚು ಕೊಡಲಾಗುವದೆಂತಲೂ ಅದಕ್ಕಿಂತ ಹಿಂದಿನ ವರ್ಷಗಳ ಖರ್ಚು ಕೊಡಲು ಸಾಧ್ಯವಿಲ್ಲವೆಂತಲೂ ಡಿಸ್ಟ್ರಿಕ್ಟ ಬೋರ್ಡು ಪ್ರೆಸಿಡೆಂಟರಿಂದ ಎಸ್. ಐ. ರೈಲ್ವೇ ಏಜಂಟರಿಗೆ ಬರೆದ ಪತ್ರವೂ ೧೯೧೨ ರಿಂದ ೧೯೧೫ನೇ ಇಸವಿಯ ವರೆಗೆ ಈ ಬಗ್ಗೆ ಆದ ಖರ್ಚನ್ನು ರೈಲ್ವೆ ಕಂಪೆನಿಯವರು ಬೋರ್ಡಿನವರಿಂದ ಕೇಳಲು ಕಾರಣವೇನೆಂಬದಾಗಿ ಎಸ್. ಐ. ರೈಲ್ವೆ ಕಂಪೆನಿಯ ಏಜಂಟರಿಂದ ಬೋರ್ಡು ಪ್ರೆಸಿಡೆಂಟರಿಗೆ ಬರದ ಪತ್ರವೂ ಸಭೆಯ ಮುಂದಿಡೋಣಾಗಿರುವದು.

ಡಿಸ್ಟ್ರಿಕ್ಟಿನ ಪಬ್ಲಿಕ್‌ವರ್ಕ್ಸ್ ಬಗ್ಗೆ ಪ್ರೊವಿನ್ಸಿಯಲ್ ಫಂಡಿನಿಂದ ರೂ. ೭೦೦೦ ಸೆಂಕ್ಷನ್ ಆಗಿರುತ್ತದೆ.

~~~~~

ಬೈಕಂಪಾಡಿ:—ಕಳೆದ ಸೌರಯುಗಾದಿ ದಿನ ಇಲ್ಲಿಯ ಮೊಗೇರರ ಶ್ರೀ ಜ್ಞಾನೋದಯ ಸಮಾಜದವರು ತಮ್ಮ ವರ್ಷೋತ್ಸವವನ್ನು ಬಹೂ ಸಂತೋಷದಿಂದ ಆಚರಿಸಿದರು. ಈ ದಿನ ಪ್ರಾತಃಕಾಲ ಮದ್ಯಪಾನ ನಿಷೇಧಕರೆಲ್ಲರೂ ಸಮುದ್ರಸ್ನಾನಮಾಡಿ ಚಿತ್ರಪುರ ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದಲ್ಲಿ ಕೂಡಿ ದೇವರ ಪೂಜಾ, ಅರ್ಚನಾದಿಗಳನ್ನು ಮಾಡಿಸಿ, ಸಂಪೂರ್ಣ ಮದ್ಯಪಾನ ವರ್ಜಿಸುವ ಕುರಿತು ಸುಮಾರು ೪೦ ಜನರು ದೇವರ ಸನ್ನಿಧಿಯಲ್ಲಿ ಶಪಥವನ್ನು ಉಚ್ಚರಿಸಿ, ಒಬ್ಬರಿಗೊಬ್ಬರು ಪ್ರಮಾಣದಾರಗಳನ್ನು ಕಟ್ಟಿಕೊಂಡರು! ಸಾಯಂಕಾಲ ೬ ಘಂಟೆಗೆ ಶ್ರೀ ಬಬ್ಬರಿಯಸ್ಥಾನದ ಚಾವಡಿಯಲ್ಲಿ ಮಹಾಸಭೆ ನೆರದು ಬಂದರು. ಈ ಸಭೆಗೆ ಅನೇಕ ವೈದೀಕ ಬ್ರಾಹ್ಮಣರೂ ದಯಮಾಡಿಸಿದ್ದರು. ಪ್ರಥಮತಾ ದೇವರ ಕೀರ್ತನೆಗಳಾಗಿ ಚಿತ್ರಪುರದ ಬಿದ್ಕಮಾಧವಭಟ್ಟರವರು ಅಧ್ಯಕ್ಷಸ್ಥಾನವನ್ನಲಂಕರಿಸಿದರು. ಕಾರ್ಯದರ್ಶಿಯಾದ ರಾ| ಐತಪ್ಪ ಅಮ್ಮಣ್ಣಾಯರು ವಾರ್ಷಿಕ ವರದಿಯನ್ನು ಓದಿ ತಮ್ಮೂರಿನ ಸ್ವಜಾತಿ ಬಂಧುಗಳು ಮದ್ಯಪಾನ ವ್ಯಸನದಿಂದ ಪಡುವ ನಷ್ಟಕಷ್ಟಗಳನ್ನು ವಿವರಿಸಿದರು. ಇಲ್ಲಿಯ ಬೋರ್ಡ್‌ಸ್ಕೂಲ್ ಹೆಡ್ ಮಾಸ್ತರರು ವಿದ್ಯಾಭ್ಯಾಸದ ಕುರಿತು ಮಾತಾಡಿದರು. ಅಗ್ರಸ್ಥರು ಕಾಲೋಚಿತ ಭಾಷಣ ಮಾಡಿದರು, ಸಮಾಜದ ಸದಸ್ಯರು ಮದ್ಯಪಾನ ನಿಷೇಧಪರವಾದ ತುಳು ಸಂಗೀತಗಳನ್ನು ಹಾಡಿ ಸಭಿಕರನ್ನೆಲ್ಲಾ ಸಂತೋಷಗೊಳಿಸಿದರಲ್ಲದೆ ಸಭಾಂತ್ಯದಲ್ಲಿ ರಾಜಗೀತೆಯನ್ನು ಹಾಡಿ ಸಭೆಗೆ ಬಂದ ಅತಿಥಿಗಳನ್ನೆಲ್ಲಾ ಪುಷ್ಪ ತಾಂಬೂಲಾದಿಗಳಿಂದ ಸತ್ಕರಿಸಿದರು.

~~~~~

ಕುಂಬಳೆ:—ಇದೇ ಕಳೆದ ಮಾರ್ಚ ಆಖೈರ ವರೇಗೆ ಈ ಶಹಾರಿನ ಬಿಡಿನಾಯಿಗಳನ್ನು ಸರಕಾರದಿಂದ ಕೊಲ್ಲಿಸಿದರೂ ಹುಚ್ಚು ನಾಯಿಗಳ ಕಾಟವು ಇನ್ನೂ ಕಮ್ಮಿಯಾದ್ದಿಲ್ಲ. ಕೆಲವು ದಿವಸಗಳ ಹಿಂದೆ ಒಂದೆರಡು ಹುಚ್ಚು ನಾಯಿಗಳು ಶಹರಿನ ಇಬ್ಬರು ಮೂವರು ಜನರಿಗೂ ಕೆಲವು ಜಾನುವಾರುಗಳಿಗೆ ವ ನಾಯಿಗಳಿಗೆ ಸಹಾ ಕಚ್ಚಿ ಹೆಚ್ಚಿನ ತೊಂದರೆಪಡಿಸಿರುವುದರಿಂದ ಪುನಹಾ ನಾಯಿಗಳನ್ನು ಕೊಲ್ಲಿಸುವರೆ ತ್ವರ್ಯದಲ್ಲಿ ಹುಕುಂ ಆಗುವದು ಒಳ್ಳೇದು!

ಈ ಶಹಾರಿನ ಮಧ್ಯದಲ್ಲಿರುವ ಹಳೇ ಸರಕಾರಿ ಬಾವಿಯಲ್ಲಿ ನೀರು ಕಡಿಮೆಯಾಗಿರುವದಲ್ಲದೆ ಬೇರೆ ದುರುಸ್ತಿಗಳು ಇದಕ್ಕೆ ಅವಶ್ಯವಿದೆ. ಮತ್ತು ಗಾಡಿಚೌಕದ ಬಳಿ ಬಾವಿಯಲ್ಲಿ ನೀರು ಬತ್ತಿರುವ ಕಾರಣ ಇವೆರಡು ಬಾವಿಗಳನ್ನು ದುರುಸ್ತಿಪಡಿಸುವದು ಅತೀ ಅವಶ್ಯವಾಗಿದೆ.

~~~~~

ನೋಟೀಸು.

—:o:—

ಕಾಸರಗೋಡು ತಾಲೂಕು ಬಂಗ್ರಮಂಜೇಶ್ವರ ಕಸಬಾ ಗ್ರಾಮದಲ್ಲಿರುವ ವಿಟ್ಠಲ ಕಮ್ತಿರ ಮಗ ರಾಮ ಕಮ್ತಿರು 1, ಇವರ ಮಕ್ಕಳು ವಿಟ್ಠಲ ಕಮ್ತಿರು 1, ವಾಸ್ದೇವ ಕಮ್ತಿರು 1, ಈ 3 ಜನರು ಕೂಡಿ ಇದೇ 1915 ಇಸವಿ ಫೆಬ್ರುವರಿ ತಾ. 25ರಲ್ಲು ರೂಪಾಯಿ 800ಕ್ಕೆ ನನಗೆ ಬರಕೊಟ್ಟ ಡಿಮೇಂಡ್ ನೋಟು 1ನ್ನು ಇದೇ ತಿಂಗಳ ತಾ. 10ನೇ ರಾತ್ರಿ ನನ್ನ ಮನೆಯಲ್ಲಿ ಕಳವಾಗಿ ಹೋದ ಎಲ್ಲಾ ಸೊತ್ತುಗಳ ಒಟ್ಟಿಗೆ ಸದರಿ ನೋಟು ಕೂಡಾ ಕಳವಾಗಿ ಹೋಗಿರುವದರಿಂದ, ಈ ಕಳವಾದ ನೋಟು ತಲಾಸು ಮಾಡಿ ತಂದು ಕೊಟ್ಟವರಿಗೆ ರೂ. 5 ಇನಾಮು ಕೊಡಲಾದೀತು.

ಬಂಗ್ರಮಂಜೇಶ್ವರ, ತಾ. 22-3-15. } **Arangadi Venkateshayya,**

~~~~~

ಜೀನಸು ಧಾರಣೆ. (ರಖಂ)

ಹೊಸ ಮಸ್ಸೂರಿ ಅಕ್ಕಿ	5—2—0	5—10—0
ಹೊಸ ಗಾಡಿ ರಾಶಿ ,,	4—6—0	4—8—0
ಹೊಸ ಗುಡ್ಡು ,,	4—10—0	5—0—0
ಅವ್ವಲ್ ಬೆಳ್ತಿಗೆ ,,	5—6—0	5—10—0
ಗುಡ್ಡು ಬೆಳ್ತಿಗೆ ,,	5—1—0	5—2—0
ರಂಗೂನು ಬೆಳ್ತಿಗೆ ಗೋಣಿ ೧ರ	8—0—0	8—6—0
ಗೋಧಿ ಗೋಣಿ ೧ರ ...	13—4—0	14—0—0
ಹುರುಳಿ ಗೋಣಿ ೧ರ ...	6—0—0	7—4—0
ಕಡಲೆ ಗೋಣಿ ೧ರ. ...		10—0—0
ತೊಗರಿ ಗೋಣಿ ೧ರ ...	10—0—0	11—8—0
ತೊಗರಿ ಬೇಳೆ ಗೋಣಿ ೧ರ.	12—8—0	16—0—0
ಉದ್ದು ಗೋಣಿ ೧ರ		10—0—0
ಊರುಬೆಲ್ಲ ಖಂಡಿ ೧ರ ...		60—0—0
ಉಪ್ಪು ಗೋಣಿ ೧ರ		3—6—0
ಕೊಬ್ರಿ ಖಂಡಿ ೧ರ	80—0—0	84—0—0
ಕೊಬ್ರಿ ಹಿಂಡಿ ಖಂಡಿ ೧ರ		15—0—0
ಎಳ್ಳಿಂಡಿ ಖಂಡಿ ೧ರ	26—8—0	36—4—0
ಕೊಬ್ರಿ ಎಣ್ಣೆ ಮುಡಿ ೧ರ	5—14—0	6—0—0
ಎಳ್ಳೆಣ್ಣೆ ಮುಡಿ ೧ರ(ಕುರಾಸನ)	3—10—0	3—14—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ		5—0—0
ಮೋರಿಸ್ ಸಕ್ಕರೆ ಮುಡಿ ೧ರ		4—7—0
ಕಾಫಿ ಖಂಡಿ ೧ರ.	208—0—0	220—0—0
ಬೀಳೆಗೋಟು ಖಂಡಿ ೧ರ.	113—0—0	115—0—0
ಹೊಸಬೀಳೆಗೋಟು ಖಂಡಿ೧ರ	95—0—0	100—0—0
ಹೊಸ ಗೇರುಬೀಜ ಮುಡಿ ೧ರ		1—10—0
ಕಬ್ಬಿಣ ಖಂಡಿ ೧ರ		50—0—0
ತಾಂಬ್ರ ತಗಡುಮಣ ೧ರ		17—2—0
ತಾಂಬ್ರ ಪಾತ್ರೆಗಳು ಮಣ ೧ರ		22—0—0
ಚೀನಿ ಬೆಳ್ಳಿ ಕೀಲು ೧ರ		18—12—0

ಮಾರಾಟಕ್ಕೆ ಸಿದ್ಧವಿರುವುದು! ಮಾರಾಟಕ್ಕೆ ಸಿದ್ಧವಿರುವುದು!

ವೇಂಕಟಗಿರಿ ಮಹಾತ್ಮೆ.

ಪದ್ಮಾವತೀ ಕಲ್ಯಾಣದಿಂದ ಪೂರ್ಣವಾಗಿರುವುದು

(ಸಂಸ್ಕೃತ ಭವಿಷ್ಯೋತ್ತರಪುರಾಣದಿಂದ)

ಶೀಮಂಗಳೂರಲ್ಲಿ ಸ್ವರ್ಗಸ್ಥರಾಗಿ ಹೋದ ಮುಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿರುವುದು

959 ಪದ್ಯಗಳಿರುವ 15 ಅಧ್ಯಾಯಗಳಿಂದ ಕೂಡಿರುವುದು ಕಾವ್ಯರಚನೆಯು ಬಹು ಮೃದುರವೂ ಸುಲಭವೂ ಆಗಿರುವುದರಿಂದ ಸರ್ವರಿಗೂ ಅನುನಿತ್ಯದ ಪಠಣಪುಸ್ತಕವಾಗಿರಲು ಉಚಿತವಾಗಿರುವುದು ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ವೃತ್ತಾಂತಗಳು ವಾಚಕರ ಮನಃಖಚಿತವಾಗುವಂತೆ ಈ ಗ್ರಂಥವು ಯಥೋಚಿತ ಚಿತ್ರಪಟಗಳಿಂದ ಕೂಡಿರುವುದು ಕ್ರಯ ಪ್ರತಿಯೊಂದಕ್ಕೆ ರೂ 1—8—0 ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್. ಸನ್ಸ್,
ಮಂಗಳೂರು

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1 ಟಪ್ಪಾಲು ಚಾರ್ಜು 0—4—0

Dr. Navaratna & Sons,
Kalbadevi Road, BOMBAY

ಏಜಂಟರು.—**ಡಿ. ಉೂಲನ್ ಮಾರ್ಟ್,**
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು

ಅರ್ಧ ಬೆಲೆ!

ಒಂದು ತಿಂಗಳ ತನಕ ಮಾತ್ರ.



ನಮ್ಮ ಸೆಟಿಸ್‌ಫೇಕ್ಷನ್ ಫ್ಲೂಟ್ ಹಾರ್ಮೋನಿಯಮ್ ಎಂಬ ರಾಗದ ಪೆಟ್ಟಿಗೆಯಿಂದ ಸರ್ವ ಗಾಯನಗಳನ್ನು ಹಾಡಲಿಕ್ಕಾಗುತ್ತದಲ್ಲದೆ ಎಲ್ಲಾ ವಾಯುಗುಣಗಳಲ್ಲಿಯೂ ಬಾಳುವಂಥಾದ್ದಾಗಿದೆ ಇದರ ಪೆಟ್ಟಿಗೆಯು ಸಾಗುವಾನಿ ಮರದಿಂದ ಮಾಡಿದ್ದಾಗಿದೆ. ಗಾಳಿ ಬರುವ ಪೆಟ್ಟಿಗೆಯು ಎಂಥಾ ಶೆಖೆಯನ್ನೂ ತಡೆಯುವದು. ಖಾಯುಸಾಗದಿದ್ದರೆ 7 ದಿವಸಗಳೊಳಗೆ ಹಿಂದಕ್ಕೆ ಕಳುಹಿಸಿದರೆ ಹಣ ಹಿಂದಕ್ಕೆ ಕೊಡೋಣಾಗುವದು.

ಕ್ರಯ **ಸಿಂಗಲ್ ರೀಡ್** ರೂ. 38, 44, 50, ಈಗ ರೂ. 19, 22, 25ಕ್ಕೆ ಕೊಡಲ್ಪಡುವದು. **ಡಬ್ಬಲ್ ರೀಡ್** ರೂ. 60, 70, 80, ಈಗ ರೂ 30, 35, 40ಕ್ಕೆ ಕೊಡೋಣಾಗುವದು. ಆರ್ಡರಿನೊಂದಿಗೆ ರೂ. 5 ಅಡ್ವಾನ್ಸ್ ಕಳುಹಿಸಬೇಕಾಗಿದೆ.

ವಿಳಾಸ:— ನೇಶನಲ್ ಹಾರ್ಮೋನಿಯಮ್ ಕೊ,
ಸಿಮ್ಲಾ ಪೋಸ್ಟು (ಬಿ) ಕಲ್ಕತ್ತಾ.
National Harmonium Co.,
Simla P. O. (B) CALCUTTA.

ಕರ್ಣಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ ಮುಂಬಯಿ ಕರ್ಣಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೊಯಲ್ ಸ್ಸಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ ೨—೮—೦ ಆಗಿರುತ್ತದೆ; ಚಂದಾದಾರರಾಗಿ ಸೇರಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು

ಮ್ಯಾನೇಜರ್, ಕರ್ಣಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ, ಧಾರವಾಡ

ಬಿಕರಿಗೆ ಸಿದ್ಧವಾಗಿದೆ! ಬಿಡಬೇಡಿರಿ!! ಮುಂದೆ ಸಿಗಲಾರದು!!

ಪ್ರಪಂಚ ಯುದ್ಧ.

ಘನಘೋರ ಸಂಗ್ರಾಮ ಸೊಗಸಾದ ಚಿತ್ರರೂಪ.

ಯುದ್ಧಾಗ್ರಣಿಗಳ ಭಾವಚಿತ್ರ.

ಯೂರೋಪ್ ಖಂಡದಲ್ಲೆಲ್ಲಾ ಅಲ್ಲೋಲಕಲ್ಲೋಲ ಮಾಡಿ ರಕ್ತಪ್ರವಾಹವನ್ನೇ ಹೊರಳಿಸುತ್ತ ಜಗತ್ಪ್ರಳಯ ಸ್ವರೂಪವಾಗಿ ಸಾಕ್ಷಾತ್ ಕಾಲಭೈರವನಂತೆ ಕೇಳಿರುವ ಭೀಕರ ಯುದ್ಧದ ನಾಯಕರನ್ನೂ ಆಯಾ ದೇಶದ ರಾಜಾಧಿರಾಜರನ್ನೂ ಚಕ್ರವರ್ತಿಗಳನ್ನೂ ಪ್ರತ್ಯಕ್ಷದಿಂದ ನೋಡಿದಂತೆ ತೋರಿಸುವ ಸುಂದರವಾದ ಚಿತ್ರಗಳು ಥಳಥಳಿಸುವ ಬೆಣ್ಣೆ ಕಾಗದದಲ್ಲಿ ಎರಡು ಬಣ್ಣಗಳಿಂದ ಮುದ್ದಾಗಿ ಮುದ್ರಿಸಿ ಕ್ರಯಕ್ಕೆ ಸಿದ್ಧವಾಗಿವೆ. ತ್ವರೆಮಾಡಿರಿ, ಸ್ವಲ್ಪವೇ ಪ್ರತಿಗಳಿವೆ, ತ್ವರೆಮಾಡಿರಿ

ಬಾಲ ಸುಟ್ಟ ಕೋತಿಯಂತೆ ಅತ್ತಿತ್ತ ತಿರುಗುತ್ತ ವ್ಯಾಪಾರದ ಹಡಗುಗಳನ್ನೂ ಯುದ್ಧದ ಹಡಗುಗಳನ್ನೂ ಹತಮಾಡಿ ಕಡೇಗೆ ತಾನೂ ಉರಿದು ಸಮುದ್ರದಡಿಗೆ ಪಿಪಾತವಾದ ಎಮ್‌ಡನ್ನನ್ನು ನೋಡಿರುವಿರಾ, ಅದರ ನಾಯಕನನ್ನು ಒಲ್ಲಿರಾ, ಅದು ಮದರಾಸನ್ನು ಮುತ್ತಿ ಮಾಡಿದ ಅನಾಹುತಗಳನ್ನು ನೋಡಿರುವಿರಾ, ಕಡೆಗೆ ಅದಕ್ಕೆ ಗತಿ ಕಾಣಿಸಿದ ಸಿಡ್ನಿ ಎಂಬ ಹಡಗನ್ನು ಕಂಡಿರುವಿರಾ, ಅದರ ನಾಯಕ ಶಿಖಾಮಣಿಯನ್ನು ನೋಡಿರುವಿರಾ, ಧೀರಾಧಿವೀರನೆಂದೆನ್ನಿಸಿದ ಪ್ರತಾಪೋದ್ದೀಪಿತನಾದ ಪ್ರತಾಪ್‌ಸಿಂಗನನ್ನು ಕಂಡಿರುವಿರಾ.

ಪಂಚಪಾಂಡವರಂತಿರುವ ಇಂಗ್ಲೆಂಡ್, ರಷ್ಯಾ, ಫ್ರಾನ್ಸ್, ಬೆಲ್ಜಿಯಮ್, ಜಪಾನ್ ಚಕ್ರವರ್ತಿಗಳನ್ನೂ, ದುರ್ಯೋಧನ, ದುಶ್ಯಾಸನ, ದುಶ್ಶಳೆಗಳಂತೆ ಕಾಲಾಗ್ನಿಗೆ ತುತ್ತಾಗುವದಕ್ಕಿರುವ ಜರ್ಮನಿ, ಆಸ್ಟ್ರಿಯಾ, ತುರ್ಕಿ ಚಕ್ರವರ್ತಿಗಳನ್ನೂ ನೋಡಿರುವಿರಾ, ಆಯಾ ರಾಷ್ಟ್ರಗಳ ಸೇನಾನಾಯಕರನ್ನೂ ನೌಕಾನಾಯಕರನ್ನೂ ವಾಯುವಿಮಾನ ನಾಯಕರನ್ನೂ ನೋಡಿರುವಿರಾ, ಇಲ್ಲವಾದರೆ ನಮ್ಮಲ್ಲಿ ಕ್ರಯಕ್ಕೆ ಸಿದ್ಧವಾಗಿರುವ ಚಿತ್ರವನ್ನು ತರಿಸಿ ನೋಡಿ ಈ ಚಿತ್ರಗಳ ಸಹಾಯದಿಂದ ಯುದ್ಧ ಸಂಗತಿಗಳು ಮನಸ್ಸಿನಲ್ಲಿ ಬಲು ಸುಲಭವಾಗಿ ನಾಟುವವು. ಪಕ್ಷಿಯಂತೆ ಆಕಾಶದಲ್ಲಿ ಹಾರಾಡುತ್ತಿರುವ ವಾಯುವಿಮಾನವನ್ನೂ, ಮತ್ಸ್ಯಗಳಂತೆ ಸಮುದ್ರದಲ್ಲಿ ಅಲೆದಾಡುತ್ತಿರುವ ಯುದ್ಧದ ಹಡಗವನ್ನೂ ಜರ್ಮನರು ಹೊಸದಾಗಿ ರಚಿಸಿದ ಫಿರಂಗಿಯನ್ನೂ ಈ ಚಿತ್ರಗಳ ಸಹಾಯದಿಂದ ಚನ್ನಾಗಿ ನೋಡಬಹುದು. ಸಮಸ್ತರೂ ನೋಡಬೇಕಾದ ವಿಷಯು.

ಬೆಲೆ 1 ರೂಪಾಯಿ 4 ಆಣೆ ಮಾತ್ರ.

ತರಾ. ಯುದ್ಧವಾರಂಭವಾದಮೇಲೆ ರಣರಂಗದಿಂದ ಈಚೆಗೆ ಹೊಸದಾಗಿ ಎತ್ತಿದ ಫೋಟೋಗಳನ್ನು ಸೀಮೆಯಿಂದ ತರಿಸಿ ಅಚ್ಚು ಮಾಡಿಸಿದ್ದೇವೆ. ಪ್ರತಿಯೊಂದು ಪಟವನ್ನೂ ನಲುಗದಂತೆ ಮರದ ಕಟ್ಟಿಗೆಯಲ್ಲಿ ಸುತ್ತಿ ಭದ್ರವಾಗಿ ಸೇರುವಂತೆ ರವಾನಿಸಿ ಕೊಡುತ್ತೇವೆ. ಈ ದಿನವೇ ಬರಿಯಿರಿ. ಅಂಚೆ ಹಾಸಲು ಫ್ರೀ.

ನಮಗೆ ಬರಿಯತಕ್ಕ ಆರ್ಡರುಗಳನ್ನು ಸ್ವಹಸ್ತಾಕ್ಷರಗಳಿಂದ ಬರಿಯತಕ್ಕದು ಮತ್ತು ವಿಳಾಸಗಳನ್ನು ವಿವರವಾಗಿ ಬರಿಯತಕ್ಕದ್ದು.

ವಿಳಾಸ:—ಮ್ಯಾನೇಜಿಂಗ್ ಪ್ರೊಪ್ರೈಟರ್ ಚಿತ್ರಕಲಾನಿಧಿ ಭವನ,
[illegible]

NOTICE.

Stany Brothers,

Candle Garden, Mangalore,

ಬಲ್ಮಠ ಕದ್ರಿ ರಸ್ತೆ ಬಳಿ ನಮ್ಮ "ಕೆಂಡಲ್ ಗಾರ್ಡನ್" ಎಂಬ ಸ್ಥಳದಲ್ಲಿ 1908ನೇ ಇಸವಿ ಆರಂಭದಿಂದ ಈ ವರೆಗೆ ನಡೆದು ಬಂದಿರುವ ಯಂತ್ರದಿಂದ ಹುರಿದು ತಯಾರಿಸುವ ನಮ್ಮ ಕಾಫಿ ಪುಡಿ ವ್ಯಾಪಾರವು ನಮ್ಮ ಪೋಷಕರಿಗೆ ಗೋಚರ ವಾಗದ್ದು ಕಾರಣ ಈಗ ನಾವು ಪ್ರಕಟಿಸಿರುತ್ತೇವೆ

ನಮ್ಮಲ್ಲಿ ನಾನಾ ಬಗೆಯ ಶಾಲಾ ಹುಡುಗರಿಗೆ ಆವಶ್ಯವುಳ್ಳ ಕೋಪಿ ಬುಕ್ ಇತ್ಯಾದಿ ಶಾಲಾ ಪುಸ್ತಕಗಳೂ, ಸೊಗಸಾದ ಅನೇಕ ವಿಧದ ತಿರುಚಿನಾಪಳ್ಳಿ ಚುರುಟುಗಳೂ, ನೀಲಗಿರಿ ಚಾ, ಇತರ ಸಾಮಾನುಗಳೂ ಕೂಡ ವ್ಯಾಪಾರಸ್ಥರಿಗೆ ಸುಲಭವಾದ ಖರೀದಿಯಲ್ಲಿ ದೊರೆಯುತ್ತದೆ

ಕಾಫಿ ಪುಡಿಯು ರಾತ್ತಲ್ ಒಂದಕ್ಕೆ 0—10—0ಯಿಂದ 0—5—0 ದರದ ವರೇಗೂ ದೊರೆಯುತ್ತದೆ

ಇತರ ಅನುಭವಗಳಿಗೆ ನಮ್ಮ ಮೆನೇಜರರ ಮೇಲಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

Piedade Pinto,

Manager.

ಸಚಿತ್ರ ಆಂಗ್ಲಭಾಷಾ ಪ್ರಕಾಶಿಕಾ.

ಇದು ಹೊಸ ತರಹ, ಹೊಸ ಕ್ರಮ, ಅಂದವಾದ ಅಚ್ಚು, ವಿದ್ವಾಂಸರಿಂದ ತಯಾರಾದದ್ದು, ಇದನ್ನು ಗುರುವಿನಂತೆ ಭಾವಿಸಿ ಬೆಲೆ ಕಡಿಮೆ ಮಾಡಿದೆ 3 ಪುಸ್ತಕಗಳೂ ಅಡಗಿರುವ ದೊಡ್ಡ ಪುಸ್ತಕ 1—12—0 1ನೇ ಪುಸ್ತಕ 3 ಭಾಗಗಳ ಕ್ರಯ 0—14—0

ಅಪೂರ್ವ ಪುಸ್ತಕಗಳು.

ವೈದ್ಯಸಾರ ಸಂಗ್ರಹ ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನ ಪಂಡಿತರಿಂದ ಮಯಾ೯ದಿಸಲ್ಪಟ್ಟಿರುತ್ತೆ ರೂ. 3.

ರೆವಿನ್ಯು ಸರ್ವೆ ಮೋಜಣಿ ಕ್ಲಾಸಿಫಿಕೇಶನ್ ಕಲಿಯತಕ್ಕ ಬುಕ್ಕು. ಇದು ಮೋಜಣಿದಾರರಿಗೂ, ಪಟೇಲರಿಗೂ, ಶ್ಯಾನುಭೋಗರಿಗೂ ಅಗತ್ಯವಾಗಿ ಬೇಕಾದ ಪುಸ್ತಕ ಬೆಲೆ 1—4—0.

ರಾವ್‌ಬಹದೂರ್ ವೀರೇಶಲಿಂಗಂ ಪಂತ್ಲು ಅವರ ರಾಜಶೇಖರ ಚರಿತ್ರೆ ಕನ್ನಡ ಎಡಿಶನ್ ಬೆಲೆ ರೂಪಾಯಿ 1—0—0.

ನಮ್ಮಲ್ಲಿ ವಿಶೇಷವಾಗಿ ಸರಕಾರಿ ಸ್ಕೂಲು ಪುಸ್ತಕ, ಸಂಸ್ಕೃತ, ಕನ್ನಡ, ತೆಲುಗು, ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳೂ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಕಥೆ ಪುಸ್ತಕಗಳೂ, ಹುಡುಗರಿಗೆ ಉಪಯುಕ್ತವಾದ ಸೀನರಿ ಸಾಮಾನುಗಳೂ ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ.

	ರೂ ಆ		ರೂ. ಆ.		ರೂ ಆ
ದಯಾನಂದ ಸರಸ್ವತಿಯವರ ಚರಿತ್ರೆ	0—4	ಸೀತಾ ಚರಿತ್ರೆ	1—0	ಮಾಡಿದ್ದುಣ್ಣೋ ಮಹಾರಾಯ	1—0
ಜಮಾ ಖರ್ಚಿನ ಪದ್ಧತಿ	0—12	ಶಾಕುಂತಲ ನಾಟಕ	0—8	ಕುಶಿಗಳು ರಾಮಾಶಾಸ್ತ್ರಿಗಳವರ ಚರಿತ್ರೆ	1—0
ಇಂಡ್ಯನ್ ಪೆನಲ್ ಕೋಡ	2—0	ಸ್ತ್ರೀ ಧರ್ಮನೀತಿ	0—8	ಸುಮತಿ ಮದನಕುಮಾರರ ಚರಿತ್ರೆ I	0—8
ಅರೆಬಿಯನ್ ನೈಟ್ಸ್	2—4	ಶೋಭನೆ	0—8	,, II	0—7
ಸುರಸ	0—4	ಚಂದ್ರಕಳಾ	0—4	ಶಿವಗೀತೆ	0—6
ಶ್ಯಾಮು	0—1	ಕಲಾನಾಥ	0—6	ಪಾಕಶಾಸ್ತ್ರ	0—8
ಇಂದ್ರ ವಜ್ರ	0—4	ಪ್ರ ಲೇಖ್ಯಬೋಧಿನಿ	1—4	ಸನಾತನಧರ್ಮ ದೀಪಿಕೆ	1—0
ಚೆಲ್ಮೋಜಿ	0—3	ವಿಷವೃಕ್ಷ	1—4	ಲಘುರಾಮಾಯಣ	0—4
ಕನಕಾಲುಕ	0—6	ಮುದ್ರಾಮಂಜೂಷ	1—8	ಕಥಾ ಮಂಜರಿ	0—6
ಶಿವಾನಂದಲಹರಿ	0—6	ಶುಕಸಪ್ತತಿ	2—0		
ಗದ್ದತ್ತ ಸೋಶಳಿಯ	0—4				

ಪ್ರಸಿದ್ಧ ಪತ್ತೇದಾರಿ ಕಥೆಗಳು, ದುಷ್ಟ ಚತುಷ್ಟಯ, ನರಬಲಿ, ನೀಲಾಂಬರಿ, ವಿಷಮಘೋರ ಮಾಯಾವಿನಯ, ಅತ್ಯಾಚಾರ, ಚೋರ ಚಕ್ರವರ್ತಿ, ನರ ರಾಕ್ಷಸಿ, ಪ್ರತಿಯೊಂದು ಪ್ರತಿಯೂ 2 ಆಣೆ

ವಿಳಾಸ:— **ವಿದ್ಯಾಸಾಗರ ಬುಕ್ ಡಿಪ್ಪೋ,**

ಚಿಕ್ಕಪೇಟೆ. ಬೆಂಗಳೂರು ಸಿಟಿ.

ಯುನಿವರ್ಸೆಲ್ ಎಸ್ಯುರೆನ್ಸ್ ಕೊ, ಲಿಮಿಟೆಡ್.

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ.

ಸರಕಾರದ ಭದ್ರತೆಯ ಮೇಲ್ವಿಚಾರದಲ್ಲಿ ನಡೆಯುತ್ತಿರುವುದು.

ಭಂಡವಾಳ ರೂ. 10,00,000.

ಈ ತನಕ ಕೊಡೋಣಾದ ವಿಮೆ ಹಕ್ಕುಗಳ ಮೊಬಲಗು ಶುಮಾರು 8,00,000.

ಫಂಡು—ರೂ. 3,00,000ಕ್ಕೆ ಮಿಕ್ಕಿದೆ.

ಸರಕಾರದವರ ಭದ್ರತೆಯಲ್ಲಿ ರೂ. 50,000ವಿರುವುದು.

ಚೀಪ್ ಇನ್ಸೂರೆನ್ಸ್ ಸ್ಕೀಮ್ ಎಂಬ ವೈದ್ಯಪರೀಕ್ಷೆ ಇಲ್ಲದೆ ವಿಮೆ ಉತ್ತರಾಯಿಸಿಕೊಳ್ಳಬಹುದಾದ ಸರ್ವರಿಗೂ ಸಾಧ್ಯವಾದ ಸುಲಭ ಕ್ರಮ.

ಈ ಪ್ರಾಂತ್ಯಗಳಲ್ಲಿ ಯಾವ ವಿಮೆ ಕಂಪೆನಿಗಳಲ್ಲಾದರೂ ಈತನಕ ಇಂಥಾ ಅಗ್ಗ ದರಗಳ ವಿಮೆ ಉತ್ತರಾಯಿಸುವ ಏರ್ಪಾಡೇ ಇರುವದಿಲ್ಲ. ಭಾರತೀಯರಲ್ಲಿ ವಿಶೇಷವಾಗಿರುವ ಬಡವರಿಗೋಸ್ಕರವೇ ಈ ಕ್ರಮವು ಏರ್ಪಡಿಸಲ್ಪಟ್ಟಿರುತ್ತದೆ. ಪ್ರೊವಿಡೆಂಟ ಫಂಡುಗಳ ಕ್ರಮದ ಪ್ರಕಾರ ಮುಂದಕ್ಕೆ ಸಂಭವಿಸಬಹುದಾದ ಅನನುಕೂಲತೆಗಳು ಇವರಲ್ಲಿರವು ವಿಮೆ ಉತ್ತರಾಯಿಸಿಕೊಳ್ಳುವ ಈ ನವೀನ ಅಗ್ಗ ದರಗಳ ಏರ್ಪಾಡು ಬಹಳ ಉಪಯುಕ್ತವಾದದ್ದು ಎಂತ ವಿಮೆ ಸಂಘಗಳ ವಿಶೇಷ ಮಾಹಿತಿದಾರರ ಅಭಿಪ್ರಾಯವಿರುವುದು ನಿಶ್ಚಿತವಾದ ವಿಮೆ ಮೊಬಲಗುಗಳ ರೂಪಾಯಿ ಮತ್ತು ಅರ್ಧ ರೂಪಾಯಿಗಳ ಪೊಲಿಸಿಗಳು ಈ ಕ್ರಮದ ಮೇರೆಗೆ ಕೊಡೋಣಾಗುವವು

ಸಾಮಾನ್ಯ ವಿಮೆ ಇಲಾಖೆ.

ಈ ಕಂಪೆನಿಯ ಈ ಇಲಾಖೆಯಲ್ಲಿ ವಿಮೆ ಉತ್ತರಾಯಿಸಿಕೊಳ್ಳುವವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಲಿರುವುದು. ಸಾಧ್ಯವಿರುವ ಅತ್ಯಂತ ಕಡಮೆಯ ದರಗಳು ಸಂಪೂರ್ಣವಾದ ಭದ್ರತೆಯು ಈ ಇಲಾಖೆಯ ವಿಶೇಷ ಪ್ರಯೋಜನಗಳಾಗಿರುವುದು. ಕಂಪೆನಿಯ ಲೆಕ್ಕದ ಸ್ಥಿತಿಗತಿಯನ್ನು ತೋರಿಸುವ ಮೊಖಾಬಿಲೆ ಪಟ್ಟಿಗಳನ್ನು ಈ ಕಂಪೆನಿಯ ವಿಷಯ ಪತ್ರಗಳ ಅಭಿಪ್ರಾಯವೇನೆಂಬುದನ್ನೂ ತರಿಸಿ ನೋಡಿರಿ

ಒಳ್ಳೇ ಚಟುವಟಿಕೆಯ ಜಾಣರಾದ ಏಜಂಟರುಗಳು ಬೇಕಾಗಿರುವರು. ಶರ್ತಗಳ ಬಗ್ಗೆ ಕೆಳಗಣ ವಿಳಾಸಕ್ಕೆ ಬರಕೊಳ್ಳಬಹುದು

ವಿಳಾಸ — **ಲಕ್ಷ್ಮಣ ರಾವ್ ಬ್ರದರ್ಸ್,**

ಚೀಫ್ ಏಜಂಟ್ಸ್, ಕೆನರಾ, ಮೈಸೂರು, ಕೊಡಗು, ಪೋಸ್ಟು, ಉಡುಪಿ ಇವರಿಗೆ ಬರೆದುಕೊಳ್ಳಿರಿ.

ಜಯವಿಜಯ

ಅಥವಾ

ತೂಗಾಡುವ ಅಸ್ಥಿಪಂಜರ.

ಗುಜರಾಥಿ ಭಾಷೆಯಿಂದ ಕನ್ನಡದಲ್ಲಿ ಹೊಸತಾಗಿ ಭಾಷಾಂತರವಾದದ್ದು,

ಈ ಗ್ರಂಥದ ಕುರಿತು "ಸತ್ಯದೀಪಿಕೆ" ಎಂಬ ವಾರಪತ್ರಿಕೆಯು ಪಡುವ ಅಭಿಪ್ರಾಯ —"ಇದು ಬಹಳ ರಸಿಕವಾದ ಆಶ್ಚರ್ಯವುಳ್ಳ ಒಂದು ಕಥೆಯಾಗಿದೆ. ಅದನ್ನು ಓದತೊಡಗಿದವರಿಗೆ ಅದನ್ನು ತೀರಿಸುವ ತನಕ ವಿಶ್ರಾಂತಿ ದೊರಕದು. ದೇಶಸ್ಥರು ಸಹಾ ವಿಲಾಯತಿ ಕಾದಂಬರಿಗಳಂತೆ ಚೆಲೋ ಕಥೆಗಳನ್ನು ಬರೆಯಬಲ್ಲರೆಂದು ಇದರಿಂದ ಪ್ರಕಟವಾಗುತ್ತದೆ ಇದರ ಸಾರಾಂಶವೂ ನೀತಿಯೂ ಕೂಡಾ ಘನವಾದದ್ದು. ನೀತಿವಂತರು ಅನೇಕಸಾರಿ ಶ್ರಮೆಪಡುವಾಗ ದುಷ್ಟರು ಕೆಲವು ಸಮಯ ಮೆರೆಯುವರೆಂದೂ ಆದರೆ ದುಷ್ಟರ ದುಷ್ಟತನವು ಬೈಲಾಗಿ ಅವರು ತಮ್ಮ ದುಷ್ಟತನಕ್ಕೆ ತಕ್ಕ ಪ್ರತಿಫಲವನ್ನು ಹೊಂದುವಾಗ ನೀತಿಯು ಕಡೆಗೆ ಜಯಿಸಿ ಬಾಳುವದೆಂದೂ ಈ ಕಥೆಯ ಕವಿಯು ತೋರಿಸುವನು. ಇದಲ್ಲದೆ ಈ ಕಥೆಯ ಶೂರರಲ್ಲಿ ಒಬ್ಬಳಾದ ಜಯೆಯಲ್ಲಿ ಪತಿವ್ರತಾ ಧರ್ಮವೂ ಇತರರಲ್ಲಿ ಬೇರೆ ಸದ್ಗುಣಗಳೂ ಹೊಳೆಯುವವು. ಕರ್ನಾಟಕ ಬಲ್ಲವರೆಲ್ಲರೂ ಈ ಕಥೆಯನ್ನು ಓದಿಕೊಂಡು ಈ ಕಥೆಯ ನೀತಿಯಿಂದ ಲಾಭವನ್ನು ಪಡೆದಾರೆಂತ ನಂಬುತ್ತೇವೆ": ಇತ್ಯಾದಿ. ಪುಸ್ತಕದ ಕ್ರಯ 0—12—0. ವಿ. ಪಿ. ಬೇರೆ.

ವಿಳಾಸ:—

V. O. Amin,
C/o E. A. Goll Esq.
Sirdar Palace, Apollo Stre
BOMB

ನ್ಯಾಯದರ್ಪಣ.

ಹೊಸ ಪುಸ್ತಕ.

ಇಂಡಿಯಾ ದೇಶದ ಸಮಸ್ತ ಹಿಂದೂ ಜನರ ಸಾಮಾನ್ಯ ಧರ್ಮಗಳು, ಅವುಗಳನ್ನು ಅತಿಕ್ರಮಿಸಿ ನಡೆಯುವವರಿಗೆ ಉಂಟಾಗತಕ್ಕ ಫಲಗಳು, ಇವುಗಳನ್ನು ಕುರಿತು, ಗವರ್ನಮೆಂಟಿನವರಿಂದ ಅನೇಕ ಆಕ್ಟುಗಳು, ರೆಗ್ಯುಲೇಷನ್‌ಗಳು, ಶಾಸನಗಳು ವಗೈರೆ ವಿಧಾಯಕವಾಗಿ ಇರುತ್ತೆ. ಇವುಗಳೆಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೇ ಅಪಾರವಾಗಿ ಇರುತ್ತವೆ. ಇವುಗಳಲ್ಲಿ, "ಕಂಟ್ರಾಕ್ಟ್" ಅಂದರೆ ಕರಾರುಗಳು, "ಬ್ರೀಚ್ ಆಫ್ ಕಂಟ್ರಾಕ್ಟ್" ಅಂದರೆ ಒಪ್ಪಂದಕ್ಕೆ ತಪ್ಪಿ ನಡೆಯೋಣ, ದ್ರೋಹ, ಲಿಮಿಟೇಷನ್, ಛಾಪಾ ಕಾಗದ, ರಿಜಿಸ್ಟ್ರೇಷನ್, ಸಿವಿಲ್ ಪ್ರೊಸಿಡ್ಯೂರ್, ಕ್ರಿಮಿನಲ್ ಪ್ರೊಸಿಡ್ಯೂರ್, ಪೀನಲ್ ಕೋಡ್, ಹಿಂದೂ ಲಾ, ಮುಂತಾದ ಧರ್ಮಶಾಸ್ತ್ರಗಳಿಂ, ಮನುಷ್ಯರ ನಿತ್ಯಾಚರಣೆಗೆ ಅವಶ್ಯಕವಾದ ಲೌಕಿಕ ವ್ಯವಹಾರ ಧರ್ಮಗಳ ಮುಖ್ಯ ಸಂಗತಿಗಳನ್ನೆಲ್ಲಾ ಆರಿಸಿ ಈ ಸಣ್ಣ ಪುಸ್ತಕವನ್ನು ರಚಿಸಿರುತ್ತೆ ಮತ್ತು ವಾಡಿಕೆಯಲ್ಲಿ ಇರತಕ್ಕ ನಾನಾ ವಿಧಗಳಾದ ದಸ್ತೈವಜುಗಳ ಅನೇಕ ನಮೂನೆಗಳು ಮತ್ತು ಕ್ರಿಮಿನಲ್ ರಿವಿನ್ಯು ಗ್ರಾಮ ಮುನಸೀಫ್ ಕೋರ್ಟುಗಳ ಮುಂದಿನ ದಾವಾ ವಗೈರೆ ಅರ್ಜಿಗಳ ಮಾದರಿಗಳು ಅಡಕವಾಗಿ ಇರುತ್ತೆ. ಬೆಲೆ 1—8—0 ವಿ. ಪಿ 1—12—0

ಲಾಯರ್ ಯಂ ಯಸ್. ನಂಜಪ್ಪನವರು,

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಪೋಸ್ಟೇಜು ಸೇರಿ 15-0-0 ಆಗುತ್ತೆ.

ಅಚ್ಚಾಗುತ್ತಲಿದೆ! ಪುರಾತನ ಸಂಗ್ರಹ!! ನವೀನ ಗ್ರಂಥ!!

ಭೂತಾಳಪಾಂಡ್ಯರಾಯನ

ಸಂಪೂರ್ಣ ಕಟ್ಟುಗಳು ಇರುವ

ದಕ್ಷಿಣಕನ್ನಡ ಜಿಲ್ಲೆಯ ಚರಿತ್ರೆ.

ಈ ಪುಸ್ತಕವು ಮಕ್ಕಳ ಕಟ್ಟಿನ ಬ್ರಾಹ್ಮಣರ ಮನೆತನ ಮರ್ಯಾದೆಗಳ ಮೂಲ, ಅಳಿಯ ಕಟ್ಟಿನವರ ಆದಿ, ಪೂರ್ವದ ಎಲ್ಲಾ ಜಾತಿಗಳ ಮತ್ತು ರಾಜರುಗಳ ಚರಿತ್ರೆ ಸಹಿತವಿರುವ ಹೊಸ ಪುಸ್ತಕ.

(ಎಲ್ಲಾ ವಿವರಗಳು ಜನವರಿಯ ಸ್ವದೇಶಾಭಿಮಾನಿಯಲ್ಲಿರುವದು)

ಪ್ರತಿ 1ಕ್ಕೆ . 1 4 0

ಸ್ವದೇಶಾಭಿಮಾನಿ ಚಂದಾದಾರರಿಗೂ, ಉಪಾಧ್ಯಾಯರುಗಳಿಗೂ ವಿದ್ಯಾರ್ಥಿಗಳಿಗೂ, ಮುಂದಾಗಿ ತಿಳಿಸಿದವರಿಗೂ 1—2—0. ಟಪ್ಪಾಲು ಹಾಸಲು ಪ್ರತ್ಯೇಕ ಚಂದಾದಾರರು ನಂಬ್ರ ತಿಳಿಸಬೇಕು.

ವಿಳಾಸ:—

"ಕುಶಲಮಂದಿರ"
ಶ್ರೀ ರಾಜರಾಜೇಶ್ವರಿ ದೇವಸ್ಥಾನ,
ಪೊಳಲಿ

ಎನ್ ಎ ಶೀನಪ್ಪ ಹೆಗಡೆ
ಅಮುಣಿಂಜೆ ಗುತ್ತು,
ಪೋಸ್ಟು ಗುರುಪುರ, ದ. ಕನ್ನಡ

ರೂ 501 ಉಚಿತ!

ಬಲೂನ್ ಬ್ರೇಂಡ್ ಸಾಬೂನ್.

5 ನಿಮಿಷದೊಳಗೆ ಕೂದಲನ್ನು ಉದುರಿಸಿಬಿಡುವದಿಲ್ಲವೆಂಬದನ್ನು ಖಚಿತಪಡಿಸುವವರಿಗೆ ರೂ 501 ಉಚಿತವಾಗಿ ಕೊಡೋಣಾಗುವದು ಇದರಿಂದ ಚರ್ಮವು ಕೆಡದು. 3 ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ 0—12—0, 2 ಪೆಟ್ಟಿಗೆಗಳ ವರೆಗೆ ವಿ. ಪಿ ಚಾರ್ಜು 0—5—0.

ರೂ. 2500 ಉಚಿತ!

ಸಿರಾಜಿ ಹೇರ್ ಡೈ ಎಂಬ ಕೇಶತೈಲವು ಬಿಳೀ ಮತ್ತು ನರೆತ ಕೂದಲನ್ನು ಕಪ್ಪು ಮಾಡುವದಿಲ್ಲವೆಂದು ತೋರಿಸುವವರಿಗೆ ರೂ. 2500 ಉಚಿತ.

ಈ ತೈಲವನ್ನು ಏನೊಂದು ಬಾಧಕಬಾರದಂತೆ ಅತಿ ನಿಪುಣತೆಯಿಂದ ತಯಾರು ಮಾಡಿರುತ್ತದೆ. ಇದರಿಂದ ಚರ್ಮದಲ್ಲಿ ಕಲೆಯಾಗದು. ಪೆಟ್ಟಿಗೆ 1ಕ್ಕೆ ರೂಪಾಯಿ 1—0—0; ವಿ. ಪಿ. ಬೇರೆ.

ವಿಳಾಸ:— ಎಫ್. ಎಲ್. ದವಾವಾಲಾ,
ಮಿರ್ಜ ಸ್ಟ್ರೀಟ್, ಮುಂಬಾಯಿ.

ಇಂಗ್ಲೀಷಿನಲ್ಲಿ ಪತ್ರವ್ಯವಹಾರ ನಡಿಸಬೇಕಾಗಿದೆ.

F. L. Davawala,
Mirza Street. BOMBAY.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಸರ್‌ಬತ್ತುಗಳು:— ದ್ರಾಕ್ಷಿ, ಸುಗಂಧವಾಲೆ, ಗುಲಾಬಿ, ಬಾಳೆ, ನಿಂಬೆ ಕಿತ್ತಲೆ, ಬಾದಾಮಿ, ಸೇಬು, ದಾಳಿಂಬೆ, ಸೊಂಟಿ ಮುಂತಾದ ಹಣ್ಣುಗಳ ರಸಗಳು ಇದರಲ್ಲಿ 5 ತೊಟ್ಟನ್ನು ಸೇರಿಸಿದರೆ 1 ಬಟ್ಟಲು ನೀರಿಗಾಗಲಿ ಸೋಡಾವಿಗಾಗಲಿ ಆಯಾ ಹಣ್ಣುಗಳ ವಾಸನೆಯಿಂದ ಅತಿ ಮನೋಹರ ರುಚಿಕರವಾಗಿರುವದು. ಅಂಗಡಿಗಳಲ್ಲಿ ಮಾರುವ ರಸಗಳಿಗಿಂತಲೂ ಎಷ್ಟೋ ಅಗ್ಗವಾಗಿಯೂ ಮತ್ತು ವಿ ಪಿ. ಚಾರ್ಜುಗಳು ಕಡಿಮೆಯಾಗುವಂತೆಯೂ ಮಾಡಲ್ಪಟ್ಟಿದೆ ಒಂದು ಸೀಸೆ ರಸದಿಂದ ರುಚಿಕರವಾದ 50 ಬಟ್ಟಲು ಪಾನಕವನ್ನು ಮಾಡಬಹುದು ಸೀಸೆ 1-ಕ್ಕೆ ಆಣೆ 8, ವಿ ಪಿ ಚಾರ್ಜು 3 ಸೀಸೆವರಿಗೂ 5 ಆಣೆ

ಸುಗಂಧನಾಸಿಕಾಚೂರ್ಣ.— ಈ ನಾಸಿಕಾಚೂರ್ಣವು ಅತ್ಯುತ್ತಮವಾದ ಸುಗಂಧ ವಸ್ತುಗಳಿಂದ ತಯಾರಿಸಿದ್ದು ಇದನ್ನು ಸಾಧಾರಣ ನಸ್ಯದೊಡನೇ ಕೊಂಚ ಸೇರಿಸಿ ಉಪಯೋಗಿಸಿದರೆ ಹೊಗೆಸೊಪ್ಪಿನ ದುರ್ವಾಸನೆ ಮಾಯವಾಗಿ ಹೋಗುವದಲ್ಲದೆ ಮನಸ್ಸಿಗೆ ಸಂತೋಷವಾದ ಸುವಾಸನೆಯನ್ನು ಕೊಡುವದು ಇದು ತಲೆನೋವು, ಪಿತ್ತದಿಂದ ತಲೆ ತಿರುಗುವದು, ಪೀನಸ ಮುಂತಾದ ರೋಗಗಳನ್ನು ನಿವರ್ತಿಮಾಡಿ ಕ್ರಮೇಣ ನಸ್ಯದ ದುರಭ್ಯಾಸವನ್ನು ಹೋಗಲಾಡಿಸುವದು ಒಂದು ಸೀಸೆ ಒಂದು ತಿಂಗಳಿಗೆ ಸಾಕು. ಸೀಸೆ 1 ಕ್ಕೆ 4 ಆಣೆ ಟಪ್ಪಾಲ್ ಚಾರ್ಜು 1 ಸೀಸೆಯಿಂದ 3 ಸೀಸೆ ವರಿಗೆ 3 ಆಣೆ, 4 ಸೀಸೆಯಿಂದ 6 ಸೀಸೆವರಿಗೆ 5 ಆಣೆ 7 ಸೀಸೆಯಿಂದ 12 ಸೀಸೆ ವರಿಗೆ 7 ಆಣೆ

ಅಶೋಕಘೃತ:— ಸ್ತ್ರೀಗಳಿಗೆ ಕ್ರಮತಪ್ಪಿ ಏಹಿಷ್ಟೆ ಯಾಗೋಣ, ಮುಟ್ಟಾದ ಕಾಲದಲ್ಲಿ ಬಹು ನೋವುಂಟಾಗುವಿಕೆ, ಮುಟ್ಟು ಕಳಿಯುವವರೆಗೂ ತೊಡೆಯ ಸಂದಿನಲ್ಲಿ ವಿಪರೀತವಾಗಿ ಬಾಧೆಯಾಗುವುದು, ಹೊತ್ತು ಗೊತ್ತಿಲ್ಲದೆ ಮುಟ್ಟಾಗೋಣ, ಅತ್ಯಲ್ಪವಾಗಿಯಾಗಲಿ ಅಥವಾ ಅತ್ಯಧಿಕವಾಗಿಯಾಗಲಿ ರಜಸ್ಸು ಸುರಿಯುವುದು, ಮಕ್ಕಳಿಲ್ಲದೆ ಬಹುಕಾಲ ಬಂಜೆಯಾಗಿರುವುದು, ವಾಡಿಕೆಯಾಗಿ ಗರ್ಭಸ್ರಾವವಾಗುವಿಕೆ, ಇವೇ ಮೊದಲಾಗಿ ನಾನಾ ತರದ ವ್ಯಾಧಿಗಳಿಗೂ ಅತ್ಯುತ್ತಮವಾದ ಔಷಧವು. ಆರೋಗ್ಯ ಮತ್ತು ಅಂದವಾಗಿಯೂ ಇರತಕ್ಕ ಮಕ್ಕಳನ್ನು ಪಡೆಯಬೇಕೆಂದು ಬಯಸುವ ಪ್ರತಿಯೊಬ್ಬ ಸ್ತ್ರೀಯು ನಮ್ಮ ಅಶೋಕಘೃತವನ್ನು ಅತ್ಯವಶ್ಯವಾಗಿ ಉಪಯೋಗಿಸಬೇಕು ಸೀಸೆ 1 ಕ್ಕೆ 1 ರೂಪಾಯಿ, ಎರಡು ಸೀಸೆವರಿಗೆ ವಿ ಪಿ ಚಾರ್ಜು 5 ಆಣೆ.

ಬೃಹತ್‌ಚಂದ್ರೋದಯ ಮಕರಧ್ವಜ:— ನರಗಳ ದುರ್ಬಲತೆಗೂ, ಸತ್ವ ಗುಂದಿರುವುದಕ್ಕೂ ಪುರುಷೇಂದ್ರಿಯವು ಕ್ಷೀಣಿಸಿರುವುದಕ್ಕೂ, ಜ್ಞಾಪಕಶಕ್ತಿಯು ಉಡುಗಿ ಹೋಗಿರುವುದಕ್ಕೂ ಮತ್ತು ಸ್ವಪ್ನ ಸ್ಖಲನಗಳಿಗೂ ಇದು ಅಮೂಲ್ಯವಾದ ಸಂಜೀವನವು "ಮುದ್ದು ಕುಡಿಯುತ್ತಲೇ ಎದ್ದು ಕುಳಿತುಕೊಂಡರು" ಎಂಬುದು ಮತ್ತಾವ ಔಷಧಿಗಳಿಗೆ ಸುಳ್ಳಾದರೂ ನಮ್ಮ ಬೃಹತ್‌ಚಂದ್ರೋದಯ ಮಕರಧ್ವಜಕ್ಕೆ ಮಾತ್ರ ಸುಳ್ಳಾಗದು ಇಂದ್ರಜಾಲ ವಿದ್ಯೆಯೋ ಎಂಬಂತೆ ಇದನ್ನು ಸೇವನೆಮಾಡುತ್ತ ಒಂದಹಾಗೆಲ್ಲ ದಿನದಿನಕ್ಕೂ ವ್ಯಾಧಿಯನ್ನು ನೀಗಿ ಪಟುತ್ವವನ್ನು ಕೊಡುವ ವಿಷಯವು ಬಹು ಸ್ಪಷ್ಟವಾಗಿ ತಿಳಿಯುವುದರಿಂದ ನಾವೇ ವಿಶೇಷವಾಗಿ ಹೇಳಿಪ್ರಯೋಜನವಿಲ್ಲವು. ಚಿಕ್ಕಂದಿನಲ್ಲಿ ದುವ್ಯಾಪಾರಕ್ಕೆ ಬಿದ್ದು ಪುರುಷ ಶಕ್ತಿಯನ್ನೇ ಕೆಡಿಸಿಕೊಂಡಿರುವವರು ಇದನ್ನು ಉಪಯೋಗಮಾಡಿದರಲ್ಲವೆ ಇದರ ಸರ್ವೋತ್ಕೃಷ್ಟತೆಯು ತಿಳಿಯುವುದು? ಬಹು ಸ್ವಲ್ಪ ಕಾಲದಲ್ಲಿಯೇ ಇಂದ್ರಿಯ ಪಟುತ್ವದವರನ್ನಾಗಿ ಮಾಡಿ ಸಂಪೂರ್ಣ ಪುರುಷಶಕ್ತಿಯನ್ನು ಕೊಡುವುದೆಂದು ನಾವು ಖಂಡಿತವಾಗಿ ಹೇಳುತ್ತೇವೆ. ಒಂದು ವಾರದ ಮಟ್ಟಿಗೆ ಉಪಯೋಗವಾಗುವ ಔಷಧಕ್ಕೆ 3 ರೂಪಾಯಿ, ವಿ ಪಿ. ಚಾರ್ಜು 5 ಆಣೆ

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ- ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳುನಲ್ಲಾಗಲೀ ಸ್ಪುಟವಾಗಿ ತಿಳಿಯುವಂತೆ ಬರಿಯಬೇಕು

MY ADDRESS.

P. SUBBA ROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—

ಪಿ. ಸುಬ್ಬರಾಯಿ,
ಆಯುರ್ವೇದ ಔಷಧಶಾಲಾ,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
ಸನ್ನಿಧಿ, ತಂಜಾವೂರು

ಮನೋಹರವೂ ಮೋಹಕರವೂ ಆದ

ಚಂದ್ರಪ್ರಭಾವತಿ ಹೇರಾಯಿಲ್.

ಈ ತೈಲದ ಸುವಾಸನೆಯು ಮೂರು ದಿನಗಳ ವರಿವಿಗೂ ಹೋಗದೆ ಘಮಘಮಿಸುತ್ತಿರುವದು. ಇದರ ಸುವಾಸನೆಯು ಮೂರು ದಿನಗಳಲ್ಲಿ ಹೋದರೆ **100** ರೂಪಾಯಿಗಳು ಬಹುಮಾನವಾಗಿ ಕೊಡುತ್ತೇವೆ.

ಕಡಿಮೆ ತರದ ಹೇರಾಯಿಲ್‌ಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳು ಮಾಡಿಕೊಳ್ಳಬೇಡಿರಿ. ಸುಂದರವಾದ **ಕೇಶರಾಶಿಯೂ**, ಅಂದವಾದ **ಕೂದಲುಗಳೂ** ಇವೇ ಪ್ರತಿಯೊಬ್ಬ ಸ್ತ್ರೀಪುರುಷರಿಗೂ ಸೌಭಾಗ್ಯವಾದ ಅಲಂಕಾರವಾಗಿದೆ ಕೂದಲುಗಳು ಸುಂದರವಾಗಿ ಕಾಣಬರಬೇಕಾದರೆ ಅವು ರೇಷ್ಮೆಯಂತೆ **ಮೃದುವಾಗಿ** ಕಂಗೊಳಿಸುತ್ತಿರಬೇಕು. ಇದಲ್ಲದೆ ತುದುಬನ್ನು ಯಾವ ರೀತಿಯಿಂದಲಾದರೂ ಕಟ್ಟುವಂತೆ ನಯವಾಗಿರಬೇಕು.

ಈ ತೈಲವನ್ನು ಉಪಯೋಗಿಸುತ್ತಲೆ ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿ **ನಿದ್ರಾಭಂಗವನ್ನು** ಪರಿಹರಿಸುವುದರಲ್ಲಿ ಇದಕ್ಕೆ ಸಮಾನವಾದ್ದು ಬೇರೊಂದಿಲ್ಲ. ಕೂದಲುಗಳಿಗೆ ಈ ತೈಲವನ್ನು ಸವರುವುದರಿಂದ ಎಂದಿಗೂ ಬಿದ್ದುಹೋಗಲಾರವು. **ಆದರೆ** ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮನೋಹರವೂ ಮೋಹಕರವೂ ಆಗಿ ಮನಸ್ಸನ್ನು ಉಲ್ಲಾಸಪಡಿಸುತ್ತದೆ. **ಈ ಚಂದ್ರಪ್ರಭಾವತಿ** ಹೇರಾಯಿಲನ್ನು ಉಪಯೋಗಿಸುತ್ತಲೆ ಮೆದುಳಿಗೆ ಬಲವನ್ನು ಕೊಡುವದು ಕೂದಲನ್ನು ಕೆಂಚಾಗಿಡದೆ ಕಪ್ಪು ಬಣ್ಣದಿಂದೊಡಗೂಡಿಸಿ ಗುಂಗುರು **ಗುಂಗುರಾಗಿ** ಬೆಳೆಯಿಸುವುದು ಕಣ್ಣಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುವುದು. ಈ ತೈಲವನ್ನು ತಲೆಗೆ ಸವರುವುದರಿಂದ ತಲೆನೋವನ್ನು ತಕ್ಷಣವೇ ಹೋಗ **ಲಾಡಿಸುವುದು.** ಮೆದುಳಿಗೆ ತಂಪನ್ನುಂಟುಮಾಡುವುದು. ನಿದ್ರೆಯು ಚೆನ್ನಾಗಿ ಬರುವುದು. ಈ **ಚಂದ್ರಪ್ರಭಾವತಿ** ಹೇರಾಯಿಲ್ **ಔಷಧಕ್ಕೆ ಔಷಧವೂ, ಸುಗಂಧ ದ್ರವ್ಯಕ್ಕೆ** ಸುಗಂಧ ದ್ರವ್ಯವೂ ಆಗಿರುವುದು ಈ ತೈಲವು ಸ್ತ್ರೀಪುರುಷರಿಗೆ ಬಹಳ ಉಪಕಾರಿಯಾದದ್ದು. ಒಂದು ಚಂದ್ರಪ್ರಭಾವತಿ ಹೇರಾಯಿಲ್ ಶೀಸೆಯು ಬಹು **ದಿನಗಳವರಿವಿಗೂ** ಬರುವುದು. **ಕ್ರಯ ಶೀಸೆ ಒಂದಕ್ಕೆ 1 ರೂಪಾಯಿ ಟಪ್ಪಾಲು ಖರ್ಚು 4 ಆಣೆ**

ನರೆಕೂದಲುಗಳನ್ನಿಟ್ಟುಕೊಂಡು ಮುದುಕರಾಗಿ ಕಾಣುವುದೇಕೆ?

ದರ್ಬಾರ್ ರಂಗು.

ಒಂದು ಸಲ ಹಚ್ಚಿದರೆ 25 ವರುಷದ ಪ್ರಾಯಸಮರ್ಥರಂತೆ ಕಾಣುತ್ತೀರಿ. **ಈ** ರಂಗು ಹಚ್ಚಿಕೊಂಡರೆ ಕೂದಲು ಕಪ್ಪಾಗಿ ಹೋಗುತ್ತೆ. ಈಗ ಮಾರಾಟಕ್ಕೆ **ಬಂದಿರುವ** ಅಲ್ಪ ತರದ ಕೂದಲು ರಂಗುಗಳು ತುಂಬಾ ಕೀಳುಜಾತಿಯವು. ಹಚ್ಚಿದ **ಕೂಡಲೆ** ಕೂದಲು ಕೆಂಚಾಗಿ ಅಸಹ್ಯವಾಗಿ ಕಾಣುತ್ತದೆ ನಮ್ಮ ದರ್ಬಾರ್ ರಂಗು **ಅಂಥಾದ್ದಲ್ಲ**, ಬಹು ಮೇಲಾದದ್ದು. ಒಂದಾವರ್ತಿ ಹಚ್ಚಿದರೆ ಕೂದಲು ಕಪ್ಪಾಗಿ **ರೇಷ್ಮೆಯ** ಹಾಗೆ ಕಂಗೊಳಿಸುವುವು. ಕ್ರಯ ಬುರುಸು ಸಮೇತ ರೂ 1—4—0

ಉಪಯೋಗಿಸುವ ವಿಧಾನ ಬಾಟ್ಲಿಯ ಜೊತೆಯಲ್ಲಿರುತ್ತೆ.

ಖೂಬ್-ಸೂರತ್.

ಮುಖಕಾಂತಿ.

ಇದು ಒಂದೇ 1,000 ರೂಪಾಯಿಗಳು ಬಾಳುವುದು.

ಅಂದಗೆಡಿಸಿ ಎಲ್ಲರೆದುರಿಗೂ ಮುಖವು ಮುಚ್ಚಿಕೊಳ್ಳುವಂತೆ ಮಾಡುತ್ತಾ ಹೇಗೂ **ವಾಸಿಯಾಗದ** ಅಸಹ್ಯದ ಗುರುತುಗಳು, ಮಚ್ಚೆಗಳು, ಗಂಧೆಗಳು, ಎಂಜಲು ಹುಣ್ಣು**ಗಳು**, ಚಿಬ್ಬು, ಇನ್ನೂ ಇತರ ವಿಧವಾದ ಮಚ್ಚೆಗಳು, ನವೆ ಮುಂತಾದುವುಗಳಿಗೆ ಈ **ಔಷಧವನ್ನು** ೧೫ ದಿನಗಳು ಹಚ್ಚುವುದರಿಂದ ಗುಣವಾಗಿ ಮುಖಕ್ಕೆ ಕಾಂತಿಯನ್ನು **ಕೊಟ್ಟು** ಹಸನ್ಮುಖಿಗಳಾಗಿ ಮಾಡುವುದು. ಕ್ರಯ ಡಬ್ಬಿ ಒಂದಕ್ಕೆ 8 ಆಣೆ

ವಜ್ರಾಂಗಚೂರ್ಣ.—ಧಾತುವು ನೀರಿನಂತಿದ್ದರೂ, ಮೂತ್ರದಲ್ಲಿಯೂ, **ನಿದ್ರೆಯಲ್ಲಿಯೂ** ಧಾತುವು ಹೋಗುತ್ತಿದ್ದರೂ, **ಸೊಂಟದನೋವು**, ಮೂತ್ರದಲ್ಲಿ ಉರಿ, **ಹಸಿವು** ಇಲ್ಲದೆ ಇರುವುದು. ಕೈಕಾಲುಗಳಲ್ಲಿ ನೋವಿದ್ದರೂ, ಶರೀರದಲ್ಲಿ ನಿಶ್ಶಕ್ತಿ ಆಗಿ**ದ್ದರೂ**, ತಲೆ ತಿರುಗುವುದು, ನಡೆಯುವಾಗ ಮೇಲುಬ್ಬಸ ಬರುವುದು ಸಹ ಇದನ್ನು **ಉಪಯೋಗಿಸಿದರೆ** ಇಲ್ಲಿ ಹೇಳುವುದು ನಿಜವೆಂದು ವ್ಯಕ್ತವಾಗುವುದು. ಇದರ ಗುಣಗಳ ಪ್ರಖ್ಯಾತಿಯಿಂದ ಇದರ ಬೆಲೆಯು ೧೦ ರೂಪಾಯಿ ಇಟ್ಟರೂ ಬಹಳ ಶುಲಭವೆಂದರಿಯಬೇಕು. ಈ ಬೆಲೆಯನ್ನು ಇಡುವದರಿಂದ ಬಡವರು ಕೊಳ್ಳಲಾರರು. ಆದ್ದರಿಂದ ಇದರ ಬೆಲೆಯು ಡಬ್ಬಾ ೧ಕ್ಕೆ ೧೦ ಆಣೆ ಇಟ್ಟಿರುತ್ತೆ.

ಪಂಡಿತ್ ಡಿ. ಎಂ. ರವರ ಭಸ್ಮವು.—ಉಷ್ಣದಿಂದ ಮೂತ್ರದಲ್ಲಿ ಉರ್ರಿ, **ಮೂತ್ರದಲ್ಲಿ** ಕೀವೂ ಇದು ಹಳೆದಾಗಲಿ ನೂತನವಾಗಲಿ ಆಗಿದ್ದರೂ ೪೮ ಗಂಟೆಯೊಳ**ಗಾಗಿ** ನಿವಾರಣೆಯಾಗುತ್ತವೆ. ಕ್ರಯ ಡಬ್ಬಿ ೧ಕ್ಕೆ ೧೨ ಆಣೆ.

ಉಷ್ಣಕಾರಕಕ್ಕೆ ಮಾತ್ರೆಗಳು:—ಉಷ್ಣಕಾರಕದಿಂದ ಶರೀರದಲ್ಲಿ ಪಡೆಗಳಿದ್ದರೂ, ಗಾಯಗಳಿದ್ದರೂ ಈ ದೆಸೆಯಿಂದ ಶರೀರವನ್ನೇ ತ್ಯಜಿಸಲುದ್ಯುಕ್ತವಾದ ರೋಗವಾದರೂ ಸಹ ಈ ಔಷಧವನ್ನು ಸೇವಿಸುವುದರಿಂದ ಖಂಡಿತವಾಗಿಯೂ ಗುಣವಾಗುವುದು. ಕ್ರಯ ಡಬ್ಬಿ 1ಕ್ಕೆ 1 ರೂಪಾಯಿ.

ದಿಲ್‌ಖುಷ್ ತೈಲವು:—ಅನೇಕರಿಗೆ ಕೂದಲನ್ನು ಬೆಳಸುವ ಇಚ್ಛೆಯಿರುವುದು ಈ ತೈಲವನ್ನು 10 15 ದಿನಗಳು ಹಚ್ಚುವದರಿಂದ ಕೂದಲು ಬಹಳವಾಗಿ ಬೆಳೆಯುವವು. ತೈಲವು ಬಹಳ ಸುವಾಸನೆಯಾಗಿರುವುದು. ಮೆದುಳಿಗೆ ತಂಪನ್ನುಂಟುಮಾಡುವುದು ಕ್ರಯ ಶೀಸೆ 1ಕ್ಕೆ 12 ಆಣೆ.

ಆಶ್ಚರ್ಯಕರವಾದ ದ್ರಾವಕ:—ಇದನ್ನು ಸ್ವಲ್ಪ ಮೂಸಿ ನೋಡುವುದರಿಂದ ಒಂದು ನಿಮಿಷದಲ್ಲಿ ತಲೆನೋವು ನಿಲ್ಲುತ್ತೆ. ಔಷಧವು ಖರ್ಚಾಗದೆ ಹಾಗೆಯೇ ಇರುವುದು. ಚೇಳು, ಹಾವು ಇತ್ಯಾದಿ ವಿಷಜಂತುಗಳ ಕಡಿತಕ್ಕೆ ಹಚ್ಚಿದರೆ ಗುಣಪಡಿಸುತ್ತೆ. ಕ್ರಯ ಶೀಸೆ 1ಕ್ಕೆ 8 ಆಣೆ.

ರೋಮನಾಶಿಕ, ವೃಶ್ಚಿಕ ದಂಷ್ಟ್ರ:—ಈ ಔಷಧವು ಚೇಳಿನ ಹೊಡತಕ್ಕೂ ಕೂದಲು ತೆಗಿಯುವುದಕ್ಕೂ ಬಹಳ ಅನುಕೂಲವಾಗಿರುವುದು. ಇದು ಪ್ರತಿಯೊಬ್ಬರಲ್ಲಿಯೂ ಇರಬೇಕಾದ ಔಷಧವು ಕ್ರಯ ಶೀಸೆ **1ಕ್ಕೆ 4 ಆಣೆ.**

ವಾತದಿವಾರಣೆ ತೈಲವು:—ಎದೆಯಲ್ಲಿಯೂ, ಪಕ್ಕೆಗಳಲ್ಲಿಯೂ, ಸೊಂಟದಲ್ಲಿಯೂ, ಕೈಕಾಲುಗಳಲ್ಲಿಯೂ ನೋವಿದ್ದರೆ ಈ ತೈಲವನ್ನು ಉಪಯೋಗಿಸುವುದರಿಂದ ತಕ್ಷಣ ಗುಣವಾಗುವುದು. ಕ್ರಯ ಶೀಸೆ **1ಕ್ಕೆ 4 ಆಣೆ.**

ಅಮೃತಗೊಂಡ ಮೂಲವ್ಯಾದಿ ಔಷಧ... ...	ಶೀಸೆ	1ಕ್ಕೆ	0-12—0
ಕಣ್ಣಿಗೆ ಸುರ್ಮ	,,	,,	0—4—0
ದಂತ ಚೂರ್ಣ	ಡಬ್ಬಿ	,,	0—4—0
ಕಜ್ಜಿ, ಹುಳುಕಡ್ಡಿ ಔಷಧ	,,	,,	0—4—0
ಹೊಟ್ಟೆನೋವಿಗೆ ಔಷಧ	ಶೀಸೆ	,,	0—4—0
ತಲೆನೋವಿಗೆ ತೈಲವು	,,	,,	0—4—0
ಕೆಮ್ಮಲು ರೋಗಕ್ಕೆ ಔಷಧವು	ಡಬ್ಬಿ	,,	0—4—0

ಗಾಯಕ್ಕೆ ಔಷಧ:—ಇದನ್ನು ದಿನಕ್ಕೆರಡಾವರ್ತಿಯಂತೆ 8-10 ದಿನಗಳು ಹಚ್ಚುವುದರಿಂದ ಹಳೇ ಮತ್ತು ಹೊಸ ಗಾಯಗಳು, ಗಾಯದಲ್ಲಿ ಉರಿಯುತ್ತಿದ್ದರೂ ಗುಣಪಡಿಸುವುದು. ಕ್ರಯ ಡಬ್ಬಿ 1ಕ್ಕೆ 8 ಆಣೆ.

ಅನುಪಾನ ಪತ್ರಿಕೆಯು ಔಷಧದ ಜೊತೆಯಲ್ಲಿರುತ್ತದೆ.

ಒಂದು ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಯಲ್ಲಿ ಕಳುಹಿಸುವದಿಲ್ಲ.

ವಿಳಾಸ:—ಡಿ. ಮನ್ನಾಲಾಲ್

ಡಿಲ್ಲಿ ಷಿಫಾರು; ಅವನೂ ರೋಡ್. ಬೆಂಗಳೂರು ಸಿಟಿ

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ಈ ಮುರಬ್ಬಾವು "ಸಾಲಾಮಿಸ್ರಿ"ಯಲ್ಲಿ ತಯಾರಿಸಲ್ಪಟ್ಟದ್ದು ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹೀಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಬೆಂಗಳೂರು ಸಿಟಿ ಟಪ್ಪಾಲು ಆಫೀಸಿನ ಸೇವಿಂಗ್ಸ್ ಬ್ಯಾಂಕಿನಲ್ಲಿ 15—3—15ರಲ್ಲು ಡಿಪಾಜಿಟು ಇಟ್ಟಿರುತ್ತೇವೆ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ ! ಸೇವಿಸಿರಿ !!

ಈ ಸಾಲಾಮಿಸ್ರೀ ಎಂಬದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ಶಾವುಗಡ್ಡೆ ಇವುಗಳನ್ನು ಪಕ್ವ ಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಸಾಲಾಮಿಸ್ರಿಯೇ ಅಥವಾ ಬೇರೆ ತರಹದ್ದೇ ಎಂಬುವುದು ತಿಳಿದು ಬರುತ್ತೆ.

ಈ ಮುರಬ್ಬಾವನ್ನು ಪ್ರತಿಯೊಬ್ಬರು ಸೇವಿಸಬಹುದು. ಕ್ರಮದಂತೆ ಮನುಷ್ಯರು ಉಪಯೋಗಿಸಬಹುದು.

ಸಾಲಾಮಿಸ್ರಿ ಮುರಬ್ಬಾವು—	ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು
ಸಾಲಾಮಿಸ್ರಿ ಮುರಬ್ಬಾವು—	ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವದು
ಸಾಲಾಮಿಸ್ರಿ ಮುರಬ್ಬಾವು—	ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು.
ಸಾಲಾಮಿಸ್ರಿ ಮುರಬ್ಬಾವು—	ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು
ಸಾಲಾಮಿಸ್ರಿ ಮುರಬ್ಬಾವು—	ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು
ಸಾಲಾಮಿಸ್ರಿ ಮುರಬ್ಬಾವು—	ಮೆದುಳಿಗೆ ಬಲವನ್ನು ಕೊಡುವದು
ಸಾಲಾಮಿಸ್ರಿ ಮುರಬ್ಬಾವು—	ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು—	ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು
ಸಾಲಾಮಿಸ್ರಿ ಮುರಬ್ಬಾವು—	ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು—	ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು—	ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು—	ತಾಂಬ್ರ ಮತ್ತು ಭಂಗಾರ ಭಸ್ಮಕಿಂತಲು ಉತ್ತಮವಾದದ್ದು.
ಸಾಲಾಮಿಸ್ರಿ ಮುರಬ್ಬಾವು—	ಸ್ತ್ರೀಸಂಗಕ್ಕೆ ಮೊದಲು ಸ್ಖಲನವಾಗುವುದನ್ನು ನಿಲ್ಲಿಸುವದು.

ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವದರಿಂದ ಪೂರ್ಣ ಗುಣಕೊಡುತ್ತೆ. 2—3 ಡಬ್ಬಿ ಮುರಬ್ಬಾವನ್ನು ಉಪಯೋಗಿಸುವದರಿಂದ ಜನ್ಮಾಂತರದ ರೋಗ ಗುಣಕೊಡುತ್ತೆ.

15 ತೋಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2 ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿ ವರೆಗೆ ಆಣೆ 6.

ಏಜಂಟರು:— ಡಿ ಸಯ್ಯದ್ ಉಸ್ಮಾನ್ ಎಂಡ್ ಕೋ, ದೊಡ್ಡಪೇಟೆ, ಬೆಂಗಳೂರು ಸಿಟಿ

ಡಿ. ಮನ್ನಾಲಾಲ್, ಡಿಲ್ಲೀ ವೈದ್ಯರು, 5 ಹಾಜಿಸಾಹೇಬ್ ಮಹಡಿ ಅವೆನ್ಯು ರೋಡ್, ಬೆಂಗಳೂರು ಸಿಟಿ.

ನರೆಕೂದಲಿಟ್ಟುಕೊಂಡು ಮುದುಕರಾಗಿ ಕಾಣುವುದೇಕೆ?

ದರ್ಬಾರ್ ಕೂದಲು ರಂಗು

ಒಂದು ಸಲ ಹಚ್ಚಿದರೆ 20 ವರುಷ ಪ್ರಾಯದ ಸಮರ್ಥನಂತೆ ಕಾಣು ತ್ತಿರಿ. ಈ ರಂಗು ಹಚ್ಚಿಕೊಂಡರೇ ಕೂದಲು ಅಚ್ಚ ಕಪ್ಪಾಗಿ ಹೊಳೆಯುತ್ತೆ. ಈಗ ಮಾರ್ಕೆಟಿಗೆ ಬಂದಿರುವ ಅಲ್ಪತರದ ಕೂದಲಿಗೆಹಚ್ಚುವ ಬಣ್ಣಗಳೂ ರಂಗುಗಳೂ ತುಂಬ ಕೀಳು ಜಾತಿಯವು; ಹಚ್ಚಿದಮೇಲೆ ಕೂದಲು ಕೆಂಚು ತಿರುಗಿ ಅಸಹ್ಯವಾಗಿ ಕಾಣುತ್ತದೆ. ನಮ್ಮ "ದರ್ಬಾರ್ ಕೂದಲು ರಂಗು" ಅಂಥಾದ್ದಲ್ಲ; ಬಹು ಮೇಲಾದದ್ದು. ಒಂದಾವರ್ತಿ ತರಿಸಿ ಪರೀಕ್ಷೆಮಾಡಿದರೆ ನೀವೇ ಸಂತೋಷಪಡುವಿರಿ. ಕ್ರಯ ಬುರುಸು ಸಮೇತ ಬಾಟ್ಲಿ ಒಂದಕ್ಕೆ ರೂ. 1, ಅಂಚೆ ಹಾಸಲು 4 ಆಣೆ.

ವಿಳಾಸ:— ವಿ. ಎ. ಎಸ್. ಪಾಣಿ ಕಂಪೆನಿ. ನಂಬ್ರ 3 ಇರುಳಪ್ಪನ್ ಬೀದಿ, ಮದರಾಸು.

ಕಟೀಲ ನರಸಿಂಹಪೈ ಎಂಡ್ ಸನ್ಸ್,

ರಥಬೀದಿ, ಮಂಗಳೂರು.

ಇತರ ಕಡೆಗಳಿಂದ ವಸ್ತ್ರ ಇತ್ಯಾದಿಗಳನ್ನು ತಕ್ಕೊಳ್ಳುವ ಮೊದಲು ನಮ್ಮಲ್ಲಿಯ ದರಗಳನ್ನೂ ಸನಗುಗಳನ್ನೂ ಪರೀಕ್ಷಿಸಿ ನೋಡಿರಿ.

ನಗದಿ ಗಿರಾಕಿಗಳಿಗೆ ವಿಶೇಷ ಪ್ರಯೋಜನ ದೊರಕುವಂತೆ ನಮ್ಮ ದರಗಳನ್ನು ಇಟ್ಟಿರುತ್ತೇವೆ

ಮಧುರಾ, ತಿರುಚಿನಾಪಳ್ಳಿ, ಸೇಲಂ, ಮದ್ರಾಸು, ಮುಂಬಾಯಿ, ಪೂನಾ, ಸೂರತ್, ಬೆಂಗಳೂರು, ಬನಾರಿಸ ಮೊದಲಾದ ನಾನಾ ವಿಧದ ವಸ್ತ್ರ ನೇಯಿಗೆಯಲ್ಲಿ ಪ್ರಖ್ಯಾತಪಟ್ಟ ಪ್ರಾಂತ್ಯಗಳಿಂದ ಎಲ್ಲಾ ಬಗೆಯ ಸನಗುಗಳನ್ನು ತರಿಸಿರುವೆವು. ಗಿರಾಕಿಗಳು ಬಂದು ಪರೀಕ್ಷಿಸಿ ನೋಡಬೇಕಾಗಿ ವಿಜ್ಞಾಪನೆ.

Kateel Narasimha Pai & Sons,
Cloth Merchants,
CAR STREET, Mangalore

ಚಿನ್ನ ಮುತ್ತು ಬೆಳ್ಳಿಯ ಮೆಡಲುಗಳನ್ನು ಬಹುಮಾನವಾಗಿ ಪಡೆದ

ಸ್ಟೀವನ್ ಎಂಡ್ ಸನ್

ಬಿಸ್ಕುಟು ವ ಕೇಕುಗಳನ್ನು ತಯಾರಿಸುವವರು, ಮಂಗಳೂರು

ಏಜಂಟರು:—ಅಂತೋನಿ ಎಲ್ ರೇಗೊ, ಸ್ಟೀವಾರ್ಟ್ ಬಜಾರ್, ಕಲ್ಲಿಕೋಟೆ
ಸ್ವದೇಶಿ ಎಂಪೋರಿಯಮ್, ಸೇಲಂ
ಕಣಕ ಸಬಾ ಚೆಟ್ಟಿಯಾರ್, ಲಾಲ್‌ಗುಡಿ, ಮಲೂರ್ ತಿರುಚಿನಾಪಳ್ಳಿ
ಎವನ್ ಬ್ರ್ಯಾಸ್ ಶೋಪ್, ಮಡಿಕೇರಿ
ವಿ ಬಾಲಕೃಷ್ಣ ನೈತು, ಬಿಗ್ ಬಜಾರ್ ಸ್ಟ್ರೀಟ್ ಕೋಯಮುತ್ತೂರು
ಆಂತೋನ್ ಎ ಡಿ ಐಯನ್ ಶೋಪ್ ಉಡ್ಪಿ
ನೀವು ನಮ್ಮ ಬಿಸ್ಕುಟ ಪತ್ಯೇಕ ವ ತೃಪ್ತಿಹೊಂದಿದರೆ ಇತರರಿಗೆ ಹೇಳಿರಿ ಇಲ್ಲವಾದರೆ ತಿಳಿಸಿದರೆ ನಮ್ಮನ್ನು ತೃಪ್ತಿಪಡಿಸುವೆವು

ವಿಳಾಸ.— ಸ್ಟೀವನ್ ಎಂಡ್ ಸನ್ಸ್, ಮಂಗಳೂರು

ವಿಕಟಪ್ರತಾಪವೆಂಬ ಮಾಸಿಕ ಪತ್ರಿಕೆ.

ಹಾಸ್ಯರಸದಿಂದ ಕೂಡಿದ ಈ ಮಾಸಪತ್ರಿಕೆಯ ವಾರ್ಷಿಕ ಚಂದಾ ಮುಂಗಡ ವಿ ಪಿ ಮೂಲಕ ಒಂದೇ ರೂಪಾಯಿ ಹಾಸ್ಯವನ್ನೇ ಹೆಚ್ಚಾಗಿ ಬರೆದು ವಾಚಕರನ್ನು ಮೆಚ್ಚಿಸುವ ಈ ಪತ್ರಿಕೆಗೆ ಎಲ್ಲರ ಪ್ರೋತ್ಸಾಹವು ಅವಶ್ಯಕವಾಗಿದೆ. ಚಂದಾದಾರರಾಗುವವರಿಗ ಯಯಾತಿ ಚರಿತ್ರಂ ಎಂಬ ಪುಸ್ತಕವೂ ಮತ್ತು 1915ನೇ ಇಸವಿಯ ಸುಂದರವಾದ ಕ್ಯಾಲೆಂಡರೂ ಉಚಿತವಾಗಿ ದೊರೆಯುವುದು.

ನಮ್ಮ ವಿಳಾಸ — ವಿ ಪಿ. ಆಫೀಸ್, ಕೋಲಾರ್.

ಪ್ಲೀಡರ್ ಎಂ. ಮಲ್ಲಾರಾಧ್ಯರಿಂದ ರಚಿತವಾದವುಗಳು.

ವ್ಯವಹಾರ ನಿರ್ಣಯ.

ಕನ್ನಡದ ಲಾ ಪುಸ್ತಕವು.

ತೃತೀಯ ಮುದ್ರಣ, 616 ಪುಟಗಳುಳ್ಳದ್ದು
ಕ್ರಯ, ದಪ್ಪ ಕಾಗದದ ಪ್ರತಿಗೆ 1—8—0.
ಕ್ರಯ, ಗ್ಲೇಜ್ ,, ,, 2—4—0.
ಪೋಸ್ಟೇಜು ಪ್ರತಿ 1ಕ್ಕೆ 4 ಆಣೆ.

ಇದರಲ್ಲಿ ಹಿಂದೂ ಲಾ, ಮಹಮ್ಮದೀಯ ಲಾ, ಪೀನಲ್‌ಕೋಡು ಇವು ವಿಸ್ತಾರವಾಗಿ ಬರೆಯಲ್ಪಟ್ಟಿವೆ ಮೈಸೂರು, ಮದ್ರಾಸು, ಬೊಂಬಾಯಿ ದೇಶಗಳಿಗೆಲ್ಲಾ ಸಾಮಾನ್ಯವಾದ ಲಾ ಮೃತಸ್ವತ್ತಿನ ವಿಲೇವಾರಿ, ಅನಾಥ ರಕ್ಷಣೆ ಕ್ರೈಸ್ತರ ವಾರಸ್ಸು ಹಕ್ಕು ಈ ವಿಷಯಕವಾದ ಖಾನೂನುಗಳೂ ಕ್ರಯ, ದಾನ, ವಿಲ್ಲು, ಹುಂಡಿ, ಗೇಣಿ ಮೊದಲಾದ ಸಮಸ್ತ ವ್ಯವಹಾರವನ್ನೊಳಗೊಂಡಿರುವ 92 ವಿಧದ ದಸ್ತಾವೇಜು ನಮೂನೆಗಳೂ, ಲಾ ಪ್ರಕಾರ ಸಿವಿಲ್ ಕ್ರಿಮಿನಲ್ ಕೋರ್ಟುಗಳಿಗೂ ಪೋಲೀಸಿಗೂ ಬರೆಯುವ ಅರ್ಜಿಗಳ 49 ನಮೂನೆಗಳೂ ಅವುಗಳ ಸಂಬಂಧವಾದ ವಿಶೇಷ ವಿಷಯ ವಿಚಾರಗಳೂ ಬಹಳ ಚೆನ್ನಾಗಿ ಬರೆಯಲ್ಪಟ್ಟಿವೆ ಇಷ್ಟು ದೊಡ್ಡ ಉಪಯುಕ್ತವಾದ ಗ್ರಂಥವನ್ನು ಇಷ್ಟು ಕಡಿಮೆ ಬೆಲೆಗೆ ಯಾರೂ ಮಾರುವುದಿಲ್ಲ.

"ತಖಾವಿ ಲಾ."

ಇದು ಕೃಷಿಯ ಅಭಿವೃದ್ಧಿಗಾಗಿಯೂ, ರೈತರ ಸಹಾಯಾರ್ಥವಾಗಿಯೂ ಸರಕಾರದವರು ಕೊಡುವ ಸಾಲ ಮೊದಲಾದ ಸಹಾಯ ವಿಷಯಕವಾದ ಲಾವನ್ನು ವಿವರಿಸುವ ಉಪಯುಕ್ತವಾದ ಪುಸ್ತಕ ಬೆಲೆ 8 ಆಣೆ. ಪೋಸ್ಟೇಜು 2 ಆಣೆ

ನಮ್ಮ ವಿಳಾಸ — ಎಂ ಎಂ ಪಂಡಿತಾರಾಧ್ಯ ಮೈಸೂರು.

S. U. N. & CO.,

BENARES CITY, U P

ದೊಡ್ಡ ಕಂಪನಿ ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಿಸ್ ರೇಶ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗನ್ನು ಇನಾಮಾಗಿ ಕಳುಹಿಸಲಾಗುವದು.

ತಮ್ಮ ವಿಳಾಸ — ಯಸ್.ಯು.ಯನ್ ಮತ್ತು ಕಂಪೆನಿ, ಕಾಶಿ

Estd 1888 **ಸ್ಥಾಪನೆ 1888.**

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳೆ, ಕರಿ ಮತ್ತು ಹಟವಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ ೧೦-೨೫ ವರ್ಷಗಳ ಹಳೆ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ ಬೆಲೆ ಬಾಟ್ಲಿಗೆ ೪ ಆಣೆ. ಟಪ್ಪಾಲು ಖರ್ಚು ೬ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು

ಸಾಸಾರ್ಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾಸಾರ್ಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಪ್ಪೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಬಿಚ್ಚಿಯೋಣ, ಪ್ರಮೇಹ (ಪರಮಿ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾಸಾರ್ಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾದಿ ಲೇಹ. ರಕ್ತ ಅಥವಾ ನೋಳೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಮರಿಸಿಯಂ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦ ಶಾಲ್ಮಲೀ ಪಾಕ ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತಬಂಧಗಳನ್ನು ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ ೬ ಆಣೆ

೧೨. ಗಜಕರ್ಣ ಕೇಸರಿ ಮುಲಾಮು. ತುರುಕಜ್ಜಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩ ಸವ್ವೀರಾಂಜನ (ಸುರುಮಾ). ಎಲ್ಲಾ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಬುದ್ಧಿಭ್ರಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿಗಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ತಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

B. M. Nath & Co, *Ayurvedic Chemists*

Vepery Post, MADRAS.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಿಲ್ಲತ-ಮಿಶ್ಶನ್ ಚೀಕುಗಳೂ; ಬೇರೆ ಅನೇಕ ತರದ ಸ್ವದೇಶೀ ಜೀಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಶನ್ ಶೋಪಿನ ಕೊಡೆಗಳೂ, ರೇಷ್ಮೆ ವಸ್ತ್ರಗಳೂ, ಬೆಲ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಷ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ

ಕಣಗಳೂ ಕನಾನ್ನೂರು ಶೀರೆಗಳೂ, ಚೀಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಒಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ಪಗದಿ.

ವಿಳಾಸ:— ...ಪಿ. ಎಸ್. ನೋಟು ಎಂಡ್ ಕಂಪೆನಿ,

ಹಂಪನ್‌ಕಟ್ಟಾ, ಮಂಗಳೂರು

ದಿ ಕೆನರಾ ಸ್ಯಾಕಲ್ ಮಾರ್ಟ್, ಉಡುಪಿ.



1. ಮೇಲಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸದಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ. ಸದರಿ ಕಾರಖಾನೆಯಲ್ಲಿ ಪ್ರಸಿದ್ಧವಾದ ಬಿ. ಎಸ್. ಎ. ಸಿಂಗರ್ ಹಂಬರ್, ರಜವಿಟ್‌ವರ್ತ ಅಲ್ಲದೆ ಸುಲಭ ದರದ ಬೆನ್ನನ್, ರೋಯಲ್, ಮಿನೋರಾ, ಸ್ಟಾರ್ಲಿ ಇತ್ಯಾದಿ ಸ್ಯಾಕಲುಗಳು ಅದಕ್ಕೆ ಬೇಕಾಗುವ ಬಿ. ಎಸ್. ಎ. ಬ್ರೆಂಪ್ಟನ್, ಬ್ರೂಕ್ಸ್, ಲೂಕಸ್, ವೆರ್ರಿ ಮುಂತಾದ ಉಪಕರಣಗಳೂ, ಡನ್‌ಲೋಪ್ ಪಾಮರ್, ಕೇಂಬ್ರಿಜ್, ಇಂಗ್ಲೀಷ ಟಾಯರ್ಸ್ ಮತ್ತು ಟ್ಯೂಬುಗಳೂ ಸಹಾ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಸೀದಾ ವಿಲಾಯತಿಯಿಂದ ತರಿಸುವದರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಸಹಾ ದೊರೆಯುವದು.

2. ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲ್ಲಿ ಖಾತ್ರಿಯಾದೀತು.

3. ಸ್ಯಾಕಲ್ ಕಲಿಯಲಪೇಕ್ಷೆ ಉಳ್ಳವರಿಗೆ ಮೂರೇ ದಿವಸಗಳಲ್ಲಿ ಪೂರ್ಣ ಟ್ರೈನ್ ಮಾಡಿ ಬಿಡಲಾದೀತು.

4. ನಾದುರುಸ್ತಿಯಾಗಿರುವ ಸ್ಯಾಕಲುಗಳನ್ನು ಕಡಿಮೆ ಚಾರ್ಜಿನಿಂದ ತೃಪ್ತಿಕರವಾಗಿ ದುರುಸ್ತಿ ಮಾಡಿಕೊಡಲಾದೀತು.

5. ಸ್ಯಾಕಲುಗಳನ್ನು ಬಾಡಿಗೆಗೆ ಕೊಡತಕ್ಕ ಏರ್ಪಾಟೂ ಮಾಡಿಯದೆ.

ಹೆಚ್ಚಿನ ಮಾಹಿತಿಗೂ ಬೇಕಾಗುವ ಸಾಮಾನುಗಳಿಗೂ ಕೆಳಗಿನ ವಿಳಾಸಕ್ಕೆ ಬರದುಕೊಳ್ಳಿರಿ.

K. K. Shanbhog, *Proprietor*

THE CANARA CYCLE MART.

Udipi, S. Canara.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1 ಇಸ್ತ್ರೀಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ, ತಲೆಯ ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2 ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತು ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲಿಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತ ಬಂದಲ್ಲಿ ತಿಂದನ್ನವು ಜೀರ್ಣವಾಗುವದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

4 ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು.

6. ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7 ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದು ಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ

45 ಮಾತ್ರೆಗಳ ಪೊಟ್ಟ 1ಕ್ಕೆ	0–3–0	200 ಮಾತ್ರೆಗಳ ಪೊಟ್ಟ 1ಕ್ಕೆ	0–7–0	80 ಮಾತ್ರೆಗಳ ಟಿನ್ 1ಕ್ಕೆ	0–4–0	550 ಮಾತ್ರೆಗಳ ಮರದಪೆಟ್ಟಿಗೆ1ಕ್ಕೆ	1–0–0
95 ,, ,,	0–4–0	200 ,, ಟಿನ್ ,,	0–9–0	100 ,, ಶೀಸೆ ,,	0–4–6	1200 ,, ,, ,,	2–0–0

1 ರೂಪಾಯಿಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಿಸಲ್ಪಡುವುದಿಲ್ಲವು ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು

☞ ಭರತಖಂಡ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ.

ಸೋಲ್ ಏಜಂಟ್ಸ್:—ಸೆಶಿಂತಾನ್ ಡಿಪ್ಪೋ,

ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ. 2.

ವೃಥಾ ವೆಚ್ಚಮಾಡುವದೇಕೆ?

ಐಶ್ವರ್ಯವಂತರೂ ಬಡವರೂ ಕೊಂಡುಕೊಳ್ಳಲು ಸಾಧ್ಯವಾಗಿರುವ

ಯುಕಲಿಪ್ಟಸ್ ತೈಲವು.

ತಲೆನೋವು, ಕಣ್ಣು ಉರಿ, ಗಾಯ, ಸಕಲ ವಿಧವಾದ ವಾಯುರೋಗ, ಕೆಮ್ಮು, ಉಬ್ಬಸ, ಶೀತಬೇದಿ, ಉಷ್ಣಬೇಧಿ, ಹೊಟ್ಟೆಯಲ್ಲಿ ಜ್ವರಗಡ್ಡೆ, ಸ್ತ್ರೀಯರ ವ್ಯಾಧಿಸಂಬಂಧ ಬಿಳುಪು ಮೊದಲಾದ ಮೇಹ ರೋಗಗಳು, ಕಿವಿಯಲ್ಲಿ ಕೀವು ಬರುವದು, ಹೆಂಗಸರ ಹೊಟ್ಟೆನೋವು ಮೊದಲಾದ ರೋಗಗಳನ್ನು ಗುಣಪಡಿಸುವದಿಲ್ಲವೆಂದು ಖಾತ್ರಿಪಡಿಸುವವರಿದ್ದಾರೋ? ಔನ್ಸ್ ಸೀಸೆ 1ಕ್ಕೆ 0—5—0. ವಿ ಪಿ. ಬೇರೆ. ಡಜನ್ ಸೀಸೆಗಳಿಗೆ ವಿ. ಪಿ ಸಹಿತ ರೂ. 3—12—0. ಅನುಪಾನ ಪತ್ರಿಕೆ ಸೀಸೆಯೊಂದಿಗೆ.

ಗೃಹಜೀಯಂತಕ ತೈಲ:—ಮಕ್ಕಳ ಜೇಷ್ಟೆ, ಮಕ್ಕಳು ಒಡವಾಗುತ್ತಾಬರುವದು, ಸೇವಸ ಮೊದಲಾದ ಮಕ್ಕಳ ರೋಗಕ್ಕೆ ಸಿದ್ಧೌಷಧ. 2 ಔನ್ಸಿನ ಸೀಸೆ 1ಕ್ಕೆ 0—10—0 ವಿ. ಪಿ ಸಹಿತ 0—15—0.

ಇಕ್ಲಿಪ್ಸ್ ಬಾಮ್:—ತಲೆನೋವು, ಸೊಂಟದ ನೋವು, ಸಂಧುವಾತ, ಮೇಹವಾತ, ನೆಗಡಿ, ಶೈತ್ಯ, ಚೇಳು, ಜಾಡರಹುಳ ಕಡಿತ, ಕುರು, ರಾಜಕುರು, ಮೊಡವೆ, ಘಾಯುಗಳು, ಹಲ್ಲುನೋವು, ಆನೆಕಾಲು ಇತ್ಯಾದಿ ರೋಗಗಳಿಗೆ ಬಾಹ್ಯ ಲೇಪನವಾಗಿ ಉಪಯೋಗಿಸಬಹುದಾದ ಬಾಮಿನ ಕರಡಿಗೆ 1ಕ್ಕೆ ಅಣೆ 8. ವಿ. ಪಿ. ಬೇರೆ. ಡಜನ್ ಕರಡಿಗೆಗಳಿಗೆ ರೂ. 4—12—0 ವಿ. ಪಿ. ಬೇರೆ.

ವಿಳಾಸ:—
ಇಕ್ಲಿಪ್ಸ್ ಏಜನ್ಸಿ,
ಮಂಗಳೂರು.

ಏಜಂಟರು:—
ಸುಗಂಧವಿಲಾಸ,
ರಥಬೀದಿ, ಮಂಗಳೂರು.

ಅನೇಕ ಯೋಗ್ಯತಾಪತ್ರಿಕೆಗಳನ್ನು ಪಡದಿರುವ (ರಿಜಿಸ್ಟರ್ಡ್)

ರಾಜಸುಂದರಿ ರೋಜ.

ಕೂದಲು ಬೆಳೆಯುವ ಪರಿಮಳ ತೈಲವು. 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1ಕ್ಕೆ ರೂ. 1 ಮಾತ್ರ.

ಸ್ತ್ರೀಗಳು ತಲೆಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು, ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವರು ಬಜಾರಿನಲ್ಲಿ ದೊರಿಯುವ ಕೀಳುತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ, ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ ಸುವಾಸನೆ ಹೇಳುವದಕ್ಕೆ ಬರಿಯುವದಕ್ಕೆ ಆಗುವದಿಲ್ಲ ಮತ್ತು ಇದರ ಪರಿಮಳ ವಾಸನೆ ಸುತ್ತು ಇರುವ ಮನೆಗಳಿಗೆ ಹೋಗುವದು. ಇದಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತೆಗದು ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿ ಇರುವ ಮೆದಡನ್ನು ಸರಿ ಮಾಡುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ ಬೇರೊಂದಿಲ್ಲ, ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. 1ನ್ನು ತರಿಸಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಶೀಲು. ಸ್ತ್ರೀಯರು ಧರಿಸಿಕೊಳ್ಳುವ ಕೊಂಡಗಿಣಿ 6, ವೈಭರಣೆ 1, ಅದ್ದಾ 1, ತಾಂಬೂಲ ಮಾತ್ರೆ 30, ದಂತಧಾವಣಿಗೆ 1, ಸೊಗಸಾದ ರಾಜರಾಣಿ ಕಾರನೇಷನ್ ಪೆಟ್ಟಿಗೆ 1, ರವಿವರ್ಮ ಪೋಸ್ಟುಕಾರ್ಡ್ 6, ಸುವಾಸನೆ ಅತ್ತರು ಬಿಲ್ಲೆ 1, ಗಂಧ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೋಚ

ನಮ್ಮ ವಿಳಾಸ:— ಮ್ಯಾನೇಜರ್ ಧೈರ್ಯ-ಲಕ್ಷ್ಮಿ ಅಂಡು ಕಂಪನಿ,

ನಂ. 3 ಇರುಲಪ್ಪನ್ ಬೀದಿ, ಮದ್ರಾಸ್ಸು.

Printed & Published by V. S. Kamath at the Mangalore Trading Association's Sharada Press, Mangalore

Registered No. 498 M.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ೧ಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ 2—1—0.

ಪುಸ್ತಕ IX | ಮಂಗಳೂರು ತಾ 30ನೇ ಎಪ್ರಿಲ್ ಶುಕ್ರವಾರ 1915. | ಸಂಚಿಕೆ 18

The Universal Assurance Co., Ltd.
Head Office: 191, Bow Bazar Street, CALCUTTA

NOTICE.

It is hereby informed to all the Agents, the subscribers of the Company and the public in general that the existing Provident scheme having been declared unsound by the actuary to the Government of India for its various inconveniences, the company has decided not to accept any proposal under the said scheme, and the same has been abolished since 1st January 1915 All the old members are hereby requested to continue their policies and diplomas which will be governed by the old rules and the bonus be distributed according to the dividing system hence they need not be frightened

For the convenience of the intending subscribers and the public in general a new scheme called "Cheap Insurance" under the scientific principles of the Ordinary Insurance scheme has been introduced. For further particulars please see the Company's seperate advertisement.

(*Sd.*) **J. Sarkar**, *Secretary*

M. Laxman Rao Brothers,
Chief Agents, UDIPI, S C

ದಿ ಯುನಿವರ್ಸಲ್ ಎಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಹೆಡ್ ಆಫೀಸು 191 ಬೊ ಬಜಾರ್ ಸ್ಟ್ರೀಟ್, ಕಲ್ಕತ್ತಾ.

ನೋಟೀಸು.

ಈ ಮೂಲಕ ಕಂಪೆನಿಯ ಮೆಂಬರರಿಗೂ ಸರ್ವ ಜನರಿಗೂ ತಿಳಿಯಪಡಿಸುವದೇನಂದರೆ:—ಈ ಕಂಪೆನಿಯ ಪ್ರೊವಿಡೆಂಟ ಫಂಡಿನ ಏರ್ಪಾಡನ್ನು ಅದರ ಬಗೆ ಬಗೆಯ ಅನಾನುಕೂಲತೆಯ ಕಾರಣದಿಂದ ಸರಕಾರದವರು ಈ ಏರ್ಪಾಡನ್ನು ಘಟ್ಟಿ ಇಲ್ಲದ್ದು ಎಂಬದಾಗಿ ತೀರ್ಮಾನಿಸಿರುವದರಿಂದ ಕಂಪೆನಿಯವರು ಪ್ರೊವಿಡೆಂಟ ಏರ್ಪಾಡು ಕ್ರಮದ ಮೇಲೆ ವಿಮೇದಾರರನ್ನು ಕಂಪೆನಿಗೆ ಸೇರಿಸುವದಿಲ್ಲ, ಮತ್ತು ಈ ಕ್ರಮವು 1915ನೇ ಇಸವಿ ಜನವರಿ ತಾ. 1ರಿಂದ ಕಂಪೆನಿಯಿಂದ ತೆಗೆದು ಹಾಕಲ್ಪಟ್ಟಾಗಿರುವದು ಹಳೇ ಮೆಂಬರರ ತಮ್ಮ ಪೊಲಿಸಿ ಮತ್ತು ಡಿಪ್ಲೊಮಗಳು ಹಳೇ ರೂಲಿನ ಪ್ರಕಾರ ಅಧಿಕರಿಸಲ್ಪಟ್ಟು "ಬೋನಸ್" ಎಂಬ ಲಾಭೋಚಿತವು ಕ್ರಮ ಪ್ರಕಾರ ಹಂಚಲ್ಪಡುವದರಿಂದ ಹಳೇ ಮೆಂಬರರು ಭಯಪಡಲು ಕಾರಣವಿಲ್ಲವೆಂಬದಾಗಿ ಈ ಮೂಲಕ ವಿಜ್ಞಾಪಿಸಲ್ಪಟ್ಟಾಗಿದೆ.

ಕಂಪೆನಿಯ ಮೆಂಬರರಾಗಲು ಯೋಚಿಸಿರುವವರಿಗೂ ಜನಸಾಮಾನ್ಯರ ಬಗ್ಗೆಯೂ "ಚೀಪ್ ಇನ್ಶೂರೆನ್ಸ್" ಎಂಬ ಒಂದು ಹೊಸ ಕ್ರಮವು ಸರ್ವಸಾಧಾರಣವಾಗಿರುವ ಇನ್ಶೂರೆನ್ಸ್ ಕ್ರಮದ ಮೂಲಸೂತ್ರದ ಪ್ರಕಾರ ತೆರೆಯಲ್ಪಟ್ಟಾಗಿರುವದು. ಹೆಚ್ಚಿನ ಮಾಹಿತಿಯನ್ನು ಈ ಪತ್ರಿಕೆಯಲ್ಲಿ ಕಾಣುವ ಕಂಪೆನಿಯ ಪ್ರಕಟಣೆಯನ್ನು ಓದಿಕೊಂಡರೆ ತಿಳಿಯುವದು.

ಜೆ. ಸರ್ಕಾರ. ಸೆಕ್ರಟರಿ.

ಎಮ್. ಲಕ್ಷ್ಮಣರಾವ್ ಬ್ರದರ್ಸ್, ಚೀಫ್ ಏಜಂಟ್ಸ್ ಉಡುಪಿ. ದ. ಕ.

NOTICE.

Applications in the prescribed form for scholarships out of the Ammembal Subba Rao Pai Memorial Fund from deserving poor students of the Gowd Saraswath Brahmin community should reach the Secretary before the end of May 1915.

16th April 1915

M MUKUNDA RAO,
Secretary.

PUBLIC ACCOUNTANT & AUDITOR.

(Certified under section 144 (2) of the Indian Companies Act, VII of 1913 to audit accounts in English, Canarese and Tamil).

M. S. Krishna Rau,
Coelho Street, Mangalore.

ಈಗಲೇ ತಯಾರಾಗಿವೆ!

ಗ್ರಾಮ ಮುನ್ಸಿಫ ಕೋರ್ಟುಗಳಿಗೆ ಸಂಬಂಧಿಸಿದ ಫೋರ್ಮುಗಳು.

100ಕ್ಕೆ ಆಣೆ 6 ಮಾತ್ರ.

ಕುರಿಫಂಡಿನ ರಶೀದಿ		100ರ	ಪುಸ್ತಕ	1ಕ್ಕೆ	0—8—0
,,	,,	50ರ	,,	,,	0—4—0
ಇಂಗ್ಲೀಷು	,,	50ರ	,,	,,	0—8—0
,,	,,	25ರ	,,	,,	0—4—0
ಗೇಣಿ	,,	50ರ	,,	,,	0—6—0
,,	,,	25ರ	,,	,,	0—3—0
ಖಾಲಿ	,,	50ರ	,,	,,	0—4—0
,,	,,	25ರ	,,	,,	0—2—0
ಡೆಲಿವರಿ ಪುಸ್ತಕ 1ರ		.	.	.	0—8—0
ವಕಾಲತ್‌ನಾಮೆ ವಗೈರೆ		.	.	100ಕ್ಕೆ	0—10—0.
ಗೇಣಿಚೀಟು ಫೋರ್ಮು		.	.	,,	0—12—0.
ಪರ್ಮಿಟು ಫೋರ್ಮು		.	.	,,	0—12—0.

ವಿಳಾಸ:— ಶಾರದಾ ಛಾಪಖಾನೆ

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು

ಸೆಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1 ಅಜೀರ್ಣವನ್ನು ನಿವಾರಿಸುವುದಲ್ಲದೆ, ತಲೆ ನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2 ಮಾದಕ ಪದಾರ್ಥಗಳಿಂದ ಕೆಡುವ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತು ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತ ಬಂದಲ್ಲಿ ತಿಂದನ್ನವು ಜೀರ್ಣವಾಗುವದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು.

6 ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7 ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು

ಈ ಕಾರಣ ಇಂತಹ ಉಪಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ

45 ಮಾತ್ರೆಗಳ ಪೊಟ್ಟ 1ಕ್ಕೆ 0—2—0 20 ಮಾತ್ರೆಗಳ ಪೊಟ್ಟ 1ಕ್ಕೆ 0—7—0 80 ಮಾತ್ರೆಗಳ ಟಿನ್ 1ಕ್ಕೆ 0—4—0 550 ಮಾತ್ರೆಗಳ ಮರದಪೆಟ್ಟಿಗೆ1ಕ್ಕೆ 1—0—0
95 „ „ „ 0—4—0 200 „ ಟಿನ್ „ 0—3—0 100 „ ಶೀಸೆ „ 0—4—6 1200 „ „ „ 2—0—0

1 ರೂಪಾಯಿಗೆ ಕಡಿಮೆಯಾಗಿ ವಿ ಪಿ ಮೂಲಕ ಕಳುಹಿಸಲ್ಪಡುವುದಿಲ್ಲವು ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು

☞ ಬರಹುಂಡ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ

ಸೋಲ್ ಏಜಂಟ್ಸ್:—ಸೆಶಿಂತಾನ್ ಡಿಪೋ,

ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ. 2.

ವೃಥಾ ವೆಚ್ಚಮಾಡುವದೇಕೆ?

ಐಶ್ವರ್ಯವಂತರೂ ಬಡವರೂ ಕೊಂಡುಕೊಳ್ಳಲು ಸಾಧ್ಯವಾಗಿರುವ

ಯುಕಲಿಪ್ಟಸ್ ತೈಲವು

ತಲೆನೋವು, ಕಣ್ಣು ಉರಿ, ಗಾಯ ಸೆಕೆ ಇವುಗಳ ವಾಯುರೋಗ, ಕೆಮ್ಮು, ಉಬ್ಬಸ, ಶೀತಬೇಧಿ, ಉಷ್ಣಬೇಧಿ, ಹೊಟ್ಟೆಯಲ್ಲಿ ಜ್ವರಗಡ್ಡೆ, ಸ್ತ್ರೀಯರ ವ್ಯಾದಿಸಂಬಂಧ ಬೇನೆ ಮೊದಲಾದ ಮೇಹ ರೋಗಗಳು, ಕಿವಿಯಲ್ಲಿ ಕೀವು ಬರುವದು, ಹೆಂಗಸರ ಹೊಟ್ಟೆನೋವು ಮೊದಲಾದ ರೋಗಗಳನ್ನು ಗುಣಪಡಿಸುವದಿಲ್ಲವೆಂದು ಖಾತ್ರಿಪಡಿಸುವವರಿದ್ದಾರೋ? ಔನ್ಸು ಸೀಸೆ 1ಕ್ಕೆ 0—5—0 ವಿ ಪಿ ಬೇರೆ. ಡಜನ್ ಸೀಸೆಗಳಿಗೆ ವಿ ಪಿ ಸಹಿತ ರೂ 3—12—0 ಅನುಪಾನ ಪತ್ರಿಕೆ ಸೀಸೆಯೊಂದಿಗೆ.

ಗೃಹವೈದ್ಯಂತಕ ತೈಲ: ಮಕ್ಕಳ ಪೀಡೆ, ಮಕ್ಕಳು ಬಡವಾಗುತ್ತಾಬರುವದು, ನೀವಸ ಮೊದಲಾದ ಮಕ್ಕಳ ರೋಗಕ್ಕೆ ಸಿದ್ಧೌಷಧ 2 ಔನ್ಸಿನ ಸೀಸೆ 1ಕ್ಕೆ 0—10—0 ವಿ. ಪಿ ಸಹಿತ 0—15—0

ಇಕ್ಲಿಪ್ಸ್ ಬಾಮ್:—ತಲೆನೋವು, ಸೊಂಟದ ನೋವು, ಸಂಧುವಾತ, ಮೇಹವಾತ, ನೆಗಡಿ, ಶೈತ್ಯ, ಹೇಳು, ಜಂತುರಹುಳ ಕಡಿತ, ಕುರು, ರಾಜಕುರು, ಮೊಡವೆ, ಗಾಯಗಳು, ಹಲ್ಲುನೋವು, ಆನೆಕಾಲು ಇತ್ಯಾದಿ ರೋಗಗಳಿಗೆ ಬಾಹ್ಯ ಲೇಪನವಾಗಿ ಉಪಯೋಗಿಸಬಹುದಾದ ಬಾಮಿನ ಕರಡಿಗೆ 1ಕ್ಕೆ ಆಣೆ 8 ವಿ. ಪಿ. ಬೇರೆ. ಡಜನ್ ಕರಡಿಗೆಗಳಿಗೆ ರೂ. 4—12—0 ವಿ ಪಿ. ಬೇರೆ.

ವಿಳಾಸ:— ಏಜಂಟರು:—

ಇಕ್ಲಿಪ್ಸ್ ಏಜನ್ಸಿ, ಮಂಗಳೂರು.

ಸುಗಂಧವಿಲಾಸ, ರಥಬೀದಿ, ಮಂಗಳೂರು.

ಅನೇಕ ಯೋಗ್ಯತಾಪತ್ರಿಕೆಗಳನ್ನು ಪಡದಿರುವ (ರಿಜಿಸ್ಟರ್ಡ್)

ರಾಜಸುಂದರಿ ರೋಜ.

ಕೂದಲು ಬೆಳೆಯುವ ಪರಿಮಳ ತೈಲವು. 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1ಕ್ಕೆ ರೂ. 1 ಮಾತ್ರ.

ಸ್ತ್ರೀಗಳು ತಲೆಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು, ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವರು ಬಜಾರಿನಲ್ಲಿ ದೊರಿಯುವ ಕೀಳುತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ, ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ ಸುವಾಸನೆ ಹೇಳುವದಕ್ಕೆ ಬರಿಯುವದಕ್ಕೆ ಆಗುವದಿಲ್ಲ ಮತ್ತು ಇದರ ಪರಿಮಳ ವಾಸನೆ ಸುತ್ತು ಇರುವ ಮನೆಗಳಿಗೆ ಹೋಗುವದು. ಇದಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತೆಗದು ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿ ಇರುವ ಮೈದಡನ್ನು ಸರಿ ಮಾಡುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ ಬೇರೊಂದಿಲ್ಲ, ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ 1ನ್ನು ತರಿಸಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಶೀಲು. ಸ್ತ್ರೀಯರು ಧರಿಸಿಕೊಳ್ಳುವ ಕೊಂಡಗಿಣಿ 6, ವೈಭರಣಿ 1, ಅದ್ದಾ 1, ತಾಂಬೂಲ ಮಾತ್ರೆ 30, ದಂತದ ಹಣಿಗೆ 1, ಸೊಗಸಾದ ರಾಜರಾಣಿ ಕಾರನೇಷನ್ ಪೆಟ್ಟಿಗೆ 1, ರವಿವರ್ಮ ಪೋಸ್ಟಕಾರ್ಡ್ 6, ಸುವಾಸನೆ ಅತ್ತರು ಬಿಲ್ಲೆ 1, ಗಂಧ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೂಚ್ 1.

ನಮ್ಮ ವಿಳಾಸ:— ಮ್ಯಾನೇಜರ್ ಡೈಯರ್ ಲಕ್ಷ್ಮಿ ಅಂಡು ಕಂಪೆನಿ,

ನಂ. 3 ಇರುಲಪ್ಪನ್ ಬೀದಿ, ಮದ್ರಾಸು.

Printed & Published by V. S Kamath at the Mangalore Trading Association's Sharada Press. Mangalore

Registered No. 408 M.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ೧ಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0.

ಪುಸ್ತಕ IX | ಮಂಗಳೂರು ತಾ 30ನೇ ಎಪ್ರಿಲ್ ಶುಕ್ರವಾರ 1915. | ಸಂಚಿಕೆ 18

The Universal Assurance Co., Ltd.
Head Office 191, Bow Bazar Street, CALCUTTA

NOTICE.

It is hereby informed to all the Agents, the subscribers of the Company and the public in general that the existing Provident scheme having been declared unsound by the actuary to the Government of India for its various inconveniences, the company has decided not to accept any proposal under the said scheme, and the same has been abolished since 1st January 1915. All the old members are hereby requested to continue their policies and diplomas which will be governed by the old rules and the bonus be distributed according to the dividing system hence they need not be frightened.

For the convenience of the intending subscribers and the public in general a new scheme called "Cheap Insurance" under the scientific principles of the Ordinary Insurance scheme has been introduced. For further particulars please see the Company's seperate advertisement.

(*Sd*) **J Sarkar**, *Secretary*

M. Laxman Rao Brothers,
Chief Agents, Udipi, S C

ದಿ ಯುನಿವರ್ಸಲ್ ಎಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಹೆಡ್ ಆಫೀಸು 191 ಬೊ ಬಜಾರ್ ಸ್ಟ್ರೀಟ್, ಕಲ್ಕತ್ತಾ.

ನೋಟೀಸು.

ಈ ಮೂಲಕ ಕಂಪೆನಿಯ ಮೆಂಬರರಿಗೂ ಸರ್ವ ಜನರಿಗೂ ತಿಳಿಯಪಡಿಸುವದೇನಂದರೆ:—ಈ ಕಂಪೆನಿಯ ಪ್ರೊವಿಡೆಂಟ ಫಂಡಿನ ಏರ್ಪಾಡನ್ನು ಅದರ ಬಗೆ ಬಗೆಯ ಅನಾನುಕೂಲತೆಯ ಕಾರಣದಿಂದ ಸರಕಾರದವರು ಈ ಏರ್ಪಾಡನ್ನು ಘಟ್ಟಿ ಇಲ್ಲದ್ದು ಎಂಬದಾಗಿ ತೀರ್ಮಾನಿಸಿರುವದರಿಂದ ಕಂಪೆನಿಯವರು ಪ್ರೊವಿಡೆಂಟ್ ಏರ್ಪಾಡು ಕ್ರಮದ ಮೇಲೆ ಮೆಂಬರರನ್ನು ಕಂಪೆನಿಗೆ ಸೇರಿಸುವದಿಲ್ಲ, ಮತ್ತು ಈ ಕ್ರಮವು 1915ನೇ ಇಸವಿ ಜನವರಿ ತಾ. 1ರಿಂದ ಕಂಪೆನಿಯಿಂದ ತೆಗೆದು ಹಾಕಲ್ಪಟ್ಟಾಗಿರುವದು. ಹಳೇ ಮೆಂಬರರ ತಮ್ಮ ಪೊಲಿಸಿ ಮತ್ತು ಡಿಪ್ಲೊಮಗಳು ಹಳೇ ರೂಲಿನ ಪ್ರಕಾರ ಅಧಿಕರಿಸಲ್ಪಟ್ಟು "ಬೊನಸ್" ಎಂಬ ಲಾಭೋಚಿತವು ಕ್ರಮ ಪ್ರಕಾರ ಹಂಚಲ್ಪಡುವದರಿಂದ ಹಳೇ ಮೆಂಬರರು ಭಯಪಡಲು ಕಾರಣವಿಲ್ಲವೆಂಬದಾಗಿ ಈ ಮೂಲಕ ವಿಜ್ಞಾಪಿಸಲ್ಪಟ್ಟಾಗಿದೆ.

ಕಂಪೆನಿಯ ಮೆಂಬರರಾಗಲು ಯೋಚಿಸಿರುವವರಿಗೂ ಜನಸಾಮಾನ್ಯರ ಬಗ್ಯೆಯೂ "ಚೀಪ್ ಇನ್ಶೂರೆನ್ಸ್" ಎಂಬ ಒಂದು ಹೊಸ ಕ್ರಮವು ಸರ್ವಸಾಧಾರಣವಾಗಿರುವ ಇನ್ಶೂರೆನ್ಸ್ ಕ್ರಮದ ಮೂಲಸೂತ್ರದ ಪ್ರಕಾರ ತೆರೆಯಲ್ಪಟ್ಟಾಗಿರುವದು. ಹೆಚ್ಚಿನ ಮಾಹಿತಿಯನ್ನು ಈ ಪತ್ರಿಕೆಯಲ್ಲಿ ಕಾಣುವ ಕಂಪೆನಿಯ ಪ್ರಕಟಣೆಯನ್ನು ಓದಿಕೊಂಡರೆ ತಿಳಿಯುವದು.

(*Sd.*) ಜೆ. ಸರ್ಕಾರ, ಸೆ.ಟ.

ಎಮ್. ಲಕ್ಷ್ಮಣರಾವ್ ಬ್ರದರ್ಸ್, ಚೀಫ್ ಏಜಂಟ್ಸ್ ಉಡುಪಿ. ದ.ಕ.

NOTICE.

Applications in the prescribed form for scholarships out of the Ammembal Subba Rao Pai Memorial Fund from deserving poor students of the Gowd Saraswath Brahmin community should reach the Secretary before the end of May 1915.

16th April 1915

M. MUKUNDA RAO,
Secretary.

PUBLIC ACCOUNTANT & AUDITOR.

(Certified under section 144 (2) of the Indian Companies Act, VII of 1913 to audit accounts in English, Canarese and Tamil).

M. S. Krishna Rau,
Coelho Street, Mangalore

ಈಗಲೇ ತಯಾರಾಗಿವೆ!

ಗ್ರಾಮ ಮುನ್ಸಿಫ ಕೋರ್ಟುಗಳಿಗೆ ಸಂಬಂಧಿಸಿದ ಫೋರ್ಮುಗಳು.

100ಕ್ಕೆ ಆಣೆ 6 ಮಾತ್ರ.

ಕುರಿಫಂಡಿನ	ರಶೀದಿ	100ರ	ಪುಸ್ತಕ	1ಕ್ಕೆ	0—8—0
,,	,,	50ರ	,,	,,	0—4—0
ಇಂಗ್ಲೀಷು	,,	50ರ	,,	,,	0—8—0
,,	,,	25ರ	,,	,,	0—4—0
ಗೇಣಿ	,,	50ರ	,,	,,	0—6—0
,,	,,	25ರ	,,	,,	0—3—0
ಖಾಲಿ	,,	50ರ	,,	,,	0—4—0
,,	,,	25ರ	,,	,,	0—2—0
ಡೆಲಿವರಿ ಪುಸ್ತಕ 1ರ	.	.	.		0—8—0
ವಕಾಲತ್‌ನಾಮೆ ವಗೈರೆ	.	.	100ಕ್ಕೆ		0-10—0.
ಗೇಣಿಚೀಟು ಫೋರ್ಮು	.	.	,,		0-12—0.
ಪರ್ಮೀಟು ಫೋರ್ಮು	.	.	,,		0-12—0.

ವಿಳಾಸ:— ಶಾರದಾ ಛಾಪಖಾನೆ.

NOTICE.

Stany Brothers,

Candle Garden, Mangalore,

ಬಲ್ಮಠ ಕದ್ರಿ ರಸ್ತೆ ಬಳಿ ನಮ್ಮ "ಕೆಂಡಲ್ ಗಾರ್ಡನ್" ಎಂಬ ಸ್ಥಳದಲ್ಲಿ 1908ನೇ ಇಸವಿ ಆಗಸ್ಟ್‌ನಿಂದ ಈ ವರೆಗೆ ನಡೆದು ಬಂದಿರುವ ಯಂತ್ರದಿಂದ ಹುರಿದು ತಯಾರಿಸುವ ನಮ್ಮ ಕಾಫಿ ಪುಡಿ ವ್ಯಾಪಾರವು ನಮ್ಮ ವಾಚಕರಿಗೆ ಗೋಚರವಾಗದ್ದಕ್ಕೆ ಕಾರಣ ಈಗ ನಾವು ಪ್ರಕಟಿಸಿರುತ್ತೇವೆ.

ನಮ್ಮಲ್ಲಿ ನಾನಾ ಬಗೆಯ ಶಾಲಾ ಹುಡುಗರಿಗೆ ಅವಶ್ಯವುಳ್ಳ ಕೋಪಿ ಬುಕ್ ಇತ್ಯಾದಿ ಶಾಲಾ ಪುಸ್ತಕಗಳೂ, ಸೊಗಸಾದ ಅನೇಕ ವಿಧದ ತಿರುಚಿನಾಪಳ್ಳಿ ಚುರುಟುಗಳೂ, ನೀಲಗಿರಿ ಚಾ, ಇತರ ಸಾಮಾನುಗಳೂ ಕೂಡ ವ್ಯಾಪಾರಸ್ಥರಿಗೆ ಸುಲಭವಾದ ಖರೀದಿಯಲ್ಲಿ ದೊರಿಯುತ್ತದೆ.

ಕಾಫಿ ಪುಡಿಯು ರಾತ್ತಲ ಒಂದಕ್ಕೆ 0—10—0ಯಿಂದ 0—5—0 ದರದ ವರೇಗೂ ದೊರಿಯುತ್ತದೆ.

ಇತರ ಅನುಭವಗಳಿಗೆ ನಮ್ಮ ಮೆನೇಜರರ ಮೇಲಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು

Piedade Pinto,

Manager.

ಸಚಿತ್ರ ಆಂಗ್ಲಭಾಷಾ ಪ್ರಕಾಶಿಕಾ.

ಇದು ಹೊಸ ತರಹ, ಹೊಸ ಕ್ರಮ, ಅಂದವಾದ ಅಚ್ಚು, ವಿದ್ವಾಂಸರಿಂದ ತಯಾರಾದದ್ದು, ಇದನ್ನು ಗುರುವಿನಂತೆ ಭಾವಿಸಿ ಬೇಕಾದರೆ ಕಲಿಯಬಹುದು. 3 ಪುಸ್ತಕಗಳೂ ಅಡಗಿರುವ ದೊಡ್ಡ ಪುಸ್ತಕ 1—12—0 1ನೇ ಪುಸ್ತಕದ ಭಾಗಗಳ ಕ್ರಯ 0—14—0.

ಅಪೂರ್ವ ಪುಸ್ತಕಗಳು.

ವೈದ್ಯಸಾರ ಸಂಗ್ರಹ ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನ ಪಂಡಿತರಿಂದ ಮರ್ಯಾದಿಸಲ್ಪಟ್ಟಿರುತ್ತೆ ರೂ. 3.

ರೆವಿನ್ಯು ಸರ್ವೆ ಮೋಜಣಿ ಕ್ಲಾಸಿಫಿಕೇಶನ್ ಕಲಿಯತಕ್ಕ ಬುಕ್ಕು. ಇದು ಮೋಜಣಿದಾರರಿಗೂ, ಪಟೇಲರಿಗೂ, ಶ್ಯಾನುಭೋಗರಿಗೂ ಅಗತ್ಯವಾಗಿ ಬೇಕಾದ ಪುಸ್ತಕ ಬೆಲೆ 1—4—0.

ರಾಬಿನ್‌ಸನ್ ಕ್ರೂಸೋ ಎಂಬ ಇಂಗ್ಲಿಷ್ ಕಥೆಯ ತರ್ಜುಮೆ ಚಿತ್ರಸಹಿತ ಕನ್ನಡ ಎಡಿಷನ್ ಬೆಲೆ ರೂಪಾಯಿ 1—0—0.

ನಮ್ಮಲ್ಲಿ ವಿಶೇಷವಾಗಿ ಸರಕಾರಿ ಸ್ಕೂಲು ಪುಸ್ತಕ, ಸಂಸ್ಕೃತ, ಕನ್ನಡ, ತೆಲುಗು, ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳೂ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಕಥೆ ಪುಸ್ತಕಗಳೂ, ಹುಡುಗರಿಗೆ ಉಪಯುಕ್ತವಾದ ಸ್ಟೇಷನರಿ ಸಾಮಾನುಗಳೂ ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ.

	ರೂ ಅ.		ರೂ. ಅ		ರೂ ಅ.
ದಯಾನಂದ ಸರಸ್ವತಿಯವರ ಚರಿತ್ರೆ	0—4	ಸೀತಾ ಚರಿತ್ರೆ	1—[illegible]	ವಾಷಿಂಗ್ಟನ್ ಮಹಾರಾಯ	1—[illegible]
ಜಮಾ ಖರ್ಚಿನ ಪದ್ಧತಿ	0—12	ಶಾಕುಂತಲ ನಾಟಕ	0—8	ಕುಣಿಗಲು ರಾಮಶಾಸ್ತ್ರಿಗಳವರ ಚರಿತ್ರೆ	1—0
ಇಂಡ್ಯನ್ ಪೆನಲ್ ಕೋಡ	2—0	ಸ್ತ್ರೀ ಧರ್ಮನೀತಿ	0—8	ಸುಗುಣ ಮದನಕುಮಾರರ ಚರಿತ್ರೆ I	0—8
ಅರೇಬಿಯನ್ ನೈಟ್ಸ್	2—4	ಶೋಭನೆ	0—8	,, II	0—7
ಸುರಸ	0—4	ಚಂದ್ರಕಳಾ	0—4	ಶಿವಗೀತೆ	0—6
ಶ್ಯಾಮು	0—1	ಕಲಾನಾಥ	0—6	ಪಾಕಶಾಸ್ತ್ರ	0—8
ಇಂದ್ರ ವಜ್ರ	0—4	ತ್ರೈಲೋಕ್ಯಬೋಧಿನಿ	1—4	ಸನಾತನಧರ್ಮ ದೀಪಿಕೆ	1—0
ಚಕ್ಕೋಜ	0—3	ವಿಷವೃಕ್ಷ	1—4	ಲಬಾರಾಮಾಯಣ	0—4
ಕನಕಾಲುಕ	0—6	ಮುದ್ರಾಮಂಜೂಷ	1—8	ಕಥಾ ಮಂಜರಿ	0—6
ಶಿವಾನಂದಲಹರಿ	0—6	ಶುಕಸಪ್ತತಿ	2—0		
ಗೆದ್ದತ್ತ ಸೋತಳಯ	0—4				

ಪ್ರಸಿದ್ಧ ಪತ್ತೇದಾರಿ ಕಥೆಗಳು, ದುಷ್ಟ ಚತುಷ್ಟಯ, ನರಬಲಿ, ನೀಲಾಂಬರಿ, ವಿಷಮಯಶೂರ್ಪಣಾಖಿನಿಯು, ಅತ್ಯಾಚಾರ, ಘೋರ ಚಕ್ರವರ್ತಿ, ನರ ರಾಕ್ಷಸ, ಪ್ರತಿಯೊಂದು ಪ್ರತಿಯೂ 2 ಆಣೆ

ವಿಳಾಸ:— **ವಿದ್ಯಾಸಾಗರ ಬುಕ್ ಡಿಪೋ,**

ಚಿಕ್ಕಪೇಟೆ, ಬೆಂಗಳೂರು ಸಿ

ಯುನಿವರ್ಸೆಲ್ ಎಸ್ಯುರೆನ್ಸ್ ಕೊ, ಲಿಮಿಟೆಡ್

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ.

ಸರಕಾರದ ಭದ್ರತೆಯ ಮೇಲ್ವಿಚಾರದಲ್ಲಿ ನಡಿಯುತ್ತಿರುವುದು.

ಬಂಡವಾಳ ರೂ 10,00,000.

ಈ ತನಕ ಕೊಡೋಣಾದ ವಿಮೆ ಹಕ್ಕುಗಳ ಮೊಬಲಗು ಸುಮಾರು 8,00,000

ಫಂಡು—ರೂ. 3,00,000ಕ್ಕೆ ಮಿಕ್ಕಿದೆ.

ಸರಕಾರದವರ ಭದ್ರತೆಯಲ್ಲಿ ರೂ. 50,000ವಿರುವುದು.

ಚೀಪ್ ಇನ್ಸೂರೆನ್ಸ್ ಸ್ಕೀಮ್ ಎಂಬ ವೈದ್ಯಪರೀಕ್ಷೆ ಇಲ್ಲದೆ ವಿಮೆ ಉತ್ತರಾಯಿಸಿಕೊಳ್ಳಬಹುದಾದ ಸರ್ವರಿಗೂ ಸಾಧ್ಯವಾದ ಸುಲಭ ಕ್ರಮ.

ಈ ಪ್ರಾಂತ್ಯಗಳಲ್ಲಿ ಯಾವ ವಿಮೆ ಕಂಪೆನಿಗಳಲ್ಲಾದರೂ ಈತನಕ ಇಂಥಾ ಅಗ್ಗ ದರಗಳ ವಿಮೆ ಉತ್ತರಾಯಿಸುವ ಏರ್ಪಾಡೇ ಇರುವದಿಲ್ಲ. ಭಾರತೀಯರಲ್ಲಿ ವಿಶೇಷವಾಗಿರುವ ಬಡವರಿಗೋಸ್ಕರವೇ ಈ ಕ್ರಮವು ಏರ್ಪಡಿಸಲ್ಪಟ್ಟಿರುತ್ತದೆ. ಪ್ರೊವಿಡೆಂಟ್ ಫಂಡುಗಳ ಕ್ರಮದ ಪ್ರಕಾರ ಮುಂದಕ್ಕೆ ಸಂಭವಿಸಬಹುದಾದ ಅನನುಕೂಲತೆಗಳು ಇದರಲ್ಲಿರವು. ವಿಮೆ ಉತ್ತರಾಯಿಸಿಕೊಳ್ಳುವ ಈ ನವೀನ ಅಗ್ಗ ದರಗಳ ಏರ್ಪಾಡು ಬಹಳ ಉಪಯುಕ್ತವಾದದ್ದು ಎಂತ ವಿಮೆ ಸಂಘಗಳ ವಿಶೇಷ ಮಾಹಿತಿದಾರರ ಅಭಿಪ್ರಾಯವಿರುವುದು. ನಿಶ್ಚಿತವಾದ ವಿಮೆ ಮೊಬಲಗುಗಳ ರೂಪಾಯಿ ಮತ್ತು ಅರ್ಧ ರೂಪಾಯಿಗಳ ಪೋಲಿಸಿಗಳು ಈ ಕ್ರಮದ ಮೇರೆಗೆ ಕೊಡೋಣಾಗುವವು

ಸಾಮಾನ್ಯ ವಿಮೆ ಇಲಾಖೆ.

ಈ ಕಂಪೆನಿಯ ಈ ಇಲಾಖೆಯಲ್ಲಿ ವಿಮೆ ಉತ್ತರಾಯಿಸಿಕೊಳ್ಳುವವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಲಿರುವುದು. ಸಾಧ್ಯವಿರುವ ಅತ್ಯಂತ ಕಡಮೆಯ ದರಗಳು ಸಂಪೂರ್ಣವಾದ ಭದ್ರತೆಯು ಈ ಇಲಾಖೆಯ ವಿಶೇಷ ಪ್ರಯೋಜನಗಳಾಗಿರುವುದು. ಕಂಪೆನಿಯ ಲೆಕ್ಕದ ಸ್ಥಿತಿಗತಿಯನ್ನು ತೋರಿಸುವ ಮೊಖಾಬಿಲೆ ಪಟ್ಟಿಗಳನ್ನು ಈ ಕಂಪೆನಿಯ ವಿಷಯ ಪತ್ರಗಳ ಅಭಿಪ್ರಾಯವೇನೆಂಬುದನ್ನೂ ತರಿಸಿ ನೋಡಿರಿ.

ಒಳ್ಳೇ ಚಟುವಟಿಕೆಯ ಜಾಣರಾದ ಏಜಂಟರುಗಳು ಬೇಕಾಗಿರುವರು. ಶರ್ತಗಳ ಬಗ್ಗೆ ಕೆಳಗಣ ವಿಳಾಸಕ್ಕೆ ಬರಕೊಳ್ಳಬಹುದು.

ವಿಳಾಸ:— **ಲಕ್ಷ್ಮಣ ರಾವ್ ಬ್ರದರ್ಸ್,**

ಚೀಫ್ ಏಜಂಟ್ಸ್, ಕೆನರಾ, ಮೈಸೂರು, ಕೊಡಗು; ಪೋಸ್ಟು, ಉಡುಪಿ ಇವರಿಗೆ ಬರೆದುಕೊಳ್ಳಿರಿ.

ಜಯವಿಜಯ

ಅಥವಾ

ತೂಗಾಡುವ ಅಸ್ಥಿಪಂಜರ.

ಗುಜರಾಥಿ ಭಾಷೆಯಿಂದ ಕನ್ನಡದಲ್ಲಿ ಹೊಸತಾಗಿ ಭಾಷಾಂತರವಾದದ್ದು,

ಈ ಗ್ರಂಥದ ಕುರಿತು "ಸತ್ಯದೀಪಿಕೆ" ಎಂಬ ವಾರಪತ್ರಿಕೆಯು ಪಡುವ ಅಭಿಪ್ರಾಯ.—"ಇದು ಬಹಳ ರಸಿಕವಾದ ಆಶ್ಚರ್ಯವುಳ್ಳ ಒಂದು ಕಥೆಯಾಗಿದೆ. ಅದನ್ನು ಓದತೊಡಗಿದವರಿಗೆ ಅದನ್ನು ತೀರಿಸುವ ತನಕ ವಿಶ್ರಾಂತಿ ದೊರಕದು. ದೇಶಸ್ಥರು ಸಹಾ ವಿಲಾಯತಿ ಕಾದಂಬರಿಗಳಂತೆ ಚೆಲೋ ಕಥೆಗಳನ್ನು ಬರೆಯಬಲ್ಲರೆಂದು ಇದರಿಂದ ಪ್ರಕಟವಾಗುತ್ತದೆ. ಇದರ ಸಾರಾಂಶವೂ ನೀತಿಯೂ ಕೂಡಾ ಘನವಾದದ್ದು. ನೀತಿವಂತರು ಅನೇಕಸಾರಿ ಶ್ರಮೆಪಡುವಾಗ ದುಷ್ಟರು ಕೆಲವು ಸಮಯ ಮೆರೆಯುವರೆಂದೂ ಆದರೆ ದುಷ್ಟರ ದುಷ್ಟತನವು ಬೈಲಾಗಿ ಅವರು ತಮ್ಮ ದುಷ್ಟತನಕ್ಕೆ ತಕ್ಕ ಪ್ರತಿಫಲವನ್ನು ಹೊಂದುವಾಗ ನೀತಿಯು ಕಡೆಗೆ ಜಯಿಸಿ ಬಾಳುವದೆಂದೂ ಈ ಕಥೆಯ ಕವಿಯು ತೋರಿಸುವನು. ಇದಲ್ಲದೆ ಈ ಕಥೆಯ ಶೂರರಲ್ಲಿ ಒಪ್ಪಳಾದ ಜಡೆಯಲ್ಲಿ ಪತಿವ್ರತಾ ಧರ್ಮವೂ ಇತರರಲ್ಲಿ ಬೇರೆ ಸದ್ಗುಣಗಳೂ ಹೊಳೆಯುವವು. ಕರ್ನಾಟಕ ಬಲ್ಲವರೆಲ್ಲರೂ ಈ ಕಥೆಯನ್ನು ಓದಿಕೊಂಡು ಈ ಕಥೆಯ ನೀತಿಯಿಂದ ಲಾಭವನ್ನು ಪಡೆದಾರೆಂತ ನಂಬುತ್ತೇವೆ" ಇತ್ಯಾದಿ. ಪುಸ್ತಕದ ಕ್ರಯ 0—12—0. ವಿ. ಪಿ. ಬೇರೆ.

ವಿಳಾಸ:—

V. C. Amin,
C/o E. A. Goll Esq.
Sirdar Palace, Apollo Street,
BOMBAY.

ಮಾರಾಟಕ್ಕೆ ಸಿದ್ಧವಿರುವುದು! ಮಾರಾಟಕ್ಕೆ ಸಿದ್ಧವಿರುವುದು!

ವೇಂಕಟಗಿರಿ ಮಹಾತ್ಮ್ಯೆ.

ಪದ್ಮಾವತೀ ಕಲ್ಯಾಣದಿಂದ ಪೂರ್ಣವಾಗಿರುವುದು.

(ಸಂಸ್ಕೃತ ಭವಿಷ್ಯತ್ಪುರಾಣದಿಂದ)

ಮಂಗಳೂರಲ್ಲಿ ಸ್ವರ್ಗಸ್ಥರಾಗಿ ಹೋದ ಮುಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿರುವುದು

959 ಪದ್ಯಗಳಿರುವ 15 ಅಧ್ಯಾಯಗಳಿಂದ ಕೂಡಿರುವುದು. ಕಾವ್ಯರಚನೆಯು ಬಹು ಮೃದುರವೂ ಸುಲಭವೂ ಆಗಿರುವುದರಿಂದ ಸರ್ವರಿಗೂ ಅನುನಿತ್ಯದ ಪಠಣಪುಸ್ತಕವಾಗಿರಲು ಉಚಿತವಾಗಿರುವುದು. ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ವೃತ್ತಾಂತಗಳು ವಾಚಕರ ಮನಃಖಚಿತವಾಗುವಂತೆ ಈ ಗ್ರಂಥವು ಯಥೋಚಿತ ಚಿತ್ರಪಟಗಳಿಂದ ಕೂಡಿರುವುದು ಕ್ರಯ ಪ್ರತಿಯೊಂದಕ್ಕೆ ರೂ 1—8—0 ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್,
ಮಂಗಳೂರು

ಡಾಕ್ಟರ್ ನವರತ್ನರ ಪಕ್ಕಾಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1 ಟಪ್ಪಾಲು ಚಾರ್ಜು 0— 4—0.

Dr. Navaratna & Sons,
Kalbadevi Road BOMBAY

ಏಜಂಟರು:—**ದಿ. ಊಲನ್ ಮಾರ್ಟ್,**
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು

ಅರ್ಧ ಬೆಲೆ!

ಒಂದು ತಿಂಗಳ ತನಕ ಮಾತ್ರ.



ನಮ್ಮ ಸೆಟಿಸ್‌ಫೇಕ್ಷನ್ ಫ್ಲೂಟ್ ಹಾರ್ಮೋನಿಯಮ್ ಎಂಬ ರಾಗದ ಪೆಟ್ಟಿಗೆಯಿಂದ ಸರ್ವ ಗಾಯನಗಳನ್ನು ಹಾಡಲಿಕ್ಕಾಗುತ್ತದಲ್ಲದೆ ಎಲ್ಲಾ ವಾಯುಗುಣಗಳಲ್ಲಿಯೂ ಬಾಳುವಂಥಾದ್ದಾಗಿದೆ ಇದರ ಪೆಟ್ಟಿಗೆಯು ಸಾಗುವಾನಿ ಮರದಿಂದ ಮಾಡಿದ್ದಾಗಿದೆ. ಗಾಳಿ ಬರುವ ಪೆಟ್ಟಿಗೆಯು ಎಂಥಾ ಶಿಖೆಯನ್ನೂ ತಡೆಯುವದು. ಖಾಯಸಾಗದಿದ್ದರೆ 7 ದಿವಸಗಳೊಳಗೆ ಹಿಂದಕ್ಕೆ ಕಳುಹಿಸಿದರೆ ಹಣ ಹಿಂದಕ್ಕೆ ಕೊಡೋಣಾಗುವದು.

ಕ್ರಯ ಸಿಂಗಲ್ ರೀಡ್ ರೂ. 38, 44, 50; ಈಗ ರೂ. 19, 22, 25ಕ್ಕೆ ಕೊಡಲ್ಪಡುವದು. ಡಬ್ಬಲ್ ರೀಡ್ ರೂ. 60, 70, 80; ಈಗ ರೂ. 30, 35, 40ಕ್ಕೆ ಕೊಡೋಣಾಗುವದು. ಆರ್ಡರಿನೊಂದಿಗೆ ರೂ 5 ಅಡ್ವಾನ್ಸ್ ಕಳುಹಿಸಬೇಕಾಗಿದೆ.

ವಿಳಾಸ:— ನೇಶನಲ್ ಹಾರ್ಮೋನಿಯಮ್ ಕೊ,
ಸಿಮ್ಲಾ ಪೋಸ್ಟು (ಬಿ) ಕಲ್ಕತ್ತಾ.

National Harmonium Co,
Simla P. O. (B) CALCUTTA.

ಕರ್ನಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ ಮುಂಬಯಿ ಕರ್ನಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೊಯಲ್ ಸ್ಸಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ. ೨—೪—೦ ಆಗಿರುತ್ತದೆ; ಚಂದಾದಾರರಾಗಿ ಸೇರಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಮ್ಯಾನೇಜರ್, ಕರ್ನಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ, ಧಾರವಾಡ

ಬಿಕರಿಗೆ ಸಿದ್ಧವಾಗಿದೆ! ಬಿಡಬೇಡಿರಿ!! ಮುಂದೆ ಸಿಗಲಾರದು!!

ಪ್ರಪಂಚ ಯುದ್ಧ.

ಘನಘೋರ ಸಂಗ್ರಾಮ ಸೊಗಸಾದ ಚಿತ್ರರೂಪ.

ಯುದ್ಧಾಗ್ರಣಿಗಳ ಭಾವಚಿತ್ರ.

ಯೂರೋಪ್ ಖಂಡವೆಲ್ಲಾ ಅಲ್ಲೋಲಕಲ್ಲೋಲ ಮಾಡಿ ರಕ್ತಪ್ರವಾಹವನ್ನೇ ಹೊರಳಿಸುತ್ತ ಜಗತ್‌ಪ್ರಳಯ ಸ್ವರೂಪವಾಗಿ ಸಾಕ್ಷಾತ್ ಕಾಲಭೈರವನಂತೆ ಕೇಳಿರುವ ಭೀಕರ ಯುದ್ಧದ ನಾಯಕರನ್ನೂ ಆಯಾ ದೇಶದ ರಾಜಾಧಿರಾಜರನ್ನೂ ಚಕ್ರವರ್ತಿಗಳನ್ನೂ ಪ್ರತ್ಯಕ್ಷದಿಂದ ನೋಡಿದಂತೆ ತೋರಿಸುವ ಸುಂದರವಾದ ಚಿತ್ರಗಳು ಥಳಥಳಿಸುವ ಬೆಣ್ಣೆ ಕಾಗದದಲ್ಲಿ ಎರಡು ಬಣ್ಣಗಳಿಂದ ಮುದ್ದಾಗಿ ಮುದ್ರಿಸಿ ಕ್ರಯಕ್ಕೆ ಸಿದ್ಧವಾಗಿವೆ. ತ್ವರೆಮಾಡಿರಿ, ಸ್ವಲ್ಪವೇ ಪ್ರತಿಗಳಿವೆ, ತ್ವರೆಮಾಡಿರಿ

ಬಾಲ ಸುಟ್ಟ ಕೋತಿಯಂತೆ ಅತ್ತಿತ್ತ ತಿರುಗುತ್ತ ವ್ಯಾಪಾರದ ಹಡಗುಗಳನ್ನೂ ಯುದ್ಧದ ಹಡಗುಗಳನ್ನೂ ಹತಮಾಡಿ ಕಡೇಗೆ ತಾನೂ ಉರಿದು ಸಮುದ್ರದಡಿಗೆ ನಿಪಾತವಾದ ಎಮ್‌ಡನ್ನನ್ನು ನೋಡಿರುವಿರಾ, ಅದರ ನಾಯಕನನ್ನು ಬಲ್ಲಿರಾ, ಅದು ಮದರಾಸನ್ನು ಮುತ್ತಿ ಮಾಡಿದ ಅನಾಹುತಗಳನ್ನು ನೋಡಿರುವಿರಾ, ಕಡೆಗೆ ಅದಕ್ಕೆ ಗತಿ ಕಾಣಿಸಿದ ಸಿಡ್ನಿ ಎಂಬ ಹಡಗನ್ನು ಕಂಡಿರುವಿರಾ, ಅದರ ನಾಯಕ ಶಿಖಾಮಣಿಯನ್ನು ನೋಡಿರುವಿರಾ, ಧೀರಾಧಿವೀರನೆಂದೆನ್ನಿಸಿದ ಪ್ರತಾಪೋದ್ದೀಪಿತನಾದ ಪ್ರತಾಪಸಿಂಗನನ್ನು ಕಂಡಿರ ವಿರಾ.

ಪಂಚಪಾಂಡವರಂತಿರುವ ಇಂಗ್ಲಂಡ್, ರಷ್ಯಾ, ಫ್ರಾನ್ಸ್, ಬೆಲ್ಜಿಯಮ್, ಜಪಾನ್ ಚಕ್ರವರ್ತಿಗಳನ್ನೂ, ದುರ್ಯೋಧನ, ದುಶ್ಶಾಸನ, ದುಷ್ಟಳಿಗಳಂತೆ ಕಾಲಾಗ್ನಿಗೆ ತುತ್ತಾಗುವದಕ್ಕಿರುವ ಜರ್ಮನಿ, ಆಸ್ಟ್ರಿಯಾ, ತುರ್ಕಿ ಚಕ್ರವರ್ತಿಗಳನ್ನೂ ನೋಡಿರುವಿರಾ, ಆಯಾ ರಾಷ್ಟ್ರಗಳ ಸೇನಾನಾಯಕರನ್ನೂ ನೌಕಾನಾಯಕರನ್ನೂ ವಾಯುವಿಮಾನ ನಾಯಕರನ್ನೂ ನೋಡಿರುವಿರಾ, ಇಲ್ಲವಾದರೆ ನಮ್ಮಲ್ಲಿ ಕ್ರಯಕ್ಕೆ ಸಿದ್ಧವಾಗಿರುವ ಚಿತ್ರವನ್ನು ತರಿಸಿ ನೋಡಿ ಈ ಚಿತ್ರಗಳ ಸಹಾಯದಿಂದ ಯುದ್ಧ ಸಂಗತಿಗಳು ಮನಸ್ಸಿನಲ್ಲಿ ಬಲು ಸುಲಭವಾಗಿ ನಾಟುವವು. ಪಕ್ಷಿಯಂತೆ ಆಕಾಶದಲ್ಲಿ ಹಾರಾಡುತ್ತಿರುವ ವಾಯುವಿಮಾನವನ್ನೂ, ಮತ್ಸ್ಯಗಳಂತೆ ಸಮುದ್ರದಲ್ಲಿ ಅಲೆದಾಡುತ್ತಿರುವ ಯುದ್ಧದ ಹಡಗವನ್ನೂ ಜರ್ಮನರು ಹೊಸದಾಗಿ ರಚಿಸಿದ ಫಿರಂಗಿಯನ್ನೂ ಈ ಚಿತ್ರಗಳ ಸಹಾಯದಿಂದ ಚನ್ನಾಗಿ ನೋಡಬಹುದು. ಸಮಸ್ತರೂ ನೋಡಬೇಕಾದ ವಿಷಯ.

ಬೆಲೆ 1 ರೂಪಾಯಿ 4 ಅಣೆ ಮಾತ್ರ.

ಷರಾ. ಯುದ್ಧವಾರಂಭವಾದಮೇಲೆ ರಣರಂಗದಿಂದ ಈಚೆಗೆ ಹೊಸದಾಗಿ ಎತ್ತಿದ ಫೋಟೋಗಳನ್ನು ಸೀಮೆಯಿಂದ ತರಿಸಿ ಅಚ್ಚು ಮಾಡಿಸಿದ್ದೇವೆ. ಪ್ರತಿಯೊಂದು ಪಟವನ್ನೂ ನಲುಗದಂತೆ ಮರದ ಕಟ್ಟಿಗೆಯಲ್ಲಿ ಸುತ್ತಿ ಭದ್ರವಾಗಿ ಸೇರುವಂತೆ ರವಾನಿಸಿ ಕೊಡುತ್ತೇವೆ. ಈ ದಿನವೇ ಬರಿಯಿರಿ. ಅಂಚೆ ಹಾಸಲು ಫ್ರೀ.

ನಮಗೆ ಬರಿಯತಕ್ಕ ಆರ್ಡರುಗಳನ್ನು ಸ್ವಹಸ್ತಾಕ್ಷರಗಳಿಂದ ಬರಿಯತಕ್ಕದು ಮತ್ತು ವಿಳಾಸಗಳನ್ನು ವಿವರವಾಗಿ ಬರಿಯತಕ್ಕದ್ದು.

ವಿಳಾಸ: — ಮ್ಯಾನೇಜಿಂಗ್ ಪ್ರೊಪ್ರೈಟರ್ ಚಿತ್ರಕಲಾನಿಧಿ ಭವನ,
ಪುತ್ತೂರು, ದ. ಕನ್ನಡ

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	...	...	.		300,000—0—0
Issued Capital	. .	. .	.	.	225,000—0—0
Subscribed Capital ...	...	...	...		218,800—0—0
Paid up Capital ...	...	..	...		193,800—0—0
Deposits ...	...	...	...		441,934—0—11
Reserve Fund	..	...	.	.	33,500—0—0

Besides the uncalled capital of Rs. 25,000/ 25% of the net profits are added annually to the Reserve Fund. Rs. 21,685/ have been invested in Government Paper of the face value of Rs. 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/ and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½% per annum at the discretion of the managing committee

Current Deposit Account opened free of charge.

Savings Bank Account opened for any sum not less than 4 As and multiples thereof and interest paid @ 4⅛%.

Loans granted on proper securities and pledges

Sealed Parcels for safe custody received on a moderate charge.

Canara Bank Ltd.,
Mangalore, 1st April 1915.

ನಿಯಮಿತ ಮೂಲ ಧನವು ರೂಪಾಯಿ	...	...	300,000—0—0
ಹುಟ್ಟಿಬಂದ ಮೂಲ ಧನವು ,,	...	...	225,000—0—0
ಪ್ರತಿಜ್ಞಾತ ಮೂಲ ಧನವು ,,	..	...	218,800—0—0
ಆಗತ ಮೂಲ ದನವು ,,	...	...	193,800—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು		...	441 934—0—11
ರಕ್ಷಿತ ಧನವು . .	...	...	33,500—0—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಇಲ್ಲಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾವೀತು. ಈ ಠೇವಣಾತಿಗಳಿಗೆ ಸೇಕಡಾ 4⅛ರ ದರ ಬಡ್ಡಿಯು ಕೊಡೋಣಾಗುವುದು.
ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ
ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿ ಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ, ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ, ನಿಮಿರಾಯನ ಶರೀರತ್ಯಾಗ, ಜನಕವಂಶ ಕ್ಷತ್ರಿಯಚರಿತ್ರೆ, ಕಾರ್ತವೀರ್ಯನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸ್ತಾನವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲ್ಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರೀಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯ ಮುನಿ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡ ಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ಒಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—೩—೦.

ತಮ್ಮ ವಿಳಾಸ:— ಎ ೦. ದೇ ಶಾ ಯಿ ಕ ೦ ಪೆ ನಿ,
ಕರ್ನಾಟಕ ಬುಕ್ ಡಿಪೋ ಬಳ್ಳಾರಿ.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 30ನೇ ಎಪ್ರಿಲ್ 1915

ಗಂಧಿಯವರು ಮದ್ರಾಸಿಗೆ ಬಂದುದು

ಗಂಧಿಯವರು ಮದ್ರಾಸಿಗೆ ಚಿತ್ತೈಸಿ ಕೆಲವು ದಿನಗಳಾದವು. ಈ ಮಹಾಪುರುಷರನ್ನು ಮದ್ರಾಸಿನ ಪ್ರಜಾವರ್ಗಗಳೆಲ್ಲವು ನಾನಾ ಪ್ರಕಾರವಾಗಿ ಸತ್ಕರಿಸುತ್ತಿರುವವು. ಇಂಥಾ ಸತ್ಕಾರಗಳೇನು ಮತ್ತು ಗಂಧಿಯವರು ಇವುಗಳನ್ನು ಯಾವ ಭಾವದಿಂದ ಸ್ವೀಕರಿಸಿದರೆಂಬುದನ್ನು ತಿಳಕೊಳ್ಳುವ ಮೂಲಕ ಈ ಪುಣ್ಯಶಾಲಿಯ ಗುಣಕಥನವನ್ನು ಮಾಡಲು ದೊರಿಯುವ ಸಂದರ್ಭವನ್ನು ಹಾಗೆಯೇ ಬಿಟ್ಟುಬಿಡುವುದು ಉಚಿತವಲ್ಲ.

ದಕ್ಷಿಣ ಆಫ್ರಿಕ ಭಾರತೀಯರ ಸಹಾಯಾರ್ಥವಾಗಿ ಮದ್ರಾಸಿನಲ್ಲಿ ಸ್ಥಾಪಿಸಲ್ಪಟ್ಟಿರುವ ಸಂಘದವರು ಈ ತಿಂಗಳ ತಾ ೨೨ರಲ್ಲಿ ಮದ್ರಾಸಿನ ಮಹಾಜನರ ಸಭೆಯೊಂದನ್ನು ಕೂಡಿಸಿ ಗಂಧಿಯವರನ್ನೂ ಅವರ ಪತ್ನಿಯನ್ನೂ ಸತ್ಕರಿಸಿದರು. ಸಭೆಯ ಅಧ್ಯಕ್ಷಸ್ಥಾನವನ್ನು ಮಾನ್ಯ ವೃದ್ಧ ಮಹನೀಯರಾದ ಸರ್ ಎಸ್ ಸುಬ್ರಮಣ್ಣಯ್ಯರವರು ವಹಿಸಿಕೊಂಡಿದ್ದರು. ಸಭಾಕಾರ್ಯಕ್ಕೆ ಪ್ರಾರಂಭವಾಗುವ ಮೊದಲು ಅಧ್ಯಕ್ಷರವರು ಗಂಧಿಯವರ ಮಹಿಮೆಯನ್ನು ಕುರಿತು ಮಾಡಿದ ಸ್ತುತಿಯನ್ನು ಸಂಕ್ಷೇಪವಾಗಿ ತಿಳಿದುಕೊಂಡು ಈ ಸ್ತುತಿಯ ಸ್ಮರಣೆಯನ್ನು ನಾವೆಲ್ಲರೂ ಕೂಡಿಕೊಂಡು ಮಾಡುವುದು ಉಚಿತವಾಗಿದೆ. ಗಂಧಿಯವರನ್ನು ಮನ್ನಿಸಲು ಕೂಡಿದ ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವ ಗೌರವಕ್ಕೆ ಸರಿಯಾದ ಬಹುಮಾನವು ತನ್ನ ಕಳೆದ ೭೦ ವರುಷಗಳ ಕಾಲದ ಜೀವಿತದಲ್ಲಿ ತನಗೆ ಪ್ರಾಪ್ತಿಸಿದ್ದಿಲ್ಲ—ಸರ್ ಎಸ್ ಸುಬ್ರಮಣ್ಣಯ್ಯರವರು ಹೀಗೆ ಅಪ್ಪಣೆಕೊಡಿಸಿದ ವಚನವು ಹೇಗೆ ಯಥಾರ್ಥವಾಗಿದೆಂಬುದನ್ನು ಈ ವೃದ್ಧ ಮಹಾನುಭಾವರೇ ವಿವರಿಸಿರುತ್ತಾರೆ. ಭರತಮಾತೆಯ ಅಭಿಮಾನವನ್ನು ಕಾಪಾಡಲು ತನ್ನ ಪ್ರಾಣವನ್ನು ಸಹ ಒಡ್ಡಿಕೊಂಡು ಭೂಲೋಕದಲ್ಲಿ ಭಾರತೀಯ ಜನಾಂಗದ ಗೌರವನ್ನು ಮೆರೆಸಿದ ಶೂರಮಣಿ ಗಂಧಿಯಂಥವರು ಈಗ ಮತ್ತೊಬ್ಬರಿರರು. ಲೋಕದಲ್ಲೆಲ್ಲಾ ಹೆಸರುವಾಸಿಗಳಾಗಿರುವ ಗಂಧಿಯವರನ್ನೂ, ಪತಿಯ ಹೋರಾಟಗಳಲ್ಲಿ ಸಮಭಾಗಿನಿಯಾಗಿ, ಗಂಧಿಗಳ ಅರ್ಧಾಂಗಿಯಾಗಿರುವೆನೆಂಬುದನ್ನು ಮನೋವಾಕ್ಕಾಯಗಳಿಂದ ರುಜುಪಡಿಸಿ, ಭಾರತೀಯ ಸ್ತ್ರೀಸಮಾಜಕ್ಕೆ ಕೀರ್ತಿಯನ್ನು ತಂದ ಗಂಧಿಯವರ ಪತ್ನಿಯರನ್ನೂ ಈಗ ಪ್ರಥಮ ಸರ್ತಿಗೆ ಪ್ರತ್ಯಕ್ಷ ನೋಡಿಕೊಂಡು ಸನ್ಮಾನಿಸುವ ಭಾಗ್ಯವು ಪ್ರಾಪ್ತವಾದ ಈ ಸಂದರ್ಭವು ಬಹಳ ವಿಶೇಷವಾಗಿದೆ. ಇಂಥವರ ವರ್ಚಸ್ಸು ಸರ್ವತ್ರ ಹಬ್ಬುವಂತೆ ಆಫ್ರಿಕದಲ್ಲಿ ಇವರು ನಡೆಸಿದ ಕಾರ್ಯವೃತ್ತಾಂತವೆಲ್ಲವನ್ನು ಪುಸ್ತಕರೂಪವಾಗಿ ದೇಶಭಾಷೆಗಳಲ್ಲಿ ಪ್ರಕಟಿಸುವುದು ಅಗತ್ಯವಾಗಿರುವುದು. ಗಂಧಿಯವರನ್ನು ಈ ರೀತಿ ಶ್ಲಾಘಿಸಿ ಸ್ವರ್ಗಸ್ಥ ಗೋಖಲೆಯವರ ಮತ್ತು ಗಂಧಿಯವರ ಕಾರ್ಯ ಚಟುವಟಿಕೆಯ ವ್ಯತ್ಯಾಸವನ್ನು ಸರ್ ಸುಬ್ರಮಣ್ಣಯ್ಯರವರು ಸೂಚಿಸಿರುತ್ತಾರೆ. ಸರ್ವ ಮಾನ್ಯ ಗೋಖಲೆಯವರು ದೇಶದ ಏಳಿಗೆಯ ಪ್ರಯತ್ನಗಳು ಯಾವವು, ಅವನ್ನು ಹೇಗೆ ಸಾಧಿಸಬೇಕೆಂಬುದನ್ನು ಕಾರ್ಯತಃ ಶೋಧನೆ ಸಾಧನೆಗಳಿಂದ ನಿರ್ಧರಿಸಿದರು. ಸರಕಾರದವರಿಂದ ಹಕ್ಕು ಸ್ವಾತಂತ್ರ್ಯವನ್ನು ಕೇಳಿಕೊಳ್ಳಲಿಕ್ಕೂ ದೇಶದ ಮೇಲ್ಮೆಯ ಇತರ ಎಲ್ಲಾ ಪ್ರಯತ್ನಕ್ಕೂ ಸಾಮಾನ್ಯರ ಸಹಕಾರವು ಅಗತ್ಯವಿದೆ ಎಂಬುದನ್ನು ಗೊತ್ತುಮಾಡಿದರು. ಈ ಸಹಕಾರವು ದೊರಿಯಬೇಕಾದರೆ ಸಾಮಾನ್ಯರ ಸ್ಥಿತಿಗತಿಯನ್ನು ಒಳ್ಳಿತಾಗಿ ಮಾಡಬೇಕೆಂತ ತಿಳಿದು ಪ್ರ್ಯಾಮರಿ ಶಿಕ್ಷಣ ಪ್ರಸರಣೆ ಒಗ್ಗೆ ತನ್ನಿಂದಾಗುವ ಸಾಹಸವನ್ನು ನಡೆಸಿದರು. ದೇಶಾಭ್ಯುದಯಕ್ಕೆ ಇಂಥಾ ಪ್ರಯತ್ನಗಳ ಸಾಧನೆಯು ಶಾಶ್ವತವಾಗಿ ಮುಂದಕ್ಕೂ ನಡಿಯುವಂತೆ ಭಾರತ ಸೇವಾಸಂಘವನ್ನು ಗೋಖಲೆಯವರು ಏರ್ಪಡಿಸಿರುತ್ತಾರೆ. ಈ ರೀತಿ ಗೋಖಲೆಯವರು ದೇಶಾಭಿಮಾನಿಗಳಿಗೆ ಮಾರ್ಗದರ್ಶಿಗಳಾಗಿರುವರು. ಗೋಖಲೆಯವರ ಉದ್ದೇಶಗಳು ಗಂಧಿಯವರಂಥವರಿಂದಲೇ ನೆರವೇರಬೇಕಾಗಿವೆ. ಗೋಖಲೆ ಮತ್ತು ಗಂಧಿ ಇವರ ಕಾರ್ಯ ಚಟುವಟಿಕೆಗಳ ವ್ಯತ್ಯಾಸವು ಏನೆಂಬುದನ್ನು ನಾವು ಈಗ ತಿಳಕೊಳ್ಳಬಹುದು. ಈ ವ್ಯತ್ಯಾಸವನ್ನು ಗಂಧಿಯವರು ಇದೇ ರೀತಿ ತಿಳಕೊಂಡಿರುವುದರಿಂದಲೇ ಗಂಧಿಯವರು ಗೋಖಲೆಯವರ ಭಾರತ ಸೇವಾಸಂಘವನ್ನು ಸೇರಿರುವರು ಮತ್ತು ಪ್ರಕೃತ ದೇಶದ ಆಯಾ ಪ್ರಾಂತ್ಯಗಳನ್ನು ಸಂಚರಿಸುತ್ತ ಸಾಮಾನ್ಯರ ದೀನದೆಸೆಯನ್ನು ಸ್ವತಹ ಏನೆಂಬುದಾಗಿ ವಿಚಾರಿಸಿ ತಿಳಿಯುತ್ತಿದ್ದಾರೆ.

ಸರ್. ಎಸ್ ಸುಬ್ರಮಣ್ಣಯ್ಯರವರು ಗಂಧಿಯವರನ್ನೂ ಅವರ ಪತ್ನಿಯರನ್ನೂ ಯಥೋಚಿತ ಸ್ವಾಗತ ವಚನಗಳಿಂದ ಸ್ತುತಿಸಿದ ಮೇಲೆ ಗಂಧಿಯವರು ಸನ್ಮಾನಾರ್ಥ ಈ ಸಂಸ್ಥಾನದ ಪರವಾಗಿ ಒಂದು ಸ್ವಾಗತ ಪತ್ರವು ಸಭೆಯಲ್ಲಿ ಓದಲ್ಪಟ್ಟಾಯಿತು. ಮದ್ರಾಸಿನ ಮಹಮ್ಮದೀಯರ ಸಂಘ, ಮಹಾಜನ ಸಮಾಜ, ಕೊಸ್ಮೊಪೋಲಿಟನ್ ಕ್ಲಬ್, ವಿದ್ಯಾರ್ಥಿಸಮಾಜ, ಮಿಸೆಸ್ ಎನ್ನಿಬಿಸೆಂಟ್ ಮೊದಲಾದವರು ಪ್ರತಿನಿತ್ಯವೆಂಬಂತೆ ಗಂಧಿಯವರನ್ನು ಸತ್ಕರಿಸುತ್ತಿದ್ದಾರೆ. ಗಂಧಿಯವರು ಹೋದ ಎಲ್ಲಾ ಕಡೆಗಳಲ್ಲಿ ಪ್ರಜಾಮುಂದಾಳುಗಳು ಉಪಯುಕ್ತ ವಚನಗಳಿಂದ ಗಂಧಿಯವನ್ನು ಶ್ಲಾಘಿಸಿರುವರು.

ಗಂಧಿಯವರು ಈ ಸತ್ಕಾರವೆಲ್ಲವನ್ನು ಹೇಗೆ ಸ್ವೀಕರಿಸಿದರೆಂಬುದು ಅವರು ಆಯಾ ಕಡೆಗಳಲ್ಲಿ ಕೊಟ್ಟ ಉತ್ತರಗಳಿಂದ ವ್ಯಕ್ತವಾಗುವುದು. ಸರ್. ಸುಬ್ರಮಣ್ಣಯ್ಯರವರ ಸ್ತುತಿಯನ್ನು ಆಶೀರ್ವಾದ ರೂಪದಲ್ಲಿ ಸ್ವೀಕರಿಸಿದರು. ಇತರರ ಶ್ಲಾಘನೆಯನ್ನು ಕುರಿತು—ತಾನು ಇನ್ನು ಮುಂದಕ್ಕೆ ಮಾಡಬೇಕಾದ ಕಾರ್ಯಸಾಧನೆಯಿಂದ ಇದಕ್ಕೆ ಅರ್ಹನಾಗಬೇಕೆಂದು ಹೇಳಿರುವರು. ಇನ್ನು ಹಲವರು ಮಾಡಿದ ಪ್ರಶಂಸೆಯು ತನ್ನ ಮುಂದಿನ ಕರ್ತವ್ಯಗಳನ್ನು ಸೂಚಿಸಿದೆಂದು ಅಂದುಕೊಂಡಿರುವರು. ದಕ್ಷಿಣ ಆಫ್ರಿಕದಲ್ಲಿ ತನ್ನ ಶ್ರಮವು ಅತ್ಯಲ್ಪವಾಗಿದೆ. ಜನ್ಮಭೂಮಿಯಾದ ಭರತಮಾತೆಯ ಅಭಿಮಾನವನ್ನು ಅಗಿಂದಾಗ್ಯೆ ಸ್ಮರಿಸಿಕೊಂಡು, ಶಿಕ್ಷಿತರಲ್ಲದಿದ್ದರೂ ಧರ್ಮ ಸದಾಚಾರಗಳಲ್ಲಿ, ದಯಾಮಯನಾದ ದೇವರಲ್ಲಿ ವಿಶ್ವಾಸವನ್ನಿಟ್ಟು ಭಾರತೀಯರ ಗೌರವವನ್ನು ಕಾಪಾಡುವದಕ್ಕೋಸ್ಕರ ತಮ್ಮ ಸರ್ವಸ್ವವನ್ನೂ ಪ್ರಾಣವನ್ನೂ ಸಹ ಬಲಿಯೊಪ್ಪಿಸಿದ ಮಹಾಪುರುಷರು ಈ ಶ್ಲಾಘನೆಗೆ ಪಾತ್ರರಾಗಿರುವರು. ತನ್ನಿಂದ ನೆರವೇರಿದ ಅಲ್ಪಸ್ವಲ್ಪ ಸೇವಾಸಾಧನಕ್ಕೆ ಇವರಿಂದಲೇ ಉತ್ಸಾಹವು ದೊರಕಿತು. ದಕ್ಷಿಣ ಆಫ್ರಿಕದ ಸರಕಾರದವರ ಭಾಷಾ ಪರಿಚಿತಿಯು ಅಲ್ಲಿಯ ಭಾರತೀಯ ಸಾಮಾನ್ಯರಿಗೆ ಇಲ್ಲದಿರುವದರಿಂದ ತಾನು ಅಲ್ಲಿ ದ್ವಿಭಾಷಿಯ ಕೆಲಸವನ್ನು ಮುಖ್ಯವಾಗಿ ವಹಿಸಿಕೊಂಡಿದ್ದಾಗಿದೆ. ಅದ್ದರಿಂದ ಈ ಶ್ಲಾಘನೆ, ಈ ಸ್ತುತಿಯು ಆ ಸಾಮಾನ್ಯರಿಗನೇ ಸಲ್ಲತಕ್ಕದ್ದಾಗಿರುವುದೆಂಬ ಭಾವದಿಂದ ಮದ್ರಾಸಿನ ಸತ್ಕಾರವೆಲ್ಲವನ್ನು ಗಂಧಿಯವರು ಸ್ವೀಕರಿಸಿರುವರು.

ಮದ್ರಾಸಿನ ಕೊಸ್ಮೊಪೋಲಿಟನ್ ಕ್ಲಬ್ಬಿನವರಿಗೂ ವಿದ್ಯಾರ್ಥಿ ವರ್ಗಕ್ಕೂ ಗಂಧಿಯವರು ಅಪ್ಪಣೆಕೊಡಿಸಿದ ಮಾತುಗಳಿಂದ ತೋರಿರುವ ತತ್ವವನ್ನು ಸೂಚಿಸಿ ಗಂಧಿಯವರ ಸತ್ಕಾರದ ಈ ಪ್ರಸ್ತಾಪವನ್ನು ಮುಗಿಸುವ. ದೇಶದ ಎಲ್ಲಾ ಭಾಗಗಳಲ್ಲಿರುವ ಮುಂದಾಳುಗಳೊಡನೆ ತನಗೆ ಕೆಲವು ವಿಷಯಗಳಲ್ಲಿ ವಿರೋಧವಿರುವುದು. ಮುಂದಾಳುಗಳು ಈ ದೇಶದಲ್ಲಿ ವರ್ತಿಸುವ ವಿಧಾನಗಳಿಂದ ಸಾಮಾನ್ಯರ ಅಭಿವೃದ್ಧಿಯಲ್ಲಿ ಉತ್ಸಾಹವುಳ್ಳವರೆಂತ ತೋರಿಬರುವದಿಲ್ಲ. ಹೆಚ್ಚು ಸಂಬಳವುಳ್ಳ ಸರಕಾರ ಹುದ್ದೆಗಳಿಗೆ ನೇಮಕವಾಗುವ ಕಾಲದಲ್ಲಿ ಮುಂದಾಳುಗಳಲ್ಲಿ ತೋರಿಬರುವ ಚಳವಳವು ದೀನರಾದ ಸಾಮಾನ್ಯರ ಪರವಾಗಿ ತೋರಿಬಾರದು. ಸಾಮಾನ್ಯರ ಸಂಪತ್ತಭಿವೃದ್ಧಿಯ ಸಾಧನೆಗಳಲ್ಲಿಯೂ ಆರೋಗ್ಯ ಏರ್ಪಾಡುಗಳನ್ನು ಗ್ರಾಮಗಳಲ್ಲಿ ಜಾರಿಗೆ ತರುವದರಲ್ಲಿಯೂ ಸಾಮಾನ್ಯರಿಗಿರುವ ಇತರ ಸಂಕಷ್ಟನಿವಾರಣಾ ಸಾಧನೆಗಳಲ್ಲಿಯೂ ಮುಂದಾಳುಗಳ ಚಳವಳವು ತೋರಿಬರುವುದು ಅಪರೂಪವಾಗಿದೆ. ಡಂಭಾಚಾರಗಳ ಈ ಕಾಲದಲ್ಲಿ ಗಂಧಿಯವರ ಈ ಮಾತುಗಳು ಮುಂದಾಳುಗಳಿಗೆ ರುಚಿಸುವುದು ಕಷ್ಟಸಾಧ್ಯ. ಲೋಕದ ಸುಖಗಳೆಲ್ಲವನ್ನು ಅನುಭವಿಸುವ ಒಗ್ಗೆ ದೇವರು ಸಂಪನ್ನತೆಯನ್ನು ಕೊಡುವುದೆಂಬ ಭಾವದ ಭೋಗಾಪೇಕ್ಷೆಯು ಡಂಭಾಚಾರಗಳಿಗೆ ವಿಶೇಷವಾಗಿ ಪ್ರಕೃತ ಆಸ್ಪದ ಕೊಟ್ಟಿರುವುದು. ಇಂಥಾ ಭಾವವು ಮಾರ್ಪಟ್ಟ ವಿನಹ ಯಾವ ಸಾಧನೆಗೂ ಸಂಪನ್ನರಲ್ಲಿ ಉತ್ಸಾಹ ಉಂಟಾಗದು. ಈ ಭಾವ ಮಾರ್ಪಾಟವು ಮುಂದಿನ ಪೀಳಿಗೆಯವರಲ್ಲಿ ಉಂಟಾಗುವಂತೆ ಪಾಶ್ಚಾತ್ಯ ನಾಗರೀಕತೆಯು ಸೂಚಿಸುವಂಥಾ ಭೋಗಾಪೇಕ್ಷೆಯನ್ನು ತ್ಯಜಿಸಿಬಿಡಬೇಕೆಂತ ಮದ್ರಾಸಿನ ವಿದ್ಯಾರ್ಥಿ ಸಮಾಜವನ್ನು ಗಂಧಿಯವರು ವಿಜ್ಞಾಪಿಸಿಕೊಂಡರು.

ಕೃಷ್ಣಾ ಜಿಲ್ಲೆಯ ಪರಸ್ಪರ ಸಹಾಯ ಸಂಘಗಳ ಪರಿಷತ್ತು.

ಈ ಪರಿಷತ್ತಿನ ಸಭೆಯು ಕೆಲವು ದಿನಗಳ ಹಿಂದೆ ಕೃಷ್ಣ ಜಿಲ್ಲೆಯ ಕೈಕಲೂರು ಎಂಬಲ್ಲಿ ಬಹುಮಾನಪಟ್ಟ ಮೆ। ಎಲ್. ಈ ಒಕ್ಲೆ ಐ. ಸಿ. ಎಸ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ನಮ್ಮ ಜಿಲ್ಲೆಯಲ್ಲಿ ಈಚೆಗೆ ಆದ ಸಭೆಯಲ್ಲಿ ಪರಸ್ಪರ ಸಹಾಯ ಸಂಘಗಳ ವರ್ಧನೆಯನ್ನು ಕುರಿತು ಹೇಗೆ ಚರ್ಚೆ ಬಂದಿತೊ ತದ್ರೀತಿಯಲ್ಲಿ ಕೈಕಲೂರಲ್ಲಿಯೂ ಹಲವು ವಿಷಯಗಳ ಪ್ರಸ್ತಾಪ ಬಂದಿತ್ತು. ಅದರ ಪ್ರಶಂಸೆಯು ಇಲ್ಲಿಯ ಸಹಕಾರ ಸಮಾಜದವರಿಗೆ ಪ್ರಯೋಜನಕರವಾಗಬಹುದೆಂಬ ನಂಬಿಕೆಯಿಂದ ಅಲ್ಲಿ ನಡೆದ ವಿಷಯಗಳನ್ನು ಬಂದಿಷ್ಟು ವಿವರಿಸುವೆವು. ನೆಲ್ಲೂರ ಪರಸ್ಪರ ಸಹಾಯದ ಬೇಂಕಿನ ಪ್ರತಿನಿಧಿಯಾಗಿ ಬಂದ ಬಹುಮಾನಪಟ್ಟ ಎಮ್ ರಾಮಚಂದ್ರರಾಯರು ಮಾಡಿದ ಭಾಷಣದಲ್ಲಿ ಉತ್ತರ ಸರ್ಕಾರುಗಳಲ್ಲಿ ಅಂದರೆ ಗಂಜಾಂ, ವಿಶಾಖಪಟ್ಣ, ಗೋದಾವರಿ, ಕೃಷ್ಣ, ಗುಂಟೂರು ನೆಲ್ಲೂರು ಈ ಜಿಲ್ಲೆಗಳಲ್ಲಿ ಪರಸ್ಪರ ಸಹಾಯ ಜ್ಞಾನವು ಇನ್ನೂ ಉದಯಿಸಲಿಲ್ಲವೆಂತ ಅವರು ಹೇಳುತ್ತಾರೆ. ಅದಲ್ಲದೆ ಬಹಳ ವಿಸ್ತೀರ್ಣವಾದ ಆ ಪ್ರಾಂತ್ಯಕ್ಕೆ ಒಬ್ಬರೇ ಒಬ್ಬರು ಅಸಿಸ್ಟಾಂಟ ರಿಜಿಸ್ಟ್ರಾರರು ಇದ್ದು ಅವರಿಗೆ ಕೈ ತುಂಬಾ ಕೆಲಸವಿರುವುದರಿಂದ, ಜನರಿಗೆ ಸಹಕಾರ ಜ್ಞಾನವನ್ನು ಬೋಧಿಸುವುದಕ್ಕೆ ಎಡೆಸಿಕ್ಕುವದಿಲ್ಲವೆಂದು ಅವರ ಅಭಿಪ್ರಾಯ. ಬರೇ ಗೌರವಕ್ಕೆನೇ ಇಂತಹ ಕೆಲಸವನ್ನು ವಹಿಸುವ ಪೆನ್ಶನ್‌ದಾರರನ್ನಾಗಲೀ ಇತರ ವಿದ್ಯಾವಂತರನ್ನಾಗಲೀ ಈ ಕೆಲಸಕ್ಕೆ ಹಚ್ಚುವದು ಅಗತ್ಯವೆಂದು ಇಲ್ಲಿನ ಸಭೆಯಲ್ಲಿ ಚರ್ಚೆಗೆ ಬಂದುದು ಅನುಕೂಲ ಸಮಯಕ್ಕಾಯಿತು ಎಂದು ನಾವು ಇದರಿಂದ ಊಹಿಸಬಹುದು. ದೇಶಜ್ಞಾನ, ಭಾಷಾಜ್ಞಾನ, ಜನರಲ್ಲಿ ಹೊಕ್ಕುಬಳಿಕೆ, ಅವರ ನಡತೆ ನಡಾವಳಿಗಳ ಪರಿಚಯ, ಇವನ್ನೆಲ್ಲ ತಿಳಿದವರೇ ಈ ಕೆಲಸಕ್ಕೆ ಹೆಚ್ಚಿನ ಪ್ರಯೋಜನಕಾರಿಗಳಾಗುವರು ಎಂಬುದು ನಿರ್ವಿವಾದ. ಅದರಲ್ಲಿ ಸರಕಾರಿ ಕೆಲಸಗಳನ್ನು ಮಾಡಿ, ಉದ್ಯೋಗವ್ಯವಹಾರಗಳಿಂದ ಸರಕಾರಿ ಖರ್ಚಿನಿಂದಲೇ ಹೆಚ್ಚಿನ ಜ್ಞಾನವನ್ನು ಪಡೆದ ಜನರು ಇಂತಹ ಸಪ್ರವೃತ್ತಿಗಳಲ್ಲಿ ತಮ್ಮ ವೃದ್ಧಾಪ್ಯವನ್ನು ಕಳೆಯುವುದಕ್ಕೆ ಮುಂದುವರಿಯುವದಾದರೆ ಅವರನ್ನು ಏತಕ್ಕೆ ಅಸಿಸ್ಟಾಂಟ ರಿಜಿಸ್ಟ್ರಾರರಾಗಿ ನೇಮಿಸಬಾರದು? ಈ ವಿಷಯವಾಗಿ ಬಹುಮಾನಪಟ್ಟ ಮೆ। ಕಾಡ್ರ್ಯೂ ಸಾಹೇಬರು ಸಹ ಇಲ್ಲಿ ಅನುಮೋದಿಸಿರುವುದರಿಂದ ಸರಕಾರದವರು ಅದಕ್ಕೆ ಬೇಗನೇ ಗಮನಕೊಡುವರೆಂದು ನಾವು ನಂಬುತ್ತೇವೆ.

ಮೆಂಬರರು ರೇವಣಾತಿಗಳನ್ನು ಇಡುವುದಕ್ಕೆ ಮುಂದರಿಸುವ ಬದಲಾಗಿ ಅನೇಕ ಕಡೆಗಳಲ್ಲಿ ಸಾಲವೇ ಹೆಚ್ಚಾಗಿದೆ ಎಂತಲೂ, ಪಂಚಾಯತರಲ್ಲಿ ಹಲವರು ಸಂಘದ ಸಾಲಗಳಲ್ಲಿ ನೇಕಡಾ ೫೦ರಿಂದ ೭೦ವರೆಗೆ ಸಾಲ ತಾವೇ ಪಡೆದಿರುವರು ಎಂತಲೂ ಕಂಡುಬರುತ್ತದೆ. ಇಂತಹ ಸಂಗತಿಗಳಲ್ಲಿ ಮೇಲ್ವಿಚಾರವು ಹೆಚ್ಚಾಗಬೇಕೆಂಬದು ನಿಶ್ಚಯ. ಇತರರು ಸಾಲಗಳನ್ನು ಕಡೆಯುವಾಗ ಅವರ ಮೇಲೆ ಕಣ್ಣಿಡತಕ್ಕ ಪಂಚಾಯತರೇ ಹೆಚ್ಚಿನ ಸಾಲ ಪಡಕೊಂಡರೆ 'ಬೇಲಿಯೇ ಹೊಲನ ಮೇದ್ದಂತಾ'ಯಿತು. ಈ ಕುಂದುಕವು ದಕ್ಷಿಣ ಕನ್ನಡದಲ್ಲಿ ತೋರಿಬರಲಿಲ್ಲ, ಇನ್ನೂ ಅದು ಜನಿಸದಂತೆ ಇಲ್ಲಿಯ ಸಹಕಾರ ಸಮಾಜದವರು ನೋಡಿಕೊಳ್ಳಬೇಕು.

ಬಹುಮಾನಪಟ್ಟ ಅಧ್ಯಕ್ಷರ ಮಾತುಗಳಲ್ಲಿ ಹಲವು ಸದ್ಬೋಧಗರ್ಭಿತವಾಗಿವೆ. ಸಂಘಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕೆ ಪ್ರಯತ್ನಿಸುವ ಮುಂಚೆ ಅಗತ್ಯವಿರುವ ಜ್ಞಾನವನ್ನು ಪಸರಿಸಬೇಕು ಎಂದು ಅವರ ಅಭಿಪ್ರಾಯ. ಪ್ರತಿಯೊಂದು ಗ್ರಾಮದಲ್ಲಿ ಒಂದು ಸಂಘವಾದರೂ ಇರುವಷ್ಟಕ್ಕೆ ಪ್ರಯತ್ನಿಸುವುದು ಅಗತ್ಯವೆಂದು ತನಗೆ ನೆಚ್ಚಿಗೆಯಾದರೂ ಸಹಕಾರ ಬುದ್ಧಿಯು ಜನಸಾಮಾನ್ಯರಲ್ಲಿ ಉದಯಿಸಿ, ಅವರೇ ಈ ಸಂಘಗಳನ್ನು ಏರ್ಪಡಿಸುವಂತೆ ಕೇಳಿಕೊಳ್ಳುವುದು ಯೋಗ್ಯವಲ್ಲದೆ, ಅದರ ವಾಸನೆಯೇ ಇಲ್ಲದವರ ಮೇಲೆ ಇದರ ಭಾರವನ್ನು ಹೊರಿಸುವುದು ಸರಿಯಲ್ಲವೆಂದು ಅವರು ತಿಳಿಯುತ್ತಾರೆ. 'ಪಾತ್ರವರಿಯದೆ ಮಾಡಿದ ದಾನ'ದಂತೆ ಅದು ನಿಷ್ಫಲವಾಗುವುದೆಂದು ಅವರ ಸಂದೇಹ. ಅವರು ಹೀಗೆ ಹೇಳುವುದಕ್ಕೆ ಕಾರಣಗಳಿವೆ. ಹಲವು ಸಂಘಗಳಲ್ಲಿ ಒಬ್ಬಿಬ್ಬರೆ ಜವಾಬ್ದಾರಿ ಹೊತ್ತಿರುವರಲ್ಲದೆ ಇತರ ಮೆಂಬರುಗಳು ಶಿಲಾಪ್ರತಿಮೆಗಳಂತೆ ಇರುವರು. "ನೀರಿಳಿಯದ ಗಂಟಲೊಳ್ ಕಡುಬು ತುರುಂಕಿದಂತಾಯ್ತು" ಎಂಬಂತೆ ಕಾರ್ಯಜ್ಞಾನವಿಲ್ಲದ ಮೂಢಮತಿಯ ಮುಂದೆ ಸಹಕಾರ ಮೌಕ್ತಿಕವನ್ನಿಟ್ಟರೆ, ಬಿರಬಿರನೆ ನೋಡುವನಲ್ಲದೆ ಅದರ ಬೆಲೆಯನ್ನು ಕಂಡುಹಿಡಿಯಲಾಪನೆ?

ಪಾಠಪುಸ್ತಕಗಳಲ್ಲಿ ಸಹಕಾರ ವಿಷಯಗಳನ್ನು ಸೇರಿಸುವುದು ಅಷ್ಟೊಂದು ಫಲಕಾರಿಯಲ್ಲವೆಂದು ಅವರ ಮತ. ಈಗ ಇರುವ ಪಾಠಗಳಿಗೆ ಇನ್ನೊಂದು ವಿಷಯವನ್ನು ಹೆಚ್ಚಿಸಿದರೆ ಎಳೆ ಮಕ್ಕಳಿಗೆ ಪಾಠಗಳ ಮೇಲೆಯೇ ಒಂದು ಬಗೆಯ ಉದಾಸೀನತೆಯಾಗಬಹುದು ಎಂದು ಅವರು ಪ್ರತಿಪಾದಿಸುತ್ತಾರೆ. ಈ ವಿಷಯದಲ್ಲಿ ಬಹುಮಾನಪಟ್ಟ ಮೆ। ಕಾಡ್ರ್ಯೂ ಸಾಹೇಬರೂ ಇದೇ ರೀತಿಯಲ್ಲಿ ಸಂಶಯಚಿತ್ತರಾದರು. ಮೂಲಪಾಠಶಾಲೆಗಳಿಗೆ ಇದು ಗಹನವಿಷಯವಂತೆ! ಹೈಸ್ಕೂಲ್ ಕೋಲೇಜುಗಳಲ್ಲಿ ಕೈತುಂಬಾ ಬೇರೆ ಹಲವು ವಿಷಯಗಳು ಸೇರಿರುವುದರಿಂದ ಇದಕ್ಕೆ ಎಡೆಯಿಲ್ಲವಂತೆ! ಯೌವನದಲ್ಲಿ ಗೃಹಕೃತ್ಯದ ತೊಂದರೆಗಳೂ ವೃದ್ಧಾಪ್ಯದಲ್ಲಿ ದೇಹಶಿಥಿಲತೆಯೂ ಬುದ್ಧಿಮಾಂದ್ಯವೂ ಎದುರುಬರುವುದಾದರೆ ಈ ಸಹಕಾರಜ್ಞಾನವನ್ನು ಕಲಿಯುವುದಕ್ಕೆ ತಕ್ಕ ಸಮಯ ಯಾವುದು? ಮೂಲಪಾಠಶಾಲೆಗಳಲ್ಲಾಗಲೀ ಮೇಲಿನ ವರ್ಗಗಳಲ್ಲಾಗಲೀ ಅವರು ಕಲಿಯುವ ಸಾವಿರಾರು ವಿಷಯಗಳು ದಿನನಿತ್ಯದ ಅವರ ಯಾವ ಕೆಲಸಗಳಲ್ಲಿ ಉಪಕಾರಿಯಾಗಿವೆ? ಆದರೂ ಅವುಗಳನ್ನು ತಳ್ಳಿಬಿಡಬೇಕೆಂದು ಯಾರೂ ಚರ್ಚಿಸುವುದಿಲ್ಲವಲ್ಲ! ೧೫ ರೂಪಾಯಿ ಗುಮಾಸ್ತನಾಗುವವನಿಗೆ ಕಾರ್ಬನ್ನಿನ ಮಿಶ್ರಧಾತುಗಳ ಜ್ಞಾನವೂ, ಪ್ರಕಾಶವೂ ನಾದವೂ ಒಂದು ಸೆಕೆಂಡಿಗೆ ಇಷ್ಟೆ ಮೈಲು ದೂರಹೋಗುತ್ತದೆ ಎಂಬ ಅನುಭವ ಅಗತ್ಯವಿದೆಯೇ? ತನ್ನ ಜಿಲ್ಲೆಯನ್ನು ಎಂದೆಂದಿಗೂ ಬಿಟ್ಟು ಹೋಗಲು ಅಸಾಧ್ಯವಾಗಿರುವವನಿಗೆ ಗ್ರೀನ್‌ಲೆಂಡ್ ದೇಶದ ಜನರು ಹೇಗೆ ಜೀವಿಸುತ್ತಾರೆಂದು ತಿಳಿಯುವುದು ಅತ್ಯಗತ್ಯವೇ? ತನ್ನ ದೇಶದಲ್ಲಿ ನೆರೆನೀರಿನ ಸಾಧಕಬಾಧಕಗಳನ್ನು ಅರಿಯದವನಿಗೆ, ತನ್ನ ಊರಿನ ಕಸಬು ಕೈಗಾರಿಕೆಗಳು ಯಾವುವು, ತನ್ನ ದೇಶದ ಜನರು ದಿನೇ ದಿನೇ ಬಡವರಾಗುತ್ತಾರೊ, ಶ್ರೀಮಂತರಾಗುತ್ತಾರೊ ಎಂದು ತಿಳಿಯಲಾರದವನಿಗೆ ಉತ್ತರಧ್ರುವದಲ್ಲಿ 'ಬರೊರಾಬೊರಿಯೆಲಿಸ್' ಹೇಗೆ ಉಂಟಾಗುತ್ತದೆ, ಹಿಮದ ಬೆಟ್ಟಗಳು, ಶಿಲಾನದಿಗಳು ಹೇಗಿವೆ ಎಂದು ಅತೀ ಬಾಲ್ಯಾವಸ್ಥೆಯಲ್ಲಿಯೇ ಕಲಿಸುವುದರಿಂದ ಪ್ರಯೋಜನವೇನು? ಒಬ್ಬನ ಗ್ರಾಮದಲ್ಲಿ ಬೆಳೆಯುವ ಬೆಳೆಗಳನು ಹೇಗೆ ವೃದ್ಧಿಗೆ ತರಬಹುದು, ಅವುಗಳಿಗೆ ಸಾಧಕಬಾಧಕಗಳಾದ ಪ್ರಾಣಿಗಳು ಯಾವುವು, ಜನರ ಸ್ಥಿತಿಯಲ್ಲಿ ಏಳ್ಗೆಯುಂಟಾಗುವುದಕ್ಕೆ ಯಾವ ಏರ್ಪಾಡುಗಳನ್ನು ಈ ಸರಕಾರದವರು ಮಾಡುತ್ತಲಿದ್ದಾರೆ ಎಂಬುದನ್ನು ತಿಳಿಯಲರಿಯದವನಿಗೆ ಅಮೇರಿಕಾ ಖಂಡದ ರಾಜ್ಯಭಾರಕ್ರಮವನ್ನು ವಿವರಿಸುವುದು ಚೋದ್ಯವಲ್ಲವೆ! ಮುಖ್ಯವಾಗಿ ಜನಸಾಮಾನ್ಯರು ಯಾವ ವರೆಗಿನ ವಿದ್ಯಾಭ್ಯಾಸ ಪಡೆಯಲು ಅನುಕೂಲವುಂಟೊ ಅಷ್ಟು ಕಾಲದೊಳಗೆ ಅವರಿಗೆ ಮುಂದಿನ ಜೀವನೋಪಾಯಕ್ಕೆ ಅಲ್ಪಸ್ವಲ್ಪ ದಾರಿಯನ್ನು ಕಾಣಿಸುವುದು ನಮ್ಮ ಕರ್ತವ್ಯವಲ್ಲವೇ?

'ಶೇರಿ'(ಪಾಲಿನ)ನ ಮತ್ತು ಪ್ರವೇಶಹಾಸಲಿನ ಮೊಬಲಗನ್ನು ಕಡಿಮೆಮಾಡಬೇಕಾಗಿ ಸಭೆಯಲ್ಲಿ ಚರ್ಚೆಗೆ ಬಂದಂತೆ ಬಹುಮಾನಪಟ್ಟ ಮೆ। ಒಕ್ಲೆ ಸಾಹೇಬರ ಮಾತುಗಳಿಂದ ಗೊತ್ತಾಗುತ್ತದೆ. ಈಗಿರುವ ಕ್ರಮಗಳಲ್ಲಿ ಪ್ರವೇಶ ಹಾಸಲು ೪ ಆಣೆಗೆ ಮೀರಲಿಲ್ಲ; ಒಂದೆರಡು ಫಂಡುಗಳಲ್ಲಿ ವಿನಹಾ ಹೆಚ್ಚಿನವುಗಳಲ್ಲಿ 'ಶೇರಿ'ನ (ಪಾಲಿನ) ಮೊಬಲಗು ೧ ರೂಪಾಯಿಗೆ ಮೀರಲಿಲ್ಲ. ಇವನ್ನೂ ತಗ್ಗಿಸಬೇಕೆಂದು ಚರ್ಚೆ ಬಂಧ ಕಾರಣ ಗೊತ್ತಾಗುವುದಿಲ್ಲ. ಬೆಲೆಯಿಲ್ಲದೆ ಪಡೆದ ವಸ್ತುವಿನ ಕಡೆಗೆ ಜನರಲ್ಲಿ ತಾತ್ಸಾರವಿದೆ ಎಂದು ಬೇರೆ ಹೇಳಬೇಕಾದ್ದಿಲ್ಲ. ಈ ಮೊಬಲಗಿನಗಿಂತ ಕಡಿಮೆ ಹಣವನ್ನು ಬಂದು ಪಾಲಾಗಿ ಇಟ್ಟುಕೊಂಡಿರುವುದರಿಂದ ಅಂಥಾ ಸಂಘವು ತೀರಾ ಇತರರ ಹಣದಿಂದಲೇ ಜೀವಿಸಬೇಕಾಯಿತಲ್ಲಾ! ಸಾಹೇಬರು ಹೇಳುವಂತೆ ತಿಂಗಳಗಟ್ಲೆಯಿಂದ ಮೆಂಬರರು ಕೊಂಚ ಹಣವನ್ನು ಕೂಡಿಸಿ ಈ ಶೇರಿನ ಮೊಬಲಗನ್ನು ೫ ಯಾ ೧೦ ರೂಪಾಯಿಗೆ ವರ್ಧಿಸುವುದು ಯೋಗ್ಯವೆಂದು ನಮಗೂ ಕಾಣುತ್ತದೆ. ದಿನ ಹೋಗುತ್ತಾ ತನ್ನ ದುಡಿತವು ಈ ಫಂಡಿನಲ್ಲಿ ಸೇರಿಕೊಂಡಿದೆ ಎಂದು ಯಾವಾಗ ಮೆಂಬರನ ಮನಸ್ಸಿಗೆ ಹೊಳೆಯಿತೊ ಆಗ ಆ ಸಂಘವು ಇನ್ನೂ ವೃದ್ಧಿಗೆ ಬರುವಂತೆಯೂ ಅದಕ್ಕೆ ಕೇಡು ಬಾರದಂತೆಯೂ ಅವನು ನೋಡಿಕೊಳ್ಳುತ್ತಾನೆ. ಇದಕ್ಕೆ ಬದಲಾಗಿ ಒಬ್ಬ ಮೆಂಬರನ್ನು ೨ ಆಣೆ ಯಾ ೪ ಆಣೆಯ ಬಂದು ಶೇರನ್ನು ಕೊಂಡುಕೊಂಡಿದ್ದರೆ ಅಂಥ ಫಂಡಿನ ಕಾರ್ಯನಿರ್ವಾಹವು ಹೇಗಾಗುತ್ತದೆಂದು ಅವನು ತಿಳಿಯಲು ಮುಂದರಿಸಲಾರನು. ಯಾವಾಗ ಅವನಿಗೆ ಸಾಲಬೇಕೋ ಆಗ ಹಣ ದೊರೆತರೆ ತನ್ನ ಜವಾಬ್ದಾರಿಯನ್ನು ಚೆನ್ನಾಗಿ ಕಲಿತುಕೊಳ್ಳುವ ಸಂದರ್ಭವೇ ಅವನಿಗೆ ಇರಲಾರದು. ನಿಯಮಿತ ಕಾಲಕ್ಕೆ ಇಂಥವರಿಂದ ರೇವಣಾತಿಗಳನ್ನು ಬರಮಾಡಿದರೆ ಆ ವರೆಗಾದರೂ ಅವರು ಸಂಘದ ಕೆಲಸದ ಕಡೆಗೆ ಕಣ್ಣಿಡಲಿಕ್ಕಿಲ್ಲವೇ ಎಂದು ಕೆಲವರು ವಾದಿಸಬಹುದು. ಅಂಥವರು ತಮ್ಮ ರೇವಣಾತಿಗಳನ್ನು ಹಿಂದಕ್ಕೆ ಪಡಕೊಂಡ ನಂತರ ತಮ್ಮ ಹಣ ಬಂದೇ ಬಂದು ರೂಪಾಯಿ ಫಂಡಿನಲ್ಲಿದೆ, ಅದು ಹೋದರೂ ಹೇರಳ ನಷ್ಟವಾಗಲಾರದು ಎಂದು ತೀರ ದು ಅಶ್ರದ್ಧೆ ತೋರಿಸಬಹುದು. ಆದುದರಿಂದ ಸಾಹೇಬರ ಈ ಸೂಚನೆಯನ್ನು ಸಹಕಾರ ಸಂಘಗಳು ಆಲೋಚನೆಗೆ ತೆಗೆದುಕೊಳ್ಳಬಹುದು.

ಸಂಘಗಳು ಬೇಂಕಿನ ಕಡೆಗೂ, ಮೆಂಬರುಗಳು ಸಂಘದ ಕಡೆಗೂ ತವಗಿರುವ ಸಾಲದ ಹೊರೆಯನ್ನು ತಗ್ಗಿಸಲಿಕ್ಕೆ ಪ್ರಯತ್ನಿಸಲಿಲ್ಲವೆಂದು ಸಾಹೇಬರು ವಿಷಾದಿಸುತ್ತಾರೆ ಇದು ಎಲ್ಲೆಲ್ಲಿಯೂ ಹಬ್ಬಿದ ಕೊರತೆಯೆಂದು ಕಂಡು ಬರುತ್ತದೆ. ಇದರ ಹುಟ್ಟಡಗಿಸುವುದಕ್ಕೆ ಈಗೀಗಲೇ ಪ್ರಯತ್ನಿಸದಿದ್ದರೆ ಮುಂದೆ ಸುಲಭಸಾಧ್ಯವಾಗಲಾರದು

ಸ್ಥಳೀಯ ಉಪಯೋಗಕ್ಕೆ ಸರಕಾರದವರು ವಿಂಗಡಿಸುವ ಹಣವನ್ನು ಆ ಕೆಲಸಕ್ಕೆ ವಿನಿಯೋಗಿಸುವ ಕೆಲಸವು ಈ ಸಂಘಗಳಿಗೆ ಕೊಡಲ್ಪಡಬಹುದೆಂದು ಸದಯುಲ್ಲಿ ಒಂದು ಠರಾವು ಚರ್ಚೆಗೆ ಬಂದಿತ್ತೆಂದು ತಿಳಿಯಬರುತ್ತದೆ ಈ ವಿಷಯವಾಗಿ ಸಾಹೇಬರು ಹೇಳಿದ ಮಾತನ್ನು ಸಂಘಗಳು ಶಿರಸಾವಹಿಸಬೇಕು ಎಂದು ನಾವು ಹಿಂತಿತವಾಗಿ ಹೇಳುವೆವು ಸಹಕಾರವನ್ನು ಪಸರಿಸುವುದೂ ಸಂಘಗಳಲ್ಲಿ ಜನರಲ್ಲಿ ಪ್ರೇಮ, ನಂಬಿಕೆ, ಉತ್ಸಾಹ ಇದನ್ನು ಹುಟ್ಟಿಸುವ ಕೆಲಸವೇ ಅಗಾಧವಿರುವಾಗ, ಮತ್ತು ಇದನ್ನು ನಿರ್ವಹಿಸಲಿಕ್ಕೆ ಉದ್ಯುಕ್ತರಾದವರ ಖಾಸಗಿ ಜೀವನೋಪಾಯದ ವೃತ್ತಿಯಿಂದ ಸಿಕ್ಕುವ ವಿರಾಮವು ಕೊಂಚವೇ ಇರುವಾಗ ಸಿಕ್ಕಿದ ಒಂದಿಷ್ಟು ಸಮಯವನ್ನು ಹಲವು ಕಡೆಗಳಿಗೆ ಸೆಳೆದರೆ ಕಾರ್ಯ ಕೆಟ್ಟುಹೋದೀತೆಂದು ಸಾಹೇಬರು ಹೇಳುವುದು ವಾಸ್ತವವಾದ್ದೆ

'ಒಡಿಟ್ ಫೀಸು' ಸಂಘಗಳು ತೆರಬೇಕೆಂಬುದನ್ನು ಆಕ್ಷೇಪಿಸಿ ಒಂದು ಠರಾವು ಸಭೆಯ ಮುಂದೆ ಬಂದಿತ್ತು ಇದನ್ನು ಹಲವು ಕಡೆಗಳಲ್ಲಿ ಇದೇ ರೀತಿಯಾಗಿ ಆಕ್ಷೇಪಿಸಿದಂತೆ ಕಾಣುತ್ತದೆ ಇದರಿಂದ ಸರಕಾರದ ಖರ್ಚಿನಲ್ಲಿ ಒಂದಿಷ್ಟು ವಜಾ ಆಗುತ್ತದೆಂಬ ಉದ್ದೇಶದಿಂದ ಈ ಏರ್ಪಾಡನ್ನು ಜಾರಿಗೆ ತಂದಿರುವುದಾಗಿ ನಾವು ಒಪ್ಪಲಾರೆವು ಏತಕ್ಕೆಂದರೆ ಈಗಮಟ್ಟಿಗೆ ಇದರಿಂದ ಸಂಗ್ರಹವಾಗುವ ಹಣವು ಕೊಂಚವೇ ಇದನ್ನು ಆಕ್ಷೇಪಿಸುವವರು ತಮ್ಮ ತಮ್ಮ ಲೆಕ್ಕಗಳನ್ನು ಸಾಧ್ಯವಿದ್ದ ರೀತಿಯಲ್ಲಿ ತಾವೇ ತನಿಖೆ ಮಾಡುವುದಕ್ಕೆ ಇದೊಂದು ಉಪಾಯವೆಂದು ನಮ್ಮ ಭಾವನೆ ಆದರೂ ಸಂಘಗಳ ಬಾಲ್ಯಾವಸ್ಥೆಯಲ್ಲಿ ಇದನ್ನು ಜಾರಿಗೆ ತರುವುದಕ್ಕಿಂತ ಕೆಲವು ವರ್ಷ ಮುಂದರಿಸಿದ ಬಹುದಾಗಿ ನಮ್ಮ ಕೋರಿಕೆ

~~~~~~

ಕೇಸರರಿಗೂ ಯುವರಾಜರಿಗೂ ನಡೆದ ಕಲಹ

ಜರ್ಮನಿಯು ಪ್ಯಾರಿಸ್ ಪಟ್ಟಣದ ಮೇಲೆ ದಂಡೆತ್ತಿ ಹೊರಟಾಗ, ಆ ಸೈನ್ಯ ಸಮೂಹಗಳಲ್ಲೊಂದಕ್ಕೆ ಜರ್ಮನಿಯ ಯುವರಾಜರವರು ಸೇನಾಧಿಪತಿಯಾಗಿದ್ದರು ಇವರು ಭಾರತ ಯುದ್ಧದ ರಣಶೂರನಾದ ಅಭಿಮನ್ಯುವಿನಂತೆ ಪೌರುಷ ಪ್ರತಾಪಗಳನ್ನು ವ್ಯಕ್ತಗೊಳಿಸುತ್ತಿರುವರೆಂದು ಪ್ರತ್ಯಹವೂ ವರ್ತಮಾನಗಳು ಧಾರಾಸಾರಕವಾಗಿ ಬರುತ್ತಿದ್ದುವು ಆದರೆ ಈಚೆಗೆ ಆ ಯುವರಾಜರವರ ನಾಮನಿರ್ದೇಶವು ಕೂಡ ಪ್ರಕಟವಾಗದಿರುವುದರಿಂದ, 'ಅವರು ಎಲ್ಲಿರುವರು? ಏನು ಮಾಡುತ್ತಿರುವರು?' ಎಂಬದಾಗಿ ಜನರು ತರ್ಕವಿತರ್ಕಗಳನ್ನು ಮಾಡಲುಪಕ್ರಮಿಸಿದರು

ಈ ಯುವರಾಜರವರು ಯುದ್ಧದಲ್ಲಿ ಕೊಲ್ಲಲ್ಪಟ್ಟರೆಂಬ ವಾರ್ತೆಯು ಪ್ಯಾರಿಸ್ ಮತ್ತು ಜಿನೋವಾ ಪಟ್ಟಣಗಳಲ್ಲಿ ಪ್ರಕಟಿಸಲ್ಪಟ್ಟಿತ್ತು ಆದರೆ ಇದು ಸುಳ್ಳು ಸಮಾಚಾರವೆಂದು ತಿಳಿಯಬಂದಿತು ಆದರೂ ಇವರ ಸಾಹಸಕಾರ್ಯಗಳ ಸಮಾಚಾರವು ಬಾರದಿರುವುದಕ್ಕೆ ಕಾರಣವೇನೆಂದು ಜನಗಳಲ್ಲಿ ಅನುಮಾನವು ಹುಟ್ಟಿ, ಹಲವರು ಹಲವು ತೆರನಾಗಿ ಮಾತನಾಡಿಕೊಳ್ಳುತ್ತಿದ್ದರು ಆಗ ಲಂಡನ್ ಪಟ್ಟಣದ 'ಡೈಲಿ ಎಕ್ಸ್‌ಪ್ರೆಸ್' ಎಂಬ ದೈನಿಕ ಪತ್ರಿಕೆಯು ಈ ವರ್ತಮಾನಗಳ ನಿಜಾಂಶವನ್ನು ಕಂಡುಹಿಡಿಯಲು ಪ್ರಯತ್ನಿಸಿ ನಿಜವಾಗಿ ನಡೆದಿರುವ ಸಂಗತಿಯೊಂದನ್ನು ಪ್ರಕಟಿಸಿತು ಯುವರಾಜರವರು ತಮ್ಮ ತಂದೆಯಾದ ಕೇಸರರವರಿಂದ ಅವಮಾನಿತರಾದ ಕಾರಣ ಈಗ ಅಂತಃಪುರದಲ್ಲಿ ನಿರ್ಲಕ್ಷಿತರಾಗಿ ಯಾವ ಕೆಲಸಕ್ಕೂ ಕೈಹಾಕದೆ ಕುಳಿತಿರುವರೆಂದು ತಿಳಿದುಬಂದಿದೆ

ರಣರಂಗದಲ್ಲಿ ಯಾವ ಯಾವ ಸಮಯದಲ್ಲಿ ಅಭಿಯೋಗ ನಡೆಸಿದರೆ ಅನುಕೂಲವೆಂಬ ವಿಚಾರದಲ್ಲಿ ಜರ್ಮನ್ ಜನರಲ್‌ರಾದ ಫಾಲ್ಕನ್‌ಹ್ಯಾನ್‌ರಿಗೂ, ಯುವರಾಜರವರಿಗೂ ಭಿನ್ನಾಭಿಪ್ರಾಯಗಳು ಹುಟ್ಟಿದವು ಆದಕಾರಣ ಯುವರಾಜರವರು ಅಭಿಯೋಗ ನಡೆಸಲು ಮಾಡುವ ಆಜ್ಞೆಗಳನ್ನು ರದ್ದುಮಾಡಬೇಕೆಂತಲೂ, ಅವರಿಗೆ ಯುದ್ಧವಿನ್ಯಾಸವೇ ಮೊದಲಾದ ವಿದ್ಯೆಗಳು ತಿಳಿಯದೆಂತಲೂ ಆ ಜನರಲ್‌ರವರು ಕೇಸರರವರಿಗೆ ವಿಜ್ಞಾಪಿಸಿ, ಯುದ್ಧವಿದ್ಯಾನಭಿಜ್ಞನಾದ ಹೊಸ ಸೈನಿಕನಿಗೆ ಕೂಡ ಹೊಳೆಯುವ ತಂತ್ರಗಳು ಯುವರಾಜರವರಿಗೆ ಗೊತ್ತಿಲವೆಂಬುದನು ಕೆಲವು ಸಂದರ್ಭಗಳಲ್ಲಿ ನಿದರ್ಶನಪಡಿಸಿ ತೋರಿಸಿದರು ಆಗ ಕೇಸರರವರು. ಜರ್ಮನ್ ಸಾಮ್ರಾಜ್ಯಕ್ಕೆ ಮುಂದೆ ಸಾರ್ವಭೌಮನಾಗತಕ್ಕ ತಮ್ಮ ಮಗನ ಪರಿಸ್ಥಿತಿಯನ್ನು ಕುರಿತು ಚಿಂತಿಸಿ, ಈ ಯುದ್ಧದಲ್ಲಿ ಪರಾಜಯಹೊಂದಿದರೆ, ಜರ್ಮನ್ ಸಾಮ್ರಾಜ್ಯದ ಸಂಪದಭ್ಯುದಯಗಳೆಲ್ಲವೂ ಸ್ವಪ್ನಪ್ರಾಯವಾಗುವುವೆಂದು ತಿಳಿದು, ಮಗನನ್ನು ಸೈನ್ಯಾಧಿಕಾರದಿಂದ ತೆಗೆದುಹಾಕಲು ಸಿದ್ಧರಾದರು

ಕೇಸರರವರ, ಯುವರಾಜರವರು ಮತ್ತು ಪ್ರಿನ್ಸ್ ವಿಲಿಯಮ್‌ರವರು—ಈ ಮೂರ್ತಿತ್ರಯದ ಗುಪ್ತಸಭೆಯೊಂದು ಮಾರನೆಯ ದಿನ ಸೇರಿತು ಜರ್ಮನ್ ಸೈನಿಕರು ಹೊಂದಿದ ದುರವಸ್ಥೆಗಳಿಗೆಲ್ಲಾ ಯುವರಾಜರವರ ಅವಿಚಾರಗಳೇ ಕಾರಣವೆಂದು ತೀರ್ಮಾನಿಸಲ್ಪಟ್ಟಿತು ಆಗ ಕೇಸರರವರು ಮಗನನ್ನು ಕುರಿತು,—"ನಿನ್ನನ್ನು ಸೈನ್ಯಾಧಿಕಾರದಿಂದ ನಿವೃತ್ತಿಮಾಡಿರುವೆನು" ಎಂದು ಹೇಳಿದರು "ಇದಕ್ಕೆ ಸರಿಯಾದ ಕಾರಣಗಳನ್ನು ತಿಳಿಸಿರಿ" ಎಂದು ಯುವರಾಜರವರು ಕೋಪದಿಂದ ಕೇಳಿದರೂ, ಕೇಸರರವರು ಪ್ರತ್ಯುತ್ತರವನ್ನು ಕೊಡಲಿಲ್ಲ

ಆಗ ಯುವರಾಜರವರು ಪ್ರಚಂಡವಾದ ಕೋಪದಿಂದ ನಿವರ್ಣರಾಗಿ, ಆ ಸಭಾಮಂದಿರದಿಂದ ಎದ್ದು ಹೊರಟು ಹೋದರು ಈ ಸಂಗತಿಗಳೆಲ್ಲವೂ ರಣರಂಗದಲ್ಲಿಯೇ ನಡೆದವು ಯುವರಾಜರವರು ಅಲ್ಲಿಂದ ಬರ್ಲಿನ್ ನಗರಕ್ಕೆ ಹೋಗಿ, ಈಗ ಏಕಾಂತವಾಸಿಗಳಾಗಿರುವರು ಅವರ ವಿಷಯಕವಾದ ವರ್ತಮಾನಗಳು ಬಾರದಿರುವುದಕ್ಕೆ ಮೇಲೆ ಕಂಡ ಸಂಗತಿಗಳೇ ಕಾರಣಗಳಾಗಿವೆ

~~~~~~

ವಿಶ್ವಕರ್ಮ ಮಹಾಜನರ ಪರಿಷದವು.

ಈ ಪ್ರಾಂತ್ಯಗಳಲ್ಲಿ ಸಾಮಾನ್ಯವಾಗಿ ಅಕ್ಕಸಾಲಿಗರು ಅಥವಾ ವಿಶ್ವಕರ್ಮ ಮಹಾ ಜನರೆಂದು ಕರೆಯಲ್ಪಡುವ ಕೈಕಸಬುದಾರರ ಒಂದು ಮಹಾ ಸಭೆಯು ಕುಂಭಕೋಣದಲ್ಲಿ ಈ ತಿಂಗಳ ತಾ ೭ರಲ್ಲಿ ಕೂಡಿತ್ತು ದಕ್ಷಿಣ ಹಿಂದೂಸ್ಥಾನದ ಹಲವು ಜಿಲ್ಲೆಗಳಿಂದ ಈ ಜಾತಿಯವರ ಪ್ರತಿನಿಧಿಗಳು ಈ ಸಭೆಗೆ ಬಂದಿದ್ದರು ರಾ| ಟಿ ಕೆ. ಸುಂದರಾಚಾರಿ ಎಂಬವರ ಅಧ್ಯಕ್ಷತೆಯಲ್ಲಿ ಒಂದು ಸ್ವಾಗತ ಕಮಿಟಿಯು ಏರ್ಪಡಿಸಲ್ಪಟ್ಟಿತ್ತು ಪರಿಷದದ ಅಧ್ಯಕ್ಷರು ಮದ್ರಾಸಿನ ರಾ| ಟಿ ಎಮ್ ಮುಕ್ಕಣ್ಣಾಚಾರಿ ಎಂಬವರಾಗಿದ್ದರು ಈ ಜಾತಿಯವರ ಪರಿಷದದ ಉದ್ದೇಶವು ಇತರ ಜಾತಿಗಳಂತೆಯೇ ಜಾತಿಯ ಅಭಿವೃದ್ಧಿಯಾಗಿದೆ ಶಿಕ್ಷಣ ಮೂಲಕ ಇಂಥಾ ಅಭಿವೃದ್ಧಿಯನ್ನು ಸಾಧಿಸಬೇಕೆಂದು ಇವರ ಅಭಿಮತವಾಗಿದೆ ಸ್ವಾಗತ ಕಮ್ಮಿಟಿಯ ಅಧ್ಯಕ್ಷರು ಜಾತಿಯ ದೀನಸ್ಥಿತಿಯ ಕಾರಣಗಳನ್ನು ಸಂಕ್ಷೇಪವಾಗಿ ಹೇಳಿದರು ಸಭಾ ಅಧ್ಯಕ್ಷರು ಈ ದೀನಸ್ಥಿತಿಯನ್ನು ವಿವರಿಸಿ ಹೇಳಿ ಇದರ ನಿವಾರಣೋಪಾಯಗಳನ್ನು ಸೂಚಿಸಿರುತ್ತಾರೆ ವಿಶ್ವಕರ್ಮ ಮಹಾ ಜನರ ಸಂಖ್ಯೆಯು ಈ ಸಂಸ್ಥಾನದಲ್ಲಿ ೨ ಲಕ್ಷ ೮ ಸಾವಿರವಾಗಿರುತ್ತದೆ ಈ ಸಂಸ್ಥಾನದ ಸರ್ವ ವಿದ್ಯಾಲಯವು ಸ್ಥಾಪಿಸಲ್ಪಟ್ಟು ೫೦ ವರುಷಗಳು ದಾಟಿ ಹೋದರೂ ಇಂಥಾ ವಿದ್ಯಾಸಂಸ್ಥೆಯಿಂದ ವಿಶ್ವಕರ್ಮ ಸಮಾಜದವರು ವಿಶೇಷ ಪ್ರಯೋಜನವನ್ನು ಪಡೆದಿರರು ಬಿ ಎ ಮೊದಲಾದ ಪರೀಕ್ಷೆಯಲ್ಲಿ ಶೇರಿದ ಗ್ರೆಜ್ಯುಯೇಟರು ೧೨, ಬಿ ಎಲ್ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಒಬ್ಬ, ಡಾಕ್ಟರರ ಪರೀಕ್ಷೆಯಲ್ಲಿ ಒಬ್ಬ, ಇಂಜಿನಿಯರಿಂಗ್ ಪರೀಕ್ಷೆಯಲ್ಲಿ ಒಬ್ಬ, ಈ ರೀತಿ ಕೊಲೇಜುಗಳಿಂದ ವಿದ್ಯಾಭ್ಯಾಸವನ್ನು ಪಡೆದವರು ಅತಿ ವಿರಳರಾಗಿರುತ್ತಾರೆ. ಸೆಕೆಂಡರಿ ವಿದ್ಯಾಭ್ಯಾಸದಲ್ಲಿಯ, ಪ್ರೈಮರಿ ವಿದ್ಯಾಭ್ಯಾಸದಲ್ಲಿಯೂ ವಿಶ್ವಕರ್ಮ ಸಮಾಜದವರು ಬಹಳ ಹಿಂದುಳಿದಿರುವರು ವಿಶ್ವಕರ್ಮ ಸಮಾಜದವರ ಸ್ಥಿತಿಯನ್ನು ಸಭಾಧ್ಯಕ್ಷರು ಈ ರೀತಿ ವರ್ಣಿಸಿದ ನಂತರ ಮದ್ರಾಸು ಸರಕಾರದವರ ಕೈಗಾರಿಕೆಗಳ ಮಾಜಿ ಮಾಹಿತಿದಾರರಾದ ಮೆ| ಚೆಟರ್ಟನ್‌ರವರ ಪತ್ರವು ಸಭೆಯಲ್ಲಿ ಓದಲ್ಪಡಲಾಯಿತು ಕುಂಭಕೋಣವು ನಾನಾ ಬಗೆಯ ಲೋಹಸಾಮಗ್ರಿಗಳಿಗೆ ಖ್ಯಾತಿಪಟ್ಟಿದೆ ಈ ಸಾಮುಗ್ರಿಗಳನ್ನು ತಯ್ಯಾರಿಸುವ ವೃತ್ತಿಯನ್ನನುಸರಿಸುವಂಥವರು ವಿಶ್ವಕರ್ಮ ಸಮಾಜದವರಾಗಿರುತ್ತಾರೆ ಈಗಿನ ಕಾಲಕ್ಕೆ ತಕ್ಕಂತೆ ಈ ಕೈಗಾರಿಕೆಯನ್ನು ನವೀನ ಯಂತ್ರ ಸಾಹಿತ್ಯಗಳ ಸಹಾಯದಿಂದ ಬಲಪಡಿಸುವುದು ಅಗತ್ಯ ಈ ಬಗ್ಗೆ ಪ್ರತ್ಯೇಕ ಒಂದು ಕಲಾಶಾಲೆಯನ್ನು ಏರ್ಪಡಿಸಬೇಕು ಆ ಕೈಗಾರಿಕೆಯಲ್ಲಿ ನವೀನ ಶೋಧನೆಗಳಿಂದ ವಿಶೇಷ ಅನುಭವವನ್ನು ಪಡೆದಿರುವ ಪಾಶ್ಚಾತ್ಯ ಪಂಡಿತರೊಬ್ಬರನ್ನು ಈ ಶಾಲಾ ಬೋಧಕರಾಗಿ ನೇಮಿಸಬೇಕು. ಸರಕಾರದವರಿಂದ ಈ ವ್ಯವಸ್ಥೆಗೆ ಬೇಕಾದ ದ್ರವ್ಯಸಹಾಯವನ್ನು ಕೇಳಿಕೊಳ್ಳಬಹುದು ಈ ರೀತಿ ಸೂಚನೆಗಳಿಂದ ಕೂಡಿರುವ ಮೆ| ಚಟರ್ಟನ್ನರವರ ಪತ್ರವನ್ನು ಸಭಿಕರಿಗೆ [illegible] ಗಳನ್ನು ಪ್ರಾರಂಭಿಸಿದರು.

ವಿಶ್ವಕರ್ಮ ಸಮಾಜದವರು ತಮ್ಮ ಪರಿಷದದಲ್ಲಿ ಹಲವು ನಿರ್ಣಯಗಳನ್ನು ಮಾಡಿರುತ್ತಾರೆ. ವಿದ್ಯೆಯಲ್ಲಿ ಈ ಸಮಾಜದವರು ಬಹಳ ಹಿಂದುಳಿದಿರುವುದರಿಂದ ಸೆಕೆಂಡರಿ ಶಾಲೆಗಳಲ್ಲಿಯೂ ಕೋಲೇಜುಗಳಲ್ಲಿಯೂ ಈ ಸಮಾಜದವರ ವಿದ್ಯಾರ್ಥಿಗಳಿಂದ ಶಾಲಾ ಫೀಸು ಅರೆವಾಸಿ ತಕ್ಕೊಂಡು ಇವರಿಗೆ ವಿದ್ಯಾಭ್ಯಾಸವು ಕೊಡಲ್ಪಡಾಗುವಂತೆ ಬೇಕಾದ ವ್ಯವಸ್ಥೆಯನ್ನು ಮಾಡಲು ಸರಕಾರದವರನ್ನು ವಿಜ್ಞಾಪಿಸಿಕೊಳ್ಳಬೇಕೆಂತ ನಿರ್ಣಯಿಸಿರುತ್ತಾರೆ ಈ ಸಂಸ್ಥಾನದ ಪ್ರತಿ ಹಳ್ಳಿಯಲ್ಲಿರುವ ವಿಶ್ವಕರ್ಮ ಸಮಾಜದವರು ತಮ್ಮ ಮಕ್ಕಳನ್ನು ಪ್ರೈಮರಿ ಶಿಕ್ಷಣವನ್ನಾದರೂ ಪಡೆಯುವಗೋಸ್ಕರ ಶಾಲೆಗಳಿಗೆ ತಪ್ಪದೆ ಕಳುಹಿಸಿಕೊಡಬೇಕೆಂಬ ಮತ್ತೊಂದು ನಿರ್ಣಯವು ಪರಿಷದದವರಿಂದ ಮಾಡಲ್ಪಟ್ಟಾಗಿರುತ್ತದೆ ಪ್ರಾಮುಖ್ಯ ಪಟ್ಟಣಗಳಲ್ಲಿ ಬಡ ವಿದ್ಯಾರ್ಥಿಗಳ ಸಹಾಯಾರ್ಥವಾಗಿ ಫಂಡುಗಳನ್ನು ನಿರ್ಮಿಸುವುದು ಕೈಗಾರಿಕೆ ಶಾಲೆಗಳು ಸಂಸ್ಥಾನದ ಆಯಾ ಕಡೆಗಳಲ್ಲಿ ಸ್ಥಾಪಿಸಲ್ಪಡಾಗುವಂತೆ ಸರಕಾರದವರನ್ನು ವಿಜ್ಞಾಪಿಸಿಕೊಳ್ಳುವುದು, ಇಂಥಾ ಕಲಾಶಾಲೆಗಳಲ್ಲಿ ಶಿಕ್ಷಣವನ್ನು ವಿಶ್ವಕರ್ಮ ಸಮಾಜದವರಿಗೆ ಕಡ್ಡಾಯವಾಗಿ ಕೊಡಿಸುವುದು, ಮೊದಲಾದ ವಿಷಯಗಳನ್ನು ಒಳಕೊಂಡಿರುವ ಇನ್ನೂ ಕೆಲವು ನಿರ್ಣಯಗಳು ಪರಿಷದದಲ್ಲಿ ಮಂಜೂರು ಮಾಡಲ್ಪಟ್ಟಿರುವವು ವಿಶ್ವಕರ್ಮ ಸಮಾಜದವರ ಹೆಸರುಗಳಲ್ಲಿರುವ ಆಚಾರಿ ಎಂಬ ಶಬ್ದವನ್ನು ಆಸಾರ್ ಎಂತ ಮಾಡಿದ್ದು ತಪ್ಪೆಂತಲೂ ಇದನ್ನು ಮೊದಲಿದ್ದಂತೆಯೇ ಇರಗೊಡಬೇಕೆಂತಲೂ ಪರಿಷದದವರು ಮದ್ರಾಸು ಸರಕಾರದವರನ್ನು ತಂತೀ ಮೂಲಕ ವಿಜ್ಞಾಪಿಸಿಕೊಂಡಿರುವರು

ಶಿಕ್ಷಣ ಮೂಲಕ ಸಮಾಜದ ಅಭಿವೃದ್ಧಿಯನ್ನು ಸರ್ವರೂ ಬಯಸುವುದು ಕರ್ತವ್ಯವಾಗಿದೆ ಆದರೆ ಬಿ ಎ ಮತ್ತು ಎಮ್ ಎ ಪಾಸಾದವರು ತಮ್ಮ ಸಮಾಜಗಳಲ್ಲಿ ಎಷ್ಟಿರುವರೆಂಬ ಗಣನೆ ಮೇಲೆ ಸಮಾಜದ ಶಿಕ್ಷಣ ಬಲವನ್ನು ನಿರ್ಣಯಿಸಿಕೊಂಡು ಬಿ. ಎ. ಎಮ್. ಎಗಳ ಸಂಖ್ಯೆಯನ್ನು ಹೆಚ್ಚಿಸುವ ಸಾಮಾನ್ಯ ಸಾಧನೆಯನ್ನು ಸರ್ವರೂ ಸಮಾಜದ ಮುಖ್ಯ ಕೊರತೆಗಳನ್ನು ಲಕ್ಷ್ಯಕ್ಕೆ ತಂದುಕೊಳ್ಳದೆ ಅವಲಂಬಿಸುವುದು ಉಚಿತವಲ್ಲ ಯಾಕೆಂದರೆ ಜಾಣನಾದ ಒಡಿಗೆಯವನು ದಿನ ಒಂದಕ್ಕೆ ರೂ. ೨ನ್ನು ಪ್ರಕೃತ ಸಂಪಾದಿಸುವಾಗ ಸರಕಾರದ ಆಫೀಸಿನ ಕೆಲಸಗಳಲ್ಲದೆ ಮತ್ತಾವ ಕೆಲಸವನ್ನಾದರೂ ಮಾಡಲರಿಯದ ಸಾಮಾನ್ಯ ಬಿ ಎ ಪಾಸಾದವನು ದಿನ ಒಂದಕ್ಕೆ ಆಣೆ ೮ನ್ನು ದುಡಿಯುವುದು ಕಷ್ಟಸಾಧ್ಯವಾಗಿ ಬಂದಿದೆ ಆದ್ದರಿಂದ ಆಯಾ ಸಮಾಜಕ್ಕೆ ತಕ್ಕಂಥಾ ಶಿಕ್ಷಣವು ಯಾವುದೆಂದು ಪರ್ಯಾಲೋಚಿಸಿಕೊಂಡು ಶಿಕ್ಷಣ ಪ್ರಸರಣೆಯ ಪ್ರಯತ್ನಗಳನ್ನು ಕೈಕೊಳ್ಳುವುದು ಉಚಿತವಾಗಿರುವುದು

~~~~~

ಪತ್ರವ್ಯವಹಾರ.

~~~~~

ಪತ್ರಾಧಿಪರೇ,

ಏಕೀ ಬೇಕಿ' ನ್ಯಾಯದ ತೀರ್ಮಾನವು ಕಾಸರಗೋಡಿನಲ್ಲಿ ಆದದ್ದನ್ನು ನೋಡಿ ಬಹಳ ಆಶ್ಚರ್ಯಪಡುತ್ತೇನೆ ಇನ್ನೊಂದು ಆಶ್ಚರ್ಯವೇನಂದರೆ — ಕೆ. ಪಿ ಕಾರರ ಕಡಮೆ ೧೦ ಆದ ಸಮಾರಾಧನೆ ಕಾಲದಲ್ಲಿಯೇ ಈ ರೀತಿ ತೀರ್ಮಾನವಾದಂಥಾದ್ದು ಹ್ಯಾಗೂ ಇತರ ಊರುಗಳಲ್ಲಿ ಒಂಗ್ಲೆಕಾರರಿಗೆ ಏನೂ ಅಭ್ಯಂತರವಿಲ್ಲದೆ ಸಹಪಂಕ್ತಿ ಭೋಜನ ಇತ್ಯಾದಿಗಳ ಸತ್ಕಾರಗಳು ನಡಿಯುತ್ತಿರುವಾಗ ಮುಲ್ಕಿಯವರು ಮಾತ್ರ ಈ ನ್ಯಾಯವನ್ನು ಎತ್ತಿ ಹಿಡಿದು ಹಗಲು ರಾತ್ರೆ ಕೋರ್ಟು ಕಚೇರಿಗಳಲ್ಲಿಯೂ, ವಕೀಲರ ಮನೆಗಳಲ್ಲಿಯೂ ತಲೆಬಿಟ್ಟು ತಿರುಗುವುದು ಮತ್ತೊಂದು ದೊಡ್ಡ ಆಶ್ಚರ್ಯವಾಗಿದೆ ಆದರೆ ಇಂಥಾ ಆಶ್ಚರ್ಯಗಳಲ್ಲಿ ಒಂದು ಸಮಾಧಾನವಿದೆ ಮೊದಲಿನ ಅಂದರೆ ಸುಮಾರು ೨೦ ಯಾ ೩೦ ವರ್ಷಗಳ ಹಿಂದೆ ಮಂಗಳೂರಲ್ಲಿ ಬೆಳದ ಜಾತಿನ್ಯಾಯವು ಮಂಗಳೂರಿನಿಂದ ಇತರ ಕೆಲವು ಊರುಗಳಿಗೂ ಹರಡಿಕೊಂಡಿತ್ತು. ಈ ಸರ್ತಿ ಇದನ್ನು ಮುಲ್ಕಿಯಲ್ಲಿ ಮಾತ್ರ ಇರಗೊಡಿಸಿದ್ದು ಬಹಳ ಚಾತುರ್ಯದ ಕೆಲಸ. ಈ ಬಗ್ಗೆ ಮಂಗಳೂರಿನ ಮುಂದಾಳುಗಳಿಗೂ ಮುಖ್ಯವಾಗಿ ಈ ನ್ಯಾಯದಲ್ಲಿ ತಲೆ ಹಾಕಿದ ವಕೀಲರಿಗೂ ನಾವು ಬಹಳ ಕೃತಜ್ಞರಾಗಿರಬೇಕು. ನ್ಯಾಯವು ಹುಟ್ಟಿದ್ದಲ್ಲಿ ಅಡಗಿಸುವ ಸಾಮರ್ಥ್ಯವು ಇಲ್ಲದೆ ಹೋದರೂ ಇತರ ಊರುಗಳಲ್ಲಿ, ಇದು ಹಬ್ಬದೆ ಇದ್ದಲ್ಲಿಯೇ ಬೆಳೆಯಲಿಕ್ಕೆ ಬಿಡುವಷ್ಟು ಶಿಕ್ಷಣವು ಮಾತ್ರ ನಮ್ಮ ಜಾತಿಯವರಲ್ಲಿ ಪ್ರಾಪ್ತವಾದದ್ದನ್ನು ನೋಡಿ ಯಾರೂ ತೃಪ್ತಿಪಡದೆ ಇರಲಾರರು ಆಗಲಿ, ನಾಗರೀಕತೆಯ ಪುರದ್ವಾರದ ಸೋಪಾನ ಒಂದನ್ನು ಹತ್ತಿಬಿಟ್ಟೆವು.

"ಅಡಿಗೆ ತೀರಿಹೋದರೂ- ಮುಲ್ಕಿಯಲ್ಲಿ ನಿರರ್ಥಕವಾಗಿ ಉರಿಯುತ್ತಿರುವ ಬೆಂಕಿಯನ್ನು ನೋಡಿ ಮನಕರಗುತ್ತಿರುವುದೆಂತ" ಕಾಸರಗೋಡಿನ "ವಿರಾಮ"ರು ಬರೆದಿರುವರು ಕಾಸರಗೋಡಿನ "ವಿರಾಮ"ರವರ ಈ ಸಹಸಂತಾಪಕ್ಕೋಸ್ಕರ ಈ ಗ್ರಹಸ್ಥರು ಮುಲ್ಕಿಯವರ ವಂದನೆಗಳಿಗೆ ಪಾತ್ರರಾಗಿರುತ್ತಾರೆ. "ವಿರಾಮ"- ಮಹಾಶಯರು ಮುಲ್ಕಿಯವರ ಒಗ್ಗೆ ಒಂದು ಕೆಲಸವನ್ನು ವಹಿಸಿಕೊಳ್ಳುತ್ತಿದ್ದರೆ ಬಹಳ ಉಪಕಾರವಾಗುತ್ತಿತ್ತು ಕಾಸರಗೋಡಿನಲ್ಲಿ ಕೆ ಪಿ ಕಾರರ ಸಮಾರಾಧನೆ ಕಾಲದಲ್ಲಿ ಈ ನ್ಯಾಯ ತೀರ್ಮಾನವು ಹುಟ್ಟಿದ್ದೆಂತ ತಿಳಿದುಬರುತ್ತದೆ ಈ ಕೆ. ಪಿ ಕಾರರ ಮೂಲಕ ಮುಲ್ಕಿಯಲ್ಲಿ ಉರಿಯುತ್ತಿರುವ ಬೆಂಕಿಯನ್ನು ನೊಂದಿಸುವಂತೆ ಮಾಡಿದರೆ ವಿರಾಮರಾಯರ ಸಂತಾಪವು ಸಾರ್ಥಕವಾಗುವದು

ಮುಲ್ಕಿ, ತಾ 26 – 4 – 1915 ಬೆಂದು ಬೆಂಡಾದವ.

~~~~~

ಅಯ್ಯಾ,

ಸುರತ್‌ಕಲ್ಲು ಎಂಬ ನಮ್ಮ ಚಿಕ್ಕದೊಂದು ಗ್ರಾಮದಲ್ಲಿ ನೆರೆಯ ಇತರ ಗ್ರಾಮಗಳ ಮತ್ತು ಈ ಗ್ರಾಮದ ಉಪಯೋಗದ ಸಲುವಾಗಿ, ಇಲ್ಲಿಯ ಶಾಲಾ ಮುಖ್ಯೋಪಾಧ್ಯಾಯರಾದ ಮ| ರಾ| ಎಚ್ ವೆಂಕಟರಮಣಯ್ಯನವರಿಂದ ಅನ್ಯಹಲವರ ಸಹಾಯದೊಡನೆ ಹಿಂದೂ ಪಠನ ಸಮಾಜ'ವೆಂಬ ಹೆಸರಿಂದ ಒಂದು ವಾಚಕಾಲಯವು ಈಗ ಸುಮಾರು ಎರಡು ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟಿರುವದು ಈ ಸಮಾಜದಲ್ಲಿ ಜನರ ಜ್ಞಾನಾಭಿವೃದ್ಧಿಗೋಸ್ಕರ ಪ್ರತಿ ಭಾನುವಾರವೂ ಮಧ್ಯಾಹ್ನ ಸಂಘದ ಮೆಂಬರ್ ಪೋಷಕರಿಂದ ಸಭೆ ನೆರೆದು, ನೆರೆದ ಆ ಸಭಿಕರಲ್ಲಿ ಬುದ್ಧಿವಂತರಾರೂ ಉಪನ್ಯಾಸಗಳನ್ನು ಕೊಟ್ಟು ಚರ್ಚಿಸುವುದು, ಬಕ್ತಿಪ್ರದವಾದ ಗ್ರಂಥಗಳನ್ನು ಓದುವುದು, ಇತ್ಯಾದಿ ವಿಷಯಗಳ ಏರ್ಪಾಡಾಗಿತ್ತು ಪ್ರಥಮದಲ್ಲಿ ಕೆಲವು ಸಭೆಗಳು ಜರುಗಿದುವು ತರುವಾಯ ಸಭೆಗೆ ಆದೇನೋ ಒಬ್ಬೊಬ್ಬರೇ ವಿಮುಖರಾಗಿ ಸುಮಾರು ಮುಕ್ಕಾಲು ಪಾಲು ಜನರೇ ಬಾರದೆ ಇರುವರು ಆದರೆ ಅಲ್ಪಸ್ವಲ್ಪವಾದರೂ ಬಂದವರಲ್ಲಿ ಸಭೆಯು ನೆರೆಯುತ್ತಿತ್ತು

ಪ್ರಕೃತ ಕೆಲವು ತಿಂಗಳಿಂದೀಚೆಗೆ ಸಭೆಯು ಜನಶೂನ್ಯವಾಗಲು ಸಮಾಪಿಸಿರುತ್ತದೆ ಅಂದರೆ ಸಂಘದ ಪ್ರೋತ್ಸಾಹಕರೂ, ವಿವೇಕಿಗಳೂ ಆದ ಕೆಲವು ಮಂದಿ ಮಾತ್ರ ಇತ್ತಕಡೆ ಪೂಜ್ಯಬುದ್ಧಿಯಿಂದ ದೃಷ್ಟಿ ಇಡುತ್ತಾ ಇದ್ದಾರೆ ಸಭಿಕರ ಆರಂಭದ ಉಲ್ಲಾಸವು ಎತ್ತಲೋ ಮಾಯವಾಗಿ, ಸಭಿಕರ ಸಂಖ್ಯೆಯು ಕ್ಷಯಿಸಿ ಅತ್ಯಲ್ಪವಾಗುತ್ತಿರುವುದನ್ನು ಸಂಘದ ಸ್ಥಾಪಕರೂ, ಸೆಕ್ರೆಟರಿಗಳೂ, ಆದ ಮ| ರಾ| ವೆಂಕಟರಮಣಯ್ಯನವರು ನೋಡಿ, ಮೆಂಬರರ ಮತ್ತು ಗ್ರಾಮ ನಿವಾಸಿಗಳ ಬಳಿಗೆ ಪದೇ ಪದೇ ಹೋಗಿ ಸದ್ಬೋಧೆಗಳನ್ನು ಕೊಟ್ಟು ಪೇಚಾಡಿದುದೂ ಆಯಿತು! ಆದರೇನು? ಬರಟು ಕಲ್ಲಿನ ಮೇಲೆ ಜಲಸೇಚನೆ ಮಾಡಿದಂತೆ ಫಲಿಸದೆ ಹೋದುದೂ ಆಯಿತು! ಅಥವಾ ದಯೆಗೈದು ಕೆಲವರು ಒಂದರೂ ಒಂದೆರಡು ಸಭೆಗೆ ಚಿತ್ತೈಸುವರೇ ವಿನಹ ಬಳಿಕ ಅತ್ತ ಸ್ಮರಿಸರು ಅಹಾ! ಈ ಮಹತ್ವದ ಕಾರ್ಯದಿಂದ ಸುಲಭವಾದ ಮೂರಾಣೆಯ ಇಸ್ಪೀಟು ಹಾಳೆಗಳನ್ನು ಹಿಡಿದುಕೊಂಡು ನೇಮಕವಾದೊಂದು ಸ್ಥಳದಲ್ಲಿ ಕುಳಿತವನೆದುರು ಅದೆಷ್ಟು ಮಂದಿ ನಮ್ಮವರು ಅತ್ಯಂತ ಕುತೂಹಲಿಗಳಾಗಿ ಸುತ್ತುಮುತ್ತುವರು, ನಮಗೆಂದೂ ವಿರಾಮವಿಲ್ಲೆಂದು ಎಡೆಬಿಡದೊದರುತ್ತಿರುವ ಮಹಾಶಯರೆಷ್ಟುಮಂದಿ ಅಹರ್ನಿಶಿಯೂ ಅನರ್ಥಕಾರಿಯಾದ ಹಾಳೆಗಳ ಸಮ್ಮುಖದಲ್ಲಿ ಬಿದ್ದು ಒದ್ದಾಡುತ್ತಿರುವರು, ಹಾ! ಅಸ್ವಾರ್ಥತೆಯಿಂದ "ಜನರ ಏಳಿಗೆಗಾಗಿ ಪೇಚಾಡುತ್ತಿರುವ ಸಂಘಕ್ಕೆ, ಕೇವಲ ಕೆಲಸವಿಲ್ಲದಿರುವಾಗಲೂ ಆದರವಿಡದೆ ವ್ಯರ್ಥವಾದ ಕಾರ್ಯದಲ್ಲಿ ಹೊತ್ತು ಕಳೆವವರೆಷ್ಟು ಮಂದಿ? ಅದೂ ಇಲ್ಲದಿರೆ ಮನೆಹಿಡಿದು ತೆಪ್ಪಗಿರುವವರೇ ವಿನಹಾ ಎಂಟು ದಿವಸಕ್ಕೊಮ್ಮೆ ಒಂದು ಬಾರಿ, ಒಂದು ನಿಮಿಷವಾದರೂ ದಯೆಗೈದು ಬಾರರಲ್ಲವೆ! ಅದೇನು? ಕಾಲಿಡಲೂ ಬಾರದೆಂಬ ನಿಯಮವಿದೆಯೆ? ಅಹಾ! "ಹಿಂದೂಗಳ ಸತ್ಕಾರ್ಯಗಳ ಅನಾದರತ್ವವೇ!"

ಸುರತ್‌ಕಲ್ಲು
ತಾ. 26 – 4 – 1915

ಇತಿ ಸಂಘದ ಮೆಂಬರ.
~~~~~

ಯುದ್ಧ ಸಮಾಚಾರ.

ತಾ. ೨೦ನೇ ಏಪ್ರಿಲ್.

ಬ್ರಿಟಿಷರ ಸೇನಿಕರನ್ನೂ, ಆಹಾರ ಸಾಮಗ್ರಿಗಳನ್ನೂ ಹೇರಿಕೊಂಡು ಡರ್ಡನೆಲ್ಸಿಗೆ ಹೋಗುತ್ತಿದ್ದ 'ಮನಿಟೋ' ಎಂಬ ನಾವೆಯನ್ನು ಎಗಿಯನ್ ಸಮುದ್ರದಲ್ಲಿ ತುರ್ಕರ ಡಿಸ್ಟ್ರೋಯರ್ ನಾವೆಯು ಹಿಂದಟ್ಟಿ ಅದರ ಮೇಲ್ಬಾಯಿತು. ಟೊರ್ಪಿಡೋ ದೋಣಿಗಳು ಇದರ ಮೇಲೆ ಮೂರಾವರ್ತಿ ಗುಂಡು ಹಾರಿಸಿದವು ಅದು ತಪ್ಪಿಹೋಯಿತು. ಆದರೆ "ಮಿನರ್ವ" ಎಂಬ ಮಿತ್ರರ ಕ್ರೂಜರ್ ನಾವೆಯು ಇದನ್ನು ಹಿಂದಟ್ಟಿದ್ದರಿಂದ ತುರ್ಕರ ಡಿಸ್ಟ್ರೋಯರ್ ನಾವೆಯು ದಡೆಗೆ ಹರಿಸೇರಿತು ನಾವಿಕರನ್ನು ಬ್ರಿಟಿಷರು ಸೆರೆಹಿಡಿದರು.

ಶಂಪೇನ ಮತ್ತು ಆರ್ಗೋನ್ನೆಯಲ್ಲಿ ತೋಪು ಕಾಳಗ ನಡೆಯುತ್ತಿದೆ. ಮಿತ್ರರು ಮ್ಯೂಸ್ ಮತ್ತು ಮೊಸಲ್ಲಿಯ ಮಧ್ಯೆ ಸ್ವಲ್ಪ ಮುಂದರಿದಿರುವರು. ಇತರ ಕೆಲವು ಗ್ರಾಮಗಳಲ್ಲಿಯೂ ಮಿತ್ರರು ಮೇಲ್ಬಾಯಿದ ಜರ್ಮನರನ್ನು ಹಿಂದಟ್ಟಿರುತ್ತಾರೆ

ಅರ್ರಾಸ್, ಬ್ಯಸ್, ಐನೆಯಲ್ಲಿ ಕಠಿಣ ತೋಪು ಕಾಳಗ ನಡೆದಿರುವದು. ಬೆಲ್ಜಿಯಮರ ವಿಮಾನಗಾಮಿಗಳು ಜರ್ಮನರ ಗುಂಡು ಮದ್ದುಗಳನ್ನು ಇಡುವ ಸ್ಥಳಕ್ಕೆ ಬೊಂಬು ಬಿಸಾಡಿರುವರು.

ಅಮೇರಿಕಯ ಸ್ಯುನೈಟೆಡ್ ಸ್ಟೇಟಿನ ಪ್ರೆಸಿಡೆಂಟರಾದ ವಿಲ್ಸನರವರು ಅಮೇರಿಕದ ತಟಸ್ಥಭಾವವನ್ನು ಕುರಿತು ಈ ರೀತಿ ಹೇಳಿರುವರು. ಕಷ್ಟತೊಂದರೆಗಳನ್ನು ತಪ್ಪಿಸುವ ಉದ್ದೇಶದಿಂದ ಅಮೇರಿಕದವರು ತಟಸ್ಥಭಾವವನ್ನು ತಾಳಿದ್ದಲ್ಲ. ಯುದ್ಧಾಂತ್ಯದಲ್ಲಿ ಮಾಡಲಿಕ್ಕಿರುವ ಮುಖ್ಯ ಕರ್ತವ್ಯವನ್ನು ಮಾಡುವದು ಯುನೈಟೆಡ್ ಸ್ಟೇಟಿನವರ ಹಂಗಾಗಿರುವದು. ಯುನೈಟೆಡ್ ಸ್ಟೇಟಿನವರಿಗೆ ಇತರರ ಪ್ರಾಂತ್ಯದಲ್ಲಿ ಒಂದೇ ಒಂದು ಹೆಜ್ಜೆ ಜಾಗೆಯಾದರೂ ಬೇಡ.

ಶತ್ರುಗಳು ಸ್ಟ್ರೀಯಿ ಎಂಬಲ್ಲಿ ಸ್ವಲ್ಪ ಮುಂದರಿದರು ಆದರೆ ನಂತರ ರುಶ್ಯನರು ಮೇಲ್ಬಾಯಿದು ಶತ್ರುಗಳು ಸ್ವಾಧೀನ ಮಾಡಿಕೊಂಡ ಸ್ಥಳವನ್ನು ಹಿಂದಕ್ಕೆ ಪಡೆಕೊಂಡರು. ರೋಜಾಂತದ ಪೂರ್ವದಲ್ಲಿದ್ದ ಜರ್ಮನರ ಒಂದು ಕಂದಕಕ್ಕೆ ರುಶ್ಯನರು ಸಿಡಿಮದ್ದು ಹಾಕಿ ಅದನ್ನು ಹಾರಿಸಿ, ಆ ನೆಲೆಯನ್ನು ಹಿಡಕೊಂಡು ಸಣೀನು ಕಾಳಗ ಮಾಡಿ ಅನೇಕ ಸೇನಿಕರನ್ನೂ, ಫಿರಂಗಿಗಳನ್ನೂ ಸೆರೆಹಿಡಿದರು

ಕರ್ಪಥೇನಿಯದಲ್ಲಿ ಶತ್ರುಗಳು ಕಠಿಣವಾಗಿ ಎದುರಿಸುತ್ತಿದ್ದಾರೆ. ಶತ್ರುಗಳಲ್ಲಿ ವಿಶೇಷ ನಷ್ಟವಾಗಿರುವದು. ಇಲ್ಲಿ ರುಶ್ಯನರು ಸೆರೆಹಿಡಿದ ಮೊದಲನೇ ಪಂಗಡದಲ್ಲಿ ೫೦೦ ಮಂದಿ ಸೇನಿಕರು ಇದ್ದರು.

ಈಜಿಪ್ಟಿನ ಸುಲ್ತಾನರನ್ನು ಕೊಲ್ಲಲೆತ್ನಿಸಿದ ಮಹಲಲ್ ಎಂಬವನಿಗೆ ಫಾಶಿ ಶಿಕ್ಷೆಯು ವಿಧಿಸೋಣಾಗಿರುವದು.

ಪಾರ್ಶಿಕೊಲ್ಲಿಯ ಪ್ರಾಂತ್ಯದಲ್ಲಿ ಬ್ರಿಟಿಷರಿಗೂ, ತುರ್ಕರಿಗೂ ನಡೆದ ಕದನಗಳಲ್ಲಿ ಬ್ರಿಟಿಷರಲ್ಲಿ ೭೦೦ ಮಂದಿ ಪ್ರಾಣಾಪಾಯ ಹೊಂದಿರುವರು. ತುರ್ಕರಲ್ಲಿ ವಿಶೇಷ ನಷ್ಟ ಉಂಟಾಗಿ ಅವರು ಜೋಬಿರಿನ ೧೯ ಮೈಲು ದೂರಕ್ಕೆ ಹೋಗಿರುವರು. ತಾ ೧೪ರಲ್ಲು ಶೈಬದಲ್ಲಿ ನಡೆದ ಕದನದಲ್ಲಿ ತುರ್ಕ ಸೇನಿಕರಲ್ಲಿ ೩೫೦೦ ಮಂದಿಗಿಂತಲೂ ಹೆಚ್ಚಿಗೆ ಪ್ರಾಣಾಪಾಯ ಹೊಂದಿರುವರೆಂತ ಅಂದಾಜಾಗಿಯದೆ.

ಅನಟೋಲಿಯನ್ ಕರಾವಳಿಯಲ್ಲಿ ತಿರುಗಾಡುತ್ತಿದ್ದ ರುಶ್ಯನರ ಟೊರ್ಪೆಡೋ ದೋಣಿಗಳು ತುರ್ಕರ ಯುದ್ಧ ಸಾಹಿತ್ಯಗಳೂ ಸೇನಿಕರೂ ತುಂಬಿದ ೧೦ ನಾವೆಗಳನ್ನೂ ಮುಣುಗಿಸಿ ಅರ್ಕಾವೆ ಎಂಬಲ್ಲಿಗೆ ಗುಂಡು ಹಾರಿಸಿರುವವು.

ತಾ. ೨೩ನೇ ಏಪ್ರೀಲ್.

ಜರ್ಮನರ ಜಲಾಂತರ್ಗಾಮಿ ನಾವೆಯು ಗ್ರೀಕರ "ಎಲಿಸ್ ಪೊಂತೊಸ್" ನಾವೆಯನ್ನು ಮುಣುಗಿಸಿಬಿಟ್ಟಿದ್ದರಿಂದ ಗ್ರೀಕರು ಜರ್ಮನರ ಮೇಲೆ ಹುರಿದುಂಬಿರುವರು. ಜರ್ಮನರ ಈ ಅಮಾನುಷ ಕೃತ್ಯವನ್ನು ಗ್ರೀಕ ದೇಶದ ಎಲ್ಲಾ ಪತ್ರಿಕೆಗಳು ಖಂಡಿಸುತ್ತಿವೆ. ಈ ವಿಷಯವಾದ ಗ್ರೀಕರ ನಿಜವಾದ ಉತ್ತರವು ಬೇಗನೇ ಜರ್ಮನಿಗೆ ಕಳುಹಿಸಲ್ಪಡುವದು ಎಂತ ಒಂದು ಪತ್ರಿಕೆಯು ಪ್ರಕಟಿಸಿರುವದು.

ಬ್ರಿಟಿಷರ "ಎನ್‍ವೊಯಿ" ಎಂಬ ಟ್ರಾವಲ್ಲರ್ ದೋಣಿಯು ಮುಣುಗಿಸಲ್ಪಟ್ಟಿರುವದು. ನಾವಿಕರು ದೋಣಿ ಬಿಟ್ಟಿಂದನಂತರ ಜರ್ಮನರು ಅದರಿಗೆ ಗುಂಡು ಹಾರಿಸಿದರು.

ಜ್ವಾರ್ಟ್ಸ್‌ಲೆನ್ ಎಂಬಲ್ಲಿ ಬ್ರಿಟಿಷರು ಜರ್ಮನರಿಂದ ಪಡೆಕೊಂಡ ಕಂದಕಗಳ ಮೇಲೆ ಜರ್ಮನರು ಹಲ್ಲಾಮಾಡಿ ೩-೪ ಸಾವಿರ ಸೇನಿಕರನ್ನು ಕಳಕೊಂಡು ಹಿಮ್ಮೆಟ್ಟಿದರು

ಮ್ಯೂಸ್ ಮತ್ತು ಮೊಸಲ್ಲೆಯಲ್ಲಿ ಏಳಾವರ್ತಿ ಹಲ್ಲಾ ಮಾಡಿದ ಜರ್ಮನರು ಹಿಮ್ಮೆಟ್ಟಿದರು. ಮತ್ತೊಂದು ಕಡೆಯಲ್ಲಿ ಜರ್ಮನರ ಒಂದು ಕಂದಕವು ಫ್ರೆಂಚರ ಸ್ವಾಧೀನವಾಗಿರುವದು. ಫ್ರೆಂಚರಿಗೆ ಇಲ್ಲಿ ಸುಮಾರು ೭೦೦ ಯಾರ್ಡ್ ರಣರಂಗವು ದೊರಕಿರುವದು ಫ್ರೆಂಚರ ವಾಯುನಾವೆಗಳು ಜರ್ಮನರ ವಿದ್ಯುಚ್ಛಕ್ತಿಯ ಸ್ಟೇಶನುಗಳಿಗೆ ಬೊಂಬು ಹಾಕಿರುವವು

ಮೈಪ್ರೆಸಿನ ದಕ್ಷಿಣದಲ್ಲಿ ನಡಿಯುತ್ತಿರುವ ಕದನದಲ್ಲಿ ಕೆನಡಾದೇಶದಿಂದ ಕಳುಹಿಸಲ್ಪಟ್ಟ ಸೈನಿಕರು ಸೇರಿರುವರೆಂತಲೂ ಈ ವರೆಗೆ ಈ ಸೇನೆಯಲ್ಲಿ ೩೦೫ ಮಂದಿ ಹತರಾದರೆಂತಲೂ ಕೆನಡಾ ದೇಶಕ್ಕೆ ವಾರ್ತೆ ಹೋಗಿರುವದು.

ರೈನ್ ಪ್ರಾಂತ್ಯದಲ್ಲಿ ಎರಡು ತಾಸುಗಳ ವರೆಗೆ ವಾಯು ನಾವೆಗಳ ಕದನವು ನಡೆದವು ಮೊದಲಾಗಿ ಜರ್ಮನರ ಹಲವು ನಾವೆಗಳು ಮಿತ್ರರ ನಾವೆಗಳ ಮೇಲೆ ಬಿದ್ದುದರಿಂದ ಮಿತ್ರರ ನಾವೆಗಳು ಹಿಮ್ಮೆಟ್ಟಬೇಕಾದರೂ ನಂತರ ಮಿತ್ರನಾವೆಗಳಿಗೆ ಬೆಂಬಲವಾಗಿ ಇತರ ನಾವೆಗಳು ಸೇರಿದ್ದರಿಂದ ಜರ್ಮನರನ್ನು ಹಿಂದಟ್ಟಿಕೊಂಡು ಹೋದರು.

ಆಫ್ರೀಕದ ಕೆಮರೂನಿನಲ್ಲಿ ಜರ್ಮನರಿಗೂ, ಬ್ರಿಟಿಷ ಸೇನಿಕರಿಗೂ ಕಠಿಣ ಕಾಳಗ ನಡೆದು ಜರ್ಮನರು ಕೆಮರೂನಿನ ಮಧ್ಯ ಪ್ರಾಂತ್ಯದಲ್ಲಿರುವ ಪ್ರಸ್ತಭೂಮಿಗಳಿಗೆ ಹೋಗಿರುವರು ಜರ್ಮನ ಸರಕಾರವು ಯೋಂಡೆ ಎಂಬಲ್ಲಿಗೆ ವೈಯಲ್ಪಟ್ಟಿರುವದು. ಬ್ರಿಟಿಷ ಮತ್ತು ಫ್ರೆಂಚ ಸೇನಿಕರು ಹಲವು ಸ್ಥಳಗಳಲ್ಲಿ ಜರ್ಮನರನ್ನು ಕಲೆತು ಜಯಪ್ರದರಾಗಿರುವರು.

ರುಶ್ಯನರ ಒಂದು ಪಟ್ಟಣಕ್ಕೆ ೧೦ ಜರ್ಮನ ವಾಯು ನಾವೆಗಳು ಸುಮಾರು ೧೦೦ ಬೊಂಬುಗಳನ್ನು ಬಿಸಾಡಿರುವವು

ಆಸ್ಟ್ರಿಯದ ಟ್ರಿಸ್ಟೆಯಲ್ಲಿ ಆಹಾರದ ಕೊರತೆ ಬಂದಿರುವದರಿಂದ ಜನರು ದಂಗೆ ಎದ್ದು ಪೋಲಿಸಿನವರಿಗೆ ಕಲ್ಲುಗಳನ್ನು ಬಿಸಾಡಿರುವರು, ಕಿಡಿಕಿಗಳನ್ನು ಒಡೆದುಹಾಕಿರುತ್ತಾರೆ

ಶೈಬದಲ್ಲಿ ಬ್ರಿಟಿಷರು ೫೧೫ ತುರ್ಕ ಸೇನಿಕರನ್ನು ಸೆರೆಹಿಡಿದು ಬಸ್ರಾಕ್ಕೆ ತಂದಿರುವರು ತುರ್ಕರ ಸೇನಿಕರು ನೆಲದಾರಿಗಳಲ್ಲಿಯೂ ನದಿ ದಾರಿಗಳಲ್ಲಿಯೂ ಚೆಲ್ಲಾಪಿಲ್ಲಿಯಾಗಿ ಓಡುತ್ತಿದ್ದಾರೆ. ನದಿಗಳಲ್ಲಿ ತುರ್ಕರು ಅರಬಿಯರ ೩೦-೪೦ ಟನ್ ಭರಾವಣೆಯ ತೆಪ್ಪಗಳಲ್ಲಿ ತಲೆತಪ್ಪಿಸಿಕೊಂಡು ಹೋಗುತ್ತಿದ್ದಾರೆ. ಇಂಥಾ ೧೩ ತೆಪ್ಪಗಳನ್ನು ಬ್ರಿಟಿಷರು ಹಿಡಿದಿರುವರು ಶತ್ರುಗಳು ಈಗ ಬಸ್ರಾಕ್ಕೆ ೫೦ ಮೈಲು ದೂರದಲ್ಲಿಯೂ ನಕಾಲ್ಲಾಕ್ಕೆ ೧೮ ಮೈಲು ದೂರದಲ್ಲಿಯೂ ಇರುವರು ಶೈಬದಲ್ಲಿ ತಾ ೧೩ರಿಂದ ೧೮ರ ವರೆಗೆ ನಡೆದ ಕದನದಲ್ಲಿ ತುರ್ಕರಲ್ಲಿ ೬೦೦೦ ಮಂದಿ ಹತರಾದರು. ಈ ಪೈಕಿ ೩ ಜರ್ಮನ್ ಆಫೀಸರರೂ ಹತರಾಗಿರುವರು ಶತ್ರುಗಳು ಹಿಂದರಿಯುವಾಗ ಈ ಮೊದಲು ತುರ್ಕರೊಡನೆ ಸೇರಿದ್ದ ಅಲ್ಲಿಯ ದೇಶೀಯ ಪಂಗಡಗಳವರು ಮಾರ್ಮಲೆತು ತುರ್ಕ ಸೇನಿಕರ ಮೇಲೆ ಬಿದ್ದರು ಎಂಬ ವಾರ್ತೆ ಬಂದದೆ. ಶತ್ರುಗಳು ೩ ದಿವಸಗಳಲ್ಲಿ ಸುಮಾರು ೭೦ ಮೈಲು ದೂರದ ವರೆಗೆ ಓಡಿರುವರು. ನಕಾಲ್ಲದಲ್ಲಿ ರಣರಂಗಕ್ಕೆ ೧೭ ಮೈಲು ದೂರದಲ್ಲಿ ತುರ್ಕರ ೭ ಗಾಡಿ ಗುಂಡು ಮದ್ದುಗಳನ್ನೂ ಹಾಳುಮಾಡಲ್ಪಟ್ಟ ಮೋಟರ್ ಬಂಡಿಗಳನ್ನೂ ಬ್ರಿಟಿಷ ಅಶ್ವಪಡೆಯವರು ಕಂಡುಕೊಂಡಿರುವರು

ಬಸ್ರಾದಲ್ಲಿರುವ ಬ್ರಿಟಿಷ ಸೇನಿಕರ ಮಹತ್ವವಾದ ಕೆಲಸವನ್ನು ಜೋರ್ಜ ಸಾರ್ವಭೌಮರವರು ಹೊಗಳಿ ಸೇನಾನಾಯಕರಿಗೆ ತಂತಿ ಕಳುಹಿಸಿಕೊಟ್ಟಿರುತ್ತಾರೆ.

ತಾ. ೨೪ನೇ ಏಪ್ರೀಲ್.

ಏಪ್ರೀಲ್ ತಾ. ೩೧ಕ್ಕೆ ಅಂತ್ಯವಾದ ವಾರದಲ್ಲಿ ಜರ್ಮನರಿಂದ ಬ್ರಿಟಿಷರ ಒಂದು ವ್ಯಾಪಾರ ಹಡಗವೂ ಮತ್ತೊಂದು ಯುದ್ಧ ಹಡಗವೂ ಮುಣುಗಿಸಲ್ಪಟ್ಟಿತು. ಬ್ರಿಟಿಷ ಬಂದರಗಳಿಗೆ ಆ ವಾರದಲ್ಲಿ ಹೋಗಿಬಂದ ಹಡಗುಗಳ ಸಂಖ್ಯೆ ೧೫೧೯ ಎಂತ ಪ್ರಕಟವಾಗಿದೆ.

'ನೋರ್ಸಿ'ಯಲ್ಲಿ ಬ್ರಿಟಿಷರ ಒಂದು ಟ್ರವಲರ್ ದೋಣಿಯು ಮುಣುಸಲ್ಪಟ್ಟಿರುವದು. ನಾವಿಕರಲ್ಲಿ ಇಬ್ಬರು ಹತರಾದರು. ಜಲಾಂತರ್ಗಾಮಿ ನಾವೆಯು ದಡಸೇರಿದ ನಾವಿಕರಿಗೂ ಗುಂಡು ಹಾರಿಸಿರುವದು. ನೋರ್ವೆದೇಶದವರ ಫ್ರಿಲಿಮೆಂಟ್ ಎಂಬ ನಾವೆಯನ್ನೂ ಜರ್ಮನರು ಹಿಡಿದಿರುವರು.

ರುಮ್ಯೇನಿಯ ಸರಹದ್ದಿನ ಕಣಿವೆಯಲ್ಲಿ ಮೇಲ್ಬಾಯಿದ ಆಸ್ಟ್ರಿಯರು ಹಿಮ್ಮೆಟ್ಟಿರುವರು. ರುಶ್ಯನರು ಸಣೀನು ಕಾಳಗವಾಡಿ ಶತ್ರುಗಳಲ್ಲಿ ವಿಶೇಷ ನಷ್ಟಪಡಿಸಿರುವರು.

ಕಳೆದ ಎರಡು ದಿವಸಗಳಲ್ಲಿ ಪಾರ್ಶಿಕೊಲ್ಲಿಯಲ್ಲಿ ನಡೆದ ಕದನಗಳಲ್ಲಿ ಬ್ರಿಟಿಷರಲ್ಲಿ ೧೭ ಮಂದಿ ಹತರಾದರು, ೩೭ ಮಂದಿ ಘಾಯುಪಡೆದರು ಎಂತ ಪ್ರಕಟವಾಗಿದೆ. ಕೆಪ್ಟನ್ ಡ್ಮೆಯರ್ ಎಂಬ ಸೇನಾನಾಯಕರು ಮಡಿದರು ಎಂಬ ದುಃಖಕರ ವಾರ್ತೆ ಬಂದಿರುವದು.

ತಾ. ೨೬ನೇ ಏಪ್ರೀಲ್.

ಮಾರ್ಚ ತಾ. ೩೧ರ ವರೆಗೆ ಬ್ರಿಟಿಷ ನೌಕಾವಳಿಯ ಆಫೀಸರರಲ್ಲಿ ೪೫೩ ಮಂದಿ ಪ್ರಾಣಾಪಾಯ ಹೊಂದಿದರು. ಈ ಪೈಕಿ ೩೩೩ ಮಂದಿ ಹತರಾದರು. ಸೇನಿಕರಲ್ಲಿ ೮೧೪೧ ಮಂದಿ ಪ್ರಾಣಾಪಾಯ ಹೊಂದಿ ೪೯೮೧ ಮಂದಿ ಹತರಾದರು ಎಂತ ಮಿ ಆಸ್ಕ್ವಿತರವರು ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿ ಹೇಳಿರುತ್ತಾರೆ.

"ಎಮ್ಡನ್" ಕ್ರೂಜರ್ ನಾವೆಯಿಂದ ಕೊಕೊಸ್ ದ್ವೀಪದಲ್ಲಿ ಇಳಿದು ತಪ್ಪಿಸಿಕೊಂಡ ಜರ್ಮನ ಸೇನಿಕರು ಮಾರ್ಚ ತಾ. ೩೭ರಲ್ಲು ಜೆಡ್ಡದ ದಕ್ಷಿಣದಲ್ಲಿರುವ ಸಿಡ್ ಎಂಬ ಅರಬೀ ಬಂದರದಲ್ಲಿದ್ದು ಮುಂದರಿಸುತ್ತಿರುವಾಗ ಅರಬಿಯರು ಅವರ ಮೇಲೆ ಬಿದ್ದು ಮೂರು ದಿನ ಕಾದಾಡಿ ಹಿಮ್ಮೆಟ್ಟಿದರೆಂತಲೂ ಜರ್ಮನರಲ್ಲಿ ಒಬ್ಬ ಲೆಪ್ಟನೆಂಟನೂ ಇಬ್ಬರು ಸೇನಿಕರೂ ಹತರಾದರು, ೩ ಮಂದಿ ಘಾಯ ಪಡೆದರೆಂತಲೂ ಜರ್ಮನರನ್ನು ಸಾಗಕಳುಹಿಸಿಕೊಡುತ್ತಿದ್ದ ತುರ್ಕ ಸೇನಿಕರಿಗೂ ಗಾಯಗಳಾಗಿವೆಂದೂ ಬೆರ್ಲಿನ್ ನಗರದಿಂದ ತಂತೀ ಬಂದಿರುವದು.

ಸ್ವೀಡನಿಗೆ ಸೇರಿದ 'ರೂಥ್' ಎಂಬ ನಾವೆಯನ್ನು ಜರ್ಮನರ ಜಲಾಂತರ್ಗಾಮಿ ನಾವೆಯು ಮುಣುಗಿಸಿರುವದು. ನೋರ್ವೆಯವರ ಮತ್ತು ಡೆನ್ಮಾರ್ಕಿನ ಎರಡು ಹಡಗಗಳೂ ಜರ್ಮನರಿಂದ ಹಿಡಿಯಲ್ಪಟ್ಟಿರುವವು.

ಜರ್ಮನರು ಯ್ಪ್ರೆಸಿನ ಉತ್ತರದಲ್ಲಿ ವಿಷಕರವಾದ ಹೊಸ ವಿಧಾನದ ಗ್ಯಾಸನ್ನು ಬಿಸಾಡಿ ಮಿತ್ರಸೇನಿಕರಲ್ಲಿ ಆಶ್ಚರ್ಯವನ್ನುಂಟುಮಾಡಿದರು. ಇದರಿಂದ ಮಿತ್ರರ ಸೇನೆಯಲ್ಲಿ ವಿಶೇಷ ನಷ್ಟವಾಗಲಿಲ್ಲ ಫ್ರೆಂಚರು ಜರ್ಮನರ ಮೇಲ್ಬಾಯಿದರು. ಇವರಿಗೆ ಬ್ರಿಟಿಷ ಸೇನಿಕರು ಬಲದಿಕ್ಕಿನಲ್ಲಿಯೂ ಬೆಲ್ಜಿಯನ ಸೇನಿಕರು ಎಡದಿಕ್ಕಿನಲ್ಲಿಯೂ ಸಹಾಯಕರಾಗಿದ್ದು ಜರ್ಮನರ ಮೇಲೆ ಹಲ್ಲಾ ಮಾಡಿ ಜಯಪ್ರದರಾದರು. ಜರ್ಮನರಿಗೆ ವಿಶೇಷ ನಷ್ಟ ಉಂಟಾಗಿರುವದು ಯ್ಪರಿನಲ್ಲಿ ಕಠಿಣ ಕಾಳಗ ನಡೆದಿರುವದು. ಜರ್ಮನರು ಜೀವದ ಮರವೆ ಇಲ್ಲದೆ ಕಾದಾಡಿರುವರು. ಆದರೂ ಬ್ರಿಟಿಷರು ಜಯಪ್ರದರಾಗಿರುತ್ತಾರೆ. ಬ್ರಿಟಿಷರು ೬೦ನೇ ಗುಡ್ಡ ಸ್ಥಳವನ್ನು ಸಾಧೀನಮಾಡಿಕೊಂಡರು. ಇದರಿಂದ ಜರ್ಮನರು ಕಂಗೆಟ್ಟಿರುವರು.

ಪೋಲೆನ್ ಪ್ರಾಂತ್ಯದಲ್ಲಿ ರುಶ್ಯನರು ಹಿಡಕೊಂಡಿದ್ದ ಗುಡ್ಡ ಪ್ರಾಂತ್ಯವನ್ನು ಹಿಂದಕ್ಕೆ ಪಡಕೊಳ್ಳಲು ಆಸ್ಟ್ರಿಯನರು ಕೆಲವು ಸಾರಿ ಹಲ್ಲಾ ಮಾಡಿ ಹಿಂದಕ್ಕೆ ಹೋಗಿರುತ್ತಾರೆ. ರುಶ್ಯನರು ಪುನಃ ಹಲವು ಗುಡ್ಡ ಪ್ರಾಂತ್ಯಗಳನ್ನು ಸ್ವಾಧೀನಮಾಡಿಕೊಂಡಿರುತ್ತಾರೆ. ರುಶ್ಯನರು ೧೦೦೧ನೇ ಗುಡ್ಡವನ್ನು ಸ್ವಾಧೀನಮಾಡಿಕೊಂಡರು. ೯೯೩ನೇ ಗುಡ್ಡವು ಶತ್ರುಗಳ ಕೈಯಲ್ಲಿದೆ;

ಝಾರರವರು ಪ್ರಿಜೆಮ್ಯಸ್ಲ ಕೋಟೆಯನ್ನು ಯುವರಾಜರೊಡನೆ ಸಂದರ್ಶಿಸಿದರು

ತಾ. ೨೭ನೇ ಏಪ್ರೀಲ್

ಬೆಲ್ಜಿಯಮಿನ ಯ್ಪ್ರೆಸಿನಲ್ಲಿ ಮಿತ್ರರ ಗುಣವಾಗಿಯೇ ಕದನವು ನಡೆಯುತ್ತದೆ ಜರ್ಮನರು ಯ್ಪ್ರೆಸಿನ ಮೇಲೆ ಪ್ರಚಂಡವಾಗಿ ಗುಂಡುಗಳನ್ನು ಹಾರಿಸುತ್ತಿದ್ದಾರೆ. ಮಿತ್ರರು ಯ್ಪರಿನ ಬಲ ಪಾರ್ಶ್ವದಲ್ಲಿ ಮುಂದರಿದಿರುವರು.

ಆಸ್ಟ್ರಿಯ ಹಂಗೇರಿಯಲ್ಲಿ ಆಹಾರದ ಕೊರತೆ ಬಂದಿರುವದರಿಂದ ಟ್ರಿಸ್ಟೆ ಪಟ್ಟಣದ ಜನರು ದಾಂದಲೆ ನಡಿಸಿರುವರು. ಜನರು ಗುಂಪು ಗುಂಪಾಗಿ ಕೂಡಿ ಬೀದಿಯಲ್ಲಿ ಮೆರವಣಿಗೆ ಹೊರಟು "ಯುದ್ಧವನ್ನು ನಿಲ್ಲಿಸಿರಿ ಎಂದು ಕೂಗುತ್ತಿರುವರು.

ಮಿತ್ರರ "ಟ್ರಯಂಫ್" ಯುದ್ಧನಾವೆಯು ಡರ್ಡನೆಲ್ಸ ಜಲಸಂಧಿನ ಒಳಗೆ ಪ್ರವೇಶಿಸಿ ಗಲಿಪೋಲಿ ಅರ್ಧ ದ್ವೀಪದ ಪಶ್ಚಿಮ ಕಡೆಯಲ್ಲಿರುವ ತುರ್ಕರ ಕಂದಕಗಳಿಗೆ ಅರ್ಧ ತಾಸಿನ ವರೆಗೆ ಗುಂಡು ಹಾರಿಸಿ, ಇತರ ಕಂದಕಗಳನ್ನು ಹುಡುಕುತ್ತಿದೆಂತ ವಾರ್ತೆ ಬಂದಿರುವದು.

ವಿದೇಶ ವೃತ್ತಾಂತ.

ಹತ್ತು ವರುಷಗಳ ಹಿಂದೆ ಸ್ವೀಜರ್ಲೇಂಡ್ ದೇಶದ ಒಬ್ಬ ಒಕ್ಕಲಿಗನ ಹುಡುಗಿಯು ಬರ್ನಿಸ್ ಒಬರ್‌ಲೇಂಡ್ ಎಂಬಲ್ಲಿಯ ಹೊಟೆಲೊಂದರಲ್ಲಿ ಡೋಬಿಕೆಲಸ ಮಾಡುತ್ತಿದ್ದಳು. ಈ ಹೊಟೆಲಿಗೆ ಬಂದಿದ್ದ ಲಂಡನ್ ಬೇಕರನ ಒಬ್ಬ ಮಗನು ಈ ಹುಡುಗಿಯ ರೂಪವನ್ನು ಕಂಡು ಮೋಹಿತನಾಗಿ ಅವಳಿಗೆ ಮದುವೆಮಾಡಿಕೊಳ್ಳುತ್ತೇನೆಂದು ಮಾತುಕೊಟ್ಟನು. ಆದರೆ ಇವನ ತಂದೆಗೆ ಈ ಒಪ್ಪಂದವು ಸರಿಬೀಳದೆ ಮಗನನ್ನು ಮನೆಗೆ ಹಿಂದೆ ಕರಿಸಿ, ಡೋಬಿಹುಡುಗಿಯನ್ನು ಸಂತೈಸುವದಕ್ಕೆ ೨೦೦ ಪವನುಗಳ ಹುಂಡಿಯನ್ನು ಕಳುಹಿಸಿಕೊಟ್ಟನು. ಹುಡುಗಿಯು ಅದನ್ನು ತಿರಸ್ಕರಿಸಿದಳು. ಈ ಯುವಕನು ಅವಳನ್ನಲ್ಲದೆ ತಾನು ಯಾರನ್ನೂ ಮದುವೆಯಾಗುವದಿಲ್ಲವೆಂದೂ ಈಗ ತಂದೆತಾಯಿಗಳನ್ನು ಮಾತ್ರ ಮನಸ್ಸು ನೋಯಿಸಲಿಕ್ಕಾಗುವದಿಲ್ಲನೆಂದೂ ಆಕೆಗೆ ಕಾಗದ ಬರೆದನು. ಈಚೆಗೆ ೨೮ ವರುಷ ಪ್ರಾಯದ ಆ ಹುಡುಗಿಗೆ ಒಬ್ಬ ವಕೀಲನಿಂದ ಒಂದು ಪತ್ರ ಬಂದಿತ್ತು. ಅದರಲ್ಲಿ ಬೆಲ್ಜಿಯಮಿನ ಕದನದಲ್ಲಿ ಮೃತಪಟ್ಟ ಒಬ್ಬ ಇಂಗ್ಲಿಷ್ ಆಫೀಸರನು ಅವಳ ಹೆಸರಿಗೆ ೪೦೦೦ ಪವನುಗಳನ್ನು ಬಿಟ್ಟಿರುತ್ತಾನೆಂತ ಬರೆದಿತ್ತು. ಇವನು ಆಕೆಯನ್ನು ಪ್ರೀತಿಮಾಡಿದ ಆ ಯುವಕನದಿತ್ತು. ಹತ್ತು ವರುಷಗಳು ದಾಟಿದರೂ ಆ ಯುವಕನು ಆಕೆಯನ್ನು ಮರೆತಿರಲಿಲ್ಲವೆಂಬುದು ಇದರಿಂದ ತಿಳಿದುಬರುತ್ತದೆ.

ಮದ್ರಾಸ್ ನ್ಯಾಯವಿಧಾಯಕ ಸಭೆಯ ಮುಂದೆ ಇರುವ ಫ್ರೌಢವಿವಾಹ ವಿಧಿಯ ವಿಷಯವಾಗಿ ಆಲೋಚಿಸುವದೆ ಇಂಗ್ಲಾಂಡಿನ ಡಬ್ಲಿನ್ ನಗರದಲ್ಲಿ [illegible] ಒಂದು ಸಭೆಯು ಕೂಡಿಬಂದಿರುವದು. ಈ ಸಭೆಯಲ್ಲಿ ಒಕ್ಸ್‌ಫೋರ್ಡಿನ ಮಿ| ಎಸ್. ಎಸ್. ಸೂರ್ಯನಾರಾಯಣರವರು ಅಧ್ಯಕ್ಷರಾಗಿದ್ದು ಈ ವಿಧಿಯನ್ನು ಅನುಮೋದಿಸಿ ಭಾಷಣವನ್ನು ಕೊಟ್ಟರು. ಕಡೆಗೆ ಈ ವಿಧಿಯನ್ನು ಅನುಮೋದಿಸುವ ನಿರ್ಣಯಗಳ ಈ ಸಭೆಯಲ್ಲಿ ಜಾರಿಗೆ ಬಂದವು.

ಇಂಗ್ಲಾಂಡಿನ ಗ್ಲ್ಯಾಸ್‌ಗೋ ಯುನಿವರ್ಸಿಟಿಯಲ್ಲಿ ಇಂಜನಿಯರಿಂಗ್ ಬಿ. ಎಸ್. ಪರೀಕ್ಷೆಗೆ ನಿಂತ ಭಾರತೀಯರಲ್ಲಿ ವಿರೇಂದ್ರ ಡೇ, ಮೈನ್‌ಖಾನ್, ವಾಮನ್ ಸಂಜೀವ ಎಂಬ ಮೂರು ಮಂದಿ ಪಾಸಾಗಿರುತ್ತಾರೆಂಬ ವಾರ್ತೆ ಬಂದದೆ.

ಉತ್ತರ ಹಿಂದೂಸ್ಥಾನ.

ಕಲ್ಕತ್ತೆಯಲ್ಲಿ ರಾಜದ್ರೋಹ ಮಂಡಲಿಗೆ ಸೇರಿದ ಧರಣೀಧರ ದಾಸ ಎಂಬವನನ್ನು ತಾ, ೧೪ರಲ್ಲು ಪೋಲಿಸಿನವರು ಕೈದುಮಾಡಿದರು. ಕೈದುಮಾಡಿದನಂತರ ಅವನು ಕೆಲವು ಮಾತ್ರೆಗಳನ್ನು ನುಂಗಿ ಆತ್ಮಹತ್ಯಮಾಡಿಕೊಂಡನು.

ಬಂಗಾಳದ ಬಕರ್‌ಗಂಜನಲ್ಲಿ ದಿನನಿತ್ಯವೆಂಬಂತೆ ದಕಾಯತಿಗಳು ನಡೆಯುತ್ತಿರುವದರಿಂದ ಅಲ್ಲಿಯ ಜನರಲ್ಲಿ ವಿಶೇಷ ಹೆದರಿಕೆ ಉಂಟಾಗಿರುವದು. ಈ ತಿಂಗಳ ಮೊದಲನೇ ಪಕ್ಷವು ತೀರುವದರೊಳಗೆ ಅಲ್ಲಿ ೫ ಕಠಿಣ ವಿಧದ ದಕಾಯತಿಗಳು ನಡೆದವು. ಈ ಪೈಕಿ ಎರಡು ದಕಾಯತಿಗಳಲ್ಲಿ ಕೊಲೆಗಳು ಆಗಿ ಹೆಚ್ಚಿನ ದ್ರವ್ಯವು ಸೂರೆಯಾಗಿರುವದು. ಬಾರಿಸಾಲಿನ ಸೋನಕಂಡ ಎಂಬಲ್ಲಿಂದ ಇನ್ನೊಂದು ವಾರ್ತೆ ಬಂದಿರುವದು. ಸುಮಾರು ೧೨ ದಕಾಯತರು ದೀನಶಾಹ ಎಂಬವನ ಮನೆಗೆ ಬಲತ್ಕಾರದಿಂದ ನುಗ್ಗಿ ಅವರನ್ನು ಹೆದರಿಸುವ ಬಗ್ಗೆ ಬೊಂಬುಗಳನ್ನು ಬಿಸಾಡಿದರು. ಇವುಗಳಲ್ಲಿ ಒಂದು ದೀನಶಾಹನ ಮಗನಿಗೆ ತಾಗಿ ಜಖಂ ಆಗಿರುವದು. ಆನಂತರ ದಕಾಯತರು ದೀನಶಾಹನಿಗೆ ಭಯಂಕರವಾದ ಆಯುಧದಿಂದ ಹೊಡೆದು ಘಾಯಪಡಿಸಿ ಸುಮಾರು ೧೦೦೦ ರೂಪಾಯಿ ಕ್ರಯ ಬಾಳುವ ಚಿನ್ನಾಭರಣಗಳನ್ನು ಸುಲಿಗೆಮಾಡಿಕೊಂಡು ಹೋದರು.

ಬಾರಿಸಾಲಿಗೆ ೪ ಮೈಲು ದೂರದಲ್ಲಿರುವ ಕಾಕಸೂರ ಎಂಬ ಗ್ರಾಮದಲ್ಲಿ ಇಡೀ ಕುಟುಂಬವನ್ನೇ ದಕಾಯತರು ಹತಮಾಡಿರುವರೆಂಬ ಭಯಂಕರವಾದ ವಾರ್ತೆ ಬಂದಿರುತ್ತದೆ. ಆದಿತ್ಯವಾರ ರಾತ್ರಿ ನವಾಬಾಲಿ, ಅವನ ಹೆಂಡತಿ, ಇಬ್ಬರು ಗಂಡುಮಕ್ಕಳು ಒಬ್ಬ ಹೆಣ್ಣುಮಗಳು ಕೂಡಾ ಸುಖವಾಗಿ ಮಲಗಿದ್ದರು. ಮರುದಿನ ಬೆಳಗ್ಗೆ ನೋಡುವಾಗ ಈ ೫ ಮಂದಿಯೂ ಕೊಲೆಯಾಗಿದ್ದರು. ಪೋಲಿಸಿನವರು ತನಿಕೆ ನಡಿಸುತ್ತಿದ್ದಾರೆ. ಈ ದಕಾಯತಿ ನಡೆದ್ದರ ಕಾರಣವು ತಿಳಿದುಬರಲಿಲ್ಲ.

ಡೈಮಂಡ ಹಾರ್ಬರ್ ಸಬ್ ಡಿವಿಜನಿನ ಮಗ್ರಾಟ್ ಎಂಬಲ್ಲಿ ಬಾಬುಪ್ರಾಣಕೃಷ್ಣವೈಕ್ರಿ ಎಂಬ ಸಾಹುಕಾರರ ಮನೆಯಲ್ಲಿ ತಾ. ೨೦ನೇ ರಾತ್ರಿ ದಕಾಯತಿ ನಡೆಯುವದೆಂಬದಾಗಿ ಅಂದೇ ಬೆಳಗ್ಗೆ ಮಗ್ರಾಟಿನ ಪೋಲಿಸಿನವರಿಗೆ ವಾರ್ತೆ ಸಿಕ್ಕಿತು. ಸ್ಟೇಶನ್ ಚಾರ್ಜನಲ್ಲಿದ್ದ ಆಫೀಸರನು ಡೈಮಂಡ ಹಾರ್ಬರಿನಿಂದ ರಿಜರ್ವ್ ಪೋಲಿಸಿನವರ ಸಹಾಯ ಕರೆಯಿಸಿಕೊಂಡು ಆ ಗ್ರಾಮಕ್ಕೆ ಹೋದರು. ಕೆಲವು ಪೋಲಿಸಿನವರು ಬಾಬುಪ್ರಾಣಕೃಷ್ಣರವರ ಮನೆಯೊಳಗೆ ಅಡಗಿ ಕುಳಿತರು. ಕೆಲವರು ಆಡುಬಾಜನ ಮನೆಯೊಳಗೆ ಅಡಗಿ ಕುಳಿತರು. ರಾತ್ರಿ ೧೧ಕ್ಕೆ ಗಂಟೆಗೆ ಸುಮಾರ ೩೫ ದಕಾಯತರು ಆ ಮನೆಗೆ ನುಗ್ಗಿದರು. ಮನೆಯಲ್ಲಿ ಅಡಗಿದ್ದ ಪೋಲಿಸಿನವರು ಹೊರ ಓಡಿ ಬಂದು ತಮ್ಮ ಜತೆಗಾರರನ್ನು ಬಿಗಿಲಿಂದ ಕರೆದರು. ಹೀಗೆ ದಕಾಯತರಿಗೂ ಪೋಲಿಸಿನವರಿಗೂ ಕದನ ನಡೆದು ಉಭಯತರಲ್ಲಿಯೂ ಕೆಲವರು ಘಾಯ ಒಡೆದರು. ದಕಾಯತರ ಘಾಯ ಒಡೆದ ದಕಾಯತರನ್ನು ಎತ್ತಿಕೊಂಡು ಪಲಾಯನ ಗೈದರು. ಅದೇ ರಾತ್ರಿ, ಅದೇ ಸಮಯಕ್ಕೆ ಸುಮಾರು ೪೦ ದಕಾಯತರು ಬಾಬುಭೈರಚಂದ್ರ ಪೊದ್ದೈಟ್ ಎಂಬವರ ಮನೆಗೆ ನುಗ್ಗಿ ಮನೆಯವರಿಗೆ ಭಯಂಕರ ರೀತಿಯಿಂದ ಹಿಂಸಿಸಿ ಬಹಳ ನಗನಾಣ್ಯಗಳನ್ನು ಕೊಂಡುಹೋಗಿರುವರು ಎಂಬ ವಾರ್ತೆಯೂ ಬಂದದೆ.

ಕರಾಚಿಯಲ್ಲಿ ೧೨೭ನೇ ಬಲೂಚಿ ಲೈಟ್ ಇನ್‌ಫೆಂಟರಿ ಎಂಬ ಕಾಲಾಳು ಸೇನೆಯ ಹವಲ್ದಾರನು ಒಬ್ಬ ಸಿಪಾಯಿಯೊಡನೆ ಜಗಳ ಮಾಡಿ ಅವನನ್ನು ತಿವಿದು ಕೊಂದನೆಂಬ ವಾರ್ತೆ ಬಂದಿರುವದು.

ಕೊಲೊಂಬದ ಟ್ರಿನಕೊಮಾಲಿ ಎಂಬವನಲ್ಲಿ ಒಂದು ಹೊಸ ವಿಧದ ಜಾಡ್ಯವು ತಲೆದೋರಿರುವದು. ಈ ವ್ಯಾಧಿಯು ತಗಲಿ ೨ ತಾಸಿನೊಳಗೆ ರೋಗಿಯು ಮೃತವಾಗುವನು ಎಂಬ ವಾರ್ತೆ ಇದೆ.

ತಾ. ೨೧ರಲ್ಲು ಜರಗಿದ ಪಂಜಾಬು ನ್ಯಾಯವಿಧಾಯಕ ಸಭೆಯಲ್ಲಿ ಲೆಪ್ಟನೆಂಟ ಗವರ್ನರರು ಪಂಜಾಬಿ ಸೈನಿಕರ ವಿಷಯ ಈ ರೀತಿ ಹೇಳಿರುವರು. ಪಂಜಾಬಿ ಸೈನಿಕರು ರಣರಂಗದಲ್ಲಿ ಧೈರ್ಯಶಾಲಿಗಳಾಗಿ ವರ್ತಿಸಿ ಪ್ರಯೋಜನಕಾರಿಗಳಾಗಿ ಕಂಡುಬಂದು ಸರ್ ಜೋನ್ ಫ್ರೆಂಚರ ಹೊಗಳಿಕೆಗೆ ಪಾತ್ರರಾಗಿರುವರು. ಪಂಜಾಬಿನಲ್ಲಿ ಸೇನೆಗೆ ೫೬,೬೦೨ ಮಂದಿ ಹೊಸತಾಗಿ ಸೇರಿಕೊಂಡಿರುವರು. ೨೬,೨೦೫ ಮಂದಿ ರಣರಂಗಕ್ಕೆ ಕಳುಹಿಸಲ್ಪಟ್ಟಿರುವರು. ಈ ಪೈಕಿ ೧೧,೦೧೧ ಉತ್ತರ ಪಂಜಾಬಿನ ಮಹಮ್ಮದೀಯರು, ೮೧೩೬ ಸಿಕ್ಖರು, ಉಳಿದವರು ಡೋಗ್ರ ಮೊದಲಾದ ಪಂಗಡಗಳವರು.

ಪಂಜಾಬಿನಲ್ಲಿ ನಡೆದ ದಕಾಯತಿಗಳ ಮೊಕದಮೆಯಲ್ಲಿ ಕೈದುಮಾಡಲ್ಪಟ್ಟ ೧೧೧ ಅಪರಾಧಿಕರಲಿ ೧೯ ಮಂದಿಗೆ ೧೨, ೮, ೧೦, ೨೫, ೭, ೨೯, ೫, ೩೬, ೪, ೨ ವರ್ಷಗಳಂತೆ ಸಜೆ ಮತ್ತು ಬಂಕೋಲಿ ಶಿಕ್ಷೆಯು ವಿಧಿಸೋಣಾಗಿಯದೆ.

ಪರಸ್ಪರ ಸಹಾಯಕ ಸಂಘಗಳ ರಿಜಿಸ್ಟ್ರಾರರುಗಳ ಸಭೆಯು ಈ ವರ್ಷ ಕೂಡುವದಿಲ್ಲ.

ಏಪ್ರೀಲ್ ತಾ. ೧೬ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೩೧,೧೩೮ ಮಂದಿಗೆ ಪ್ಲೇಗಬೇನೆಯು ಸೋಂಕಿ ೨೫,೫೧೬ ಮಂದಿ ಸತ್ತರು. ಈ ಪೈಕಿ ಪಂಜಾಬಿನಲ್ಲಿ ೧೯,೨೪೭, ಸಂಯುಕ್ತ ಸಂಸ್ಥಾನ ೩೪೨೫, ಬಿಹಾರ್ ೧೨೩೮, ಮುಂಬಾಯಿ ೮೨೭, ಬಂಗಾಳ ೪೦, ಮದ್ರಾಸ್ ೧೧, ಬರ್ಮ ೭೪, ಮಧ್ಯಸಂಸ್ಥಾನ ೨೧೮, ಮೈಸೂರು ೪೯, ಹೈದರಾಬಾದ್ ೧೫೫, ಮಧ್ಯಹಿಂದೂಸ್ಥಾನ ೭೦ ರಜಪುತಾನ ೪, ಸರಹದ್ದು ಸಂಸ್ಥಾನಗಳು ೧೪, ಜಮ್ಮು ೧೯೪ ಮರಣಗಳಾದವು.

ಕಲ್ಕತ್ತೆ ಮುನ್ಸಿಪಾಲಿಟಿಯಲ್ಲಿ ಈಚೆಗೆ ನಡೆದ ಕೌನ್ಸಿಲ್ಲರ ಚುನಾವಣೆಯಲ್ಲಿ ವಿಶೇಷ ಮೇಲಾಟವಿದ್ದು ಮಿ| ಎಸ್ ಎಚ್ ಬಾಸುರವರಿಗೆ ೧೨೬ ಓಟುಗಳೂ, ಮಿ| ಎಲ್. ಎ. ಆರ್. ಬ್ಲ್ಯೂಲಾರ್ಡ ಎಂಬವರಿಗೆ ೧೨೪ ಓಟುಗಳೂ ದೊರಕಿ ಮಿ| ಬಾಸುರವರು ಕೌನ್ಸಿಲ್ಲರಾಗಿ ಆರಿಸಲ್ಪಟ್ಟರು. ಆದರೆ ಓಟುಕೊಡುವ ದಿನ ಮೂರು ಮಂದಿ ಓಟರರು ಕಲ್ಕತ್ತೆಯಲ್ಲಿರದ್ದರಿಂದಲೂ ಅವರು ತಮ್ಮ ಓಟುಗಳನ್ನು ಕೊಡುವರೆ ಇತರರಿಗೆ ಅಧಿಕಾರಕೊಡದ್ದರಿಂದಲೂ ಬಾಸುರವರಿಗೆ ದೊರಕಿದ ಓಟುಗಳಲ್ಲಿ ಮೂರು ರದ್ದಾಗಬೇಕೆಂಬ ಸಬಬಿನ ಮೇಲೆ ಮಿ| ಬ್ಲ್ಯೂಲಾರ್ಡರವರು ಹೈಕೋರ್ಟಿಗೆ ಮಾಡಿಕೊಂಡ ಮನವಿ ಪ್ರಕಾರ ಪುನಃ ಚುನಾವಣೆ ನಡೆಯಬೇಕೆಂತ ಹೈಕೋರ್ಟಿನ ಹುಕುಂ ಆಗಿಯದೆ.

ಡಾರ್ಜಲಿಂಗಿನ ಪೋಲಿಸ್ ಇನ್ಸ್‌ಪೆಕ್ಟರ್ ಸಿಂಸೋನನೆಂಬವನು ಒಂದರೆ ಮೊಕದಮೆಯಲ್ಲಿ ರೂ ೩೦೦೦ ಮತ್ತು ಎರಡು ಉಂಗುರಗಳನ್ನು ಹಿಂಗನ್ ಎಂಡ್ ಕೋ ಎಂಬ ಕಂಪೆನಿಯಿಂದ ಲಂಚ ಕೇಳಿದ್ದಾನೆಂಬದಾಗಿ ಅಪಾದಿಸಲ್ಪಟ್ಟು ೮ ತಿಂಗಳ ಕಠಿಣ ಸಜಾ ಹೊಂದಿದ್ದನಷ್ಟೆ. ಇವನು ಹೈಕೋರ್ಟಿಗೆ ಮಾಡಿಕೊಂಡ ಮನವಿಯು ತಳ್ಳಿಹಾಕಲ್ಪಟ್ಟು ಹಿಂದಿನ ಶಿಕ್ಷೆಯೇ ಕಾಯಂ ಆಯಿತು.

ಗೋಖಲೆಯವರ ಜ್ಞಾಪಕಾರ್ಥವಾಗಿ ಮುಂಬಾಯಿಯಲ್ಲಿ ಏರ್ಪಡಿಸೋಣಾದ ಫಂಡಿಗೆ ಈ ವರೆಗೆ ರೂಪಾಯಿ ೪೧,೬೦೧ ಕೂಡಿರುವದು.

ಲುದಿಯಾನ ಆರ್ಯಸಮಾಜದಲ್ಲಿ ತಾ ೧೩ರಲ್ಲು ಒಂದು ವಿಧವಾ ವಿವಾಹವು ಜರಗಿತು. ಸ್ಥಳೀಕ ಗವರ್ನಮೆಂಟ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದ ಲಾಲಾನಂದ ಲಾಲಾಎಂಬವರು ಲಾಹೋರಿನ ಹುಡುಗಿಯರ ಶಾಲೆಯಲ್ಲಿ ಅಧ್ಯಾಪಕಳಾಗಿದ್ದ ಒಬ್ಬ ವಿಧವೆಯನ್ನು ವಿವಾಹಮಾಡಿಕೊಂಡರು. ಸುಮಾರು ೫೦೦ ಸ್ತ್ರೀ ಪುರುಷರು ವಿವಾಹಸಂಸ್ಕಾರಕ್ಕೆ ಹಾಜರಿದ್ದರು. ವಿವಾಹ ಸಂಸ್ಕಾರವು ಜರಗಿದಕೂಡಲೇ "ಪಂಜಾಬು ವಿಧವಾ ವಿವಾಹ ಸಹಾಯಕ ಸಭಾ, ಲಾಹೋರ್" ಎಂಬ ಸಭೆಗೆ ರಾಯಬಹದ್ದೂರ್ ಗಂಗಾರಾಮ, ರಿಟಾಯರ್ಡ್ ಎಕ್ಸಿಕ್ಯೂಟಿವ್ ಇಂಜನಿಯರರು ೩೦,೦೦೦ ರೂಪಾಯಿಯನ್ನು ದಾನಮಾಡಿರುವರು ಎಂತ ಲಾಲಾರಾಮಲಾಲರವರು ತಿಳಿಯಪಡಿಸಿದರು.

ಕಲ್ಕತ್ತೆಯ ಟಿಪ್ಪಾರ ಎಂಬಲ್ಲಿಯ ಬಾಬು ಉಪೇಂದ್ರ ಚಂದ್ರ ಚೌದುರಿ ಎಂಬವರ ಮನೆಗೆ ಆಯುಧಪಾಣಿಗಳಾದ ಸುಮಾರು ೨೪ ದಕಾಯತರು ನುಗ್ಗಿ ಹೆಬ್ಬಾಗಿಲನ್ನು ಒಡೆದು ದಕಾಯತರನ್ನು ತಡೆದು ಇಬ್ಬರಿಗೆ ಗುಂಡು ಹೊಡೆದು ಕಠಿಣ ಘಾಯಪಡಿಸಿದರು. ನಂತರ ದಕಾಯತರು ಸುಮಾರು ೫ ಸಾವಿರ ರೂಪಾಯಿಯನ್ನು ಸೂರೆಮಾಡಿಕೊಂಡು ಹೋಗುವಾಗ ಗ್ರಾಮಸ್ಥರೂ ಪೋಲಿಸಿನವರೂ ದಕಾಯತರ ಮೇಲೆ ಬಿದ್ದು ದಕಾಯತರಲ್ಲಿ ಒಬ್ಬನಿಗೆ ಗಾಯಪಡಿಸಿದರು. ದಕಾಯತರು ಬಹು ಸಾಹಸದಿಂದ ಗಾಯಪಡೆದ ದಕಾಯತನನ್ನು ಎತ್ತಿಕೊಂಡು ಓಡಿ ಹೋಗಿರುವರು.

ಕಲ್ಕತ್ತೆಯ ಚಂದ್ರಪಾಲ ಎಂಬವನ ಪತ್ನಿಯು ಚಂದ್ರಪಾಲನ ಸಂಬಂಧಿಕನೊಬ್ಬನ ಕೂಡೆ ದುಷ್ಕೃತ್ಯ ನಡಿಸಿದ್ದಾಳೆಂಬ ಅನುಮಾನದ ಮೇಲೆ ಒಂದು ದಿನ ಚಂದ್ರಪಾಲನು ಹೆಂಡತಿಗೆ ಕೊಡಲಿಯಿಂದ ಹೊಡೆದು ಕೊಂದುಹಾಕಿದನು. ಈ ಮೊಕದಮೆಯು ತನಿಕೆ ನಡೆದು ಚಂದ್ರಪಾಲನು ಕೊಲೆಗಾರನಾಗುವದಿಲ್ಲವೆಂಬದಾಗಿ ಎಸ್ಸೆಸ್ಸರುಗಳು ಅಭಿಪ್ರಾಯಪಟ್ಟರು. ಆದರೆ ಜಡ್ಜರು ಅವನಿಗೆ ಜೀವಾಂತ ಬಂಕೋಲಿ ಶಿಕ್ಷೆ ವಿಧಿಸಿದರು. ಈ ಮೊಕದಮೆಯಲ್ಲಿ ಒಂದು ವಿಶೇಷ ಸಂಗತಿ ಏನಂದರೆ:—ಚಂದ್ರಪಾಲನು ತನ್ನ ಮೊದಲನೇ ಹೆಂಡತಿಯನ್ನೂ ಇದೇ ರೀತಿ ಕೊಂದು ಜೀವಾಂತ ಬಂಕೋಲಿ ಶಿಕ್ಷೆಗೆ ಗುರಿಯಾಗಿದ್ದನು. ಈ ಶಿಕ್ಷೆಯನ್ನು ಅವನು ೧೫ ವರ್ಷ ಅನುಭವಿಸಿದ ನಂತರ ಚಕ್ರವರ್ತಿಯವರ ಕಿರೀಟಧಾರಣೋತ್ಸವದ ಬಹುಮಾನಾರ್ಥವಾಗಿ ಅವನಿಗೆ ಬಿಡುಗಡೆಯಾಗಿತ್ತು ಎಂಬದೇ.

ದಕ್ಷಿಣ ಹಿಂದೂಸ್ಥಾನ.

ಮಾನ್ಯ ಗಂಧಿಯವರು ಪತ್ನಿ ಸಹಿತ ಮದ್ರಾಸಿಗೆ ಚಿತ್ತೈಸಿದರೆಂದು ಕಳೆದ ಸಂಚಿಕೆಯಲ್ಲಿ ತಿಳಿಸೋಣಾಯಿತ್ತಷ್ಟೆ. ತಾ. ೨೨ರಲ್ಲು ಮಾನ್ಯ ಗಂಧಿಯವರನ್ನು ಮದ್ರಾಸಿನ ದಕ್ಷಿಣಾಫ್ರಿಕ ಸಂಘದವರು ಆಮಂತ್ರಿಸಿದರು. ಈ ಸಭೆಗೆ ಹಿಂದುಗಳೂ, ಮಹಮ್ಮದೀಯರೂ, ಕ್ರೈಸ್ತರೂ ಬಂದು ಸೇರಿದರು. ಸರ್. ಸುಬ್ರಮಣ್ಯರು ಈ ಸಭೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟು ಮಾನ್ಯ ಗಂಧಿಯವರ ದೇಶ ಸೇವೆಯನ್ನು ಕುರಿತು ಬಹಳವಾಗಿ ಶ್ಲಾಘಿಸಿ ಮಾತನ್ನಾಡಿ ಈ ಸಂಘದ ಪರವಾದ ಬಹುಮಾನಪತ್ರವನ್ನು ಒಪ್ಪಿಸಿದರು. ಆನಂತರ ಮಾನ್ಯ ಗಂಧಿಯವರು ಕಾಲೋಚಿತ ಉತ್ತರ

ವನ್ನಿತ್ತರು ಕಡೆಗೆ ಮಾನ್ಯಗಂಧಿಯವರಗೂ ಅವರ ಪತ್ನಿಯವರಿಗೂ ಪುಷ್ಪಮಾಲಿಗಳನ್ನು ಹಾಕಿ ಸಭೆಯು ಧನ್ಯವಾದದೊಡನೆ ಅಂತ್ಯವಾಯಿತು ಮದ್ರಾಸ್ ಕೊಸ್ಮೊಪೊಲಿಟನ್ ಕ್ಲಬ್ಬಿನವರೂ ಮಾನ್ಯ ಗಂಧಿಯವರನ್ನು ಆಮಂತ್ರಿಸಿದ್ದರು. ಇಲ್ಲಿಯೂ ಮಾನ್ಯ ಗಂಧಿಯವರು ಒಂದು ಸಣ್ಣ ಭಾಷಣವನ್ನು ಮಾಡಿದರು

ತಾ. ೨೩ನೇ ಸಾಯಂಕಾಲ ಮದ್ರಾಸಿನ ಮಹಾಜನ ಸಭೆಯವರು ಮಾನ್ಯ ಗಂಧಿಯವರನ್ನು ಆಮಂತ್ರಿಸಿ ಆಥಿತ್ಯ ಉಪಚಾರವನ್ನು ಮಾಡಿದರು ಮಾನ್ಯ ಗಂಧಿಯವರು ನಿಯಮಿತ ಸ್ಥಳಕ್ಕೆ ಬಂದಾಕ್ಷಣ ಬಹುಮಾನಪಟ್ಟ ನವಾಬ್ ಸಾಹೇಬರವರು ಅವರನ್ನು ಸ್ವಾಗತಮಾಡಿಕೊಂಡು ಆಸನಗಳಲ್ಲಿ ಕೂಂಡ್ರಿಸಿ ಮಹಾಜನ ಸಭೆ ಮತ್ತು ಪ್ರೊವಿನ್ಸಿಯಲ್ ಕಾಂಗ್ರೆಸ್ ಸಭೆಯ ಪರವಾದ ಬಹುಮಾನ ಪತ್ರಗಳನ್ನು ಓದಿದರು ಅನಂತರ ಗಂಧಿಯವರು ಕಾಲೋಚಿತ ಉತ್ತರವನ್ನು ಕೊಟ್ಟರು ಮದ್ರಾಸಿನ ಮುಸ್ಲಿಮ್ ಲೀಗ್, ಬ್ರಹ್ಮ ಸಮಾಜದ ಹೆಂಗಸರು, ಅಭೇಧ ಐಕ್ಯಾನಂದ ಸಮಾಜ, ಮದ್ರಾಸಿನ ಯುವಜನ ಸಮಾಜ ಮೊದಲಾದ ಸಮಾಜದವರೂ ಮಾನ್ಯ ಗಂಧಿಯವರನ್ನೂ, ಅವರ ಪತ್ನಿಯವರನ್ನೂ ಆಮಂತ್ರಿಸಿ ಬಹುಮಾನ ಪತ್ರಗಳನ್ನು ಅರ್ಪಿಸಿರುತ್ತಾರೆ

ಮದ್ರಾಸ್ ರೈಲ್ವೆಯಲ್ಲಿ ಪ್ರಯಾಣಮಾಡುತ್ತಿದ್ದ ಒಬ್ಬರ ಕಂಪಾರ್ಟಮೆಂಟಿನಲ್ಲಿ ಇಂತಿಷ್ಟೆ ಜನರನ್ನು ಕೂಡಿಸಬೇಕೆಂದಿರುವ ಆಜ್ಞೆಗೆ ವಿರುದ್ಧವಾಗಿ ಕಂಪೆನಿಯ ಕೆಲಸಗಾರರೇ ಸಮಯಾನುಸಾರ ಹೆಚ್ಚು ಜನರನ್ನು ಕುರಿಗಳಂತೆ ಕೂಡಿಸುವುದನ್ನು ಸೈರಿಸಲಾರದೆ, ಸಂಖೆಗೆ ಮೀರಿ ಒಳನುಗ್ಗುತ್ತಿದ್ದವರನ್ನು ತಡೆಯಲಾಗಿ, ಸ್ಟೇಶನು ಮಾಸ್ತರರು ಮೊದಲಾದ ಉದ್ಯೋಗಿಗಳು ಬಂದು ಆ ತಡೆಮಾಡಿದ ಪ್ರಯಾಣಿಕನನ್ನು ಹೊರಕ್ಕೆಳೆದು ಹಾಕಿ, ಅವನು ತಂಟೆಮಾಡಿ ಪ್ರಯಾಣಿಕರಿಗೆ ತೊಂದರೆ ಕೊಟ್ಟನೆಂಬ ವಾದದಿಂದ ವ್ಯಾಜ್ಯವನ್ನು ಹೂಡಿ ಅವನಿಗೆ ರೂ ೨೫ ಜುಲುಮಾನೆ ವಿಧಿಸಿದರು ಅವನು ಅಪೀಲು ಮಾಡಿಕೊಂಡಲ್ಲಿ ಅವನು ನಿರ್ದೋಷಿಯೆಂದು ತೀರ್ಮಾನವಾಗಿ ಜುಲುಮಾನೆಯು ಹಿಂದೆ ಕೊಡಲಾಯಿತು ಇದು ನಡೆದು ಒಂದು ತಿಂಗಳು ತುಂಬುವದರೊಳಗೆ ಮತ್ತೊಂದು ಸಂಗತಿ ಮಂಬಾಯಿ ರೈಲ್ವೆಯಲ್ಲಿ ಸಂಭವಿಸಿರುವದು ಒಬ್ಬ ವಕೀಲನು ೩ನೇ ತರಗತಿಯ ಬಂಡಿಯೊಂದರಲ್ಲಿ ಕುಳಿತು ಪ್ರಯಾಣಮಾಡುತ್ತಿರಲು ಮುಂದಣ ಒಂದು ನಿಲ್ದಾಣದಲ್ಲಿ ಇವನು ಕುಳಿತ್ತಿದ್ದ ಕಂಪಾರ್ಟಮೆಂಟಿನೊಳಗೆ ಮಿತಿಮೀರಿ ಜನರು ನುಗ್ಗಲು ಪ್ರಯತ್ನಿಸಿದರು ಅವರನ್ನು ಒಳಕ್ಕೆ ಬಿಡದೆ ಈತನು ತಂಟೆಮಾಡಿದಾಗ ಪರಸ್ಪರ ವಾಕ್ಕಲಹವಾಯಿತು ಈ ಗದ್ದಲದಿಂದ ಸ್ಟೇಶನ್ ಮಾಸ್ತರರು ಅಲ್ಲಿಗೆ ಬಂದು ಅವರನ್ನೆಲ್ಲಾ ಕಂಪಾರ್ಟಮೆಂಟಿನೊಳಕ್ಕೆ ಬಲಕ್ಕಾರದಿಂದ ತುಂಬಿ ತಾನು ಹೊರಟು ಹೋದನು ಬಳಿಕ ವಕೀಲನು ಸುಮ್ಮಗಾಗಲಿಲ್ಲ ಅವನಿಗೊಂದು ಉಪಾಯವು ತೋಚಿತು ಪ್ರತಿಯೊಂದು ಬಂಡಿಯಲ್ಲೂ ಅಪಾಯಕಾಲದಲ್ಲಿ ಬಂಡಿಯನ್ನು ನಿಲ್ಲಿಸಬೇಕೆಂಬ ಸೂಚನೆಯನ್ನು ಗಾರ್ಡನಿಗೆ ಕೊಡುವದಕ್ಕಾಗಿ ಇರುವ ಸರಪಣಿಯನ್ನು ಈ ವಕೀಲನು ಕಂಡು ಅದನ್ನು ಎಳೆದು ಬಿಟ್ಟನು ಕೂಡಲೇ ಬಂಡಿಯು ನಿಂತುಹೋಯಿತು ಗಾರ್ಡ ಮೊದಲಾದವರು ಬಂದು ಹೀಗೆ ಮಾಡಿದ್ದು ಯಾಕೆಂದು ಅವರು ವಕೀಲನನ್ನು ಕೇಳಲಾಗಿ ಅವನು ತಾನು ಕುಳಿತಿರುವ ಕಂಪಾರ್ಟಮೆಂಟಿನಲ್ಲಿ ಕಂಪೆನಿಯ ವಿಧಿಗನುಸಾರವಾಗಿದ್ದಷ್ಟು ಪ್ರಯಾಣಿಕರನ್ನು ಮಾತ್ರ ಕೂಂಡ್ರಿಸದಿದ್ದರೆ ತಾನು ಬಂಡಿಯನ್ನು ಮುಂದಕ್ಕೆ ಹೋಗಬಿಡಲಾರೆನೆಂದು ನುಡಿದನು ಬೇರೆ ಸ್ಥಳವಿಲ್ಲದ್ದರಿಂದ ಹಾಗೆ ಮಾಡಲಾಗುವದಿಲ್ಲವೆಂದು ಉದ್ಯೋಗಿಗಳು ಹೇಳಿ ಬಂಡಿಯನ್ನು ಮುಂದಕ್ಕೆ ನಡಿಸಿದರು ವಕೀಲನು ಪುನಃ ಸರಪಣಿಯನ್ನು ಎಳೆದನು ಪುನಃ ಬಂಡಿಯು ನಿಂತಿತು ಅಕ್ರಮವಾಗಿ ಸರಪಣಿಯನ್ನು ಸೆಳೆದ ತಪ್ಪಿನ ಮೇಲೆ ಶಿಕ್ಷೆಗೆ ಗುರಿಪಡಿಸುವೆವೆಂದು ರೈಲ್ವೆ ಉದ್ಯೋಗಿಗಳು ಅವನನ್ನು ಬೆದರಿಸಿ ಹೆಸರು ಮೊದಲಾದವುಗಳನ್ನು ಬರಕೊಂಡು ಗಾಡಿ ನಡಿಸಿದರು ಆದರೆ ಈ ವಕೀಲನು ಹೆದರದೆ ಪುನಃ ಪುನಃ ಸರಪಣಿ ಎಳೆದು ಬಂಡಿ ನಿಲ್ಲಿಸಿದರಿಂದ ರೈಲ್ವೇ ಉದ್ಯೋಗಿಗಳೇ ಸೋತು ಆಗ್ಗಾಡಿಯಲ್ಲಿದ್ದ ಹೆಚ್ಚು ಮಂದಿ ಪ್ರಯಾಣಿಕರನ್ನು ಕೆಳಗಿಳಿಸಿ ಬಂಡಿಯನ್ನು ಮುಂದಕ್ಕೆ ಸಾಗಿಸಿದರು

ದಕ್ಷಿಣ ಕನ್ನಡ

ನೋಟೀಸು.

ಮಂಗಳೂರು ವೆನ್‌ಲಾಕ್ ಆಸ್ಪತ್ರೆಯಲ್ಲಿ ಡಾಕ್ಟರರಾಗಿದ್ದ ಪಿ ಸಿ ಮಿನೇಜಸರವರು ರಥಬೀದಿಯಲ್ಲಿ ಹೊಸ ಮಾರ್ಕೆಟಿನ ಬಳಿ ಒಂದು ಔಷಧಾಲಯವನ್ನು ತೆರೆದಿರುತ್ತಾರೆ. ಬೆಳಿಗ್ಗೆ ೮-೩೦ ಗಂಟೆಯಿಂದ ಸಾಯಂಕಾಲ ೬ ಗಂಟೆಯ ವರೆಗೆ ಈ ಆಲಯದಲ್ಲಿ ಔಷಧಚಿಕಿತ್ಸೆಯೂ ಶಸ್ತ್ರಚಿಕಿತ್ಸೆಯೂ ಮಾಡೋಣಾಗುವದು ಎಂತ ಈ ಮೂಲಕ ತಿಳಿಸೋಣಾಗಿಯದೆ.

ಪಿ. ಸಿ. ಮಿನೇಜಸ್

FOR SALE.

A PAIR OF GOO) BULLOCKS

Apply to —

Mercantile Mission Branch,
Mangalore.

ಮಾರಾಟಕ್ಕೆ ಇವೆ

ಒಂದು ಜೋಡು ಚಲೋ ಎತ್ತುಗಳು

ವಿಳಾಸ —

ಮರ್ಕೆಂಟೈಲ್ ಮಿಶನ್ ಬ್ರೇಂಚ್,
ಮಂಗಳೂರು

ಕುಂಬಳೆ: — ಇದೇ ತಾ ೨೪ರಲ್ಲು ಬೆಳಿಗ್ಯೆ ೧೦ ಘಂಟೆ ಸಮಯ ಇಲ್ಲಿಯ ವರ್ಗದಾರರಾದ ವಾಸುದೇವ ಕಡ್ಮಣ್ಣಾಯ ಎಂಬವರನ್ನು ಅವರ ದೊಡ್ಡಪ್ಪನ ಮಗನಾದ ಪದ್ಮನಾಭ ಕಡ್ಮಣ್ಣಾಯರು ಕುಡುಕತ್ತಿಯಿಂದ ಕೊಂದುಹಾಕಿರುವರು ಪೋಲಿಸ್ ಸಬ್ ಇನ್ಸ್‌ಪೆಕ್ಟರವರು ಪೋಲಿಸಿನವರ ಸಮೇತ ಅಪರಾಧಿಯನ್ನು ಹುಡುಕುವರೆ ಹೋಗುತ್ತಾ ಮೂಟೆಯಲ್ಲಿರುತ್ತಿದ್ದ ಅಪರಾಧಿಯು ಶಿಕ್ಕಿ ತಾನೇ ತಪ್ಪನ್ನು ಒಪ್ಪಿಕೊಂಡನು. ಪೋಲೀಸರು ಅವನನ್ನು ಕೈದುಮಾಡಿರುತ್ತಾರೆ ತನ್ನ ಆಸ್ತಿಯನ್ನು ಮೃತನು ಅಪಹರಿಸಿಕೊಂಡು ತನಗೆ ಕಾಲಕ್ಷೇಪಕ್ಕೆ ಏನೊಂದೂ ಕೊಡದೆ ತಾನು ಬಹಳ ಕಷ್ಟಕಾಳಿದ ಕಾರಣ ಖರ್ಚಿಗ ಕೊಡುವಂತೆ ಕೇಳಿದ್ದಲ್ಲಿ ಮೃತನು ಸಿಟ್ಟಿನಿಂದ ತನಗೆ ದೊಣ್ಣೆಯ ಪೆಟ್ಟುಗಳು ಕೊಟ್ಟದ್ದಕ್ಕಾಗಿ ತಾನು ಕೈಯಲ್ಲಿದ್ದ ಕತ್ತಿಯಿಂದ ಕಡದುಹಾಕಿದ್ದೆಂತ ಪೋಲಿಸಿನಲ್ಲಿ ವಾಗ್ಮೂಲಕೊಟ್ಟಿರುವದಾಗಿ ತಿಳಿದುಬರುತ್ತದೆ

ಫರಂಗಿಪೇಟೆ — ಇದೇ ಕಳದ ಶನಿವಾರ ದಿವಸ ಫರಂಗಿಪೇಟೆ ಉಪಾಧ್ಯಾಯರ ಸಂಘದ ಸಭೆಯು ಬೋಳಿಯಾರು ಎಲಿಮೆಂಟರಿ ಶಾಲೆಯಲ್ಲಿ ನಡೆಯಿತು ಸಭೆಯಲ್ಲಿ ೩೧ ಮಂದಿ ಉಪಾಧ್ಯಾಯರೂ ಹಲವು ಊರ ಗೃಹಸ್ಥರೂ ಹಾಜರು ಇದ್ದರು ಅಪೇಕ್ಷಿಸಿದ ಅಧ್ಯಕ್ಷರು ಗೈರಹಾಜರು ಆದ ಸಂಬಂಧ ಸದರಿ ಸಂಘದ ಸೆಕ್ರೆಟರಿಗಳಾದ ವಿ ಯಸ್ ಬಂಗೇರರವರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು ದೇವರ ಪ್ರಾರ್ಥನೆಯಿಂದ ಸಭೆಯು ೧೨ ಗಂಟೆಗೆ ಪ್ರಾರಂಭವಾಯಿತು ಸಂಘದ ಸೆಕ್ರೆಟರಿಯು ಕಳದ ಮೀಟಿಂಗಿನ ರಿಪೋರ್ಟನ್ನು ಓದಿದ ಬಳಿಕ ವಿದ್ಯಾರ್ಥಿಗಳು ಹಾಡುಗಳ ಸಮೇತ ವ್ಯಾಯಾಮವನ್ನು ಮಾಡಿ ತೋರಿಸಿದರು ರಾ ವಿ ಯಸ್. ಬಂಗೇರರು ಭರತ ಮತ್ತು ಇಳಿತದ ಕುರಿತು ಒಂದು ಉಪನ್ಯಾಸವನ್ನು ಓದಿದರು

ವಿದ್ಯಾರ್ಥಿಗಳು ದೇಶೀಯ ಕಸರತನ್ನು ಮಾಡಿ ತೋರಿಸಿ ಸಭಿಕರನ್ನು ಸಂತೋಷಗೊಳಿಸಿದರು 'ಉಪಾಧ್ಯಾಯನ ಯೋಗ್ಯತೆ, ಕುರಿತಾಗಿ ಚರ್ಚೆಯು ನಡೆಯಿತು ೩ ಗಂಟೆಗೆ ಬೋಳಿಯಾರು ಶಾಲಾ ಹೆಡ್‌ಮಾಸ್ತರು ಮತ್ತು ಮೆನೇಜರರಿಂದ ಒದಗಿಸೋಣಾದ ಆಥಿತ್ಯವನ್ನು ಕೈಕೊಂಡ ಬಳಿಕ ಸಭೆಯು ಪುನಃ ೪ ಗಂಟೆಗೆ ಪ್ರಾರಂಭವಾಯಿತು ಕಳ್ಳಿಗೆ ಬೋರ್ಡು ಶಾಲಾ ಹೆಡ್‌ಮಾಸ್ತರು ಬಿ. ಶಂಕರನಾರಾಯಣಯ್ಯನವರಿಂದ ೧ನೇ ಕ್ಲಾಸಿಗೆ ಗ್ರಡಿಯಾರದ ಮುಖಬಿಲ್ಲೆಯ ಕುರಿತಾಗಿ ಒಂದು ಮಾದರಿ ಪಾಠವು ಕೊಡಲ್ಪಟ್ಟಿತು. ತರುವಾಯ ಉಪಾಧ್ಯಾಯರು ತನ್ನ ಗ್ರಾಮಸ್ಥರ ಸಂಪರ್ಕವನ್ನು ಸಂಪಾದಿಸುವ ಬಗೆ ಹೇಗೆ ಎಂಬದರ ಕುರಿತಾಗಿ ರಾ. ಎ. ರಾಮಚಂದ್ರಹೆಗ್ಗಡೆಯವರಿಂದ ಒಂದು ಭಾಷಣವು ಕೊಡಲ್ಪಟ್ಟಿತು.

ಕೊನೆಗೆ ಅಧ್ಯಕ್ಷರು ತಕ್ಕ ಮಾತುಗಳನ್ನು ಆಡಿದ ಬಳಿಕ ರಾಷ್ಟ್ರಗೀತೆಯನ್ನು ಹಾಡಿ ಸಭೆಯು ಬೊಂಡಂತ್ತಿಲ ಶಾಲಾ ಹೆಡ್ ಮಾಸ್ತರರ ಅಪೇಕ್ಷೆ ಮೇರೆಗೆ ಸದರಿ ಶಾಲೆಯಲ್ಲಿ ಮೇ ತಾ ೨೯ಕ್ಕೆ ಜರಗಿಸುವುದಾಗಿ ನಿರ್ಣಯಿಸಲ್ಪಟ್ಟಿತು

ಬರುವ ಮೇ ತಾರೀಕು ೧೧ರಲ್ಲು ಫರಂಗಿಪೇಟೆ ಪರಸ್ಪರ ಸಹಾಯಕ ಸಂಘವನ್ನು ಸ್ಥಾಪಿಸಿ ಅದರ ಕುರಿತಾದ ಎಲ್ಲಾ ಮಾಹಿತಿಯನ್ನು ಕೊಡುವರೆ ಒಪ್ಪಿಕೊಂಡಿರುವ ಪುತ್ತೂರು ಕೊ ಸೆಂಟ್ರಲ್ ಬೇಂಕಿನ ಸೆಕ್ರೆಟರಿಗಳಾದ ಮ| ರಾ| ಯಂ ಅನಂತರಾಯರೂ ಪುತ್ತೂರು ವಕೀಲ್ ಮ| ರಾ| ಯಂ ಶಿವರಾವ್ ನಗ್ರೆರೆರು ಬಂದು ಸಭೆಯನ್ನು ಜರಗಿಸಲಿಕ್ಕಿರುವುದರಿಂದ ಎಲ್ಲಾ ಉಪಾಧ್ಯಾಯರೂ ಬಂದು ಸಂಘದ ಮಾಹಿತಿಯನ್ನು ಪಡದು ಮುಂದಕ್ಕೆ ಉಪಾಧ್ಯಾಯರ ಪರಸ್ಪರ ಸಹಾಯಕ ಸಂಘ ಒಂದನ್ನು ಏರ್ಪಡಿಸಲು ಪ್ರಯತ್ನಿಸಬಹುದಾಗಿ ಅಪೇಕ್ಷಿಸಿ ರಾ| ಅರ್ಕುಳ ಶಿವರಾಯರ ಕೊಟ್ಟ ಆಮಂತ್ರಣವನ್ನು ಉಪಾಧ್ಯಾಯರೆಲ್ಲರೂ ಸ್ವೀಕರಿಸಿ ಆ ದಿನ ಫರಂಗಿಪೇಟೆಯಲ್ಲಿ ಸಭೆ ಸೇರುವುದಾಗಿ ಸಹಾ ಗೊತ್ತುಮಾಡಲ್ಪಟ್ಟಿತು

ಸುರತ್‌ಕಲ್ಲು: — ಇದೇ ಕಳದ ಮಾರ್ಚಿ ತಾ ೨೦ರಲ್ಲು ಇಲ್ಲಿಯ ಕೃಷ್ಣಾಪುರ ಎಲಿಮೆಂಟರಿ ಶಾಲಾ ಎದುರಿನ ಅಂಗಡಿಯ ಮಹಡಿ ಮಾಳಿಗೆಯಲ್ಲಿ 'ಶ್ರೀ ರಾಧಾಕೃಷ್ಣ ಭಜನಾ ಮಂದಿರಂ' ಎಂಬ ಹೆಸರಿನ ಉಪಾಸನಾ ಸಮಾಜವು ತೆರೆಯಲ್ಪಟ್ಟು, ಈಗ ೧೫ ಮಂದಿ ಮೆಂಬರರಿಂದೊಡಗೂಡಿ ಪ್ರತಿಶನಿವಾರವೂ ಭಜನೆಯು ನಡೆಯುತ್ತಾ ಬರುತ್ತದೆಂಬದನ್ನು ತಿಳಿಸಲು ಸಂತೋಷಿಸುತ್ತೇನೆ

ಮಂಗಳೂರು

ಹಿಂದೆ ತಿಳಿಸಿದಂತೆ ಇದೇ ತಾ ೧೮-೧೯ರಲ್ಲು ಇಲ್ಲಿಯ ಕೆನರಾಹೈಸ್ಕೂಲ ಭುವನೇಂದ್ರ ಹೋಲಿನಲ್ಲಿ ಬ್ರಹ್ಮಜ್ಞಾನ ಸಭೆಯ ಡಿಸ್ಟ್ರಿಕ್ಟ್ ಕನ್ಫರೆನ್ಸ್ ಕೂಡಿಬಂತು ಈ ಸಭೆಗೆ ಕಲಿಕೋಟೆಯವರಾದ ಹೈಕೋರ್ಟ ವಕೀಲ ಎನ್ ಎಸ್ ರಾಮಬಯ್ಯರರವರು ಅಧ್ಯಕ್ಷರಾಗಿದ್ದ ಕಾಲೋಚಿತ ಭಾಷಣದಿಂದ ಸಭಿಕರನ್ನು ಸಂತೋಷಗೊಳಿಸಿದರು ಸಾಯಂಕಾಲ ಈ ಸೊಸೈಟಿಯ ಮ| ರಾ| ಕರುಣಾಕರ ನಾಯರರು "ಓರ್ಡರ್ ಅಫ್ ದಿ ಸ್ಟಾರ್ ಇನ್ ದಿ ಈಸ್ಟ್" ಎಂಬ ಪ್ರಸ್ತಾಪದ ಮೇಲೆ ಭಾಷಣಕೊಟ್ಟರು ಎರಡನೇ ದಿನ ಕನ್ಫರೆನ್ಸ್ ಕೂಡಿದಾಗ ಈ ಸಂಘದ ಮೆಂಬರರಿಗೂ, ಜಿಲ್ಲೆಯ ಪ್ರಾಮುಖ್ಯ ಮುಂದಾಳುಗಳಿಗೂ ಮಿತ್ರಭೋಜನಕ್ಕೆ ಆಮಂತ್ರಿಸೋಣಾಗಿತ್ತು ಕರೆಯಲ್ಪಟ್ಟವರೆಲ್ಲರೂ ಬಂದು ಜಾತಿಮತ್ಸರವನ್ನೇನೂ ತೋರಿಸದೆ ಒಟ್ಟು ಕೂತು ಫಲಹಾರಗಳನ್ನು ಸ್ವೀಕರಿಸಿದರು ಮ| ರಾ| ನರಹರಿ ಶಾಸ್ತ್ರಿಯವರು "ಸಮಾಜ ಸಂಸ್ಕರಣ ಸಂಘ"ದ ಪ್ರಸ್ತಾಪವಾಗಿ ಮಾತನ್ನಾಡಿ ಇಂಥಾ ಸಂಘಗಳಿಂದ ಮಾತೃಭೂಮಿಯ ಏಳಿಗೆಯನ್ನು ಉಂಟುಮಾಡುವರೆ ಚುರುಕಾಗಿ ಕೆಲಸಮಾಡುವವರನ್ನು ಹುಟ್ಟಿಸಬಹುದೆಂದು ತೋರಿಸಿಕೊಟ್ಟರು. ಅನಂತರ ರಾ| ಡಿ. ರಾಮಚಂದ್ರರಾಯರ ಭಾಷಣದೊಂದಿಗೆ ಕನ್ಫರೆನ್ಸ್ ಅಂತ್ಯವಾಯಿತು.

ಇಲ್ಲಿಯ ಶಾಲೆಗಳ ಆಕ್ಟಿಂಗ್ ಅಸಿಸ್ಟಾಂಟ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟ ಮ| ರಾ| ಸಪ್ಪೂರು ರಾಮರಾವ್ ಮಂಗೇಶರಾಯರವರು ಕಳದ ಶುಕ್ರವಾರ ಸಾಯಂಕಾಲ ಮೈಲ್ ಬಂಡಿಯಲ್ಲಿ ಇಲ್ಲಿಗೆ ಬಂದ್ತು ಶನಿವಾರ ದಿನ ಚಾರ್ಜುತಕ್ಕೊಂಡಿರುವರು.

ನೇಪಾಲ ಪ್ರಿನ್ಸರ ೫೦,೦೦೦ ರೂಪಾಯಿ ಕ್ರಯಬಾಳುವ ಮುತ್ತಿನ ಸರ ಇತ್ಯಾದಿಗಳನ್ನು ಕಳವುಮಾಡಿ ಬೈಂದೂರಲ್ಲಿ ಪೋಲಿಸ್ ಇನ್ಸ್‌ಪೆಕ್ಟರ್ ರಾ| ಕೆ. ಲಕ್ಷ್ಮಣರವರಿಂದ ಕೈದುಮಾಡಲ್ಪಟ್ಟ ಬಂಕೇಶ್ವರ ರಾಮಭಟ್ಟನ ಮೊಕದಮೆ ತನಿಕೆಯು ಅಳ್ಳಹಾಬಾದಿನಲಿ ನಡೆಯುವದು ಎಂದು ತಿಳಿಯುತ್ತೇವೆ.

ದಕ್ಷಿಣಕನ್ನಡ ಜಿಲ್ಲೆಯಿಂದ ಮುಂಬಾಯಿಗೆ ಹೋದ ಮೊಗೇಯರರ ಭಾಷಾಭಿವೃದ್ಧಿ ಬಗ್ಗೆ ರಾ| ಕಲ್ಯಾಣಗಾರ ಚಂದುಪುತ್ರನ್ನಾಯ ಮತ್ತು ಹೊಸ್ಕಗೆ ಸೋಮಯ್ಯ ಮುಂತಾದವರು ಸಹಾಯದಿಂದ ಮುಂಬಾಯಿಯಲ್ಲಿ "ಮುಂಬಾಯಿ ಕನ್ನಡ ವಾಚನಾಲಯ ಸಂಘ"

ಎಂಬ ಒಂದು ಸಂಘವು ತೆರೆಯೋಣಾಗಿರುವದೆಂತ ಒಬ್ಬ ಮುಂಬಾಯಿ ಬಾತ್ಮಿದಾರರು ತಿಳಿಸಿರುತ್ತಾರೆ.

ರಜೆಯಲ್ಲಿರುವ ಹೊಸದುರ್ಗ ಡ್ಯೂಪಿಟಿ ತಹಸೀಲದಾರರಾದ ಮ॥ ರಾ॥ ರಾ॥ ಯು. ಬಿ. ವೆಂಕಟರಮಣಯ್ಯನವರಿಗೆ ಪುನಃ ಹೆಚ್ಚಿಗೆ ೩ ತಿಂಗಳ ಫರ್ಲೋರಜೆ ಕೊಡೋಣಾಗಿದೆ

ಸುಳ್ಯ ಫರ್ಕ II ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರರಾ॥ ಬಿ ಸೋಮಪ್ಪನವರು ಕರಸ್ಪೋಂಡೆಂಟ್ಸ್ ಸೆಕ್ಷನಿನ ೬ನೇ ಕ್ಲಾರ್ಕರಾಗಿ ನೇಮಿಸಲ್ಪಟ್ಟದ್ದರಿಂದ ಉಪ್ಪಿನಂಗಡಿ ತಾಲೂಕು ಆಫೀಸಿನ ೩ನೇ ಕ್ಲಾರ್ಕ ರಾ॥ ಎ ಮುಕುಂದರಾಯರು ಸುಳ್ಯ ಫರ್ಕ II ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುವರು

ಬೈಂದೂರು ಫರ್ಕ ರೆವಿನ್ಯೂ ಇನ್ಸ್‌ಪೆಕ್ಟರ್ ರಾ॥ ಎಮ್ ಹರಿ ಕಾಮತರಿಗೆ ೨ ತಿಂಗಳ ಪ್ರಿವಿಲೆಜ್ ರಜೆ ಕೊಡೋಣಾಗಿರುವದರಿಂದ ಕಲೆಕ್ಟರ ಆಫೀಸಿನ ೮ನೇ ಕ್ಲಾರ್ಕ ರಾ॥ ಯು ನರಸಿಂಗರಾಯರು ಬೈಂದೂರು ಫರ್ಕ ಆಕ್ಟಿಂಗ್ ರೆವಿನ್ಯೂ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿದ್ದಾರೆ

ಮಂಗಳೂರು ಟೌನ್ ಪೋಲಿಸ್ ಸಬ್ ಇನ್ಸ್‌ಪೆಕ್ಟರರಾಗಿದ ಮೆ॥ ಐ ಸೋನ್ಸರಿಗೆ ಬಾ[illegible] ವರ್ಗವಾಗಿಯದೆ

ಪಣಂಬೂರು [illegible] ಮೊಗೆರರಿಗೂ ಅಲ್ಲಿಯ ಮಾಪಿಳ್ಳೆಯ[illegible] ನಸ್ಸಿನ ಫಲವಾಗಿ ತಾ ೨೭ನೇ ಸಂಜೆ ಕಾಲ ಅಲ್ಲಿಯ ಮಾಪಿಳ್ಳೆಯರು ಮೊಗೆರರ ಮೇಲೆ ಬಿದ್ದು ದೂಬಿನ[illegible] ಮೊಗೆರರ ಮ[illegible] ಮತ್ತು ಇತರ ಇಬ್ಬರಿಗೆ ಕಠಿಣ ಜಖಂ ಆಗಿರುವದು ಪೋಲಿಸಿನವರು ಈ ವಿಷಯ ತನಿಕೆನಡಿಸುತ್ತಿದ್ದಾರೆ

ಡೊಂಗರಕೇರಿಯಲ್ಲಿ ಜಾಜ ಎಂಬವನು ಹೋಗುತ್ತಿರುವಾಗ ಕೇಡಿ ಸುಬ್ಬ ಮತ್ತು ಬಾವರಿ ಎಂಬ ಇಬ್ಬರು ಕೂಡಿ ಜಾಜನ ಕಿಸೆಯಲ್ಲಿದ್ದ ರೂ ೩—೬—೦ನ್ನು ಸೆಳಕೊಂಡು ಹೋಗಿರುವರಾಗಿ ಫಿರ್ಯಾದು ಬಂದದರಿಂದ ಪೋಲಿಸಿನವರ ಅವರಿಬ್ಬರನ್ನೂ ಕೈದ ಮಾಡಿರುತ್ತಾರೆ

ಇಲ್ಲಿ ಕೆಲವು ಸಮಯದಿಂದ ನಾಟಕವಾಡುತ್ತಿದ್ದ ಅಲೆಕ್ಸಾಂಡ್ರಿಯ ಥಿಯಟ್ರಿಕಲ್ ಕಂಪೆನಿಯವರು ತಾ ೨೭ನೇ ರಾತ್ರಿ ತಮ್ಮ ಕಡೆಯ ಹರಿಶ್ಚಂದ್ರನಾಟಕವನ್ನು ತೋರಿಸಿ ತಲಚೇರಿಗೆ ಹೋಗಿರುತ್ತಾರೆ

ಡಿಸ್ಟ್ರಿಕ್ಟ್ ಪೋಲಿಸ್ ಸುಪರಿಂಟೆಂಡೆಂಟ ದೊರೆಗಳವರು ಕುಂಬಳೆಯತ್ತಕಡೆ ಸರ್ಕೀಟಿಗೆ ಹೋಗಿದ್ದಾರೆ

ಪೋಸ್ಟಲ್ ಸುಪರಿಂಟೆಂಡೆಂಟ ದೊರೆಗಳವರ ಈಕಡೆ ಸರ್ಕೀಟಿಗೆ ಬಂದಿರುವರು

ಇಲ್ಲಿಯ ಹೆಂಗಸರ ಆಸ್ಪತ್ರಿಯ ಮತ್ತು ಪೋಲಿಸ್ ಆಸ್ಪತ್ರಿಯ ಮುಂದುಕಡೆ ಇರುವ ಕೆರೆಯ ಸಮೀಪ ಹಿಂದೆ ಒಂದು ಮುನ್ಸಿಪಾಲ್ ಪಾಯಖಾನೆಯು ಇದ್ದು ದಾರಿಗರಿಗೂ ಆಜುಬಾಜಿನವರಿಗೂ ಹೆಚ್ಚಿನ ಪ್ರಯೋಜನವಿತ್ತು, ನಂತರ ಅಲ್ಲಿ ಟೆಲಗ್ರಾಫ್ ಆಫೀಸು ಬಿದ್ದದರಿಂದ ಟೆಲಗ್ರಾಫ್ ಆಫೀಸರರ ಪ್ರಯತ್ನದಿಂದ ಈ ಪಾಯಖಾನೆಯು ಮುಚ್ಚಲ್ಪಟ್ಟಿತ್ತ ಅಲ್ಲಿಂದ ಟೆಲಗ್ರಾಫ್ ಆಫೀಸ್ ಹೋಗಿ ಕೆಲವು ವರುಷಗಳು ದಾಟಿದರೂ ಅತ್ತಕಡೆಯ ಜನರಿಗೆ ಅತಿ ಪ್ರಯೋಜನಕಾರಿಯಾಗಿರುವ ಈ ಪಾಯಖಾನೆಯು ತೆರೆಯಲ್ಪಡದೆ ಇರುವದರಿಂದ ಆಜುಬಾಜಿನ ಜನರೂ ದಾರಿಗರೂ ಉಪಾಯವಿಲ್ಲದೆ ಕೆರೆಯ ಆವರಣದೊಳಗೆ ಹೋಗಿ ಮಲಮೂತ್ರಾದಿಗಳನ್ನು ಮಾಡುವ ಪದ್ಧತಿಯು ರೂಢಿಗೆ ಬಂದದೆ ಎಂತಲೂ ಕೆಲವರು ಮುಚ್ಚಲ್ಪಟ್ಟ ಪಾಯಖಾನೆಯನ್ನು ತೆರೆದ ಅದರೊಳಗೆನೇ ವಿಸರ್ಜನೆ ಮಾಡುತ್ತಾರೆಂತಲೂ ಒಬ್ಬ ಬಾತ್ಮಿದಾರರು ತಿಳಿಸುವರು ಸಂಬಂಧಪಟ್ಟ ಮುನ್ಸಿಪಾಲ್ ಅಧಿಕಾರಿಗಳು ಈ ವಿಷಯ ನಿಗಾ ಕೊಟ್ಟು ತಕ್ಕ ಏರ್ಪಾಡ ಮಾಡುವರಾಗಿ ಹಾರೈಸುತ್ತೇವೆ

ಕಾಫಿ ಮೊಕದಮೆಯಲ್ಲಿ ಪಸಾರಿ ವಿಟ್ಟಪ್ಪಬಾಬುಪ್ರಭುಗಳವರ ಶಿಕ್ಷೆಯು ಅಪೀಲಿನಲ್ಲಿಯೂ ಕಾಯಂ ಆಯಿತು ಎಂದು ತಿಳಿಸೋಣಾಯಿತ್ತಷ್ಟೆ ಪಸಾರಿ ವಿಟ್ಟಪ್ಪಬಾಬುಪ್ರಭುಗಳವರು ಹೈಕೋರ್ಟಿಗೆ ಅಪೀಲು ಮಾಡಿಕೊಳ್ಳಲಿಕ್ಕಿರುವುದರಿಂದ ಜಾಮೀನಿನ ಮೇಲೆ ಅವರನ್ನು ಬಿಡಬಹುದೆಂಬ ಹುಕುಂ ಹೈಕೋರ್ಟಿನಿಂದ ನಿನ್ನೆಯ ದಿನ ಬಂದಿರುವುದೆಂತ ಕೇಳುತ್ತೇವೆ

ತಾ. ೨೩ನೇ ಸಾಯಂಕಾಲ ಸುಮಾರು ೭ ಗಂಟೆಗೆ ಇಲ್ಲಿಯ ರಥಬೀದಿಯ ಮ॥ ರಾ॥ ರಂಗಪ್ಪ ಭಂಡಾರಿಗಳ ಮನೆಯ ಎದುರಿನ ಬೀದಿಯಲ್ಲಿ ಒಬ್ಬ ಹೆಂಗಸು ಹೋಗುತ್ತಿರುವಾಗ ಉಂಜ್ಞಿ ಎಂಬ ಡ್ರೈವರನು ನಾಗಾಲೋಟದಿಂದ ಓಡಿಸುತ್ತಿದ್ದ ಟ್ರಾನ್ಸಿಟು ಬಂಡಿಯು ಹೆಂಗಸಿಗೆ ತಗಲಿ ಹೆಂಗಸು ಕೂಡಲೇ ಕೆಳಬಿದ್ದು ಜಖಂ ಹೊಂದಿ, ಮೋದಂಡಗಿ ತಿಯುತ್ತಿದ್ದಳೆ ಹೆಕ್ಕಿ ಕೆರೇಜುಗಳನ್ನು ನಾಗಾಲೋಟದಿಂದ ಓಡಿಸಿ ಮಂದಿ ತಾಗುತ್ತಿದ್ದ ಅಪಘಾತಗಳು ಕಮ್ಮಿಯಾಗುವಂತೆ ಸಾಹಸಪಡುತ್ತಿರುವ ಹೆಕ್ಕಿ ಕೆರೇಜು ಆಫೀಸರರಾದ ಮೆ॥ ದೇಸರವರು ಜನರು ಕಿಕ್ಕಿರಿದು ತುಂಬಿರುವ ರಥಬೀದಿಯಲ್ಲಿ ದಿಕ್ಕು ತೋರದೆ ಟ್ರಾನ್ಸಿಟಗಳನ್ನು ಓಡಿಸುತ್ತಿರುವ ಡ್ರೈವರರನ್ನು ಸಹಾ ಹತೋಟಿಯಲ್ಲಿಡುವಂತೆ ಪ್ರಯತ್ನಿಸುವುದು ಅವಶ್ಯವಾಗಿದೆ.

ಇಲ್ಲಿಯ ವೆನ್‌ಲಕ್ ಆಸ್ಪತ್ರಿಯಲ್ಲಿ ಸಬ್ ಆಸಿಸ್ಟಾಂಟ ಸರ್ಜನರಾಗಿದ್ದ ಮೆ॥ ಪಿ ಗಿ ಪಿನೇಜಿಸರವರು ಆಸ್ಪತ್ರಿ ಕೆಲಸಕ್ಕೆ ರಾಜಿನಾಮೆಕೊಟ್ಟು ಇಲ್ಲಿಯ ರಥಬೀದಿಯಲ್ಲಿ ಒಂದು ಔಷಧಾಲಯವನ್ನು ತೆರೆದಿರುತ್ತಾರೆ

ದಕ್ಷಿಣಕನ್ನಡಾ ಜಿಲ್ಲಾ ಕಲೆಕ್ಟರ ದೊರೆಗಳಾದ ಮೆ॥ ಯಂ ಇ ಕೌಚ್‌ಮನ್ ಐ ಸಿ ಎಸ್ ದೊರೆಗಳವರು ಇದೇ ಬರುವ ಮೇ ತಾ ೧ರಿಂದ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ೬ ತಿಂಗಳ ರಜೆಪಡಕೊಂಡಿರುವದರಿಂದ ಮೆ॥ ಜಿ ಎಸ್ ಟೊಪ್ಪೆಸ್ಟ ಐ ಸಿ ಎಸ್ ದೊರೆಗಳವರು ದಕ್ಷಿಣಕನ್ನಡಾ ಜಿಲ್ಲಾ ಕಲೆಕ್ಟರರಾಗಿ ನೇಮಿಸಲ್ಪಟ್ಟಿರುತ್ತಾರೆ

ಗೋಖಲೆಯವರ ಸ್ಮಾರಕ ಫಂಡು.

ಸ್ವರ್ಗಸ್ಥ ಗೋಖಲೆಯವರ ಸ್ಮಾರಕ ಫಂಡ ಮದ್ರಾಸಿನಲ್ಲಿ ಸ್ಥಾಪಿಸಲ್ಪಟ್ಟಿರುವುದು ಈ ಫಂಡಿಗೆ ಚಂದಾ ಹಣವು ಸಸ್ಥಾನದ ಎಲ್ಲಾ ಭಾಗಗಳಲ್ಲಿ ಕೂಡಿಸೋಣಾಗುತ್ತದೆ ಈ ಪ್ರಾಂತ್ಯಗಳಲ್ಲಿ ಈ ಬಗೆ ಚಂದಾ ಹಣವನ್ನು ಕೂಡಿಸುವುದನ್ನು ಇಲ್ಲಿಯ ಸ್ಯಾಡೆ ಸ್ ಬ್ರದರಹೂಡ್ ಮತ್ತು ಇತರ ಕೆಲವು ಸದ್ಗೃಹಸ್ಥರ ಸಹಾಯದಿಂದ ಹ್ಯಾಕೋರ್ಟ ವಕೀಲ ರಾ॥ ಅಮ್ಮೆಂಬಳ ಶ್ರೀನಿವಾಸಪೈಗಳವರು ವಹಿಸಿಕೊಂಡಿರುವರು ಗೋಖಲೆಯವರ ಪ್ರತಿಮೆಯನ್ನು ಸ್ಥಾಪಿಸುವ ಬಗ್ಗೆ ಮತ್ತು ಇವರಿಂದ ಏರ್ಪಡಿಸಲ್ಪಟ್ಟ ಭಾರತ ಸೇವಾಸಂಘದ ಪೋಷಕಾರ್ಥವಾಗಿ ಹೀಗೆ ಕೂಡಿಸೋಣಾಗುವ ಮೊಬಲಗು ವಿನಿಯೋಗಿಸಲ್ಪಡುವುದು ಚಂದಾದಾರರು ಅವರ ಇಷ್ಟವಿದ್ದಂತೆ ಪ್ರತಿಮೆಯ ಸ್ಥಾಪನೆಯ ಬಗ್ಗೆ ಅಥವಾ ಭಾರತ ಸೇವಾ ಸಂಘದ ಬಗ್ಗೆ ದ್ರವ್ಯ ಸಹಾಯವನ್ನು ಕೊಡಬಹುದು ಮಂಗಳೂರಲ್ಲಿ ಈ ಫಂಡಿಗೆ ಈ ತನಕ ವಂತಿಗೆ ಕೊಟ್ಟವರ ಹೆಸರು ಮತ್ತು ಮೊಬಲಗುಗಳು —

ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ ಬಗ್ಗೆ— ಗಣಪತಿಶಾಲೆಯ ಉಪಾಧ್ಯಾಯರು ರೂ ೪ ಮ॥ ರಾ॥ ಗಂಗೊಳ್ಳಿ ಕೃಷ್ಣರಾವ್ ರೂ ೨, ರಾವ್‌ಬಹದ್ದೂರ್ ಎನ್ ಸುಬ್ಬರಾವ್ ರೂ ೨೫ ಮಂಜೇಶ್ವರ್ ಅಂಬಾಬಾಯಿ ರೂ ೧೦, ರಾ॥ ಬಿ ನಾರಾಯಣಪ್ಪೈ ರೂ ೨ ಗೊಲ್ಲರಕೇರಿ ಕೃಷ್ಣರಾವ್ ರೂ ೫ ರಾ॥ ಟಿ ಭವಾನಿರಾವ್ ರೂ ೨೫ ಎಮ್ ಎಸ್ ರೂ ೧ ರಾ॥ ಎ ಶ್ರೀನಿವಾಸಪೈ ರೂ ೧೫ ರಾ॥ ಓ ಭೋಜರಾವ್ ರೂ ೨, ರಾ॥ ಎಮ್ ಎನ್. ರಾವ್ ರೂ ೧ ರಾ॥ ವಿ ರಾಮರಾವ್ ರೂ ೨ ಗೋಖಲೆಯವರ ಪ್ರತಿಮೆಯನ್ನು ನಿರ್ಮಿಸುವ ಬಗ್ಗೆ — ರಾ॥ ಎಸ್ ವೆಂಕಟಸುಬ್ಬರಾವ್ ರೂ ೧೦ ರಾ॥ ಬಿ ಮಹಾಬಲಹೆಗ್ಗಡೆ ರೂ ೪ ಒಬ್ಬರು ರೂ ೧, ದಾನಮಾಡಿರುವರು

ಇಲ್ಲಿ ಕಳೆದ ತಾ ೨೭ರ ತನಕ ಕೂಡಿಸೋಣಾದ ರೂ ೧೦೯ ಮದ್ರಾಸಿನ ಫಂಡಿಗೆ ಕಳಹಿಸೋಣಾಗಿರುತ್ತದೆ

~~~~~~

ಉಡ್ಪಿ: — ಇಲ್ಲಿಗೆ ಹೊಸ ಮೇಜಿಸ್ಟ್ರೇಟರು ಬಂದಂದಿನಿಂದ ಕಾಳಪೋತರು ಕಡಿಮೆಯಾಗಿದ್ದಾರೆಂದೇ ಹೇಳಬೇಕು

ಕುಂದಾಪುರ ಪೋಲಿಸ್ ಇನ್ಸ್‌ಪೆಕ್ಟರರಾದ ರಾ॥ ಲಕ್ಷ್ಮಣರು ಬಂಕೇಶ್ವರ ರಾಮಭಟ್ಟನೆಂಬ ಆಸಾಮಿಯನ್ನು ಗುಮಾನಿನ ಮೇಲೆ ಪರಿಶೋಧಿಸಿ, ೫೦,೦೦೦ ರೂಪಾಯಿಗಳ ಕಳವು ಪತ್ತೆಯನ್ನು ಮಾಡಿ, ತನ್ನ ಬುದ್ಧಿವಂತಿಗೆ ಚಮತ್ಕಾರಗಳನ್ನು ಪ್ರದರ್ಶಿಸಿ ಇಲಾಖೆಯ ಮತ್ತು ಪ್ರಜಾ ಜನರ ಹೊಗಳಿಕೆಗೆ ಪಾತ್ರರಾಗಿರುವರಷ್ಟೆ. ಇವರಿಗೆ ಡಿಪಾರ್ಟಮೆಂಟಿನವರು ಭಡ್ತಿಗೆ ಸಿಫಾರಸು ಮಾಡಿರುವರಂತೆ. ಇದಕ್ಕೆ ಇವರು ನಿಜವಾಗಿಯೂ ಯೋಗ್ಯರೇ ಸರಿ.

ಖಾಸಗಿ ನಡತೆಯು ಕೆಟ್ಟದ್ದಾಗಿದ್ದು ಕೆಲವು ವರ್ಷಗಳ ಹಿಂದೆ ಮದ್ರಾಸಿನ ಯುರೋಪಿಯನ ಕಂಪೆನಿಯೊಂದಕ್ಕೆ ದಗಾ ಮಾಡಿ ಕೆಲವು ತಿಂಗಳು ಬಂದಿಖಾನೆಯ ಶಿಕ್ಷೆಯನ್ನು ಅನುಭವಿಸಿ, ನಂತರ ಸೆರಮನೆಯಿಂದ ಪರಪ್ರಾಂತ್ಯಗೆಹೋಗಿ ಉದರಪೋಷಣ ನಿಮಿತ್ತ ಒಂದು ಕಂಪೆನಿಯಲ್ಲಿ ಅಲ್ಪ ತಲಬಿನ ನೌಕರನಾಗಿದ್ದು ಈಗ ತಾನೇ ಇಲ್ಲಿಗೆ ಬಂದು ಅಟ್ಟಹಾಸದಿಂದ ಸಭ್ಯ ಮನುಷ್ಯನಂತೆ ಮೆರೆದು ಬಂಕೇಶ್ವರ ರಾಮಭಟ್ಟನಂತೆ ಹಣವನ್ನು ದುಂದುಗಾರಿಕೆಯಲ್ಲಿ ವೆಚ್ಚಮಾಡುವವರ ವಿಷಯ ಜನರು ಏನು ಅಂದಾರ? ಪೋಲಿಸಿನವರು ಇಂಥವರ ಮೇಲೆ ಇಲ್ಲಿಯೂ ನಿಗಾ ಕೊಡುವದು ವಿಹಿತವಾಗಿದೆ ಪೋಲಿಸ ಫೌಜಿನಲ್ಲಿ ಪ್ರಖ್ಯಾತಪಟ್ಟ ಮ॥ ರಾ॥ ಬಾಲಯ್ಯನವರೂ ಈ ಜಿಲ್ಲೆಯ ಸಬ್ ಇನ್ಸ್‌ಪೆಕ್ಟರರಲ್ಲಿ ಮುಂದಿನವರಲ್ಲಿ ಒಬ್ಬರಾದ ಮೆ॥ ಪೆರೇರರೂ ಈ ವಿಷಯಕ್ಕೆ ಲಕ್ಷ್ಯಕೊಟ್ಟರೆ ಕುಂದಾಪುರ ಇನ್ಸ್‌ಪೆಕ್ಟರ್ ರಾ॥ ಲಕ್ಷ್ಮಣರಂತೆ ಇವರೂ ಇಲಾಖೆಯ ಹೊಗಳಿಕೆಗೆ ಪಾತ್ರರಾಗಬಹುದು.

~~~~~~

ಬಾಡಿಗೆಗೆ ಇದೆ.

ಅಲೆಕ್ಸಾಂಡ್ರ ಥಿಯೆಟ್ರಿಕಲ್ ಕಂಪೆನಿಯು ನಾಟಕವಾಡುತ್ತಿದ್ದ ಹಳೇ ಸಾರಸ್ವತ ಶಾಲಾ ಕಟ್ಟೋಣವು ಬಾಡಿಗೆಗೆ ಕೊಡೋಣಾಗುವದು. ವಿಶೇಷ ಮಾಹಿತಿಗೆ X C/o ಸ್ವದೇಶಾಭಿಮಾನಿ ಮಂಗಳೂರ, ಇವರಿಗೆ ಬರಕೊಳ್ಳುವದು

ಜೀನಸು ಧಾರಣೆ. (ರಖಂ)

ಹೊಸ ಮುಸ್ಕಿ ಅಕ್ಕಿ	5— 2—0	5—10—0
ಹೊಸ ಗಾಡಿ ರಾಶಿ ,,	4— 6—0	4— 8—0
ಹೊಸ ಗುಡ್ಡು ,,	4—10—0	5—0—0
ಅಪ್ಪರ್ ಬೆಳ್ತಿಗೆ ,,	5— 6—0	5—10—0
ಗುಡ್ಡು ಬೆಳ್ತಿಗೆ ,,	5— 1—0	5— 2—0
ರಂಗೂನು ಬೆಳ್ತಿಗೆ ಗೋಣಿ ೧ರ	7— 12—0	8— 4—0
ಗೋಧಿ ಗೋಣಿ ೧ರ ..	13—0—0	14— 0—0
ಹುರುಳಿ ಗೋಣಿ ೧ರ ...	6— 0—0	7— 2—0
ಕಡಲೆ ಗೋಣಿ ೧ರ. ,,	9—4—0	10—8—0
ತೊಗರಿ ಗೋಣಿ ೧ರ ...	10— 0—0	11— 8—0
ತೊಗರಿ ಬೇಳೆ ಗೋಣಿ ೧ರ.	12—8— 0	16— 0—0
ಉದ್ದು ಗೋಣಿ ೧ರ		10— 0—0
ಊರುಬೆಲ್ಲ ಖಂಡಿ ೧ರ		60— 0—0
ಉಪ್ಪು ಗೋಣಿ ೧ರ		3— 6—0
ಕೊಬ್ರಿ ಖಂಡಿ ೧ರ . .	80— 0—0	84— 0—0
ಕೊಬ್ರಿ ಹಿಂಡಿ ಖಂಡಿ ೧ರ		15— 0—0
ಎಳ್ಳಿಂಡಿ ಖಂಡಿ ೧ರ .	25—0—0	35— 4—0
ಕೊಬ್ರಿ ಎಣ್ಣೆ ಮುಡಿ ೧ರ .	5—14—0	6— 0—0
ಎಳ್ಳೆಣ್ಣೆ ಮುಡಿ ೧ರ(ಕುರಾಸನ)	3—10—0	3—14—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ . .		5— 0—0
ಮೋರಿಸ್ ಸಕ್ಕರೆ ಮುಡಿ ೧ರ . . .		4— 7—0
ಕಾಫಿ ಖಂಡಿ ೧ರ	212—0—0.	230— 0—0
ಹೊಸಬೆಳಗೋಟು ಖಂಡಿ೧ರ	94—0—0	98— 0—0
ಹೊಸ ಗೇರುಬೀಜ ಮುಡಿ ೧ರ . .		1—14—0
ಕಬ್ಬಿಣ ಖಂಡಿ ೧ರ		50— 0—0
ತಾಂಬ್ರ ತಗಡುಮಣ ೧ರ		17— 2—0
ತಾಂಬ್ರ ಪಾತ್ರೆಗಳು ಮಣ ೧ರ		22— 0—0
ಚೀನಿ ಬೆಳ್ಳಿ ತೀರು ೧ರ :		18—12—0

Box Locks.



Padlocks.



ಧಾರಣೆ ಸುಲಭ! ಅಲಿಗರ್ ಬೀಗಗಳು. ಧಾರಣೆ ಸುಲಭ!

ಭದ್ರವಾಗಿಯೂ, ಭಾರವಾಗಿಯೂ ಇರವುದು ಒಂದರ ಬೀಗದಕ್ಕೆ ಮತ್ತೊಂದಕ್ಕೆ ಆಗುವದಿಲ್ಲ. ನೋಡುವುದಕ್ಕೆ ಅಂದವಾಗಿಯೂ ಇರುವುದು ಇದೇ ಮಾದರಿ ಬೀಗಗಳನ್ನು ಇಂಜಿನಿಯರ್ ಇಲಾಖೆಗಳಿಗೂ, ಬ್ಯಾಂಕುಗಳಿಗೂ, ಸರಕಾರಿ ಆಫೀಸುಗಳಿಗೂ ಸಪ್ಲೈಮಾಡಿದೆ

ನಾಲ್ಕು ಚಕ್ರಗಳಿರುವ ಬೀಗಗಳ.

ನಂಬ್ರ	1	2	3	4	5
	0—12—0	0—15—0	1—4—0	1—10—0	.

ಆರು ಚಕ್ರಗಳಿರುವ ಬೀಗಗಳ

1—2—0	1 | 8—0	2—4—0	3—0—0	3—8—0

ಲ್ಲರ್ ಬೀಗಗಳು

—04—00—5—0ಎ 0—6—0 0—8—0 0—10—0

ಟ್ರಂಕುಗಳಿಗೆ ಹಾಕುವ ಕೊಂಡಿ ಬಗ್ಗಿಸಿರುವ ಬೀಗ ೧ಕ್ಕೆ 0—13—0

೩, ೪, ೫ನೇ ನಂಬರು ಬೀಗಗಳನ್ನು ಬಾಗಲುಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು. ಏಜೆಂಟರುಗಳಿಗೆ ಕಮಿಷನ್ ದೊರೆಯುತ್ತೆ ಹಾಸಲು ಪ್ರತ್ಯೇಕ

ಮರದ ಪೆಟ್ಟಿಗೆಗಳಿಗೂ, ಮೇಜುಗಳಿಗೂ, ಬೀರೂಗಳಿಗೂ ಹಾಕುವ ೪ ಚಕ್ರಗಳಿರುವ ಬೀಗಗಳು ೧ಕ್ಕೆ 1—8—0, 1—12—0.

ವಿಳಾಸ:— ಎಚ್. ಎನ್. ರಾವ್ ಅಂಡ್ ಬ್ರದರ್ಸ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶಾಶ್ವತವಾದ ಆರೋಗ್ಯವನ್ನು

ಹೊಂದುವದಕ್ಕೆ ಸುಲಭವಾದ ಮಾರ್ಗವು

ಮದನಮಂಜರಿ ಮಾತ್ರೆಗಳು

ಉಪಯೋಗಿಸುವದೇ ಆಗಿರುವದು. ಈ ಮಾತ್ರೆಗಳು ಅಜೀರ್ಣವು ಮಲಬಂಧ, ಮನೋವ್ಯಥೆ, ಜ್ಞಾಪಕಶಕ್ತಿ ಇಲ್ಲದಿರುವದು, ನರಗಳ ಬಲಹೀನತೆ, ಅಶಕ್ತಿ, ಸ್ವಪ್ನಸ್ಖಲಿತ, ಬಹುಮೂತ್ರ, ಮೂತ್ರಕೋಶ ಸಂಬಂಧವಾದ ವ್ಯಾಧಿಗಳು, ನಪುಂಸಕತ್ವ ಮುಂತಾದ ವ್ಯಾಧಿಗಳನ್ನು ಶೀಘ್ರದಲ್ಲಿಯೇ ಬೇರು ಸಹಿತವು ಕಿತ್ತು ಹಾಕಿ ಪುರುಷರಿಗೆ ಸಂತತ ಪುರುಷತ್ವವನ್ನು ಕೊಡುವವು ಇದು ಸಾಟಿಯಿಲ್ಲದ ಟಾನಿಕ್ಕು ಔಷಧಿಯಾಗಿರುತ್ತದೆ. ಕಳೆದ 25 ವರುಷ ಕಾಲದಲ್ಲಿ ಸಾವಿರಾರು ರೋಗಿಗಳನ್ನು ಸ್ವಸ್ಥಪಡಿಸಿದೆ ನಿಮ್ಮನ್ನು ಕೂಡ ಸ್ವಸ್ಥ ಮಾಡುವದು. 40 ಮಾತ್ರೆಗಳ ಡಬ್ಬಿ ಕ್ರಯ ರೂ 1—0—0

ಉಚಿತ ಕ್ರಯವು ಇಲ್ಲ ಹಾಸಲು ಇಲ್ಲ

144 ಪುಟಗಳುಳ್ಳ ವೈದ್ಯಸಾರಸಂಗ್ರಹವಾದ

ವೈದ್ಯವಿದ್ಯ

ಪುಸ್ತಕದಲ್ಲಿ ಶಾಶ್ವತವಾದ ಆರೋಗ್ಯವನ್ನು ಪಡೆಯಲು ಅತ್ಯವಶ್ಯವಾದ ವಿಷಯಗಳು ಭರಿತವಾಗಿವೆ. ನಿಮ್ಮ ವಿಳಾಸವನ್ನು ತಿಳಿಸಿದರೆ ನಿಮಗೆ ಒಂದು ಪ್ರತಿ ಉಚಿತವಾಗಿ ಕಳುಹಿಸಲ್ಪಡುವದು.

ರಾಜವೈದ್ಯ ನಾರಾಯಣಜಿ ಕೇಶವಜಿ

.. ೨೧೧ ... ರೋಡ್,

ಮದರಾಸು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾವಯಹರು ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಶೀತಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡತ (ಬಾರ), ಮೈ ಸಯಿಸ್, ಶೀತ



ವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ಅಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಾಯಿ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ಕಳೆದು ಶುದ್ಧಿ ಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರಿಗೂ ಶೂಲೆ, ಮಕ್ಕಳ ಎಳವು, ಜ್ವರ, ನಡುಕ್ಷಣ, ಕೈಶಕ್ತಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ. 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ

೨. ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವಿನಿಯಾಗಿದೆ. ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಕೊಡಲೇನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುದ್ಧಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ. 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ತಮ್ಮ ವಿಳಾಸ:—"ಶ್ರೀ ಸೀತಾರಾಘವ ವೈದ್ಯಶಾಲಾ"

ಮೈಸೂರು

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧ ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರೆಯಾಗಿ ಗುಣಪಡಿಸುವದು. 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0.

೨. ಶತಮೂಲಿಕಾ ಅಮರಸಂಜೀವನಿ—ಈ ಟಾನಿಕ್ ದ್ರಾವಕವು ನಿತ್ರಾಣಗಳಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ 1—0—0.

೩. ಬಾಲಸಂಜೀವನಿ—ಮಧುರ ಟಾನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗಿ ದಿನದಿನಕ್ಕೆ ಶುಕ್ಲಪಕ್ಷದ ಚಂದ್ರನಂತೆ ಬೆಳಗಿಸುತ್ತದೆ. ಬಾಟ್ಲಿ 1ಕ್ಕೆ 0—12—0.

೪. ವಸಂತ ಕುಸುಮಾಕರ.—ಈ ಸುವಾಸಿತ ತೈಲವು ಶೀತ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ. ಬಾಟ್ಲಿ 1ಕ್ಕೆ 1—0—0

೫. ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸಾಧ್ಯ ವ್ರಣಗಳನ್ನು 7 8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4—0—0.

೬. ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳು, ಇಲಿ ಇತ್ಯಾದಿ ಸರ್ವ ವಿಷಗಳಿಗೆ ಸಂಜೀವನವಾಗಿರುತ್ತದೆ. ಅನುಭವಸಿದ್ಧ 2—0—0

೭. ಆನಂದವನವಿಲಾಸ—ಇದು ... ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5—0—0.

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಕಲ್ಪ ಕ್ರಮಗಳಿಂದ ತಯಾರಿಸಿದ ಪೌಷ್ಟರ ಮಾತ್ರೆಗಳು, ಲೇಹ ಚೂರ್ಣಗಳು, ತೈಲ ಘೃತಗಳು, ಆಸವಾರಿಷ್ಟಗಳೂ ಜಂಟಾ ಇರುತ್ತವೆ. ಕ್ರಯಪಟ್ಟಿ ನಮ್ಮ ಕಟಲಗನ್ನು ತರಿಸಿಕೊಳ್ಳಿರಿ. ಏಜಂಟರು ಬೇಕು. ಹೆಚ್ಚು ಡಿಸ್ಕೌಂಟ್ ಕೊಡುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಸವಿನುಡಿಯ ಗ್ರಂಥಮಾಲೆ.

೧. ಪ್ರಶ್ನೋತ್ತರ ಲೇಖ್ಯಬೋಧಿನಿ. ಲೋಕವ್ಯವಹಾರವನ್ನು ಬೋಧಿಸುವುದು	...	೧—೭—೦
೨. The Self English Study / ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ / ಆಂಗ್ಲಭಾಷಾ ಪ್ರವೇಶದಾಯಿನಿ	೧ನೇ ಪುಸ್ತಕ	೧—೩—೦
೩. The Self English Study / ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ / ಆಂಗ್ಲಭಾಷಾ ಪ್ರವೇಶದಾಯಿನಿ	೨ನೇ ಪುಸ್ತಕ	೧—೩—೦
೪. The Self English Study / ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ / ಆಂಗ್ಲಭಾಷಾ ಪ್ರವೇಶದಾಯಿನಿ	೩ನೇ ಪುಸ್ತಕ	೧—೩—೦

ಇವು ಮೂರು ಪುಸ್ತಕಗಳೂ ಬೋಧಕರ ಸಹಾಯವಿಲ್ಲದೆ ಇಂಗ್ಲಿಷ್‌ಬಾಷೆಯನ್ನು ತಿಳಿಸುವುದು.

೫. ಕಥಾ ಸರಿತ್ಸಾಗರ (ಪೂರ್ವಭಾಗ). ಪಾರ್ವತೀ ದೇವಿಗೆ ಪರಮೇಶ್ವರನು ಹೇಳಿದ ದಿವ್ಯವಾದ ಕಥೆಗಳು	..	೧—೧೨—೦
೬. ಮಾಧವೀ ಕಂಕಣ (ಬೆಂಗಾಳಿ ನಾವಲು) ಕೀರ್ತಿಶೇಷರಾದ ರಾಮೇಶ ಚಂದ್ರದತ್ತ ಮಹಾಶಯರ ರಚಿತ ಅಗತ್ಯ ಓದತಕ್ಕದ್ದು		೧—೮—೦
೭. ಭಾಷಾನಿಧಿ. ಒಂಬತ್ತು ಲಿಪಿ ಮತ್ತು ಒಂಭತ್ತು ಭಾಷೆಗಳನ್ನು ಬೋಧಕರ ಸಹಾಯವಿಲ್ಲದೆ ಕಲಿಸುವುದು.		
೧ ವರ್ಣ ಪರಿಜ್ಞಾನ (೧ನೆ ಪುಸ್ತಕ)	...	೧—೧೨—೦
೨. ಶಬ್ದ ಪರಿಜ್ಞಾನ (೨ನೆ ಪುಸ್ತಕ)	.	೧—೧೨—೦
೩. ವಾಕ್ಯ ಪರಿಜ್ಞಾನ (೩ನೆ ಪುಸ್ತಕ)	.	೧—೧೨—೦
೮ ಶಕ್ತಿ (ಬಂಗಾಳಿಯ ನಾವಲು) ಓದುವುದಕ್ಕೆ ಬಲು ಚೆನ್ನಾಗಿದೆ	...	೦—೧೨—೦
೯ ಭೂಮಿಯ ಆಳತೆ ಬೋಧಕರ ಸಹಾಯವಿಲ್ಲದೆ ಈ ಶಂಕುಯೋಜನೆಯನ್ನು ಕಲಿಸುವುದು	...	೦—೧೨—೦
೧೦ ಸಾವಿತ್ರೀ (ಬಂಗಾಳಿಯ ನಾವಲು)	..	೦—೪—೦
೧೧. ಸತೀ ದೇವಿ. (ಬಂಗಾಳಿಯ ನಾವಲು)	..	೦—೪—೦
೧೨ ದಮಯಂತಿ (ಬಂಗಾಳಿಯ ನಾವಲು)	...	೦—೪—೦
೧೩. ಸಂಯುಕ್ತೆ. (ಬಂಗಾಳಿಯ ನಾವಲು)	...	೦—೪—೦
೧೪. ಶ್ರೀ ವಿವೇಕಾನಂದ ಸ್ವಾಮಿ. (ಸಚಿತ್ರ ಚರಿತ್ರೆ)	.	೦—೪—೦
೧೫ ಶ್ರೀ ವಿವೇಕಾನಂದೋಪನ್ಯಾಸ. (ಹಿಂದೂಮತ)	..	೦—೪—೦
೧೬ ತಾರಾಬಾಯಿ (ಜೀವನ ಚರಿತ್ರೆ)	..	೦—೪—೦
೧೭. ದಾದಾಭಾಯಿ ನೌರೋಜಿ	...	೦—೧—೦
೧೮. ಸರ್ ಟಿ ಮಾಧವ ರಾವ್	.	೦—೧—೦
೧೯. ಈಶ್ವರ ಚಂದ ವಿದ್ಯಾಸಾಗರ	..	೦—೧—೦
೨೦ ರಾಮಮೋಹನರಾಯಿ	...	೦—೧—೦

ಭಾರತಿ ಸಂಪಂಗಿರಾಮ,
೪೨ ಸಿ. ಪೇಟೆ ಕೋಟೆ, ಬೆಂಗಳೂರು ಸಿಟಿ.

ಕೊಡ್ ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರ ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ಅವಲಂಬಿಸಿರುತ್ತದೆ. ಆಗ್ಗ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವವರಿಂದ ಅತಿಸಾರವು ಅನುಸರಿಸುತ್ತದೆ. ಅದರೆ ಅಂತಹ ಅಪಾಯಗಳಾವರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಪೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯು ಇತರ ರೋಗಗಳಲ್ಲಿ ಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದಿಂದಿಗೆ ಬೇಕಾಗುವುದೋ ಆಗ್ಗೆ ಪೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುಲಭವಾಗಿರುತ್ತದೆ ಇದು ಎಲ್ಲಾ ಅಂಗಡಿಗಳಲ್ಲಿ ದೊರಕುವುದು. ಮತ್ತು ಕನ್ನಡ ಭಾಷೆಯವರೆಲ್ಲರು ಈ ಔಷಧಿ ಕಾಡಿನ ವಿಲಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟ್ಲಿಗೆ 1—12—0.

ದಿ. ಜೂಲನ್ ಮಾರ್ಟ್. ಮಂಗಳೂರು,
ದಕ್ಷಿಣ ಕನ್ನಡ

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡೆದಿರುವ ಯಗ್ಜಬಿಷನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ

ಊದಬತ್ತಿಗಳು 4 ರೂ. ತೂಕದ ಶೇರು 1ಕ್ಕೆ ರೂ, 12—0—0, 5—0—0, 3—0—0. 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0.

ಸುಗಂಧಿ ಕಾಡುಕ 1ಕ್ಕೆ 0—1—0. **ಬಾಲಗ್ರಹ** ದೂಪ ಟಿನ್ 1ಕ್ಕೆ 0—8—0. **ಸುವಾಸನೇ ಸುಣ್ಣ** ಶೀಸೆ 1ಕ್ಕೆ 0—2—0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್
ಸುಗಂಧಕಾರಿ, ಮೈಸೂರು.

M. S. RAO & CO.,

BOOK-SELLERS ETC.

AVENUE ROAD, BANGALORE CITY.

Please note:—We have changed our address from—M. Subba Rao Bros, Book-Sellers, Shankarapur, Bangalore City to—

M. S. RAO & Co.,

Book Sellers, Stationers & Commission Agents,
AVENUE ROAD, BANGALORE CITY.

ಯಂ. ಯಸ್. ರಾವ್ ಕಂಪೆನಿ.,

ಬುಕ್‌ಸೆಲರ್ಸ್, ಸ್ಟೇಷನರ್ಸ್ ಮತ್ತು ಕಮಿಷನ್ ಏಜಂಟ್ಸ್,

ಅವಿನ್ಯೂರೋಡ್, ಬೆಂಗಳೂರು ಸಿಟಿ.

ಈವರಿವಿಗೆ ಇದ್ದ ಯಂ ಸುಬ್ಬರಾವ್ ಬ್ರದರ್ಸ್, ಶಂಕರಪುರಂ, ಬೆಂಗಳೂರು ಸಿಟಿ-ಎಂಬ ವಿಳಾಸವನ್ನು ಮೇಲ್ಕಂಡಂತೆ ಬದಲಾಯಿಸಿದ್ದೇವೆ.

ನಮ್ಮಲ್ಲಿ ಎಲ್ಲಾ ವಿಧವಾದ ಕನ್ನಡ ಕಥೆಗಳೂ, ಬಿ. ವೆಂಕಟಾಚಾರ್ಯರಿಂದ ರಚಿತವಾದ ನಾವಿಲ್‌ಗಳೂ, ಗವರ್ನಮೆಂಟ ಸ್ಕೂಲು ಪುಸ್ತಕಗಳೂ ದೊರೆಯುತ್ತವೆ. ಹೊಸಕದ ಪಟ್ಟಿ ಹೊಸದಾಗಿ ಪ್ರಿಂಟಾಗಿದೆ. ಉಚಿತ.

M. S. RAO & Co.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂಡ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳ ೮ ಪಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡದಿದೆ. ಬಾಟ್ಲಿಗೆ ೧ರೂ ೩ ಬಾಟ್ಲಿಗೆ ೨ ರೂ ೧೪ ಆಣೆ.

೨ ಪ್ರಮೇಹರಿಪು ಬಿಂದು ಉರಿಯನ್ನು ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು ಬಾಟ್ಲಿಗೆ ೨-೮-೦

೩. ಫಂಡಜೀವಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ಕೃಷ್ಟವು. ಪೌಷ್ಟಿಕವಾಗಿದೆ ರಾತಲಿಗೆ ೨ ರೂ

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು ತಿಂಗಳ ಔಷಧಕ್ಕೆ ಒಟ್ಟು ೩ ರೂ ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು ತೊಲೆಗೆ ೨.ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦ ಶಾಲ್ಮಲೀ ಪಾಕ ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ

೧೧ ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ ೬ ಆಣೆ.

೧೨ ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯು ಇದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪ ಬ್ರಹ್ಮಿ ಸಾರಸ್ವತ ಚೂರ್ಣ ಉನ್ಮಾದ, ಅಪಸ್ಮಾರ, ಉಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣಶಕ್ತಿಯನ್ನು ಬೆಳೆಯಿಸುವದು ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಪಟ್ಟಿಯ ಕೆಟಲಾಗು ನೋಡಿರಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದ ಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು

ನಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

B M Nath & Co, *Ayurvedic Chemists*,

Vepery Post, MADRAS.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಕುತ ಮಿಶ್ಯನ್ ಚೇಕುಗಳೂ, ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ ಬೆಳ್ಳಿ ಎಂಬ ಗುರುಸು ಕಲ್ಲು ಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಥ ವಿಥ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀಲೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ

ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,

ಹಂಪನ್‌ಕಟ್ಟ, ಮಂಗಳೂರು

ದಿ ಕೆನರಾ ಸ್ಯಾಕಲ್ ಮಾರ್ಟ್, ಉಡುಪಿ.



1 ಮೇಲಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸದಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ. ಸದರಿ ಕಾರಖಾನೆಯಲ್ಲಿ ಪ್ರಸಿದ್ಧವಾದ ಬಿ ಎಸ್ ಎ ಸಿಂಗರ್, ಹಂಬರ್, ರಜವಿಟ್‌ವರ್ತ ಅಲ್ಲದೆ ಸುಲಭ ದರದ ಬೆನ್ಸನ್, ರೊಯಲ್, ಮಿನೋರಾ, ಸ್ವಾರ್ಲಿ ಇತ್ಯಾದಿ ಸ್ಯಾಕಲುಗಳು ಅದಕ್ಕೆ ಬೇಕಾಗುವ ಬಿ ಎಸ್. ಎ. ಬ್ರೆಂಪ್ಸನ್, ಬ್ರೂಕ್ಸ್, ಲೂಕಸ್, ಪೆರ್ರಿ ಮುಂತಾದ ಉಪಕರಣಗಳೂ, ಡನ್‌ಲೊಪ್ ಪಾಮರ್, ಕೆಂಬ್ರಿಜ್, ಇಂಗ್ಲೀಷ ಟಾಯರ್ಸ್ ಮತ್ತು ಟ್ಯೂಬುಗಳೂ ಸಹಾ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಸೀದಾ ವಿಲಾಯತಿಯಿಂದ ತರಿಸುವದರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಸಹಾ ದೊರೆಯುವದು

2 ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲ್ಲಿ ಖಾತ್ರಿಯಾದೀತು

3 ಸ್ಯಾಕಲ್ ಕಲಿಯಲಪೇಕ್ಷೆ ಉಳ್ಳವರಿಗೆ ಮೂರೇ ದಿವಸಗಳಲ್ಲಿ ಪೂರ್ಣ ಟ್ರೈನ್ ಮಾಡಿ ಬಿಡಲಾದೀತು.

4 ನಾದುರುಸ್ತಿಯಾಗಿರುವ ಸ್ಯಾಕಲುಗಳನ್ನು ಕಡಿಮೆ ಚಾರ್ಜಿನಿಂದ ತೃಪ್ತಿಕರವಾಗಿ ದುರುಸ್ತಿ ಮಾಡಿಕೊಡಲಾದೀತು.

5. ಸ್ಯಾಕಲುಗಳನ್ನು ಬಾಡಿಗೆಗೆ ಕೊಡತಕ್ಕ ಏರ್ಪಾಟೂ ಮಾಡಿಯದೆ.

ಹೆಚ್ಚಿನ ಮಾಹಿತಿಗೂ ಬೇಕಾಗುವ ಸಾಮಾನುಗಳಿಗೂ ಕೆಳಗಿನ ವಿಳಾಸಕ್ಕೆ ಬರದುಕೊಳ್ಳಿರಿ.

K. K. Shanbhog, *Proprietor*

THE CANARA CYCLE MART.

Udipi, S. Canara

150 ಪುಟಗಳ ಪುಸ್ತಕವು.

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ

ನಮ್ಮ ಏಜಂಟರು:— 1. ಮೆಸ್ಸರ್ಸ್, ರಫಯೆಲ್ ಎಂಡ್ ಕೊ, ದ್ವಿಟೊಬಿಲ್ಡಿಂಗ್
2. ಜುಬಿಲಿ ಕೇಕ್ ಬಜಾರ್, ಬೆಂಗಳೂರು. ಮಂಗಳೂರು

S. U. N. & CO.,

BENARES CITY, U.P.

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲ್ಲಿ ನೆಯ್ದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗನ್ನು ಇನಾಮಾಗಿ ಕಳುಹಿಸಲಾಗುವದು.

ನಮ್ಮ ವಿಳಾಸ:— ಯಸ್.ಯು.ಯನ್. ಮತ್ತು ಕಂಪೆನಿ, ಕಾಶಿ

ಚಿನ್ನ ಮತ್ತು ಬೆಳ್ಳಿಯ ಮೆಡಲುಗಳನ್ನು ಬಹುಮಾನವಾಗಿ ಪಡೆದ

ಸ್ಟೀವನ್ ಎಂಡ್ ಸನ್

ಬಿಸ್ಕುಟು ವ ಕೇಕುಗಳನ್ನು ತಯಾರಿಸುವವರು, ಮಂಗಳೂರು.

ಏಜಂಟರು.—ಅಂತೋನಿ ಎಲ್ ರೇಗೊ, ಸ್ವೀಟ್ ಮಾರ್ಟ್ ಬಜಾರ್, ಕಲ್ಲಿಕೋಟೆ.
ಸ್ವದೇಶಿ ಎಂಪೋರಿಯಮ್, ಸೇಲಂ.
ಕಣಕಾಸಬಾ ಚೆಟ್ಟಿಯರ್, ಲಾಲ್‌ಗುಡಿ, ತುವಲೂರ್, ತಿರುಚಿನಾಪಳ್ಳಿ.
ಎವ್ ಪ್ರಾಸ್ ಶೋಪ್, ಮಡಿಕೇರಿ.
ವಿ ಬಾಲಕೃಷ್ಣ ನ್ಯಾಡು, ಬಿಗ್ ಬಜಾರ್ ಸ್ಟ್ರೀಟ್, ಕೊಯಂಬುತ್ತೂರು.
ಆರ್ಸೋನ್ ಎಂಡ್ ಐಮನ್ ಶೋಪ್, ಉಡ್ಪಿ.

ನೀವು ನಮ್ಮ ಬಿಸ್ಕುಟ ಇತ್ಯಾದಿಗಳಿಂದ ತೃಪ್ತಿಹೊಂದಿದರೆ ಇತರರಿಗೆ ಹೇಳಿರಿ. ಇಲ್ಲವಾದರೆ ನಮಗೆ ತಿಳಿಸಿದರೆ ನಿಮ್ಮನ್ನು ತೃಪ್ತಿಪಡಿಸುವೆವು.

ವಿಳಾಸ.— ಸ್ಟೀವನ್ ಎಂಡ್ ಸನ್ಸ್, ಮಂಗಳೂರು.

ಪ್ಲೀಡರ್ ಎಂ. ಮಲ್ಲಾರಾಧ್ಯರಿಂದ ರಚಿತವಾದವುಗಳು.

ವ್ಯವಹಾರ ನಿರ್ಣಯ.

ಕನ್ನಡದ ಲಾ ಪುಸ್ತಕವು.

ತೃತೀಯ ಮುದ್ರಣ, 616 ಪುಟಗಳುಳ್ಳದ್ದು.
ಕ್ರಯ, ದಪ್ಪ ಕಾಗದದ ಪ್ರತಿಗೆ .. 1—8—0.
ಕ್ರಯ, ಗ್ಲೇಜ್ „ „ ... 2—4—0.
ಪೋಸ್ಟೇಜು ಪ್ರತಿ 1ಕ್ಕೆ 4 ಆಣೆ.

ಇದರಲ್ಲಿ ಹಿಂದೂ ಲಾ, ಮಹಮ್ಮದೀಯ ಲಾ, ಪೀನಲ್‌ಕೋಡು ಇವು ವಿಸ್ತಾರವಾಗಿ ಬರೆಯಲ್ಪಟ್ಟಿವೆ. ಮೈಸೂರು, ಮದ್ರಾಸು, ಬೊಂಬಾಯಿ ದೇಶಗಳಿಗೆಲ್ಲಾ ಸಾಮಾನ್ಯವಾದ ಲಾ. ವೃತ್ತಸ್ವತ್ತಿನ ವಿಲೇವಾರಿ, ಅನಾಥ ರಕ್ಷಣೆ ಕ್ರೈಸ್ತರ ವಾರಸ್ಯ ಹಕ್ಕು ಈ ವಿಷಯಕವಾದ ಖಾನೂನುಗಳೂ, ಕ್ರಯ, ದಾನ, ವಿಲ್ಲು, ಹುಂಡಿ, ಗೇಣಿ ಮೊದಲಾದ ಸಮಸ್ತ ವ್ಯವಹಾರವನ್ನೊಳಗೊಂಡಿರುವ 92 ವಿಧದ ದಸ್ತಾವೇಜು ನಮೂನೆಗಳೂ, ಲಾ ಪ್ರಕಾರ ಸಿವಿಲ್ ಕ್ರಿಮಿನಲ್ ಕೋರ್ಟುಗಳಿಗೂ ಪೋಲೀಸಿಗೂ ಬರೆಯುವ ಅರ್ಜಿಗಳ 49 ನಮೂನೆಗಳೂ, ಅವುಗಳ ಸಂಬಂಧವಾದ ವಿಶೇಷ ವಿಷಯ ವಿಚಾರಗಳೂ ಬಹಳ ಚೆನ್ನಾಗಿ ಬರೆಯಲ್ಪಟ್ಟಿವೆ. ಇಷ್ಟು ದೊಡ್ಡ ಉಪಯುಕ್ತವಾದ ಗ್ರಂಥವನ್ನು ಇಷ್ಟು ಕಡಿಮೆ ಬೆಲೆಗೆ ಯಾರೂ ಮಾರುವುದಿಲ್ಲ.

"ತಖಾವಿ ಲಾ."

ಇದು ಕೃಷಿಯ ಅಭಿವೃದ್ಧಿಗಾಗಿಯೂ, ರೈತರ ಸಹಾಯಾರ್ಥವಾಗಿಯೂ ಸರಕಾರದವರು ಕೊಡುವ ಸಾಲ ಮೊದಲಾದ ಸಹಾಯ ವಿಷಯಕವಾದ ಲಾವನ್ನು ವಿವರಿಸುವ ಉಪಯುಕ್ತವಾದ ಪುಸ್ತಕ. ಬೆಲೆ 8 ಆಣೆ ಪೋಸ್ಟೇಜು 2 ಆಣೆ.

ನಮ್ಮ ವಿಳಾಸ:— ಎಂ. ಎಂ. ಪಂಡಿತಾರಾಧ್ಯ ಮೈಸೂರು.

Estd. 1888 ಸ್ಥಾಪನೆ 1888.

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೧೦-೨೫ ವರ್ಷಗಳ ಹಳತ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೆಲ್ಲಾ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಬಿಗಿಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಸಾಲಾಮಿಸ್ರಿ"ಯಲ್ಲಿ ತಯಾರಿಸಲ್ಪಟ್ಟದ್ದು ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಬೆಂಗಳೂರು ಸಿಟಿ ಟಪ್ಪಾಲು ಆಫೀಸಿನ ಸೇವಿಂಗ್ಸ್ ಬ್ಯಾಂಕಿನಲ್ಲಿ 15—3—15ರಲ್ಲು ಡಿಪಾಜಿಟು ಇಟ್ಟಿರುತ್ತೇವೆ.

ಮುರಬ್ಬಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು **ಲೋಕೋಪಕಾರಾರ್ಥ**ವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ ! ಸೇವಿಸಿರಿ !!

ಈ ಸಾಲಾಮಿಸ್ರೀ ಎಂಬದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು **ಕಾಂದಹಾರ್ ದೇಶಗಳಲ್ಲಿ ಇದು** ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು **ಶಕ್ತಿಯಲಿ ಕಾಬೂಲ್ ಕಾಂದಹಾರ್ ದೇಶದ** ಒಬ್ಬ ಮನುಷ್ಯಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ಶಾವುಗಡೆ ಇವುಗಳನ್ನು ಪಕ್ವ ಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು **ಸಾಲಾಮಿಸ್ರಿಯೇ ಅಥವಾ** ಬೇರೆ ತರಹಾದ್ದೇ ಎಂಬುವುದು ತಿಳಿದು ಬರುತ್ತೆ.

ಈ ಮುರಬ್ಬವನ್ನು ಪ್ರತಿಯೊಬ್ಬರು ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವದು.

ಸಾಲಾಮಿಸ್ರಿ ಮುರಬ್ಬಾವು — ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು — ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು — ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು.
ಸಾಲಾಮಿಸ್ರಿ ಮುರಬ್ಬಾವು — ಕ್ಷಣಕ್ಷಣಕ್ಕು ಮೂತ್ರವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು — ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು
ಸಾಲಾಮಿಸ್ರಿ ಮುರಬ್ಬಾವು — ಮೆದುಳಿಗೆ ಬಲವನ್ನು ಕೊಡುವದು
ಸಾಲಾಮಿಸ್ರಿ ಮುರಬ್ಬಾವು — ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು — ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು
ಸಾಲಾಮಿಸ್ರಿ ಮುರಬ್ಬಾವು — ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು — ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು — ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು — ತಾಂಬ್ರ ಮತ್ತು ಭಂಗಾರ ಭಸ್ಮಕಿಂತಲು ಉತ್ತಮವಾದದ್ದು.
ಸಾಲಾಮಿಸ್ರಿ ಮುರಬ್ಬಾವು — ಸ್ತ್ರೀಸಂಗಕ್ಕೆ ಮೊದಲು ಸ್ಖಲನವಾಗುವುದನ್ನು ನಿಲ್ಲಿಸುವದು.

ಒಂದು ಡಬ್ಬಿ ಮುರಬ್ಬವನ್ನು 15 ದಿನಗಳು ಉಪಯೋಗಿಸುವದರಿಂದ ಪೂರ ಗುಣಕೊಡುತ್ತೆ. 2—3 ಡಬ್ಬಿ ಮುರಬ್ಬವನ್ನು ಉಪಯೋಗಿಸುವದರಿಂ೯ ಜನ್ಮಾಂತರದ ವರಿವಿಗೂ **ಗುಣಕೊಡುತ್ತೆ.**

15 ತೊಲಿ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2 ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿ ವರೆಗೆ ಆಣೆ 6.

ಏಜಂಟರು:— ಡಿ ಸಯ್ಯದ್ ಉಸ್ಮಾನ್ ಎಂಡ್ ಕೊ
ದೊಡ್ಡಪೇಟೆ, ಬೆಂಗಳೂರು ಸಿಟಿ

ಡಿ. ಮನ್ನಾಲಾಲ್, ಡಿಲ್ಲೀ ವೈದ್ಯರು,
5 ಹಾಜಿಸಾಹೇಬ್ ಮಹಡಿ ಅವೆನ್ಯು ರೋಡ್, ಬೆಂಗಳೂರು ಸಿಟಿ.

ನರೆಕೂದಲಿಟ್ಟುಕೊಂಡು
ಮುದುಕರಾಗಿ ಕಾಣುವುದೇಕೆ?

ದರ್ಬಾರ್ ಕೂದಲು ರಂಗು

ಒಂದು ಸಲ ಹಚ್ಚಿದರೆ 20 ವರುಷ ಪ್ರಾಯದ ಸಮರ್ಥರಂತೆ ಕಾಣುತ್ತಿರಿ. ಈ ರಂಗು ಹಚ್ಚಿಕೊಂಡರೇ ಕೂದಲು ಅಚ್ಚ ಕಪ್ಪಾಗಿ ಹೊಳೆಯುತ್ತೆ. ಈಗ ಮಾರಿಕೆಗೆ ಬಂದಿರುವ ಅಲ್ಪತರದ ಕೂದಲಿಗೆಹಚ್ಚುವ ಬಣ್ಣಗಳೂ ರಂಗುಗಳೂ ತುಂಬ ಕೀಳು ಜಾತಿಯವು; ಹಚ್ಚಿದಮೇಲೆ ಕೂದಲು ಕೆಂಪು ತಿರುಗಿ ಅಸಹ್ಯವಾಗಿ ಕಾಣುತ್ತದೆ. ನಮ್ಮ "ದರ್ಬಾರ್ ಕೂದಲು ರಂಗು" ಅಂಥಾದ್ದಲ್ಲ; ಬಹು ಮೇಲಾದದ್ದು. ಒಂದಾವರ್ತಿ ತರಿಸಿ ಪರೀಕ್ಷೆಮಾಡಿದರೆ ನೀವೇ ಸಂತೋಷಪಡುವಿರಿ. ಕ್ರಯ ಬುರುಸು ಸಮೇತ ಬಾಟ್ಲಿ ಒಂದಕ್ಕೆ ರೂ. 1; ಅಂಚೆ ಹಾಸಲು 4 ಅಣೆ.

ವಿಳಾಸ:— ವಿ ಎ. ಎಸ್. ಪ್ರಾಣ್ ಕಂಪೆನಿ.
ನಂಬ್ರ 3 ಇರುಳಪ್ಪನ್ ಬೀದಿ, ಮದರಾಸು.

ಕಟೀಲ ನರಸಿಂಹಪೈ ಎಂಡ್ ಸನ್ಸ್,

ರಥಬೀದಿ, ಮಂಗಳೂರು.

ಇತರ ಕಡೆಗಳಿಂದ ವಸ್ತ್ರ ಇತ್ಯಾದಿಗಳನ್ನು ತಕ್ಕೊಳ್ಳುವ ಮೊದಲು ನಮ್ಮಲ್ಲಿಯ ದರಗಳನ್ನೂ ಸನಗುಗಳನ್ನೂ ಪರೀಕ್ಷಿಸಿ ನೋಡಿರಿ.

ನ್ಗ'ದಿ ಗಿರಾಕಿಗಳಿಗೆ ವಿಶೇಷ ಪ್ರಯೋಜನ ದೊರಕುವಂತೆ ನಮ್ಮ ದರಗಳನ್ನು ಇಟ್ಟಿರುತ್ತೇವೆ.

ಮಧುರಾ, ತಿರುಚಿನಾಪಳ್ಳಿ, ಸೇಲಂ, ಮದ್ರಾಸು, ಮುಂಬಾಯಿ, ಪೂನಾ, ಸೂರತ್, ಬೆಂಗಳೂರು, ಬನಾರಿಸ ಮೊದಲಾದ ನಾನಾ ವಿಧದ ವಸ್ತ್ರನೇಯಿಗೆಯಲ್ಲಿ ಪ್ರಖ್ಯಾತಪಟ್ಟ ಪ್ರಾಂತ್ಯಗಳಿಂದ ಎಲ್ಲಾ ಬಗೆಯ ಸನಗುಗಳನ್ನು ತರಿಸಿರುವೆವು. ಗಿರಾಕಿಗಳು ಬಂದು ಪರೀಕ್ಷಿಸಿ ನೋಡಬೇಕಾಗಿ ವಿಜ್ಞಾಪನೆ.

Kateel Narasimha Pai & Sons,
Cloth Merchants,
CAR STREET, Mangalore.

ಮನೋಹರವೂ ಮೋಹಕರವೂ ಆದ

ಚಂದ್ರಪ್ರಭಾವತಿ ಹೇರಾಯಿಲ್.

ಈ ತೈಲದ ಸುವಾಸನೆಯು ಮೂರು ದಿನಗಳ ವರಿವಿಗೂ ಹೋಗದೆ ಘಮುಘಮಿಸುತ್ತಿರುವದು. ಇದರ ಸುವಾಸನೆಯು ಮೂರು ದಿನಗಳಲ್ಲಿ ಹೋದರೆ **100** ರೂಪಾಯಿಗಳು ಬಹುಮಾನವಾಗಿ ಕೊಡುತ್ತೇವೆ.

ಕಡಿಮೆ ತರದ ಹೇರಾಯಿಲ್‌ಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮಿದುಳನ್ನೂ ಹಾಳು ಮಾಡಿಕೊಳ್ಳಬೇಡಿರಿ. ಸುಂದರವಾದ ಕೇಶರಾಶಿಯೂ, ಅಂದವಾದ ಕೂದಲುಗಳೂ ಇವೇ ಪ್ರತಿಯೊಬ್ಬ ಸ್ತ್ರೀಪುರುಷರಿಗೂ ಸೌಭಾಗ್ಯವಾದ ಅಲಂಕಾರವಾಗಿದೆ. ಕೂದಲುಗಳು ಸುಂದರವಾಗಿ ಕಾಣಬರಬೇಕಾದರೆ ಅವು ರೇಷ್ಮೆಯಂತೆ ಮೃದುವಾಗಿ ಕಂಗೊಳಿಸುತ್ತಿರಬೇಕು. ಇದಲ್ಲದೆ ತುರುಬನ್ನು ಯಾವ ರೀತಿಯಿಂದಲಾದರೂ ಕಟ್ಟುವಂತೆ ನಯವಾಗಿರಬೇಕು.

ಈ ತೈಲವನ್ನು ಉಪಯೋಗಿಸುತ್ತಲೆ ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವುದರಲ್ಲಿ ಇದಕ್ಕೆ ಸಮಾನವಾದ್ದು ಬೇರೊಂದಿಲ್ಲ. ಕೂದಲುಗಳಿಗೆ ಈ ತೈಲವನ್ನು ಸವರುವುದರಿಂದ ಎಂದಿಗೂ ಬಿದ್ದುಹೋಗಲಾರವು. ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮನೋಹರವೂ ಮೋಹಕರವೂ ಆಗಿ ಮನಸ್ಸನ್ನು ಉಲ್ಲಾಸಪಡಿಸುತ್ತದೆ. ಈ ಚಂದ್ರಪ್ರಭಾವತಿ ಹೇರಾಯಿಲನ್ನು ಉಪಯೋಗಿಸುತ್ತಲೆ ಮಿದುಳಿಗೆ ಬಲವನ್ನು ಕೊಡುವದು. ಕೂದಲನ್ನು ಕೆಂಚಾಗಿಸದೆ ಕಪ್ಪು ಬಣ್ಣದಿಂದೊಡಗೂಡಿಸಿ ಗುಂಗುರು ಗುಂಗುರಾಗಿ ಬೆಳೆಯಿಸುವುದು. ಕಣ್ಣಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುವುದು. ಈ ತೈಲವನ್ನು ತಲೆಗೆ ಸವರುವುದರಿಂದ ತಲೆನೋವನ್ನು ತಕ್ಷಣವೇ ಹೋಗಲಾಡಿಸುವುದು. ಮಿದುಳಿಗೆ ತಂಪನ್ನುಂಟುಮಾಡುವುದು. ನಿದ್ರೆಯು ಚೆನ್ನಾಗಿ ಬರುವುದು. ಈ ಚಂದ್ರಪ್ರಭಾವತಿ ಹೇರಾಯಿಲ್ ಔಷಧಕ್ಕೆ ಔಷಧವೂ, ಸುಗಂಧ ದ್ರವ್ಯಕ್ಕೆ ಸುಗಂಧ ದ್ರವ್ಯವೂ ಆಗಿರುವುದು. ಈ ತೈಲವು ಸ್ತ್ರೀಪುರುಷರಿಗೆ ಬಹಳ ಉಪಕಾರಿಯಾದದ್ದು. ಒಂದು ಚಂದ್ರಪ್ರಭಾವತಿ ಹೇರಾಯಿಲ್ ಶೀಸೆಯು ಬಹು ದಿನಗಳವರಿವಿಗೂ ಬರುವುದು. **ಕ್ರಯ ಶೀಸೆ ಒಂದಕ್ಕೆ 1 ರೂಪಾಯಿ ಟಪ್ಪಾಲು ಖರ್ಚು 4 ಆಣೆ**

ನರೆಕೂದಲುಗಳಿಟ್ಟುಕೊಂಡು ಮುದುಕರಾಗಿ ಕಾಣುವುದೇಕೆ?

ದರ್ಬಾರ್ ರಂಗು.

ಒಂದು ಸಲ ಹಚ್ಚಿದರೆ 25 ವರುಷದ ಪ್ರಾಯಸ್ಥರಂತೆ ಕಾಣುತ್ತೀರಿ. ಈ ರಂಗು ಹಚ್ಚಿಕೊಂಡರೆ ಕೂದಲು ಕಪ್ಪಾಗಿ ಹೊಳೆಯುತ್ತೆ. ಈಗ ಮಾರಾಟಕ್ಕೆ ಬಂದಿರುವ ಅಲ್ಪ ತರದ ಕೂದಲು ರಂಗುಗಳು ತುಂಬಾ ಕೀಳುಜಾತಿಯವು. ಹಚ್ಚಿದ ಕೂಡಲೆ ಕೂದಲು ಕೆಂಚಾಗಿ ಅಸಹ್ಯವಾಗಿ ಕಾಣುತ್ತದೆ. ನಮ್ಮ ದರ್ಬಾರ್ ರಂಗು ಅಂಥಾದ್ದಲ್ಲ, ಬಹು ಮೇಲಾದದ್ದು. ಒಂದಾವರ್ತಿ ಹಚ್ಚಿದರೆ ಕೂದಲು ಕಪ್ಪಾಗಿ ರೇಷ್ಮೆಯ ಹಾಗೆ ಕಂಗೊಳಿಸುವುವು. ಕ್ರಯ ಬ್ರುಷು ಸಮೇತ ರೂ 1—4—0

ಉಪಯೋಗಿಸುವ ವಿಧಾನ ಬಾಟ್ಲಿಯ ಜೊತೆಯಲ್ಲಿರುತ್ತೆ

ಖುಬ್‌ಸೂರತ್.

ಮುಖಕಾಂತಿ.

ಇದು ಒಂದೇ 1,000 ರೂಪಾಯಿಗಳು ಬಾಳುವುದು.

ಅಂದಗೆಡಿಸಿ ಎಲ್ಲರೆದುರಿಗೂ ಮುಖವು ಮುಚ್ಚಿಕೊಳ್ಳುವಂತೆ ಮಾಡುತ್ತಾ ಹೇಗೂ ವಾಸಿಯಾಗದ ಅಸಹ್ಯದ ಗುರುತುಗಳು, ಮಚ್ಚೆಗಳು, ಗಂಧೆಗಳು, ಬಂಜಲು ಹುಣ್ಣುಗಳು, ಜಬ್ಬು, ಇನ್ನೂ ಇತರ ವಿಧವಾದ ಮಚ್ಚೆಗಳು, ನವೆ ಮುಂತಾದುವುಗಳಿಗೆ ಈ ಔಷಧವನ್ನು ೧೫ ದಿನಗಳು ಹಚ್ಚುವುದರಿಂದ ಗುಣವಾಗಿ ಮುಖಕ್ಕೆ ಕಾಂತಿಯನ್ನು ಕೊಟ್ಟು ಹಸನ್ಮುಖಿಗಳಾಗಿ ಮಾಡುವುದು. ಕ್ರಯ ಡಪ್ಪಿ ಒಂದಕ್ಕೆ 8 ಆಣೆ

ವಚ್ಚಾಂಗಚೂರ್ಣ.—ಧಾತುವು ನೀರಿನಂತಿದ್ದರೂ, ಮೂತ್ರದಲ್ಲಿಯೂ, ನಿದ್ರೆಯಲ್ಲಿಯೂ ಧಾತುವು ಹೋಗುತ್ತಿದ್ದರೂ, ಸೊಂಟನೋವು, ಮೂತ್ರದಲ್ಲಿ ಉರಿ, ಹಸಿವು ಇಲ್ಲದೆ ಇರುವುದು, ಕೈಕಾಲುಗಳಲ್ಲಿ ನೋವಿದ್ದರೂ, ಶರೀರದಲ್ಲಿ ನಿಶ್ಯಕ್ತಿ ಆಗಿದ್ದರೂ, ತಲೆ ತಿರುಗುವುದು, ನಡೆಯುವಾಗ ಮೇಲುಸ್ವಾಸ ಬರುವುದು ಸಹ ಇದನ್ನು ಉಪಯೋಗಿಸಿದರೆ ಇಲ್ಲಿ ಹೇಳುವುದು ನಿಜವೆಂದು ವ್ಯಕ್ತವಾಗುವುದು. ಇದರ ಗುಣಗಳ ಪ್ರಖ್ಯಾತಿಯಿಂದ ಇದರ ಬೆಲೆಯು ೧೦ ರೂಪಾಯಿ ಇಟ್ಟರೂ ಬಹಳ ಸುಲಭವೆಂದರಿಯಬೇಕು. ಈ ಬೆಲೆಯನ್ನು ಇಡುವದರಿಂದ ಬಡವರು ಕೊಳ್ಳಲಾರರು. ಆದ್ದರಿಂದ ಇದರ ಬೆಲೆಯು ಡಬ್ಬಾ ೧ಕ್ಕೆ ೧೦ ಆಣೆ ಇಟ್ಟಿರುತ್ತೆ.

ಪಂಡಿತ್ ಡಿ. ಎಂ. ರವರ ಭಸ್ಮವು.—ಉಷ್ಣದಿಂದ ಮೂತ್ರದಲ್ಲಿ ಉರಿ, ಮೂತ್ರದಲ್ಲಿ ಕೀವೂ ಇದು ಹಳೆದಾಗಲಿ ನೂತನವಾಗಲಿ ಆಗಿದ್ದರೂ ೨೪ ಗಂಟೆಯೊಳಗಾಗಿ ನಿವಾರಣೆಯಾಗುತ್ತವೆ. ಕ್ರಯ ಡಪ್ಪಿ ೧ಕ್ಕೆ ೧೨ ಆಣೆ.

ಉಷ್ಣಕಾರಕಕ್ಕೆ ಮಾತ್ರೆಗಳು:—ಉಷ್ಣಕಾರಕದಿಂದ ಶರೀರದಲ್ಲಿ ಪಡೆಗಳಿದ್ದರೂ, ಗಾಯಗಳಿದ್ದರೂ ಈ ದೆಸೆಯಿಂದ ಶರೀರವನ್ನೇ ತ್ಯಜಿಸಲುದ್ಯುಕ್ತವಾದ ರೋಗವಾದರೂ ಸಹ ಈ ಔಷದವನ್ನು ಸೇವಿಸುವುದರಿಂದ ಖಂಡಿತವಾಗಿಯೂ ಗುಣವಾಗುವುದು. ಕ್ರಯ ಡಪ್ಪಿ 1ಕ್ಕೆ 1 ರೂಪಾಯಿ.

ದಿಲ್‌ಖುಷ್ ತೈಲವು:—ಅನೇಕರಿಗೆ ಕೂದಲನ್ನು ಬೆಳೆಸುವ ಇಚ್ಛೆಯಿರುವುದು. ಈ ತೈಲವನ್ನು 10-15 ದಿನಗಳು ಹಚ್ಚುವದರಿಂದ ಕೂದಲು ಬಹಳವಾಗಿ ಬೆಳೆಯುವವು. ತೈಲವು ಬಹಳ ಸುವಾಸನೆಯಾಗಿರುವುದು. ಮಿದುಳಿಗೆ ತಂಪನ್ನುಂಟುಮಾಡುವುದು. ಕ್ರಯ ಶೀಸೆ 1ಕ್ಕೆ 12 ಆಣೆ

ಆಶ್ಚರ್ಯಕರವಾದ ದ್ರಾವಕ:—ಇದನ್ನು ಸ್ವಲ್ಪ ಮೂಸಿ ನೋಡುವುದರಿಂದ ಒಂದು ನಿಮಿಷದಲ್ಲಿ ತಲೆನೋವು ನಿಲ್ಲುತ್ತೆ. ಔಷಧವು ಖರ್ಚಾಗದೆ ಹಾಗೆಯೇ ಇರುವುದು. ಚೇಳು, ಹಾವು ಇತ್ಯಾದಿ ವಿಷಜಂತುಗಳ ಕಡಿತಕ್ಕೆ ಹಚ್ಚಿದರೆ ಗುಣಪಡಿಸುತ್ತೆ. ಕ್ರಯ ಶೀಸೆ 1ಕ್ಕೆ 8 ಆಣೆ.

ರೋಮನಾಶಿಕ, ವೃಶ್ಚಿಕ ದಂಷ್ಟ್ರ:—ಈ ಔಷಧವು ಚೇಳಿನ ಹೊಡತಕ್ಕೂ ಕೂದಲು ತೆಗಿಯುವುದಕ್ಕೂ ಬಹಳ ಅನುಕೂಲವಾಗಿರುವುದು. ಇದು ಪ್ರತಿಯೊಬ್ಬರಲ್ಲಿಯೂ ಇರಬೇಕಾದ ಔಷದವು. ಕ್ರಯ ಶೀಸೆ 1ಕ್ಕೆ 4 ಆಣೆ.

ವಾತದಿವಾರಣೆ ತೈಲವು:—ಎದೆಯಲ್ಲಿಯೂ, ಪಕ್ಕೆಗಳಲ್ಲಿಯೂ, ಸೊಂಟದಲ್ಲಿಯೂ, ಕೈಕಾಲುಗಳಲ್ಲಿಯೂ ನೋವಿದ್ದರೆ ಈ ತೈಲವನ್ನು ಉಪಯೋಗಿಸುವುದರಿಂದ ತಕ್ಷಣ ಗುಣವಾಗುವುದು. ಕ್ರಯ ಶೀಸೆ 1ಕ್ಕೆ 4 ಆಣೆ.

ಅಮೃತಗೊಂಡ ಮೂಲವ್ಯಾಧಿ ಔಷಧ... ...	ಶೀಸೆ	1ಕ್ಕೆ	0-12—0
ಕಣ್ಣಿಗೆ ಸುರ್ಮ	„	„	0—4—0
ದಂತ ಚೂರ್ಣ	ಡಬ್ಬಿ	„	0—4—0
ಕಜ್ಜಿ, ಹುಳುಕಡ್ಡಿ ಔಷಧ	„	„	0—4—0
ಹೊಟ್ಟೆನೋವಿಗೆ ಔಷಧ	ಶೀಸೆ	„	0—4—0
ತಲೆನೋವಿಗೆ ತೈಲವು	„	„	0—4—0
ಕೆಮ್ಮಲು ರೋಗಕ್ಕೆ ಔಷಧವು	ಡಬ್ಬಿ	„	0—4—0

ಗಾಯಕ್ಕೆ ಔಷಧ:—ಇದನ್ನು ದಿನಕ್ಕೆರಡಾವರ್ತಿಯಂತೆ 8-10 ದಿನಗಳು ಹಚ್ಚುವುದರಿಂದ ಹಳೇ ಮತ್ತು ಹೊಸ ಗಾಯಗಳು, ಗಾಯದಲ್ಲಿ ಉರಿಯುತ್ತಿದ್ದರೂ ಗುಣಪಡಿಸುವುದು. ಕ್ರಯ ಡಬ್ಬಿ 1ಕ್ಕೆ 8 ಆಣೆ.

ಅನುಪಾನ ಪತ್ರಿಕೆಯು ಔಷಧದ ಜೊತೆಯಲ್ಲಿರುವುದು.

ಒಂದು ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಯಲ್ಲಿ ಕಳುಹಿಸುವದಿಲ್ಲ.

ವಿಳಾಸ:—ಡಿ. ಮುನ್ನಾಲಾಲ

ಎಲ್ಲಿ ವೈದ್ಯರು, ೫ ಅವೆನ್ಯೂ ರೋಡ್ ಬೆಂಗಳೂರು ಸಿಟಿ.

ನ್ಯಾಯದರ್ಪಣ.

ಹೊಸ ಪುಸ್ತಕ.

ಇಂಡಿಯಾ ದೇಶದ ಸಮಸ್ತ ಹಿಂದೂ ಜನರ ಸಾಮಾನ್ಯ ಧರ್ಮಗಳು, ಅವುಗಳನ್ನು ಅತಿಕ್ರಮಿಸಿ ನಡೆಯುವವರಿಗೆ ಉಂಟಾಗತಕ್ಕ ಫಲಗಳು, ಇವುಗಳನ್ನು ಕುರಿತು, ಗವರ್ನಮೆಂಟಿನವರಿಂದ ಅನೇಕ ಆಕ್ಟುಗಳು, ರೆಗ್ಯುಲೇಷನ್‌ಗಳು, ಶಾಸನಗಳು ವಗೈರೆ ವಿಧಾಯಕವಾಗಿ ಇರುತ್ತೆ. ಇವುಗಳೆಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೇ ಅಪಾರವಾಗಿ ಇರುತ್ತವೆ. ಇವುಗಳಲ್ಲಿ, "ಕಂಟ್ರಾಕ್ಟ್" ಅಂದರೆ ಕರಾರುಗಳು, "ಬ್ರೀಚ್ ಆಫ್ ಕಂಟ್ರಾಕ್ಟ್" ಅಂದರೆ ಒಪ್ಪಂದಕ್ಕೆ ತಪ್ಪಿ ನಡೆಯೋಣ, ದ್ರೋಹ, ಲಿಮಿಟೇಷನ್, ಛಾಪಾ ಕಾಗದ, ರಿಜಿಸ್ಟ್ರೇಷನ್, ಸಿವಿಲ್ ಪ್ರೊಸಿಡ್ಯೂರ್, ಕ್ರಿಮಿನಲ್ ಪ್ರೊಸಿಡ್ಯೂರ್, ಪೀನಲ್ ಕೋಡ್, ಹಿಂದೂ ಲಾ, ಮುಂತಾದ ಧರ್ಮಶಾಸ್ತ್ರಗಳಿಂದ, ಮನುಷ್ಯರ ನಿತ್ಯಾಚರಣೆಗೆ ಅವಶ್ಯಕವಾದ ಲೌಕಿಕ ವ್ಯವಹಾರ ಧರ್ಮಗಳ ಮುಖ್ಯ ಸಂಗತಿಗಳನ್ನೆಲ್ಲಾ ಆರಿಸಿ ಈ ಸಣ್ಣ ಪುಸ್ತಕವನ್ನು ರಚಿಸಿರುತ್ತೆ ಮತ್ತು ವಾದಿಕೆಯಲ್ಲಿ ಇರತಕ್ಕ ನಾನಾ ವಿಧಗಳಾದ ದಸ್ತೈವಜುಗಳ ಅನೇಕ ನಮೂನೆಗಳು ಮತ್ತು ಕ್ರಿಮಿನಲ್ ರಿವಿನ್ಯು ಗ್ರಾಮ ಮುನಸೀಫ್ ಕೋರ್ಟುಗಳ ಮುಂದಿನ ದಾವಾ ವಗೈರೆ ಅರ್ಜಿಗಳ ಮಾದರಿಗಳು ಅಡಕವಾಗಿ ಇರುತ್ತೆ. ಬೆಲೆ 1—8—0 ವಿ. ಪಿ. 1—12—0

ಲಾಯರ್ ಯಮ್. ಯಸ್. ನಂಜಪ್ಪನವರು,
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಪೋಸ್ಟೇಜು ಸೇರಿ 15—0—0 ಆಗುತ್ತೆ.

ಮಾರಾಟಕ್ಕೆ ಸಿದ್ಧವಾಗಿದೆ! ಪುರಾತನ ಸಂಗ್ರಹ!!

ಭೂತಾಳಪಾಂಡ್ಯರಾಯನ

ಸಂಪೂರ್ಣ ಕಟ್ಟುಗಳು ಇರುವ

ದಕ್ಷಿಣಕನ್ನಡ ಜಿಲ್ಲೆಯ ಚರಿತ್ರೆ.

ಈ ಪುಸ್ತಕವು ಮಕ್ಕಳ ಕಟ್ಟಿನ ಬ್ರಾಹ್ಮಣರ ಮನೆತನ ಮರ್ಯಾದೆಗಳ ಮೂಲ, ಅಳಿಯ ಕಟ್ಟಿನವರ ಆದಿ, ಪೂರ್ವದ ಎಲ್ಲಾ ಜಾತಿಗಳ ಮತ್ತು ರಾಜರುಗಳ ಚರಿತ್ರೆ ಸಹಿತವಿರುವ ಹೊಸ ಪುಸ್ತಕ.

(ಎಲ್ಲಾ ವಿವರಗಳು ಜನವರಿಯ ಸ್ವದೇಶಾಭಿಮಾನಿಯಲ್ಲಿರುವದು)

ಪ್ರತಿ 1ಕ್ಕೆ . . 1 4 0

ಸ್ವದೇಶಾಭಿಮಾನಿ ಚಂದಾದಾರರಿಗೂ, ಉಪಾಧ್ಯಾಯರುಗಳಿಗೂ, ವಿದ್ಯಾರ್ಥಿಗಳಿಗೂ, ಮುಂಚಾಗಿ ತಿಳಿಸಿದವರಿಗೂ 1—2—0. ಟಪ್ಪಾಲು ಹಾಸಲು ಪ್ರತ್ಯೇಕ. ಚಂದಾದಾರರು ನಂಬ್ರ ತಿಳಿಸಬೇಕು.

ವಿಳಾಸ:—

"ಕುಶಲಮಂದಿರ"
ಶ್ರೀ ರಾಜರಾಜೇಶ್ವರಿ ದೇವಸ್ಥಾನ,
ಪೊಳಲಿ

ಎನ್. ಎ ಶೀನಪ್ಪ ಹೆಗಡೆ
ಅಮುಣಂಜೆ ಗುತ್ತು
ಪೋಸ್ಟು ಗುರ್ಪುರ, ದ. ಕನ್ನಡ.

ರೂ 501 ಉಚಿತ!

ಬಲೂನ್ ಬ್ರೇಂಡ್ ಸಾಬೂನ್.

5 ನಿಮಿಷದೊಳಗೆ ಕೂದಲನ್ನು ಉದುರಿಸಿಬಿಡುವದಿಲ್ಲವೆಂಬದನ್ನು ಖಚಿತಪಡಿಸುವವರಿಗೆ ರೂ. 501 ಉಚಿತವಾಗಿ ಕೊಡೋಣಾಗುವದು. ಇದರಿಂದ ಚರ್ಮವು ಕೆಡದು. 3 ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ 0—12—0, 2 ಪೆಟ್ಟಿಗೆಗಳ ವರೆಗೆ ವಿ. ಪಿ ಚಾರ್ಜು 0—5—0.

ರೂ. 2500 ಉಚಿತ!

ಸಿರಾಜ ಹೇರ್ ಡೈ ಎಂಬ ಕೇಶತೈಲವು ಬಿಳೀ ಮತ್ತು ನರೆತ ಕೂದಲನ್ನು ಕಪ್ಪು ಮಾಡುವದಿಲ್ಲವೆಂದು ತೋರಿಸುವವರಿಗೆ ರೂ. 2500 ಉಚಿತ.

ಈ ತೈಲವನ್ನು ಏನೊಂದು ಬಾಧಕಬಾರದಂತೆ ಅತಿ ನಿಪುಣತೆಯಿಂದ ತಯಾರು ಮಾಡಿರುತ್ತದೆ. ಇದರಿಂದ ಚರ್ಮದಲ್ಲಿ ಕಲೆಯಾಗದು. ಪೆಟ್ಟಿಗೆ 1ಕ್ಕೆ ರೂಪಾಯಿ 1—0—0; ವಿ. ಪಿ. ಬೇರೆ.

ವಿಳಾಸ:— ಎಫ್. ಎಲ್. ದವಾವಾಲಾ,
ಮಿರ್ಜ ಸ್ಟ್ರೀಟ್, ಮುಂಬಾಯಿ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡಿಸಬೇಕಾಗಿದೆ.

F. L. Davawala,
Mirza Street, BOMBAY.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಚ್ಯವನಪ್ರಾಶನ:—ಗಂಟಲಿನಲ್ಲಿಯೂ, ಶ್ವಾಸಕೋಶದಲ್ಲಿಯೂ ಉಂಟಾಗುವ ಎಲ್ಲಾ ವ್ಯಾಧಿಗಳಿಗೂ ಇದು ಅತ್ಯುತ್ತಮವಾದ ಗುಣಕಾರಿಯಾಗಿದೆ. ಶ್ಲೇಷ್ಮ ಸಂಬಂಧವಾದ ಎಲ್ಲಾ ವ್ಯಾಧಿಗಳಿಗೂ ಇದರಿಂದ ಸಂಪೂರ್ಣ ಗುಣ ಕಂಡುಬಂದಿದೆ. ನಮ್ಮ ಚ್ಯವನಪ್ರಾಶನ ಎಲ್ಲಾ ವಿಧವಾದ ಕಫಗಳು, ಗೂರಲು, ಉಬ್ಬಸ, ಕ್ಷಯರೋಗ, ಗಾರ್ದಭಸ್ವರ ದಂತಹ ಒಡ್ಡದನಿ, ಗಂಟಲಿನಲ್ಲಿ ಜನಿಸಿಯಿರತಕ್ಕ ಸಕಲ ವಿಧವಾದ ಹುಣ್ಣುಗಳ ಮೊದಲಾದುವುಗಳನ್ನು ಕ್ಷಿಪ್ರದಲ್ಲಿಯೇ ವಾಸಿಮಾಡುವುದಲ್ಲದೆ ಶಕ್ತಿವರ್ಧಕವಾದ ಟಾನಿಕ್ ಆಗಿದೆ. ಅನೇಕರು ನಮ್ಮ ಚ್ಯವನಪ್ರಾಶವನ್ನು ಉಪಯೋಗಿಸಿ ಸರ್ವೋತ್ಕೃಷ್ಟವೆಂದು ತಿಳಿಸಿದ್ದಾರೆ. ಇದರ ಬೆಲೆ ಪೆಟ್ಟಿಗೆಯೊಂದಕ್ಕೆ 2 ರೂಪಾಯಿ ವಿ. ಪಿ. ಚಾರ್ಜು 5 ಆಣೆ.

ಮಕರಧ್ವಜ:—ನಮ್ಮ ಮಕರಧ್ವಜಕ್ಕೆ ಸಮಾನವಾದ ತಯಾರಿಯು ಮತ್ಯಾವ ಒಗೆ ವೈದ್ಯಶಾಸ್ತ್ರದಲ್ಲಿಯೂ ಇಲ್ಲವೇ ಇಲ್ಲ. ಈ ನಮ್ಮ ಮಕರಧ್ವಜಕ್ಕೆ ಒಗ್ಗದ ವ್ಯಾಧಿಯು ಭೂಲೋಕದಲ್ಲಿ ಇಲ್ಲವೇ ಇಲ್ಲ. ಅನೇಕರೋಗಗಳು ಇದರ ಸೇವನೆಯಿಂದ ಸಂಪೂರ್ಣವಾಗಿ ಮಾಯುತ್ತವೆ. ಎಂತಹ ಕಠಿಣ ವ್ಯಾಧಿಯಾದರೂ ಕಡಿಮೆಯಾಗಿಯೇ ತೀರಬೇಕು. ಯಾವ ಕಾರಣದಿಂದಲಾಗಲಿ ಹುಟ್ಟುವ ಶರೀರದುರ್ಬಲತೆ, ವಿಷಮಶೀತಜ್ವರ, ಹೊಟ್ಟೆಯೊಳಗಣ ಗೆಡ್ಡೆ; ಮತ್ತು ಮುಖ್ಯವಾಗಿ ತಮ್ಮ ಮರ್ಮವ್ಯಾಧಿಗೆ ತಕ್ಕ ಶಾಂತಿಯಾದ ಮದ್ದೇ ನಾಸ್ತಿಯೆಂದು ಚಿಂತಿಸುವ ಎಲ್ಲಾ ನಾಸ್ತಿಕರ ಪ್ರಮೇಹ ಸಂಬಂಧವೂ, ಉರಿಮೂತ್ರ, ಪ್ರಸವಿಸಿದೊಡನೆಯೆ ಹೆಂಗಸರಿಗುಂಟಾಗತಕ್ಕ ಸಕಲಬಾಧಗಳೂ, ಕೆಮ್ಮು, ಶೀತ, ಉಬ್ಬಸ, ಗೂರಲು, ನಾನಾತರವಾದ ಜ್ವರಗಳು, ಮಹಾಮಾರಿಯುಪದ್ರ (ಪ್ಲೇಗ್) ಚರುಕಿಲ್ಲದ ಮಿದುಳು, ಮಹೋದರರೋಗ, ಕಾಲರಾ, ಅತಿಸಾರ ಹೊಟ್ಟೆ ಜಾಡಿಸುವಿಕೆಯು, ಅಗ್ನಿಮಾಂದ್ಯದಿಂದುಂಟಾಗತಕ್ಕ ಅಜೀರ್ಣರೋಗಗಳು ಮಿತಿಮೀರಿ ಸಂಭೋಗ ಮಾಡೋಣಾದರಿಂದ ಉಂಟಾಗತಕ್ಕ ನಪುಂಸಕತ್ವ, ನರಗಳ ದಾರ್ಢ್ಯ ಕಡಿಮೆಯಾಗಿರೋಣ, ತಲೆತಿರುಗ ವಿಕೆ ಇವೇ ಮೊದಲಾದ ಅನೇಕ ವ್ಯಾಧಿಗಳಿಗೆ ಇದು ಖಂಡಿತವಾದ ರಾಮಬಾಣವಾಗಿದೆ. ಇದರ ಉತ್ಕೃಷ್ಟತೆಯನ್ನು ಇಷ್ಟಿಷ್ಟೆಂದು ಹೇಳುವುದಕ್ಕಾಗುವುದಿಲ್ಲ. ಇದರ ಕ್ರಯ ತೊಲಾ 1ಕ್ಕೆ 24 ರೂಪಾಯಿ. ಒಂದು ವಾರದ ಉಪಯೋಗಕ್ಕೆ ಸಾಕಾದಷ್ಟು ಔಷದಕ್ಕೆ 1 ರೂಪಾಯಿ ವಿ. ಪಿ. ಚಾರ್ಜು 5 ಆಣೆ. ಅವಶ್ಯ ಇದನ್ನು ಸರ್ವರು ತರಿಸಿಕೊಳ್ಳಬೇಕು.

ವಸಂತ ಕುಸುಮಾಕರ:—ನಮ್ಮ ವಸಂತಕುಸುಮಾಕರವು ಉರಿಮೂತ್ರ, ನರಗಳ ದುರ್ಬಲತೆ, ವಿಶೇಷ ನೀರಡಿಕೆ, ನಾಲಿಗೆ ಒಣಗಿ ರಸವಿಲ್ಲದಿರುವುದು, ಕೈಕಾಲುಗಳು ಉರಿಯೋಣ, ಆಯಾಸ, ಮೂರ್ಛೆಬೀಳುವಿಕೆ, ಬಿಳುಪು ಮೊದಲಾದ ಮೇಹ ಜಾಡ್ಯಗಳು, ಮೂತ್ರ ವಿಸರ್ಜನೆಯು ಬಹು ಕಷ್ಟದಿಂದಾಗೋಣ, ಇಂದ್ರಿಯಸ್ಖಲನ, ಮೊದಲಾದ ವ್ಯಾಧಿಗಳನ್ನು ಖಂಡಿತವಾಗಿ ನೀಗುವವೆಂದು ನಾವು ಭರವಸೆಕೊಡುವೆವು. ಒಂದು ವಾರದವರೆಟ್ಟಿಗೆ ಸಾಕಾಗುವಷ್ಟು ಔಷಧ ಕ್ರಯ 5 ರೂಪಾಯಿ ವಿ. ಪಿ. ಚಾರ್ಜು 5 ಆಣೆ.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು

MY ADDRESS.

P. SUBBA ROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—

ಪಿ. ಸುಬ್ಬರಾಯಿ,
ಆಯುರ್ವೇದ ಔಷಧಶಾಲೆ,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
ಸನ್ನಧಿ, ತಂ[illegible]

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು

ಸೆಶಿಂತಾನ್.

(ರಿಜಿಷ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನ ದ ಸೇವನೆಯಿಂದುಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1 ಜೀರ್ಣಶಕ್ತಿಯನ್ನು ವೃದ್ಧಿಪಡಿಸ ವುದಲ್ಲದೆ, ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2 ಸುಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡ ವುದು. ಮತ್ತು ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು

3. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತ ಬಂದಲ್ಲಿ ತಿಂದನ್ನವು ಜೀರ್ಣವಾಗುವದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆ[illegible]ವಶ್ಯಕವಾಗಿರುವವು.

6. ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಒಡನೆ ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7 ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು

ಆದುಕಾರಣ ಜಂಕಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45 ಮಾತ್ರೆಗಳ ಪೊಟ್ಟ 1ಕ್ಕೆ 1 — 2 — 0 200 ಮಾತ್ರೆಗಳ ಪೊಟ್ಟ 1ಕ್ಕೆ 0 — 7 — 0 80 ಮಾತ್ರೆಗಳ ಟಿನ್ 1ಕ್ಕೆ 0 — 4 — 0 550 ಮಾತ್ರೆಗಳ ಮರದಪೆಟ್ಟಿಗೆ1ಕ್ಕೆ 1 — 0 — 0
95 ,, ,, 0 — 4 — 0 200 ,, ಟಿನ್ ,, 0 — 9 — 0 100 ,, ತಿಂಪಿ ,, 0 — 4 — 6 1200 ,, ,, ,, 2 — 0 — 0

1 ರೂಪಾಯಿಗೆ ಕಡಿಮೆಯಾಗಿ ವಿ ಪಿ ಮೂಲಕ ಕಳುಹಿಸಲ್ಪಡುವುದಿಲ್ಲವು ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು

☞ ಬರತಖಂಡ ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ

ಸೋಲ್ ಏಜಂಟ್ಸ್:— ಸೆಶಿಂತಾನ್ ಡಿಪೋ,

ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ. 2.

ವ್ಯಥಾ ವೆಚ್ಚಮಾಡುವದೇಕೆ?

ಐಶ್ವರ್ಯವಂತರೂ ಬಡವರೂ ಕೊಂಡುಕೊಳ್ಳಲು ಸಾಧ್ಯವಾಗಿರುವ

ಯುಕಲಿಪ್ಟಸ್ ತೈಲವು.

ತಲೆನೋವು, ಕಣ್ಣು ಉರಿ, ಗಾಯ, ಸಕಲ ವಿಧವಾದ ವಾಯುರೋಗ, ಕೆಮ್ಮು, ಉಬ್ಬಸ, ಶೀತಬೇದಿ, ಉಷ್ಣಬೇದಿ ಹೊಟ್ಟೆಯಲ್ಲಿ ಜ್ವರಾದ್ಯೆ, ಸ್ತ್ರೀಯರ ವ್ಯಾಧಿಸಂಬಂಧ ಬಿಳುಪು ಮೊದಲಾದ ಮೇಹ ರೋಗಗಳು, ಕಿವಿಯಲ್ಲಿ ಕೀವು ಬರುವದು, ಹೆಂಗಸರ ಹೊಟ್ಟೆನೋವು ಮೊದಲಾದ ರೋಗಗಳನ್ನು ಗುಣಪಡಿಸುವದಿಲ್ಲವೆಂದು ಖಾತ್ರಿಪಡಿಸುವವರಿದ್ದಾರೋ? ಔನ್ಸ್ ಸೀಸೆ 1ಕ್ಕೆ 0—5—0 ವಿ ಪಿ ಬೇರೆ. ಡಜನ್ ಸೀಸೆಗಳಿಗೆ ವಿ ಪಿ ಸಹಿತ ರೂ 3—12—0 ಅನುಪಾನ ಪತ್ರಿಕೆ ಸೀಸೆಯೊಂದಿಗೆ.

ಗೃಹಣೀಯಂತಕ ತೈಲ: — ಮಕ್ಕಳ ಚೇಷ್ಟೆ, ಮಕ್ಕಳು ಬಡವಾಗುತ್ತಾಬರುವದು, ಸೇವಕ ಮೊದಲಾದ ಮಕ್ಕಳ ರೋಗಕ್ಕೆ ಸಿದ್ಧೌಷದ 2 ಔನ್ಸಿನ ಸೀಸೆ 1ಕ್ಕೆ 0—10—0 ವಿ. ಪಿ ಸಹಿತ 0—15—0

ಇಕ್ಲಿಪ್ಸ್ ಬಾಮ್: — ತಲನೋವು, ಸೊಂಟದ ನೋವು, ಸಂದುವಾತ, ಮೇಹವಾತ, ನೆಗಡಿ, ಶೈತ್ಯ, ಚೇಳು, ಜಾಡರಹುಳ ಕಡಿತ, ಕುರು, ರಾಜಕುರು, ಮೊಡವೆ, ಘಾಯಗಳು, ಹಲ್ಲುನೋವು, ಆನೆಕಾಲು ಇತ್ಯಾದಿ ರೋಗಗಳಿಗೆ ಬಾಹ್ಯ ಲೇಪನವಾಗಿ ಉಪಯೋಗಿಸಬಹುದಾದ ಬಾಮಿನ ಕರಡಿಗೆ 1ಕ್ಕೆ ಆಣೆ 8. ವಿ ಪಿ. ಬೇರೆ. ಡಜನ್ ಕರಡಿಗೆಗಳಿಗೆ ರೂ 4—12—0 ವಿ ಪಿ ಬೇರೆ

ವಿಳಾಸ:— ಏಜಂಟರು:—

ಇಕ್ಲಿಪ್ಸ್ ಏಜನ್ಸಿ, ಸುಗಂಧವಿಲಾಸ,

ಮಂಗಳೂರು. ರಥಬೀದಿ, ಮಂಗಳೂರು

ಅನೇಕ ಯೋಗ್ಯತಾಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡ್)

ರಾಜಸುಂದರಿ ರೋಜ.

ಕೂದಲು ಬೆಳೆಯುವ ಪರಿಮಳ ತೈಲವು. 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1ಕ್ಕೆ ರೂ. 1 ಮಾತ್ರ

ಸ್ತ್ರೀಗಳು ತಲೆಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು, ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರಿಯುವ ಕೀಳುತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ, ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ ಸುವಾಸನೆ ಹೇಳುವದಕ್ಕೆ ಬರೆಯುವದಕ್ಕೆ ಆಗುವದಿಲ್ಲ ಮತ್ತು ಇದರ ಪರಿಮಳ ವಾಸನೆ ಸುತ್ತು ಇರುವ ಮನೆಗಳಿಗೆ ಹೋಗುವದು. ಇದಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತೆಗದು ಕಣ್ಣಿಗೆ ತಂಪು ಕೊಡುವದು ತಲೆಯಲ್ಲಿ ಇರುವ ಮೊಡವನ್ನು ಸರಿ ಮಾಡುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ ಬೇರೊಂದಿಲ್ಲ, ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ 1ನ್ನು ತರಿಸಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಶೀಲು. ಸ್ತ್ರೀಯರು ಧರಿಸಿಕೊಳ್ಳುವ ಕೊಂಡಗಿಣೆ 6, ವೈಭರಣೆ 1, ಅದ್ದಾ 1, ತಾಂಬೂಲ ಮಾತ್ರೆ 30, ದಂತದ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರನೇಷನ್ ಪೆಟ್ಟಿಗೆ 1, ರವಿವರ್ಮ ಪೋಸ್ಟುಕಾರ್ಡ್ 6, ಸುವಾಸನೆ ಅತ್ತರು ಬಿಲ್ಲೆ 1, ಗಂಧ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೋಚ್ 1

ನಮ್ಮ ವಿಳಾಸ:— **ಮ್ಯಾನೇಜರ್ ಡೈಮಂಡ್ ಲಕ್ಷ್ಮಿ ಅಂಡು ಕಂಪೆನಿ,**

ನಂ. 3 ಇರುಳಪ್ಪನ್ ಬೀದಿ, ಮದ್ರಾಸು.

Printed & Published by V S Kamath at the Mangalore Trading Association's Sharada Press, Mangalore

Registered No. 498 M.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ.—ವರುಷ ೧ಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ 2—1—0

ಪುಸ್ತಕ IX | ಮಂಗಳೂರು ತಾ 7ನೇ ಮೇ ಶುಕ್ರವಾರ 1915. | ಸಂಚಿಕೆ 19

The Universal Assurance Co. Ltd.
Head Office: 191, Bow Bazar Street, CALCUTTA

NOTICE.

It is hereby informed to all the Agents, the subscribers of the Company and the public in general that the existing Provident scheme having been declared unsound by the actuary to the Goverument of India for its various inconveniences, the company has decided not to accept any proposal under the said scheme, and the same has been abolished since 1st January 1915. All the old members are hereby requested to continue their policies and diplomas which will be governed by the old rules and the bonus be distributed according to the dividing system hence they need not be frightened.

For the convenience of the intending subscribers and the public in general a new scheme called "Cheap Insurance" under the scientific principles of the Ordinary Insurance scheme has been introduced. For further particulars please see the Company's seperate advertisement.

(Sd.) **J Sarkar,** *Secretary*

M. Laxman Rao Brothers,
Chief Agents, UDIPI, S. C.

ದಿ ಯುನಿವರ್ಸಲ್ ಎಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಹೆಡ್ ಆಫೀಸು 191 ಬೊ ಬಜಾರ್ ಸ್ಟ್ರೀಟ್, ಕಲ್ಕತ್ತಾ.

ನೋಟೀಸು.

ಈ ಮೂಲಕ ಕಂಪೆನಿಯ ಮೆಂಬರರಿಗೂ ಸರ್ವ ಜನರಿಗೂ ತಿಳಿಯಪಡಿಸುವದೇನಂದರೆ:—ಈ ಕಂಪೆನಿಯ ಪ್ರೊವಿಡೆಂಟ ಫಂಡಿನ ಏರ್ಪಾಡನ್ನು ಅದರ ಒಗೆ ಒಗೆಯ ಅನಾನುಕೂಲತೆಯ ಕಾರಣದಿಂದ ಸರಕಾರದವರು ಈ ಏರ್ಪಾಡನ್ನು ಘಟ್ಟಿ ಇಲ್ಲದ್ದು ಎಂಬದಾಗಿ ತೀರ್ಮಾನಿಸಿರುವದರಿಂದ ಕಂಪೆನಿಯವರು ಪ್ರೊವಿಡೆಂಟ ಏರ್ಪಾಡು ಕ್ರಮದ ಮೇಲೆ ಏಮೇದಾರರನ್ನು ಕಂಪೆನಿಗೆ ಸೇರಿಸುವದಿಲ್ಲ, ಮತ್ತು ಈ ಕ್ರಮವು 1915ನೇ ಇಸವಿ ಜನವರಿ ತಾ. 1ರಿಂದ ಕಂಪೆನಿಯಿಂದ ತೆಗೆದು ಹಾಕೋಣಾಗಿರುವದು. ಹಳೇ ಮೆಂಬರರ ತಮ್ಮ ಪೋಲಿಸಿ ಮತ್ತು ಡಿಪ್ಲೊಮಗಳು ಹಳೇ ರೂಲಿನ ಪ್ರಕಾರ ಅಧಿಕರಿಸಲ್ಪಟ್ಟು "ಬೊನಸ್" ಎಂಬ ಲಾಭೋಚಿತವು ಕ್ರಮ ಪ್ರಕಾರ ಹಂಚಲ್ಪಡುವದರಿಂದ ಹಳೇ ಮೆಂಬರರು ಭಯಪಡಲು ಕಾರಣವಿಲ್ಲವೆಂಬದಾಗಿ ಈ ಮೂಲಕ ವಿಜ್ಞಾಪಿಸೋಣಾಗಿದೆ.

ಕಂಪೆನಿಯ ಮೆಂಬರರಾಗಲು ಯೋಚಿಸಿರುವವರಿಗೂ ಜನಸಾಮಾನ್ಯರ ಬಗ್ಗೆಯೂ "ಚೀಪ್ ಇನ್ಶೂರೆನ್ಸ್" ಎಂಬ ಒಂದು ಹೊಸ ಕ್ರಮವು ಸರ್ವಸಾಧಾರಣವಾಗಿರುವ ಇನ್ಶೂರೆನ್ಸ್ ಕ್ರಮದ ಮೂಲಸೂತ್ರದ ಪ್ರಕಾರ ತೆರೆಯೋಣಾಗಿರುವದು. ಹೆಚ್ಚಿನ ಮಾಹಿತಿಯನ್ನು ಈ ಪತ್ರಿಕೆಯಲ್ಲಿ ಕಾಣುವ ಕಂಪೆನಿಯ ಪ್ರಕಟಣೆಯನ್ನು ಓದಿಕೊಂಡರೆ ತಿಳಿಯುವದು.

(Sd.) ಜೆ. ಸರ್ಕಾರ. ಸೆಕ್ರೆಟರಿ

ಎಮ್. ಲಕ್ಷ್ಮಣರಾವ್ ಬ್ರದರ್ಸ್, ಚೀಫ್ ಏಜಂಟ್. ಉಡುಪಿ: ದ. ಕ.

NOTICE.

Applications in the prescribed form for scholarships out of the Ammembal Subba Rao Pai Memorial Fund from deserving poor students of the Gowd Saraswath Brahmin community should reach the Secretary before the end of May 1915.

16th April 1915

M MUKUNDA RAO,
Secretary.

PUBLIC ACCOUNTANT & AUDITOR.

(Certified under section 144 (2) of the Indian Companies Act, VII of 1913 to audit accounts in English, Canarese and Tamil)

M S Krishna Rau,
Coelho Street, Mangalore.

ಈಗಲೇ ತಯಾರಾಗಿವೆ!

ಗ್ರಾಮ ಮುನ್ಸಿಫ ಕೋರ್ಟುಗಳಿಗೆ ಸಂಬಂಧಿಸಿದ ಫೋರ್ಮುಗಳು.

100ಕ್ಕೆ ಆಣೆ 6 ಮಾತ್ರ.

ಕುರಿಫಂಡಿನ	ರಶೀದಿ	100ರ	ಪುಸ್ತಕ	1ಕ್ಕೆ	0—8—0
,,	,,	50ರ	,,	,,	0—4—0
ಇಂಗ್ಲೀಷು	,,	50ರ	,,	,,	0—8—0
,,	,,	25ರ	,,	,,	0—4—0
ಗೇಣಿ	,,	50ರ	,,	,,	0—6—0
,,	,,	25ರ	,,	,,	0—3—0
ಖಾಲಿ	,,	50ರ	,,	,,	0—4—0
,,	,,	25ರ	,,	,,	0—2—0
ಡೆಲಿವರಿ ಪುಸ್ತಕ 1ರ	.	.	.		0—8—0
ವಕಾಲತ್‌ನಾಮೆ ವಗೈರೆ	.	.	100ಕ್ಕೆ		0-10—0.
ಗೇಣಿಚೀಟು ಫೋರ್ಮು	.	.	,,		0-12—0.
ಪರ್ಮಿಟು ಫೋರ್ಮು	.	.	,,		0-12—0.

ವಿಳಾಸ:— **ಶಾರದಾ ಛಾಪಖಾನೆ.**
ರಥಬೀದಿ, ಮಂಗಳೂರು.

ಅತ್ಯುತ್ತಮವಾದ ಗ್ರಂಥಗಳು.

	ರೂ ಆ.
ಸಟೀಕ ಅಮರಕೋಶ ತ್ರಿಕಾಂಡ ಕೆಲಿಕೊ ಬೈಂಡು	2—0
ರಾಮಾಯಣ ಕಥಾಸಂಗ್ರಹ ಕೆಲಿಕೊ ಬೈಂಡು	1—8
ಡಿ ದುಯಂ	0-14
ದಶಪರ್ವ ಭಾರತ	2—0
ತೊರವೆ ರಾಮಾಯಣ ಅವಲ್ ಪ್ರತಿ	1-12
ಡಿ ದುಯಂ	1—0
ಶ್ರೀಭಗವದ್ಗೀತೆ, ರಾಮಕೃಷ್ಣಸೂರಿಯವರಿಂದ, ಸಟೀಕ, ಕಿತ್ತಾನಾರು ಬೈಂಡು	2—0
ನಿಜದೀಪಿಕಾ ಶಿರೋರತ್ನ ಎಂಬ ವೇದಾಂತ ಗ್ರಂಥ, ಕಿತ್ತಾನಾರು ಬೈಂಡು	1—4
ವ್ರತವಲ್ಲಿ, 40 ವ್ರತಗಳು ಅಡಗಿವೆ	0—8
ಪರಮಾನುಭವಬೋಧೆ, ಸಟೀಕ	1—0
ಮುಹೂರ್ತ ಮಾರ್ತಾಂಡಜ್ಯೋತಿಷಗ್ರಂಥ	1—0
ವಿವೇಕ ಚಿಂತಾಮಣಿ	0 12
ಅನುಭವಾಮೃತ	1—0
ಬೃಹತ್ಕಥಾಮಂಜರಿ	0 14
ಶ್ರೀ ಚೆನ್ನಬಸವೇಶ್ವರ ಪುರಾಣ	1—0
ಮಯೂರ ಪಂಚವಿಂಶತಿ	0—6
ಸಟೀಕ ವಿಶ್ವಕರ್ಮ ಪುರಾಣ	0 14
ಭಟ್ಟಿ ವಿಕ್ರಮಾದಿತ್ಯರಾಯನ ಕಥೆ	0—8
ಶೃಂಗಾರ ಶುಕಸಪ್ತತಿ ಕಥೆ	0 10
ಆಂಗ್ಲಭಾಷಾ ಪ್ರಕಾಶಿಕಾ	1—8
ಭೋಜರಾಜ ಚರಿತ್ರೆ, ಸಟೀಕ	0 12
4 ಜನ ಫಕೀರರ ಕಥೆ	0-12
ಬಕಾವಳಿ ಕಥೆ	0 10
ಮೌನಧಾರಿಣಿ ಕಥೆ	0—6
ಹರಿಶ್ಚಂದ್ರ ಮಹಾರಾಯನ ಕಥೆ	0-12
ಬ್ರಹ್ಮೋತ್ತರಖಾಂಡ	0—6
ಶ್ರೀಕೃಷ್ಣ ಬೋಧಾಮೃತ	0 10
ಪ್ರಭಾವತಿ ಶುಕಮಂಜರಿ	0—5
ಕರ್ನಾಟಕ ಶಬ್ದಮಂಜರಿ	0—5
ರಾಜಶೇಖರ ವಿಲಾಸ	0—8
ಕೈವಲ್ಯನವನೀತ	0—8
ವಾಸುದೇವ ಮನನ	0—6
ಸಹಸ್ರನಾಮಕದಂಬ, ವಿಷ್ಣು, ಹನುಮಂತ ವೆಂಕಟೇಶ ಸೂರ್ಯ ಲಕ್ಷ್ಮೀನರಸಿಂಹ ಮುಂತಾದ ಸಹಸ್ರನಾಮ ಮತ್ತು ಅಷ್ಟೋತ್ತರಗಳು (ನಾಮಾವಳಿ ಸ್ತೋತ್ರ) ಅಡಗಿವೆ, ಕಿತ್ತಾನಾರು ಬೈಂಡು	0 12
ಅಧ್ಯಾತ್ಮವಿಚಾರ ಪ್ರತ್ಯಗಾತ್ಮನನಕ್ಕೆ ಸಹ	3—4
ಮನೋವಂಶಾವಳಿ	1—0
ಚಂಡಿಕಾಸಪ್ತಶತಿ ಅವ್ವಲ್	0 12
ಡಿ ದುಯಂ	0—5
ವಿವೇಕ ಚೂಡಾಮಣಿ	0—3
ಗುಣಸುಂದರಿ (ನಾವೆಲ್)	0—6
ಕೊಂಕಣಿ ಭಾಷೆಯ ನಾಟಕಗಳು	
ಮಾನಸಚರಿತ್ರೆ ನಾಟಕ	0—4
ಸಾವಿತ್ರಿ ನಾಟಕ	0—4
ಚಂದ್ರಹಾಸ ನಾಟಕ	0—4
ಸ್ವರ್ಣಗೌರೀವ್ರತಕಥಾ	0—1

ಇವುಗಳಲ್ಲದೆ ಯಕ್ಷಗಾನ, ನಾಟಕ, ಭಜನೆ ಪದಗಳು, ಕಥೆ ಮ ಕಾದಂಬರಿಗಳೂ ಇವೆ. ಮರಾಟಿ ಕಲಿಯಲಿಕ್ಕೆ ಉಪಯುಕ್ತವಾದ 1, 2, 3 ಮತ್ತು 4ನೇ ಪಾಠಪುಸ್ತಕಗಳೂ ಬೊಂಬಾಯಿ ನಿರ್ಣಯಸಾಗರ ಛಾಪಖಾನೆಯಲ್ಲಿ ಛಾಪೆಯಾದ ಬಾಲಬೋಧ ಲಿಪಿಯ ವೇದಾಂತ ವಗೈರೆ ಗ್ರಂಥಗಳೂ. ಶುಲಭ ದರದಲ್ಲಿ ದೊರಕುವವು.

ನಮ್ಮ ವಿಳಾಸ.— ಕೆ. ಯಂ ದಾಸ ಪ್ರಭು,

ರಥಬೀದಿ, ಮಂಗಳೂರು.

ರೂ 501 ಉಚಿತ

ಬಲೂನ್ ಬ್ರೇಂದ್ ಸಾಬೂನ್.

5 ನಿಮಿಷದೊಳಗೆ ಕೂದಲನ್ನು ಉದುರಿಸಿಬಿಡುವದಿಲ್ಲವೆಂಬದನ್ನು ಖಚಿತಪಡಿಸುವವರಿಗೆ ರೂ. 501 ಉಚಿತವಾಗಿ ಕೊಡೋಣಾಗುವದು. ಇದರಿಂದ ಚರ್ಮವು ಕೆಡದು. 3 ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ 0—12—0, 2 ಪೆಟ್ಟಿಗೆಗಳ ವರೆಗೆ ವಿ. ಪಿ ಚಾರ್ಜು 0—5—0.

ರೂ. 2500 ಉಚಿತ!

ಸಿರಾಜಿ ಹೇರ್ ಡೈ ಎಂಬ ಕೇಶತೈಲವು ಬಿಳೀ ಮತ್ತು ನರೆತ ಕೂದಲನ್ನು ಕಪ್ಪು ಮಾಡುವದಿಲ್ಲವೆಂದು ತೋರಿಸುವವರಿಗೆ ರೂ. 2500 ಉಚಿತ.

ಈ ತೈಲವನ್ನು ಏನೊಂದು ಬಾಧಕಬಾರದಂತೆ ಅತಿ ನಿಪುಣತೆಯಿಂದ ತಯಾರು ಮಾಡಿರುತ್ತದೆ. ಇದರಿಂದ ಚರ್ಮದಲ್ಲಿ ಕಲೆಯಾಗದು. ಶೀಶೆಗೆ 1ಕ್ಕೆ ರೂಪಾಯಿ 1—0—0; ವಿ. ಪಿ. ಬೇರೆ.

ವಿಳಾಸ:— ಎಫ್. ಎಲ್. ದವಾವಾಲಾ,

ಮಿರ್ಜ ಸ್ಟ್ರೀಟ್, ಮುಂಬಾಯಿ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡಿಸಬೇಕಾಗಿದೆ.

F. L. Davawala,
Mirza Street, BOMBAY.

ಯುನಿವರ್ಸೆಲ್ ಎಸ್ಯುರೆನ್ಸ್ ಕೊ, ಲಿಮಿಟೆಡ್.

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ.

ಸರಕಾರದ ಭದ್ರತೆಯ ಮೇಲ್ವಿಚಾರದಲ್ಲಿ ನಡಿಯುತ್ತಿರುವುದು.

ಭಂಡವಾಳ ರೂ. **10,00,000.**

ಈ ತನಕ ಕೊಡೋಣಾದ ವಿಮೆ ಹಕ್ಕುಗಳ ಮೊಬಲಗು ಶುಮಾರು 8,00,000.

ಫಂಡು— ರೂ. 3,00,000ಕ್ಕೆ ಮಿಕ್ಕಿದೆ.

ಸರಕಾರದವರ ಭದ್ರತೆಯಲ್ಲಿ ರೂ. 50,000 ವಿರುವುದು.

ಚೀಪ್ ಇನ್ಸೂರೆನ್ಸ್ ಸ್ಕೀಮ್ ಎಂಬ ವೈದ್ಯಪರೀಕ್ಷೆ ಇಲ್ಲದೆ ವಿಮೆ ಉತ್ತರಾಯಿಸಿಕೊಳ್ಳಬಹುದಾದ ಸರ್ವರಿಗೂ ಸಾಧ್ಯವಾದ ಶುಲಭ ಕ್ರಮ.

ಈ ಪ್ರಾಂತ್ಯಗಳಲ್ಲಿ ಯಾವ ವಿಮೆ ಕಂಪೆನಿಗಳಲ್ಲಾದರೂ ಈತನಕ ಇಂಥಾ ಅಗ್ಗದರಗಳ ವಿಮೆ ಉತ್ತರಾಯಿಸುವ ಏರ್ಪಾಡೇ ಇರುವದಿಲ್ಲ. ಭಾರತೀಯರಲ್ಲಿ ವಿಶೇಷವಾಗಿರುವ ಬಡವರಿಗೋಸ್ಕರವೇ ಈ ಕ್ರಮವು ಏರ್ಪಡಿಸಲ್ಪಟ್ಟಿರುತ್ತದೆ. ಪ್ರೊವಿಡೆಂಟ ಫಂಡುಗಳ ಕ್ರಮದ ಪ್ರಕಾರ ಮುಂದಕ್ಕೆ ಸಂಭವಿಸಬಹುದಾದ ಅನನುಕೂಲತೆಗಳು ಇದರಲ್ಲಿರವು. ವಿಮೆ ಉತ್ತರಾಯಿಸಿಕೊಳ್ಳುವ ಈ ನವೀನ ಅಗ್ಗದರಗಳ ಏರ್ಪಾಡು ಬಹಳ ಉಪಯುಕ್ತವಾದದ್ದು ಎಂತ ವಿಮೆ [illegible] ವಿಶೇಷ ಮಾಹಿತಿದಾರರ ಅಭಿಪ್ರಾಯವಿರುವುದು. ನಿಶ್ಚಿತವಾದ ವಿಮೆ ಮೊಬಲಗುಗಳ ರೂಪಾಯಿ ಮತ್ತು ಅರ್ಧರೂಪಾಯಿಗಳ ಪೋಲಿಸಿಗಳು ಈ ಕ್ರಮದ ಮೇರೆಗೆ ಕೊಡೋಣಾಗುವವು.

ಸಾಮಾನ್ಯ ವಿಮೆ ಇಲಾಖೆ.

ಈ ಕಂಪೆನಿಯ ಈ ಇಲಾಖೆಯಲ್ಲಿ ವಿಮೆ ಉತ್ತರಾಯಿಸಿಕೊಳ್ಳುವವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಲಿರುವುದು. ಸಾಧ್ಯವಿರುವ ಅತ್ಯಂತ ಕಡಮೆಯ ದರಗಳು ಸಂಪೂರ್ಣವಾದ ಭದ್ರತೆಯು ಈ ಇಲಾಖೆಯ ವಿಶೇಷ ಪ್ರಯೋಜನಗಳಾಗಿರುವುದು. ಕಂಪೆನಿಯ ಲೆಕ್ಕದ ಸ್ಥಿತಿಗತಿಯನ್ನು ತೋರಿಸುವ ಮೊಖಾಬಿಲೆ ಪಟ್ಟಿಗಳನ್ನು ಈ ಕಂಪೆನಿಯ ವಿಷಯ ಪತ್ರಗಳ ಅಭಿಪ್ರಾಯವೇನೆಂಬುದನ್ನೂ ತರಿಸಿ ನೋಡಿರಿ.

ಒಳ್ಳೇ ಚಟುವಟಿಕೆಯ ಜಾಣರಾದ ಏಜಂಟರುಗಳು ಬೇಕಾಗಿರುವರು. ಶರ್ತಗಳ ಬಗ್ಗೆ ಕೆಳಗಣ ವಿಳಾಸಕ್ಕೆ ಬರಕೊಳ್ಳಬಹುದು.

ವಿಳಾಸ.— ಲಕ್ಷ್ಮಣ ರಾವ್ ಬ್ರದರ್ಸ್,

ಚೀಫ್ ಏಜಂಟ್ಸ್, ಕೆನರಾ, ಮೈಸೂರು, ಕೊಡಗು; ಪೋಸ್ಟು, ಉಡುಪಿ ಇವರಿಗೆ ಬರೆದುಕೊಳ್ಳಿರಿ.

ಜಯವಿಜಯ

ಅಥವಾ

ತೂಗಾಡುವ ಅಸ್ಥಿಪಂಜರ.

ಗುಜರಾಥಿ ಭಾಷೆಯಿಂದ ಕನ್ನಡದಲ್ಲಿ ಹೊಸತಾಗಿ ಭಾಷಾಂತರವಾದದ್ದು,

ಈ ಗ್ರಂಥದ ಕುರಿತು "ಸತ್ಯದೀಪಿಕೆ" ಎಂಬ ವಾರಪತ್ರಿಕೆಯು ಪಡುವ ಅಭಿಪ್ರಾಯ:—"ಇದು ಬಹಳ ರಸಿಕವಾದ ಆಶ್ಚರ್ಯವುಳ್ಳ ಒಂದು ಕಥೆಯಾಗಿದೆ. ಅದನ್ನು ಓದತೊಡಗಿದವರಿಗೆ ಅದನ್ನು ತೀರಿಸುವ ತನಕ ವಿಶ್ರಾಂತಿ ದೊರಕದು. ದೇಶಸ್ಥರು ಸಹಾ ವಿಲಾಯತಿ ಕಾದಂಬರಿಗಳಂತೆ ಚೆಲೋ ಕಥೆಗಳನ್ನು ಬರೆಯಬಲ್ಲರೆಂದು ಇದರಿಂದ ಪ್ರಕಟವಾಗುತ್ತದೆ. ಇದರ ಸಾರಾಂಶವೂ ನೀತಿಯೂ ಕೂಡಾ ಘನವಾದದ್ದು. ನೀತಿವಂತರು ಅನೇಕಸಾರಿ ಶ್ರಮೆಪಡುವಾಗ ದುಷ್ಟರು ಕೆಲವು ಸಮಯ ಮೆರೆಯುವರೆಂದೂ ಆದರೆ ದುಷ್ಟರ ದುಷ್ಟತನವು ಬೈಲಾಗಿ ಅವರು ತಮ್ಮ ದುಷ್ಟತನಕ್ಕೆ ತಕ್ಕ ಪ್ರತಿಫಲವನ್ನು ಹೊಂದುವಾಗ ನೀತಿಯು ಕಡೆಗೆ ಜಯಿಸಿ ಬಾಳುವದೆಂದೂ ಈ ಕಥೆಯ ಕವಿಯು ತೋರಿಸುವನು. ಇದಲ್ಲದೆ ಈ ಕಥೆಯ ಶೂರರಲ್ಲಿ ಒಬ್ಬಳಾದ ಜಯೆಯಲ್ಲಿ ಪತಿವ್ರತಾ ಧರ್ಮವೂ ಇತರರಲ್ಲಿ ಬೇರೆ ಸದ್ಗುಣಗಳೂ ಹೊಳೆಯುವವು. ಕರ್ನಾಟಕ ಬಲ್ಲವರೆಲ್ಲರೂ ಈ ಕಥೆಯನ್ನು ಓದಿಕೊಂಡು ಈ ಕಥೆಯ ನೀತಿಯಿಂದ ಲಾಭವನ್ನು ಪಡೆದಾರೆಂತ ನಂಬುತ್ತೇವೆ." ಇತ್ಯಾದಿ. ಪುಸ್ತಕದ ಕ್ರಯ 0—12—0. ವಿ. ಪಿ. ಬೇರೆ.

ವಿಳಾಸ:—

V. G. Amin,
C/o E. A. Goll Esq.
Sirdar Palace, Apollo Street,
BOMBAY.

ಮಾರಾಟಕ್ಕೆ ಸಿದ್ಧವಿರುವುದು! ಮಾರಾಟಕ್ಕೆ ಸಿದ್ಧವಿರುವುದು!

ವೇಂಕಟಗಿರಿ ಮಹಾತ್ಮೆ.

ಪದ್ಮಾವತೀ ಕಲ್ಯಾಣದಿಂದ ಪೂರ್ಣವಾಗಿರುವುದು.

(ಸಂಸ್ಕೃತ ಭವಿಷ್ಯತ್ಪುರಾಣದಿಂದ)

ಮಂಗಳೂರಲ್ಲಿ ಸ್ವರ್ಗಸ್ಥರಾಗಿ ಹೋದ ಮುಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿರುವದು

959 ಪದ್ಯಗಳಿರುವ 15 ಅಧ್ಯಾಯಗಳಿಂದ ಕೂಡಿರುವುದು. ಕಾವ್ಯರಚನೆಯು ಬಹು ಮೃದುರವೂ ಸುಲಭವೂ ಆಗಿರುವುದರಿಂದ ಸರ್ವರಿಗೂ ಅನುನಿತ್ಯದ ಪಾರಾಯಣಪುಸ್ತಕವಾಗಿರಲು ಉಚಿತವಾಗಿರುವುದು. ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ವೃತ್ತಾಂತಗಳು ವಾಚಕರ ಮನಃಖಚಿತವಾಗುವಂತೆ ಈ ಗ್ರಂಥವು ಯಥೋಚಿತ ಚಿತ್ರಪಟಗಳಿಂದ ಕೂಡಿರುವುದು. ಕ್ರಯ ಪ್ರತಿಯೊಂದಕ್ಕೆ ರೂ 1—8—0 ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್,
ಮಂಗಳೂರು

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1 ಟಪ್ಪಾಲು ಚಾರ್ಜು 0—4—0.

Dr. Navaratna & Sons,
Kalladevi Road BOMBAY

ಏಜಂಟರು —**ದಿ. ಊಲನ್ ಮಾರ್ಟ್,**
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು

ಅರ್ಧ ಬೆಲೆ!

ಒಂದು ತಿಂಗಳ ತನಕ ಮಾತ್ರ



ನಮ್ಮ ಸೆಟಿಸ್‌ಫೇಕ್ಷನ್ ಫ್ಲೂಟ್ ಹಾರ್ಮೋನಿಯಮ್ ಎಂಬ ರಾಗದ ಪೆಟ್ಟಿಗೆಯಿಂದ ಸರ್ವ ಗಾಯನಗಳನ್ನು ಹಾಡಲಿಕ್ಕಾಗುತ್ತದಲ್ಲದೆ ಎಲ್ಲಾ ವಾಯುಗುಣಗಳಲ್ಲಿಯೂ ಬಾಳುವಂಥಾದ್ದಾಗಿದೆ. ಇದರ ಪೆಟ್ಟಿಗೆಯು ಸಾಗುವಾನಿ ಮರದಿಂದ ಮಾಡಿದ್ದಾಗಿದೆ. ಗಾಳಿ ಬರುವ ಪೆಟ್ಟಿಗೆಯು ಎಂಥಾ ಶೆಖೆಯನ್ನೂ ತಡೆಯುವದು. ಖಾಯುಸಾಗದಿದ್ದರೆ 7 ದಿವಸಗಳೊಳಗೆ ಹಿಂದಕ್ಕೆ ಕಳುಹಿಸಿದರೆ ಹಣ ಹಿಂದಕ್ಕೆ ಕೊಡೋಣಾಗುವದು.

ಕ್ರಯ ಸಿಂಗಲ್ ರೀಡ್ ರೂ. 38, 44, 50, ಈಗ ರೂ. 19, 22, 25ಕ್ಕೆ ಕೊಡಲ್ಪಡುವದು. ಡಬ್ಬಲ್ ರೀಡ್ ರೂ. 60, 70, 80; ಈಗ ರೂ 30, 35, 40ಕ್ಕೆ ಕೊಡೋಣಾಗುವದು. ಆರ್ಡರಿನೊಂದಿಗೆ ರೂ. 5 ಅಡ್ವಾನ್ಸ್ ಕಳುಹಿಸಬೇಕಾಗಿದೆ.

ವಿಳಾಸ:— ನೇಶನಲ್ ಹಾರ್ಮೋನಿಯಮ್ ಕೊ,
ಸಿಮ್ಲಾ ಪೋಸ್ಟು (ಬಿ) ಕಲ್ಕತ್ತಾ.

National Harmonium Co.,
Simla P. O. (B) CALCUTTA.

ಕರ್ಣಾಟಕ ವೃತ್ತ ಪತ್ರ ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ ಮುಂಬಯಿ ಕರ್ಣಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೊಯಲ್ ಸೈಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ. ೨—೪—೦ ಆಗಿರುತ್ತದೆ; ಚಂದಾದಾರರಾಗಿ ಸೇರಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಮ್ಯಾನೇಜರ್, ಕರ್ಣಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ, ಧಾರವಾಡ

ಬಿಕರಿಗೆ ಸಿದ್ಧವಾಗಿದೆ! ಬಿಡಬೇಡಿರಿ!! ಮುಂದೆ ಸಿಗಲಾರದು!!

ಪ್ರಪಂಚ ಯುದ್ಧ.

ಘನಘೋರ ಸಂಗ್ರಾಮ ಸೊಗಸಾದ ಚಿತ್ರರೂಪ.

ಯುದ್ಧಾಗ್ರಣಿಗಳ ಭಾವಚಿತ್ರ.

ಯೂರೋಪ್ ಖಂಡದಲ್ಲೆಲ್ಲಾ ಅಲ್ಲೋಲಕಲ್ಲೋಲ ಮಾಡಿ ರಕ್ತಪ್ರವಾಹವನ್ನೇ ಹೊರಳಿಸುತ್ತ ಜಗತ್ಪ್ರಳಯ ಸ್ವರೂಪವಾಗಿ ಸಾಕ್ಷಾತ್ ಕಾಲಭೈರವನಂತೆ ಕೇಳಿರುವ ಭೀಕರ ಯುದ್ಧದ ನಾಯಕರನ್ನೂ ಆಯಾ ದೇಶದ ರಾಜಾಧಿರಾಜರನ್ನೂ ಚಕ್ರವರ್ತಿಗಳನ್ನೂ ಪ್ರತ್ಯಕ್ಷದಿಂದ ನೋಡಿದಂತೆ ತೋರಿಸುವ ಸುಂದರವಾದ ಚಿತ್ರಗಳು ಥಳಥಳಿಸುವ ಬೆಣ್ಣೆ ಕಾಗದದಲ್ಲಿ ಎರಡು ಬಣ್ಣಗಳಿಂದ ಮುದ್ದಾಗಿ ಮುದ್ರಿಸಿ ಕ್ರಯಕ್ಕೆ ಸಿದ್ಧವಾಗಿವೆ. ತ್ವರೆಮಾಡಿರಿ, ಸ್ವಲ್ಪವೇ ಪ್ರತಿಗಳಿವೆ, ತ್ವರೆಮಾಡಿರಿ

ಬಾಲ ಸುಟ್ಟ ಕೋತಿಯಂತೆ ಅತ್ತಿತ್ತ ತಿರುಗುತ್ತ ವ್ಯಾಪಾರದ ಹಡಗುಗಳನ್ನೂ ಯುದ್ಧದ ಹಡಗುಗಳನ್ನೂ ಹತಮಾಡಿ ಕಡೇಗೆ ತಾನೂ ಉರಿದು ಸಮುದ್ರದಡಿಗೆ ಪಾತವಾದ ಎಮ್‌ಡನ್ನನ್ನು ನೋಡಿರುವಿರಾ, ಅದರ ನಾಯಕನನ್ನು ಬಲ್ಲಿರಾ, ಅದು ಮದರಾಸನ್ನು ಮುತ್ತಿ ಮಾಡಿದ ಅನಾಹುತಗಳನ್ನು ನೋಡಿರುವಿರಾ, ಕಡೆಗೆ ಅದಕ್ಕೆ ಗತಿ ಕಾಣಿಸಿದ ಸಿಡ್ನಿ ಎಂಬ ಹಡಗನ್ನು ಕಂಡಿರುವಿರಾ, ಅದರ ನಾಯಕ ಶಿಖಾಮಣಿಯನ್ನು ನೋಡಿರುವಿರಾ, ಧೀರಾಧಿವೀರನೆಂದೆನ್ನಿಸಿದ ಪ್ರತಾಪೋದ್ದೀಪಿತನಾದ ಪ್ರತಾಪ್‌ಸಿಂಗನನ್ನು ಕಂಡಿರುವಿರಾ

ಪಂಚಪಾಂಡವರಂತಿರುವ ಇಂಗ್ಲಂಡ್, ರಷ್ಯಾ, ಫ್ರಾನ್ಸ್, ಬೆಲ್ಜಿಯಮ್, ಜಪಾನ್ ಚಕ್ರವರ್ತಿಗಳನ್ನೂ, ದುರ್ಯೋಧನ, ದುಶ್ಯಾಸನ, ದುಶ್ಶಳೆಗಳಂತೆ ಕಾಲಾಗ್ನಿಗೆ ತುತ್ತಾಗುವದಕ್ಕಿರುವ ಜರ್ಮನಿ, ಆಸ್ಟ್ರಿಯಾ, ತುರ್ಕಿ ಚಕ್ರವರ್ತಿಗಳನ್ನೂ ನೋಡಿರುವಿರಾ, ಆಯಾ ರಾಷ್ಟ್ರಗಳ ಸೇನಾನಾಯಕರನ್ನೂ ನೌಕಾನಾಯಕರನ್ನೂ ವಾಯುವಿಮಾನ ನಾಯಕರನ್ನೂ ನೋಡಿರುವಿರಾ, ಇಲ್ಲವಾದರೆ ನಮ್ಮಲ್ಲಿ ಕ್ರಯಕ್ಕೆ ಸಿದ್ಧವಾಗಿರುವ ಚಿತ್ರವನ್ನು ತರಿಸಿ ನೋಡಿ ಈ ಚಿತ್ರಗಳ ಸಹಾಯದಿಂದ ಯುದ್ಧ ಸಂಗತಿಗಳು ಮನಸ್ಸಿನಲ್ಲಿ ಬಲು ಸುಲಭವಾಗಿ ನಾಟುವವು. ಪಕ್ಷಿಯಂತೆ ಆಕಾಶದಲ್ಲಿ ಹಾರಾಡುತ್ತಿರುವ ವಾಯುವಿಮಾನವನ್ನೂ, ಮತ್ಸ್ಯಗಳಂತೆ ಸಮುದ್ರದಲ್ಲಿ ಅಲೆದಾಡುತ್ತಿರುವ ಯುದ್ಧದ ಹಡಗವನ್ನೂ ಜರ್ಮನರು ಹೊಸದಾಗಿ ರಚಿಸಿದ ಫಿರಂಗಿಯನ್ನೂ ಈ ಚಿತ್ರಗಳ ಸಹಾಯದಿಂದ ಚನ್ನಾಗಿ ನೋಡಬಹುದು. ಸಮಸ್ತರೂ ನೋಡಬೇಕಾದ ವಿಷಯ.

ಬೆಲೆ 1 ರೂಪಾಯಿ 4 ಆಣೆ ಮಾತ್ರ.

ಸೂ. ಯುದ್ಧವಾರಂಭವಾದಮೇಲೆ ರಣರಂಗದಿಂದ ಈಚೆಗೆ ಹೊಸದಾಗಿ ಎತ್ತಿದ ಫೋಟೋಗಳನ್ನು ಸೀಮೆಯಿಂದ ತರಿಸಿ ಅಚ್ಚು ಮಾಡಿಸಿದ್ದೇವೆ. ಪ್ರತಿಯೊಂದು ಪಟವನ್ನೂ ನಲುಗದಂತೆ ಮರದ ಕಟ್ಟಿಗೆಯಲ್ಲಿ ಸುತ್ತಿ ಭದ್ರವಾಗಿ ಸೇರುವಂತೆ ರವಾನಿಸಿ ಕೊಡುತ್ತೇವೆ. ಈ ದಿನವೇ ಬರಿಯಿರಿ. ಅಂಚೆ ಹಾಸಲು ಫ್ರೀ.

ನಮಗೆ ಬರಿಯತಕ್ಕ ಆರ್ಡರುಗಳನ್ನು ಸ್ವಹಸ್ತಾಕ್ಷರಗಳಿಂದ ಬರಿಯತಕ್ಕದ್ದು ಮತ್ತು ವಿಳಾಸಗಳನ್ನು ವಿವರವಾಗಿ ಬರಿಯತಕ್ಕದ್ದು.

ವಿಳಾಸ:— ಮ್ಯಾನೇಜಿಂಗ್ ಪ್ರೊಪ್ರೈಟರ್ ಚಿತ್ರಕಲಾನಿಧಿ ಭವನಂ,
ಪುತ್ತೂರು, ದ. ಕನ್ನಡ

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	218,800—0—0
Paid up Capital	193,800—0—0
Deposits	441,931—0—11
Reserve Fund	33,500—0—0

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು ,,	225,000—0—0
ಪ್ರತಿಜ್ಞಾತ ಮೂಲ ಧನವು ,,	218,800—0—0
ಆಗತ ಮೂಲ ಧನವು ,,	193,800—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	441,931—0-11
ರಕ್ಷಿತ ಧನವು	33,500—0—0

Besides the uncalled capital of Rs. 25,000/ 25% of the net profits are added annually to the Reserve Fund. Rs. 21,685/ have been invested in Government Paper of the face value of Rs. 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/ and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½% per annum at the discretion of the managing committee

Current Deposit Account opened free of charge

Savings Bank Account opened for any sum not less than 4 As and multiples thereof and interest paid @ 4½%.

Loans granted on proper securities and pledges

Sealed Parcels for safe custody received on a moderate charge.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಾಗಿ ಕೊಡಲ್ಪಡದಿರುವ ರೂ 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿ ಮಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾವೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd.,
Mangalore, 1st. April 1915.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿ ಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯುಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ಸವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ, ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯ ಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ ನಿಮಿರಾಯನ ಶರೀರತ್ಯಾಗ, ಜನಕವಂಶ ಶರ್ಯಾತಿಚರಿತ್ರೆ, ಕಕುಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸ್ತಾಪವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲ್ಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರಿಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯುಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡ ಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ೧ಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—೩—೦.

ತಮ್ಮ ವಿಳಾಸ:— ಎಂ. ದೇಶಾಯಿ ಕಂಪೆನಿ.

ಕರ್ನಾಟಕ [illegible]

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 7ನೇ ಮೇ 1915

ನೆಲ್ಲೂರಲ್ಲಿ ಜರಗಿದ ೨೧ನೇ ಮದ್ರಾಸ್ ಪ್ರೊವಿನ್ಸಿಯಲ್ ಕನ್ಫರೆನ್ಸ್.

ಇದೇ ಮೇ ತಾರೀಕು ೪ರಲ್ಲಿ ನೆಲ್ಲೂರಲ್ಲಿ ೨೧ನೇಯ ಮದ್ರಾಸ್ ಪ್ರೊವಿನ್ಸಿಯಲ್ ಕನ್ಫರೆನ್ಸ್ ಕೂಡಿ ಬಂತು ಸ್ವಾಗತ ಕಮಿಟಿಯ ಅಧ್ಯಕ್ಷರಾದ ಮಾನ್ಯ ಕೃಷ್ಣರಾಯರು ಆಯಾ ಕಡೆಗಳಿಂದ ಬಂದ ಪ್ರತಿನಿಧಿಯವರನ್ನು ಸ್ವಾಗತ ಮಾಡಿಕೊಂಡು ಪ್ರಥಮತಃ ಪ್ರಕೃತ ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದಲ್ಲಿ ನಮ್ಮ ಸರಕಾರದವರು ತೋರಿಸುತ್ತಿರುವ ಚಟುವಟಿಕೆಯನ್ನು ಪ್ರಸಂಶಿಸಿ ನಮ್ಮ ಸಾಮ್ರಾಜ್ಯ ಸರಕಾರಕ್ಕೆ ಶೀಘ್ರದಲ್ಲಿ ಜಯವಿಜಯವು ಉಂಟಾಗಲೀ ಎಂತ ಹೇಳಿ ಪೂರ್ಣ ಜಯ ಸಿಕ್ಕುವ ತನಕ ನಾವೆಲ್ಲರೂ ಕೊಡುವಷ್ಟಿನ ಸಹಾಯ ಮಾಡುವುದು ನಮ್ಮ ಕರ್ತವ್ಯವೆಂತ ಸಭಿಕರನ್ನು ಕೇಳಿಕೊಂಡರು. ಅನಂತರ ಮಾನ್ಯ ಗೋಖಲೆಯವರ ಮರಣದ ಪ್ರಸ್ತಾಪವನ್ನೆತ್ತಿ ಅದರಿಂದ ಎಷ್ಟರಮಟ್ಟಿನ ನಷ್ಟವು ನಮ್ಮ ಇಡೀ ಮಾತೃಭೂಮಿಗೆ ಆಗಿದೆಂಬದನ್ನು ಕೂಲಂಕುಷವಾಗಿ ವಿವರಿಸಿ ಹೇಳಿದರು. ಮಾನ್ಯ ಗೋಖಲೆಯವರ ಜ್ಞಾಪಕಾರ್ಥವಾಗಿ ಸಂಸ್ಮಾರಕಗಳನ್ನು ನಿರ್ಮಿಸುವ ಪ್ರಯತ್ನಗಳು ನಡೆಯುತ್ತಲಿವೆ ಇಂಥಾ ಪ್ರಯತ್ನಗಳಲ್ಲಿ ಕೂಡ ನಮ್ಮಿಂದ ಕೂಡ ವಷ್ಟು ಸಹಾಯವನ್ನು ಮಾಡುವಂಥಾದ್ದು ನಮ್ಮ ಹಂಗಾಗಿರುವದು. ಮೃತ ಮಹಾಪುರುಷರ ಯಶಸ್ಸು ಈಗ ತಯಾರಿಸುತ್ತಲಿರುವ ಸ್ಮಾರಕಗಳಿಂದ ವರ್ಧಿಸಬೇಕೆಂಬದಿಲ್ಲ. ಅವರ ಸತ್ಕಾರ್ಯಗಳು ಫಲಿತವಾಗುವಂತೆ ಇನ್ನು ಹೆಚ್ಚಿನ ಸ್ಥಿರಪ್ರಯತ್ನವನ್ನು ಮಾಡುವಂಥಾದ್ದೇ ಅವರಿಗೆ ಯೋಗ್ಯವಾದ ಸ್ಮಾರಕವಾಗಿರುತ್ತದೆ. ಈ ವಿಷಯದಲ್ಲಿ ಮಾನ್ಯ ಗೋಖಲೆಯವರು ಸ್ಥಾಪಿಸಿದಂಥಾ ಸರ್ವೆಂಟ್ಸ್ ಆಫ್ ಇಂಡಿಯಾ ಎಂಬ ಸಂಘಕ್ಕೆ ನಮ್ಮಿಂದ ಕೊಡುವಷ್ಟು ಸಹಾಯವನ್ನು ಮಾಡಬೇಕೆಂತ ಸಹಾ ಸೂಚಿಸಿದರು.

ಪ್ರಕೃತ ನಡೆಯುತ್ತಿರುವ ಮಹಾ ಯುದ್ಧದಲ್ಲಿ ನಮ್ಮ ಜನರು ತೋರಿಸಿದ ಶೂರತ್ವ ಮ ನಡಿಸಿದ ಕೃತ್ಯಗಳ ಸಂಬಂಧ ಮಾನ್ಯ ಕೃಷ್ಣರಾಯರು ಮಾತನಾಡಿ ನಮಗೆ ಅವುಗಳ ಫಲಿತಾಂಶವಾಗಿ ಏನಾದರೂ ವಿಶೇಷವಾದ ಪ್ರತಿಫಲವು ಸಿಕ್ಕಬೇಕೆಂಬ ಉತ್ಸುಕತೆಯಿಂದ ನಮ್ಮ ಸೇನಿಕರು ರಣರಂಗಕ್ಕೆ ಹೋದದ್ದಲ್ಲ, ಸಾಮ್ರಾಜ್ಯದ ಕಡೆಗೆ ನಮ್ಮ ಅನುರಕ್ತತೆಯನ್ನೂ ನಮ್ಮ ರಾಜನಿಷ್ಠೆಯನ್ನೂ ತೋರಿಸ ಮಂಥಾದ್ದೇ ನಮ್ಮ ಮುಖ್ಯ ಉದ್ದೇಶವಾಗಿರುತ್ತದೆ. ಅದಲ್ಲದೆ ಪ್ರಕೃತದ ಯುದ್ಧವು ಪರಿಣಮಿಸಿ ನಂತರ ಹೊಸತಾಗಿ ಜನಿಸುವ ಸಂದರ್ಭಾನುಸಾರಗಳು ಯಥಾವಸ್ಥಿತಕ್ಕೆ ಬರುವ ತನಕ ಸಂಸ್ಥಾನದ ಆಡಳಿತೆಯು ಈಗ ನಡಿಸುತ್ತಲಿರುವ ಮಾನ್ಯ ಹಾರ್ಡಿಂಜಪ್ರಭುಗಳವರ ಕೈಯಲ್ಲಿಯೇ ಸ್ವಲ್ಪಕಾಲ ಇರಗೊಡಿಸುವದು ಅತಿ ಅಗತ್ಯವೆಂತ ತಿಳಿಯ ಹೇಳಿದರು.

ತದನಂತರ ಶಿಕ್ಷಣ ಸಂಬಂಧವಾದ ಕೆಲವು ವಿಷಯಗಳನ್ನು ಚರ್ಚಿಸಿ, ಬಾಲಿಕೆಯರಿಗಲ್ಲವಾದರೂ ಬಾಲಕರಿಗೆ ಕಡ್ಡಾಯ ಶಿಕ್ಷಣವನ್ನು ಕೊಡುವ ಸಮಯವು ಸಮೀಪಿಸಿರುತ್ತದೆ, ಇದಕ್ಕೆ ಬೇಕಾದ ತಮ್ಮ ದ್ರವ್ಯಾನುಕೂಲತೆಯು ಮುನಿಸಿಪಾಲಿಟಿ ವಗೈರೆ ಸಮುದಾಯಗಳಿಗೆ ಕೊಡಬೇಕು, ಯಾ ಶಿಕ್ಷಣದ ಬಗ್ಗೆ ಎಂತಲೇ ತೆರಿಗೆಗಳನ್ನು ವಸೂಲು ಮಾಡುವ ಅಧಿಕಾರಗಳನ್ನು ಸ್ಥಳಿಕ ಸಮುದಾಯಗಳಿಗೆ ಸರಕಾರದವರು ಕೊಡಬಹುದೆಂಬ ತನ್ನ ಅಭಿಪ್ರಾಯವನ್ನು ಸೂಚಿಸಿದರು.

ಡಿಸೆಂಟ್ರಲೈಜೇಶನ್ ಕಮಿಷನಿನವರ ಸೂಚನೆಗಳಿಗನುಸಾರವಾಗಿ ಗ್ರಾಮ ಪಂಚಾಯತಗಳನ್ನು ಗ್ರಾಮದ ಕಾರ್ಯಗಳನ್ನು ನಿರ್ವಹಿಸುವ ಬಗ್ಗೆ ಸ್ಥಾಪಿಸುವದು ಅತ್ಯಗತ್ಯವೆಂತ ಹೇಳಿ ನಮ್ಮ ಸ್ಥಳೀಯ ಸರಕಾರದವರು ಈ ವಿಷಯಕ್ಕೆ ತಕ್ಕ ನಿಗಾ ಕೊಡಲಿಲ್ಲವೆಂಬ ಸ್ವಲ್ಪಮಟ್ಟಿನ ವಿಷಾದವು ಸ್ವಾಗತ ಕಮಿಟಿ ಅಧ್ಯಕ್ಷರ ಭಾಷಣದಲ್ಲಿ ತೋರಿತ್ತು. ಕಡೆಗೆ ಹೊಸತಾಗಿ ಏರ್ಪಡಿಸಿದ ಕೌನ್ಸಿಲುಗಳ ನಿಬಂಧನೆಗಳ ಕುರಿತು ಸ್ವಲ್ಪ ಚರ್ಚಿಸಿ, ಸ್ವಾಗತ ಕಮಿಟಿಯ ಅಧ್ಯಕ್ಷರು ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ಈ ಕನ್ಫರೆನ್ಸಿಗೆ ಮಾನ್ಯ ರಾವ್ ಬಹದ್ದೂರ್ ಪಿ. ಯನ್. ಶರ್ಮರವರು ಅಧ್ಯಕ್ಷರಾಗಿದ್ದು ಕೊಟ್ಟ ಭಾಷಣವು ಸುರಸವಾಗಿಯೂ ಅನುಭವ ಸಿದ್ಧವಾಗಿಯೂ ಇತ್ತು. ತನ್ನನ್ನು ಅಧ್ಯಕ್ಷ ಸ್ಥಾನಕ್ಕೆ ಚುನಾಯಿಸಿದ ಕುರಿತು ತನಗಾದ ಮಹಾ ಉಲ್ಲಾಸವನ್ನು ಸೂಚಿಸಿ ಕಳೆದ ಸಭೆಯು ಜರಗಿದಂದಿನಿಂದ ನಮ್ಮ ಮಾತೃಭೂಮಿಗೆ ಉಂಟಾದ ಸುಪುತ್ರರ ನಷ್ಟದ ಕುರಿತು ವಿಶೇಷವಾಗಿ ವಿಷಾದಿಸಿದರು. ನಮ್ಮ ಈ ಸಂಸ್ಥಾನದಲ್ಲಿ ಮಹಾ ನ್ಯಾಯಾಧೀಶರಾದ ಅಕಾಲಮರಣ ಹೊಂದಿದ ಮಾನ್ಯ ಜಸ್ಟಿಸ್ ಸುಂದರ ಅಯ್ಯರ್ ಮತ್ತು ಸಂಯುಕ್ತ ಸಂಸ್ಥಾನದ ಮಹಾಪುರುಷರಾದ ಗಂಗಾ ಪ್ರಸಾದ ವರ್ಮರ ಮರಣದ ಕುರಿತು ವಿಷಾದಿಸಿ, ನಮ್ಮ ಮಾತೃಭೂಮಿಗೆಲ್ಲಾ ಮಾನ್ಯ ಗೋಖಲೆಯವರ ಮರಣದಿಂದುಂಟಾದ ಅತಿರೇಕವಾದ ನಷ್ಟವನ್ನು ತೋರ್ಪಡಿಸಿದರು. ಆದರೆ ಶೂರರಾದ ನಮ್ಮ ದೇಶೀಯ ಸೇನಿಕರು ಫ್ರಾನ್ಸ್, ಆಫ್ರೀಕ, ಮತ್ತು ಮೆಸೂಪಟೋಮಿಯದ ಬೈಲುಗಳಲ್ಲಿನ ರಣರಂಗಗಳಲ್ಲಿ ನಮ್ಮ ಸಾಮ್ರಾಜ್ಯದ ಬಗ್ಗೆ ಅವರ ರಕ್ತವನ್ನು ಸುರಿಯುತ್ತಲಿರುವ ವಿಷಯವು ತಕ್ಕಮಟ್ಟಿಗೆ ನಮ್ಮ ಮನಸ್ಸಿನ ವ್ಯಥೆಯನ್ನು ಮರೆಪಡಿಸುವದಲ್ಲದೆ ನಮ್ಮನ್ನು ಮ ನಮ್ಮ ಅಣ್ಣರನ್ನು ಎಂದಿಗಿಂತಲೂ ಒಂದಾಗಿ ಮಾಡಿ ನಮ್ಮ ಮುಂದಿನ ಯಶಸ್ಸಿಗೆ ಕಾರಣವಾಗಿರುತ್ತದೆ. ಸಂಯುಕ್ತಸಂಸ್ಥಾನಕ್ಕೆ ಕಾರ್ಯ ನಿರ್ವಾಹಕ ಸಭೆಯನ್ನು ಕೊಡುವದರ ಕುರಿತು ಉಂಟಾದ ಚರ್ಚೆ ಮ ಸದರಿ ಚರ್ಚೆಯು ಹ್ಯಾಗೆ ಮುಗಿಯಿತು ಎಂಬದನ್ನು ಸಹಾ ಪ್ರಸ್ತಾಪಿಸಿ ಈ ಯುದ್ಧದ ಫಲಿತಾಂಶವಾಗಿ ನಮಗೂ ನಮ್ಮ ಅಣ್ಣರಿಗೂ ಇರುವ ಬಾಂಧವ್ಯವು ಹ್ಯಾಗ ಸಂವರ್ಧಿಸೀತು ಎಂಬದನ್ನು ವ್ಯಕ್ತಗೊಳಿಸಿದರು.

ನಂತರ ನಮ್ಮ ಸಂಸ್ಥಾನದ ಸಾಂಪತ್ತಿಕ ಅಧೋಗತಿಯ ಕುರಿತು ಸ್ವಲ್ಪ ಚರ್ಚಿಸುವವರಾದರು. ಜಪಾನ್ ರಾಜ್ಯದ ೧೮೫೦ನೇ ಇಸವಿಯ ಮತ್ತು ಈಗಿನ ಸ್ಥಿತಿಯನ್ನು ಸರಿಹೋಲಿಸಿ, ೧೮೫೦ನೇ ಇಸವಿಯಲ್ಲಿ ಆ ರಾಜ್ಯಕ್ಕೆ ೫ ಕೋಟಿ ರೂಪಾಯಿ ಆದಾಯ ವಿತ್ತೆಂತಲೂ, ೧೮೫೦ನೇ ಇಸವಿಯಲ್ಲಿ ನಮ್ಮ ಸಂಸ್ಥಾನಕ್ಕೆ ಕೂಡಾ ಅಷ್ಟೇ ಆದಾಯವಿತ್ತೆಂತಲೂ, ಪ್ರಕೃತ ನಮ್ಮ ಸಂಸ್ಥಾನಕ್ಕೆ ಇರುವ ೧೮ ಕೋಟಿ ರೂಪಾಯಿಗೆ ಆ ರಾಜ್ಯದಲ್ಲಿ ಸಾಧಾರಣ ೮೦ ಕೋಟಿ ರೂಪಾಯಿಗಳು ಆದಾಯವಿರುವದಾಗಿಯೂ ತಿಳಿಯ ಹೇಳಿದರು.

ಸರಕಾರದವರು ದೇಶಿಯರ ಮೇಲೆ ಇರುವ ಎಲ್ಲಾ ಸಂದೇಹಗಳನ್ನು ತ್ಯಜಿಸಿ ಅವರನ್ನು ಸೈನ್ಯದಲ್ಲಿ ಉಮೇದ್ವಾರರಾಗಿ ತೆಗದುಕೊಳ್ಳುವದು ಉಚಿತವೆಂತಲೂ, ಸೈನ್ಯದಲ್ಲಿ ದೇಶೀಯರಿಗೆ ಮೇಲಿನ ಹುದ್ದೆಗಳನ್ನು ಕೊಡುವದು ಅಗತ್ಯವೆಂಬದಾಗಿಯೂ ಪ್ರಕೃತ ನಡೆಯುತ್ತಿರುವ ಯುದ್ಧವನ್ನು ಆದರ್ಶವಾಗಿಟ್ಟು ತೋರಿಸಿಕೊಟ್ಟರು. ಇದಲ್ಲದೆ ಸಂಸ್ಥಾನಿಕ ಸ್ವಯಂಪ್ರಭುತ್ವದ ಕುರಿತು ಕೆಲವು ಅನುಭವಸಿದ್ಧವಾದ ಸೂಚನೆಗಳನ್ನು ಕೊಟ್ಟರು. ಸಂಸ್ಥಾನಿಕ ಸರಕಾರದವರ ಸ್ಥಿತಿಯನ್ನೂ ಪ್ರಕೃತದ ಸ್ಥಿತಿಯನ್ನೂ ನಾವು ಯೋಚಿಸಿದ ಪಕ್ಷಕ್ಕೆ ಅದು ಹೆಚ್ಚಿನ ಸಮಾಧಾನಕರವಲ್ಲವೆಂಬದು ಸ್ಪಷ್ಟವಾಗುತ್ತದೆ. ಯಾಕಂದರೆ ಸಂಧಾನ ಮ ಯುದ್ಧ ಕಾನೂನುಗಳನ್ನು ನಿರ್ಮಿಸುವದು, ಸಂಸ್ಥಾನದ ಸಾಂಪತ್ತಿಕ ಉದ್ಧರಣೆ ಕುರಿತು ಯಾ ವ್ಯಾಪಾರದ ಕುರಿತು ವಿಶೇಷವಾದ ನಿಯಮಗಳನ್ನು ಉಂಟುಮಾಡುವದು, ರೈಲ್ವೇ, ಟಪ್ಪಾಲು, ತಂತೀ, ನೀರಾವರಿ ಕುರಿತ ದೊಡ್ಡ ಕೆಲಸಗಳನ್ನು ನಡಿಸುವದು, ಶಿಕ್ಷಣದ ಮ ಕೈಗಾರಿಕೆಯ ಕುರಿತು ಬದ್ಧವಾದ ಯಾವ ವಿಲೆವಾರಿಯನ್ನಾದರೂ ಮಾಡುವದು,—ಇವುಗಳೆಲ್ಲಾ ಪ್ರಕೃತ ಸ್ಥಳೀಯ ಸರಕಾರದವರ ಪೂರ್ಣ ಸ್ವತಂತ್ರಕ್ಕೆ ಸೇರಿರುವದಿಲ್ಲ. ಕೈಗಾರಿಕೆಗಳನ್ನು ಉದ್ಧರಿಸುವದಕ್ಕೆ ಹೊಸತಾಗಿ ಏನಾದರೂ ಏರ್ಪಾಡನ್ನು ನಡಿಸಬೇಕೆಂದರೆ ತಕ್ಕದಾದ ದ್ರವ್ಯಾನುಕೂಲತೆಯಾಗಲೀ ಯಾ ದ್ರವ್ಯವನ್ನು ವಿನಿಯೋಗಿಸಲಿಕ್ಕೆ ಸ್ವತಂತ್ರವಾಗಲೀ ಸಂಸ್ಥಾನಿಕ ಸರಕಾರಕ್ಕೆ ಪ್ರಕೃತ ಇರುವದಿಲ್ಲ. ಇಂಡಿಯಾ ಸರಕಾರದವರು ಮ ಸ್ಟೇಟ್ ಸೆಕ್ರೆಟರಿಯವರ ಅನುಜ್ಞೆ ವಿನಹ ಯಾ ಅನುಜ್ಞೆಗೆ ವ್ಯತಿರಿಕ್ತವಾಗಿ ಹೊರಗಿನಿಂದ ಐವೇಜುಗಳನ್ನು ಎರವಾಗಿ ಪಡೆಯುವದಕ್ಕಾಗಲೀ, ತೆರಿಗೆಗಳನ್ನು ಹೊರಿಸುವದಕ್ಕಾಗಲೀ, ಕಾನೂನನ್ನು ನಿರ್ಮಿಸುವುದಕ್ಕಾಗಲೀ ಸ್ಥಳೀಯ ಸರಕಾರದವರಿಗೆ ಸ್ವತಂತ್ರವಿಲ್ಲ. ಹೊಸ ಕೌನ್ಸಿಲುಗಳ ನಿಬಂಧನೆಗಳಲ್ಲಿ ಇರುವಂಥಾ ಕೆಲವು ಕುಂದಕಗಳಿಂದ ಸ್ಥಳೀಯ ಸರಕಾರದವರ ಹೊಗಳಿಕೆಗಳು ಕೆಲವು ವಿಷಯಗಳಲ್ಲಿ ಜನರ ಮನೋರಥಕ್ಕೆ ಪೂರ್ಣ ಒಪ್ಪದೆ ಇರುವದು ಕೂಡಾ ಉಂಟು ಎಂತ ಹೇಳಿ, ಸ್ಥಳೀಯ ಸರಕಾರದ ನ್ಯಾಯ ನಿರ್ಮಾಣ ಸಭೆಯಲ್ಲಿ ಆಫೀಸರರಲ್ಲದ ಇತರ ಪ್ರತಿನಿಧಿಗಳ ಸಂಖೆಯು ಅಧಿಕವಾಗಿರುವದರಿಂದ ಯಾವ ನಮೂನೆಯ ಅಪಾಯವಾದರೂ ಇರುವದಿಲ್ಲವಾಗಿಯೂ ಮೋರ್ಲೆ ಪ್ರಭುಗಳವರು ಕೌನ್ಸಿಲುಗಳಲ್ಲಿ ಆಫೀಸರರಲ್ಲದವರ ಸಂಖ್ಯೆಯು ಅಧಿಕವಾಗಿರಬೇಕೆಂತಲೇ ಅಭಿಪ್ರಾಯಪಟ್ಟದ್ದು ಪೂರ್ಣ ಉಚಿತವೆಂತಲೂ ವಾದಿಸಿದರು. ಪ್ರಕೃತದ ನೊನ್ ಆಫೀಸಿಯಲ್ ಮೆಂಬರರ ಬಹುಪಕ್ಷವು ನಿಜವಾಗಿ ಬಹುಪಕ್ಷವಾಗುವದಿಲ್ಲ ಎಂಬದು ಕೌನ್ಸಿಲಿನ ವೃತ್ತಾಂತವನ್ನು ಶೋಧಿಸುವವರಿಗೆ ತಿಳಿದೇ ಇದೆ. ಪ್ರಕೃತದ ನೊನ್ ಆಫೀಸಿಯಲ್ ಬಹುಪಕ್ಷವು ವಿಶೇಷ ಕೆಲಸ ನಡಿಸುವ ಸಾಮರ್ಥ್ಯವಿಲ್ಲದಂಥಾದ್ದು ಆದಪಕ್ಷಕ್ಕೂ ಈಗಿನ ಕೌನ್ಸಿಲುಗಳು ಎಷ್ಟೋಮಟ್ಟಿಗೆ ಹಿತಕಾರಿಗಳೆಂಬದು ನಿಸ್ಸಂದೇಹವಾಗಿರುತ್ತದೆ. ಆದರೂ ಈಗಿನ ನೊನ್ ಆಫೀಸಿಯಲ್ ಬಹು ಭಾಗದವರಿಗೂ ಕಾರ್ಯನಿರ್ವಾಹಕ ಸಭೆಯ ದೇಶೀಯ ಮೆಂಬರನಿಗೂ ಹೆಚ್ಚಿನ ಅಧಿಕಾರವನ್ನು

8ನೇ ಪುಟಕ್ಕೆ ಮುಂದರಿಸಿಯದೆ

'ಪರಸ್ಪರ ಸಹಾಯವೂ ಮಿತವ್ಯಯವೂ.'

ಈ ಹೆಸರುಳ್ಳ ಪತ್ರವನ್ನು ದಕ್ಷಿಣ ಕನ್ನಡದ ಪರಸ್ಪರ ಸಹಾಯ ಸಂಘಗಳ ಇನ್ಸಪೆಕ್ಟರರಾದ ಮ॥ ರಾ॥ ಗಿರಿಯಪ್ಪಾ ಬಿ. ಎ, ಇವರು ಕೊಯಮುತ್ತೂರು ಸರ್ಕಲ್ ಪರಸ್ಪರ ಸಹಾಯ ಸಂಘಗಳ ಪರಿಷತ್ತಿನ ತೃತೀಯ ಸಭೆಯ ಮುಂದಿಟ್ಟಿರು. ಇವರು ಇದೇ ಜಿಲ್ಲೆಯವರಾಗಿದ್ದು ಜನರೊಡನೆ ಹೊಕ್ಕುಬಳಿಕೆಯುಳ್ಳವರೂ, ಸ್ವತಃ ವಿದ್ಯಾವಂತರೂ, ದೇಶಪ್ರೇಮವುಳ್ಳವರೂ ಆಗಿರುವುದರಿಂದ ಇವರು ಆಗಾಗ ಈ ಜಿಲ್ಲೆಯ ಸಂಘಗಳ ಮೇಲ್ತನಿಖೆಯನ್ನು ನೋಡುವ ಕಾಲದಲ್ಲಿ ಅನೇಕ ಕುಂದು ಕೊರತೆಗಳನ್ನು ಕಂಡು ಹಿಡಿಯಲಿಕ್ಕೆ ಇವರಿಗೆ ಅವಕಾಶವಿದೆ. ಆದಕಾರಣ ಇವರು ಹೇಳುವ ಮಾತುಗಳಲ್ಲಿ ಚೆನ್ನಾಗಿ ಗಮನವಿಡಬೇಕು. ಸರಕಾರದವರು ಈ ಮದ್ರಾಸು ಸಂಸ್ಥಾನದಲ್ಲಿ ಮಿತವ್ಯಯ, ಸ್ವಾವಲಂಬನ, ಸಹಕಾರ ಈ ಸದ್ಗುಣಗಳ ಬೆಳವಣಿಗೆಯ ಗೋಸ್ಕರ ಈ ಸಂಸ್ಥೆಗಳನ್ನು ಏರ್ಪಡಿಸಿದ್ದಾರೆ. ಅಂಥಾ ಸಂಸ್ಥೆಗಳು ನಮ್ಮ ಜಿಲ್ಲೆಯಲ್ಲಿ ಪ್ರಾರಂಭವಾಗಿ ಐದು ವರ್ಷಗಳ ಕಾಲವಾದುದರಿಂದ ಈ ಸದ್ಗುಣಗಳು ಎಷ್ಟರವರೆಗೆ ಇಲ್ಲಿ ಮೊಳೆತಿರುವುವೆಂದು ಚರ್ಚಿಸಲು ಸಾಧ್ಯವಿದೆ. ಅವುಗಳ ಪೈಕಿ ಮೊದಲನೆಯದಾದ ಮಿತವ್ಯಯವನ್ನು ಮಾತ್ರ ಮ॥ ರಾ॥ ಗಿರಿಯಪ್ಪನವರು ಈ ಪತ್ರದಲ್ಲಿ ವಿಮರ್ಶಿಸಿದ್ದಾರೆ. ಈ ವಿಷಯವಾಗಿ ಅವರು ಏನು ಹೇಳುತ್ತಾರೆ, ನೋಡೋಣ. ಮಿತವ್ಯಯವು ಇನ್ನೂ ಇಲ್ಲಿ ಮೊಳೆಯಲೇ ಇಲ್ಲ ಎಂದು ಅವರು ಪ್ರಾರಂಭದಲ್ಲಿಯೇ ವಿಷಾದಿಸುತ್ತಾರೆ. ಅವರು ಹೀಗೆ ಹೇಳಲು ಕಾರಣವೇನು? ಅವರ ಮಾತುಗಳನ್ನು ಪುನರುಚ್ಚರಿಸುವುದಾದರೆ "ಪ್ರಥಮ ವರ್ಷದಲ್ಲಿ ೧೦೦೦ ರೂಪಾಯಿ ಸಾಲವೆತ್ತಿದ ಸಂಘವು ಎರಡನೆ ವರ್ಷದಲ್ಲಿ ೩೦೦೦ ರೂಪಾಯಿಯ್ನು ಮೂರನೇ ವರ್ಷದಲ್ಲಿ ೫೦೦೦ ರೂಪಾಯಿ ಸಾಲ ಪಡಕೊಳ್ಳುತ್ತದೆ. ಈಚೆಗೆ ಡಿಸ್ಟ್ರಿಕ್ಟ್ ಬೇಂಕ್ ಸ್ಥಾಪಿಸಿದಂದಿನಿಂದ ಈ ಸಾಲ ಪಡಕೊಳ್ಳುವ ಸಂಖ್ಯೆಯೂ ಅದರ ಉದ್ವೇಗವೂ ಅಪರಿಮಿತವಾಗಿವೆ. ಒಂದು ಸಂಘವು ಸ್ಥಾಪನೆಯಾದೊಡನೆಯೇ ಪಂಚಾಯತರು ಡಿಸ್ಟ್ರಿಕ್ಟ್ ಬೇಂಕಿನೊಡನೆ ಸಾಲಕ್ಕೆ ಬರುತ್ತಾರೆ. ತಮ್ಮ ಸ್ಥಳದಲ್ಲಿಯೇ ಹಣ ಸಿಕ್ಕಬಹುದೋ ಇಲ್ಲವೋ ಎಂದು ನೋಡುವುದಿಲ್ಲ. ಅಗತ್ಯವಿರುವ ಹಣ ಬೇಂಕಿನಿಂದ ದೊರಕಿದೊಡನೆ ಅದನ್ನು ಸಾಲ ಕೇಳಿದ ಮೆಂಬರರಿಗೆ ಹಂಚಿಹಾಕಿ ನಿದ್ದೆಹೋಗುತ್ತಾರೆ. ಇನ್ನೊಮ್ಮೆ ಸಾಲ ಕೇಳುವ ಮೆಂಬರರ ತಗಾದೆ ಬಂದೊಡನೆ ಪುನಃ ಬೇಂಕಿನಿಂದ ತರಿಸಿ, ಅದನ್ನು ಹಂಚಿ, ಮರಳಿ ವಿಸ್ಮೃತರಾಗುತ್ತಾರೆ. ಹೀಗಾದ್ದರಿಂದ ಕಡಿಮೆ ದರದ ಬಡ್ಡಿಯಲ್ಲಿ ಜನರಿಗೆ ದ್ರವ್ಯ ಸಹಾಯ ಮಾಡಲಿಕ್ಕೆ ಇದೊಂದು ಧರ್ಮಸಂಸ್ಥೆಯೆಂದು ಜನರು ತಿಳಿದು ಕೊಳ್ಳುವುದು ಆಶ್ಚರ್ಯವಲ್ಲ. ಪ್ರತಿಯೊಬ್ಬ ಮೆಂಬರನೂ ತಾನು ರೂ. ೧—೪—೦ನ್ನು ಸಂಘಕ್ಕೆ ತೆತ್ತು ತನ್ನ ಹೆಸರನ್ನು ದಾಖಲು ಮಾಡಿಸಿದೊಡನೆ ೫೦ ರೂಪಾಯಿ ಸಾಲ ಕೇಳಲಿಕ್ಕೆ ಹಕ್ಕುದಾರನೆಂದು ಭಾವಿಸಿಕೊಳ್ಳುತ್ತಾನೆ. ಕೆಲವರು ಮೆಂಬರರಾದೊಡನೆ ಮರು ದಿನವೇ ತಮಗೆ ೫೦ ರೂಪಾಯಿ ಸಾಲ ಸಿಗಬೇಕೆಂದು ಸೆಕ್ರೆಟರಿಗಳಿಗೆ ಎಚ್ಚರಿಸಿದ್ದು ಉಂಟು. ಅವನ ಸಾಲದ ಅರ್ಜಿಯನ್ನು ತಿರಸ್ಕಾರ ಮಾಡಿದರೆ ತನ್ನ ಮೇಲೆ ವಿನಾ ಕಾರಣವಾಗಿ ಪಂಚಾಯತರು ವಿಮುಖರಾಗಿದ್ದಾರೆಂದು ಕೂಡಲೇ ಆತನು ಇನ್ಸ್‌ಪೆಕ್ಟರರಿಗಾಗಲಿ ರಿಜಿಸ್ಟ್ರಾರರಿಗಾಗಲಿ ಮನವಿ ಬರಕೊಳ್ಳುತ್ತಾನೆ. ಅವನು ರೂ ೧—೪—೦ ಕೆತ್ತೊಡನೆ ಅವನಿಗೆ ಕೊಡಲುಬಹುದಾದ ೫೦ ರೂಪಾಯಿಯಷ್ಟು ಮೊಬಲಗು ಅಗತ್ಯವಿದೆಯೋ ಎಂದು ಆಲೋಚಿಸದೆ, ಪೂರಾ ಮೊಬಲಗನ್ನು ಸಾಲವಾಗಿ ಕೇಳುತ್ತಾನೆ. ಒಬ್ಬನು ಇದೇ ರೀತಿಯಲ್ಲಿ ಕೇಳಿದಾಗ 'ಅದಕ್ಕಿಂತ ಕಡಿಮೆ ಹಣದಲ್ಲಿ ನಿಮ್ಮ ಕೆಲಸವು ಪೂರೈಸದೇ' ಎಂದು ಪ್ರಶ್ನಿಸಿದ್ದಕ್ಕೆ 'ರೂಲ್ ಪ್ರಕಾರ ತನಗೆ ಇರುವ ಹಕ್ಕನ್ನು ಯಾತಕ್ಕೆ ಕಳಕೊಳ್ಳಬೇಕು? ಸಾಲದ ಹಣವನ್ನು ನಾನೇನಾದರೂ ಮುಳುಗಿಸುವಂಥವನಲ್ಲ' ಎಂದು ನಿರ್ದಾಕ್ಷಿಣ್ಯದಿಂದ ಉತ್ತರವಿತ್ತನು". ಇದರಿಂದ ಸಾಲ ಪಡಕೊಳ್ಳುವುದಕ್ಕೆ ಅನುಕೂಲತೆಯನ್ನು ಒದಗಿಸಿದಂತೆ ಆಯಿತಲ್ಲದೆ ಮಿತವ್ಯಯವನ್ನು ವರ್ಧಿಸಿದ ಬಗೆ ಕಂಡುಬರಲಿಲ್ಲ ಎಂದು ಮ॥ ರಾ॥ ಗಿರಿಯಪ್ಪನವರು ಹೇಳುತ್ತಾರೆ. ಸಂಘಕ್ಕೆ ಸೇರಿದ ಮೆಂಬರರಲ್ಲಿ ಅಧಿಕ ಪಾಲು ಈ ಅಭಿಪ್ರಾಯವುಳ್ಳವರಾದರೆ ಈ ಸಂಸ್ಥೆಗಳು ನಿಜವಾಗಿ ಮಾಡುವ ಕರ್ತವ್ಯವನ್ನು ತಿಳಿಯಲಿಲ್ಲವೆಂದು ನಾವು ಅಭಿಪ್ರಾಯಪಡಬೇಕು. ಇದಲ್ಲದೆ ಒಂದು ಸಂಘದ ಅಭಿವೃದ್ಧಿಯ ಮಿತಿ ಕಟ್ಟಬೇಕಾದರೆ ಅದರಲ್ಲಿ ಜನರು ಹೆಚ್ಚಾಗಿ ಸಾಲಪಡಕೊಳ್ಳುತ್ತಾರೆಂಬದಾಗಲಿ ಮೆಂಬರರಲ್ಲದ ಜನರು ಅದರಲ್ಲಿ ಠೇವಣಾತಿ ಇಡುತ್ತಾರೆಂಬದಾಗಲಿ ಮುಖ್ಯ ಸಂಗತಿಯಲ್ಲ. ಮೆಂಬರರು ಎಷ್ಟು ಠೇವಣಾತಿಗಳನ್ನು ಇಡುತ್ತಾರೆಂಬದನ್ನು ಗೊತ್ತುಮಾಡಿದರೆ ಅದರ ಸ್ಥಿತಿಯನ್ನು ತುಲನೆ ಮಾಡಬಹುದು. ಹಣವನ್ನು ಠೇವಣಾತಿಗಿರಿಸಬೇಕಾದರೆ ಪೂರ್ವದ ಸಾಲಗಳನ್ನು ಪರಿಹರಿಸುವುದು ಅವಶ್ಯ. ಒಬ್ಬನಿಗಿರುವ ಆದಾಯವು ಕಡಿಮೆಯಾಗಿರುವಲ್ಲಿ, ಅವನು ಗಳಿಸಿದ ಹಣವೆಲ್ಲ ಬಡ್ಡಿ ತೆರುವುದರಲ್ಲಿ ವೆಚ್ಚವಾಗಿ, ಅವನಿಗೆ ಠೇವಣಾತಿಗಳನ್ನು ಇಡಲಿಕ್ಕೆ ಸಾಧ್ಯವಾಗಲಾರದು ಎಂಬುದೇ ಈ ಸಂಘಗಳು ಸುಲಭ ಬಡ್ಡಿಯಿಂದ ಹಣ ಸಹಾಯ ಮಾಡುವ ಮುಖ್ಯ ಹೇತು. ಇದರಿಂದ ಇನ್ನೂ ಸಾಲಗಳನ್ನು ಹೆಚ್ಚಿಸುವುದಾದರೆ ಮತ್ತು ತಮ್ಮ ಖರ್ಚಿನ ಅಂದಾಜನ್ನು ಹೆಚ್ಚಿಸುವುದಾದರೆ ಅಂಥವರಿಗೆ ಕಡಿಮೆ ಬಡ್ಡಿಯಿಂದ ಹಣ ಸಿಕ್ಕುವುದೂ ಒಂದು ದುರ್ದಶೆ ಎಂದು ಸ್ಪಷ್ಟವಾಯಿತು.

ಇದೇ ರೀತಿಯಲ್ಲಿ ಜಿಲ್ಲಾ ಬೇಂಕುಗಳ ಉದ್ದೇಶವೇನು? ಯಾವ ಸಂಘಗಳು ಮನಃಪೂರ್ವಕ ಪ್ರಯತ್ನಪಟ್ಟರೂ ಅವುಗಳಿಗೆ ಆಯಾ ಸ್ಥಳದಲ್ಲಿ ಹಣ ಸಾಲವಾಗಿ ದೊರೆಯುವುದು ಅಸಾಧ್ಯವಾಗಿದೆಯೋ ಅಂಥವುಗಳಿಗೆ ದ್ರವ್ಯಸಹಾಯ ಮಾಡುವುದೆ ಈ ಬೇಂಕುಗಳ ಕೆಲಸ. ಇದನ್ನು ತಿಳಿಯದೆ ಎಲ್ಲರೂ ಬೇಂಕಿನಿಂದಲೇ ದ್ರವ್ಯಸಹಾಯ ಪಡೆಯುವುದಾದರೆ ಸಂಘಗಳಿಗೆ ಅವರವರ ಜಾಗದಲ್ಲಿ ಗೌರವವಿಲ್ಲ; ಸ್ಥಳೀಯ ಜನರಿಗೆ ಅವುಗಳ ಮೇಲೆ ನೆಚ್ಚಿಗೆಯಿಲ್ಲವೆಂದು ಸ್ಪಷ್ಟವಾಗುವುದು. ಆದ್ದರಿಂದ "ಸಂಘಕ್ಕೆ ಮೆಂಬರುಗಳ ಸಂಖ್ಯೆಯು ಹೆಚ್ಚಿದಷ್ಟಕ್ಕೆ, ಯಾವ ಸಂಘವು ಕಡಿಮೆ ಹಣವನ್ನು ಸಾಲವಾಗಿ ಪಡೆಯುತ್ತದೋ, ಅಥವಾ ಬೇಂಕಿನಿಂದ ಪಡೆದ ಸಾಲವನ್ನು ಸ್ಥಳೀಯ ಹಣದಿಂದ ಪರಿಹರಿಸಲು ಪ್ರಯತ್ನಿಸುತ್ತದೋ ಆ ಸಂಘವೇ ದಿನೇದಿನೆ ವೃದ್ಧಿಯಾಗುತ್ತದೆಂದು" ಮ. ರಾ. ಗಿರಿಯಪ್ಪನವರು ಅಭಿಪ್ರಾಯಪಡುತ್ತಾರೆ. ಈ ವಿಷಯದಲ್ಲಿ ಅವರು ತೋರಿಸಿದ ಒಂದೆರಡು ದೃಷ್ಟಾಂತಗಳು ಜನರ ವಿಮರ್ಶೆಗೆ ತಕ್ಕವಾಗಿವೆ. "ಕೆಲವು ಸಂಘಗಳ ಪಂಚಾಯತರು ಶ್ರೀಮಂತರಾಗಿದ್ದರೂ ಬೇಂಕಿನಿಂದ ಹಣಪಡೆಯಬೇಕೆಂದು ಹಠಾತ್ತಾಗಿ ದರಖಾಸ್ತುಗಳನ್ನು ಮಾಡುತ್ತಾರೆ. ಕೆಲವು ಅಧ್ಯಕ್ಷರು ತಮ್ಮ ಸ್ವಂತ ಹಣದಿಂದ ಕಡಿಮೆ ಬಡ್ಡಿ ಸಿಕ್ಕುವ ರೀತಿಯಲ್ಲಿ (ಅಡಿಯಲ್ಲಿ ಗೆರೆಹಾಕಿದ ಶಬ್ದಗಳು ನಮ್ಮ ಸ್ವಂತ ಮಾತುಗಳಾಗಿವೆ) ಆಸ್ತಿಗಳನ್ನು ಕೊಂಡು ಕೊಳ್ಳುತ್ತಿದ್ದಾಗ ಅವರು ಅಧ್ಯಕ್ಷರಾಗಿರುವ ಸಂಘವು ಹಣಕ್ಕೋಸ್ಕರ ಪೇಚಾಡುತ್ತಿದೆ. ಅವರು ಸಂಘದ ಚಿಂತನೆಗಳಿಂದ ತೀರಾ ಅಲಿಪ್ತರಾಗಿದ್ದು, ಬೇಂಕಿನಿಂದ ತರಿಸಿದ ಹಣವನ್ನು ಮೆಂಬರರಿಗೆ ಸಾಲಕೊಡುವ ಸಂದರ್ಭಗಳಲ್ಲಿ ಮಾತ್ರವೇ ತಮ್ಮ ಉಚ್ಚಸ್ಥಾನದಿಂದ ಕೆಳಗಿಳಿದು ಅದು ಮುಗಿದನಂತರ ಅಂತರ್ಧಾನವಾಗುವರು" ಇಂಥಾ ಕಠೂರೋಕ್ತಿಗಳನ್ನು ಮ. ರಾ. ಗಿರಿಯಪ್ಪನವರು ನುಡಿಯುವಾಗ ಅವರ ಮನಸ್ಸಿಗೆ ಈ ಅಲಿಪ್ತಗೃಹಸ್ಥರ ನಡವಳಿಕೆಯನ್ನು ಕುರಿತಾದ ವ್ಯಥೆಯನ್ನು ತೋರ್ಪಡಿಸುತ್ತಿದೆ. ಆದರೆ ಯಾವುದೊಂದು ನವೀನ ಸಂಸ್ಥೆಯು ನೆಲೆಗೊಳ್ಳುವ ಮೊದಲು ಅದಕ್ಕೆ ವಿಘ್ನಗಳು ಹಲವು, ಅದನ್ನು ತಾತ್ಸಾರ ದೃಷ್ಟಿಯಿಂದ ನೋಡುವವರು ಅನೇಕಮಂದಿ, ಅದರ ಹುಟ್ಟಡಗಿಸಬೇಕೆಂದು ಮುಷ್ಕರ ಹಿಡಿಯುವವರು ಕೆಲವರು, ಅದನ್ನು ಕುಚೋದ್ಯಮಾಡಿ ಕಾಲಹರಣಮಾಡುವವರು ಕೆಲಮಂದಿ, ಅದರಿಂದ ತೀರಾ ಅಲಿಪ್ತರಾಗಿರುವವರು ಅನೇಕಾನೇಕರು, ಹೀಗೆಲ್ಲ ಇದೆ. ಇವರನ್ನು ತಿದ್ದಲಿಕ್ಕೆ ಧೈರ್ಯ, ತಾಳ್ಮೆ, ಸ್ಥೈರ್ಯ, ಧಾರಾಳ ಬುದ್ಧಿ ಇವೆಲ್ಲ ಸಂಸ್ಥಾಪಕರಲ್ಲಿ ಇರಲೇ ಬೇಕು, ಇಲ್ಲವಾದರೆ ಯಾವ ನವೀನ ಸಂಸ್ಥೆಯೂ ನೆಲೆಗೊಳ್ಳಲಾರದು. ಹೆಚ್ಚಿನ ಪಂಚಾಯತರಲ್ಲಿ ಈ ಗುಣಗಳಿಲ್ಲದಿರುವುದೇ ಈ ಮಿತವ್ಯಯವನ್ನು ವೃದ್ಧಿಗೊಳಿಸುವುದಕ್ಕೆ ತೊಡಕಾಗಿರುವುದೆಂದು ಮ. ರಾ. ಗಿರಿಯಪ್ಪನವರ ಅಭಿಪ್ರಾಯವಾಗಿ ತಿಳಿಯುವೆವು.

ಒಂದೆರಡು ಸಂಘಗಳಲ್ಲಿ ಪ್ರತಿಯೊಬ್ಬ ಮೆಂಬರನೂ ಠೇವಣಾತಿಯನ್ನು ಇಡುವಂತೆ ಪತ್ರಾಯಪಡಿಸುವ ನಿರ್ಣಯಮಾಡಿದಾಗ ಅದಕ್ಕೆ ಹಲವು ಮೆಂಬರರು ಧಿಕ್ಕಾರ ಮಾಡಿದರಂತೆ. ಕಾಸರಗೋಡು ತಾಲೂಕಿನ ಒಂದು ಪ್ರಾಮುಖ್ಯ ಸಂಘದಲ್ಲಿ ೫೦ ಮೆಂಬರುಗಳಿದ್ದರೂ ಅವರಿರುವ ಊರು ತಕ್ಕಮಟ್ಟಿಗೆ ವ್ಯಾಪಾರಸ್ಥಳವಾಗಿದ್ದರೂ ತಿಂಗಳುಗಟ್ಟಳೆಯಿಂದ ಠೇವಣಾತಿ ಇಡುವವರು ೬ ಮಂದಿ ಮಾತ್ರವೇ ಇರುವರಂತೆ. ಪಂಚಾಯತರು ಸ್ವಲ್ಪ ಪ್ರಯತ್ನಮಾಡಿದರೆ ವರ್ಷಕ್ಕೆ ಈ ಮೆಂಬರುಗಳಿಂದ ೬೦೦೦ ರೂಪಾಯಿ ಠೇವಣಾತಿ ಮಾಡಿಸಲಿಕ್ಕೆ ಸಾಧ್ಯವಿದ್ದರೂ ಈ ಸಂಘವು ಬೇಂಕಿನ ಆಫೀಸಿನ ಮುಂದೆ ಸಾಲಕ್ಕಾಗಿ ಕೈಜೋಡಿಸಿ ನಿಲ್ಲುವುದು ತುಂಬಾ ದುಃಖಾಸ್ಪದವೆಂದು ಮ. ರಾ॥ ಗಿರಿಯಪ್ಪನವರ ಅಭಿಮತವನ್ನು ಎಲ್ಲರೂ ಒಪ್ಪಬೇಕಾದ್ದೆ.

ಚಿನಿವಾರರನ್ನೆ ಆಧರಿಸಿಕೊಂಡಿರುವ ನೇಯಿಗೆಯವರಲ್ಲಿಯೂ ವರ್ಗದಾರರ ಹಿಡಿತದೊಳಗೆ ಇರುವ ಹೊಲೆಯರಲ್ಲಿಯೂ ಮಿತವ್ಯಯದ ಬೋಧೆಯನ್ನು ಕೊಡುವುದು ಅತ್ಯಾವಶ್ಯಕವೆಂದು ಅವರು ತಿಳಿಯುತ್ತಾರೆ. ಅವರು ದುಡಿದ ಹಣದಲ್ಲಿ ಮುಕ್ಕಾಲು ಮೂರು ವೀಸ ಪಾಲು ಸಾರಾಯಿ ಅಂಗಡಿಗಳ ಸಾಲಾದರೆ ಅವರ ಮಕ್ಕಳು ಮರಿಗಳ ಪಾಡೇನು? ಇಂಥವರನ್ನು ಉದ್ಧರಿಸುವ ಬಗ್ಗೆ ಸಂಘಗಳನ್ನು ಏರ್ಪಡಿಸಿ ಆ ಜನರಲ್ಲಿ ಮಿತವ್ಯಯದ ಮತ್ತು ಹಣ ಠೇವಣಾತಿ ಕಟ್ಟುವ ಸದುಪದೇಶ ಮಾಡುವವರನ್ನು ಸಹಕಾರ ಸಮಾಜದ ಲಕ್ಷ್ಯಕ್ಕೆ ಅವರು ತರುತ್ತಾರೆ. ಈ ಸಂದರ್ಭದಲ್ಲಿ ಉಡುಪಿಯ ವಕೀಲ್ ಮ. ರಾ. ವಿಟ್ಠಲಕಾಮತ್ ಬಿ. ಎ. ಬಿ. ಎಲ್ ಇವರು ಪಂಚಮರ ಒಂದು ಸಂಘವನ್ನು ಉಡುಪಿಯಲ್ಲಿ ಸ್ಥಾಪಿಸಿದ್ದು ಅವರು ಕೊಂಡಾಡುತ್ತಾರೆ. ಆದರೆ "ಭೀಮನ ಹೊಟ್ಟೆಗೆ ಕಾಸಿನ ಮಜ್ಜಿಗೆ"ಯಂತೆ ಇದೆಲ್ಲಿ ಸಾಕಾದೀತು! ಬಡ ಜನರು ಸಾವಿರಾರು ಲಕ್ಷಕ್ಕೆ ಮೀರಿರುತ್ತಾರೆ. ಇಂಥವರನ್ನು ಉದ್ಧರಿಸಲಿಕ್ಕೆ ಸಾವಿರಾರು ಜನರು ಬದ್ಧಕಂಕಣರಾಗದಿದ್ದರೆ ಈ ಮಹತ್ಕಾರ್ಯವನು ಸಾಧಿಸಲಾಗದು.

ಪ್ಲೇಗು ರೋಗದ ಪರಿಹಾರಾರ್ಥವಾಗಿ ಚಿಕ್ಕಾಡು (ಚಿಕ್ಕ ನುಶಿ)ವಿನ ನಾಶವು.

:-0-:

ಪಂಜಾಬಿನಲ್ಲಿ ಮುಖ್ಯ ಪ್ಲೇಗು ಮೆಡಿಕಲ್ ಆಫೀಸರರಾದ ಲೆಫ್ಟಿನೆಂಟ್ ಕರ್ನಲ್ ಟಿ. ಲೇನ್, ಎಮ್. ಡಿ., ಐ. ಎಮ್. ಎಸ್. ಇವರಿಂದ ತಯ್ಯಾರಿಸಲ್ಪಟ್ಟ ಈ ಗಣ ಪ್ರಯೋಜನಕರವಾದ ಸಂಕ್ಷೇಪ ಲೇಖನವನ್ನು ಇಂಡ್ಯದ ಬೇರೆ ಪ್ರದೇಶಗಳಲ್ಲಿರುವ ಕಸಬುದಾರರಿಗೆ ಪ್ರಯೋಜನಕರವಾಗುವದರಿಂದ ಇದರೊಂದಿಗೆ ಪ್ರಕಟಿಸಲ್ಪಡೋಣಾಗಿಯದೆ.

ಲಾಹೋರಿನಲ್ಲಿರುವ ಮಲೇರಿಯಾ ಬಿರೋದಲ್ಲಿ ಜಾರಿ ನಡಿಸೋಣಾದ ಅನೇಕಾನೇಕ ಪ್ರಯೋಗಗಳಿಂದ ಕ್ರೆಸೋಲ್ ಹಬೆಯು ಚಿಕ್ಕಾಡುಗಳಿಗೆ ಅತ್ಯಂತ ವಿಷಕರದ್ದೆಂತ ನಿಸ್ಸಂಶಯವಾಗಿ ರುಜುವಾಗುತ್ತದೆ. ಈ ಹಬೆಯು ಚಿಕ್ಕಾಡುಗಳಿಗೆ ಹೆಚ್ಚು ಮರಣಕರದ್ದಾದರೂ, ಮನುಷ್ಯರಿಗೂ ಜಂತುಗಳಿಗೂ ಅಪಾಯಕರದ್ದಲ್ಲ

ಮುಚ್ಚಲ್ಪಟ್ಟ ಕಿಟಿಕಿಗಳೂ ಬಾಗಿಲುಗಳೂ ಉಳ್ಳ ಒಂದು ಕೋಣೆಯಲ್ಲಿ ಎರಡು ಔನ್ಸು ಕ್ರೆಸೋಲನ್ನು ಹಬೆ ಮಾಡಿದರೆ ಆ ಕೋಣೆಯಲ್ಲಿರುವ ಚಿಕ್ಕಾಡುಗಳು ನಾಶವಾಗುತ್ತವೆ.

ಕ್ರೆಸೋಲ್ ಹಬೆಯನ್ನು ಎರಡು ವಿಧಗಳಲ್ಲಿ ಉಪಯೋಗಿಸಬಹುದು.

೧ನೇ ವಿಧ:—ಒಂದು ಅಗಲ ಬಾಯಿಯ ಕಬ್ಬಿಣದ ಬಟ್ಟು ಅಥವಾ ಗವ್ಲದಲ್ಲಿ ನಾಲ್ಕು ಅಥವಾ ಐದು ಒಣಗಿದ ಶಗಣಿ ಕುರುಳು (ಬೆರಣಿ)ಗಳನ್ನಿಟ್ಟು ಸ್ವಲ್ಪ ಬೆಂಕಿ ಮಾಡಿ ಅದು ಜ್ವಾಲೆ ಏಳದಂತೆ ಚೆನ್ನಾಗಿ ಹೊತ್ತಿಕೊಂಡು ಹೋಗುವಂತೆ ಮಾಡಬೇಕು. ಈ ಮೆಲ್ಲಗೆ ಹೊತ್ತಿಕೊಂಡು ಹೋಗುವ ಶಗಣಿ ಬೆಂಕಿಯುಳ್ಳಿಟ್ಟ ಕಬ್ಬಿಣದ ಬಟ್ಲು ಅಥವಾ ಗವ್ಲವನ್ನು ಬಾಗಿಲುಗಳು ಕಿಟಿಕಿಗಳು ಮುಚ್ಚಲ್ಪಟ್ಟ ಒಂದು ಕೋಣೆಯಲ್ಲಿಟ್ಟು ಅದರ ಮೇಲೆ ೨ ಔನ್ಸು ಕ್ರೆಸೋಲ್ ಸುರಿಯಬೇಕು. ಅದು ಪೂರಾ ಸುಟ್ಟುಹೋಗುವ ವರೇಗೆ ಮೆಲ್ಲಗೆ ಹೊತ್ತಿಕೊಂಡು ಹೋಗಬೇಕು. ಇದಕ್ಕೆ ಸುಮಾರು ಎರಡು ಘಂಟೆ ಸಮಯಬೇಕು.

೨ನೇ ವಿಧ:— ಈ ಕೋಣೆಯ ಬಾಗಿಲುಗಳನ್ನೂ ಕಿಟಿಕಿಗಳನ್ನೂ ಮುಚ್ಚಿ ಯಾವ ವಸ್ತುವಿನಿಂದಾದರೂ ಮಾಡಲ್ಪಟ್ಟ ಬೆಂಕಿಯುಳ್ಳ ಒಂದು ಅಂಗಿಟಿಯನ್ನು ಈ ಕೋಣೆಯ ಅನುಕೂಲವಾದ ಯಾವದಾದರೊಂದು ವಿಭಾಗದಲ್ಲಿ ಬೆಂಕಿ ಉರಿ ಏಳದಂತೆ ಇಟ್ಟು ಆ ಅಂಗಿಟಿಯ ಮೇಲೆ ೨ ಔನ್ಸು ಕ್ರೆಸೋಲುಳ್ಳ ಬಟ್ಲನ್ನು ಇಟ್ಟು ಅದು ಹಬೆಯಾಗಲಿ. ಇದಕ್ಕೆ ಸುಮಾರು ಒಂದು ಘಂಟೆ ಸಮಯಬೇಕು.

ಈ ಎರಡು ಕ್ರಮಗಳ ಪೈಕಿ ಯಾವದಾದರೊಂದು ಕ್ರಮವು ಕೋಣೆಯಲ್ಲಿರುವ ಚಿಕ್ಕಾಡುಗಳನ್ನು ನಾಶಮಾಡುತ್ತದೆ. ಕ್ರೆಸೋಲು ಉರಿ ಏಳದೆ ಹಬೆಯಾಗುವಂತೆ ಜಾಗ್ರತೆ ತೆಗೆದುಕೊಳ್ಳಬೇಕು. ಉರಿ ಏಳುವ ಬೆಂಕಿಯ ಮೇಲೆ ಕ್ರೆಸೋಲನ್ನು ಹಾಕಿದರೆ ಅದಕ್ಕೆ ಬೆಂಕಿ ಹಿಡಿದು ದಪ್ಪವಾದ ಕಪ್ಪು ಹೊಗೆ ಏಳುವಂತೆ ಉರಿಯುತ್ತದೆ. ಇದು ಚಿಕ್ಕಾಡುಗಳಿಗೆ ಏನೂ ಅಪಾಯಕರವನ್ನುಂಟು ಮಾಡುವದಿಲ್ಲ.

ಮೆಲ್ಲಗೆ ಹೊತ್ತಿಕೊಂಡು ಹೋಗುವ ಶಗಣಿ ಬೆಂಕಿಯ ಮೇಲೆ ಹಾಕಿದರೆ ಅಥವಾ ಒಂದು ಅಂಗಟಿಯ ಮೇಲೆ ಇಟ್ಟ ಬಟ್ಲನಲ್ಲಿ ಹಾಕಿದರೆ ಪ್ರಕಾಶವಾಗುವದಿಲ್ಲ. ಆದರೆ ಒಂದು ಬೂದಿಯ ಬಣ್ಣದ ಹಬೆಯುಂಟಾಗುತ್ತದೆ. ಇದು ಚಿಕ್ಕಾಡುಗಳಿಗೆ ಅತ್ಯಂತ ವಿಷಕರವು. ಆದರೆ ಮನುಷ್ಯರಿಗಾಗಲೀ ಜಂತುಗಳಿಗಾಗಲೀ ಅಸಹ್ಯಕರವಾಗಿಯೂ ಅಪಾಯಕರವಾಗಿಯೂ ಇರುವದಿಲ್ಲ.

ಶಗಣಿ ಬೆಂಕಿಯು ಸದಾ ಹೊತ್ತಿರಬೇಕು. ಆದರೆ ಕೆಂಪಾಗಿಯಾಗಲೀ ಉರಿಯಾಗಿಯಾಗಲೀ ಇರಬಾರದು. ಅಂಗಟಿಯು ಹದವಾಗಿ ಉರಿಯುತ್ತಿರಬೇಕು. ಆದರೆ ಬಟ್ಲನಲ್ಲಿರುವ ಕ್ರೆಸೋಲಿಗೆ ಬೆಂಕಿ ಹಿಡಿಯದಂತೆ ನೋಡಿಕೊಳ್ಳಬೇಕು, ಇದಕ್ಕೆ ಅತ್ಯಂತ ಅನುಕೂಲವಾದ ಕ್ರಮವ್ಯಾವದಂದರೆ ಮನೆಗಳ ಬಾಗಿಲುಗಳನ್ನೂ ಕಿಟಿಕಿಗಳನ್ನೂ ಮುಚ್ಚಬೇಕು. ಅನಂತರ ಶಗಣಿ ಬೆಂಕಿಯನ್ನಾಗಲೀ ಅಂಗಟಿಗಳನ್ನಾಗಲೀ ಮನೆಗಳ ಹೊರಗೆ ಉರಿಸಬೇಕು. ಅದು ಸಿದ್ಧವಾದ ಕೂಡಲೇ ಅದನ್ನು ಮನೆಗಳ ಒಳಗೆ ತಕ್ಕೊಂಡು ಹೋಗಬೇಕು. ಮೆಲ್ಲಗೆ ಹೊತ್ತಿಕೊಂಡು ಹೋಗುವ ಶಗಣಿ ಬೆಂಕಿಯ ಮೇಲೆ ಕ್ರೆಸೋಲನ್ನು ಸುರಿಯಬೇಕು, ಅಥವಾ ಕ್ರೆಸೋಲು ಇರುವ ಬಟ್ಲುಗಳನ್ನು ಅಂಗಟಿಯ ಮೇಲೆ ಇಡಬೇಕು.

ಹಬೆ ಕಾಣದ್ದೆ ಹೋಗುವ ವರೇಗೆ ಕೋಣೆಗಳನ್ನು ಮುಚ್ಚಿಕೊಂಡಿರಬೇಕು. ಇದಕ್ಕೆ ೨ ಯಾ ೩ ಘಂಟೆ ಸಮಯಬೇಕು.

ನಿಮ್ಮ ಕೆಲಸವು ನಾಜೂಕಾಗಿಯದೋ ಏನೆಂದು ಯಾವ ಕಾಲದಲ್ಲಿಯೂ ಸುಲಭವಾಗಿ ಪರೀಕ್ಷಿಸಬಹುದು. ನಾಯಿಗಳಿಂದಾಗಲೀ ಇಲಿಗಳಿಂದಾಗಲೀ ಅಥವಾ ಯಾವ ಜಂತುವಿನಿಂದಾಗಲೀ ಚಿಕ್ಕಾಡುಗಳನ್ನು ಎಡೆ ಕಾಣದಂತೆ ಹೊಲಿದ ನುಶಿಗಳನ್ನು ಹಿಡಿಯುವ ಬಲೆಯೊದ ಯಾ ರೇಶ್ಮೆಯಿಂದ ಮಾಡಲ್ಪಟ್ಟ ಚೀಲಗಳಲ್ಲಿ ಇಟ್ಟು ಆ ಚೀಲಗಳನ್ನು ನೆಲದ ಮೇಲೆ ಇಡಬೇಕು. ಮತ್ತು ಗೋಡೆಗಳಲ್ಲಿಯೂ ಚಾಡುಗಳಲ್ಲಿಯೂ ಇರುವ ತೂತುಗಳಲ್ಲಿ ಅವುಗಳನ್ನು ಸೇರಿಸಬೇಕು.

ಚಿಕ್ಕಾಡಿನ ನಾಶವು ಒಂದು ಹೆಚ್ಚಾದ ಕ್ರಮವೆಂತ ಪ್ರಯೋಗಿಸಬೇಕು ಹೊರತು ನಮ್ಮ ಈಗಿನ ಪ್ಲೇಗ್ ಬಾರದಂತೆ ತಡಿಯುವ ಕ್ರಮಗಳ ಬದಲಾಗಿ ಈ ಕ್ರಮವನ್ನು ಪ್ರಯೋಗಿಸಿದ್ದೆಂತ ಭಾವಿಸಬಾರದು. ಇಲಿ ನಾಶ (ಹೊಗೆ ಹೊತ್ತಿಸುವದು, ವಿಷ ಇಟ್ಟು ಕೊಲ್ಲುವದು, ಹಿಡಿಯುವದು)ದ ಕ್ರಮದ ಒಟ್ಟಿಗೆ ಈ ಕ್ರಮವನ್ನು ರೋಂಕು ತಗಲಿದ ಮನೆ ಮತ್ತು ಇದಕ್ಕೆ ತಗಲಿದ ಮನೆಗಳಿಗೆ ಪ್ರಯೋಗಿಸಬೇಕು.

ಜನರು ಬಿಟ್ಟು ಹೋದ ಮನೆಗಳಲ್ಲಿರುವ ಚಿಕ್ಕಾಡುಗಳನ್ನು ಜನರು ಅಲ್ಲಿಗೆ ತಿರಿಗಿ ಬರುವ ಮೊದಲೇ ನಾಶ ಮಾಡಬೇಕೆಂಬದು ಅತ್ಯಂತ ಮುಖ್ಯ ಸಂಗತಿಯು.

ಅನೇಕಾವರ್ತಿ ವಕ್ಕಲು ಇಲ್ಲದ ಮನೆಗಳು ಚಿಕ್ಕಾಡುಗಳಿಂದ ತುಂಬಿಕೊಂಡಿರುತ್ತವೆ ಈ ಚಿಕ್ಕಾಡುಗಳನ್ನು ಕೊಲ್ಲದೆ ಆ ಮನೆಗಳಿಗೆ ವಕ್ಕಲಾಗುವದು ಬಹಳ ಅಪಾಯಕರವು.

ತಾವು ಬಿಟ್ಟು ಹೋದ ಮನೆಗಳಿಗೆ ಪುನಹಾ ಪ್ರವೇಶವಾಗುವಾಗ ಜನರಿಗೆ ಪ್ಲೇಗು ಅಂಟುತ್ತದೆಂಬದು ದಿನಚರ್ಯವಾದ ವೃತ್ತಾಂತವು. ಚಿಕ್ಕಾಡುಗಳು ನಾಶವಾಗದೆ ವಕ್ಕಲು ಇಲ್ಲದ ಮನೆಗಳಿಗೆ ಪುನಹಾ ವಕ್ಕಲಾಗಬಾರದೆಂದು ನೀವು ಜನರಿಗೆ ಎಚ್ಚರಿಸಬೇಕು. ಪ್ಲೇಗು ತಗಲದಂತೆ ನಿಯಮಿಸುವ ಕ್ರಮಗಳ ಒಟ್ಟಿಗೆ ಇನ್ನೊಂದು ಸಂಗತಿ ಯಾವದಂದರೆ—ಕೆರೊಸಿನ ಎಣ್ಣೆ ಮತ್ತು ಸಾಸಿವೆ ಎಣ್ಣೆಯನ್ನು ಸಮಪಾಲುಗಳಿಂದ ಬೆರಸಿ ಕಾಲುಗಳಿಗೂ ತೋಳುಗಳಿಗೂ ಕುತ್ತಿಗೆಗಳಿಗೂ ಬಳಿಯಬೇಕು. ಹೀಗೆ ಮಾಡಿದರೆ ಚಿಕ್ಕಾಡುಗಳು ಹೆಚ್ಚಾಗಿ ಕಚ್ಚುವದಿಲ್ಲ. ಆಯಾಯ ಕುರಿತಾದ ಅಂಗಗಳಿಗೆ ಈ ಎಣ್ಣೆಗಳನ್ನು ಬಳಿಯುವದು ನಿರ್ಬಾಧಕವು. ಇದು ಎಲ್ಲಾ ಗ್ರಾಮಗಳಲ್ಲಿಯೂ ದೊರಿಯುತ್ತದೆ. ಇದರ ವಾಸನೆಯು ಹೆಚ್ಚಾಗಿ ಅಸಹ್ಯಕರವಲ್ಲ. ದಿನಕ್ಕೆ ೩ ಯಾ ೪ ಸರ್ತಿ ಕೆರೊಸಿನ ಎಣ್ಣೆ ಮತ್ತು ಸಾಸಿವೆ ಎಣ್ಣೆಯನ್ನು ಸಮಪಾಲುಗಳಿಂದ ಬೆರಸಿ ಕಾಲುಗಳಿಗೂ ತೋಳುಗಳಿಗೂ ಕುತ್ತಿಗೆಗಳಿಗೂ ಬಳುಕೊಳ್ಳಬೇಕೆಂತ ರೋಂಕು ತಗಲಿದ ಗ್ರಾಮಗಳಲ್ಲಿರುವ ಜನರಿಗೆ ಬುದ್ಧಿಮಾರ್ಗ ಹೇಳಬೇಕು. ಸಮಪಾಲುಗಳಿಂದ ಬೆರಸಿದ ಕೆರೊಸಿನ ಎಣ್ಣೆ ಮತ್ತು ಸಾಸಿವೆ ಎಣ್ಣೆ ಒಟ್ಟಿಗೆ ಸ್ವಲ್ಪ ಸಿಟ್ರೊನೆಲ್ಲಾ ಎಣ್ಣೆಯನ್ನು ಕೂಡಿಸಿದರೆ ಕೆರೊಸಿನ ಎಣ್ಣೆಯ ವಾಸನೆಯನ್ನು ಕಳಚಿಬಿಟ್ಟು ಸಿಟ್ರೊನೆಲ್ಲಾ ಎಣ್ಣೆಯ ವಾಸನೆಯೇ ಇರಿಸಬಹುದು.

Mangalore, 8th April 1915.

V. VERGHESE,
Ag. District Medical and Sanitary Officer,
South Canara.

ಪ್ರೊಫೆಸರ್ ಜಗದೀಶ ಚಂದ್ರ ಬೋಸರವರು.

ಕಲ್ಕತ್ತೆಯ ಪ್ರಸಿದ್ಧ ಪ್ರೊಫೆಸರರಾದ ಜಗದೀಶ ಚಂದ್ರ ಬೋಸರು ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಇತ್ತಲಾಗ್ಗೆ ಬೆಳೆಸಿದ ಪ್ರಯಾಣದ ಕುರಿತು ಮಿ! ಸುಧೀಂದ್ರ ಬೋಸರು ಮೋಡರ್ನ್ ರಿವ್ಯೂ ಎಂಬ ಇಂಗ್ಲಿಷ್ ಮಾಸ ಪತ್ರಿಕೆಯಲ್ಲಿ ಒಂದು ಚಿಕ್ಕ ಲೇಖನವನ್ನು ಬರೆದಿರುವರು. ಬೋಸರವರು ಇದೇ ವರ್ಷದ ಪ್ರಾರಂಭದಲ್ಲಿ ಕೆಲವು ವಾರ ಸಂಯುಕ್ತ ಸಂಸ್ಥಾನದಲ್ಲಿ ಸಂಚಾರ ಮಾಡುತ್ತಲಿದ್ದರು. ಅವರಿಗೆ ಉಪನ್ಯಾಸಗಳನ್ನು ಕೊಡಬೇಕಾಗಿ ಎಲ್ಲಾ ಕಡೆಗಳಿಂದಲೂ ಆಮಂತ್ರಣಗಳಿತ್ತು. ಅವರು ದಿವಸಕ್ಕೆರಡಾವರ್ತಿ ಬಿಡದೆ ಉಪನ್ಯಾಸಗಳನ್ನು ಕೊಟ್ಟರೂ ಅವರಿಗೆ ಬಂದ ಆಮಂತ್ರಣ ಪತ್ರಗಳನ್ನು ಮುಗಿಸಲಿಕ್ಕೆ ಒಂದು ವರ್ಷವು ಸಾಕಾಗುತ್ತಿದ್ದಿಲ್ಲ. ಪ್ರೊಫೆಸರ್ ಬೋಸರು ಸಂಸ್ಥಾನದ ಎಲ್ಲಾ ಮುಖ್ಯ ಪಟ್ಟಣಗಳಲ್ಲಿ ಇರುವ ವೈಜ್ಞಾನಿಕ ಸಮಿತಿಗಳಿಗೆ ಉಪನ್ಯಾಸಗಳನ್ನು ಕೊಟ್ಟದ್ದಲ್ಲದೆ ಹಾರ್ವಾಡ್, ಚಿಕಾಗೋ, ಮಿಚಿಗನ್ ವಗೈರೆ ಎಲ್ಲಾ ಮುಖ್ಯ ವಿಶ್ವವಿದ್ಯಾಲಯಗಳಲ್ಲಿ ಕೂಡಾ ಅವರ ಮೇಧಾವಂತ ಉಪನ್ಯಾಸಗಳನ್ನು ಕೊಟ್ಟಿರುತ್ತಾರೆ. ವಾಶಿಂಗ್ಟನ್ ನಗರದಲ್ಲಿ ಕೊಸ್ಮೊಸ್ ಕ್ಲಬ್ಬಿಗೆ ಅವರು ಕೊಟ್ಟ ಒಂದು ಉಪನ್ಯಾಸವನ್ನು ಕೇಳಲಿಕ್ಕೆ ಬಂದ ಜನಸ್ತೋಮವು ಬಹಳ ಹೆಚ್ಚಾಗಿ ಎಲ್ಲರಿಗೆ ನಿಲ್ಲುವರೆ ಕೂಡಾ ಎಡೆ ಇರಲಿಲ್ಲ. ಟೆಲಿಫೋನ್ ಎಂಬ ತಂತೀಯ ಕಲ್ಪಕರಾದ ಡಾಕ್ಟರ್ ಗ್ರೆಹಂ ಬೆಲ್ಲ್ ಎಂಬವರು ಸಾಧಾರಣ ೨೦ ನಿಮಿಷ ಮುಂಚೆ ಬಂದಿದ್ದರೂ ಅವರಿಗೆ ಸಭಾಸದನದಲ್ಲಿ ಕೇಳುವಷ್ಟು ದೂರದಲ್ಲಿ ಬರುವರೆ ಅಸ್ಪದ ಸಿಕ್ಕಲಾರದೆ ಮರುದಿವಸ ತನ್ನ ಸ್ವಂತ ಮನೆಯಲ್ಲಿ ಮಿ! ಬೋಸರನ್ನು ಸತ್ಕರಿಸುವರೆ ವಾಶಿಂಗ್ಟನಿನ ವರ್ಣಿಗಳನ್ನೆಲ್ಲಾ ಕೂಡಿಸಿ ಉಪಚರಿಸಿದರು. ಸಂಸ್ಥಾನದ ಬಹಳ ದೊಡ್ಡ ಉದ್ಯೋಗಸ್ಥರು ಕೂಡಾ ಅವರ ಉಪನ್ಯಾಸಗಳನ್ನು ಕೇಳಲಿಕ್ಕೆ ವ ದರ್ಶನ ಮಾಡಲಿಕ್ಕೆ ಬಂದದ

ದೆ ಮುಖ್ಯ ಪತ್ರಿಕೆಗಳೆಲ್ಲಾ ಪ್ರೊಫೆಸರರ ಅತುಲ್ಯವಾದ ಚಾತುರ್ಯಗಳನ್ನು ಕೊಂಡಾಡವು. ಮಿ॥ ಬೋಸರವರು ಇಂಗ್ಲಿಷ್ ಸರಕಾರದವರಿಂದ ಅವರ ವೈಜ್ಞಾನಿಕ ವಿಮರ್ಶೆಯ ಫಲಿತಾಂಶವನ್ನು ಯೂರೋಪಿನ ಎಲ್ಲಾ ದೇಶಗಳಲ್ಲಿ ತೋರಿಸುವರೆ ಕಳುಹಿಸಲ್ಪಟ್ಟಿದ್ದರು. ಯೂರೋಪಿನಲ್ಲಿ ವಿಯಾನ್ನ, ಪಾರಿಸ್ ನಗರಗಳಲ್ಲಿ ಉಪನ್ಯಾಸಗಳನ್ನು ಕೊಟ್ಟು, ಅವರು ಜರ್ಮನಿಗೆ ಹೋಗಬೇಕೆಂದಿದ್ದಾಗ್ಗೆ ಯುದ್ಧವು ಪ್ರಾರಂಭವಾಯಿತು. ಹೀಗಾಗಿ ಅವರು ವಿಲಾಯತಿಗೆ ಪ್ರಯಾಣ ಬೆಳೆಸಿ, ಲಂಡನ್, ಒಕ್ಸ್‌ಫರ್ಡ್, ಕೇಂಬ್ರಿಜ್ ಮುಂತಾದ ಪ್ರಖ್ಯಾತ ವಿಶ್ವವಿದ್ಯಾಲಯಗಳಲ್ಲಿ ಉಪನ್ಯಾಸಗಳನ್ನು ಕೊಟ್ಟು ನಂತರ ಸಂಯುಕ್ತ ಸಂಸ್ಥಾನಕ್ಕೆ ಪ್ರಯಾಣವನ್ನು ಬೆಳೆಸುವವರಾದರು. ಸಸಿಗಿಡಗಳ ಸ್ವಹಸ್ತಲಿಖಿತಗಳು ವ ಅವುಗಳ ಆದೇಶಗಳ ಕುರಿತು ಪ್ರದರ್ಶನಗಳ ಮೂಲಕ ಬೋಸರು ಉಪನ್ಯಾಸಗಳನ್ನು ಕೊಡುತ್ತಲಿದ್ದಾರೆ. ಅವರ ವಿಮರ್ಶೆಯಿಂದ ಸಸ್ಯಾದಿಗಳಲ್ಲಿ ಕೂಡಾ ಮನುಷ್ಯ ವರ್ಗದಲ್ಲಿರುವಂತೆ ಜೀವವು, ನಾಡಿಸ್ಪಂದನ ವಗೈರೆ ಇರುವದಾಗಿ ಸ್ಪಷ್ಟವಾಗುತ್ತದೆ. ಪ್ರೊಫೆಸರ್ ಬೋಸರು ದೊಡ್ಡ ವಾಗ್ಮಿಶರಲ್ಲ, ಆದರೆ ಸ್ಪಷ್ಟವಾಗಿ ವ ಪೂರ್ಣ ನಂಬಿಕೆ ಹುಟ್ಟುವಂತೆ ಕಷ್ಟ ಸಂಗತಿಗಳನ್ನು ವಿವರಿಸುವದರಲ್ಲಿ ಅವರ ಸಾಮರ್ಥ್ಯವು ಅತುಲ್ಯವಾಗಿರುತ್ತದೆ. ಅವರನ್ನು ಕೇಳುವರೆ ಕೂಡಿದ ಜನಸ್ತೋಮದ ಆತುರವು ವ ಮೌನತೆಯು ಎಷ್ಟರ ಮಟ್ಟಿಗೆಂದರೆ ಒಂದು ಗುಂಡು ಸೂಜಿಯು ಕೆಳಗೆಬಿಟ್ಟ ಪಕ್ಷಕ್ಕೆ ಅದರ ಶಬ್ದ ಕೇಳುವದು. ಪತ್ರಿಕೆಗಳ ರಿಪೋರ್ಟರರು ಅವರಿಗೆ ನೋಡಲಿಕ್ಕೆ ಒಂದಲ್ಲ ಅಸಂತುಷ್ಟರಾಗಿ ಹೋಗುತ್ತಾರೆ. ಯಾಕಂದರೆ ಅವರ ಮುಖಾಂತರ ತನ್ನ ಹೆಸರು ಗೊತ್ತಾಗಬೇಕೆಂಬ ಇಚ್ಛೆಯು ಮಿ॥ ಬೋಸರಿಗೆ ಇರುವದಿಲ್ಲ. ಅವರ ವಾಕ್ಚಾತುರ್ಯದ ಕುರಿತು ಮಿ॥ ಬೋಸರು ಬಹಳ ಹೆಚ್ಚಿನ ಆಸಕ್ತಿಯುಳ್ಳವರಾಗಿರುತ್ತಾರೆ. ಒರೇ ದ್ರವ್ಯಾರ್ಜನೆಯು ಒಬ್ಬ ಮನುಷ್ಯನ ಯೋಗ್ಯತೆಯ ಚಿನ್ಹೆಯಲ್ಲ ಎಂಬದು ಅವರ ಅಭಿಪ್ರಾಯ. ಅವರು ದ್ರವ್ಯ ಸಂಪಾದನೆಯ ಮೇಲೆ ಯೋಚನೆಯುಳ್ಳವರೂ ಅಲ್ಲ. ಬೋಸರ ಒಟ್ಟಿಗೆ ಬುದ್ಧಿಶಾಲಿಯಾದ ಅವರ ಪತ್ನಿಯವರು ಸಹಾ ಸಂಚಾರಣೆಗೆ ಹೋಗಿರುತ್ತಾರೆ. ಇವರು ವಿದೇಶಗಳಲ್ಲಿ ಹೆಚ್ಚು ಪ್ರಯಾಣ ಬೆಳೆಸಿದರೂ ಸದಾ ದೇಶೀಯ ಉಡುಪನ್ನೇ ಉಪಯೋಗಿಸುತ್ತಿದ್ದಾರೆ. ಅವರು ಸ್ತ್ರೀ ಶಿಕ್ಷಣದ ಕುರಿತು ಹೆಚ್ಚಿನ ಆಸಕ್ತಿಯುಳ್ಳವರಾಗಿದ್ದು ಹಿಂದೂಸ್ಥಾನದಲ್ಲಿ ಅವರು ನಡಿಸುತ್ತಲಿರುವ ಸ್ತ್ರೀ ಶಿಕ್ಷಣದ ಕುರಿತು ಅಮೇರಿಕದ ಒಬ್ಬ ಶಿಕ್ಷಿತ ಮಹಿಳೆಯನ್ನು ತನ್ನ ಜೊತೆಯಲ್ಲಿ ತೆಗೆದುಕೊಂಡಿರುತ್ತಾರೆ. ಒಟ್ಟಾರೆಯಲ್ಲಿ ಮಿ॥ ಬೋಸರಿಗೆ ಅವರ ಮಾನ್ಯ ಪತ್ನಿಯವರು ಕೂಡಾ ಪ್ರತಿ ವಿಷಯದಲ್ಲಿಯೂ ಪೂರ್ಣ ಸಹಭಾಗಿಗಳಾಗಿರುವಂಥಾದ್ದು ಅತಿ ಆನಂದಕರವಾಗಿರುತ್ತದೆ.

ಪತ್ರವ್ಯವಹಾರ.

ಸ್ವಾಮಿ ಪತ್ರಕರ್ತರೇ,

ನನ್ನ ಈ ಕೆಳಗಿನ ಒಂದು ವಿಜ್ಞಾಪನೆಯನ್ನು ತಮ್ಮ ಅಮೂಲ್ಯವಾದ ಸಂಚಿಕೆಯಲ್ಲಿ ಪ್ರಕಟಿಸುವರೆ ಸಂಕೋಚ ಸ್ಥಳ ಕೊಡುವಿರಾಗಿ ನಂಬುತ್ತೇನೆ.

ಈ ನಮ್ಮ ಊರಿನಲ್ಲಿ ರಾಜರಸ್ತೆಯ ಬಳಿ ಅಲ್ಲಲ್ಲಿ ಮೀನು ಮಾರುವ ಪದ್ಧತಿ ಕೆಲವು ಕಾಲದಿಂದ ಊರ್ಜಿತದಲ್ಲಿ ಇತ್ತು. ನಂತರ ತಾಲೂಕು ಬೋರ್ಡಿನವರು ಇದನ್ನು ಆಕ್ಷೇಪಿಸಿ "ಲೋಕಲ್ ಬೋರ್ಡ್ ಆಕ್ಟಿನ" ನಿಬಂಧನೆಯನ್ನು ಈ ಟೌನ್ ಸರಹದ್ದಿನೊಳಗೆ ಜಾರಿಗೆ ತರುವರೆ ಅಪ್ಪಣೆಕೊಟ್ಟರು. ಮಾತ್ರವಲ್ಲ, ಮೀನನ್ನು ಮಾರಲಿಕ್ಕೆ ಪ್ರತ್ಯೇಕ ಸ್ಥಳವನ್ನು ಆರಿಸಿ ಬೋರ್ಡಿನವರು ಆ ಸ್ಥಳದಲ್ಲಿ ತರುವ ತಲೆಹೊರೆಗಳ ಮೇಲಿನ ಫೀಸು ವಸೂಲು ಮಾಡುವ ಸ್ವತಂತ್ರವನ್ನು ವರ್ಷಾವಧಿ ಬಗ್ಗೆ ಬಹಿರಂಗವಾಗಿ ಏಲಂ ಮಾಡುವರೆ ಹುಕುಂ ಕೂಡಾ ದಯಪಾಲಿಸಿದರು. ಮೇಲೆ ಹೇಳುವ ಮೇರೆಗೆ ಲೋಕಲ್ ಬೋರ್ಡ್ ಆಕ್ಟನ್ನು ಪ್ಯಾಸ್ ಮಾಡಿದ ತಕ್ಷಣವೇ ಆಸಪಾಸ ಸ್ಥಳದಲ್ಲಿ ಮೊದಲಿನ ಕ್ರಮಪ್ರಕಾರ ಮೀನು ಮಾರುತ್ತಿದ್ದ ಮುಕ್ಕವರ ಹೆಂಗಸರಲ್ಲಿ ಅನೇಕರನ್ನು ಪೋಲೀಸಿನವರು ಚಾರ್ಜಮಾಡಿ ನ್ಯಾಯಾಧಿಪತಿಗಳ ಸನ್ನಿಧಿಗೆ ರವಾನಿಸಿದರು. ಕ್ರಮಪ್ರಕಾರ ತನಿಕಿ ನಡೆದು ಮೊಕದ್ದಮೆಗಳು ಕೂಡಾ ತೀರ್ಮಾನವಾದವು. ಆದುದರಿಂದ ನಿವಾಸಿಕರಿಗೆ ಈ ವರೆಗೂ ಯಾವ ತರದ ಆಕ್ಷೇಪಾಂತರ ಉಂಟಾಗಲಿಲ್ಲ. ಇತ್ತಲಾಗೆ ರಾಜರಸ್ತೆಯ ಬಳಿ ಮೊದಲಿನ ಮೇರೆಗೆ ಮುಂಚೆ ೨ ಯಾ ೩ ಕಡೆಗಳಲ್ಲಿ ಮಾರುತ್ತಿದ್ದದಾದರೆ ಈಗ ೫—೬ ಕಡೆಗಳಲ್ಲಿ ಎಂತ ಹೇಳಲೇನೂ ಅಡ್ಡಿಯಿಲ್ಲ. ಮೀನು ಮಾರುವ ಪದ್ಧತಿಯು ದಿನಂಪ್ರತಿ ಅಭಿವೃದ್ಧಿಯಾಗುತ್ತಾ ಬರುತ್ತಲಿದೆ. ಈ ಪ್ರಕಾರ ನಿರ್ಭೀತಿಯಿಂದ ಮೀನು ಮಾರಿದರೆ ಲೋಕಲ್ ಫಂಡ್ ಮಾರ್ಕೆಟಿನಿಂದ ನಿವಾಸಿಕರಿಗೆ ಇರುವ ಗುಣವೇನು? ಸದರಿ ಲೋಕಲ್ ಬೋರ್ಡ್ ಆಕ್ಟ್ ಒಮ್ಮೆ ಜಾರಿಗೆ ತಂದು ಪ್ರಕೃತ ಊರ್ಜಿತದಲ್ಲಿ ಯಾಕೆ ಇರಗೊಡಿಸಬಾರದು? ಅದಂತಿರಲಿ, ಇನ್ನೊಂದು ಮಾತು ಅದೆ. ಮಾರ್ಕೆಟಿಗೆ ಗಡಿ ನಿಶ್ಚಯಿಸಿ ಅದರಲ್ಲಿ ವ್ಯಾಪಾರ ನಡಿಸುವವರಿಂದ ಮಾತ್ರವೇ ಕಂಟ್ರಾಕ್ಟದಾರನು ಫೀಸು ವಸೂಲು ಮಾಡಬಹುದಲ್ಲದೆ ಮಾರ್ಕೆಟಿನ ಹೊರಗೆ ಅಲ್ಲಲ್ಲಿ ರಾಜಬೀದಿ ಬಳಿ ಇರಬಹುದಾದ ಮುಕ್ಕವರಿಂದ ಕಂಟ್ರಾಕ್ಟದಾರನು ಫೀಸು ವಸೂಲು ಮಾಡಬಹುದೋ? ಅಥವಾ ಸ್ವತಹಾ ವಸೂಲು ಮಾಡದೆ ಇದ್ದರೆ ಬೇರೆ ಮುತಾಲಿಕರ ಪರಿಮುಖ ವಸೂಲು ಮಾಡಿಸಬಹುದೋ, ಹಾಗೆ ವಸೂಲು ಮಾಡುವದಾದರೆ ಸಮ್ಮಂಧಪಟ್ಟ ಅಧಿಕಾರಿಗಳ ಮಂಜೂರಿತ ಅನುಮತಿ ಶಿವಾಯಿ ಕಂಟ್ರಾಕ್ಟದಾರನು ಯಾವ ಆಧಾರದ ಮೇಲೆ ಏನೂ ಅರಿಯದ ಶುದ್ಧ ಮೂಢ ಪಶುಗಳಂತೆ ಇರುವ ಈ ಬಡ ಮುಕ್ಕವರಿಂದ ಫೀಸು ವಸೂಲು ಮಾಡಬಹುದು? ಈ ಸಂಗತಿಗಳು ಊರ ನಿವಾಸಿಕರ ಸುಖಕ್ಷೇಮಗಳಿಗೂ ಸರಕಾರಕ್ಕೆ ಸಿಕ್ಕಬಹುದಾದ ಲಭ್ಯಗಳಿಗೂ ಸಮ್ಮಂಧಪಟ್ಟದಾದ್ದರಿಂದ ಸಮ್ಮಂಧಪಟ್ಟ ಅಧಿಕಾರಸ್ಥರ ಜಾಹೀರಾತಿಗೆ ಇದನ್ನು ತರುವದು ಅತ್ಯಗತ್ಯವಾಗಿದೆ, ಮತ್ತು ಮೇಲಾಧಿಕಾರಿಗಳು ಇದಕ್ಕೆ ತ್ವರ್ಯ ನಿಗಾಕೊಡುವರಾಗಿ ನಂಬುತ್ತೇನೆ.

ಇಂತಿ ತಮ್ಮ ವಿಧೇಯ ಸೇವಕ,

ಹೊಸದುರ್ಗ
ತಾ 3—5—15

"ಸಹಾನುತಾಪಿ"

ಅಯ್ಯಾ ಪತ್ರಿಕಾಕರ್ತರೇ,

ತಮ್ಮ ಸಂಚಿಕೆಯೊಂದರಲ್ಲಿ "ಹಳ್ಳಿ ನಿವಾಸಿ"ಕರೊಬ್ಬರು ಪ್ರೊಫೆಸರ್ ಗೆಡ್ಡಿಸರವರ ಪಟ್ಟಣ ರಚನೆ ಇತ್ಯಾದಿಗಳ ಭಾಷಣವನ್ನು ಕೇಳಹೋಗಿದ್ದ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರಿಗೆ ಒಂದು ವಿಜ್ಞಾಪನೆಯನ್ನು ಮಾಡಿಕೊಂಡಿದ್ದರು. ಆದರೆ ಈ ವರೆಗೆ "ಹಳ್ಳಿ ನಿವಾಸಿ"ಯ ವಿಜ್ಞಾಪನೆಗೆ ಮಾನ್ಯ ಮೆಂಬರರು ಉತ್ತರ ಕೊಡದಿರಲು ಕಾರಣವೇನೋ ತಿಳಿಯದು. ಪ್ರೊಫೆಸರ್ ಗೆಡ್ಡಿಸರವರ ಭಾಷಣವು "ಹಳ್ಳಿ ನಿವಾಸಿ"ಕರಿಗೆ ಪ್ರಯೋಜನವಿಲ್ಲವೆಂದು ತಿಳಿದು, ಯಾ 'ಹಳ್ಳಿ ನಿವಾಸಿ'ಯ ಪತ್ರಕ್ಕೆ ಉತ್ತರ ಕೊಡುವದರಿಂದ ಮಾನ್ಯ ಮೆಂಬರರ ಮರ್ಯಾದೆಗೆ ಕುಂದು ಬಂದೀತು ಎಂಬ ಭಾವನೆಯಿಂದ ಪ್ರೊಫೆಸರ್ ಗೆಡ್ಡಿಸರ ಭಾಷಣವನ್ನು ಕೇಳಿ ಹುಟ್ಟಿದ ಅನುಭವವನ್ನು ಈ ಮೆಂಬರರು ಹೊರಪಡಿಸದೆ ಇದ್ದದ್ದೇ? ಆದರೆ ಪ್ರೊಫೆಸರ್ ಗೆಡ್ಡಿಸರ ಭಾಷಣದ ನೂತನ ವಿಷಯಗಳು ಯಾವವು? ಈ ಮೆಂಬರರು ಪಡಕೊಂಡ ಅನುಭವವೇನು? ಎಂಬಿತ್ಯಾದಿ ವಿಷಯಗಳನ್ನು ಪಟ್ಟಣ ನಿವಾಸಿಕರಿಗಾದರೂ ತಿಳಿಸಬಾರದೇ? ನಮ್ಮ ಪಟ್ಟಣದ ಸೋಮವ್ಯಾಪಾರ ಕರಣೀಕ ರಸ್ತೆ, ಹೊಸ ಗದ್ದೆಕೇರಿ ರಸ್ತೆ, ಮೊದಲಾದ ರಸ್ತೆಗಳ ಬದಿಯಲ್ಲಿರುವ ಮನೆಗಳ ಸ್ಥಿತಿಯನ್ನೂ ಈ ಬೀದಿಯ ತೋಡುಗಳ ಕೆಸರಿನಿಂದ ಹುಟ್ಟುವ ದುರ್ವಾಸನೆಯನ್ನೂ ಈ ಮೆಂಬರರು ಒಂದು ಸಲ ಶ್ವಾಸಿಸಿ, ನಮ್ಮ ಪಟ್ಟಣದ ಕೆಲವು ಕೇರಿಗಳ ಆರೋಗ್ಯ ಸ್ಥಿತಿಯನ್ನು ವಿಚಾರಿಸಿದರೆ ಪ್ರೊಫೆಸರ್ ಗೆಡ್ಡಿಸರ ಭಾಷಣದಿಂದ ಪಡಕೊಂಡ ಅನುಭವವನ್ನು ಬೇಗನೇ ಹೊರಪಡಿಸುತ್ತಿದ್ದರೋ ಏನೋ? ಸ್ವಾಮೀ, ಅದಲ್ಲದೆ, ಮಂಗಳೂರಲ್ಲಿ ನೂತನ ಪೆಂಟಲೆಂಡ್ ಪೇಟೆಯಲ್ಲಿ ಹಲವು ತುಂಡು ಸ್ಥಳಗಳು ಏಲಮಿಗೆ ಪಟ್ಟಣ ನಿವಾಸಿಕರು ಪಡಕೊಂಡಿರುವರು. ಈ ಸ್ಥಳಗಳಲ್ಲಿ ಮನೆಗಳನ್ನು ಕಟ್ಟುವವರಿಗೂ ಪ್ರೊಫೆಸರ್ ಗೆಡ್ಡಿಸರ ಭಾಷಣದ ಅನುಭವವು ಬೇಕಾದೀತು. ಆದುದರಿಂದ ಈ ಮೆಂಬರರು ದಯಮಾಡಿ ಪ್ರೊಫೆಸರ್ ಗೆಡ್ಡಿಸರ ಭಾಷಣದಿಂದ ಪಡಕೊಂಡ ಅನುಭವವನ್ನು ಜನಸಾಮಾನ್ಯರ ಬಗ್ಗೆ ಹೊರಪಡಿಸಬೇಕಾಗಿ ವಿಜ್ಞಾಪಿಸುವ,

ಪಟ್ಟಣ ನಿವಾಸಿ.

೬ನೇ ಪುಟದಿಂದ ಮುಂದರಿಸಿದುದು.

ಕೊಡುವದು ಉಚಿತವಾಗಿಯೂ ಕಾರ್ಯನಿರ್ವಾಹಕ ಸಭೆಯ ಅರ್ಧಾಂಶ ಮೆಂಬರರಾದರೂ ಜನರಿಂದ ಆರಿಸಿ ಅಧಿಕಾರ ಹೊಂದಿದವರಾಗಿರಬೇಕಾಗಿಯೂ ಅಧ್ಯಕ್ಷರು ಅಭಿಪ್ರಾಯಪಟ್ಟಿರುತ್ತಾರೆ.

ಗ್ರಾಮ ಪಂಚಾಯತಗಳನ್ನು ನಿಯಮಿಸುವದರಿಂದ ಉಂಟಾಗುವ ಪ್ರಯೋಜನಗಳನ್ನು ಚರ್ಚಿಸಿ, ಗ್ರಾಮಗಳಿಗೆ ಯಾ ಕೆಲವು ನೆರೆಹೊರೆಯ ಗ್ರಾಮಗಳ ಸಮುದಾಯಕ್ಕೆ ಸ್ಥಳೀಯ ವಿಷಯಗಳ ಕುರಿತು ಅಧಿಕಾರವನ್ನು ಕೊಡುವದು ಅಗತ್ಯವಾಗಿದೆ. ಸಂಸ್ಥಾನದ ಕಡೆಯಿಂದ ಕಳುಹಿಸೋಣಾದ "ಮದ್ರಾಸ" ಆಸ್ಪತ್ರಿ ಹಡಗದ ದಾಗೆದೂಜು ಕುರಿತು ಆದಷ್ಟು ಸಹಾಯವನ್ನು ಮಾಡಬೇಕಾಗಿಯೂ ಸದರಿ ಹಡಗದಲ್ಲಿ ದೇಶೀಯ ವೈದ್ಯ ಉದ್ಯೋಗಸ್ತರು ಕೂಡಾ ಇರುವದು ಉಚಿತವೆಂತಲೂ ಪಬ್ಲಿಕ್ ಸರ್ವಿಸ್ ಕಮಿಷನಿನವರ ಸಿಫಾರಸುಗಳನ್ನು ಶಿಕ್ಷಿತದೇಶೀಯರು ಬಹಳ ಆತುರದಿಂದ ನಿರೀಕ್ಷಿಸಿ ಇರುತ್ತಾರೆಂತಲೂ ಸದರಿ ಕಮಿಷನಿನವರ ಸಿಫಾರಸಿಗೆ ಅನುಗುಣವಾಗಿ ಇನ್ನು ಕೆಲವು ದೊಡ್ಡ ಹುದ್ದೆಗಳು ದೇಶೀಯರಿಗೆ ಸಿಕ್ಕುವದಾದ ಪಕ್ಷಕ್ಕೂ ದೇಶೀಯರು ಮತ್ತು ವಿದೇಶೀಯರು ಎಂಬ ವ್ಯತ್ಯಾಸವನ್ನು ಪೂರ್ಣ ನೆಲೆಗೊಳಿಸಿದ ವಿನಹ ತನಗೆ ಸಮಾಧಾನವಿರಲಿಕ್ಕಿಲ್ಲವಾಗಿಯೂ ಅಧ್ಯಕ್ಷರು ತನ್ನ ಭಾಷಣದಲ್ಲಿ ವಾದಿಸಿದರು. ಕಡೆಗೆ, ಈಗ ಬಂದಿರುವ ಕಾಲವು ನಮ್ಮ ಮುಂದಿನ ಏಳಿಗೆಗೆ ಬಹಳ ಅನುಕೂಲವಾಗಿದೆಂತಲೂ ಮತ್ತು ಈಗಿನ ಯುದ್ಧದಲ್ಲಿ ನಮ್ಮ ಜನರು ತೋರಿಸಿದ ಶೂರತ್ವದ ಫಲಿತಾಂಶವಾಗಿ ನಮಗೂ ನಮ್ಮ ಆಣ್ಮರಿಗೂ ಇರುವ ಸಹಾನುಭೂತಿಯು ಇನ್ನೂ ಹೆಚ್ಚಾಗಿ ನಾವು ನಮ್ಮ ರಾಜನಿಷ್ಠತೆಯನ್ನು ನಮ್ಮ ಮಾತುಗಳಿಂದಲೂ ನಮ್ಮ ಕೃತ್ಯಗಳಿಂದಲೂ ತೋರಿಸಿ ನಮ್ಮ ವ ನಮ್ಮ ಆಣ್ಮರ ದೈವ ಸಂಕಲ್ಪಿತವಾದ ಅನ್ಯೋನ್ಯವು ಇನ್ನೂ ಬೆಳದು ನಾವು ಈ ವಿಶ್ವ ಸಾಮ್ರಾಜ್ಯದ ನಿವಾಸಿಕರಾಗಿ ಈ ಭೂಮಿಯ ನಿವಾಸಿಕರಾದ ಜನಾಂಗಗಳಲಿ ಮುಂದಾಳುಗಳಾಗಿ ಪರಸ್ಪರ ಸಹಾನುಭೂತಿಯಿಂದ ಎಲ್ಲಾ ಕೆಲಸಗಳನ್ನು ನಡಿಸಿ, ಉಭಯತರ ಉದ್ಧರಣೆಯನ್ನು ಮಾಡಿಕೊಳ್ಳತಕ್ಕದು ಎಂಬದಾಗಿ ವಿಜ್ಞಾಪಿಸಿಕೊಂಡು ಭಾಷಣವನ್ನು ಮುಕ್ತಾಯಗೊಳಿಸಿದರು.

ಯುದ್ಧ ಸಮಾಚಾರ.

ತಾ. ೨೮ನೇ ಏಪ್ರೀಲ್.

ಡರ್ಡನೆಲ್ಸಿನಲ್ಲಿ ಹಲ್ಲಾ ಮಾಡುವ ಕೆಲಸವು ನೆಲ ಜಲ ಸೇನಾ ಬಲಗಳಿಂದ ಪ್ರಾರಂಭಿಸಲ್ಪಟ್ಟಿರುವವು. ಶತ್ರುಗಳು ಮಿತ್ರ ಸೇನಿಕರನ್ನು ಕಠಿಣವಾಗಿ ಎದುರಿಸಿದರೂ ಮಿತ್ರಸೇನಿಕರು ನೌಕಾವಳಿಗಳಿಂದ ಗಲಿಪೋಲಿಯಲ್ಲಿ ಕೆಲವು ಕಡೆಗಳಲ್ಲಿ ಇಳಿದು ಮುಂದರಿಸಲು ಪ್ರಾರಂಭಿಸಿದರು ಎಂತ ಲಂಡನ್ ವರ್ತಮಾನ ಸಂಗ್ರಹ ಆಫೀಸಿನವರು ಪ್ರಕಟಿಸಿರುವರು.

ಟಿನೆಡೊಸ್ ಎಂಬಲ್ಲಿ ಇಳಿದ ತುರ್ಕರ ಎರಡು ವಾಯು ನಾವೆಗಳು ಫ್ರೆಂಚ ಮತ್ತು ಬ್ರಿಟಿಷ ಯುದ್ಧನಾವೆಗಳಿಂದ ಬಿದ್ದ ಗುಂಡು ತಗಲಿ ಹಾಳಾಗಿರುವವು. ಮೈಡೊಸ್ ಎಂಬಲ್ಲಿದ್ದ ತುರ್ಕರ ಗುಂಡು ಮದ್ದುಗಳನ್ನು ಇಡುವ ಸ್ಥಳಕ್ಕೆ ಫ್ರೆಂಚ ವಾಯುನಾವೆಗಳು ಗುಂಡು ಬಿಸಾಡಿರುವವು.

ರುಶ್ಯನರ "ಬ್ಲೆಕ್ ಸಿ" ಹಡಗು ಪಡೆಯು ಬೊಸ್ಪರಸಿನಲ್ಲಿರುವ ತುರ್ಕರ ಕೋಟೆಗಳಿಗೂ, ಬತ್ತೇರಿಗಳಿಗೂ ಗುಂಡು ಹಾರಿಸಿರುವದು. ಕೋಟೆಗಳಲ್ಲಿ ದೊಡ್ಡ ನಾಶಗಳಾಗಿರುವವು. ಜಲಸಂಧಿನಲ್ಲಿದ್ದ ತುರ್ಕರ ಯುದ್ಧನಾವೆಗಳಿಗೆ ರುಶ್ಯನರ ನಾವೆಗಳು ಗುಂಡು ಹಾರಿಸಿದ್ದರಿಂದ ಅವುಗಳು ಹಿಮ್ಮೆಟ್ಟಿರುವವು. ಶತ್ರುಗಳ ಟೋರ್ಪೆಡೋ ಯುದ್ಧ ದೋಣಿಗಳು ಮುಂದರಿದವು. ಆದರೆ ರುಶ್ಯನರ ಯುದ್ಧ ಹಡಗಗಳು ತಕ್ಷಣ ಅವನ್ನು ಓಡಿಸಿದವು.

ವೈಪ್ರೆಸಿನ ಉತ್ತರದಲ್ಲಿ ಮಿತ್ರರು ಜಯಪ್ರದವಾಗಿ ಶತ್ರುಗಳನ್ನು ಓಡಿಸಿ ಅವರಲ್ಲಿ ವಿಶೇಷ ನಷ್ಟಪಡಿಸಿರುವರು. ಜರ್ಮನರು ಪುನಃ ವಿಷಕರವಾದ ಗ್ಯಾಸನ್ನು ಬಿಟ್ಟರು. ಆದರೆ ಮಿತ್ರ ಸೇನಿಕರು ಆ ವಿಷಕರವಾದ ಗ್ಯಾಸು ತಗಲದ ಹಾಗೆ ಯಂತ್ರಗಳನ್ನು ಉಪಯೋಗಿಸಿದ್ದರಿಂದ ಅದರಿಂದ ಬಾಧಕವಾಗಲಿಲ್ಲ. ಫೆ ಎಂಬಲ್ಲಿ ಕಾಲಾಳು ಸೇನೆಯು ಕಠಿಣ ಕಾಳಗ ನಡೆದಿರುವದು ಮ್ಯೂಸಿನ ಲೆಸ್ ಎಪ್ಪಾಗೆಸ್ ಮತ್ತು ಸೈಂಟ್ ರಿಮಿಯಲ್ಲಿ ಬಲವಾಗಿ ಮೇಲ್ಬಾಯಿದ ಜರ್ಮನರು ಹಿಮ್ಮೆಟ್ಟಿರುವರು. ಲೆಸ್ ಪ್ಪಾಗೆಸೆಯು ಫ್ರೆಂಚರ ಸ್ವಾಧೀನವಿದೆ. ಇಲ್ಲಿಯ ತಗ್ಗು ಸ್ಥಳಗಳು ಜರ್ಮನ ಸೇನಿಕರ ಹೆಣಗಳಿಂದ ತುಂಬಿಹೋಗಿವೆ.

ಡಿಕ್ಸ್ ಮ್ಯೂಡೆಯ ದಕ್ಷಿಣದಲ್ಲಿ ಮೂರಾವರ್ತಿ ಮೇಲ್ಬಾಯಿದ ಜರ್ಮನರು ಹಿಮ್ಮೆಟ್ಟಿರುವರು. ಇಲ್ಲಿಯೂ ಜರ್ಮನರು ವಿಷಕರವಾದ ಗ್ಯಾಸನ್ನು ಪ್ರಯೋಗಿಸಿದರು. ಇಲ್ಲಿ ಫ್ರೆಂಚರು ಬೆಲ್ಜಿಯನರಿಗೆ ಸಹಾಯವಾಗಿದ್ದುದರಿಂದ ಬೆಲ್ಜಿಯನರು ಜರ್ಮನರನ್ನು ಓಡಿಸಿ ಲಿಜರ್ ಎಂಬ ಸ್ಥಳವನ್ನು ಪುನಃ ಪಡೆಕೊಂಡರು ಇಲ್ಲಿ ನಡೆದ ಕದನಗಳಲ್ಲಿ ಕೆನಡಾ ದೇಶದಿಂದ ಬಂದ ಸೇನಿಕರು ವಿಶೇಷ ಸಾಹಸ ಶಕ್ತಿಗಳನ್ನು ತೋರಿಸಿ ಹೊಗಳಿಕೆಗೆ ಪಾತ್ರರಾಗಿರುವರು.

ತಾ. ೨೯ನೇ ಏಪ್ರೀಲ್.

ಗಲಿಪೋಲಿಯಲ್ಲಿ ಮಿತ್ರರ ಸೇನೆಯು ಇಳಿದ ಸ್ಥಳಗಳು ಯುದ್ಧ ಮಾಡಲು ಕಷ್ಟಕರವಾದ ಸ್ಥಳಗಳಾಗಿದ್ದರೂ ಒಂದು ದಿವಸ ಕಠಿಣ ಕಾಳಗ ಮಾಡಿದರು. ಶತ್ರುಗಳ ೫೦೦ ಸೇನಿಕರನ್ನು ಫ್ರೆಂಚರ ಸೆರೆಹಿಡಿದರು ಡರ್ಡನೆಲ್ಸಿನ ಎರಡು ಕಡೆಗಳಲ್ಲಿಯೂ ಸೇನೆಗಳು ಇಳಿದಿರುವವೆಂತ ಕೈರೋ ಪಟ್ಟಣದಿಂದ ವಾರ್ತೆ ಬಂದದೆ

ಬ್ರಿಟಿಷರು ಆಫ್ರಿಕದಲ್ಲಿ ಜರ್ಮನರಿಗೆ ಸೇರಿದ ಕೆಮರೂನಿನ ದಾರಿಯನ್ನು ಅಡ್ಡ ಕಟ್ಟಿರುವರೆಂತ ಲಂಡನ್ ಗಜೆಟಿನಲ್ಲಿ ಪ್ರಕಟವಾಗಿದೆ.

ವೈಪ್ರೆಸಿನ ಉತ್ತರದಲ್ಲಿ ನಡೆದ ಕದನದಲ್ಲಿ ಜರ್ಮನರಲ್ಲಿ ವಿಶೇಷ ನಷ್ಟವಾಗಿರುವದು. ಒಂದೇ ಕಡೆಯಲ್ಲಿ ಜರ್ಮನರ ೬೦೦ ಹೆಣಗಳು ಬಿದ್ದಿದ್ದವು.

ನೇಪಾಲ ಪ್ರಧಾನ ಮಂತ್ರಿಯವರು ಬ್ರಿಟಿಷ ಸೇನೆಗೆ ೩೩ ಮೆಕ್ಸಿಮ್ ಗನ್ ಎಂಬ ಫಿರಂಗಿಗಳನ್ನು ದಾನಮಾಡಿರುವರು ಜೋರ್ಜ ಸಾರ್ವಭೌಮರವರು ತಾ. ೨೭ರಲ್ಲು ಈ ಫಿರಂಗಿಗಳನ್ನು ನೋಡಿಕೊಂಡು ದಾತರಿಗೆ ಕೃತಜ್ಞತಾ ಪೂರ್ವಕವಾದ ತಂತಿಯನ್ನು ಕಳುಹಿಸಿಕೊಟ್ಟರು.

ಕಾರ್ಪತೇನಿಯದಲ್ಲಿ ರುಶ್ಯನರು ಆಸ್ಟ್ರೀಯನರನ್ನು ಲುಜರ್ ಮೊದಲಾದ ಸ್ಥಳಗಳಲ್ಲಿ ಓಡಿಸಿರುವರು. ಸ್ಟ್ರೀಜ ಪ್ರಾಂತ್ಯದಲ್ಲಿ ಕಠಿಣ ಕಾಳಗವು ನಡೆಯುತ್ತಿದೆ. ಆಸ್ಟ್ರೀಯನರ ಒಂದು ಸೇನಾಂಗವು ಶರಣಾಗತವಾಗಿರುವದು.

...ಕ್, ಪಾರಿಸ್, ಬರ್ಲಿನ, ವಿಯೆನ್ನ ಪಟ್ಟಣಗಳಲ್ಲಿದ್ದ ಇಟಲಿ ರಾಯಭಾರಿಗಳು ತಮ್ಮ ಸರಕಾರದೊಂದಿಗೆ ಆಲೋಚನೆ ನಡಿಸುವರೆ ರೋಮಿಗೆ ಕರೆಯಲ್ಪಟ್ಟಿರುತ್ತಾರೆ ಎಂತ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಝೂರರವರು ಒಡೇಸಕ್ಕೆ ಹಿಂತಿರುಗಿರುವರು.

ತಾ. ೩೦ನೇ ಏಪ್ರೀಲ್.

ಅಡ್ರಿಯಾಟಿಕಿನಲ್ಲಿ ಫ್ರೆಂಚರ ಒಂದು ಕ್ರೂಜರ್ ನಾವೆಯು ಮುಳುಗಿಸಲ್ಪಟ್ಟಿರುವದು.

ಡರ್ಡನೆಲ್ಸಿನಲ್ಲಿ ಇಳಿದ ಮಿತ್ರಸೇನೆಯನ್ನು ಶತ್ರುಸೇನೆಗಳು ಎಡೆಬಿಡದೆ ಎದುರಿಸಿದರೂ ಮಿತ್ರಸೇನಿಕರು ಶತ್ರುಗಳನ್ನು ಹಿಂದಟ್ಟಿ ಮುಂದರಿಯುತ್ತಿದ್ದಾರೆ.

ನ್ಯೂವೆಚೆಪೆಲ್ಲಿಯಲ್ಲಿ ಆದ ಕದನದಲ್ಲಿ ಪ್ರತಾಪಗಳನ್ನು ತೋರಿಸಿದ ಇಬ್ಬರ ಭಾರತೀಯರಿಗೆ ವಿಕ್ಟೋರಿಯ ಕ್ರೊಸ್ ಎಂಬ ಬಿರುದು ಕೊಡೋಣಾಗಿರುವದು.

ಪೋಲಿನ ನಿಮೆನಿನಲ್ಲಿ ಮತ್ತು ಮಾಲ್ಟ ರೈಲ್ವೆಯ ಪಶ್ಚಿಮದಲ್ಲಿ ರಶ್ಯನರಿಗೂ ಶತ್ರುಗಳಿಗೂ ಕಠಿಣ ಕಾಳಗ ನಡೆಯುತ್ತಿದೆ.

ತಾ ೧ನೇ ಮೇ.

ಡರ್ಡನೆಲ್ಸಿನಲ್ಲಿ ಮಿತ್ರರ ನಾವೆಗಳು ಚಾನಕ್ ಕೋಟೆಗಳ ಎದುರಿರುವ ಮೈಸೆ ಎಂಬಲ್ಲಿಗೆ ತಲಪಿರುವದು ಎಂತ ಮಿಥಲೇನಿನ ಬಾತ್ಮೀದಾರರು ಡೈಲಿಮೈಲ್ ಎಂಬ ಪತ್ರಿಕೆಗೆ ಬರದಿರುವರು. ಮಿತ್ರರ ಸೇನೆಗಳು ಮೆಡಿಟೋಸ್ ಮತ್ತು ಗಲಿಪೋಲಿ ಪಟ್ಟಣಗಳನ್ನು ಸ್ವಾಧೀನಮಾಡಿಕೊಂಡಿರುವವು. ಸೆರೆ ಹಿಡಿದ ತುರ್ಕಿ ಮತ್ತು ಜರ್ಮನ ಸೇನಿಕರನ್ನು ಲೆಮ್ನೊಸ್ ಮತ್ತು ಟೆನಡೋಸಿಗೆ ಕಳುಹಿಸಿಕೊಟ್ಟಿರುತ್ತಾರೆ.

ಕಳೆದ ರಾತ್ರಿ ಮಿತ್ರರ ಯುದ್ಧನಾವೆಗಳು ಜಲಸಂಧಿನೊಳಗೆ ಇದ್ದುಕೊಂಡು ಬೆಳಗ್ಗೆ ಭಯಂಕರವಾಗಿ ಗುಂಡುಗಳನ್ನು ಹಾರಿಸ ಪ್ರಾರಂಭಿಸಿಯವೆಂತ ಅಥೆನ್ಸಿನಲ್ಲಿ ಪ್ರಕಟವಾಗಿದೆ.

ಆಸ್ಟ್ರೇಲಿಯದ ಇನ್ನೊಂದು ಸೇನೆಯು ಬ್ರಿಟಿಷರ ಸಹಾಯವಾಗಿ ಗಲಿಪೋಲಿಯಲ್ಲಿ ಇಳಿದಿರುವದೆಂಬ ವಾರ್ತೆ ಬಂದಿರುವದು. ಆಸ್ಟ್ರೇಲಿಯದ ಸೇನೆಯು ಡರ್ಡನೆಲ್ಸಿನಲ್ಲಿ ತೋರಿಸಿದ ಪರಾಕ್ರಮವನ್ನು ಸ್ತುತಿಸಿ ಬ್ರಿಟಿಷ ಸರಕಾರದವರು ಕಳುಹಿಸಿದ ವಂದನಾ ಪತ್ರದಿಂದ ಆಸ್ಟ್ರೇಲಿಯದವರು ಬಹಳವಾಗಿ ಸಂತೋಷಗೊಂಡು ಸೇನೆಗೆ ಪುನಃ ಜನರು ಆಸಕ್ತಿಯಿಂದ ಕೊಡುತ್ತಿದ್ದಾರೆ. ಏಜಿಯನ್‌ನಲ್ಲಿರುವ ಸ.ವ್ಲಬೇಯಲ್ಲಿ ಮಿತ್ರರು ತುರ್ಕರ ಒಂದು ದೊಡ್ಡ ಸೇನಾಂಗವನ್ನು ಹಿಡಿದಿರುವರೆಂತ ಅಥೆನ್ಸಿನಲ್ಲಿ ಪ್ರಕಟವಾಗಿದೆ ಮಿತ್ರರು ೧೦೦೦೦ ಮಂದಿಯನ್ನು ಸೆರೆಹಿಡಿದಿರುವರು ಇವರಲ್ಲಿ ಜರ್ಮನ ಆಫೀಸರರು ಸೇರಿರುತ್ತಾರೆ.

ಮಂಗಳವಾರ ಸಾಯಂಕಾಲ ಮೂರು ಯುದ್ಧನಾವೆಗಳು ಸ್ಮಿರ್ನ ಕೊಲ್ಲಿಗೆ ಪ್ರವೇಶಿಸಿ ಗುಂಡು ಹಾರಿಸ ಪ್ರಾರಂಭಿಸಿಯದೆ. ಎನೋಸಿನಲ್ಲಿ ಇಳಿದ ಮಿತ್ರ ಸೇನೆಯು ೨೦ ಮೈಲು ಮುಂದರಿದು ಹಲವು ಗ್ರಾಮಗಳನ್ನು ಸ್ವಾಧೀನ ಮಾಡಿಕೊಂಡಿರುವದು ಟ್ರೊಯಿ ಮೈದಾನಿನಲ್ಲಿ ೮೦೦೦ ತುರ್ಕರು ಸೆರೆಬಿದ್ದಿರುವರೆಂತ ಅಥೆನ್ಸಿನಿಂದ ವಾರ್ತೆ ಬಂದದೆ.

ಬ್ರಿಟಿಷ ಸರಕಾರದವರಿಂದ ಬಂದ ವಾರ್ತೆಯು ಈ ರೀತಿಯಾಗಿರುವದು ತಾ ೨೫ರಲ್ಲು ಬ್ರಿಟಿಷ ಮತ್ತು ಆಸ್ಟ್ರೇಲಿಯ ಸೇನೆಯು ಗಲಿಪೋಲಿ ಅರ್ಧ ದ್ವೀಪದಲ್ಲಿಯೂ ಫ್ರೆಂಚರ ಸೇನೆಯು ಆಸ್ಯಖಂಡದ ಪಾರ್ಶ್ವದಲ್ಲಿಯೂ ಬಲಕಾಯಿಸಿಕೊಂಡವು. ಬ್ರಿಟಿಷರು ಶತ್ರುಗಳ ಬಲವಾದ ನೆಲೆಯಾಗಿರುವ ಸೆಡ್ಡಲ್‌ಬಾರ್ ಎಂಬಲ್ಲಿಗೆ ತಾ ೨೬ರಲ್ಲು ಪ್ರಚಂಡವಾಗಿ ಗುಂಡು ಹಾರಿಸಿ ಆ ಸ್ಥಳವನ್ನು ಸ್ವಾಧೀನಮಾಡಿಕೊಂಡು ಸೇನೆಯನ್ನು ಇಳಿಸಿದರು. ತನ್ಮಧ್ಯೆ ಆಸ್ಟ್ರೇಲಿಯ ಮತ್ತು ನ್ಯೂಜಲೇಂಡಿನ ಸೇನೆಗಳು ತಾ. ೨೭ರ ಮಧ್ಯಾಹ್ನದವರೆಗೆ ಮೇಲ್ಬಾಯಿದು ಬಂದ ಶತ್ರು ಸೇನೆಗಳನ್ನು ಹಿಂದಕಟ್ಟಿದರು. ಫ್ರೆಂಚ ಸೇನೆಯೂ ಕುಮಕ್ಕಲದಲ್ಲಿ ಹಲ್ಲಾ ಮಾಡಿ ತಮ್ಮ ಎಲ್ಲಾ ನೆಲೆಗಳನ್ನು ಕಾಪಾಡಿಕೊಂಡರು. ತಾ. ೨೮-೨೯ರಲ್ಲು ಮಿತ್ರರು ವಿಶ್ರಾಂತಿ ತಕ್ಕೊಂಡು ಸೇನೆಗಳನ್ನು ಇಳಿಗಿಳಿಸಿದರು. ಸೇನೆಯಲ್ಲಿ ಪ್ರಾಣಾಪಾಯ ಹೊಂದಿದವರ ಸಂಖ್ಯೆಯು ಹೆಚ್ಚಾಗಿರಬಹುದು. ತುರ್ಕರ ಯುದ್ಧನಾವೆಗಳು ಕದನಕ್ಕೆ ನಿಲ್ಲಲು ಹಲವು ಸಾರಿ ಪ್ರಯತ್ನಿಸಿದವು. "ಕ್ವೀನ್ ಎಲಿಜಬೇತ್" ಎಂಬ ಯುದ್ಧನಾವೆಯು ಮುಂದರಿದ ಕೂಡಲೇ ಅವು ಓಡಿಹೋದವು. ತಾ. ೨೯ರಲ್ಲು ಹಡಗು ಪಡೆಯು ಬತ್ತೇರಿಗಳ ಮೇಲೆ ಗುಂಡು ಹಾರಿಸ ಪ್ರಾರಂಭಿಸಿಯದೆ.

ಟ್ರಿಯಂಫ್ ನಾವೆಯು ಮೈಡೊಸ್ ಎಂಬಲ್ಲಿಗೆ ಗುಂಡಿನ ಮಳೆಯನ್ನು ಸುರಿದ್ದರಿಂದ ಆ ಪಟ್ಟಣವು ಉರಿಯುತ್ತಿದೆ.

ರುಶ್ಯನರ ಹಡಗುಪಡೆಯು ಬೊಸ್ಪರಸಿನ ಕೋಟೆಗಳಿಗೆ ೬ ಮೈಲು ದೂರದಿಂದ ಗುಂಡು ಹಾರಿಸುತ್ತಿವೆ. ಈ ಕೋಟೆಗಳು ನಾಶವಾದರೆ ೧೪ ಮೈಲು ದೂರದಿಂದ ಕನ್‌ಸ್ಟಂಟಿನೋಪಲಿಗೆ ಗುಂಡು ಹಾರಿಸಲು ಸಾಧ್ಯವಾಗಬಹುದೆಂತ ಡೈಲಿ ಮೈಲಿನ ಬಾತ್ಮಿದಾರರು ಬರೆಯುವರು.

ತಾ. ೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಬ್ರಿಟಿಷ ಬಂದರಗಳಿಗೆ ೧೪೪೧ ಹಡಗಗಳು ಹೋಗಿಬಂದಿರುವವೆಂದೂ ನಾಲ್ಕು ಮೀನು ಹಿಡಿಯುವ ದೋಣಿಗಳನ್ನು ಮಾತ್ರ ಜರ್ಮನರ ಜಲಂತರ್ಗಾಮಿ ನಾವೆಗಳು ಮುಳುಗಿಸಿರುವವೆಂದೂ ಬ್ರಿಟಿಷ ಸರಕಾರದವರು ಪ್ರಕಟಿಸಿರುತ್ತಾರೆ.

ಜರ್ಮನರ ತಪ್ಪಿಸಿಕೊಂಡ ಮಕೆದೋನಿಯ ಎಂಬ ಹಡಗವನ್ನು ಬ್ರಿಟಿಷ ಕ್ರೂಜರ್ ನಾವೆಯು ಹಿಡಿದಿರುವದು ಎಂತ ಲಂಡನ್ ವರ್ತಮಾನ ಸಂಗ್ರಹ ಆಫೀಸಿನವರು ಪ್ರಕಟಿಸಿರುತ್ತಾರೆ.

ವೈಸರಿನ ಬಲಗಡೆಯು ಉತ್ತರ ಪಾರ್ಶ್ವದಲ್ಲಿ ಬೆಲ್ಜಿಯನರು ಜಯಪ್ರದವಾಗಿ ಜರ್ಮನರನ್ನು ಅವರ ಎರಡು ಮೆಶಿನ್ ಗನ್ ಎಂಬ ಫಿರಂಗಿಗಳ ಸಹಿತ ಸೆರೆಹಿಡಿದಿರುವರು ಯುದ್ಧರಂಗದಲ್ಲಿ ಬಿದ್ದ ಸೇನಿಕರನ್ನು ಪರಾಂಬರಿಸುವ ಎಂಬುಲೆನ್ಸ್ ಮತ್ತು ಆಸ್ಪತ್ರಿ ವೈದ್ಯರಿರುವ ಎಪ್ರೇನೆ ಎಂಬ ಸ್ಥಳಕ್ಕೆ ಜರ್ಮನರು ಗುಂಡು ಹಾರಿಸುತ್ತಾರೆ ಒಂದು ಜೆಫಲಿನ್ ನಾವೆಯು ಈಚೆಗೆ ಡನ್‌ಕರ್ಕಿನ ಮೇಲೆ ಗುಂಡು ಹಾಕಿರುವದು. ಮಿತ್ರರ ತೋಪು ಸೇನಿಕರು ಅದಕ್ಕೆ ಮರುಗುಂಡು ಹೊಡೆದು ಕೆಡವಿ ಬಿಟ್ಟಿರುವರು.

ಬ್ರಿಟಿಷ ಪ್ರಜಾ ಜನರು ತಮ್ಮ ಸೇನೆಗೆ ಬೇಕಾದ ಜರ್ಮನರ ವಿಷಕರವಾದ ವಾಯುವನ್ನು ತಡೆಮಾಡುವ ಯಂತ್ರವನ್ನು ಒಂದೇ ದಿವಸದಲ್ಲಿ ಒದಗಿಸಿಕೊಟ್ಟಿರುತ್ತಾರೆ.

ಜರ್ಮನರ ವಾಯುನಾವೆಗಳು ಇಸ್ಪವಿಚ್ ಮತ್ತು ವಿಟನ್ ಎಂಬಲ್ಲಿಗೆ ಬೊಂಬುಗಳನ್ನು ಬಿಸಾಡಿರುವವು. ಇದರಿಂದ ೩ ಮನೆಗಳು ಸುಟ್ಟುಹೋದವು. ಆದರೆ ಪ್ರಾಣಾಪಾಯ ಎಷ್ಟು ಆಗಿರುವವೆಂತ ಗೊತ್ತಾಗಲಿಲ್ಲ. ಬರಿ ಸೈಂಟ್ ಉಡ್ ಮಂಡ್ ಎಂಬಲ್ಲಿ ವಾಯುನಾವೆಗಳಿಂದ ಬಿದ್ದ ಬೊಂಬಿನಿಂದ ೩ ಮನೆಗಳು ಸುಟ್ಟುಹೋಗಿರುವವು.

ಜರ್ಮನಿಯ ಕೋವಿಗಳನ್ನು ತಯ್ಯಾರಿಸುವ ಕಾರ್ಖಾನೆ ಇರುವ ಎಬೆನ್‌ಡ್ರೊಫ್ ಪ್ರಿಕವ್‌ಬರ್ಗಗೆ ಫ್ರೆಂಚ ವಾಯುನಾವಿಕರು ಬೊಂಬು ಹಾಕಿರುವರು. ಲೊರ್‍ಮೆನಿನಲ್ಲಿ ಫ್ರೆಂಚರು ಮುಂದರಿದಿರುತ್ತಾರೆ

ದಕ್ಷಿಣ ಪಶ್ಚಿಮ ಆಫ್ರೀಕದಲ್ಲಿ ಯೂನಿಯನ್ ಸೇನೆಯು ಡೆಬೆರೊಸ್ ಎಂಬ ಜರ್ಮನರ ಸ್ಥಳವನ್ನು ಸ್ವಾಧೀನ ಮಾಡಿಕೊಂಡಿರುವದು

ನಿಮೆನ್, ಉಜಕ್, ಪ್ರಾಸನ್ಯೆಜ್ ಉತ್ತರದಲ್ಲಿ ಆಸ್ಟ್ರಿಯನರನ್ನು ರುಶ್ಯನರು ಹಿಂದಟ್ಟಿರುವರು ಎಂಬ ವಾರ್ತೆ ಬಂದದೆ.

ತಾ. ೩ನೇ ಮೇ.

ಡನ್‌ಕರ್ಕಿನ ಮೇಲೆ ಪುನಃ ಹೆಚ್ಚಿಗೆ ೧೦ ಬೊಂಬುಗಳು ಬಿದ್ದಿರುವವು. ಕೆಲವು ಪ್ರಾಣಾಪಾಯಗಳು ಸಂಭವಿಸಿಯವೆ.

'ನೋರ್ತಸಿ'ಯಲ್ಲಿ ಬ್ರಿಟಿಷರ "ರಿಕ್ರೂಟ್" ಎಂಬ ಡಿಸ್ಟ್ರೋಯರ್ ನಾವೆಯು ಜರ್ಮನರ ಜಲಂತರ್ಗಾಮಿ ನಾವೆಯಿಂದ ಮುಳುಗಿಸಲ್ಪಟ್ಟಿರುವದು. ಬ್ರಿಟಿಷರು ಜರ್ಮನರ ಎರಡು ಟೋರ್ಪೆಡೋ ನಾವೆಗಳನ್ನು ಹಿಂದಟ್ಟಿಕೊಂಡು ಹೋಗಿ ಮುಳುಗಿಸಿರುತ್ತಾರೆ. ಜರ್ಮನರ ಈ ಟೋರ್ಪೆಡೋ ದೋಣಿಗಳು "ಕೊಲೊಂಬಿಯ ಎಂಬ ನಾವೆಯನ್ನು ಮುಳುಗಿಸಿತ್ತು. ಕೂಡಲೇ ಬ್ರಿಟಿಷರ ಮೂರು ಡಿಸ್ಟ್ರೋಯರ್ ನಾವೆಗಳು ಅವನ್ನು ಹಿಂದಟ್ಟಿ ಮುಳುಗಿಸಿದವು. ಬ್ರಿಟಿಷ ನಾವೆಗಳಲ್ಲಿ ಪ್ರಾಣಾಪಾಯವಾಗಲಿಲ್ಲ. ೨ ಜರ್ಮನ ಆಫೀಸರರೂ ೪೪ ಜರ್ಮನ ಸೇನಿಕರೂ ಬ್ರಿಟಿಷರ ಸೆರೆಬಿದ್ದರು. ಬ್ರಿಟಿಷರ ಮುಳುಗಿಸಲ್ಪಟ್ಟ "ರಿಕ್ರೂಟ್" ಡಿಸ್ಟ್ರೋಯರ್ ನಾವೆಯ ೪ ಆಫೀಸರರೂ ೨೧ ಸೇನಿಕರೂ ರಕ್ಷಿಸಲ್ಪಟ್ಟರು. "ಮೊಬೈಲ್" ಎಂಬ ನಾವೆಯು ಹೆಬ್ರಿಡಿಸಿನಲ್ಲಿ ಜರ್ಮನರ ಜಲಂತರ್ಗಾಮಿಯಿಂದ ಮುಳುಗಿಸಲ್ಪಟ್ಟದೆ. ೨೩ ನಾವಿಕರು ರಕ್ಷಿಸಲ್ಪಟ್ಟರು. ೫೦೦೦ ಟನ್ ಧರಾವತಿಯ "ಎಡೆಲ್" ಎಂಬ ಇನ್ನೊಂದು ನಾವೆಯು ಮುಳುಗಿಸಲ್ಪಟ್ಟಿತು. ನಾವಿಕರು ಸಿಸಿಲ್ಲೀಸದಲ್ಲಿ ಇಳಿದರು. ಲಿಲಿಡೇಲ್ ಎಂಬ ಟ್ರಾವಲರ್ ನಾವೆಯನ್ನು ಜಲಂತರ್ಗಾಮಿಯು

ಮುಳುಗಿಸಿರುವದು. ರುಶ್ಯನರ "ಸವರೋಸ" ಎಂಬ ನಾವೆಯನ್ನು ಜರ್ಮನರ ಜಲಂತರ್ಗಾಮಿಯು ಬ್ಲಾಸ್ಕೆಟ್ ದ್ವೀಪಗಳ ಸಮೀಪ ಮುಳುಗಿಸಿರುವದು.

'ನೊರ್ಫಸಿ'ಯಲ್ಲಿ ಹೋಗುತ್ತಿದ್ದ ಅಮೇರಿಕದ ಒಂದು ಹಡಗಕ್ಕೆ ಜರ್ಮನರ ವಾಯುನಾವೆಗಳು ಎರಡು ಬೊಂಬುಗಳನ್ನು ಬಿಸಾಡಿದವು ಆದರೆ ಅದಕ್ಕೆ ಹಾನಿಯಾಗಲಿಲ್ಲ

ವೈಸರಿನ ರಣರಂಗದಲ್ಲೆಲ್ಲಾ ಮಿತ್ರರು ಮುಂದರಿಯುತ್ತಲಿದ್ದಾರೆ. ಮಿತ್ರರು ಎರಡು ಲೈನ್ ಕಂದಕಗಳನ್ನು ಹಿಡಿದಿರುವರು

ಅರ್ಗೋನ್ನೆಯಲ್ಲಿ ಎರಡಾವರ್ತಿ ಹಲ್ಲಾ ಮಾಡಿದ ಜರ್ಮನರು ಹಿಮ್ಮೆಟ್ಟಿರುವರು ಫ್ರೆಂಚರು ಬ್ಯೊಕ್ಲೆಪ್ರಿಟ್ರ್ ಎಂಬಲ್ಲಿ ಕೆಲವು ಕಂದಕಗಳನ್ನು ಸ್ವಾಧೀನಮಾಡಿಕೊಂಡು ೧೩೦ ಮಂದಿಯನ್ನು ಶೆರೆ ಹಿಡಿದಿರುವರು

ವೈಪ್ರೆಸಿನಲ್ಲಿ ಮಿತ್ರರ ಬಲಗಡೆಯಲ್ಲಿ ಮೇಲ್ಬಾಯಿದ ಜರ್ಮನರು ಹಿಮ್ಮೆಟ್ಟಿರುವರು ಬ್ರಿಟಿಷರ ರಣರಂಗದಲ್ಲಿ ಹೊಸದೇನೂ ಸಂಭವಿಸಲಿಲ್ಲ

ಬೆಲ್ಜಿಯನ್ ಕರಾವಳಿಯಲ್ಲಿ ಜರ್ಮನ ಯುದ್ಧನಾವೆಗಳು ಕಾಣಿಸಿಕೊಂಡಿರುವವು ೧೯ ದೊಡ್ಡ ಗುಂಡುಗಳು ಡನ್‌ಕರ್ಕಿನ ಮೇಲೆ ಬಿದ್ದಿರುತ್ತವೆ ೨೦ ಮಂದಿ ಹತರಾದರು. ೪೫ ಮಂದಿ ಘಾಯಪಡೆದಿರುವರು ಕೆಲವು ಮನೆಗಳು ಕೆಡವಿಸಲ್ಪಟ್ಟಿರುವವು ಎಂತ ಪ್ಯಾರಿಸಿನಿಂದ ವಾರ್ತೆ ಬಂದದೆ

ಡನ್‌ಕರ್ಕಿನ ಮೇಲೆ ನೆಲದವರೀಲಿ ಇಟ್ಟಿರುವ ಫಿರಂಗಿಗಳಿಂದ ಗುಂಡುಗಳು ಹಾರಿಸೋಣಾಗಿರುವವು ಬೆಲ್ಜಿಯನ್ ಕರಾವಳಿಯಲ್ಲಿ ಜರ್ಮನ ಯುದ್ಧನಾವೆಗಳ ಕಾಣಿಸಿಕೊಂಡಿರುವವೆಂಬ ವಾರ್ತೆಯು ತಪ್ಪು ಅಭಿಪ್ರಾಯದಿಂದ ಹುಟ್ಟಿದ್ದಾಗಿದೆ ಎಂತ ಲಂಡನ್ ವರ್ತಮಾನಸಂಗ್ರಹ ಆಫೀಸಿನವರು ಪ್ರಕಟಿಸಿರುತ್ತಾರೆ

ಡನ್‌ಕರ್ಕಿನ ಮೇಲೆ ಗುಂಡುಗಳನ್ನು ಸರಿದ ಫಿರಂಗಿಗಳ ನೆಲೆಯನ್ನು ವಾಯುನಾವೆಗಳು ಕಂಡುಕೊಂಡಿರುವವು ಆ ನೆಲೆಯ ಮೇಲೆ ಸಾಯಂಕಾಲ ೧೨ ಸಣ್ಣ ಮತ್ತು ೨ ದೊಡ್ಡ ಬೊಂಬುಗಳು ಎಸೆಯಲ್ಪಟ್ಟಿದೆ ಎಂತ ಬ್ರಿಟಿಷ ಸರಕಾರದವರು ಪ್ರಕಟಿಸಿರುತ್ತಾರೆ.

ಡಿಕ್ಸ್‌ಮ್ಯುಡಿನ ಸಮೀಪ ಜರ್ಮನರ ಕ್ರುಪ್ಸ್ ಕಾರ್ಖಾನೆಯ ಇಂಜನಿಯರರು ೨ ತಿಂಗಳಿಂದ ದೊಡ್ಡ ನೌಕಾವಳಿ ಫಿರಂಗಿಗಳನ್ನು ಕೂಡಿಸುವ ಕೆಲಸದಲ್ಲಿ ನಿರತರಾಗಿದ್ದರು ಈ ಫಿರಂಗಿಗಳಿಂದ ಹೊಡೆದ ಗುಂಡು ೨೧ ಮೈಲು ದೂರಹೋಗುತ್ತವೆ. ಈ ಫಿರಂಗಿಗಳೇ ಡನ್‌ಕರ್ಕಿಗೆ ಗುಂಡು ಹಾರಿಸಿದ್ದಾಗಿರಬೇಕು ಎಂತ ಮತ್ತೊಂದು ವಾರ್ತೆ ಹೇಳುತ್ತದೆ

ಶತ್ರುಗಳ ವಾಯುನಾವೆಗಳು ನಿನ್ನೆಯ ದಿನ ಶಪೊಕಿನಲ್ಲಿ ಕಾಣಿಸಿಕೊಂಡವು ಆದರೆ ಬ್ರಿಟಿಷರ ವಾಯುನಾವೆಗಳ ಅವನ್ನು ಅಟ್ಟಿದವು ಎಂಬ ವಾರ್ತೆ ಬಂದಿರುವದು

ಫ್ರೆಂಚರು ನಿನ್ನೆಯ ದಿನ ಮೆಟ್ಸ್ ಕೋಟೆಯ ದಕ್ಷಿಣಕಡೆಯಲ್ಲಿ ಗುಂಡುಹಾರಿಸ ತೊಡಗಿದ್ದಾರೆ

ದಕ್ಷಿಣ ಆಫ್ರೀಕದ ಯೂನ್ಯನ್ ಸೇನೆಗೆ ವಿಂಡ್ಹಂಕ್ ಎಂಬಲ್ಲಿ ಒಂದು ದೊಡ್ಡ ಜಯವಾಗಿಯದೆ.

ನಿಮೆನ್ನಿನ ಪಶ್ಚಿಮದಲ್ಲಿ ರುಶ್ಯನರು ಮುಂದರಿದು ಶತ್ರುಕಾವಲಿ ಸೇನೆಯನ್ನು ಹಿಂದಟ್ಟಿರುತ್ತಾರೆ ಒಸ್‌ವಿಸೆಸ್ ಕೋಟೆಯ ಸಮೀಪ ಹಲ್ಲಾ ಮಾಡಿದ ಶತ್ರುಗಳು ಹಿಮ್ಮೆಟ್ಟಿರುವರು. ಕರ್‌ಪಥೇನಿಯದಲ್ಲಿಯೂ ಕಠಿಣ ಕಾಳಗ ನಡೆಯುತ್ತಿದೆ.

ತಾ. ೪ನೇ ಮೇ.

ಅಮೇರಿಕದ "ಗಲ್ಫ್‌ಲೈಟ್" ಎಂಬ ನಾವೆಯನ್ನು ಜರ್ಮನರ ಜಲಂತರ್ಗಾಮಿಯು ಮುಳುಗಿಸಿರುವದು ಈ ನಾವೆಯ ಕೆಪ್ಟನನೂ ಇಬ್ಬರು ನಾವಿಕರೂ ಹತರಾಗಿರುವರು. ಇದರಿಂದ ಅಮೇರಿಕದಲ್ಲಿ ಜರ್ಮನರ ಮೇಲೆ ಜಿಗುಪ್ಸೆ ಉಂಟಾಗಿರುತ್ತದೆ

'ನೊರ್ಥಸಿ'ಯಲ್ಲಿ ಸ್ವಿಡನಿಗೆ ಸೇರಿದ "ಎಲ್ಲಿಡ್ಯ" ಎಂಬ ನಾವೆಯನ್ನು ಜರ್ಮನರ ಜಲಂತರ್ಗಾಮಿ ನಾವೆಯು ಮುಳುಗಿಸಿರುತ್ತದೆ.

ಫ್ಲೆಮೆಂಡಿನಿಂದ ಡೋವರ್ ಕಡೆಗೆ ಬರುತ್ತಿದ್ದ ಜರ್ಮನರ ವಾಯುನಾವೆಯನ್ನು ಬ್ರಿಟಿಷರು ಹಿಂದಕ್ಕಟ್ಟಿರುವರು.

ವಿದೇಶ ವೃತ್ತಾಂತ.

ಯುದ್ಧಕ್ಕೆ ಜ್ಯೋತಿಷ್ಕರ ಸಹಾಯ.

ಜರ್ಮನ್ ದೇಶವು ಶಾಸ್ತ್ರೀಯಶೋಧನೆಗಳಲ್ಲಿ ಪ್ರಪಂಚದ ಎಲ್ಲಾ ದೇಶಗಳಿಗೂ ಮುಂದಾದುದೆಂಬ ಪ್ರಖ್ಯಾತಿಯನ್ನು ಪಡೆದಿರುವುದು ಹಾಗೆ ದೈವಕಟಾಕ್ಷದಿಂದ ಅವರಿಗೆ ಒದಗಿರುವ ಶಕ್ತಿಯು ಈಗ ಪ್ರಪಂಚವಿನಾಶಕ್ಕೆ ಹೇತುವಾದ ಯುದ್ಧದ ಸಾಧನೆಗೆ ಉಪಯೋಗಿಸಲ್ಪಡತ್ತಿರುವುದನ್ನು ನೋಡಿ "ವಿನಾಶಕಾಲೇ ವಿಪರೀತ ಬುದ್ಧಿಃ" ಎಂದ ಸಜ್ಜನರೆಲ್ಲರೂ ಆಡಿಕೊಳ್ಳುತ್ತಿರುವರು ಜರ್ಮನ್ ದೇಶದಲ್ಲಿ ಖಗೋಳಶಾಸ್ತ್ರ ಸಂಬಂಧವಾದ ಪಾಂಡಿತ್ಯವುಳ್ಳ ಜನರು ವಿಶೇಷವಾಗಿರುವರು ಅಲ್ಲಿನ ಚಕ್ರವರ್ತಿಯವರು ಪ್ರಕೃತದ ಯುದ್ಧಸಂಬಂಧವಾಗಿ ಅವರಿಂದಲೂ ಆಗಬಹುದಾದ ಸಹಾಯವನ್ನು ಪಡೆದುಕೊಳ್ಳುತ್ತಿರುವರೆಂಬ ಸುದ್ದಿಯು ಈಗ ಪ್ರಕಟವಾಗಿರುವುದು ಯುದ್ಧಾರಂಭಕ್ಕೆ ಮೊದಲ ಆ ದೇಶದ ಪ್ರಸಿದ್ಧಜ್ಯೋತಿಷ್ಕರನ್ನೆಲ್ಲಾ ಚಕ್ರವರ್ತಿಯವರು ಕೂಡಿಸಿ, ಯುದ್ಧಕ್ಕೆ ನಿಮ್ಮಿಂದ ಯಾವಯಾವ ಸಹಾಯವಾಗುವುದು ಸಾಧ್ಯವೋ ಅದನ್ನೆಲ್ಲಾ ಮಾಡಿಕೊಡಬೇಕೆಂದು ಬೆಸಸಿದರಂತೆ ಅಂದಿನಿಂದ ಅವರು ನಾನಾ ವಿಧದ ಸಹಾಯಗಳನ್ನು ಮಾಡುತ್ತಿರುವರು ಈಗಲೂ ಆ ಜ್ಯೋತಿಷ್ಯಮಂಡಲಿಯಲ್ಲಿ ಕೆಲರು ಬೆಲ್ಜಿಯಂ ದೇಶದ ಲೀಜ್ ಕೋಟೆಯಲ್ಲೂ ಎಯಿಲ್ ಷಾಪೆಲ್ಲಿ ನಗರದಲ್ಲೂ ಕೆಲಸವನ್ನು ಮಾಡುತ್ತಿರುವರಂತೆ ಬ್ರಸಲ್ಸ್ ಪಟ್ಟಣದಲ್ಲಿ ಬೆಲ್ಜಿಯಮ್ಮನವರು ಒಂದು ಜಗತ್ಪ್ರಸಿದ್ಧ ನಕ್ಷತ್ರಶಾಲೆಯನ್ನು ಸ್ಥಾಪಿಸಿದ್ದರು ಅದನ್ನು ಈಗ ಜರ್ಮನ್ ಖಗೋಳಶಾಸ್ತ್ರಜ್ಞರ ವಶಪಡಿಸಿಕೊಂಡಿರುವರು ಇಲ್ಲಿದ್ದ ಯಂತ್ರೋಪಕರಣಗಳ ಜತೆಗೆ ಜರ್ಮನಿ ದೇಶದಿಂದ ಇನ್ನು ಕೆಲವನ್ನು ತಂದು ಕೂಡಿಸಿರುವರು ಅದರಿಂದ ಈಗ ಬ್ರಸಲ್ಸಿನ ನಕ್ಷತ್ರಶಾಲೆಯು ಲೋಕೋತ್ತರವೆನಿಸಿಕೊಂಡಿರುವುದಂತೆ ಇಲ್ಲಿ ಜ್ಯೋತಿಷ್ಕರು ಈಗ ಅದ್ಭುತವಾದ ಖಗೋಳ ಪರಿಶೀಲನ ಕ್ರಮಗಳನ್ನು ನಡೆಯಿಸುತ್ತಿರುವರು ಅವರು ಮಾಡುತ್ತಿರುವ ಪರಿಶೋಧನದಿಂದ ಆಕಾಶದ ವಾಯುಮಂಡಲದಲ್ಲಿ ನಡೆಯುತ್ತಿರುವ ಅದ್ಭುತವಾದ ವೈಚಿತ್ರ್ಯಗಳನ್ನು ಕಂಡುಹಿಡಿಯುತ್ತಿರುವರಂತೆ. ಈಗ ಫ್ರಾನ್ಸ್ ದೇಶದ ಮೇಲೆ ಹಲವುಕಡೆ ವಾತಾವರಣದಲ್ಲಿ ಸಣ್ಣಸಣ್ಣ ಅಗ್ನಿಗೋಳಗಳು ಗೋಚರಿಸುತ್ತಿರುವುವಂತೆ ಅವೆಲ್ಲವೂ ಮೇಲೆ ಹೇಳಿದ ಜರ್ಮನ್ ಜ್ಯೋತಿಷ್ಕರಿಂದ ವಾಯುಮಂಡಲದ ಪರೀಕ್ಷಾರ್ಥವಾಗಿ ಪ್ರಯೋಗಿಸಲ್ಪಟ್ಟಿರಬೇಕೆಂದು ಊಹಿಸಲ್ಪಡುತ್ತಿದೆ. ಮಿತ್ರಮಂಡಲಿಯವರ ಕಡೆಯಲ್ಲಿರುವ ದೊಡ್ಡದೊಡ್ಡ ವಿದ್ವಾಂಸರೂ ಕೂಡ ಜರ್ಮನರಲ್ಲಿರುವ ವಾಯುಶಾಸ್ತ್ರ ಪರಿಜ್ಞಾನ ಪ್ರಾಬಲ್ಯವನ್ನು ಕುರಿತು ಶ್ಲಾಘಿಸುವುದಲ್ಲದೆ ಅವರುಗಳ ಆ ಪರಿಜ್ಞಾನದಿಂದ ಅವರ ಯುದ್ಧಪ್ರಯೋಗಕ್ಕೆ ಬಹಳ ಸಹಾಯವಾಗುವುದೆಂದು ಒಪ್ಪಿಕೊಳ್ಳುತ್ತಿದ್ದಾರೆ ಜರ್ಮನರ ಲೋಕೋತ್ತರವಾದ ವಿದ್ಯುತ್ತುಗಳು ಲೋಕೋದ್ಧಾರಕ್ಕೆ "ಸಹಾಯವಾಗಿರದೆ ಹೀಗೆ ಪ್ರಪಂಚದ ಪರಿಪೀಡನ ಕಾರ್ಯಕ್ಕೆ ಸಾಧಕವಾಗಿ 'ಯಶಕ್ತಿಃ ಪರೇಷಾಂ ಪರಿಪೀಡನಾಯ" ಎಂಬ ನೀತಿವಚನದಲ್ಲಿ ಕಂಡಿರುವಂತೆ ಜರ್ಮನರ ತಲೆಯ ಮೇಲೆ ದೌರ್ಜನ್ಯ ಕಿರೀಟವನ್ನು ಹೇರಿಸುವುದಕ್ಕೆ ಹೇತುವಾಗಿ ಪರಿಣಮಿಸಿದದು ವಿಷಾದಕರವಲ್ಲವೇ

ಉತ್ತರ ಹಿಂದೂಸ್ಥಾನ.

ಈ ವರ್ಷ ಜೋರ್ಜ ಸಾರ್ವಭೌಮರ ಜನನೋತ್ಸವವು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಹೆಚ್ಚಿನ ಆಡಂಬರದಿಂದ ನಡೆಯದು ಹಿಂದೂಸ್ಥಾನದಲ್ಲಿ ಆ ದಿನ ಆಫೀಸುಗಳಿಗೆ ರಜೆಯು ಇರದು ಆದರೆ ಆ ದಿನ ಬ್ರಿಟಿಷ್ ಧ್ವಜಗಳನ್ನು ಮಾತ್ರ ಹಾರಿಸಲಾಗುವದು ಎಂತ ಪ್ರಕಟವಾಗಿದೆ.

ರಾಜೇಂದ್ರಲಾಲ ಬೈಸಕ್ ಎಂಬವನು ಡಕ್ಕದ ಇಸ್ಮುಜ ಗೋವಿಂದೊ ಶ್ರೀಪೊಡ್ಡಾರ್ ಎಂಬ ಕಂಪೆನಿಯಲ್ಲಿ ಕ್ಲಾರ್ಕನಾಗಿದ್ದು ೨೨,೮೩೬ ರೂಪಾಯಿಗೆ ವಿಶ್ವಾಸಘಾತುಕ ಮಾಡಿದ್ದನೆಂಬದಾಗಿ ಆಪಾದಿಸಲ್ಪಟ್ಟಿದ್ದನು. ಮಾರ್ಚ ತಾ. ೮ರಲ್ಲು ಆಪಾದಿತನು ಸದರಿ ಕಂಪೆನಿಯ ಹೆಸರಲ್ಲಿ ೨೨,೮೩೬ ರೂಪಾಯಿಗೆ ಒಂದು ಹುಂಡಿಯನ್ನು ಬೇಂಕಿನಲ್ಲಿ ವಟಾಯಿಸಿ ಹಿಂದೆಬರುವಾಗ ಈ ಮೊಬಲಗನ್ನು ಕಳ್ಳರು ಸುಲಕೊಂಡು ಹೋದರೆಂದು ಆಪಾದಿತನು ಹೇಳಿದನು. ಆದರೆ ಕಂಪೆನಿಯವರು ಈ ಮಾತನ್ನು ನಂಬದೆ ಅವನ ಮೇಲೆ ದಗ್ಗಾಫಿರ್ಯಾದು ಮಾಡಿದರು. ಮೇಜಿಸ್ಟ್ರೇಟರು ಈ ಮೊಕದ್ದಮೆಯ ತನಿಖೆ ನಡಿಸಿ ಆಪಾದಿತನ ಕೈಯಿಂದ ಹಣವನ್ನು ಕಳ್ಳರು ಸುಲಕೊಳ್ಳಲಿಲ್ಲವೆಂಬದನ್ನು ಫಿರ್ಯಾದಿಕಡೆಯವರಿಂದ ರುಜುವಾತು ಪಡಿಸಲಿಕ್ಕೆ ಆಗಲಿಲ್ಲ ಎಂಬ ಅಭಿಪ್ರಾಯಪಟ್ಟು ಆಪಾದಿತನನ್ನು ಖುಲಾಸುಪಡಿಸಿದರು.

ಕಳದ ಶುಕ್ರವಾರ ರಾತ್ರಿ ಬಂಗಾಳದ ನುಡ್ಡೆಯ ಡಿಸ್ಟ್ರಿಕ್ಟಿನ ಒಬ್ಬ ವರ್ತದಾರನ ಮನೆಯಲ್ಲಿ ಭಯಂಕರವಾದ ದಕಾಯಿತಿಯು ನಡೆದಿರುವದು. ಸುಮಾರು ರಾತ್ರಿ ೮॥ ಗಂಟೆಗೆ ಯುರೋಪಿಯನರ ಉಡುಪು ಹಾಕಿಕೊಂಡ ೨೪ ಮಂದಿ ಯುವಕರು ಮನೆಗೆ ನುಗ್ಗಿದರು. ಮನೆಯವರು ಈ ಯುವಕರನ್ನು ಎದುರಿಸಿದ್ದಲ್ಲಿ ಯುವಕರು ರಿವೋಲ್ವರ್ ತೆಗೆದು, ಮನೆಯಬಾಗಲು ಒಡೆದು ಖಜಾನೆ ಪೆಟ್ಟಿಗೆಯನ್ನು ಒಡೆದು ಹೆದರಿಸಿ, ಸುಮಾರು ೭೦೦೦ ರೂಪಾಯಿಯ ಚಿನ್ನಾಭರಣಗಳನ್ನು ಸುಲಿಗೆಮಾಡಿದರು ಅವರು ಮನೆಯನ್ನು ಬಿಟ್ಟು ಹೊರಹೋಗುವಾಗ ಗ್ರಾಮದ ಜನರು ಈ ಪಂಗಡವನ್ನು ಎದುರಿಸಿದರು. ದಕಾಯಿತರು ಗ್ರಾಮಸ್ಥರನ್ನು ಹಿಂದಕ್ಕೆ ಅಟ್ಟಿ ಟೆಲಗ್ರಾಫ್ ತಂತೀಗಳನ್ನು ಕಡಿದು ಓಡಿಹೋದರು

ಮೀರಟಿನಲ್ಲಿ ಗೋಧಿಯ ಬೆಲೆಯು ಬಿದ್ದಿರುವದು ಕಳದ ಶುಕ್ರವಾರ ರೂಪಾಯಿಗೆ ೧೦ ಸೇರು ಗೋಧಿ ಸಿಕ್ಕಿರುವದು

ಮುಂಬಾಯಿಯ ಮೆಸ್ಸರ್ಸ್ ಟರ್ನರ್ ಮೋರಿಸ್ಸನ್ ಎಂಡ್ ಕಂಪೆನಿಯವರು ಪಾರ್ಶಿಕೊಲ್ಲಿಯ ಯುದ್ಧದಲ್ಲಿ ಘಾಯಪಡೆದ ಸೇನಿಕರ ಪರಾಂಬರಿಕೆ ಬಗ್ಗೆ ಖರ್ಚುಮಾಡುವರೆ ೧೫,೦೦೦ ರೂಪಾಯಿ ದಾನಮಾಡಿರುವರು.

ಅಮೃತಸಾರಿನ ಸ್ಟೆಂಡರ್ಡ ಆಯಿಲ್‌ಕಂಪೆನಿಯ ಎಣ್ಣೆಕೊಠಡಿಗೆ ತಾ ೧ರಲ್ಲು ಬೆಂಕಿಬಿದ್ದು ೧೨,೦೦೦ ಗೆಲನ್ ಎಣ್ಣೆ ಸುಟ್ಟುಹೋಗಿ ಸುಮಾರು ೧೨,೦೦೦ ರೂಪಾಯಿ ನಷ್ಟವಾಗಿರುವದು.

ತಾ ೨೯ರಲ್ಲು ಬರ್ಮ ಆಯಿಲ್‌ಕಂಪೆನಿಯವರ ೨೦,೦೦೦ ಟನ್ಸ್ ಎಣ್ಣೆಯನ್ನು ಮುಂಬಾಯಿಯಲ್ಲಿ ಇಳಿಸುತ್ತಿರುವಾಗ ಫಕ್ಕನೇ ಬೆಂಕಿಹತ್ತಿ ಕೆಲಸಗಾರರಲ್ಲಿ ೧೫ ಮಂದಿ ಜಖಂ ಹೊಂದಿದರಲ್ಲದೆ ಸುಮಾರು ೪೦,೦೦೦ ರೂಪಾಯಿಗಳ ನಷ್ಟವಾಗಿರುವದು.

ಫ್ರಿನ್ಸ್ ಆಫ್ ವೇಲ್ಸರ ಯುದ್ಧಪಂಡಿಗೆ ಈ ವರೆಗೆ ಬರ್ಮದಲ್ಲಿ ೭॥ ಲಕ್ಷ ರೂಪಾಯಿ ಕೂಡಿರುವದು.

ಮುಂಬಾಯಲ್ಲಿ ಮಾರ್ವಾರಿ ವೈದ್ಯಾಲಯವನ್ನು ಕಟ್ಟಿಸುವುದಕ್ಕಾಗಿ ಸೇಟ್ ರಾಮನಾರಾಯಣರೆಂಬವರು ೬ ಸಾವಿರ ರೂಪಾಯಿಯನ್ನೂ ಸೇಟ ಝುಂಝುನ್ದಾಸ ರಾಮಚಂದ್ರರವರು ೫ ಸಾವಿರ ರೂಪಾಯಿಯನ್ನೂ ದಾನವಾಗಿ ಕೊಟ್ಟಿರುತ್ತಾರೆ. ಈ ಕಟ್ಟೋಣಕ್ಕೆ ಒಟ್ಟಿಗೆ ೪ ಲಕ್ಷ ರೂಪಾಯಿ ಬೇಕಾಗುವವು.

ಮೊರದಬಾದ್ ಎಂಬಲ್ಲಿ ಒಂದು ಕೌತುಕವಾದ ಮೊಕದ್ದಮೆಯು ತನಖಿಯಾಗುತ್ತಲಿದೆ. ಒಬ್ಬ ವಕೀಲರು ೨ನೇ ತರಗತಿಯ ರೈಲ್ವೆ ಕಂಪಾರ್ಟಮೆಂಟಿನಲ್ಲಿ ಪ್ರಯಾಣಮಾಡುತ್ತಿರುವಾಗ ಕಂಪಾರ್ಟಮೆಂಟಿನೊಳಗೆ ಒಬ್ಬ ಯುರೋಪಿಯನ ಹೆಂಗಸು ಬಂದು ಸೇರಿದಳು ಅಗ್ಗಾಡಿಯು ಓಡುತ್ತಿರುವಾಗ ವಕೀಲನು ತನ್ನ ಕೈಯಲ್ಲಿದ್ದ ಹಣವನ್ನು ಲೆಕ್ಕಮಾಡ ಪ್ರಾರಂಭಿಸಿದನು. ಆ ಯುರೋಪಿಯನ ಹೆಂಗಸಿಗೆ ಹಣ್ಣದ ಮೇಲೆ ಆಶೆ ಹುಟ್ಟಿ ವಕೀಲನ ಕೂಡ ಮಾತನಾಡ ತೊಡಗಿ ತನಗೆ ಹಣಕೊಡಬೇಕೆಂದೂ ಕೊಡದಿದ್ದರೆ ಆಪತ್ತು ಸೂಚಕವಾದ ಸರಪಣಿ ಎಳೆದು ಗಾಡಿಯನ್ನು ನಿಲ್ಲಿಸಿ ತನ್ನ ಮರ್ಯಾದೆಯನ್ನು ಕೆಡಿಸ ನೋಡಿದನೆಂಬ ಅಪವಾದವನ್ನು ವಕೀಲನ ಮೇಲೆ ತರುವೆನೆಂದೂ ಹೆದರಿಸಿದಳು, ವಕೀಲನು ಅವಳ ಮಾತನ್ನು ಕೇಳಿ ಯಾವದೊಂದು ಉತ್ತರವನ್ನು ಕೊಡದೆ ಸುಮ್ಮಗಾದನು ಪುನಃ ಪುನಃ ಅವಳು ಹಣವನ್ನು ಕೇಳಿದರೂ ವಕೀಲನು ಲಕ್ಷಕೊಡದ್ದರಿಂದ ಅವಳು ಎದ್ದು ಸರಪಣಿಯನ್ನು ಎಳೆಯ ಹೋದಳು. ವಕೀಲನು ಎದ್ದು ಅವಳ [illegible] ನಿನಗೆ ಬೇಕಾದ್ದೇನು, ಮತ್ತು ಈ ಸರಪಣಿಯನ್ನು ಎಳೆಯ [illegible] ಗಳು ಕಾರಣವೇನೆಂದು ಬರೆದು ಕೊಟ್ಟರೆ ಅವಳಿಗೆ ಬೇಕಾದ [illegible] ಕೊಡುವೆನೆಂದನು; ಆ ಹೆಂಗಸು ಅವಸರದಿಂದ ಬರೆದುಕೊಟ್ಟಳು

ಕೂಡಲೇ ವಕೀಲನು ಇನ್ನು ತಾನು ಅವಳ ಮೇಲೆ ದಾವಾ ಮಾಡಬಹುದಾಯಿತು ಎಂತ ಹೇಳಿ ನಂತರದ ಸ್ಟೇಶನಿಗೆ ತಲಪಿದಾಕ್ಷಣ ಸಂಗತಿಯನ್ನು ಪೋಲಿಸಿಗೆ ತಿಳಿಸಿದನು.

ಬಾರಿಸಾಲ್ ರಾಜದ್ರೋಹ ಪಿತೂರಿ ಮೊಕದ್ದಮೆಯಲ್ಲಿ ತಲೆತಪ್ಪಿಸಿಕೊಂಡಿದ್ದ ಚಂಡಿ ಚರಣಕರ ಎಂಬವನು ಕಳೆದ ತಾ. ೨೯ರಲ್ಲು ಕೈದುಮಾಡಲ್ಪಟ್ಟಿರುವನು.

ಬಂಗಾಳದಲ್ಲಿ ಈಚೆಗೆ ನಡೆದ ದರೋಡೆಗಳ ಸಂಬಂಧ ಈಗ ತಾನೇ ೭೦ ಮಂದಿ ಕೈದುಮಾಡಲ್ಪಟ್ಟಿದ್ದಾರೆ. ರೆಸ್ಸಾಲಿ ಎಂಬ ಒಬ್ಬನನ್ನು ಕೈದುಮಾಡುವಾಗ ಅವನು ಪೋಲಿಸಿನವರನ್ನು ಎದುರಾಯಿಸಿದ್ದರಿಂದ ಪೋಲಿಸಿನವರು ಅವನಿಗೆ ತೋಳಿನ ಮೇಲೆ ಗುಂಡು ಹೊಡೆದು ಇತರ ೧೬ ಮಂದಿಯೊಡನೆ ಅವನನ್ನು ಹಿಡಿದರು. ಬಾರಿಸಾಲಿನಲ್ಲಿ ಪುನಃ ೨ ದರೋಡೆಗಳು ನಡೆದ ವಾರ್ತೆ ಬಂದಿರುವದು. ಆಕುಬಾಲಿ ಎಂಬವನ ಮನೆಯಲ್ಲಿ ದರೋಡೆಯು ನಡೆದು ಇಬ್ಬರು ಹೆಂಗಸರಿಗೆ ದರೋಡೆಗಾರರು ಕಠಿಣ ಗಾಯಪಡಿಸಿರುವರು. ಈ ಪೈಕಿ ಒಬ್ಬಳು ಮೃತಳಾದಳು, ಮತ್ತೊಂದು ದರೋಡೆಯು ಹಾಜಿ ಇಸ್ಲಾಮ ಎಂಬವನ ಮನೆಯಲ್ಲಿ ನಡೆದಿರುವದು. ಆಯುಧಪಾಣಿಗಳಾದ ದರೋಡೆಗಾರರು ಮನೆ ನುಗ್ಗಿ ಮನೆಯಲ್ಲಿದ್ದವರನ್ನು ಕಟ್ಟಿಹಾಕಿ ಮನೆಯ ಹೆಂಗಸು ಮಕ್ಕಳಿಗೆ ಹೊಡೆದು ೨೧೦೦ ರೂಪಾಯಿ ಕಳವುಮಾಡಿಕೊಂಡು ಹೋದರು.

ದಕ್ಷಿಣ ಹಿಂದೂಸ್ಥಾನ

ತಿರುವಂಕೋಡಿನ ಮಹಾರಾಜರವರು ತಾ. ೩ರಲ್ಲು ಕೂನೂರಿನಲ್ಲಿರುವ ಹುಚ್ಚು ನಾಯಿ ಕಡಿತ ಚಿಕಿತ್ಸಾ ಆಸ್ಪತ್ರೆಯನ್ನು ಸಂದರ್ಶಿಸಿದರು. ಈ ಆಸ್ಪತ್ರೆಯಲ್ಲಿ ಈಗ ಸಂಸ್ಥಾನದ ಆಯಾ ಕಡೆಯ ೫೦ ಮಂದಿ ಶೈತೋಪಚಾರ ಹೊಂದುತ್ತಿದ್ದಾರೆ.

ಮೊನ್ನೆ ಗಂಧಿಯವರು ಪತ್ನಿ ಸಹಿತ ಮ। ರಾ। ಬಿ. ಶ್ರೀನಿವಾಸ ಶಾಸ್ತ್ರಿಯವರೊಡನೆ ಮದ್ರಾಸಿನಿಂದ ಟ್ರಾಂಕ್ವೆಬಾರಿಗೆ ಹೋಗಿರುತ್ತಾರೆ.

ಮದ್ರಾಸಿನಲ್ಲಿ ಅನ್ನ ದಾನ ಸಮಾಜವೆಂಬುದೊಂದು ಸ್ಥಾಪಿಸಲ್ಪಟ್ಟು ೨೮ ವರ್ಷಗಳಾದವು. ಇಲ್ಲಿ ಜಾತಿಭೇದ ಪಕ್ಷಪಾತಗಳಿಲ್ಲದೆ ವಿಕಲಾಂಗರು ರೋಗಿಷ್ಟರು ಆದವರಿಗೆಲ್ಲಾ ಅನ್ನ ದಾನವು ಮಾಡಿಸಲ್ಪಡುತ್ತಿದೆ. ಶ್ರೀಮಂತರೂ ಧರ್ಮಾತ್ಮರೂ ಆದ ಜನರು ತಮ್ಮ ಮನೆಯ ಶುಭಾಶುಭ ಕರ್ಮಗಳ ಸಮಯದಲ್ಲಿ ಈ ಅನ್ನದಾನ ಸಮಾಜದವರ ದ್ವಾರಾ ಅವರವರ ಯೋಗ್ಯತಾನುಸಾರ ಇಷ್ಟಿಷ್ಟು ಮಂದಿಗೆಂದು ದೀನ ಜನರಿಗೆ ಭೋಜನ ಮಾಡಿಸುವರು. ಹಲವರು ಮರಣ ಶಾಸನ ಮೊದಲಾದವುಗಳ ದ್ವಾರಾ ಈ ಸಮಾಜಕ್ಕೆ ಮೂಲ ಧನವನ್ನು ಕೊಟ್ಟಿರುವರು. ಈ ಮೂಲ ಧನವು ಈ ವರೆಗೆ ಅರ್ಧಲಕ್ಷ ರೂಪಾಯಿನ ವರೆಗೆ ಕೂಡಿರುತ್ತದೆ. ಕಳೆದ ವರ್ಷ ಒಂದರಲ್ಲೇ ೬೧೧೮ ರೂಪಾಯಿಗಳು ಕೂಡಿ ೪೪೨೮ ರೂಪಾಯಿಗಳು ವ್ಯಯವಾಗಿವೆ. ಇಲ್ಲಿಯ ರಕ್ಷಣೆಗೆ ಒಳಪಟ್ಟ ದೀನ ಜನರಿಂದ ಪರೀಕ್ಷಾರ್ಥವಾಗಿ ಸಣ್ಣ ಪುಟ್ಟ ಕೈಗಾರಿಕೆಗಳನ್ನು ಮಾಡಿಸಲು ಕಳೆದ ವರ್ಷದಿಂದ ಪ್ರಾರಂಭಿಸಿದ್ದಾರೆ.

ಪ್ಲೇಗು ಮೊದಲಾದ ಯಾವ ಜ್ವರವೇ ಆಗಲಿ ರುದ್ರಾಕ್ಷಿಯ ತೀರ್ಥವನ್ನು ಕುಡಿಸಿದರೆ ಬಹು ಮಂದಿಗಳು ಗುಣವಾಗುವರೆಂಬದು ಅನುಭವ ಸಿದ್ಧ ವಿಷಯವೆಂದು ಆಂಧ್ರ ದೇಶಿಯರಾದ ದೊಡ್ಡ ಮನುಷ್ಯರೊಬ್ಬರು ದೇಶೋಪಕಾರೇಚ್ಛೆಯಿಂದ ಪ್ರಕಟಿಸಿದ್ದಾರೆ. ನಾಲ್ಕು ರುದ್ರಾಕ್ಷಿಗಳನ್ನು ಅರೆಪಾವು ನೀರಿನಲ್ಲಿ ನೆನೆ ಹಾಕಿ ಒಂದು ರಾತ್ರಿ ಇಟ್ಟಿದ್ದು ಮರು ದಿನ ಅದರಲ್ಲಿ ೨-೩ ಉದ್ಧರಣೆಯಷ್ಟು ತೀರ್ಥವನ್ನು ಸೇವಿಸಬೇಕು. ಹಾಗೆಯೇ ಬೆಳಗಿನ ಹೊತ್ತು ನೆನೆ ಹಾಕಿದ ರುದ್ರಾಕ್ಷಿ ತೀರ್ಥವನ್ನು ಸಾಯಂಕಾಲಕ್ಕೆ ಅದೇ ಪ್ರಮಾಣದಿಂದ ಸೇವಿಸಬೇಕು.

೧೯೧೩—೧೪ನೇ ಇಸವಿಯಲ್ಲಿ ಮೈಸೂರು ಸಂಸ್ಥಾನದ ಎಲ್ಲಾ ಮೇಜಿಸ್ಟ್ರೇಟರುಗಳಲ್ಲಿ ದಾಖಲಾದ ೨೦೦೮೯ ಮೊಕದ್ದಮೆಗಳಲ್ಲಿ ೩೪೫೭೭ ಜನರು ವಿಚಾರಿಸಲ್ಪಟ್ಟರು. ಇದರ ಹಿಂದಿನ ವರ್ಷ ೧೯೩೩೯ ಅಪರಾಧಗಳು ವರದಿಯಾಗಿದ್ದು ೩೪೪೦೮ ಜನರು ವಿಚಾರಿಸಲ್ಪಟ್ಟಿದ್ದರು. ಇವರಲ್ಲಿ ಶಿಕ್ಷೆಯನ್ನು ಹೊಂದಿದವರ ಸಂಖ್ಯೆ ಶೇಕಡಾ ಹಿಂದಿನ ವರ್ಷಕ್ಕಿಂತ ಕಡಿಮೆ.

೨೧ನೇ ಮದ್ರಾಸ್ ಪ್ರೊವಿನ್ಸಿಯಲ್ ಕನ್ಫರೆನ್ಸ್. ಈ ವರ್ಷ ನೆಲ್ಲೂರಲ್ಲಿ ಇದೇ ತಾ. ೪ರಲ್ಲು ಕೂಡಿಬಂತು. ಬಹುಮಾನಪಟ್ಟ ಮ। ಎ. ಎಸ್. ಕೃಷ್ಣರಾವ್ ಬಿ. ಎ. ಬಿ. ಎಲ್‌ರವರು ಸ್ವಾಗತ ಕಮಿಟಿಯ ಅಧ್ಯಕ್ಷರಾಗಿದ್ದು ಸಭಾ ಪ್ರತಿನಿಧಿಗಳನ್ನು ಸ್ವಾಗತಮಾಡಿಕೊಂಡು ಸ್ವಾಗತ ಭಾಷಣವನ್ನು ಕೊಟ್ಟರು. ಯುದ್ಧದ ನಂತರ ಭಾರತೀಯರ ಸ್ಥಿತಿ, ವಿದ್ಯಾಭ್ಯಾಸ. ಗ್ರಾಮ ಪಂಚಾಯತಿ ಸಭೆಗಳು, ಕೌನ್ಸಿಲ್ ಸಭೆಯ ವ್ಯವಸ್ಥೆ ಇತ್ಯಾದಿ ಪ್ರಸ್ತಾಪಗಳು ಇವರ ಭಾಷಣದಲ್ಲಿ ಒಳಕೊಂಡಿದ್ದವು. ನಂತರ ಸಭಾಧ್ಯಕ್ಷರಾದ ಬಹುಮಾನಪಟ್ಟ ರಾವ್ ಬಹದ್ದೂರ್ ಬಿ. ಎಸ್. ಶರ್ಮರವರು ಕಾಲೋಚಿತ ಭಾಷಣವನ್ನು ಕೊಟ್ಟರು.

ಇದೇ ತಾ. ೩ರಲ್ಲು ಬೆಂಗಳೂರಲ್ಲಿ ಕನ್ನಡ ಭಾಷಾಭಿವೃದ್ಧಿ ಸಮ್ಮೇಲನವು ಕೂಡಿಬಂತು. ಮೈಸೂರು ಸಂಸ್ಥಾನದ ಕೌನ್ಸಿಲಿನ ಸೀನಿಯರ್ ಮೆಂಬರರಾದ ಮ। ಎಚ್. ವಿ ನಂಜುಂಡಯ್ಯರವರು ಈ ಸಮ್ಮೇಲನವನ್ನು ತೆರದು ಸುಮಾರು ೨ ತಾಸುಗಳ ವರೆಗೆ ಭಾಷಣಕೊಟ್ಟು ಭಾಷೆಯನ್ನು ಅಧೋಗತಿಗಿಳಿಯಬಿಡುವದರಿಂದ ಉಂಟಾಗುವ ಕೆಡಕನ್ನು ತೋರಿಸಿಕೊಟ್ಟರು.

ವಿದ್ಯಾ ಸಂಬಂಧವಾದ ಕನ್ಫರೆನ್ಸ್ ಸಭೆಯು ಇದೇ ತಾ ೭ರಲ್ಲು ನೆಲ್ಲೂರಲ್ಲಿ ಮ। ರಾ। ಲಕ್ಷ್ಮೀನರಸ ರೆಡ್ಡಿಯವರ ಟೌನ್ ಹೋಲಿನಲ್ಲಿ ಮ। ರಾ। ಶೀ. ಬಿ ರಾಮನಾಥನರವರ ಅಧ್ಯಕ್ಷತೆಯಲ್ಲಿ ಕೂಡಬರುವದು.

ದಕ್ಷಿಣ ಕನ್ನಡ

ಹೊಸದುರ್ಗ:—ಇಲ್ಲಿ ಕಳೆದವಾರದಿಂದ ಮೇಘಸ್ತಾಕನ ಪ್ರತಾಪವು ಗಂಭೀರವಾಗಿ ತಲೆದೋರುತ್ತದೆ. ಆದರೆ ಪರ್ಜನ್ಯನು ಈ ವರೇಗೂ ಸರಿಯಾಗಿ ಭೇಟಿಕೊಡಲಿಲ್ಲ. ಮೊನ್ನೆ ದಿವಸ ರಾತ್ರೆ ಜೋರು ಗಾಳಿಮಳೆಯು ಬಿದ್ದಿತ್ತು. ನಂತರ ಅಲ್ಲಲ್ಲಿ ಒಂದೊಂದು ಹನಿ ಮಾತ್ರ ಬಂದದೆ.

ಇಲ್ಲಿಯ ಸಬ್ ಅಸಿಸ್ಟಾಂಟ ಸರ್ಜನರಾದ ಸಿ. ಶಂಕರನ್ ನಾಯರರಿಗೆ ಇಲ್ಲಿಂದ ವರ್ಗಮಾಡೋಣಾಗಿಯದೆಂತಲೂ ಇವರ ಬದಲಿಗೆ ಮ। ಮಹಮ್ಮದ ಅಲಿ ಎಂಬವರು ಬರುತ್ತಾರಾಗಿಯೂ ವರ್ತಮಾನ ಕೇಳುತ್ತೇವೆ.

ಕಾಸರಗೋಡು:—ಜಿಲ್ಲಾ ಕಲೆಕ್ಟರರಾದ ಮ। ಎಮ್. ಇ. ಕೌಟ್‌ಮನ್ ದೊರೆಗಳವರ ಸವಾರಿಯು ಇಲ್ಲಿಗೆ ಮೊನ್ನೆ ಚಿತ್ತೈಸೋಣಾಗಿ ಎರಡು ದಿವಸಗಳ ಮೊಕ್ಕಾಂ ಬೆಳಸಿ ಸಾಯಂಕಾಲ ಮೈಲುಬಂಡಿಗೆ ಮಂಗಳೂರಿಗೆ ಹಿಂತೆರಳೋಣಾಯಿತು.

ರಬ್ಬರ ತೋಟಕ್ಕೆ ಕೂಲಿ ಆಳುಗಳಾಗಿ ನಮ್ಮಕಡೆಯಿಂದ ಅನೇಕರು ಹೋಗಿರುತ್ತಾರಷ್ಟೆ. ಆದರೆ ಅಲ್ಲಿ ಹೋಗಿ ಮೇಸ್ತ್ರಿ ವಗೈರೆ ಪದವಿಯನ್ನು ಸ್ವೀಕರಿಸಿ, ಇನ್ನೂ ಜನರನ್ನು ಸಂಗ್ರಹಿಸಿ ಕೊಡುತ್ತೇನಾಗಿ ವಾಗ್ದಾನಮಾಡಿದ ಪಳ್ಳಿಕೆರೆ ಗ್ರಾಮದ ಜಬ್ಬ ಬಿಲ್ಲವನು ಅಲ್ಲಿಯ ನಾಲ್ಕು ಯಾ ಐದು ಮಂದಿ ಹುಡುಗರನ್ನು ಹೆತ್ತವರ ತಿಳುವಳಿಕೆ ಸಿವಾಯಿ ಪುಸಲಾಯಿಸಿ ಕರಕೊಂಡು ಹೋಗುವಾಗ ಹೊಸದುರ್ಗ ರೈಲ್ವೆಸ್ಟೇಶನಿನಲ್ಲಿ ತಿಳಿಸದೆ ಇದ್ದ ಒಬ್ಬ ಹುಡುಗನ ತಂದೆ ಕೂಡಲೇ ಪೋಲಿಸಿನವರಿಗೆ ವರ್ದಿ ಕೊಟ್ಟು ಆ ಮೇಸ್ತ್ರಿಯೆಂದು ಕರೆಯಲ್ಪಡುವವನನ್ನು ವಿಚಾರಣೆಗೆ ಗುರಿಪಡಿಸಿರುತ್ತಾರೆ. ಸದರಿಯವನ ಸಂಗಡ ಇದ್ದ "ರೈಟರ" ಇನ್ನೊಬ್ಬನು ಪರಾರಿಯಾಗಿದ್ದಾನೆಂತಲೂ ಆತನನ್ನು ಕೈದುಮಾಡುವ ವಿಲೆವಾರಿ ನಡಿಸಿಯದಾಗಿಯೂ ಕೂಡಾ ಕೇಳುತ್ತೇವೆ.

ಯಮಾರ್ಳ:—ಇಲ್ಲಿಯ ಟಪ್ಪಾಲ ಬ್ರಂಚಾಫೀಸು ತೆಗೆದು ಹಾಕಲ್ಪಟ್ಟಂದಿನಿಂದ ಬಹಳ ಸಂಕಷ್ಟಕ್ಕೊಳಗಾಗಿದ್ದ ನಿವಾಸಿಕರೆಲ್ಲಾ ಸದ್ಯಾ ಅದಮಾರು ಶ್ರೀಪಾದಂಗಳವರ ಪ್ರಯತ್ನದಿಂದ ಪುನಃ ತೆರೆಯೋಣಾಗುವದೆಂಬ ಆಶಾಯುಕ್ತರಾಗಿದ್ದರಾದರೂ ಈ ತನಕ ಅದರ ಕುರಿತಾದ ಏನೊಂದೂ ಏರ್ಪಾಡು ಮಾಡೋಣಾಗದೆ ಇರುವುದರಿಂದ ನಮ್ಮಗಳ ಸಂಕಷ್ಟ ನಿವಾರಣಾ ಸಮಯವು ಇನ್ನೂ ಸಮಾಪಿಸಿಲ್ಲವೆಂದೇ ನಂಬಬೇಕು. ಇಲ್ಲಿಗೆ ಸಂಬಂಧಪಟ್ಟ ಆಫೀಸಿನಲ್ಲಿ ಬಟವಾಡೆಯು ಸರಿಯಾಗಿ ಆಗದೆ ಇರುವದರಿಂದ ವಾರಕೊಮ್ಮೆಯಾದರೂ ಸರಿಯಾಗಿ ಕಾಗದ ಪತ್ರಗಳು ದೊರಕುವದಿಲ್ಲ. ಅತಿ ಅಗತ್ಯ ಸಂಗತಿಗಳ ಕಾಗದ ಪತ್ರಗಳು ಟಪಾಲಿನ ವಿಳಾಸದ ಆಫೀಸಿಗೆ ತಲ್ಪಿದ ನಾಲ್ಕನೇ ದಿವಸದಲ್ಲೂ ವಿಳಾಸದವರಿಗೆ ತಲ್ಪದೆ ಇರುತ್ತದೆ. ಎಪ್ರಿಲ್ ತಾ ೧೭ರಲ್ಲು ಮುಂಬಯಿಂದ ರವಾನಿಸಲ್ಪಟ್ಟ ಕಾಗದವು ತಾ. ೨೨ಕ್ಕೆ ಪಡುಬಿದ್ರಿಗೆ ತಲ್ಪಿರುತ್ತಾ ತಾ. ೨೯ಕ್ಕೆ ವಿಳಾಸದಾರರಿಗೆ ತಲ್ಪುವದೆಂದರೇನು! ಸ್ವದೇಶಾಭಿಮಾನಿ ವೃತ್ತ ಪತ್ರಿಕೆಯು ಸಾವಿರಕ್ಕೆ ಮಿಕ್ಕಿದ ಮೈಲುಗಳ ದೂರವಿರುವ ಪರದೇಶಗಳಿಗೆ ಟಪ್ಪಾಲಿಗೆ ಹಾಕಿದ ನಾಲ್ಕನೇ ದಿವಸದಲ್ಲಿ ತಲ್ಪುತ್ತಲಿದೆ. ಮತ್ತು ಮುಲ್ಕಿಯಲ್ಲಿ ಮಾರಣೇ ಶನಿವಾರ ಸಾಯಂಕಾಲಕ್ಕೇನೇ ತಲ್ಪುತ್ತದಾದರೂ ಇಲ್ಲಿ ಬುಧವಾರಕ್ಕೂ ಸಹ ಅದರ ದರುಶನವು ಅಪರೂಪ. ಈ ಮೊದಲಾದ ತೊಂದರೆಗಳಿಂದಲೇ ಸಹಿಸಲಾರದ ನಷ್ಟ ಕಷ್ಟಕ್ಕೆ ಒಳಗಾಗಿ ಪೇಚಾಡುತ್ತಲಿರುತ್ತೇವಲ್ಲದೆ ಇತ್ತಲಾಗೆ ಪೋಸ್ಟ್ ರನ್ನರ್ರ ಬದಲಾಗಿ ಜಟ್ಕಾ "ಮೈಲ್" ಬಂಡಿಯಲ್ಲಿ ರವಾನಿಸುವ ಏರ್ಪಾಡು ಮಾಡಲ್ಪಟ್ಟ ಕಳೆದ ೧ನೇ ತಾರೀಕಿನಿಂದ ಪ್ರತಿ ಗ್ರಾಮಗಳಲ್ಲಿ ನಿವಾಸಿಕರ ಉಪಯೋಗಾರ್ಥ ಇಡಲ್ಪಟ್ಟ ಪೋಸ್ಟು ಬೋಕ್ಸ್‌ನಲ್ಲಿ ಹಾಕೋಣಾದ ಕಾಗದ ಪತ್ರಗಳು ಅದನ್ನು ತೆರೆಯೋಣಾಗದ ದೆಶೆಯಿಂದ ಅಲ್ಲೇ ಬಿದ್ದಿರುತ್ತಾ ಇದರಿಂದ ಎಂಥಾ ನಷ್ಟಗಳೊದಗಬಹುದೆಂಬ ಸಂಗತಿಯನ್ನು ತಾವೇ ಗ್ರಹಿಸಿಕೊಳ್ಳಬಹುದು. ಚೀಟು ರಜಿಸ್ತ್ರಿಕಾಗದ, ಪಾರ್ಸೆಲು, ಮನಿಯಾರ್ಡರು ವಗೈರೆಗಳನ್ನು ಪಡೆಯುವದಂತೂ ಇರಲಿ. ಟಪ್ಪಾಲಿಗೆ ಹಾಕುವ ಒಂದು ಪತ್ರಕ್ಕೂ ಸಹ ಕೆಲವು ಮೈಲುಗಳ ಫಾಸಲೆಯಲ್ಲಿರುವ ಟಪ್ಪಾಲಾಫೀಸಿನ ದರುಶನವನ್ನೇ ನಿರೀಕ್ಷಿಸಿಕೊಂಡು ಹೋದರೆ ಘಳಿಗೆ ತಪ್ಪಿದರೆ ಗುಳಿಗೆ ನಷ್ಟವೆಂಬಂತೆ ತಮ್ಮ ಸುಸಮಯವನ್ನು ವ್ಯರ್ಥ ಕಳಕೊಳ್ಳಬೇಕಾಗುತ್ತದಲ್ಲವೇ? ನೂತನ ಏರ್ಪಾಡಿನಿಂದ ಟಪ್ಪಾಲು ಇಲಾಖೆಯವರಿಗೆ ಲಾಭವಾಗಬಹುದಾದರೂ ಮೇಲ್ಕಂಡ ತೊಂದರೆಗಳಿಂದ ಅಂತೂ ಇಂತು ಕೆಂಪಿ ಮಕ್ಕಳಿಗೆ ವನವಾಸವೆಂಬಂತೆ ಬಡ ಹಳ್ಳಿ ನಿವಾಸಿಕರಿಗೆ ನಷ್ಟವೇ ಆಗಿರುತ್ತದೆಂದರೆ ಅತಿಶಯೋಕ್ತಿಯಾಗದು. ಏನೆಂದರೂ ನಮ್ಮಂಥಾ ಬಡ ಹಳ್ಳಿ ನಿವಾಸಿಕರ ಸಂಕಷ್ಟವನ್ನು ಹೇಳಿ ತೀರದು. ಆದ್ದರಿಂದ ದಯಾಳು ಟಪ್ಪಾಲ ಮೇಲುದ್ಯೋಗಸ್ಥರು ತಕ್ಕ ನಿಗಾ ಕೊಟ್ಟು ಪೋಸ್ಟುಬೋಕ್ಸ್‌ನಲ್ಲಿ ಹಾಕಿರುವ ಮತ್ತು ಹಾಕಲ್ಪಡುವ ಕಾಗದ ಪತ್ರಗಳನ್ನು ಸರಿಯಾಗಿ ತೆಗಿಸುವ ಮತ್ತು ಬಟ್ವಾಡೆ ಪೇದೆಗಳ ಸಂಖ್ಯೆಯನ್ನು ಹೆಚ್ಚಿಸಿ ಪ್ರತಿ ನಾಲ್ಕು ದಿವಸಕ್ಕೊಮ್ಮೆಯಾದರೂ ಸರಿಯಾಗಿ ಬಟ್ವಾಡೆಯಾಗುವಂತೆ ಕರುಣದೋರುವರಾಗಿಯೂ ಇನ್ನಾದರೂ ಯಮಾರ್ಳದಲ್ಲಿ ಬ್ರಂಚಾಫೀಸು ತೆರೆಯುವರೆ ಹುಕುಂ ದಯಪಾಲಿಸುವರಾಗಿಯೂ ನಿಶ್ಚಲವಾದ ನಂಬಿಕೆಯಿಂದ ಪ್ರಾರ್ಥಿಸುತ್ತೇವೆ.

ಮಂಗಳೂರು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಮುನ್ಸಿಫ್‌ಕೋರ್ಟುಗಳ ಶೆಖೆಕಾಲದ ರಜೆಯು ಇದೇ ತಾ. ೩೧ಕ್ಕೆ ತೀರಿ ಜೂನು ತಾ. ೧ಕ್ಕೆ ಕೋರ್ಟು ತೆರೆಯೋಣಾಗುವದು.

ಡಿಸ್ಟ್ರಿಕ್ಟ್ ಕೋರ್ಟು ಮತ್ತು ಸಬ್ ಕೋರ್ಟಿನ ಶೆಕೆಕಾಲದ ರಜೆಯು ಜೂನು ತಾ. ೨೧ಕ್ಕೆ ತೀರುವದು.

ಇದೇ ತಾ. ೪ನೇ ರಾತ್ರಿ ಕಂಕನಾಡಿಯ ದಾನಿಯೇಲ್ ಮಹಾಯಸರ ಮನೆಯಿಂದ ಸುಮಾರು ೧೬೯ ರೂಪಾಯಿ ಕ್ರಯ ಬಾಳುವ ಚಿನ್ನಾಭರಣಗಳು ಕಳವಾಗಿರುವವು.

ಡಾಕ್ಟರ್ ಎಲ್. ಎಫ್. ಮಹಾಯಸರ ನಾಯಿ ಕಳವು ಮಾಡಿದ್ದನಾಗಿ ಅಪಾದಿಸಲ್ಪಟ್ಟ ಗಾಸ್ಪರ್ ಸೋಜನಿಗೆ ಒಂದು ತಿಂಗಳ ಕಠಿಣ ಸಜೆ ವಿಧಿಸೋಣಾಯಿತು.

ಡೊಂಗರಕೇರಿಯಲ್ಲಿ ಕಿಸೆಕಳವು ಮಾಡಿದ ಸುಬ್ಬನಿಗೆ ೬ ತಿಂಗಳ ಕಠಿಣ ಸಜೆಯೂ ಸಾಯಿರಿಗೆ ೨ ತಿಂಗಳ ಕಠಿಣ ಸಜೆಯೂ ವಿಧಿಸೋಣಾಗಿರುವದು.

ಇಲ್ಲಿಯ ರಾ. ಮಡ್ಡಾರ ಗೋಪಾಲರಾವರವರು ಈ ವರ್ಷದ ಕೆಮಿಸ್ಟ್ರಿ ಎಮ್ ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವರು.

ಇಲ್ಲಿಯ ಯಂಗ್‌ಮೆನ್ಸ್ ಯೂನಿಯನ್ ಟೀಮಿನ ಕೆಪ್ಟನರಾದ ಮ। ರಂಗಪ್ಪಬಂಗೇರರ ಅಮಂತ್ರಣದ ಮೇರೆಗೆ ಕನ್ನಾನ್ನೂರ ಫುಟ್‌ಬೋಲ್ ಟೀಮಿನ ಮಂಬರರು ಇಲ್ಲಿಗೆ ಬಂದು ಯಂಗ್‌ಮೆನ್ಸ್ ಯೂನಿಯನ್ ಫುಟುಬೋಲ್ ಟೀಮಿನವರೊಂದಿಗೆ ಫುಟುಬೋಲ್

...ಂಡಾಟದ ಪಂದ್ಯವನ್ನು ಆಡಿ ಸೋಲುಗೇಲನ್ನು ಪಡೆಯದೆ ...ಂದಕ್ಕೆ ಹೋದರು.

ಗವರ್ನಮೆಂಟ್ ಟ್ರೈನಿಂಗ್ ಶಾಲೆಯ ಶೆಕೆಕಾಲ ರಜೆಯು ಜೂನು ತಾ. ೩ಕ್ಕೆ ತೀರುವದು

ಕುಂದಾಪುರ ತಾಲೂಕಿನ ಹೆಡ್ ಎಕೌಂಟಾಂಟ ಮತ್ತು ಟ್ರೆಜರರಾಗಿದ್ದ ಮ॥ ರಾ॥ ಎ ಶಿವರಾಯರು ರೂ ೬೦ರಿಂದ ೫೦ಕ್ಕೆ ತಗ್ಗಿಸಲ್ಪಟ್ಟು ಕಲೆಕ್ಟರ ಆಫೀಸಿನ ಹೆಡ್ ಒಡಿಟರರಾಗಿ ನೇಮಿಸಲ್ಪಟ್ಟಿರುವದರಿಂದ ಕಲೆಕ್ಟರ ಆಫೀಸಿನ ೧ನೇ ರಿಕೋರ್ಡ ಕ್ಲಾರ್ಕರಾದ ಮ॥ ರಾ॥ ಪಿ ರಾಮಚಂದ್ರಯ್ಯನವರು ಕುಂದಾಪುರ ತಾಲೂಕಿನ ಹೆಡ್ ಎಕೌಂಟಾಂಟ ಮತ್ತು ಟ್ರೆಜರರಾಗಿಯೂ ಕಲೆಕ್ಟರ ಆಫೀಸಿನ ಹೆಡ್ ಒಡಿಟರರಾದ ಮ॥ ರಾ॥ ವಿ ವೆಂಕಟರಾಮರು ರೂ ೬೦ರ ೧ನೇ ರಿಕೋರ್ಡ್ಸ್ ಕ್ಲಾರ್ಕರಾಗಿಯೂ ನೇಮಿಸಲ್ಪಟ್ಟಿದ್ದಾರೆ

ಉಂದೂ ಟ್ರಾನ್ಸಿಟು ಕಂಪೆನಿಯ ಮಾಲೀಕರಾದ ರಾ॥ ಬಿ ಸುಬ್ಬಯ್ಯಶೆಟ್ಟರವರು ಟ್ರಾನ್ಸಿಟು ಬಂಡಿಗಳೊಡನೆ ಮೋಟರ್ ಬಂಡಿಗಳ ವ್ಯವಹಾರ ನಡಿಸುವರೆಂದೂ ಪ್ರಕೃತ ಒಂದು ಬಂಡಿಗೆ ಆರ್ಡರು ಕೊಟ್ಟಿರುವರೆಂದೂ ತಿಳಿಯುತ್ತೇವೆ

ಮಂಗಳೂರಿಂದ ಉಡುಪಿಗೆ ಒಂದು ಹೊಸ ಟ್ರಾನ್ಸಿಟು ಕಂಪೆನಿಯು ಸದಾ ಹೊರಡುವ ಏರ್ಪಾಡು ನಡೆಯುತ್ತಿದೆಂಬ ವಾರ್ತೆಯಿದೆ

ಕಳೆದವಾರ ಮಂಗಳೂರು ಮುನ್ಸಿಪಾಲಿಟಿಯಲ್ಲಿ ೧ ಪ್ಲೇಗು ಮರಣವಿತ್ತು

ಕಲೆಕ್ಟರ ಆಫೀಸಿನ ೨ನೇ ರಿಕೋರ್ಡ ಕ್ಲಾರ್ಕ ರಾ॥ ಪಿ ರಾಮಚಂದ್ರಯ್ಯನವರು ಇತರ ಡ್ಯೂಟಿಯ ಮೇಲಿರುವದರಿಂದ ಕಲೆಕ್ಟರ ಆಫೀಸಿನ ಹೆಡ್ ಒಡಿಟರರಾದ ಮ॥ ರಾ॥ ವಿ ವೆಂಕಟರಾವ್ ಪಿ ಎ. ರವರು ೧ನೇ ರಿಕೋರ್ಡ ಕ್ಲಾರ್ಕರಾಗಿಯೂ ಕರಸ್ಪೊಂಡೆಂಟ ಸೆಕ್ಷನಿನ ೪ನೇ ಕ್ಲಾರ್ಕರಾದ ಮ॥ ರಾ॥ ಎಚ್. ಅನಂತಯ್ಯ ಪಿ ಎ ರವರು ಅಕ್ಟಿಂಗ್ ಹೆಡ್ ಒಡಿಟರರಾಗಿಯೂ ಕಲೆಕ್ಟರ ಆಫೀಸಿನ ೪ನೇ ಎಕೌಂಟಾಂಟರಾಗಿರುವ ರಾ॥ ಎ ತಿಮ್ಮಪ್ಪ ಪೂಂಜರವರು ಕರಸ್ಪೊಂಡೆಂಟ ಸೆಕ್ಷನಿನ ೪ನೇ ಕ್ಲಾರ್ಕರಾಗಿಯೂ ಲೋಕಲ್ ಆಡಿಟ್ ಮತ್ತು ಎಕೌಂಟ ಸೆಕ್ಷನಿನ ಆಕ್ಟಿಂಗ್ ಹೆಡ್ ಎಕೌಂಟಾಂಟ ರಾ॥ ಎಮ್ ರಾಮಪ್ಪನವರು ೪ನೇ ಎಕೌಂಟಾಂಟರಾಗಿಯೂ ನೇಮಿಸಲ್ಪಟ್ಟಿರುತ್ತಾರೆ

ದಕ್ಷಿಣಕನ್ನಡಾ ಜಿಲ್ಲೆಯಿಂದ ಮೆಡಿಕಲ್ ಪರೀಕ್ಷೆಗೆ ನಿಂತ ೨೦ ವಿದ್ಯಾರ್ಥಿಗಳಲ್ಲಿ ಈ ವರ್ಷ ೧೮ ಮಂದಿ ಪಾಸಾಗಿರುವರು ಈ ಪೈಕಿ ರಾ॥ ಬಂಟ್ವಾಳ ಗೋಪಾಲಕೃಷ್ಣ ಪ್ರಭುಗಳವರು ಮತ್ತು ರಾ॥ ಬಂಟ್ವಾಳ ಸುಬ್ರಾಯಬಾಳಿಗರವರು ಫೈನಲ್ ಎಲ್ ಎಮ್ ಎಂಡ್ ಎಸ್ ಪರೀಕ್ಷೆಯಲ್ಲಿಯೂ ರಾ॥ ಸಂಜೀವರಾವ್ ಮಂಡ್ಕೂರು ೩ನೇ ವರ್ಷದ ಎಮ್ ಬಿ ಎಂಡ್ ಬಿ ಎಸ್ ಪರೀಕ್ಷೆಯಲ್ಲಿಯೂ ರಾ॥ ವೆಂಕಟರಾವ್ ಉದ್ಯಾವರ, ರಾ॥ ವಿಟಲರಾವ್ ಕೊಂಬರಬೈಲ್ ರವರು ೩ನೇ ವರ್ಷದ ಎಲ್ ಎಮ್ ಎಂಡ್ ಎಸ್ ಪರೀಕ್ಷೆಯಲ್ಲಿಯೂ ಮೆ॥ ಅಲ್ಬುಕರ್ಕ ಜೆ ರಾ॥ ಎಮ್ ಬಾಲಕೃಷ್ಣಪ್ರಭು, ರಾ॥ ಆರ್ ಪಿ ಭಟ್ಟ (೧ನೇ ತರಗತಿ) ರಾ॥ ನರಸಿಂಗರಾವ್ ಅಡಿಗೆ, ರಾ॥ ಬಿ. ಪಾಂಡುರಂಗ ಬಾಳಿಗ, ಸುಬ್ಬರಾವ್‌ರವರು ೨ನೇ ವರ್ಷದ ಎಮ್. ಬಿ ಎಂಡ್ ಬಿ ಎಸ್ ಪರೀಕ್ಷೆಯಲ್ಲಿಯೂ ಪಾಸಾಗಿರುವರು.

ಇಲ್ಲಿಯ ಟೌನ್ ಪೋಲೀಸ್ ಸ್ಟೇಶನ್ ಸಬ್‌ಇನ್ಸ್‌ಪೆಕ್ಟರ್ ಮೆ॥ ಐ. ಸೋನ್ಸರಿಗೆ ಚಾರ್ಮಾಡಿಗೆ ಆದ ವರ್ಗವು ರದ್ದಾಗಿರುವುದು ಎಂತ ತಿಳಿಯುತ್ತೇವೆ

ತಿದ್ದುಪಡಿ:—ಇದೇ ಕಳೆದ ತಾ. ೧೬-೪-೧೫ನೇ **ಸ್ವದೇಶಾಭಿಮಾನಿ ಪತ್ರಿಕೆಯ ೧ನೇ ಪಾನಿನಲ್ಲಿ ಪ್ರಕಟವಾದ ಪ್ರಕಟಣೆಯಲ್ಲಿ ಎ. ಅಣ್ಣಪ್ಪಗೌಡ ಎಂಬ ದಸ್ಕತಿನ ಬದಲಿಗೆ ಎ. ಸೋಮಪ್ಪಗೌಡ ಎಂತ ಓದತಕ್ಕದ್ದು.**

ವಿವಿಧ ವಿಷಯಗಳು.

ಈ ಘೋರಯುದ್ಧದಲ್ಲಿ ಸೇರಿರುವ ದೇಶಗಳಲ್ಲಿ ಇಂಗ್ಲೆಂಡ್ ದೇಶದ ನೌಕಾಬಲವೇ ಪ್ರಬಲವಾದದ್ದು ಅದು ಯುದ್ಧದ ಜಹಜೆಂಬದಾಗಿಯೂ, ಕ್ರೂಜರ್ ಎಂಬದಾಗಿಯೂ, ಡಿಸ್ಟ್ರಾಯರಗಳೆಂಬದಾಗಿಯೂ, ಟಾರ್ಪಿಡೊ ಬೋಟ್ಸ್ ಎಂಬದಾಗಿಯೂ, ಸಬ್‌ಮೇರಿನ್ ಎಂಬದಾಗಿಯೂ, ಐದು ಭಾಗವಾಗಿ ವಿಂಗಡಿಸಲ್ಪಟ್ಟಿದೆ.

ಯುದ್ಧದ ಜಹಜ — ಇದ ನೌಕಾಬಲದಲ್ಲೆಲ್ಲಾ ಬಹಳ ಮುಖ್ಯವಾದದ್ದು ಈಗ ಕಟ್ಟಲ್ಪಟ್ಟ ಹಡಗುಗಳೆಲ್ಲಾ ಡ್ರೆಡ್‌ನಾಟ್ ಎಂಬ ಹಡಗನ್ನು ಅನುಸರಿಸಿ ಕಟ್ಟಲ್ಪಟ್ಟದ್ದಾಗಿವೆ ಈ ರೀತಿ ಜಹಜು ನಿರ್ಮಿಸುವುದು ೧೯೦೬ನೆಯ ವರ್ಷದಿಂದ ಈಚೆಗೆ ಬಂದುದು ಜಹಜಿನಲ್ಲಿ ಸಾಧಾರಣವಾಗಿ ಹತ್ತು ಹನ್ನೆರಡು ಅಥವಾ ೧೩ವರೆ ಅಂಗುಲ ಬಾಯುಳ್ಳ ಫಿರಂಗಿಗಳೂ, ೪ ಅಂಗುಲ ಬಾಯುಳ್ಳ ಫಿರಂಗಿಗಳೂ ಇವೆ, ಮತ್ತು, ಕೆಲವು ೧೬ರಿಂದ ೨೦ರ ವರೆಗೂ ಇವೆ. ಈಚೀಚೆಗೆ ಈ ಡ್ರೆಡ್‌ನಾಟಿಗಿಂತಲೂ ವಿಸ್ತಾರವಾದ ಹಡಗುಗಳು ಕಟ್ಟಲ್ಪಟ್ಟಿವೆ ಇವುಗಳಲ್ಲಿ ಐರನ್‌ಡ್ಯೂಕ್ ಎಂಬವುದೇ ಮುಖ್ಯವಾದುದು. ಇದರಲ್ಲಿ ೧೦-೧೩ವರೆ ಅಂಗುಲದ ಫಿರಂಗಿಗಳೂ, ೧೬-೬ ಅಂಗುಲದ ಫಿರಂಗಿಗಳೂ ಇವೆ ಈ ಹಡಗುಗಳು ಘಂಟೆಗೆ ಸುಮಾರು ೨೪ ಮೈಲಿಗಳಂತೆ ವೇಗವಾಗಿ ಹೋಗುವುವು ಅವುಗಳ ತೂಕವು ೧೬,೦೦೦ ಟನ್ನುಗಳಿಂದ ೨೫,೦೦೦ ಟನ್ನುಗಳವರೆಗೂ ಇದೆ ಈ ಹಡಗುಗಳ ಶಕ್ತಿಯು ಅವುಗಳ ದೊಡ್ಡದೊಡ್ಡ ಫಿರಂಗಿಗಳಲ್ಲಡಗಿದೆ ೧೯೧೦ನೆಯ ಇಸವಿಯಲ್ಲಿ ಈ ಫಿರಂಗಿಗಳ ಪರಿಮಾಣವು ೧೩ ಅಂಗುಲದಿಂದ ೧೪-೧೫ರ ವರೆಗೂ ಹೆಚ್ಚಿಸಲ್ಪಟ್ಟಿತು ಮತ್ತು ೧೬ ಅಂಗುಲದ ಫಿರಂಗಿಗಳೂ ಕೂಡ ಈ ಜಹಜುಗಳ ಮೇಲೆ ಇಡಲ್ಪಡಬೇಕೆಂದು ನೌಕಾಧಿಪತಿಗಳಿಗೆ ಆಲೋಚನೆಯಿದೆ ಫಿರಂಗಿಯ ಉದ್ದವು ಅದರ ಅಗಲಕ್ಕೆ ೪೫ರಷ್ಟು ಹೆಚ್ಚಿದೆ. ೧೫ ಅಂಗುಲದ ಒಂದು ಫಿರಂಗಿಯ ತೂಕವು ೯೬ ಟನ್ನುಗಳು. ಅದು ಎಸೆಯಬಲ್ಲ ಗುಂಡಿನ ತೂಕವು ೧೯೫೦ ಪೌಂಡುಗಳು

ಈ ಫಿರಂಗಿಗಳ ವೃದ್ಧಿಯೊಡನೆಯೇ ಜಹಜುಗಳ ರಕ್ಷಣಾರ್ಥವಾದ ಕಬ್ಬಿಣದ ಕವಚವೂ ಕೂಡ ಹೆಚ್ಚಿಸಲ್ಪಟ್ಟಿದೆ. ಡ್ರೆಡ್‌ನಾಟಿನ ಗುಂಪಿಗೆ ಸೇರಿದ ಜಹಜುಗಳ ಕವಚವು ೧೦ ಅಥವಾ ೧೨ ಅಂಗುಲ ದಪ್ಪವಾಗಿದೆ ಐರನ್‌ಡ್ಯೂಕಿನ ಜಾತಿಗೆ ಸೇರಿದ ಹಡಗುಗಳ ಕವಚವು ೧೨ ಅಂಗುಲ ದಪ್ಪವಾಗಿದೆ.

ಕ್ರೂಜರ್‌ಗಳು

ಇವುಗಳು ವೇಗಕ್ಕೋಸ್ಕರ ಪ್ರಸಿದ್ಧವಾಗಿವೆ. ಇವು ಯುದ್ಧದ ಜಹಜುಗಳಿಗಿಂತಲೂ ಸಣ್ಣವಾಗಿಯೂ, ಅವುಗಳಷ್ಟೇ ಫಿರಂಗಿಗಳನ್ನುಳ್ಳವಾಗಿಯೂ ಇವೆ. ಯುದ್ಧದಲ್ಲಿ ಶತ್ರುವು ದುರ್ಬಲವಾಗಿರುವ ಕಡೆಯಲ್ಲಿ ವೇಗವಾಗಿ ನುಗ್ಗುವುದಕ್ಕೂ, ಶತ್ರುವಿನ ಹಡಗನ್ನು ಅಟ್ಟಿಕೊಂಡು ಹೋಗುವುದಕ್ಕೂ, ಸ್ವದೇಶದ ದಡವನ್ನು ಕಾಯುವುದಕ್ಕೂ, ಇವು ಬಹಳ ಉಪಯೋಗಕರವಾಗಿವೆ.

ಟಾರ್ಪೆಡೋ ಬೋಟುಗಳು ಮತ್ತು ಡಿಸ್ಟ್ರಾಯರ್‌ಗಳು

ಈ ಎರಡು ಜಾತಿಯ ಹಡಗುಗಳು, ಬಹಳ ಸಣ್ಣವಾಗಿಯೂ, ಸಣ್ಣ ಸಣ್ಣ ಫಿರಂಗಿಗಳನ್ನೊಳಗೊಂಡವಾಗಿಯೂ, ಟಾರ್ಪೆಡೋ ಎಂಬ ನೀರಿನೊಳಗೆ ಎಸೆಯಬಹುದಾದ ಸಿಡಿಮದ್ದಿನ ಯಂತ್ರವುಳ್ಳವುಗಳಾಗಿಯೂ ಇವೆ. ಇವುಗಳು ವೇಗಕ್ಕೋಸ್ಕರ ಮುಖ್ಯವಾಗಿವೆ ಇವು ಶತ್ರುವನ್ನು ಹಿಂಸಿಸುವುದಕ್ಕೆ ಬಹಳ ಅನುಕೂಲವಾಗಿವೆ

ಜಲಾಂತರ್ಗಾಮಿಗಳಾದ ಹಡಗುಗಳು

ಇವು ನೀರಿನೊಳಗೇ ಹೋಗಿ ಶತ್ರುವಿನ ಹಡಗನ್ನು ಟಾರ್ಪೆಡೊ ಮೂಲಕ ಮುಳುಗಿಸಬಲ್ಲವು. ಆದ್ದರಿಂದ ಇವು ಬಹಳ ಮುಖ್ಯವಾಗಿವೆ

ವಿಮಾನಗಳು.

ಇವುಗಳು ಶತ್ರುವಿನ ಚಲನೆಯನ್ನು ತಿಳಿಯುವುದಕ್ಕೂ, ನೌಕಾಬಲವನ್ನು ಕಾಯುವುದಕ್ಕೂ ಉಪಯೋಗವಾಗಿವೆ. ಆದ್ದರಿಂದ ಎಲ್ಲಾ ದೇಶಗಳೂ ಇವುಗಳನ್ನು ಹೆಚ್ಚಿಸುತ್ತವೆ.

ಇಂಗ್ಲೀಷಿನವರ ನೌಕಾಬಲದ ವಿವರ. — ಯುದ್ಧದ ಜಹಜುಗಳು ೭೩. ಕ್ರೂಸರ್‌ಗಳು ೧೦೯. ಡಿಸ್ಟ್ರಾಯರುಗಳು ೧೬೨. ಟಾರ್ಪೆಡೊ ಬೋಟುಗಳು ೩೬. ಜಲಾಂತರ್ಗಾಮಿಗಳು ೯೧.

ಮನುಷ್ಯನು ಹತ್ತು ದಿವಸಗಳ ವರೆಗೆ ನಿದ್ರೆಯಿಲ್ಲದೆ, ಏಳು ದಿನಗಳ ತನಕ ನೀರು ಕುಡಿಯದಿದ್ದರೆ, ಐದು ನಿಮಿಷಗಳ ತನಕ ಗಾಳಿ ಇಲ್ಲದಿದ್ದರೆ ಸಾಯುತ್ತಾನೆಂದು ಡಾಕ್ಟರರು ಅಭಿಪ್ರಾಯಪಡುತ್ತಾರೆ

೨೦ ಸಾವಿರ ಕುದುರೆಸೇನಿಕರ ಗುಂಪಿಗೆ ಒಂದು ಡಿವಿಜನ್ ಎಂತಲೂ ಇಂಥಾ ೨ ಡಿವಿಜನುಗಳಿಗೆ ಆರ್ಮಿಕೋರ್ ಎಂತಲೂ ಹೇಳುತ್ತಾರೆ ಈ ಸೈನಿಕರನ್ನು ಒಬ್ಬರಹಿಂದೆ ಒಬ್ಬರನ್ನು ಸಾಲಾಗಿ ನಿಲ್ಲಿಸಿದರೆ ೪೨ ಮೈಲು ವಿಸ್ತಾರವಾದ ಒಂದು ಸಾಲು ನಿರ್ಮಾಣವಾಗುವದು

ಫ್ರಾನ್ಸ್ ದೇಶದ "ಲುಯಿಲ್ ಸ್ಟೈಷನ್" ಎಂಬ ಪತ್ರಿಕೆಯಲ್ಲಿ ಒಂದು ಪುಟ ಪ್ರಕಟಣೆಯನ್ನು ಒಂದಾವರ್ತಿ ಮುದ್ರಿಸುವದಕ್ಕೆ ೨೦೫೦ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ. ಈ ಪತ್ರಿಕೆಯ ೧೭ ಲಕ್ಷ ಪ್ರತಿಗಳು ಪ್ರಕಟವಾಗುವವು. ಇಂಗ್ಲೆಂಡಿನ ಡೈಲಿಮೈಲ್ ಪತ್ರಿಕೆಯಲ್ಲಿ ಒಂದು ಪುಟ ಪ್ರಕಟಣೆಯನ್ನೇ ಒಂದಾವರ್ತಿ ಪ್ರಕಟಿಸುವುದಕ್ಕೆ ೫೨೫೦ ರೂಪಾಯಿ ತಗೆದುಕೊಳ್ಳುತ್ತಾರೆ. ಅಮೇರಿಕ ದೇಶದ ಸಟರ್‌ಡೇ ಇವನಿಂಗ್‌ಪೋಸ್ಟು ಎಂಬ ಪತ್ರಿಕೆಯಲ್ಲಿ ಪ್ರಕಟಣೆಯನ್ನು ಒಂದಾವೃತ್ತಿ ಪ್ರಕಟಿಸುವದಕ್ಕೆ ೧೫,೦೦೦ ರೂಪಾಯಿ ಕೊಡಬೇಕು. ಈ ಪತ್ರಿಕೆಯ ೨೦ ಲಕ್ಷ ಪ್ರತಿಗಳು ಮುದ್ರಿಸಲ್ಪಡುವವು

ಜೀನಸು ಧಾರಣೆ. (ರಖಂ)

ಹೊಸ ಮುಸ್ತಿ ಅಕ್ಕಿ .	5—2—0	5—10—0
ಹೊಸ ಗಾಡಿ ರಾಶಿ ,, .	4—5—0	4—6—0
ಹೊಸ ಗುಡ್ಡು ,, .	4—10—0	4—14—0
ಅವ್ವಲ್ ಬೆಳ್ತಿಗೆ ,, .	5—6—0	5—10—0
ಗುಡ್ಡು ಬೆಳ್ತಿಗೆ ,, .	5—1—0	5—2—0
ರಂಗೂನು ಬೆಳ್ತಿಗೆ ಗೋಣಿ ೧ರ	7—12—0	8—4—0
ಗೋಧಿ ಗೋಣಿ ೧ರ ...	13—0—0	14—0—0
ಹುರುಳಿ ಗೋಣಿ ೧ರ ...	6—0—0	7—2—0
ಕಡಲೆ ಗೋಣಿ ೧ರ, ,, .	9—4—0	10—8—0
ತೊಗರಿ ಗೋಣಿ ೧ರ ...	10—0—0	11—8—0
ತೊಗರಿ ಬೇಳೆ ಗೋಣಿ ೧ರ.	12—8—0	16—0—0
ಉದ್ದು ಗೋಣಿ ೧ರ		10—0—0
ಉರುಬೆಲ್ಲ ಖಂಡಿ ೧ರ		70—0—0
ಉಪ್ಪು ಗೋಣಿ ೧ರ . .	3—10—0	3—11—0
ಕೊಬ್ರಿ ಖಂಡಿ ೧ರ . .	75—0—0	78—0—0
ಕೊಬ್ರಿ ಹಿಂಡಿ ಖಂಡಿ ೧ರ		16—0—0
ಎಳ್ಳಿಂಡಿ ಖಂಡಿ ೧ರ .	25—0—0	32—4—0
ಕೊಬ್ರಿ ಎಣ್ಣೆ ಮುಡಿ ೧ರ .	5—14—0	6—0—0
ಎಳ್ಳೆಣ್ಣೆ ಮುಡಿ ೧ರ(ಕುದಾಸನ)	3—10—0	3—14—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ . . .		5—0—[illegible]
ಮೋರಿಸ್ ಸಕ್ಕರೆ ಮುಡಿ ೧ರ		4—0—[illegible]
ಕಾಫಿ ಖಂಡಿ ೧ರ.	220—0—0.	241—0—[illegible]
ಹೊಸಬೆಳಗೋಟು ಖಂಡಿ ೧ರ	94—0—0	98—0—0
ಹೊಸ ಗೇರುಬೀಜ ಮುಡಿ ೧ರ . . .		1—14—0
ಕಬ್ಬಿಣ ಖಂಡಿ ೧ರ		50—0—0
ತಾಂಬ್ರ ತಗಡುಮಣ ೧ರ		19—0—0
ತಾಂಬ್ರ ಪಾತ್ರೆಗಳು ಮಣ ೧ರ		22—0—0
[illegible] ೧ರ		12—12—0

BOX LOCKS.



PADLOCKS.

...ರಣೆ ಸುಲಭ! **ಆಲಿಗರ್ ಬೀಗಗಳು.** ಧಾರಣೆ ಸುಲಭ!

ಭದ್ರವಾಗಿಯೂ, ಭಾರವಾಗಿಯೂ ಇರುವುದು. ಒಂದರ ಬೀಗದಕ್ಕೆ ಮತ್ತೊಂದಕ್ಕೆ ಆಗುವ ದಿಲ್ಲ. ನೋಡುವುದಕ್ಕೆ ಅಂದವಾಗಿಯೂ ಇರುವುದು. ಇದೇ ಮಾದರಿ ಬೀಗಗಳನ್ನು ಇಂಜಿನಿಯರ್ ಇಲಾಖೆಗಳಿಗೂ, ಬ್ಯಾಂಕುಗಳಿಗೂ, ಸರಕಾರಿ ಆಫೀಸುಗಳಿಗೂ ಸಪ್ಲೈ ಮಾಡಿದೆ.

ನಾಲ್ಕು ಚಕ್ರಗಳಿರುವ ಬೀಗಗಳು.

ನಂಬ್ರ	1	2	3	4	5
	0—12—0	0—15—0	1—4—0	1—10—0	.....

ಆರು ಚಕ್ರಗಳಿರುವ ಬೀಗಗಳು.

1—2—0 1—8—0 2—4—0 3—0—0 3—8—0

...ಲ್ಲರ್ ಬೀಗಗಳು.

—04—00—5—0ಮು 0—6—0 0—8—0 0—10—0

ಟ್ರಂಕುಗಳಿಗೆ ಹಾಕುವ ಕೊಂಡಿ ಬಗ್ಗಿಸಿರುವ ಬೀಗ ೧ಕ್ಕೆ 0—13—0

೩, ೪, ೫ನೇ ನಂಬರು ಬೀಗಗಳನ್ನು ಬಾಗಲುಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು. ಏಜೆಂಟರುಗಳಿಗೆ ಕಮಿಷನ್ ದೊರೆಯುತ್ತೆ. ಹಾಸಲು ಪ್ರತ್ಯೇಕ.

ಮರದ ಪೆಟ್ಟಿಗೆಗಳಿಗೂ, ಮೇಜುಗಳಿಗೂ, ಬೀರೂಗಳಿಗೂ ಹಾಕುವ ೪ ಚಕ್ರಗಳಿರುವ ಬೀಗಗಳು ೧ಕ್ಕೆ 1—8—0, 1—12—0.

ವಿಳಾಸ:— ಎಚ್. ಎನ್. ರಾವ್ ಅಂಡ್ ಬ್ರದರ್ಸ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶಾಶ್ವತವಾದ ಆರೋಗ್ಯವನ್ನು

ಹೊಂದುವದಕ್ಕೆ ಸುಲಭವಾದ ಮಾರ್ಗವು

ಮದನಮಂಜರಿ ಮಾತ್ರೆಗಳು

ಉಪಯೋಗಿಸುವದೇ ಆಗಿರುವದು. ಈ ಮಾತ್ರೆಗಳು ಅಜೀರ್ಣವು ಮಲಬಂಧ, ಮನೋವ್ಯಥೆ, ಜ್ಞಾಪಕಶಕ್ತಿ ಇಲ್ಲದಿರುವದು, ನರಗಳ ಬಲಹೀನತೆ, ಅಶಕ್ತಿ, ಸ್ವಪ್ನಸ್ಖಲಿತ, ಬಹುಮೂತ್ರ, ಮೂತ್ರಕೋಶ ಸಂಬಂಧವಾದ ವ್ಯಾಧಿಗಳು, ನಪುಂಸಕತ್ವ ಮುಂತಾದ ವ್ಯಾಧಿಗಳನ್ನು ಶೀಘ್ರದಲ್ಲಿಯೇ ಬೇರು ಸಹಿತವು ಕಿತ್ತು ಹಾಕಿ ಪುರುಷರಿಗೆ ಸಂತತ ಪುರುಷತ್ವವನ್ನು ಕೊಡುವವು ಇದು ಸಾಟಿಯಿಲ್ಲದ ಟಾನಿಕ್ಕು ಔಷಧಿಯಾಗಿರುತ್ತದೆ. ಕಳೆದ 25 ವರುಷ ಕಾಲದಲ್ಲಿ ಸಾವಿರಾರು ರೋಗಿಗಳನ್ನು ಸ್ವಸ್ಥಪಡಿಸಿದೆ. ನಿಮ್ಮನ್ನು ಕೂಡ ಸ್ವಸ್ಥ ಮಾಡುವದು. 40 ಮಾತ್ರೆಗಳ ಡಬ್ಬಿ ಕ್ರಯ ರೂ. 1—0—0.

ಉಚಿತ ಕ್ರಯವು ಇಲ್ಲ ಹಾಸಲು ಇಲ್ಲ

144 ಪುಟಗಳುಳ್ಳ ವೈದ್ಯಸಾರಸಂಗ್ರಹವಾದ

ವೈದ್ಯವಿದ್ಯ

ಪುಸ್ತಕದಲ್ಲಿ ಶಾಶ್ವತವಾದ ಆರೋಗ್ಯವನ್ನು ಪಡೆಯಲು ಅತ್ಯಾವಶ್ಯವಾದ ವಿಷಯಗಳು ಭರಿತವಾಗಿವೆ. ನಿಮ್ಮ ವಿಳಾಸವನ್ನು ತಿಳಿಸಿದರೆ ನಿಮಗೆ ಒಂದು ಪ್ರತಿ ಉಚಿತವಾಗಿ ಕಳುಹಿಸಲ್ಪಡುವದು.

ರಾಜವೈದ್ಯ ನಾರಾಯಣಜಿ ಕೇಶವಜಿ

20 ಚೀನಾ ಬಜಾರ್ ರೋಡ್,

ಮದರಾಸು.

ಪ್ರಾಜ್ಞರ ಪಂಡಿತ... ಪಂಡಿತರ

ಸಿದ್ಧೌಷಧಗಳು

೧

ಲೋಕಾಪವಯಹರು ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ... ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ... ಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊದೆತ (ಬಾರ), ಮೈ ... ವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲು ನೋವು, ಕೆಮ್ಮಲು, ನೆಗಡಿ, ... ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಾಯಿ ಕೆಟ್ಟು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ಆಸ್ಪದಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸಂಪಾದಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ... ಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೈಶಕ್ಯಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ. 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ.



೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನಿಯಾಗಿದೆ, ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಕೂಡಲೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:—"ಶ್ರೀ ಸೀತಾರಾಘವ ವೈದ್ಯಶಾಲಾ"

ಮೈಸೂರು.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧. ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರೆಯಾಗಿ ಗುಣಪಡಿಸುವದು. 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0.

೨. ಶತಮೂಲಿಕಾ ಅಮರಸಂಜೀವನಿ—ಈ ಟೋನಿಕ್ ದ್ರಾವಕವು ಎಲ್ಲಾ ಅಂಗಗಳಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ 1—0—0.

೩. ಬಾಲಸಂಜೀವನಿ—ಮಧುರ ಟೋನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗಿ ಶುಕ್ಲ ವರ್ಧಮಾನ ಚಂದ್ರನಂತೆ ಬೆಳಗಿಸುತ್ತದೆ. ಬಾಟ್ಲಿ 1ಕ್ಕೆ 0—12—0.

೪. ವಸಂತ ಕುಸುಮಾಕರ.—ಈ ಸುವಾಸಿಕ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ. ಬಾಟ್ಲಿ 1ಕ್ಕೆ 1—0—0

೫. ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಷ್ಟವ್ರಣಗಳನ್ನು 7-8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4—0—0.

೬. ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳು, ಇಲಿ ಇತ್ಯಾದಿ ಸರ್ವ ... ವಿಷಗಳಿಗೆ ಸಂಜೀವನವಾಗಿರುತ್ತದೆ. ಅನುಭವಸಿದ್ಧ 2—0—0.

೭. ಆನಂದವನವಿಲಾಸ—ಇದು ಡಯಾಬಿಟಿಸ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5—0—0.

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಶಾಸ್ತ್ರ ಪ್ರಯೋಗಗಳಿಂದ ತಯಾರಿಸಿದ ಔಷಧ ಮಾತ್ರೆಗಳು, ಲೇಹ ಚೂರ್ಣಗಳು, ತೈಲ ಘೃತಗಳು, ಆಸವಾರಿಷ್ಟಗಳೂ ತುಂಬಾ ಇರುತ್ತವೆ. ಕ್ರಯಪಟ್ಟಿ ... ನಮ್ಮ ಕೆಟಲಗನ್ನು ತರಿಸಿಕೊಳ್ಳಿರಿ. ಏಜಂಟರು ಬೇಕು. ... ಕಮಿಷನ್ ಕೊಡಲಾಗುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಸವಿನುಡಿಯ ಗ್ರಂಥಮಾಲೆ.

೧. ಪ್ರಶ್ನೋತ್ತರ ಲೇಖ್ಯಬೋಧಿನಿ ಲೋಕವ್ಯವಹಾರವನ್ನು ಬೋಧಿಸುವುದು ... . ೧—೬—೦

೨ The Self English Study
ದಿ ಸಲ್ಫ್ ಇಂಗ್ಲಿಷ್ ಸ್ಟಡಿ
ಆಂಗ್ಲಭಾಷಾ ಪ್ರವೇಶದಾಯಿನಿ — ೧—೩—೦

೩ The Self English Study
ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ
ಆಂಗ್ಲಭಾಷಾ ಪ್ರವೇಶದಾಯಿನಿ — ೧—೩—೦

೪ The Self English Study
ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ
ಆಂಗ್ಲಭಾಷಾ ಪ್ರವೇಶದಾಯಿನಿ — ೧—೩—೦

ಇವು ಮೂರು ಪುಸ್ತಕಗಳೂ ಬೋಧಕರ ಸಹಾಯವಿಲ್ಲದೆ ಇಂಗ್ಲಿಷ್‌ಭಾಷೆಯನ್ನು ತಿಳಿಸುವುದು.

೫ ಕಥಾ ಸರಿತ್ಸಾಗರ (ಪೂರ್ವಭಾಗ) ಪಾರ್ವತೀ ದೇವಿಗೆ ಪರಮೇಶ್ವರನು ಹೇಳಿದ ದಿವ್ಯವಾದ ಕಥೆಗಳು ೧-೧೨—೦

೬ ಮಾಧವೀ ಕಂಕಣ (ಬೆಂಗಾಳಿ ನಾವಲು) ಕೀರ್ತಿಶೇಷರಾದ ರಾಮೇಶ ಚಂದ್ರದತ್ತ ಮಹಾಶಯ ರಚಿತ ಅಗತ್ಯ ಓದತಕ್ಕದ್ದು ೧—೮—೦

೭ ಭಾಷಾನಿಧಿ ಒಂಬತ್ತು ಲಿಪಿ ಮತ್ತು ಒಂಬತ್ತು ಭಾಷೆಗಳನ್ನು ಬೋಧಕರ ಸಹಾಯವಿಲ್ಲದೆ ಕಲಿಸುವುದು.

- ೧ ವರ್ಣ ಪರಿಜ್ಞಾನ (೧ನೆ ಪುಸ್ತಕ) ೧-೧೨—೦
- ೨ ಶಬ್ದ ಪರಿಜ್ಞಾನ (೨ನೆ ಪುಸ್ತಕ) . ೧-೧೨—೦
- ೩ ವಾಕ್ಯ ಪರಿಜ್ಞಾನ (೩ನೆ ಪುಸ್ತಕ) ೧-೧೨—೦

೮ ಶಕ್ತಿ (ಬಂಗಾಳಿಯ ನಾವಲು) ಓದುವುದಕ್ಕೆ ಬಲು ಚೆನ್ನಾಗಿದೆ ೦ ೧೨—೦

೯ ಬೂವಿಯ ಆಳತೆ ಬೋಧಕರ ಸಹಾಯವಿಲ್ಲದೆ ಈ ಶಂಕುಬೋಜಣೆಯನ್ನು ಕಲಿಸುವುದು ... ೦-೧೨-೦

೧೦	ಸಾವಿತ್ರೀ (ಬಂಗಾಳಿಯ ನಾವಲು)	೦—೪—೦
೧೧	ಸತೀ ದೇವಿ (ಬಂಗಾಳಿಯ ನಾವಲು)	೦—೪—೦
೧೨	ದಮಯಂತಿ. (ಬಂಗಾಳಿಯ ನಾವಲು) ..	೦—೪—೦
೧೩	ಸಂಯುತೆ (ಬಂಗಾಳಿಯ ನಾವಲು)	೦—೪—೦
೧೪	ಶ್ರೀ ವಿವೇಕಾನಂದ ಸ್ವಾಮಿ (ಸಚಿತ್ರ ಚರಿತ್ರೆ)	೦—೪—೦
೧೫	ಶ್ರೀ ವಿವೇಕಾನಂದೋಪನ್ಯಾಸ (ಹಿಂದೂಮತ)	೦—೪—೦
೧೬	ತಾರಾನಾಥ (ಜೀವನ ಚರಿತ್ರೆ)	೦—೪—೦
೧೭	ದಾದಾಭಾಯಿ ನೌರೋಜಿ	೦—೧—೦
೧೮	ಸರ್ ಟಿ ಮಾಧವ ರಾವ್	೦—೧—೦
೧೯	ಈಶ್ವರ ಚಂಧ ವಿದ್ಯಾಸಾಗರ	೦—೧—೦
೨೦	ರಾಮಮೋಹನರಾಯಿ ..	೦—೧—೦

ಭಾರತಿ ಸಂಪಂಗಿರಾಮು,
೪೨ ಸಿ ಬೀದಿ ಕೋಟೆ, ಬೆಂಗಳೂರು ಸಿಟಿ.

ಕೊಡ್‌ಲಿವರ್ ಎಣ್ಣೆ.

ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ತೆಗೆಯಲ್ಪಡುವುದು ಇದರಿಂದ ದೊರಕತಕ್ಕ ಲಾಭವಾದರೋ ಇದರ ಲಯ ಎಣ್ಣೆಯ ಅಂಶವು ಶರೀರಕ್ಕೆ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಆದ್ದ ಕೊಡಲೀವರ್ ಎಣ್ಣೆಯೂ ಅದರಿಂದ ತೆಗೆಯ್ಪಟ್ಟ ಬೇರೆ ಔಷಧಗಳು ಕೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗದಾದುದರಿಂದ ಅವನ್ನು ಸೇವಿಸುವವರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಫೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಆಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ತಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ಫೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ ಈ ಮಿಶ್ರಣವು ಸುರಸವಾಗಿರುತ್ತದೆ ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ದಾಟ್ಲಿ 1ಕ್ಕೆ 3—4—0. ಅರ್ಧ ಬಾಟ್ಲಿಗೆ 1—12—0.

ಡಿ. ಉಲನ್ ಮಾರ್ಕ್. ಮಂಗಳೂರು,
ದಕ್ಷಿಣ ಕನ್ನಡ

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ

ಊದಬತ್ತಿಗಳು 4 ರೂ. ತೂಕದ ಸೇರು 1ಕ್ಕೆ ರೂ. 12-0-0, 5-0-0, 3-0-0. 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0.

ಸುಗಂಧಿ ಕಾರ್ಡು 1ಕ್ಕೆ 0—1—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0 **ಸುವಾಸನೇ ಸುಣ್ಣ** ಸೀಸೆ 1ಕ್ಕೆ 0-2-0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

M. S. RAO & CO.,

BOOK-SELLERS ETC.,

AVENUE ROAD, BANGALORE CITY.

Please note.—We have changed our address from—M Subba Rao Bros, Book-Sellers, Shankarapur, Bangalore City to—

M. S. RAO & Co.,

Book Sellers, Stationers & Commission Agents,

AVENUE ROAD, BANGALORE CITY.

ಯಂ. ಯಸ್. ರಾವ್ ಕಂಪೆನಿ.,

ಬುಕ್‌ಸೆಲರ್ಸ್, ಸ್ಟೇಷನರ್ಸ್ ಮತ್ತು ಕಮಿಷನ್ ಏಜಂಟ್ಸ್,

ಅವಿನ್ಯೂರೋಡ್, ಬೆಂಗಳೂರು ಸಿಟಿ.

ಈವರಿವಿಗೆ ಇದ್ದ ಯಂ ಸುಬ್ಬರಾವ್ ಬ್ರದರ್ಸ್, ಶಂಕರಪುರಂ, ಬೆಂಗಳೂರು ಸಿಟಿ— ಎಂಬ ವಿಳಾಸವನ್ನು ಮೇಲ್ಕಂಡಂತೆ ಬದಲಾಯಿಸಿದ್ದೇವೆ.

ನಮ್ಮಲ್ಲಿ ಎಲ್ಲಾ ವಿಧವಾದ ಕನ್ನಡ ಕಥೆಗಳೂ, ಬಿ. ವೆಂಕಟಾಚಾರ್ಯರಿಂದ ರಚಿತವಾದ ನಾವಿಲ್‌ಗಳೂ, ಗವರ್ನಮೆಂಟ ಸ್ಕೂಲು ಪುಸ್ತಕಗಳೂ ದೊರೆಯುತವೆ. ಪುಸ್ತಕದ ಪಟ್ಟಿ ಹೊಸದಾಗಿ ಪ್ರಿಂಟಾಗಿದೆ. ಉಚಿತ.

M. S. RAO & Co.

ಅನುಭವಸಿದ್ಧವಾದ ವನೌಷಧಗಳು

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳ ೮ ಪಾಲ್ಯು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ ೩ ಬಾಟ್ಲಿಗೆ ೨ ರೂ. ೧೦ ಆಣೆ.

೨ ಪ್ರಮೇಹರಿಪು ಬಿಂದು ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು ಬಾಟ್ಲಿಗೆ ೨ ೮-೦

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪ ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ಕೃಷ್ಟವು. ಪೌಷ್ಟಿಕವಾಗಿದೆ ರಾತಲಿಗೆ ೨ ರೂ

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ

ತಮ್ಮ ವಿಳಾಸ.—ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦ ಕಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧ ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ. ೬ ಆಣೆ.

೧೨ ಗಜಕರ್ಣ ಕೇಸರಿ ಮುಲಾಮು. ಕುಟುಕಜ್ಜಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯೂ ಇಲ್ಲ ಸುವಾಸಿಕವಾಗಿದೆ. ಡಬ್ಬಿಗೆ ೪ ಆಣೆ.

೧೩ ನವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುವಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಖರ್ಚು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಲ್ಲಿಯೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು

B. M. Nath & Co., *Ayurvedic Chemists,*

Vepery Post, MADRAS.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಮಠ ಮಿಶನ್ ಚೀಲುಗಳೂ, ಬೇರೆ ಅನೇಕ ತರದ ಸ್ವದೇಶಿ ಚೀಲ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ, ಪೆಬ್ಲ್ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನ್ನಾನ್ನೂರು ಶೀರೆಗಳೂ, ಚೀಲುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,

ಹಂಪನ್‌ಕಟ್ಟೆ.. ಮಂಗಳೂರು

NOTICE.

Stany Brothers,

Candle Garden, Mangalore,

ಬಲ್ಮಠ ಕದ್ರಿ ರಸ್ತೆ ಬಳಿ ನಮ್ಮ "ಕೆಂಡಲ್ ಗಾರ್ಡನ್" ಎಂಬ ಸ್ಥಳದಲ್ಲಿ 1908ನೇ ಇಸವಿ ಆರಂಭದಿಂದ ಈ ವರೆಗೆ ನಡೆದು ಬಂದಿರುವ ಯಂತ್ರದಿಂದ ಹುರಿದು ತಯಾರಿಸುವ ನಮ್ಮ ಕಾಫಿ ಪುಡಿ ವ್ಯಾಪಾರವು ನಮ್ಮ ವಾಚಕರಿಗೆ ಗೋಚರವಾಗದ ಕಾರಣ ಈಗ ನಾವು ಪ್ರಕಟಿಸಿರುತ್ತೇವೆ.

ನಮ್ಮಲ್ಲಿ ನಾನಾ ಬಗೆಯ ಶಾಲಾ ಹುಡುಗರಿಗೆ ಅವಶ್ಯವುಳ್ಳ ಕೋಪಿ ಬುಕ್ಕು ಇತ್ಯಾದಿ ಶಾಲಾ ಪುಸ್ತಕಗಳೂ, ಸೊಗಸಾದ ಅನೇಕ ವಿಧದ ತಿರುಚಿನಾಪಳ್ಳಿ ಚುರುಟುಗಳೂ, ನೀಲಗಿರಿ ಚಾ, ಇತರ ಸಾಮಾನುಗಳೂ ಕೂಡ ವ್ಯಾಪಾರಸ್ಥರಿಗೆ ಸುಲಭವಾದ ಕ್ರಯದಲ್ಲಿ ದೊರೆಯುತ್ತದೆ.

ಕಾಫಿ ಪುಡಿಯು ರಾತ್ಲು ಒಂದಕ್ಕೆ 0—10—0ಯಿಂದ 0—5—0 ದರದ ವರೇಗೂ ದೊರೆಯುತ್ತದೆ.

ಇತರ ಅನುಭವಗಳಿಗೆ ನಮ್ಮ ಮೆನೇಜರರ ಮೇಲಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

Piedade Pinto,

Manager.

150 ಪುಟಗಳ ಪುಸ್ತಕವು.

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿಸಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುಷ್ಯವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಅತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ

ಶಮ್ಮ ಏಜಂಟರು — 1 ಮೆಸ್ಸರ್ಸ್. ರಫಯೆಲ್ ಎಂಡ್ ಕೊ, ದ್ವಿಬೊಬಿಲ್ಡಿಂಗ್
2 ಜ. ಬಿ. ಕೇರ್ ಬಜಾರ್, ಬೆಂಗಳೂರು. ಮಂಗಳೂರು.

S. U. N. & CO.,

BENARES CITY, U P.

ದೊಡ್ಡ ಕಂಪೆನಿ' ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಂಬೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗನ್ನು ಇನಾಮಾಗಿ ಕಳುಹಿಸಲಾಗುವದು.

ಶಮ್ಮ ವಿಳಾಸ:— ಯಸ್. ಯು. ಯನ್. ಮತ್ತು ಕಂಪೆನಿ, ಕಾಶಿ

ಚಿನ್ನ ಮತ್ತು ಬೆಳ್ಳಿಯ ಮೆಡಲುಗಳನ್ನು ಬಹುಮಾನವಾಗಿ ಪಡೆದ

ಸ್ಟೀವನ್ ಎಂಡ್ ಸನ್

ಬಿಸ್ಕುಟು ವ ಕೇಕುಗಳನ್ನು ತಯಾರಿಸುವವರು, ಮಂಗಳೂರು.

ಏಜಂಟರು:—ಅಂತೋನಿ ಎಲ್. ರೇಗೊ, ಸ್ಟೇಟ್ ಏಯ್ಡ್ ಬಜಾರ್, ಕಲ್ಲಿಕೋಟೆ.
ಸ್ವದೇಶಿ ಎಂಪೋರಿಯಮ್, ಸೇಲಂ.
ಕಣಕಾಸಬಾ ಚೆಟ್ಟಿಯಾರ್, ಲಾಲ್‌ಗುಡಿ, ಪುವಲೂರ್, ತಿರುಚಿನಾಪಳ್ಳಿ.
ಎನ್ ಪ್ಯಾಸ್ ಸ್ಟೋರ್, ಮಡಿಕೇರಿ.
ವಿ. ಬಾಲಕೃಷ್ಣ ನ್ಯಾಡು, ಬಿಗ್ ಬಜಾರ್ ಸ್ಟ್ರೀಟ್, ಕೊಯಂಬತ್ತೂರು.
ಆರ್ನೋನ್ ಎಂಡ್ ಏವನ್ಸ್ ಸ್ಟೋರ್, ಉಡ್ಪಿ.

ನೀವು ನಮ್ಮ ಬಿಸ್ಕುಟು ಇತ್ಯಾದಿಗಳಿಂದ ತೃಪ್ತಿಹೊಂದಿದರೆ ಇತರರಿಗೆ ಹೇಳಿರಿ. ಇಲ್ಲವಾದರೆ ನಮಗೆ ತಿಳಿಸಿದರೆ ನಿಮ್ಮನ್ನು ತೃಪ್ತಿಪಡಿಸುವೆವು.

ವಿಳಾಸ.— ಸ್ಟೀವನ್ ಎಂಡ್ ಸನ್ಸ್, ಮಂಗಳೂರು

ಪ್ಲೀಡರ್ ಎಂ. ಮಲ್ಲಾರಾಧ್ಯರಿಂದ ರಚಿತವಾದವುಗಳು.
ವ್ಯವಹಾರ ನಿರ್ಣಯ.

ಕನ್ನಡದ ಲಾ ಪುಸ್ತಕವು.

ತೃತೀಯ ಮುದ್ರಣ, 616 ಪುಟಗಳುಳ್ಳದ್ದು.
ಕ್ರಯ, ದಪ್ಪ ಕಾಗದದ ಪ್ರತಿಗೆ . 1—8—0.
ಕ್ರಯ, ಗ್ಲೇಜ್ ,, ,, ... 2—4—0.
ಪೋಸ್ಟೇಜು ಪ್ರತಿ 1ಕ್ಕೆ 4 ಆಣೆ.

ಇದರಲ್ಲಿ ಹಿಂದೂ ಲಾ, ಮಹಮ್ಮದೀಯ ಲಾ, ಪೀನಲ್‌ಕೋಡು ಇವು ವಿಸ್ತಾರವಾಗಿ ಬರೆಯಲ್ಪಟ್ಟಿವೆ. ಮೈಸೂರು, ಮದ್ರಾಸು, ಬೊಂಬಾಯಿ ದೇಶಗಳಿಗೆಲ್ಲಾ ಸಾಮಾನ್ಯವಾದ ಲಾ. ವ್ಯತಸ್ವತ್ತಿನ ವಿಲೇವಾರಿ, ಅನಾಥ ರಕ್ಷಣೆ ಕ್ರೈಸ್ತರ ವಾರಸ್ಸು ಹಕ್ಕು ಈ ವಿಷಯಕವಾದ ಕಾನೂನುಗಳೂ, ಕ್ರಯ, ದಾನ, ವಿಲ್ಲು, ಹುಂಡಿ, ಗೇಣಿ ಮೊದಲಾದ ಸಮಸ್ತ ವ್ಯವಹಾರವನ್ನೊಳಗೊಂಡಿರುವ 92 ವಿಧದ ದಸ್ತಾವೇಜು ನಮೂನೆಗಳೂ, ಲಾ ಪ್ರಕಾರ ಸಿವಿಲ್ ಕ್ರಿಮಿನಲ್ ಕೋರ್ಟುಗಳಿಗೂ ಪೋಲೀಸಿಗೂ ಬರೆಯುವ ಅರ್ಜಿಗಳ 49 ನಮೂನೆಗಳೂ, ಅವುಗಳ ಸಂಬಂಧವಾದ ವಿಶೇಷ ವಿಷಯ ವಿಚಾರಗಳೂ ಬಹಳ ಚೆನ್ನಾಗಿ ಬರೆಯಲ್ಪಟ್ಟಿವೆ. ಇಷ್ಟು ದೊಡ್ಡ ಉಪಯುಕ್ತವಾದ ಗ್ರಂಥವನ್ನು ಇಷ್ಟು ಕಡಿಮೆ ಬೆಲೆಗೆ ಯಾರೂ ಮಾರುವುದಿಲ್ಲ.

“ಕ್ಷೇತ್ರ ಲಾ”

ಇದು ಕೃಷಿಯ ಅಭಿವೃದ್ಧಿಗಾಗಿಯೂ, ರೈತರ ಸಹಾಯಾರ್ಥವಾಗಿಯೂ ಸರಕಾರದವರು ಕೊಡತಕ್ಕ ಸಾಲ ಮೊದಲಾದ ಸಹಾಯ ವಿಷಯಕವಾದ ಲಾವನ್ನು ವಿವರಿಸುವ ಉಪಯುಕ್ತವಾದ ಪುಸ್ತಕ. ಬೆಲೆ 8 ಆಣೆ. ಪೋಸ್ಟೇಜು 2 ಆಣೆ.

ನಮ್ಮ ವಿಳಾಸ:— ಎಂ ಎಂ ಪಂಡಿತಾರಾಧ್ಯ ಮೈಸೂರು.

Estd 1888. ಸ್ಥಾಪನೆ 1888.

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರಿ ಮತ್ತು ಹಟವಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦—೨೫ ವರ್ಷಗಳ ಹಳತ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿಗಿಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಹಟ್ಟೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮಿ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿಗಿಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಸಾಲಾಮಿಸ್ರಿ"ಯಲ್ಲಿ ತಯಾರಿಸಲ್ಪಟ್ಟಿದ್ದು ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಬೆಂಗ್ಳೂರು ಸಿಟಿ ಟಪ್ಪಾಲು ಆಫೀಸಿನ ಸೇವಿಂಗ್ಸ್ ಬ್ಯಾಂಕಿನಲ್ಲಿ 15—3—15ರಲ್ಲು ಡಿಪಾಜಿಟು ಇಟ್ಟಿರುತ್ತೇವೆ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ ! ಸೇವಿಸಿರಿ !!

ಈ ಸಾಲಾಮಿಸ್ರೀ ಎಂಬದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು ಅನೇಕರು ಉರುಳುಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವ ಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಸಾಲಾಮಿಸ್ರಿಯೇ ಅಥವಾ ಬೇರೆ ತರಹಾದ್ದೇ ಎಂಬುವುದು ತಿಳಿದು ಬರುತ್ತೆ.

ಸಾಲಾಮಿಸ್ರಿ ಮುರಬ್ಬಾವು — ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು — ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವದು
ಸಾಲಾಮಿಸ್ರಿ ಮುರಬ್ಬಾವು — ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು
ಸಾಲಾಮಿಸ್ರಿ ಮುರಬ್ಬಾವು — ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು
ಸಾಲಾಮಿಸ್ರಿ ಮುರಬ್ಬಾವು — ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು
ಸಾಲಾಮಿಸ್ರಿ ಮುರಬ್ಬಾವು — ಮೆದುಳಿಗೆ ಬಲವನ್ನು ಕೊಡುವದು
ಸಾಲಾಮಿಸ್ರಿ ಮುರಬ್ಬಾವು — ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು — ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು — ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು — ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು — ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು — ತಾಂಬ್ರ ಮತ್ತು ಭಂಗಾರ ಭಸ್ಮಕಿಂತಲು ಉತ್ತಮವಾದದ್ದು.
ಸಾಲಾಮಿಸ್ರಿ ಮುರಬ್ಬಾವು — ಸ್ತ್ರೀಸಂಗಕ್ಕೆ ಮೊದಲು ಸ್ಖಲನವಾಗುವುದನ್ನು ನಿಲ್ಲಿಸುವದು.

15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2 ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿ ವರೆಗೆ ಆಣೆ 6.

ಏಜಂಟರು — ಡಿ ಸಯ್ಯದ್ ಉಸ್ಮಾನ್ ಎಂಡ್ ಕೊ.
ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮುನ್ನಾಲಾಲ್, ಡಿಲ್ಲೀ ವೈದ್ಯರು,
5 ಹಾಜಿಸಾಹೇಬ್ ಮಹಡಿ ಅವೆನ್ಯು ರೋಡ್, ಬೆಂಗಳೂರು ಸಿಟಿ.

ನರೆಕೂದಲಿಟ್ಟುಕೊಂಡು
ಮುದುಕರಾಗಿ ಕಾಣುವುದೇಕೆ?

ದರ್ಬಾರ್ ಕೂದಲು ರಂಗು

ಒಂದು ಸಲ ಹಚ್ಚಿದರೆ 20 ವರುಷ ಪ್ರಾಯದ ಸಮರ್ಥರಂತೆ ಕಾಣುತ್ತಿರಿ. ಈ ರಂಗು ಹಚ್ಚಿಕೊಂಡರೇ ಕೂದಲು ಅಚ್ಚ ಕಪ್ಪಾಗಿ ಹೊಳೆಯುತ್ತೆ. ಈಗ ಮಾರಿಕೆಗೆ ಬಂದಿರುವ ಅಲ್ಪತರದ ಕೂದಲಿಗೆಹಚ್ಚುವ ಬಣ್ಣಗಳೂ ರಂಗುಗಳೂ ತುಂಬ ಕೀಳು ಜಾತಿಯವು; ಹಚ್ಚಿದಮೇಲೆ ಕೂದಲು ಕೆಂಚು ತಿರುಗಿ ಅಸಹ್ಯವಾಗಿ ಕಾಣುತ್ತದೆ. ನಮ್ಮ "ದರ್ಬಾರ್ ಕೂದಲು ರಂಗು" ಅಂಥಾದ್ದಲ್ಲ, ಬಹು ಮೇಲಾದದ್ದು. ಒಂದಾವರ್ತಿ ತರಿಸಿ ಪರೀಕ್ಷೆಮಾಡಿದರೆ ನೀವೇ ಸಂತೋಷಪಡುವಿರಿ.

ಕ್ರಯ ಬುರುಸು ಸಮೇತ ಬಾಟ್ಲಿ ಒಂದಕ್ಕೆ ರೂ. 1; ಅಂಚೆ ಹಾಸಲು 4 ಆಣೆ.

ವಿಳಾಸ:— ವಿ ಎ. ಎಸ್. ಪಾಣಿ ಕಂಪೆನಿ.
ನಂಬ್ರ 3 ಇರುಳಪ್ಪನ್ ಬೀದಿ, ಮದರಾಸು.

ಕಟೀಲ ನರಸಿಂಹಪ್ಪೈ ಎಂಡ್ ಸನ್ಸ್,

ರಥಬೀದಿ, ಮಂಗಳೂರು.

ಇತರ ಕಡೆಗಳಿಂದ ವಸ್ತ್ರ ಇತ್ಯಾದಿಗಳನ್ನು ತಕ್ಕೊಳ್ಳುವ ಮೊದಲು ನಮ್ಮಲ್ಲಿಯ ದರಗಳನ್ನೂ ಸನಗುಗಳನ್ನೂ ಪರೀಕ್ಷಿಸಿ ನೋಡಿರಿ.

ನಗದಿ ಗಿರಾಕಿಗಳಿಗೆ ವಿಶೇಷ ಪ್ರಯೋಜನ ದೊರಕುವಂತೆ ನಮ್ಮ ದರಗಳನ್ನು ಇಟ್ಟಿರುತ್ತೇವೆ.

ಮಧುರಾ, ತಿರುಚಿನಾಪಳ್ಳಿ, ಸೇಲಂ, ಮದ್ರಾಸು, ಮುಂಬಾಯಿ, ಪೂನಾ, ಸೂರತ್, ಬೆಂಗಳೂರು, ಬನಾರಿಸ ಮೊದಲಾದ ನಾನಾ ವಿಧದ ವಸ್ತ್ರ ನೇಯಿಗೆಯಲ್ಲಿ ಪ್ರಖ್ಯಾತಪಟ್ಟ ಪ್ರಾಂತ್ಯಗಳಿಂದ ಎಲ್ಲಾ ಬಗೆಯ ಸನಗುಗಳನ್ನು ತರಿಸಿರುವೆವು. ಗಿರಾಕಿಗಳು ಬಂದು ಪರೀಕ್ಷಿಸಿ ನೋಡಬೇಕಾಗಿ ವಿಜ್ಞಾಪನೆ.

Kateel Narasimha Pai & Sons,
Cloth Merchants,
CAR STREET, Mangalore.

ಮಾರಾಟಕ್ಕೆ ಸಿದ್ಧವಿದೆ! ನೂತನ ಸಂಗ್ರಹ!!

ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ

ಮತ್ತು

ಭೂತಾಳಪಾಂಡ್ಯರಾಯನ ಅಳಿಯ ಕಟ್ಟು

ಈ ನವೀನ ಗ್ರಂಥದಲ್ಲಿ ಪರಶುರಾಮಾವತಾರದ ಕಥೆಯೂ, ಪ್ರಶಿಸಾಪುರ ಮಹಾತ್ಮೆಯೂ, ಭರತಖಂಡದ ಕ್ಷತ್ರಿಯ ರಾಜವಂಶಾವಳಿಯೂ, ದರ್ಮರಾಯನ ನಂತರ ಕಲಿಯುಗದಲ್ಲಿ ರಾಜ್ಯವಾಳಿದ 30 ಅರಸರ ಹೆಸರುಗಳೂ, ಕಾಲಗಳೂ ಪರಶುರಾಮ ಸೃಷ್ಟಿಗೆ ಶೇರಿದ 77 ದ್ವೀಪಗಳೂ, ಕನ್ನಡ ಜಿಲ್ಲೆಯ ಪೂರ್ವರಾಜರ ಸಂತತಿಯೂ, ಅವರು ಆಳಿದ ವರ್ಷಗಳೂ ಹೆಸರುಗಳೂ, ಕನಕವರ್ಮ ವೀರವರ್ಮರ ಚರಿತ್ರೆಯೂ, ವೀರವರ್ಮನು ಮಯೂರವರ್ಮನಾಗಿ ಬಂಟರ ಮತ ಸ್ಥಾಪಿಸಿದ ಕಥೆಗಳೂ, ಮಯೂರವರ್ಮನು ಮಾರ್ಕಾಂಡೇಯರಿಂದ ರಾಜನೀತಿಗಳನ್ನು ಕೇಳಿದ ಕಥೆಯೂ, ಅಹಿಕ್ಷೇತ್ರದಿಂದ ಬ್ರಾಹ್ಮಣರನ್ನು ತರಿಸಿದ ಕಥೆಯೂ, ಬ್ರಾಹ್ಮಣರಿಗೆ 32 ಗ್ರಾಮಗಳಲ್ಲಿ ನೇಮಿಸಿದ 326 ಸ್ಥಳಗಳು (ಜನನಗಳೂ) ಅವರಿಗೆ ನೇಮಿಸಿದ ಬಹುಮಾನ ಮರ್ಯಾದೆಗಳೂ ಕೂಟ ಮರ್ಯಾದೆಗಳೂ, ಜೈನರಿಗೂ ಬ್ರಾಹ್ಮಣರಿಗೂ ದ್ವೇಶದ ಕಾರಣಗಳೂ, ಭೂತಾಳಪಾಂಡ್ಯನ ಪೂರ್ವಚರಿತ್ರೆಯೂ, ದೇವಪಾಂಡ್ಯನ ಹಡಗಿನ ವಿವರಗಳೂ, ಭೂತಾಳಪಾಂಡ್ಯನ ಪೂರ್ಣ ಕಥೆಯೂ, ಭೂತರಾಜನಾದ ಕುಂಡೋಧರನ ಪ್ರತಾಪಗಳೂ, ಭೂತಾಳಪಾಂಡ್ಯನ ಪಟ್ಟಾಭಿಷೇಕವೂ, ದೇವಪಾಂಡ್ಯನ ಹಡಗಿನ ವ್ಯಾಪಾರದ ಕಥೆಯೂ ಅಳಿಯ ಕಟ್ಟು ಆದ ಕಾರಣವು ಭೂತಾಳಪಾಂಡ್ಯನು ನೇಮಿಸಿದ 14 ಕಟ್ಟು 16 ಕಟ್ಟಳೆಗಳೂ, ಭೂತಾಳಪಾಂಡ್ಯನ ವಿವಾಹವೂ, ಕುಂಡೋಧರನು ಮಹಿಷಾಸುರನಾದ ಕಥೆಯೂ ಭೂತಾಳಪಾಂಡ್ಯನು ಮಕ್ಕಳಿಗೆ ವಿಂಗಡಿಸಿದ ಸ್ಥಳ ಮಾನಮರ್ಯಾದೆಗಳೂ, ಅವನ ನಂತರ ಅಳಿಯ ವಿದ್ಯಾಪಾಂಡ್ಯನ ಆಳಿಕೆಯೂ, ಆತನು ತನ್ನ ಮಕ್ಕಳಿಗೆ ವಿಂಗಡಿಸಿದ ಮಾನಮರ್ಯಾದೆಗಳೂ, ಚೌಟ ಬಂಗರ ಸಂಸ್ಥಾನದ ನಗರಗಳೂ, ಸ್ಥಳ ನಾಮಾವಳಿಗಳೂ, ಕೇರಳದ 43 ಜಾತಿಗಳೂ, ಹೋಬಳಿ ಮನೆತನಗಳೂ, ಮರ್ಯಾದೆಗಳ ಶಾಸನವೂ, ಪೂರ್ವ ಮರ್ಯಾದೆಗಳ ಕ್ರಮವೂ, 2ನೇ ಭೂತಾಳಪಾಂಡ್ಯನ ಚರಿತ್ರೆಯೂ, ಅಳಿಯಸಂತಾನದ 60 ಬಳಿಗಳೂ, ಚೌಟ ಬಂಗರ ಸಂಸ್ಥಾನದ ಮಾಗಣೆ, ಶೀಮೆ, ಬಳಿಅರಸರು, ಅವರ ಸ್ಥಳ ಮಾನಮರ್ಯಾದೆಗಳು ವಗೈರೆಯೂ ಜೈನ ಬಂಟರ 60 ಜನನ (ನಾಮಕೀರ್ತಿಗಳೂ) 7 ರಾಜ ದೈವಗಳ ಚರಿತ್ರೆಯೂ, ಉಪ್ಪಿಯ ಇತಿಹಾಸ, ವಿಜಯನಗರದ ಆಡಳಿತೆ ಕಂದಾಯ ಕ್ರಮ, ಪೂರ್ವದ ಕೆಲವು ಸಂಗ್ರಹಗಳು, ಬಂಗಾಡಿ ತಾಮ್ರಶಾಸನ, ಪಳ್ಳಿಪಾಡಿ ಶಿಲಾಶಾಸನ, ಉಳ್ಳಾಲ ತಾಮ್ರಶಾಸನ, ಬಂಟಕಲ್ಲಿನ ಶಿಲಾಶಾಸನ, ನಂದಳಿಕೆ ತಾಮ್ರಶಾಸನ, ವೇಣೂರಿನ ತಾಮ್ರಶಾಸನ, ಜನಪದಗಳ ಸಂಗ್ರಹ, ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ದೇವಸ್ಥಾನಗಳು, ಬಾರ್ಕೂರು ಪಂಚಲಿಂಗೇಶ್ವರ ದೇವಸ್ಥಾನದ ಮರ್ಯಾದೆ ಪಟ್ಟಿ, ಮೊಗಲ್ ರಾಜರ ವಂಶಾವಳಿ, ಭರತಖಂಡಕ್ಕೆ ಅನ್ಯರಾಜರ ಪ್ರವೇಶ ಕಾಲಗಳು, ಈ ಜಿಲ್ಲೆಯ ಮಹನೀಯರ ಪಟ್ಟಿ, ಶ್ರೀಮನ್ ಪಂಚಮ ಜಾರ್ಜ ಬಾದಶಹರ ಚರಿತ್ರೆ ವಗೈರೆ ಅನೇಕಾನೇಕ ಸಂಗ್ರಹಗಳು ಭರಿತವಾದ ನವೀನ ಗ್ರಂಥ. 296 ಪುಟಗಳು ಭರಿತವಾಗಿ ಸದಾ ಕೈಯಲ್ಲಿರುವುದಕ್ಕೆ ಅನುಕೂಲವಾದ ಈ ಪುಸ್ತಕವು ಅಳಿಯಕಟ್ಟಿನವರಿಗೂ ಮಕ್ಕಳಕಟ್ಟಿನವರಿಗೂ ಶಾಲಾ ಉಪಾಧ್ಯಾಯರುಗಳಿಗೂ ವಿದ್ಯಾರ್ಥಿಗಳಿಗೂ ಸರ್ವರಿಗೂ ಅತ್ಯಗತ್ಯವುಳ್ಳದ್ದಾಗಿದೆ

ಪ್ರತಿ ಒಂದಕ್ಕೆ ರೂ. 1—4—0

ಹೆಚ್ಚಿಗೆ ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಷನ್ ಕೊಡಲಾಗುವದು

ಕುಶಲಮಂದಿರ,
ಶ್ರೀರಾಜರಾಜೇಶ್ವರಿ ದೇವಸ್ಥಾನ,
ಪೊಳಲಿ

ಎನ್. ಎ. ಶೀನಪ್ಪ ಹೆಗ್ಗಡೆ,
ಅಮುಣಂಜೆಗುತ್ತು,
ಗುರುಪುರ ಪೋಸ್ಟು, ದ. ಕ.

ಸ್ವದೇಶಾಭಿಮಾನಿಯ ನೋಟೀಸು.

ಚಂದಾದಾರರು ನಮಗೆ ಬರೆಯುವ ಎಲ್ಲಾ ಪತ್ರವ್ಯವಹಾರಗಳಲ್ಲಿ ತಮ್ಮ ತಮ್ಮ ವಿಳಾಸದೊಂದಿಗೆ ಇರುವ ರಿಜಿಸ್ಟರ ನಂಬರನ್ನು ತಪ್ಪದೆ ಬರಿಯತಕ್ಕದ್ದು. ರಿಜಿಸ್ಟರು ನಂಬರು ಇಲ್ಲದ ಪತ್ರಗಳಿಗೆ ನಿಗಾ ಕೊಡಲಾರೆವು.

ಪತ್ರಿಕೆಗೆ ಚಂದಾದಾರರಾಗಿ ಸೇರಲಪೇಕ್ಷೆಯುಳ್ಳವರು ವರ್ಷ 1ರ ಚಂದಾ ಹಣ ರೂ. 2—1—0ನ್ನು ಮನಿಯಾರ್ಡರು ಮೂಲಕ ರವಾನಿಸುವದುತ್ತಮ. ವಿ. ಪಿ. ಮೂಲಕ ಕಳುಹಿಸಬೇಕೆಂದು ಬರಿಯುವಂಥವರಿಗೆ ಪತ್ರಿಕೆಯ ಹಿಂದಿನ ಸಂಚಿಕೆಗಳನ್ನು ವಿ. ಪಿ. ಮಾಡಿ ಕಳುಹಿಸಲಾಗುವದು. ವಿ. ಪಿ.ಯ ಮೊಬಲಗು ನಮಗೆ ತಲ್ಪಿದ ನಂತರವೇ ಪತ್ರಿಕೆಯನ್ನು ಕಳುಹಿಸಲು ಪ್ರಾರಂಭಿಸುವೆವು.

ಪತ್ರಗಳನ್ನು ಬರಿಯುವಾಗ ತಮ್ಮ ಹೆಸರು, ವಿಳಾಸ ಮತ್ತು ಪೋಸ್ಟಾಫೀಸನ್ನು ಸ್ಪಷ್ಟಾಕ್ಷರದಲ್ಲಿ ಬರಿಯತಕ್ಕದ್ದು.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು, ದ. ಕ.

ಸಚಿತ್ರ ಆಂಗ್ಲಭಾಷಾ ಪ್ರಕಾಶಿಕಾ.

ಇದು ಹೊಸ ತರಹ, ಹೊಸ ಕ್ರಮ, ಅಂದವಾದ ಅಚ್ಚು, ವಿದ್ವಾಂಸರಿಂದ ತಯಾರಾದದ್ದು, ಇದನ್ನು ಗುರುವಿನಂತೆ ಭಾವಿಸಿ ಬೆಲೆ ಕಡಿಮೆ ಮಾಡಿದೆ. 3 ಪುಸ್ತಕಗಳೂ ಅಡಗಿರುವ ದೊಡ್ಡ ಪುಸ್ತಕ 1—12—0 1ನೇ ಪುಸ್ತಕ 5 ಭಾಗಗಳುಳ್ಳದ್ದು 0—14—0.

ಅಪೂರ್ವ ಪುಸ್ತಕಗಳು.

ವೈದ್ಯಸಾರ ಸಂಗ್ರಹ ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನ ಪಂಡಿತರಿಂದ ಮರ್ಯಾದಿಸಲ್ಪಟ್ಟಿರುತ್ತೆ. ರೂ. 3.

ರೆವಿನ್ಯು ಸರ್ವೆ ಮೋಜಣಿ ಕ್ಲಾಸಿಫಿಕೇಷನ್ ಕಲಿಯತಕ್ಕ ಬುಕ್ಕು. ಇದು ಮೋಜಣಿದಾರರಿಗೂ, ಪಟೇಲರಿಗೂ, ಶ್ಯಾನುಭೋಗರಿಗೂ ಅಗತ್ಯವಾಗಿ ಬೇಕಾದ ಪುಸ್ತಕ. ಬೆಲೆ 1—4—0.

ರಾವ್‌ಬಹದೂರ್ ವೀರೇಶಲಿಂಗಂ ಪಂತುಲು ಅವರ ರಾಜಶೇಖರ ಚರಿತ್ರೆ ಕನ್ನಡ ಎಡಿಶನ್. ಬೆಲೆ ರೂಪಾಯಿ 1—0—0.

ನಮ್ಮಲ್ಲಿ ವಿಶೇಷವಾಗಿ ಸರಕಾರಿ ಸ್ಕೂಲು ಪುಸ್ತಕ, ಸಂಸ್ಕೃತ, ಕನ್ನಡ, ತೆಲುಗು, ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳೂ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಕಥೆ ಪುಸ್ತಕಗಳೂ, ಹುಡುಗರಿಗೆ ಉಪಯುಕ್ತವಾದ ಸ್ಟೇಶನರಿ ಸಾಮಾನುಗಳೂ ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ.

	ರೂ. ಆ.		ರೂ. ಆ.		ರೂ. ಆ.
ದಯಾನಂದ ಸರಸ್ವತಿಯವರ ಚರಿತ್ರೆ	0—4	ಸೀತಾ ಚರಿತ್ರೆ	1—0	ಮೂಡಿಬಿದ್ರೆಯ ಮಹಾರಾಯ	1—0
ಜಮಾ ಖರ್ಚಿನ ಪದ್ಧತಿ	0—12	ಶಾಕುಂತಲ ನಾಟಕ	0—8	ಕುಣಿಗಲು ರಾಮಾಶಾಸ್ತ್ರಿಗಳವರ ಚರಿತ್ರೆ	1—0
ಇಂಡ್ಯನ್ ಪೆನಲ್ ಕೋಡ	2—0	ಸ್ತ್ರೀ ಧರ್ಮನೀತಿ	0—8	ಸುಮತಿ ಮದನಕುಮಾರರ ಚರಿತ್ರೆ I	0—8
ಅರೆಬಿಯನ್ ನೈಟ್ಸ್	2—4	ಶೋಭನೆ.	0—8	,, II	0—7
ಸುರಸ	0—4	ಚಂದ್ರಕಳಾ	0—4	ಶಿವಗೀತೆ	0—6
ಶ್ಯಾಮು	0—1	ಕಲಾನಾಥ	0—6	ಶಾಕ್ತಶಾಸ್ತ್ರ	0—8
ಇಂದ್ರ ವಜ್ರ	0—4	ಪ್ರ. ಲೇಖ್ಯಬೋಧಿನಿ	1—4	ಸನಾತನಧರ್ಮ ದೀಪಿಕೆ	1—0
ಚಿಕಿತ್ಸೇಜ	0—3	ವಿಷವೃಕ್ಷ	1—4	ಲಬಾರಾಮಾಯಣ	0—4
ಕನಕಾಲುಕ	0—6	ಮುದ್ರಾಮಂಜೂಷ	1—8	ಕಥಾ ಮಂಜರಿ	0—6
ಶಿವಾನಂದಲಹರಿ	0—6	ಶುಕಸಪ್ತತಿ	2—0		
ಗೆದ್ದಕ್ಕ ಸೋತಳೆಯ	0—4				

ಪ್ರಸಿದ್ಧ ಪತ್ತೇದಾರಿ ಕಥೆಗಳು, ದುಷ್ಟ ಚತುಷ್ಟಯ, ನರಬಲಿ, ನೀಲಾಂಬರಿ, ವಿಷಮುಹೂರ್ತ, ಮಾಯಾವಿನಯ, ಅತ್ಯಾಚಾರ, ಚೋರ ಚಕ್ರವರ್ತಿ, ನರ ರಾಕ್ಷಸಿ, ಪ್ರತಿಯೊಂದು ಪ್ರತಿಯೂ 2 ಆಣೆ

ವಿಳಾಸ:— ವಿದ್ಯಾಸಾಗರ ಬುಕ್ ಡಿಪೋ,
ಚಿಕ್ಕಪೇಟೆ, ಬೆಂಗಳೂರು ಸಿಟಿ

ನ್ಯಾಯದರ್ಪಣ.

ಹೊಸ ಪುಸ್ತಕ.

ಇಂಡಿಯಾ ದೇಶದ ಸಮಸ್ತ ಹಿಂದೂ ಜನರ ಸಾಮಾನ್ಯ ಧರ್ಮಗಳು, ಅವುಗಳನ್ನು ಅತಿಕ್ರಮಿಸಿ ನಡೆಯುವವರಿಗೆ ಉಂಟಾಗತಕ್ಕ ಫಲಗಳು, ಇವುಗಳನ್ನು ಕುರಿತು, ಗವರ್ನಮೆಂಟಿನವರಿಂದ ಅನೇಕ ಆಕ್ಟುಗಳು, ರೆಗ್ಯುಲೇಷನ್‌ಗಳು, ಶಾಸನಗಳು ವಗೈರೆ ವಿಧಾಯಕವಾಗಿ ಇರುತ್ತೆ. ಇವುಗಳೆಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೇ ಅಪಾರವಾಗಿ ಇರುತ್ತವೆ. ಇವುಗಳಲ್ಲಿ, "ಕಂಟ್ರಾಕ್ಟ್" ಅಂದರೆ ಕರಾರುಗಳು, "ಬ್ರೀಚ್ ಆಫ್ ಕಂ..." ಅಂದರೆ ಒಪ್ಪಂದಕ್ಕೆ ತಪ್ಪಿ ನಡೆಯೋಣ, ದ್ರೋಹ, ಲಿಮಿಟೇಷನ್, ಛಾಪಾ ಕಾಗದ, ರಿಜಿಸ್ಟ್ರೇಷನ್, ಸಿವಿಲ್ ಪ್ರೊಸಿಡ್ಯೂರ್, ಕ್ರಿಮಿನಲ್ ಪ್ರೊಸಿಡ್ಯೂರ್, ಪೀನಲ್ ಕೋಡ್, ಹಿಂದೂ ಲಾ, ಮುಂತಾದ ಧರ್ಮಶಾಸ್ತ್ರಗಳಿಂದ, ಮನುಷ್ಯರ ನಿತ್ಯಾಚರಣೆಗೆ ಅವಶ್ಯಕವಾದ ಲೌಕಿಕ ವ್ಯವಹಾರ ಧರ್ಮಗಳ ಮುಖ್ಯ ಸಂಗತಿಗಳನ್ನೆಲ್ಲಾ ಆರಿಸಿ ಈ ಸಣ್ಣ ಪುಸ್ತಕವನ್ನು ರಚಿಸಿರುತ್ತೆ ಮತ್ತು ವಾಡಿಕೆಯಲ್ಲಿ ಇರತಕ್ಕ ನಾನಾ ವಿಧಗಳಾದ ದಸ್ತೈವಜುಗಳ ಅನೇಕ ನಮೂನೆಗಳು ಮತ್ತು ಕ್ರಿಮಿನಲ್ ರಿವಿನ್ಯು ಗ್ರಾಮ ಮುನಸೀಫ್ ಕೋರ್ಟುಗಳ ಮುಂದಿನ ದಾವಾ ವಗೈರೆ ಅರ್ಜಿಗಳ ಮಾದರಿಗಳು ಅಡಕವಾಗಿ ಇರುತ್ತೆ. ಬೆಲೆ 1—8—0 ವಿ. ಪಿ. 1—12—0.

ಲಾಯರ್ ಯಂ ಯಸ್. ನಂಜಪ್ಪನವರು,
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಪೋಸ್ಟೇಜು ಸೇರಿ 15-0-0 ಆಗುತ್ತೆ

"ಬೊಂಬೇ ಮೈಲ್ ಲೀವರ್ ವಾಚು"

ಗ್ರಾಹಕರೇ,

ಈ ಮೇಲಕ್ಕಾಣಿಸಿದ ವಾಚು ಅತೀ ಮನೋಹರವಾಗಿ ನೂತನ ಸಾಮಾಗ್ರಿಗಳಿಂದ ತಯಾರಿಸಲ್ಪಟ್ಟು ಪ್ರಪಂಚದಲ್ಲೆಲ್ಲಾ ಇದರ ಶ್ರೇಷ್ಟತೆಯನ್ನು ತಿಳಿಯಬೇಕೆಂಬದಾಗಿ ಅತೀ ಸುಲಭ ಖರೀದಿಯನ್ನು ಇಟ್ಟಿರುತ್ತೇವೆ. ಕಮ್ಮಿ ಕ್ರಯದ ವಾಚುಗಳು ನೀವು ತರಿಸಿಯೂ ಇತರರಲ್ಲಿ ನೋಡಿಯೂ ಇರಬಹುದು. ಆದರೆ ಮೇಲ್ಕಾಣಿಸಿದ "ಬೊಂಬೇ ಲೀವರ್ ವಾಚು" ಎಂಬದು ಕೀಳು ತರದ ವಾಚಲ್ಲ. ಇದು ಹೆಸರಾದ ಕಂಪೆನಿಯಲ್ಲಿ ತಯಾರಿಸಲ್ಪಟ್ಟು ಶ್ರೇಷ್ಟವಾದ ಮತ್ತು ಬಲಿಷ್ಟವಾದ ಲೀವರ್ ಕೆಲಸವಾಗಿದೆ. ನೋಡುವರೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಸಮಯಾನುಸಾರ ಕೆಳಗೆ ಬಿದ್ದಾಗ್ಯೂ ನಿಲ್ಲದೆ ನಡಿಯುತ್ತದೆ. ಇದು ನಿಕ್ಕಲ್ ಬೆಳ್ಳಿಯಿಂದ ತಯಾರಿಸಲ್ಪಟ್ಟು ಬಹಳ ದಿವಸ ಬಾಳಿಕೆ ಬರುವಂಥಾದ್ದಾಗಿಯೂ ಇದೆ. ನಡಿಯುವದರಲ್ಲಿ ಒಂದು ನಿಮಿಷ ವ್ಯತ್ಯಾಸವೂ ಇರುವುದಿಲ್ಲ. ವಾಚು 1ರ ಬೆಲೆ ರೂ. 2. ಪೇಕಿಂಗ ಮತ್ತು ಟಪ್ಪಾಲು ಖರ್ಚು ಆಣೆ 4 ಅಲಾಯದ



"ಕೈಗೆ ಕಟ್ಟಿಕೊಳ್ಳುವ ರಿಸ್ಟ್ ವಾಚು"

ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್, ಚಿಕ್ಕ ಸೈಜು ಕಂಪೆನ್ಸೇಷನ್ ಬ್ಯಾಲೆನ್ಸು ಬಹು ಬಲಿಷ್ಟವಾದ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟ. ಖ. ಕೂಡಿ ವಾಚು 1ರ ಬೆಲೆ ರೂ. 4-12-0.



ನೋಡುವರ ಚಿತ್ತಕ್ಕೆ ಸಂತೋಷಾನಂದಕರವಿದೆ.

ನಮ್ಮ ವಿಳಾಸ:— ಗಿ. ಊಲನ್ ಮಾರ್ಟ್,
ಮಂಗಳೂರು ದಕ್ಷಿಣ ಕನ್ನಡಾ.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ರಕ್ತಶುದ್ಧಿ:— ರಕ್ತವೇ ಮನುಷ್ಯನಿಗೆ ಮುಖ್ಯ ಪ್ರಾಣಾಧಾರಭೂತವೆಂದು ಎಲ್ಲರೂ ಬಲ್ಲರು. ರಕ್ತವು ಕೆಟ್ಟು ಹೋದಪಕ್ಷದಲ್ಲಿ ಬಾಯಿಯಲ್ಲಿ ಹುಣ್ಣು, ಕಣ್ಣುಗಳಲ್ಲಿ ಹುಣ್ಣು, ಕಣ್ಣುನೋವು, ಮೂಗಿನಲ್ಲಿ ಕ್ರಿಮಿ ಸೇರುವಿಕೆ, ಹಲ್ಲಿನಲ್ಲಿ ರಕ್ತ, ಕೀವು ಸೋರುವುದು, ತುಟಿಗಳು ಹುಣ್ಣಾಗೋಣ. ಮುಖದ ಮೇಲೆ ಬೊಕ್ಕೆಗಳು, ದೇಹಾದ್ಯಂತವೂ ಗಜ್ಜಿ, ತುರಿ ಮುಂತಾದುವು, ವ್ರಣಗಳು, ಚರ್ಮದ ಬಣ್ಣ ಕೆಡೋಣ, ಕೀಲುಗಳು ಸ್ವಾಧೀನವಿಲ್ಲದಿರೋಣ, ಮೇಲೆಲ್ಲಾ ವಿಕಾರವಾಗಿ ಕಪ್ಪು ಚುಕ್ಕೆಗಳುಂಟಾಗುವಿಕೆ, ಚವರದ ಕಿವಿಗಳು, ಮೂಗು ಬಿದಿರುವಿಕೆ, ಮೈ ಅಶಕ್ತಿಹೊಂದಿ ಬೆಳ್ಳಗಾಗಿರುವಿಕೆ, ಮಹೋದರರೋಗ, ತೊನ್ನು, ಪರೆಯೆದ್ದಿರುವುದು, ಕುಷ್ಟರೋಗ, ಪಡ, ಕಂಕಳು ಮತ್ತು ಮೈಯೆಲ್ಲಾ ದುರ್ವಾಸನೆಯಾಗಿರುವಿಕೆ, ವೀರ್ಯಗುಂದಿರೋಣ, ಉತ್ಸಾಹವಿಲ್ಲದಿರೋಣ, ಹಗಲು ರಾತ್ರಿ ತರೆದುಕೊಳ್ಳುವಂತೆ ನವೆಯಾಗುತ್ತಿರೋಣ ಇತ್ಯಾದಿ ನಾನಾ ವಿಧ ಬಾಧೆಗಳು ಜನಿಯಿಸುತ್ತವೆ. ಇಂಥಾ ಕೆಟ್ಟ ವಿಷವನ್ನು ರಕ್ತದೊಳಗಿನಿಂದ ನಿವಾರಿಸುವುದಕ್ಕೆ ಬಲವತ್ತರವಾದ ಅಮೃತಸಂಜೀವಿಯು ನಮ್ಮ ರಕ್ತಶುದ್ಧಿಯೇ ಸರಿಯೆಂದು ಹೇಳುವುದರಲ್ಲಿ ಯಾವ ಸಂದೇಹವೂ ಇಲ್ಲ. 20 ದಿವಸಗಳ ಉಪಯೋಗಕ್ಕೆ ಸಾಕಾಗುವಂತಹ ಪೆಟ್ಟಿಗೆ 1ಕ್ಕೆ 2 ರೂಪಾಯಿ. 1ರಿಂದ 2 ಪೆಟ್ಟಿಗೆಗಳ ವರೆಗೂ ವಿ. ಪಿ. ಚಾರ್ಜು 8 ಆಣೆ

ಸಿದ್ಧ ಮಕರಧ್ವಜ:— ಇದು ಹಿಂದು ವೈದ್ಯ ಶಾಸ್ತ್ರದಲ್ಲೆಲ್ಲಾ ಅತಿ ಬಲವತ್ತರವಾದದ್ದು. ನಮ್ಮ ಸಿದ್ಧಮಕರಧ್ವಜವು ಎಲ್ಲಾ ವಿಧಧ ಜ್ವರಗಳನ್ನು, ಅಗ್ನಿಮಾಂದ್ಯದಿಂದುಂಟಾಗತಕ್ಕ ಅಜೀರ್ಣ ಮುಂತಾದ ರೋಗಗಳನ್ನು, ನರಗಳ ದುರ್ಬಲತೆಗೆ ಸಂಬಂಧಪಟ್ಟ ಹರಿವಾತಗಳನ್ನು ಗುಣಪಡಿಸುತ್ತದೆ. ಇದಲ್ಲದೆ ಶ್ವಾಸಕೋಶಗಳಲ್ಲುಂಟಾಗತಕ್ಕ ಬಾಧೆಗಳನ್ನು ನಿವರ್ತಿಮಾಡಿ, ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ವಿಶೇಷ ಹೇಳಿ ಪ್ರಯೋಜನವೇನು? ಮೊತ್ತಕ್ಕೆ ನಮ್ಮ ಮಕರಧ್ವಜವೆಂಬ ವಜ್ರಾಯುಧಕ್ಕೆ ಬಗ್ಗದ ವ್ಯಾಧಿಯು ಪ್ರಪಂಚದಲ್ಲಿಯೇ ಇಲ್ಲ. ನೋಡಿರಿ, ಎಣೆಯಿಲ್ಲದ ಈ ಸಿದ್ಧ ಮಕರಧ್ವಜವನ್ನು ಉಪಯೋಗಿಸಿದುದೇ ಆದರೆ ನಿಮ್ಮ ಶತಮಾನ ಪೂರ್ತಿ ಶಾಂತಿ ಸೇಚನ ಮಹೋತ್ಸವದಲ್ಲಿ (ನೂರು ವರ್ಷಕ್ಕೆ ಮಾಡಿಕೊಳ್ಳುವ ಶಾಂತಿಯಲ್ಲಿ) ಕೂಡ ನಿಮ್ಮ ಪುರುಷಶಕ್ತಿಯೂ, ಪ್ರಾಯದ ಉನ್ಮನವೂ ಕೆಡುವುದಿಲ್ಲ. ಇದರ ಬೆಲೆ ತೊಲೆ 1ಕ್ಕೆ 80 ರೂಪಾಯಿ. ಒಂದು ವಾರಕ್ಕೆ ಸಾಕಾಗುವ ಔಷಧಕ್ಕೆ 3 ರೂಪಾಯಿ. ವಿ ಪಿ ಚಾರ್ಜು ಪ್ರತ್ಯೇಕವು

ವಾಯುಸಂಹಾರಿ:— ಈ ಔಷಧದಿಂದ ದೇಹದಲ್ಲಿ ಉಂಟಾಗತಕ್ಕ ಕಾಲು ಕೈ ಕೀಲುಹಿಡಿತ, ಪಕ್ಷವಾತ, ಶೂಲ, ತಿಮಿರ್‌ವಾತ, ತಲೆನೋವು, ಪಾರ್ಶ್ವವಾತವು, ಸಕಲ ವಿಧ ವಾತಗಳು, ನುಲಚಕಟಿರವಿಕೆ ಗುಣವಾಗುವದು. ಡಬ್ಬ 1ಕ್ಕೆ ರೂ 1, 1ರಿಂದ 3 ಡಬ್ಬಗಳ ವರೆಗೆ ವಿ ಪಿ ಚಾರ್ಜು 5 ಆಣೆ.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳುನಲ್ಲಾಗಲೀ ಸ್ಪುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.

P. SUBBA ROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯಿ,
ಆಯುರ್ವೇದ ಔಷಧಶಾಲು,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
ಸನ್ನಿಧಿ ತಂಜಾವೂರು.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1 ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ, ತಲೆಯಸೋವು ಶಮನಗೊಳಿಸುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

2 ಮೆದುಳಿಗೆ ತಂಪುಕೊಡುವುದರಿಂದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತು ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

3 ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತ ಬಂದಲ್ಲಿ ತಿಂದನ್ನವು ಜೀರ್ಣವಾಗುವದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

4 ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು

5 ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು.

6 ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಒಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು

7 ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು

ಆದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ

45 ಮಾತ್ರೆಗಳ ಪೊಟ್ಟ 1ಕ್ಕೆ 0—2—0 200 ಮಾತ್ರೆಗಳ ಪೊಟ್ಟ 1ಕ್ಕೆ 0—7—0 80 ಮಾತ್ರೆಗಳ ಟಿನ್ 1ಕ್ಕೆ 0—4—0 550 ಮಾತ್ರೆಗಳ ಮರದಪೆಟ್ಟಿಗೆ1ಕ್ಕೆ 1—0—0
95 „ 0—4—0 200 „ ಟಿನ್ „ 0—9—0 100 „ ಶೀಸೆ „ 0—4—6 1200 „ „ „ 2—0—0

1 ರೂಪಾಯಿಗೆ ಕಡಿಮೆಯಾಗಿ ವಿ ಪಿ ಮೂಲಕ ಕಳುಹಿಸಲ್ಪಡುವುದಿಲ್ಲವು ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು

☞ ಭರತಖಂಡ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಸ್ಥಾನದಲ್ಲೂ ಏಜಂಟರು ಬೇಕಾಗಿದೆ

ಸೋಲ್ ಏಜಂಟ್ಸ್:—ಸೆಶಿಂತಾನ್ ಡಿಪೋ,

ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ 2.

ವೃಥಾ ವೆಚ್ಚಮಾಡುವದೇಕೆ?

ಐಶ್ವರ್ಯವಂತರೂ ಬಡವರೂ ಕೊಂಡುಕೊಳ್ಳಲು ಸಾಧ್ಯವಾಗಿರುವ

ಯುಕಲಿಪ್ಟಸ್ ತೈಲವು

ತಲೆಸೋವು, ಕಣ್ಣು ಉರಿ, ಗಾಯ, ಸಕಲ ವಿಧವಾದ ವಾಯುರೋಗ, ಕೆಮ್ಮು, ಉಬ್ಬಸ, ಶೀತಬೇಧಿ, ಉಷ್ಣಬೇಧಿ, ಹೊಟ್ಟೆಯಲ್ಲಿ ಜ್ವರಗಡ್ಡೆ, ಸ್ತ್ರೀಯರ ವ್ಯಾಧಿಸಂಬಂಧ ಬಿಳುಪು ಮೊದಲಾದ ಮೇಹ ರೋಗಗಳು, ಕಿವಿಯಲ್ಲಿ ಕೀವು ಒರುವದು, ಹೆಂಗಸರ ಹೊಟ್ಟೆನೋವು ಮೊದಲಾದ ರೋಗಗಳನ್ನು ಗುಣಪಡಿಸುವದಿಲ್ಲವೆಂದು ಖಾತ್ರಿಪಡಿಸುವವರಿದ್ದಾರೋ? ಔನ್ಸ್ ಸೀಸೆ 1ಕ್ಕೆ 0—5—0 ವಿ ಪಿ ಬೇರೆ. ಡಜನ್ ಸೀಸೆಗಳಿಗೆ ವಿ ಪಿ ಸಹಿತ ರೂ 3—12—0 ಅನುಪಾನ ಪತ್ರಿಕೆ ಸೀಸೆಯೊಂದಿಗೆ.

ಗೃಹಚೀಯಂತಕ ತೈಲ:—ಮಕ್ಕಳ ಚೇಷ್ಟೆ, ಮಕ್ಕಳು ಒಡವಾಗುತ್ತಾಬರುವದು, ಸೇವಸೆ ಮೊದಲಾದ ಮಕ್ಕಳ ರೋಗಕ್ಕೆ ಸಿದ್ಧೌಷಧ 2 ಔನ್ಸಿನ ಸೀಸೆ 1ಕ್ಕೆ 0—10—0 ವಿ ಪಿ ಸಹಿತ 0—15—0

ಇಕ್ಲಿಪ್ಸ್ ಬಾಮ್:—ತಲೆನೋವು, ಸೊಂಟದ ನೋವು, ಸಂಧುವಾತ, ಮೇಹವಾತ, ನೆಗಡಿ, ಶೈತ್ಯ, ಚೇಳು, ಜಾಡರಹುಳ ಕಡಿತ, ಕುರು, ರಾಜಕುರು, ಮೊಡವೆ, ಘಾಯಗಳು, ಹಲ್ಲುನೋವು, ಆನೆಕಾಲು ಇತ್ಯಾದಿ ರೋಗಗಳಿಗೆ ಬಾಹ್ಯ ಲೇಪನವಾಗಿ ಉಪಯೋಗಿಸಬಹುದಾದ ಬಾಮಿನ ಕರಡಿಗೆ 1ಕ್ಕೆ ಆಣೆ 8 ವಿ. ಪಿ. ಬೇರೆ. ಡಜನ್ ಕರಡಿಗೆಗಳಿಗೆ ರೂ 4—12—0 ವಿ ಪಿ ಬೇರೆ

ವಿಳಾಸ:— ಏಜಂಟರು:—

ಇಕ್ಲಿಪ್ಸ್ ಏಜನ್ಸಿ, ಮಂಗಳೂರು. ಸುಗಂಧವಿಲಾಸ, ರಥಬೀದಿ, ಮಂಗಳೂರು.

ಅನೇಕ ಯೋಗ್ಯತಾಪತ್ರಿಕೆಗಳನ್ನು ಪಡದಿರುವ (ರಿಜಿಸ್ಟರ್ಡ್)

ರಾಜಸುಂದರಿರೋಜ.

ಕೂದಲು ಬೆಳೆಯುವ ಪರಿಮಳ ತೈಲವು. 50 ವಿಧವಾದ ಇನಾಂ ಸಾಮಾನುಗಳ ಸಮೇತ ಶೀಸೆ 1ಕ್ಕೆ ರೂ. 1 ಮಾತ್ರ

ಸ್ತ್ರೀಗಳು ತಲೆಕೂದಲು ಸೌಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು, ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವರು ಬಜಾರಿನಲ್ಲಿ ದೊರೆಯುವ ಕೀಳುತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ, ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ ಸುವಾಸನೆ ಹೇಳುವದಕ್ಕೆ ಬರೆಯುವದಕ್ಕೆ ಆಗುವದಿಲ್ಲ ಮತ್ತು ಇದರ ಪರಿಮಳ ವಾಸನೆ ಸುತ್ತು ಇರುವ ಮನೆಗಳಿಗೆ ಹೋಗುವದು. ಇದಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತೆಗದು ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿ ಇರುವ ಹೊಡವನ್ನು ಸರಿ ಮಾಡುವದು ಮುಖಕ್ಕೆ ಕಾಂತಿಯನ್ನು, ದೇಹಕ್ಕೆ ಆರೋಗ್ಯವನ್ನೂ, ಮನಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವ[illegible]ಡುವ ತೈಲ ಇದು ಒಂದೇ ಬೇರೊಂದಿಲ್ಲ, ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ 1ನ್ನು ತರಿಸಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಶೀಲು. ಸ್ತ್ರೀಯ[illegible] ತೊಳ್ಳುವ ಕೊಂಡಗಿಣಿ 6, ಮೈಭರಣ 1, ಅದ್ದಾ 1, ತಾಂಬೂಲ ಮಾತ್ರೆ 30, ದಂ[illegible]ಣಿಗೆ 1, ಸೊಗಸಾದ ರಾಜರಾಣಿ ಕಾರನೇಷನ್ ಪೆಟ್ಟಿಗೆ 1, ರವಿವರ್ಮ ಫೋಟೋ[illegible] 6, ಸುವಾಸನೆ ಅತ್ತರು ಬಿಲ್ಲೆ 1, ಗಂಧ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೋಚ್

ನಮ್ಮ ವಿಳಾಸ— ಮ್ಯಾನೇಜರ್ ಧ್ವೈಯರ್ ಲಕ್ಷ್ಮೀ[illegible]ಅಂಡು ಕಂಪೆನಿ.

ನಂ. 3 ಇದುಲಕ್ಷನ್ ದ[illegible] ಮದ್ರಾಸು.

Printed & Published by V. S. Kamath at the Mangalore Trading Association's Sharada Press, Mangalore

Registered No M. 495

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ —ವರುಷ ಒಕ್ಕೆ ರೂ 1—4—0 ಟಪ್ಪಾಲು ಹಾಸಲು ಸೇರಿ ರೂ 2—1—0

ಪುಸ್ತಕ IX ಮಂಗಳೂರು ತಾ 14ನೇ ಮೇ ಶುಕ್ರವಾರ 1915 ಸಂಚಿಕೆ 20

The Universal Assurance Co., Ltd

Head Office 191, Bow Bazar Street, CALCUTTA

NOTICE.

It is hereby informed to all the Agents, the subscribers of the Company and the public in general that the existing Provident scheme having been declared unsound by the actuary to the Government of India for its various inconveniences, the company has decided not to accept any proposal under the said scheme, and the same has been abolished since 1st January 1915. All the old members are hereby requested to continue their policies and diplomas which will be governed by the old rules and the bonus be distributed according to the dividing system hence they need not be frightened.

For the convenience of the intending subscribers and the public in general a new scheme called "Cheap Insurance" under the scientific principles of the Ordinary Insurance scheme has been introduced. For further particulars please see the Company's seperate advertisement.

(*Sd*) **J Sarkar** *Secretary*

M. Laxman Rao Brothers,

Chief Agents UDIPI, S C

ದಿ ಯುನಿವರ್ಸಲ್ ಎಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಹೆಡ್ ಆಫೀಸು 191 ಬೊ ಬಜಾರ್ ಸ್ಟ್ರೀಟ್, ಕಲ್ಕತ್ತಾ

ನೋಟೀಸು.

ಈ ಮೂಲಕ ಕಂಪೆನಿಯ ಮೆಂಬರರಿಗೂ ಸರ್ವ ಜನರಿಗೂ ತಿಳಿಯಪಡಿಸುವದೇನೆಂದರೆ:—ಈ ಕಂಪೆನಿಯ ಪ್ರೊವಿಡೆಂಟ ಫಂಡಿನ ಏರ್ಪಾಡನ್ನು ಅದರ ಒಗೆ ಒಗೆಯ ಅನಾನುಕೂಲತೆಯ ಕಾರಣದಿಂದ ಸರಕಾರದವರು ಈ ಏರ್ಪಾಡನ್ನು ಘಟ್ಟಿ ಇಲ್ಲದ್ದು ಎಂಬದಾಗಿ ತೀರ್ಮಾನಿಸಿರುವದರಿಂದ ಕಂಪೆನಿಯವರು ಪ್ರೊವಿಡೆಂಟ ಏರ್ಪಾಡು ಕ್ರಮದ ಮೇಲೆ ವಿಮೇದಾರರನ್ನು ಕಂಪೆನಿಗೆ ಸೇರಿಸುವದಿಲ್ಲ, ಮತ್ತು ಈ ಕ್ರಮವು 1915ನೇ ಇಸವಿ ಜನವರಿ ತಾ. 1ರಿಂದ ಕಂಪೆನಿಯಿಂದ ತೆಗೆದು ಹಾಕೋಣಾಗಿರುವದು. ಹಳೇ ಮೆಂಬರರ ತಮ್ಮ ಪೊಲಿಸಿ ಮತ್ತು ಡಿಪ್ಲೊಮಾಗಳು ಹಳೇ ರೂಲಿನ ಪ್ರಕಾರ ಅಧಿಕರಿಸಲ್ಪಟ್ಟು "ಬೋನಸ್" ಎಂಬ ಲಾಭೋಚಿತವು ಕ್ರಮ ಪ್ರಕಾರ ಹಂಚಲ್ಪಡುವದರಿಂದ ಹಳೇ ಮೆಂಬರರು ಭಯಪಡಲು ಕಾರಣವಿಲ್ಲವೆಂಬದಾಗಿ ಈ ಮೂಲಕ ವಿಜ್ಞಾಪಿಸೋಣಾಗಿದೆ.

ಕಂಪೆನಿಯ ಮೆಂಬರರಾಗಲು ಯೋಚಿಸಿರುವವರಿಗೂ ಜನಸಾಮಾನ್ಯರ ಬಗ್ಯೆಯೂ "ಚೀಪ್ ಇನ್ಶೂರೆನ್ಸ್" ಎಂಬ ಒಂದು ಹೊಸ ಕ್ರಮವು ಸರ್ವಸಾಧಾರಣವಾಗಿರುವ ಇನ್ಶೂರೆನ್ಸ್ ಕ್ರಮದ ಮೂಲಸೂತ್ರದ ಪ್ರಕಾರ ತೆರೆಯೋಣಾಗಿರುವದು. ಹೆಚ್ಚಿನ ಮಾಹಿತಿಯನ್ನು ಈ ಪತ್ರಿಕೆಯಲ್ಲಿ ಕಾಣುವ ಕಂಪೆನಿಯ ಪ್ರಕಟಣೆಯನ್ನು ಓದಿಕೊಂಡರೆ ತಿಳಿಯುವದು.

(*Sd.*) ಜೆ. ಸರ್ಕಾರ, ಸೆಕ್ರೆಟರಿ.

ಎಮ್. ಲಕ್ಷ್ಮಣರಾವ್ ಬ್ರದರ್ಸ್, ಚೀಫ್ ಏಜಂಟ್ಸ್, ಉಡುಪಿ

ಸ್ವದೇಶಾಭಿಮಾನಿಯ ನೋಟೀಸು.

ಚಂದಾದಾರರು ನಮಗೆ ಬರೆಯುವ ಎಲ್ಲಾ ಪತ್ರವ್ಯವಹಾರಗಳಲ್ಲಿ ತಮ್ಮ ತಮ್ಮ ವಿಳಾಸದೊಂದಿಗೆ ಇರುವ ರಿಜಿಸ್ಟರ ನಂಬರನ್ನು ತಪ್ಪದೆ ಬರಿಯತಕ್ಕದ್ದು. ರಿಜಿಸ್ಟರು ನಂಬರು ಇಲ್ಲದ ಪತ್ರಗಳಿಗೆ ಸಿಗಾ ಕೊಡಲಾರೆವು.

ಪತ್ರಿಕೆಗೆ ಚಂದಾದಾರರಾಗಿ ಸೇರಲಪೇಕ್ಷೆಯುಳ್ಳವರು ವರ್ಷ 1ರ ಚಂದಾ ಹಣ ರೂ 2—1—0ನ್ನು ಮನಿಯಾರ್ಡರ ಮೂಲಕ ರವಾನಿಸುವದುತ್ತಮ. ವಿ ಪಿ ಮೂಲಕ ಕಳುಹಿಸಬೇಕೆಂದು ಬರಿಯುವಂಥವರಿಗೆ ಪತ್ರಿಕೆಯ ಹಿಂದಿನ ಸಂಚಿಕೆಯನ್ನು ವಿ ಪಿ ಮೂಲಕ ಕಳುಹಿಸಲಾಗುವದು. ವಿ ಪಿಯ ಮೊಬಲಗು ನಮಗೆ ತಲ್ಪಿದ ನಂತರವೇ ಪತ್ರಿಕೆಯನ್ನು ಕಳುಹಿಸಲು ಪ್ರಾರಂಭಿಸುವೆವು.

ಪತ್ರಗಳನ್ನು ಬರಿಯುವಾಗ ತಮ್ಮ ಹೆಸರು, ವಿಳಾಸ ಮತ್ತು ಪೋಸ್ಟಾಫೀಸನ್ನು ಸ್ಪಷ್ಟಾಕ್ಷರದಲ್ಲಿ ಬರಿಯತಕ್ಕದ್ದು.

ಮ್ಯಾನೇಜರ್,

ಸ್ವದೇಶಾಭಿಮಾನಿ ಆಫೀಸು,

ಮಂಗಳೂರು ದ ಕ

ಈಗಲೇ ತಯಾರಾಗಿವೆ!

ಗ್ರಾಮ ಮುನ್ಸಿಫ ಕೋರ್ಟುಗಳಿಗೆ ಸಂಬಂಧಿಸಿದ ಫೋರ್ಮುಗಳು.

100ಕ್ಕೆ ಆಣೆ 6 ಮಾತ್ರ.

ಕುರಿಫಂಡಿನ ರಶೀದಿ	100ರ	ಪುಸ್ತಕ	1ಕ್ಕೆ		0—8—0
,,	,,	50ರ	,,	,,	0—4—0
ಇಂಗ್ಲೀಷು	,,	50ರ	,,	,,	0—8—0
,,	,,	25ರ	,,	,,	0—4—0
ಗೇಣಿ	,,	50ರ	,,	,,	0—6—0
,,	,,	25ರ	,,	,,	0—3—0
ಖಾಲಿ	,,	50ರ	,,	,,	0—4—0
,,	,,	25ರ	,,	,,	0—2—
ಡೆಲಿವರಿ ಪುಸ್ತಕ 1ರ	.	.	.		0—8—0
ವಕಾಲತ್‌ನಾಮೆ ವಗೈರೆ	.	.	100ಕ್ಕೆ		0—10—0.
ಗೇಣಿಚೀಟು ಫೋರ್ಮು	.	.	,,		0—12—0.
ಪರ್ಮೀಟು ಫೋರ್ಮು	.	.	,,		0—12—0.

ವಿಳಾಸ:— ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

BOX LOCKS. PADLOCKS.





ಧಾರಣೆ ಸುಲಭ! **ಅಲಿಗರ್ ಬೀಗಗಳು.** ಧಾರಣೆ ಸುಲಭ!

ಭದ್ರವಾಗಿಯೂ, ಭಾರವಾಗಿಯೂ ಇರುವುದು ಒಂದರ ಬೀಗದಕ್ಕೆ ಮತ್ತೊಂದಕ್ಕೆ ಆಗುವದಿಲ್ಲ. ನೋಡುವುದಕ್ಕೆ ಅಂದವಾಗಿಯೂ ಇರುವುದು ಇದೇ ಮಾದರಿ ಬೀಗಗಳನ್ನು ಇಂಜಿನಿಯರ್ ಇಲಾಖೆಗಳಿಗೂ, ಬ್ಯಾಂಕುಗಳಿಗೂ, ಸರಕಾರಿ ಆಫೀಸುಗಳಿಗೂ ಸಪ್ಲೈಮಾಡಿದೆ

ನಾಲ್ಕು ಚಕ್ರಗಳಿರುವ ಬೀಗಗಳು

ನಂಬ್ರ 1 2 3 4 5

0-12-0 0-15-0 1-4- 1 10-1

ಆರು ಚಕ್ರಗಳಿರುವ ಬೀಗಗಳು

1-2-0 1-8-0 2-4-0 3-0-0 3-8-0

ಬ್ಲಾಕ್ ಬೀಗಗಳು

-04-00-5-0 1-0-0 1-5-0 0-10-0

ಟ್ರಂಕುಗಳಿಗೆ ಹಾಕುವ ಕೊಂಡಿ ಬಗ್ಗಿಸಿರುವ ಬೀಗಗಳಿಗೆ 0-13-0

4, 5, 6ನೇ ನಂಬರು ಬೀಗಗಳನ್ನು ಬಾಗಲುಗಳಿಗೂ ತಬ್ಬಿರುವ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು ಏಜೆಂಟರುಗಳಿಗೆ ಕಮಿಷನ್ ದೊರೆಯುತ್ತದೆ ಅಂಚೆ ಖರ್ಚು ಪ್ರತ್ಯೇಕ

ಮರದ ಪೆಟ್ಟಿಗೆಗಳಿಗೂ ಮೇಜುಗಳಿಗೂ, ಬೀರುಗಳಿಗೂ ಹಾಕುವ 5 ಚಕ್ರಗಳಿರುವ ಬೀಗಗಳು ಗಳಿಗೆ 1-8-0, 1-12-0

ವಿಳಾಸ — ಎಚ್ ಎನ್ ರಾವ್ ಅಂಡ್ ಬ್ರದರ್ಸ್,

ಚಿಕ್ಕಪೇಟೆ, ಬೆಂಗಳೂರು ಸಿಟಿ

ಶಾಶ್ವತವಾದ ಆರೋಗ್ಯವನ್ನು

ಹೊಂದುವದಕ್ಕೆ ಸುಲಭವಾದ ಮಾರ್ಗವು

ಮದನಮಂಜರಿ ಮಾತ್ರೆಗಳು

ಉಪಯೋಗಿಸುವದೇ ಆಗಿರುವದು ಈ ಮಾತ್ರೆಗಳು ಅಜೀರ್ಣವು ಮಲಬಂಧ, ಮನೋವ್ಯಥೆ, ಜ್ಞಾಪಕಶಕ್ತಿ ಇಲ್ಲದಿರುವದು, ನರಗಳ ಬಲಹೀನತೆ, ಅಶಕ್ತಿ, ಸ್ವಪ್ನಸ್ಖಲಿತ, ಬಹುಮೂತ್ರ, ಮೂತ್ರಕೋಶ ಸಂಬಂಧವಾದ ವ್ಯಾಧಿಗಳು, ನಪುಂಸಕತ್ವ ಮುಂತಾದ ವ್ಯಾಧಿಗಳನ್ನು ಶೀಘ್ರದಲ್ಲಿಯೇ ಬೇರು ಸಹಿತವು ಕಿತ್ತು ಹಾಕಿ ಪುರುಷರಿಗೆ ಸಂತತಿ ಪುರುಷತ್ವವನ್ನು ಕೊಡುವವು ಇದು ಸಾಟಿಯಿಲ್ಲದ ಏಕ ನಿಶ್ಚಿತ ಔಷಧವಾಗಿರುತ್ತದೆ ಕಳೆದ 20 ವರುಷ ಕಾಲದಲ್ಲಿ ಸಾವಿರಾರು ರೋಗಿಗಳನ್ನು ಸ್ವಸ್ಥಪಡಿಸಿವೆ ನಿಮ್ಮನ್ನು ಕೂಡ ಸ್ವಸ್ಥ ಮಾಡುವವು 40 ಮಾತ್ರೆಗಳ ಡಬ್ಬಿ ಕ್ರಯ ರೂ 1-0-0

ಉಚಿತ ಕ್ರಯವು ಇಲ್ಲ ಹಾಸಲು ಇಲ್ಲ

144 ಪುಟಗಳುಳ್ಳ ವೈದ್ಯಸಾರಸಂಗ್ರಹವಾದ

ವೈದ್ಯವಿದ್ಯ

ಪುಸ್ತಕದಲ್ಲಿ ಶಾಶ್ವತವಾದ ಆರೋಗ್ಯವನ್ನು ಪಡೆಯಲು ಅತ್ಯವಶ್ಯವಾದ ವಿಷಯಗಳು ವರ್ಣಿತವಾಗಿವೆ ನಿಮ್ಮ ವಿಳಾಸವನ್ನು ತಿಳಿಸಿದರೆ ನಿಮಗೆ ಒಂದು ಪ್ರತಿ ಉಚಿತವಾಗಿ ಕಳುಹಿಸಲ್ಪಡುವದು

ರಾಜವೈದ್ಯ ನಾರಾಯಣಜಿ ಕೇಶವಜಿ

20, ಚೀನಾ ಬಜಾರ್ ರೋಡ್,

ಮದರಾಸು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಪವಾದಹರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನಕಳು ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿ, ಕೆಳಜ್ವರ ಜ್ವರ, ಹೊಟ್ಟೇ ಶೂಲೆ ಕಂದುಗಳ ನೋವು, ಮೈ ಕಾಲು ಹೊಡೆತ (ಬಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ. ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಹೊಟ್ಟೆ ಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ.—320 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ

೭ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನಿಗಿದೆ. ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ ಸಮಯದಲ್ಲಿ ಮೋಸಹೋಗಬೇಡಿ! ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ. 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ — "ಶ್ರೀ ಸೀತಾರಾಘವ ವೈದ್ಯಶಾಲಾ"

ಮೈಸೂರು

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧ ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರೆಯಾಗಿ ಗುಣಪಡಿಸುವದು 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8-0-0.

೨ ಶತಮೂಲಿಕಾ ಅಮರಸಂಜೀವನಿ—ಈ ಟೋನಿಕ್ ದ್ರಾವಕವು ನಿತ್ಯಾಚಿಗಳಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ 1-0-0.

೩ ಬಾಲಸಂಜೀವನಿ—ಮಧುರ ಟೋನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳೆಗಿಸುತ್ತದೆ ಬಾಟ್ಲಿ 1ಕ್ಕೆ 0-12-0.

೪ ವಸಂತ ಕುಸುಮಾಕರ—ಈ ಸುವಾಸಿಕ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ ಬಾಟ್ಲಿ 1ಕ್ಕೆ 1-0-0

೫ ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸಾಧ್ಯ ವ್ರಣಗಳನ್ನು 7 8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4-0-0.

೬ ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳು, ಇಲಿ ಇತ್ಯಾದಿ ಸರ್ವ ಜಂತು ವಿಷಗಳಿಗೆ ಸಂಜೀವನವಾಗಿರುತ್ತದೆ ಅನುಭವಸಿದ್ಧ 2-0-0

೭ ಆನಂದವನವಿಲಾಸ—ಇದು ಡ್ಯಾಬಿಟಿಸ ಎಂಬ ಮಧುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5-0-0.

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಕಲ್ಪ ಪೈರಾಗಿ ಪ್ರಯೋಗಗಳಿಂದ ತಯಾರಿಸಿದ್ದ ಔಷಧ ಮಾತ್ರೆಗಳು, ಲೇಹ ಚೂರ್ಣಗಳು, ತೈಲ ಘೃತಗಳು, ಆಸವಾರಿಷ್ಟಗಳೂ ಮುಂತಾ ಇರುತ್ತವೆ. ಕ್ರಯಪಟ್ಟಿಗೆ ನಮ್ಮ ಕಾಗದಗಳನ್ನು ಬರೆಯಿರಿ. ಹಿಂಬದಿಯ ಹೆಸರು ನಮ್ಮ ... ಪತ್ರ ಬರೆದು

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಮಾರಾಟಕ್ಕೆ ಸಿದ್ಧವಿರುವುದು! ಮಾರಾಟಕ್ಕೆ ಸಿದ್ಧವಿರುವುದು!

ವೇಂಕಟಗಿರಿ ಮಹಾತ್ಮ್ಯೆ.

ಪದ್ಮಾವತೀ ಕಲ್ಯಾಣದಿಂದ ಪೂರ್ಣವಾಗಿರುವುದು

(ಸಂಸ್ಕೃತ ಭವಿಷ್ಯತ್ಪುರಾಣದಿಂದ)

ಮಂಗಳೂರಲ್ಲಿ ಸ್ವರ್ಗಸ್ಥರಾಗಿ ಹೋದ ಮುಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿರುವುದು

959 ಪದ್ಯಗಳಿರುವ 15 ಅಧ್ಯಾಯಗಳಿಂದ ಕೂಡಿರುವುದು ಕಾವ್ಯರಚನೆಯು ಬಹು ಮೃದುರವೂ ಸುಲಭವೂ ಆಗಿರುವುದರಿಂದ ಸರ್ವರಿಗೂ ಅನುನಿತ್ಯದ ಪಠಣಪುಸ್ತಕವಾಗಿರಲು ಉಚಿತವಾಗಿರುವುದು ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ವೃತ್ತಾಂತಗಳು ವಾಚಕರ ಮನಃಖಚಿತವಾಗುವಂತೆ ಈ ಗ್ರಂಥವು ಯಥೋಚಿತ ಚಿತ್ರಪಟಗಳಿಂದ ಕೂಡಿರುವುದು ಕ್ರಯ ಪ್ರತಿಯೊಂದಕ್ಕೆ ರೂ 1—8—0 ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್,
ಮಂಗಳೂರು

ಕರ್ಣಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ ಮುಂಬಯಿ ಕರ್ಣಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ಡೂಷ್ಡ ರೋಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗ ಟಪ್ಪಾಲು ಹಾಸಲು ಸೇರಿ ರೂ ೨—೪—೦ ಆಗಿರುತ್ತದೆ, ಚಂದಾದಾರರಾಗಿ ಸೇರಬಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಮ್ಯಾನೇಜರ್, ಕರ್ಣಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ, ಧಾರವಾಡ.

ಡಾಕ್ಟರ್ ನವರತ್ನರ ಪಕ್ಕಾಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ ಇದಕ್ಕೆ ಸಮಾನವಾಗಿ ಯಾರು ಬರುವಂಥಾ ಇತರ ತೈಲಗಳಿಲ್ಲ ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1 ಟಪ್ಪಾಲು ಚಾರ್ಜು 0—4—0

Dr. Navaratna & Sons,
Kalbadevi Road BOMBAY

ಏಜಂಟರು.—ಡಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ

ಮಾರಾಟಕ್ಕೆ ಸಿದ್ಧವಿದೆ! ನೂತನ ಸಂಗ್ರಹ!!

ಮತ್ತು

ಭೂತಾಳಪಾಂಡ್ಯರಾಯನ ಅಳಿಯಕಟ್ಟು

ಈ ನವೀನ ಗ್ರಂಥದಲ್ಲಿ ಪರಶುರಾಮಾವತಾರದ ಕಥೆಯೂ, ಪುಳಿನಾಪುರ ಮಹಾತ್ಮೆಯೂ, ಭರತಖಂಡದ ಕ್ಷತ್ರಿಯ ರಾಜವಂಶಾವಳಿಯೂ, ಧರ್ಮರಾಯನ ನಂತರ ಕಲಿಯುಗದಲ್ಲಿ ರಾಜ್ಯವಾಳಿದ 30 ಅರಸರ ಹೆಸರುಗಳೂ, ಕಾಲಗಳೂ ಪರಶುರಾಮ ಸೃಷ್ಟಿಗೆ ಸೇರಿದ 77 ದ್ವೀಪಗಳೂ, ಕನ್ನಡ ಜಿಲ್ಲೆಯ ಪೂರ್ವರಾಜರ ಸಂತತಿಯೂ, ಅವರು ಆಳಿದ ವರ್ಷಗಳೂ ಹೆಸರುಗಳೂ, ಕನಕವರ್ಮ ವೀರವರ್ಮರ ಚರಿತ್ರೆಯೂ ವೀರವರ್ಮನು ಮಯೂರವರ್ಮನಾಗಿ ಜೈನರ ಮತ ಸ್ಥಾಪಿಸಿದ ಕಥೆಗಳೂ, ಮಯೂರವರ್ಮನು ಮಾರ್ಕಂಡೇಯರಿಂದ ರಾಜನೀತಿಗಳನ್ನು ಕೇಳಿದ ಕದೆಯೂ, ಅಹಿಕ್ಷೇತ್ರದಿಂದ ಬ್ರಾಹ್ಮಣರನ್ನು ತರಿಸಿದ ಕಥೆಯೂ, ಬ್ರಾಹ್ಮಣರಿಗೆ 32 ಗ್ರಾಮಗಳಲ್ಲಿ ನೇಮಿಸಿದ 326 ಭೇದಗಳು (ಜನನಗಳೂ) ಅವರಿಗೆ ನೇಮಿಸಿದ ಬಹುಮಾನ ಮರ್ಯಾದೆಗಳೂ ಕೂಟ ಮರ್ಯಾದೆಗಳೂ, ಜೈನರಿಗೂ ಬ್ರಾಹ್ಮಣರಿಗೂ ದ್ವೇಷದ ಕಾರಣಗಳೂ, ಬೂತಾಳಪಾಂಡ್ಯನ ಪೂರ್ವಚರಿತ್ರೆಯೂ, ದೇವಪಾಂಡ್ಯನ ಹಡಗಿನ ವಿವರಗಳೂ, ಬೂತಾಳಪಾಂಡ್ಯನ ಪೂರ್ಣ ಕಥೆಯೂ, ಭೂತರಾಜನಾದ ಕುಂಡೋದರನ ಪ್ರತಾಪಗಳೂ, ಬೂತಾಳಪಾಂಡ್ಯನ ಪಟ್ಟಾಭಿಷೇಕವೂ, ದೇವಪಾಂಡ್ಯನ ಹಡಗಿನ ವ್ಯಾಪಾರದ ಕದೆಯೂ ಅಳಿಯ ಕಟ್ಟು ಆದ ಕಾರಣವು ಬೂತಾಳಪಾಂಡ್ಯನು ನೇಮಿಸಿದ 14 ಕಟ್ಟು 16 ಕಟ್ಟಳೆಗಳೂ, ಬೂತಾಳಪಾಂಡ್ಯನ ವಿವಾಹವೂ, ಕುಂಡೋದರನು ಮಹಿಷಾಸುರನಾದ ಕಥೆಯೂ ಬೂತಾಳಪಾಂಡ್ಯನು ಮಕ್ಕಳಿಗೆ ವಿಂಗಡಿಸಿದ ಸ್ಥಳ ಮಾನಮರ್ಯಾದೆಗಳೂ, ಅವನ ನಂತರ ಅಳಿಯ ವಿದ್ಯುಮ್ನಪಾಂಡ್ಯನ ಆಳಿಕೆಯೂ, ಆತನು ತನ್ನ ಮಕ್ಕಳಿಗೆ ವಿಂಗಡಿಸಿದ ಮಾನಮರ್ಯಾದೆಗಳೂ, ಚೌಟರ ಸಂಸ್ಥಾನದ ನಗರಗಳೂ, ಸ್ಥಳ ನಾಮಾವಳಿಗಳೂ, ಕೇರಳದ 43 ಜಾತಿಗಳೂ ಹೋಬಳಿ ಮನೆತನಗಳೂ, ಮರ್ಯಾದೆಗಳ ಶಾಸನವೂ, ಪೂರ್ವ ಮರ್ಯಾದೆಗಳ ಕ್ರಮವೂ 2ನೇ ಬೂತಾಳಪಾಂಡ್ಯನ ಚರಿತ್ರೆಯೂ, ಅಳಿಯಸಂತಾನದ 60 ಬಳಿಗಳೂ, ಚೌಟರ ಸಂಸ್ಥಾನದ ಮಾಗಣೆ, ಸೀಮೆ, ಬಳಿ ಅರಸರು, ಅವರ ಸ್ಥಳ ಮಾನಮರ್ಯಾದೆಗಳು ವಗೈರೆಯೂ ಜೈನ ಜೈನರ 60 ಜನನ (ನಾಮಕೀರ್ತಿಗಳೂ) 7 ರಾಜ್ಯ ದೈವಗಳ ಚರಿತ್ರೆಯೂ, ಉಪ್ಪಿನ ಇತಿಹಾಸ, ವಿಜಯನಗರದ ಆಡಳಿತೆ ಕಂದಾಯ ಕ್ರಮ, ಪೂರ್ವದ ಕೆಲವು ಸಂಗ್ರಹಗಳು, ಬಂಗಾಡಿ ತಾಮ್ರಶಾಸನ, ಪಲ್ಲಿಪಾ ಶಿಲಾಶಾಸನ, ಉಳ್ಳಾಲ ತಾಮ್ರಶಾಸನ, ಬಂಟಕಲ್ಲಿನ ಶಿಲಾಶಾಸನ, ನಂದ ತಾಮ್ರಶಾಸನ, ವೇಣೂರಿನ ತಾಮ್ರಶಾಸನ, ಅನುಭವಗಳ ಸಂಗ್ರಹ, ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ದೇವಸ್ಥಾನಗಳು, ಬಾರ್ಕೂರು ಪಂಚಲಿಂಗೇಶ್ವರ ದೇವಸ್ಥಾನ ಮರ್ಯಾದೆ ಪಟ್ಟಿ, ಮೊಗಲ್ ರಾಜರ ವಂಶಾವಳಿ, ಭರತಖಂಡಕ್ಕೆ ಅನ್ಯರಾಜ ಪ್ರವೇಶ ಕಾಲಗಳು, ಈ ಜಿಲ್ಲೆಯ ಮಹನೀಯರ ಪಟ್ಟಿ, ಶ್ರೀಮನ್ ಪಂಚಮ ಜಾರ್ಜ ಬಾದಶಹರ ಚರಿತ್ರೆ ವಗೈರೆ ಅನೇಕಾನೇಕ ಸಂಗ್ರಹಗಳು ಭರಿತವಾದ ನವೀನ ಗ್ರಂಥ 296 ಪುಟಗಳು ಭರಿತವಾಗಿ ಸದಾ ಕೈಯಲ್ಲಿರುವುದಕ್ಕೆ ಅನುಕೂಲವಾ ಈ ಪುಸ್ತಕವು ಅಳಿಯಕಟ್ಟಿನವರಿಗೂ ಮಕ್ಕಳಕಟ್ಟಿನವರಿಗೂ ಶಾಲಾ ಉಪಾಧ್ಯಾಯರುಗಳಿಗೂ ವಿದ್ಯಾರ್ಥಿಗಳಿಗೂ ಸರ್ವರಿಗೂ ಅತ್ಯಗತ್ಯವುಳ್ಳದ್ದಾಗಿದೆ.

ಪ್ರತಿ ಒಂದಕ್ಕೆ ರೂ. 1—4—0.

ಹೆಚ್ಚಿಗೆ ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಷನ ಕೊಡಲಾಗುವದು

ಕುಶಲಮಂದಿರ,
ಶ್ರೀರಾಜರಾಜೇಶ್ವರಿ ದೇವಸ್ಥಾನ,
ಪೊಳಲಿ.

ಎನ್. ಎ. ತೀನಪ್ಪ ಹೆಗ್ಗಡೆ
ಅಮುಣಂಜೆಗುತ್ತು,
ಗುರುಪುರ ಪೋಸ್ಟು, ದ. ಕ.

ಅರ್ಧ ಬೆಲೆ!

ಒಂದು ತಿಂಗಳ ತನಕ ಮಾತ್ರ



ನಮ್ಮ ಸಿಟಿಸ್‌ಫೇಕ್ಷನ್ ಫ್ಲೂಟ್ ಹಾರ್ಮೋನಿಯಮ್ ಎಂಬ ರಾಗದ ಪೆಟ್ಟಿಗೆಯಿಂದ ಸರ್ವ ಗಾಯನಗಳನ್ನು ಹಾಡಲಿಕ್ಕಾಗುತ್ತದಲ್ಲದೆ ಎಲ್ಲಾ ವಾಯುಗುಣಗಳಲ್ಲಿಯೂ ಬಾಳುವಂಥಾದ್ದಾಗಿದೆ ಇದರ ಪೆಟ್ಟಿಗೆಯು ಸಾಗುವಾನಿ ಮರದಿಂದ ಮಾಡಿದ್ದಾಗಿದೆ. ಗಾಳಿ ಬರುವ ಪೆಟ್ಟಿಗೆಯು ಎಂದಾ ಶಿಖೆಯನ್ನೂ ತಡೆಯುವದು. ಖಾಯುಸಾಗದಿದ್ದರೆ 7 ದಿವಸಗಳೊಳಗೆ ಹಿಂದಕ್ಕೆ ಕಳುಹಿಸಿದರೆ ಹಣ ಹಿಂದಕ್ಕೆ ಕೊಡೋಣಾಗುವದು.

ಕ್ರಯ ಸಿಂಗಲ್ ರೀಡ್ ರೂ. 38, 44, 50, ಈಗ ರೂ. 19, 22, 25ಕ್ಕೆ ಕೊಡಲ್ಪಡುವದು. ಡಬ್ಬಲ್ ರೀಡ್ ರೂ 60, 70, 80, ಈಗ ರೂ 30, 35, 40ಕ್ಕೆ ಕೊಡೋಣಾಗುವದು. ಆರ್ಡರಿನೊಂದಿಗೆ ರೂ 5 ಅಡ್ವಾನ್ಸ್ ಕಳುಹಿಸಬೇಕಾಗಿದೆ

ವಿಳಾಸ.— ನೇಶನಲ್ ಹಾರ್ಮೋನಿಯಮ್ ಕೊ,
ಸಿಮ್ಲಾ ಪೋಸ್ಟು (ಬಿ) ಕಲ್ಕತ್ತ.

National Harmonium Co,
Simla P. O. (B) CALCUTTA.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದ್ದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟದೆ.

1 ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ, ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು

2 ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತು ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು

3 ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತ ಬಂದಲ್ಲಿ ತಿಂದನ್ನವು ಜೀರ್ಣವಾಗುವದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

4. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು.

6. ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು

ಅದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಲವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

45 ಮಾತ್ರೆಗಳ ಪೊಟ್ಲ 1ಕ್ಕೆ	0—2—0	200 ಮಾತ್ರೆಗಳ ಪೊಟ್ಲ 1ಕ್ಕೆ	0—7—0	80 ಮಾತ್ರೆಗಳ ಟಿನ್ 1ಕ್ಕೆ	0—4—0	550 ಮಾತ್ರೆಗಳ ಮರದಪೆಟ್ಟಿಗೆ1ಕ್ಕೆ	1—0—0
95 ,, ,, ,,	0—4—0	200 ,, ಟಿನ್ ,,	0—9—0	100 ,, ಶೀಶೆ ,,	0—4—6	1200 ,, ,, ,,	2—0—0

1 ರೂಪಾಯಿಗೆ ಕಡಿಮೆಯಾಗಿ ವಿ ಪಿ ಮೂಲಕ ಕಳುಹಿಸಲ್ಪಡುವುದಿಲ್ಲವು ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಭರತಖಂಡ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ.

ಸೋಲ್ ಏಜಂಟ್ಸ್:—ಸೆಶಿಂತಾನ್ ಡಿಪೋ,

ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ. 2.

ವೃಥಾ ವೆಚ್ಚಮಾಡುವದೇಕೆ ?

ಐಶ್ವರ್ಯವಂತರೂ ಬಡವರೂ ಕೊಂಡುಕೊಳ್ಳಲು ಸಾಧ್ಯವಾಗಿರುವ

ಯುಕಲಿಪ್ಟಸ್ ತೈಲವು.

ತಲೆನೋವು, ಕಣ್ಣು ಉರಿ, ಗಾಯ, ಸಕಲ ವಿಧವಾದ ವಾಯುರೋಗ, ಕೆಮ್ಮು, ಉಬ್ಬಸ, ಶೀತಬೇಧಿ, ಉಷ್ಣಬೇದಿ, ಹೊಟ್ಟೆಯಲ್ಲಿ ಜ್ವರಗಡ್ಡೆ, ಸ್ತ್ರೀಯರ ವ್ಯಾಧಿಸಂಬಂಧ ಬಿಳುಪು ಮೊದಲಾದ ಮೇಹ ರೋಗಗಳ, ಕಿವಿಯಲ್ಲಿ ಕೀವು ಬರುವದು, ಹೆಂಗಸರ ಹೊಟ್ಟೆನೋವು ಮೊದಲಾದ ರೋಗಗಳನ್ನು ಗುಣಪಡಿಸುವದಿಲ್ಲವೆಂದು ಖಾತ್ರಿಪಡಿಸುವವರಿದ್ದಾರೋ? ಔನ್ಸ್ ಸೀಸೆ 1ಕ್ಕೆ 0—6—0 ವಿ ಪಿ ಬೇರೆ. ಡಜನ್ ಸೀಸೆಗಳಿಗೆ ವಿ. ಪಿ. ಸಹಿತ ರೂ 3—12—0. ಅನುಪಾನ ಪತ್ರಿಕೆ ಸೀಸೆಯೊಂದಿಗೆ.

ಗೃಹಣೀಯಂತಕ ತೈಲ:—ಮಕ್ಕಳ ಚೇಷ್ಟೆ, ಮಕ್ಕಳು ಒಡವಾಗುತ್ತಾಬರುವದು, ಸೇವಸ ಮೊದಲಾದ ಮಕ್ಕಳ ರೋಗಕ್ಕೆ ಸಿದ್ಧೌಷಧ. 2 ಔನ್ಸಿನ ಸೀಸೆ 1ಕ್ಕೆ 0—10—0 ವಿ. ಪಿ ಸಹಿತ 0—15—0

ಇಕ್ಲಿಪ್ಸ್ ಬಾಮ್:—ತಲೆನೋವು, ಸೊಂಟದ ನೋವು, ಸಂಧುವಾತ, ಮೇಹವಾತ, ನೆಗಡಿ, ಶೈತ್ಯ, ಚೇಳು, ಜಂಡರಹುಳ ಕಡಿತ, ಕುರು, ರಾಜಕುರು, ಮೊಡವೆ, ಘಾಯಗಳು, ಹಲ್ಲುನೋವು, ಆನೆಕಾಲು ಇತ್ಯಾದಿ ರೋಗಗಳಿಗೆ ಬಾಹ್ಯ ಲೇಪನವಾಗಿ ಉಪಯೋಗಿಸಬಹುದಾದ ಬಾಮಿನ ಕರಡಿಗೆ 1ಕ್ಕೆ ಆಣೆ 8. ವಿ. ಪಿ. ಬೇರೆ. ಡಜನ್ ಕರಡಿಗೆಗಳಿಗೆ ರೂ. 4—12—0 ವಿ. ಪಿ. ಬೇರೆ

ವಿಳಾಸ:— ಏಜಂಟರು:—

ಇಕ್ಲಿಪ್ಸ್ ಏಜನ್ಸಿ, ಮಂಗಳೂರು.

ಸುಗಂಧವಿಲಾಸ, ರಥಬೀದಿ, ಮಂಗಳೂರು.

ಅನೇಕ ಯೋಗ್ಯತಾಪತ್ರಿಕೆಗಳನ್ನು ಪಡದಿರುವ (ರಿಜಿಸ್ಟರ್ಡ್)

ರಾಜಸುಂದರಿ ರೋಜ.

ಕೂದಲು ಬೆಳೆಯುವ ಪರಿಮಳ ತೈಲವು. 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1ಕ್ಕೆ ರೂ. 1 ಮಾತ್ರ.

ಸ್ತ್ರೀಗಳು ತಲೆಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು, ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವರು ಬಜಾರಿನಲ್ಲಿ ದೊರಿಯುವ ಕೀಳುತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ, ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ ಸುವಾಸನೆ ಹೇಳುವದಕ್ಕೆ ಬರಿಯುವದಕ್ಕೆ ಆಗುವದಿಲ್ಲ ಮತ್ತು ಇದರ ಪರಿಮಳ ವಾಸನೆ ಸುತ್ತು ಇರುವ ಮನೆಗಳಿಗೆ ಹೋಗುವದು. ಇದಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತೆಗದು ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿ ಇರುವ ಮದಡನ್ನು ಸರಿ ಮಾಡುವದು. ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ ಬೇರೊಂದಿಲ್ಲ, ಹೆಚ್ಚಿನ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ. 1ನ್ನು ತರಿಸಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಶೀಲು. ಸ್ತ್ರೀಯರು ಧರಿಸಿಕೊಳ್ಳುವ ಕೊಂಡಗಿಣಿ 6, ವ್ಯಾಭರಣ 1, ಅದ್ದಾ 1, ಕಾಂಬಿಕ್ಲು ವಸ್ತ್ರ 30, ದಂತದ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರನೇಷನ್ ಪೆಟ್ಟಿಗೆ 1, ರವಿವರ್ಮ ಫೋಟೋಕಾರ್ಡ 6, ಸುವಾಸನೆ ಅತ್ತರು ಬಿಲ್ಲೆ 1, ಗಂಧ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೋಚ್ 1

ನಮ್ಮ ವಿಳಾಸ:— ಮ್ಯಾನೇಜರ್ ಧೈರ್ಯ ಲಕ್ಷ್ಮಿ ಅಂಡು ಕಂಪೆನಿ

ನಂ. 3. ಇರುಲಪನ್ ಬೀದಿ, ಮ. ಟಾ., ಮ.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಖು 14ನೇ ಮೇ 1915

ಮತ್ತೊ ಒಂದು ಪರಿಷದ

ಕನ್ನಡಭಾಷೆಯನ್ನು ಉಜ್ಜೀವನಗೊಳಿಸುವುದರಲ್ಲಿ ಅಭಿಮಾನವುಳ್ಳವರೂ ಅನುರಾಗವುಳ್ಳವರೂ, ಮೈಸೂರಿನ ಸಂಪದಭ್ಯುದಯ ಸಮಾಜದ ವಿದ್ಯಾಶಾಖೆಯ ಕಡೆಯಿಂದ ಕನ್ನಡ ನುಡಿಯನ್ನಾಡುವ ಯಾವತ್ತು ಪ್ರಾಂತ್ಯಗಳಿಂದಲೂ ಪ್ರತಿನಿದಿಗಳಾಗಿ ಆಮಂತ್ರಿಸಲ್ಪಟ್ಟು, ಇದೇ ತಾ ೩ರಲ್ಲಿ ಬೆಂಗಳೂರಿನ ಸರಕಾರೀ ಹೈಸ್ಕೂಲಿನಲ್ಲಿ ಸಭೆ ಸೇರಿದರು. ಈ ಕನ್ನಡಿಗರ ಸಮ್ಮೇಳನಕ್ಕೆ ರಾಜತಂತ್ರ ಪ್ರವೀಣರಾದ ಎಚ್ ವಿ ನಂಜುಂಡಯ್ಯ ಸಿ. ಐ ಇ ಯವರು ಅಧ್ಯಕ್ಷರಾಗಿದ್ದು, ತಮ್ಮ ಭಾಷಣವನ್ನು ಇಂಗ್ಲಿಷಿನಲ್ಲಿ ಓದಿಹೇಳಿದರು. ಭಾಷಣವೂ ವಿದ್ವತ್ತಿಕೆಯಿಂದ ತುಂಬಿದ್ದಿತು. ಭಾಷಣಾರಂಭಕ್ಕೆ ಮೊದಲಾಗಿಯೆ, ಶ್ರೀಮನ್ಮಹಾರಾಜರವರ ಮತ್ತು ಯುವರಾಜರ ಕಡೆಯಿಂದ ಬಂದ ಸಹಾನುಭೂತಿಪರ ಪತ್ರಗಳೂ ತಂತೀ ವರ್ತಮಾನಗಳೂ ಓದಲಾದುವು. ಕನ್ನಡ ನಾಡಿನ ಪ್ರತಿನಿಧಿಗಳಿಗೂ ವ ಇತರ ಸದಸ್ಯರಿಗೂ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿ ವಸತಿ ಗೃಹದಲ್ಲಿ ಇಳಿಯುವ ಮತ್ತು ಭೋಜನೋಪಚಾರದ ವ್ಯವಸ್ಥೆಯು ಮಾಡಲ್ಪಟ್ಟಿದ್ದಿತು.

ಅಧ್ಯಕ್ಷರ ಭಾಷಣದಲ್ಲಿ,—ಮೊದಲು ಬಂದ ಪ್ರತಿನಿದಿಗಳಿಗೆ ಸ್ವಾಗತವನ್ನಿತ್ತು, ಕನ್ನಡಕ್ಕೆ ತೌರುಮನೆಯಾಗಿರುವ ಮೈಸೂರಿನಲ್ಲಿ ಆ ಸರಕಾರದವರ ಉದಾರಾಶ್ರಯದಿಂದ ನೆರೆದಿರುವ ಈ ಸಭೆಯು ದೆಸೆಯಿಂದ ಕನ್ನಡ ಭಾಷೋನ್ನತಿಗೆ ವಿಶೇಷ ಎಡೆಯುಂಟಾಗಿದೆಯೆಂದೂ, ಮಹಾರಾಜರೂ ವಿದ್ಯಾ ಇಲಾಖೆಯೂ ಕೊಡುತಲಿರುವ ಪ್ರೋತ್ಸಾಹದಿಂದ ಕನ್ನಡದ ಏಳಿಗೆಗೆ ಸಮ್ಮೇಳನದ ಸಾಹಾಯ್ಯವುಂಟಾಗದಿರದೆಂದೂ ಸೂಚನೆಯಿದೆ. ಕನ್ನಡಭಾಷೆಯು ಉಜ್ಜೀವನಕ್ಕೆ ಮೊದಲನೆಯ ಸಾಹಾಯ್ಯವು ಮಾತೃಭಾಷೆಯನ್ನು ಪ್ರೇಮದಿಂದ ಸೇವೆಮಾಡುತಲಿರುವ ಗ್ರಂಥಕರ್ತರ ಕಡೆಯಿಂದುಂಟಾಗಬೇಕು. ಮೈಸೂರು ಸೀಮೆಯ ನೆರೆಯಲ್ಲಿರುವ ನಾಡುಗಳು ಇತರ ಸರಕಾರದ ನಿಯಮಗಳಿಗೆ ಅಧೀನವಾಗಿರುವುವಾದರೂ, ಭಾಷಾವಿಷಯವಾಗಿ ಈ ನುಡಿಯನ್ನಾಡುವ ಜನಗಳಲ್ಲಿ ಐಕ್ಯವು ಉಂಟಾಗುವಂತೆ ಇನ್ನಾದಗೂ ವ್ಯವಸ್ಥೆಯನ್ನು ವಿದ್ಯಾಭಿಮಾನಿಗಳು ಮಾಡಬೇಕಾಗಿರುವುದು. ಅಂತಹ ಭಾಷಾಭಿಮಾನಿಗಳ ಸಮ್ಮೇಳನವು ಇದೇ ಆಗಿದ್ದು ತಮ್ಮ ಕಡೆಯಿಂದ ಯಾವ ರೀತಿಯಲ್ಲಿ ಕನ್ನಡಕ್ಕೆ ಸಾಹಾಯ್ಯವಾಗಬೇಕೆಂದು ಇತ್ಯರ್ಥಮಾಡಿಕೊಳ್ಳಬೇಕಾಗಿರುವುದು. ಮೊದಲು ಸಂಸ್ಕೃತದಲ್ಲಿ ಹೇಗೆ ಪಾಂಡಿತ್ಯವನ್ನುಂಟುಮಾಡಿಕೊಳ್ಳುವ ಅಭಿಲಾಷೆಯು ಜನಗಳಲ್ಲಿ ಇದ್ದಿತೋ ಹಾಗೆಯೇ ಈಗ ಇಂಗ್ಲಿಷಿನಲ್ಲಿ ಪಂಡಿತರಾಗಬೇಕೆಂದು ಜನರು ಧಾವತಿಪಡುವರು. ಈ ದೆಸೆಯಿಂದ ಮಾತೃಭಾಷೆಯೂ ದೇಶಭಾಷೆಯೂ ಹಿಂದೆಬಿದ್ದೇ ಬಿಟ್ಟಿದೆ. ಈ ಭಾಷೆಯಲ್ಲಿ ಸಕಲ ಬಗೆಯ ಶಾಸ್ತ್ರೀಯ ಗ್ರಂಥಗಳೂ ಇವೆ, ಆದರೆ ವಿವೇಚನೆ ಮಾಡಿದರೆ ಈ ಗ್ರಂಥಗಳು ಈಗ ತಾನೆ ಕೆಲಸಕ್ಕೆ ಬಾರದವು. ಏಕೆಂದರೆ ಶಾಸ್ತ್ರೀಯ ಗ್ರಂಥಗಳು ದಿನೇ ದಿನೇ ನೂತನ ಪರಿಶೋಧನೆಗಳಿಂದ ಕೂಡಿರಲೇ ಬೇಕಾಗಿದೆ. ಆದುದರಿಂದ ಈ ಭಾಗದಲ್ಲಿ ನೂತನ ಗ್ರಂಥಗಳು ಸುಲಭ ಭಾಷೆಯಲ್ಲಿ ಅಲ್ಪ ಬೆಲೆಗೆ ದೊರೆವಂತೆ ಒದಗಿಸಿಕೊಳ್ಳಬೇಕಾಗಿದೆ. ಹೀಗಿಯೆ, ಮುಂದಕ್ಕೆ ಬೆಳೆದಿರುವ ಇತರ ಭಾಷೆಗಳೊಂದಿಗೆ ನಮ್ಮ ಭಾಷೆಯನ್ನು ಬೆಳೆಸಬೇಕಾದರೆ, ಈ ಭಾಷೆಯಲ್ಲಿ ಸಾಕಷ್ಟು ಚೇತನವನ್ನು ಉಂಟುಮಾಡಬೇಕಾಗಿರುವುದು. ನಂತರ, ಈ ಭಾಷೆಯಲ್ಲಿರುವ ಗ್ರಂಥಗಳ ಮೂಲಕ ಜನಸಾಮಾನ್ಯರನ್ನು ಶಿಕ್ಷಣಗೊಳಿಸಿದರೆ, ಆಗ ಇತರ ಸುಶಿಕ್ಷಿತ ಜನಾಂಗಗಳಿಗಿರುವ ವಿದ್ಯಾ ಸಾಮರ್ಥ್ಯವೂ ನಮ್ಮಲ್ಲಿ ಹುಟ್ಟುವುದರಿಂದ, ಭಾಷೆಯ ಮೇಲೆ ಎಲ್ಲರಿಗೂ ಅನುರಾಗವುಂಟಾಗಿ, ಇದನ್ನು ಓದಿಕೊಳ್ಳಲು ಅಭಿಮಾನವುಂಟಾಗುವುದು. ವಿದ್ಯಾ ಇಲಾಖೆಯವರು ವಿದ್ಯಾ ವಿಷಯಕವಾದ ಕನ್ನಡ ಗ್ರಂಥಗಳನ್ನು ಸಂಪಾದನೆ ಮಾಡುತ್ತ ಅವನ್ನು ಪರಿಶೋಧಿಸಿಕೊಂಡು ವಿದ್ಯಾಲಯಗಳಲ್ಲಿ ಉಪಯೋಗಿಸುವಂತಹ ಏರ್ಪಾಟನ್ನು ಮಾಡುವುದು ಇನ್ನೊಂದು ಭಾಷೋನ್ನತಿಗೆ ಸಾಹಾಯ್ಯವಾಗುವುದು. ಭಾಷೋನ್ನತಿಯು ದೇಶೋನ್ನತಿಗೂ ಸಾಹಾಯ್ಯಕರ; ಆದುದರಿಂದ ಸ್ವಭಾಷೆಯ ಏಳ್ಗೆಯನ್ನು ಸಾಧಿಸುವುದರಿಂದ ಸಂಪತ್ತು ಹೆಚ್ಚುವುದರಲ್ಲಿ ಸಂದೇಹವಿರದು. ಹಳೆಯ ಲೇಖಕರ ಪುರಾತನ ಪದ್ಧತಿಗಳಲ್ಲಿ ನಾವು ಇನ್ನೂ ಆಶ್ರಯಬೇಕಿರದೆ, ಸುಧಾರಣೆ ಹೊಂದಿದ ಇತರ ಜನಾಂಗಗಳ ಭಾಷೆಗಳ, ರಚನಾಪದ್ಧತಿಯ, ಅನುಕರಣಮಾಡುತ್ತಿರುವುದು ಶ್ರೇಯಸ್ಕರವಾದುದು. ಈಗಣ ವಿದ್ಯಮಾನಗಳಿಗೆ ಸರಿಬೀಳುತ್ತಿರುವ ಮನೋರಂಜಕವಾದ ಸುಲಭಗ್ರಂಥಗಳು ನಮ್ಮಲ್ಲಿ ವಿಶೇಷವಾಗಿ ಉಂಟಾಗಬೇಕಾಗಿದೆ. ಅಷ್ಟು ಅಲ್ಲದೆ, ಈಗಿನ ಸ್ಥಿತಿಗತಿಗಳನ್ನು ಸರಿಯಾಗಿ ವರ್ಣಿಸಲು ಅಗತ್ಯವಾದ ಶಬ್ದಕೋಶವು ಅವಶ್ಯವಾಗಿಯೂ ಸಂಗ್ರಹಿಸಲ್ಪಡಬೇಕಾಗಿರುವುದು. ಹೀಗಿರುವುದರಿಂದ, ಭಾಷೋನ್ನತಿಗೆಂದು ಹೋರಾಡುವ ಅನೇಕ ವಿದ್ಯಾವಂತರು ಒಂದಾಗಿ, ಒಂದು ಸಂಘವನ್ನೇರ್ಪಡಿಸಿಕೊಂಡು, ತದ್ದ್ವಾರಾ ಈ ಘನಕಾರ್ಯವನ್ನು ಮಾಡುತ್ತಲಿರುವ ಹಾಗೆ ನಾವು ವ್ಯವಸ್ಥೆ ಮಾಡಬೇಕಾಗಿರುವುದು. ಕನ್ನಡದಲ್ಲಿ ಕಾಳಿದಾಸನಂತೆ ಅಥವಾ ಷೇಕ್ಸ್‌ಪಿಯರನಂತೆ ಮತ್ತೊಬ್ಬ ಪ್ರತಿಭಾಶಾಲಿಯಾದ ವ್ಯಕ್ತಿಯು ಜನ್ಮವೆತ್ತಲು ಇನ್ನೂ ಎಷ್ಟು ಯುಗಗಳು ಕಳೆದು ಹೋಗಬಹುದಾದರೂ, ಸ್ಕಾಟ್, ಟೆನ್ನಿಸನ್, ಶೆಲ್ಲಿ ಮುಂತಾದ ಗದ್ಯಪದ್ಯ ರಚನೆಮಾಡುವ ಮಹನೀಯರೇನೋ ತಾತ್ಕಾಲಿಕವಾಗಿಯೇ ಉಂಟಾಗಲು ಅವಕಾಶವಿದೆ. ಶ್ರೀಮನ್ಮಹಾರಾಜರವರ ಪ್ರೋತ್ಸಾಹವು, ಕನ್ನಡಿಗರಲ್ಲುಂಟಾದ ಉತ್ಸಾಹವು—ಇವೆರಡರಿಂದ ಮುಂದಣ ಅಭಿವೃದ್ಧಿಯು ನಾವು ವಿಶೇಷವಾಗಿ ಆಶಿಸುವರೆ ಅವಕಾಶವಿದೆ.

ಹೀಗೆ ಭಾಷಣ ಮುಗಿದು, ವಿಷಯನಿರ್ಮಾಣಕ ಕಮಿಟಿಯೊಂದು ಸ್ಥಾಪಿಸಲ್ಪಟ್ಟಿತು. ಆ ಕಮಿಟಿಯು ಸಭೆಯ ಮನ್ನಣೆಯ ಬಗ್ಗೆ ಕೆಲವು ನಿರ್ಣಯಗಳನ್ನು ಮಾಡಿತು. ಕೇಂದ್ರ ಸಭೆಯಾಗಿ ಕನ್ನಡ ಸಾಹಿತ್ಯ ಪರಿಷದವನ್ನು ಸ್ಥಾಪಿಸುವುದು, ಕನ್ನಡಕ್ಕೆ ವಿಶ್ವವಿದ್ಯಾಲಯಗಳ ಪರೀಕ್ಷೆಗಳಲ್ಲಿ ಉತ್ತಮ ಸ್ಥಾನಗಳನ್ನು ಒದಗಿಸಿಕೊಂಡು, ಶುದ್ಧ ಕನ್ನಡದ ಶಾಲಾ ಪುಸ್ತಕಗಳು ಎಲ್ಲಾ ಪ್ರಾಂತ್ಯಗಳಲ್ಲೂ ಏಕರೂಪವಾಗಿ ಉಪಯೋಗಿಸಲ್ಪಡುವಂತೆ ವ್ಯವಸ್ಥೆಯನ್ನುಂಟು ಮಾಡುವುದು, ಸಂಘಕ್ಕೆ ಒಂದು ವಿಚಾರ ಮತ್ತು ಕಾರ್ಯನಿರ್ವಾಹಕ ಮಂಡಲಿಯನ್ನು ಸ್ಥಾಪಿಸುವುದು. ಸಂಘದ ಫಂಡಿಗೆ ಯಾವ್ಯಾರು ಯಾವ್ಯಾವ ರೀತ್ಯಾ ಹಣವನ್ನು ಸಲ್ಲಿಸಬೇಕೆಂಬುದು, ಗ್ರಂಥಕರ್ತರಿಗೆ ಗ್ರಂಥ ವ್ಯಾಸಂಗಮಾಡುವವರಿಗೆ, ಅಥವಾ ಪರಿಶೋಧಕರಿಗೆ ಬಹುಮಾನಗಳನ್ನು ಕೊಡುವುದು, ಎಂಬಿತ್ಯಾದಿ ನಿರ್ಣಯಗಳು ಮನ್ನಿಸಲ್ಪಟ್ಟುವು. ಸಮ್ಮೇಳನದ ಕಾರ್ಯವಿವರವನ್ನು ಕುರಿತಾಗಿಯೂ, ಇತರ ನಿರ್ಣಯ ಕಾರ್ಯಕ್ರಮಗಳ ವಿಷಯವಾಗಿಯೂ, ಬರೆಯತಕ್ಕ ಹಲವು ಸಂಗತಿಗಳನ್ನು ಅವಕಾಶದೊರೆತಂತೆ ವಿಮರ್ಶಿಸಿ ಬರೆವೆವು.

ಸಾರಸ್ವತ ಬಡ ವಿದ್ಯಾರ್ಥಿಗಳ ಸಹಾಯಕ ಫಂಡು, ಮಂಗಳೂರು.

ಈ ಫಂಡಿನ ೧೯೧೪ನೇ ಡಿಸೆಂಬರ ೩೧ಕ್ಕೆ ಅಂತ್ಯವಾಗುವ ವರುಷದ ವೃತ್ತಾಂತವು ನಮ್ಮ ಕೈಸೇರಿರುವುದು. ಯೋಗ್ಯರಾದ ಬಡ ಸಾರಸ್ವತ ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯಲ್ಲಿ ತಕ್ಕದಾದ ದ್ರವ್ಯಸಹಾಯವು ಒದಗಿಸಿಕೊಡುವ ಉದ್ದೇಶದಿಂದ ಈ ಫಂಡು ಸ್ಥಾಪಿಸಲ್ಪಟ್ಟು ೧೧ ವರುಷಗಳು ಕಳೆದು ಹೋದವು. ಆದರೂ ಕೊಲೇಜು ಕ್ಲಾಸುಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ವೇತನಗಳನ್ನು ಈ ಫಂಡಿನಿಂದ ಈ ತನಕ ಕೊಡಲು ಅನುಕೂಲವಾಗಲಿಲ್ಲವೆಂತ ಫಂಡಿನ ವರದಿಯಿಂದ ತಿಳಿದುಬರುತ್ತದೆ. ಫಂಡಿನ ದ್ರವ್ಯಬಲವು ರೂ. 8713—7—6 ಆಗಿರುವುದು. ಇದರಲ್ಲಿ ರೂ. 1000ವನ್ನು ರಾವ್‌ಬಹದ್ದೂರ್ ಎನ್. ಸುಬ್ಬರಾವ್‌ರವರು ತನ್ನ ಸ್ವರ್ಗಸ್ಥ ಪಿತೃವರ್ಯರ ಹೆಸರಲ್ಲಿ ವೇತನಗಳನ್ನು ಏರ್ಪಡಿಸಲು ಕೊಟ್ಟಿರುವರು. ರಾ। ಸುಬ್ಬರಾವ್‌ರವರ ಮೂಲಕವೇ ಇನ್ನೆರಡು ವೇತನಗಳನ್ನು ಸ್ಥಾಪಿಸಲು ರೂ. 250 ಮತ್ತು 400 ಫಂಡಿಗೆ ೧೯೧೪ರಲ್ಲಿ ದೊರಕಿರುವುದು. ಈ ಪೈಕಿ ರೂ 250 ಸ್ವರ್ಗಸ್ಥ ಕಾರ್ನಾಡ ರಾಮಕೃಷ್ಣರಾಯರ ಪತ್ನಿಯರ ಸ್ಮರಣಾರ್ಥವಾಗಿ ಕೊಡೋಣಾಗುವ ವೇತನದ ಬಗ್ಯೆ ವಿನಿಯೋಗಿಸಲ್ಪಡುವುದು. ರೂ 400 ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರರಾಗಿದ್ದ ಸ್ವರ್ಗಸ್ಥ ಕೆ. ಸಾಂತಪ್ಪಯ್ಯನವರ ಹೆಸರಲ್ಲಿರುವ ವೇತನದ ಬಗ್ಯೆ ಉಪಯೋಗಿಸಲ್ಪಡುವದಾಗಿ ತಿಳಿಯುತ್ತೇವೆ. ಬೆನಾರಿಸದಲ್ಲಿರುವ ರಾ। ತೊಂಟತ್ತ ಉಮಾನಾಥರಾಯರು ರೂ. 100, ಮದ್ರಾಸಿನ ಕಾಮತ್ ಮತ್ತು ಕಂಪೆನಿಯ ರಾ। ಉಳ್ಳಾಲ ವಿಟ್ಠಳರಾಯರು ರೂ. 50,—ಗತವರುಷದಲ್ಲಿ ಫಂಡಿಗೆ ಸಹಾಯಮಾಡಿದ ಗ್ರಹಸ್ಥರ ಹೆಸರುಗಳಲ್ಲಿ ಈ ಇಬ್ಬರು ಮಹನೀಯರ ಹೆಸರುಗಳಿವೆ.

ಫಂಡಿನಿಂದ ರೂ. 38[illegible]—7—6 ಕ್ರಯ ಬಾಳುವ ಪುಸ್ತಕಗಳು ಬಡ ವಿದ್ಯಾರ್ಥಿಗಳಿಗೆ ಕೊಡೋಣಾಗಿರುವವು. ವಿದ್ಯಾರ್ಥಿಗಳಿಗೆ ವೇತನ ರೂಪದಲ್ಲಿ ರೂಪಾಯಿ 712—6—0 ಫಂಡಿನಿಂದ ಕೊಡೋಣಾಗಿರುವುದು. ಕೊಲೇಜು ಕ್ಲಾಸುಗಳಲ್ಲಿ

ವೇತನಗಳನ್ನು ಇಲ್ಲದ್ದನ್ನು ನೋಡಿ ಮಲಬಾರಿನಲ್ಲಿ ಎಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿರುವ ರಾ| ಎ ಪಾಂಡುರಂಗರಾಯರು ರೂ 50ರ ಮತ್ತು ರಾ| ಬೆನಗಲ್ ರಾಮರಾವ್ ಐ ಸಿ ಯಸ್. ರೂ. 60 ಈ ಮೌಲ್ಯದ ವೇತನಗಳೆರಡನ್ನು ಇಂಟರ್ ಮಿಡಿಯೇಟ್ ಕ್ಲಾಸಿನಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳಿಗೆ ಕೊಟ್ಟಿರುತ್ತಾರೆ ಫಂಡಿನ ಮಂಗಳೂರಿನ ಚಂದಾದಾರರು ಕ್ರಮವಾಗಿ ಪ್ರತಿ ವರುಷವೂ ತಮ್ಮ ಚಂದಾ ಮೊಬಲಗುಗಳನ್ನು ಕೊಡುವ ರೀತಿಯಲ್ಲಿಯೇ ಇತರ ಪ್ರಾಂತ್ಯಗಳಲ್ಲಿರುವವರೂ ಸಹ ಕೊಡಬೇಕೆಂಬ ಪ್ರಾರ್ಥನೆಯು ಫಂಡಿನ ವೃತ್ತಾಂತದಲ್ಲಿರುವುದು ಹಿಂತಿನ ಚಂದಾದಾರರ ಪಟ್ಟಿಯಲ್ಲಿ ಹೆಸರುಗಳ ಸಂಖ್ಯೆಯು ಹೆಚ್ಚಿದ್ದನ್ನು ನೋಡಿ ತುಂಬಾ ಸಂತೋಷಪಡುತ್ತೇವೆ. ಫಂಡಿನ ವೃತ್ತಾಂತದಿಂದ ಸಾರಸ್ವತರಲ್ಲದ ಇತರರು ತಿಳಕೊಳ್ಳಬೇಕಾದ ಎರಡು ಮುಖ್ಯ ವಿಷಯಗಳಿರುವವು. ಒಂದನೇದು ಸಾರಸ್ವತರಲ್ಲಿರುವ ವಿದ್ಯಾಪ್ರೇಮ, ಎರಡನೇದು ಇವರ ಸಾಹಸ ದೇಶದ ಎಲ್ಲಾ ಕಡೆಗಳಲ್ಲಿಯೂ ಹೋಗಿ ಖ್ಯಾತಿಯಿಂದ ವೃತ್ತಿಯನ್ನು ನಡಿಸುತ್ತಿರುವ ಸದ್ಗೃಹಸ್ಥರ ಹೆಸರುಗಳ ಪಟ್ಟಿಯಿಂದ ಇದು ಏನೆಂಬುದಾಗಿ ತಿಳಕೊಳ್ಳಬಹುದು ತಮಗೆ ತಾವು ಸಹಾಯ ಮಾಡುವ ಶೀಲವುಳ್ಳಂಥ ಸಾರಸ್ವತರಿಗೆ ದೈವಸಹಾಯವು ಸದಾ ದೊರಕುವುದೆಂಬುವುದರಲ್ಲಿ ಸಂದೇಹವಿರದೆಂದು ಹೇಳಿ ಸಾರಸ್ವತ ಬಡ ವಿದ್ಯಾರ್ಥಿಗಳ ಸಹಾಯಕ ಫಂಡಿನ ಪರಿಶೀಲನೆಯನ್ನು ಇಲ್ಲಿಗೆ ಮುಗಿಸುವ

ಗಾಂಧಿಯವರ ಪ್ರತ್ಯಕ್ಷ ದರುಶನ.

ಕನ್ನಡಿಗರ ಸಮ್ಮೇಳನದ ಒಳ್ಳೆ ಬೆಂಗಳೂರಿಗೆ ಹೋಗಿದ್ದ ಕನ್ನಡನಾಡಿನ ಆಯಾ ಪ್ರಾಂತ್ಯಗಳ ಪ್ರತಿನಿಧಿಗಳಿಗೆ ಕಳೆದ ಶನಿವಾರ ಬೆಂಗಳೂರಲ್ಲಿ ಗಾಂಧಿಯವರನ್ನು ಕಣ್ಣಾರೆ ನೋಡುವ ಅಪರೂಪ ಸಂದರ್ಭವು ಲಭಿಸಿತ್ತು. ಮದ್ರಾಸಿನಿಂದ ಮುಂಬಯಿಗೆ ಪತ್ನಿ ಸಹಿತ ಹೋಗುತ್ತಿದ್ದ ಗಾಂಧಿಯವರು ಬೆಂಗಳೂರಿನವರ ವಿಜ್ಞಾಪನೆಯನ್ನು ಸಲ್ಲಿಸುವುದಕ್ಕಾಗಿ ತಮ್ಮ ಪ್ರಯಾಣವನ್ನು ನಿಲ್ಲಿಸಿ ಬೆಂಗಳೂರಲ್ಲಿ ಹಗಲೊಂದು ಹೊತ್ತು ಇದ್ದರು ಗಾಂಧಿಯವರನ್ನು ಎದುರುಗೊಳ್ಳಲು ಬೆಂಗಳೂರಿನ ಸಿಟಿ ರೈಲ್ವೆ ಸ್ಟೇಶನಿನಲ್ಲಿ ಮೈಸೂರು ಸರಕಾರದ ನೌಕರರೂ ಸಾವುಕಾರರೂ, ವಕೀಲರೂ ವಿದ್ಯಾರ್ಥಿಗಳೂ ಬಹಳವಾಗಿ ನೆರದಿದ್ದರು ಗಾಂಧಿಯವರು ಆಗ್ಗಾಡಿಯಿಂದ ಕೆಳಗಿಳಿಯುತ್ತಿದ್ದಾಗ "ಗಾಂಧಿಮಹಾರಾಜಕು ಜೈ" ಎಂಬ ಜಯಘೋಷದಿಂದ ಜನಸಮುದಾಯವೆಲ್ಲವು ಗಾಂಧಿಯವರ ದರ್ಶಣದಿಂದುಂಟಾದ ಆನಂದವನ್ನು ವ್ಯಕ್ತಗೊಳಿಸಿತು ಮ| ರಾ| ಕೆ ಪಿ ಪುಟ್ಟಣ್ಣ ಚೆಟ್ಟಿಯವರು ಗಾಂಧಿಯವರನ್ನೂ ಶ್ರೀನಿವಾಸ ಮಂದಿರದ ಸ್ತ್ರೀಯರು ಗಾಂಧಿಯವರ ಪತ್ನಿಗಳನ್ನೂ ಹೂಮಾಲೆಗಳಿಂದ ಅಲಂಕರಿಸಿದ ನಂತರ ರೈಲ್ವೆ ಸ್ಟೇಶನಿನಿಂದ ಗಾಂಧಿಯವರನ್ನು ಮೆರವಣಿಗೆಯಲ್ಲಿ ಪಟ್ಣಕ್ಕೆ ಕರಕೊಂಡುಹೋದರು ಗಾಂಧಿಯವರನ್ನು ಒಯ್ಯುವ ಬಗ್ಗೆ ಕುದುರೆಗಳನ್ನು ಬಿಚ್ಚಿಟ್ಟಿದ್ದ ಒಂದು ಗಾಡಿಯನ್ನು ಹಿಡಕೊಂಡು ಹಲವು ಜನ ವಿದ್ಯಾರ್ಥಿಗಳೂ ಇತರರೂ ಸಿದ್ಧವಾಗಿದ್ದರು ಆದರೆ ಈ ರೀತಿ ತನ್ನನ್ನು ಸೆಳಕೊಂಡು ಹೋಗಕೂಡದೆಂಬದಾಗಿ ಗಾಂಧಿಯವರು ಅಪೇಕ್ಷಿಸಿದ್ದರಿಂದ ಗಾಂಧಿಯವರೊಡನೆ ಸರ್ವರೂ ನಡಕೊಂಡು ಮೆರವಣಿಗೆಯಲ್ಲಿ ಹೋದರು

ಬೆಳಿಗ್ಗೆ ಗಂಟೆ ೯ಕ್ಕೆ ಮೈಸೂರಿನ ಗವರ್ನಮೆಂಟ್ ಹೈಸ್ಕೂಲಿನ ಸಭಾಸದನದಲ್ಲಿ ಗೋಖಲೆಯವರ ಚಿತ್ರಪಟವನ್ನು ರಾ| ಗಾಂಧಿಯವರು ಮೈಸೂರುದೇಶ ಸೇವಾಸಂಘದವರ ಪರವಾಗಿ ಪ್ರಕಾಶಗೊಳಿಸಿದರು ಈ ಸಂಘದವರು ಗಾಂಧಿಯವರಿಗೆ ಒಂದು ವಿಜ್ಞಾಪನಾ ಪತ್ರವನ್ನು ಅರ್ಪಿಸಿರುವರು ಸಾಯಂಕಾಲ ೫-೩೦ಕ್ಕೆ ಲಾಲ್‌ಬಾಗದಲ್ಲಿ ಗಾಂಧಿಯವರನ್ನು ಗೌರವಿಸುವದಕ್ಕಾಗಿ ಬೆಂಗಳೂರಿನ ಮಹಾಜನರ ಸಭೆಯೊಂದು ಕೂಡಿತ್ತು ರಾ| ಕೆ ಪಿ ಪುಟ್ಟಣ್ಣಚೆಟ್ಟಿಯವರು ಈ ಸಂದರ್ಭದಲ್ಲಿ ಬೆಂಗಳೂರಿನ ನಿವಾಸಿಕರ ಪರವಾಗಿ ಗಾಂಧಿಯವರಿಗೆ ವಿಜ್ಞಾಪನಾ ಪತ್ರವನ್ನು ಸಮರ್ಪಿಸುವ ಬಹುಮಾನವನ್ನು ವಹಿಸಿಕೊಂಡಿದ್ದರು

ಆಡಂಬರಗಳಲ್ಲಿ ನಮ್ಮ ಶಕ್ತಿಯನ್ನು ಕಳಕೊಳ್ಳದೆ ಜನಪದದ ಬಹುಮಾನಕ್ಕೆ ತಾವು ಪಾತ್ರರಾಗಬಹುದೆಂಬ ಅಭಿಲಾಷೆಯನ್ನು ಬಿಟ್ಟುಬಿಟ್ಟು ದೇಶಸೇವೆಯನ್ನು ಯಥಾರ್ಥಭಾವದಿಂದ ಕೈಕೊಳ್ಳಬೇಕೆಂಬದು ಗಾಂಧಿಯವರು ಬೆಂಗಳೂರಲ್ಲಿ ಅಪ್ಪಣೆ ಕೊಡಿಸಿದ ಭಾಷಣಗಳಲ್ಲಿ ತೋರಿಬರುವ ಮುಖ್ಯ ಬೋಧೆಯಾಗಿದೆ. ಉಡುಪು ತೊಡುಪುಗಳ ವಿಜೃಂಭಣೆಯಿಂದ ಗಾಂಧಿಯವರ ವಿಶೇಷತ್ವವನ್ನು ಗೊತ್ತುಮಾಡಿಕೊಂಡು ಹೇಳಿದರೆ ಇತ್ತಲಾಗೆ ರೂಢಿಗೆಬರುತ್ತಿರುವ ಕೊಸ್ಮೊಪೊಲಿಟನ್ ಕ್ಲಬ್ಬುಗಳಲ್ಲಿ ಇವರಿಗೆ ಪ್ರವೇಶವು ದೊರಕುವದು ಕಷ್ಟಸಾಧ್ಯವಾದೀತು. ಕಡಮೆ ಬೆಲೆಯ ಬಿಳಿ ವಸ್ತ್ರದ ಸಾಧಾರಣ ಒಂದು ನಿಲುವಂಗಿ, ಇದೇ ವಸ್ತ್ರದ ತಲೆಗೆ ಸುತ್ತಿಕೊಂಡಿರುವ ರುಮಾಲು ಒಂದು ಸಾಮಾನ್ಯ ಧೋತ್ರ—ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ಗೌರವ ಸ್ವಾತಂತ್ರ್ಯಗಳನ್ನು ಕಾಪಾಡಿದ ಮಹನೀಯರ ವಸ್ತ್ರದಲಂಕಾರವು ಇದಕ್ಕೆ ಮಿಕ್ಕಿರಲಿಲ್ಲ. ಆದರೆ ಭಾರತೀಯರ ಸರ್ವಸಮತ್ವವನ್ನು ಇತರ ಜನಾಂಗಗಳವರಲ್ಲಿ ಸ್ಥಾಪಿಸುವ ಸಾಧನೆಯಲ್ಲಿ ಪ್ರಕಾಶಗೊಂಡ ಆತ್ಮ ತೇಜೋಬಲದ ಕಾಂತಿಯು ಇವರ ಕಣ್ಮುಖಗಳಲ್ಲಿ ಹೊಳೆಯುತ್ತಿರುವುದು ಸೂರ್ಯ ಪ್ರಭೆಯಲ್ಲಿ ನಕ್ಷತ್ರ ರಾಶಿಯ ಪ್ರಕಾಶವು ಅಡಗಿ ಹೋಗುವಂತೆ ಸಭಾಜನರ ಜರಿತಾರಿನ ವಸ್ತ್ರಗಳು, ವಜ್ರದ ವಂಟಿಗಳು ಇತ್ಯಾದಿಗಳ ಶೋಭೆಯು ಈ ಮಹನೀಯರ ಮುಂದೆ ಕಾಣದೆ ಹೋಯಿತು. ಇಂಥವರಿಗೆ ಮೈಸೂರು ದೇಶಸೇವಾಸಂಘದವರು ಅರ್ಪಿಸಿರುವ ವಿಜ್ಞಾಪನಾ ಪತ್ರವನ್ನು ಇತರ ಪ್ರಾಂತ್ಯದ ಕನ್ನಡಿಗರೂ ಓದಿಕೊಂಡು ಮನನಮಾಡುವಂತೆ ಈ ವಿಜ್ಞಾಪನಾಪತ್ರವನ್ನು ಈ ಕೆಳಗೆ ಪ್ರಕಟಿಸಿರುತ್ತೇವೆ.

ಶ್ರೀಮತೀ ಕಸ್ತೂರಿಬಾಯಿದೇವಿ ಮತ್ತು ಶ್ರೀಮಾನ್ ಮೋಹನದಾಸ್ ಕರಮಚಂದ್ ಗಾಂಧಿಯವರ ಸನ್ನಿಧಿಯಲ್ಲಿ

ಮೈಸೂರು ದೇಶ ಸೇವಾಸಂಘದವರ ವಿನಯಪೂರ್ವಕವಾದ ವಿಜ್ಞಾಪನೆಗಳು:—

ಪೂಜ್ಯರೇ,

ಪುಣ್ಯಶ್ಲೋಕರಾದ ತಮ್ಮಗಳ ಪಾದಧೂಳಿಯಿಂದ ಈ ಪ್ರಾಂತವು ಎಂದಿಗೆ ಪವಿತ್ರವಾದೀತೆಂದು ಬಹುದಿನಗಳಿಂದ ನಿರೀಕ್ಷಿಸಿಕೊಂಡಿದ್ದ ನಮಗೆ, ಆ ಸಂತೋಷವನ್ನು ಈ ದಿನ ದೊರಕಿಸಿರುವುದಕ್ಕಾಗಿ ಕೃತಜ್ಞತೆಯನ್ನು ಸೂಚಿಸಲು ಆತುರರಾಗಿದ್ದೇವೆ

ಅನೇಕ ವಿಷಯಗಳಲ್ಲಿ ಹಿಂದೂಸ್ಥಾನದ ಇತರ ಭಾಗಗಳಿಗಿಂತ ಈ ಭಾಗವು ಹಿಂದುಳಿದಿದ್ದರೂ, ಲೋಕಸೇವಾನಿರತರಾದ ಮಹನೀಯರನ್ನು ಗೌರವಿಸುವುದರಲ್ಲಿ ಇದೂ ಅತ್ಯಂತ ಉತ್ಸಾಹವುಳ್ಳದಾಗಿದೆ ಆ ದೂರವಾದ ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ಗೌರವಸ್ವಾತಂತ್ರ್ಯಗಳನ್ನು ಕಾಪಾಡುವುದಕ್ಕೂ, ಸರ್ವಸಮತ್ವವನ್ನು ಬೇರೆ ಬೇರೆ ಜನಾಂಗಗಳವರಲ್ಲಿ ಸ್ಥಾಪಿಸುವುದಕ್ಕೂ ತಾವಿಬ್ಬರೂ, ತಮ್ಮ ಅನುಯಾಯಿಗಳಾದ ಇತರರೂ, ದ್ವೇಷಾಸೂಯೆಗಳಿಗೆ ಪ್ರತಿಯಾಗಿ ಶಾಂತಿಕಾರುಣ್ಯಗಳನ್ನೂ, ರಾಜಕೀಯ ಮತ್ತು ಪಾರ್ಥಿವ ಬಲಗಳಿಗೆ ಪ್ರತಿಯಾಗಿ ಆತ್ಮತೇಜೋಬಲವನ್ನೂ ತೋರಿ, ಶಸ್ತ್ರಸನ್ಯಾಸಪೂರ್ವಕವಾದ ಸಾಧುಯುದ್ಧವನ್ನು ನಡೆಯಿಸಿ, ನಾನಾವಿಧದ ಕಾಯಕ್ಲೇಶಗಳನ್ನು ಬಹುಕಾಲ ಸ್ಥಿರಚಿತ್ತದಿಂದನುಭವಿಸ್ಸಿ ಕಡೆಯಲ್ಲಿ ಜಯಶೀಲರಾಗಿರುವ ಸಂದರ್ಭಗಳನ್ನೆಲ್ಲಾ ನಾವೂ ಕುತೂಹಲದಿಂದ ತಿಳಿದು, ಪದೇ ಪದೇ ಸ್ಮರಿಸಿ ಆನಂದಿಸುತ್ತಿರುವೆವು. ಆ ಯುದ್ಧವು ದಾರುಣವಾಗಿ ನಡೆಯುತ್ತಿದ್ದಾಗ ತಮ್ಮಲ್ಲಿ ಸಹಾನುಭೂತಿಯನ್ನು ತೋರಿ, ತಮಗೆ ಮಂಗಳವನ್ನು ಬಯಸಿದವರಲ್ಲಿ ಮೈಸೂರಿನ ಶ್ರೀಮನ್ಮಹಾರಾಜರವರೂ, ಅವರ ಪ್ರಜೆಗಳೂ ಸೇರಿರುವರು. ಈಗಲೂ,

"ಸರ್ವಭೂತಸ್ಥ ಮಾತ್ಮಾನಂ ಸರ್ವಭೂತಾನಿ ಚಾತ್ಮನಿ
ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ"

ಎಂಬ ಗೀತಾವಾಕ್ಯವನ್ನನುಸರಿಸುವ ತಮ್ಮ ಹಿತೋಪದೇಶಗಳೂ, ತಮ್ಮ ಪರಿಶುದ್ಧವೃತ್ತಿಯೂ, ತಮ್ಮ ದೇಶಭಕ್ತಿಯೂ ತಮ್ಮ ಸ್ವಸುಖಪರಿತ್ಯಾಗವೂ ನಮ್ಮೆಲ್ಲರಿಗೂ ಮೇಲ್ಪಂಕ್ತಿಯಾಗಿವೆ ಶಮದಮದಯಾ ಸಂಪೂರ್ಣರಾಗಿ, ಭಗವದ್ಧ್ಯಾನನಿರತರಾಗಿರುವ ತಮ್ಮನ್ನು ಅಭಿನವಪ್ರಹ್ಲಾದನೆಂದು ಕರೆದಿರುವುದು ಯಥಾರ್ಥವಾಗಿಯೇ ಇದೆ

ಕಸ್ತೂರಿಬಾಯಿದೇವಿಯವರೆ, ನಿಮ್ಮ ಪಾತಿವ್ರತ್ಯದ ನಿರ್ಮಲಕೀರ್ತಿಯು, ಕಸ್ತೂರಿಯ ಪರಿಮಳದಂತೆ, ಆರ್ಯವಧೂಪ್ರಪಂಚದಲ್ಲೆತ್ತೆತ್ತಲೂ ವ್ಯಾಪಿಸಿದೆ. ಪೂರ್ವದಲ್ಲಿ ಹರಿಶ್ಚಂದ್ರನ ಛಾಯಾನುವರ್ತಿಯಾಗಿದ್ದು, ಆತನ ದೀಕ್ಷೆಯನ್ನು ತಾನೂ ಕೈಗೊಂಡು, ವಿಪತ್ಪರಂಪರೆಗಳಿಗೆ ಸಿಕ್ಕಿದರೂ ಸತ್ಯವ್ರತವನ್ನು ಬಿಡದಿದ್ದ ಚಂದ್ರಮತೀದೇವಿಯಂತೆ, ನಮ್ಮ ಕಣ್ಣೆದುರಿಗೆ ನೀವು ಪತಿಸೇವಾಪರಾಯಣರಾಗಿ, ಅವರ ಸುಖದುಃಖಗಳೇ ನಿಮ್ಮವೆಂದು ತಿಳಿದು, ಅವರ ದೀಕ್ಷೆಯನ್ನು ಪೂರ್ತಿಗೊಳಿಸುವದಕ್ಕಾಗಿ ಕಾರಾಗೃಹವಾಸವನ್ನೂ ಅನುಭವಿಸಿ, ಅವರ ಸಾಧುವೃತ್ತಿಯನ್ನೂ, ವೈರಾಗ್ಯಭಾವವನ್ನೂ ತಾಳಿ, ಸೋದರೀಮಣಿಯರಿಗೆ ಮಾರ್ಗದರ್ಶಕರಾಗಿರುವಿರಿ. ನಿಮ್ಮಂತಹವರಿಂದಲ್ಲವೆ ಸಹಧರ್ಮಿಣಿಯೆಂಬ ವಚನವು ಸಾರ್ಥಕವಾಗುವುದು!

ಲೋಕಮಾನ್ಯರಾದ ದಂಪತಿಗಳೇ, ತಮಗೆ ಸರ್ವತ್ರ ಸುಖಾಗಮನವಾಗಲಿ. ದೇಶಹಿತಕ್ಕಾಗಿ ತಾವು ಮಾಡುತ್ತಿರುವ ಪ್ರಯತ್ನಗಳು ಬೇಗನೆ ಸಫಲವಾಗಲಿ. ಸರ್ವೇಶ್ವರನು ತಮಗೂ, ತಮ್ಮ ಪುತ್ರಪೌತ್ರರಿಗೂ ದೀರ್ಘಾಯುವನ್ನೂ, ಆರೋಗ್ಯವನ್ನೂ, ಸಕಲ ಶುಭಗಳನ್ನೂ ಅನುಗ್ರಹಿಸಲಿ

ತಮ್ಮ ಪರಮಮಿತ್ರರಾಗಿದ್ದ ಶ್ರೀ ಗೋಖಲೆ [illegible] ಶಕ್ತಿ ಅನುಸರಿಸಿ ನಡೆಯಬೇಕೆಂದಿರುವ ಕೆಲವರಿಂದ ಈ ಸಣ್ಣ ದೇಶಸೇವಾಸಂಘವು ಈ ಪಟ್ಟಣದಲ್ಲಿ ಸ್ಥಾಪಿಸಲ್ಪಟ್ಟಿದೆ. ದಿವಂಗತರಾದ ಆ ದೇಶಭಕ್ತಾಗ್ರಗಣ್ಯರ ಜ್ಞಾಪಕಾರ್ಥವಾಗಿ ಸಾಮಾನ್ಯ ಜನರ ಮನೆಗಳ ನಡುವೆ ಒಂದು ಸಭಾಮಂದಿರವನ್ನು ಸ್ಥಾಪಿಸಿ, ಅದರಲ್ಲೊಂದು ಪುಸ್ತಕಭಂಡಾರವನ್ನೂ, ಮಹನೀಯರ ಭಾವಚಿತ್ರಗಳನ್ನೂ ಪ್ರತಿಷ್ಠಿಸಿ, ಅಲ್ಲಿ ವಿದ್ಯಾಪ್ರಚಾರಣೆಯ ಮತ್ತು ಇತರ ವಿಧವಾದ ಸಮಾಜಸೇವೆಯ ಕಾರ್ಯಗಳನ್ನು ನಡೆಯಿಸಬೇಕೆಂದುನಮ್ಮ ಉದ್ದೇಶವಿದೆ. ಈ ಸಂಕಲ್ಪವು ಶೀಘ್ರದಲ್ಲಿಯೇ ನೆರವೇರುವಂತೆ ಆಶೀರ್ವದಿಸಬೇಕೆಂದು ತಮ್ಮನ್ನು ಪ್ರಾರ್ಥಿಸುತ್ತಿರುವೆವು. ಮತ್ತು ತಾವು ನಮಗೆ ಸಂದರ್ಶನವನ್ನು ಕೊಟ್ಟು ಕೃತಾರ್ಥರನ್ನಾಗಿ ಮಾಡಿರುವುದರ ಗುರುತಿಗಾಗಿ, ಇಲ್ಲಿಟ್ಟಿರುವ ಗೋಖಲೆಯವರ ಚಿತ್ರಪಟವನ್ನು ತಮ್ಮ ಶುಭಹಸ್ತದಿಂದ ಪ್ರಕಾಶಗೊಳಿಸಿಕೊಡಬೇಕೆಂದು ಬೇಡುತ್ತಿರುವೆವು.

ಮಹನೀಯರೆ, ತಮಗೆ ಮಂಗಳವಾಗಲಿ.

ಇಂತು ತಮ್ಮಲ್ಲಿ ಅತ್ಯಂತ ಕೃತಜ್ಞತೆಯುಳ್ಳ,

ಮೈಸೂರು ದೇಶಸೇವಾ ಸಂಘದವರು.

ಕೊಯಮುತ್ತೂರು ಸರ್ಕಲ್ ಕೋಓಪರೇಟಿವ್ ಸಂಘಗಳ ಮಹಾ ಸಭೆಯು ಮಂಗಳೂರಲ್ಲಿ ಕೂಡಿಬಂದ ಪ್ರಥಮ ದಿನದಲ್ಲಿ ಸಭಾಕಾರ್ಯಗಳಿಗೆ ಪ್ರಾರಂಭವಾಗುವ ಮೊದಲು ಹಾಡಿದ 'ಪರಸ್ಪರ ಸಹಾಯ'ದ ಹಾಡನ್ನು ಪ್ರಕಟಿಸಬೇಕೆಂದು ವಾಚಕರಲ್ಲಿ ಹಲವರು ಅಪೇಕ್ಷಿಸಿರುವದರಿಂದ ಆ ಹಾಡನ್ನು ಈ ಕೆಳಗೆ ಪ್ರಕಟಿಸಿರುತ್ತೇವೆ.

ಪರಸ್ಪರ ಸಹಾಯ.

೧.

ತೂಕಡಿಕೆಯನು ಕಳೆಯದೇಕೆ ಮಲಗಿಹೆ, ಗೆಳೆಯ?
ಸಾಕು, ಸುತ್ತಲು ನೋಡು, ಕಣ್ದೆರೆದು ನಿಂದು!
ಲೋಕದಲಿ "ಶಿವಶಿವಾ! ಸೋತೆ" ನೆಂದೆನಿಸುವಾ
ಶೋಕರುತಿ ಕಿವಿಯನುಚ್ಚಳಿಸುತಿರೆ ಬಂದು! ‖ ಪಲ್ಲವಿ ‖

೨.

ಋಣಜಾಲದಲಿ ಸಿಲುಕಿ, ಹೆಣದುಮ್ಮಳದಿ ಕಲುಕಿ,
ಕ್ಷಣಕ್ಷಣಕೆ ಕಷ್ಟದಲಿ ಬಳಲಿದ್ದ ನೊಂದು!
ದಣಿದರಿಗೆ ಕೈಗೊಟ್ಟು, ಸಾಹಾಯ್ಯಧ್ವಜನೆಟ್ಟು,
ಉಣುವ ದಾರಿಯ ತೋರೆ ನಾಯಕರು ಮುಂದು!

೩.

ಕುಗ್ಗಿ ಸಾಲವ ಕೇಳೆ, ಹಿಗ್ಗುತೀವನು; ನಾಳೆ
ಬಗ್ಗಿಪನು ನಿನ್ನ ಸಿರಿಮುಡಿಯನೆಳೆದೆಂದು;—
ಹಗ್ಗವಿಲ್ಲದ ಕಟ್ಟು! ಬಿತ್ತವಿಲ್ಲದ ಪೆಟ್ಟು!!—
ಒಗ್ಗುವುದೆ ಈ ಗತಿಯು ಸವಿ ವಿಷವ ತಿಂದು?

೪.

ಕೆತ್ತು ಬಿಡು ಸಂಶಯವ ನಿತ್ತು ನಿನ್ನಾಶಯವ-
ನುತ್ತಮದ ಸಾಹಾಯ್ಯ ಸಂಘಕ್ಕೆ ತಂದು!
ಹೊತ್ತುಕಳೆಯಲು ಬೇಡ! ಭ್ರಾಂತಿಗೊಳದಿರು ಮೂ
ಕುತ್ತಗೊಂಡಿಹೆ ನೀನು ಬಡತನದಿ ಬೆಂದು!

[illegible]

ಕೆತ್ತು ಬಹ ಕೋಟಲೆಯ [illegible]
ಕತ್ತರಿಸಿ, ನಿನ್ನ ಸೆರೆ ಬಿಡಿಸಬೇಕೆಂದು,
ಕತ್ತರಿಸೆ ಹಿಂಜರಿಯದೆತ್ತಲುಂ ಧೃತಿತೊರೆಯ
ದತ್ಯಧಿಕ ಯತ್ನಗಳ ನಡೆಸುತಿರಲೆಂದು

೬.

ಶಕ್ತಿತೀ ಸಾಧನವು? ಬತ್ತಿತೇ ರೋಧನವು?
ಮತ್ತೆ ನಿನ್ನಿಂದೇನುಮಾಗದೇಂ ಮುಂದು?
ಎತ್ತ ಹೋದುದು ನಿನ್ನ ಸ್ಥೈರ್ಯದ ಬಲ? ಬನ-
ದತ್ತ ಹಿಂದಿಲ್ಲವೇಂ ಜಯಸೌಖ್ಯಸಿಂಧು?

ಕಳವಾದ ಮೇಲ್ನೀನು ಕಳವಳಿಸಿ ಫಲವೇನು!
ಕಳೆದಪುದು ನಿನ್ನ ಸ್ವಾತಂತ್ರ್ಯಮಣಿಯೊಂದು!
ಕುಳಿತು ಬರಿದಳಬೇಕೆ? ತಿಳಿತಿಳಿದಳಿವುದೇಕೆ?
ಕಳಚಿ ಬಿಡು ಅಧ್ಯಾತ್ಮನಿದ್ರೆ, ಮಮಬಂಧು!

೮.

ಎದ್ದೇಳು, ಎದ್ದೇಳು! ನಿದ್ದೆಗಣ್ಣನು ತೀಳು!!
ಎದ್ದಿಹ ಪರಸ್ಪರ ಸಹಾಯಮೆಂಬೊಂದು
ಶುದ್ಧ ಭಾಸ್ಕರ ಭಾನು! ಉದ್ಧಾರವಹೆ ನೀನು!!
ಬಿದ್ದಿರ್ಪುದೇಕೆ ಕಣ್ಮುಚ್ಚಿಯೆಯೊಕೆಂದು?

೯.

ತಳೆರು ಭರತಕುಮಾರ! ಕಲಿಯುಗದ ನವವೀರ!!
ಕೊಳುಗುಳದಿ ದಾರಿದ್ರ್ಯವೈರಿಯನು ಕೊಂದು,
ಇಳೆಯು ಶಾಂತಿಯ ತಾಳೆ, ಬಳೆದು ತೃಪ್ತಿಯು ಬಾಳೆ,
ಭಳರೆ! ಭಾರತವರ್ಷ ಸೌಭಾಗ್ಯಮಂದು!!

ಕಾಸರಗೋಡು ತಾಲೂಕಿನ ಪ್ರಾಥಮಿಕ ಶಾಲಾ ಉಪಾಧ್ಯಾಯರ ಪರಸ್ಪರ ಸಹಾಯ ಸಂಘದ ವರದಿ.

:-o-:

ಈ ವರದಿಯನ್ನು ಮಂಗಳೂರು ರೇಂಜಿನ ಶಾಲೆಗಳ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರಾಗಿದ್ದು ಹಂಗಾಮಿಯಾಗಿ ಜಿಲ್ಲಾ ಅಸಿಸ್ಟಾಂಟ ಇನ್ಸ್‌ಪೆಕ್ಟರರ ಚಾರ್ಜು ನೋಡುತ್ತಲಿದ್ದ ಮ| ರಾ| ರಾ| ಪಂಜೆ ಮಂಗೇಶರಾವ್ ಬಿ. ಎ. ಎಲ್ ಟಿ. ಇವರು ಕೊಯಮುತ್ತೂರು ಸರ್ಕಲಿನ ಪರಸ್ಪರ ಸಹಾಯ ಸಂಘಗಳ ಪರಿಷತ್ತಿನ ತೃತೀಯ ಸಭೆಯಲ್ಲಿ ಮಂಗಳೂರಲ್ಲಿ ಓದಿದರು. ಈ ಸಂಘವು ೧೯೧೨ನೆ ಇಸವಿಯಲ್ಲಿ ಇವರು ಕಾಸರಗೋಡು ರೇಂಜ ಶಾಲೆಗಳ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರಾಗಿರುವ ಕಾಲದಲ್ಲಿ ಸ್ಥಾಪಿತವಾಗಿದ್ದು ಇದರ ವಹಿವಾಟುಗಳೆಲ್ಲ ಇವರ ತಿಳಿವಳಿಕೆಗೆ ಬರುತ್ತಿದ್ದುವು. ಇದರ ಸ್ಥಾಪನೆಗೆ ಇವರೆ ಕಾರಣಭೂತರಾಗಿದ್ದು ಇದರ ಬೆಳವಣಿಗೆಯನ್ನು ತನಗೆ ವರ್ಗವಾದ ಮೇಲೂ ಅವರು ಪ್ರೇಮಭಾವದಿಂದ ನೋಡುತ್ತಿದ್ದರು, ಆದಕಾರಣ ಅವರು ಈ ಸಂಘದ ಕುಂದುಕೊರತೆಗಳನ್ನೂ ವೃದ್ಧಿಯ ಕುರುಹುಗಳನ್ನೂ ಕಂಡುಹಿಡಿಯಲಿಕ್ಕೆ ಸಮರ್ಥರಾಗಿದ್ದರು. ಅವರ ರಿಪೋರ್ಟಿನಲ್ಲಿ ಕಾಣುವ ಸೂಚನೆಗಳು ಮುಂದೆ ಅಂಥಾ ಸಂಘಗಳನ್ನು ಏರ್ಪಡಿಸಲು ಯತ್ನಿಸುವವರಿಗೆ ಮಾರ್ಗ ನಿದರ್ಶಕವಾಗಿ ಇರುವುವು.

ಉಪಾಧ್ಯಾಯರಿಗೋಸ್ಕರವೇ ಇಡೀ ಸಂಸ್ಥಾನದಲ್ಲಿ ಸ್ಥಾಪಿಸಲ್ಪಟ್ಟಿರುವ ಮೂರು ಸಂಘಗಳಲ್ಲಿ ಒಂದಾಗಿರುವ ಈ ಸಂಘವು ೧೯೧೨ನೆ ಇಸವಿಯ ಮೇ ಅಕ್ಟೈರಿಗೆ ರಿಜಿಸ್ಟರಾಗಿ ಬಂತೆಂತಲೂ, ಕಾಸರಗೋಡು ತಾಲೂಕಿಗೆ ಒಳಪಟ್ಟ ಎಲ್ಲಾ ಮಂಜೂರಾದ ಶಾಲೆಗಳ ಉಪಾಧ್ಯಾಯರು ಇದಕ್ಕೆ ಮೆಂಬರರಾಗಲು ಅರ್ಹರೆಂತಲೂ, ಕಾರ್ಯಾರಂಭದಲ್ಲಿ ಈ ಸಂಘಕ್ಕೆ ಬರೇ ೧೨ ಮಂದಿ ಸೇರಿದರೂ ಈಗ ೬೫ ಮೆಂಬರುಗಳಿದ್ದು ಅವರ ಪೈಕಿ ಬೋರ್ಡಶಾಲೆಗಳ ಉಪಾಧ್ಯಾಯರು ೪೭, ಖಾಸಗಿ ಶಾಲೆಗಳವರು ೧೮ ಮಂದಿ ಇರುವರೆಂತಲೂ ಅವರ ರಿಪೋರ್ಟಿನಲ್ಲಿ ಕಂಡುಬರುತ್ತದೆ. ಸೇಕಡಾ ೭೨ರಷ್ಟು ಹೆಚ್ಚು ಮಂದಿ ಬೋರ್ಡಶಾಲೆಗಳವರು ಸೇರಿ ಇತರರು ಕಡಿಮೆಯಾಗಿರುವ ಕಾರಣವನ್ನು ಅವರು ಮುಂದೆ ಚರ್ಚಿಸಿದ್ದಾರೆ. ಸಂಘದ ಕೆಲಸಗಳು ಸರಿಯಾಗಿ ಜಾರಿಗೆ ಬಂದುದು ೧೯೧೨ನೆ ಇಸವಿಯ ನವಂಬರ ತಿಂಗಳಲ್ಲಾದರೂ, ಆರಂಭದಲ್ಲಿ ನಿರ್ಣಯಿಸಿದ ೨೦೦ 'ಶೇರು'ಗಳು (ಪಾಲುಗಳು) ಆಗಲೇ ಹಂಚಿಹೋದ ಕಾರಣ ಉಪಾಧ್ಯಾಯರಲ್ಲಿ ಈ ಸಂಘದ ಮೇಲೆ ಭರವಸೆಯಿದೆ ಎಂದು ಹೇಳಬಹುದು. ಮೆಂಬರುಗಳು ೧೫೦೦ ರೂ ಪಾಯಿಗಳಿಗೆ ಮಿಕ್ಕಿದ ದ್ರವ್ಯವನ್ನು ಸಾಲವಾಗಿ ಪಡದಿರುವುದರಿಂದ ಈ ಸಂಘವು ವೃದ್ಧಿಯ ಮೆಟ್ಲುಗಳನ್ನು ಹತ್ತುತ್ತಲಿದೆ ಎಂಬ ಭಾವನೆಯುಂಟಾಗಬಹುದು. ಆದರೆ ಉಪಾಧ್ಯಾಯರಿಗೆನೆ ಒಂದು ಸಂಘವನ್ನು ಏರ್ಪಡಿಸುವ ಆವಶ್ಯಕತೆ ಎಲ್ಲಿಂದ? ಬಡ ಉಪಾಧ್ಯಾಯರ ಋಣವಿಮೋಚನೆಗೆ ಸ್ಥಳೀಯ ಇತರ ಸಂಘಗಳು ಕೈಕೊಡಲಿಕ್ಕಿರುವಾಗ ಹೆಚ್ಚಿನ ಸಂಸ್ಥೆ ಇದೊಂದು ಇರಬೇಕೇ? ಎಂದು ಬರಬಹುದಾದ ಪ್ರಶ್ನೆಗೆ ಮ. ರಾ. ಮಂಗೇಶರಾಯರು ಹೀಗೆಂದು ಉತ್ತರ ಕೊಡುತ್ತಾರೆ. "ಉಪಾಧ್ಯಾಯರಲ್ಲಿ ಮಿತವ್ಯಯ ಮುಂತಾದ ಗುಣಗಳನ್ನು ನೆಲೆಗೊಳಿಸುವುದು ಮಾತ್ರವೇ ಈ ಸಂಘದ ಉದ್ದೇಶವಾಗಿರಲಿಲ್ಲ. ಅದರಲ್ಲಿ ಅಡಕವಾಗಿರುವ ಅಮೋಘ ಉದ್ದೇಶವು ಬೇರೆಯೇ ಆಗಿತ್ತು. ಉಪಾಧ್ಯಾಯರನ್ನು ಇನ್ನೂ ಒಳ್ಳೇ ಕ್ರಮದಿಂದ ಏರ್ಪಡಿಸಿ, ಶಿಕ್ಷಕಾಲಯ

ವಸ್ತುಸಂಗ್ರಹಾಲಯ ಮುಂತಾದುವುಗಳನ್ನು ಸ್ಥಾಪಿಸುವುದರಿಂದ ಅವರಲ್ಲಿರುವ ತಿಳಿವಳಿಕೆಯನ್ನು ವರ್ಧಿಸುವುದೂ, ಶಾಲೆಯ ಕಟ್ಟೋಣಗಳನ್ನು ಅಗತ್ಯವಿರುವಷ್ಟು ವಿಸ್ತರಿಸುವುದಕ್ಕೂ, ಕಲಿಸುವಿಕೆಗೆ ಬೇಕಾದ ಸಾಧನಗಳನ್ನು ಕೊಂಡುಕೊಳ್ಳಲಿಕ್ಕೂ ದ್ರವ್ಯ ಸಹಾಯವನ್ನು ಒದಗಿಸುವುದು, ಶಾಲಾ ಮಾಸಿಕಪತ್ರಿಯೊಂದನ್ನು ಪ್ರಕಟಿಸುವುದು, ಶಾಲಾಸ್ಥಿತಿ ದೇಶಸ್ಥಿತಿಗೆ ಅನುಸಾರವಾದ ಪಾಠಪುಸ್ತಕಗಳನ್ನು ತಯಾರಿಸಿ ಛಾಪಿಸುವುದು, ಮತ್ತು ಈ ವಿವಿಧ ಉಪಾಯಗಳಿಂದ ಶಾಲೆಗಳಿಲ್ಲದ ಹಳ್ಳಿಪಳ್ಳಿಗಳಲ್ಲಿ ವಿದ್ಯಾಪ್ರಸರಣೆಯನ್ನು ಕೈಕೊಳ್ಳುವುದು ಇವೇ ಮೊದಲಾದುವುಗಳು ಈ ಸಂಘವು ಜನ್ಮವೆತ್ತಲಿಕ್ಕೆ ಕಾರಣವಾದ ಉದ್ದೇಶಗಳೆಂದು ಮ॥ ರಾ॥ ಮಂಗೇಶರಾಯರು ತಿಳಿಸುತ್ತಾರೆ. ಈ ವರೆಗೆ ಅಲ್ಲಲ್ಲಿ ಶಾಲಾ ಇನ್ಸ್‌ಪೆಕ್ಟಿಂಗ್ ಆಫಿಸರುಗಳು ಯಾವ ನಿಮಿತ್ತವಾಗಿ ಉಪಾಧ್ಯಾಯರ ಸಭೆಗಳನ್ನು ಸೇರಿಸುತ್ತಿದ್ದರೂ ಅಂಥಾ ಸಭೆಗಳಲ್ಲಿ ಉಪಾಧ್ಯಾಯರು ಹಲವು ಸಲ ದೂರ ಪ್ರಯಾಣ ಮಾಡಬೇಕಾಗಿದ್ದುದರಿಂದಲೂ ಸ್ವಭಾವತಃ ಅವರಿಗೆ ಇಂಥ ಸಭೆಗಳಲ್ಲಿ ಹೆಚ್ಚಿನ ಪ್ರೇಮವು ಇನ್ನೂ ಹುಟ್ಟದೆ ಇರುವುದರಿಂದಲೂ ಇಂಥ ಸಭೆಗಳಲ್ಲಿ ಹಾಜರಿಯು ಕಡಿಮೆಯಾಗಿದ್ದು, ಕೆಲಸವು ಸಮಾಧಾನಕರವಾಗಿಲ್ಲವೆಂದರೆ ತಾವು ಮನಃಪೂರ್ತಿಯಾಗಿ ಮಾಡುವ ಹಲವು ಇನ್ಸ್‌ಪೆಕ್ಟಿಂಗ್ ಆಫಿಸರುಗಳ ಕೆಲಸವನ್ನು ತೃಣೀಕರಿಸಿದೆನೆಂಬ ದೂಷಣೆಗೆ ಒಳಗಾಗುವೆನೋ ಎಂದು ಅವರ ಸಂದೇಹ. ದೇಶೋನ್ನತಿಯು ಉಂಟಾಗಬೇಕಾದರೆ ಜನರಲ್ಲಿ ಬಹು ಕಾಲದಿಂದಲೂ ಕವಿದಿರುವ ಅಜ್ಞಾನದ ಗಾಢಾಂಧಕಾರವು ಬಿಟ್ಟು ತೊಲಗಬೇಕಾದರೆ ಕಲಾಕೌಶಲಗಳೆಂಬ ಸೂರ್ಯನ ಕಿರಣಗಳು ಮೂಲೆಮೂಲೆಗೂ ಹರಡಿಕೊಳ್ಳಬೇಕು. ಪ್ರಾಥಮಿಕ ಶಾಲಾ ಉಪಾಧ್ಯಾಯರ ಅಲ್ಪಜ್ಞಾನವೆಂಬ ಮಿಣುಕುಹುಳದಿಂದ ಈ ಕತ್ತಲೆಯನ್ನು ಹೋಗಲಾಡಿಸುವುದು ಸಾಧ್ಯವೇ? ಮೂರೇ ನಾಲ್ಕು ಅಥವಾ ಐದು ವರ್ಷ ಹಳ್ಳಿ ಶಾಲೆಗಳಲ್ಲಿ ಕಲಿತು, ಅವರಲ್ಲಿ ಕೆಲವಂಶವನ್ನು ಅಲ್ಲಿಯೇ ಮರೆತು, ಹಲವು ಸಲ ಬೇರೆ ವೃತ್ತಿಗಳನ್ನು ಅವಲಂಬಿಸಲು ಅಶಕ್ತರಾಗಿ, ಉಪಾಧ್ಯಾಯರಾಗಿ ಬಂದವರ ಕೈಗಳಿಂದ ದೇಶೋದ್ಧಾರದ ಕೆಲಸವು ಕೈಗೂಡೀತೇ? ಇದರಲ್ಲಿ ಉಪಾಧ್ಯಾಯರ ತಪ್ಪು ಲೇಶಮಾತ್ರವೂ ಇರುವುದಿಲ್ಲ. ಇಂಥವರ ಮೇಲೆ ಆ ಜವಾಬ್ದಾರಿಯನ್ನು ಹೊರಿಸುವವರೇ ಈ ದೂಷಣೆಗೆ ಪಾತ್ರರೆಂದು ನಾವು ಹೇಳಬೇಕು. ಹತ್ತೆಂಟು ವರ್ಷಗಳಿಂದ ಈಚೆಗಲ್ಲದೆ ಪ್ರಾಥಮಿಕ ವಿದ್ಯಾಭ್ಯಾಸದ ಕಡೆಗೆ ಯಾರೂ ಇಣಿಕಿ ನೋಡುತ್ತಿರಲಿಲ್ಲ. ಈಗ ಫಕ್ಕನೆ ಇಂದ್ರಜಾಲಗಾರನು ಮಾವಿನ ಗೊರಟನ್ನು ೫ ನಿಮಿಷಗಳಲ್ಲಿ ಫಲಭರಿತವಾದ ಸಸಿಯಾಗಿ ಮಾಡಿತೋರಿಸಿದಂತೆ ಮಾಡಲು ಸಾಧ್ಯವೂ ಇಲ್ಲ. ಈಗ ಇದ್ದ ಸಾಮಗ್ರಿಗಳನ್ನು ದೂಷಣೆಮಾಡಿ ಮೂಲೆಗೆ ತಳ್ಳುವುದಕ್ಕೆ ಬದಲಾಗಿ ಅವನ್ನು ದುರುಸ್ತಿಪಡಿಸಿ, ಒಂದೊಂದೇ ಮೆಟ್ಟು ಮೇಲಕ್ಕೆ ಹತ್ತಿಕೊಂಡು ಹೋಗುವುದು ಯುಕ್ತವಾಗಿದೆ. ಆದಕಾರಣ ಈಗಿದ್ದ ಉಪಾಧ್ಯಾಯರ ತಿಳಿವಳಿಕೆಯನ್ನು ಕ್ರಮಾಗತಃ ಹೆಚ್ಚಿಸುತ್ತ ಬರುವುದೇ ತಕ್ಕ ಉಪಾಯ. ಅದಕ್ಕೆ ಈ ಉಪಾಧ್ಯಾಯರ ಸಭೆಗಳು ಬೇಕು. "ಆದರೆ ಮೀಟಿಂಗು"ಗಳೆಂಬ ಕಹಿಯಾದ ಮದ್ದು ಗುಳಿಗೆಗೆ ಸುತ್ತಲೂ ದ್ರವ್ಯಸಹಾಯವೆಂಬ ಸಕ್ಕರೆಯನ್ನು ಲೇಪಿಸಿ ಉಪಾಧ್ಯಾಯರಿಗೆ ಅದನ್ನು "ನುಂಗಲಿಕ್ಕೆ ಕೊಡುವುದು ವಾಸಿ"ಯೆಂದು ಈ ಸಂಘಗಳನ್ನು ಏರ್ಪಡಿಸಿದೆವು ಎಂದು ಅವರು ಹೇಳುತ್ತಾರೆ. ಈ ದ್ರವ್ಯ ಸಹಾಯವು ಯಾವುದು? ಕಾಸರಗೋಡು ಉಪಾಧ್ಯಾಯರ ಪರಸ್ಪರ ಸಹಾಯ ಸಂಘದವರು ಮಾರಾಟದ ಬಗ್ಗೆ ಪುಸ್ತಕ ಭಂಡಾರವನ್ನು ಇಟ್ಟು, ಶಾಲಾ ಮಕ್ಕಳ ಬಗ್ಗೆ ಸುಲಭ ಕ್ರಯದಲ್ಲಿ ಪುಸ್ತಕ ಸ್ಲೇಟು ಮುಂತಾದ್ದನ್ನು ಒದಗಿಸುತ್ತಾರೆ. ಇದನ್ನು ಆರಂಭಿಸಿದ ಕಾಲಕ್ಕೆ ಸರಿಯಾಗಿ ಸರಕಾರದವರಿಂದ ಬೋರ್ಡು ಶಾಲೆಗಳಿಗೋಸ್ಕರ ಉಪಕರಣ ಸಾಹಿತ್ಯಗಳ ಬಗ್ಗೆ ದ್ರವ್ಯ ಸಹಾಯ ದೊರಕಿತು. ಇದಲ್ಲದೆ ಪುತ್ತೂರು ತಾಲೂಕು ಬೋರ್ಡಿನ ಪ್ರೆಸಿಡೆಂಟರುಗಳೂ ಈ ಸಂಘಕ್ಕೆ ಸಹಕಾರಿಯಾಗಿದ್ದು ಒಬ್ಬರ ನಂತರ ಒಬ್ಬರು ಈ ದ್ರವ್ಯಸಹಾಯದಿಂದ ತರಿಸುವ ಪುಸ್ತಕ ವಗೈರೆಯ ಕೆಲಸವನ್ನು ಈ ಸಂಘಕ್ಕೆ ಒಪ್ಪಿಸಿದರಿಂದಲೂ, ಮಿಶ್ಯನ್ ಮುಂತಾದ ಗ್ರಂಥ ಪ್ರಚಾರಕರೂ ವಿಕ್ರಯಗಾರರೂ ಉದಾರವಾದ "ಕಮ್ಮಿಶನ್" ಈ ಸಂಘಕ್ಕೆ ಕೊಟ್ಟದ್ದರಿಂದಲೂ ಬಾಜಾರಿನದರದಲ್ಲಿ ಪುಸ್ತಕಗಳನ್ನು ವಿಕ್ರಯಿಸಿದರೂ ಸಂಘಕ್ಕೆ ೩ ವರ್ಷಗಳ ಅಂತ್ಯದಲ್ಲಿ ಸುಮಾರು ೩೦೦ ರೂಪಾಯಿಗಳಿಗೆ ಮಿಕ್ಕಿ ಮುನಾಫೆ ಉಳಿಯಿತು. ಈ ಮುನಾಫೆಗೆ ಸಹ ಭಾಗಿಗಳಾಗುವ ಇಚ್ಛೆಯಿಂದ ಹಲವು ಉಪಾಧ್ಯಾಯರು ಈ ಸಂಘಕ್ಕೆ ಮೆಂಬರರಾಗಿ ಸೇರಲು ಮುಂದು ಬಂದರು. ಈ ಸಂಘವು ಮಾಡಬೇಕಾದ ಮುಂದಿನ ಸತ್ಕಾರ್ಯಗಳಿಗೆ ಸಾಕಷ್ಟು ದ್ರವ್ಯಾನುಕೂಲವು ಒಟ್ಟುಕೂಡಿಸಿಡುವುದು ಅಗತ್ಯವೆಂದು ಭಾವಿಸಿ, ಇಂಥ ಮುನಾಫೆಯು ೧೦೦೦ ರೂಪಾಯಿ ಆಗುವವರೆಗೆ ಅದನ್ನು ಹಂಚಿಕೊಳ್ಳಕೂಡದೆಂದು ಪ್ರಥಮ ವರ್ಷದಲ್ಲಿಯೇ ಠರಾವನ್ನು ಮಾಡಲಾಯಿತಂತೆ.

ಮುಂದರಿಯುವುದು.

ಪತ್ರವ್ಯವಹಾರ.

ಸ್ವಾಮಿ ಪತ್ರಾಧಿಪರೇ,

ಮುನ್ಸಿಪಲ್ ಕೌನ್ಸಿಲರುಗಳ ಮತ್ತು ಇವರನ್ನು ಆರಿಸಿ ತೆಗೆಯುವ 'ವೋಟರು'ಗಳ ಯೋಗ್ಯತೆಗಳನ್ನು ನಿರ್ಣಯಿಸುವ ಕೆಲವು ಹೊಸ ನಿಬಂಧನೆಗಳನ್ನು ಸರಕಾರದವರು ಪ್ರಜಾಜನರ ಪರ್ಯಾಲೋಚನೆ ಬಗ್ಗೆ ಪ್ರಕಟಿಸಿರುವರು. ಮುನ್ಸಿಪಲ್ ಕೌನ್ಸಿಲರುಗಳ ಚುನಾವಣೆಯು ಯೋಗ್ಯರೀತಿಯಲ್ಲಿ ನಡದು ಯೋಗ್ಯರಾದಂಥವರೇ ಕೌನ್ಸಿಲರುಗಳಾಗಿ ಆರಿಸಲ್ಪಡಬೇಕೆಂಬ ಉದ್ದೇಶದಿಂದ ಈ ನಿಯಮುಗಳು ನಿರ್ಮಾಣ ಸೋಣಾದವೆಂತ ತಿಳಿಯುತ್ತೇನೆ. ಮುನ್ಸಿಪಲ್ ಚುನಾವಣೆಗಳಲ್ಲಿ ನಡಿಯುವ ಕಚ್ಚಾಟವು ನಮ್ಮಲ್ಲಿ ಹೊಸತಲ್ಲ. ಕೆಲವು ಸಂದರ್ಭಗಳಲ್ಲಿ ಇಂಥಾ ಕಚ್ಚಾಟವು ಕೌನ್ಸಿಲರುಗಳ ಕಾರ್ಯಸಕ್ತಿಯನ್ನೆಲ್ಲಾ ನುಂಗಿಬಿಟ್ಟು ಇವರನ್ನು ಕೌನ್ಸಿಲಿನಲ್ಲಿ ಬರೆ ಗೊಂಬೆಗಳನ್ನಾಗಿ ಮಾಡಿಬಿಡುವುದು. ವೋಟರುಗಳು ತಮ್ಮ ಯೋಗ್ಯತೆ, ಹಕ್ಕು ಸ್ವಾತಂತ್ರ್ಯ ಮತ್ತು ಜವಾಬ್ದಾರಿಯನ್ನು ಸರಿಯಾಗಿ ತಿಳಿದ ಪಕ್ಷದಲ್ಲಿ ಇಂಥಾ ಕಚ್ಚಾಟಕ್ಕೆ ಆಸ್ಪದ ದೊರಕುವದಿಲ್ಲ. ಮುನ್ಸಿಪಲ್ ಕೌನ್ಸಿಲರರುಗಳ ಚುನಾವಣೆಯ ನಿಯಮುಗಳು ಬರಲಾಗುವಂಥಾ ಈ ಕಾಲದಲ್ಲಿ ಈ ನಿಯಮುಗಳೇನು, ಮತ್ತು ಇವುಗಳಲ್ಲಿ ಮಾರ್ಪಡತಕ್ಕ ವಿಷಯಗಳೇನೆಂಬುದನ್ನು ಕನ್ನಡದಲ್ಲಿಯೇ ಈ ಪತ್ರಮೂಲಕ ಸೂಚಿಸೋಣಾದರೆ ಉಪಕಾರವಾಗುತ್ತಿತ್ತು. ಪಟ್ಟಣಿಗರು ಇಂಥಾ ಅನುಭವವನ್ನು ಆಗಿಂದಾಗ್ಯೆ ಪಡದರೆ ಮುನ್ಸಿಪಲ್ ಆಡಳಿತೆಯ ವಿಚಾರಗಳಲ್ಲಿ ಜನರಿಗೆ ಹೆಚ್ಚಿನ ಅಭಿರುಚಿಯು ಉಂಟಾಗುವುದು, ಕಚ್ಚಾಟವು ಕಡಮೆಯಾಗುವುದು, ಮುನ್ಸಿಪಲ್ ಆಡಳಿತೆಯು ಸರಿಯಾಗಿ ನೆರವೇರುವುದು. ಆದರೆ ವಿದ್ಯಾವಂತರು ನಮ್ಮಲ್ಲಿ ಹೆಚ್ಚು. ವಿದ್ವತ್ತಿಕೆಯ ಶಿಖೆಯು ಇಲ್ಲಿ ಬಹಳ ವಿಪರೀತವಾಗಿ ವಿದ್ಯಾವಂತರಲ್ಲಿ ಹಲವರು ನೋದಂಡ ಸ್ಥಿತಿಯಲ್ಲಿರುವದರಿಂದ ಕನ್ನಡ ಭಾಷೆಯಲ್ಲಿ ಈ ವಿಷಯಗಳನ್ನು ಯೋಚಿಸಿ ಬರೆಯತಕ್ಕವರು ಯಾರೋ ಫಕ್ಕನೆ ಗೊತ್ತಾಗದು! ನಮ್ಮಲ್ಲಿ ಕನ್ನಡ ಪತ್ರವೊಂದಿದೆ ಎಂಬ ಭರವಸೆಯಿಂದ ನನ್ನದೊಂದು ಸೂಚನೆಯನ್ನು ಬರಕೊಂಡಿರುವೆನು.

ಮಂಗಳೂರು ಪಟ್ಟಣಿಗ.

ಹುಡುಗಿಯರ ಪಾಠಶಾಲೆ.

ಅಯ್ಯಾ,

ಈ ಸಂಸ್ಥಾನದ ಆಯಾ ಪ್ರಾಂತ್ಯದವರು ಸರಕಾರದವರನ್ನು ವಿಜ್ಞಾಪಿಸಿಕೊಂಡು ಅಲ್ಲಲ್ಲಿ ಹುಡುಗಿಯರ ಬಗ್ಯೆ ಪಾಠಶಾಲೆಗಳನ್ನು ಒದಗಿಸಿಕೊಂಡಿರುತ್ತಾರೆ. ಸರಕಾರದವರು ಸಹ ಬಾಲಿಕೆಯರ ಶಿಕ್ಷಣ ಪ್ರಸರಣೆಯಲ್ಲಿ ತುಂಬಾ ಉತ್ಸಾಹವುಳ್ಳವರಾಗಿರುವರು. ಈ ಜಿಲ್ಲೆಯ ಲೋಕಲ್ ಬೋರ್ಡುಗಳು ಸಹ ತಮಗೆ ಸಾಧ್ಯವಿರುವ ಸಾಹಸವನ್ನು ಈ ವಿಷಯದಲ್ಲಿ ತೋರಿಸುತ್ತಿದ್ದಾರೆ. ಮಂಗಳೂರ್ರಲ್ಲಿ ಮಾತ್ರ ಪಟ್ಟಣಿಗರ ಸಾಹಸವು ಈ ವಿಷಯದಲ್ಲಿ ವಿಶೇಷವಾಗಿ ತೋರಿಬರುವದಿಲ್ಲ. ಈ ಮಾತು ಸರಿಯಲ್ಲವೆಂತ ಕಂಡು ಬರಬಹುದು. ಜೆಜುಯಿಟ್ ಮಿಶನರಿಗಳಿಂದಲೂ ಬಾಸಲಿನ ಮಿಶನರಿಗಳಿಂದಲೂ ಸ್ಥಾಪಿಸಲ್ಪಟ್ಟ ಹ್ಯಾಸ್ಕೂಲು ಇತ್ಯಾದಿಗಳು ಇಲ್ಲಿ ಇರುತ್ತಾ ಸ್ತ್ರೀ ಶಿಕ್ಷಣ ವಿಷಯದಲ್ಲಿ ನಾವು ಮನಸ್ಸು ಕೊಡುವದಿಲ್ಲ ಎಂಬ ಮಾತಿನ ಅರ್ಥವೇನೆಂತ ಕೆಲವರು ಕೇಳಬಹುದು. ಅಥವಾ ಹುಡುಗಿಯರ ಬಗ್ಯೆ ಇನ್ನೊಂದು ಪಾಠಶಾಲೆಯು ಅಗತ್ಯವಿಲ್ಲವೆಂತ ಹಲವರು ಹೇಳಬಹುದು. ಆದರೆ ಈಗ ಮಿಶನರಿ ಪಾಠಶಾಲೆಗಳಲ್ಲಿ ದೊರಿಯುವ ಶಿಕ್ಷಣವು ನಿರಾಕ್ಷೇಪಕರವೆಂತ ಸರ್ವರೂ ತಿಳಕೊಂಡಿರುವರೇ? ಸ್ಯೆಂಟ್ ಅಲೋಸಿಯಸ್ ಕೊಲೇಜು, ಬಾಸೆಲ್ ಮಿಶನ್ ಹ್ಯಾಸ್ಕೂಲ್ ಇನ್ನು ಹಲವು ಮಿಶನರಿ ಪಾಠಶಾಲೆಗಳು ಹುಡುಗರ ಬಗ್ಯೆ ಇರುತ್ತಾ ಗವರ್ನಮೆಂಟು ಕೊಲೇಜು, ಕೆನರಾ ಹ್ಯಾಸ್ಕೂಲ್, ಗಣಪತಿ ಸೆಕೆಂಡರಿ ಸ್ಕೂಲ್ ಇವುಗಳು ಏಕೆ ಸ್ಥಾಪಿಸೋಣಾದವು? ಹುಡುಗರಿಗೆ ಇಷ್ಟು ಪಾಠಶಾಲೆಗಳಿರುತ್ತಾ ಹುಡುಗರ ಸಂಖ್ಯೆಯಷ್ಟೇ ಇರುವ ಹುಡುಗಿಯರಿಗೆ ಸಹ ಮಿಶನರಿ ಪಾಠಶಾಲೆಗಳ ಹೊರತು ಇತರ ಶಾಲೆಗಳನ್ನು ಸ್ಥಾಪಿಸುವದು ಆಗತ್ಯವಲ್ಲವೇ? ಸರಕಾರದವರು ಮಂಗಳೂರಲ್ಲಿ ಒಂದು ಎಲಿಮೆಂಟರಿ ಶಾಲೆಯನ್ನು ಸ್ಥಾಪಿಸುವರೆಂಬ ವರ್ತಮಾನವಿರುವದು. ಈ ವರ್ತಮಾನದ ನಿಜತ್ವವನ್ನು ತಿಳಕೊಂಡು ಸರಕಾರದವರಿಗೆ ಬೇಕಾದ ಸಹಕಾರವನ್ನು ಕೊಟ್ಟು ಉತ್ತಮ ತರಗತಿಯ ಒಂದು ಹುಡುಗಿಯರ ಪಾಠಶಾಲೆಯನ್ನು ಮಂಗಳೂರಲ್ಲಿ ಸ್ಥಾಪಿತವಾಗುವಂತೆ ಪ್ರಯತ್ನಿಸಬಹುದು. ಇಂಥಾ ಶಾಲೆಯನ್ನು ಸ್ಥಾಪಿಸುವದಾದರೆ ಇಲ್ಲಿಯ ಸೆಂಟ್ರಲ್ ವಾರ್ಡಿನಲ್ಲಿ ಇದನ್ನು ಇರಗೊಳಿಸಿದರೆ ಬಹಳ ಅನುಕೂಲವಾಗುವದು.

ಅಧ್ಯಾಪಕ.

ಯುದ್ಧ ಸಮಾಚಾರ.

ತಾ. ೬ನೇ ಮೇ.

ಡಾರ್ಡನೆಲ್ಸನಲ್ಲಿ ತುರ್ಕರು ಹೊಸ ಸೇನೆಗಳನ್ನು ತಂದು ಮಿತ್ರರ ಸೇನಾನೆಲೆಗಳನ್ನು ಬಲಕಾಯಿಸಿದರೂ ವೈರಿಗಳ ಪ್ರಯತ್ನಗಳು ನಿರರ್ಥಕವಾಗಿ ಹೋದವು. ತುರ್ಕರ ಬಲವನ್ನು ಮುರಿದು ಬಹಳ ನಷ್ಟವನ್ನು ಶತ್ರುಗಳಲ್ಲಿ ಉಂಟುಮಾಡಿ ಮಿತ್ರರ ಸೇನೆಯು ಡಾರ್ಡನೆಲ್ಸ್‌ನಿಂದ ಒಳದೇಶಕ್ಕೆ ಮುಂದರಿಸುತ್ತಿದೆ ಎಂದು ಲಂಡನ್ ಯುದ್ಧ ವರ್ತಮಾನ ಸಂಗ್ರಹದ ಆಫೀಸಿನವರು ಪ್ರಕಟಿಸಿರುವರು.

ಬೆಲ್ಜಿಯಮಿನ ಸ್ಟೀನ್‌ಸ್ಟ್ರೇಟ್ ಪ್ರಾಂತ್ಯಗಳಲ್ಲಿ ಫ್ರೆಂಚರ ಸೇನೆಯು ಮುಂದುವರಿಯುತ್ತಿದೆ ಎಂತಲೂ ಬೊಸಿಜೋರ್ ಎಂಬಲ್ಲಿ ಮೂರುಸಾರಿ ಮೇಲೆ ಹಾಯದು ಬರುತ್ತಿದ್ದ ಜರ್ಮನರನ್ನು ಕೆಡವಿಬಿಟ್ಟಿರುವರೆಂದೂ ಪಾರೀಸು ನಗರದಲ್ಲಿ ಪ್ರಕಟವಾದ ವರ್ತಮಾನದಿಂದ ತಿಳಿದುಬರುತ್ತದೆ.

ವಿಷಕರವಾದ ಗ್ಯಾಸಿನ ಪ್ರಯೋಗವನ್ನು ಜರ್ಮನರು ಅಕಸ್ಮಿತವಾಗಿ ಉಂಟುಮಾಡಿದ್ದರಿಂದ ಕಳೆದ ಹಪ್ತೆಯಲ್ಲಿ ಕೆಲವು ಸೇನಾನೆಲೆಗಳನ್ನು ಕಳಕೊಂಡವು. ಈ ಕಾರಣ ಸೇನೆಯ ನೆಲೆಗಳನ್ನು ತಿರಿಗೊಮ್ಮೆ ಸರಿಮಾಡಿಕೊಳ್ಳಬೇಕಾಯಿತೆಂತಲೂ ಜೊನ್ನೆಬೆಕಿನ ಪಶ್ಚಿಮ ಪ್ರಾಂತ್ಯಗಳಲ್ಲಿ ಸರಿಯಾಗಿ ಸೇನೆಯ ಲ್ಯಾನನ್ನು ಇರಗೊಡಿಸಿರುವೆವೆಂತಲೂ ಫೀಲ್ಡ್ ಮಾರ್ಸೆಲ್ ಫ್ರೆಂಚರ ವೃತ್ತಾಂತದಿಂದ ತೋರಿಬರುತ್ತದೆ.

ಗೆಲಿಸಿಯಾದಲ್ಲಿ ಜರ್ಮನರು ಮತ್ತು ಒಸ್ಟ್ರೀಯನರು ರುಶ್ಯಯನರನ್ನು ಸೋಲಿಸಿದರೆಂಬ ವಾರ್ತೆಗೆ ಆಧಾರವಿರದೆಂದು ತಿಳಿದುಬರುತ್ತದೆ. ಕಳೆದ ಆದಿತ್ಯವಾರ ಮತ್ತು ಸೋಮವಾರ ಗೆಲಿಸಿಯಾದಲ್ಲಿ ವಿಸ್ಟುಲಾ ನದಿಯಿಂದ ಕಾರ್ಪೆಥಿಯನ್ಸ್ ಗುಡ್ಡಗಳ ವರೆಗಿನ ಯುದ್ಧರಂಗದಲ್ಲಿ ರುಶ್ಯನರಿಗೂ ಜರ್ಮನರಿಗೂ ಹಲವು ಕಾಳಗಗಳು ನಡೆದವು. ಶತ್ರುಗಳು ಡುನಾಜೆಟ್ಜ್ ಎಂಬ ನದಿಯನ್ನು ದಾಟಿದರೂ ರುಶ್ಯಯನರ ಬಲವು ಇವರನ್ನು ಇಲ್ಲಿಂದ ಮುಂದುವರಿಯಲು ಬಿಡಲಿಲ್ಲ. ಟುಕೋವ್ ಪ್ರಾಂತ್ಯಗಳಲ್ಲಿ ನಡೆದ ಸಂಗ್ರಾಮಗಳಲ್ಲಿ ರುಶ್ಯಯನರು ಶತ್ರುಗಳ ಹಲವು ಸೇನಿಕರನ್ನು ಕೈದಿಗಳನ್ನಾಗಿ ಹಿಡಿದಿರುವರು. ಸ್ಟ್ರೈಜ್ ಪ್ರಾಂತ್ಯಗಳಲ್ಲಿ ಒಂದು ಕಠಿಣ ಕದನವು ನಡಿಯುತ್ತಲಿದೆ.

ಕೊಕಸಿಯಾ ಪ್ರಾಂತ್ಯಗಳಲ್ಲಿ ರುಶ್ಯಯನರು ಮೂರು ದಿನಗಳ ತನಕ ಕಾದಾಡಿಕೊಂಡು ತುರ್ಕರ ಖಾಲಿಲ್ ಬೇರ ಸೇನೆಯನ್ನು ಸೋಲಿಸಿರುವರು. ೩೫೦೦ ತುರ್ಕರ ಸೇನಿಕರು ಯುದ್ಧರಂಗದಲ್ಲಿ ಸತ್ತುಬಿದ್ದಿರುವರು.

ತಾ ೭ನೇ ಮೇ.

ಯುಪ್ರೆಸಿನ ಉತ್ತರ ಪ್ರಾಂತ್ಯಗಳಲ್ಲಿ ಜರ್ಮನರು ಬ್ರಿಟಿಷ ಸೇನೆಯ ಎಡಭಾಗವನ್ನು ಎದುರಾಡಿಕೊಂಡು ಬಂದರೂ ಬ್ರಿಟಿಷರು ಇವರನ್ನು ಹಿಮ್ಮೆಟ್ಟಿ ಬಿಟ್ಟಿರುತ್ತಾರೆ. ಬೆಲ್ಜಿಯಮಿನಲ್ಲಿ ಫ್ರೆಂಚರು ಶತ್ರುಗಳ ಸೇನಾ ಸುರಂಗವನ್ನು ಹಿಡಿದು ಕೈವಶ ಮಾಡಿಕೊಂಡಿದ್ದಾರೆ. ವಿಸ್ಟುಲಾ ಮತ್ತು ಕಾರ್ಪೆಥಿಯನ್ ಗುಡ್ಡಗಳ ಪ್ರಾಂತ್ಯಗಳಲ್ಲಿ ಜರ್ಮನರಿಗೂ ರುಶ್ಯಯನರಿಗೂ ಕಠಿಣ ಕಾಳಗವು ಇನ್ನೂ ನಡಿಯುತ್ತಿರುವದು. ಜರ್ಮನರ ಸೇನೆಯ ಬೆಂಬಲಕ್ಕೆ ಹೊಸ ಫೌಜು ಬಂದಿದೆ. ಮಾಕುವಾಕಾ ಗುಡ್ಡಗಳಲ್ಲಿಯ ಕೆಲವು ಕಂದಕಗಳನ್ನು ಜರ್ಮನರು ಕೈವಶಮಾಡಿಕೊಂಡರೂ ಮರುದಿನ ರುಶ್ಯಯನರು ಈ ಕಂದಕಗಳನ್ನು ಶತ್ರುಗಳಿಂದ ಪೂರ್ಣವಾಗಿ ಬಿಡಿಸಿಕೊಂಡಿರುವರು.

ತಾ. ೮ನೇ ಮೇ.

ಡಾರ್ಡನಲ್ಸ್‌ನಲ್ಲಿ ದಂಡನ್ನಿಳಿಸಿದ ವೃತ್ತಾಂತವನ್ನು ಮಿ। ಎಸ್ಕ್ವಿತರವರು ಪಾರ್ಲಿಮೆಂಟ ಸಭೆಯಲ್ಲಿ ವಿವರಿಸಿ ಹೇಳಿರುವರು. ಆಸ್ಟ್ರೇಲಿಯದಿಂದ ಬಂದಂಥಾ ಸೇನೆಯ ಪರಾಕ್ರಮವು ಬಹಳ ವಿಶೇಷವಾಗಿ ಶ್ಲಾಘಿಸಲ್ಪಟ್ಟಿರುವದು. ಎಪ್ರಿಲ್ ತಿಂಗಳ ತಾ. ೨೫ ರೊಳಗೆ ೨೯,೦೦೦ ಸೇನಿಕರ ಸೇನೆಯು ಡಾರ್ಡನಲ್ಸ್‌ನಲ್ಲಿ ಬಂದಿಳಿದು ತಾ. ೨೮ ಮತ್ತು ೨೯ರಲ್ಲಿ ಮಿತ್ರಸ್ಯ ಸೇನೆಯನ್ನು ಹಡಗಗಳಿಂದಿಳಿಸಿ ಡಾರ್ಡನೆಲ್ಸ್‌ನಿಂದ ಎರಡು ಮೈಲುಗಳ ವಿಸ್ತೀರ್ಣದ ನೆಲೆಗಳನ್ನು ಬ್ರಿಟಿಷರು ತಮ್ಮ ಕೈವಶಮಾಡಿಕೊಂಡಿರುತ್ತಾರೆ.

ವ್ಯಾಪಾರದ ಹಡಗುಗಳನ್ನು ಮುಳುಗಿಸಿದ ಜರ್ಮನರ ಅತ್ಯಾಚಾರದ ವೃತ್ತಾಂತವು ಪ್ರಕಟಿಸಲ್ಪಟ್ಟಿರುವುದು. ಪಶ್ಚಿಮ ರಣರಂಗದಲ್ಲಿ ಕದನಗಳ ಪ್ರಸ್ತಾಪವು ವಿಶೇಷವಾಗಿರದು. ಬ್ರಿಟಿಷರು ಹಿಲ್ ಸಿಕ್ಸ್ಟಿಯಲ್ಲಿ ಕಳಕೊಂಡ ಕಂದಕಗಳನ್ನು ಶತ್ರುಗಳಿಂದ ಹಿಂದಕ್ಕೆ ಪಡಿಯುತ್ತಿದ್ದಾರೆ. ಯುದ್ಧಕ್ಕೆ ಈ ತನಕ ಸೇರದೆ ಇರುವ ಜನಾಂಗಗಳಿಗೆ ತಮ್ಮ ಪರಾಕ್ರಮವನ್ನು ತೋರಿಸಿ ಅವರಲ್ಲಿ ಅಂಜಿಕೆಯನ್ನುಂಟುಮಾಡುವ ಉದ್ದೇಶದಿಂದ ಕಳೆದ ೧೫ ದಿವಸಗಳಲ್ಲಿ ಬೆಲ್ಜಿಯಮ್, ಮ್ಯೂಜ್ ನದಿಯ ಬಳಿ ಮತ್ತು ಕಾರ್ಪೆಥಿಯನ್ ಪ್ರಾಂತ್ಯಗಳಲ್ಲಿ ಜೀವದಾಶೆಯನ್ನು ಬಿಟ್ಟು ವಿಶೇಷವಾಗಿ ಕಾದಾಡಿದರೂ ಪ್ರತಿ ಒಂದು ಕಡೆಯಲ್ಲಿಯೂ ಇವರು ಸೋಲಿಸಲ್ಪಟ್ಟಿರುವರೆಂಬುದಾಗಿ ಒಂದು ಫ್ರೆಂಚ್ ಪ್ರಕಟಣೆಯಿಂದ ತೋರಿಬರುವುದು. ಈ ಪ್ರಯತ್ನಗಳಲ್ಲಿ ಜರ್ಮನರು ಬೆಲ್ಜಿಯಮ್ ಮತ್ತು ಫ್ರಾನ್ಸ್ ಪ್ರಾಂತ್ಯಗಳಲ್ಲಿ ೩೫೦೦೦ ಸೇನಿಕರನ್ನು ಕಳಕೊಂಡಿರುವರೆಂತಲೂ ಜರ್ಮನರ ಅತ್ಯುತ್ಕೃಷ್ಟವಾದ ೬ ಸೇನಾಂಗಗಳು ಮಡಿದು ಹೋಗಿರುವವೆಂತಲೂ ಇದೇ ಪ್ರಕಟಣೆಯಲ್ಲಿ ತಿಳಿಸೋಣಾಗಿರುವುದು. ಜರ್ಮನರ ಜನರಲ್ ಫೋನ್ ಸೆಡೆವಿಟ್ಜರವರು ಯುದ್ಧದಲ್ಲಿ ಮಡಿದುಹೋಗಿರುವರು.

ಸ್ಟ್ರೀಟ್ಸ್ ಪ್ರಾಂತ್ಯಗಳಲ್ಲಿ ರುಶ್ಯಯನರು ಜರ್ಮನರನ್ನು ಸೋಲಿಸಿಬಿಟ್ಟಿರುವರು. ಕಾರ್ಪೆಥಿಯನ್ ಪ್ರಾಂತ್ಯಗಳಲ್ಲಿ ನಡಿಯುವ ಕದನವು ಇನ್ನೂ ಮುಗಿದಿರುವದಿಲ್ಲ.

ತಾ. ೯ನೇ ಮೇ.

ಬೊಸ್ಪರಸ್ಸಿನ ಹೊರ ಪ್ರಾಂತ್ಯಗಳಲ್ಲಿ ರುಶ್ಯಯನರು ತುರ್ಕರ ಯುದ್ಧದ ಸಾಮಗ್ರಿಗಳನ್ನು ಒಯ್ಯುವ ೬ ಹಡಗಗಳನ್ನು ಮುಳುಗಿಸಿಬಿಟ್ಟಿರುವರು. ನೊರ್ತಸಿ ಉಪಸಾಗರದಲ್ಲಿ ಬ್ರಿಟಿಷರ ಡಿಸ್ಟ್ರೋಯರ್ ನಾವೆಯು ಸಮುದ್ರದೊಳಗೆ ಹಾಕೋಣಾದ ಮದ್ದಿನ ಗನಿಗಳಿಗೆ ತಾಗಿ ಮುಳುಗಿಹೋಗಿದೆ. ಜರ್ಮನರ ಜಲಂತರ್ಗಾಮಿ ನಾವೆಯು ಸ್ಕೋಟಾಲದ ಕರಾವಳಿ ಬಳಿಯಲ್ಲಿ ಟ್ರಿರೊ ಎಂಬ ಹಡಗವನ್ನು ಮುಳುಗಿಸಿದೆ. ಮೇ ತಾ. ೫ಕ್ಕೆ ಅಂತ್ಯವಾಗುವ ವಾರದಲ್ಲಿ ಜರ್ಮನರ ಜಲಂತರ್ಗಾಮಿ ನಾವೆಗಳು ೧೧,೦೦೦ ಟನ್ನುಗಳ ಬ್ರಿಟಿಷ ವರ್ತಕ ಹಡಗಗಳನ್ನೂ, ೩೦೦೦ ಟನ್ನುಗಳ ಮೀನು ಶಿಕಾರಿ ಹಡಗಗಳನ್ನೂ ನಾಶಪಡಿಸಿರುತ್ತವೆಂತ ನೌಕಾಬಲ ಆಫೀಸಿನವರು ಪ್ರಕಟಿಸಿದ್ದಾರೆ. ಲುಸಿಟಾನಾ ಎಂಬ ಪ್ರಯಾಣಿಕರಿಂದ ತುಂಬಿಕೊಂಡಿದ್ದ ದೊಡ್ಡ ಹಡಗವು ಜರ್ಮನರಿಂದ ಹ್ಯಾಗೆ ನಾಶಗೊಳಿಸಲ್ಪಟ್ಟಿತೆಂಬ ಭೀಕರ ವೃತ್ತಾಂತವು ಪ್ರಕಟಿಸಲ್ಪಟ್ಟಿರುತ್ತದೆ. ಲುಸಿಟಾನಾ ಹಡಗವು ಐರ್ಲಾಂಡವನ್ನು ಹತ್ತಿರ ಸೇರುತ್ತಿದ್ದಾಗ ಸುಮಾರು ೧೦೦೦ ಗಜಗಳ ದೂರದಲ್ಲಿ ಒಂದು ಜರ್ಮನರ ಜಲಂತರ್ಗಾಮಿ ನಾವೆಯು ಲುಸಿಟಾನಾದ ಕಡೆ ಎರಡು ಟೋರ್ಪೆಡೋಗಳನ್ನು ಹಾರಿಸಿ ಬಿಟ್ಟಿತು. ಹಡಗವು ಕೂಡಲೆ ಒಡೆದು ಹೋಗಿ ಮುಳುಗುತ್ತಿರುವಷ್ಟರಲ್ಲಿ ಹಡಗದ ಕಲಾಸಿಗಳು ಈ ಹಡಗದಲ್ಲಿರುವ ಪ್ರಯಾಣಿಕರನ್ನು ದೋಣಿಗಳಲ್ಲಿ ಒಯ್ಯಲು ಪ್ರಯತ್ನಿಸಿದರು. ಆದರೆ ಎಲ್ಲರನ್ನು ಉಳಿಸಲಿಕ್ಕೆ ಸಾಧ್ಯವಾಗಲಿಲ್ಲ. ಒಂದು ವರುಷ ಪ್ರಾಯದ ಕೆಳಗಿನ ೪೦ ಕೂಸುಗಳೂ, ಅನೇಕ ಸ್ತ್ರೀಪುರುಷರೂ ಈ ಹಡಗದಲ್ಲಿದ್ದರೆಂತ ತೋರಿಬರುತ್ತದೆ. ಅಮೇರಿಕದ ಸಂಯುಕ್ತ ಸಂಸ್ಥಾನಗಳ ಮುಂದಾಳುಗಳಲ್ಲಿ ಕೆಲವರು ಈ ಹಡಗದಲ್ಲಿದ್ದು ಮುಳುಗಿಹೋದುದರಿಂದ ಅಮೇರಿಕಕ್ಕೆ ಜರ್ಮನರ ಈ ಭಯಂಕರ ಕ್ರೂರಕೃತ್ಯದಿಂದ ವಿಶೇಷ ಮನನೊಂದಿರುವದು. ಎಲ್ಲಾ ಜನಾಂಗಗಳೂ ಜರ್ಮನರು ಈ ರೀತಿ ಮಾಡಿದ ಕೊಲೆಯನ್ನು ಕೇಳಿ ಬಹಳ ವಿಷಾದಿಸುತ್ತಿರುವರಲ್ಲದೆ ಈ ಬಗ್ಗೆ ಜರ್ಮನರನ್ನು ಬಹಳವಾಗಿ ನಿಂದಿಸುತ್ತಿದ್ದಾರೆ. ಲುಸುಟಾನಾ ಹಡಗದಲ್ಲಿದ್ದ ಪ್ರಯಾಣಿಕರಲ್ಲಿ ೬೫೮ ಜನರು ಬದುಕಿರುವರು. ಸತ್ತವರ ಅಥವಾ ಕಾಣೆಯಾಗಿಹೋದವರ ಸಂಖ್ಯೆ ೧೫೦೬ ಆಗಿರುವದು.

ಪಶ್ಚಿಮ ರಣರಂಗದಲ್ಲಿ ಹಿಲ್ ಸಿಕ್ಸ್ಟಿಯಲ್ಲಿ ಬ್ರಿಟಿಷರು ಶತ್ರುಗಳನ್ನು ಹಿಮ್ಮೆಟ್ಟಿಕೊಂಡು ಕಂದಕಗಳನ್ನು ಕೈವಶಮಾಡುತ್ತಿರುವರು. ಫ್ರೆಂಚ ಮತ್ತು ಜರ್ಮನರೊಳಗೆ ತೋಪುಗಳ ಕಾಳಗವು ಅಲ್ಪಸ್ವಲ್ಪ ನಡಿಯುತ್ತಿದೆ. ಲೆನ್ಸ್ ಎಂಬಲ್ಲಿ ಫ್ರೆಂಚರು ಶತ್ರುಗಳನ್ನು ಸೆರೆಹಿಡಿದಿರುವರು. ಲಿಲ್ಲೆಯ ಉತ್ತರ ಪಾರ್ಶ್ವದಲ್ಲಿರುವ ರೈಲ್ವೆಗಳು ಬಂದು ಕೂಡುವ ಎಂಡ್ರೆ ಎಂಬ ಸ್ಟೇಶನಿನ ಮೇಲೆ ಬ್ರಿಟಿಷ ವಾಯುವಿಮಾನಕಾರರು ಸಿಡಿಮದ್ದಿನ ಕೋಟೆಗಳನ್ನು ಬಿಸಾಡಿ ರೈಲ್ವೆಗಳನ್ನು ನಾಶಗೊಳಿಸುತ್ತಿದ್ದಾರೆ. ಜರ್ಮನರ ಸೇನೆಯಲ್ಲಿ ಒಂದು ತಿಂಗಳಲ್ಲಿ ಸಾಯುತ್ತಿರುವ ಸೇನಿಕರ ಸರಾಸರಿ ಸಂಖ್ಯೆಯು ೨೬೦,೦೦೦ಕ್ಕೆ ಮಿಕ್ಕಿರುವದೆಂತ ಒಬ್ಬ ಅನುಭವಸ್ಥ ದಳವಾಯಿಗಳು ನಿರ್ಣಯಿಸಿರುವರು.

ತಾ. ೧೦ನೇ ಮೇ.

ನ್ಯೂಪೋರ್ಟನಿಂದ ಸಮುದ್ರ ವರೆಗಿನ ಯುದ್ಧರಂಗದಲ್ಲಿ ಜರ್ಮನರನ್ನು ಬ್ರಿಟಿಷರು ಹಿಂದಟ್ಟಿರುವರು. ಫ್ರೊಮೆಲ್ಲೆ ಪ್ರಾಂತ್ಯಗಳಲ್ಲಿ ಬ್ರಿಟಿಷರು ಹಲವು ಸೇನಾನೆಲೆಗಳನ್ನು ಕೈವಶಮಾಡಿಕೊಂಡಿರುತ್ತಾರೆ. ಎರಾಸ್ ಉತ್ತರ ದಿಕ್ಕುಗಳಲ್ಲಿ ಮಿತ್ರರು ಬಹಳ ಜಯಶೀಲರಾಗಿರುವರು. ಶತ್ರುಗಳು ಬಹಳವಾಗಿ ಕಾಪಾಡಿಕೊಂಡಿದ್ದ ಕಂದಕಗಳನ್ನು ಈ ಪ್ರಾಂತ್ಯಗಳಲ್ಲಿ ಮಿತ್ರರು ಕೈವಶಮಾಡಿಕೊಂಡು ಟಾರ್ಗೆತ್ ಎಂಬ ಗ್ರಾಮವನ್ನು ಹಿಡಿದಿರುವರು.

ವಿಸ್ಟುಲಾ ಮತ್ತು ಕಾರ್ಪೆಥಿಯನ್ ಗುಡ್ಡಗಳ ನಡುವೆ ಜರ್ಮನರ ಮತ್ತು ರುಶ್ಯರೊಳಗೆ ನಡಿಯುತ್ತಿರುವ ಕದನದಲ್ಲಿ ತಾವು ಜಯಶೀಲರಾದೆವೆಂತ ಜರ್ಮನರು ಹೇಳಿದರೂ ರುಶ್ಯಯನರು ಇದಕ್ಕೆ ಒಡಂಬಡುವದಿಲ್ಲ. ಈ ಕದನವು ಬಹಳ ಕಠಿಣತೆಯಲ್ಲಿ ನಡಿಯುತ್ತಿದೆಂಬುದಾಗಿ ರುಶ್ಯಯನರ ವೃತ್ತಾಂತದಿಂದ ತಿಳಿದುಬರುತ್ತದೆ. ಬೊಲ್ಟಿಕ್ ಸಂಸ್ಥಾನಗಳಲ್ಲಿ ಜರ್ಮನರು ಲಿಬೊ ಪಟ್ಟಣವನ್ನು ಹಿಡಿದಿರುವರೆಂತ ಹೇಳುವರು. ಆದರೆ ಜರ್ಮನರ ಒಂದು ನೌಕಾಘಡೆಯು ಲಿಬೊವನ್ನು ಮುತ್ತಿರುವದೆಂದೂ ಜರ್ಮನರ ಒಂದು ಡಿಸ್ಟ್ರೋಯರ್ ಹಡಗವು ಸಮುದ್ರದಲ್ಲಿ ಹಾಕಿರುವ ಮದ್ದಿನ ಗನಿಗೆ ತಗಲಿ ಹಾಳಾಗಿ ಹೋಯಿತೆಂಬದಾಗಿಯೂ ರುಶ್ಯಯನರ ಹೇಳಿಕೆಯಾಗಿದೆ.

ತಾ. ೧೧ನೇ ಮೇ.

ಮಿತ್ರರ ಯುದ್ಧನಾವೆಗಳು ಡಾರ್ಡನೆಲ್ಸ್‌ನಲ್ಲಿ ನಾಗಾರಾ ಕೋಟೆಯನ್ನು ಫಿರಂಗಿಗಳಿಂದ ಹಾರಿಸುತ್ತಿದ್ದಾರೆ. ಡಾರ್ಡನೆಲ್ಸ್‌ನಲ್ಲಿ ಇಳಿದು ಮುಂದುವರಿದ ಸೇನೆಗಳು ಕಿಲಿದ್ ಬಹಾರನ್ನು ಆಕ್ರಮಿಸಿಕೊಂಡಿರುವರು. ಡಾರ್ಡನೆಲ್ಸನಲ್ಲಿ ಕಾದಾಡುತ್ತಿರುವ ಬ್ರಿಟಿಷ ಪ್ರಾಮುಖ್ಯ ಮಂತ್ರಿಗಳ ೩ನೇ ಪುತ್ರರು ವಿಶೇಷ ಘಾಯಪಡೆದಿರುವರಾಗಿ ತಿಳಿಯುತ್ತೇವೆ.

'ಕೆಟವಿಕ್' ಎಂಬ ಡಚ್ಚರ ಹಡಗವನ್ನು ಜರ್ಮನರು ತಮ್ಮ ಶತ್ರುಗಳ ಹಡಗವೆಂತ ತಿಳಕೊಂಡು ನಾಶಪಡಿಸಿದ್ದರಿಂದ ಈ ಬಗ್ಗೆ ತಮ್ಮ ವಿಷಾದವನ್ನು ಜರ್ಮನರು ತೋರ್ಪಡಿಸಿ ಡಚ್ಚರಿಗೆ ಉಂಟಾದ ನಷ್ಟವನ್ನು ತೆರಲು ಸಿದ್ಧವಿರುವೆವೆಂಬದಾಗಿ ತಿಳಿಸಿರುವರು.

ಲುಸುಟಾನಾ ಹಡಗದಿಂದ ಬದುಕಿದವರ ಸಂಖ್ಯೆಯು ೭೬೪ ಆಗಿರುವುದೆಂತ ಪುನಹ ಒಂದು ಪಟ್ಟಿಯು ಪ್ರಕಟಿಸಲ್ಪಟ್ಟಿದೆ. ಅಮೇರಿಕದಲ್ಲಿ ಲುಸುಟಾನಾ ಹಡಗವು ನಾಶವಾದ್ದರಿಂದ ಉಂಟಾದ ಮನಸ್ತಾಪವು ನಾನಾ ವಿಧಗಳಲ್ಲಿ ವ್ಯಕ್ತವಾಗುತ್ತಿರುವುದು. ಅಮೇರಿಕದ ಸಂಸ್ಥಾನಗಳ ಪ್ರೆಸಿಡೆಂಟ ವಿಲ್ಸನ್‌ರವರು ದುಃಖದಿಂದ ಯಾರಿಗೂ ಭೇಟಿಯನ್ನು ಕೊಡಲು ನಿರಾಕರಿಸುತ್ತಿರುವರು. ಯುದ್ಧವನ್ನು ಸೇರದೆ ತಟಸ್ಥಭಾವದಲ್ಲಿರುವ ಜನಾಂಗದವರನ್ನು ಕೊಲ್ಲದೆ ಜರ್ಮನಿಯು ಯುದ್ಧವನ್ನು ನಡಿಸುವಂತೆ ತಕ್ಕ ಏರ್ಪಾಡನ್ನು ಮಾಡಬೇಕೆಂತ ಅಮೇರಿಕದ ಪತ್ರಿಗಳೂ ಪ್ರಜಾ ಮುಂದಾಳುಗಳೂ ಸೂಚಿಸುತ್ತಿದ್ದಾರೆ. ಅಮೇರಿಕದಲ್ಲಿರುವ ಜರ್ಮನ್ ರಾಯಭಾರಿಯ ಮನೆಗೆ ಸಿಡಿಮದ್ದಿನ ಕೋಟೆಯನ್ನು ಎಸೆದು ಕೊಂದುಬಿಡುವವೆಂತ ರಾಯಭಾರಿಗೆ ಅನಾಮಿಕ ಪತ್ರಗಳು ಬಂದಿರುತ್ತವೆ. ಲುಸುಟಾನಾ ಹಡಗವು ನಾಶವಾಗಿ ಅಮೇರಿಕದವರಿಗೆ ಉಂಟಾದ ನಷ್ಟವನ್ನು ಕುರಿತು ವಿಷಾದಿಸಿ ಈ ನಷ್ಟಕ್ಕೆ [illegible] ರಾಗಿರುವ

ರೆಂತ ಜರ್ಮನ ಸರಕಾರದವರು ಅಮೇರಿಕದ ಪ್ರೆಸಿಡೆಂಟರಿಗೆ ಸೂಚಿಸಿರುತ್ತಾರೆ. ಬ್ರಿಟನದಲ್ಲಿ ಹಡಗವು ಮುಳುಗಿ ಹೋದ ವಿಷಯದಲ್ಲಿ ತನಖಿ ನಡಿಸಿದ ಜಡ್ಜರವರು ಸಾವಿರಾರು ಪ್ರಾಣಗಳ ಕೊಲೆಯನ್ನು ಮಾಡಿದ ಈ ತಪ್ಪು ಜರ್ಮನ್ ಕೈಸರರ ಮತ್ತು ಜರ್ಮನ್ ಸರಕಾರದವರ ಮೇಲೆ ಸ್ಥಾಪಿತವಾಗುವದೆಂತ ಹೇಳಿರುತ್ತಾರೆ. ಅಂಗ್ಲಾಂಡದಲ್ಲಿ ಲುಸುಟಾನಾ ಹಡಗು ನಾಶವಾಗಿ ಹೋದ ವೃತ್ತಾಂತವನ್ನು ಜನರು ಕೇಳುತ್ತಿರುವ ಆತುರದಿಂದ ಯುದ್ಧ ವೃತ್ತಾಂತವನ್ನು ಸಹ ವಿಶೇಷವಾಗಿ ಕೇಳರು. ಇಂಥಾ ಹೀನವೃತ್ತಿಯ ಜರ್ಮನರನ್ನು ಓಡಿಸಿ ಬಿಡಬೇಕೆಂಬ ಹಟದಿಂದ ಅನೇಕ ಮಂದಿ ಸೇನೆಯನ್ನು ಕೂಡುತ್ತಿದ್ದಾರೆ. ಈ ಜರ್ಮನ್ ದುಷ್ಟರಿಗೆ ಉಚಿತವಾದ ಶಿಕ್ಷೆಯನ್ನು ದೇವರು ಕೊಡಲೆಂಬುದಾಗಿ ಪ್ರಾರ್ಥನೆಗಳು ನಡಿಯುತ್ತಿರುವವು.

ಪಶ್ಚಿಮ ರಣರಂಗದಲ್ಲಿ ಕೆರೆನ್ಸಿ ಮತ್ತು ಶಾಟೆಸ್‌ಗಳ ನಡುವೆ ಫ್ರೆಂಚರು ೩೦೦೦ ಜರ್ಮನ್ ಸೇನಿಕರನ್ನೂ ೪೦ ಜನ ಆಫೀಸರರನ್ನೂ ಸೆರೆಹಿಡಿದಿರುವರು. ಹತ್ತು ತೋಪುಗಳೂ ೫೦ ಫಿರಂಗಿಗಳೂ ಫ್ರೆಂಚರಿಗೆ ಸಿಕ್ಕಿರುತ್ತವೆ. ಜಪಲಿನ್ ಆಕಾಶನಾವೆಗಳು ಅಂಗ್ಲಾಂಡ ಕರಾವಳಿಯಲ್ಲಿ ೧೫ ಬೊಂಬುಗಳನ್ನು ಬಿಸಾಡಿದವು. ಸುಮಾರು ಆರು ಮನೆಗಳು ಅಲ್ಪಸ್ವಲ್ಪ ಹಾಳಾಗಿರುವವು, ಗಾಯ ಒಡೆದ ಒಬ್ಬ ಮುದುಕನು ಆಸ್ಪತ್ರೆಯಲ್ಲಿ ಸತ್ತುಹೋಗಿರುವನು.

ಪೂರ್ವ ರಣರಂಗದಲ್ಲಿ ಗೆಲಿಸಿಯಾದಲ್ಲಿ ಕೈಸರರು ಸ್ವತಃ ಬಂದು ಯುದ್ಧವನ್ನು ನೋಡುತ್ತಿರುವರು.

ತಾ. ೧೦ನೇ ಮೇ.

ಎರಾಸ್ ಪ್ರಾಂತ್ಯಗಳಲ್ಲಿ ಕಠಿಣವಾದ ಕಾಳಗವು ನಡಿಯುತ್ತಿರುವದು. ಉಭಯ ಕಡೆಗಳಲ್ಲಿಯೂ ನಷ್ಟವು ಬಹಳ ವಿಪರೀತವಾಗಿ ಸಂಭವಿಸುತ್ತಿದೆ. ಪೂರ್ವ ರಣರಂಗದಲ್ಲಿ ಶತ್ರುಗಳು ಪಶ್ಚಿಮ ಗೆಲಿಸಿಯಾದಲ್ಲಿ ವಿಶೇಷ ಪೇಚಾಟಪಟ್ಟು ಕಾರ್ಪಾತಿಯ ಮೇಲೆ ವಿಸ್ಟುಲಾವನ್ನು ದಾಟಲು ಸಮರ್ಥರಾದರು. ಕಳದ ವಾರದಲ್ಲಿ ಅನೇಕ ಸಾವಿರ ಜರ್ಮನ್ ಸೇನಿಕರನ್ನು ರುಶ್ಯಯನರು ಸೆರೆಹಿಡಿದಿರುವರು.

ವಿದೇಶ ವೃತ್ತಾಂತ.

ಲಿಂಕಶಾಯರಿನಲ್ಲಿರುವ ಹಲವು ವಸ್ತ್ರದ ಕಾರ್ಖಾನೆಗಳು ಪ್ರಕೃತ ಯುದ್ಧ ಸಾಮಾಗ್ರಿಗಳನ್ನು ತಯಾರಿಸುತ್ತವೆ.

೨೦೦,೦೦೦ ಗುಂಡುಗಳನ್ನು ಪ್ರತಿನಿತ್ಯದಲ್ಲಿಯೂ ತನಗೆ ಸಂಗ್ರಹಿಸಿಕೊಟ್ಟ ವಿನಹ ಜರ್ಮನರನ್ನು ಫ್ರಾನ್ಸಿನಿಂದ ಓಡಿಸಲು ತನಗೆ ಸಾಧ್ಯವಿಲ್ಲವೆಂದು ಫ್ರೆಂಚರ ಸೇನಾನಾಯಕರಾದ ಜನರಲ್ ಜೊಫ್ರೆಯವರು ತಿಳಿಸಿದ ಮೇರೆಗೆ ಫ್ರೆಂಚ ಸರಕಾರದವರು ಇದೇ ಮೇ ತಿಂಗಳ ಒಂದನೇ ತಾರೀಕಿನಿಂದ ೨೦೦,೦೦೦ ಸೆಲ್ಸ್‌ಯಾ ಗುಂಡುಗಳನ್ನು ಸಂಗ್ರಹಿಸಿಕೊಡುತ್ತಿರುವರು.

ಅಮೇರಿಕದ ಸಂಯುಕ್ತ ಸಂಸ್ಥಾನಗಳಿಗೆ ಜರ್ಮನಿಯಿಂದ ಕಳದ ಮಾರ್ಚ ತಿಂಗಳ ಅಂತ್ಯದ ವರೆಗೆ ೧,೨೬೯,೦೦೦ ಪವನುಗಳ ಮೌಲ್ಯದ ಸಾಮಾಗ್ರಿಗಳು ಬಂದಿದ್ದವು. ೧೯೧೪ನೇ ಮಾರ್ಚ ಅಂತ್ಯದ ವರೆಗೆ ಹೀಗೆ ಬಂದ ಸಾಮಾಗ್ರಿಗಳ ಮೌಲ್ಯವು ೧,೨೯೨,೦೦೦ ಪವನುಗಳಾಗಿತ್ತು.

ಬ್ರಿಟಿಷ ಪಾರ್ಲಿಮೆಂಟ ಸಭೆಯ ವ್ಯಾಪಾರ ಶಾಖೆಯ ಉಪಕಾರ್ಯದರ್ಶಿಗಳವರು ೮೪,೦೦೦,೦೦೦ ಪವನುಗಳ ಮೌಲ್ಯದ ಜರ್ಮನರ ಸೊತ್ತುಗಳು ಬ್ರಿಟಿಷರ ಸ್ವಾಧೀನತೆಯಲ್ಲಿ ಇನ್ನು ಮುಂದೆ ತೋರಿ ಬರಬಹುದಾದ ಯಥೋಚಿತ ವಿನಿಯೋಗದ ಬಗ್ಗೆ ಬಾಕಿ ಇರುವವೆಂತ ಹೇಳಿರುವರು.

ಬ್ರುಸೆಲ್ಸನಲ್ಲಿರುವ ಮುಖ್ಯ ರಸ್ತೆಯ ಹೆಸರನ್ನು ಬದಲಾಯಿಸಿ ಬರ್ಲಿನ್‌ಸ್ಟ್ರೆಸ್ ಎಂತ ಇಡಬೇಕೆಂಬ ಜರ್ಮನರ ಆಜ್ಞೆಯನ್ನು ಉಲ್ಲಂಘಿಸಿದ್ದರಿಂದ ಜರ್ಮನರು ಬ್ರುಸೆಲ್ಸ ಪಟ್ಟಣದ ಮೇಲೆ ೨೫೦೦೦ ಪವನುಗಳ ಜುರುಮಾನೆಯನ್ನು ವಿಧಿಸಿರುವರು. ಈ ಜುರುಮಾನೆ ಹಣವನ್ನು ತಿಂಗಳ ಅಂತ್ಯದೊಳಗೆ ಕೊಡದಿದ್ದರೆ ಬ್ರುಸೆಲ್ಸ ಪಟ್ಟಣದ ೧೦೦ ಜನ ಪ್ರಮುಖ ಗೃಹಸ್ಥರನ್ನು ಗುಂಡು ಹಾಕಿ ಕೊಂದುಬಿಡುವೆವೆಂತ ಜರ್ಮನರು ಆಜ್ಞಾಪಿಸಿರುವರು.

ಲಂಡನ ಪಟ್ಟಣದ ಫೂಟ್‌ಬೋಲ್ ಎಶೋಸಿಯೇಶನ್ ಎಂಬ ಚೆಂಡಾಟದ ಸಂಘದವರು ಯುದ್ಧವು ಇನ್ನೂ ಮುಂದರಿಸುವದಾದರೆ ಬರುವ ಆಟಕಾಲಗಳಲ್ಲಿ ಪಂದ್ಯಾಟಗಳನ್ನು ಆಡಕೂಡದೆಂತ ನಿರ್ಣಯಿಸಿರುವರು. ಈ ನಿರ್ಣಯದ ಜಾರಿಯು ನಡದದ್ದೇ ಆದರೆ ೧,೦೦೦,೦೦೦ ಪವನುಗಳ ಕೂಲಿಯು ನಷ್ಟವಾಗುವದೆಂತ ತಿಳಿದುಬರುತ್ತದೆ.

ಉತ್ತರ ಹಿಂದೂಸ್ಥಾನ.

ದಿನ ಒಂದಕ್ಕೆ ವಾದಿ ಪ್ರತಿವಾದಿಗಳಿಗೆ ಪ್ರತ್ಯಪ್ರತ್ಯೇಕವಾಗಿ ರೂ. ೬೦೦೦ ಖರ್ಚು ತಗಲುವ ದಾವೆಯು ಆಗ್ರಾ ಜಿಲ್ಲಾ ಕೋರ್ಟನಲ್ಲಿ ದಾಖಲಾಗಿರುವದೆ. ರಿವ್ಹಾದ ಮಹಾರಾಣಿಯವರು ಡುಮ್ರಾನ್ ರಾಜ್ಯವನ್ನು ತನಗೆ ಬಿಟ್ಟುಕೊಡಬೇಕಾಗಿ ಕೇಶೋ ಪ್ರಸಾದ ಸಿಂಗ್‌ರವರ ಮೇಲೆ ದಾವೆ ತಂದಿರುವರು. ಕಲ್ಕತ್ತೆಯಲ್ಲಿ ಪ್ರಖ್ಯಾತಿಪಟ್ಟ ಆರಾರು ಮಂದಿ ವಕೀಲರು ಮತ್ತು ಬ್ಯಾರಿಷ್ಟರು ಉಭಯ ಕಡೆಗಳಿಂದಲೂ ವ್ಯವಹರಿಸುವ ಬಗ್ಗೆ ಬಂದಿರುವರು. ದಾವಿಯನ್ನು ಕಮಿಶನ್ ಮೂಲಕ ವಿಚಾರಣೆ ಮಾಡುವರೆ ಕಮಿಶನ್ ಫೀಸು ಮತ್ತು ವಕೀಲರ ಫೀಸು ಒಟ್ಟಿಗೆ ರೂ. ೨೩೫೦೦ನ್ನು ವಾದಿಯೂ ಪ್ರತಿವಾದಿಯೂ ಕೇವಣಾತಿಯಾಗಿ ಕಟ್ಟಬೇಕೆಂತ ಆಜ್ಞೆಯಾಗಿದೆ.

ಫ್ರೆಶ್ವ ಗಾರ್ಡ ಡಿಕ್ರುಜ್ ಎಂಬವನು ಕೋವಿ ಮೊದಲಾದವುಗಳಲ್ಲಿ ಕಳ್ಳ ವ್ಯಾಪಾರವನ್ನು ನಡಿಸುವದನ್ನು ತಿಳಿದು ಢಾಕ್ಕಾದಲ್ಲಿಯ ಪೋಲಿಸು ಜವಾನನೊಬ್ಬನು ರಾಜಕಂಟಕನ ವೇಷವನ್ನು ಹಾಕಿಕೊಂಡು ಒಂದು ರಿವೋಲ್ವರನ್ನು ಈತನಿಂದ ಕ್ರಯಕ್ಕೆ ಪಡದು ಕ್ರಯದ ಮೊಬಲಗನ್ನು ಗುರ್ತು ಹಾಕಿದ ನೋಟುಗಳಲ್ಲಿ ಕೊಟ್ಟನು. ಈ ನೋಟುಗಳನ್ನು ಪೋಲಿಸಿನವರು ಗುರುತಿಸಿ ಡಿಕ್ರುಜನ ಮೇಲೆ ಮೊಕದ್ದಮೆಯನ್ನು ಏರ್ಪಡಿಸಿರುವರು.

ಹಿಂದೂ ಯುನಿವರ್ಸಿಟಿ ಸಂಘದ ಕಮಿಟಿಯವರು ಈ ತಿಂಗಳ ತಾ. ೧೭ರಲ್ಲಿ ಈ ವಿಶ್ವವಿದ್ಯಾಲಯ ಸ್ಥಾಪನೆಯ ನಿಯಮಗಳನ್ನು ಇಂಡಿಯ ಸರಕಾರದವರೊಡನೆ ಸಿಮ್ಲಾದಲ್ಲಿ ಪರ್ಯಾಲೋಚಿಸುವರು.

ಮುಂಬಯಿ ಸಂಸ್ಥಾನದ ಸರಕಾರಿ ಆಫೀಸುಗಳಲ್ಲಿ ಮರಾಟಿ ಮತ್ತು ಗುಜರಾತಿ ಅಕ್ಷರಗಳ ಟ್ಯಾಪ್‌ರ್ಯಾಟರುಗಳನ್ನು ಉಪಯೋಗಿಸಬಹುದೆಂಬುದಾಗಿ ಅಪ್ಪಣೆ ಕೊಟ್ಟಿರುವರೆಂತ ಒಬ್ಬ ಬಾತ್ಮಿದಾರರು ಬರದಿರುತ್ತಾರೆ.

ಸಚ್ಚಿನ್ ಸಂಸ್ಥಾನದ ನವಾಬರವರು ತಮ್ಮ ಆಡಳಿತೆಯ ಜುಬಿಲಿ ಮಹೋತ್ಸವವನ್ನು ಇತ್ತಲಾಗೆ ಆಚರಿಸಿದರು. ಈ ಸಂದರ್ಭದಲ್ಲಿ ನವಾಬರು ತಮ್ಮ ಸಂಸ್ಥಾನದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಉಚಿತಾರ್ಥವಾಗಿ ಕೊಡುವ ಏರ್ಪಾಡನ್ನು ಜಾರಿಗೆ ತಂದಿರುವರು.

ಬಕಾರ್‌ಡೌರಿ ಎಂಬ ಬಂಗಾಳದ ಗ್ರಾಮದಲ್ಲಿ ಲಕ್ಷ್ಮಣ ಮಂಡಲ ಎಂಬ ವ್ಯಾಪಾರಿಯ ಮನೆಯನ್ನು ೨೫ ಜನ ದರೋಡೆ ಕಳ್ಳರು ಬಲಾತ್ಕಾರದಿಂದ ಪ್ರವೇಶಿಸಿ ಈ ವ್ಯಾಪಾರಿಯ ಮನೆಯಲ್ಲಿದ್ದ ಕಬ್ಬಿಣದ ಪೆಟ್ಟಿಗೆಯನ್ನು ಒಡೆದು ಅನೇಕ ಸಾವಿರ ರೂಪಾಯಿಗಳನ್ನು ಸೆಳಕೊಂಡು ಹೋಗಿರುವರು. ಗ್ರಾಮಸ್ಥರು ಎಲ್ಲರೂ ಕೂಡಿಕೊಂಡು ಈ ಕಳ್ಳರನ್ನು ಹಿಡಿಯಲು ಅನುಕೂಲವಿದ್ದರೂ ಶಸ್ತ್ರಾಣಗಳಾದ ೨೫ ಜನ ಕಳ್ಳರ ಹತ್ತಿರ ಸೇರುವ ಧೈರ್ಯವು ಆಯುಧಗಳಿಲ್ಲದ ಜನರಿಗೆ ಇಲ್ಲದೆ ಹೋಯಿತು.

ಚೀನಾ ಮತ್ತು ಜಪಾನ್ ದೇಶಗಳೊಳಗೆ ಕಲಹಗಳುಂಟಾಗುವ ಸಂದರ್ಭವು ಇವರೊಳಗೆ ಇತ್ತಲಾಗಾದ ಒಪ್ಪಂದದ ಪ್ರಕಾರ ಕಳೆದುಹೋದುದರಿಂದ ಹಿಂದೂಸ್ಥಾನದ ಹತ್ತಿಯ ಕಾರ್ಖಾನೆಗಳಿಗೆ ಇದರಿಂದ ಸುಸ್ಥಿತಿಯು ಸ್ವಲ್ಪ ಮಟ್ಟಿಗಾದರೂ ಪ್ರಾಪ್ತವಾಗಲು ಅಸಾಧ್ಯದವಾಯಿತು.

ಬರುವ ಜುಲಾಯಿ ತಿಂಗಳಲ್ಲಿ ಸೆನ್‌ಫ್ರಾನ್ಸಿಸ್ಕೊದಲ್ಲಿ ಜರಗುವ ಪತ್ರಿಕಾಕರ್ತರ ಸಮ್ಮೇಳನಕ್ಕೆ 'ಬಂಗಾಳಿ'ಯ ಸಂಪಾದಕರಾದ ಸುರೇಂದ್ರನಾಥ ಬೆನರ್ಜಿಯವರು ಆಮಂತ್ರಿಸಲ್ಪಟ್ಟಿರುತ್ತಾರೆ.

ಪೂನೆಯಲ್ಲಿ ಈ ತಿಂಗಳ ತಾ. ೮ರಲ್ಲಿ ಮುಂಬಾಯಿ ಸಂಸ್ಥಾನದ ಪ್ರಾಂತಿಕ ಸಭೆಯು ಜರುಗಿತು. ಮಾ! ಜೋಸೇಫ್ ಬೆಪ್ಟಿಸ್ತಾರವರು ಈ ಸಭೆಯ ಅಧ್ಯಕ್ಷರಾಗಿದ್ದರು. ಈ ಸಭೆಯು ಮುಂಬಾಯಿ ಸಂಸ್ಥಾನದ ಪ್ರಾಂತಿಕ ಕೊಂಗ್ರೆಸು ಕಮಿಟಿಯವರಿಂದ ಏರ್ಪಡಿಸಲ್ಪಟ್ಟದಲ್ಲದ್ದರಿಂದ ಜುಲಾಯಿ ತಿಂಗಳಲ್ಲಿ ಕೊಂಗ್ರೆಸು ಸಭೆಗೆ ಅನುಗುಣವಾದ ಪ್ರಾಂತಿಕ ಸಭೆಯು ಕೂಡುವುದೆಂದು ತಿಳಿಯುತ್ತೇವೆ.

ದಕ್ಷಿಣ ಹಿಂದೂಸ್ಥಾನ

ಬೆಂಗಳೂರಿನಲ್ಲಿ ಇತ್ತಲಾಗೆ ಕೂಡಿದ ಕನ್ನಡಿಗರ ಸಮ್ಮೇಳನದಲ್ಲಿ ಸ್ಥಾಪಿತವಾದ ಕರ್ಣಾಟಕ ಸಾಹಿತ್ಯ ಪರಿಷದದ ಕಾರ್ಯನಿರ್ವಾಹಕ ಕಮಿಟಿಗೆ ಈ ಜಿಲ್ಲೆಯಿಂದ ರಾ! ಅಲಿಮಾನ್ ವೆಂಕಟರಾವ್ ಬಿ. ಎ.,ಯವರೂ ಕೃಷ್ಣಸೂಕ್ತಿಯ ಸಂಪಾದಕರಾದ ರಾ! ರಾಜಗೋಪಾಲ ಕೃಷ್ಣರಾಯರೂ ಮೆಂಬರರಾಗಿ ಚುನಾಯಿಸಲ್ಪಟ್ಟಿರುತ್ತಾರೆ. ಇತರ ಕಡೆಗಳಿಂದ ಚುನಾಯಿಸಲ್ಪಟ್ಟ ಮೆಂಬರರು ಯಾರಂದರೆ, ಮೈಸೂರು ಸಂಸ್ಥಾನದಿಂದ:—

ರಾಜಮಂತ್ರ ಪ್ರವೀಣ ಮಾ! ರಾ! ರಾ! ಎಚ್. ವಿ. ನಂಜುಂಡಯ್ಯನವರು, ಎಮ್. ಎ. ಎಮ್. ಎಲ್. ಸಿ. ಐ. ಇ. ಅಧ್ಯಕ್ಷರು, ಮಾ! ರಾ! ರಾವ್‌ಬಹದ್ದೂರ್ ಎಮ್. ಶಾಮರಾವ್ ಎಮ್. ಎ., ಉಪಾಧ್ಯಕ್ಷರು, ಮಾ! ರಾ! ಕರ್ಪೂರ ಶ್ರೀನಿವಾಸರಾವ್ ಬಿ. ಎಸ್. ಸಿ. ಎಲ್. ಸಿ. ಇ., ಮಾ! ರಾ! ವೆಂಕಟಕೃಷ್ಣಯ್ಯ ಬಿ. ಎ., ಸರ್ದಾರ್ ಎಮ್. ಕಾಂತರಾಜ ಅರ್ಸ ಬಿ. ಎ., ಮಾ! ರಾ! ಆರ್. ನರಸಿಂಹ ಆಚಾರ್ಯ ಎಮ್. ಎ., ರಾ! ಆರ್. ರಘುನಾಥರಾವ್ ಬಿ. ಎ., ಮಾ! ರಾ! ಡಾಕ್ಟರ್ ಎ. ಎಸ್ ಅಚ್ಯುತರಾವ್, ಮಾ! ರಾ! ಬಿ. ಸುಬ್ಬರಾವ್ ಬಿ. ಎ., ಪಂಡಿತ ಮಾ! ರಾ! ಅಯ್ಯಾಶಾಸ್ತ್ರಿ, ರಾ! ಸಿ. ಕೃಷ್ಣರಾವ್ ಬಿ. ಎ., ರಾ! ಟಿ. ವಾಸುದೇವಯ್ಯ, ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣ ಚೆಟ್ಟಿ, ರಾ! ಎಚ್. ಲಿಂಗರಾಜ ಅರ್ಸ, ರಾ! ಎಮ್. ಲಕ್ಷ್ಮೀನಾರ್ಣಪ್ಪಯ್ಯ ಬಿ. ಎ., ರಾ! ಬಿ. ಕೃಷ್ಣಪ್ಪ ಎಮ್. ಎ., ಕಾರ್ಯದರ್ಶಿ.

ಮುಂಬಯಿ ಸಂಸ್ಥಾನದಿಂದ:—ರಾ! ವಿ. ಬಿ. ಜೋಷಿ ಬಿ. ಎ; ರಾ! ಎನ್. ಜಿ. ಕರ್ಗುದ್ರಿ ಬಿ. ಎ. ಎಲ್. ಎಲ್. ಬಿ; ರಾ! ಆರ್. ಎ. ಜಹಗೀರ್‌ದಾರ್ ಎಮ್. ಎ. ಎಲ್. ಎಲ್. ಬಿ; ರಾ! ಟಿ. ಎಸ್. ನರ್ಗುಂದಕಾರ್ ಬಿ. ಎ. ಎಲ್. ಎಲ್. ಬಿ; ರಾ! ಪಿ. ಆರ್. ಚಿಕ್ಕೋಡಿ ಬಿ. ಎ; ರಾ! ಕೆ. ಎಚ್. ಮುಧವೇಢ್ಕರ್; ರಾ! ಪಿ. ಜಿ. ಹಾಲಕಟ್ಟಿ ಬಿ. ಎ. ಎಲ್. ಎಲ್. ಬಿ; ರಾ! ವಿ. [illegible] ಆಲೂರ್ ಬಿ. ಎ. ಎಲ್. ಎಲ್. ಬಿ.

ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಂದ ರಾ! ತಮ್ಮ[illegible] ಚಿಕ್ಕೋಡಿ; ಮತ್ತು ರಾ! ಆರ್. ಎಸ್. ಮಗ್ದುಮಿ.

ಹೈದರಾಬಾದ ಸಂಸ್ಥಾನದಿಂದ:— ರಾ! ಆರ್ [illegible] ಎಮ್. ಎ. ಎಲ್. ಬಿ. ರಾ! ಕೃಷ್ಣಸ್ವಾಂಗರ್;

ಮದ್ರಾಸಿನಿಂದ:—ರಾ! ಬಿ. ರಾಮರಾವ್ ಎಮ್. ಎ. ಎಲ್. ಬಿ; ಪಂಡಿತ ಎಮ್. ಡಿ. ಅಳಸಿಂಗರಾಚಾರ್ಯ. [illegible] ಯಿಂದ:—ರಾ! ಎಚ್. [illegible] ಕೃಷ್ಣರಾವ್ ಬಿ. ಎ. ಬಿ. ಎಲ್.

ಕನ್ನಡ ಸಾಹಿತ್ಯ ಪರಿಷತ್ತಿನ ಫಂಡಿಗೆ ರೂ. ೧೦೦೦ವನ್ನು ಕೊಡುವಂಥವರು ಪೋಷಕರೂ ರೂ. ೫೦೦ ಕೊಡುವವರು ಆಶ್ರಯದಾತರೂ ರೂ. ೫೦ ಕೊಡುವವರು ಆಜೀವ ಸದಸ್ಯರೂ ಆಗುವರು. ಇದಲ್ಲದೆ ವರುಷ ಒಂದಕ್ಕೆ ರೂ. ೧-೨ ಯಾ ೪ನ್ನು ಕೊಟ್ಟು ಪರಿಷತ್ತಿನ ಮೆಂಬರರೂ ಆಗಬಹುದಾಗಿದೆ.

ಕನ್ನಡಿಗರ ಸಮ್ಮೇಲನಕ್ಕೆ ಹೊರಗಿನ ನಾಡುಗಳಿಂದ ಬಂದಿದ್ದ ಅತಿಥಿಗಳನ್ನು ಡಾಕ್ಟರ್ ಅಚ್ಯುತರಾವ್, ಕರ್ನಾಟಕದ ಸಂಪಾದಕರಾದ ರಾ। ಗುಂಡಪ್ಪ ಮೊದಲಾದ ಬೆಂಗಳೂರಿನ ಸದ್ಗೃಹಸ್ಥರು ಸೆಂಟ್ರಲ್ ಕಾಲೇಜ ವಿದ್ಯಾರ್ಥಿ ಭವನಗಳ ವಠಾರದಲ್ಲಿ ಒಂದು ಟೀ ಪಾರ್ಟಿಯನ್ನು ಏರ್ಪಡಿಸಿ ಸನ್ಮಾನಿಸಿದರು.

ಉತ್ತರಾಧಿ ಮಠದ ಶ್ರೀಪಾದಂಗಳವರ ಕುರಿತು 'ಮೈಸೂರು ಪೇಟ್ರಿಯಟ್' ಎಂಬ ಪತ್ರಿಕೆಗೆ ಒಬ್ಬ ಬಾತ್ಮೀದಾರರು ಈ ರೀತಿ ಬರದಿರುವರು — ಮೈಸೂರಿನಲ್ಲಿ ವಿವಾಹ ಸಂಸ್ಕರಣಾ ಸಂಘದ ಸೆಕ್ರೆಟರಿಗಳಾದ ಡಾಕ್ಟರ್ ವೆಂಕೋಬರಾವ್ ಎಂಬವರು ಪ್ರೌಢ ವಿವಾಹ ಕ್ರಮವನ್ನು ಅನುಸರಿಸಿ ತಮ್ಮ ಕುಟುಂಬಿಕರಲ್ಲಿ ವಿವಾಹಗಳನ್ನು ಮಾಡಿಸುತ್ತಿರುವರು. ವೆಂಕೋಬರಾಯರು ಉತ್ತರಾಧಿ ಮಠದ ಶಿಷ್ಯರಾಗಿರುವರು. ಮಠದವರಿಂದ ಈ ತನ್ನ ವರ್ತನೆಯು ಮನ್ನಿಸಲ್ಪಡದೆಂದು ಸ್ವಾಮಿಯರ ಭೇಟಿಗೆ ಇವರು ಹೋಗಲೇ ಇಲ್ಲ. ಮೈಸೂರಿನಲ್ಲಿ ೪೦ ದಿವಸಗಳು ಇದ್ದುಕೊಂಡು ನಂಜನಗೂಡಿಗೆ ಸ್ವಾಮಿಗಳವರು ಹೊರಟಿದ್ದರು. ಸ್ವಾಮಿಗಳ ಭೇಟಿಯನ್ನು ಮಾಡುವರೆ ವೆಂಕೋಬರಾಯರು ಹೋಗದಿದ್ದರೆ ಸ್ವಾಮಿಗಳೇ ಬಂದು ವೆಂಕೋಬರಾಯರನ್ನು ನೋಡಿ ಹೋಗಲಿಕ್ಕಿರುವರೆಂಬುದಾಗಿ ವೆಂಕೋಬರಾಯರು ತಮ್ಮ ಸ್ನೇಹಿತರ ಮೂಲಕ ತಿಳಿದ ಮೇಲೆ ಸ್ವಾಮಿಯರ ಭೇಟಿಗೆ ಹೋದರು. ವೆಂಕೋಬರಾಯರು ಶ್ರೀಪಾದಂಗಳವರಿಗೆ ಸಾಷ್ಟಾಂಗ ಪ್ರಣಾಮಗಳನ್ನು ಮಾಡಿದ ನಂತರ ಸ್ವಾಮಿಯವರು ಇವರ ಕೂಡೆ ವಿವಾಹ ಪದ್ಧತಿಯನ್ನು ಕುರಿತು ವಾದಿಸಿ ಅನ್ಯರಿಗೆ ನೋವು ಉಂಟಾಗದ ರೀತಿ ನಡೆಯುವುದು ಲೋಕದಲ್ಲಿ ಉತ್ಕೃಷ್ಟವಾದ ಧರ್ಮವಲ್ಲವೋ ಎಂತ ವೆಂಕೋಬರಾಯರನ್ನು ಕೇಳಿದರು. ವೆಂಕೋಬರಾಯರು ಸ್ವಾಮಿಯರ ಈ ಮಾತು ಲೋಕಪೂಜ್ಯವಾದದ್ದೆಂತ ಅಂದ ಮೇಲೆ ಸನ್ಯಾಸಿಗೆ ಬೇನೆಯನ್ನುಂಟುಮಾಡುವುದು ಪಾಪಕರವೆಂತ ಸೂಚಿಸಿ ವೆಂಕೋಬರಾಯರು ಮಠಕ್ಕೆ ಬಾರದಿರುವ ಕಾರಣವನ್ನು ವಿಚಾರಿಸಿದರು. ನಿಷ್ಕಾರಣವಾಗಿ ಹಣವನ್ನು ತಾನು ಮಠಕ್ಕೆ ಕೊಡಲಾರೆನು ಮತ್ತು ಸಾಮಾಜಿಕ ವಿಷಯಗಳಲ್ಲಿ ಸ್ವತಂತ್ರ ಬುದ್ಧಿಯಿಂದ ನಡಕೊಳ್ಳುವೆನಾದ್ದರಿಂದ ಮಠದವರೊಡನೆ ಕೂಡಿ ನಡೆಯಲು ಅನುಕೂಲವಾಗಲಿಲ್ಲವೆಂತ ವೆಂಕೋಬರಾಯರು ಉತ್ತರವಿತ್ತರು. ಮಠಕ್ಕೆ ಹಣ ಕೊಡುವುದು ಬೇಡ, ಆದರೆ ವೆಂಕೋಬರಾಯರು ಮಠದ ಅನುಯಾಯಿಗಳಾಗಿರಬೇಕೆಂಬುದು ತಮ್ಮ ಹೃತ್ಪೂರ್ವಕ ಅಪೇಕ್ಷೆಯಾಗಿದೆ ಎಂದು ಸ್ವಾಮಿಗಳವರು ಅಪ್ಪಣೆಕೊಡಿಸಿದೊಡನೆ ವೆಂಕೋಬರಾಯರ ಮನಸ್ಸು ಮಾರ್ಪಟ್ಟಿತು. ಕೂಡಲೇ ವೆಂಕೋಬರಾಯರು ಮಠದ ಅನುಯಾಯಿಗಳಾಗಿರಲು ಒಪ್ಪಿಕೊಂಡರು. ಉತ್ತರಾಧಿ ಮಠದ ಸ್ವಾಮಿಗಳವರ ವಿವೇಕವನ್ನೂ ಇವರಿಗೆ ಶಿಷ್ಯವರ್ಗದವರ ಮೇಲಿರುವ ಅಭಿಮಾನವನ್ನೂ ಇತರ ಮಠಾಧಿಪತಿಗಳೂ ತಿಳಕೊಳ್ಳಬಹುದಿತ್ತು.

ನೆಲ್ಲೂರಿನಲ್ಲಿ ಇದೇ ತಿಂಗಳ ತಾ. ೮ರಲ್ಲಿ ದಕ್ಷಿಣ ಹಿಂದೂಸ್ಥಾನದ ಉಪಾಧ್ಯಾಯರ ಸಂಘದವರು ಮದ್ರಾಸು ಸಂಸ್ಥಾನದ ಪ್ರಾಂತಿಕ ವಿದ್ಯಾಮಹಾಸಭೆಯನ್ನು ಜರುಗಿಸಿದರು. ಮ। ರಾ। ಪ್ರೊಫೆಸರ್ ಲಕ್ಷ್ಮೀನರಸುರವರು ಈ ಸಭೆಯ ಅಧ್ಯಕ್ಷರಾಗಿದ್ದರು. ಬಹುಮಾನಪಟ್ಟ ವಿ ಯಸ್ ಶ್ರೀನಿವಾಸ ಶಾಸ್ತ್ರಿಗಳವರು ಸಭಾಪ್ರಾರಂಭದ ಭಾಷಣವನ್ನು ಮಾಡಿದರು. ಶಾಲಾ ಅಧ್ಯಾಪಕರು ತಮ್ಮ ಗೌರವವನ್ನು ಕಳಕೊಳ್ಳದಂತೆ ವರ್ತಿಸಬೇಕೆಂದೂ ಯಾವುದಾದರೂ ಶಾಲೆಯನ್ನು ಸೇರುವ ಮೊದಲು ಶಾಲೆಯ ಅಧಿಕಾರಿಗಳು [illegible] ಮಾಡಿರುವ ನಿಯಮಗಳೇನೆಂಬುವದನ್ನು ಸಂಯೋಗಿ ತಿಳಕೊಳ್ಳಬೇಕೆಂದೂ ಬರಹ ಮೂಲಕ ಕರಾರುಗಳ [illegible] ಶಾಲೆಗಳಲ್ಲಿ ವ್ಯಕ್ತಿಗಳನ್ನು ವಹಿಸಿಕೊಳ್ಳಕೂಡದೆಂದೂ ಶಾಸ್ತ್ರಿಗಳವರು ಉಪಾಧ್ಯಾಯರ ವರ್ಗಕ್ಕೆ ಹೇಳಿರುತ್ತಾರೆ. ಕಳೆದ ೮ ಯಾ ೯ ವರುಷಗಳಿಂದ ಕಾಲೇಜು ವಿದ್ಯಾನಿಯಮಗಳು ಮಾರ್ಪಟ್ಟುದರಿಂದ ಉಂಟಾದ ಹಾನಿಯನ್ನು ಸಭಿಕರಿಗೆ ತಿಳಿಯಹೇಳಿ ಇತ್ತಲಾಗೆ ಈ ಹಾನಿಯನ್ನು ಕಡಮೆ ಮಾಡುವರೆ ನಡೆಸಿರುವ ಪ್ರಯತ್ನಗಳನ್ನು ವಿವರಿಸಿದರು. ಮಾರನೆ ದಿನ ಸಭೆಯು ಪುನಹ ಕೂಡಿ ಹಲವು ನಿರ್ಣಯಗಳನ್ನು ಮಾಡಿರುವುದು. ಸರಕಾರದವರಿಂದ ಕೊಡೋಣಾಗುವ ಗ್ರೇಂಟುಗಳ ನಿಯಮಗಳು, ಸೆಕೆಂಡರಿ ಶಾಲೆಗಳಲ್ಲಿ ದೇಶಭಾಷೆಯಲ್ಲಿಯೇ ವಿದ್ಯಾಭ್ಯಾಸವನ್ನು ಕೊಡುವುದು, ಉಪಾಧ್ಯಾಯರ ಸಂಬಳ ಇತ್ಯಾದಿಗಳು, ಅಧ್ಯಾಪಕರ ಪ್ರೊವಿಡೆಂಟ್ ಫಂಡು, ಸರಕಾರಿ ಪರೀಕ್ಷೆಗಳನ್ನು ಮಾರ್ಚ ತಿಂಗಳ ಬದಲಾಗಿ ಡಿಸೆಂಬರ ತಿಂಗಳಲ್ಲಿ ಜರಗಿಸುವುದು ಈ ಮೊದಲಾದ ವಿಷಯಗಳನ್ನು ಕುರಿತು ನಿರ್ಣಯಗಳು ಸಭೆಯಲ್ಲಿ ಮಂಜೂರಾಗಿವೆ.

ಕೇರಳ ಆಯುರ್ವೇದ ಸಮಾಜದ ವೈದ್ಯಶಾಲೆಯ ಅಸ್ತಿವಾರದ ಕಲ್ಲನ್ನಿಡುವ ಸಮಾರಂಭವನ್ನು ಈ ತಿಂಗಳ ತಾ ೧೯ರಲ್ಲು ಕಲ್ಲಿಕೋಟೆಯ ಜಾಮೋರಿನ್ನವರು ಶೊರ್ನೂರಿನಲ್ಲಿ ನೆರವೇರಿಸಿ ಕೊಡುವರು.

ಮೈಸೂರು ಸಂಸ್ಥಾನದ ದಿವಾನರಾದ ರಾ। ವಿಶ್ವೇಶ್ವರಯ್ಯನವರು ೧೪ ದಿವಸಗಳ ರಜೆ ಪಡದ ಕೊಲೊಂಬೊ ಪಟ್ಟಣಕ್ಕೆ ಹೋಗಿರುವುದರಿಂದ ಈ 19 ದಿವಸಗಳ ತನಕ ಮ। ರಾ। ಎಚ್ ವಿ ನಂಜಂಡಯ್ಯನವರು ದಿವಾನರವರ ಕೆಲಸವನ್ನು ನಿರ್ವಹಿಸುವರು.

ದಕ್ಷಿಣ ಕನ್ನಡ.

ತಿದ್ದುಪಡಿ.—ಕಳೆದ ತಾ 23—4—15ನೇ ಸ್ವದೇಭಿಮಾನಿಯ 12ನೇಯ ವಾನಿನಲ್ಲಿ ಪ್ರಕಟವಾದ "Alangady Venkateshayya" ಇವರ ನೋಟೀಸಿನಲ್ಲಿ ಒಂಗ್ರಮಂಜೇಶ್ವರದ ಕೆಳಗಿರುವ ತಾರೀಕು 22—2—15ನ್ನು 22—4—15 ಎಂತ ಓದತಕ್ಕದ್ದು.

ಕುಂಬಳೆ —ಸರ್ಕಿಟು ಮೇಲೆ ಈ ಜಿಲ್ಲೆಗೆ ದಯಮಾಡಿದ್ದ ಮದ್ರಾಸಿನ ರಿಜಿಸ್ಟ್ರೇಶನ್ ಇನ್ಸ್‌ಪೆಕ್ಟರ್ ಜನರಲ್ ದೊರೆಗಳವರು ಕಾಸರಗೋಡಿನ ಪ್ರಾಮುಖ್ಯ ವಕೀಲರಾದ ಮ। ರಾ। ಕೆ ಪಿ ಅಚ್ಯುತಯ್ಯನವರ ಸಮೇತ ಕೆಲವು ದಿವಸಗಳ ಹಿಂದೆ ಇಲ್ಲಿಗೆ ಚಿತ್ತೈಸಿ ರಿಜಿಸ್ಟ್ರಿ ಆಫೀಸಿನ ಬಗ್ಗೆ ಆರಿಸಿರುವ ಕಟ್ಟೋಣವನ್ನು ನೋಡಿ ಈ ಕುರಿತು ನಿವಾಸಿಕರಲ್ಲಿರುವ ಆತುರತೆಯನ್ನು ಸಹಾ ಪರಾಂಬರಿಸಿ ಕಾಸರಗೋಡಿಗೆ ಹಿಂತೆರಳಿರುವರು.

ಇಲ್ಲಿ ಬೋರ್ಡು ಬಾಲಿಕಾ ಪಾಠಶಾಲೆಯನ್ನು ಇಡಿಸೋಣಾಗಬೇಕಾಗಿ ಶಹಾರಿನ ನಿವಾಸಿಕರು ಈ ಮೊದಲು ಬರಕೊಂಡ ಅರ್ಜಿಗೆ ಸದರಿ ಶಾಲೆ ಸ್ಥಾಪಿಸುವರೆ ಮೊದಲು ಕೆನರಾ ವೀವಿಂಗ್ ಕಂಪೆನಿ ಇರುತ್ತಿದ್ದ ಮ। ರಾ। ವಕೀಲ ಕೆ. ನರಸಿಂಗನಾಯಕರವರ ಯೋಗ್ಯ ಕಟ್ಟೋಣವನ್ನು ನೋಡಿರುವದಾಗಿ ಕೇಳುವದರಿಂದ ಇದರಲ್ಲಿ ಬೋರ್ಡಿನವರು ಶಾಲೆಯನ್ನು ತ್ವರ್ಯದಲ್ಲಿ ಇಡಿಸಿ ಸರ್ವರಿಗೂ ಸಾಕರ್ಯವನ್ನುಂಟುಮಾಡುವರಾಗಿ ನಂಬುತ್ತೇವೆ.

ಮಂಗಳೂರು.

—o—

ಶ್ರೀ ಚಿತ್ರಾಪುರ ಮಠದ ಶ್ರೀ ಪಾದಂಗಳವರು ಶಿಷ್ಯಸ್ವೀಕಾರವನ್ನು ಇದೇ ಬರುವ ನಿಜವೈಶಾಖ ಶುಕ್ಲಪಕ್ಷದಲ್ಲಿ ಅಂದರೆ ಬಹುಶಃ ತಾ. ೧೮ ಯು ದಿನ ಮಾಡುವರಾಗಿ ಕೇಳುತ್ತೇವೆ.

ಇಲ್ಲಿಯ ಜಿಲ್ಲಾ ಕಲೆಕ್ಟರರಾಗಿದ್ದ ಮ। ಕೌಚ್‌ಮೇನ್ ದೊರೆಗಳವರು ಮ। ಲ್ಲೊಯಿಡ್ ದೊರೆಗಳವರಿಗೆ ಚಾರ್ಜು ವಹಿಸಿಕೊಟ್ಟು ತಾ. ೧೩ರ ಮೈಲ್ ಬಂಡಿಯಲ್ಲಿ ಇಲ್ಲಿಂದ ತೆರಳಿರುತ್ತಾರೆ. ಇವರು ಇಲ್ಲಿಂದ ತೆರಳುವ ಮೊದಲು ಇಲ್ಲಿಯ ಒನರೆರಿ ಮೇಜಿಸ್ಟ್ರೇಟರೊಡನೆ ಯಾ ಹಜೂರು ಆಫೀಸಿನ ಸಿಬಂದಿಯೊಡನೆಯೂ ಕೂತುಕೊಂಡು ಭಾವ ಚಿತ್ರಗಳನ್ನು ತೆಗಿಸಿರುವರು.

ರಾ। ಪಸಾರಿ ವಿಟ್ಠಪ್ಪ ಪ್ರಭುಗಳವರ ಮೊಕದ್ದಮೆಯ ವಿಮರ್ಶೆಯು ಹೈಕೋರ್ಟಿನವರು ಮಾಡುವ ಮೊದಲು ರಾ। ಬೊಳಂತೂರು ಸರ್ವೋತ್ತಮ ಪ್ರಭುಗಳ ಮೊಕದ್ದಮೆಯ ಅಪೀಲು ತನಖಿಯನ್ನು ಮಾಡಬಾರದಾಗಿ ಹೈಕೋರ್ಟಿನವರಿಂದ ಅಪ್ಪಣೆ ಬಂದಿರುವದಾಗಿ ತಿಳಿಯತ್ತೇವೆ.

ಕಾರ್ಕಳದಲ್ಲಿ ಗೌಡಸಾರಸ್ವತರಿಂದ ಸ್ಥಾಪಿತವಾದ ಹಿಂದೂ ಬಾಲಿಕಾ ಪಾಠಶಾಲೆಯ ನೂತನ ಗೃಹಪ್ರವೇಶವು ಇದೇ ತಿಂಗಳ ತಾ ೧೭ನೇ ಮುಂಜಾನೆ ಘಂಟೆ ೮ಕ್ಕೆ ನೆರವೇರುವುದಾಗಿ ತಿಳಿಯುತ್ತೇವೆ. ಪೆನ್ಶನು ಹೊಂದಿದ ಸಬೋರ್ಡಿನೇಟ್ ಜಡ್ಜರವರೂ ಮಂಗಳೂರು ತಾಲೂಕ ಬೋರ್ಡಿನ ಪ್ರೆಸಿಡೆಂಟರೂ ಆದ ಮ। ರಾ। ರಾ। ಸುಜೀರ ರಘುನಾಥಯ್ಯನವರು ಈ ಸಂದರ್ಭದಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವರು.

ಇಲ್ಲಿಯ ವೆನ್‌ಲೂಕ್ ಆಸ್ಪತ್ರೆಯನ್ನೂ ಮಕ್ಕಳ ಮತ್ತು ಸ್ತ್ರೀಯರ ಆಸ್ಪತ್ರೆಯನ್ನೂ ನೂತನವಾಗಿ ಕಟ್ಟಿಸುವ ವಿಷಯವು ಮುನ್ಸಿಪಲ್ ಕೌನ್ಸಿಲಿನವರ ಮತ್ತು ಸರಕಾರದವರ ಪರ್ಯಾಲೋಚನೆಯಲ್ಲಿತ್ತೆಂಬುದಾಗಿ ವಾಚಕರು ತಿಳಿದಿರಬಹುದು. ಹಣದ ಅಡಚಣೆಯು ವಿಶೇಷವಿದ್ದದ್ದರಿಂದ ಈ ಬಗ್ಗೆ ಸರಕಾರದವರಿಂದ ದ್ರವ್ಯ ಸಹಾಯವು ದೊರಕುವುದು ಅಸಾಧ್ಯವಾಗಿದೆಂಬುದಾಗಿ ತಿಳಿದುಬಂದಿದೆ. ಆದ್ದರಿಂದ ಪ್ರಕೃತ ವೆನ್‌ಲೂಕ್ ಆಸ್ಪತ್ರೆಯೊಂದನ್ನೇ ಸರಕಾರದವರಿಂದ ಸಾಲಪಡೆದು ಕಟ್ಟಿಸುವ ಏರ್ಪಾಡನ್ನು ಮುನ್ಸಿಪಲ್ ಕೌನ್ಸಿಲಿನವರು ಮಾಡುವರಾಗಿ ಕೇಳುತ್ತೇವೆ.

ಕಾಸರಗೋಡ ಫಿರ್ಕಾ ಆಕ್ಟಿಂಗ್ ೨ನೇ ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರರಾದ ರಾ। ಪಿ ವಾಮನ ಭಂಡಾರಿಗಳು ಬೇಕಲ್ ಫಿರ್ಕಿನ ಹಂಗಾಮಿ ರೆವಿನ್ಯೂ ಇನ್ಸ್‌ಪೆಕ್ಟರರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ. ರಾ। ಎಮ್. ಗಣಪತಿ ಬಂಡಾರಿಗಳು ವಾಮನ ಬಂಡಾರಿಗಳಿಂದ ಚಾರ್ಜು ವಹಿಸಿಕೊಂಡ ಮೇಲೆ ವಾಮನ ಭಂಡಾರಿಗಳು ಬೇಕಲಿಗೆ ಹೋಗಬೇಕಾಗಿರುತ್ತದೆ.

ಹೊಸದುರ್ಗ ಫಿರ್ಕದಲ್ಲಿ ಆಕ್ಟಿಂಗ್ ರೆವಿನ್ಯೂ ಇನ್ಸ್‌ಪೆಕ್ಟರರಾಗಿರುವ ರಾ। ಯು ಅಪ್ಪಯ್ಯನವರು ರಾ। ಜಿ. ಶ್ರೀನಿವಾಸ ಕ್ಯಾನಧಾಗರವರು ಇವರಿಂದ ಚಾರ್ಜು ವಹಿಸಿಕೊಂಡ ಮೇಲೆ ಬೆಳ್ತಂಗಡಿ ಫಿರ್ಕಿನ ಆಕ್ಟಿಂಗ್ ರೆವಿನ್ಯೂ ಇನ್ಸ್‌ಪೆಕ್ಟರರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ.

ಉಡ್ಪಿ ತಾಲೂಕಿನ ಆಕ್ಟಿಂಗ್ ಲೇಂಡ್ ರಿಕಾರ್ಡು ರೆವಿನ್ಯೂ ಇನ್ಸ್‌ಪೆಕ್ಟರರಾದ ರಾ। ಬಿ. ನರಸಿಂಗರಾಯರು ಗುರುಪುರ ಫಿರ್ಕಿನ ಹಂಗಾಮಿ ರೆವಿನ್ಯೂ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುವರು.

ಗುರುಪುರ ಫಿರ್ಕಿನ ಹಂಗಾಮಿ ರೆವಿನ್ಯು ಇನ್ಸಪೆಕ್ಟರರಾಗಿರುವ ರಾ| ಎಸ್. ಯು. ಕೃಷ್ಣರವರು ಉಡ್ಪಿ ತಾಲೂಕಿನ ಆಕ್ಟಿಂಗ್ ಲೆಂಡ್ ರಿಕಾರ್ಡ್ಸ್ ರೆವಿನ್ಯು ಇನ್ಸ್ಪೆಕ್ಟರರಾಗಿ ವರ್ಗಾಯಿಸಲ್ಪಟ್ಟಿರುವರು.

ಕಾಸರಕೋಡು ತಾಲೂಕಿನ ಸ್ಪೆಶ್ಯಲ್ ಲೆಂಡ್ ರಿಕಾರ್ಡ್ಸ್ ಇನ್ಸಪೆಕ್ಟರರಾದ ರಾ| ಎಸ್. ರಾಮಕೃಷ್ಣ ಕಾಮತರವರು ಮೆ| ಎಸ್. ಡಿ'ಸೋಜರ ಬದಲಿಗೆ ಮಂಗಳೂರು ಫಿರ್ಕಾ ರೆವಿನ್ಯು ಇನ್ಸಪೆಕ್ಟರರಾಗಿ ನೇಮಿಸಲ್ಪಟ್ಟಿರುವರು.

೨ನೇ ಗ್ರೇಡ್ ರೆವಿನ್ಯು ಇನ್ಸ್ಪೆಕ್ಟರರಾಗಿರುವ ರಾ| ಕೆ. ಕೇಶವರಾಯರಿಂದ ರಾ| ಎಸ್. ರಾಮಕೃಷ್ಣ ಕಾಮತರವರು ಚಾರ್ಜನ್ನು ವಹಿಸಿಕೊಂಡ ಬಳಿಕ ರಾ| ಕೇಶವರಾಯರು ಮುಲ್ಕಿ ಫಿರ್ಕಾ ರೆವಿನ್ಯು ಇನ್ಸಪೆಕ್ಟರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಮುಲ್ಕಿ ಫಿರ್ಕದ ರೆವಿನ್ಯು ಇನ್ಸಪೆಕ್ಟರರಾಗಿರುವ ರಾ| ಕೆ. ಸ್ವೊರಿ ಪ್ರಭುಗಳವರು ಮಂಜೇಶ್ವರ ಫಿರ್ಕಾ ರೆವಿನ್ಯು ಇನ್ಸಪೆಕ್ಟರರಾಗಿ ವರ್ಗಾಯಿಸಲ್ಪಟ್ಟಿರುವರು.

ಆಕ್ಟಿಂಗ್ ಲೆಂಡ್ ರಿಕಾರ್ಡ್ಸ್ ಇನ್ಸಪೆಕ್ಟರರಾದ ರಾ| ಎ. ನರಸಿಂಗರಾವ್‌ರವರು ಉಪ್ಪಿನಂಗಡಿ ತಾಲೂಕಿನ ಲೇಂಡ್ ರಿಕಾರ್ಡ್ಸ್ ಇನ್ಸಪೆಕ್ಟರರಾಗಿ ನೇಮಿಸಲ್ಪಟ್ಟಿರುವರು.

೨ನೇ ಗ್ರೇಡ್ ರೆವಿನ್ಯು ಇನ್ಸಪೆಕ್ಟರರಾದ ರಾ| ಟಿ. ನರಸಿಂಗರಾವ್‌ರವರು ಪುತ್ತೂರು ಡಿವಿಜನಲ್ ಆಫೀಸಿನ ೨ನೇ ಕ್ಲಾರ್ಕರಾಗಿ ನೇಮಿಸಲ್ಪಟ್ಟಿರುವರು.

೨ನೇ ರಿಕಾರ್ಡ್ ಕ್ಲಾರ್ಕರಾಗಿರುವ ಮೆ| ಎಲ್. ಎಲ್. ಎಸ್. ಸ್ಯಾಸರವರು ಆಕ್ಟಿಂಗ್ ೨ನೇ ಗ್ರೇಡ್ ರೆವಿನ್ಯು ಇನ್ಸಪೆಕ್ಟರರಾಗಿ ನೇಮಿಸಲ್ಪಟ್ಟು ಮೂಡಬಿದ್ರೆಗೆ ವರ್ಗಾಯಿಸಲ್ಪಟ್ಟಿರುತ್ತಾರೆ.

ವಿವಿಧ ವಿಷಯಗಳು.

ಕೊದಲಿಂದ ಮಾಡಿದ ಬಲೆಗಳು.

ಚೀನಾದೇಶದ ವೇಹ್ಯವೇ ಎಂಬ ರೇವಿನಲ್ಲಿ ಜರ್ಮನಿಯಿಂದ ಕೂದಲನ್ನು ತರಿಸಿಕೊಂಡು ಕೈಯಿಂದ ಬಲೆಗಳನ್ನು ಹೆಣೆಯುತ್ತಿರುವರು. ತಯಾರಾದಂತೆ ಎಲ್ಲಾ ಬಲೆಗಳನ್ನೂ ಅಂಚೆಯ ಮೂಲಕ ಜರ್ಮನಿಗೆ ಕಳುಹಿಸುತ್ತಾರೆ, ಈ ಕೆಲಸದಲ್ಲಿ ೫೦೦ ಮಂದಿ ಹೆಂಗಸರೂ ಮಕ್ಕಳೂ ತೊಡಗಿದ್ದಾರೆ. ಇವರೆಲ್ಲರೂ ಒಂದು ವಾರಕ್ಕೆ ೩೫,೦೦೦ ಬಲೆಗಳನ್ನು ಮಾಡುತ್ತಾರಂತೆ. ಒಂದು ಡಜನ್ ಬಲೆಗಳನ್ನು ಹೆಣೆಯುವುದಕ್ಕೆ ೨|| ಆಣೆಯಿಂದ ೮|| ಆಣೆಯವರೆಗೆ ಕೂಲಿಯಾಗುತ್ತದೆ. ಉಪಯೋಗವಿಲ್ಲವೆಂದು ನಮ್ಮವರು ಅಲಕ್ಷ್ಯಮಾಡುವ ಪದಾರ್ಥಗಳಿಂದ ಕೂಡ ಅನ್ಯದೇಶದವರು ಕೆಲಸ ಮಾಡಿ ಲಾಭ ಪಡೆಯುವ ಸಂಗತಿಗಳನ್ನು ನಮ್ಮ ದೇಶೀಯರೆಲ್ಲರೂ ಮನಸ್ಸಿಗೆ ತಂದುಕೊಳ್ಳಬೇಕು.

ಔಷಧದ ಮೂಲಿಕೆಗಳು.

ಅನ್ಯ ದೇಶದವರ ಔಷಧಶಾಲೆಗಳಿಗೆ ಬೇಕಾಗುವ ಮೂಲಿಕೆಗಳನ್ನು ಇದುವರೆಗೂ ಜರ್ಮನಿ ಆಸ್ಟ್ರಿಯಾ ದೇಶಗಳೇ ವಿಶೇಷವಾಗಿ ಒದಗಿಸುತ್ತಿದ್ದುವು. ಈ ಯುದ್ಧದಿಂದ ಅದು ನಿಂತುಹೋಗಿದೆ. ಆದಕಾರಣ ಪ್ರಕೃತದಲ್ಲಿ ಇಂತಹ ಮೂಲಿಕೆಗಳ ಪೈರನ್ನು ಬೆಳೆಯಿಸಿ ವ್ಯಾಪಾರ ಮಾಡುವವರಿಗೆ ವಿಶೇಷ ಲಾಭವಿದೆಯೆಂದು ಸ್ಪಷ್ಟವಾಗಿ ಕಾಣಿಸಿ, ಇಂಗ್ಲೆಂಡಿನ ವ್ಯವಸಾಯ ಮಂಡಲಿಯವರು ಒಂದು ಚಿಕ್ಕ ಪತ್ರಿಕೆಯನ್ನು ಪ್ರಚುರಪಡಿಸಿರುವರು. ದತ್ತೂರಿ (ಉನ್ಮತ್ತ) ಸೋಪು, ಸಬ್ಬಸಿಗೆ, ನಾಗದಾಳಿ (ಸದಾಪು) ಕರಿಜೀರಿಗೆ, ಕಾಡು ಹೊಗೆಸೊಪ್ಪು, ಮೊದಲಾದ ಔಷಧದ ದಿನಸುಗಳನ್ನು ಬೆಳೆಯಿಸಿ, ಬೆಳೆಯುವವರೂ ಮಾರುವವರೂ ಒಟ್ಟಾಗಿ ಸೇರಿ ಒಪ್ಪಂದ ಮಾಡಿಕೊಂಡು ಉಭಯತ್ರರಿಗೂ ಆದಾಯಕರವಾದ ಮಾರ್ಗವನ್ನು ಹುಡುಕಬೇಕೆಂದು ಸಲಹೆಕೊಟ್ಟಿರುವರು. ಮೇಲೆ ಹೇಳಿದ ಮೂಲಿಕೆಗಳು ನಮ್ಮ ಸಂಸ್ಥಾನದ ಕಾಡುಗಳಲ್ಲಿಯೂ, ಹಾಳು ನೆಲಗಳಲ್ಲಿಯೂ ತಾನಾಗಿ ಬೆಳೆಯುತ್ತವೆ. ಕೆಲಸವಿಲ್ಲವೆಂದು ಚಿಂತಿಸುವವರೂ ಹಣ ಸಂಪಾದಿಸಲಿಷ್ಟಪಡುವವರೂ ಈ ವಿಷಯಕ್ಕೆ ಗಮನಕೊಟ್ಟು, ಅಂತಹ ಮೂಲಿಕೆಗಳನ್ನು ಕೂಡಿಹಾಕುವುದೋ ಅಥವಾ ಹೊಸದಾಗಿ ಬೆಳೆಯುವುದೋ ಮಾಡಿದರೆ ತುಂಬಾ ಪ್ರಯೋಜನವಿರುತ್ತದೆ.

ಹಳ್ಳಿಯಲ್ಲಿ ಹೈನಶಾಲೆಯ (ಡೇರಿ) ಸಂಘ.

ಬೊಂಬಾಯಿ ಅಧಿಸತ್ತೆಕ್ಕೆ ಸೇರಿದ ಕರ್ನಾಟಕ ಪ್ರಾಂತ್ಯದಲ್ಲಿರುವ ಬೆಳಗಾಂ ಪಟ್ಟಣಕ್ಕೆ ೧೩ ಮೈಲಿಯಲ್ಲಿ ಸಾಮಾನ್ಯವಾದ ಒಂದು ಹಳ್ಳಿ. ಹಳ್ಳಿಯ ಹೆಸರು ಅರಳಿಕಟ್ಟೆ. ಅದರಲ್ಲಿ ಸುಮಾರು ೧೪೦೦ ಜನರು ವಾಸವಾಗಿರುವರು. ಎಲ್ಲರೂ ಬೇಸಾಯಗಾರರೇ. ಇವರೆಲ್ಲರನ್ನೂ ಒಂದು ದಿನ ಸಭೆಕೂಡಿಸಿ, ಆ ಪ್ರದೇಶದ ಸಹಕಾರ ಸಂಘಗಳ ಅ|| ರಿಜಿಸ್ಟ್ರಾರವರು ಅವರನ್ನು ಕುರಿತು ಕನ್ನಡದಲ್ಲಿ ಹೀಗೆ ಹೇಳಿದರು:—ನೀವೆಲ್ಲರೂ ಒಂದಾಗಿ ಸೇರಿ ಸಹಕಾರ ಧರ್ಮದ ಪ್ರಕಾರ ಹೈನಶಾಲೆಯೊಂದನ್ನು (ಕೊ-ಅಪರೇಟಿವ್ ಡೇರಿ) ಸ್ಥಾಪಿಸಿದ ಪಕ್ಷದಲ್ಲಿ, ನಿಮ್ಮಲ್ಲಿ ಒಬ್ಬೊಬ್ಬರ ದಿನಂಪ್ರತಿ ಆದಾಯವು ಹೆಚ್ಚುವುದಲ್ಲದೆ ಯಥೇಷ್ಟವಾದ ಗೊಬ್ಬರವೂ ಸಿಕ್ಕುವುದು. ಆ ಮೂಲಕ ವ್ಯವಸಾಯವು ಅಭಿವೃದ್ಧಿಯಾಗಿ ನಿಮ್ಮ ಆರ್ಥಸಾಧಕ ಸ್ಥಿತಿಯು ಉತ್ತಮವಾಗುವುದು. ಈ ಏರ್ಪಾಡನ್ನು ಮಾಡಬೇಕಾದರೆ, ಹಾಲು ಕರೆಯುವ ದನ ಕುರಿಗಳನ್ನು ಮಂದೆ ಮಂದೆಯಾಗಿ ಕೊಂಡುಕೊಳ್ಳಬೇಕು, ಅವನ್ನು ಹೆಚ್ಚಿಸಬೇಕು, ಅವಕ್ಕೆ ಮೇವನ್ನು ಒದಗಿಸಬೇಕು, ಒಳ್ಳೆಯ ಬೆಣ್ಣೆಯನ್ನು ಎತ್ತುವುದಕ್ಕೆ ತಕ್ಕ ಮಾರ್ಗ ಮಾಡಿಕೊಳ್ಳಬೇಕು, ಹಾಗೆ ಕೂಡಿ ಬಂದ ಬೆಣ್ಣೆಯನ್ನು ಮಾರಾಟಮಾಡುವುದಕ್ಕೆ ತಕ್ಕ, ಅನುಕೂಲ ಮಾಡಿಕೊಳ್ಳಬೇಕು. ಇದಕ್ಕೆಲ್ಲ ಮೊದಲು ಹಣಬೇಕು. ನೀವೆಲ್ಲರೂ ಇದಕ್ಕೆ ಒಮ್ಮನಸ್ಸು ಮಾಡಿ ಮುಂದೆ ಬಂದರೆ ಇದು ದೊಡ್ಡ ಕೆಲಸವಲ್ಲ. ಹೀಗೆಂದು ಅ|| ರಿಜಿಸ್ಟ್ರಾರವರು ಹೇಳಿ ಮುಗಿಸುವುದರೊಳಗೆ ಅಲ್ಲಿ ನೆರೆದಿದ್ದವರೆಲ್ಲರೂ ಏಕಮತದಿಂದ ತಾವು ಅದುವರೆಗೆ ಕೇಳದ ಒಂದೊಂದು ವಿಷಯವನ್ನೂ ಶ್ಲಾಘಿಸಿರುವುದಾಗಿ ತಿಳಿಸಿ, ಆ ಕೂಡಲೆ ಅಲ್ಲಿಯೇ ೧೩೦೦ ರೂಪಾಯಿಗಳನ್ನು ಜೊತೆಗೂಳಿಸಿ ಮುಂದೆ ತಂದಿಟ್ಟರು. ಇದನ್ನು ನೋಡಿ ಅ|| ರಿಜಿಸ್ಟ್ರಾರವರು ತುಂಬ ಸಂತೋಷಪಟ್ಟು ಆಗಲೇ ಸಂಘವನ್ನು ಏರ್ಪಡಿಸಿ, ಕೆನೆ ತೆಗೆಯುವ ಯಂತ್ರವನ್ನೂ ಬೆಣ್ಣೆ ಮಾಡುವ ಯಂತ್ರವನ್ನೂ ತರಿಸಿಕೊಡುವುದಾಗಿ ತಿಳಿಯಪಡಿಸಿದರು. ಕಷ್ಟವಿಲ್ಲದೆ ಹಾಲಿನಿಂದ ಬೆಣ್ಣೆಯೆತ್ತುವ ಸಾಧನಗಳ ವಿಚಾರವನ್ನು ತಿಳಿಸಿದ ಕೂಡಲೇ ಅಲ್ಲಿದ್ದವರೆಲ್ಲರೂ ಅವಕ್ಕೆ ಒಪ್ಪಿ ಹಾಗೆಯೇ ಮಾಡುವುದಾಗಿ ಹೇಳಿದರು. ಸಂಘಕ್ಕೆ ಸೇರಬೇಕೆಂದು ಕೋರಿದ ರೈತರೆಲ್ಲರೂ ತಮ್ಮ ತಮ್ಮ ಮನೆಗಳಲ್ಲಿ ಒದಗುವ ಹಾಲನ್ನು ಸಂಘಕ್ಕೆ ತಂದುಕೊಟ್ಟು ಸುಲಭಮಾರ್ಗದಿಂದ ಬೆಣ್ಣೆಮಾಡುವ ವಿಷಯದಲ್ಲಿ ಸಂಪೂರ್ಣವಾಗಿ ಸಮ್ಮತಿಪಟ್ಟರು.

ರಷ್ಯಾ ರಾಜ್ಯದ ಒಂದು ಊರಿನವರು ಒಂದು ಪಾಠಶಾಲೆಯನ್ನು ಕಟ್ಟಿರುವರು. ಅದನ್ನು ಹೇಗೆ ಕಟ್ಟಿದರೆಂಬುದು ವಿಚಿತ್ರವಾಗಿದೆ. ಯಾರು ಯಾರು ಆ ಊರಲ್ಲಿ ಮದ್ಯವನ್ನು ಕುಡಿಯುವರೊ ಅವರೆಲ್ಲರೂ ಒಂದೊಂದು ಸಾರಿಗೆ ಇಷ್ಟು ಪ್ರಮಾಣಕ್ಕೆ ಒಂದಾಣೆಯಂತೆ ಕೊಡಬೇಕೆಂದು ತಾವೇ ತೆರಿಗೆಯನ್ನು ವಿಧಿಸಿಕೊಂಡು ಆ ಮೂಲಕ ಕೂಡಿಬಂದ ಹಣದಿಂದ ಹುಡುಗರಿಗೆ ಓದುವುದಕ್ಕೆ ಪಾಠಶಾಲೆಯನ್ನು ಕಟ್ಟಿಸಿಕೊಟ್ಟಿರುವರು.

ಒಂದೇ ಒಂದು ಒರುಳಗಡ್ಡೆಯಿದ್ದರೆ, ಜಾಗರೂಕತೆಯಿಂದ ಸಾಗುವಳಿ ಮಾಡುವವನು ಆ ಒಂದರಿಂದ ೧೫,೦೦,೦೦,೦೦,೦೦೦ ಗಡ್ಡೆಗಳನ್ನು ಹತ್ತು ವರ್ಷಗಳ ಕಾಲದಲ್ಲಿ ಉತ್ಪತ್ತಿ ಮಾಡಿ, ಮತ್ತೆ ಬೀಜವನ್ನು ಲೋಕಕ್ಕೆಲ್ಲಾ ಒದಗಿಸಬಹುದು.

ದಿಕ್ಕಿಲ್ಲದ ತಬ್ಬಲಿಮಕ್ಕಳನ್ನು ಆಸ್ಟ್ರೇಲಿಯಾ ದೇಶದವರು ಮನೆಗೆ ಒಂದೊಂದರಂತೆ ಬರಮಾಡಿ ಇಟ್ಟುಕೊಂಡು, ಅವುಗಳಿಗೆ ೧೪ ವರ್ಷಗಳಾಗುವವರೆಗೂ ಸಾಕುತ್ತಾರೆ. ಇದಕ್ಕಾಗಿ ಅಲ್ಲಿನ ಸರಕಾರದವರು ಧನಸಹಾಯ ಮಾಡುತ್ತಾರಂತೆ.

ತುರ್ಕಿ ದೇಶದಲ್ಲಿ ಒಂದು ವಿಚಿತ್ರವಾದ ರತ್ನಗಂಬಳಿಯು ಒಬ್ಬ ದೊಡ್ಡ ಮನುಷ್ಯನಿಗಾಗಿ ತಯಾರಾಗಿದೆ. ಅದು ಈಗ ೩೦೦ ವರ್ಷಗಳ ಕೆಳಗೆ ಪಾರಶೀಕ ದೇಶದಲ್ಲಿದ್ದ ಮಾದರಿಯನ್ನು ಅನುಸರಿಸಿಮಾಡಿದೆ. ಅದರಲ್ಲಿ ೨೨೫ ಲಕ್ಷ ಹೊಲಿಗೆಗಳಿವೆ. ಅದನ್ನು ಮಾಡಿ ಮುಗಿಸುವುದಕ್ಕೆ ೧೮ ತಿಂಗಳು ಹಿಡಿಯಿತಂತೆ.

ಒಂದುಸಾರಿ ಕಾಸಿ ಉಪಯೋಗಿಸಿದ ಮೇಲೆ ದೂರವಾಗಿ ಎಸೆದುಬಿಡುವ ಟೀಸೊಪ್ಪಿನ ತೊಗಟಿನಿಂದ ಕೂಡ ಪ್ರಯೋಜನವಿದೆ. ಆ ತೊಗಟನ್ನು ಬಿಸಿನೀರಿನಲ್ಲಿ ಹಾಕಿ ಕದಡಿ ಸೋಸಿಕೊಂಡು, ಆ ನೀರಿನಿಂದ ವಾರ್ನಿಷ್ ಹಾಕಿರುವ ಮರದ ಸಾಮಾನುಗಳನ್ನು ತೊಳೆದರೆ, ಕರೆಯಿದ್ದರೆ ಒಡನೆ ಅಳಿಸಿಹೋಗಿ ಶುದ್ಧವಾಗುವದು.

ಅ. ಪ.

ಜೀನಸು ಧಾರಣೆ. (ರೂ೦)

ಹೊಸ ಮುಸ್ಕತಿ ಅಕ್ಕಿ .	5—2—0	5—10—0
ಹೊಸ ಗಾಡಿ ರಾಶಿ ,, .	4—6—0	4—8—0
ಹೊಸ ಗುಡ್ಡು ,, .	4—10—0	4—14—0
ಅವ್ವಲ್ ಬೆಳ್ತಿಗೆ ,, .	5—6—0	5—10—0
ಗುಡ್ಡು ಬೆಳ್ತಿಗೆ ,, .	5—1—0	5—2—0
ರಂಗೂನು ಬೆಳ್ತಿಗೆ ಗೋಣಿ ೧ರ	7—12—0	8—4—0
ಗೋಧಿ ಗೋಣಿ ೧ರ ...	13—0—0	14—0—0
ಹುರುಳಿ ಗೋಣಿ ೧ರ ...	6—0—0	7—2—0
ಕಡಲೆ ಗೋಣಿ ೧ರ ,, .	9—4—0	10—8—0
ತೊಗರಿ ಗೋಣಿ ೧ರ ...	10—0—0	11—8—0
ತೊಗರಿ ಬೇಳೆ ಗೋಣಿ ೧ರ .	12—8—0	16—0—0
ಉದ್ದು ಗೋಣಿ ೧ರ		10—0—0
ಊರುಬೆಲ್ಲ ಖಂಡಿ ೧ರ		70—0—0
ಉಪ್ಪು ಗೋಣಿ ೧ರ . .	3—11—0	3—14—0
ಕೊಬ್ರಿ ಖಂಡಿ ೧ರ . .	75—0—0	78—0—0
ಕೊಬ್ರಿ ಹಿಂಡಿ ಖಂಡಿ ೧ರ		15—0—0
ಎಳ್ಳಿಂಡಿ ಖಂಡಿ ೧ರ .	25—0—0	32—4—0
ಕೊಬ್ರಿ ಎಣ್ಣೆ ಮಣ ೧ರ .	5—14—0	6—0—0
ಎಳ್ಳೆಣ್ಣೆ ಮಣ ೧ರ(ಕುರಾಸನ)	3—10—0	3—14—0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ		5—0—0
ಮೋರಿಸ್ ಸಕ್ಕರೆ ಮಣ ೧ರ		4—12—0
ಕಾಫಿ ಖಂಡಿ ೧ರ.	225—0—0	241—0—0
ಹೊಸಬೀಗೋಟು ಖಂಡಿ೧ರ	94—0—0	98—0—0
ಹೊಸ ಗೇರುಬೀಜ ಮುಡಿ ೧ರ . . .		2—2—0
ಕಬ್ಬಿಣ ಖಂಡಿ ೧ರ		50—0—0
ತಾಂಬ್ರ ತಗಡುಮಣ ೧ರ		19—0—0
ತಾಂಬ್ರ ಪಾತ್ರೆಗಳು ಮಣ ೧ರ . . .		22—0—0
ಚೀನಿ ಬೆಳ್ಳಿ ಸೇರು ೧ರ .		18—12—0

ಅನುಭವಸಿದ್ಧವಾದ ವನೌಷಧಗಳು

೧. ಕುಂತಳಕಲ್ಪಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ, ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳ ೦ ಪಾಲ್ಕು ದಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ ಬಾಟ್ಲಿಗೆ ೧ರೂ ೩ ಬಾಟಲಿಗೆ ೨ ರೂ ೧೦ ಆಣೆ

೨ ಪ್ರಮೇಹಹರಿವು ದಿಂದು [illegible] ಗೀವನ್ನು [illegible] ತವಾಗಿ ಗುಣ [illegible]

೭. ದಂತಜೀರಳ ಶಾಕ. ಎಲ್ಲ ದಂತರೋಗಗಳನ್ನು [illegible] ತನ್ನ ಬಂಟಿಕತನವನ್ನು ತಪ್ಪಗೆ ಗುಣಪಡಿಸುವದು [illegible]

೪. ಸೂರಣಾವ ಲೇಹ. ರಕ್ತ [illegible] ಕೀಲಿ ಅತ್ಯುತ್ತಮವು. ಪೌಷ್ಟಿಕವಾಗಿ [illegible]

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳು [illegible] ಬಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ [illegible] ಗಳನ್ನೂ ಗುಣಪಡಿಸುವದು ತಿಂಗಳ ಔಷಧಕ್ಕೆ ಬಟ್ಟು ೩ ರೂ ೮ ಆಣೆ

೬. ಜಗನ್ಮೋಹನ ದಂತಮಂಜನ [illegible] ಬಾಧೆಗಳನ್ನು ಪರಿಹರಿಸತಕ್ಕ ವಿಲಾಯಿತೀ [illegible] ಅನೇಕ ವನೌಷಧಗಳಿಂದ ತಯಾರಿಸಿಯದೆ [illegible]

೭. ಸರಳಭೇದಿ ಮಾತ್ರೆ [illegible] ತೊಲೆಗೆ ೨ ರೂ

ನಮ್ಮ ವಿಳಾಸ—ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಯುಲ್ಮಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಬಾಲ್ಕಲೀ ಪಾಕ ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧ ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತಬಾಧೆಗಳನ್ನು ತಟ್ಟನೆ ಗೆಲ್ಲುವದು. ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ. ೬ ಆಣೆ.

೧೨ ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩ ಸಪ್ಪೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪ ಬ್ರಹ್ಮಾ ಸಾರಸ್ವತ ಚೂರ್ಣ ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು ವಾಣಿಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ ರೂ. ೮ ಆಣೆ

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು

B M Nath & Co, *Ayurvedic Chemists,*

Vepery Post, MADRAS.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ ಉತ್ತಮವಾದ ನೀಲಗಿರಿಯ ಚಾ ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಮಠ ಮಿಶ್ಯನ್ ಚೇಕುಗಳೂ ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ [illegible] ಕೊಡೆಗಳೂ, ರೇಶ್ಮೆ ವಸ್ತ್ರಗಳೂ, ಬೆಟ್ಟ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಪತ್ರಗಳೂ, ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ, ಜರಿ [illegible] ಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಒಂದು ಪರೀಕ್ಷಿಸಿರಿ!

ಯು ಕಮ್ಮಿ—ವಗದಿ.

[illegible] ಸೋಜ ಎಂಡ್ ಕಂಪೆನಿ,

ಹಂಪನಕಟ್ಟೆ [illegible] ಕೂರು

NOTICE.

Stany Brothers,

Candle Garden, Mangalore,

ಬಲ್ಮಠ ಕದ್ರಿ ರಸ್ತೆ ಬಳಿ ನಮ್ಮ "ಕೆಂಡಲ್ ಗಾರ್ಡನ್" ಎಂಬ ಸ್ಥಳದಲ್ಲಿ 1908ನೇ ಇಸವಿ ಆಗ್ಯಾಸ್ತಿನಿಂದ ಈ ವರೆಗೆ ನಡೆದು ಬಂದಿರುವ ಯಂತ್ರದಿಂದ ಹುರಿದು ತಯಾರಿಸುವ ನಮ್ಮ ಕಾಫಿ ಪುಡಿ ವ್ಯಾಪಾರವು ನಮ್ಮ ವಾಚಕರಿಗೆ ಗೋಚರವಾಗದ ಕಾರಣ ಈಗ ನಾವು ಪ್ರಕಟಿಸಿರುತ್ತೇವೆ

ನಮ್ಮಲ್ಲಿ ನಾನಾ ಬಗೆಯ ಶಾಲಾ ಹುಡುಗರಿಗೆ ಅವಶ್ಯವುಳ್ಳ ಕೋಪಿ ಬುಕ್ ಇತ್ಯಾದಿ ಶಾಲಾ ಪುಸ್ತಕಗಳೂ, ಸೊಗಸಾದ ಅನೇಕ ವಿಧದ ತಿರುಚಿನಾಪಳ್ಳಿ ಚುರುಟುಗಳೂ, ನೀಲಗಿರಿ ಚಾ, ಇತರ ಸಾಮಾನುಗಳೂ ಕೂಡ ವ್ಯಾಪಾರಸ್ಥರಿಗೆ ಸುಲಭವಾದ ಖರೀದಿಯಲ್ಲಿ ದೊರಿಯುತ್ತದೆ

ಕಾಫಿ ಪುಡಿಯು ರಾತ್ತಲು ಒಂದಕ್ಕೆ 0—10—0ಯಿಂದ 0—5—0 ದರದ ವರೇಗೂ ದೊರಿಯುತ್ತದೆ.

ಇತರ ಅನುಭವಗಳಿಗೆ ನಮ್ಮ ಮೆನೇಜರರ ಮೇಲಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

Piedade Pinto,
Manager.

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು ,,	225,000—0—0
Subscribed Capital	218,800—0—0	ಪ್ರತಿಜ್ಞಾತ ಮೂಲ ಧನವು ,,	218,800—0—0
Paid up Capital	193,800—0—0	ಆಗತ ಮೂಲ ಧನವು ,,	193,800—0—0
Deposits	441,934—0—11	ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	441,934—0—11
Reserve Fund	33,500—0—0	ರಕ್ಷಿತ ಧನವು	33,500—0—0

Besides the uncalled capital of Rs 25,000/ 25% of the net profits are added annually to the Reserve Fund. Rs 21,685/ have been invested in Government Paper of the face value of Rs. 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs 50/-and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½% per annum at the discretion of the managing committee

Current Deposit Account opened free of charge.

Savings Bank Account opened for any sum not less than 4 As and multiples thereof and interest paid @ 4½%.

Loans granted on proper securities and pledges

Sealed Parcels for safe custody received on a moderate charge.

Canara Bank Ltd,
Mangalore, 1st April 1915.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

P. Gopal Naik,
Secretary.

ಜಯವಿಜಯ

ಅಥವಾ

ತೂಗಾಡುವ ಅಸ್ಥಿಪಂಜರ.

ಗುಜರಾಥಿ ಭಾಷೆಯಿಂದ ಕನ್ನಡದಲ್ಲಿ ಹೊಸತಾಗಿ ಭಾಷಾಂತರವಾದದ್ದು,

ಈ ಗ್ರಂಥದ ಕುರಿತು "ಸತ್ಯದೀಪಿಕೆ" ಎಂಬ ವಾರಪತ್ರಿಕೆಯು ಪಡುವ ಅಭಿಪ್ರಾಯ:—"ಇದು ಬಹಳ ರಸಿಕವಾದ ಆಶ್ಚರ್ಯವುಳ್ಳ ಒಂದು ಕಥೆಯಾಗಿದೆ ಅದನ್ನು ಓದತೊಡಗಿದವರಿಗೆ ಅದನ್ನು ತೀರಿಸುವ ತನಕ ವಿಶ್ರಾಂತಿ ದೊರಕದು. ದೇಶಸ್ಥರು ಸಹಾ ವಿಲಾಯತಿ ಕಾದಂಬರಿಗಳಂತೆ ಚೆಲೋ ಕಥೆಗಳನ್ನು ಬರೆಯಬಲ್ಲರೆಂದು ಇದರಿಂದ ಪ್ರಕಟವಾಗುತ್ತದೆ. ಇದರ ಸಾರಾಂಶವೂ ನೀತಿಯೂ ಕೂಡಾ ಘನವಾದದ್ದು. ನೀತಿವಂತರು ಅನೇಕಸಾರಿ ಶ್ರಮೆಪಡುವಾಗ ದುಷ್ಟರು ಕೆಲವು ಸಮಯ ಮೆರೆಯುವರೆಂದೂ ಆದರೆ ದುಷ್ಟರ ದುಷ್ಟತನವು ಬೈಲಾಗಿ ಅವರು ತಮ್ಮ ದುಷ್ಟತನಕ್ಕೆ ತಕ್ಕ ಪ್ರತಿಫಲವನ್ನು ಹೊಂದುವಾಗ ನೀತಿಯು ಕಡೆಗೆ ಜಯಿಸಿ ಬಾಳುವದೆಂದೂ ಈ ಕಥೆಯ ಕವಿಯು ತೋರಿಸುವನು. ಇದಲ್ಲದೆ ಈ ಕಥೆಯ ಹೂರರಲ್ಲಿ ಒಬ್ಬಳಾದ ಜಯೆಯಲ್ಲಿ ಪತಿವ್ರತಾ ಧರ್ಮವೂ ಇತರರಲ್ಲಿ ಬೇರೆ ಸದ್ಗುಣಗಳೂ ಹೊಳೆಯುವವು. ಕರ್ನಾಟಕ ಬಲ್ಲವರೆಲ್ಲರೂ ಈ ಕಥೆಯನ್ನು ಓದಿಕೊಂಡು ಈ ಕಥೆಯ ನೀತಿಯಿಂದ ಲಾಭವನ್ನು ಪಡೆದಾರೆಂತ ನಂಬುತ್ತೇವೆ." ಇತ್ಯಾದಿ. ಪುಸ್ತಕದ ಕ್ರಯ 0—12—0. ವಿ. ಪಿ. ಬೇರೆ.

ವಿಳಾಸ:—

V. O. Amin,
C/o E. A. Goll Esq.
Sirdar Palace, Apollo Street,
BOMBAY.

ರೂ. 501 ಉಚಿತ!

ಬಲೂನ್ ಬ್ರೇಂಡ್ ಸಾಬೂನ್.

5 ನಿಮಿಷದೊಳಗೆ ಕೂದಲನ್ನು ಉದುರಿಸಿಬಿಡುವದಿಲ್ಲವೆಂಬದನ್ನು ಖಚಿತಪಡಿಸುವವರಿಗೆ ರೂ. 501 ಉಚಿತವಾಗಿ ಕೊಡೋಣಾಗುವದು. ಇದರಿಂದ ಚರ್ಮವು ಕೆಡದು. 3 ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ 0—12—0; 2 ಪೆಟ್ಟಿಗೆಗಳ ವರೆಗೆ ವಿ. ಪಿ ಚಾರ್ಜು 0—5—0.

ರೂ. 2500 ಉಚಿತ!

ಸಿರಾಜಿ ಹೇರ್ ಡೈ ಎಂಬ ಕೇಶತೈಲವು ಬಿಳೀ ಮತ್ತು ನರೆತ ಕೂದಲನ್ನು ಕಪ್ಪು ಮಾಡುವದಿಲ್ಲವೆಂದು ತೋರಿಸುವವರಿಗೆ ರೂ. 2500 ಉಚಿತ.

ಈ ತೈಲವನ್ನು ಏನೊಂದು ಬಾಧಕಬಾರದಂತೆ ಅತಿ ನಿಪುಣತೆಯಿಂದ ತಯಾರು ಮಾಡಿರುತ್ತದೆ. ಇದರಿಂದ ಚರ್ಮದಲ್ಲಿ ಕಲೆಯಾಗದು. ಪೆಟ್ಟಿಗೆ 1ಕ್ಕೆ ರೂಪಾಯಿ 1—0—0; ವಿ. ಪಿ. ಬೇರೆ.

ವಿಳಾಸ:— ಎಫ್. ಎಲ್. ದವಾವಾಲಾ,
ಮಿರ್ಜ ಸ್ಟ್ರೀಟ್, ಮುಂಬಾಯಿ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡಿಸಬೇಕಾಗಿದೆ.

F. L. Davawala,
Mirza Street, BOMBAY.

ಲೋಕಪ್ರಸಿದ್ಧವಾದ ಸಾಲಾಮಿಸ್ರೀ ಮುರಬ್ಬಾ

ಮುರಬ್ಬಾವು "ಸಾಲಾಮಿಸ್ರಿ"ಯಲ್ಲಿ ತಯಾರಿಸಲ್ಪಟ್ಟದ್ದು **ಅಲ್ಲವೆಂದು ವ್ಯಕ್ತಪಡಿಸುವವರಿಗೆ**

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಬೆಂಗಳೂರು ಸಿಟಿ ಟಪ್ಪಾಲು ಆಫೀಸಿನ ಸೇವಿಂಗ್ಸ್ ಬ್ಯಾಂಕಿನಲ್ಲಿ 15—3—15ರಲ್ಲು ಡಿಪಾಜಿಟು ಇಟ್ಟಿರುತ್ತೇವೆ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು **ಲೋಕೋಪಕಾರಾರ್ಥ** ವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ ! ಸೇವಿಸಿರಿ !!

ಈ ಸಾಲಾಮಿಸ್ರೀ ಎಂಬದು ಒಂದು ಗಿಡದ ಹಣ್ಣಾಗಿರುತ್ತದೆ. **ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು** ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. **ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ** ಒಬ್ಬ ಮನುಷ್ಯನಿಗೆ ನಮ್ಮ ದೇಶದ **ನಾಲ್ಕು ಜನಗಳು ಎಂದಿಗೂ ಸಮಾನ** ವಾಗಲಾರರು ಅನೇಕರು ಉರುಳುಗಡ್ಡೆ, **ಶಾಮುಗಡ್ಡೆ ಇವುಗಳನ್ನು ಪಕ್ವ ಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು.** ಈ ಮುರಬ್ಬಾವನ್ನು **ಪರೀಕ್ಷಿಸಿ ನೋಡಿದ್ದಲ್ಲಿ** ಇದು **ಸಾಲಾಮಿಸ್ರಿಯೋ ಅಥವಾ ಬೇರೆ ತರಹಾದ್ದೋ ಎಂಬುವುದು** ತಿಳಿದು ಬರುತ್ತೆ.

ಈ ಮುರಬ್ಬಾವನ್ನು ಪ್ರತಿಯೊಬ್ಬರು ಸೇವಿಸಬೇಕು ಹಾಗೆ ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟದ್ದು.

ಸಾಲಾಮಿಸ್ರಿ ಮುರಬ್ಬಾವು— ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು— ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು— ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು.
ಸಾಲಾಮಿಸ್ರಿ ಮುರಬ್ಬಾವು— ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು— ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು
ಸಾಲಾಮಿಸ್ರಿ ಮುರಬ್ಬಾವು— ಮೆದುಳಿಗೆ ಬಲವನ್ನು ಕೊಡುವದು
ಸಾಲಾಮಿಸ್ರಿ ಮುರಬ್ಬಾವು— ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು— ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು— ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು— ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು— ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು— ತಾಂಬ್ರ ಮತ್ತು ಭಂಗಾರ ಭಸ್ಮಕಿಂತಲು ಉತ್ತಮವಾದದ್ದು.
ಸಾಲಾಮಿಸ್ರಿ ಮುರಬ್ಬಾವು— ಸ್ತ್ರೀಸಂಗಕ್ಕೆ ಮೊದಲು ಸ್ಖಲನವಾಗುವುದನ್ನು ನಿಲ್ಲಿಸುವದು.

ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವದರಿಂದ ಪೂರಾ ಗುಣಕೊಡುತ್ತೆ. 2—3 ಡಬ್ಬಿ ಮುರಬ್ಬಾವನ್ನು ಉಪಯೋಗಿಸುವದರಿಂದ ಜನ್ಮಾಂತರದ **ರೋಗ ಗುಣಕೊಡುತ್ತೆ.**

15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2 ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿ ವರೆಗೆ ಆಣೆ 6

ಏಜಂಟರು:— ಡಿ. ಸಯ್ಯದ್ ಉಸ್ಮಾನ್ ಎಂಡ್ ಕೊ.
ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲೀ ವೈದ್ಯರು,
5 ಹಾಜಿಸಾಹೇಬ್ ಮಹಡಿ ಅವೆನ್ಯು ರೋಡ್, ಬೆಂಗಳೂರು ಸಿಟಿ.

ನರೆಕೂದಲಿಟ್ಟುಕೊಂಡು
ಮುದುಕರಾಗಿ ಕಾಣುವುದೇಕೆ?

ದರ್ಬಾರ್ ಕೂದಲು ರಂಗು

ಒಂದು ಸಲ ಹಚ್ಚಿದರೆ 20 ವರುಷ ಪ್ರಾಯದ ಸಮರ್ಥರಂತೆ ಕಾಣು

ತ್ತಿರಿ. ಈ ರಂಗು ಹಚ್ಚಿಕೊಂಡರೇ ಕೂದಲು ಅಚ್ಚ ಕಪ್ಪಾಗಿ ಹೊಳೆಯುತ್ತೆ. ಈಗ ಮಾರಿಕೆಗೆ ಬಂದಿರುವ ಅಲ್ಪತರದ ಕೂದಲಿಗೆ ಹಚ್ಚುವ ಬಣ್ಣಗಳೂ ರಂಗುಗಳೂ ತುಂಬ ಕೀಳು ಜಾತಿಯವು; ಹಚ್ಚಿದಮೇಲೆ ಕೂದಲು ಕೆಂಚು ತಿರುಗಿ ಅಸಹ್ಯವಾಗಿ ಕಾಣುತ್ತದೆ. ನಮ್ಮ "ದರ್ಬಾರ್ ಕೂದಲು ರಂಗು" ಅಂಥಾದ್ದಲ್ಲ; ಬಹು ಮೇಲಾದದ್ದು. ಒಂದಾವರ್ತಿ ತರಿಸಿ ಪರೀಕ್ಷೆಮಾಡಿದರೆ ನೀವೇ ಸಂತೋಷಪಡುವಿರಿ. ಕ್ರಯ ಬುರುಸು ಸಮೇತ ಬಾಟ್ಲೆ ಒಂದಕ್ಕೆ ರೂ. 1; ಅಂಚೆ ಹಾಸಲು 4 ಆಣೆ.

ವಿಳಾಸ:— ವಿ ಎ, ಎಸ್. ವಾಣಿ ಕಂಪೆನಿ.
ನಂಬ್ರ 3 ಇರುಳಪ್ಪನ್ ಬೀದಿ, ಮದರಾಸು.

ಕಟೀಲ ನರಸಿಂಹಪೈ ಎಂಡ್ ಸನ್ಸ್,

ರಥಬೀದಿ, ಮಂಗಳೂರು.

ಇತರ ಕಡೆಗಳಿಂದ ವಸ್ತ್ರ ಇತ್ಯಾದಿಗಳನ್ನು ತಕ್ಕೊಳ್ಳುವ ಮೊದಲು ನಮ್ಮಲ್ಲಿಯ ದರಗಳನ್ನೂ ಸನಗುಗಳನ್ನೂ ಪರೀಕ್ಷಿಸಿ ನೋಡಿರಿ.

ನಗದಿ ಗಿರಾಕಿಗಳಿಗೆ ವಿಶೇಷ ಪ್ರಯೋಜನ ದೊರಕುವಂತೆ ನಮ್ಮ ದರಗಳನ್ನು ಇಟ್ಟಿರುತ್ತೇವೆ.

ಮಧುರಾ, ತಿರುಚಿನಾಪಳ್ಳಿ, ಸೇಲಂ, ಮದ್ರಾಸು, ಮುಂಬಾಯಿ, **ಪೂನಾ, ಸೂರತ್**, ಬೆಂಗಳೂರು, ಬನಾರಿಸ ಮೊದಲಾದ ನಾನಾ ವಿಧದ ವಸ್ತ್ರ ನೇಯಿಗೆಯಲ್ಲಿ ಪ್ರಖ್ಯಾತಪಟ್ಟ ಪ್ರಾಂತ್ಯಗಳಿಂದ ಎಲ್ಲಾ ಬಗೆಯ ಸನಗುಗಳನ್ನು ತರಿಸಿರುವೆವು. ಗಿರಾಕಿಗಳು ಬಂದು ಪರೀಕ್ಷಿಸಿ ನೋಡಬೇಕಾಗಿ ವಿಜ್ಞಾಪನೆ.

Kateel Narasimha Pai & Sons,
Cloth Merchants,
CAR STREET, Mangalore.

ಆತಂಕನಿಗ್ರಹ ಗುಳಿಗೆಗಳು.

ದೇಹದಲ್ಲಿ ಎಂಥಾ ಕಾಯಿಲೆ ಇರುವಲ್ಲಿ ಅದನ್ನು ಶೀಘ್ರದಲ್ಲಿ ಹೋಗಲಾಡಿಸುವ ಪ್ರಯತ್ನ ಮಾಡಿ ತಕ್ಕಂಥಾ ಔಷದವ್ರ ಸೇವಿಸಿ ಆದನ್ನು ಗುಣಹೊಂದಿಸದಿದ್ದರೆ ರತ್ನವಾದ ದೇಹವು ಕ್ಷೀಣಿಸುವದು ಆದಕಾರಣ ಹಾಗೂ ತಮಗೆ ಏನಾದರೂ ದೇಹಾಸೌಖ್ಯ ಕಂಡುಬರುವಲ್ಲಿ ತಕ್ಷಣವೇ ಆತಂಕನಿಗ್ರಹ ಗುಳಿಗೆಗಳನ್ನು ಸೇವಿಸಿ ನಂತರ ದೇಹಬಲವನ್ನು ಸ್ಥಾಪಿಸಿ ಅತಿ ಉತ್ತಮಕರವಾದ ರತ್ನವೆಂಬ ಔಷದವು

ಕ್ರಯ 32 ಗುಳಿಗೆಗಳಿಗೆ 1 ರೂಪಾಯಿ

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ್

ತಮ್ಮ ಏಜಂಟರು — 1 ಮೆಸ್ಸರ್ಸ್. ರಫಯೆಲ್ ಎಂಡ್ ಕೊ, ದ್ವಿಟೊವಿಲ್ಲಿಂಗ್

2 ಜುಬಿಲಿ ಕೇಕ್ ಬಜಾರ್, ಬೆಂಗಳೂರು ಮಂಗಳೂರು

ಚಿನ್ನ ಮತ್ತು ಬೆಳ್ಳಿಯ ಮೆಡಲುಗಳನ್ನು ಬಹುಮಾನವಾಗಿ ಪಡೆದ

ಸ್ಟೀವನ್ ಎಂಡ್ ಸನ್

ಬಿಸ್ಕುಟು ವ ಕೇಕುಗಳನ್ನು ತಯಾರಿಸುವವರು, ಮಂಗಳೂರು.

ಏಜಂಟರು:—ಅಂತೋನಿ ಎಲ್. ರೇಗೊ, ಸ್ಟೇಟ್‌ಮಾರ್ಟ್ ಬಜಾರ್, ಕಲ್ಲಿಕೋಟೆ.
ಸ್ವದೇಶಿ ಎಂಪೋರಿಯಮ್, ಸೇಲಂ.
ಕಣಕಾಸಬಾ ಚೆಟ್ಟಿಯರ್, ಲಾಲ್‌ಗುಡಿ, ಪುವಲೂರ್, ತಿರುಚಿನಾಪಳ್ಳಿ.
ಎಮ್ ಪ್ಯಾಸ್ ಶೋಪ್, ಮಡಿಕೇರಿ
ವಿ ಬಾಲಕೃಷ್ಣ ನ್ಯಾಡು, ಬಿಗ್ ಬಜಾರ್ ಸ್ಟ್ರೀಟ್, ಕೊಯಂಬುತ್ತೂರು
ಅರ್ನೋನ್ ಎಂಡ್ ಐವನ್ ಶೋಪ್, ಉಡ್ಪಿ.

ನೀವು ನಮ್ಮ ಬಿಸ್ಕುಟು ಇತ್ಯಾದಿಗಳಿಂದ ತೃಪ್ತಿಹೊಂದಿದರೆ ಇತರರಿಗೆ ಹೇಳಿರಿ. ಇಲ್ಲವಾದರೆ ನಮಗೆ ಲಿಸಿದರೆ ನಿಮ್ಮನ್ನು ತೃಪ್ತಿಪಡಿಸುವೆವು.

ವಿಳಾಸ.— ಸ್ಟೀವನ್ ಎಂಡ್ ಸನ್ಸ್, ಮಂಗಳೂರು

ಪ್ಲೀಡರ್ ಎಂ. ಮಲ್ಲಾರಾಧ್ಯರಿಂದ ರಚಿತವಾದವುಗಳು.

ವ್ಯವಹಾರ ನಿರ್ಣಯ.

ಕನ್ನಡದ ಲಾ ಪುಸ್ತಕವು.

ತೃತೀಯ ಮುದ್ರಣ, 616 ಪುಟಗಳುಳ್ಳದ್ದು.
ಕ್ರಯ, ದಪ್ಪ ಕಾಗದದ ಪ್ರತಿಗೆ . 1—8—0
ಕ್ರಯ, ಗ್ಲೇಜ್ ,, ,, ... 2—4—0
ಪೋಸ್ಟೇಜು ಪ್ರತಿ 1ಕ್ಕೆ 4 ಆಣೆ.

ಇದರಲ್ಲಿ ಹಿಂದೂ ಲಾ, ಮಹಮ್ಮದೀಯ ಲಾ, ಪೀನಲ್‌ಕೋಡು ಇವು ವಿಸ್ತಾರವಾಗಿ ಬರೆಯಲ್ಪಟ್ಟಿವೆ ಮೈಸೂರು, ಮದ್ರಾಸು, ಬೊಂಬಾಯಿ ದೇಶಗಳಿಗೆಲ್ಲಾ ಸಾಮಾನ್ಯವಾದ ಲಾ ವ್ಯತಸ್ವತ್ತಿನ ವಿಲೇವಾರಿ, ಅನಾಥ ರಕ್ಷಣೆ ಕ್ರೈಸ್ತರ ವಾರಸ್ಸು ಹಕ್ಕು ಈ ವಿಷಯಕವಾದ ಖಾನೂನುಗಳೂ, ಕ್ರಯ, ದಾನ, ವಿಲ್ಲು, ಹುಂಡಿ, ಗೇಣಿ ಮೊದಲಾದ ಸಮಸ್ತ ವ್ಯವಹಾರವನ್ನೊಳಗೊಂಡಿರುವ 92 ವಿಧದ ದಸ್ತಾವೇಜು ನಮೂನೆಗಳೂ, ಲಾ ಪ್ರಕಾರ ಸಿವಿಲ್ ಕ್ರಿಮಿನಲ್ ಕೋರ್ಟುಗಳಿಗೂ ಪೋಲೀಸಿಗೂ ಬರೆಯುವ ಅರ್ಜಿಗಳ 49 ನಮೂನೆಗಳೂ, ಅವುಗಳ ಸಂಬಂಧವಾದ ವಿಶೇಷ ವಿಷಯ ವಿಚಾರಗಳೂ ಬಹಳ ಚೆನ್ನಾಗಿ ಬರೆಯಲ್ಪಟ್ಟಿವೆ. ಇಷ್ಟು ದೊಡ್ಡ ಉಪಯುಕ್ತವಾದ ಗ್ರಂಥವನ್ನು ಇಷ್ಟು ಕಡಿಮೆ ಬೆಲೆಗೆ ಯಾರೂ ಮಾರುವುದಿಲ್ಲ.

"ತಖಾವಿ ಲಾ."

ಇದು ಕೃಷಿಯ ಅಭಿವೃದ್ಧಿಗಾಗಿಯೂ, ರೈತರ ಸಹಾಯಾರ್ಥವಾಗಿಯೂ ಸರಕಾರದವರು ಕೊಡುವ ಸಾಲ ಮೊದಲಾದ ಸಹಾಯ ವಿಷಯಕವಾದ ಲಾವನ್ನು ವಿವರಿಸುವ ಉಪಯುಕ್ತವಾದ ಪುಸ್ತಕ ಬೆಲೆ 8 ಆಣೆ. ಪೋಸ್ಟೇಜು 2 ಆಣೆ.

ನಮ್ಮ ವಿಳಾಸ:— ಎಂ. ಎಂ. ಪಂಡಿತಾರಾಧ್ಯ ಮೈಸೂರು.

S. U. N. & CO.,

BENARES CITY, U P.

ದೊಡ್ಡ ಕಂಪೆನಿ ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲ್ಲಿ ನೆಯ್ದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಚಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗನ್ನು ಇನಾಮಾಗಿ ಕಳುಹಿಸಲಾಗುವುದು.

ತಮ್ಮ ವಿಳಾಸ:— ಯಸ್.ಯು.ಯನ್. ಮತ್ತು ಕಂಪೆನಿ, ಕಾಶಿ

Estd. 1888 ಸ್ಥಾಪನೆ 1888.

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦-೩೫ ವರ್ಷಗಳ ಹಳತ, ಸ್ಥಿಮಿತ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿಗಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೆಲ್ಲಾ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕಡೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಸವಿನುಡಿಯ ಗ್ರಂಥಮಾಲೆ.

೧. ಪ್ರಶ್ನೋತ್ತರ ಲೇಖ್ಯಬೋಧಿನಿ. ಲೋಕವ್ಯವಹಾರವನ್ನು ಬೋಧಿಸುವುದು … … … … … ೧—೭—೦

೨. The Self English Study … ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ … ಆಂಗ್ಲಭಾಷಾ ಪ್ರವೇಶದಾಯಿನಿ . ೧—೩—೦

೩. The Self English Study ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ .. ಆಂಗ್ಲಭಾಷಾ ಪ್ರವೇಶದಾಯಿನಿ . ೧—೩—೦

೪. The Self English Study .. ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ .. ಆಂಗ್ಲಭಾಷಾ ಪ್ರವೇಶದಾಯಿನಿ ೧—೩—೦

ಇವು ಮೂರು ಪುಸ್ತಕಗಳೂ ಬೋಧಕರ ಸಹಾಯವಿಲ್ಲದೆ ಇಂಗ್ಲಿಷ್‌ಬಾಷೆಯನ್ನು ತಿಳಿಸುವುದು.

೫. ಕಥಾ ಸರಿತ್ಸಾಗರ (ಪೂರ್ವಭಾಗ) ಪಾರ್ವತೀ ದೇವಿಗೆ ಪರಮೇಶ್ವರನು ಹೇಳಿದ ದಿವ್ಯವಾದ ಕಥೆಗಳು .. … ೧—೧೨—೦

೬. ಮಾಧವೀ ಕಂಕಣ (ಬೆಂಗಾಳಿ ನಾವಲು) ಕೀರ್ತಿಶೇಷರಾದ ರಾಮೇಶ ಚಂದ್ರದತ್ತ ಮಹಾಶಯರ ರಚಿತ. ಅಗತ್ಯ ಓದತಕ್ಕದ್ದು ೧—೮—೦

೭. ಭಾಷಾನಿಧಿ. ಒಂಭತ್ತು ಲಿಪಿ ಮತ್ತು ಒಂಬತ್ತು ಭಾಷೆಗಳನ್ನು ಬೋಧಕರ ಸಹಾಯವಿಲ್ಲದೆ ಕಲಿಸುವುದು.

೧	ವರ್ಣ ಪರಿಜ್ಞಾನ (೧ನೆ ಪುಸ್ತಕ)	…	೧—೧೨—೦
೨.	ಶಬ್ದ ಪರಿಜ್ಞಾನ (೨ನೆ ಪುಸ್ತಕ)	..	೧—೧೨—೦
೩.	ವಾಕ್ಯ ಪರಿಜ್ಞಾನ (೩ನೆ ಪುಸ್ತಕ)	.	೧—೧೨—೦

೮. ಶಕ್ತಿ (ಬಂಗಾಳಿಯ ನಾವಲು). ಓದುವುದಕ್ಕೆ ಬಲು ಚೆನ್ನಾಗಿದೆ … … … … ೦—೧೨—೦

೯. ಭೂಮಿಯ ಅಳತೆ. ಬೋಧಕರ ಸಹಾಯವಿಲ್ಲದೆ ಈ ಶಂಕುಯೋಜನೆಯನ್ನು ಕಲಿಸುವುದು … … ೦—೧೨—೦

೧೦.	ಸಾವಿತ್ರೀ. (ಬಂಗಾಳಿಯ ನಾವಲು) .	…	೦—೪—೦
೧೧.	ಸತೀ ದೇವಿ. (ಬಂಗಾಳಿಯ ನಾವಲು)	…	೦—೪—೦
೧೨.	ದಮಯಂತಿ. (ಬಂಗಾಳಿಯ ನಾವಲು)	…	೦—೪—೦
೧೩.	ಸಂಯುತೆ. (ಬಂಗಾಳಿಯ ನಾವಲು)	…	೦—೪—೦
೧೪.	ಶ್ರೀ ವಿವೇಕಾನಂದ ಸ್ವಾಮಿ. (ಸಚಿತ್ರ ಚರಿತ್ರೆ) .		೦—೪—೦
೧೫.	ಶ್ರೀ ವಿವೇಕಾನಂದೋಪನ್ಯಾಸ. (ಹಿಂದೂಮತ) .		೦—೪—೦
೧೬.	ತಾರಾನಾಥ. (ಜೀವನ ಚರಿತ್ರೆ) …		೦—೪—೦
೧೭.	ದಾದಾಭಾಯಿ ನೌರೋಜಿ … …	…	೦—೧—೦
೧೮.	ಸರ್. ಟಿ ಮಾಧವ ರಾವ್ .. …		೦—೧—೦
೧೯.	ಈಶ್ವರ ಚಂದ್ರ ವಿದ್ಯಾಸಾಗರ… …	..	೦—೧—೦
೨	ರಾಮಮೋಹನರಾಯ … …	…	೦—೧—೦

ಭಾರತಿ ಸಂಪಂಗಿರಾಮು,
೪೨, ಸಿ. ಬೀದಿ ಕೋಟೆ, ಬೆಂಗಳೂರು ಸಿಟಿ.

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಪಡೆದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರ ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಆದ್ದ ಕೊಡಲೀವರ್ ಎಣ್ಣೆಯೂ ಅದರಿಂದ ಪಡೆದ ಬೇರೆ ಔಷಧಗಳು ಹೊಲಸಾಗಿಯೂ ಕಷ್ಟಕರವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗಿವಾದುದರಿಂದ ಅವನ್ನು ಸೇವಿಸುವದರಿಂದ್ದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಜೀರ್ಣಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಪೋಟರ್ ಬಿರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ನೂತನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ. ಶ್ವಾಸಯಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಯಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯೂ ಇದನ್ನು ಸೇವಿಸುವುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ಪೋಟರ್ ಬಿರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ದೊರೆಯುವದಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲು ೧ಕ್ಕೆ 3—4—0. ಅರ್ಧ ಬಾಟ್ಲಿಗೆ 1—12—0.

ಪಿ. ಊಲನ್ ಮಾರ್ಟಿನ್, ಮಂಗಳೂರು, ಕೆನರಾ ಜಿಲ್ಲೆ.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಸಿಬೀಶನ್‌ಗಳಲ್ಲಿ ಸುಮಾರು 95 ಸರ್ಟೀಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರಸಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 4 ರೂ ತೂಕದ ಶೇರು 1ಕ್ಕೆ ರೂ, 12-0-0, 5-0-0, 3-0-0. 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0.

ಸುಗಂಧಿ ಕಾರ್ಡು 1ಕ್ಕೆ 0—1—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಸುವಾಸನೇ ಸುಣ್ಣ** ಶೀಸೆ 1ಕ್ಕೆ 0—2—0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

M. S. RAO & CO.,

BOOK-SELLERS ETC.

AVENUE ROAD, BANGALORE CITY.

Please note:—We have changed our address from—M. Subba Rao Bros, Book-Sellers, Shankarapur, Bangalore City to—

M. S RAO & Co.,

Book-Sellers, Stationers & Commission Agents,

AVENUE ROAD, BANGALORE CITY.

ಯಂ. ಯಸ್. ರಾವ್ ಕಂಪೆನಿ.,

ಬುಕ್‌ಸೆಲರ್ಸ್, ಸ್ಟೇಷನರ್ಸ್ ಮತ್ತು ಕಮಿಷನ್ ಏಜಂಟ್ಸ್,

ಅವಿನ್ಯೂರೋಡ್, ಬೆಂಗಳೂರು ಸಿಟಿ.

ಈವರಿವಿಗೆ ಇದ್ದ ಯಂ. ಸುಬ್ಬರಾವ್ ಬ್ರದರ್ಸ್, ಶಂಕರಪುರಂ, ಬೆಂಗಳೂರು ಸಿಟಿ—ಎಂಬ ವಿಳಾಸವನ್ನು ಮೇಲ್ಕಂಡಂತೆ ಬದಲಾಯಿಸಿದ್ದೇನೆ.

ನಮ್ಮಲ್ಲಿ ಎಲ್ಲಾ ವಿಧವಾದ ಕನ್ನಡ ಕಥೆಗಳೂ, ಬಿ. ವೆಂಕಟಾಚಾರ್ಯರಿಂದ ರಚಿತವಾದ ನಾವಿಲ್‌ಗಳೂ, ಗವರ್ನಮೆಂಟು ಸ್ಕೂಲು ಪುಸ್ತಕಗಳೂ ದೊರೆಯುತ್ತವೆ. ಪುಸ್ತಕದ ಪಟ್ಟಿ ಹೊಸದಾ ಪ್ರಿಂಟಾಗಿದೆ. ಇಂತಿ,

M. S. RAO & Co.,

"ಬೊಂಬೇ ಮೈಲ್ ಲೀವರ್ ವಾಚು"

ಗ್ರಾಹಕರೇ,

ಈ ಮೇಲ್ಕಾಣಿಸಿದ ವಾಚು ಅತೀ ಮನೋಹರವಾಗಿ ನೂತನ ಸಾಮಾಗ್ರಿಗಳಿಂದ



ತಯಾರಿಸಲ್ಪಟ್ಟು ಪ್ರಪಂಚದಲ್ಲೆಲಾ ಇದರ ಶ್ರೇಷ್ಠತೆಯನ್ನು ತಿಳಿಯಬೇಕೆಂಬದಾಗಿ ಅತೀ ಸುಲಭ ಖರೀದಿಯನ್ನು ಇಟ್ಟಿರತ್ತೇವೆ ಕಮ್ಮಿ ಕ್ರಯದ ವಾಚುಗಳು ನೀವು ತರಿಸಿಯೂ ಇತರರಲ್ಲಿ ನೋಡಿಯೂ ಇರಬಹುದು ಆದರೆ ಮೇಲ್ಕಾಣಿಸಿದ "ಬೊಂಬೇ ಲೀವರ್ ವಾಚು" ಎಂಬುದು ಕೀಳು ತರದ ವಾಚಲ್ಲ ಇದು ಹೆಸರಾದ ಕಂಪೆನಿಯಲ್ಲಿ ತಯಾರಿಸಲ್ಪಟ್ಟು ಶ್ರೇಷ್ಠವಾದ ಮತ್ತು ಒಳಪ್ಪವಾದ ಲೀವರ್ ಕೆಲಸವಾಗಿದೆ ನೋಡುವರೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಸಮಯಾನುಸಾರ ಕೆಳಗೆ ಬಿದ್ದಾಗ್ಯೂ ನಿಲ್ಲದೆ ನಡಿಯುತ್ತದೆ ಇದು ನಿಕ್ಕಲ್ ಬೆಳ್ಳಿಯಿಂದ ತಯಾರಿಸಲ್ಪಟ್ಟ ಬಹಳ ದಿವಸ ಬಾಳಿಕೆ ಬರುವಂಥಾದ್ದಾಗಿಯೂ ಇದೆ ನಡಿಯುವದರಲ್ಲಿ ಒಂದು ನಿಮಿಷ ವ್ಯತ್ಯಾಸವೂ ಇರುವುದಿಲ್ಲ ವಾಚು 1ರ ಬೆಲೆ ರೂ 2 ಪೇಕಿಂಗ ಮತ್ತು ಟಪ್ಪಾಲು ಖರ್ಚು ಆಣೆ 4 ಅಲಾಯದ

"ಕೈಗೆ ಕಟ್ಟಿಕೊಳ್ಳುವ ರಿಸ್ಟ್ ವಾಚು"

ಈ ನಕ್ಷೆಯಲ್ಲಿ ಕಂಡ್ರ ಲೀಡಿ ವಾಚ್ ಕೇಲಸ್, ಚಿಕ್ಕ ಸೈಜು ಕಂಪನ್ಸೇಷನ್



ಬ್ಯಾಲೆನ್ಸು ಬಹು ಬಲಿಷ್ಠವಾದ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟೆ ಸಹಿತ ಟ ಖ ಕೂಡಿ ವಾಚು 1ರ ಬೆಲೆ ರೂ 4-12-0

ನೋಡುವರೆ ಬಹು ನೇತ್ರಾನಂದಕರವಿದೆ

ನಮ್ಮ ವಿಳಾಸ:— **ದಿ ಊಲನ್ ಮಾರ್ಟ್,**
ಮಂಗಳೂರು ದಕ್ಷಿಣ ಕನ್ನಡಾ.

ನ್ಯಾಯದರ್ಪಣ.

ಹೊಸ ಪುಸ್ತಕ.

ಇಂಡಿಯಾ ದೇಶದ ಸಮಸ್ತ ಹಿಂದೂ ಜನರ ಸಾಮಾನ್ಯ ಧರ್ಮಗಳು, ಅವುಗಳನ್ನು ಅತಿಕ್ರಮಿಸಿ ನಡೆಯುವವರಿಗೆ ಉಂಟಾಗತಕ್ಕ ಫಲಗಳು, ಇವುಗಳನ್ನು ಕುರಿತು, ಗವರ್ನಮೆಂಟಿನವರಿಂದ ಅನೇಕ ಆಕ್ಟುಗಳು, ರೆಗ್ಯುಲೇಷನ್‌ಗಳು, ಶಾಸನಗಳು ವಗೈರೆ ವಿಧಾಯಕವಾಗಿ ಇರುತ್ತೆ. ಇವುಗಳೆಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೇ ಅಪಾರವಾಗಿ ಇರುತ್ತವೆ ಇವುಗಳಲ್ಲಿ, "ಕಂಟ್ರಾಕ್ಟ್" ಅಂದರೆ ಕರಾರುಗಳು, "ಬ್ರೀಚ್ ಆಫ್ ಕಂಟ್ರಾಕ್ಟ್" ಅಂದರೆ ಒಪ್ಪಂದಕ್ಕೆ ತಪ್ಪಿ ನಡೆಯೋಣ, ದ್ರೋಹ, ಲಿಮಿಟೇಷನ್, ಖಾವಾಕಾಗದ, ರಿಜಿಸ್ಟ್ರೇಷನ್, ಸಿವಿಲ್ ಪ್ರೊಸಿಡ್ಯೂರ್, ಕ್ರಿಮಿನಲ್ ಪ್ರೊಸಿಡ್ಯೂರ್, ಪೀನಲ್ ಕೋಡ್, ಹಿಂದೂ ಲಾ, ಮುಂತಾದ ಧರ್ಮಶಾಸ್ತ್ರಗಳಿಂದ, ಮನುಷ್ಯರ ನಿತ್ಯಾಚರಣೆಗೆ ಅವಶ್ಯಕವಾದ ಲೌಕಿಕ ವ್ಯವಹಾರ ಧರ್ಮಗಳ ಮುಖ್ಯ ಸಂಗತಿಗಳನ್ನೆಲ್ಲಾ ಆರಿಸಿ ಈ ಸಣ್ಣ ಪುಸ್ತಕವನ್ನು ರಚಿಸಿರುತ್ತೆ ಮತ್ತು ವಾಡಿಕೆಯಲ್ಲಿ ಇರತಕ್ಕ ನಾನಾ ವಿಧಗಳಾದ ದಸ್ತೈವಜುಗಳ ಅನೇಕ ನಮೂನೆಗಳು ಮತ್ತು ಕ್ರಿಮಿನಲ್ ರಿವಿನ್ಯು ಗ್ರಾಮ ಮುನಸೀಫ್ ಕೋರ್ಟುಗಳ ಮುಂದಿನ ದಾವಾ ವಗೈರೆ ಅರ್ಜಿಗಳ ಮಾದರಿಗಳು ಅಡಕವಾಗಿ ಇರುತ್ತೆ. ಬೆಲೆ 1—8—0 ವಿ. ಪಿ. 1—12—0.

ಲಾಯರ್ ಯಂ ಯಸ್. ನಂಜಪ್ಪನವರು,
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 ಪುಸ್ತಗಳನ್ನು ಒಟ್ಟಾಗಿ ತರಿಸಿಕೊಂಡರೆ ಪೋಸ್ಟೇಜು ಸೇರಿ 15-0-0 ಆಗುತ್ತೆ.

ಸಚಿತ್ರ ಆಂಗ್ಲಭಾಷಾ ಪ್ರಕಾಶಿಕಾ.

ಇದು ಹೊಸ ತರಹ, ಹೊಸ ಕ್ರಮ, ಅಂದವಾದ ಅಚ್ಚು, ವಿದ್ವಾಂಸರಿಂದ ತಯಾರಾ ಇದನ್ನು ಗುರುವಿನಂತೆ ಭಾವಿಸಿ ಬೆಲೆ ಕಡಿಮೆ ಮಾಡಿದೆ. 3 ಪುಸ್ತಕಗಳೂ ಅಡಗಿರುವ ದೊಡ್ಡ ಪುಸ್ತಕ 1—12—0 1ನೇ ಪುಸ್ತಕ 5 ಭಾಗಗಳುಳ್ಳದ್ದು 0—14—0.

ಅಪೂರ್ವ ಪುಸ್ತಕಗಳು.

ವೈದ್ಯಸಾರ ಸಂಗ್ರಹ ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನ ಪಂಡಿತರಿಂದ ಮರ್ಯಾದಿಸಲ್ಪಟ್ಟಿರುತ್ತೆ ರೂ. 3

ರೆವಿನ್ಯು ಸರ್ವೆ ಮೋಜಣಿ ಕ್ಲಾಸಿಫಿಕೇಷನ್ ಕಲಿಯತಕ್ಕ ಬುಕ್ಕು. ಇದು ಮೋಜಣಿದಾರರಿಗೂ, ಪಟೇಲರಿಗೂ, ಶ್ಯಾನುಭೋಗರಿಗೂ ಅಗತ್ಯವಾಗಿ ಬೇಕಾದ ಪುಸ್ತಕ ಬೆಲೆ 1—4—0.

ರಾವ್‌ಬಹದೂರ್ ವೀರೇಶಲಿಂಗಂ ಪಂತುಲು ಅವರ ರಾಜಶೇಖರ ಚರಿತ್ರೆ ಕನ್ನಡ [illegible] ಬೆಲೆ ರೂಪಾಯಿ 1—0—0.

ನಮ್ಮಲ್ಲಿ ವಿಶೇಷವಾಗಿ ಸರಕಾರಿ ಸ್ಕೂಲು ಪುಸ್ತಕ, ಸಂಸ್ಕೃತ, ಕನ್ನಡ, ತೆಲುಗು, ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳೂ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಕಥೆ ಪುಸ್ತಕಗಳೂ, ಹುಡುಗರಿಗೆ ಉಪಯುಕ್ತವಾದ ಸ್ಟೇಶನರಿ ಸಾಮಾನುಗಳೂ ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ.

	ರೂ ಆ		ರೂ. ಆ.		ರೂ ಆ.
ದಯಾನಂದ ಸರಸ್ವತಿಯ ವರ ಚರಿತ್ರೆ	0—4	ಸೀತಾ ಚರಿತ್ರೆ	1—0	ಮಾಡಿದ್ದುಣ್ಣೋ ಮಹಾರಾಯ	1—0
ಜಮಾ ಖರ್ಚಿನ ಪದ್ಧತಿ	0—12	ಶಾಕುಂತಲ ನಾಟಕ	0—8	ಕಾಣಿಗಲು ರಾಮಾಶಾಸ್ತ್ರಿಗಳವರ ಚರಿತ್ರೆ	1—0
ಇಂಡ್ಯನ್ ಪೆನಲ್ ಕೋಡ	2—0	ಸ್ತ್ರೀ ಧರ್ಮನೀತಿ	0—8	ಸುಮತಿ ಮದನಕುಮಾರರ ಚರಿತ್ರೆ I	0—8
ಅರೇಬಿಯನ್ ನೈಟ್ಸ್	2—4	ಶೋಭನೆ	0—8	" II	0—7
ಸುರಸ	0—4	ಚಂದ್ರಕಳಾ	0—4	ಶಿವಗೀತೆ	0—6
ಶ್ಯಾಮ	0—1	ಕಲಾನಾಥ	0—6	ಪಾಕಶಾಸ್ತ್ರ	0—8
ಇಂದ್ರ ವಜ್ರ	1—4	ಪ್ರಲೀಮ್ಯಬೋಧಿನಿ	1—4	ಸನಾತನಧರ್ಮ ದೀಪಿಕೆ	1—0
ಟಿಕ್ಕೋಜಿ	0—3	ವಿಷವೃಕ್ಷ	1—4	ಲಬಾರಾಮಾಯಣ	0—4
ಕನಕಾಲ ಕ	0—6	ಮುದ್ರಾಮಂಜೂಷ	1—8	ಕಥಾ ಮಂಜರಿ	0—6
ಶಿವಾನಂದಲಹರಿ	1—6	ಪುರಸಪ್ತತಿ	2—0		
ಗೆದ್ದತ್ತ್ರಿ ಸೋತಳಂಬು	1—4				

ಪ್ರಸಿದ್ಧ ಪತ್ತೇದಾರಿ ಕಥೆಗಳ, ದುಷ್ಟ ಚತುಷ್ಟಯ, ನರಬಲಿ, ನೀಲಾಂಬರಿ, ವಿಷಮುಹೂರ್ತ, ಮಾಯಾವಿನಯ, ಅತ್ಯಾಚಾರ, ಚೋರ ಚಕ್ರವರ್ತಿ, ನರರಾಕ್ಷಸಿ, ಪ್ರತಿಯೊಂದು ಪ್ರತಿಯೂ 2 ಆಣೆ.

ವಿಳಾಸ — **ವಿದ್ಯಾಸಾಗರ ಬುಕ್ ಡಿಪೋ,**
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಯುನಿವರ್ಸೆಲ್ ಎಸ್ಯುರೆನ್ಸ್ ಕೊ, ಲಿಮಿಟೆಡ್.

ಹೆಡ್ ಆಫೀಸು —191, ಬೌ ಬಜಾರ, ಕಲ್ಕತ್ತಾ.

ಸರಕಾರದ ಭದ್ರತೆಯ ಮೇಲ್ವಿಚಾರದಲ್ಲಿ ನಡಿಯುತ್ತಿರುವುದು.

ಭಂಡವಾಳ ರೂ 10,00,000.

ಈ ತನಕ ಕೊಡಲ್ಪಟ್ಟಾದ ವಿಮೆ ಹಕ್ಕುಗಳ ಮೊಬಲಗು ಶುಮಾರು 8,00,000.

ಫಂಡು— ರೂ 3,00,000ಕ್ಕೆ ಮಿಕ್ಕಿದೆ.

ಸರಕಾರದವರ ಭದ್ರತೆಯಲ್ಲಿ ರೂ. 50,000 ವಿರುವುದು.

ಚೀಪ್ ಇನ್ಸೂರೆನ್ಸ್ ಸ್ಕೀಮ್ ಎಂಬ ವೈದ್ಯಪರೀಕ್ಷೆ ಇಲ್ಲದೆ ವಿಮೆ ಉತ್ತರಾಯಿಸಿಕೊಳ್ಳಬಹುದಾದ ಸರ್ವರಿಗೂ ಸಾಧ್ಯವಾದ ಸುಲಭ ಕ್ರಮ.

ಈ ಪ್ರಾಂತ್ಯಗಳಲ್ಲಿ ಯಾವ ವಿಮೆ ಕಂಪೆನಿಗಳಲ್ಲಾದರೂ ಈತನಕ ಇಂಥಾ ಅಗ್ಗ ದರಗಳ ವಿಮೆ ಉತ್ತರಾಯಿಸುವ ಏರ್ಪಾಡೇ ಇರುವದಿಲ್ಲ. ಭಾರತೀಯರಲ್ಲಿ ವಿಶೇಷವಾಗಿರುವ ಬಡವರಗೋಸ್ಕರವೇ ಈ ಕ್ರಮವು ಏರ್ಪಡಿಸಲ್ಪಟ್ಟಿರುತ್ತದೆ. ಪ್ರೊವಿಡೆಂಟ್ ಫಂಡುಗಳ ಕ್ರಮದ ಪ್ರಕಾರ ಮುಂದಕ್ಕೆ ಸಂಭವಿಸಬಹುದಾದ ಅನನುಕೂಲತೆಗಳು ಇದರಲ್ಲಿರವು ವಿಮೆ ಉತ್ತರಾಯಿಸಿಕೊಳ್ಳುವ ಈ ನವೀನ ಅಗ್ಗ ದರಗಳ ಏರ್ಪಾಡು ಬಹಳ ಉಪಯುಕ್ತವಾದದ್ದು ಎಂತ ವಿಮೆ ಸಂಘಗಳ ವಿಶೇಷ ಮಾಹಿತಿದಾರರ ಅಭಿಪ್ರಾಯವಿರುವುದು. ನಿಶ್ಚಿತವಾದ ವಿಮೆ ಮೊಬಲಗುಗಳ ರೂಪಾಯಿ ಮತ್ತು ಅರ್ಧ ರೂಪಾಯಿಗಳ ಪೊಲಿಸಿಗಳು ಈ ಕ್ರಮದ ಮೇರೆಗೆ ಕೊಡೋಣಾಗುವವು.

ಸಾಮಾನ್ಯ ವಿಮೆ ಇಲಾಖೆ.

ಈ ಕಂಪೆನಿಯ ಈ ಇಲಾಖೆಯಲ್ಲಿ ವಿಮೆ ಉತ್ತರಾಯಿಸಿಕೊಳ್ಳುವವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಲಿರುವುದು. ಸಾಧ್ಯವಿರುವ ಅತ್ಯಂತ ಕಡಮೆಯ ದರಗಳು ಸಂಪೂರ್ಣವಾದ ಭದ್ರತೆಯು ಈ ಇಲಾಖೆಯ ವಿಶೇಷ ಪ್ರಯೋಜನಗಳಾಗಿರುವುದು. ಕಂಪೆನಿಯ ಲೆಕ್ಕದ ಸ್ಥಿತಿಗತಿಯನ್ನು ತೋರಿಸುವ ಮೊಖಾಬಿಲೆ ಪಟ್ಟಿಗಳನ್ನು ಈ ಕಂಪೆನಿಯ ವಿಷಯ ಪತ್ರಗಳ ಅಭಿಪ್ರಾಯವೇನೆಂಬುದನ್ನೂ ತರಿಸಿ ನೋಡಿರಿ.

ಒಳ್ಳೇ ಚಟುವಟಿಕೆಯ ಜಾಣರಾದ ಏಜಂಟರುಗಳು ಬೇಕಾಗಿರುವರು. ಶರ್ತುಗಳ ಬಗ್ಗೆ ಕೆಳಗಣ ವಿಳಾಸಕ್ಕೆ ಬರೆಕೊಳ್ಳಬಹುದು.

ವಿಳಾಸ:— **ಲಕ್ಷ್ಮಣ ರಾವ್ ಬ್ರದರ್ಸ್,**
[illegible]

ಅತ್ಯುತ್ತಮವಾದ ಗ್ರಂಥಗಳು.

	ರೂ ಆ
ಸಟೀಕ್ಷ ಅಮರಕೋಶ ತ್ರಿಕಾಂಡ ಕೆಲಿಕೊ ಬೈಂಡು	2—0
ರಾಮಾಯಣ ಕಥಾಸಂಗ್ರಹ ಕೆಲಿಕೊ ಬೈಂಡು	1—8
ಡಿ ದುಯಂ	14
[illegible]ರ್ಣ ಭಾರತ	2—0
[illegible]ಯಣ ಅವಲ್ ಪ್ರತಿ	1-12
ಡಿ. ದುಯಂ	1—0
ಶ್ರೀಭಗವದ್ಗೀತೆ, ರಾಮಕೃಷ್ಣಸೂರಿಯವರಿಂದ, ಸಟೀಕ, ಕಿತ್ತಾನಾರು ಬೈಂಡು	2—0
ನಾಡದೀಪಿಕಾ ಶಿರೋರತ್ನ ಟೀಕಾ ತಾತ್ಪರ್ಯ ಸಹಿತ, ಕಿತ್ತಾನಾರು ಬೈಂಡು	1—4
ವ್ರತವಲ್ಲಿ, 40 ವ್ರತಗಳು ಅಡಗಿವೆ	0—8
ಶರಣಾನುಭವಬೋಧೆ, ಸಟೀಕ	1—0
ಮುಹೂರ್ತ ಮಾರ್ತಾಂಡ ಜ್ಯೋತಿಷಗ್ರಂಥ	1—0
ವಿವೇಕ ಚಿಂತಾಮಣಿ	0-12
ಅನುಭವಾಮೃತ ಸಟೀಕಾ	1—0
ಬೃಹತ್ಕಥಾಮಂಜರಿ	0-12
ಶ್ರೀ ಚೆನ್ನಬಸವೇಶ್ವರ ಪುರಾಣ	1—4
ಮಯೂರ ಪಂಚವಿಂಶತಿ	0—6
ಸಟೀಕ ವಿಶ್ವಕರ್ಮ ಪುರಾಣ ಕೆಲಿಕೊಬೈಂಡು	1—0
ಡಿ ಡಿ ದುಯಂ	0-12
ಭಟ್ಟಿ ವಿಕ್ರಮಾದಿತ್ಯರಾಯನ ಕಥೆ	0—8
ಶೃಂಗಾರ ಶುಕಸಪ್ತತಿ ಕಥೆ	0 10
ಆಂಗ್ಲಭಾಷಾ ಪ್ರಕಾಶಕ	1—8
ಭೋಜರಾಜ ಚರಿತ್ರೆ, ಸಟೀಕ	0 12
4 ಜನ ಫಕೀರರ ಕಥೆ	0-12

	ರೂ ಆ
ಬಕಾವಳಿ ಕಥೆ	0-10
ಮೌನಧಾರಿ ಕಥೆ	0—8
ಯಕ್ಷಗಾನ ಹರಿಶ್ಚಂದ್ರ ಮಹಾರಾಯನ ಕಥೆ	0 12
ಬ್ರಹ್ಮೋತ್ತರಖಂಡ	0—6
ಶ್ರೀಕೃಷ್ಣ ಬೋಧಾಮೃತವೆಂಬ ಹನ್ನೆರಡು ಜನ ರಾಜಪುತ್ರರ ಕಥೆಗಳು	0 10
ಪ್ರಭಾವತಿ ಶತಕಮಂಜರಿ	0—6
ಕರ್ನಾಟಕ ಶಬ್ದಮಂಜರಿ	0—8
ರಾಜಶೇಖರ ವಿಲಾಸ	0—8
ಕೈವಲ ನವನೀತ	0—8
ವಾಸದೇವ ಮನನ	0—6
ಸಹಸ್ರನಾಮಕದಂಬ ಕಿತ್ತಾನಾರು ಬೈಂಡು	12
ಅಧ್ಯಾತ್ಮವಿಚಾರ ಪ್ರತ್ಯಗಾತ್ಮನನಕ್ಷೆಸಹ	2—4
ಮನುವಂಶಾವಳಿ	1—0
ಸಪ್ತಶತಿ ಅಪ್ಸಲ್‌ನಿರ್ಣಯಸಾಗರಪ್ರೆಸ್	0 10
ಚಂಡಿಕಾಸಪ್ತಶತಿ ಬೆಂಗಳೂರ	0—6
ವಿವೇಕ ಚೂಡಾಮಣಿ	0—3
ಗುರುನಿರೂಪಣೆ	0—6
ಕೊಂಕಣಿ ಭಾಷೆಯ ನಾಟಕಗಳು	
ಮಾನಸ ಚರಿತ್ರ ನಾಟಕ	0—4
ಸಾವಿತ್ರಿ ನಾಟಕ	0—4
ಚಂದ್ರಹಾಸ ನಾಟಕ	0—4
ಸ್ವರ್ಣ ಗೌರಿವ್ರತಕಥಾ	0—1

ಇವುಗಳಲ್ಲದೆ ಯಕ್ಷಗಾನ, ನಾಟಕ, ಭಜನೆ ಪದಗಳು ಕಥೆ ವ ಕಾದಂಬರಿಗಳೂ ಇವೆ. ಮರಾಟಿ ಕಲಿಯಲಿಕ್ಕೆ ಉಪಯುಕ್ತವಾದ 1, 2, 3 ಮತ್ತು 4ನೇ ಪಾಠಪುಸ್ತಕಗಳೂ ಬೊಂಬ್ಬಾ ನಿರ್ಣಯಸಾಗರ ಛಾಪಖಾನೆಯಲ್ಲಿ ಛಾಪೆಯಾದ ಬಾಲಬೋಧ ಲಿಪಿಯ ವೇದಾಂತ ವಗೈರೆ ಗ್ರಂಥಗಳೂ, ಸುಲಭ ದರದಲ್ಲಿ ದೊರಕುವವು.

ನಮ್ಮ ವಿಳಾಸ:— ಕೆ. ಯಂ ದಾಸ ಪ್ರಭು, ರಥವೀದಿ, ಮಂಗಳೂರು

ಅಪೂರ್ವ ಗ್ರಂಥ! ಅಪೂರ್ವ ಗ್ರಂಥ!!

ಬಳ್ಳಾರಿ ಶ್ರೀ ಮರಿಸ್ವಾಮಿಗಳು

ಸಕ್ಕರಿ ಕರಡೆಪ್ಪ

ಇವರ ಜೀವಿತ ಚರಿತ್ರೆ.

ಈ ಮಹಿಮರ ಚರಿತ್ರೆಯನ್ನು ಇಲ್ಲಿಯವರಿಗೂ ಯಾರೊಬ್ಬರು ಪ್ರಕಟನ ಮಾಡಿದ್ದಿಲ್ಲವೆಂಬುದು ತಿಳಿದದ್ದಾಗಿರುವದಷ್ಟೆ. ಇಂತಹ ಅದ್ಭುತ ಮಹಿಮಾಶಾಲಿಗಳ ಚರಿತ್ರೆಗಳು ಅವಶ್ಯಕವಾಗಿಯೂ ಆದರಣೀಯಗಳಾಗಿರುವವು. ಇರ್ವರ ಮಹಿಮೆಯು ಅಸಾಧಾರಣವಾದುದ್ದು. ಒಂದೆ ದಿನ ಒಂದೆ ಕಾಲದಲ್ಲಿ ಬಳ್ಳಾರಿ, ಬೆಂಗಳೂರು, ಧೈವಪುರ ಎಂಬ ಮೂರು ಸ್ಥಳಗಳಲ್ಲಿ ಸಮಾಧಿಯನ್ನು ಹೊಂದಿದರೆಂಬುದೊಂದೆ ಅಪ್ರತಿಮ ಪ್ರಭಾವವನ್ನು ಸೂಚಿಸುತ್ತಿರುವದು ಇವರು ಅಲ್ಲಲ್ಲಿ ತೋರಿದ ಮಹಿಮೆಗಳು ಅನಂತವಾಗಿರುವವು; ಇದಲ್ಲದೆ ಇವರ ಶಿಷ್ಯನಾದ ಸಕ್ಕರಿಕರಡೆಪ್ಪನ ಅಪಾರ ಮಹಿಮೆಯು ವಿಶದವಾಗಿ ವರ್ಣಿಸಲ್ಪಟ್ಟಿರುವದು. ಈ ಸಕ್ಕರಿ ಶರಣ್ಯಾನಂತಹ ಶರಣ್ಯಾನು ಇಡೀ ಪ್ರಪಂಚದಲ್ಲಿ ವೀರಶೈವ ಮತದೊಳಗೆ ಹುಟ್ಟುವದು ಅಪರೂಪ ಆ ಗುರುಶಿಷ್ಯರೀರ್ವರ ಚರಿತ್ರೆಗಳು ಒಂದು ಗ್ರಂಥದಲ್ಲಿ ತಯಾರುಮಾಡಿರುವೆವು. ಈ ಗ್ರಂಥವನ್ನೋದುವವರು ಖಂಡಿತವಾಗಿಯೂ ನೀತಿ, ಭಕ್ತಿ, ಜ್ಞಾನಗಳ ಕಡೆ ಮನಸ್ಸನ್ನು ಕೊಡದಿರಲಾರರು. ಮತ್ತು ಇದಲ್ಲದೆ ಮೈಸೂರು ಶ್ರೀಮನ್ಮಹಾರಾಜ, ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರರವರು ಶಿಷ್ಯರಾದ ಕಂಬಳಿ ಸ್ವಾಮಿಗಳ ಸಮೇತ ಇರುವ ಮಹಾಸ್ವಾಮಿಗಳ ಛಾಯಾಚಿತ್ರ ಪಟವು ಪ್ರಥಮ ಪುಟದಲ್ಲಿ ಅಂದವಾಗಿರಿಸಲ್ಪಟ್ಟಿರುವದು. ವಿಳಾಸ ಚೆನ್ನಾಗಿರಲಿ. ಇದರ ಬೆಲೆ ವಿ. ಪಿ. ಸಹಿತ ರೂ. 1—2—0.

ನಮ್ಮ ವಿಳಾಸ:— ಬಸವರಾಜ ಕಂಪೆನಿ, ಬಳ್ಳಾರಿ.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಕಲರಾವಿಧ್ವಂಸಿನಿ:— ಈ ಬಯಂಕರವಾದ ಕಾಲರಾ ರೋಗವನ್ನು ಖಂಡಿತವಾಗಿಯೂ ಸಂಪೂರ್ಣ ಗುಣಪಡಿಸುವ ಖಾತ್ರಿಯಾದ ಮದ್ದು ಡಬ್ಬಿ 1ಕ್ಕೆ 1 ರೂಪಾಯಿ ವಿ ಪಿ ಚಾರ್ಜು 1ರಿಂದ 6 ಡಬ್ಬಿಗಳವರೆಗೂ 5 ಆಣೆ.

ಮಲಬಂಧ ಬಂಜನಿ:— ಆಗಿಂದಾಗ್ಗೆ ಉಂಟಾಗತಕ್ಕ ಮತ್ತು ಬಹಳ ದಿವಸಗಳಿಂದ ವಾಡಿಕೆಯಲ್ಲಿರುವ ಮಲಬದ್ಧತೆಯನ್ನು ಸಂಪೂರ್ಣ ಗುಣಪಡಿಸುವುದರಲ್ಲಿ ಇದು ಸರ್ವೋತ್ಕೃಷ್ಟವಾದ ಔಷದವು ಅಜೀರ್ಣವಾದ ಕಾಳಜಿವನ್ನು (ಲಿವರ್) ಬಲಪಡಿಸಿ, ಸ್ವಭಾವವಾಗಿ ಎಷ್ಟಾಗಬೇಕೋ ಅಷ್ಟು ಸ್ವಚ್ಛ ಪಿತ್ತನೀರನ್ನು ವಿಸರ್ಜನೆ ಮಾಡಿಸಿ, ಹೊಟ್ಟೆಯ ಭಾರವನನ್ನು ನೀಗಿ ಹಗುರುಮಾಡುತ್ತದೆ. ಮತ್ತು ಅಗ್ನಿಮಂದ್ಯದಿಂದುಂಟಾಗತಕ್ಕ ಎಲ್ಲಾ ರೋಗಗಳನ್ನು ನಾಶಮಾಡಿ ಕರುಳುಗಳನ್ನು ಸಹಜಸ್ಥಿತಿಗೆ ತಂದು, ದೇಹವು ಒಳ್ಳೆ ಆರೋಗ್ಯಸ್ಥಿತಿಯಲ್ಲಿರುವಂತೆ ಮಾಡುತ್ತದೆ. ಕ್ರಯ ಡಬ್ಬಿ 1ಕ್ಕೆ 10 ಆಣೆ ವಿ ಪಿ ಚಾರ್ಜು 1ರಿಂದ 2 ಡಬ್ಬಿಗಳವರೆಗೂ 5 ಆಣೆ

ಚಂದ್ರಾಮೃತರಸ:— ಎಷ್ಟೇ ಕಠಿಣತರವಾದ ನೆಗಡಿ, ಕೆಮ್ಮು, ಶ್ಲೇಷ್ಮ ಕ್ಷಯವಾದರೂ ಸರಿ ಈ ನಮ್ಮ ಚಂದ್ರಾಮೃತರಸವು ಬಹು ತೀವ್ರದಲ್ಲಿ ಗುಣಪಡಿಸುತ್ತದೆ ಸಾಧಾರಣವಾದ ಕೆಮ್ಮು, ನೆಗಡಿ ಒಂದೇ ಹೊತ್ತಿಗೆ ಗುಣಕಂಡುಬರುವುದು. ಅದು ಜೀರ್ಣಶಕ್ತಿಯನ್ನು ಹೆಚ್ಚಿಸುವುದು ಶಕ್ತಿವರ್ಧಕವಾದ ಸೊಗಸಾದ ಟಾನಿಕ್ ಆಗಿರುತ್ತದೆ. ಕ್ರಯ ಡಬ್ಬಿ 1ಕ್ಕೆ 1 ರೂಪಾಯಿ ವಿ. ಪಿ. ಚಾರ್ಜು 1ರಿಂದ 3 ಡಬ್ಬಿಗಳವರೆಗೂ 5 ಆಣೆ.

ಶೀತಭೇತಿ ಅಂಕುಶಕನಿವಾರಿಣಿ:— ಎಂಥ ಘೋರವಾದ ಶೀತಭೇದಿಯಾದರೂ ಸರ್ವೋತ್ಕೃಷ್ಟವಾದ ಈ ಶೀತಭೇದಿ ನಿವಾರಿಣಿಯಿಂದ ಗುಣವಾಗುವುದು ಇದು ಆಮಶಂಕೆಗೆ ಸೊಗಸಾದ ಮದ್ದು ರಕ್ತಾತಿಸಾರದವರಿಗೆ ಸಮಯದಲ್ಲಿ ಬಹು ಸಹಕಾರಿ ಇದು ಹುಚ್ಚಾಬಟ್ಟೆಹೊಟ್ಟೆ ಜಾಡಿಸುವುದು, ಮಲಕೋಶದಿಂದ ರಕ್ತ ಸೋರುವುದು, ಇವುಗಳೆಲ್ಲವನ್ನು ಖಂಡಿತವಾಗಿ ಗುಣಪಡಿಸಿ ಆರೋಗ್ಯಸ್ಥಿತಿಗೆ ತರುವುದರಲ್ಲಿ ಸಂಶಯವೇ ಇಲ್ಲ ಕ್ರಯ ಡಬ್ಬಿ 1ಕ್ಕೆ 1 ರೂಪಾಯಿ ವಿ ಪಿ ಚಾರ್ಜು 1ರಿಂದ 2 ಡಬ್ಬಿಗಳ ವರೆಗೆ 5 ಆಣೆ.

ವಿಷ್ಣು ತೈಲಾ:— ತಲೆ ನೋವನ್ನು ಕ್ಷಣದಲ್ಲಿ ಗುಣಮಾಡುವ ತೈಲ್ಯವು. ದೇಹದ ಯಾವ ಭಾಗದಲ್ಲಿಯಾದರೂ ತಲೆದೋರುವ ವಾತದ ನೋವುಗಳಿಗೆ ರಾಜಔಷದ ಈ ತೈಲ್ಯವು ಎರಡು ಕೊಟ್ಟುಗಳನ್ನು ಕಣತಿಗಳಲ್ಲಿ ಉಜ್ಜಿದರೆ ತಕ್ಷಣ ಗುಣವಾಗುವದು, ಸೀಸೆ 1ಕ್ಕೆ 8 ಆಣೆ 1ರಿಂದ 6 ಸೀಸೆಗಳವರೆಗೆ ವಿ. ಪಿ ಚಾರ್ಜು 5 ಆಣೆ

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಳುನಲ್ಲಾಗಲೀ ಸ್ಪುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.

P. SUBBA ROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—

ಪಿ. ಸುಬ್ಬರಾಯಿ,
ಆಯುರ್ವೇದ ಔಷಧಶಾಲಾ,
ಶ್ರೀ ಪೆರುಮಾಳ್ ದೇವಸ್ಥಾನ,
ಸನ್ನಿಧಿ, ತಂಜಾವೂರು.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಳವೆ ಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶ ರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿ



ಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇಸಿಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ತೊಡೆಯ ತೊಡಗಿದ ಒಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು, ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮದುರವೂ ಮೋಹಕವೂ ಆಗಿರುವುದು, ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವುದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೇರಿಟ್ "ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರೆಕಿವೆ

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು, ಬಸವನಗಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ ಪಿ ದ್ವಾರಾ ರವಾನಿಸುವುದ

ಸೀಸೆಯೊಂದರ ಕ್ರಯ ರೂ 1 0-0, ಅ ವೆ 0 4 0 ಬೇರೆ, 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0 7-0 ಬೇರೆ

ಸೂಚನೆ — ಅನೇಕ ದುರ್ನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಮಾರಾಟದಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಅಧಿಕ ಲಾಭದೊರಕುವ ಕಳ್ಳ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ, ಅವರಲ್ಲಿ ಅದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ದುಸ್ತರವಾದರೆ ನೀವು ಹೆಚ್ಚು ಬೆಲೆಯಲ್ಲಿ ಸಿಲುಕಬೇಕಾದ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ ಮತ್ತು ಅತ್ಯುತ್ತಮವು ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಕಟ್ಟಿಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ತಟಕುಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0 ಅಂಚೆಯ ವೆಚ್ಚ ಬೇರೆ 0-4-0. ಒಟ್ಟೊ ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0

ಅಮೇರಿಕದ ವಿಶಿಷ್ಟತೆ.

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ್ ಪರ್ಲ್ಸ್"

ವಿದ್ಯುಚ್ಛಕ್ತಿಯ ವಜೀಕರಣ ಮೌಕ್ತಿಕಗಳು.

ನರಗಳ ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನು, ನಿದ್ರಾನಾಶವನ್ನೂ

ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ ಧಾತುದೌರ್ಬಲ್ಯವನ್ನೂ ನಾಶಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿಶಕ್ತಿಯನ್ನು ಉದ್ದೀಪಿಸುತ್ತವೆ. ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವದಕ್ಕೆ ಅಥವಾ ಕಾರ್ಯಗೈಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಶ್ರಾಮವೂ, ಅಕಾಲ ಕಾಲದಲ್ಲಿ ಸಂಭವಿಸುವ ಗ್ಲಾನಿಯೂ ಅತಿಶ್ರಮದಿಂದ ಮತ್ತು ದುರ್ವೃತ್ತಿಯಿಂದ ಉಂಟಾಗುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವದರಿಂದ ಅಡಗಿ ಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವದರ ದೆಸೆಯಿಂದ ಇವು ವಿದ್ಯಾವ್ಯಾಸಂಗಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ ಗುಮಾಸ್ತರಿಗೂ, ಉಸ್ತಾದರಿಗೂ, ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯವಾದ ಸ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮರಳಿ ರಚನೆಗೈಯ್ಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಒಸವಳಿದು ಕುಂದಿದ ಅವಯವಗಳಿಗ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೈಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ. ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳೆತು ದೇಹದಲ್ಲಿ ಧೈರ್ಯ, ಬಲ, ಸುಖ, ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ ಹಸಿವು ಆಶ್ಚರ್ಯಕರವಾಗಿ ಆರೋಗ್ಯಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ. "ನಾಡಿ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ, ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ.

25 ಗುಳಿಗೆಗಳ ಸೀಸೆ 1ಕ್ಕೆ ಬೆಲೆ ರೂ. 1-4-0. 40 ಗುಳಿಗೆಗಳಿರುವ ಸೀಸೆ 1ಕ್ಕೆ ರೂ. 2 0-0 ಟಪ್ಪಾಲ್ ಖರ್ಚು ಸೀಸೆ ಒಂದಕ್ಕೆ ಆಣೆ 4.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ದಿವಾಕರ ಕೃಷ್ಣಾಜಿ ದಾಹರೀ, ರಾ. ಪಾರಸಾವನೀ, ತಾ, ರಾಮಟೇಕ, ಜಿ. ನಾಗಪುರ, — "ತಾವು ನಮಗೆ ಕೆಲವು ಸಮಯದ ಹಿಂದೆ ಕಳುಹಿಸಿದ "ಶಕ್ತಿವರ್ಧಕ" ಗುಟಿಕೆಗಳಿಂದ ನಮಗೆ ಉತ್ತಮವಾದ ಆರೋಗ್ಯಲಾಭವು ದೊರಕಿಯುತ್ತದೆ; ಅವುಗಳ ಇನ್ನೊಂದು ಬಾಟಲಿಯನ್ನು ಕಳುಹಿಸಿಕೊಡಿರಿ.

2 ತುಕಾರಾಮ ಸಖಾರಾಮ, ಕೇಶಿಯರ್, ಬಂಗಾಲ ನಾಗಪುರ ರೈಲ್ವೆ, ಗೋರಖಪುರ — ನಾನು ತಮ್ಮಿಂದ ಪ್ರೊ. ಜೇಮ್ಸರ "ವಿದ್ಯುತ್ ಶಕ್ತಿವರ್ಧಕ" ಗುಟಿಕೆಗಳ ಮೂರು ಡಪ್ಪಿಗಳನ್ನು ತರಿಸಿಕೊಂಡಿದ್ದೆನು. ಅವುಗಳಿಂದ ನಾನು ಪುಷ್ಕಳವಾದ ಸೌಖ್ಯಲಾಭ ಹೊಂದಿರುವೆನು, ಆದ್ದರಿಂದ ಇನ್ನು ಮೂರು ಡಪ್ಪಿಗಳನ್ನು ಕಳುಹಿಸಿಕೊಡಿರಿ"

3 ಅಮೀರ್ ವಲ್ಲದ ಮಹಮ್ಮದ ಭಾಯಿ ಇಬ್ರಾಹಿಮ್ ಪಾಟೀಲ್, ಪನವೇಲ್ — "ತಾವು ಕಳುಹಿಸಿದ ಪ್ರೊ ಜೇಮ್ಸರ ಗುಟಿಕೆಗಳಿಂದ ನನಗೆ ಆಶ್ಚರ್ಯಕಾರಕವಾದ ಗುಣವು ಕಂಡುಬಂದಿದೆ ಪುನಃ ರವಾನಿಸಿರಿ"

4 ವಿ. ಆರ್. ಬಾಳೆಸ್ತ್ರಿ, ಡಿಸ್ಟ್ರಿಕ್ಟ ಕೋರ್ಟ ವಕೀಲ, ಕೊಟ್ಟಯಮ್, ತ್ರಾವಣಕೋರ್ ರಾಜ್ಯ — "ಪ್ರೊ. ಜೇಮ್ಸರ ಗುಟಿಕೆಗಳ ಸೀಸೆಯೊಂದನ್ನು ತಮ್ಮಿಂದ ತರಿಸಿಕೊಂಡೆನಷ್ಟೇ, ಅವುಗಳನ್ನು ಉಪಯೋಗಿಸಿ ನಾನು ಒಳ್ಳೇ ಲಾಭವನ್ನು ಪಡೆದೆನು. ಇನ್ನೆರಡು ಸೀಸೆಗಳನ್ನು ಕಳುಹಿಸುವುದು.

5 ಮೂಸಜೀ ನರಸಿಂಗರಾವ್, ಸಂಸ್ಥಾನ ಪಲಿಜಿ. — ಪ್ರೊ. ಜೇಮ್ಸರ ಗುಟಿಕೆಗಳಿಂದ ನಾನು ಬಹಳ ಗುಣವನ್ನು ಹೊಂದಿರುವದರಿಂದ, ಅವುಗಳ ಇನ್ನೆರಡು ಸೀಸೆಗಳನ್ನು ರವಾನಿಸಿರಿ.

THE ANGLO INDIAN DRUG & CHEMICAL COMPANY, 16 MARKET, BOMBAY 2.

ಪ್ರಧಾನ ಏಜಂಟರು: **ದಿ ಊಲನ್ ಮಾರ್ಟ್, ಮಂಗಳೂರು ದ. ಕನಡಾ.**

Printed & Published by V. S. Kamath at the Mangalore Trading Association's Sharada Press, Mangalore.

Registered No. M. [illegible]

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವದು.

ಚಂದಾನಿರ್ಣಯ — ವರುಷ ೧ಕ್ಕೆ ರೂ 1—4—0 ಟಪ್ಪಾಲು ಹಾಸಲು ಸೇರಿ ರೂ 2—1—0

ಪುಸ್ತಕ IX ಮಂಗಳೂರು ತಾ 21ನೇ ಮೇ ಶುಕ್ರವಾರ 1915 ಸಂಚಿಕೆ 21

The Universal Assurance Co, Ltd
Head Office 191, Bow Bazar Street, CALCUTTA

NOTICE.

It is hereby informed to all the Agents the subscribers of the Company and the public in general that the existing Provident scheme having been declared unsound by the actuary to the Government of India for its various inconveniences, the company has decided not to accept any proposal under the said scheme, and the same has been abolished since 1st January 1915 All the old members are hereby requested to continue their policies and diplomas which will be governed by the old rules and the bonus be distributed according to the dividing system hence they need not be frightened

For the convenience of the intending subscribers and the public in general a new scheme called "Cheap Insurance" under the scientific principles of the Ordinary Insurance scheme has been introduced For further particulars please see the Company's seperate advertisement.

(*Sd*) **J Sarkar**, *Secretary*

M. Laxman Rao Brothers,
Chief Agents, Udipi S C

ದಿ ಯೂನಿವರ್ಸಲ್ ಎಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಹೆಡ್ ಆಫೀಸು 191 ಬೊ ಬಜಾರ್ ಸ್ಟ್ರೀಟ್, ಕಲ್ಕತ್ತಾ

ನೋಟೀಸು.

ಈ ಮೂಲಕ ಕಂಪೆನಿಯ ಮೆಂಬರರಿಗೂ ಸರ್ವ ಜನರಿಗೂ ತಿಳಿಯಪಡಿಸುವದೇನಂದರೆ:—ಈ ಕಂಪೆನಿಯ ಪ್ರೊವಿಡೆಂಟ ಫಂಡಿನ ಏರ್ಪಾಡನ್ನು ಅದರ ಬಗೆ ಬಗೆಯ ಅನಾನುಕೂಲತೆಯು ಕಾರಣದಿಂದ ಸರಕಾರದವರು ಈ ಏರ್ಪಾಡನ್ನು ಘಟ್ಟಿ ಇಲ್ಲದ್ದು ಎಂಬದಾಗಿ [illegible]ಸಿರುವದರಿಂದ ಕಂಪೆನಿಯವರು ಪ್ರೊವಿಡೆಂಟ ಏರ್ಪಾಡು ಕ್ರಮದ ಮೇಲೆ ವಿಮೇದಾರರನ್ನು ಕಂಪೆನಿಗೆ ಸೇರಿಸುವದಿಲ್ಲ, ಮತ್ತು ಈ ಕ್ರಮವು 1915ನೇ ಇಸವಿ ಜನವರಿ ತಾ. 1ರಿಂದ ಕಂಪೆನಿಯಿಂದ ತೆಗೆದು ಹಾಕೋಣಾಗಿರುವದು ಹಳೇ ಮೆಂಬರರ ತಮ್ಮ ಪೊಲಿಸಿ ಮತ್ತು ಡಿಪ್ಲೊಮಗಳು ಹಳೇ ರೂಲಿನ ಪ್ರಕಾರ ಅಧಿಕರಿಸಲ್ಪಟ್ಟು "ಬೋನಸ್" ಎಂಬ ಲಾಭೋಚಿತವು ಕ್ರಮ ಪ್ರಕಾರ ಹಂಚಲ್ಪಡುವದರಿಂದ ಹಳೇ ಮೆಂಬರರು ಭಯಪಡಲು ಕಾರಣವಿಲ್ಲವೆಂಬದಾಗಿ ಈ ಮೂಲಕ ವಿಜ್ಞಾಪಿಸೋಣಾಗಿದೆ.

ಕಂಪನಿಯ ಮೆಂಬರರಾಗಲು ಯೋಚಿಸುರುವವರಿಗೂ ಜನಸಾಮಾನ್ಯರ ಬಗ್ಯೆಯೂ "ಚೀಪ್ ಇನ್ಶೂರೆನ್ಸ್" ಎಂಬ ಒಂದು ಹೊಸ ಕ್ರಮವು ಸರ್ವಸಾಧಾರಣವಾಗಿರುವ ಇನ್ಶೂರೆನ್ಸ್ ಕ್ರಮದ ಮೂಲಸೂತ್ರದ ಪ್ರಕಾರ ತೆರೆಯೋಣಾಗಿರುವದು ಹೆಚ್ಚಿನ [illegible]ಯನ್ನು ಈ ಪತ್ರಿಕೆಯಲ್ಲಿ ಕಾಣುವ ಕಂಪೆನಿಯ ಪ್ರಕಟಣೆಯನ್ನು ಓದಿಕೊಂಡರೆ [illegible].

(Sd.) ಜೆ. ಸರ್ಕಾರ, ಸಕ್ರಿಟರಿ.

[illegible] ಬ್ರದರ್ಸ್, [illegible], [illegible]. ದ.ಕ.

ಸ್ವದೇಶಾಭಿಮಾನಿಯ ನೋಟೀಸು.

ಚಂದಾದಾರರು ನಮಗೆ ಬರೆಯುವ ಎಲ್ಲಾ ಪತ್ರವ್ಯವಹಾರಗಳಲ್ಲಿ ತಮ್ಮ ತಮ್ಮ ವಿಳಾಸದೊಂದಿಗೆ ಇರುವ ರಿಜಿಸ್ಟರ ನಂಬರನ್ನು ತಪ್ಪದೆ ಬರಿಯತಕ್ಕದ್ದು ರಿಜಿಸ್ಟರು ನಂಬರು ಇಲ್ಲದ ಪತ್ರಗಳಿಗೆ ನಿಗಾ ಕೊಡಲಾರೆವು

ಪತ್ರಿಕೆಗೆ ಚಂದಾದಾರರಾಗಿ ಸೇರಲಪೇಕ್ಷೆಯುಳ್ಳವರು ವರ್ಷ 1ರ ಚಂದಾ ಹಣ ರೂ 2—1—0ನ್ನು ಮನಿಯಾರ್ಡರು ಮೂಲಕ ರವಾನಿಸುವದುಕ್ತವ ವಿ ಪಿ ಮೂಲಕ ಕಳುಹಿಸಬೇಕೆಂದು ಬರಿಯುವಂಥವರಿಗೆ ಪತ್ರಿಕೆಯ ಹಿಂದಿನ ಸಂಚಿಕೆಯನ್ನು ವಿ ಪಿ ಮಾಡಿ ಕಳುಹಿಸಲಾಗುವದು ವಿ ಪಿ ಯ ಮೊಬಲಗು ನವಗೆ ತಲ್ಪಿದ ನಂತರವೇ ಪತ್ರಿಕೆಯನ್ನು ಕಳುಹಿಸಲು ಪ್ರಾರಂಭಿಸವೆವು

ಪತ್ರಗಳನ್ನು ಬರಿಯುವಾಗ ತಮ್ಮ ಹೆಸರು, ವಿಳಾಸ ಮತ್ತು ಪೋಸ್ಟಾಫೀಸನ್ನು ಸ್ಪಷ್ಟಾಕ್ಷರದಲ್ಲಿ ಬರಿಯತಕ್ಕದ್ದು

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು, ದ ಕ

ಈಗಲೇ ತಯಾರಾಗಿವೆ!

ಗ್ರಾಮ ಮುನ್ಸಿಫ ಕೋರ್ಟುಗಳಿಗೆ ಸಂಬಂಧಿಸಿದ ಫೋರ್ಮುಗಳು.

100ಕ್ಕೆ ಆಣೆ 6 ಮಾತ್ರ.

ಕುರಿಫಂಡಿನ ರಶೀದಿ	100ರ	ಪುಸ್ತಕ	1ಕ್ಕೆ		0—8—0
,,	,,	50ರ	,,	,,	0—4—0
ಇಂಗ್ಲೀಷು	,,	50ರ	,,	,,	0—8—0
,,	,,	25ರ	,,	,,	0—4—0
ಗೇಣಿ	,,	50ರ	,,	,,	0—6—0
,,	,,	25ರ	,,	,,	0—3—0
ಖಾಲಿ	,,	50ರ	,,	,,	0—4—0
,,	,,	25ರ	,,	,,	0—2—0
ಡೆಲಿವರಿ ಪುಸ್ತಕ 1ರ	.	.	.		0—8—0
ವಕಾಲತ್ ನಾಮೆ ವಗ್ಯೆರೆ	.		100ಕ್ಕೆ		0-10—0.
ಗೇಣಚೀಟು ಫೋರ್ಮು	.		,,		0-12—0.
ಪನಿಸ್ಟಾಟು ಸೋಮ್ಮು			,,		0-12—0.

ವಿಳಾಸ:- ಶಾರದಾ ಛಾಪಖಾನೆ,
ಕಡಿಯಾಳಿ, ಉಡುಪಿ.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿವರ್ಣದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶ ರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು, ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು. ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವುದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೇರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.



ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳ ಕರ ಒಂದುಗಳು, ಬಸವನಗಲಿ, ಬೆಳಗಾಂವ—ನಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಅದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವದು.

ಸೀಸೆಯೊಂದರ ಕ್ರಯ ರೂ 1-0-0, ಅ. ವೆ 0-4-0 ಬೇರೆ, 3 ಸೀಸೆಗಳ ಕ್ರಯ ರೂ 2-10-0, ಅ. ವೆ 0-7-0 ಬೇರೆ

ಸೂಚನೆ — ಅನೇಕ ದುರಾಶೆಯುಳ್ಳ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಹೆಸರಿನಿಂದ ತಮಗೆ ಅತ್ಯಲ್ಪ ಸಹಾಯ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭದೊರಕುವ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ, ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವದನ್ನು ರೂಢಿಸಿದರೆ ನೀವು ಕೊಡತಕ್ಕ ಬೆಲೆಯಲ್ಲಿ ನಿಮಗೆ ಬೇಕಾದ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀವ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ ಕೋಮಲ ಚಿರಸ್ಥಾಯಿ ಮತ್ತು ಅತ್ಯುತ್ತಮವು ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಅಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸ್ವಾಭಾವಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳಕೊಳ್ಳುವದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆಯ ಬೆಲೆ ರೂ 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0 ಅಂಚೆಯ ವೆಚ್ಚ ಬೇರೆ 0-4-0. ಒಟ್ಟೊ ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0

ಅಮೇರಿಕದ ವಿಶಿಷ್ಟತೆ

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಜೀಕರಣ ಮೌಕ್ತಿಕಗಳು.



ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನು, ನಿದ್ರಾನಾಶವನ್ನೂ, ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ, ಧಾತುದೌರ್ಬಲ್ಯವನ್ನೂ ನಾಶಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿಶಕ್ತಿಯನ್ನು ಉದ್ದೀಪಿಸುತ್ತವೆ. ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ, ಕಲಿಯುವದಕ್ಕೆ ಅಥವಾ ಕಾರ್ಯಗೈಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಶ್ರಮವೂ, ಅಕಾಲ ಕಾಲದಲ್ಲಿ ಸಂಭವಿಸುವ ಗ್ಲಾನಿಯೂ ಅತಿಶ್ರಮದಿಂದ ಮತ್ತು ದುರ್ವೃತ್ತಿಯಿಂದ ಉಂಟಾಗುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವದರಿಂದ ಅಡಗಿ ಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವದರ ದೆಸೆಯಿಂದ ಇವು ವಿದ್ಯಾವ್ಯಾಸಂಗಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ ಗುಮಾಸ್ತರಿಗೂ, ಉಸ್ತಾದರಿಗೂ, ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯವಾದ ಸ್ತ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮರಳಿ ರಚಿಸಗೈಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಒಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೈಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ. ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳತು ದೇಹದಲ್ಲಿ ಧೈರ್ಯ, ಬಲ, ಸುಖ, ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ ಹಸಿವು ಆಶ್ಚರ್ಯಕರವಾಗಿ ಆರೋಗ್ಯಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ. "ನಾಡಿಯು" ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ, ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ.

25 ಗುಳಿಗೆಗಳ ಸೀಸೆ 1ಕ್ಕೆ ಬೆಲೆ ರೂ. 1-4-0. 40 ಗುಳಿಗೆಗಳಿರುವ ಸೀಸೆ 1ಕ್ಕೆ ರೂ. 2-0-0 ಟಪ್ಪಾಲ್ ಖರ್ಚು ಸೀಸೆ ಒಂದಕ್ಕೆ ಆಣೆ 4.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ದಿವಾಕರ ಕೃಷ್ಣಾಜಿ ದಾತಾರ, ರಾ. ಪಾರಸಾವನೀ, ತಾ, ರಾಮಟೇಕ, ಜಿ. ನಾಗಪುರ. — "ತಾವು ನಮಗೆ ಕೆಲವು ಸಮಯದ ಹಿಂದೆ ಕಳುಹಿಸಿದ "ಶಕ್ತಿವರ್ಧಕ" ಗುಳಿಗೆಗಳಿಂದ ನಮಗೆ ಉತ್ತಮವಾದ ಆರೋಗ್ಯಲಾಭವು ದೊರಕಿರುತ್ತದೆ, ಅವುಗಳ ಇನ್ನೊಂದು ಬಾಟಲಿಯನ್ನು ಕಳುಹಿಸಿಕೊಡಿರಿ."

2 ತುಕಾರಾಮ ಸಖಾರಾಮ, ಕೇಶಿಯರ್, ಬಂಗಾಲ ನಾಗಪುರ ರೈಲ್ವೆ, ಗೋರಖಪುರ — ತಮ್ಮಿಂದ ಪ್ರೊ. ಜೇಮ್ಸರ "ವಿದ್ಯುತ್ ಶಕ್ತಿವರ್ಧಕ" ಗುಳಿಗೆಗಳ ಮೂರು ಕುಪ್ಪಿಗಳನ್ನು ತರಿಸಿಕೊಂಡಿದ್ದೆನು. ಅವುಗಳಿಂದ ನಾನು ವಿಶ್ವಳವಾದ ಸೌಖ್ಯಲಾಭ ಹೊಂದಿರುವೆನು. ಆದ್ದರಿಂದ ಇನ್ನು ಮೂರು ಕುಪ್ಪಿಗಳನ್ನು ಕಳುಹಿಸಿಕೊಡಿರಿ"

3 ಅಬೂರ್ ವಲ್ಲದ ಮಹಮ್ಮದ ಭಾಯಾ ಇಬ್ರಾಹಿಮ್ ಪಾಟೀಲ್, ಸನವೇರ್ — "ತಾವು ಕಳುಹಿಸಿದ ಪ್ರೊ. ಜೇಮ್ಸರ ಗುಳಿಗೆಗಳಿಂದ ನನಗೆ ಆಶ್ಚರ್ಯಕಾರಕವಾದ ಗುಣವು ದೊರಕಿದೆ. ಅವನ್ನು ಪುನಃ ರವಾನಿಸಿರಿ"

4 ಬಿ. ಆರ್. ಚಾಕ್ರೊ, ಡಿಸ್ಟ್ರಿಕ್ಟ ಕೋರ್ಟ ವಕೀಲ, ತಿರುವನಂತಪುರ, ತ್ರಾವಣಕೋರ್ ರಾಜ್ಯ — "ಪ್ರೊ. ಜೇಮ್ಸರ ಗುಳಿಗೆಗಳ ಸೀಸೆಯೊಂದನ್ನು ತಮ್ಮಿಂದ ತರಿಸಿಕೊಂಡೆನಷ್ಟೇ. ಅವುಗಳನ್ನು ಉಪಯೋಗಿಸಿ ನಾನು ಒಳ್ಳೇ ಲಾಭವನ್ನು ಪಡೆದೆನು. ಇನ್ನೆರಡು ಸೀಸೆಗಳನ್ನು ಕಳುಹಿಸುವುದು.

5 ಮಾಪಜೀ ನರಸಿಂಗರಾವ್, ಸಂಸ್ಕೃತ ಪಂಡಿತ — ಪ್ರೊ. ಜೇಮ್ಸರ ಗುಳಿಗೆಗಳಿಂದ ನಾನು ಹೆಚ್ಚು ಗುಣವನ್ನು ಹೊಂದಿರುವದರಿಂದ, ಅವುಗಳ ಇನ್ನೆರಡು ಸೀಸೆಗಳನ್ನು ರವಾನಿಸಿರಿ.

THE ANGLO INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು: **ದಿ ಊಲನ್ ಮಾರ್ಟ್, ಮಂಗಳೂರು ದ. ಕನಡಾ.**

Printed & Published by V. S. Kamath at the Mangalore Trading Association's Sharada Press, Mangalore

Registered No. M. [illegible]

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:— ವರುಷ ಒಂದಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0.

ಪುಸ್ತಕ IX ಮಂಗಳೂರು ತಾ. 21ನೇ ಮೇ ಶುಕ್ರವಾರ 1915. ಸಂಚಿಕೆ 21

The Universal Assurance Co., Ltd
Head Office: 191, Bow Bazar Street, CALCUTTA.

NOTICE.

It is hereby informed to all the Agents, the subscribers of the Company and the public in general that the existing Provident scheme having been declared unsound by the actuary to the Government of India for its various inconveniences, the company has decided not to accept any proposal under the said scheme, and the same has been abolished since 1st January 1915. All the old members are hereby requested to continue their policies and diplomas which will be governed by the old rules and the bonus be distributed according to the dividing system hence they need not be frightened.

For the convenience of the intending subscribers and the public in general a new scheme called "Cheap Insurance" under the scientific principles of the Ordinary Insurance scheme has been introduced. For further particulars please see the Company's seperate advertisement. (*Sd.*) **J. Sarkar**, *Secretary*.

M. Laxman Rao Brothers,
Chief Agents, Udipi, S. C.

ದಿ ಯುನಿವರ್ಸಲ್ ಎಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಹೆಡ್ ಆಫೀಸು 191 ಬೊ ಬಜಾರ್ ಸ್ಟ್ರೀಟ್, ಕಲ್ಕತ್ತಾ.

ನೋಟೀಸು.

ಈ ಮೂಲಕ ಕಂಪೆನಿಯ ಮೆಂಬರರಿಗೂ ಸರ್ವ ಜನರಿಗೂ ತಿಳಿಯಪಡಿಸುವದೇ ನಂದರೆ:—ಈ ಕಂಪೆನಿಯ ಪ್ರೊವಿಡೆಂಟ ಫಂಡಿನ ಏರ್ಪಾಡನ್ನು ಅದರ ಬಗೆ ಬಗೆಯ ಅಸಾನುಕೂಲತೆಯ ಕಾರಣದಿಂದ ಸರಕಾರದವರು ಈ ಏರ್ಪಾಡನ್ನು ಘಟ್ಟಿ ಇಲ್ಲದ್ದು ಎಂಬದಾಗಿ ತೀರ್ಮಾನಿಸಿರುವದರಿಂದ ಕಂಪೆನಿಯವರು ಪ್ರೊವಿಡೆಂಟ ಏರ್ಪಾಡು ಕ್ರಮದ ಮೇಲೆ ವಿಮೇದಾರರನ್ನು ಕಂಪೆನಿಗೆ ಸೇರಿಸುವದಿಲ್ಲ, ಮತ್ತು ಈ ಕ್ರಮವು 1915ನೇ ಇಸವಿ ಜನವರಿ ತಾ. 1ರಿಂದ ಕಂಪೆನಿಯಿಂದ ತೆಗೆದು ಹಾಕಲ್ಪಟ್ಟಾಗಿರುವದು. ಹಳೇ ಮೆಂಬರರ ತಮ್ಮ ಪೊಲಿಸಿ ಮತ್ತು ಡಿಪ್ಲೊಮಗಳು ಹಳೇ ರೂಲಿನ ಪ್ರಕಾರ ಅಧಿಕರಿಸಲ್ಪಟ್ಟು "ಬೋನಸ್" ಎಂಬ ಲಾಭೋಚಿತವು ಕ್ರಮ ಪ್ರಕಾರ ಹಂಚಲ್ಪಡುವದರಿಂದ ಹಳೇ ಮೆಂಬರರು ಭಯಪಡಲು ಕಾರಣವಿಲ್ಲವೆಂಬದಾಗಿ ಈ ಮೂಲಕ ವಿಜ್ಞಾಪಿಸಲ್ಪಟ್ಟಾಗಿದೆ.

ಕಂಪೆನಿಯ ಮೆಂಬರರಾಗಲು ಯೋಚಿಸಿರುವವರಿಗೂ ಜನಸಾಮಾನ್ಯರ ಬಗ್ಯೆಯೂ "ಚೀಪ್ ಇನ್ಶೂರೆನ್ಸ್" ಎಂಬ ಒಂದು ಹೊಸ ಕ್ರಮವು ಸರ್ವಸಾಧಾರಣವಾಗಿರುವ ಇನ್ಶೂರೆನ್ಸ್ ಕ್ರಮದ ಮೂಲಸೂತ್ರದ ಪ್ರಕಾರ ತೆರೆಯಲ್ಪಟ್ಟಾಗಿರುವದು. ಹೆಚ್ಚಿನ ಮಾಹಿತಿಯನ್ನು ಈ ಪತ್ರಿಕೆಯಲ್ಲಿ ಕಾಣುವ ಕಂಪೆನಿಯ ಪ್ರಕಟಣೆಯನ್ನು ಓದಿಕೊಂಡರೆ ತಿಳಿಯುವದು.

(*Sd.*) ಜೆ. ಸರ್ಕಾರ, ಸೆಕ್ರೆಟರಿ.

ಎಮ್. ಲಕ್ಷ್ಮಣರಾವ್ ಬ್ರದರ್ಸ್, ಚೀಫ [illegible]

ಸ್ವದೇಶಾಭಿಮಾನಿಯ ನೋಟೀಸು.

ಚಂದಾದಾರರು ನಮಗೆ ಬರೆಯುವ ಎಲ್ಲಾ ಪತ್ರವ್ಯವಹಾರಗಳಲ್ಲಿ ತಮ್ಮ ತಮ್ಮ ವಿಳಾಸದೊಂದಿಗೆ ಇರುವ ರಿಜಿಸ್ಟರ ನಂಬರನ್ನು ತಪ್ಪದೆ ಬರಿಯತಕ್ಕದ್ದು. ರಿಜಿಸ್ಟರು ನಂಬರು ಇಲ್ಲದ ಪತ್ರಗಳಿಗೆ ನಿಗಾ ಕೊಡಲಾರೆವು.

ಪತ್ರಿಕೆಗೆ ಚಂದಾದಾರರಾಗಿ ಸೇರಲಪೇಕ್ಷೆಯುಳ್ಳವರು ವರ್ಷ 1ರ ಚಂದಾ ಹಣ ರೂ. 2—1—0ನ್ನು ಮನಿಯಾರ್ಡರು ಮೂಲಕ ರವಾನಿಸುವದುತ್ತಮ. ವಿ. ಪಿ. ಮೂಲಕ ಕಳುಹಿಸಬೇಕೆಂದು ಬರಿಯುವಂಥವರಿಗೆ ಪತ್ರಿಕೆಯ ಹಿಂದಿನ ಸಂಚಿಕೆಯನ್ನು ವಿ. ಪಿ. ಮಾಡಿ ಕಳುಹಿಸಲಾಗುವದು. ವಿ. ಪಿ.ಯ ಮೊಬಲಗು ನಮಗೆ ತಲ್ಪಿದ ನಂತರವೇ ಪತ್ರಿಕೆಯನ್ನು ಕಳುಹಿಸಲು ಪ್ರಾರಂಭಿಸುವೆವು.

ಪತ್ರಗಳನ್ನು ಬರಿಯುವಾಗ ತಮ್ಮ ಹೆಸರು, ವಿಳಾಸ ಮತ್ತು ಪೋಸ್ಟಾಫೀಸನ್ನು ಸ್ಪಷ್ಟಾಕ್ಷರದಲ್ಲಿ ಬರಿಯತಕ್ಕದ್ದು.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು; ದ. ಕ.

ಈಗಲೇ ತಯಾರಾಗಿವೆ!

ಗ್ರಾಮ ಮುನ್ಸಿಫ ಕೋರ್ಟುಗಳಿಗೆ ಸಂಬಂಧಿಸಿದ ಫೋರ್ಮುಗಳು.

100ಕ್ಕೆ ಆಣೆ 6 ಮಾತ್ರ.

ಕುರಿಫಂಡಿನ	ರಶೀದಿ	100ರ	ಪುಸ್ತಕ	1ಕ್ಕೆ	0—8—0
,,	,,	50ರ	,,	,,	0—4—0
ಇಂಗ್ಲೀಷು	,,	50ರ	,,	,,	0—8—0
,,	,,	25ರ	,,	,,	0—4—0
ಗೇಣಿ	,,	50ರ	,,	,,	0—6—0
,,	,,	25ರ	,,	,,	0—3—0
ಖಾಲಿ	,,	50ರ	,,	,,	0—4—0
,,	,,	25ರ	,,	,,	0—2—0
ಡೆಲಿವರಿ ಪುಸ್ತಕ 1ರ					0—8—0
ವಕಾಲತ್‌ನಾಮೆ ವಗೈರೆ				100ಕ್ಕೆ	0—10—0.
ಗೇಣಿಚೀಟು ಫೋರ್ಮು				,,	0—12—0.
ಪಮಿರ್ಟು ಫೋರ್ಮು				,,	0—12—0.

ವಿಳಾಸ:— ಶಾರದಾ ಛಾಪಖಾನೆ,
ಬೀದಿ, ಮಂಗಳೂರು.

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	218,800—0—0
Paid up Capital	193,800—0—0
Deposits	423,097—7 10
Reserve Fund	33,500—0—0

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು ,, ...	225,000—0—0
ಪ್ರತಿಜ್ಞಾತ ಮೂಲ ಧನವು ,, ...	218,800—0—0
ಆಗತ ಮೂಲ ಧನವು ,, ...	193,800—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	423,097—7—10
ರಕ್ಷಿತ ಧನವು	33,500—0—0

Besides the uncalled capital of Rs. 25,000/ 25%. of the net profits are added annually to the Reserve Fund. Rs. 21,685/ have been invested in Government Paper of the face value of Rs. 22,500/-

Dividends of not less than 6%. paid during the past years and a bonus of 1%. to 2%. paid in addition during the last three years.

Fixed Deposits of Rs. 50/ and above in multiples of Rs. 5/ received for 3, 6, 12 and 24 months @ 4, $4\frac{1}{2}$, 5 and $5\frac{1}{2}$%. respectively at the discretion of the managing committee

Short-notice Deposits requiring one weeks notice of withdrawal after one month received @ $2\frac{1}{2}$%. per annum at the discretion of the managing committee

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ $4\frac{1}{2}$%.

Loans granted on proper securities and pledges

Sealed Parcels for safe custody received on a moderate charge.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಗಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, $4\frac{1}{2}$, 5 ಮತ್ತು $5\frac{1}{2}$ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ $2\frac{1}{2}$ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ $4\frac{1}{2}$ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd.,
Mangalore, 1st May 1915

P. Gopal Naik,
Secretary.

ಜಯವಿಜಯ

ಅಥವಾ

ತೂಗಾಡುವ ಅಸ್ಥಿಪಂಜರ.

ಗುಜರಾಥಿ ಭಾಷೆಯಿಂದ ಕನ್ನಡದಲ್ಲಿ ಹೊಸತಾಗಿ ಭಾಷಾಂತರವಾದದ್ದು.

ಈ ಗ್ರಂಥದ ಕುರಿತು "ಸತ್ಯದೀಪಿಕೆ" ಎಂಬ ವಾರಪತ್ರಿಕೆಯು ಪಡುವ ಅಭಿಪ್ರಾಯ:—"ಇದು ಒಹಳ ರಸಿಕವಾದ ಆಶ್ಚರ್ಯವುಳ್ಳ ಒಂದು ಕಥೆಯಾಗಿದೆ ಅದನ್ನು ಓದತೊಡಗಿದವರಿಗೆ ಅದನ್ನು ತೀರಿಸುವ ತನಕ ವಿಶ್ರಾಂತಿ ದೊರಕದು. ದೇಶಸ್ಥರು ಸಹಾ ವಿಲಾಯತಿ ಕಾದಂಬರಿಗಳಂತೆ ಚೆಲೋ ಕಥೆಗಳನ್ನು ಬರೆಯಬಲ್ಲರೆಂದು ಇದರಿಂದ ಪ್ರಕಟವಾಗುತ್ತದೆ. ಇದರ ಸಾರಾಂಶವೂ ನೀತಿಯೂ ಕೂಡಾ ಘನವಾದದ್ದು. ನೀತಿವಂತರು ಅನೇಕಸಾರಿ ಶ್ರಮಪಡುವಾಗ ದುಷ್ಟರು ಕೆಲವು ಸಮಯ ಮೆರೆಯುವರೆಂದೂ ಆದರೆ ದುಷ್ಟರ ದುಷ್ಟತನವು ಬೈಲಾಗಿ ಅವರು ತಮ್ಮ ದುಷ್ಟತನಕ್ಕೆ ತಕ್ಕ ಪ್ರತಿಫಲವನ್ನು ಹೊಂದುವಾಗ ನೀತಿಯು ಕಡೆಗೆ ಜಯಿಸಿ ಬಾಳುವದೆಂದೂ ಈ ಕಥೆಯ ಕವಿಯು ತೋರಿಸುವನು. ಇದಲ್ಲದೆ ಈ ಕಥೆಯ ಶೂರರಲ್ಲಿ ಒಬ್ಬಳಾದ ಜಯೆಯಲ್ಲಿ ಪತಿವ್ರತಾ ಧರ್ಮವೂ ಇತರರಲ್ಲಿ ಬೇರೆ ಸದ್ಗುಣಗಳೂ ಹೊಳೆಯುವವು. ಕರ್ನಾಟಕ ಬಲ್ಲವರೆಲ್ಲರೂ ಈ ಕಥೆಯನ್ನು ಓದಿಕೊಂಡು ಈ ಕಥೆಯ ನೀತಿಯಿಂದ ಲಾಭವನ್ನು ಪಡೆದಾರೆಂತ ನಂಬುತ್ತೇವೆ." ಇತ್ಯಾದಿ. ಪುಸ್ತಕದ ಕ್ರಯ 0—12—0. ವಿ. ಪಿ. ಬೇರೆ.

ವಿಳಾಸ:—

V. O. Amin,
C/o E. A. Goll Esq.
Sirdar Palace, Apollo Street,

ರೂ 501 ಉಚಿತ!

ಬಲೂನ್ ಬ್ರೇಂಡ್ ಸಾಬೂನ್.

5 ನಿಮಿಷದೊಳಗೆ ಕೂದಲನ್ನು ಉದುರಿಸಿಬಿಡುವದಿಲ್ಲವೆಂಬದನ್ನು ಖಚಿತಪಡಿಸುವವರಿಗೆ ರೂ. 501 ಉಚಿತವಾಗಿ ಕೊಡೋಣಾಗುವದು. ಇದರಿಂದ ಚರ್ಮವು ಕೆಡದು. 3 ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ 0—12—0; 2 ಪೆಟ್ಟಿಗೆಗಳ ವರೆಗೆ ವಿ ಪಿ ಚಾರ್ಜು 0—5—0.

ರೂ. 2500 ಉಚಿತ!

ಸಿರಾಜಿ ಹೇರ್ ಡೈ ಎಂಬ ಕೇಶತೈಲವು ಬಿಳೀ ಮತ್ತು ನರೆತ ಕೂದಲನ್ನು ಕಪ್ಪು ಮಾಡುವದಿಲ್ಲವೆಂದು ತೋರಿಸುವವರಿಗೆ ರೂ. 2500 ಉಚಿತ.

ಈ ತೈಲವನ್ನು ಏನೊಂದು ಬಾಧಕಬಾರದಂತೆ ಅತಿ ನಿಪುಣತೆಯಿಂದ, ತಯಾರು ಮಾಡಿರುತ್ತದೆ. ಇದರಿಂದ ಚರ್ಮದಲ್ಲಿ ಕಲೆಯಾಗದು. ಪೆಟ್ಟಿಗೆ 1ಕ್ಕೆ ರೂಪಾಯಿ 1—0—0; ವಿ. ಪಿ. ಬೇರೆ.

ವಿಳಾಸ:— ಎಫ್. ಎಲ್. ದವಾವಾಲಾ,
ಮಿರ್ಜ ಸ್ಟ್ರೀಟ್, ಮುಂಬಾಯಿ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡಿಸಬೇಕಾಗಿದೆ.

F. L. Davawala,
Mirza Street, BOMBAY.

ಅನುಭವಸಿದ್ಧವಾದ ವನೌಷಧಗಳು

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳ ೦ ನಾಲ್ಕು ಬಿರುದಿನ ದಿಲ್ಲಿಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು ಬಾಟ್ಲಿಗೆ ೨-೮-೦

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ

೪ ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಕೊಲ್ಲಿ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ

೫ ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ಎಲಾಯಿತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು ತೊಲೆಗೆ ೨ ರೂ

ಪತ್ರ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಗ್ಲಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦ ಶಾಲ್ಮಲೀ ಪಾಕ ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ ೬ ಆಣೆ.

೧೨ ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುತ್ತವದಿಲ್ಲ ಸುವಾಸಿಕವಾಗಿದೆ. ಕರಡಿಗೆ ೪ ಆಣೆ.

೧೩ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪ ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುವಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M Nath & Co, *Ayurvedic Chemists,*

Vepery Post, MADRAS.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಮಠ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಕೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ, ಪೆಬ್ಲ ಎಂಬ ಗುರುಸು ಕಲ್ಲು ಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀಗೆಗಳೂ, ಧೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ಜೆ. ಎಸ್. ಸೋಜ ಎಂಡ್ ಕಂಪೆನಿ,

ಹಂಪನ್‌ಕಟ್ಟ, ಮಂಗಳೂರು

NOTICE.

Stany Brothers,

Candle Garden, Mangalore,

ಬಲ್ಮಠ ಕದ್ರಿ ರಸ್ತೆ ಬಳಿ ನಮ್ಮ "ಕೆಂಡಲ್ ಗ್ಹಾರ್ಡನ್" ಎಂಬ ಸ್ಥಳದಲ್ಲಿ 1908ನೇ ಇಸವಿ ಆಗ್ಯಾಸ್ತಿನಿಂದ ಈ ವರೆಗೆ ನಡೆದು ಬಂದಿರುವ ಯಂತ್ರದಿಂದ ಹುರಿದು ತಯಾರಿಸುವ ನಮ್ಮ ಕಾಫಿ ಪುಡಿ ವ್ಯಾಪಾರವು ನಮ್ಮ ವಾಚಕರಿಗೆ ಗೋಚರವಾಗದ ಕಾರಣ ಈಗ ನಾವು ಪ್ರಕಟಿಸಿರುತ್ತೇವೆ.

ನಮ್ಮಲ್ಲಿ ನಾನಾ ಬಗೆಯ ಶಾಲಾ ಹುಡುಗರಿಗೆ ಅವಶ್ಯವುಳ್ಳ ಕೋಪಿ ಬುಕ್ ಇತ್ಯಾದಿ ಶಾಲಾ ಪುಸ್ತಕಗಳೂ, ಸೊಗಸಾದ ಅನೇಕ ವಿಧದ ತಿರುಚಿನಾಪಳ್ಳಿ ಚುರುಟುಗಳೂ, ನೀಲಗಿರಿ ಚಾ, ಇತರ ಸಾಮಾನುಗಳೂ ಕೂಡ ವ್ಯಾಪಾರಸ್ಥರಿಗೆ ಸುಲಭವಾದ ಖರೀದಿಯಲ್ಲಿ ದೊರಿಯುತ್ತದೆ

ಕಾಫಿ ಪುಡಿಯು ರಾತ್ಲ ಒಂದಕ್ಕೆ 0—10—0ಯಿಂದ 0—5—0 ದರದ ವರೇಗೂ ದೊರಿಯುತ್ತದೆ.

ಇತರ ಅನುಭವಗಳಿಗೆ ನಮ್ಮ ಮೆನೇಜರರ ಮೇಲಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು

Piedade Pinto,

Manager.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತ್ಹಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟದೆ.

1 ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ, ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು

2 ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತು ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು

3 ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತ ಬಂದಲ್ಲಿ ತಿಂದನ್ನವು ಜೀರ್ಣವಾಗುವದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

4 ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು

ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು

5 ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು

6 ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಒಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು

7 ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು

ಆದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ

45 ಮಾತ್ರೆಗಳ ಪೊಟ್ಲ 1ಕ್ಕೆ 0—2—0 200 ಮಾತ್ರೆಗಳ ಪೊಟ್ಲ 1ಕ್ಕೆ 0—7—0 80 ಮಾತ್ರೆಗಳ ಟಿನ್ 1ಕ್ಕೆ 0—4—0 550 ಮಾತ್ರೆಗಳ ಮರದಪೆಟ್ಟಿಗೆ1ಕ್ಕೆ 1—0—0

95 „ „ „ 0—4—0 200 „ ಟಿನ್ „ 0—9—0 100 „ ಶೀಸೆ „ 0—4—6 1200 „ „ „ 2—0—0

ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು

1 ರೂಪಾಯಿಗೆ ಕಡಿಮೆಯಾಗಿ ವಿ ಪಿ ಮೂಲಕ ಕಳುಹಿಸಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು

☞ ಬೆರತಖಂಡ ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ

ಸೋಲ್ ಏಜಂಟ್ಸ್:—ಸೆಶಿಂತಾನ್ ಡಿಪೋ,

ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ 2.

ವೃಥಾ ವೆಚ್ಚಮಾಡುವದೇಕೆ ?

ಐಶ್ವರ್ಯವಂತರೂ ಬಡವರೂ ಕೊಂಡುಕೊಳ್ಳಲು ಸಾಧ್ಯವಾಗಿರುವ

ಯುಕಲಿಪ್ಟಸ್ ತೈಲವು

ತಲೆನೋವು, ಕಣ್ಣು ಉರಿ, ಗಾಯ, ಸಕಲ ವಿದವಾದ ವಾಯುರೋಗ, ಕೆಮ್ಮು, ಉಬ್ಬಸ, ಶೀತಬೇದಿ, ಉಷ್ಣಬೇಧಿ, ಹೊಟ್ಟೆಯಲ್ಲಿ ಜ್ವರಗಡ್ಡೆ, ಸ್ತ್ರೀಯರ ವ್ಯಾಧಿಸಂಬಂಧ ಬಿಳುಪು ಮೊದಲಾದ ಮೇಹ ರೋಗಗಳ, ಕಿವಿಹುಲ್ಲಿ ಕೀವು ಬರುವದು, ಹೆಂಗಸರ ಹೊಟ್ಟೆನೋವು ಮೊದಲಾದ ರೋಗಗಳನ್ನು ಗುಣಪಡಿಸುವದಿಲ್ಲವೆಂದು ಖಾತ್ರಿಪಡಿಸುವವರಿದ್ದಾರೋ? ಔನ್ಸ್ ಸೀಸೆ 1ಕ್ಕೆ 0—5—0 ವಿ ಪಿ ಬೇರೆ. ಡಜನ್ ಸೀಸೆಗಳಿಗೆ ವಿ ಪಿ ಸಹಿತ ರೂ 3—12—0 ಅನುಪಾನ ಪತ್ರಿಕೆ ಸೀಸೆಯೊಂದಿಗೆ

ಗೃಹಣೀಯಂತಕ ತೈಲ:—ಮಕ್ಕಳ ಚೇಷ್ಟೆ, ಮಕ್ಕಳು ಒಡವಾಗುತ್ತಾಬರುವದು, ಸೇವಸ ಮೊದಲಾದ ಮಕ್ಕಳ ರೋಗಕ್ಕೆ ಸಿದ್ಧೌಷದ 2 ಔನ್ಸಿನ ಸೀಸೆ 1ಕ್ಕೆ 0—10—0 ವಿ ಪಿ ಸಹಿತ 0—15—0

ಇಕ್ಲಿಪ್ಸ್ ಬಾಮ್:—ತಲೆನೋವು, ಸೊಂಟದ ನೋವು, ಸಂಧುವಾತ, ಮೇಹವಾತ, ನೆಗಡಿ, ಶೈತ್ಯ, ಚೇಳು, ಜೇಡರಹುಳ ಕಡಿತ, ಕುರು, ರಾಜಕುರು, ಮೊಡವೆ, ಘಾಯಗಳು, ಹಲ್ಲುನೋವು, ಆನೆಕಾಲು ಇತ್ಯಾದಿ ರೋಗಗಳಿಗೆ ಬಾಹ್ಯ ಲೇಪನವಾಗಿ ಉಪಯೋಗಿಸಬಹುದಾದ ಬಾಮಿನ ಕರಡಿಗೆ 1ಕ್ಕೆ ಆಣೆ 8 ವಿ ಪಿ. ಬೇರೆ. ಡಜನ್ ಕರಡಿಗೆಗಳಿಗೆ ರೂ 4—12—0 ವಿ ಪಿ. ಬೇರೆ

ಏಜಂಟರು:—

ವಿಳಾಸ:—

ಇಕ್ಲಿಪ್ಸ್ ಏಜನ್ಸಿ,
ಮಂಗಳೂರು.

ಸುಗಂಧವಿಲಾಸ,
ವೀದಿ, ಮಂಗಳೂರು.

ಅನೇಕ ಯೋಗ್ಯತಾಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡ್)

ರಾಜಸುಂದರಿರೋಜ.

ಕೂದಲು ಬೆಳೆಯುವ ಪರಿಮಳ ತೈಲವು 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1ಕ್ಕೆ ರೂ. 1 ಮಾತ್ರ.

ಸ್ತ್ರೀಗಳು ತಲೆಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು, ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವರು ಬಜಾರಿನಲ್ಲಿ ದೊರೆಯುವ ಕೀಳುತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ, ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನ ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ ಸುವಾಸನೆ ಹೇಳುವದಕ್ಕೆ ಬರಿಯುವದಕ್ಕೆ ಆಗುವದಿಲ್ಲ ಮತ್ತು ಇದರ ಪರಿಮಳ ವಾಸನೆ ಸುತ್ತು ಇರುವ ಮನೆಗಳಿಗೆ ಹೋಗುವದು ಇದಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತೆಗದು ಕಣ್ಣಿಗೆ ತಂಪು ಕೊಡುವದು ತಲೆಯಲ್ಲಿ ಇರುವ ಮೆದಡನ್ನು ಸರಿ ಮಾಡುವದು. ಮುಖಕ್ಕೆ ಕಾಂತಿಯನ್ನು, ದೇಹಕ್ಕೆ ಆರೋಗ್ಯವನ್ನೂ, ಮನಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ ಬೇರೊಂದಿಲ್ಲ, ಬರೇ ವ್ಹಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ 1ನ್ನು ತರಿಸಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು. ಸ್ತ್ರೀಯರು ಧರಿಸಿಕೊಳ್ಳುವ ಕೊಂಡಾಗೆ 6, ವ್ಯೆಭರಣ 1, ಅದ್ದಾ 1, ತಾಂಬೂಲ ಪಾತ್ರೆ 30, ದಂತದ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರನೇಷನ್ ಪೆಟ್ಟಿಗೆ 1, ರವಿವರ್ಮ ಪೋಸ್ಟುಕಾರ್ಡ್ 6, ಸುವಾಸನೆ ಅತ್ತರ ಬಿಲ್ಲೆ 1, ಗಂಧ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೂಚ್ 1.

ನಮ್ಮ ವಿಳಾಸ — ಮ್ಯಾನೇಜರ್ ಧೈರ್ಯ ಲಕ್ಷ್ಮಿ ಅಂಡು ಕಂಪೆನಿ,

ನಂ. 3 ಇರುಳಪ್ಪನ್ ಬೀದಿ, ಮದ್ರಾಸು.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಖು 21ನೇ ಮೇ 1915.

ಹಿಂದೂಗಳು ಒಂದಾಗುವ ಬಗೆ ಹೇಗೆ?

ಈ ವಿಷಯವನ್ನು ಲಾಹೋರು ಲೋ ಕೊಲೇಜಿನ ಪ್ರಿನ್ಸಿಪಲರಾದ ಲಾಲಾ ಕನ್ವರ್ ಸೇನ್ ಎಂ ಎ ಯವರು ಪಂಜಾಬಿನ ಹಿಂದೂ ಸಭೆಯ ವಾರ್ಷಿಕ ಮಹಾ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಚಲೋ ರೀತಿ ವಾದಿಸಿರುತ್ತಾರೆ ಹಿಂದೂಗಳಲ್ಲಿ ಏಕೀಭಾವವು ಯಾವಂದಿನಿಂದ ಮತ್ತು ಹೇಗೆ ಜನಿಸಿರುವುದು, ಈ ಭಾವನೆಯು ಹಿಂದೂ ಗಳಲ್ಲಿ ನೆಲಸಿರಲು ಕಾರಣಗಳೇನು, ಪ್ರಕೃತ ಇದು ಯಾವ ರೂಪಗಳಲ್ಲಿ ಕಾಣಿಸುತ್ತಿರುವುದು, ಹಿಂದೂಗಳ ಐಕ್ಯವನ್ನು ಈಗ ಹೇಗೆ ಬಲಪಡಿಸಬಹುದು,—ಈ ವಿಧಾನದಲ್ಲಿ ಈ ವಿಷಯವನ್ನು ಲಾಲಾ ಕನ್ವರ್ ಸೇನ್‌ರವರು ತರ್ಕಿಸಿರುತ್ತಾರೆ

ಒಂದೇ ದೇಶ, ಒಂದೇ ವಾಙ್ಮಯ ಮತ್ತು ಕಲಾಕೌಶಲ ಶಾಸ್ತ್ರ ಎಲ್ಲಾ ಕಡೆ ಗಳಲ್ಲಿಯೂ ಸರ್ವ ಹಿಂದೂಗಳಿಂದಲೂ ಒಂದೇ ರೀತಿ ಮನ್ನಿಸಲ್ಪಡುವ ಅವತಾರ ಪುರುಷರು, ಒಂದೇ ಉದ್ದೇಶವನ್ನು ಸೂಚಿಸುವ ಭಾವನೆ ಕಲ್ಪನೆಗಳು, ಒಂದೇ ಸಮತಟ್ಟಿನ ಆದರ್ಶಗಳು, ವಿಶೇಷ ಭೇದವಿಲ್ಲದೆ ಸರ್ವರಿಂದಲೂ ಸಾಮಾನ್ಯವಾಗಿ ಆಚರಿಸಲ್ಪಡುವ ಹಬ್ಬಗಳು ಮತ್ತು ಸಂಸ್ಕಾರಗಳು, ಸರ್ವತ್ರವೂ ವ್ಯಾಪಿಸಿರುವ ಏಕರೂಪಿಯಾದ ಜಾತಿಯ ವಿಚಾರ, ಒಂದೇ ತರದ ಜನಾಂಗ ಸ್ಫೂರ್ತಿ,—ಇವೆಲ್ಲವು ಹಿಂದೂಗಳ ಏಕೀಭಾವದ ಮುಖ್ಯ ಕಾರಣಗಳಾಗಿರುವವು. ಕರ್ಮಬಂಧ, ಅಹಿಂಸೆ, ಪುನರ್ಜನ್ಮ, ಇವುಗಳಲ್ಲಿರುವ ವಿಶ್ವಾಸ, ಪ್ರಾಚೀನ ಶಾಸ್ತ್ರಜ್ಞಾನ ಸಂಪಾದಕರಾದ ಬ್ರಾಹ್ಮಣರ ಮೇಲಿರುವ ಪೂಜ್ಯಭಾವ, ವಿಶೇಷವಾದ ಶ್ರದ್ಧೆ ಮತ್ತು ಭಕ್ತಿಗಳಲ್ಲಿ ಲೀನವಾದ ಮನಸ್ಸು—ಹಿಂದೂಗಳ ಜನಾಂಗ ಸ್ಫೂರ್ತಿಯಲ್ಲಿ ಈ ಸಾಮಾನ್ಯ ವಿಚಾರಗಳು ವ್ಯಕ್ತವಾಗುತ್ತವೆ ಹಿಂದೂಗಳ ಏಕೀಭಾವ ಈ ವಿಚಾರಗಳು ಹೇಗೆ ಬೆಳೆದವೆಂಬುದನ್ನು ಆಯಾ ಕಾಲದ ಇತಿಹಾಸಗಳ ಮೂಲಕ ಸಂಕ್ಷೇಪವಾಗಿ ಲಾಲಾ ಕನ್ವರ್ ಸೇನ್‌ರವರು ವಿವರಿಸಿರುವರು

ಭಾಷಣವು ಬಹಳ ವಿಸ್ತಾರವಾಗ ಬೆಳೆಯದಂತೆ ವೇದ ಮತ್ತು ಉಪನಿಷತ್ತುಗಳ ಕಾಲಗಳ ಪರಿಶೀಲನೆಯನ್ನು ಪ್ರತ್ಯಪ್ರತ್ಯೇಕವಾಗಿ ಮಾಡದೆ ಒಂದೇ ಸಲ ಮಾಡಿರುತ್ತಾರೆ ಹಿಂದೂ ಐಕ್ಯಕ್ಕೆ ಮುಖ್ಯ ಆಧಾರವಾಗಿರುವ ತತ್ವಗಳು ಈ ಕಾಲದಲ್ಲಿ ಶೋಧಿಸಲ್ಪಟ್ಟವು ಪುರಾತನ ಮಹರ್ಷಿಗಳು ತಮ್ಮ ತಪೋಬಲದಿಂದ ವ್ಯಕ್ತಿಪರವಾದ ಜೀವಿತಕ್ಕೂ ಸಮಾಜದ ಜೀವಿತಕ್ಕೂ ಅಗತ್ಯವಾದ ಸೂತ್ರಗಳನ್ನು ಕಂಡುಹಿಡಿದರು ಮನುಷ್ಯನಲ್ಲಿ ಆತ್ಮವಿದೆ, ಹಲವು ಮನುಷ್ಯರು ಸಮುದಾಯವಾಗಿ ಕೂಡುವುದರಿಂದ ಆತ್ಮ ತೇಜೋ ಬಲವು ಹೆಚ್ಚುವುದು ಎಂಬ ಶೋಧವನ್ನು ಋಷಿವರ್ಯರ ಪ್ರಥಮದಲ್ಲಿ ಮಾಡಿದರು. ಈ ಶೋಧಕ್ಕನುಸಾರವಾಗಿ "ಧರ್ಮಂ ಚರ, ಸತ್ಯಂ ವದ" ಮೊದಲಾದ ಸೂತ್ರಗಳನ್ನು ಸಮಾಜದ ಅನುಸರಣೆ ಬಗ್ಗೆ ನಿರ್ಧರಿಸಿದರು ಪರಸ್ಪರ ಪ್ರೀತಿಯು ಸಮಾಜದ ಐಕ್ಯಕ್ಕೆ ಮುಖ್ಯವಾದದ್ದೆಂಬುವ ವಿಚಾರವು ಇದರೊಡನೆ ಮೂಡಿತು ಈ ಸೂತ್ರಗಳ ಅನುಸರಣೆಯಿಂದ ಆರ್ಯರಲ್ಲಿ ಐಕ್ಯವು ಚನ್ನಾಗಿ ನೆಲೆಗೊಂಡು ಈ ಐಕ್ಯದ ಪ್ರಭಾವವು ಲೋಕದ ಎಲ್ಲಾ ಕಡೆಗಳಲ್ಲಿಯೂ ಹಬ್ಬಿತು ಹಿಂದೂಗಳ ಆದಿಮ ಐಕ್ಯದ ಪರಿಸ್ಥಿತಿಯು ಕನ್ವರ್ ಸೇನ್‌ರಿಂದ ಈ ರೀತಿ ವರ್ಣಿಸಲ್ಪಟ್ಟದೆ

ವೇದ ಮತ್ತು ಉಪನಿಷತ್ತುಗಳ ಕಾಲದ ನಂತರ ಹಿಂದೂಗಳಲ್ಲಿ ಏಕೀಭಾವವು ಸ್ವಾರ್ಥತ್ಯಾಗದಿಂದ ಮೆರೆಯಿತೆಂಬುದಾಗಿ ರಘುವಂಶದವರ ಇತಿಹಾಸದಿಂದ ಕಂಡುಬರುತ್ತದೆ. ಏಕೀಭಾವಕ್ಕೆ ಭಂಗವು ಉಂಟಾಗದಂತೆ ಶ್ರೀರಾಮಚಂದ್ರನು ಸರ್ವರಾಜ ಸಂಪತ್ತುಗಳನ್ನು ಬಿಟ್ಟು ವನವಾಸವನ್ನು ಕೈಕೊಂಡನು ಸ್ವಾರ್ಥತ್ಯಾಗದ ಈ ಉದಾತ್ತ ಆದರ್ಶವನ್ನು ತಮ್ಮ ಮುಂದಿಟ್ಟುಕೊಂಡು ತಮ್ಮ ಪರಿಶುದ್ಧವಾದ ಏಕೀಭಾವವನ್ನು ಲೋಕಕ್ಕೆಲ್ಲಾ ಸಾರುವಂತೆ ಲಕ್ಷ್ಮಣ, ಭರತ, ಹನುಮಂತ, ಸೀತಾದೇವಿ, ಇವರೆಲ್ಲರೂ ರಾಮನನ್ನನುಸರಿಸಿದರು. ಒಬ್ಬನಿಗೋಸ್ಕರ ಇನ್ನೊಬ್ಬನು ತಮ್ಮ ಸರ್ವಸ್ವವನ್ನ ರ್ಪಿಸಿದ ತ್ಯಾಗಶೀಲವು ರಾಮಾಯಣದ ಕಾಲದಲ್ಲಿ ಹಿಂದೂಗಳ ಐಕ್ಯದ ಮುಖ್ಯ ಬೀಜ ಮಂತ್ರವಾಗಿತ್ತು. ರಾಮಾಯಣದ ನಂತರ ಭಾರತ ಈ ಕಾಲದಲ್ಲಿ ನಿಷ್ಕಾಮಕರ್ಮ ಬೋಧೆಯೇ ಹಿಂದೂಗಳ ಏಕೀಭಾವಕ್ಕೆ ಕಾರಣವಾಯಿತೆಂದು ತೋರಿಬರುತ್ತದೆ ಕರ್ಣ ಮತ್ತು ಶಕುನಿ ಇವರಿಬ್ಬರ ಮಂತ್ರಾಲೋಚನೆಯಿಂದ ಸ್ವಾರ್ಥಪರನಾದ ಕೌರವನು ರಾಜ್ಯಭಾರವನ್ನು ನಡಿಸುತ್ತಿದ್ದಾಗ ಹಿಂದೂಗಳ ಐಕ್ಯವು ಮುರಿದುಹೋಗಿ ಸಮಾಜಹಾನಿಯು ಉಂಟಾಗುವುದನ್ನು ಶ್ರೀಕೃಷ್ಣನು ನೋಡಿ ಗೀತಾಮೂಲಕ ನಿಷ್ಕಾಮಕರ್ಮ ಬೋಧೆಯಿಂದ ಪಾಂಡವರನ್ನು ಉತ್ಸಾಹಗೊಳಿಸಿ ಧರ್ಮವನ್ನು ಸಂಸ್ಥಾಪಿಸಿ ಹಿಂದೂಗಳ ಐಕ್ಯವನ್ನು ಪುನಹ ಸ್ಥಿರಪಡಿಸಿದನು ಈ ರೀತಿ ಭಾರತದಲ್ಲಿ ಹಿಂದೂಗಳ ಐಕ್ಯದ ಮುಖ್ಯ ಆಧಾರವು ಧರ್ಮವೆಂತ ಕಂಡುಬರುತ್ತದೆ ಬುದ್ಧ, ಶಂಕರಾಚಾರ್ಯರ ಕಾಲಗಳನ್ನು ಇದೇ ರೀತಿ ವಿಮರ್ಶಿಸಿ ಭೂತದಯೆ ಪ್ರೀತಿಯಿಂದಲೂ ದಾರ್ಶನಿಕ ಸೂತ್ರಗಳ ಬೋಧೆಯಿಂದಲೂ ಹಿಂದೂಗಳ ಐಕ್ಯವು ಆಗಿಂದಾಗ್ಯೆ ಬಲಗೊಂಡ ವೃತ್ತಾಂತವನ್ನು ಕನ್ವರ್ ಸೇನ್‌ರವರು ತಮ್ಮ ಭಾಷಣದಲ್ಲಿ ಸೂಚಿಸಿರುವರು ಭಕ್ತಿಮಾರ್ಗದ ಮೂಲಕ ಸ್ಥಾಪಿತವಾದ ಹಿಂದೂಗಳ ಐಕ್ಯವನ್ನು ಪ್ರಸ್ತಾಪಿಸಿ ಪ್ರಕೃತ ಹಿಂದೂಗಳಲ್ಲಿಯ ಏಕೀಭಾವದ ಸ್ಥಿತಿಯೇನೆಂಬುದಾಗಿ ಪರ್ಯಾಲೋಚಿಸಿದ್ದಾರೆ ಹಿಂದೂಗಳಲ್ಲಿ ಐಕ್ಯವಿಲ್ಲವೆಂತ ಪ್ರಕೃತ ಕೇಳಿಸುತ್ತಿರುವ ಮಾತ ತುಸು ನಿಜವಾಗಿದ್ದರೂ ಹಿಂದೂ ಮತದಲ್ಲಿ ಬಲವಾದ ಐಕ್ಯ ಸಾಧನೋಪಾಯಗಳು ಇನ್ನೂ ಕಾಣಿಸುತ್ತವೆ ಬ್ರಹ್ಮಜ್ಞಾನ ಸಂಘ, ಬ್ರಹ್ಮಸಮಾಜ, ಆರ್ಯಸಮಾಜ, ಸನಾತನಧರ್ಮ, ಮಹಾಮಂಡಲ ಮೊದಲಾದವುಗಳು ಹಿಂದೂ ಐಕ್ಯದ ಬಗ್ಗೆ ಬೇಕಾದ ಪ್ರಯತ್ನಗಳನ್ನು ಮಾಡುತ್ತಿರುವವ ಈ ಸಮಾಜಗಳ ಸ್ಥಾಪಕರು ಮತ್ತು ಚಾಲಕರು ಹಿಂದೂಗಳಲ್ಲಿ ಐಕ್ಯವನ್ನು ಸ್ಥಾಪಿಸುವ ಬಗೆ ಹೇಗೆ ಎಂತ ಪರ್ಯಾಲೋಚಿಸಬೇಕೆಂದು ಸೂಚಿಸಿರುವರು ಅಹಿಂಸಾ ಪರಮೋಧರ್ಮ, ಧರ್ಮಂ ಚರ, ಸತ್ಯಂ ವದ ಮೊದಲಾದ ಧರ್ಮವಾಕ್ಯಗಳಿಂದ ನಮ್ಮಲ್ಲಿ ಅನಾದಿಕಾಲದಿಂದ ರೂಢಮೂಲವಾಗಿರುವ ಆದರ್ಶಗಳನ್ನು ಬಿಟ್ಟುಬಿಡದೆ, ಇತರ ಸಮುದಾಯದವರ ಕೂಡೆ ವೈರವನ್ನು ನಮ್ಮಗಳ ಐಕ್ಯವನ್ನು ಸಾಧಿಸುತ್ತಿರುವಾಗ ಬರಮಾಡಿಕೊಳ್ಳದೆ ಹಿಂದೂಗಳನ್ನು ಒಂದಾಗಿ ಮಾಡುವ ಸಾದನೆಯನ್ನು ಆಯಾ ಹಿಂದೂ ಸಮಾಜಗಳ ಮುಖಂಡರು ಪರಸ್ಪರ ಸಹಕಾರದಿಂದ ನಡೆಯಿಸಬೇಕೆಂತ ಲಾಲಾ ಕನ್ವರ್ ಸೇನ್‌ರವರು ವಿಜ್ಞಾಪಿಸಿಕೊಂಡಿರುವರು.

ಕೃಷಿ ಇಲಾಖೆಯಲ್ಲಿ ಸಿಬಂದಿಯ ಮಾರ್ಪಾಟವು.

ವರುಷಕ್ಕೆ ಒಂದೆರಡಾವರ್ತಿ ಕೃಷಿ ಇಲಾಖೆಯ ಆಫೀಸರರಲ್ಲಿ ಯಾರಾದರೂ ಒಬ್ಬರು ಇಲ್ಲಿಗೆ ಬಂದು ಕಬ್ಬು ವ್ಯವಸಾಯ ಮೊದಲಾದವುಗಳ ವಿಷಯ ರೈತರಿಗೆ ಮಾಹಿತಿಯನ್ನು ಕೊಡುತ್ತಿರುವುದು ವಾಚಕರಿಗೆ ತಿಳಿದಿರಬಹುದು ಇಂಥಾ ಮಾಹಿತಿಯಿಂದ ರೈತರಲ್ಲಿ ಕಡುಜಾಣರಾದವರು ಅಂದರೆ ಬಹಳ ಸ್ವಲ್ಪ ಜನರು ಪ್ರಯೋಜನ ಪಡೆದದ್ದುಂಟು ನವೀನ ಮಾಹಿತಿಯು ವ್ಯವಸಾಯ ಕ್ರಮಗಳನ್ನು ಅನುಸರಿಸುವಾಗ ರೈತರಿಗೆ ಪದೇ ಪದೇ ಬೇಕಾದ ಅನುಭವವನ್ನು ಹೇಳಿಕೊಟ್ಟು ನವೀನ ಸಾಧನೆಗಳಲ್ಲಿ ಅವರು ಎದೆಗುಂದದಂತೆ ಕೃಷಿ ವಿದ್ಯೆಯನ್ನು ಬಲ್ಲಂದವರು ಹತ್ತಿರವಿರುವುದು ಅಗತ್ಯ. ಇಂಥವರು ಮಾದರಿಯ ಹೊಲಗಳಲ್ಲಿ ಜನರಿಗೆ ಹೊಸತಾದ ಶೋಧಗಳನ್ನು ರುಜುಪಡಿಸಿ ತೋರಿಸಬಹುದಾದ್ದರಿಂದ ಇಂಥಾ ಆಫೀಸರರನ್ನು ಪ್ರತಿ ಜಿಲ್ಲೆಯಲ್ಲಿಯೂ ತಾಲೂಕಿನಲ್ಲಿಯೂ ಇರಗೊಡಿಸಿದರೆ ಅನುಕೂಲವಾಗುವುದು ಈ ಅವಶ್ಯಕತೆಯನ್ನು ಜನರು ತಿಳಿದಿದ್ದಂತೆಯೇ ಸರಕಾರದವರೂ ಸಹ ತಿಳಕೊಂಡು ಕೃಷಿ ಇಲಾಖೆಯ ಸಿಬಂದಿಯ ಸಂಖ್ಯೆಯನ್ನು ಹೆಚ್ಚಿಸಿರುತ್ತಾರೆ ಕೃಷಿ ಇಲಾಖೆಯಲ್ಲಾಗಬಹುದಾದ ನವೀನ ಈ ಮಾರ್ಪಾಟಗಳನ್ನು ಸೂಚಿಸಿ ಸರಕಾರದವರ ಒಂದು ಸೂಚನಾಪತ್ರವು ಇತ್ತಲಾಗೆ ಪ್ರಕಟವಾಗಿದೆ ಈ ಮಾರ್ಪಾಟಕ್ಕೆ ಸ್ಟೇಟ್ ಸೆಕ್ರೆಟರಿಗಳವರ ಅನುಮತಿಯು ದೊರಕಿರುವುದು. ವರುಷ ಒಂದಕ್ಕೆ ೩|| ಲಕ್ಷ ರೂಪಾಯಿಗಳ ಖರ್ಚು ಹೀಗೆ ಹೆಚ್ಚಿಸಿದ ಸಿಬಂದಿಗೆ ಬೇಕಾಗುತ್ತದೆ.

ಕೃಷಿ ಇಲಾಖೆಯ ಕಾರ್ಯನಿರ್ವಾಹದ ಬಗ್ಗೆ ಮದ್ರಾಸು ಸಂಸ್ಥಾನವು ಭಾಗಗಳು ಯಾ ಡಿವಿಜನುಗಳಾಗಿ ವಿಭಜಿಸಲ್ಪಡುವುದು. ಪ್ರತಿ ಡಿವಿಜನಿಗೆ ಒಬ್ಬ ಡಿಪ್ಯುಟಿ ಡಿರೆಕ್ಟರನು ಮೇಲಾಫೀಸರನಾಗಿ ನೇಮಿಸಲ್ಪಡುವನು. ನಮ್ಮ ಈ ಜಿಲ್ಲೆಯು ಪಶ್ಚಿಮ ಕರಾವಳಿ ಮತ್ತು ಕೊಯಂಬುತ್ತೂರು ಡಿವಿಜನಿಗೆ ಸೇರುವುದು. ಮಾದರಿಯ ಹೊಲಗಳು ಮುಖ್ಯವಾದ ೧೯ ಪ್ರಾಂತ್ಯಗಳಲ್ಲಿ ಸ್ಥಾಪಿಸಲ್ಪಡುವವು. ಪ್ರತಿಯೊಂದು ಜಿಲ್ಲೆಯಲ್ಲಿ ಒಬ್ಬ ಫಾರ್ಮ ಮೆನೇಜರ್, ಮೂರು ಜನ ಅಸಿಸ್ಟಾಂಟ್ ಇನ್ಸ್‌ಪೆಕ್ಟರರು ನೇಮಕವಾಗಿರುವರು ಕೊಯಂಬುತ್ತೂರು ಕೊಲೇಜಿನಲ್ಲಿ ಶಿಕ್ಷಣಪಡೆದವರು

ಅಥವಾ ಕೃಷಿ ವಿಷಯ ವಿಶೇಷ ಮಾಹಿತಿದಾರರು ಸಿಕ್ಕಿದಂತೆ ಈ ಮಾರ್ಪಾಟವನ್ನು ಕ್ರಮೇಣ ಜಾರಿಗೆ ತರುವರು. ಈ ನವೀನ ಸಿಬಂದಿಯಲ್ಲಿ ಡಿರೆಕ್ಟರರಲ್ಲದೆ ತಿಂಗಳಿಗೆ ರೂ. ೭೦೦ ಸಂಬಳದವ ಒಬ್ಬ, ರೂ. ೬೦೦ನವ ಒಬ್ಬ, ರೂ. ೫೦೦ನವ ಒಬ್ಬ ಈ ರೀತಿ ಮೂವರು; ಮತ್ತು ರೂ. ೨೦೦—೧೨॥—೪೦೦ ಈ ರೀತಿ ಸಂಬಳ ಹೊಂದುವ ಮೇಲಾ ಫೀಸರರು ನೇಮಿಸಲ್ಪಡುವರು. ಇದಲ್ಲದೆ ೩೫—೩—೫೦ರ ಸಂಬಳದ ೨೭ ಜನ ಅಸಿಸ್ಟಾಂಟ್ ಫಾರ್ಮ್ ಮೆನೇಜರರು, ೫೦—೫—೧೦೦ ಸಂಬಳ ಪಡೆಯುವ ೧೭ ಜನ ಫಾರ್ಮ್ ಮೆನೇಜರರು, ರೂ ೧೦೦—೧೦—೧೫೦ ಪಡೆಯುವ ೬ ಜನ ೧ನೇ ಕ್ಲಾಸ ಫಾರ್ಮ್ ಮೆನೇಜರರು, ಈ ರೀತಿ ಇನ್ನೂ ಹಲವು ಈ ನೌಕರರು ಕೃಷಿ ಇಲಾಖೆಯಲ್ಲಿ ನೇಮಿಸಲ್ಪಡುವರು. ಗ್ರೇಡ್ ಫಾರ್ಮ್ ಮೆನೇಜರರು, ಕೊಯಂಬುತ್ತೂರಲ್ಲಿ ಅನೇಕ ಲಕ್ಷಕಟ್ಟಲೆಯ ಹಣವನ್ನು ಖರ್ಚುಮಾಡಿ ಸ್ಥಾಪಿಸಲ್ಪಟ್ಟ ಕೃಷಿ ವಿದ್ಯೆಯ ಕೋಲೇಜಿನ ಪ್ರಯೋಜನವು ಜನರಿಗೆ ಈ ನವೀನ ಮಾರ್ಪಾಟದ ಮೂಲಕ ಇನ್ನು ಮುಂದಕ್ಕಾದರೂ ದೊರೆಯಲು ಅವಕಾಶವು ಪ್ರಾಪ್ತವಾದ್ದನ್ನು ನೋಡಿ ಸಂತೋಷಪಡುತ್ತೇವೆ.

ಕಾಸರಗೋಡು ತಾಲೂಕಿನ ಪ್ರಾಥಮಿಕ ಶಾಲಾ ಉಪಾಧ್ಯಾಯರ ಪರಸ್ಪರ ಸಹಾಯಕ ಸಂಘದ ವರದಿ.

ಕಳೆದ ಸಂಚಿಕೆಯಿಂದ ಮುಂದರಿಸಿದುದು

ಉಪಾಧ್ಯಾಯರಲ್ಲಿ ಸಾಲಪಡಕೊಳ್ಳುವ ಆಸೆಯು ಹೆಚ್ಚಾಗಬಹುದೆಂಬ ಭೀತಿಯಿಂದ ಸಾಲ ಕೊಡುವ ಕ್ರಮವನ್ನು ಈಚೆಗೆ ವರೆಗೆ ಆರಂಭಿಸಿದಿಲ್ಲವಂತೆ. ಈ ಭೀತಿಯು ಸಕಾರಣವಾದ್ದೆಂದು ತಿಳಿಯಲಿಕ್ಕೆ ಆಸ್ಪದವಿದೆ. ಏತಕ್ಕೆಂದರೆ ೧೯೧೪ನೇ ಜುಲೈಯಿಂದ ೧೯೧೫ನೇ ಮಾರ್ಚಿ ಆಖೈರಿ ಒಳಗೆ ಈ ಸಂಘವು ದಕ್ಷಿಣಕನ್ನಡ ಸೆಂಟ್ರಲ್ ಕೊಓಪರೆಟಿವ್ ಬೇಂಕಿನಿಂದ ೧೦೦೦ ರೂಪಾಯಿ ಸಾಲ ಪಡೆದು ಹಲವು ಮೆಂಬರಲ್ಲನೇಕರಿಗೆ ಸಾಲವಾಗಿ ಕೊಟ್ಟುಬಿಟ್ಟಿತು. ೧೯೧೩ನೇ ಉದ್ದೇಶಗಳ ಬಗ್ಗೆ ಮೇ ತಿಂಗಳಿಂದ ೧೯೧೪ ಜೂನ್ ಆಖೈರ ವರೆಗೆ ಕೊಟ್ಟ ಸಾಲಪತ್ರಗಳು ೩೨, ಅವುಗಳ ಮೊಬಲಗು ೪೯೩ ರೂಪಾಯಿ, ೧೯೧೪ನೇ ಜುಲೈಯಿಂದ ೧೯೧೫ನೇ ಮಾರ್ಚಿ ಅಂತ್ಯದ ವರೆಗೆ ಸಾಲವು ೧೦೦೦ಕ್ಕೆ ಮಿಕ್ಕಿದ್ದು ಸಾಲಪತ್ರಗಳು ೬೭ ಇದ್ದವು. ಈ ಸಾಲಪತ್ರಗಳನ್ನು ಪರಿಶೀಲಿಸಿದರೆ ವ್ಯವಸಾಯದ ಅನುಕೂಲತೆಗೆ ೪೧, ಮನೆವಾರ್ತೆ ಖರ್ಚಿಗೆ ೬, ವ್ಯಾಪಾರಕ್ಕೆ ೧, ಇತರ ೫೭ ಪತ್ರಗಳು ಹಿಂದಿನ ಸಾಲಪರಿಹಾರಕ್ಕೆಂತ ಕೊಡಲ್ಪಟ್ಟಿದ್ದುವಂತೆ. ಇದರಿಂದ ಬಡ ಉಪಾಧ್ಯಾಯರು ಎಷ್ಟರ ಮಟ್ಟಿಗೆ ಋಣ ಬಂಧನದಲ್ಲಿದ್ದಾರೆ ಎಂತ ಗೊತ್ತುಹಚ್ಚಬಹುದೆಂತಲೂ ಈ ಋಣ ಬದ್ಧತೆಯೇ ಉಪಾಧ್ಯಾಯರಲ್ಲನೇಕರೊಳಗೆ ಕಾಣಬರುವ ಔದಾಸೀನ್ಯಕ್ಕೆ ಮೂಲಕಾರಣವೆಂದು ಮ। ರಾ। ಮಂಗೇಶರಾಯರ ಅಭಿಪ್ರಾಯ. "ಎಳೆ ಗಿಡವು ಬಾಗುವೋಲ್ ಮರಮಣಿವುದಿಲ್ಲ" ಎಂಬಂತೆ ಬೇಕಾದ ರೀತಿಯಲ್ಲಿ ತಿದ್ದಿಕೊಳ್ಳಲು ಅನುಕೂಲವಾದ ಬಾಲ್ಯಾವಸ್ಥೆಯ ಶಿಕ್ಷಣದ ಭಾರವನ್ನು ದಾರಿದ್ರ್ಯಗ್ರಸ್ತನಾಗಿ ಸದಾಸರ್ವದಾ ಸಾಲಗಾರರ ಆಗಮನವನ್ನು ಎದುರು ನೋಡುತ್ತಿರುವ ಬಡ ಉಪಾಧ್ಯಾಯನ ಮೇಲೆ ವಹಿಸಿದರೆ ಆ ಭಾರವನ್ನು ಸ್ವಸ್ಥಚಿತ್ತನಾಗಿ ಆತನು ಹೊರಲಾಪನೆ? ಈ ಸಾಲಪತ್ರಗಳಲ್ಲಿ ಒಂದಾದರೂ ಶಾಲಾ ಸಾಹಿತ್ಯಗಳನ್ನು ತರಿಸುವ ಬಗ್ಗೆ ಅಥವಾ ಕಟ್ಟೋಣಗಳ ದುರುಸ್ತಿಯ ಬಗ್ಗೆ ಪಡಕೊಳ್ಳಲಿಲ್ಲವೆಂಬುದು ವಾಚಕರ ಗೋಚರಕ್ಕೆ ಬರಬಹುದು. ಇದಕ್ಕೆ ಕಾರಣವನ್ನು ಮ। ರಾ। ಮಂಗೇಶರಾಯರು ಸೂಚಿಸಿದ್ದಾರೆ. ಎಲಿಮೆಂಟರಿ ಶಾಲೆಗಳ ಕಡೆಯಿಂದ ಬಹುಮಾನಪಟ್ಟ ಗವರ್ನರ್ ದೊರೆಗಳಿಗೆ ಮಾಡಿಕೊಂಡ ಮನವಿಯಲ್ಲಿ ಒಂದು ಕಾರಣವು ಗೊತ್ತಾಗುತ್ತದೆಂದು ಅವರು ಹೇಳುತ್ತಾರೆ. "ರೂಪಾಯಿ ೩೦೦ ಯಾ ೪೦೦ ರಷ್ಟು ಕಡಿಮೆ ಖರ್ಚಿನ ಕಟ್ಟೋಣಗಳ ನಕ್ಷೆ ಮತ್ತು ಅಂದಾಜುಪಟ್ಟಿಯನ್ನು ಇಂಜಿನಿಯರ್ ಇಲಾಖೆಯವರಿಂದ ತಯಾರಿಸಬೇಕೆಂದು ಗ್ರೇಂಟ್ ಇನ್ ಎಯ್ಡ್ ಕೋಡಿನಲ್ಲಿ ನಿರ್ಬಂಧವಿದೆ. ಇಂತಹ ಇಂಜಿನಿಯರ್ ಇಲಾಖೆಯ ಉದ್ಯೋಗಸ್ಥರ ಸಹಾಯವನ್ನು ಹೊಂದುವುದು ದೂರ ದೂರ ವಾಸವಾಗಿರುವ ಮತ್ತು ದ್ರವ್ಯಾನುಕೂಲವು ಸಂಕೋಚವಾಗಿರುವ ಬಡಹಳ್ಳಿ ಉಪಾಧ್ಯಾಯರಿಗೆ ಸಾಧ್ಯವಲ್ಲ. ಇದಲ್ಲದೆ ಈ ರೀತಿಯಲ್ಲಿ ನಷ್ಟಕಷ್ಟಗಳಿಂದ ತಯಾರಿಸಿದ ನಕ್ಷೆ ಮತ್ತು ಅಂದಾಜು ಪಟ್ಟಿಗಳಿಗೆ ಎಕ್ಸಿಕ್ಯೂಟಿವ್ ಇಂಜಿನಿಯರರ ಮಂಜುರಾತಿ ದೊರೆಯುವುದಿಲ್ಲ; ಏತಕ್ಕೆಂದರೆ ಹೇರಳ ಖರ್ಚು ಮುಟ್ಟಿಸಿ ಸರಕಾರದವರು ಕಟ್ಟಿಸುವ ಕಟ್ಟೋಣಗಳಷ್ಟು ಬಲವುಳ್ಳದ್ದಾಗಿ ಈ ಹಳ್ಳಿ ಶಾಲೆಯ ಕಟ್ಟೋಣಗಳ ಸಾಮುಗ್ರಿಗಳು ಇದ್ದಿರಲಾರವು. ಆದ್ದರಿಂದ ಅವು ಮಂಜೂರಾಗುವುದಿಲ್ಲ" ಎಂಬುದು ಆ ಮನವಿಯಿಂದ ತಿಳಿದುಬರುತ್ತದೆ. ಹಳ್ಳಿಯ ಶಾಲೆಗಳಿಗೆ ಅಷ್ಟು ಬಲವಾದ ಸಾಮುಗ್ರಿಗಳು ಅಗತ್ಯವೋ ಎಂಬುದನ್ನು ಹಳ್ಳಿಯಲ್ಲಿ ಆಗಾಗ ಸಂಚಾರ ಮಾಡುವವರು ತಿಳಿಯಬಹುದು. ಇಲ್ಲಿ ಹಳ್ಳಿಗಳಲ್ಲಿ ಮನೆಗಳು ಒಕ್ಕೊತ್ತಾಗಿಯೂ ಒಂದೇ ತಾವಿನಲ್ಲಿಯೂ ಇರದೆ, ಅಲ್ಲಲ್ಲಿ ಹರಡಿಕೊಂಡಿರುವುವು. ಕೆಲವು ಹಳ್ಳಿಗಳಲ್ಲಿ ಒಂದೇ ತಾವಿನಲ್ಲಿ ಸರಿಯಾಗಿ ೧೦ ವರ್ಷಗಳ ವರೆಗೆ ಶಾಲೆ ನಡಿಯುವುದಿಲ್ಲ. ಒಂದು ಕಡೆಯಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾದೊಡನೆ ಬಡ ಉಪಾಧ್ಯಾಯನು ಉತ್ಸವ ಕಾಲಗಳಲ್ಲಿ ತಂದು ನೆಟ್ಟ "ಸುತ್ತಿನ ತೊಟ್ಟಿಲಿನಂತೆ" ಆ ಹಳೆ ಶಾಲೆ ಮನೆಯ ಸಾಮಾನುಗಳನ್ನು ಕಿತ್ತು ಇನ್ನೊಂದು ಮೂಲೆಗೆ ಶಾಲೆಯನ್ನು ಕಟ್ಟಲಾರಂಭಿಸುವನು. ಇಂಥ ಸಂದರ್ಭಗಳಲ್ಲಿ ಸರಕಾರಿ ದ್ರವ್ಯಾನುಕೂಲವು ಅವನ ಮತ್ತು ಹಳ್ಳಿಯ ಸ್ಥಿತಿಗತಿಗೆ ಅನುಸಾರವಾಗಿಯೇ ಇರಬೇಕಲ್ಲದೆ, ಸರಕಾರದವರು ರೂಪಾಯಿ ೧೫೦೦ರಿಂದ ೨೦೦೦ರ ವರೆಗಿನ ಖರ್ಚು ಮುಟ್ಟಿಸಿ ಅಂಥಾ ಕಟ್ಟೋಣಗಳನ್ನು ಕಟ್ಟಿಸಿದರೆ ಪ್ರಯೋಜನವುಂಟೇ? ಈ ಸಂಗತಿಯನ್ನು ಸರಕಾರದವರು ಲಕ್ಷ್ಯಕ್ಕೆ ತರಬೇಕಾಗಿ ನಾವೂ ವಿಜ್ಞಾಪಿಸಿಕೊಳ್ಳುತ್ತೇವೆ.

ಈಚೆಗೆ ಸರಕಾರದವರು ಹಳ್ಳಿಪಳ್ಳಿಗಳಲ್ಲಿಯೂ ಬೋರ್ಡು ಶಾಲೆಗಳನ್ನು ಏರ್ಪಡಿಸುವುದರಿಂದ ಬಡತನದಿಂದ ನರಳುವ ಉಪಾಧ್ಯಾಯರಲ್ಲಿ ಅನೇಕರು ಖಾಸಗಿ ಶಾಲೆಗಳಿಂದ ಬೋರ್ಡು ಶಾಲೆಗಳಿಗೆ ವರ್ಗಾಯಿಸಲ್ಪಟ್ಟರು. ಅವರಿಗೆ ಸಂಬಳವನ್ನೂ ಕೆಪಿಟೇಶನ್ ಗ್ರೇಂಟನ್ನೂ ಈಚೆಗೆ ಹೆಚ್ಚಿಸಿದ ಕಾರಣ ಅವರ ಸ್ಥಿತಿಯು ಸ್ವಲ್ಪ ಮಟ್ಟಿಗೆ ಸುಧಾರಣೆಗೆ ಬಂದುದನ್ನು ಕಂಡು, ಬಡತನದಿಂದ ಬೆಂದು ಹೋದ ಉಪಾಧ್ಯಾಯರಲ್ಲಿ ಅನೇಕರು ಹೊಸ ಬೋರ್ಡು ಶಾಲೆಗಳೆಂಬ ವರ್ಷಾಕಾಲದ ಆಗಮನವನ್ನು ನಿರೀಕ್ಷಿಸಿ ಗೋಣನ್ನು ಎತ್ತಿ ಎತ್ತಿ ಎದುರುನೋಡುವ ಚಾದಗೆಗಳಂತಿದ್ದಾರೆ. ಹೀಗಾಗಿ ಯಾವ ಖಾಸಗಿ ಉಪಾಧ್ಯಾಯರಿಗೆ ತಕ್ಕ ಮಟ್ಟಿಗೆ ದ್ರವ್ಯಾನುಕೂಲವನ್ನು ಒದಗಿಸಿಕೊಡುವುದು ಈ ಕಾಸರಗೋಡು ಸಂಘದ ಸದುದ್ದೇಶಗಳಲ್ಲಿ ಒಂದಾಗಿತ್ತೊ, ಅಂಥವರಲ್ಲಿ ಕೆಲವರು ಬೋರ್ಡು ಶಾಲೆಗಳಿಗೆ ದಾಖಲಾದ ಕಾರಣ, ಈ ಸಂಘದಲ್ಲಿ ಹೆಚ್ಚಿನ ಮಂದಿ ಬೋರ್ಡು ಶಾಲಾ ಉಪಾಧ್ಯಾಯರೇ ಇರುತ್ತಾರೆಂದು ಮ। ರಾ। ಮಂಗೇಶರಾಯರು ಹೇಳುತ್ತಾರೆ. ಹೀಗೆ ಖಾಸಗಿ ಶಾಲಾ ಉಪಾಧ್ಯಾಯರ ಪೈಕಿ ಮೆಂಬರರಾದ ೧೮ ಮಂದಿಯಲ್ಲಿ ಒಬ್ಬರೂ ಕಟ್ಟೋಣದ ನಿಮಿತ್ತವಾಗಲೀ ಶಾಲಾ ಸಾಹಿತ್ಯದಗೋಸ್ಕರವಾಗಲೀ ಸಾಲ ಪಡಕೊಳ್ಳದೆ ಇರುವರೆಂದು ಅವರ ಪತ್ರದಿಂದ ತಿಳಿಯುತ್ತೇವೆ.

ಈ ಸಹಕಾರದಿಂದ ಉಪಾಧ್ಯಾಯರಲ್ಲಿ ಕಂಡು ಬರಬೇಕಾದ ಮಿತವ್ಯಯವು ಇನ್ನೂ ತಲೆದೋರಲಿಲ್ಲವೆಂದು ಮ। ರಾ। ಮಂಗೇಶರಾಯರು ವಿಷಾದಿಸುತ್ತಾರೆ. ಏತಕ್ಕೆಂದರೆ ಈ ವರೆಗೆ ಒಬ್ಬರೇ ೫೧ ರೂಪಾಯಿ ಉಪಾಧ್ಯಾಯರಿಂದ ಠೇವಣಾತಿಯಾಗಿ ಇಡಲ್ಪಟ್ಟಿದೆಯಂತೆ. ಒಂದೆರಡು ಕಡೆಯಲ್ಲಿ ಶಾಲಾ ಉಪಾಧ್ಯಾಯರು ಪರಸ್ಪರ ಸಹಾಯ ಸಂಘಗಳ ಸೆಕ್ರೆಟರಿಯಾಗಿ ಏರ್ಪಟ್ಟಿದ್ದರೂ, ಈ ಸಂಘಕ್ಕೆ ಸೇರಿದ ಉಪಾಧ್ಯಾಯರ ಮೂಲಕವಾಗಿ ಪಸರಿಸಬೇಕಾದ ಸಹಕಾರ ಜ್ಞಾನವು ಇನ್ನೂ ಹಳ್ಳಿಪಳ್ಳಿಗಳಲ್ಲಿ ಹರಡುವುದಕ್ಕೆ ಅವಕಾಶ ದೊರೆಯಲಿಲ್ಲವೆಂದು ಅವರ ಅಭಿಪ್ರಾಯ. ಸಂಘವು ಸ್ಥಾಪನೆಯಾಗಿ ಹೆಚ್ಚು ಕಾಲವಾಗದ್ದರಿಂದ ಇಷ್ಟರೊಳಗೆನೇ ನಿರಾಶೆಯಾಗಲು ಸಾಧ್ಯವಿಲ್ಲ. ಉಪಾಧ್ಯಾಯರ ಸ್ಥಿತಿಯು ದಿನೇ ದಿನೇ ವೃದ್ಧಿಯಾಗುತ್ತಾ ಬಂದಲ್ಲಿ ಮತ್ತು ಸಹಕಾರದ ಮೂಲತತ್ವಗಳನ್ನು ಅವರು ಚೆನ್ನಾಗಿ ತಿಳಿಯುತ್ತ ಬಂದಲ್ಲಿ ಅವರ ಮೂಲಕ ಈ ಸಹಕಾರವು ಪ್ರಚಾರಕ್ಕೆ ಬರಲೂ ಬಹುದು. ಮತ್ತು ಆದರಿಂದ ಉಪಾಧ್ಯಾಯರನ್ನು "ಮಾಷ್ಟ" ಎಂದು ತುಚ್ಛಿಕಾರದಿಂದ ಕರೆದು ಅವರನ್ನು ತೃಣೀಕರಿಸುವ ಮೂಢಮತಿಗಳು ಅವರ ಉಪಕಾರವನ್ನು ಸ್ಮರಿಸಿ ಅವರಿಗೆ ಗೌರವ ಕೊಡುವರೆಂದು ನಮಗೆ ತುಂಬಾ ಭರವಸೆಯಿದೆ.

ಈ ಕಾಸರಗೋಡು ಸಂಘದ ಇನ್ನೊಂದು ಕೊರತೆಯು ಸಾಧಾರಣವಾಗಿ ಇತರ ಪರಸ್ಪರ ಸಹಾಯ ಸಂಘಗಳಲ್ಲಿ ಈಚೆಗೆ ಕಂಡು ಬಂದಂಥಾದ್ದೆ. ಕ್ಲಪ್ತಸಮಯದಲ್ಲಿ ಸಾಲಪರಿಹರಿಸದವರ ಮೇಲೆ ಹೊರಿಸಿದ ಜುರುಮಾನೆಯ ಮೊಬಲಗು ಕಿಂಚಿತ್ತಾದರೂ ಕೆಲವರು ನಿರ್ಣಯಿಸಿದ ಕಾಲಕ್ಕೆ ಋಣವಿಮೋಚನೆ ಹೊಂದುವುದಿಲ್ಲವೆಂದು ಸ್ಪಷ್ಟವಾಗುತ್ತಿದೆ. ದೂರವಾದ ಹಳ್ಳಿಗಳಲ್ಲಿರುವ ಬೋರ್ಡು ಶಾಲಾ ಉಪಾಧ್ಯಾಯರಿಗೆ ತಕ್ಕ ಕಾಲದಲ್ಲಿ ಸಂಬಳ ಬಟ್ವಾಡೆಯಾಗುವುದಕ್ಕೆ ಅನಾನುಕೂಲವಾಗಿ ಕೆಲವರು ಈ ರೀತಿಯಲ್ಲಿ ಹಣ ಬಾಕಿ ಮಾಡಿಕೊಂಡರೂ ಅಂಥ ದುರಭ್ಯಾಸವು ಬೇರೂರದಂತೆ ಆದರ ಹುಟ್ಟಣಗಿಸಿ ಬಿಡುವುದೇ ಲೇಸೆಂದು ಮ। ರಾ। ಮಂಗೇಶರಾಯರು ಸೂಚಿಸುತ್ತಾರೆ. ಇದನ್ನು ಸಂಘದವರು ಗಮನಕೊಡುವುದು ಅತ್ಯಾವಶ್ಯಕವಾಗಿದೆ. ಯಾತಕ್ಕೆಂದರೆ ತಾನೇ ಕಾಲ ತಪ್ಪುವ ಉಪಾಧ್ಯಾಯನು [illegible] ಹೇಗೆ ಜಾರಿಗೆ ತರಲಾಪನು?

ಈ ವರೆಗೆ ಈ ಕಾನೆರಗೋಡು ಸಂಘದ ಕಾರ್ಯನಿರ್ವಾಹವನ್ನು ಪರಿಶೀಲಿಸಿದರೆ, ಅನೇಕ ಉಪಾಧ್ಯಾಯರು ಈ ಸಂಘವು ಸುಲಭ ಕ್ರಯಕ್ಕೆ ಪುಸ್ತಕ ವಗೈರೆ ಶಾಲಾ ಸಾಮಗ್ರಿಗಳನ್ನ ವ್ಯಾಪಾರಮಾಡುವ ಪುಸ್ತಕಾಲಯವೆಂತಲೂ, ಸುಲಭ ಒಡ್ಡಿಯಿಂದ ಅವರಿಗೆ ಸಾಲಕೊಡುವ ಒಂದು ಬೇಂಕು ಎಂಬುದಾಗಿಯೂ ಮಾತ್ರವೇ ತಿಳಿಯುವಂತೆ ಕಂಡವರ ಮನಸ್ಸಿಗೆ ಹೊಳೆಯಬಹುದು. ಈ ಸಂಘವು ಇಷ್ಟೆ ಕೆಲಸವನ್ನು ಮಾಡುವುದಾಗಿದ್ದರೆ ಇದಕ್ಕಾಗಿ ಬೇರೆ ಸಂಘಗಳಿರುವುದರಿಂದ ಇದನ್ನು ಬೇಗನೇ ಮುಚ್ಚಿಬಿಡುವುದು ಲೇಸು. ಹಾಗಿಲ್ಲವಾದ್ದರೆ ಯಾವ ಸದುದ್ದೇಶಗಳನ್ನು ಮುಂದಿಟ್ಟುಕೊಂಡು ಅದು ಜನ್ಮವೆತ್ತಿತೊ ಆ ಉದ್ದೇಶಗಳನ್ನು ಬೇಗನೇ ಕೈಕೊಳ್ಳುವುದಕ್ಕೆ ಅದನ್ನು ಮಾರ್ಪಡಿಸುವುದು ಅಗತ್ಯವೆಂದು ಮ| ರಾ| ಮಂಗೇಶರಾಯರು ದೃಢೀಕರಿಸಿರುತ್ತಾರೆ. ಸಂಕ್ಷೇಪವಾಗಿ ಆ ಉದ್ದೇಶವು ಯಾವುದೆಂದರೆ—ಬಾಲಶಿಕ್ಷಣದ ತನ್ನ ಜವಾಬ್ದಾರಿಯನ್ನು ಉಪಾಧ್ಯಾಯನು ನಿರಾಲಸ್ಯದಿಂದಲೂ ಯುಕ್ತಸನ್ನಾಹದಿಂದಲೂ ನಿರ್ವಹಿಸುವಂತೆ ಉಪಾಧ್ಯಾಯರ ಸಭೆಗಳೆಂಬ 'ಎಂಜಿನ'ನ್ನು ಸಹಕಾರದ 'ರೈಲು'ಗಳ ಮೇಲಿರಿಸಿ, ಆ ಯಂತ್ರವು ತೊಡಕಿಲ್ಲದೆ ಮುಂದೆ ಸಾಗುವುದಕ್ಕೆ ಪ್ರಯತ್ನಿಸುವುದೇ ಎಂದು ಮ| ರಾ| ಮಂಗೇಶರಾಯರು ಸೂಚಿಸುತ್ತಾರೆ.

ಇದಕ್ಕಾಗಿ ಪೂರ್ವಾಪರಗಳನ್ನು ಆಲೋಚಿಸಿ ಅವರು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಅವನ್ನು ಇಂತಹ ಸಂಘಗಳನ್ನು ಸ್ಥಾಪಿಸಲುಳ್ಳವರು ಆಲೋಚನೆಗೆ ತರಬೇಕೆಂದು ನನ್ನ ಅಪೇಕ್ಷೆ.

ಪ್ರತಿಯೊಂದು ಶಾಲೆಯಲ್ಲಿಯೂ ಪುಸ್ತಕಾಲಯವನ್ನೂ ವಸ್ತುಸಂಗ್ರಹಾಲಯವನ್ನೂ ಏರ್ಪಡಿಸುವುದು ಈಗಿನ ಸ್ಥಿತಿಯಲ್ಲಿ ಕೆಲವು ವರ್ಷಗಳ ವರೆಗೆ ಸಾಧ್ಯವಲ್ಲ. ಸಂಘದ ದ್ರವ್ಯಾನುಕೂಲವು ಅಂಥಾ ಧೈರ್ಯ ಕೊಡಲಾರದು. ಆದರೆ ಪ್ರಜಾಭಿವೃದ್ಧಿಯಲ್ಲಿ ಆಕಾಂಕ್ಷಿತರಾದ ಸರಕಾರದವರು ಸಂದಿಗ್ಧ ಸಮಯದಲ್ಲಿ ಆದರ ಕೂಡು ಗೈಯನ್ನು ಮುಂದ ಚಾಚಬಹುದು. ಗ್ರೇಂಟ್ ಇನ್ ಏಡ್ ಕೋಡಿನ ಮೇರೆಗೆ ಶಾಲೆಗಳಿಗೋಸ್ಕರ ಒದಗಿಸುವ ಉಪಕರಣಗಳ ಅರ್ಧ ಖರ್ಚನ್ನು ಸರಕಾರದವರು ಈಗ ಕೊಡುತ್ತಲಿದ್ದಾರೆ. ಹಾಗೆಯೇ ಇಂತಹ ಉಪಾಧ್ಯಾಯರ ಸಂಘಗಳಿಗೆ ಒಂದಿಷ್ಟು ಧನಸಹಾಯವನ್ನು ವರ್ಷಂಪ್ರತಿ ಎಡೆಬಿಡದೆ ಕೊಡುತ್ತ ಬಂದರೆ ಸರಕಾರಿ ಬೆಂಬಲವು ಇರುವ ಒಂದೇ ಕಾರಣದಿಂದ ಈ ಸಂಘಗಳು ಸ್ಥಿರವಾಗಿ ನೆಲೆಗೊಳ್ಳುವುದಕ್ಕೂ, ಜನೋಪಕಾರಿಯಾಗಿರಲಿಕ್ಕೂ ಸುಲಭಸಾಧ್ಯವಾಗಿದೆ. ಈ ಸಂಘಗಳೂ ಸಾಮಾನ್ಯವಾಗಿ ಇನ್ಸ್‌ಪೆಕ್ಟಿಂಗ್ ಆಫೀಸರುಗಳಿಂದ ನೆರೆಯಿಸಲ್ಪಡುವ ಸಭೆಗಳೂ ಒಂದೇಯಾಗುವಂತೆ ವಿದ್ಯಾಇಲಾಖೆಯವರ ಸಹಾನುಭೂತಿ ದೊರೆತರೆ, ಮತ್ತು ಸಾಮಾನ್ಯವಾಗಿ ಉಪಾಧ್ಯಾಯರ ಸಭೆಗಳಲ್ಲಿ ಆಗುವ 'ಲೆಕ್ಚರು'ಗಳೂ ಮಾದರಿ ಪಾಠಶಾಲೆಗಳೂ, ಉಪನ್ಯಾಸಗಳೂ ಈ ಸಂಘಗಳ ಸಭೆಗಳಲ್ಲಿಯೆ ಆಗಿಬಿಟ್ಟರೆ ಕೆಲಸವು ಬಹು ಅಚ್ಚುಕಟ್ಟಾಗುವುದೆಂದು ಮ| ರಾ| ಮಂಗೇಶರಾಯರ ಸೂಚನೆ. ಇದಲ್ಲದೆ ಹಲವು ಉಪಾಧ್ಯಾಯರು ತಮ್ಮ ಸಭೆಗಳಿಗೆ ದೂರದಿಂದ ಬರುವಾಗ ತಮ್ಮ ಸುಕ್ಕಬಿದ್ದ ಚೀಲದಿಂದ ಪ್ರಯಾಣದ ಖರ್ಚು, ಊಟ ಉಪಹಾರಗಳ ಖರ್ಚು ಸಹಿಸಬೇಕಾದುದರಿಂದ ಈ ಸಂಘಗಳ ಮುನಾಫೆಯಿಂದ ಒಂದಂಶವನ್ನು ವಿಂಗಡಿಸಿ ಅವರಿಗೆ ಸ್ವಲ್ಪ ಪ್ರಯಾಣದ ಭತ್ತೆಯನ್ನು ಕೊಡಿಸಬೇಕಾಗಿಯೂ ಅವರು ಕಂಠೋಕ್ತವಾಗಿ ಹೇಳುತ್ತಾರೆ. ಮತ್ತು ಬಾಸೆಲ್ ಮಿಶನ್ ಶಾಲೆಗಳ ಉಪಾಧ್ಯಾಯರು ವರ್ಷಕ್ಕೊಂದು ಸಲ ಈ ರೀತಿಯಾಗಿ ಅವರ ಮೇಲಾಧಿಕಾರಿಗಳ ಅನುಮತಿಯಿಂದ ಸಭೆಸೇರುವಾಗ ಅವರಿಗೆ ಪ್ರಯಾಣದ ಭತ್ತೆ ಕೊಡಲ್ಪಡುತ್ತದೆಯಂತೆ.

ಆಗಾಗ ಉಪಾಧ್ಯಾಯರ 'ಮೀಟಿಂಗ್'ಗಳಲ್ಲಿ ಇನ್ಸ್‌ಪೆಕ್ಟಿಂಗ್ ಆಫೀಸರುಗಳು ಹೇಳಿದ ಸೂಚನೆಗಳನ್ನೂ ಅನುಭವವನ್ನೂ ಉಪಾಧ್ಯಾಯರು ಮಂದಟ್ಟುಮಾಡಿಕೊಂಡರೆ ಮಾತ್ರವೇ ಅಂಥಾ 'ಮೀಟಿಂಗ್'ಗಳ ಉದ್ದೇಶವು ನೆರವೇರಿದಂತಾಗುವುದು. ಆದರೆ ಉಪಾಧ್ಯಾಯರು ತಮ್ಮಲ್ಲಿರುವ ಜ್ಞಾನವನ್ನು ವೃದ್ಧಿಮಾಡಿಕೊಳ್ಳಲಿಕ್ಕೂ ತಮ್ಮ ಕೆಲಸದಲ್ಲಿ ಹೆಚ್ಚಿನ ಆಸಕ್ತಿ ತೋರಿಸುವುದಕ್ಕೂ ಈ ವರೆಗೆ ವಿಶೇಷ ಉತ್ತೇಜನವಿಲ್ಲವೆಂದು ಮ| ರಾ| ಮಂಗೇಶರಾಯರು ತಿಳಿದು ಇನ್ನೊಂದು ಉಪಾಯವನ್ನು ತೋರಿಸಿ ಕೊಡುತ್ತಾರೆ. ಆಗಾಗ ಉಪಾಧ್ಯಾಯರಿಗೆ ಪರೀಕ್ಷೆ, ಅಂಥಾ ಪರೀಕ್ಷೆಯಲ್ಲಿ ಚೆನ್ನಾಗಿ ಉತ್ತೀರ್ಣರಾದವರಿಗೆ ನಗದಿ ಹಣದ ವೇತನಗಳು 'ಇನಾಂ'ಗಳು ದೊರೆತರೆ ಇದರಿಂದ ಉಪಾಧ್ಯಾಯರಲ್ಲಿ ಉತ್ಸಾಹವು ಅಂಕುರಿಸುವುದೆಂದು ಅವರು ತಿಳಿಯುತ್ತಾರೆ. ಈ ಪರೀಕ್ಷೆಗಳ ಖರ್ಚಿಗೆ ಸರಕಾರದವರು ಸ್ವಲ್ಪ ದ್ರವ್ಯಸಹಾಯ ಮಾಡಿದ್ದಲ್ಲಿ ಉಪಾಧ್ಯಾಯರ ಬಡ್ತಿಯನ್ನು ಕೊಡಬೇಕಾದಾಗ ಈ 'ಇನಾಂ'ಗಳನ್ನು ಗಮನಕ್ಕೆ ತಂದಲ್ಲಿ ಇಂತಹ ಉಪಾಧ್ಯಾಯರ ಸಂಘಗಳು ಬಹುಬೇಗನೆ ಊರ್ಜಿತಕ್ಕೆ ಬರುವುವೆಂದು ಅವರ ಮತ. ಈ ಪತ್ರವನ್ನು ಪರಿಷತ್ತಿನ ಸಭೆಯ ಮುಂದೆ ಮ| ರಾ| ಮಂಗೇಶರಾಯರು ಗಂಭೀರ ಸ್ವರದಿಂದಲೂ ನಿರ್ಭೀತಿತ್ವದಿಂದಲೂ ದೇಶೋನ್ನತಿಯ ಅಂತರಿಕವಾದ ಪ್ರೇಮದಿಂದ ಪ್ರೇರಿತರಾಗಿ ಓದಿದ ಪತ್ರವನ್ನು ಅಧ್ಯಕ್ಷರಾಗಿದ್ದ ಬಹುಮಾನಪಟ್ಟ ಮಿ| ಕಾಡ್ರ್ಯೂ ಸಾಹೇಬರೂ ಜಿಲ್ಲಾ ಕಲೆಕ್ಟರರಾಗಿರುವ ಮಿ| ಕಾಚ್‌ಮೆನ್ ಸಾಹೇಬರೂ ಮನಗೊಟ್ಟು ಕೇಳಿ ಈ ಪತ್ರದ ಭಾವವನ್ನು ಹೀರಿಕೊಂಡಂತೆ ನಮಗೆ ಕಂಡುಬಂದುದರಿಂದ ಸರಕಾರದವರು ಇಂತಹ ಸಂಸ್ಥೆಗಳನ್ನು ಕೈಲಾದಷ್ಟು ಉತ್ತೇಜಿಸುವರೆಂತಲೂ, ವಿದ್ಯಾಇಲಾಖೆಯವರೂ ಈ ಕಡೆಗೆ ತಮ್ಮ ಪೂರ್ಣ ಸಹಾನುಭೂತಿಯನ್ನು ಕೊಡುವರೆಂತಲೂ ನಾವು ನಂಬುತ್ತೇವೆ.

~~~~~~~~

ಶ್ರೀ ಶಿವಭಕ್ತಿಯೋಗ ಪ್ರಾರ್ಥನಾ ಸಂಘದ ನಾಲ್ಕನೇ ವರ್ಷೋತ್ಸವವು.

~~~~~~~~

ಇದೇ ಕಳೆದ ತಾರೀಕು ೯ನೇ ಆದಿತ್ಯವಾರ ಶ್ರೀಗೋಕರ್ಣನಾಥ ದೇವಸ್ಥಾನದಲ್ಲಿ ನಾಲ್ಕನೇ ವರ್ಷೋತ್ಸವವು ಸಂಭ್ರಮದಿಂದ ಜರಗಿಸಲ್ಪಟ್ಟಿತು. ಆಮಂತ್ರಣದ ಮೇರೆಗೆ ಪಟ್ಟಣದ ಅನೇಕ ಗೃಹಸ್ಥರೂ, ಜಾತಿಬಾಂಧವರೂ, ಸದಸ್ಯರೂ, ಸಾಯಂಕಾಲ ಘಂಟೆ ೫||ಗೆ ಸರಿಯಾಗಿ ನೆರೆದುಬಂದಿದ್ದರು. ಕಾರ್ಯಾರಂಭದಲ್ಲಿ ದೇವತಾಪ್ರಾರ್ಥನೆ ನಡೆದು, ಸಭಿಕರ ವಿಜ್ಞಾಪನೆ ಮೇರೆಗೆ ಬಹುಮಾನಪಟ್ಟ ಹೈಕೋರ್ಟು ವಕೀಲ ಉ. ಪಾ. ಕೃಷ್ಣಭಟ್ಟರು ಸಭಾಧ್ಯಕ್ಷಸ್ಥಾನವನ್ನಲಂಕರಿಸಲು ಸಂಘದ ೪ನೇ ವರ್ಷದ ವರದಿಯನ್ನು ಓದಲಾಯಿತು. ಸಭಾಧ್ಯಕ್ಷರು "ಶ್ರೀಪರಮೇಶ್ವರನಲ್ಲಿ ಭಕ್ತಿಯೂ, ವಿದ್ಯೆಯೂ, ಶ್ರೀಕ್ಷೇತ್ರಕ್ಕೆ ಸಂಬಂಧಪಟ್ಟ ಬಿಲ್ಲವರ ಸಮುದಾಯಕ್ಕೆ ಅಗತ್ಯವೆಂತ ಹಲವು ಸೂಚನೆಗಳಿಂದೊಡಗೂಡಿದ ಹೃದಯಂಗಮವಾದ ಕಾಲೋಚಿತ ಭಾಷಣವನ್ನು ಕೊಟ್ಟರು. ತದನಂತರ ಸಭಾಧ್ಯಕ್ಷರು ಸಂಘದ ಕಡೆಯಿಂದ ೧|| ಪವನು ತೂಕದ ಚಿನ್ನದ ಪದಕ ಒಂದನ್ನು ಸಂಘದ ಗಾಯನೋಪಾಧ್ಯಾಯರಾದ ರಾ| ಕೆ ಅಣ್ಣಪ್ಪನವರಿಗೆ ಉಚಿತವಾಗಿ ಕೊಟ್ಟರು.

ಸಂಘದ ತರುಣರ ಮೇಲೆ ಪ್ರೀತಿಯನ್ನಿಟ್ಟು ಗಣಪತಿ ಸೆಕೆಂಡರಿ ಶಾಲೆಯ ಕರ್ನಾಟಕ ಪಂಡಿತರಾದ ರಾ| ಕೆ ಬಿ ರಾಮಕೃಷ್ಣಯ್ಯನವರು ರಚಿಸಿಕೊಟ್ಟ "ಸಾವಿತ್ರೀದೇವಿಯ" ಚರಿತ್ರೆಯನ್ನು ಶ್ಯಾಮ ಘಂಟೆ ೭ರಿಂದ ನಾಟಕರೂಪವಾಗಿ ಸಭಾಜನರಿಗೆ ಮನೋರಂಜಕವಾಗುವಂತೆ ಅಭಿನಯಿಸಲ್ಪಟ್ಟಿತು.

ವರದಿಯ ಸಾರಾಂಶ.

ಬ್ರಹ್ಮಶ್ರೀನಾರಾಯಣ ಗುರುಸ್ವಾಮಿಗಳ ಶ್ರೀ ಗುರುಗಳ ಅನುಜ್ಞೆ ಮೇರೆಗೆ ನಮ್ಮ ಸಮುದಾಯದ ಯುವಕರ ವ ವಿದ್ಯಾರ್ಥಿಗಳ ಉದ್ಧಾರದ ನಿಮಿತ್ತ ಈ ಸಂಘವು ಕಳೆದ ೧೯೧೦ನೇ ಇಸವಿಯಲ್ಲಿ ಇಲ್ಲಿ ಸ್ಥಾಪಿಸೋಣಾಯಿತು. ಈ ಸಂಘದಲ್ಲಿ ಪ್ರಾರ್ಥನಾ ಕ್ರಮಗಳು ಮಾತ್ರವಲ್ಲ, ಸಂಘದ ಅಭಿವೃದ್ಧ್ಯರ್ಥವಾಗಿ ಅಗತ್ಯವಿರುವ ಅನೇಕ ಏರ್ಪಾಡುಗಳನ್ನು ಮಾಡಲು ಸದಸ್ಯರೆಲ್ಲರೂ ಆಸಕ್ತರಾಗಿ ಹಿಂದೂ ಧರ್ಮಕ್ಕೆ ಒಳಪಟ್ಟು ಸುಧಾರಣಾಪದ್ಧತಿಗನುಸಾರವಾಗಿ ಪ್ರತಿ ಆದಿತ್ಯವಾರ ಪೂರ್ವಾಹ್ನ ಘಂಟೆ ೮ಯಿಂದ ೯|| ತನಕ ತಪ್ಪದೆ ಕೂಡಿ ಕೀರ್ತನೆ, ಸನಾತನ ಧರ್ಮದ ಕುರಿತು ಉಪನ್ಯಾಸ ವಗೈರೆ ಕೊಟ್ಟು ಸಮುದಾಯದ ಮುಂದಿನ ಅಭಿವೃದ್ಧಿಗೆ ಅಗತ್ಯವಿರುವ ಎಲ್ಲಾ ಸಂಗತಿಗಳನ್ನು ಚರ್ಚಿಸ ಮಹುದು. ಕಳೆದ ವಾರ್ಷಿಕೋತ್ಸವದ ಕಾಲದಲ್ಲಿದ್ದ ಸದಸ್ಯರ ಸಂಖ್ಯೆಯು ೮೭ ಆಗಿತ್ತು. ಪ್ರಕೃತ ಸಂಘದಲ್ಲಿ ೬೬ ಸದಸ್ಯರೂ ೪೧ ವಿದ್ಯಾರ್ಥಿಗಳು ಕೂಡಿ ೧೦೭ ಆಗಿರುತ್ತದೆ.

ಕಳೆದ ೧೯೧೧ನೇ ಇಸವಿ ಮಾರ್ಚ ತಾರೀಕು ೮ರಲ್ಲು ಉದಾರಗುಣವಂತರಾದ ದೇವಸ್ಥಾನದ ಅಧ್ಯಕ್ಷ ರಾ| ಯಚ್ ಕೊರಗಪ್ಪನವರನ್ನೂ, ಉಪಾಧ್ಯಕ್ಷ ರಾ| ಕೆ ವಿತಪ್ಪನವರನ್ನೂ ಈ ಸಂಘದ ಪೋಷಕರಾಗಿ ಆರಿಸೋಣಾಯಿತು. ಸಂಘದ ಜಾಲಪಾಲನಾದಿ ಕಾರ್ಯಗಳನ್ನು ನಡಿಸುವರೆ ತಕ್ಕ ಸೂತ್ರಗಳನ್ನು ಏರ್ಪಡಿಸಿ, ಆ ಸೂತ್ರಗಳಿಗನುಸಾರವಾಗಿ ದೇವಸ್ಥಾನದ ಇನ್ನೊಬ್ಬ ಉಪಾಧ್ಯಕ್ಷ ಡಿ. ಪಿ. ಡಬ್ಲ್ಯು. ಕಂಟ್ರಾಕ್ಟರ್ ರಾ| ಯಂ ದೂಮಪ್ಪನವರನ್ನೂ ಈ ಸಂಘದ ಅಧ್ಯಕ್ಷರಾಗಿ ಕಳೆದ ಮೇ ತಾರೀಕು ೩ರಲ್ಲು ಆರಿಸಲ್ಪಟ್ಟಿರುತ್ತದೆ.

೧೯೧೧ನೇ ಇಸವಿಯಲ್ಲಿ ನಡಿಸಿದ ಖಾನೇಶುಮಾರಿ ಲೆಖ್ಖದಿಂದ ಇಡೀ ಜಿಲ್ಲೆಯಲ್ಲಿರುವ ನಮ್ಮ ಜಾತಿಯ ಸಂಖ್ಯೆಯು ಇತರ ಜಾತಿಯವರಿಗಿಂತ ಹೆಚ್ಚಿನದಾಗಿರುತ್ತದೆಂದು ತೋರುವದು. ನಮ್ಮ ಸಮುದಾಯದ ೧೩೭,೦೦೦ ಸಂಖ್ಯೆಯಲ್ಲಿ ಓದು ಬರಹ ಬಲ್ಲವರು ೩೫೧೭ ಮಂದಿ ಮಾತ್ರ. ಅದರಲ್ಲಿ ಇಂಗ್ಲಿಷು ಬರಹ ಬಲ್ಲವರು ೧೭೫ ಮಾತ್ರವು. ಇದರಿಂದ ನಮ್ಮ ಜಾತಿಯು ವಿದ್ಯೆಯಲ್ಲಿ ಎಷ್ಟು ಹಿಂದುಳಿದ

ರುವರೆಂಬುದು ವ್ಯಕ್ತವಾಗುವುದು. ದಯಾಳು ಸರಕಾರದಿಂದಲೂ ಬಾಸೆಲ್ ಮಿಶನರಿಗಳಿಂದಲೂ ಅನೇಕ ರಿಯಾಯತಿಗಳು ನಮಗೆ ತೋರಿಸಲ್ಪಟ್ಟರೂ ಕಾಲಾನುಚಿತವಾಗಿ ಈ ಬಡ ಸಮುದಾಯದ ಊರ್ಜಿತಾವಸ್ಥೆಯು ಅತೀ ದೂರವೇ ಇರುವದು. ಜಾತಿಯವರಲ್ಲಿ ವಿದ್ಯಾಪ್ರಸರಣೆಗಾಗಿ ಸಂಘದ ಪೋಷಕರಾದ ರಾ| ಎಚ್. ಕೊರಗಪ್ಪನವರು, ಶೆಡ್ಡೆ ಐತಪ್ಪನವರು ಮತ್ತು ಸಂಘದ ಅಧ್ಯಕ್ಷ ರಾ| ಯಂ. ದೂಮಪ್ಪನವರು ಇವರ ಉದಾರಗುಣ ಸಹಾಯದಿಂದ ಒಂದು ವಿದ್ಯಾರ್ಥಿ ವೇತನ ಫಂಡನ್ನು ಸ್ಥಾಪಿಸಲನುಕೂಲವಾಯಿತು. ಈ ಭಂಡವಾಳಕ್ಕೆ ಊರಿನ ಮ ಪರವೂರಿನ ಸದ್ಗೃಹಸ್ಥರು ಕೂಡಾ ಧನಸಹಾಯ ಮಾಡಿರುವರು ನಮ್ಮ ಜಾತಿಯ ಬಡ ಯೋಗ್ಯ ಮತ್ತು ಬುದ್ಧಿ ಚಾತುರ್ಯವುಳ್ಳ ತರುಣರಿಗೆ ವೇತನಗಳನ್ನು ಕೊಟ್ಟು ವಿದ್ಯಾಭಿವೃದ್ಧಿಯನ್ನಪೇಕ್ಷಿಸುವಂತೆ ಸ್ವಜಾತಿ ಬಾಂಧವರು ತಮ್ಮ ಬಲಗೈಯನ್ನು ಕೊಟ್ಟು ಪುಣ್ಯವನ್ನು ಸಂಪಾದಿಸಲು ಈ ಭಂಡವಾಳವನ್ನಭಿವರ್ಧಿಸಿ ತಮ್ಮ ಸಮುದಾಯದ ಉದ್ಧಾರವನ್ನು ಪೂರೈಸುವರಾಗಿ ವಿನಯದಿಂದ ಬೇಡುತ್ತೇವೆ. ಈ ಭಂಡವಾಳಕ್ಕೆ ಸಹಾಯ ಮಾಡುವದಾಗಿ ಭರವಸ ಕೊಟ್ಟು ಪಟ್ಟಿಯಲ್ಲಿ ಬರೆದ ಜುಮ್ಲಾ ಐವಜು ರೂಪಾಯಿ ೧೯೧೫ರಲ್ಲಿ ಈ ತನಕ ರೂಪಾಯಿ ೧೯೯—೮—೦ ಮಾತ್ರ ವಸೂಲಾಗಿರುತ್ತದೆ ವಸೂಲಾದ ಐವಜನ್ನು ಸಂಘದ ನಿರ್ಣಯಕ್ಕನುಸಾರವಾಗಿ ಟಪ್ಪಾಲಾಫೀಸಿನ ಸೇವಿಂಗ್ಸ್ ಬೇಂಕಿನ ಪಬ್ಲಿಕ್ ಎಕೌಂಟಿನಲ್ಲಿ ಸಂಘದ ಅಧ್ಯಕ್ಷ ಮತ್ತು ಕಾರ್ಯದರ್ಶಿಯ ಹೆಸರಲ್ಲಿ ಠೇವಣಾತಿ ಇಡೋಣಾಗಿಯದೆ. ವಸೂಲು ಐವಜಿನ ಪೈಕಿ ನಮ್ಮ ಸಂಘದ ಪೋಷಕರಲ್ಲೊಬ್ಬರಾದ ರಾ| ಎಚ್. ಕೊರಗಪ್ಪನವರು ಭಂಡವಾಳಕ್ಕೆ ಏಕಗಂಟಿನಿಂದ ಕೊಟ್ಟ ರೂಪಾಯಿ ೧೦೧ ಸೇರಿರುತ್ತದೆ.

ಶ್ರೀ ದೇವಸ್ಥಾನದ ಅಧ್ಯಕ್ಷರೂ ಸಂಘದ ಪೋಷಕರಲ್ಲೊಬ್ಬರೂ ಆದ ರಾ| ಎಚ್. ಕೊರಗಪ್ಪನವರ ಅಳಿಯ ಸಾಹುಕಾರ ರಾ| ಬಾಬುನವರು ಸಂಘದ ವಿದ್ಯಾರ್ಥಿಯಾನೆ ಉಮೇದ್ವಾರರಲ್ಲಿ ಮೂಲಪಾಠಕ ವರ್ಗದಿಂದ ಹಿಡಿದು ಇಂಟರ್‌ಮಿಡಿಯೇಟ್ ವರ್ಗದ ವರೆಗಿನ ಎಲ್ಲಾ ವರ್ಗಗಳಲ್ಲಿ ತಂತಮ್ಮ ವರ್ಷಾವಧಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವ ವಿದ್ಯಾರ್ಥಿಗಳಲ್ಲಿ ಪ್ರತಿಯೊಬ್ಬನಿಗೂ ಮೇಲಿನ ವರ್ಗದಲ್ಲಿ ಪ್ರಯೋಜನಕ್ಕೆ ಬೀಳುವ ಮುಖ್ಯ ಪುಸ್ತಕ ಒಂದನ್ನು ಉಚಿತವಾಗಿ ಕೊಡುವದೆ ವಾಗ್ದಾನ ಮಾಡಿರುವರು. ಈ ಸತ್ಪುರುಷರ ಉದಾರಭಾವನೆಯು ಶ್ಲಾಘನೀಯವಾದುದೆಂಬುದನ್ನು ತುಂಬಿದ ಹೃದಯದಿಂದ ಸಭಿಕರಿಗೆ ನಿವೇದಿಸುವೆವು. ಶ್ರೀ ಪರಮೇಶ್ವರನು ಅವರಿಗೆ ಕಲ್ಯಾಣಪರಂಪರೆಯನ್ನುಂಟುಮಾಡಲಿ. ಸಭಾಧ್ಯಕ್ಷರಿಗೂ ಸಭಿಕರಿಗೂ ಧನ್ಯವಾದಗಳನ್ನು ಹೇಳಿ ಸಭೆಯು ಮುಕ್ತಾಯವಾಯಿತು.

ಪತ್ರವ್ಯವಹಾರ.

'ತಂಪಿ'ನಿಂದ ಕೆಂಪಡರಿ ಕಂಪ ಉಂಟಾದದ್ದು ಹೇಗೆ?

(ಚಿತ್ರಪ್ರದರ್ಶನ)

ಸ್ವಾಮಿ,

ಶಿಶಿರಕಾಲ, ರಾತ್ರಿ ಬಹಳ ಸಮಯದ ವರೆಗೆ ನಿದ್ದೆ ಬಾರದು. ಮಂಗಳೂರಿನಲ್ಲಿ ಕಳ್ಳರ ಗುಲ್ಲು ವಿಶೇಷವಾಗಿ ಹೋದ್ದನ್ನು ಕಡಿಮೆ ಮಾಡಲು ಪೋಲೀಸು ಜವಾನರು ರಾತ್ರೆ ಕಾಲದಲ್ಲಿ ಎಚ್ಚರಿಕೆಯಿಂದ ತಿರುಗುತ್ತಿದ್ದಾರೆ. ರಸ್ತೆಯ ಕಿನಾರೆಯಲ್ಲಿರುವ ನಮ್ಮ ಮನೆಚಾವಡಿ ಉಪ್ಪರಿಗೆಯ ಮೇಲೆ ಕುಳಿತಿದ್ದೆನು. ವೇಗದಿಂದ ಕುದುರೆಯು ಓಡಿಹೋಗುತ್ತಿದ್ದಂತೆ ಗೊರಸುಗಳ ಶಬ್ದವು ಕೇಳಿಸಿತು. ಇದೇನೆಂತ ಕಿಟಕಿಯಿಂದ ನಿಲುಕಿ ನೋಡಲಾಗಿ ನಾಲ್ಕೈದು ಜನ ಯುವಕರನ್ನಟ್ಟಿಕೊಂಡು ಒಬ್ಬ ಪೋಲೀಸು ಜವಾನನು ಬರುತ್ತಿದ್ದದ್ದು ಕಂಡುಬಂತು. ಪೋಲೀಸು ಪೇದೆಯು ಇವರ ಬೆನ್ನು ಹಿಡಿಯುವಷ್ಟರಲ್ಲಿ ಈ ಯುವಕರಲ್ಲಿ ನಾಲ್ಕು ಜನರು ಅತ್ತಿತ್ತ ಓಣಿಗಳನ್ನುಗ್ಗಿಕೊಂಡು ಹೋಗಿದ್ದರು. ಒಬ್ಬನು ಮಾತ್ರ ಸಾಧಾರಣ ೧೭ ವರುಷ ಪ್ರಾಯದ ಯುವಕನು ಪೋಲೀಸಿನವನಿಗೆ ಸಿಕ್ಕಿದನು. ಇದೇನು ಕೌತುಕವೆಂಬುದನ್ನು ತಿಳಕೊಳ್ಳುವ ಅಂದರೆ ಮಿಣಿಮಿಣಿಯಾಗಿ ಉರಿಯುವ ಮುನ್ಸಿಪಲ್ ದೀಪಗಳ ಪ್ರಕಾಶವು ಸಾಲದೆಹೋಯಿತು. ಕಟ್ಟಕಡೆಗೆ ಒಂದು ಕೈದೀಪವನ್ನು ಹಿಡಕೊಂಡು ಚಾವಡಿಗೆ ಬಂದು ಬಾಗಿಲು ತೆಗದು ಹೊರಗೆ ಹೋಗುವಷ್ಟರಲ್ಲಿ ಪೋಲೀಸಿನವನೂ ಯುವಕನೂ ನಮ್ಮ ಬಾಗಿಲ ಹತ್ತಿರ ಬಂದರು. ಪೋಲೀಸು ಜವಾನನು ನನ್ನನ್ನು ಹತ್ತಿರ ಕರೆದನು. ಕೈದೀಪದೊಡನೆ ಯುವಕನೂ ಪೋಲೀಸು ಪ್ಯಾದೆಯೂ ಇದ್ದಲ್ಲಿಗೆ ಹೋಗಲಾಗಿ ಕೆಂಪಡರಿದ ಕಣ್ಣುಳ್ಳ ಯುವಕನಿಂದ ದೀಪಜ್ಯೋತಿಯನ್ನು ಸರಿಯಾಗಿ ನೋಡಲಿಕ್ಕೆ ಆಗಲಿಲ್ಲ. ಪೋಲೀಸು ಪೇದೆಯು—ಸ್ವಾಮಿ, ಈತನನ್ನು ನೋಡಿಬಿಡಿ, ಏನು ಕೇಳಿದರೂ ಹೇಳನು. ಮುಂದಕ್ಕೆ ಸ್ಟೇಶನಿಗೆ ಹೋಗುವ ಎಂದರೆ ಬಾಯಿಯಿಂದ ಏನೋ ಶಬ್ದಮಾಡುತ್ತ ಬೀದಿಯಲ್ಲಿ ಬಿದ್ದುಕೊಳ್ಳಲು ಹೋಗುವನು. ಈತನು ನಿಂತಲ್ಲಿಯೇ ನಿಲ್ಲಲಾರನು. ಈತನ ಕೂಡೆ ಇನ್ನೂ ನಾಲ್ವರು ಇದ್ದರು. ನಾನು ಅವರನ್ನು ಬೆನ್ನಟ್ಟಿಕೊಂಡು ಬರುವುದನ್ನು ನೋಡಿ ತಪ್ಪಿಸಿಕೊಂಡುಹೋದರು. ಸ್ವಾಮಿ, ಈತನನ್ನು ಚೆನ್ನಾಗಿ ನೋಡಿಬಿಡಿ. ನಾಳೆ ಮುಂಜಾನೆ ಒಂದುವೇಳೆ ತಮ್ಮ ಸಾಕ್ಷಿಯು ಸ್ಟೇಶನ್ ಆಫೀಸರರ ಮುಂದೆ ಬೇಕಾದೀತು—ಎಂದು ಹೇಳಿ ಪೋಲೀಸು ಜವಾನನು ಮುಂದ್ವರಿಸುವಷ್ಟರಲ್ಲಿ ನನ್ನ ಕೈಯಲ್ಲಿದ್ದ ಕೈದೀಪವನ್ನೆತ್ತಿಕೊಂಡು ಯುವಕನ ಗುರುತನ್ನು ಮಾಡಿಕೊಳ್ಳಲು ಪ್ರಯತ್ನಿಸಿದೆ. ಕಿವಿಗಳಿಗೆ ವಜ್ರದ ಒಂಟೆಗಳಿದ್ದವು. ಮುಖದಿಂದ ಈತನು ಕಾಲೇಜು ವಿದ್ಯಾರ್ಥಿಯಾಗಿರಬಹುದೆಂತ ಕಾಣಿಸುತ್ತಿತ್ತು. ಸಾಧಾರಣ ಬಿಳಿ ವರ್ಣದ ಯುವಕ. ಮೋರೆಯಲ್ಲಿ ಮೀಶೆಗಳು ಚೆನ್ನಾಗಿ ಬರಲಿಲ್ಲ. ಕೊರಳಲ್ಲಿ ಜನಿವಾರವಿತ್ತು. ಆದರೆ ಎಂಥಾ ಬ್ರಾಹ್ಮಣನೆಂತ ಹೇಳಲಿಕ್ಕೆ ಸಾಧ್ಯವಾಗುತ್ತಿದ್ದಿಲ್ಲ. ತಲೆಯಲ್ಲಿ ತುಂಬ 'ಕ್ರೋಪ್' ಇದ್ದರೂ ಏನೋ ಹೆತ್ತವರ ಅಥವಾ ಹೆಂಡತಿಯ ಹೆದರಿಕೆಯಿಂದ ಕ್ರೋಪಿನ ನಡುವೆ ನಾಲ್ಕು ಕೂದಲುಗಳನ್ನಿಟ್ಟಿದ್ದಾನೆ. ಈತನ ಬೆವರಿನಿಂದಲೂ ಬಾಯಿಯಿಂದಲೂ ಏನೋ ಒಂದು ಹುಳಿ ವಾಸನೆ ಬರುತ್ತಿತ್ತು. ಇಷ್ಟರಲ್ಲಿ ಪೋಲೀಸು ಜವಾನನಿಗೆ ಹೋಗಲು ತಡವಾದ್ದರಿಂದ ನನಗೆ ನಮಸ್ಕಾರ ಹೇಳಿ ಜವಾನನು ಹಿಡಿದೆಳೆದು ಸ್ಟೇಶನಿಗೆ ಮುಂದರಿಸಿದರು.

ಸಹವಾಸ ದೋಷದಿಂದ ಈ ಯುವಕನಿಗೆ ಈ ಆಪತ್ತು ಪ್ರಾಪ್ತವಾಗಬಹುದೆಂಬದಾಗಿ ಊಹಿಸುತ್ತ ಯುವಕರು ಈ ರೀತಿ ಹಾಳಾಗಿ ಹೋಗದಂತೆ ಯಾವ ಪ್ರಯತ್ನವೂ ಇಲ್ಲವಲ್ಲಾ ಎಂತ ತುಸಕಾಲ ಯೋಚಿಸಿದೆ. ರಾತ್ರೆ ೨ ಗಂಟೆ ಸಮಯವಾಯಿತು. ಮಾಳಿಗೆಗೆ ಒಂದು ಮಲಗಿದೆನು

ಬೆಳಿಗ್ಗೆ ಗಂಟೆ ೯ ಆಗುವಷ್ಟರಲ್ಲಿ ಸ್ಟೇಶನಿನಿಂದ ಜನ ಬಂತು. ಸ್ಟೇಶನಿಗೆ ಹೋಗಿ ನೋಡಲು ಅಲ್ಲಿಯ ಆಫೀಸರರು ಯುವಕನ ಮೇಲೆ ಅಮಲುಖೋರನಾಗಿ ಬೀದಿಗಳಲ್ಲಿ ಅಲೆದಾಡುತ್ತ ಜನರಿಗೆ ಕೇಡನ್ನುಂಟುಮಾಡುವ ಸ್ವಭಾವದವನಾಗಿದ್ದ ಎಂಬ ತಪ್ಪನ್ನು ಆರೋಪಿಸಲು ಸಿದ್ಧವಾಗಿದ್ದರು. ನನ್ನನ್ನು ನೋಡುತ್ತಲೆ ಯುವಕನು ಬಿಕ್ಕಿಬಿಕ್ಕಿ ಅತ್ತನು. ತಮ್ಮ ಕೂಡೆ ಗುಪ್ತವಾಗಿ ನಾಲ್ಕು ಮಾತುಗಳನ್ನು ಹೇಳಲು ಬಯಸುವೆನೆಂತ ಈ ಯುವಕನು ನನ್ನನ್ನು ವಿಜ್ಞಾಪಿಸಿಕೊಳ್ಳಲು, ಸ್ಟೇಶನ್ ಆಫೀಸರರ ಸಹಿತ ಸ್ಟೇಶನಿನ ಒಂದು ಕೋಣೆಗೆ ಈ ಯುವಕನನ್ನು ಕರೆದುಕೊಂಡು ಹೋದೆನು.

ಹುಡುಗನ ಹೇಳಿಕೆಯು ಈ ರೀತಿಯಾಗಿತ್ತು:—ಮಹನೀಯರೇ, ಒಂದು ಸಲ ನನ್ನನ್ನು ಕ್ಷಮಿಸಿರಿ! ನಾನು ಕುಡಿಕನಲ್ಲ. ಕಾಫಿ ಹೊಟೆಲುಗಳಲ್ಲಿ ನನಗೆ ಸರಾಯಿ ಕುಡಿಸಿಬಿಟ್ಟಾರೆಂದು ನಾನೂ ಎಂದೂ ಗ್ರಹಿಸಲಿಲ್ಲ. ಆಪ್ತರೆಂದು ನಟಿಸಿಕೊಂಡು ನನ್ನಿಂದ ಏನೋ ಪ್ರಯೋಜನವನ್ನು ಸೆಳಕೊಳ್ಳುವ ಬಗ್ಯೆ ಈ ರೀತಿ ನನಗೆ ಮದ್ಯವನ್ನು ಕುಡಿಸಿದರೆಂತ ಬಾವಿಸುವೆನು. ಸ್ವಾಮಿ, ನಾನು ಸ್ಕೂಲ್ ಫ್ಯಾನಲ್ ಪರೀಕ್ಷೆ ಈ ವರುಷ ಕೊಟ್ಟಿರುವೆನು. ಪರೀಕ್ಷೆಯು ತೀರಿಹೋದನಂತರ ಇಲ್ಲಿ ಕೆಲವು ದಿನಗಳು ಇರಬೇಕೆಂತ ನನ್ನ ಸಂಗಾತಿಗಳು ಒಯಸಿದ್ದರಿಂದ ಊರಿಗೆ ಹೋಗದೆ ಈ ಪಟ್ಟಣದಲ್ಲಿಯೇ ನಿಂತೆನು. ನನ್ನನ್ನು ನಿನ್ನೆ ರಾತ್ರಿ ಬಿಟ್ಟು ಓಡಿದ ಸಂಗಾತಿಗಳು ಪ್ರತಿ ರಾತ್ರೆ ನನ್ನನ್ನು ಹೊಟೆಲಿಗೆ ತಕ್ಕೊಂಡುಹೋಗಿ ಶರಬತ್ತು ಕೊಡಿಸುತ್ತಿದ್ದರು. ನಿನ್ನೆ ರಾತ್ರೆ ಶರಬತ್ತು ಹುಳಿಯಾಗಿದೇನೆಂತ ಕೇಳಲ್ಲು ಶರಬತ್ತಿಗೆ ಸೋಡಾ ಹಾಕಿಸಿದ್ದೇವೆಂತ ಹೇಳಿದರು. 'ರಿಮ್ಜನ್ ಗ್ಲಾಸಿ'ನಲ್ಲಿ ತಂಪು ಮತ್ತಷ್ಟು ಕಂಪಾಗಿದೆ ಎಂದು ಹೇಳಿ ಕುಡಿಕುಡಿ ಎಂತ ಒತ್ತಾಯಪಡಿಸಿದರು ತಂಪನ್ನು ಕುಡಿದ ಕೆಲವು ನಿಮಿಷಗಳಲ್ಲಿ ಎಲ್ಲವೂ ಕೆಂಪಾಗಿ ಕಂಡುಬಂದು ಮೈಯಲ್ಲಿ ಕಂಪ ಉಂಟಾಯಿತು. ಬುದ್ಧಿಯು ಅದಲುಬದಲಾಯಿತು. ಹೊರಡುವ ಎಂತ ಹೇಳಿದರು, ಹೊರಟೆನು. ಅವರಿಗೆಲ್ಲಾ ಕುಡಿದು ಅಭ್ಯಾಸವಿದ್ದದರಿಂದ ಅವರೆಲ್ಲರೂ ಪೋಲೀಸು ಜವಾನನಿಂದ ತಪ್ಪಿಸಿಕೊಂಡು ಓಡಿದರು. ನಾನೇ ಮಾತ್ರ ಸಿಕ್ಕಿಬಿದ್ದೆನು. ಸ್ವಾಮಿ, ಒಂದು ರಾತ್ರೆ ಸ್ಟೇಶನಿನಲ್ಲಿ ಬಿದ್ದುಕೊಂಡದ್ದರಿಂದ ನನಗೆ ತಕ್ಕ ಶಿಕ್ಷೆಯು ಪ್ರಾಪ್ತವಾಯಿತು. ಇನ್ನು ಕ್ಷಮಿಸಿರಿ ಎಂದು ಅಳುತ್ತ ಹುಡುಗನು ನಮ್ಮಿಬ್ಬರ ಕಾಲಿಗೆ ಬಿದ್ದನು.

ಸ್ಟೇಶನ್ ಹೌಸು ಆಫೀಸರರು ಬಹಳ ದಯಾಳುಗಳಾದ್ದರಿಂದ ಹುಡುಗನನ್ನು ಕ್ಷಮಿಸಿದರು. ಹುಡುಗನು ಹೊರಟುಹೋದನು. ನಾನೂ ಮನೆಗೆ ಬಂದೆನು. ಕಾಪಿ ಹೊಟೇಲುಗಳಲ್ಲಿ ಮದ್ಯಗಳನ್ನು ಕುಡಿಸುವ ನವೀನ ಉಪಾಯವನ್ನು ತಿಳಿದೆನು. ರಿಮ್ಜನ್, ತಂಪು, ಕೆಂಪು, ಕಂಪು ಇವೆಲ್ಲವೂ ಹೊಸ ನುಡಿಗಳ ಗೂಡಾರ್ಥವನ್ನೂ ಕಲಿತೆನು. ಇಲ್ಲಿಗೆ ಸಾಕು. ಕಾಫಿ ಹೊಟೇಲುಗಳೇ, ನಿಮ್ಮ ಪ್ರತಾಪವು ಅದ್ವಿತೀಯವಾಗಿದೆ. ಶಹಬಾಸ್!

ಮದ್ಯಗಳನ್ನು ಉಪಯೋಗಿಸುವ ಕಾಫಿ ಹೊಟೇಲುಗಳು ಯಾವವೆಂದು ಗೊತ್ತು ಮಾಡುವ ಅಧಿಕಾರವು ಅಬ್ಕಾರಿ ಪೋಲೀಸಿನವರಿಗೆ ಇರದೋ?

ಚಿಲ್ಲವಾ.

ಯುದ್ಧ ಸಮಾಚಾರ.

ತಾ. ೧೩ನೇ ಮೇ.

ಮರ್ಮೋರ ಸಮುದ್ರವನ್ನು ನುಗ್ಗಲಿಕ್ಕಿದ್ದ ಆಸ್ಟ್ರೇಲಿಯದ A ಜಲಾಂತರ್ಗಾಮಿಯನ್ನು ತುರ್ಕರ ಯುದ್ಧಹಡಗವು ಮುಳುಗಿಸಿರುದು. ಮೂರು ಆಫೀಸರರೂ ೨೯ ಸೈನಿಕರೂ ತುರ್ಕರ ಸೆರೆ ಬಿದ್ದಿರುವರೆಂತ ತುರ್ಕರ ವಾರ್ತೆಯಿಂದ ತಿಳಿದುಬರುವದೆಂತ ಬ್ರಿಟಿಷ ಸರಕಾರದವರು ಪ್ರಕಟಿಸಿರುತ್ತಾರೆ. ಈ ವಿಷಯವಾದ ಜವಾರ್ತೆಯು ಈ ವರೆಗೆ ಬ್ರಿಟಿಷ ಸರಕಾರದವರಿಗೆ ಸಿಕ್ಕಲಿಲ್ಲ.

ಬ್ರಿಟಿಷ ಮತ್ತು ಫ್ರೆಂಚ ಸೇನೆಗಳು ಗಲಿಪೋಲಿ ಅರ್ಧದ್ವೀಪದಲ್ಲಿ ತಾ. ೮ರಲ್ಲು ತುರ್ಕರ ನೆಲೆಗಳ ಮೇಲೆ ಹಲ್ಲಾ ಮಾಡಲು ಪ್ರಾರಂಭಿಸಿರುವವು. ಕ್ರಿಥಿಯದ ಆಜುಬಾಜಿನಲ್ಲಿರುವ ದಿನ್ನೆಗಳಲ್ಲಿದ್ದ ತುರ್ಕರ ಕೆಲವು ಕಂದಕಗಳನ್ನು ಮಿತ್ರಸೈನಿಕರು ಸನೀನು ಕಾಳಗ ಮಾಡಿ ಹಿಡಕೊಂಡು, ಸ್ವಾಧೀನಮಾಡಿಕೊಂಡ ನೆಲೆಗಳನ್ನು ಕೋಟೆಕೊತ್ತಲುಗಳಿಂದ ಬಲಕಾಯಿಸುತ್ತಿರುವರು.

ಲುಸಿತಾನಿಯ ಹಡಗವನ್ನು ಜರ್ಮನರು ಮುಳುಗಿಸಿದ ಕೃತ್ಯದಿಂದ ಆಸ್ಟ್ರೇಲಿಯದವರು ಉರದುಂಬಿ ಸೇನೆಗೆ ಬಹಳ ಮಂದಿ ಸೇರುತ್ತಿದ್ದಾರೆ. ಲುಸಿತಾನಿಯ ಹಡಗದಲ್ಲಿದ್ದ ಅಮೇರಿಕದ ೧೪೯ ಮಂದಿ ಮುಳುಗಿದರೆಂತ ಪ್ರಕಟವಾಗಿದೆ. ಈ ಸಂಬಂಧ ಅಮೇರಿಕ ಸರಕಾರದವರು ಜರ್ಮನ ಸರಕಾರಕ್ಕೆ ಒಂದು ಖಂಡಿತ ಪತ್ರ ಕಳುಹಿಸಿಕೊಟ್ಟಿರುತ್ತಾರೆ.

ಆರ್ರಾಸ್, ನ್ಯೂವಿಲ್ಲೆ ಮೊದಲಾದ ಸ್ಥಳಗಳಲ್ಲಿ ಪುನಃ ಪುನಃ ಮೇಲ್ಬಾಯುತ್ತಿರುವ ಜರ್ಮನರನ್ನು ಫ್ರೆಂಚರು ಹಿಂದಟ್ಟಿರುತ್ತಾರೆ. ಜರ್ಮನರ ಅನೇಕ ಆಫೀಸರರೂ ಸೈನಿಕರೂ ಮಿತ್ರರ ಸೆರೆಬಿದ್ದಿರುತ್ತಾರೆ. ಫ್ರೆಂಚರು ಜರ್ಮನರ ಒಂದು ವಾಯುನಾವೆಯನ್ನೂ ಬ್ರಿಟಿಷರು ಎರಡು ವಾಯುನಾವೆಗಳನ್ನೂ ನಾಶಮಾಡಿರುತ್ತಾರೆ. ಜರ್ಮನರು ಬ್ರಿಟಿಷರ ಒಂದು ಯಂತ್ರವನ್ನು ಕೆಳದೊಬ್ಬಿರುತ್ತಾರೆ.

ಡಿಕ್ಸ್ಮ್ಯೂಡಿನ ಉತ್ತರದಲ್ಲಿ ಬೆಲ್ಜಿಯನರು ಯ್ಸರಿನ ಬಲಕಡೆಯಲ್ಲಿರುವ ಒಂದು ಸೇತುವೆಯನ್ನು ಹಿಡಕೊಂಡು ಮೇಲ್ಬಾಯಿದ ಜರ್ಮನರನ್ನು ಹಿಂದಟ್ಟಿರುವರು.

ಯ್ಪ್ರೆಸಿನ ಪೂರ್ವದಲ್ಲಿದ್ದ ಬ್ರಿಟಿಷ ಸೇನೆಯ ಮೇಲೆ ಜರ್ಮನರು ವಿಷಕರವಾದ ಗ್ಯಾಸನ್ನು ಕಳುಹಿಸಿ ಹಲ್ಲಾ ಮಾಡಿದರು. ಆದರೆ ಬ್ರಿಟಿಷರು ಫಿರಂಗಿಗಳಿಂದ ಜರ್ಮನರ ಈ ಸೇನೆಯನ್ನು ನಿರ್ನಾಮ ಮಾಡಿರುತ್ತಾರೆ.

ಜರ್ಮನರ ಜೆಫಲಿನ್ ನಾವೆಯು ಇಂಗ್ಲಾಂಡಿನ ಸೌತ್ ಎಂಡಿಗೆ ೧೦೦ ಬೊಂಬುಗಳನ್ನು ಬಿಸಾಡಿರುವದು. ಇದರಿಂದ ಒಬ್ಬನು ಮರಣಹೊಂದಿದನು. ಸುಮಾರು ೨೦,೦೦೦ ಪವನುಗಳ ನಷ್ಟವಾಗಿರುವದು.

ಜರ್ಮನರು ಯ್ಪ್ರೆಸಿನ ಪೂರ್ವದಲ್ಲಿ ಬ್ರಿಟಿಷರ ಕಂದಕಗಳಿಗೆ ಪ್ರಚಂಡವಾದ ಗುಂಡುಗಳನ್ನು ಹಾರಿಸಿ, ವಿಷಕರವಾದ ಗ್ಯಾಸ್ ಮೂಲಕ ತಮ್ಮ ಕಾಲಾಳು ಸೇನೆಯನ್ನು ಮುಂದಕ್ಕೆ ನುಗ್ಗಿಸಿದರು. ಆದರೆ ಸೋತುಹೋದರು. ಜರ್ಮನರಲ್ಲಿ ವಿಶೇಷ ನಷ್ಟವಾಗಿರುವದು ಎಂತ ಸರ್ ಜೋನ್ ಫ್ರೆಂಚರವರು ತಿಳಿಸಿರುತ್ತಾರೆ. ಸರ್ ಜೋನ್ ಫ್ರೆಂಚರ ಇನ್ನೊಂದು ಪತ್ರದಿಂದ ಯ್ಪ್ರೆಸಿನ ಪೂರ್ವದಲ್ಲಿ ಪುನಃ ಮೇಲ್ಬಾಯಿದ ಜರ್ಮನರು ಹೆಚ್ಚಿನ ನಷ್ಟಹೊಂದಿ ಹಿಮ್ಮೆಟ್ಟಿದರು ಎಂತ ತಿಳಿದು ಬರುತ್ತದೆ.

ತಾ. ೧೪ನೇ ಮೇ.

ಬ್ರಿಟಿಷರ "ಗೋಲಿಯಾಥ್" ಎಂಬ ಯುದ್ಧ ಹಡಗವು ಡರ್ಡನೆಲ್ಸಿನಲ್ಲಿ ಟೊರ್ಪೆಡೊ ಮೂಲಕ ಮುಳುಗಿಸಲ್ಪಟ್ಟಿತು. ೫೦೦ ಮಂದಿ ನಷ್ಟವಾದರು ಎಂತಲೂ ಬ್ರಿಟಿಷರ E ೧೪ ಜಲಾಂತರ್ಗಾಮಿ ನಾವೆಯು ಮರ್ಮೋರ ಸಮುದ್ರದಲ್ಲಿ ತುರ್ಕರ ಒಂದು ಗನ್‌ಬೋಟನ್ನೂ ಒಂದು ಸಾಮಾನು ತುಂಬಿಸಿದ್ದ ಹಡಗವನ್ನೂ ಮುಳುಗಿಸಿರುವದೆಂದೂ ಮಿ ಚರ್ಚಿಲ್ಲರವರು ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿ ಹೇಳಿರುತ್ತಾರೆ. "ಗೋಲಿಯಾಥ್" ಯುದ್ಧ ಹಡಗವು ಕಳೆದ ರಾತ್ರಿ ಡಾರ್ಡನೆಲ್ಸ್ ಜಲಸಂಧಿಯೊಳಗೆ ಇದ್ದುಕೊಂಡು ಫ್ರೆಂಚರ ಸೇನೆಯನ್ನು ಕಾಪಾಡುವ ಕೆಲಸದಲ್ಲಿತ್ತು ಎಂತಲೂ ಈ ಹಡಗದ ೧೬೦ ಸೈನಿಕರೂ ೨೦ ಆಫೀಸರರೂ ರಕ್ಷಿಸಲ್ಪಟ್ಟಿರೆಂತಲೂ ಮಿ ಚರ್ಚಿಲ್ಲರವರು ಹೇಳಿರುತ್ತಾರೆ.

ರುಶ್ಯನರ 'ಬ್ಲೇಕ್ ಸೀ ಫ್ಲೀಟ್' ತಾ. ೧೦ರಲ್ಲು ಬೋಸ್ಪರಸಿಗೆ ಗುಂಡುಹಾರಿಸಿದ ನಂತರ ತುರ್ಕರ "ಗಿಯೊಬೆನ್" ನಾವೆಯೊಡನೆ ಕದನ ಮಾಡಿರುವದು.

ಆರ್ರಾಸಿನ ಉತ್ತರದಲ್ಲಿ ಮಿತ್ರರಿಗೆ ಮಹಾ ಜಯವಾಗಿರುವದು. ನೊಟ್ರೆ ಡೇಮ್ ಡೆ ಲೊರೆಟ್ಟೆಯಲ್ಲಿ ಜರ್ಮನರಿಗೂ ಮಿತ್ರ ಸೈನಿಕರಿಗೂ ಕಾಳಗನಡೆದು ಮಿತ್ರಸೈನಿಕರು ಆ ನೆಲೆಗಳನ್ನೆಲ್ಲಾ ಪೂರ್ಣವಾಗಿ ಸ್ವಾಧೀನ ಮಾಡಿಕೊಂಡಿರುತ್ತಾರೆ. ಶತ್ರುಗಳಲ್ಲಿ ಅತಿರೇಕ ನಷ್ಟವುಂಟಾಗಿರುವದು.

ಕೆರೆನ್ಸಿ ಕಾಡು ಮತ್ತು ಅದರ ಉತ್ತರದಲ್ಲಿ ಬಲವಾಗಿ ಕಟ್ಟಿದ ಕೋಟೆಗಳುಳ್ಳ ದಿನ್ನೆಯನ್ನೂ ಮಿತ್ರರು ಸ್ವಾಧೀನ ಮಾಡಿಕೊಂಡಿರುತ್ತಾರೆ. ಇಲ್ಲಿ ಜರ್ಮನರು ಜೀವದ ಮರವೆ ಇಲ್ಲದೆ ಕಾದಾಡಿದರು. ಜರ್ಮನರಲ್ಲಿ ೧೦೦ ಮಂದಿ ಸನೀನುಕಾಳಗದಲ್ಲಿ ಮಡಿದರು. ೩೦ ಆಫೀಸರರೂ ೧೦೨೦ ಸೈನಿಕರೂ ಸೆರೆ ಬಿದ್ದರು. ನ್ಯೂವಿಲ್ಲೆಯಲ್ಲಿಯೂ ಫ್ರೆಂಚರು ಮುಂದರಿದಿರುತ್ತಾರೆ.

ಪಾರಿಸಿನ ಆಜುಬಾಜಿನಲ್ಲಿ ಜರ್ಮನರ ವಾಯುನಾವೆಗಳ ಬೊಂಬುಗಳು ಬಿದ್ದಿರುವವು. ಇದರಿಂದ ೬ ಸೈನಿಕರು ಹತರಾಗಿರುತ್ತಾರೆ ಎಂತ "ಸಿ ಎಂಡ್ ಎಮ್" ತಂತೀವಾರ್ತೆಯಿಂದ ತಿಳಿದು ಬರುತ್ತದೆ.

ಐರ್ಲಾಂಡಿನಲ್ಲಿ ತಯಾರಾದ ಮೊದಲನೇ ಸೇನಾಂಗವು ರಣರಂಗಕ್ಕೆ ಹೋಗಿರುವದು.

ಜರ್ವೊರ್ನಿಕ್ ಪರ್ವತದಲ್ಲಿ ರುಶ್ಯನರು ಶತ್ರುಗಳೊಡನೆ ಕದನ ಮಾಡುತ್ತಿದ್ದಾರೆ. ಈ ಪರ್ವತ ಇಳಿಜಾರಿನಲ್ಲಿ ಕೆಲವು ದಿವಸದೊಳಗೆ ಶತ್ರುಗಳ ೫೦೦೦ಕ್ಕಿಂತಲೂ ಹೆಚ್ಚಿನ ಶವಗಳು ಬಿದ್ದಿರುವವು. ರುಶ್ಯನರು ಸೆಜೊರನ್ ಐಡ್ಸಿನಿಂದ ಬಟಾರ್ಟಿನ್ ರಣರಂಗದ ವರೆಗೆ ಸುಮಾರು ೪೫ ಮೈಲು ಮುಂದರಿದು ೫೦೦೦ ಸೈನಿಕರನ್ನೂ ೬ ಫಿರಂಗಿಗಳನ್ನೂ ಒಂದೇ ದಿನದಲ್ಲಿ ಸೆರೆಹಿಡಿದಿರುತ್ತಾರೆ. ಶತ್ರುಗಳು ನಿಸ್ಟರಿನ ಎಡಪಾರ್ಶ್ವವನ್ನೆಲ್ಲಾ ಬಿಟ್ಟು ಹೋಗಿರುತ್ತಾರೆ.

ಆಫ್ರೀಕದಲ್ಲಿ ಜನರಲ್ ಬೋಥರು ವಿಂಡೊಕೆಗೆ ಪ್ರವೇಶಿಸಿರುತ್ತಾರೆ. ಇದು ಜರ್ಮನರ ದಕ್ಷಿಣ ಪಶ್ಚಿಮ ಆಫ್ರೀಕದ ಮುಖ್ಯ ಪಟ್ಟಣವಾಗಿರುವದು. ೩೦೦೦ ಯುರೋಪಿಯನರೂ ೧೨ ಸಾವಿರ ದೇಶೀಯರೂ ಪಟ್ಟಣದೊಳಗೆ ಇದ್ದರು. ಸ್ವಾಧೀನ ಮಾಡಿಕೊಂಡ ಪ್ರದೇಶದ ಮೇಲೆ ಜನರಲ್ ಬೋಥರವರು ಯುದ್ಧ ಕಾನೂನನ್ನು ಜಾರಿಗೆ ತಂದಿರುತ್ತಾರೆ.

ತಾ. ೧೫ನೇ ಮೇ.

ಬ್ರಿಟಿಷರ ಒಂದು ಹಡಗವು ಜರ್ಮನರ ಜಲಾಂತರ್ಗಾಮಿ ನಾವೆಯನ್ನು ಮುಳುಗಿಸಿರುವದು. ಈ ವಾರಾಂತ್ಯದಲ್ಲಿ ಬ್ರಿಟಿಷ ಬಂದರಗಳಿಗೆ ೧೪೨೭ ಹಡಗಗಳು ಹೋಗಿ ಬಂದಿರುವವು. ೬ ಹಡಗಗಳನ್ನು ಜಲಾಂತರ್ಗಾಮಿ ನಾವೆಗಳು ಮುಳುಗಿಸಿರುವವು ಎಂತ ಲಂಡನ್ ವರ್ತಮಾನ ಸಂಗ್ರಹ ಆಫೀಸಿನವರು ಪ್ರಕಟಿಸಿರುತ್ತಾರೆ.

ಜರ್ಮನರು ಲುಸಿತಾನಿಯ ಹಡಗವನ್ನು ಮುಳುಗಿಸಿದ್ದರಿಂದ ಜೊಹನ್ನೆಸ್‌ಬರ್ಗಿನ ಜನರು ಸಿಟ್ಟುಗೊಂಡು ಜರ್ಮನರ ೫೧ ಕಟ್ಟೋಣಗಳನ್ನು ಕೆಡವಿಹಾಕಿದರು. ಅವರ ಕ್ಲಬ್ಬುಗಳನ್ನೂ ಹಾಳುಮಾಡಿದರು. ಜನರು ಜರ್ಮನರಿಗೆ ವಿರೋಧವಾಗಿ ದಂಗೆ ಎದ್ದು ಜರ್ಮನ ಚಿನ್ನಾಭರಣಗಳ ವರ್ತಕರ ಅಂಗಡಿಗಳನ್ನು ಸೂರೆ ಸುಲಿಗೆ ಮಾಡುತ್ತಿದ್ದಾರೆ. ಇಂಗ್ಲಾಂಡಿನಲ್ಲಿಯೂ ಇದೇ ತರದ ಗಲಭೆಗಳು ನಡೆದಿರುವವು.

ಯ್ಸರಿನ ಬಲಪಾರ್ಶ್ವದಲ್ಲಿ ಬೆಲ್ಜಿಯನರು ಹೊಸತಾಗಿ ಮೇಲ್ಬಾಯಿದ ಜರ್ಮನರನ್ನು ಹಿಂದಟ್ಟಿರುತ್ತಾರೆ. ಹಿಂದೆ ಓಡುತ್ತಿದ್ದ ಜರ್ಮನರು ಕೆಲವು ನೂರು ಶವಗಳನ್ನು ರಣರಂಗದಲ್ಲಿ ಬಿಟ್ಟು ಹೋಗಿರುತ್ತಾರೆ. ಆರ್ರಾಸಿನ ಉತ್ತರದಲ್ಲಿ ಫ್ರೆಂಚರಿಗೆ ಹೊಸ ಮತ್ತು ಪ್ರಾಮುಖ್ಯವಾದ ಒಂದು ಜಯವಾಗಿದೆ. ಬ್ಲೊಸ್-ಲೆ-ಪೆಟ್ರೆ ಎಂಬ ಸ್ಥಳವು ಪೂರ್ಣವಾಗಿ ಫ್ರೆಂಚರ ಸ್ವಾಧೀನವಿದೆ.

ಜರ್ಮನಿಯಲ್ಲಿರುವ ಬ್ರಿಟಿಷ ಸೆರೆಯಾಳುಗಳ ಹಂದರಗಳಲ್ಲಿ ವಿಷಮ ಜ್ವರವು ತಲೆದೋರಿರುವದು ಎಂತ ಬರ್ಲಿನಿನಲ್ಲಿರುವ ಅಮೇರಿಕದ ರಾಯಭಾರಿಯವರು ತಿಳಿಸಿರುತ್ತಾರೆ.

ಚಾವ್ಲಿ ಎಂಬಲ್ಲಿ ನಡೆದ ಕದನದಲ್ಲಿ ರುಶ್ಯನರಿಗೆ ಜಯವಾಗಿರುವದು. ರುಶ್ಯನರು ೧೦೦೦ಕ್ಕಿಂತಲೂ ಹೆಚ್ಚಿನ ಜರ್ಮನ ಸೈನಿಕರನ್ನೂ ೯ ಫಿರಂಗಿಗಳನ್ನೂ ಸೆರೆ ಹಿಡಿದಿರುತ್ತಾರೆ. ಪಶ್ಚಿಮ ಗೆಲೀಸಿಯದಲ್ಲಿ ನಡೆಯುತ್ತಿದ್ದ ಕದನದ ಕಠಿಣತ್ವವು ತುಸ ತಗ್ಗಿಯದೆ—ರುಶ್ಯ ಸೈನಿಕರು ಸಾನ್ ನದಿಯ ರಣರಂಗದಲ್ಲಿ ಸೇರಿರುತ್ತಾರೆ. ಪ್ರೆಮಿಸ್ಲ ಎಂಬಲ್ಲಿಂದ ರುಮೇನಿಯ ಸರಹದ್ದು ವರೆಗಿನ ರಣರಂಗದಲ್ಲಿದ್ದ ಬಲವಾದ ಕೋಟೆಕೊತ್ತಲುಗಳನ್ನು ಆಸ್ಟ್ರಿಯನರು ಬಿಟ್ಟು ಹೋಗಿರುತ್ತಾರೆ. ಶತ್ರುಗಳ ಅಶ್ವಪಡೆಯು ಈ ಸ್ಥಳವನ್ನು ಪುನಃ ಆಕ್ರಮಿಸಲು ಪ್ರಯತ್ನಿಸಿದರೂ ರುಶ್ಯನರ ಫಿರಂಗಿಗಳ ಎದುರಿಗೆ ಮುಂದರಿಸಲಾರದೆ ಹಿಮ್ಮೆಟ್ಟಿತು. ರುಶ್ಯನರ ಅಶ್ವಪಡೆಯು ಕೆಲವು ಕಡೆಗಳಲ್ಲಿ ಶತ್ರು ನೆಲೆಗಳನ್ನು ನುಗ್ಗಿ ಹೋಗಿರುವದು. ಆಸ್ಟ್ರಿಯಾ ಸೈನಿಕರಲ್ಲಿ ಅನೇಕರು ರುಶ್ಯನರ ಸೆರೆ ಬಿದ್ದಿರುತ್ತಾರೆ.

ತಾ. ೧೬ನೇ ಮೇ.

ಯ್ಪ್ರೆಸಿನಲ್ಲಿ ಮಿತ್ರರು ಕೆಲವು ಕಂದಕಗಳನ್ನು ಸ್ವಾಧೀನ ಮಾಡಿಕೊಂಡು ಸ್ಟೀನ್‌ಸ್ಟ್ರಾಟೆ ಎಂಬ ಪಟ್ಟಣದ ಒಂದಂಶವನ್ನು ಹಿಡಕೊಂಡಿದ್ದಾರೆ. ಜರ್ಮನರ ೫೦ ಸೈನಿಕರು ೩ ಫಿರಂಗಿಗಳ ಸಮೇತ ಬ್ರಿಟಿಷರಿಗೆ ಸೆರೆ ಬಿದ್ದಿರುತ್ತಾರೆ. ಸ್ಟೀನ್‌ಸ್ಟ್ರಾಟೆಯಲ್ಲಿ ಜರ್ಮನರು ಮೂರಾವರ್ತಿ ಬ್ರಿಟಿಷರ ಮೇಲೆ ಹಲ್ಲಾ ಮಾಡಿದರು. ಆದರೆ ವಿಶೇಷ ನಷ್ಟಹೊಂದಿ ಹಿಮ್ಮೆಟ್ಟಿರುತ್ತಾರೆ. ಲಾಬಾಸ್ಸೆಯ ಉತ್ತರದಲ್ಲಿ ಕೆಲವು ಕಂದಕಗಳನ್ನು ಬ್ರಿಟಿಷರು ಸ್ವಾಧೀನ ಮಾಡಿಕೊಂಡಿದ್ದಾರೆ. ೬ ಫಿರಂಗಿಗಳು ಬ್ರಿಟಿಷರಿಗೆ ದೊರಕಿರುವವು. ಶತ್ರುಗಳು ನ್ಯೂವಿಲ್ಲೆಯಲ್ಲಿ ಮನೆಗಳನ್ನು ಪುನಃ ಪಡೆಯಲು ಪ್ರಯತ್ನಿಸಿ ಸಾರ್ಥಕ ಹೊಂದಲಿಲ್ಲ. ಬ್ರಿಟಿಷರಿಗೆ ಸ್ಟೀನ್‌ಸ್ಟ್ರೆಯಲ್ಲಿ ಆದ ಜಯದಿಂದ ಜರ್ಮನರಿಗೆ ವಿಶೇಷ ನಷ್ಟವಾದಂತಾಯಿತು. ಆರ್ರಾಸಿನ ಉತ್ತರದಲ್ಲಿ ಕಠಿಣ ಕೈಕಾಳಗವು ನಡೆದಿರುವದು. ಜರ್ಮನರು ಮತ್ತೂ ಹಿಂದಕ್ಕೆ ಓಡಿಸಲ್ಪಟ್ಟಿರುತ್ತಾರೆ.

ಇಟಲಿಯ ಮಂತ್ರಿಸಭೆಯು ರಾಜಿಕೊಟ್ಟಿರುವದು. ಆದರೆ ಅರಸರು ರಾಜನಾಮೆಯನ್ನು ಅಂಗೀಕರಿಸಲಿಲ್ಲ.

ಪೋರ್ಚುಗಲಿನಲ್ಲಿ ಕಠಿಣ ಗೊಂದಲೆಯು ನಡೆದಿರುವದು.

ತಾ. ೧೭ನೇ ಮೇ.

ಈ ದಿನದ ವಾರ್ತೆಯಲ್ಲಿ ಡರ್ಡನೆಲ್ಸ್, ಫ್ರಾನ್ಸ್, ಮತ್ತು ಬೆಲ್ಜಿಯಮಿನಲ್ಲಿ ಘಾಯಪಡೆದ ಮತ್ತು ಹತರಾದ ಬ್ರಿಟಿಷ ಆಫೀಸರರ ಹೆಸರಿನ ಒಂದು ದೊಡ್ಡ ಪಟ್ಟಿಯು ಪ್ರಕಟಿಸೋಣಾಗಿರುವದು.

ಫ್ರೆಂಚರು ಹೆಟ್ಸಾಸ್ ಎಂಬಲ್ಲಿ ಮುಂದರಿದು ಕೋಟೆಕೊತ್ತಲುಗಳಿಂದ ಬಲಕಾಯಿಸಿದ ಜರ್ಮನರ ಒಂದು ಮನೆಯನ್ನು ಸ್ವಾಧೀನ ಮಾಡಿಕೊಂಡು ಅನೇಕ ಜರ್ಮನ ಸೈನಿಕರನ್ನು ಸೆರೆಹಿಡಿದಿರುತ್ತಾರೆ. ಲೊರೆಟ್ಟೆಯಲ್ಲಿ ಜರ್ಮನರು ನಾಲ್ಕಾವರ್ತಿ ಮೇಲ್ಬಾಯಿದು ಬಹಳ ನಷ್ಟಹೊಂದಿರುತ್ತಾರೆ.

ಒಂದು ಜೆಫಲಿನ್ ನಾವೆಯು ಡೋವರಿನ ಬಳಿ ಕಾಣಿಸಿಕೊಂಡಿತು. ಆದರೆ ಬ್ರಿಟಿಷರು ಅದನ್ನು ಓಡಿಸಿರುವರು. ಜೆಫಲಿನ್ ನಾವೆಯು ಮರ್ಗೇಟಿನಿಂದ ಡೋವರಿನ ವರೆಗೆ ಕೆಲವು ತಾಸು ತನಕ ಅಲೆದಾಡಿ ಡೀಲಿನ ಮೇಲೆ ೨೦ ಬೊಂಬುಗಳನ್ನು ಬಿಸಾಡಿರುವದು. ರಾಮ್ಸ್‌ಗೇಟಿನಲ್ಲಿ ಇದರಿಂದ ೩ ಮಂದಿ ಗಾಯಪಡೆದಿರುವರು.

ರಾಮ್ಸ್‌ಗೇಟಿನಲ್ಲಿ ಕಾಣಿಸಿಕೊಂಡ ಜೆಫಲಿನ್ ನಾವೆಗೆ ಬ್ರಿಟಿಷರ ೮ ವಾಯುನಾವೆಗಳು ಗುಂಡು ಹಾರಿಸಿ ಅದನ್ನು ಹಾಳುಮಾಡಿರುವವು ಎಂತ ಪ್ರಕಟವಾಗಿದೆ.

ಜರ್ಮನರ ಅಶ್ವಪಡೆಯವರು ರುಶ್ಯನರಲ್ಲಿ ಘಾಯಪಡೆದ ಸೈನಿಕರನ್ನು ಸುಟ್ಟು ಕೊಲ್ಲುತ್ತಿದ್ದಾರೆ ಎಂತ ರುಶ್ಯನರ ಪ್ರಿನ್ಸೆಸ್ ಲುರಾ ಕೈನರಿಂದ ತಂತೀ ಬಂದಿರುವದು.

ಇಟಲಿಯಲ್ಲಿ ಮಿತ್ರರಿಗೆ ಸಹಾಯವಾಗಿ ಸೇರಿಕೊಳ್ಳಬೇಕೆಂಬ ಚಳವಳವು ನಡೆದಿರುವದು. ಜನರು ಗುಂಪುಗುಂಪಾಗಿ, ಮಿತ್ರರ ಧ್ವಜಗಳ ಸಹಿತ ಮೆರವಣಿಗೆ ಹೊರಟು ಮಂತ್ರಿಗಳ ಮನೆಗಳನ್ನು ಸುತ್ತಿರುವರು. ಇದೇ ತರದ ಚಳವಳವು ಜಿನೋವ ಮತ್ತು ನೇಪಲ್ಸಿನಲ್ಲಿಯೂ ನಡೆದಿರುವದು.

ಪೋರ್ಚುಗಲಿನಲ್ಲಿ ಆದ ದಂಗೆಯಲ್ಲಿ "ವಸ್ಕೊಡಿಗಾಮ" ಎಂಬ ಹಡಗದ ಕಪ್ತನನು ಕೊಲ್ಲಲ್ಪಟ್ಟಿರುತ್ತಾನೆ. ಪಟ್ಟಣದಲ್ಲಿ ವಿಶೇಷ ಹಾನಿಯಾಗಿರುವದು. ದಂಗೆಗಾರರ ಇಚ್ಛೆಯಂತೆ ರಾಷ್ಟ್ರೀಯ ಮಂತ್ರಿಸಭೆಯು ಏರ್ಪಡಿಸಲ್ಪಟ್ಟಿದೆ. ಸಂತಾರೆಮ್ಸನಲ್ಲಿ ಕಠಿಣ ಕಾಳಗವು ನಡೆದು ಗಾಯಪಡೆದ ೨೦೦ ಮಂದಿ ಆಸ್ಪತ್ರೆಯಲ್ಲಿರುವರು. ೬೦ ಮಂದಿ ಸತ್ತಿರುತ್ತಾರೆ. ಕಾರ್ಡೋಸೊ ಕಾಸ್ಟ್ರೊ ಎಂಬವರು ಲಿಸ್ಬನಿನ ಸಿವಿಲ್ ಗವರ್ನರರಾಗಿ ನೇಮಿಸಲ್ಪಟ್ಟಿದ್ದಾರೆ.

ತಾ. ೧೯ನೇ ಮೇ.

ಜರ್ಮನರ ಜೆಪ್ಪಲಿನ್ ನಾವೆಯು ಕೆಲ್ಲಿಯ ಮೇಲೆ ಬೊಂಬುಗಳನ್ನು ಹಾಕಿರುವದು. ಇದರಿಂದ ಕೆಲವು ಮಕ್ಕಳು ಸತ್ತರು. ಕೆಲ್ಲಿಯ ಮೇಲೆ ಬೊಂಬುಗಳನ್ನು ಬಿಸಾಡಿದ ಜೆಪ್ಪಲಿನ್ ನಾವೆಯನ್ನು ಮಿತ್ರರು ಫಿರಂಗಿಗಳಿಂದ ಹಾಳು ಮಾಡಿಸಿದರು. ಅದು ಡನ್‌ಕರ್ಕಿನ ೩ ಮೈಲು ದೂರದಲ್ಲಿ ಕೆಳಬಿದ್ದಿರುವದು. ಅದರಲ್ಲಿದ್ದ ೪೦ ನಾವಿಕರನ್ನು ಮಿತ್ರರು ಸೆರೆಹಿಡಿದಿರುತ್ತಾರೆ.

ಬಕೋವಿನದಲ್ಲಿ ರುಶ್ಯನರು ಸೋತುಹೋಗಿರುತ್ತಾರೆ. ನೀಸ್ಟರಿನಿಂದ ಪ್ರುತಿನ ವರೆಗಿನ ಪ್ರಾಂತ್ಯವೆಲ್ಲಾ ಈಗ ರುಶ್ಯನರ ಸ್ವಾಧೀನವಿದೆ. ಆಸ್ಟ್ರೀಯನರ ಸೈನಿಕರು ದಿಕ್ಕಾಪಾಲಾಗಿ ಓಡುತ್ತಿದ್ದಾರೆ ಜೆರ್ನೋವಿಟ್ ಪ್ರಾಂತ್ಯವೂ ರುಶ್ಯನರ ಕೈಯಲ್ಲಿದೆ. ಕೋಲಿಮಿಯ ಡಿಸ್ಟ್ರಿಕ್ಟಿನಲ್ಲಿ ಮಾತ್ರ ಶತ್ರುಗಳಿಗೆ ಬೆಂಬಲ ಸೇನೆಯು ಬಂದು ಕೂಡಿದ್ದರಿಂದ ಅಲ್ಲಿ ಕಠಿಣ ಕಾಳಗವು ನಡಿಯುತ್ತಿದೆ.

ಬಾಲ್ಟಿಕ್ ಪ್ರೊವಿನ್ಸಿಗೆ ಸೇರಿದ ಚಾಪ್ಲಿಯದ ಕದನವು ರುಶ್ಯನರಿಗೆ ಅನುಕೂಲವಾಗಿದೆ. ರುಶ್ಯನರು ಬಬಿಸ ನದಿಯನ್ನು ದಾಟಿ ಜರ್ಮನರ ಕಂದಕಗಳನ್ನು ಗಾಯಿಸಿ, ಅನೇಕರನ್ನು ಸೆರೆಹಿಡಿದಿರುವರು. ರುಶ್ಯನರು ವಿಸ್ತುಲ ಮತ್ತು ಪಿಲೀಸಿಯದಲ್ಲಿ ಹೊಸ ನೆಲೆಯನ್ನು ನಿರ್ಮಿಸಿರುತ್ತಾರೆ. ವಿರ್ಲೊಕಿನಿಂದ ಪ್ರೈಜ್‌ಮೈಸ್ಲ್ ವರೆಗೆ ಕಠಿಣ ತೋಫು ಕಾಳಗವು ನಡೆಯುತ್ತಿದೆ. ಶತ್ರುಗಳಲ್ಲಿ ವಿಶೇಷ ನಷ್ಟವಾಗಿರುವದು.

ಫ್ರೆಂಚರು ಕೆಮರೂನಿನಲ್ಲಿ ಸೇಕ ಎಂಬ ಪಟ್ಟಣವನ್ನು ಸ್ವಾಧೀನ ಮಾಡಿಕೊಂಡಿದ್ದಾರೆ.

ಪೋರ್ತುಗಲಿನ ಲಿಸ್ಬನಿಗೆ ಪ್ರಧಾನ ಮಂತ್ರಿಯವರು ಹೋಗುತ್ತಿರುವಾಗ ಅವರಿಗೆ ದಂಗೆಗಾರರು ಗುಂಡು ಹೊಡೆದರು. ಹೊಸ ಕೆಬಿನೆಟ್ ಸ್ಥಾಪಿಸಲ್ಪಟ್ಟದೆ. ಘಾಯ ಒಡೆದ ಮಂತ್ರಿಯರು ಗುಣವಾಗುತ್ತಿದ್ದಾರೆ

ಉತ್ತರ ಹಿಂದೂಸ್ಥಾನ.

ಹರಿದ್ವಾರದಲ್ಲಿ ನಡೆದ ಕುಂಭಮೇಳದ ದಿವಸ ಸಂಭವಿಸಿದ ಅವಗಡದ ಕುರಿತು ಸಂಯುಕ್ತ ಸಂಸ್ಥಾನ ಸರಕಾರದವರು ತನಿಕಿ ನಡಿಸಿ, ಈ ಸಂಬಂಧ ಹಿಂದೆ ಆದ ವಾರ್ತೆಯು ನಿಜವಾದುದ್ದೆಂದೂ ಒಟ್ಟಿಗೆ ಈ ಅವಗಡದಲ್ಲಿ ೩೪ ಮಂದಿ ಹತರಾದರೆಂದೂ ಪ್ರಕಟಿಸಿರುತ್ತಾರೆ

ಹಿಂದೂಸ್ಥಾನದಲ್ಲಿ ಹೊಸದಾಗಿ ಜಾರಿಗೆ ಬಂದ ದೇಶರಕ್ಷಣ ವಿಧಿಗನುಸಾರವಾಗಿ ಮುಲ್ತಾನಿನಲ್ಲಿ ಸ್ಪೆಶಲ್ ಜಡ್ಜರುಗಳಿಂದ ತನಕಿಯಾಗುವ ಮೊಕದಮೆಯಲ್ಲಿ ಅಸಿಸ್ಟಂಟ ಪೋಲಿಸ್ ಸುಪರಿಂಟೆಂಡೆಂಟರಾದ ಮಿ| ಕೋಟ್‌ಮೇನರವರು ಈ ರೀತಿ ಹಾಗ್ಮೂಲ ಕೊಟ್ಟಿರುವರು — ಅಲಿಪುರದಲ್ಲಿ ಅತಿ ಕನಿಷ್ಟ ಗಲಭೆಗಳು ನಡೆದಿರುವವು. ದಕಾಯಿತರು ತಮ್ಮನ್ನು ಜರ್ಮನ ಕೈಸರನ ಪ್ರಜೆಗಳೆಂದು ಹೇಳಿಕೊಂಡು, ಬ್ರಿಟಿಷ ಅಧಿಕಾರವು ಹಿಂದೂಸ್ಥಾನದಲ್ಲಿ ನಿಂತು ಹೋಯಿತೆಂಬ ಸುದ್ದಿ ಹುಟ್ಟಿಸಿ, ಯುದ್ಧ ಮಾಡುವ ರಾಜ್ಯಗಳ ಮುಖ್ಯ ಪಟ್ಟಣಗಳ ಹೆಸರನ್ನು ಅಲಿಪುರ ತಹಸೀಲದ ಪಟ್ಟಣಗಳಿಗೆ ಇಟ್ಟರು. ಅಲಿಪುರವನ್ನು ಲಂಡನ್, ಜತೋಯಿಯನ್ನು ಫ್ರಾನ್ಸ್, ಝುಗ್ಗಿವಾಲನ್ನು ಬೆಲ್ಜಿಯಮ್ ಎಂತ ಕರೆದರು. ಮಾರ್ಚಿ ತಾ. ೧೪ರಲ್ಲಿ ಇಂಥಾ ೫ ಪಂಗಡಗಳು ಚದರಿಸಲ್ಪಟ್ಟವು. ಈ ರಾತ್ರಿಯನಂತರ ಒಂದು ದಕಾಯಿತಿ ಮಾತ್ರ ನಡೆಯಿತು. ಝುಗ್ಗಿವಾಲದಲ್ಲಿ ನಡೆದ ೩ನೇ ದಕಾಯಿತಿಯಲ್ಲಿ ದಕಾಯಿತರು ಸಿಕ್ಕಸಿಕ್ಕದ ಹಿಂದೂ ಹೆಂಗಸರನ್ನು ಅವಮಾನ ಪಡಿಸಿದರು. ಅನೇಕರು ಘಾಯ ಒಡೆದರು ಈ ಪೈಕಿ ಒಬ್ಬನು ಹತನಾದನು. ದಕಾಯಿತರ ಸಂಖ್ಯೆ ೫೦೦ ಆಗಿತ್ತು. ದಕಾಯಿತರು ತಮ್ಮನ್ನು ತಾವೇ "ಕಪ್ಪು ಜರ್ಮನ"ರೆಂದೂ "ಹಳದಿ ಜರ್ಮನ"ರೆಂದೂ ಕರೆಯಿಸಿಕೊಂಡರು. ಅದಲ್ಲದೆ ಜರ್ಮನರು ಜತೋಯಿಗೆ ಒಂದು ದಿನದ ಹಾದಿಯಲ್ಲಿದ್ದಾರೆಂಬ ಸುದ್ದಿ ಹುಟ್ಟಿಸಿದರು,

ಘಾಮ್ಮದಲ್ಲಿ ನಡೆದ ದಕಾಯಿತಿ ಮೊಕದಮೆಯಲ್ಲಿ ಪೂನೆಯ ಸಿಟಿ ಮೇಜಿಸ್ಟ್ರೇಟರು ೧೩ ಮಂದಿಗೆ ಜೀವಾಂತ ಬಂಕೋಲ್ಲಿ ಶಿಕ್ಷೆ, ೪ ಅಪಾದಿತರಿಗೆ ೭ ವರ್ಷಗಳ ಬಂಕೋಲಿ ಶಿಕ್ಷೆ, ೭ ಅಪಾದಿತರಿಗೆ ೩ ವರ್ಷಗಳ ಕಠಿಣ ಸಜೆ, ೬ ಅಪಾದಿತರಿಗೆ ಒಂದು ವರ್ಷದ ಕಠಿಣ ಸಜೆ, ೧೦ ಅಪಾದಿತರಿಗೆ ಒಂದೊಂದು ದಿನದ ಕಠಿಣ ಸಜೆ, ವಿಧಿಸಿದರು. ಎಲ್ಲಾ ಅಪಾದಿತರು ಶಿಕ್ಷೆಯಿಂದ ಬಿಡುಗಡೆ ಹೊಂದಿದ ನಂತರ ೫ ವರ್ಷಗಳ ವರೆಗೆ ಪೋಲಿಸಿನವರಿಗೆ ತೋರಿಸಿಕೊಳ್ಳಬೇಕೆಂದೂ ತೀರ್ಮಾನಿಸಿರುತ್ತಾರೆ. ಈ ಅಪಾದಿತರ ಕೈಯ ಸಿಕ್ಕಿದ ವಾರಸುದಾರರಿಲ್ಲದ ೧೫,೦೦೦ ಮೌಲ್ಯದ ಆಭರಣಗಳು ಸರಕಾರಕ್ಕೆ ಸೇರಿಸಲ್ಪಟ್ಟಿರುವವು.

ಜೋರ್ಜ ಸಾರ್ವಭೌಮರ ಜನನ ದಿನೋತ್ಸವವು ಜೂನು ತಾ ೩ ಲ್ಲು ಆಚರಿಸಲ್ಪಡುವದರಿಂದ ಆ ದಿನ ರಜೆ ಇರುವದು. ಆದರೆ ಆ ದಿನ ಇತರ ಯಾವ ಆಡಂಭರಗಳಾಗಲೀ ಇರದು. ಧ್ವಜವನ್ನು ಮಾತ್ರ ಹಾರಿಸಲಾದೀತು ಜನನ ಉತ್ಸವದ ಬಹುಮಾನಗಳು ಪ್ರಕಟಿಸಲ್ಪಡುವವು.

ಗೋಧಿಯ ಬೆಲೆಯು ಲಾಹೋರು ಮತ್ತು ಮೀರಟಿನಲ್ಲಿ ಇಳಿದಿರುವದು. ಲಾಹೋರಿನಲ್ಲಿ ರೂಪಾಯಿಗೆ ೧೧॥ ಸೇರು, ಮೀರಟಿನಲ್ಲಿ ೧೨॥ ಸೇರು ಸಿಕ್ಕುತ್ತದೆ.

ಆರ್ಯ ಸಮಾಜದ ಮೇಲೆ ಬಂದು ಲೇಖನವನ್ನು ಪ್ರಕಟಿಸಿದ್ದರೆಂಬದಾಗಿ ಅಪಾದಿಸಲ್ಪಟ್ಟ "ಶಯ್ಯದ್ ಅಕಬರ" ಎಂಬ ಪತ್ರಿಕೆಯ ಸಂಪಾದಕರಾದ ಚರಣ ಸಿಂಘರವರಿಗೆ ಲಾಹೋರಿನ 1ನೇ ಕ್ಲಾಸ್ ಮೇಜಿಸ್ಟ್ರೇಟರು ೪೦೦ ರೂಪಾಯಿ ಜುಲುಮಾನೆ ವಿಧಿಸಿದರು. ಜುಲುಮಾನೆ ಕೊಡತಪ್ಪಿದರೆ ೩ ತಿಂಗಳ ಸಜೆ ಎಂತ ತೀರ್ಮಾನಿಸಿದರು.

ಕೂಚುಬಿಹಾರಿನ ಮಹಾರಾಜರ ಅರಮನೆಯಿಂದ ಕಳೆದ ಶನಿವಾರ ಕಳವು ಆದ ಮಹಾರಾಣಿಯವರ ಆಭರಣಗಳ ಮೌಲ್ಯವು ೪೦೬,೮೩೦ ರೂಪಾಯಿಗಳದ್ದಾಗಿರುವದು. ಒಂದು ಸಾಲಿನ ವಜ್ರದ ಕಂಠೀಸರ ಒಂದರ ಕ್ರಯ ೬೦,೦೦೦ ರೂಪಾಯಿ, ಮರಕತದ ಸಹಿತವಾದ ವಜ್ರದ ಕುಂಡಲ ಒಂದರ ಕ್ರಯ ೬೦,೦೦೦ ರೂಪಾಯಿ, ವಜ್ರದ ಉಂಗುರ ಒಂದರ ಕ್ರಯ ೫೦,೦೦೦ ರೂಪಾಯಿ, ಮರಕತಸಹಿತವಾದ ವಜ್ರದ ಬ್ರೂಚ್ ಒಂದರ ಕ್ರಯ ೩೦,೦೦೦ ರೂಪಾಯಿ, ಇಷ್ಟು ಆಭರಣಗಳು ಕಳವಾಗಿರುವವು. ಪತ್ತೆಮಾಡಿಕೊಟ್ಟವರಿಗೆ ೩೦,೦೦೦ ರೂಪಾಯಿ ಬಹುಮಾನ ಕೊಡಲಾಗುವದೆಂದು ಪ್ರಕಟಿಸಿರುತ್ತಾರೆ.

ಕಳೆದ ಬುಧವಾರ ರಾತ್ರಿ ಕಲ್ಕತ್ತೆಯ ಕೆನಿಂಗ್ ಟೌನಿನ ಹತ್ತಿರವಿರುವ ಟಂಗ್ರಕಾಲಿ ಎಂಬಲ್ಲಿಯ ವರ್ಗದಾರರಾದ ಬೇಕರ್ ಅಲಿಮುಲ್ಲಾರವರ ಮನೆಯಲ್ಲಿ ಭಾರೀ ದಕಾಯತಿಯು ನಡೆದಿರುವದು. ಸುಮಾರು ೩೫ ಮಂದಿ ದಕಾಯತರು ಆ ಮನೆಯ ಒಳನುಗ್ಗಿ ಆಭರಣಗಳನ್ನು ಇಟ್ಟಿದ್ದ ಸ್ಥಳವನ್ನು ತೋರಿಸಿಕೊಡುವ ಬಗ್ಗೆ ಮನೆಯವರನ್ನು ಬಲತ್ಕರಿಸಿ ಕಾದ ಕಬ್ಬಿಣದಿಂದ ಮನೆಯವರಿಗೆ ಕಾಯಿಸಿಟ್ಟರು. ಆದರೆ ಗ್ರಾಮಸ್ಥರು ಗುಂಪುಗುಂಪಾಗಿ ಕೂಡಿ ದಕಾಯತರನ್ನು ಓಡಿಸಿದರು.

ಟಂಗೈಲಿನಲ್ಲಿರುವ ಒಂದು ತೋಟದ ಮೇನೇಜರರಾದ ಬಾಬು ರಮಣಿ ಮೋಹನ ಮುಜಾಮ್ದಾರರನ್ನು ಯಾರೋ ಗುಂಡು ಹೊಡೆದು ಕೊಂದಿರುವರೆಂಬ ವಾರ್ತೆ ಬಂದದೆ.

ಇದೇ ತಾ. ೭ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೩೩೮೩೪ ಮಂದಿಗೆ ಪ್ಲೇಗು ಬೇನೆಯು ಸೋಂಕಿ ೩೦,೭೬೪ ಮಂದಿ ಮೃತರಾದರು. ಈ ಪೈಕಿ ಮುಂಬಾಯಿಯಲ್ಲಿ ೬೭೩; ಮದ್ರಾಸ್ ೫; ಬಂಗಾಳ ೧೬, ಬಿಹಾರ ಮತ್ತು ಒರಿಸ್ಸ ೩೦೯; ಸಂಯುಕ್ತ ಸಂಸ್ಥಾನ ೧೬೦೩; ಪಂಜಾಬು ೧೭,೭೩೦; ಬರ್ಮ ೧೯; ಮಧ್ಯಸಂಸ್ಥಾನ ೧೩೪; ಸರಹದ್ದಿನ ಸಂಸ್ಥಾನಗಳಲ್ಲಿ ೭೫ ಮರಣಗಳಾಗಿರುವವು.

ಅಲಿಪುರಕ್ಕೆ ಸೇರಿದ ಸೋಪಾರದಲ್ಲಿ ಒಂದು ದೊಡ್ಡ ದಕಾಯತಿಯು ನಡೆದಿರುವದು. ಕಳೆದ ಬೃಹಸ್ಪತಿವಾರ ಬಾಬು ಪಂಚಾನನ್ ಮುಕರ್ಜಿಯವರ ಮನೆಗೆ ಸುಮಾರು ರಾತ್ರಿ ೧೧॥ ಗಂಟೆಗೆ ಆಯುಧಪಾಣಿಗಳಾದ ೩೦ ದಕಾಯಿತರು ನುಗ್ಗಿದರು ಕೆಲವರು ಹೊರಗೆ ನಿಂತು ಗ್ರಾಮಸ್ಥರು ಆ ಮನೆಯವರಿಗೆ ಸಹಾಯವಾಗ್ಗಿ ಬಾರದ ಹಾಗೆ ತಡೆಕಟ್ಟಿದರು. ತನ್ಮಧ್ಯೆ ಇಂಥಾ ದಕಾಯಿತಿಗಳನ್ನು ತಡೆಕಟ್ಟುವರೆ ಗ್ರಾಮದವರು ಏರ್ಪಡಿಸಿಕೊಂಡ ಯುವಕ ವಲಂಟಿಯರರು ಇತರ ಗ್ರಾಮದವರನ್ನು ಸಹಾಯಕ್ಕೆ ಕರೆಕೊಡು ಬಂದು ಸ್ಥಳಿಕ ಚೌಕೀದಾರರೊಡನೆ ದಕಾಯಿತಿ ನಡೆದ ಮನೆಯ ಸಮೀಪಹೋಗಿ ಹೊರಗೆ ಅಡಗಿಕೊಂಡು, ದಕಾಯಿತರು ಒಳಗಿಂದ ಹೊರಬರುವಾಗ ಅವರ ಮೇಲೆ ಬಿದ್ದರು. ಉಭಯತರಿಗೂ ಜಟಾಪಟಿಯಾಗಿ ಉಭಯತರಲ್ಲಿಯೂ ಕೆಲವರು ಗಾಯ ಒಡೆದರು. ಕಡೆಗೆ ದಕಾಯಿತರು ಗಾಯ ಒಡೆದ ತಮ್ಮ ಜೊತೆಗಾರರನ್ನು ಎತ್ತಿಕೊಂಡು ಓಡಿಹೋದರು. ಗಾಯ ಒಡೆದ ಇಬ್ಬರು ದಕಾಯಿತರನ್ನು ಗ್ರಾಮಸ್ಥರು ಹಿಡಿದಿರುತ್ತಾರೆ.

ಮುಂಬಾಯಿಯ ಕಾಲ್ಬಾದೇವಿಯ ಭಾರತೀಯ ಟೊಪ್ಪಿ ಸಾಹುಕಾರರೊಬ್ಬರ ಕೋಠಡಿಗೆ ಬೆಂಕಿಬಿದ್ದು ಸುಮಾರು ೩೦,೦೦೦ ರೂಪಾಯಿಯ ನಷ್ಟವಾಗಿರುವದು.

ಕಲ್ಕತ್ತೆಯ ಸಿ. ಇ. ಡಿ. ಆಫೀಸರನಾದ ದ್ವಿಜೇಂದ್ರ ಚಂದ್ರ ಮುಕರ್ಜಿ ಎಂಬವನು ಕಳೆದ ನವಂಬರ ತಿಂಗಳಲ್ಲಿ ನೆರೆಹೊರೆಯ ಮನೆಗೆ ಹೋಗಿ ೧೪ ವರ್ಷದ ಒಬ್ಬ ಹುಡುಗಿಯನ್ನು ಗುಂಡು ಹೊಡೆದು ಕೊಂದನೆಂಬದಾಗಿ ಅಪಾದಿಸಲ್ಪಟ್ಟಿದ್ದನು. ಇವನಿಗೆ ಸೆಶ್ಯನ್ ಜಡ್ಜರು ಫಾಶೀ ಶಿಕ್ಷೆಯನ್ನು ವಿಧಿಸಿದರು. ಬೆಕ್ಕಿಗೆ ಹೊಡೆದ ಗುಂಡು ತಪ್ಪಿ ಹುಡುಗಿಗೆ ಬಿದ್ದುಹೋಯಿತೆಂಬ ವಾದದ ಮೇಲೆ ಅಪಾದಿತನು ಹೈಕೋರ್ಟಿನಲ್ಲಿ ಮಾಡಿಕೊಂಡ ಅಪೀಲು ತಳ್ಳಿಹಾಕಲ್ಪಟ್ಟು ಹಿಂದಿನ ಶಿಕ್ಷೆಯೇ ಕಾಯಂ ಆಯಿತು.

ಮುಂಬಾಯಿ ಸರಕಾರದವರು ಧಾರವಾಡಿನಲ್ಲಿ ಹೊಸದಾಗಿ ಅಪ್ರಾಯಸ್ಥರಾದ ಬಂದಿಗಳ ಬಗ್ಗೆ ಒಂದು ಬಂದಿಖಾನೆಯನ್ನು ತೆರೆದಿರುತ್ತಾರೆ. ಈ ಬಂದಿಖಾನೆಗೆ ೧೫ ವರ್ಷದಿಂದ ೨೧ ವರ್ಷದ ಪ್ರಾಯದ ಬಂದಿಗಳು ಸೇರಿಸಲ್ಪಡುವರು. ಈ ಬಂದಿಖಾನೆಗೆ ಸೇರಿಸಲ್ಪಡುವವರು ಹಿಂದೆ ಶಿಕ್ಷೆ ಅನುಭವಿಸದವರಾಗಬೇಕು. ೧೩ ತಿಂಗಳಿಗಿಂತ ಕಡಿಮೆ ಶಿಕ್ಷೆಯು ಇಂಥಾ ಬಂದಿವಾನರಿಗೆ ಕೊಡೋಣಾಗದು. ಈ ಕ್ರಮವು "ಬೊರ್ಸ್ಟಾಲ್ ಸಿಸ್ಟಮ್" ಎಂದು ಕರೆಯಲ್ಪಡುತ್ತದೆ.

ದೇಶ ರಕ್ಷಣಾ ವಿಧಿಗನುಸಾರವಾಗಿ "ಕಮ್ರೇಡ" ಮತ್ತು "ಹಮ್ದಾರ್ಡ" ಪತ್ರಿಕೆಗಳ ಸಂಪಾದಕರು ಸರಕಾರದವರಿಂದ ನಿಯಮಿತವಾದ ಸ್ಥಳದಲ್ಲಿ ವಾಸಿಸಬೇಕೆಂದೂ ಅದನ್ನು ಬಿಟ್ಟು ಹೋಗುವದಾದರೆ ಡಿಸ್ಟ್ರಿಕ್ಟ ಮೇಜಿಸ್ಟ್ರೇಟರ ಅಪ್ಪಣೆ ಕೇಳಬೇಕೆಂದೂ ಇವರು ಯಾವ ತರದ ಸಭೆಗಳಿಗೂ ಹಾಜರಾಗಕೂಡದೆಂದೂ ಸರಕಾರದವರು ಹುಕುಂ ಮಾಡಿರುತ್ತಾರೆ.

ಬ್ರಿಟಿಷ ವಸಾಹತಿಗಳಲ್ಲಿರುವ ಒಟ್ಟು ಜನಸಂಖ್ಯೆ ಮತ್ತು ಭಾರತೀಯರ ಜನ ಸಂಖ್ಯೆ ಎಷ್ಟೆಂಬದು ಶ್ರೀಷ್ಟ ಸರಕಾರದವರು ಪ್ರಕಟಿಸಿದ ವರದಿಯಿಂದ ಗೊತ್ತಾಗುತ್ತದೆ. ಬ್ರಿಟಿಷ ಗಿಯಾನ್ನ, ಒಟ್ಟು ಜನಸಂಖ್ಯೆ ೩೦೯,೦೪೧; ಭಾರತೀಯರ ಸಂಖ್ಯೆ ೧೩೬,೫೧೭; ಪ್ರಾಯ ಭರಿತರಾದ ಭಾರತೀಯರ ಜನಸಂಖ್ಯೆ (ಗಂಡಸರು ೫೩,೦೭೮೩; ಹೆಂಗಸರು ೩೪೭೭೯) ೮೭,೮೬೩; ಸೀಲೋನಿನ ಒಟ್ಟು ಜನಸಂಖ್ಯೆ ೪,೧೧೦,೩೬೭; ಭಾರತೀಯರ ಸಂಖ್ಯೆ ೪೭೦೬೫೧; ಪೂರ್ವ ಆಫ್ರೀಕದ ವಸಾಹತಿಯ ಒಟ್ಟು ಸಂಖ್ಯೆ ೪,೦೦೦,೦೦೦; ಭಾರತೀಯರ ಸಂಖ್ಯೆ ೧೧,೮೮೬; ಫಿಜಿ ದ್ವೀಪ ಒಟ್ಟು ಜನಸಂಖ್ಯೆ ೧೩೯,೫೪೧; ಭಾರತೀಯ ಸಂಖ್ಯೆ ೪೦,೨೮೬; ಪ್ರಾಯ ಭರಿತರಾದ ಭಾರತೀಯರ ಸಂಖ್ಯೆ (ಗಂಡಸರು ೨೦,೯೬೩; ಹೆಂಗಸರು ೮೭೮೫)—೨೮,೮೪೭; ಜಮಾಯಿಕ ಒಟ್ಟು ಜನಸಂಖ್ಯೆ ೮೩೧೩೮೩; ಭಾರತೀಯರ ಸಂಖ್ಯೆ ೧೭,೩೮೦; ಪ್ರಾಯ ಭರಿತರಾದವರ ಸಂಖ್ಯೆ (ಗಂಡಸರು ೭,೧೩೭; ಹೆಂಗಸರು ೪೭೭೫) ೧೧೯೧೨.

ಲೀವಾರ್ಡ ದ್ವೀಪಗಳು—ಆಂಗ್ವ ಒಟ್ಟು ಜನಸಂಖ್ಯೆ ೩೨,೨೯೬. ಭಾರತೀಯರ ಸಂಖ್ಯೆ ೩. ಡೊಮಿನಕ ಒಟ್ಟು ಜನಸಂಖ್ಯೆ ೩೩,೮೬೩. ಭಾರತೀಯರ ಸಂಖ್ಯೆ ೮; ಮಲಯ ಸ್ಟೇಟ್ ಒಟ್ಟು ಜನಸಂಖ್ಯೆ ೧,೦೩೬,೯೯೯. ಭಾರತೀಯರ ಜನಸಂಖ್ಯೆ ೧,೭೨೪೬೫; ಪ್ರಾಯಭರಿತರಾದ ಭಾರತೀಯರ ಜನಸಂಖ್ಯೆ (ಗಂಡಸರು ೧೧೬,೬೩೬; ಹೆಂಗಸರು ೨೮,೩೮)—[illegible] ಮೋರಿಷಿಯಸ್ ಒಟ್ಟು ಜನಸಂಖ್ಯೆ ೩೬೬,೦೮೩; ಭಾರತೀಯರ ಸಂಖ್ಯೆ [illegible]; ಪ್ರಾಯಭರಿತರಾದ ಭಾರತೀಯರ ಸಂಖ್ಯೆ (ಗಂಡಸರು ೮೯,[illegible]; ಹೆಂಗಸರು ೭೧,[illegible]); [illegible]

ಸ್ಟ್ರೈಟ್ ಸೆಟ್ಲ್‌ಮೆಂಟ್ ಒಟ್ಟು ಜನಸಂಖ್ಯೆ ೭೧೪,೦೬೯, ಭಾರತೀಯರ ಸಂಖ್ಯೆ ೮೨,೦೫೫, ಟ್ರೆನಿಡಾಡ ಮತ್ತು ಟೊಬಾಗೋ ಒಟ್ಟು ಜನಸಂಖ್ಯೆ ೩೩೩,೫೫೨; ಭಾರತೀಯರ ಸಂಖ್ಯೆ ೫೦,೫೮೫; ಪ್ರಾಯ ನಂತರದ ಭಾರತೀಯರ ಸಂಖ್ಯೆ (ಗಂಡಸರು ೩೧೯೮೯; ಹೆಂಗಸರು ೧೬,೧೫೯) ೪೯,೧೪೮; ಉಗಂಧ ಒಟ್ಟು ಜನಸಂಖ್ಯೆ ೨,೮೪೩,೩೨೫; ಭಾರತೀಯರ ಸಂಖ್ಯೆ ೧೬೨೨

ಬಿಜ್ರ ಎಂಬಲ್ಲಿಯ ರಾಣಿಯವರು ಸೈಂಟ್‌ಜೋನ್ ಎಂಬ್ಯುಲೆನ್ಸ್ ಕೋಲಿನ ಒಂದು ಮೋಟರ್ ಎಂಬ್ಯುಲೆನ್ಸಿಗೆ ಬೇಕಾಗುವ ಖರ್ಚನ್ನು ಕೊಡಲು ಒಪ್ಪಿರುತ್ತಾರೆ. ಭಾರತೀಯ ಹೆಂಗಸರಲ್ಲಿ ಯುದ್ಧಕ್ಕೆ ಮೋಟರ್ ಎಂಬ್ಯುಲೆನ್ಸ್ ದಾನಮಾಡಿದವರಲ್ಲಿ ಇವರೇ ಮೊದಲನೇಯವರು.

ವೈಸರಾಯ ಹಾರ್ಡಿಂಜ ಪ್ರಭುಗಳವರ ಅವಧಿಯು ತೀರಿದ ನಂತರ ಇಸ್ಲಿಂಗ್ಟನ್ ಪ್ರಭುಗಳವರು ಹಿಂದೂಸ್ಥಾನದ ವೈಸರಾಯ ಪ್ರಭುಗಳಾಗಿ ನೇಮಿಸಲ್ಪಡುವರೆಂಬ ವಾರ್ತೆ ಇದೆ.

ಈಸ್ಟ್ ಇಂಡಿಯಾ ರೈಲ್ವೆಯ ಪಿ ಡಬ್ಲ್ಯು. ಇನ್ಸ್‌ಪೆಕ್ಟರ ಸನೇ ಎಂಬವನು ಯುದ್ಧಸಹಾಯ ಫಂಡಿಗೆ ಕೂಲಿಯವರಿಂದಲೂ ಮೇಸ್ತ್ರಿಗಳಿಂದಲೂ ಸುಮಾರು ೨೦೦ ರೂಪಾಯಿ ಕೂಡಿಸಿ, ಕೆಲವು ರೂಪಾಯಿ ಮಾತ್ರ ಫಂಡಿಗೆ ಕೊಟ್ಟು ಉಳಿದದ್ದನ್ನು ದುರುಪಯೋಗ ಮಾಡಿದ್ದಾನಾಗಿ ಆಪಾದಿಸಲ್ಪಟ್ಟು ೬ ತಿಂಗಳ ಕಠಿಣ ಸಜೆಗೆ ಗುರಿಯಾದನು.

ವೈಸರಾಯ ಹಾರ್ಡಿಂಜ ಪ್ರಭುಗಳವರ ಜನನೋತ್ಸವ ದಿನವು ತಾ. ೧೯ರಲ್ಲು ಸಿಮ್ಲಾದಲ್ಲಿ ಅತಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು ಕೆಲವು ಸಾವಿರ ಶಾಲಾ ಮಕ್ಕಳಿಗೆ ಅನಂಡೇಲಿನಲ್ಲಿ ಉಪಚಾರ ವಾಯಿತು. ವೈಸರಾಯ ಪ್ರಭುಗಳವರೂ, ಪಂಜಾಬಿನ ಲೆಫ್ಟನೆಂಟ ಗವರ್ನರರವರೂ, ಸರ್ವ ಸೇನಾಧಿಪತಿಯೂ, ವೈಸರಾಯ ಕಾರ್ಯ ನಿರ್ವಾಹಕ ಸಭೆಯ ಮೆಂಬರರೂ ಹಾಜರಿದ್ದರು. ಹಾರ್ಡಿಂಜ ಪ್ರಭುಗಳವರು ಹಿಂದೂಸ್ಥಾನವನ್ನು ಬಿಟ್ಟು ಹೋದನಂತರವೂ ಮಕ್ಕಳು ಅವರ ಜನನ ಜ್ಞಾಪಕಾರ್ಥವಾದ ಹಬ್ಬವು ಆಚರಿಸುವಂತೆ ಏರ್ಪಾಡು ನಡದದೆ.

ಕಲ್ಕತ್ತೆಯ ಒಂದು ಚಾದ ಅಂಗಡಿಯಲ್ಲಿ ಸ್ಥಳೀಕ ಕ್ರೈಸ್ತ ಗ್ಯಾಡಿಗಾರರಿಗೂ ಮುಸಲ್ಮಾನ ಗಾಡಿಗಾರರಿಗೂ ಜಟಾಪಟಿ ಆಗಿ ಡಿಕ್ರುಜ್ ಮೊದಲಾದ ೯ ಜನ ದೇಶೀಯ ಕ್ರೈಸ್ತರು ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದರು. ತುರ್ಕರು ಯುದ್ಧಕ್ಕೆ ಸೇರಿದ ವಿಷಯ ಚಾ ಅಂಗಡಿಯಲ್ಲಿ ಪ್ರಸ್ತಾಪ ನಡೆದು ತುರ್ಕರಿಗೆ ಅಪಜಯವಾಗುತ್ತದೆಂದು ಕ್ರೈಸ್ತರು ಹೇಳಿದ್ದರಿಂದ ಮುಸಲ್ಮಾನರು ಸಿಟ್ಟುಗೊಂಡು ಉಭಯತರೊಳಗೆ ಕಠಿಣ ಗಲಭೆ ನಡೆದಿದ್ದಿತು. ಹೈಕೋರ್ಟು ಸೆಶ್ಶನ್ಸಿನಲ್ಲಿ ಈ ಮೊಕದಮೆ ತನಿಕೆ ನಡೆದು ಜಡ್ಜರು ಆಪಾದಿತರಲ್ಲಿ ಒಬ್ಬೊಬ್ಬನಿಗೆ ೧೮ ತಿಂಗಳ ಸಜಾ ವಿಧಿಸಿರುತ್ತಾರೆ.

ಕಲ್ಕತ್ತೆಯ ಕೊಲ್ಲಿಂಗ ಪೋಲಿಸ್ ಸ್ಟೇಶನಿನ ಕನ್‌ಸ್ಟೇಬಲ್ ಶೇಖ್ ಬರಫಾಲ್ ಎಂಬವನು ಇಬ್ಬರು ಗಾಡಿಯವರಿಂದ ರೂ ೫ ಲಂಚ ತಿಂದಿದ್ದಾನಾಗಿ ಆಪಾದಿಸಲ್ಪಟ್ಟು ೫ ತಿಂಗಳ ಕಠಿಣ ಸಜೆಗೆ ಗುರಿಯಾದನು. ಗಾಡಿಗಾರರ ಮೇಲಿದ್ದ ಮೊಕದಮೆಯು ತನಿಕೆ ಯಾಗುವ ದಿನ ಈ ಕನ್‌ಸ್ಟೇಬಲನು ಗಾಡಿಗಾರರ ಬಳಿಗೆ ಹೋಗಿ ರೂ. ೫ ಕೊಟ್ಟರೆ ಮೊಕದಮೆಯನ್ನು ತೆಗೆದು ಹಾಕಿಸುವೆನೆಂದು ಹೇಳಿದ್ದರಿಂದ ಅವರು ಇವನ ಮಾತಿಗೆ ಒಪ್ಪಿ ಕೋರ್ಟಿನ ಹೊರಗೆ ನಿಂತುಕೊಂಡರು. ಕನ್‌ಸ್ಟೇಬಲನು ಒಳಗೆ ಹೋಗಿ ಮಧ್ಯಾಹ್ನ ಹೊರಗೆ ಬಂದು ಅವರ ಮೇಲಿನ ಮೊಕದಮೆ ತೆಗೆದು ಹಾಕೋಣಾಯಿತು ಎಂದು ಹೇಳಿ ಅವರ ಕೈಯಲ್ಲಿದ್ದ ಹತ್ತು ರೂಪಾಯಿಯ ನೋಟನ್ನು ಒಂದು ಅಂಗಡಿಯಲ್ಲಿ ಮುರಿಯಿಸಿ ೫ ರೂಪಾಯಿ ಇಟ್ಟುಕೊಂಡನು. ನಂತರ ಈ ಗಾಡಿಗಾರರು ತನಿಕೆ ದಿನ ಹಾಜರಾಗಲಿಲ್ಲವೆಂಬದಾಗಿ ಗಾಡಿಗಾರರ ಮೇಲೆ ಮೇಜಿಸ್ಟ್ರೇಟ ಕೋರ್ಟಿನಿಂದ ವಾರಾಂಟು ಹೊರಟಿತು. ಈ ಗಾಡಿಗಾರರನ್ನು ವಾರಾಂಟಿನ ಮೇಲೆ ಹಿಡಿದು ತಂದಾಗ ಅವರು ತಾವು ಕನ್‌ಸ್ಟೇಬಲನಿಂದ ಮೋಸಹೋದೆವೆಂದು ತಿಳಿದು ಇದ್ದ ಸ್ಥಿತಿಯನ್ನು ತಿಳಿಸಿದ್ದರಿಂದ ಕನ್‌ಸ್ಟೇಬಲನ ಮೇಲೆ ಮೊಕದಮೆ ನಡೆದು ೫ ತಿಂಗಳ ಕಠಿಣ ಸಜಾ ಹೊಂದಿದನು.

ವೈಸರಾಯ ಪ್ರಭುಗಳವರು ಮಿಂಟೋ ಮತ್ತು ರಿಫನ್ ಪ್ರಭುಗಳವರ ಪ್ರತಿಮೆಗಳನ್ನು ಪ್ರತಿಷ್ಠಿಸಲು ಕಲ್ಕತ್ತೆಗೆ ಹೋದ ಸಂದರ್ಭದಲ್ಲಿ ಈ ಸಮಾರಂಭವನ್ನು ನೋಡ ಹೋಗುತ್ತಿದ್ದ ಕಲ್ಕತ್ತೆಯ ಲೋರ್ಡ್ ಬಿಶೋಪರು, ಬಹುಮಾನಪಟ್ಟ ನವಾಬ್ ಸೈಯದ್ ಶಮ್ಸುಲ ಹುದ್ದಾ, ಪ್ರೆಸಿಡನ್ಸಿ ಬ್ರಿಗೇಡಿನ ಕಮೋಂಡಿಂಗ್ ಆಫೀಸರರು, ಗವರ್ನಮೆಂಟಿನ ಚೀಫ್ ಸೆಕ್ರೆಟರಿ, ಬಹುಮಾನಪಟ್ಟ ಚೌದುರಿ ಮೊದಲಾದ ಮಾನ್ಯ ಗೃಹಸ್ಥರ ಗಾಡಿಗಳನ್ನು ಸಿಪಾಯರು ನಿಲ್ಲಿಸಿ ತನಿಕೆ ಮಾಡಿದ್ದರು ಈ ಸಂಬಂಧ ಬಂಗಾಳ ಸರಕಾರದವರು ತನಿಕೆ ನಡಿಸಿ, ಸಿಪಾಯರಿಗೆ ಈ ಅಪ್ಪಣೆಯು ಹವಾಲ್ದಾರನಿಂದ ದೊರಕಿರಬೇಕೆಂತಲೂ ಪೋಲಿಸ್ ಕಮಿಶನರ್ ಮೊದಲಾದ ದೊಡ್ಡ ಆಫೀಸರರಿಂದ ಈ ಅಪ್ಪಣೆಯು ಹೊರಡಲಿಲ್ಲವೆಂದೂ ತಿಳಕೊಂಡು ಸದರಿ ಮಾನ್ಯ ಗೃಹಸ್ಥರಿಗೆ ಇದರಿಂದ ಉಂಟಾದ ತೊಂದರೆಗಳಿಗಾಗಿ ತಮ್ಮ ವಿಷಾದವನ್ನು ವ್ಯಕ್ತಗೊಳಿಸಿರುತ್ತಾರೆ.

ದಕ್ಷಿಣ ಹಿಂದೂಸ್ಥಾನ.

ಮದ್ರಾಸ್ ಸಂಸ್ಥಾನದಲ್ಲಿ ಕಳದ ವರ್ಷ ದುಷ್ಟ ಮೃಗ ಮತ್ತು ವಿಷಜಂತುಗಳಿಂದ ಮೃತಪಟ್ಟವರ ಸಂಖ್ಯೆಯು ಈಗ ತಾನೇ ಪ್ರಕಟವಾಗಿರುವದು. ದುಷ್ಟ ಮೃಗಗಳಿಗೆ ತುತ್ತಾದವರ ಸಂಖ್ಯೆಯು ಸಂಸ್ಥಾನದಲ್ಲಿ ಮೆಲ್ಲನೆ ಹೆಚ್ಚುತ್ತಾ ಬರುವಂತೆ ತೋರುತ್ತದೆ ಆದರೆ ವಿಷಜಂತುಗಳಿಗೆ ತುತ್ತಾದವರ ಸಂಖ್ಯೆ ತುಸ ತಗ್ಗಿರುತ್ತದೆ ವಿಶಾಖಪಟ್ಣ ಮತ್ತು ಗಂಜಾಮ ಸಲ್ಲಿ ಹುಲಿಗಳಿಂದ ೯೧ ಮತ್ತು ೪೧ ಮಂದಿ ಕೊಲ್ಲಲ್ಪಟ್ಟರು ೧೧೫ ಮಂದಿ ಹೆಬ್ಬುಲಿಯಿಂದ, ೧೮ ಮಂದಿ ಕರಡಿಗಳಿಂದ, ೫ ಮಂದಿ ತೋಳಗಳಿಂದ, ೧೧ ಮಂದಿ ಕತ್ತೆಕಿರುಬನಿಂದ, ಒಬ್ಬ ಆನೆಯಿಂದ ಕೊಲ್ಲಲ್ಪಟ್ಟರು. ವಿಷಜಂತುಗಳಿಗೆ ಸುಮಾರು ೧೫೧೪ ಮಂದಿ ತುತ್ತಾದರು. ೯,೦೭೯ ದನಕರುಗಳು ಹೆಬ್ಬುಲಿಯಿಂದಲೂ, ೨,೫೯೦ ಹುಲಿಯಿಂದಲೂ, ೧೭೧೨ ವಿಷಜಂತುಗಳಿಂದಲೂ ಕೊಲ್ಲಲ್ಪಟ್ಟವು. ದುಷ್ಟ ಪ್ರಾಣಿಗಳಿಗೆ ಒಟ್ಟಿಗೆ ತುತ್ತಾದ ದನಕರುಗಳ ಸಂಖ್ಯೆ ೧೩,೨೮೭, ವರ್ಷ ಕಾಲ ದುಷ್ಟ ಮೃಗಗಳನ್ನು ಕೊಂದವರಿಗೆ ಸುಮಾರು ೨೧,೫೦೦ ರೂಪಾಯಿ ಸರಕಾರದವರಿಂದ ಇನಾಂ ದೊರಕಿರುವದು. ೭೯ ಹುಲಿ, ೭೧೧ ಚಿರತೆ, ೪೩ ಕರಡಿ, ೨ ತೋಳಗಳನ್ನು ಕೋವಿ ಸುಟ್ಟು ಕೊಂದರು ಕಳದ ವರ್ಷ ಒಟ್ಟಿಗೆ ೨,೭೩೨ ಕೋವಿ ಲೈಸನ್ಸುಗಳು ಕೊಡೋಣಾದವು ಹಿಂದಿನ ವರ್ಷ ೩೦೨೩ ಲೈಸನ್ಸುಗಳೂ, ೧೯೧೨ರಲ್ಲು ೩೦೯೬ ಲೈಸನ್ಸುಗಳೂ ಕೊಡೋಣಾಗಿದ್ದವು.

ಪಾಲ್ಘಾಟ್ ತಾಲೂಕಿನ ಪೈರುಗಳಿಗೆ ಒಂದು ವಿಧದ ಹುಳ ಬಿದ್ದು ವಿಶೇಷ ನಷ್ಟವಾಗಿರುವದು. ಈ ವಿಷಯ ಸರಕಾರದವರಿಗೆ ವರದಿಯಾಗಿರುವದು.

ಕನ್ಯಾನ್ನೂರಿನಲ್ಲಿ ಒಂದು ಪರಸ್ಪರ ಸಹಾಯಕ ಸಂಘವು ಸ್ಥಾಪಿಸಲ್ಪಟ್ಟಿರುವದು.

ದಕ್ಷಿಣ ಮಲಬಾರಿನಲ್ಲಿ ಪಾಲ್ನಿ ಯಾತ್ರಿಕರನ್ನು ಬಂಗಪಡಿಸಿದ್ದಾರಾಗಿ ೧೬ ಮಾಪಿಳ್ಳೆಯರು ವಿಚಾರಣೆಗೆ ಗುರಿ ಆಗಿದ್ದರು ಈ ಯಾತ್ರಿಕರು ಮಸೀದಿಯ ಬದಿಯಲ್ಲಿದ್ದ ದಾರಿಯಲ್ಲಿ ಗಾಯನ ಮಾಡುತ್ತಾ ಹೋಗುತ್ತಿರುವಾಗ ಮಾಪಿಳ್ಳೆಯರು ಉರಿದಾಂಬಿ ಇವರ ಮೇಲೆ ಬಿದ್ದುದರಿಂದ ೭ ಮಂದಿ ಯಾತ್ರಿಕರು ಕಠಿಣ ಗಾಯ ಒಡೆದರು. ಕಲಿಕೋಟೆಯ ಡೆಪ್ಯುಟಿ ಕಲೆಕ್ಟರರು ಪ್ರತಿ ಆಪಾದಿತನಿಗೂ ಒಂದೊಂದು ತಿಂಗಳ ಸಜೆ ಮತ್ತು ಐದೈದು ರೂಪಾಯಿ ಜುಲುಮಾನೆ ವಿಧಿಸಿರುತ್ತಾರೆ.

ಕೊಯಮುತ್ತೂರಿನ ಟ್ರೈನ್ ಬಂಡಿಯು ಪ್ರಯಾಣಿಕರ ಸಹಿತ ಕಲಿಕೋಟೆಯ ಮೈಲಿಗೆ ಸೇರಲು ಪೊದನೂರಿಗೆ ಹೋಗುತ್ತಿರುವಾಗಿ ಶಂಟಿಂಗ್ ಲೈನಿನಲ್ಲಿದ್ದ ಗಾಡಿಗಳಿಗೆ ತಾಗಿ ಒಬ್ಬ ಗಾರ್ಡನಿಗೂ ೧೨ ಪ್ರಯಾಣಿಕರಿಗೂ ಜಕಂ ಆಗಿರುತ್ತದೆ. ಗಾಡಿಗಳಿಗೂ ಜಕಂ ಆಗಿಯದೆ.

ಮೈಸೂರು ಮಹಾರಾಜರಿಂದ ಜೂನು ತಾ. ೨ರಲ್ಲು ಉದಕಮಂಡಲದಲ್ಲಿ ಕೊಡೋಣಾಗುವ ಗಾರ್ಡನ್ [illegible] ಗವರ್ನರ ಪ್ರಭುಗಳವರು ಚಿತ್ತೈಸುವರು.

ದಕ್ಷಿಣ ಕನ್ನಡ.

ಬಾಡಿಗೆಗೆ ಮನೆ ಸಿದ್ಧವಿದೆ.

ಒಂದು ಕುಟುಂಬಕ್ಕೆ ಇರಲು ಸರಿಯಾದ ಸ್ಥಳವಿದ್ದು ನೆಲಕ್ಕೆ ಇಟ್ಟಿಗೆ ಮುಚ್ಚಲ್ಪಟ್ಟಿರುವದು.

ಅನುಕೂಲತೆ—ಬೇಸಿಗೆಯಲ್ಲಿ ಸಹಾ ನೀರಿನ ಕೊರತೆ ಇಲ್ಲ. ಒಂದು ಹಿತ್ತಲಲ್ಲಿ ಒಂದೇ ಮನೆ. ಇದಕ್ಕೆ ಬಚ್ಚಲು ಪಾಯಿಖಾನೆ ಸಹಾ ಇದೆ. ಗಾಳಿ ಚೆನ್ನಾಗಿ ಹೊರಡಲು ವಸತಿ ಇದೆ. ಇದು ಮೈದಾನಿಗೆ ೪ ಫರ್ಲಂಗ್ ದೂರವಿದ್ದು ಬೋಳಾರದ ಹತ್ತರವಾಗಿದೆ. ಬಾಡಿಗೆಯು ಖಾಯಿಸಿ ಮೇಲೆ.

ವಿಳಾಸ:— S V C/o The Woollen Mart, Mangalore.

ವಿಟ್ಲ:—ಇದೇ ಕಳದ ತಾ. ೧೬ನೇ ರವಿವಾರ ಮಧ್ಯಾಹ್ನ ೧ ಘಂಟೆ ಸಮಯ ಇಲ್ಲಿಯ ಮ। ರಾ। ರಾ। ರವಿವರ್ಮ ನರಸಿಂಹ ರಾಜರವರು ರಾ। ಚಿಪ್ಪಾರ ಅರಮನೆಯಲ್ಲಿರುವ ಮಾಣಿಲ ರಾಮಯ್ಯ ಬಲ್ಲಾಳರ ಭಾಗಿನೇಯರು ವ ತನ್ನ ಮಕ್ಕಳು ಅಥವಾ ಚಲುವಮ್ಮ ಯಾನೆ ದೊಡ್ಡಮ್ಮ, ಕೃಷ್ಣಯ್ಯ, ತಿಮ್ಮಯ್ಯ ಯಾನೆ ತಿರ್ಮಲಯ್ಯ, ಸೌಬದ್ರಮ್ಮ, ಬೋಳಯಜ್ಞ ಯಾನೆ ಜನಾರ್ಧನಯ್ಯ, ಸೀತಮ್ಮ, ಲಕ್ಷುಮಮ್ಮ, ಆದಿತ್ಯಯ್ಯ, ರುಗ್ಮಿಣಿಯಮ್ಮ, ರಾಮಯ್ಯ ಎಂಬ ತನ್ನ ಹತ್ತು ಮಂದಿ ಮಕ್ಕಳನ್ನು ಅವರು ಆಚರಿಸುವ ಅಳಿಯ ಸಂತಾನ ಕಟ್ಟಿನ ಪದ್ಧತಿ ಪ್ರಕಾರ ತನ್ನ ಕುಟುಂಬದ ಮೆಂಬರರಾಗಿ ಅತಿ ವಿಜೃಂಭಣೆಯಿಂದ ದತ್ತಸ್ವೀಕಾರ ಮಾಡಿಕೊಂಡ ಸಂಗತಿಯನ್ನು ತಿಳಿಸುವರೆ ಬಹಳ ಸಂತೋಷಪಡುತ್ತೇವೆ ಆ ಸಮಯ ವಿಟ್ಲ ಸೀಮೆಯ, ವ ಬೇರೆ ಸೀಮೆಗೆ ಸೇರಿದ ಪ್ರಮುಖರೂ, ಮ। ರಾ। ರಾ। ಕೆ ಪಿ. ಮಾಧವರಾವ್ ಹೈಕೋರ್ಟು ವಕೀಲ್ ಮದ್ರಾಸ್ ಇವರೇ ಮೊದಲಾದ ಗೃಹಸ್ಥರುಗಳೂ ಹಾಜರಿದ್ದರು

ಈ ದಿನ ಸುಮಾರು ೬೦೦ ಬ್ರಾಹ್ಮಣರಿಗೆ ಭೋಜನ ವ ದಕ್ಷಿಣೆ ತಾಂಬೂಲಾದಿಗಳಿಂದ ತೃಪ್ತಿಪಡಿಸಿದ್ದಲ್ಲದೆ, ಸೀಮೆಯ ಬಾಕಿ ಜನರಿಗೆ ಊಟ ಉಪಚಾರಗಳಿಂದ ಸತ್ಕರಿಸಿ ಸಂತೋಷಪಡಿಸಲಾಯಿತು.

ಮಂಗಳೂರು.

ಇದೇ ಮೇ ತಾ. ೨೪ನೇ ಸೋಮವಾರ ದಿನ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗ್ ಜರಗುವದು.

ಜಿಲ್ಲಾ ಕಲೆಕ್ಟರ ದೊರೆಗಳವರು ಇದೇ ತಾ. ೩೫-೨೬ ಗುರುಪುರ, ತಾ ೨೭-೨೮ ಮೂಡಬಿದ್ರೆ, ತಾ. ೨೯-೩೦-೩೧ ಕಾರ್ಕಳ, ಜೂನು ತಾ. ೧-೨ ಬಂಟ್ವಾಳ, ಈ ರೀತಿ ಸರ್ಕೀಟು ಬೆಳಸಿ ತಾ ೩ಕ್ಕೆ ಮಂಗಳೂರಿಗೆ ಹಿಂತಿರಳಿ ಬರುವರು

ಇಲ್ಲಿಯ ಟೌನ್ ಪೋಲಿಸ್ ಸಬ್ ಇನ್ಸ್‌ಪೆಕ್ಟರರಾದ ರಾ। ಕೆ. ರಾಮಚಂದ್ರರವರಿಗೆ ಕೊಲ್ಲೂರಿಗೂ, ಮ। ಐ ಸೋನ್ಸರಿಗೆ ಕಾಸರಗೋಡಿಗೂ, ರಾ। ಕೋಟೆಕಾರ ಸುಂದರರಾಯರಿಗೆ ಬೆಳ್ಮಾರೆಗೂ, ಬೆಳ್ಮಾರೆಯ ಸಬ್ ಇನ್ಸ್‌ಪೆಕ್ಟರ್ ರಾ। ಕೆ. ಬಾಬುರವರಿಗೆ ಬಾರ್ಕೂರಿಗೂ ವರ್ಗವಾಗಿಯದೆ.

ಪೋಸ್ಟು ಮಾಸ್ಟರ್ ಜನರಲ್ ದೊರೆಗಳವರು ಇದೇ ತಾ. ೧೭ರಲ್ಲು ಇಲ್ಲಿಗೆ ಚಿತ್ತೈಸಿ ತಾ. ೧೮ರಲ್ಲು ಇಲ್ಲಿಯ ಪೋಸ್ಟಾಫೀಸನ್ನು ಸಂದರ್ಶಿಸಿ ತನಿಕೆ ನಡಿಸಿರುತ್ತಾರೆ.

ಕೇರಿ ಅನ್ನು ಸೆಟ್ಟಿ ಎಂಬವನು ಉರ್ವದ ಮಾರಿಗುಡಿಗೆ ಜಾತ್ರೆಗೆ ಬಂದಿದ್ದವರಲ್ಲಿ ಕೆಲವರ ಅಂಗಿ ವಸ್ತ್ರ ಇತ್ಯಾದಿಗಳನ್ನು ಕಳವು ಮಾಡಿದ್ದಾನಾಗಿ ಆಪಾದಿಸಲ್ಪಟ್ಟು ಪೋಲೀಸಿನವರಿಂದ ಚಾರ್ಜು ಮಾಡಲ್ಪಟ್ಟಿರುತ್ತಾನೆ.

ಬಂದರದಲ್ಲಿ ಹಿಂದೆ ಒಂದು ಸಲ ಮರದ ತುಂಡುಗಳನ್ನು ಕದ್ದುಕೊಂಡು ಶಿಕ್ಷೆ ಹೊಂದಿದ ಹಾಜಿ ಬ್ಯಾರಿ ಎಂಬವನು ಫಸ್ಟ್ ಪೋರ್ಟು ಆಫೀಸಿನ ಪಾಯಖಾನೆಯ ಹಲಿಗೆಯ ತುಂಡನ್ನು ಕದ್ದುಕೊಂಡಿರುವನಾಗಿ ತಿಳಿದು ಬಂದದ್ದ [illegible]

ದೋಣಿ ಕಳವು ಮಾಡಿದ್ದರಾಗಿ ಆಪಾದಿಸಲ್ಪಟ್ಟ ಮಾಪಿಳ್ಳೆಯರಲ್ಲಿ ಹಮ್ಮದೆ, ಹಮ್ಮಬ್ಬ, ಕುಂಞ್ಞಾಮು ಎಂಬ ಮೂವರಿಗೆ ಒಂದೊಂದು ತಿಂಗಳ ಸಜಾ ವಿಧಿಸಲ್ಪಟ್ಟಿರುವದು

ಹಂಪನಕಟ್ಟೆಯಲ್ಲಿ ಕಿಶಿ ಕಳವು ಮಾಡಿದ್ದನಾಗಿ ಆಪಾದಿಸಲ್ಪಟ್ಟ ಗೋಂಟ್ಲಿಂಗನಿಗೆ ೬ ತಿಂಗಳ ಕಠಿಣ ಸಜಾ ವಿಧಿಸೋಣಾಯಿತು.

ಬಯಸ್ಕೋಪು ಕಂಪೆನಿಯವರಿಗೆ ದಗಾ ಮಾಡಿದ್ದನಾಗಿ ಆಪಾದಿಸಲ್ಪಟ್ಟ ಸಾಯಿರ ಪೋಜನಿಗೆ ೩ ತಿಂಗಳ ಸಜೆ ವಿಧಿಸಲ್ಪಟ್ಟದೆ

ಕದ್ರಿಯ ಅಂಗಡಿಯೊಂದರಲ್ಲಿ ಸೋಡ ಕುಡಿದು ಸೋಡ ಬಾಟ್ಲಿ ಸಹಿತ ಪರಾರಿಯಾದ ಅಬ್ಬು ಬ್ಯಾರಿಗೆ ೩ ತಿಂಗಳ ಸಜಾ ವಿಧಿಸೋಣಾಗಿದೆ

ಮ। ಕಾವಿಲ ಸಾಲ್ಡಾನ್ಹರಲ್ಲಿ ಕಳವು ಮಾಡಿದ ಜಾಕಿ ಎಂಬವನಿಂದ ಕಳವು ಆಭರಣಗಳನ್ನು ಪೀಟರ್ ಎಂಬವನು ಇಟ್ಟುಕೊಂಡಿದ್ದನೆಂಬದಾಗಿ ಸದರಿ ಪೀಟರನು ವಿಚಾರಣೆಗೆ ಗುರಿ ಮಾಡಲ್ಪಟ್ಟಿದ್ದನು ಇವನಿಗೆ ಮೆಜಿಸ್ಟ್ರೇಟರು ೧೦೦ ರೂಪಾಯಿ ಜುಲುಮಾನೆ, ಜುಲುಮಾನೆ ಕೊಡತಪ್ಪಿದರೆ ೨ ತಿಂಗಳ ಕಠಿಣ ಸಜೆ ಎಂತ ತೀರ್ಮಾನಿಸಿದರು

ಡಿಸ್ಟ್ರಿಕ್ಟಿನ ಮುನ್ಸೀಫ ಕೋರ್ಟುಗಳ ಶೆಕೆಕಾಲದ ರಜೆಯು ಇದೇ ತಾ ೩೦ಕ್ಕೆ ತೀರಿ ತಾ ೩೧ಕ್ಕೆ ಕೋರ್ಟು ಪ್ರಾರಂಭವಾಗುವದು

ರಜೆಯಮೇಲಿರುವ ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಪೋಲಿಸ್ ಸುಪರಿಂಟೆಂಡೆಂಟರಾದ ರಾ। ಎ ಸುಬ್ಬರಾಯರಿಗೆ ೧೨ ದಿವಸಗಳ ಹೆಚ್ಚಿಗೆ ರಜೆ ಕೊಡೋಣಾಗಿರುವದು

ಸಳ್ಯದಲ್ಲಿ ಸಬ್ ರಿಜಿಸ್ಟ್ರಾರರಾಗಿರುವ ರಾ ಎಮ್ ಲಕ್ಷ್ಮಣರಾಯರಿಗೆ ದಕ್ಷಿಣ ಆಫ್ರಿಕಾಡಿನ ಅನ್ನಿಯೂರಿಗೂ ಉತ್ತರ ಮಲಬಾರಿನ ಪಾನಂತ್ರೋಡಿಯಲ್ಲಿ ಸಬ್ ರಿಜಿಸ್ಟ್ರಾರರಾಗಿರುವ ರಾ। ಎ ಎಲ್ ವಸ್ಕರೇಂಜ್ನರಿಗೆ ಸುಳ್ಯಕ್ಕೂ ಬಂಟ್ವಾಳದ ಸಬ್ ರಿಜಿಸ್ಟ್ರಾರರಾಗಿರುವ ಮ। ಎಫ್. ಸೋನ್ಸರಿಗೆ ಉಡ್ಪಿಗೂ ಉಡ್ಪಿಯ ಸಬ್ ರಿಜಿಸ್ಟ್ರಾರರಾಗಿರುವ ರಾ। ಎಮ್ ದೇವರಾಯರಿಗೆ ಬಂಟ್ವಾಳಕ್ಕೂ ವರ್ಗವಾಗಿಯದೆ

ಗೊಲ್ಲರಕೇರಿಯಲ್ಲಿ ರಾ। ಕುಡ್ವ ಆನಂದರಾಯರ ಮನೆಗೆ ಇದೇ ೨೦ನೇ ರಾತ್ರಿ ಕಳ್ಳರು ಕನ್ನಹಾಕಿ ನುಗ್ಗಿ ವಜ್ರದ ಉಂಗುರ ಇತ್ಯಾದಿಗಳನ್ನು ಕಳವು ಮಾಡಿದ್ದಾರಾಗಿ ಕೇಳುತ್ತೇವೆ

ಮಲಬಾರಿನಲ್ಲಿ ಜನರಲ್ ಡ್ಯೂಟಿಯ ಮೇಲಿರುವ ಮ ರಾ। ಪಿ ಕುಂಞ್ಞಾಯಾನ್ ಬಹದ್ದೂರರವರ ದಕ್ಷಿಣ ಕನ್ನಡ ಟ್ರೆಜರಿ ಡ್ಯೂಪಿಟಿ ಕಲೆಕ್ಟರರಾಗಿ ವರ್ಗಾಯಿಸಲ್ಪಟ್ಟಿದ್ದಾರೆ

ಮಾನ್ಯ ಗೋಖಲೆಯರ ಸ್ಮಾರಕ ಫಂಡಿಗೆ ವಂತಿಗೆ ಕೊಟ್ಟವರ ಹೆಸರುಗಳೂ ಮೊಬಲಗೂ—

ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ ಬಗ್ಗೆ ಮ। ರಾ। ಕಾರ್ನಾಡ ಸದಾಶಿವರಾವ್ ರೂ ೨೫, ಮ। ರಾ। ಎಮ್ ಮಾಧವರಾವ್ ರೂ ೧೦, ಮ। ರಾ। ಎಸ್ ರಾಘವೇಂದ್ರರಾವ್ ರೂ ೨, ಮ। ರಾ। ಅತ್ತಾವರ ಮಂಜಪ್ಪ ರೂ ೧

ಮಂಗಳೂರು ಮೊಗೇಯರರ "ಶ್ರೀ ಜ್ಞಾನೋದಯ ಸಮಾಜ"

ಸಮಾಜದ ಜ್ಞಾನೋದಯ ಶಾಲಾ ಮಂದಿರ ಮತ್ತು ಗ್ರಂಥ ಸಂಗ್ರಹಾಲಯ ಸಂಸ್ಥಾಪನಾ ಬಂಡಾರಕ್ಕೆ ಉದಾರ ಭಾವದಿಂದ ದಾನವಾಗಿ ಕೊಟ್ಟ ದಾತರ ಹೆಸರುಗಳು —

ಸರ್. ಸಾಸೂನು ಜೆ ಡೇವಿಡ್ ಬಾರೊನೆಟ್ ರೂ ೫ ಸರ್ ಫಾಸುಲ್ ಬ್ಯಾ, ಕರಿಂಮ್ ಬ್ಯಾ ರೂ ೫, ಕೆ ಯಸ್ ರಾಮಸ್ವಾಮಿ ಅಯ್ಯರ್ ರೂ ೫ ಇ. ಇ. ಯಸ್ ಯನ್ ಪಿ ಮತ್ತು ಕಂಪೆನಿ ರೂ ೫, ಆಲ್ಪರ್ಡ್ ಡಿಕೆನ್ಸನ್ ರೂ ೫, ಕೆ ಚಂದು ಜೆ ಪುತ್ರಣ್ಣಾಯ ರೂ ೫—೫—೫ ಕೆ ಕಾಂತು ಪುತ್ರಣ್ಣಾಯ ರೂ. ೫—೧—೬, ಕೆ ಮುತ್ತಯ್ಯ ಬಂಗೇರ ರೂ. ೨, ಹೊರ್ಮುಜ ಇ ಬಾಮಜ್ಜ ರೂ. ೨, ಯಸ್ ಯನ್. ಪೋಂಚಕಾನವಾಲ (ಸೆಂಟ್ರಲ್ ಬೇಂಕಿನ ಮೆನೇಜರರು) ರೂ. ೨; ಆರ್ ಜೆ ಅಬಟ್ ರೂ. ೨, ಯನ್ ಡಿ ಟಾಟ ರೂ ೨, ಕ್ರೋಫೊರ್ಟ್ ಮೋದಿ ರೂ ೨, ನರೋತ್ತಮ ಮುರಾರ್ಜಿ ಗೋಕುಲದಾಸ್ ರೂ, ೨; ಸರ್. ವಿಠಲ್‌ದಾಸ ಠಾಕರ್‌ಸಿ ರೂ. ೨, ಯಚ್. ಪಿ. ದಾಟು ೨; ಯಿ. ಕೆ. ಆರ್. ರೂ. ೧ ಮುಲ್ಕಿ ಪೂವಪ್ಪ ಕರ್ಕೇರರು ರೂ. ೧, ಬಿ. ಜೆ. ಯನ್. ಕರ್ಸೆಟ್ಜಿ ರೂ ೧, ಜಹಂಗೀರ್ ಯನ್. ಜಾಜಿಸವಾಲ ರೂ ೧, ಜೇಜಿಬ್ಯಾ ಯಮ್ ಡಿವೇಚ ರೂ. ೧, ರಸ್ತಮ್ಜಿ ಯಸ್ ಗಜದಾರ್ ರೂ ೧, ಜಮಸೆಟ್ಜಿ ಇ. ಸಕ್ಲಾತ್‌ವಾಲ ರೂ ೧, ವಾಟನಾಬಿ (ಜಪಾನ ದೇಶದ ಗೃಹಸ್ಥರು) ರೂ ೧, ಕಾಮಾಕ್ಷಿ ನಾಥರಾಜನ್ ರೂ ೧, ಜಹಂಗಿರ್ ಜೆ ಬಿಲ್ಲಿಮೋರಿಯ ರೂ ೧ ಯಸ್ ಯಫ್ ದುಬಾಸ್ ರೂ ೧, ಇಂಡಿಯ ಬೇಂಕಿನ ಎಕೌಂಟೂಂಟ್ ರೂ ೧ ಎ ಫಿಯರ್‌ಸನ್ ಮತ್ತು ಕಂಪೆನಿ ರೂ ೧ ಆರ್ ಯಮ್ ಡಿ ರೂ ೧ ಒಬ್ಬ ಪಾರ್ಸಿ ಗೃಹಸ್ಥರ ಗುಪ್ತದಾನ ರೂ. ೧, ಬಾಯಿದಾಸ್ ಇಚ್ಛಾರಾಮ್ ರೂ ೧ ಆರ್ ಕೆ ಮೋದಿ ರೂ. ೧, ಪಿ ಯಸ್. ಲಾಲಕಾಕ ರೂ ೧ ಜೆ ಯಮ್ ಸೆಟ್ನ ರೂ ೧, ಎ ಕೃಷ್ಣ, ಶುಕ್ರ ಆಣೆ ೮ ಯಿಚ್ ಮುತ್ತಯ್ಯ, ಬಸಪ್ಪ ಆಣೆ ೬ ವಿ ವಿ ವಾಡೆಕಾರ (ಪ್ರತಿ ತಿಂಗಳಿಗೆ) ಆಣೆ ೪, ಕಂಡೀರಾವ್ ಲಾಡು ಮೇತ ಕಂಪೆನಿಯ ಮುಲ್ಕಿ ಅಪ್ಪಣ್ಣನವರು ಆಣೆ ೧,

ಇದಕ್ಕಾಗಿ ದಾತರ ಉಪಕಾರಕ್ಕೆ ಕೃತಜ್ಞತೆಯಿಂದ ವಂದಿಸುತ್ತೇವೆ

Bombay, 8-4-15 | ಎಚ್ ಸೋಮಯ್ಯ ಮಂದಣ್ಣಾಯ, ಉಪ ಖಜಾನಜಿ

ವಿವಿಧ ವಿಷಯಗಳು

ಸಹಗಮನ.

ಮನಸ್ಸಿದ್ದ ಕಡೆ ಮಾರ್ಗವೆಂಬ ಸಾಮತಿಯು ಉತ್ತಮವಾದುದ್ದಲ್ಲ. ಚಿತೆಯನ್ನು ಸಹಾ ಮನಸ್ಸು ಜಯಿಸಬಲ್ಲದು ಈ ಕಾಲದಲ್ಲಿ ಆಪತ್ತಿಗೊಳಗಾದ ಸತಿಯರು ಸಹಗಮನ ಮಾಡಬಾರದು ಹಾಗೆ ಮಾಡಿದ್ದಾದರೆ ಪ್ರಭುಗಳು ದಂಡಿಸುವರು ಹೀಗಿದ್ದಾಗೂ ಪತಿವ್ರತಾಶಿಖಾಮಣಿಯೊಬ್ಬಳು ಮತ್ತೊಬ್ಬರ ದೃಷ್ಟಿಗೆ ಗೋಚರವಾಗದಂತೆ ಸಹಗಮನ ವ್ರತವನ್ನು ಆಚರಿಸಿ ತನ್ನ ಪತಿಯ ಸಾನ್ನಿಧ್ಯವನ್ನು ಸೇರಿದಳು ಸಂಯುಕ್ತ ರಾಜ್ಯದಲ್ಲಿ ಹಾರ್ದ್ವಾ ಎಂಬ ಒಂದು ಗ್ರಾಮವಿರುವುದು ಅಲ್ಲಿ ಒಂದು ಸಂಸ್ಕೃತ ಪಾಠಶಾಲೆ ಇರುವುದು ಆ ಪಾಠಶಾಲಾಧ್ಯಕ್ಷನಾದ ಭಗವಾನ್ ದೀನ್ ಎಂಬಾತನು ಕೆಲವು ದಿನಗಳ ಹಿಂದೆ ಹರಿದ್ವಾರ ಮಹಾ ಪುಣ್ಯಕ್ಷೇತ್ರದಲ್ಲಿ ನಡೆದ ಕುಂಭಮೇಳದಲ್ಲಿ ಅಪಮೃತ್ಯುವಿಗೆ ತುತ್ತಾದನು

ಮೃತ್ಯುದೇವತೆಯು ವಿದ್ವಾಂಸನೆಂದು ಯಾರನ್ನೂ ಬಿಡುವದಾಗಿಲ್ಲ ಅದುದರಿಂದ ಭಗವಾನ್ ದೀನ್‌ನನು ವಿದ್ವಾಂಸನಾದರೂ ಮರಣಕ್ಕೆ ಗುರಿಯಾದನು ಈ ಮರಣವಾರ್ತೆಯು ಎಲ್ಲೆಲ್ಲಿಯೂ ಹರಡಿಕೊಂಡಿತು ಭಗವಾನ್ ದೀನನ ಪತ್ನಿಯು ಆಗ ತನ್ನ ತವರುಮನೆಯಲ್ಲಿದ್ದಳು. ಕೊನೆಗೆ ತನ್ನ ಪತಿಯ ಮರಣ ವಾರ್ತೆಯನ್ನು ಕೇಳಿದ ಕೂಡಲೇ ಹಾರ್ದ್ವಾ ಗ್ರಾಮಕ್ಕೆ ಬಂದಳು ತನ್ನ ಪತಿವಿಯೋಗಕ್ಕಾಗಿ ಸ್ವಲ್ಪವೂ ರೋಧನಮಾಡದೆ ಹಗಲೆಲ್ಲವೂ ಶಾಂತಚಿತ್ತಳಾಗಿದ್ದು ಕೇಳಿದವರಿಗೆಲ್ಲಾ "ಬಂದುದನ್ನು ಸಂತೋಷವಾಗಿ ಅನುಭವಿಸಬೇಕು" ಎಂದು ವೇದಾಂತ ವಾಕ್ಯಗಳನ್ನು ನುಡಿಯುತ್ತಿದ್ದಳು ಈಕೆಯು ಬಹಳ ದೃಢಚಿತ್ತಳೆಂದು ಎಲ್ಲರೂ ಆಶ್ಚರ್ಯಪಡುತ್ತಿದ್ದರು

ಆ ದಿನ ರಾತ್ರಿ ಹರಿದ್ವಾರದಿಂದ ತರಲ್ಪಟ್ಟ ತನ್ನ ಪತಿಯ ಮಡಿ ಬಟ್ಟೆಯನ್ನುಟ್ಟುಕೊಂಡು ಮನೆಯ ಹೊರಭಾಗದಲ್ಲಿ ಕಚಾಟಿ ಎಂಬ ತೋಟದಲ್ಲಿದ್ದ ಒಂದು ಕಲ್ಲುಮೇಲೆ ನಿಶ್ಚಲ ಮನಸ್ಸಿನಿಂದ ಕೂತುಕೊಂಡಳು ಹೇಗೋ ಅಗ್ನಿ ಹುಟ್ಟಿ ಪ್ರಜ್ವಲಿಸಿ ಆಕೆಯ ದೇಹವನ್ನು ವ್ಯಾಪಿಸಿಕೊಂಡಿತು ಸರ್ವಭಕ್ಷಕನಾದ ಹವ್ಯವಾಹನನು ಯಾರನ್ನು ತಾನೇ ಬಿಡುವನು? ಕ್ಷಣಮಾತ್ರದಲ್ಲಿ ಆಕೆಯ ದೇಹಾದ್ಯಂತವನ್ನೆಲ್ಲಾ ಆವರಿಸಿಕೊಂಡನು ಆಜುಬಾಜು ಮನೆಯವರೂ, ಮುನ್ಸಿಪಾಲ್ ಅಧಿಕಾರಿಗಳೂ, ಮುಂತಾದವರು ಬಂದು ನೋಡುವಾಗ್ಗೆ ಆಕೆಯ ಪವಿತ್ರದೇಹವು ಅಗ್ನಿಗೆ ಆಹುತಿಯಾಗಿ ಹೋಗಿತ್ತು

ಮರುದಿನ ಹೋಗಿ ನೋಡುವಾಗ, ಕಲ್ಲಿನ ಮೇಲೆ ಆಕೆಯು ಸುಖಾಸೀನಳಾಗಿ ಕೂತಿದ್ದಂತೆ ಕಂಡುಬಂತು. ಆಕೆಯು ಧರಿಸಿಕೊಂಡಿದ್ದ ಮಡಿಯು ಆಕೆಯ ದೇಹದ ಕೆಲವು ಭಾಗಗಳಿಗೆ ಅಂಟಿಯೂ ಅಂಟದಂತೆ ಇದ್ದುದದನ್ನು ಡೆಪ್ಯುಟಿಮಾಜಿಸ್ಟ್ರೇಟರವರು ನೋಡಿ ಆಶ್ಚರ್ಯಪಟ್ಟರು. ಇದನ್ನೆಲ್ಲಾ ನೋಡಿ ಮುನ್ಸಿಪಲ್ ಚೇರ್ಮೇನರವರು ಆಕೆ ಇದ್ದ ಸ್ಥಳದಲ್ಲಿಯೇ ಆಕೆಗೆ ಸಮಾಧಿ ಮಾಡಲು ಆಜ್ಞೆಕೊಟ್ಟರು. ಆದರೆ ಅಗ್ನಿಯು ಯಾವ ರೀತಿ ಹುಟ್ಟಿತೆಂಬುದು ಯಾರಿಗೂ ಗೋಚರವಿಲ್ಲ. ಅಗ್ನಿಯು ಸ್ವಯಂ ವ್ಯಕ್ತವಾಗಿ ಆಕೆಯ ಜೀವಾಪಹರಣ ಮಾಡಿತೆಂದು ಅಲ್ಲಿನ ಜನಗಳು ಹೇಳುತ್ತಾರೆ. ಈ ಸಮಾಧಿಗೆ ಈಗಾಗಲೇ ಪೂಜೆಪುರಸ್ಕಾರಗಳು ಪ್ರಾರಂಭವಾಗಿದೆ ಈಗಿನ ಶಾಸ್ತ್ರಜ್ಞರು ಈ ವಿಷಯದಲ್ಲಿ ಏನು ಹೇಳುವರೋ ನೋಡಬೇಕು. ತಮಗೆ ಪರಿಚಿತವಾದ ಶಾಸ್ತ್ರಗಳಿಗೆ ಮೀರಿದುದನ್ನು ಅಸತ್ಯವೆಂದು ಸಾಧಿಸುವುದು ವಾಡಿಕೆಯಲ್ಲವೇ!

ಓ. ಪ.

ಬುಚಾನಿನ ಘಟ್ಟಿಗರಾದ ಉಳುಮೇದಾರರು.

ಬುಚಾನಿನ ಘಟ್ಟಿಗರಾದ ಉಳುಮೇದಾರರ ಉಳುಮೆಯ ಪೋಟಾ ಪೋಟಿಯು ಕೆಯಿರ್ನಗಾಲ್‌ನ "ಹೋಂಫಾರಂ" ಎಂಬ ವ್ಯವಸಾಯ ಕ್ಷೇತ್ರಕ್ಕೆ (Home Farm of Cairngall) ಸೇರಿದ ಒಂದು ಸೊಗಸಾದ ಹಳೇ ಹುಲ್ಲುಗಾವಲು ಜಮೀನಿನಲ್ಲಿ ನಡೆಯಿತು ಇದು ಬುಚಾನ್ ಡಿಸ್ಟ್ರಿಕ್ಟಿನಲ್ಲಿ ಚಳಿಗಾಲದಲ್ಲಿ ಊರ ಹೊರಗಡೆಯಲ್ಲಿ ನಡೆಯತಕ್ಕ ಒಂದು ಭಾರಿ ವಿನೋದವಾಗಿರುತ್ತದೆ. ಆ ದಿನ ಪೂರ ಒಂದು ಸಾವಿರ ಜನದವರಿಗೆ ಬಹುಮಂದಿ ನೋಟಕರು ಬಂದಿದ್ದರು. ಮೂವತ್ತೆರಡು ಜನ ಪೋಟಾಪೋಟಿಗೆ ನಿಂತಿದ್ದರು ಚೆಂದವಾಗಿ ಮಾಲೀಸು ಮಾಡಿದ್ದ ಕುದುರೆಗಳು ಮತ್ತು ಸೊಗಸಾಗಿ ಒರಸಿ ಚೊಕ್ಕಟಮಾಡಿದ್ದ ಕುದುರೆಗಳ ಮುಸ್ತೈದು ಅದಕ್ಕೆ ಹಾಕಿದ್ದ ಅನೇಕ ಅಂದವಾದ ಅಲಂಕಾರಗಳು ಇವುಗಳ ಪ್ರದರ್ಶನವೇ ಬಹಳ ಶೋಭಾಯಮಾನವಾಗಿದ್ದು ಈ ಕಾರ್ಯದ ಜವಾಬ್ದಾರಿಯನ್ನು ವಹಿಸಿದ್ದವರಿಗೆ ಅತ್ಯಂತ ಕೀರ್ತಿಯನ್ನು ತಂದಿತು

ಪೋಟಾಪೋಟಿಯ ಎರಡು ಬಾಬುಗಳಲ್ಲಿಯೂ ಕೆಲಸದ ಕೌಶಲ್ಯವು ಶ್ರೇಷ್ಠತರವಾಗಿತ್ತು. ಆದರೆ ಒಂದು ಅಶುಭ ಸಂಘಟನೆಯುಂಟಾಗಿ ಪೋಟಾಪೋಟಿಯು ಸಾಫಲ್ಯದಿಂದ ಈಡೇರುವದನ್ನು ವಿಶೇಷವಾಗಿ ಕುಂದಕಪಡಿಸಿತು. ಇದಕ್ಕೆ ನಿಂತಿದ್ದವರ ಪೈಕಿ ಹನ್ನೆರಡುಮಂದಿ ತಮ್ಮ ತಮ್ಮ ಕೆಲಸವನ್ನು ಗೊತ್ತುಮಾಡಿದ್ದ ಕಾಲದಲ್ಲಿ ಮುಗಿಸಲಿಲ್ಲವಾದ ಕಾರಣ ಅವರು ಅನರ್ಹರೆಂದು ತಳ್ಳಲ್ಪಟ್ಟರು ಪೋಟಾಪೋಟಿಯ ಮುಖ್ಯ ಬಾಬುಗಳ್ಯಾವುವೆಂದರೆ — (೧) ಕುದುರೆಗೆ ಸರಂಜಾಮು ತೊಡಿಸುವುದು ಮತ್ತು ಮಾಲೀಸು ಮಾಡುವುದು

ಜೀನಸು ಧಾರಣೆ. (ರಖಂ)

ಹೊಸ ಮಸ್ಕತಿ ಅಕ್ಕಿ .	5— 2—0	5—10—0
ಹೊಸ ಗಾಡಿ ರಾಶಿ ,, .	4— 6—0	4— 8—0
ಹೊಸ ಗುಡ್ಡು ,,	4— 8—0	4—14—0
ಅವ್ವಲ್ ಬೆಳ್ತಿಗೆ ,, .	5— 6—0	5—10—0
ಗುಡ್ಡು ಬೆಳ್ತಿಗೆ ,, .	5— 1—0	5— 2—0
ರಂಗೂನು ಬೆಳ್ತಿಗೆ ಗೋಣಿ ೧ರ	7— 12—0	8— 6—0
ಗೋದಿ ಗೋಣಿ ೧ರ ...	13—0 —0	14— 0—0
ಹುರುಳಿ ಗೋಣಿ ೧ರ ...	6— 4—0	7— 6—0
ಕಡಲೆ ಗೋಣಿ ೧ರ. ,,	9—0—0	10—12—0
ತೊಗರಿ ಗೋಣಿ ೧ರ ...	10— 0—0	11— 8—0
ತೊಗರಿ ಬೇಳೆ ಗೋಣಿ ೧ರ.	12— 8—0	16— 0—0
ಉದ್ದು ಗೋಣಿ ೧ರ		10— 0—0
ಊರುಬೆಲ್ಲ ಖಂಡಿ ೧ರ		75— 0—0
ಉಪ್ಪು ಗೋಣಿ ೧ರ . .	3—11—0	3—14—0
ಕೊಬ್ರಿ ಖಂಡಿ ೧ರ . .	70—0—0	75— 0—0
ಕೊಬ್ರಿ ಹಿಂಡಿ ಖಂಡಿ ೧ರ		15— 0—0
ಎಳ್ಳಿಂಡಿ ಖಂಡಿ ೧ರ .	25—0—0	32— 8—0
ಕೊಬ್ರಿ ಎಣ್ಣೆ ಮುಡಿ ೧ರ .	5—10—0	5—12—0
ಎಳ್ಳೆಣ್ಣೆ ಮುಡಿ ೧ರ(ಕುರಾಸನ)	3—10—0	3—14—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ . . .		5— 0—6
ಮೋರಿಸ್ ಸಕ್ಕರೆ ಮುಡಿ ೧ರ		4—12—0
ಕಾಫಿ ಖಂಡಿ ೧ರ	240—0—0.	252— 0—0
ಹೊಸಬೀಳಿಗೋಟು ಖಂಡಿ೧ರ	94—0—0	98— 0—0
ಹೊಸ ಗೇರುಬೀಜ ಮುಡಿ ೧ರ . . .		2— 2—0
ಕಬ್ಬಿಣ ಖಂಡಿ ೧ರ		50— 0—0
ಕಾಂಟ್ರ ತಗಡುಮುಡಿ ೧ರ		19— 0—0
ಕಾಂಟ್ರ ಪಾತ್ರೆಗಳು ಮುಡಿ ೧ರ . . .		22— 0—0
ಚೀನಾ ಬೆಳ್ಳಿ ಶೀರು ೧ರ .		18—12—0

ಮಾರಾಟಕ್ಕೆ ಸಿದ್ಧವಿರುವುದು!   ಮಾರಾಟಕ್ಕೆ ಸಿದ್ಧವಿರುವುದು!

ವೇಂಕಟಗಿರಿ ಮಹಾತ್ಮೆ.

ಪದ್ಮಾವತೀ ಕಲ್ಯಾಣದಿಂದ ಪೂರ್ಣವಾಗಿರುವುದು

(ಸಂಸ್ಕೃತ ಭವಿಷ್ಯತ್ಪುರಾಣದಿಂದ)

ಮಂಗಳೂರಲ್ಲಿ ಸ್ವರ್ಗಸ್ಥರಾಗಿ ಹೋದ ಮುಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿರುವುದು

959 ಪದ್ಯಗಳಿರುವ 15 ಅಧ್ಯಾಯಗಳಿಂದ ಕೂಡಿರುವುದು ಕಾವ್ಯರಚನೆಯು ಬಹು ಮೃದುರವೂ ಸುಲಭವೂ ಆಗಿರುವುದರಿಂದ ಸರ್ವರಿಗೂ ಅನುನಿತ್ಯದ ಪಠಣಪುಸ್ತಕವಾಗಿರಲು ಉಚಿತವಾಗಿರುವುದು. ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ವೃತ್ತಾಂತಗಳು ವಾಚಕರ ಮನಃಖಚಿತವಾಗುವಂತೆ ಈ ಗ್ರಂಥವು ಯಥೋಚಿತ ಚಿತ್ರಪರಗಳಿಂದ ಕೂಡಿರುವುದು ಕ್ರಯ ಪ್ರತಿಯೊಂದಕ್ಕೆ ರೂ 1—8—0 ಟಪ್ಪಾಲು ಹಾಸಲು ಬೇರೆ

ಕವಿ ಎಂಡ್ ಸನ್ಸ್,
ಮಂಗಳೂರು

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1 ಟಪ್ಪಾಲು ಚಾರ್ಜು 0—4—0

Dr. Navaratna & Sons,
Kalbadevi Road BOMBAY

ಏಜಂಟರು —ಡಿ. ಊಲನ್ ಮಾರ್ಟ್ಸ,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು

ಅರ್ಧ ಬೆಲೆ!

ಒಂದು ತಿಂಗಳ ತನಕ ಮಾತ್ರ.



ನಮ್ಮ ಸೆಟಿಸ್‌ಫೇಕ್ಷನ್ ಫ್ಲೂಟ್ ಹಾರ್ಮೋನಿಯಮ್ ಎಂಬ ರಾಗದ ಪೆಟ್ಟಿಗೆಯಿಂದ ಸರ್ವ ಗಾಯನಗಳನ್ನು ಹಾಡಲಿಕ್ಕಾಗುತ್ತದಲ್ಲದೆ ಎಲ್ಲಾ ವಾಯುಗುಣಗಳಲ್ಲಿಯೂ ಬಾಳುವಂಥಾದ್ದಾಗಿದೆ ಇದರ ಪೆಟ್ಟಿಗೆಯು ಸಾಗುವಾನಿ ಮರದಿಂದ ಮಾಡಿದ್ದಾಗಿದೆ ಗಾಳಿ ಬರುವ ಪೆಟ್ಟಿಗೆಯು ಎಂಥಾ ಶೆಖೆಯನ್ನೂ ತಡೆಯುವದು. ಖಾಯಸಾಗದಿದ್ದರೆ 7 ದಿವಸಗಳೊಳಗೆ ಹಿಂದಕ್ಕೆ ಕಳುಹಿಸಿದರೆ ಹಣ ಹಿಂದಕ್ಕೆ ಕೊಡೋಣಾಗುವದು

ಕ್ರಯ_ಸಿಂಗಲ್ ರೀಡ್ ರೂ. 38, 44, 50, ಈಗ ರೂ. 19, 22, 25ಕ್ಕೆ ಕೊಡಲ್ಪಡುವದು. ಡಬ್ಬಲ್ ರೀಡ್ ರೂ 60, 70, 80, ಈಗ ರೂ 30, 35, 40ಕ್ಕೆ ಕೊಡೋಣಾಗುವದು. ಆರ್ಡರಿನೊಂದಿಗೆ ರೂ 5 ಅಡ್ವಾನ್ಸ ಕಳುಹಿಸಬೇಕಾಗಿದೆ.

ವಿಳಾಸಃ— ನೇಶನಲ್ ಹಾರ್ಮೋನಿಯಮ್ ಕೊ,
ಸಿಮ್ಲಾ ಪೋಸ್ಟು (ಬಿ) ಕಲ್ಕತ್ತಾ.

National Harmonium Co,
Simla P. O. (B) CALCUTTA.

ಕರ್ನಾಟಕವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು

ಲೋಕವ್ಯವಹಾರದ-ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ ಮುಂಬಯಿ ಕರ್ನಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ಡೊಷ್ಠ ರೊಯಲ್ ಸಾೈಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ ೨—೪—೦ ಆಗಿರುತ್ತದೆ, ಚಂದಾದಾರರಾಗಿ ಸೇರಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು

ಮ್ಯಾನೇಜರ್, ಕರ್ನಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ, ಧಾರವಾಡ.

ಮಾರಾಟಕ್ಕೆ ಸಿದ್ಧವಿದೆ!   ನೂತನ ಸಂಗ್ರಹ!!

ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರ

ಮತ್ತು

ಭೂತಾಳಪಾಂಡ್ಯರಾಯನ ಅಳಿಯಕಟ್ಟು

ಈ ನವೀನ ಗ್ರಂಥದಲ್ಲಿ ಪರಶುರಾಮಾವತಾರದ ಕಥೆಯೂ, ಫಳನಾಪುರ ಮಹಾತ್ಮೆಯೂ, ಬಂತಖಂಡದ ಕ್ಷತ್ರಿಯ ರಾಜವಂಶಾವಳಿಯೂ, ದರ್ಮರಾಯನ ನಂತರ ಕಲಿಯುಗದಲ್ಲಿ ರಾಜ್ಯವಾಳಿದ 30 ಅರಸರ ಹೆಸರುಗಳೂ, ಕಾಲಗಳೂ ಪರಶುರಾಮ ಸೃಷ್ಟಿಗೆ ಸೇರಿದ 77 ದ್ವೀಪಗಳೂ, ಕನ್ನಡ ಜಿಲ್ಲೆಯ ಪೂರ್ವರಾಜರ ಸಂತತಿಯೂ, ಅವರು ಆಳಿದ ವರ್ಷಗಳೂ ಹೆಸರುಗಳೂ, ಕನಕವರ್ಮ ವೀರವರ್ಮರ ಚರಿತ್ರೆಯೂ, ವೀರವರ್ಮನು ಮಯೂರವರ್ಮನಾಗಿ ಒಂಟೆರ ಮತ ಸ್ಥಾಪಿಸಿದ ಕಥೆಗಳೂ, ಮಯೂರವರ್ಮನು ಮಾರ್ಕಾಂಡೇಯರಿಂದ ರಾಜನೀತಿಗಳನ್ನು ಕೇಳಿದ ಕಥೆಯೂ, ಅಹಿಕ್ಷೇತ್ರದಿಂದ ಬ್ರಾಹ್ಮಣರನ್ನು ತರಿಸಿದ ಕಥೆಯೂ, ಬ್ರಾಹ್ಮಣರಿಗೆ 32 ಗ್ರಾಮಗಳಲ್ಲಿ ನೇಮಿಸಿದ 326 ಭೇದಗಳು (ಜನನಗಳೂ) ಅವರಿಗೆ ನೇಮಿಸಿದ ಬಹುಮಾನ ಮರ್ಯಾದೆಗಳೂ ಕೂಟ ಮರ್ಯಾದೆಗಳೂ, ಜೈನರಿಗೂ ಬ್ರಾಹ್ಮಣರಿಗೂ ದ್ವೇಶದ ಕಾರಣಗಳೂ, ಬೂತಾಳಪಾಂಡ್ಯನ ಪೂರ್ವಚರಿತ್ರೆಯೂ, ದೇವಪಾಂಡ್ಯನ ಹಡಗಿನ ವಿವರಗಳೂ, ಭೂತಾಳಪಾಂಡ್ಯನ ಪೂರ್ಣ ಕಥೆಯೂ, ಭೂತರಾಜನಾದ ಕುಂಡೋಧರನ ಪ್ರತಾಪಗಳೂ, ಬೂತಾಳಪಾಂಡ್ಯನ ಪಟ್ಟಾಭಿಷೇಕವೂ, ದೇವಪಾಂಡ್ಯನ ಹಡಗಿನ ವ್ಯಾಪಾರದ ಕಥೆಯೂ ಅಳಿಯ ಕಟ್ಟು ಆದ ಕಾರಣವು ಭೂತಾಳಪಾಂಡ್ಯನು ನೇಮಿಸಿದ 14 ಕಟ್ಟು 16 ಕಟ್ಟಳೆಗಳೂ, ಬೂತಾಳಪಾಂಡ್ಯನ ವಿವಾಹವೂ, ಕುಂಡೋಧರನು ಮಹಿಷಾಸುರನಾದ ಕಥೆಯೂ ಬೂತಾಳಪಾಂಡ್ಯನು ಮಕ್ಕಳಿಗೆ ವಿಂಗಡಿಸಿದ ಸ್ಥಳ ಮಾನಮರ್ಯಾದೆಗಳೂ, ಅವನ ನಂತರ ಅಳಿಯ ವಿದ್ಯುಮ್ನಪಾಂಡ್ಯನ ಆಳಿಕೆಯೂ, ಆತನು ತನ್ನ ಮಕ್ಕಳಿಗೆ ವಿಂಗಡಿಸಿದ ಮಾನಮರ್ಯಾದೆಗಳೂ, ಚೌಟಬಂಗರ ಸಂಸ್ಥಾನದ ನಗರಗಳೂ, ಸ್ಥಳ ನಾಮಾವಳಿಗಳೂ, ಕೇರಳದ 43 ಜಾತಿಗಳೂ, ಹೋಬಳಿ ಮನೆತನಗಳೂ, ಮರ್ಯಾದೆಗಳ ಶಾಸನವೂ, ಪೂರ್ವ ಮರ್ಯಾದೆಗಳ ಕ್ರಮವೂ, 2ನೇ ಬೂತಾಳಪಾಂಡ್ಯನ ಚರಿತ್ರೆಯೂ, ಅಳಿಯಸಂತಾನದ 60 ಬಳಿಗಳೂ, ಚೌಟಬಂಗರ ಸಂಸ್ಥಾನದ ಮಾಗಣೆ, ಶೀಮೆ, ಒಳಅರಸರು, ಅವರ ಸ್ಥಳ ಮಾನಮರ್ಯಾದೆಗಳು ವಗೈರೆಯೂ ಜೈನ ಒಂಟೆರ 60 ಜನನ (ನಾಮಕೀರ್ತಿಗಳೂ) 7 ರಾಜದೈವಗಳ ಚರಿತ್ರೆಯೂ, ಉಡ್ಪಿಯ ಇತಿಹಾಸ, ವಿಜಯನಗರದ ಆಡಳಿತೆ ಕಂದಾಯಕ್ರಮ, ಪೂರ್ವದ ಕೆಲವು ಸಂಗ್ರಹಗಳು, ಬಂಗಾಡಿ ತಾಮ್ರಶಾಸನ, ಪಲ್ಲಿಪಾಡಿ ಶಿಲಾಶಾಸನ, ಉಳ್ಳಾಲ ತಾಮ್ರಶಾಸನ, ಒಂಟಕಲ್ಲಿನ ಶಿಲಾಶಾಸನ, ನಂದಳಿಕೆ ತಾಮ್ರಶಾಸನ, ವೇಣೂರಿನ ತಾಮ್ರಶಾಸನ, ಅನುಬವಗಳ ಸಂಗ್ರಹ, ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ದೇವಸ್ಥಾನಗಳು, ಬಾರ್ಕೂರು ಪಂಚಲಿಂಗೇಶ್ವರ ದೇವಸ್ಥಾನದ ಮರ್ಯಾದೆ ಪಟ್ಟಿ, ಮೊಗಲ್ ರಾಜರ ವಂಶಾವಳಿ, ಭರತಖಂಡಕ್ಕೆ ಅನ್ಯರಾಜರ ಪ್ರವೇಶ ಕಾಲಗಳು, ಈ ಜಿಲ್ಲೆಯ ಮಹನೀಯರ ಪಟ್ಟಿ, ಶ್ರೀಮನ್ ಪಂಚಮ ಜಾರ್ಜ ಬಾದಶಹರ-ಚರಿತ್ರೆ ವಗೈರೆ ಅನೇಕಾನೇಕ ಸಂಗ್ರಹಗಳು ಭರಿತವಾದ ನವೀನ ಗ್ರಂಥ. 296 ಪುಟಗಳು ಭರಿತವಾಗಿ ಸದಾ ಕೈಯಲ್ಲಿರುವುದಕ್ಕೆ ಅನುಕೂಲವಾದ ಈ ಪುಸ್ತಕವು ಅಳಿಯಕಟ್ಟಿನವರಿಗೂ ಮಕ್ಕಳಕಟ್ಟಿನವರಿಗೂ ಶಾಲಾ ಉಪಾಧ್ಯಾಯರುಗಳಿಗೂ ವಿದ್ಯಾರ್ಥಿಗಳಿಗೂ ಸರ್ವರಿಗೂ ಅತ್ಯಗತ್ಯವುಳ್ಳದ್ದಾಗಿದೆ.

ಪ್ರತಿ ಒಂದಕ್ಕೆ ರೂ. 1—4—0.

ಹೆಚ್ಚಿಗೆ ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಷನ್ ಕೊಡಲಾಗುವದು.

ಕುಶಲಮಂದಿರ,
ಶ್ರೀರಾಜರಾಜೇಶ್ವರಿ_ದೇವಸ್ಥಾನ
ಪೊಳಲಿ

ಎನ್. ಎ. ಶೀನಪ್ಪ ಹೆಗ್ಡೆ,
ಅಮುಣಂಜೆಗುತ್ತು,
ಗುರುಪುರ ಪೋಸ್ಟು, ದ. ಕ.

Box Locks.



Padlocks.



ಧಾರಣೆ ಸುಲಭ! ಆಲಿಗರ್ ಬೀಗಗಳು. ಧಾರಣೆ ಸುಲಭ!

ಭದ್ರವಾಗಿಯೂ, ಭಾರವಾಗಿಯೂ ಇರುವುವು ಒಂದರ ಬೀಗದಕ್ಕೆ ಮತ್ತೊಂದಕ್ಕೆ ಆಗುವದಿಲ್ಲ. ನೋಡುವುದಕ್ಕೆ ಅಂದವಾಗಿಯೂ ಇರುವುವು ಇದೇ ಮಾದರಿ ಬೀಗಗಳನ್ನು ಇಂಜಿನೀರ್ ಇಲಾಖೆಗಳಿಗೂ, ಬ್ಯಾಂಕುಗಳಿಗೂ, ಸರಕಾರಿ ಆಫೀಸುಗಳಿಗೂ ಸಪ್ಲೈ ಮಾಡಿದೆ

ನಾಲ್ಕು ಚಕ್ರಗಳಿರುವ ಬೀಗಗಳು

ನಂಬ್ರ 1 2 3 4 5

0—12—0 0—15—0 1—4—0 1—11—0 .

ಆರು ಚಕ್ರಗಳಿರುವ ಬೀಗಗಳು

1—2—0 1—8—0 2—4—0 3—1—0 3—8—0

ಲ್ಲರ್ ಬೀಗಗಳು

—04—00—5—05 0—6—0 0—8—0 0—10—0

ಟ್ರಂಕುಗಳಿಗೆ ಹಾಕುವ ಕೊಂಡಿ ಬಗ್ಗಿಸಿರುವ ಬೀಗ ೧ಕ್ಕೆ 0—13—0

೩ ೪, ನೇ ನಂಬರು ಬೀಗಗಳನ್ನು ಬಾಗಲುಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು. ಏಜೆಂಟರುಗಳಿಗೆ ಕಮಿಷನ್ ದೊರೆಯುತ್ತೆ ಹಾಸಲು ಪ್ರತ್ಯೇಕ

ಮರದ ಪೆಟ್ಟಿಗೆಗಳಿಗೂ, ಮೇಜುಗಳಿಗೂ, ಬೀರೂಗಳಿಗೂ ಹಾಕುವ ೪ ಚಕ್ರಗಳಿರುವ ಬೀಗಳು ೧ಕ್ಕೆ 1—8—0, 1—12—0

ವಿಳಾಸ — ಎಚ್ ಎನ್ ರಾವ್ ಆಂಡ್ ಬ್ರದರ್ಸ್,

ಚಿಕ್ಕಪೇಟೆ ಬೆಂಗಳೂರು ಸಿಟಿ.

ಶಾಶ್ವತವಾದ ಆರೋಗ್ಯವನ್ನು ಹೊಂದುವದಕ್ಕೆ ಸುಲಭವಾದ ಮಾರ್ಗವು

ಮದನಮಂಜರಿ ಮಾತ್ರೆಗಳು

ಉಪಯೋಗಿಸುವದೇ ಆಗಿರುವದು. ಈ ಮಾತ್ರೆಗಳು ಅಜೀರ್ಣವು ಮಲಬದ್ಧ, ಮನೋವ್ಯಥೆ, ಜ್ಞಾಪಕಶಕ್ತಿ ಇಲ್ಲದಿರುವದು, ನರಗಳ ಬಲಹೀನತೆ, ಅಶಕ್ತಿ, ಸ್ವಪ್ನಸ್ಖಲಿತ, ಬಹುಮೂತ್ರ, ಮೂತ್ರಕೋಶ ಸಂಬಂಧವಾದ ವ್ಯಾಧಿಗಳು, ನಪುಂಸಕತ್ವ ಮುಂತಾದ ವ್ಯಾಧಿಗಳನ್ನು ಶೀಘ್ರದಲ್ಲಿಯೇ ಬೇರು ಸಹಿತವು ಕಿತ್ತು ಹಾಕಿ ಪುರುಷರಿಗೆ ಸಂತತ ಪುರುಷತ್ವವನ್ನು ಕೊಡುವವು ಇದು ಸಾಟಿಯಿಲ್ಲದ ಚಿಕಿತ್ಸೆ ಔಷಧಿಯಾಗಿರುತ್ತದೆ ಕಳೆದ 25 ವರುಷ ಕಾಲದಲ್ಲಿ ಸಾವಿರಾರು ರೋಗಿಗಳನ್ನು ಸ್ವಸ್ಥಪಡಿಸಿದೆ ನಿಮ್ಮನ್ನು ಕೂಡ ಸ್ವಸ್ಥ ಮಾಡುವದು 40 ಮಾತ್ರೆಗಳ ಡಬ್ಬಿ ಕ್ರಯ ರೂ 1—0—0

ಉಚಿತ ಕ್ರಯವು ಇಲ್ಲ ಹಾಸಲು ಇಲ್ಲ

144 ಪುಟಗಳುಳ್ಳ ವೈದ್ಯಸಾರಸಂಗ್ರಹವಾದ

ವೈದ್ಯವಿದ್ಯ

ಪುಸ್ತಕದಲ್ಲಿ ಶಾಶ್ವತವಾದ ಆರೋಗ್ಯವನ್ನು ಪಡೆಯಲು ಅತ್ಯವಶ್ಯವಾದ ವಿಷಯಗಳು ಭರಿತವಾಗಿವೆ ನಿಮ್ಮ ವಿಳಾಸವನ್ನು ತಿಳಿಸಿದರೆ ನಿಮಗೆ ಒಂದು ಪ್ರತಿ ಉಚಿತವಾಗಿ ಕಳುಹಿಸಲ್ಪಡುವದು

ರಾಜವೈದ್ಯ ನಾರಾಯಣಜಿ ಕೇಶವಜಿ

20 ಚೀನಾ ಬಜಾರ್ ರೋಡ್,

ಮದರಾಸು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಪವಾಯುಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದ್ದೆ ಸನ್ನಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾರ್ರ), ಮೈ ನಡುಕ, ಶೀತ



ವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ಅಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹಿತತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತು ಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, ೨ ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ

೨ ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನಿಯಾಗಿದೆ. ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುದ್ದಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ. 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ.— "ಶ್ರೀ ಸೀತಾರಾಘವ ವೈದ್ಯಶಾಲಾ"

ಮೈಸೂರು

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧ ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರಿಯಾಗಿ ಗುಣಪಡಿಸುವದು. 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0.

೨ ಶತಮೂಲಿಕಾ ಅಮರಸಂಜೀವನಿ—ಈ ಟೊನಿಕ್ ದ್ರಾವಕವು ನಿಶ್ಶಕ್ತರಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ 1—0—0.

೩ ಬಾಲಸಂಜೀವನಿ—ಮಧುರ ಟೊನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳಗಿಸುತ್ತದೆ. ಬಾಟ್ಲಿ 1ಕ್ಕೆ 0—12—0.

೪ ವಸಂತ ಕುಸುಮಾಕರ —ಈ ಸುವಾಸಿಕ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ. ಬಾಟ್ಲಿ 1ಕ್ಕೆ 1—0—0

೫ ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸಾಧ್ಯ ವ್ರಣಗಳನ್ನು 7 8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4—0—0.

೬. ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳು, ಇಲಿ ಇತ್ಯಾದಿ ಸರ್ವ ಕಠಿಣ ವಿಷಗಳಿಗೆ ಸಂಜೀವನವಾಗಿರುತ್ತದೆ ಅನುಭವಸಿದ್ಧ 2—0—0.

೭ ಆನಂದವನವಿಲಾಸ—ಇದು ಪ್ರಮೇಹ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5—0—0.

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಕಲ್ಪ ಧೈರಾಗಿ ಪ್ರಯೋಗಗಳಿಂದ ತಯಾರಿಸಿದ ಬೇರೆ ಮಾತ್ರೆಗಳು, ಲೇಹ ಚೂರ್ಣಗಳು, ತೈಲ ಘೃತಗಳು, ಆಸವಾರಿಷ್ಟಗಳೂ ತುಂಬಾ ಇರುತ್ತವೆ. ಕ್ರಯಪಟ್ಟಿ ನಮ್ಮ ಕೆಟಲಗನ್ನು ತರಿಸಿಕೊಳ್ಳಿರಿ. ಏಜಂಟರು ಬೇಕು. ಹೆಚ್ಚು ಡಿಸ್‌ಕೌಂಟ್ ಕೊಡುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಅತ್ಯುತ್ತಮವಾದ ಗ್ರಂಥಗಳು.

	ರೂ. ಆ.
ಸಟೀಕ ಅಮರಕೋಶ ತ್ರಿಕಾಂಡ ಕೆಲಿಕೊ ಬೈಂಡು	2—0
ರಾಮಾಯಣ ಕಥಾಸಂಗ್ರಹ ಕೆಲಿಕೊ ಬೈಂಡು	1—8
ಡಿ. ದುಯಂ	0-14
ದಶಪರ್ವ ಭಾರತ	2—0
ತೊರವೆ ರಾಮಾಯಣ ಅವಲ್ ಪ್ರತಿ	1-12
ಡಿ. ದುಯಂ	1—0
ಶ್ರೀಭಗವದ್ಗೀತೆ, ರಾಮಕೃಷ್ಣಸೂರಿಯುವರಿಂದ, ಸಟೀಕ, ಕಿತ್ತಾನಾರು ಬೈಂಡು	2—0
ಶಾಬದೀಪಿಕಾ ಶಿರೋರತ್ನ ಟೀಕಾ ತಾತ್ಪರ್ಯ ಸಹಿತ, ಕಿತ್ತಾನಾರು ಬೈಂಡು	1—4
ವ್ರತವಲ್ಲಿ, 40 ವ್ರತಗಳು ಅಡಗಿವೆ	0—8
ಶರವಾನ ಭವಬೋಧೆ, ಸಟೀಕ	1—0
ಮುಹೂರ್ತ ಮಾರ್ತಾಂಡ ಜ್ಯೋತಿಷಗ್ರಂಥ	1—0
ವಿವೇಕ ಚಿಂತಾಮಣಿ	0-12
ಅನುಭವಾಮೃತ ಸಟೀಕಾ	1—0
ಬೃಹತ್ಕಥಾಮಂಜರಿ	0 12
ಶ್ರೀ ಚೆನ್ನಬಸವೇಶ್ವರ ಪುರಾಣ	1—4
ಮಯೂರ ಪಂಚವಿಂಶತಿ	0—6
ಸಟೀಕ ವಿಶ್ವಕರ್ಮ ಪುರಾಣ ಕೆಲಿಕೊಬೈಂಡು	1—0
ಡಿ. ಡಿ. ದುಯಂ	0-12
ಭಟ್ಟಿ ವಿಕ್ರಮಾದಿತ್ಯರಾಯನ ಕಥೆ	0—8
ಶೃಂಗಾರ ಶುಕಸಪ್ತತಿ ಕಥೆ	0-10
ಆಂಗ್ಲಭಾಷಾ ಪ್ರಕಾಶಿಕೆ	1—8
ಭೋಜರಾಜ ಚರಿತ್ರೆ, ಸಟೀಕ	0 12
4 ಜನ ಪಕೀರರ ಕಥೆ	0-12

	ರೂ. ಆ.
ಬಕಾವಳಿ ಕಥೆ	0 10
ಮೌನಧಾರಿಣಿ ಕಥೆ	0—6
ಯಕ್ಷಗಾನ ಹರಿಶ್ಚಂದ್ರ ಮಹಾರಾಯನ ಕಥೆ	0 12
ಬ್ರಹ್ಮೋತ್ತರಖಾಂಡ	0—6
ಶ್ರೀಕೃಷ್ಣ ಬೋಧಾಮೃತವೆಂಬ ಹನ್ನೆರಡು ಜನ ರಾಜಪುತ್ರರ ಕಥೆಗಳು	0 10
ಪ್ರಭಾವತಿ ಶುಕಮಂಜರಿ	0—5
ಕರ್ಣಾಟಕ ಶಬ್ದಮಂಜರಿ	0—8
ರಾಜಶೇಖರ ವಿಲಾಸ	0—8
ಕೈವಲ್ಯನವನೀತ	0—8
ವಾಸುದೇವ ಮನನ	0—6
ಸಹಸ್ರನಾಮಕದಂಬ, ಕಿತ್ತಾನಾರು ಬೈಂಡು	0 12
ಅಧ್ಯಾತ್ಮವಿಚಾರ ಪ್ರತ್ಯಗಾತ್ಮನನಕ್ಷೆ ಸಹ	2—4
ಮನುವಂಶಾವಳಿ	1—0
ಸಪ್ತಶತಿ ಅವ್ವಲ್ ನಿರ್ಣಯಸಾಗರಪ್ರೆಸ್	0 10
ಚಂಡಿಕಾಸಪ್ತಶತಿ ಬೆಂಗಳೂರು	0—6
ವಿವೇಕ ಚೂಡಾಮಣಿ	0—3
ಗುಣನಿರೂಪಣೆ	0—6
ಕೊಂಕಣಿ ಭಾಷೆಯ ನಾಟಕಗಳು	
ಮಾನಸ ಚರಿತ್ರೆ ನಾಟಕ	0—4
ಸಾವಿತ್ರಿ ನಾಟಕ	0—4
ಚಂದ್ರಹಾಸ ನಾಟಕ	0—4
ಸ್ವರ್ಣ ಗೌರಿವ್ರತಕಥಾ	0—1

ಇವುಗಳಲ್ಲದೆ ಯಕ್ಷಗಾನ, ನಾಟಕ, ಭಜನೆ ಪದಗಳು, ಕಥೆ ವ ಕಾದಂಬರಿಗಳೂ ಇವೆ. ಮರಾಟಿ ಕಲಿಯಲಿಕ್ಕೆ ಉಪಯುಕ್ತವಾದ 1, 2, 3 ಮತ್ತು 4ನೇ ಪಾಠಪುಸ್ತಕಗಳೂ ಬೊಂಬಾಯಿ ನಿರ್ಣಯಸಾಗರ ಛಾಪಖಾನೆಯಲ್ಲಿ ಛಾಪೆಯಾದ ಬಾಲಬೋಧ ಲಿಪಿಯ ವೇದಾಂತ ವಗೈರೆ ಗ್ರಂಥಗಳೂ, ಸುಲಭ ದರದಲ್ಲಿ ದೊರಕುವವು.

ನಮ್ಮ ವಿಳಾಸ:— ಕೆ. ಯಂ ದಾಸ ಪ್ರಭು,
ರಥವೀದಿ ಮಂಗಳೂರು

ಅಪೂರ್ವ ಗ್ರಂಥ! ಅಪೂರ್ವ ಗ್ರಂಥ!!

ಬಳ್ಳಾರಿ ಶ್ರೀ ಮರಿಸ್ವಾಮಿಗಳು

ಸಕ್ಕರಿ ಕರಡೆಪ್ಪ

ಇವರ ಜೀವಿತ ಚರಿತ್ರೆ.

ಈ ಮಹಿಮರ ಚರಿತ್ರೆಯನ್ನು ಇಲ್ಲಿಯವರಿಗೂ ಯಾರೊಬ್ಬರು ಪ್ರಕಟನ ಮಾಡಿದ್ದಿಲ್ಲವೆಂಬುದು ತಿಳಿದದ್ದಾಗಿರುವದಷ್ಟೆ. ಇಂತಹ ಅದ್ಭುತ ಮಹಿಮಾಶಾಲಿಗಳ ಚರಿತ್ರೆಗಳು ಅವಶ್ಯಕವಾಗಿಯೂ ಆದರಣೀಯಗಳಾಗಿರುವವು ಇವರ ಮಹಿಮೆಯು ಅಸಾಧಾರಣವಾದುದು. ಒಂದೆ ದಿನ ಒಂದೆ ಕಾಲದಲ್ಲಿ ಬಳ್ಳಾರಿ, ಬೆಂಗಳೂರು, ಭೈರವಪುರ ಎಂಬ ಮೂರು ಸ್ಥಳಗಳಲ್ಲಿ ಸಮಾಧಿಯನ್ನು ಹೊಂದಿದರೆಂಬುದೊಂದೆ ಅಪ್ರತಿಮ ಪ್ರಭಾವವನ್ನು ಸೂಚಿಸುತ್ತಿರುವದು. ಇವರು ಅಲ್ಲಲ್ಲಿ ತೋರಿದ ಮಹಿಮೆಗಳು ಅನಂತವಾಗಿರುವವು; ಇದಲ್ಲದೆ ಇವರ ಶಿಷ್ಯನಾದ ಸಕ್ಕರಿಕರಡೆಪ್ಪನ ಅಪಾರ ಮಹಿಮೆಯು ವಿಶದವಾಗಿ ವರ್ಣಿಸಲ್ಪಟ್ಟಿರುವದು. ಈ ಸಕ್ಕರಿ ಶರಣನಂತಹ ಶರಣನು ಇಡೀ ಪ್ರಪಂಚದಲ್ಲಿ ವೀರಶೈವ ಮತದೊಳಗೆ ಹುಟ್ಟುವದು ಅಪರೂಪ ಆ ಗುರುಶಿಷ್ಯರೀರ್ವರ ಚರಿತ್ರೆಗಳು ಒಂದು ಗ್ರಂಥದಲ್ಲಿ ತಯಾರುಮಾಡಿರುವೆವು. ಈ ಗ್ರಂಥವನ್ನೋದುವವರು ಖಂಡಿತವಾಗಿಯೂ ನೀತಿ, ಭಕ್ತಿ, ಜ್ಞಾನಗಳ ಕಡೆ ಮನಸ್ಸನ್ನು ಕೊಡದಿರಲಾರರು. ಮತ್ತು ಇದಲ್ಲದೆ ಮೈಸೂರು ಶ್ರೀಮನ್ಮಹಾರಾಜ, ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರರವರು ಶಿಷ್ಯರಾದ ಕಂಬಳಿ ಸ್ವಾಮಿಗಳ ಸಮೇತ ಇರುವ ಮಹಾಸ್ವಾಮಿಗಳ ಛಾಯಾಚಿತ್ರ ಪಟವು ಪ್ರಥಮ ಪುಟದಲ್ಲಿ ಅಂದವಾಗಿರಿಸಲ್ಪಟ್ಟಿರುವದು. ನಿಮ್ಮ ವಿಳಾಸ ಚೆನ್ನಾಗಿರಲಿ. ಇದರ ಬೆಲೆ ವಿ. ಪಿ. ಸಹಿತ ರೂ. 1—2—0.

ನಮ್ಮ ವಿಳಾಸ:— ಬಸವರಾಜ ಕಂಪೆನಿ,
ಬಳ್ಳಾರಿ.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಸುಕುಮಾರತೈಲ:—ಶಿಶ್ನದ ಮೇಲೆ ಲೇಪಿಸುವ ಅಮೂಲ್ಯವಾದ ಮುಲಾಮು ಶಿಶ್ನದ ಕ್ಷೀಣೋತ್ಪತ್ತಿ ಮತ್ತು ಬಲಹೀನತೆ, ನರಗಳ ದುರ್ಬಲತೆ, ನಪುಂಸಕತ್ವ, ತ್ವರಿತ ವೀರ್ಯಚ್ಯವನೆ, ಅಕಾಲದ ಮುಟ್ಟು, ಈ ಮೊದಲಾದವುಗಳನ್ನು ನಿವಾರಣೆಮಾಡುವದು ಶಿಶ್ನಕ್ಕೆ ಪುಷ್ಟಿಯನ್ನು ಮತ್ತು ಶಕ್ತಿಯನ್ನು ಉಂಟುಮಾಡಿ ದಾಂಪತ್ಯರ ಬಾಳುವಿಕೆಯನ್ನು ಪುಷ್ಟಿಯನ್ನುಂಟುಮಾಡಿ ಬಲವನ್ನು ವರ್ಧಿಸುವದು. ಸೀಸೆ ಒಂದಕ್ಕೆ ೧ ರೂಪಾಯಿ ಒಂದರಿಂದ ೬ ಸೀಸೆಗಳವರೆಗೆ ವಿ ಪಿ ಚಾರ್ಜು ೫ ಆಣೆಗಳು ಪ್ರತ್ಯೇಕವು

ಜಂತಿನಹುಳ ಔಷಧ:—ಕರುಳಿನಲ್ಲಿ ಎಲ್ಲಾ ವಿಧವಾದ ಹುಳಗಳನ್ನು ಹೊರಪಡಿಸಿ ಜಂತುಗಳಿಂದುಂಟಾಗುವ ಬಾಧೆಗಳನ್ನು ಪರಿಹಾರಮಾಡಿ ದೇಹಾರೋಗ್ಯವನ್ನು ಉಂಟುಮಾಡುವದು ಜಂತುಗಳು ಕರುಳಿನಲ್ಲಿದ್ದರೆ ಅಡಿವಟ್ಟೆ ಭಾರವಾಗಿರುವದು ಹಸುವಿಲ್ಲದಿರುವಿಕೆ, ಹೆಚ್ಚು ಹಸುವಾಗುವಂತೆ ತೋರುವದು, ಊಟಮಾಡಿದನಂತರ ಹೊಟ್ಟೆ ಸುಯುವದು, ವಿರೋಚನೆಯಾಗುವದು, ಬಾಯಿಯಲ್ಲಿ ಕೆಟ್ಟವಾಸನೆ, ವಾಂತಿ, ವಾಕರಿಕೆ, ಜ್ವರ, ತಲೆಶೂಲೆ, ಮೂಗಿನಲ್ಲಿ ಮತ್ತು ಆಸನದಲ್ಲಿ ನವೆ, ನಾಲಿಗೆ ಸೆಳೆಕೊಳ್ಳುವದು, ಕೆಲಸಮಯದಲ್ಲಿ ಮಲಬಂದವಾಗುವದು, ಕೆಲಸಮಯದಲ್ಲಿ ವಿರೋಚನೆಯಾಗುವದು ಮುಂತಾದ ಜಂತುಗಳಿಂದುಂಟಾಗತಕ್ಕ ವ್ಯಾಧಿಗಳನ್ನು ಸ್ವಸ್ಥಪಡಿಸುವದು ಕ್ರಯ ಬುಡ್ಡಿ ೧ಕ್ಕೆ ೧೦ ಆಣೆಗಳು ೧ರಿಂದ ೧೨ ಬುಡ್ಡಿಗಳವರೆಗೆ ವಿ. ಪಿ ಖರ್ಚು ೫ ಆಣೆ ಬೀಳುವದು

ಓಮಂ ವಾಟರ್:—ಇದು ಸಾಧಾರಣವಾಗಿ ಅಂಗಡಿಗಳಲ್ಲಿ ದೊಡ್ಡ ಬುಡ್ಡಿಗಳಲ್ಲಿ ಇರುವ ಓಮಂ ವಾಟರಲ್ಲ ನಮ್ಮಿಂದ ತಯಾರಾಗುವ ಓಮಂ ವಾಟರ್ ಅರ್ಧ ಔನ್ಸು ಬುಡ್ಡಿಗಳಲ್ಲಿ ಮಾರುತಲಿರುವರು ಈ ಚಿಕ್ಕಬುಡ್ಡಿಯಲ್ಲಿರುವ ದ್ರಾವಕವನ್ನು ೨೦ ಔನ್ಸು ನೀರಿನಲ್ಲಿ ಮಿಶ್ರಯಿಸಿದರೆ ಅಂಗಡಿಗಳಲ್ಲಿರುವ ಓಮ ವಾಟರನ್ನು ಬಿಡಲು ಅತೀ ಶ್ಲಾಘನೀಯವಾದ ಓಮಂ ವಾಟರಾಗುವದು. ಇದನ್ನು ಹೊಟ್ಟೆಉಬ್ಬರ, ಹೊಟ್ಟೆಶೂಲೆ, ಅಗ್ನಿಮಂದ, ಅಜೀರ್ಣಬೇದಿ, ಇದುಗಳಿಗೆ ಕೊಟ್ಟಲ್ಲಿ ತಕ್ಷಣ ಗುಣ ಕೊಡುವದು ಜೀರ್ಣಶಕ್ತಿಯನ್ನತಿಕರಿಸುವದು, ಕಾಲರಾ ಎಂಬುವ ಮಾರಿಉಪದ್ರವಕ್ಕೆ ಕೊಟ್ಟು ತಕ್ಕ ಗುಣವನ್ನು ಕಂಡಿರುತ್ತೇವೆ. ಕ್ರಯ ಬುಡ್ಡಿ ೧ಕ್ಕೆ ೮ ಆಣೆ. ೧ರಿಂದ ೬ ಬುಡ್ಡಿಗಳಿಗೆ ವಿ. ಪಿ ಖರ್ಚು ೫ ಆಣೆಗಳು ಬೀಳುವದು

ಬಿಳಿಕೂದಲು ಕಪ್ಪುಮಾಡುವ ಕಷಾಯ:—ಬುಡ್ಡಿಸಂಗಡ ಸುತ್ತಿರುವ ಡೈರಕ್ಷನಿನಲ್ಲಿ ಹೇಳಿದ ಹಾಗೆ ಉಪಯೋಗಿಸಿದಲ್ಲಿ ಬಿಳಿಕೂದಲು ಮತ್ತು ಕೆಂಪುಕೂದಲು ನರೆಯಲು ಮುಂದಿದ್ದಂತೆ ಕಪ್ಪುಬಣ್ಣವು ಮತ್ತು ಅತಿ ಕಾಂತಿಯಾಗುವದು ಇದರ ಉಪಯೋಗದಿಂದ ಮುಖಲಕ್ಷಣವು ಮತ್ತು ವಚೀಕರವು ಉಂಟಾಗುವದಲ್ಲದೆ ಮುದುಕರು ಸಹ ಬಾಲ್ಯರ ಹಾಗೇ ಕಾಣುವರು ಕ್ರಯ ಬುಡ್ಡಿ ೧ಕ್ಕೆ ರೂ ೧. ೧ರಿಂದ ೬ ಬುಡ್ಡಿ ರವಾನಿಸಲು ವಿ ಪಿ ಖರ್ಚು ೫ ಆಣೆ ಬೀಳುವದು.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವರಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಳುನಲ್ಲಾಗಲೀ ಸ್ಪುಟವಾಗಿ ತಿಳಿಯುವಂತೆ ಬರಿಯಬೇಕು

MY ADDRESS.
P. SUBBA ROY,
Ayurvedic Pharmacy,
Sri Perumalkoil,
SANNATHY. TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯಿ,
ಆಯುರ್ವೇದ ಔಷಧಶಾಲ,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ
ಸನ್ನದಿ, ತಂಜಾವೂರು.

ಬಹು ಮನೋಹರ! ಅದ್ಭುತ!

ವಸಂತ ಕೋಕಿಲೆ

ಎಂಬ

ನೂತನವಾದ ಹೊಸ ಕಾದಂಬರೀ ಕಥೆ.

ರಸಿಕ ಶಿರೋಮಣಿಗಳೇ,

"ವಸಂತ ಕೋಕಿಲೆ" ಎಂಬ ಇಂದ್ರಜಾಲ ಮಹೇಂದ್ರಜಾಲಗಳನ್ನು ಸ್ಪಷ್ಟವಾಗಿ ತೋರಿಸುವ ಅತ್ಯದ್ಭುತ ಚಮತ್ಕಾರವಾದ ಹೊಸ ಕಾದಂಬರೀ ಕಥೆಯು ಅಚ್ಚಾಗಿ ಈಗ ತಾನೇ ಬಿಕರಿಗೆ ಸಿದ್ಧವಾಗಿದೆ ಈ ಗ್ರಂಥದಲ್ಲಿ ಶೃಂಗಾರಾದಿ ನವರಸಗಳು ತುಂಬಿ ತುಳುಕುತ್ತಿವೆ ಈವರೆಗೆ ಪ್ರಚುರವಾಗಿರುವ ಎಲ್ಲಾ ಕಥೆಗಳಿಗಿಂತಲೂ ಮಿಗಿಲಾದ ರಸ್ಯವುಳ್ಳದ್ದಾಗಿದೆ ವರ್ಣನಾಭಾಗಗಳು ಎಲ್ಲರಿಗೂ ತಿಳಿಯುವ ಹಾಗೆಯೂ ಸ್ವಾಭಾವವಾಗಿಯೂ ಇವೆ ಬಾಶಾಶೈಲಿಯು ಅತ್ಯುತ್ತಮವಾಗಿದೆ ಓದುವದಕ್ಕಾರಂಭಿಸಿದ ವಾಚಕರ ಮನಸ್ಸನ್ನು ಸಂಪೂರ್ಣವಾಗಿ ಆಕರ್ಷಿಸಿ ಮುಗಿಯುವವರೆಗೂ ಆವೇಶವನ್ನುಂಟುಮಾಡಿ ಉಲ್ಲಾಸಗೊಳಿಸುವ ಹಾಗಿದೆ ತಮ್ಮ ಜ್ಞಾನ, ಭಕ್ತಿ, ವೈರಾಗ್ಯ ಮೊದಲಾದ ವೇದಾಂತ ವಿಷಯಗಳನ್ನೂ ಚೆನ್ನಾಗಿ ತಿಳಿಸುತ್ತದೆ ಕಥಾ ಸಂವಿಧಾನವು ಹೊಸ ಮಾದರಿಯಾಗಿ ಅದ್ಭುತಕರವಾಗಿದೆ ಪ್ರಕಟವಾಗಿ ಶೃಂಗಾರ ರಸವನ್ನು ವರ್ಣಿಸದೆ ಇರುವುದರಿಂದ ಎಲ್ಲಾ ಸ್ತ್ರೀಜನರಿಗೆ ಓದುವುದಕ್ಕೆ ಅರ್ಹವಾಗಿದೆ ಇದರಲ್ಲಿ ೯ ಪ್ರಕರಣಗಳೂ ೬೭ ಪುಟಗಳೂ ಇವೆ ಉತ್ತಮವಾದ ಕಾಗದ, ಸುಂದರವಾದ ಅಕ್ಷರ, ತಪ್ಪಿಲ್ಲದೆ ಸುಂದರವಾಗಿ ಮುದ್ರಿಸಿದೆ ಬೇಕಾದವರೆಲ್ಲರೂ ಕೆಳಗಣ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು ಕ್ರಯ ರೂ ೧—೦—೦ ಮಾತ್ರ.

ವಿಳಾಸ.— ಟಿ. ಎ. ಮಾಣಿಕ್ಯಂ ಶೆಟ್ಟಿ,
ಮಾಣಿಕ್ಯಮಂದಿರ ಬುಕ್ ಡಿಪೋ,
ಬಳ್ಳಾರಿ

ವಿನೋದ' ಮಾಸಪತ್ರಿಕೆ''

"ಚಾತುರ್ಯ."

ಈ ಮಾಸಪತ್ರಿಕೆಯಲ್ಲಿ ಪತ್ತೆದಾರಿ ಕಥೆಗಳು, ಹಾಸ್ಯಲಹರಿಯು, ಹಾಸ್ಯ, ವಿನೋದ, ನೀತಿಸಂಬಂಧ ಲೇಖನಗಳೂ, ಕಥೆಗಳೂ, ಕಾದಂಬರಿಗಳೂ ಪ್ರಕಟಿಸಲ್ಪಡುತ್ತೆ ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ೧ ರೂಪಾಯಿ ಮಾದರಿ ಸಂಚಿಕೆಗೆ ೧ ಅಣೆ ಸ್ಟಾಂಪು ಕಳುಹಿಸಿರಿ

ವಿಳಾಸ — ಮ್ಯಾನೇಜರ್, "ಚಾತುರ್ಯ"
ಬೆಂಗಳೂರು ಸಿಟಿ.

ನ್ಯಾಯದರ್ಪಣ.

ಹೊಸ ಪುಸ್ತಕ

ಇಂಡಿಯಾ ದೇಶದ ಸಮಸ್ತ ಹಿಂದೂ ಜನರ ಸಾಮಾನ್ಯ ಧರ್ಮಗಳು, ಅವುಗಳನ್ನು ಅತಿಕ್ರಮಿಸಿ ನಡೆಯುವವರಿಗೆ ಉಂಟಾಗತಕ್ಕ ಫಲಗಳು, ಇವುಗಳನ್ನು ಕುರಿತು, ಗವರ್ನಮೆಂಟಿನವರಿಂದ ಅನೇಕ ಆಕ್ಟುಗಳು, ರೆಗ್ಯುಲೇಷನ್‌ಗಳು, ಶಾಸನಗಳು ವಗೈರೆ ವಿಧಾಯಕವಾಗಿ ಇರುತ್ತೆ. ಇವುಗಳೆಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೇ ಅಪಾರವಾಗಿ ಇರುತ್ತವೆ. ಇವುಗಳಲ್ಲಿ, "ಕಂಟ್ರಾಕ್ಟ್" ಅಂದರೆ ಕರಾರುಗಳು, "ಬ್ರೀಚ್ ಆಫ್ ಕಂಟ್ರಾಕ್ಟ್" ಅಂದರೆ ಒಪ್ಪಂದಕ್ಕೆ ತಪ್ಪಿ ನಡೆಯೋಣ, ದ್ರೋಹ, ಲಿಮಿಟೇಷನ್, ಛಾಪಾ ಕಾಗದ, ರಿಜಿಸ್ಟ್ರೇಷನ್, ಸಿವಿಲ್ ಪ್ರೊಸಿಡ್ಯೂರ್, ಕ್ರಿಮಿನಲ್ ಪ್ರೊಸಿಡ್ಯೂರ್, ಪೀನಲ್ ಕೋಡ್, ಹಿಂದೂ ಲಾ, ಮುಂತಾದ ಧರ್ಮಶಾಸ್ತ್ರಗಳಿಂದ, ಮನುಷ್ಯರ ನಿತ್ಯಾಚರಣೆಗೆ ಅವಶ್ಯಕವಾದ ಲೌಕಿಕ ವ್ಯವಹಾರ ಧರ್ಮಗಳ ಮುಖ್ಯ ಸಂಗತಿಗಳನ್ನೆಲ್ಲಾ ಆರಿಸಿ ಈ ಸಣ್ಣ ಪುಸ್ತಕವನ್ನು ರಚಿಸಿರುತ್ತೆ ಮತ್ತು ವಾಡಿಕೆಯಲ್ಲಿ ಇರತಕ್ಕ ನಾನಾ ವಿಧಗಳಾದ ದಸ್ತೈವಜುಗಳ ಅನೇಕ ನಮೂನೆಗಳು ಮತ್ತು ಕ್ರಿಮಿನಲ್ ರೆವಿನ್ಯು ಗ್ರಾಮ ಮುನಸೀಫ್ ಕೋರ್ಟುಗಳ ಮುಂದಿನ ದಾವಾ ವಗೈರೆ ಅರ್ಜಿಗಳ ಮಾದರಿಗಳು ಅಡಕವಾಗಿ ಇರುತ್ತೆ. ಬೆಲೆ 1—8—0 ವಿ. ಪಿ. 1—12—0.

ಲಾಯರ್ ಯಂ ಯಸ್. ನಂಜಪ್ಪನವರು,
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಪೋಸ್ಟೇಜು ಸೇರಿ 15-0-0 ಆಗುತ್ತೆ.

ಸಚಿತ್ರ ಆಂಗ್ಲಭಾಷಾ ಪ್ರಕಾಶಿಕಾ.

ಇದು ಹೊಸ ತರಹ, ಹೊಸ ಕ್ರಮ, ಅಂದವಾದ ಅಚ್ಚು, ವಿದ್ವಾಂಸರಿಂದ ತಯಾರಾದದ್ದು. ಇದನ್ನು ಗುರುವಿನಂತೆ ಭಾವಿಸಿ. ಬೆಲೆ ಕಡಿಮೆ ಮಾಡಿದೆ. 3 ಪುಸ್ತಕಗಳೂ ಅಡಗಿರುವ ದೊಡ್ಡ ಪುಸ್ತಕ 1—12—0 1ನೇ ಪುಸ್ತಕ 5 ಭಾಗಗಳುಳ್ಳದ್ದು 0—14—0.

ಅಪೂರ್ವ ಪುಸ್ತಕಗಳು.

ವೈದ್ಯಸಾರ ಸಂಗ್ರಹ ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನ ಪಂಡಿತರಿಂದ ಮರ್ಯಾದಿಸಲ್ಪಟ್ಟಿರುತ್ತೆ. ರೂ. 3.

ರೆವಿನ್ಯು ಸರ್ವೆ ಮೋಜಣಿ ಕ್ಲಾಸಿಫಿಕೇಷನ್ ಕಲಿಯತಕ್ಕ ಬುಕ್ಕು. ಇದು ಮೋಜಣಿದಾರರಿಗೂ, ಪಟೇಲರಿಗೂ, ಶ್ಯಾನುಭೋಗರಿಗೂ ಅಗತ್ಯವಾಗಿ ಬೇಕಾದ ಪುಸ್ತಕ. ಬೆಲೆ 1—4—0.

ರಾವ್‌ಬಹದೂರ್ ವೀರೇಶಲಿಂಗಂ ಪಂತುಲು ಅವರ ರಾಜಶೇಖರ ಚರಿತ್ರೆ ಕನ್ನಡ ಎಡಿಷನ್ ಬೆಲೆ ರೂಪಾಯಿ 1—0—0.

ನಮ್ಮಲ್ಲಿ ವಿಶೇಷವಾಗಿ ಸರಕಾರಿ ಸ್ಕೂಲು ಪುಸ್ತಕ, ಸಂಸ್ಕೃತ, ಕನ್ನಡ, ತೆಲುಗು, ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳೂ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಕಥೆ ಪುಸ್ತಕಗಳೂ, ಹುಡುಗರಿಗೆ ಉಪಯುಕ್ತವಾದ ಸ್ಟೇಶನರಿ ಸಾಮಾನುಗಳೂ ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ.

	ರೂ. ಆ.		ರೂ. ಆ.		ರೂ. ಆ.
ದಯಾನಂದ ಸರಸ್ವತಿಯವರ ಚರಿತ್ರೆ	0—4	ಸೀತಾ ಚರಿತ್ರೆ	1—0	ಮಾಡಿದ್ದುಣ್ಣೋ ಮಹಾರಾಯ	1—0
ಜಮಾ ಖರ್ಚಿನ ಪದ್ಧತಿ	0—12	ಶಾಕುಂತಲ ನಾಟಕ	0—8	ಕುಣಿಗಲು ರಾಮಾಶಾಸ್ತ್ರಿಗಳವರ ಚರಿತ್ರೆ	1—0
ಇಂಡ್ಯನ್ ಪೆನಲ್ ಕೋಡ	2—0	ಸ್ತ್ರೀ ಧರ್ಮನೀತಿ	0—8		
ಅರೆಬಿಯನ್ ನೈಟ್ಸ್	2—4	ಶೋಭನೆ.	0—8	ಸುಮತಿ ಮದನಕುಮಾರರ ಚರಿತ್ರೆ I	0—8
ಸುರಸ	0—4	ಚಂದ್ರಕಳಾ	0—4	,, II	0—7
ಶ್ಯಾಮು	0—1	ಕಲಾನಾಥ	0—6	ಶಿವಗೀತೆ	0—6
ಇಂದ್ರ ವಜ್ರ	0—4	ಪ್ರ ಲೇಖ್ಯಬೋಧಿನಿ	1—4	ಪಾಕಶಾಸ್ತ್ರ	0—8
ಚಿಕ್ಕೋಜ	0—3	ವಿಷವೃಕ್ಷ	1—4	ಸನಾತನಧರ್ಮ ದೀಪಿಕೆ	1—0
ಕನಕಾಲುಕ	0—6	ಮುದ್ರಾಮಂಜೂಷ	1—8	ಲಬಾರಾವಣಾಯಣ	0—4
ಶಿವಾನಂದಲಹರಿ	0—6	ಶುಕಸಪ್ತತಿ	2—0	ಕಥಾ ಮಂಜರಿ.	0—8
ಗದ್ದತ್ತೆ ಸೋತಳೆಯ	0—4				

ಪ್ರಸಿದ್ಧ ಪತ್ತೇದಾರಿ ಕಥೆಗಳು, ದುಷ್ಟ ಚತುಷ್ಟಯ, ನರಬಲಿ, ನೀಲಾಂಬರಿ, ವಿಷಮುಹೂರ್ತ, ಮಾಯಾವಿನಯ, ಅತ್ಯಾಚಾರ, ಚೋರ ಚಕ್ರವರ್ತಿ, ನರ ರಾಕ್ಷಸಿ, ಪ್ರತಿಯೊಂದು ಪ್ರತಿಯೂ 2 ಆಣೆ.

ವಿಳಾಸ — ವಿದ್ಯಾಸಾಗರ ಬುಕ್ ಡಿಪೋ,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಯುನಿವರ್ಸೆಲ್ ಎಸ್ಯೂರೆನ್ಸ್ ಕೊ, ಲಿಮಿಟೆಡ್.

ಹೆಡ್ ಆಫೀಸು.—191, ಬೌ ಬಜಾರ, ಕಲ್ಕತ್ತಾ.

ಸರಕಾರದ ಭದ್ರತೆಯ ಮೇಲ್ವಿಚಾರದಲ್ಲಿ ನಡೆಯುತ್ತಿರುವುದು.

ಭಂಡವಾಳ ರೂ. 10,00,000.

ಈ ತನಕ ಕೊಡತೋಣಾದ ವಿಮೆ ಹಕ್ಕುಗಳ ಮೊಬಲಗು ಶುಮಾರು 8,00,000.
ಫಂಡು— ರೂ. 3,00,000ಕ್ಕೆ ಮಿಕ್ಕಿದೆ.
ಸರಕಾರದವರ ಭದ್ರತೆಯಲ್ಲಿ ರೂ. 50,000 ವಿರುವುದು.

ಚೀಫ್ ಇನ್ಸೂರೆನ್ಸ್ ಸ್ಕೀಮ್ ಎಂಬ ವೈದ್ಯಪರೀಕ್ಷೆ ಇಲ್ಲದೆ ವಿಮೆ ಉತ್ತರಾಯಿಸಿಕೊಳ್ಳಬಹುದಾದ ಸರ್ವರಿಗೂ ಸಾಧ್ಯವಾದ ಸುಲಭ ಕ್ರಮ.

ಈ ಪ್ರಾಂತ್ಯಗಳಲ್ಲಿ ಯಾವ ವಿಮೆ ಕಂಪೆನಿಗಳಲ್ಲಾದರೂ ಈತನಕ ಇಂಥಾ ಅಗ್ಗದರಗಳ ವಿಮೆ ಉತ್ತರಾಯಿಸುವ ಏರ್ಪಾಡೇ ಇರುವದಿಲ್ಲ. ಭಾರತೀಯರಲ್ಲಿ ವಿಶೇಷವಾಗಿರುವ ಬಡವರಗೋಸ್ಕರವೇ ಈ ಕ್ರಮವು ಏರ್ಪಡಿಸಲ್ಪಟ್ಟಿರುತ್ತದೆ. ಪ್ರೊವಿಡೆಂಟ ಫಂಡುಗಳ ಕ್ರಮದ ಪ್ರಕಾರ ಮುಂದಕ್ಕೆ ಸಂಭವಿಸಬಹುದಾದ ಅನನುಕೂಲತೆಗಳು ಇದರಲ್ಲಿರವು. ವಿಮೆ ಉತ್ತರಾಯಿಸಿಕೊಳ್ಳುವ ಈ ನವೀನ ಅಗ್ಗ ದರಗಳ ಏರ್ಪಾಡು ಬಹಳ ಉಪಯುಕ್ತವಾದದ್ದು ಎಂತ ವಿಮೆ ಸಂಘಗಳ ವಿಶೇಷ ಮಾಹಿತಿದಾರರ ಅಭಿಪ್ರಾಯವಿರುವುದು. ನಿಶ್ಚಿತವಾದ ವಿಮೆ ಮೊಬಲಗುಗಳ ರೂಪಾಯಿ ಮತ್ತು ಅರ್ಧ ರೂಪಾಯಿಗಳ ಪೋಲಿಸಿಗಳು ಈ ಕ್ರಮದ ಮೇರೆಗೆ ಕೊಡೋಣಾಗುವವು.

ಸಾಮಾನ್ಯ ವಿಮೆ ಇಲಾಖೆ.

ಈ ಕಂಪೆನಿಯ ಈ ಇಲಾಖೆಯಲ್ಲಿ ವಿಮೆ ಉತ್ತರಾಯಿಸಿಕೊಳ್ಳುವವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಲಿರುವುದು. ಸಾಧ್ಯವಿರುವ ಅತ್ಯಂತ ಕಡಮೆಯ ದರಗಳು ಸಂಪೂರ್ಣವಾದ ಭದ್ರತೆಯೂ ಈ ಇಲಾಖೆಯ ವಿಶೇಷ ಪ್ರಯೋಜನಗಳಾಗಿರುವುದು. ಕಂಪೆನಿಯ ಲೆಕ್ಕದ ಸ್ಥಿತಿಗತಿಯನ್ನು ತೋರಿಸುವ ಮೊಖಾಬಿಲೆ ಪಟ್ಟಿಗಳನ್ನು ಈ ಕಂಪೆನಿಯ ವಿಷಯ ಪತ್ರಗಳ ಅಭಿಪ್ರಾಯವೇನೆಂಬುದನ್ನೂ ತರಿಸಿ ನೋಡಿರಿ.

ಒಳ್ಳೇ ಚಟುವಟಿಕೆಯ ಜಾಣರಾದ ಏಜಂಟರುಗಳು ಬೇಕಾಗಿರುವರು. ಶರ್ತುಗಳ ಬಗ್ಗೆ ಕೆಳಗಣ ವಿಳಾಸಕ್ಕೆ ಬರಕೊಳ್ಳಬಹುದು.

ವಿಳಾಸ:— ಲಕ್ಷ್ಮಣ ರಾವ್ ಬ್ರದರ್ಸ್,
ಚೀಫ್ ಏಜಂಟ್ಸ್, [illegible]

ಸವಿನುಡಿಯ ಗ್ರಂಥಮಾಲೆ.

೧. ಪ್ರಶ್ನೋತ್ತರ ಲೇಖ್ಯಬೋಧಿನಿ. ಲೋಕವ್ಯವಹಾರವನ್ನು ಬೋಧಿಸುವುದು ... ... ೧—೭—೦

೨ The Self English Study ... ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ .. ಆಂಗ್ಲಭಾಷಾ ಪ್ರವೇಶದಾಯಿನಿ . ೧—೩—೦

೩ The Self English Study . ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ ಆಂಗ್ಲಭಾಷಾ ಪ್ರವೇಶದಾಯಿನಿ . ೧—೩—೦

೪ The Self English Study . ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ . ಆಂಗ್ಲಭಾಷಾ ಪ್ರವೇಶದಾಯಿನಿ ೧—೩—೦

ಇವು ಮೂರು ಪುಸ್ತಕಗಳೂ ಬೋಧಕರ ಸಹಾಯವಿಲ್ಲದೆ ಇಂಗ್ಲಿಷ್‌ಭಾಷೆಯನ್ನು ತಿಳಿಸುವುದು.

೫. ಕಥಾ ಸರಿತ್ಸಾಗರ (ಪೂರ್ವಭಾಗ) ಪಾರ್ವತೀ ದೇವಿಗೆ ಪರಮೇಶ್ವರನು ಹೇಳಿದ ದಿವ್ಯವಾದ ಕಥೆಗಳು . ೧-೧೨—೦

೬. ಮಾಧವೀ ಕಂಕಣ (ಬೆಂಗಾಳಿ ನಾವಲು) ಕೀರ್ತಿಶೇಷರಾದ ರಾಮೇಶ ಚಂದ್ರದತ್ತ ಮಹಾಶಯ ರಚಿತ ಅಗತ್ಯ ಓದತಕ್ಕದ್ದು ೧—೮—೦

೭. ಭಾಷಾನಿಧಿ. ಒಂಭತ್ತು ಲಿಪಿ ಮತ್ತು ಒಂಭತ್ತು ಭಾಷೆಗಳನ್ನು ಬೋಧಕರ ಸಹಾಯವಿಲ್ಲದೆ ಕಲಿಸುವುದು.

೧	ವರ್ಣ ಪರಿಜ್ಞಾನ (೧ನೆ ಪುಸ್ತಕ) ..	೧-೧೦—೦
೨.	ಶಬ್ದ ಪರಿಜ್ಞಾನ (೨ನೆ ಪುಸ್ತಕ) .	೧-೧೨—೦
೩.	ವಾಕ್ಯ ಪರಿಜ್ಞಾನ(೩ನೆ ಪುಸ್ತಕ) .	೧ ೧೨—೦

೮ ಶಕ್ತಿ (ಬಂಗಾಳೆಯ ನಾವಲು) ಓದುವುದಕ್ಕೆ ಬಲು ಚೆನ್ನಾಗಿದೆ ... ... ೦-೧೨—೦

೯. ಭೂಮಿಯ ಅಳತೆ. ಬೋಧಕರ ಸಹಾಯವಿಲ್ಲದೆ ಈ ಲೆಂಕ ಬೋಜಣೆಯನ್ನು ಕಲಿಸುವುದು ... . ೦-೧೨ - ೦

೧೦	ಸಾವಿತ್ರೀ. (ಬಂಗಾಳೆಯ ನಾವಲು) . ..	೦—೪—೦
೧೧.	ಸತೀ ದೇವಿ. (ಬಂಗಾಳೆಯ ನಾವಲು)	೦—೪—೦
೧೨	ದಮಯಂತೀ (ಬಂಗಾಳೆಯ ನಾವಲು) ...	೦—೪—೦
೧೩	ಸಂಯುತೆ. (ಬಂಗಾಳೆಯ ನಾವಲು)	೦—೪—೦
೧೪	ಶ್ರೀ ವಿವೇಕಾನಂದ ಸ್ವಾಮಿ. (ಸಚಿತ್ರ ಚರಿತ್ರೆ)	೦—೪—೦
೧೫.	ಶ್ರೀ ವಿವೇಕಾನಂದೋಪನ್ಯಾಸ. (ಹಿಂದೂಮತ)	೦—೪—೦
೧೬.	ತಾರಾನಾಥ. (ಜೀವನ ಚರಿತ್ರೆ)	೦—೪—೦
೧೭.	ದಾದಾಭಾಯಿ ನೌರೋಜಿ ..	೦—೧—೦
೧೮	ಸರ್. ಟಿ ಮಾಧವ ರಾವ್ ..	೦—೧—೦
೧೯	ಈಶ್ವರ ಚಂದ್ರ ವಿದ್ಯಾಸಾಗರ.. ..	೦—೧—೦
೨೦	ರಾಮಮೋಹನರಾಯಿ	೦—೧—೦

ಭಾರತಿ ಸಂಪಂಗಿರಾಮು,
೪೨ ಸಿ ಬೀದಿ ಕೋಟೆ, ಬೆಂಗಳೂರು ಸಿಟಿ.

ಕೊಡ್‌ಲಿವರ್ ಎಣ್ಣೆ.



ಕಳೆದ ಮಂಗಳವಾರ ನ್ಯಾಯ ನಿರ್ಮಾಣ ಸಭೆಯು ಉದಕಮಂಡಲದಲ್ಲಿ ಕೂಡಿತ್ತು. ಸಾರ್ವಜನಿಕ ವಿಷಯಗಳ ಕುರಿತು ಪ್ರಜಾಪ್ರತಿನಿಧಿಗಳು ಹಲವು ಪ್ರಶ್ನೆಗಳನ್ನು ಸರಕಾರದವರೊಡನೆ ಕೇಳಿದ್ದಲ್ಲದೆ ಪ್ರಜಾ ಜನರಿಗೆ ಕೆಲವು ವಿಷಯಗಳಲ್ಲಿರುವ ಸಂಕಷ್ಟಗಳನ್ನು ಸೂಚಿಸಿ ಕೆಲವು ನಿರ್ಣಯಗಳನ್ನು ಮಂಜೂರಾತಿಗೆ ಸಭೆಯ ಮುಂದೆ ತಂದಿದ್ದರು. ಆದಾಯ ತೆರಿಗೆಗಳನ್ನು ನಿರ್ಣಯಿಸುವ ಬಗ್ಗೆ ಪ್ರತಿ ಮುಂದಾಳುಗಳು ಸೇರಿರುವ ಬೋರ್ಡುಗಳನ್ನು ಏರ್ಪಡಿಸುವ ವಿಷಯವು ಕೆಲವು ಸಮಯದ ಹಿಂದೆ ಸರಕಾರದವರಿಂದ ಪರ್ಯಾಲೋಚಿಸಲ್ಪಟ್ಟಿತ್ತು. ಆದರೆ ಇಂಥಾ ಬೋರ್ಡುಗಳ ಮೂಲಕ ಕಾರ್ಯನಿರ್ವಾಹವು ಅಸಾಧ್ಯವೆಂತ ಕಂಡುಬಂದದ್ದರಿಂದ ಬೋರ್ಡುಗಳನ್ನು ಏರ್ಪಡಿಸುವ ವಿಷಯವನ್ನು ಬಿಟ್ಟುಬಿಟ್ಟಿರುವರೆಂತ ತಿಳಿಯುತ್ತದೆ. ಮುನ್ಸಿಪಲ್ ಮತ್ತು ಲೋಕಲ್ ಬೋರ್ಡುಗಳ ಚುನಾವಣೆಯಲ್ಲಿ ವೋಟುಗಳ ಮತ್ತು ಉಮೇದ್ವಾರರ ಯೋಗ್ಯತೆಗಳನ್ನು ನಿರ್ಣಯಿಸುವ ವಿಷಯವನ್ನು ... ಇಡಬೇಕೆಂಬ ವಿಜ್ಞಾಪನೆಯನ್ನು ಸರಕಾರದವರು ಮನ್ನಿಸಲಿಲ್ಲ. ಲೋಕಲ್ ಮತ್ತು ಮುನ್ಸಿಪಲ್ ಬೋರ್ಡುಗಳಿಗೆ ಸಮ್ಮಂಧಪಟ್ಟ ಕಾನೂನುಗಳ ತಿದ್ದುಪಡಿಯನ್ನು ಸೂಚಿಸುವ ಮಸೂದೆಯು ಸಭೆಯ ಮುಂದೆ ಯಾವಾಗ ಇಡಲ್ಪಡುವುದೆಂಬ ಪ್ರಶ್ನೆಗೂ ಸರಕಾರದವರಿಂದ ಖಂಡಿತವಾದ ಉತ್ತರವು ದೊರೆಯಲಿಲ್ಲ. ಗ್ರಾಮ ಪಂಚಾಯತಗಳ ಸ್ಥಾಪನೆಯನ್ನು ಕುರಿತು ಇಂಡಿಯಾ ಸರಕಾರದವರು ಮಾಡಿದ ಸೂಚನೆಯು ಇನ್ನೂ ಮದ್ರಾಸು ಸರಕಾರದವರ ಪರ್ಯಾಲೋಚನೆಯಲ್ಲಿ ಮಾತ್ರ ಇರುವುದೆಂದಾಗಿ ತಿಳಿಯುತ್ತೇವೆ. ಪ್ರಜಾಪ್ರತಿನಿಧಿಗಳ ಪ್ರಶ್ನೆಗಳ ಸ್ವಭಾವವನ್ನು ವಿಚಾರಿಸಿ ತಿಳಿದರೆ ಹಲವು ವಿಷಯಗಳಲ್ಲಿ ಇವರಿಗಿಲ್ಲದ ಮಾಹಿತಿಯನ್ನು ಸರಕಾರದವರಿಂದ ತಿಳಕೊಳ್ಳಲು ಪ್ರಯತ್ನಿಸವದಾಗಿ ಗೊತ್ತಾಗುವುದು. ಆದರೆ ಪ್ರತಿನಿಧಿಗಳಿಗೆ ಅಗತ್ಯವುಳ್ಳ ಇಂಥಾ ಜನಬನವು ಬೇಕಾದಂತೆ ದೊರಕಿರದು. ಮಿಶನರಿ ಮತ್ತು ಇತರ ಖಾಸಗಿ ವಿದ್ಯಾ ಸಂಸ್ಥೆಗಳ ವಿದ್ಯಾರ್ಥಿ ಭವನಗಳಿಗೆ ದ್ರವ್ಯ ಸಹಾಯವು ಎಷ್ಟೆಷ್ಟು ಕೊಡೋಣಾಗಿರುವುದೆಂಬ ಪ್ರಶ್ನೆಗೆ ಉತ್ತರವನ್ನು ಕೊಡಲು ಅನುಕೂಲವಾಗಲಿಲ್ಲ. ಎಲಿಮೆಂಟರಿ ವಿದ್ಯಾಭ್ಯಾಸದ ಪ್ರಸರಣೆಯ ಬಗ್ಗೆ ಸರಕಾರದವರು ಇಷ್ಟರ ತನಕ ಕ್ರಮವಾದ ಯಾವ ಹಂಚಿಕೆಯನ್ನಾದರೂ ಮಾಡಲಿಲ್ಲವೆಂತ ತಿಳಿದುಬರುತ್ತದೆ. ಇಂಥಾ ಹಂಚಿಕೆಯನ್ನು ಏರ್ಪಡಿಸಿ ಇದರ ಜ್ಯಾರಿಯ ಬಗ್ಯೆ ಬೇಕಾದ ದ್ರವ್ಯಾನುಕೂಲತೆಗಳನ್ನು ಸಿದ್ಧಗೊಳಿಸುವ ತನಕ ಎಲಿಮೆಂಟರಿ ವಿದ್ಯಾಭ್ಯಾಸ ಪ್ರಸರಣೆಯು ಬಹಳ ಮೆಲ್ಲನೆ ಮುಂದಕ್ಕೆ ಸಾಗಬೇಕಾಗುವುದು. ಜಿಲ್ಲಾ ಕಲೆಕ್ಟರರುಗಳು ಸರ್ಕೀಟು ನಡಿಸುತ್ತಿರುವಾಗ ತಾವು ಹೋದ ಗ್ರಾಮಗಳಲ್ಲಿ ರೈತರ ಸಭೆಗಳನ್ನು ಕೂಡಿಸ ಬೇಕೆಂಬಿತ್ಯಾದಿ ಒಂದು ನಿರ್ಣಯವು ಗತಬಾರಿ ನ್ಯಾಯವಿಧಾಯಕ್ಕಸಭೆಯಲ್ಲಿ ಮಂಜೂರಾಗಿತ್ತು. ಈ ನಿರ್ಣಯವನ್ನು ಕಲೆಕ್ಟರರುಗಳು ಹೇಗೆ ಜ್ಯಾರಿಗೆ ತಂದಿರುವರೆಂಬ ವಿಷಯವನ್ನು ವರ್ಷಂಪ್ರತಿ ಜಮಾಬಂದಿ ರಿಪೋರ್ಟಿನಲ್ಲಿ ಸೇರಿಸಿ ಬರಿಯಬೇಕೆಂಬ ಸೂಚನೆಯನ್ನು ಸರಕಾರದವರು ಸ್ವೀಕರಿಸಿರುತ್ತಾರೆ. ಕೃಷಿ ಇಲಾಖೆಯಲ್ಲಿ ಹೆಚ್ಚಿಸಿದ ಸಿಬ್ಬಂದಿಯಲ್ಲಿ ಡಿಪ್ಯುಟಿ ಡಿರೆಕ್ಟರರವರ ಹುದ್ದೆಯು ತತ್ಕಾಲಕ್ಕೆ ಅನುಭವಸ್ಥ ಯುರೋಪಿಯರಿಗ ಸ್ಟೇಟ್ ಸೆಕ್ರಟರಿಗಳಿಂದ ಕೊಡೋಣಾಗುವುದಾಗಿ ತಿಳಿಯುತ್ತೇವೆ.

ಗ್ರಾಮಾಧಿಕಾರಿಗಳು ಅಲ್ಪ ತಪ್ಪಿನಗೋಸ್ಕರ ಅಪರಾಧಿಗಳಿಗೆ ಕೈಕೋಳವನ್ನು ಹಾಕುವ ಕಾನೂನನ್ನು ತಿದ್ದಬೇಕೆಂಬುವ ಉದ್ದೇಶದಿಂದ ಒಂದು ಕಾನೂನು ಮಸೂದೆಯನ್ನು ಸಭೆಯ ಮುಂದಿಡಲು ಅಪ್ಪಣೆಯು ಕೇಳೋಣಾಗಿತ್ತು. ಆದರೆ ಇಂಥಾ ಕಾನೂನು ಮಸೂದೆಯೊಂದನ್ನು ಸರಕಾರದವರು ಇನ್ನು ಸದ್ಯದಲ್ಲಿ ಸಿದ್ಧಗೊಳಿಸುವದಾದ್ದರಿಂದ ಪ್ರಜಾ ಕಡೆಯಿಂದ ಮುಂದೆ ತರೋಣಾಗುವ ಕಾನೂನು ಮಸೂದೆಯು ಸಭೆಯು ಮುಂದಕ್ಕೆ ತರುವುದು ಅಗತ್ಯವಲ್ಲವೆಂತ ಕಂಡುಬಂತು. ರೆವಿನ್ಯು ಇನ್ಸ್‌ಪೆಕ್ಟರರು ಅಥವಾ ಕ್ಲಾರ್ಕರಾಗಿದ್ದವರನ್ನು ಸಬ್ ಮೇಜಿಸ್ಟ್ರೇಟರಾಗಿ ನೇಮಿಸುವ ಸಂದರ್ಭಗಳಲ್ಲಿ ಇವರು ಕೆಲಸ ನೋಡದೆ ಇರುವ ಫಿರ್ಕಗಳಲ್ಲಿ ಇಂಥವರನ್ನು ಸಬ್ ಮೇಜಿಸ್ಟ್ರೇಟರಾಗಿ ನೇಮಿಸಬೇಕೆಂಬುವ ನಿರ್ಣಯವು ಸಭೆಯ ಮುಂದೆ ಬಹುಮಾನಪಟ್ಟ ಕೇಶವಪಿಳ್ಳೆಯವರು ತಂದಿದ್ದರು. ಈ ನಿರ್ಣಯದಲ್ಲಿ ಸೂಚಿಸೋಣಾದ ಅಭಿಪ್ರಾಯವನ್ನು ಸಾಧ್ಯವಾದ ಮಟ್ಟಿಗೆ ಅನುಸರಿಸುವಂತೆ ರೆವಿನ್ಯು ಬೋರ್ಡಿನವರನ್ನು ಅಜ್ಞಾಪಿಸುವೆವೆಂತ ಸರಕಾರದವರ ಕಡೆಯಿಂದ ಹೇಳೋಣಾಗಿದೆ. ಭೂಕಂದಾಯಗಳನ್ನು ಸೆಟ್ಲುಮೆಂಟುಗಳ ಮೂಲಕ ಅಗಿಂದಾಗ್ಯೆ ಇತ್ಯರ್ಥಗೊಳಿಸುವ ಮೊದಲು ಸರಕಾರದವರು ಅಂಥಾ ರಿಸೆಟ್ಲಮೆಂಟುಗಳು ನಡಿಸೋಣಾಗುವ ಪ್ರಾಂತ್ಯಗಳ ಜನರ ಸಾಂಪತ್ತಿಕ ಸ್ಥಿತಿಯನ್ನು ಗೊತ್ತುಮಾಡಿಕೊಳ್ಳಬೇಕೆಂಬ ನಿರ್ಣಯವನ್ನು ಬಹುಮಾನಪಟ್ಟ ರಾ. ಎ. ಎಸ್ ಕೃಷ್ಣರಾವ್ ಎಂಬವರು ಸಭೆಯ ಪರ್ಯಾಲೋಚನೆ ಬಗ್ಯ ತಂದಿದ್ದರು. ಆದರೆ ಈ ನಿರ್ಣಯವನ್ನು ಇದ್ದಂತೆ ಸರಕಾರದವರು ಸ್ವೀಕರಿಸಲಿಲ್ಲ. ಸ್ಪೆಶ್ಯಲ್ ಸೆಟ್ಲುಮೆಂಟು ಆಫೀಸರರು ಸೆಟ್ಲುಮೆಂಟಿನ ಮುಂಚಿತವಾಗಿ ಸೆಟ್ಲುಮೆಂಟು ನಡಿಸೋಣಾಗುವ ವಿಷಯವನ್ನು ನೋಟೀಸು ಮೂಲಕ ಪ್ರಕಟಿಸಬೇಕಲ್ಲದೆ ಇಂಥಾ ಪ್ರಕಟನೆಗಳಲ್ಲಿ ಜನರು ತಮ್ಮ ಸಾಂಪತ್ತಿಕ ಸ್ಥಿತಿ ವಿಷಯವಾಗಿ ... ಮಾಡಿಕೊಳ್ಳಲಿಕ್ಕಿರುವ ಹೇಳಿಕೆಗಳನ್ನು ವಿಚಾರಿಸಲು ಸಿದ್ಧರಿರುವೆವೆಂತ ಸೆಟ್ಲುಮೆಂಟ್ ಆಫೀಸರರು ಸೂಚಿಸಬೇಕಾಗಿದೆ. ಈ ನಿರ್ಣಯವನ್ನು ಸರಕಾರದವರು ಸ್ವೀಕರಿಸಿರುತ್ತಾರೆ. ಸೇಲಮ್ ಜಿಲ್ಲೆಯ ಅತ್ತೂರು ತಾಲೂಕಿನಲ್ಲಿ ಕಾಡುಗಳಿಂದ ಸಂಗ್ರಹಿಸೋಣಾಗುವ ಸೊಪ್ಪುಗಳ ಸಿನಿಯರೇಜವನ್ನು ರೈತರಿಗ ಅನುಕೂಲವಾದ ದರಗಳಿಗೆ ಕಡಮೆ ಮಾಡಬೇಕೆಂಬುವ ವಿಜ್ಞಾಪನೆಯನ್ನು ಸರಕಾರದವರು ಸ್ವೀಕರಿಸಲಿಲ್ಲ. ಪ್ರಜಾಪ್ರತಿನಿಧಿಗಳೆಲ್ಲರೂ ಒಟ್ಟುಕೂಡಿ ಈ ವಿಜ್ಞಾಪನೆಯನ್ನು ಕುರಿತಿರುವ ನಿರ್ಣಯವನ್ನು ... ದರೂ ಬಹು ಪಕ್ಷವು ಸರಕಾರದವರ ಪರವಾಗಿದ್ದುದರಿಂದ ಈ ನಿರ್ಣಯವು ಸಭೆಯಲ್ಲಿ ಬಿದ್ದು ಹೋಯಿತು. ಮುನ್ಸಿಪಲ್ ಕೌನ್ಸಿಲುಗಳ ಚುನಾವಣೆಗಳ ಬಗ್ಯೆ ರಚಿಸಲ್ಪಟ್ಟ ಪ್ರಕೃತ ಪ್ರಜಾಭಿಪ್ರಾಯದ ಬಗ್ಯೆ ಪ್ರಕಟಿಸಲ್ಪಟ್ಟ ನೂತನ ನಿಬಂಧನೆಗಳ ಕುರಿತು ನಾವು ಸಭೆಯಲ್ಲಿ ನಂತರ ನಡೆಯಿತು. ಈ ವಿಷಯಗಳಲ್ಲಿ ಸಭಿಕರು ಸರಕಾರದವರಿಗೆ ಸೂಚಿಸಿದ ಅಭಿಪ್ರಾಯಗಳನ್ನೂ ಸರಕಾರದವರ ಉತ್ತರಗಳನ್ನೂ ಇನ್ನೊಂದು ಸಂಚಿಕೆಯಲ್ಲಿ ಪರಿಶೀಲಿಸುವೆವು.

ಮಂಗಳೂರು ಅರಸಿಕೆರೆ ರೈಲ್ವೆ

ಮಂಗಳೂರು ಅರಸಿಕೆರೆ ರೈಲ್ವೆಯು ಇನ್ನು ಬೇಗನೆ ಹಾಕಿಸೋಣಾಗುವುದೆಂತ ನಂಬಿಕೊಂಡು ಇಲ್ಲಿ ಹಲವರು ಸ್ವಸ್ಥಚಿತ್ತವಿಂದಿರುತ್ತಾರೆ. ಆದರೆ ಮೈಸೂರು ಸಂಸ್ಥಾನದ ಅಧಿಕಾರಿಗಳು ಈ ವಿಷಯದಲ್ಲಿ ಅಗಿಂದಾಗ್ಯೆ ಅಪ್ಪಣೆಕೊಡಿಸಿದ ಮಾತುಗಳನ್ನು ವಿಚಾರಿಸಿ ನೋಡಿದರೆ ಮಂಗಳೂರು ಅರಸಿಕೆರೆ ರೈಲ್ವೆಯು ಹಾಕಿಸೋಣಾಗುವ ವಿಷಯದಲ್ಲಿ ಸಂಶಯಪಡಲು ಆಸ್ಪದವಿದೆ. ಮೈಸೂರು ಸಂಸ್ಥಾನದ ದಿವಾನರವರು ಶಿವಮೊಗ್ಗಾ ಜಿಲ್ಲೆಯನ್ನು ಸಂದರ್ಶಿಸಿದಾಗ ರೈಲ್ವೆ ಮಾರ್ಗವನ್ನು ಹಾಕಿಸುವ ವಿಷಯ ತಮ್ಮ ಅಭಿಪ್ರಾಯವನ್ನು ಈ ರೀತಿ ಸೂಚಿಸಿರುವರು. ಪಶ್ಚಿಮ ಕರಾವಳಿಯೊಡನೆ ರೈಲ್ವೆ ಸಮ್ಮಂಧವನ್ನು ಉಂಟುಮಾಡುವದು ಅಗತ್ಯವಾಗಿದೆ. ಬೆಂಗಳೂರಿನಿಂದ ಶಿವಾಮೊಗಾದಲ್ಲಿ ಅಂತ್ಯವಾಗಿರುವ ರೈಲ್ವೆ ಮಾರ್ಗವನ್ನು ಕೊಗಾರು ತನಕ ವಿಸ್ತರಿಸಬಹುದು. ನಂತರ ಮುಂಬಯಿ ಸರಕಾರದವರ ಅಪ್ಪಣೆ ದೊರಕಿದರೆ ಇದನ್ನು ಬಟ್ಕಳಕ್ಕೆ ಮುಂದರಿಸಬಹುದು. ಮೈಸೂರು ಸೀಮೆಯಿಂದ ಭತ್ತ ಮತ್ತು ಅಡಿಕೆ ಈ ಒಂದರದಿಂದ ಇತರ ಬಂದರುಗಳಿಗೆ ರವಾನಾಗುತ್ತದೆ. ಬಟ್ಕಳದಲ್ಲಿ ಬಲೋರೇವನ್ನು ಏರ್ಪಡಿಸುವ ಬಗ್ಯೆ ಬಹಳ ಅನುಕೂಲವಿರುವುದು. ಇದು ದಿವಾನ್‌ರವರ ಅಭಿಪ್ರಾಯ. ಮೈಸೂರು ಸಂಸ್ಥಾನದ ರೈಲ್ವೆ ಇಂಜಿನೀಯರರ ಅಭಿಪ್ರಾಯವಾದರೋ ಇನ್ನೊಂದು ವಿಧವಾಗಿರುವದು. ಮೈಸೂರು ಪಟ್ಟಣವು ತಲಚೇರಿಗೆ ಸಮೀಪವಾಗಿರುವುದು ಮತ್ತು ಮೈಸೂರಿನಿಂದ ರೈಲ್ವೆ ದಾರಿಯನ್ನು ತಲಚೇರಿಗೆ ಒಯ್ಯಲು ಇತರ ದಾರಿಗಳಿಗಿಂತ ಹೆಚ್ಚಿನ ಸೌಕರ್ಯವಿದೆ. ಈ ಎರಡು ಅಭಿಪ್ರಾಯಗಳಡಿಯಲ್ಲಿ ಮಂಗಳೂರು ಅರಸಿಕೆರೆ ರೈಲ್ವೆ ಪ್ರಸ್ತಾಪವು ಬಿದ್ದುಹೋಗುವ ಸಂಭವವು ಕಾಣುತ್ತಿರುವುದು. ಮೈಸೂರು ಮತ್ತು ದಕ್ಷಿಣ ಕನ್ನಡಗಳೊಳಗೆ ರೈಲ್ವೆ ಮಾರ್ಗವು ಸ್ಥಾಪಿಸೋಣಾಗುವುದರಿಂದ ಈ ಜಿಲ್ಲೆಗೆ ವಿಶೇಷ ಪ್ರಯೋಜನವೂ ಲಾಭವೂ ಉಂಟಾಗಬಹುದೆಂಬ ಕೋರಿಕೆಯಿಂದ ಈ ಜಿಲ್ಲೆಯ ಜನರೆಲ್ಲರೂ ಡಿಸ್ಟ್ರಿಕ್ಟ್ ಬೋರ್ಡಿನವರು ವಿಧಿಸಿರುವ ರೈಲ್ವೆ ಸೆಸ್ಸನ್ನು ಕೊಡುತ್ತಿದ್ದಾರೆ. ಮೈಸೂರು ಸರಕಾರದವರು ಮಂಗಳೂರನ್ನು ಬಿಟ್ಟುಬಿಟ್ಟು ಬಟ್ಕಳದತ್ತಕಡೆ ತಮ್ಮ ದೃಷ್ಟಿಯನ್ನು ತಿರುಗಿಸಿದರೆ ಈ ಜಿಲ್ಲೆಯಲ್ಲಿ ಸೆಸ್ಸುಗಳ ಮೂಲಕ ಸ್ಥಾಪಿಸೋಣಾಗುವ ರೈಲ್ವೆಯಿಂದ ಮುನಾಫೆಯು ದೊರಕುವ ಸಂಭವಗಳು ಬಹಳ ಕಡಿಮೆಯಾಗಿ ಹೋಗುವವು. ಡಿಸ್ಟ್ರಿಕ್ಟ್ ಬೋರ್ಡ ಮೆಂಬರರೂ ಇತರ ಪ್ರಜಾ ಮುಂದಾಳುಗಳೂ ಸ್ಥಳೀಕ ಸರಕಾರದವರೂ ಈ ವಿಷಯದಲ್ಲಿ ಎಚ್ಚರಿಕೆಯುಳ್ಳವರಾಗಿ ಅಗತ್ಯವಿರುವ ಸಾಧನೆಯನ್ನು ಶೀಘ್ರದಲ್ಲಿ ಮಾಡಬೇಕಾಗಿ ಈ ಮೂಲಕ ಸೂಚಿಸುತ್ತೇವೆ.

ವೈಸರಾಯಿ ಪ್ರಭುಗಳ ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಿ ಸರ್. ಸಿ. ಶಂಕರನ್ನಾಯರರವರೆ ನೇಮಕವು.

ಮದ್ರಾಸು ಹೈಕೋರ್ಟಿನ ಜಡ್ಜರಾಗಿರುವ ಬಹುಮಾನಪಟ್ಟ ಸರ್ ಸಿ ಶಂಕರನ್ನಾಯರರವರು ವೈಸರಾಯಿ ಪ್ರಭುಗಳ ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಿ ನೇಮಕ ಹೊಂದಿದ್ದನ್ನು ಕೇಳಿ ಸಂತೋಷಪಡುತ್ತೇವೆ. ಹಿಂದೂಸ್ಥಾನದ ವೃತ್ತ ಪತ್ರಗಳೆಲ್ಲವೂ ಏಕಕಂಠದಿಂದ ಈ ಸ್ಥಾನಕ್ಕೆ ಸರ್ ಶಂಕರನ್ನಾಯರರವರನ್ನು ನೇಮಿಸಿದಕ್ಕಾಗಿ ಇಂಡಿಯಾ ಸರಕಾರದವರನ್ನು ಶ್ಲಾಘಿಸಿರುವವು. ಇಂಡಿಯಾ ಸರಕಾರದ ಆಲೋಚನಾ ಸಭೆಯಲ್ಲಿ ವಿದ್ಯೆ, ಆರೋಗ್ಯ ಮತ್ತು ಲೋಕಲ್ ಬೋರ್ಡುಗಳ ಮೇಲ್ವಿಚಾರವನ್ನು ಶಂಕರನ್ನಾಯರರವರು ವಹಿಸಿಕೊಳ್ಳುವರಾಗಿ ತಿಳಿಯುತ್ತೇವೆ. ಈ ಇಲಾಖೆಗಳ ಪರವಾಗಿ ಈ ಪದವಿಯು ಈ ತನಕ ಸಿವಿಲ್ ಸರ್ವಿಸ್ ಪರೀಕ್ಷೆ ಪಾಸಾದವರ ಕೈಸೇರಿತ್ತು. ದೇಶೀಯ ಪ್ರಜೆಗಳಲ್ಲಿ ವಿದ್ಯಾ ಪ್ರಸರಣೆಯನ್ನು ಹೇಗೆ ಮಾಡಬಹುದೆಂಬುವ ವಿಷಯದಲ್ಲಿ ಬೇಕಾದ ಮಾಹಿತಿಯನ್ನು ದೇಶೀಯರ ಮೂಲಕವೇ ದೊರಕಿಸಿಕೊಳ್ಳುವುದು ಉಪಯುಕ್ತವೆಂತ ತಿಳಕೊಂಡು ಈ ದೇಶದ ವಿದ್ಯಾಭಿವೃದ್ಧಿಯ ಬಗ್ಗೆ ವಿಶೇಷ ಶ್ರಮಗೊಂಡ ಲೋಕಪ್ರಿಯರಾದ ಹಾರ್ಡಿಂಗ್ ಪ್ರಭುಗಳವರ ಆಡಳಿತೆಯ ಕಾಲದಲ್ಲಿಯೇ ಈ ಹುದ್ದೆಯನ್ನು ದೇಶೀಯರಿಗೆ ಕೊಟ್ಟದ್ದಕ್ಕಾಗಿ ಹಾರ್ಡಿಂಗ್ ಪ್ರಭುಗಳವರಿಗೂ ಕೃತಜ್ಞರಾಗಿರಬೇಕಾಗಿದೆ. ಭಾರತೀಯರ ವಿದ್ಯಾಭಿವೃದ್ಧಿಯಲ್ಲಿ ಹಾರ್ಡಿಂಗ್ ಪ್ರಭುಗಳವರಿಗೆ ಇರುವ ವಿಶೇಷವಾದ ಆಸಕ್ತಿಯು ಈ ಮೂಲಕವೂ ಕಾರ್ಯತಃ ವ್ಯಕ್ತವಾದಂತಾಯಿತು. ದಕ್ಷಿಣಾತ್ಯರಿಗೆ ಮುಖ್ಯವಾಗಿ ನಮ್ಮ ಪಶ್ಚಿಮ ಕರಾವಳಿಯವರಿಗೆ ಈ ಅಪರೂಪ ಬಹುಮಾನವು ಸರ್ ಸಿ ಶಂಕರನ್ನಾಯರರವರ ಮೂಲಕ ಪ್ರಾಪ್ತವಾದ್ದರಿಂದ ನಾವೆಲ್ಲರೂ ಗೌರವ ಪಡಲು ಕಾರಣವಿದೆ.

ಬಹುಮಾನಪಟ್ಟ ಸರ್ ಸಿ ಶಂಕರನ್ನಾಯರರವರು ನಮ್ಮ ನೆರೆನಾಡಾದ ಮಲಬಾರಿನವರೆಂತ ವಾಚಕರಿಗೆ ಹೇಳುವುದು ಅಗತ್ಯ ತೋರದು. ಮಂಗಳೂರಲ್ಲಿ ಪ್ರಕೃತ ರೆವಿನ್ಯೂ ಡಿವಿಜನಲ್ ಆಫೀಸರರಾಗಿರುವ ರಾವ್ ಬಹದ್ದೂರ್ ಸಿ ಗೋಪಾಲನ್ನಾಯರರವರು ಇವರ ಸಹೋದರರಾಗಿದ್ದಾರೆ. ೧೮೫೭ನೇ ಜುಲೈ ತಿಂಗಳಲ್ಲಿ ಇವರು ಜನ್ಮವೆತ್ತಿದರು. ಮದ್ರಾಸಿನ ಪ್ರೆಸಿಡೆನ್ಸಿ ಕೊಲೇಜಿನಲ್ಲಿ ವಿದ್ಯಾಭ್ಯಾಸವನ್ನು ಪಡೆದ ನಂತರ ಡಿಸ್ಟ್ರಿಕ್ಟ್ ಮುನ್ಸೀಫರ ಹುದ್ದೆಯು ಇವರಿಗೆ ದೊರೆಯಿತು. ೧೮೮೦ರಲ್ಲಿ ಈ ಹುದ್ದೆಗೆ ರಾಜೀನಾಮೆಯನ್ನು ಕೊಟ್ಟು ವಕೀಲ ವೃತ್ತಿಯನ್ನು ಪ್ರಾರಂಭಿಸಿದರು. ಈ ವೃತ್ತಿಯಲ್ಲಿ ಖ್ಯಾತಿ ಹೊಂದಿ ಪ್ರಜೆಗಳ ಮತ್ತು ಸರಕಾರದವರ ಮನ್ನಣೆಗೆ ಪಾತ್ರರಾಗಿ ಮಲಬಾರಿನ ಸ್ಥಿತಿಗತಿಗಳನ್ನು ವಿಚಾರಿಸಲು ೧೮೮೪ರಲ್ಲಿ ಏರ್ಪಡಿಸಲ್ಪಟ್ಟ ಕಮ್ಮಿಟಿಯ ಮೆಂಬರರೂ ೧೮೯೦ರಲ್ಲಿ ಮದ್ರಾಸು ನ್ಯಾಯನಿರ್ಮಾಣ ಸಭೆಯ ಸದಸ್ಯರೂ ಆಗಿ ನೇಮಿಸಲ್ಪಟ್ಟಿದ್ದರು. ಹೀಗೆ ೧೦ ವರುಷಗಳ ನ್ಯಾಯವಾದಿಪಟ್ಟದಲ್ಲಿ ಶಂಕರನ್ನಾಯರರವರು ನ್ಯಾಯನಿರ್ಮಾಣ ಸಭೆಯ ಮೆಂಬರತನವನ್ನು ಹೊಂದಿದರು. ಅವರ ಸ್ವಾತಂತ್ರ್ಯ ಪ್ರೀತಿ, ದೂರದೃಷ್ಟಿ, ಅವರ ಸಾಮರ್ಥ್ಯ, ಸಾಹಸಗಳು ತಮ್ಮ ಕಾರ್ಯಸಾಧನೆಗಳಲ್ಲಿ ವ್ಯಕ್ತವಾದಂತೆ ಜನರ ಅಭಿಮಾನಕ್ಕೆ ವಿಶೇಷವಾಗಿ ಪಾತ್ರರಾದರು. ೧೮೯೭ರಲ್ಲಿ ಅಮರಾವತಿಯಲ್ಲಿ ಕೂಡಿದ ಕೊಂಗ್ರೆಸ್ ಸಭೆಯ ಅಧ್ಯಕ್ಷರಾಗಿದ್ದರು. ೧೯೦೮ರಲ್ಲಿ ಮದ್ರಾಸು ಹೈಕೋರ್ಟ ಜಡ್ಜರಾಗಿ ನೇಮಿಸಲ್ಪಟ್ಟರು. ಜಡ್ಜರ ಪದವಿಯು ದೊರಕಿದ ಮೇಲೆ ರಾಜಕೀಯ ವಿಷಯಗಳಲ್ಲಿ ಇವರಿಗೆ ಕೈಹಾಕಲು ಅನುವಿರಲಿಲ್ಲ. ಸಂಘ ಸುಧಾರಣೆಯ ಕಾರ್ಯಸಾಧನೆಯು ನಂತರದಲ್ಲಿ ಇವರಿಗೆ ವಿಶೇಷ ಪ್ರಿಯಕರವಾಯಿತು. ಈ ರೀತಿ ಸಮಾಜದ ಈಗಿನ ಸ್ಥಿತಿಗತಿಯನ್ನು ಶಂಕರನ್ನಾಯರರವರು ಚೆನ್ನಾಗಿ ಬಲ್ಲವರಾದ್ದರಿಂದ ವಿದ್ಯಾಭಿವೃದ್ಧಿಯ ಸಾಧನೆಯು ಯಾವ ಸ್ವಭಾವದ್ದಾಗಿರಬೇಕೆಂಬುದನ್ನು ಗೊತ್ತು ಮಾಡಿಕೊಳ್ಳುವುದು ಇಂಥವರಿಗೆ ಬಹಳ ಅನುಕೂಲವಾಗಿರುವುದು. ಆದ್ದರಿಂದ ಈ ಪದವಿಯ ಐದು ವರುಷಗಳ ಕಾಲದಲ್ಲಿ ಸರ್ ಶಂಕರನ್ನಾಯರರವರ ಕಾರ್ಯ ಚಟುವಟಿಕೆಯನ್ನು ವಿಶೇಷವಾದ ಕೋರಿಕೆಗಳಿಂದ ಸರ್ವರೂ ಇದಿರು ನೋಡುತ್ತಿರುವರು.

ಹಿಂದೂ ಬಾಲಿಕಾ ಪಾಠಶಾಲೆ, ಕಾರ್ಕಳ

ಈ ತಿಂಗಳ ತಾ. ೧೭ರಲ್ಲಿ ಈ ಬಾಲಿಕಾ ಪಾಠಶಾಲೆಯ ನೂತನ ಕಟ್ಟೋಣದ ಪ್ರವೇಶಕಾಲದಲ್ಲಿ ಕೂಡಿದ ಸಭಿಕರ ಮುಂದೆ ಓದಿದ ಶಾಲಾ ವೃತ್ತಾಂತದಿಂದ ಶಾಲೆಯು ಅಭಿವೃದ್ಧಿ ಸ್ಥಿತಿಯಲ್ಲಿರುವುದೆಂಬುದನ್ನು ಸೂಚಿಸಲು ಸಂತೋಷ ಪಡುತ್ತೇವೆ. ಕಾರ್ಕಳದಲ್ಲಿಯು ಗೌಡಸಾರಸ್ವತರಿಂದ ಈ ಶಾಲೆಯು ೧೯೦೮ರಲ್ಲಿ ಮಂಗಳೂರಲ್ಲಿ ಕೂಡಿದ ಈ ಜಾತಿಯವರ ಪರಿಷದದಲ್ಲಿ ಮಂಜೂರಾದ ವಿದ್ಯಾಭಿವೃದ್ಧಿ ಸಾಧನೆಯ ನಿರ್ಣಯಕ್ಕನುಗುಣವಾಗಿಯೂ, ಅಮ್ಮೆಂಬಳ ಸುಬ್ರಾವ್ ಪೈಗಳವರು ಗತಿಸಿದ ಎರಡು ತಿಂಗಳುಗಳಲ್ಲಿಯೇ ಇದು ಅವರ ಸ್ಮರಣಾರ್ಥವಾಗಿಯೂ ಸ್ಥಾಪಿಸಲ್ಪಟ್ಟಿತ್ತೆಂಬುದಾಗಿ ತಿಳಿಯುತ್ತೇವೆ. ಇಲ್ಲಿಯ ಕಲೆಕ್ಟರ ದೊರೆಗಳಾಗಿದ್ದ ಮಿ| ಕೌಚ್‌ಮನ್ ದೊರೆಗಳವರು ಕೆನರಾ ಹೈಸ್ಕೂಲಿನ ಸಭಾಮಂದಿರದಲ್ಲಿ ಗೌಡಸಾರಸ್ವತರಿಗೆ ಕೆಲವು ಬುದ್ಧಿವಾದವನ್ನು ಹೇಳಿದ್ದರು. ಕಾರ್ಕಳದಲ್ಲಿಯ ಗೌಡಸಾರಸ್ವತರು ತಿರುಪತಿಯ ಗುಡ್ಡದಲ್ಲಿಯ ಭಂಡಾರಕ್ಕೆ ರೂಪಾಯಿ ೮೦,೦೦೦ವನ್ನು ಕೊಂಡುಹೋಗಿ ಸುರಿದರೆಂಬುವ ವಿಷಯವನ್ನು ಪ್ರಸ್ತಾಪಿಸಿ ಕೌಚ್‌ಮನ್ ದೊರೆಗಳವರು ದೇವಸ್ಥಾನಗಳ ಹಣವನ್ನು ಈ ರೀತಿ ವಿನಿಯೋಗಿಸುವುದಕ್ಕಿಂತ ವಿದ್ಯಾಸಂಸ್ಥೆಗಳ ಸಹಾಯಾರ್ಥವಾಗಿ ಉಪಯೋಗಿಸುವುದುಚಿತವೆಂತ ಹೇಳಿದ್ದರು. ೮೦ ಸಾವಿರ ರೂಪಾಯಿಗಳನ್ನು ತಿರುಪತಿಗೆ ರವಾನಿಸಿಕೊಟ್ಟ ದೇವಸ್ಥಾನವು ಪ್ರಕೃತ ಕಾರ್ಕಳದವರು ಈ ಶಾಲೆಯ ಬಗ್ಗೆ ಸಂಗ್ರಹಿಸಿಕೊಟ್ಟ ರೂಪಾಯಿ ೨೧೦೦ಕ್ಕೆ ರೂ ೬೩೦ನ್ನು ಪ್ರತಿ ವರುಷದಲ್ಲಿಯೂ ಬಡ್ಡಿಯ ರೂಪವಾಗಿ ಉದಾರಹಸ್ತದಿಂದ ಕೊಡುತ್ತಿದ್ದೆಂಬುವ ವಿವರವನ್ನು ಕೇಳಿ ಸಂತೋಷಪಡುತ್ತಿದ್ದರು.

ಶಾಲೆಯ ಪ್ರಾರಂಭ ಕಾಲದಿಂದಲೇ ಹುಡುಗಿಯರ ಸಂಖ್ಯೆಯು ೧೨೦ ಆಗಿದ್ದದ್ದರಿಂದ ಶಾಲೆಯ ಬಗ್ಗೆ ಪ್ರತ್ಯೇಕ ಕಟ್ಟೋಣವನ್ನು ಕಟ್ಟಿಸುವದು ಅಗತ್ಯವಾಗಿ ತೋರಿಬಂತು. ಶಾಲೆಯ ಆಡಳಿತೆಯ ಬೋರ್ಡಿನ ಮೆಂಬರರಾದ ರಾ| ಕುಕ್ಕುಂದೂರ ಸುಬ್ರಾಯ ಕಾಮತ್‌ರವರು ಶಾಲೆಯ ಕಟ್ಟೋಣದ ಬಗ್ಗೆ ಒಂದು ಸ್ಥಳವನ್ನು ಉಚಿತವಾಗಿ ಕೊಟ್ಟರು. ೧೯೧೧ನೇ ನವಂಬರ ತಿಂಗಳಲ್ಲಿ ಆಗಿನ ಕಲೆಕ್ಟರ ದೊರೆಗಳವರ ಪತ್ನಿಯರಾದ ಮಿಸೆಸ್ ಗ್ರೇಹೆಮ್ ದೊರೆಸಾನಿಗಳವರಿಂದ ಶಾಲಾ ಕಟ್ಟಡದ ಅಸ್ತಿವಾರದ ಮುಹೂರ್ತದ ಕಲ್ಲನ್ನು ಹಾಕಿಸಲು ಹೀಗೆ ಅನುಕೂಲವಾಯಿತು. ಶಾಲಾ ಕಟ್ಟೋಣದ ಬಗ್ಗೆ ಸರಕಾರದವರಿಂದ ನಿರೀಕ್ಷಿಸಿದ ದ್ರವ್ಯಸಹಾಯವು ಈ ವರೆಗೆ ಸಿಕ್ಕದೆ ಹೋದ್ದರಿಂದ ಕಟ್ಟಡದ ಕೆಲಸವನ್ನು ಶೀಘ್ರದಲ್ಲಿ ಮುಗಿಸಲು ಆಗಲಿಲ್ಲವಾದರೂ ಅದರ ಆಡಳಿತೆಯ ಬೋರ್ಡಿನ ಅಧ್ಯಕ್ಷರು ರೂ. ೧೭೫೫—೮—೧೧ನ್ನು ಶಾಲಾ ಫಂಡಿಗೆ ಸಾಲವಾಗಿ ಕೊಟ್ಟದ್ದರಿಂದ ಕಟ್ಟೋಣದ ಕೆಲಸವನ್ನು ನೆರವೇರಿಸಲು ಸಾಧ್ಯವಾಯಿತು. ಕಟ್ಟೋಣದ ಬಗ್ಗೆ ಸರಕಾರದವರಿಂದ ಗ್ರೇಂಟನ್ನು ಶಾಲಾಧಿಕಾರಿಗಳು ಇನ್ನೂ ನಿರೀಕ್ಷಿಸುತ್ತಿರುವರು. ಶಾಲೆಯ ಬಗ್ಗೆ ಯೋಗ್ಯವಾದ ಸ್ಥಳವನ್ನು ಉಚಿತವಾಗಿ ಕೊಟ್ಟು ಕಟ್ಟೋಣವು ಪೂರ್ಣವಾಗುವಂತೆ ಬೇಕಾದ ಹಣವನ್ನು ಮುಂಗಡವಾಗಿ ತೆತ್ತ ರಾ| ಸುಬ್ರಾಯ ಕಾಮತ್‌ರವರ ಔದಾರ್ಯವು ಶ್ಲಾಘನೀಯವಾಗಿದೆ. ಶಾಲೆಯಲ್ಲಿ ಕಲಿಸಲು ನಾಲ್ಕು ಜನ ಗೌಡಸಾರಸ್ವತ ಉಪಾಧ್ಯಾಯಿನಿಗಳಿರುವರು. ಶಾಲೆಯ ಅಧ್ಯಾಪಕ ವೃತ್ತಿಯನ್ನು ವಹಿಸಿಕೊಳ್ಳಲು ಇನ್ನು ಇಬ್ಬರು ವಿತಂತುಗಳು ಮದ್ರಾಸಿನ ಅನಾಥ ಬಾಲಿಕಾಶ್ರಮದಲ್ಲಿ ಶಿಕ್ಷಣವನ್ನು ಪಡಿಯುತ್ತಿರುವರೆಂತ ಶಾಲಾ ವೃತ್ತಾಂತದಿಂದ ತಿಳಿದು ಬರುತ್ತದೆ. ಗಾಯನ, ಮತಬೋಧೆ, ಮರಾಟಿ ಭಾಷೆಗಳ ಪಾಠಗಳನ್ನು ಶಾಲೆಯಲ್ಲಿ ಕೊಡುತ್ತಿರುವರಲ್ಲದೆ ಗ್ರಹಕೃತ್ಯವಲ್ಲಿ ಬೇಕಾದ ಮಾಹಿತಿಯನ್ನು ಹೇಳಿಕೊಡುವ ಏರ್ಪಾಡು ಶಾಲೆಯಲ್ಲಿರುವುದು. ದೇವಸ್ಥಾನದಿಂದ ದೊರಕುವ ದ್ರವ್ಯ ಸಹಾಯವಲ್ಲದೆ ಸರಕಾರದವರ ಸಹಾಯವು 'ಟೀಚಿಂಗ್' ಗ್ರೇಂಟ್ ಇತ್ಯಾದಿ ರೂಪಗಳಲ್ಲಿ ದೊರಿಯುತ್ತಿರುವುದು. ಶಾಲಾ ಹುಡುಗಿಯರ ವಿವಾಹ ಕಾಲದಲ್ಲಿ ವಧು ಮತ್ತು ವರಪಕ್ಷದವರು ಶಾಲೆಗೆ ತಮಗೆ ಯುಕ್ತ ತೋರುವ ಮೊಬಲಗನ್ನು ಕೊಡುವ ವಾಡಿಕೆಯಿದೆಯೆಂತ ವರದಿಯಿಂದ ತಿಳಿದುಬರುತ್ತದೆ. ಶಾಲೆಯು ಸ್ಥಾಪಿಸಿದಂದಿನಿಂದ ಈ ವಿಧ ಸಿಕ್ಕಿದ ದ್ರವ್ಯ ಸಹಾಯವು ಸುಮಾರು ರೂ. ೪೦೦ ಆಗುತ್ತದೆ. ಹುಡುಗಿಯರಿಗೆ ಶಿಕ್ಷಣವು ಈ ಶಾಲೆಯಲ್ಲಿ ಉಚಿತವಾಗಿ ದೊರಿಯುವುದರಿಂದ ವಿವಾಹ ಕಾಲಗಳಲ್ಲಿ ನಾನಾ ಬಗೆಗಳಲ್ಲಿ ಹಣವು ವೆಚ್ಚವಾಗುತ್ತಿರುವಾಗ ಶಾಲೆಗೆ ಅಲ್ಪ ಸ್ವಲ್ಪ ದ್ರವ್ಯ ಸಹಾಯವನ್ನು ಕೊಡೋಣಾಗುವ ವಾಡಿಕೆಯನ್ನು ಮತ್ತಷ್ಟು ಬಲಪಡಿಸಬಹುದು. ಶಿಕ್ಷಣ ತರಗತಿಯು ಉತ್ತಮವಾಗಿದೆಂತ ಶಾಲಾ ಸಂದರ್ಶಕರ ಅಭಿಪ್ರಾಯದಿಂದ ತೋರಿಬರುವುದು.

ಕಾರ್ಕಳದವರು ಸ್ತ್ರೀ ವಿದ್ಯಾಭ್ಯಾಸವನ್ನು ಲಕ್ಷ್ಯಕ್ಕೆ ತಂದುಕೊಂಡದ್ದನ್ನು ನೋಡಿ ತುಂಬಾ ಸಂತೋಷಪಡುತ್ತೇವೆ. ದೇವಸ್ಥಾನಗಳಲ್ಲಿ ಮೂಢ ಭಕ್ತಿಯ ವಿನಿಯೋಗಗಳನ್ನು ನಡಿಸುವುದು ಈಗಿನ ವಿದ್ಯಮಾನಗಳಲ್ಲಿ ಅತಿರೇಕ ಕಷ್ಟವಾಗಿದೆ. ಇಂಥಾ ವಿನಿಯೋಗಗಳಿಂದ ಜನರಲ್ಲಿ ಭಕ್ತಿ ವಿಶ್ವಾಸಗಳನ್ನು ಹುಟ್ಟಿಸುವುದು ಪ್ರಕೃತ ಸಾಧ್ಯವಲ್ಲ. ಸಮರ್ಪಕವಾದ ಶಿಕ್ಷಣ ಪ್ರಸರಣೆಯಿಂದಲೇ ಜನರಲ್ಲಿ ಭಕ್ತಿ ವಿಶ್ವಾಸಗಳು ಮೂಡಬೇಕಾಗಿರುವುದರಿಂದ ದೇವಸ್ಥಾನಗಳು ಧರ್ಮಕರ ಶಿಕ್ಷಣವನ್ನು [illegible]

ಕೈಕೊಳ್ಳುವುದು ಅಗತ್ಯವಾಗಿರುವುದು. ಇಂಥಾ ವಿಚಾರವು ಕಾರ್ಕಳದವರಲ್ಲಿ ಇನ್ನೂ ಉಂಟಾಗಲು ಈ ಬಾಲಿಕಾ ಪಾಠಶಾಲೆಯ ಮೂಲಕ ಆಸ್ಪದ ದೊರಿಯುವುದರಿಂದ ಏನೂ ಪ್ರಯೋಜನವಿಲ್ಲದ ಅನರ್ಥಕಾರಿ ವಿನಿಯೋಗಗಳ ಖರ್ಚನ್ನು ಮಿತಿಪಡಿಸಿ ದೇವಸ್ಥಾನದ ಉತ್ಪತ್ತಿಯ ಒಂದಂಶವನ್ನು ವಿದ್ಯಾ ವಿನಿಯೋಗಗಳಲ್ಲಿ ಉಪಯೋಗಿಸಿ ಬಾಲಿಕಾ ಪಾಠಶಾಲೆಗಳಂಥಾ ವಿದ್ಯಾಸಂಸ್ಥೆಗಳ ಅಭಿವೃದ್ಧಿಯ ಬಗ್ಗೆ ಸದಾ ಪ್ರಯತ್ನ ಪಡುವರಾಗಿ ನಂಬಿರುವೆವು.

———o———

ಕಾಲವಿಳಂಬನಿಗ್ರಹ

ಈ ಸಿರಿನಾಮೆಯುಳ್ಳ ಪತ್ರವನ್ನು ಬೊಂಬೈಯ ಶ್ಯಾಮ ರಾವ್ ವಿಟ್ಠಲ ಕೋಆಪರೆಟಿವ್ ಕ್ರೆಡಿಟ್ ಸೊಸೈಟಿಯ ಅಧ್ಯಕ್ಷರಾದ ರಾವ್‌ಸಾಹೇಬ ಎಸ್. ಎಸ್. ತಾಳಮಕ್ಕಿ ಬಿ. ಎ; ಎಲ್. ಎಲ್. ಬಿ. ಇವರು ಮಂಗಳೂರಿನಲ್ಲಿ ಜರಗಿದ ಪರಸ್ಪರ ಸಹಾಯ ಪರಿಷತ್ತಿನ ತೃತೀಯ ಮುಂದೆ ಇರಿಸಲಿಕ್ಕೆ ರವಾನಿಸಿದ್ದರು. ಈ ಸಂಘವು ಒಂದೇ ಜಾತಿಯ (ಸಾರಸ್ವತ ಬ್ರಾಹ್ಮಣರ) ಉಪಯೋಗಾರ್ಥವಾಗಿ ಕೆಲವು ವರ್ಷಗಳ ಹಿಂದೆ ಬೊಂಬೈಯಲ್ಲಿ ಸ್ಥಾಪಿಸಲ್ಪಟ್ಟು ಅದರ ಶಾಖೆಗಳು ಬೊಂಬೈ ಸಂಸ್ಥಾನದ ಹಲವು ಊರುಗಳಲ್ಲಿರುವುದಲ್ಲದೆ ಈಚೆಗೆ ಮಂಗಳೂರಿನಲ್ಲಿ ಅದರ ಶಾಖೆಯೊಂದು ಉಂಟಾಗಿದೆ. ಈ ಹಲವು ಶಾಖೆಗಳ ಕಾರ್ಯನಿರ್ವಾಹವನ್ನು ಕೆಲವು ಕಾಲದಿಂದ ನೋಡುತ್ತಲಿದ್ದು ಸಹಕಾರ ದೀಕ್ಷೆಯನ್ನು ಹಿಡಿದಿರುವ ಇವರು ಅನುಭವರೀತಿಯಿಂದ ಬರೆದ ಲಿಖಿತ ಮುಕ್ತಾಹಾರದಲ್ಲಿ ಒಂದೊಂದು ಮುತ್ತನ್ನೇ ಸಡಲಿಸಿ ಅದರ ಬೆಲೆಯನ್ನು ಕೆಡಿಸಲಿಕ್ಕೆ ಮನಸ್ಸು ಬಾರದೆ, ಅನುಕೂಲವಿದ್ದಹಾಗೆ ಅವರ ಭಾವವನ್ನೇ ಇಟ್ಟುಕೊಂಡು ಕನ್ನಡಿಸಿರುವೆವು.

೧. ಕಾಲಕ್ಲಪ್ತತೆಯು ಲಕ್ಷ್ಮಿ, ಕಾಲವಿಲಂಬವು ಕಲಿಪುರುಷ

ಎಲ್ಲಾ ಪ್ರಪಂಚ ವ್ಯಾಪಾರಗಳಲ್ಲಿ ಮನುಷ್ಯನಾದವನಿಗೆ ದೀರ್ಘತ್ವಕೊಡುವುದಕ್ಕೆ ಕಾಲಮಿತಿಯು ಪ್ರಾಮುಖ್ಯವಾಗಿದೆ. ಹೊತ್ತು ತಪ್ಪದವನು ಎಂತಹ ಸ್ಥಿತಿಯಲ್ಲಿದ್ದರೂ, ಕ್ಲಪ್ತಕಾಲದಲ್ಲಿ ಮಾಡಲಿಕ್ಕಿರುವ ಕೆಲಸವನ್ನು ಮುಂದರಿಸಿಡಲಾರನು ಮತ್ತು ಅದರಲ್ಲಿ ಕಾಲು ಹಿಂತೆಗೆಯಬೇಕಾದ್ದಿಲ್ಲ, ಏತಕ್ಕೆಂದರೆ ಅಂಥವನಿಗೆ ಸಮಯವು ಯಥೇಷ್ಟವಾಗಿದ್ದು, ಕೆಲಸಮಾಡುವುದಕ್ಕೆ ಹೆಚ್ಚಿನ ಸಾಮರ್ಥ್ಯವೂ, ಅವನ ಮೇಲಣ ವಿಶ್ವಾಸವನ್ನು ವರ್ಧಿಸುತ್ತಲಿರುವ ಗೆಳೆಯರ ಸಂಖ್ಯೆಯೂ ಅವನಿಗಿರುವುದು. ಒಬ್ಬ ವ್ಯಕ್ತಿಗೆ ಹೇಗೋ ಅದೇ ರೀತಿಯಲ್ಲಿ ತಮ್ಮ ಕೆಲಸದಲ್ಲಿ ತೋರಿಸುವ ಐಕ್ಯಮತ್ಯವು ಸಾರ್ಥಕವಾಗುವಂತೆ ಕೂಡುಗಟ್ಟುಗಳಿಗೂ ಕಾಲಮಿತಿಯು ಅಮೌಲ್ಯವಾಗಿದೆ. ಗ್ರಾಮಕೂಟವಾಗಲಿ, ಶಹರಿನ ಬೇಂಕ್ ಆಗಲಿ, ವ್ಯಾಪಾರದ ಬಂಡಸಾಲೆಯಾಗಲಿ, ರೈಲ್ವೆಕಂಪೆನಿಯಾಗಲಿ, ಚಿಕ್ಕ ಮುನಿಸಿಪಾಲಿಟಿಯಾಗಲಿ, ಅಥವಾ ಒಂದು ದೊಡ್ಡ ಸಂಸ್ಥಾನವಾಗಲಿ ಯಾವವರೆಗೆ ಕಾಲಕ್ಲಪ್ತತೆಗೆ ಬೆಲೆ ಎಣಿಸುತ್ತದೋ ಆ ವರೆಗೆ ನಿಶ್ಚಯವಾಗಿಯೂ ಸುಪರಿಣಾಮವನ್ನು ಹೊಂದುವರು.

2. ಸುಧಾರಣೆಗೆ ಹೆದ್ದಾರಿ.

ಕಾಲಮಿತಿಯಿಂದ ಸುಧಾರಣೆಯ ಮಾರ್ಗಕ್ಕೆ ಸೇರಬಹುದು. ಇದಲ್ಲದೆ ಈಚೆಗೆ ಜಾರಿಗೆ ಬಂದು ತೀವ್ರಗತಿಯಿಂದ ನಮ್ಮ ದೇಶದಲ್ಲೆಲ್ಲ ಹಬ್ಬುತ್ತಲಿರುವ ಸಹಕಾರಸಂಸ್ಥೆಗಳಲ್ಲಿ ಈ ಸಲ್ಲಕ್ಷಣದಷ್ಟು ಅವಶ್ಯಕವಾದುದು ಮತ್ತು ಬೇರೆ ಇಲ್ಲ. ಅದರ ಸಾಧನೆಯೇ ಒಂಟಿಯಾದವನಿಗಾಗಲಿ ಯಾವುದೊಂದು ಸಂಘಕ್ಕಾಗಲಿ ಉಚ್ಚಾಭ್ಯುದಯಸ್ಥಿತಿಯನ್ನೂ ಹೆಚ್ಚಿನ ವಿಶ್ವಾಸವನ್ನೂ ತಂದೊಡ್ಡುತ್ತದೆ. ಸಹಕಾರವು ನಿಶ್ಚಲವಾದ ಫಲಪರಿಪಾಕವನ್ನು ಹೊಂದಬೇಕಾದರೆ ಮೆಂಬರುಗಳು ಸಂಘಕ್ಕೂ, ಸಂಘವು ಯೂನಿಯನ್ ಅಥವಾ ಜಿಲ್ಲಾ ಬೇಂಕಿಗೂ, ಯೂನಿಯನ್ ಮತ್ತು ಜಿಲ್ಲಾ ಬೇಂಕುಗಳು ಸಂಸ್ಥಾನಿಕ ಕಾರ್ಯನಿರ್ವಾಹಕ ಕೂಟಕ್ಕೂ, ಇವರೆಲ್ಲರೂ ರೇವಣಾತಿ ಇಡಲುಳ್ಳ ಜನಸಾಮಾನ್ಯಕ್ಕೂ ಈ ಕಾಲಮಿತಿಯೆಂಬ ಪಾಶದಿಂದ ಬದ್ಧರಾಗಿರಬೇಕು. ಕಾಲಕ್ಲಪ್ತತೆಯು ಮಿತವ್ಯಯಕ್ಕೆ ದ್ವಾರಿಕಾಣುವಂತೆ ಕಾಲವಿಳಂಬವು ಗತಿವಿಚ್ಛಿನ್ನತೆಗೆ ಸಹಕಾರಿಯಾಗುವುದು. ಸ್ಥಿಲತೆಯು ಒಂದು ಬಗೆಯ ಅಂಟುರೋಗ, ಒಂದುಸಲ ಒಬ್ಬನೆಯಾಗಲಿ ಒಂದು ಸಂಘವಾಗಲಿ ಇದರ ಸೋಂಕಿಗೆ ಒಳಪಟ್ಟರೆ ಅಧಃಪತನದ ಚಿಹ್ನೆಗಳು ಅಲ್ಲಿ ತೋರಿಬರುವುವು. ಕಾಲಮಿತಿ ಇಲ್ಲದ್ದಲ್ಲಿ ವಿಶ್ವಾಸಕ್ಕೆ ಎಡೆ ಇಲ್ಲ. ಯಾವಾಗ ವಿಶ್ವಾಸವು ಕಳಚಿಹೋಯಿತೊ, ಆಗ ಆ ಸಂಸ್ಥೆಯು ಚಿರಕಾಲ ಬಾಳುವುದೆಂಬುದು ದಿಟವಲ್ಲ, ಆದ್ದರಿಂದ ಹೊತ್ತು ತಪ್ಪದಿರುವುದನ್ನು ಅಭ್ಯಾಸಮಾಡುವುದಕ್ಕೆ ಹಲವು ಉಪಾಯಗಳನ್ನು ಕಲ್ಪಿಸುವದಲ್ಲದೆ, ಹೊತ್ತುಮೀರುವ ದುರ್ಗುಣವನ್ನು ಅಣಗಿಸಲಿಕ್ಕೆ ಭಗೀರಥ [illegible]

3. **ಕಾಲವಿಳಂಬ ನಿಗ್ರಹ:** — ಈ ಸಹಕಾರ ಸಂಸ್ಥೆಗಳಲ್ಲಿ ಕಾಲಮಿತಿಯು ಎಷ್ಟು ಅಗತ್ಯವಿತ್ತೊ ಅಷ್ಟು ಪ್ರಚಾರಕ್ಕೆ ಬಂದಿಲ್ಲವೆಂಬುದು ಹಲವು ಸಂಸ್ಥಾನಗಳ ರಿಜಿಸ್ಟ್ರಾರರ ರಿಪೋರ್ಟುಗಳಿಂದ ಗೊತ್ತಾಗುವುದು. ಕಾಲವಿಳಂಬದ ಹಾವಳಿಯನ್ನು ಅಣಗಿಸುವುದಕ್ಕೆ ಯುದ್ಧಧ್ವಜವನ್ನೇರಿಸಿ, ಮದ್ರಾಸು ರಿಜಿಸ್ಟ್ರಾರರು ಕಾಲವಿಳಂಬವನ್ನು ವಿರುನುಡಿಗಳಿಂದ ದೂಷಿಸಲಾರಂಭಿಸಿದ್ದಾರೆ. 'ಅನಾದಿಯಿಂದಲೂ' ಬೇರೂರಿರುವ ಈ ದುರ್ಗುಣವನ್ನು ಸಮೂಲವಾಗಿ ಕಿತ್ತುಬಿಡುವುದಕ್ಕೆ ಈಗಿನ ಸಹಕಾರ ಬಲವು ಇನ್ನೂ ಸಾಕಾಗಲಿಲ್ಲವೆಂದು ಅವರು ಸೂಚಿಸುತ್ತಾರೆ. ಅವರು ಮುನಗಂಡು ಹೇಳುವವರೆಗೆ "ಸಾಹುಕಾರನ ಲೋಭತ್ವವನ್ನು ತಗ್ಗಿಸುವುದಕ್ಕೆ ಹೆಣಗಾಡುವಬದಲಾಗಿ ಸಾಲಪಡಕೊಳ್ಳುವವನ ಈ ಕಾಲವಿಳಂಬದ ದುರ್ಗುಣವನ್ನು ಹಟ್ಟಿಣಗಿಸುವುದಕ್ಕೆ ಸಹಕಾರವು ದೀಕ್ಷೆಯನ್ನು ಹಿಡಿಯಬೇಕು.

4. ಪಾತ್ರಾಪಾತ್ರವರಿಯದ ಪರೋಪಕಾರ — ಸಾಮಾಜಿಕ ಸುಧಾರಣೆಯಲ್ಲಿ ಉತ್ಸಾಹವುಳ್ಳ ಹಲವರು ತಮ್ಮ ಸದುದ್ದೇಶದ ಉದ್ದಿಷ್ಟತೆಯಲ್ಲಿಯೇ ಮಗ್ನರಾಗಿ, ಕೆಲಸಲ ಆ ಸದುದ್ದೇಶದ ಪ್ರಸಾರದ ಬೀಜವನ್ನು ಬಿತ್ತುವ ಮೊದಲು ಕ್ಷೇತ್ರವನ್ನು ಅಣಿಮಾಡುವದಕ್ಕೆ ಲಕ್ಷ್ಯಕೊಡುವದಿಲ್ಲ. ಸಹಕಾರ ದೀಕ್ಷಿತರಾದವರ ಸ್ಥಿತಿಯು ಕೆಲವು ಮಟ್ಟಿಗೆ ತದ್ರೀತಿ ಪರಿಣಮಿಸಿದೆ ಎಂಬ ಸಂದೇಹವುಂಟಾಗಿದೆ. ಅನಾದಿಯಿಂದಲೂ ವಿಪರೀತವಾದ ಬಡ್ಡಿಯನ್ನು ತೆತ್ತು ರೂಢಿಯುಳ್ಳವರೆಂದು ಸರ್ವವಿದಿತವಾದ ನಮ್ಮ ದೇಶದ ಸಾಲಪಡೆಯುವ ಜನಗಳಿಗೆ ಒಮ್ಮೆಲೇ ದರವನ್ನು ಬಹಳ ತಗ್ಗಿಸಲು ಈ ಪರಸ್ಪರ ಸಹಾಯ ಸಂಘಗಳು ಉದ್ಯುಕ್ತರಾದುದು ಸಫಲದಾಯಕವಾಗಿರುವುದೇ ಎಂಬುದು ಸಂದೇಹಾಸ್ಪದವಾಗಿದೆ. ಬಡ್ಡಿಯ ಭಾರದಿಂದ ಸಂಕುಚಿತರಾಗಿ ಮನಸ್ಸಿಗೆ ಅಸಮಾಧಾನವುಳ್ಳ ಜನರು ಮೊರೆಯಿಟ್ಟ ಕಾರಣ ಈ ಬಡ್ಡಿಯು ಕ್ರಮವನ್ನು ತಗ್ಗಿಸಲೇ ಇಲ್ಲ, ಪರೋಪಕಾರ ಬುದ್ಧಿಯಿಂದ ತುಂಬಿ ತುಳುಕುವ ಧಾರಾಳಿಗಳ ಉತ್ಸಾಹದಿಂದುಂಟಾದ ಒತ್ತಾಸೆಯಿಂದಲೇ ಬಡ್ಡಿಯ ದರವು ಬಹಳ ತಗ್ಗಿತು. ಹಾಗೆ ಮಾಡುವಾಗ ಅಯಾಚಿತ ದಾನದಿಂದ ಹಲವು ಸಲ ಬಳ್ಳಿತಾಗುವ ಬದಲಾಗಿ ಕಡುಕ ರಾಕ್ಷಸಹೆಂಬದು ಅವರ ಬುದ್ಧಿಗೆ ಮಿಂಚಲೇ ಇಲ್ಲ. ಸಂಘಕ್ಕೆ ಸೇರುವನಕ ಒಂದಿಷ್ಟಾದರೂ ಆಕ್ಷೇಪ ಎತ್ತದೆ ತಲೆ ಬಗ್ಗಿಸಿ ಸೇಕಡಾ ೫೦ರಿಂದ ೧೦೦ರ ವರೆಗೆ ಬಡ್ಡಿ ತೆತ್ತು ಹಾಗೆ ಬಡ್ಡಿ ತೆರುವುದು ವಿಶೇಷಸಂಗತಿಯಲ್ಲ ಎಂದು ಅಭಿಪ್ರಾಯಪಟ್ಟಿದ್ದವರು ಸಂಘಗಳನ್ನು ಸೇರಿದೊಡನೆ ಸಾಲದ ಹಣದಮೇಲೆ ಸೇಕಡಾ ೯ರಿಂದ ೧೨ರವರೆಗೆ ಬಡ್ಡಿಯನ್ನು ತೆರಲು ಅನುಕೂಲವಾಯಿತು. ಅವರಿಗೆ ಜಾಸ್ತಿ ಇರುವ ಬಡ್ಡಿಯನ್ನು ಆಲೋಚಿಸಿದಾಗ ಇದು ಅತಿ ಅಲ್ಪವೆಂದು ಅವರಿಗೆ ಕಂಡಿರಬೇಕು. ಮಿತವ್ಯಯ, ದೂರದರ್ಶಕತೆ, ಕಾಲಕ್ಲಪ್ತತೆ ಎಂಬ ಯಾವ ಸದ್ಗುಣಗಳ ಪ್ರತಿಫಲವಾಗಿ ಈ ಅನುಕೂಲತೆಯು ಅವರಿಗೆ ಸಾಧ್ಯವಾಗಬೇಕಿತ್ತೋ ಅಂಥಾ ಸದ್ಗುಣಗಳು ಅವರಲ್ಲಿ ಬೆಳೆಯುವುದಕ್ಕೆ ಮುಂಚಿತವಾಗಿಯೇ ಅವರ ಯೋಗ್ಯತಾ ಯೋಗ್ಯತೆಯ ವಿಚಾರವಿಲ್ಲದ ಅವರಿಗೆ ಈ ಉಪಕಾರವನ್ನು ಮಾಡಿದಂತಾಯಿತು. ಹೀಗಾದ್ದರಿಂದ ಪರಸ್ಪರಸಹಾಯ ಸಂಘಗಳನ್ನು ಸೇರಿದಮಾತ್ರದಿಂದಲೇ ಲೋಭತ್ವದ ಪೀಡಣದಿಂದ ಪತಿತರಾದವರು ದುರ್ಗುಣನಿಗ್ರಹ ಮುಂತಾದ ಸಿದ್ಧಿಗಳನ್ನು ಸಾಧಿಸದೆನೆ ಒಮ್ಮೆಲೆ ಸಹಕಾರದ ಪ್ರಯೋಜನಗಳೆಂಬ ಸಾಯುಜ್ಯವನ್ನು ಪಡೆದಂತಾಯಿತು. ಈ ರೀತಿಯ ಪಾತ್ರಾಪಾತ್ರವರಿಯದ ಧರ್ಮವೂ ಪರೋಪಕಾರವೂ ಜನರನ್ನು ಅಪರಚಿಂತಾರಹಿತತ್ವಕ್ಕೂ ಕಾಲವಿಲಂಬನಕ್ಕೂ ಇಳಿಸಲಿಕ್ಕಿಲ್ಲವೇ ಎಂದು ವಿಚಾರಮಾಡಬೇಕಾಗಿದೆ. ಸಾಲಪಡೆಯುವವನನ್ನು ಲೋಭತ್ವದ ಬಾಯಿಯಿಂದ ತಪ್ಪಿಸುವುದಕ್ಕೆ ಅವನೂ ಸ್ವಲ್ಪ ಕೈಕೊಡದಿದ್ದರೆ ಅಂಥಾ ಏಕಪಕ್ಷವಾದ ಪ್ರಯತ್ನಗಳಿಂದ ಕೆಡುಕೇ ಉಂಟಾಗದಿದ್ದರೂ ಆ ಪ್ರಯತ್ನಗಳು ನಿಷ್ಫಲವಾಗುತ್ತದೆಂದು ಚರಿತ್ರಾಧಾರದಿಂದ ಹೇಳಬಹುದ.

5 **ಅಪರಚಿಂತಾರಹಿತತ್ವ ಮತ್ತು ಕಾಲವಿಲಂಬನಕ್ಕೆ ಕಾರಣಗಳು:** — ಬಡ್ಡಿಯ ದರವು ಫಕ್ಕನೆ ತಗ್ಗಿಹೋದರೆ ಅಗತ್ಯಬೀಳುವ ಹಣಕ್ಕಿಂತ ಹೆಚ್ಚಿಗೆ ಹಣ ಸಾಲ ಕೇಳುವುದಕ್ಕೆ ಉತ್ತೇಜನ ಸಿಗುತ್ತದೆ. ಸೇಕಡಾ ೫೦ರ ದರದಲ್ಲಿ ಒಬ್ಬನು ಎಷ್ಟು ಹಣ ಸಾಲ ಕೇಳಬಹುದೋ ಅದರ ಇಮ್ಮಡಿ ಹಣವನ್ನು ಸೇಕಡಾ ೨೫ರಲ್ಲಿಯೂ ನಾಲ್ಕು ಪಾಲಷ್ಟು ಹಣವನ್ನು ಸೇಕಡಾ ೧೨ರಲ್ಲಿಯೂ ಕೇಳಲಿಕ್ಕೆ ಅನುಕೂಲತೆ ಒದಗುವುದರಿಂದ ಸಾಲಕೇಳುವವರಮೇಲೆ ತಕ್ಕ ರೀತಿಯ ಮೇಲ್ವಿಚಾರವಿಲ್ಲದಿದ್ದರೆ ಅವರು ಹೆಚ್ಚೆಚ್ಚು ಹಣ ಸಾಲಕೇಳುವರು. ಅಗತ್ಯವಿರುವುದಕ್ಕಿಂತ ಹೆಚ್ಚಿಗೆ ಹಣ ಕೈಸೇರಿತೆಂದರೆ ಸಾಲಪರಿಹರಿಸುವುದಕ್ಕೆ ಒತ್ತಾಯ ಪಡೆಯದೆ ಅನೇಕಸಲ ಕ್ಲಪ್ತಕಾಲವನ್ನು ಮೀರುತ್ತಾರೆ. ಸುಲಭವಾಗಿ ಕಡಿಮೆ ಬಡ್ಡಿಯಿಂದ ಹಣ ದೊರಕುವ ಅನುಕೂಲತೆಯು ಮಿತವ್ಯಯದ ಮತ್ತು ಮುಂದಿನ ವಿಚಾರವಿಲ್ಲದ ಮನುಷ್ಯನ ಕೈಯಲ್ಲಿತ್ತು [illegible]

6. ಬಡ್ಡಿಯ ದರ ಹೆಚ್ಚಾಗಲಿಕ್ಕೆ ಕಾರಣ:—ಸಾಲಪಡೆದವನು ಕ್ಲಪ್ತಕಾಲಕ್ಕೆ ಹಣವನ್ನು ತೆರುವುದರಲ್ಲಿ ಸಂದೇಹವುಂಟಾದರೆ ಸಾಹುಕಾರನು ಹೆಚ್ಚು ಬಡ್ಡಿಯನ್ನು ಕೇಳುವ ಮುಖ್ಯಕಾರಣ. ಪರಸ್ಪರವಿಶ್ವಾಸಕ್ಕೆ ಅತೀ ಅಗತ್ಯವಾದ ದೇಶಶಾಂತತೆಯೂ ಬಿಗ್ರವಾದ ರಾಜ್ಯಪರಿಪಾಲನೆಯೂ ನಿಷ್ಪಕ್ಷಪಾತದಿಂದ ನ್ಯಾಯನೀಡಿದ ನ್ಯಾಯವಿದಾಯಕತ್ವವೂ, ಅವರವರ್ಷ ಜವಾಬ್ದಾರಿಗಳನ್ನು ತಪ್ಪದೆ ನಡೆಯದವರಿಗೆ ದಾರಿಕಾಣಿಸುವ ಕೋರ್ಟು ಕಚೇರಿಗಳೂ ಸಂಕಷ್ಟ ಇದ್ದಾಗ್ಯೂ ಬಡ್ಡಿ ದರ ನಮ್ಮಲ್ಲಿ ಎಳ್ಳಷ್ಟು ಬಡ್ಡಿಯ ದರವನ್ನು ತಗ್ಗಿಸದಿರುವುದಕ್ಕೆ ಈ ಕಾಲದಲ್ಲಿ ನಮಗೆ ಒದಗಿ ಆಗಬಹುದಾದ ನಷ್ಟವೇ ಕಾರಣವಲ್ಲವೇ? ಇದರ ಪರಿಹಾರವೇನು? ಪ್ರಮಾಣಿಕರಾದವರೂ ಸಹ ನಂಬಿಕೆಗೇಡಿಗಳ ದುರ್ನಡತೆಯ ಫಲವನ್ನು ಅನುಭವಿಸಬೇಕಾಗುತ್ತದೆ. ಮೂಲಧನಕ್ಕೆ ಮೋಸಬಾರದೆಂದು ಸಾಹುಕಾರರಿಗೆ ವಿಶ್ವಾಸವಿದ್ದಲ್ಲಿ ಅತಿ ಕಡಿಮೆ ದರದಲ್ಲಿ ಹಣವನ್ನು ಸಾಲಕೊಡುವ ಪ್ರಸಂಗ ಬರಲಿಕ್ಕಿಲ್ಲವೆ? ಹೀಗಾದರೆ ವಿಪರೀತ ಬಡ್ಡಿಯೆಂದು ಮೂಲಧನಕ್ಕೆ ಬರುವ ಅಪಾಯವನ್ನು ತಗ್ಗಿಸುವ ಉಪಾಯ ಯಾವುದು ಎಂಬುದನ್ನು ಗುರುತಿಸಬೇಕಾಗಿದೆ. ಎಲ್ಲಿ ಉಪಾಯ ಕಡಿಮೆಯೋ ಅಲ್ಲಿ ಬಡ್ಡಿ ದರ ಕಡಿಮೆ.

7. ಬಡ್ಡಿಯ ಇಳಿತವನ್ನು ಸಂಪಾದಿಸಿಕೊಳ್ಳುವ ಬಗೆ—ಸಾಲ ಮುಳುಗಿಹೋಗುವ ಅಪಾಯವನ್ನು ತಗ್ಗಿಸುವುದೇ ಪರಸ್ಪರಸಹಾಯ ಸಂಘಗಳ ಮುಖ್ಯಕರ್ತವ್ಯವಾದ್ದರಿಂದ ಅಪಾಯವು ಕಡಿಮೆಯಾದ ಮಾತ್ರದಲ್ಲಿ ರೀತಿಯಲ್ಲಿ ಬಡ್ಡಿ ದರವು ಇಳಿಯುತ್ತದೆ. ಒಂದೊಂದು ಸಾಲಪಡೆಕೊಳ್ಳುವವರನ್ನು ಒಂದು ಸಂಘದಲ್ಲಿ ಕೂಡಹಾಕಿ ಪರಸ್ಪರರಲ್ಲಿಯೇ ಅವರ ಹಣದ ವ್ಯವಹಾರಗಳನ್ನು ನಿರ್ವಹಿಸಲು ಅಶಕ್ಯ ಯಾವುದೋ ಒಂದು ಪಾಪವು ಒದಗಿದರೆ ಕೂಡಿಸಿದ ಹಣವನ್ನು ತೆರುವುದೇ ವಾಡಿಕೆಯಾಗಿದ್ದರೆ ಅವರ ಒಳ್ಳೆ ನಡತೆಗಾಗಿ ಸಾಹುಕಾರನು ಹೇಳುವ ಸಂಘವು ಪಕ್ವನೆ ದರವನ್ನು ತಗಿಸುವುದು ಅವಿಚಾರದ ಕೆಲಸ. ಈ ಬಗೆಯ ಪರವಿಶ್ವಾಸವು ವೆಲ್ಲರ ಉದ್ವಿಸಿ ದಿನದಿನಕ್ಕೆ ಬೆಳೆಯುತ್ತ ಬರಬೇಕಲ್ಲದೆ ಫಕ್ಕನೆ ಆಕಾಶದಿಂದ ಇಳಿದು ಬಂದಿರ ಬಾರದು. ಅದರಿಂದ ಒಂದು ಗ್ರಾಮ್ಯಗಳಲ್ಲಿ ಹತ್ತಿರದವರು ಆದ ಸಂಘವು ಮೂಡುತ್ತಿದ್ದು, ಸಾಲಗಾರರಿಗೆ ಒದಗುವ ಉಪದ್ರವದಾಗಿಯೂ ಕ್ಲಪ್ತ ಕಾಲಕ್ಕೆ ಅದನ್ನು ಪರಿಹರಿಸಿದ್ದಾಗಿಯೂ ಕಂಡ ಅನೇಕ ನಿದರ್ಶನಗಳುಂಟು. 'ಉತಾರ'ನ್ನು ಬಿಡುವುದು ಯುಕ್ತ. ಅಗತ್ಯವಾದುದರಿಂದ ಅನಿವಾರ್ಯವಾಗಿ ಸಾಲ ಮಾಡುವುದನ್ನು ನಿಲ್ಲಿಸುವುದಕ್ಕೂ ಪ್ರಮಾಣಿಕತನ ವಿಶ್ವಾಸ, ನಿರ್ಣಯಿಸಿದ ಕಾಲಕ್ಕೆ ಸಾಲಪರಿಹಾರ ಮುಂತಾದ ಸದ್ಗುಣಗಳು ಬೆಳೆಯ ಕೂಟ ಹಾಗಾಗುವುದಲ್ಲವೇ? ಇದಲ್ಲದೆ ಮೇಲೆ ಹೇಳಿದಂತೆ ಸೋಡಿ ಬೀಳುವ ಹಣವನ್ನು ಸಾಲಗಾರನ ಕೈಗೆ ಕೊಡುವುದಕ್ಕೆ ಬದಲಾಗಿ ಅವನ ಹೆಸರಿನಲ್ಲಿ ಠೇವಣಾತಿಯಾಗಿರಿಸಿ ಅನಿವಾರ್ಯಕಸಂದರ್ಭಗಳಲ್ಲಿ ಮಾತ್ರ ಅವನ ಕೈಗೆ ಸಿಕ್ಕುವಂತೆ ಮಾಡಿದರೆ ಅವನಿಗೆ ಮಿತವ್ಯಯವನ್ನು ಕಲಿಸಿ ಕೊಟ್ಟಂತಾಗಲಾರದೆ? ನಿಯಮಿತ ಕಾಲದಲ್ಲಿ ಆದಾಯ ಪ್ರತಿಫಲವಾಗಿ ಈ 'ಸೋಡಿ'ಯನ್ನು ಹೊಂದುವ ವ್ಯಕ್ತಿಗೆ ಕಷ್ಟಕಾಲದಲ್ಲಿ ತಪ್ಪುವ ಯೋಚನೆ ಕಡಿಮೆಯಾಗಲಾರದೆ? ಕಾಲಮಿತಿಯನ್ನು ಒದಗಿಸುವುದರಿಂದ ಅವಶ್ಯಕತೆಗೆ ಸಹಾಯ ಸಿಕ್ಕುವುದು ನಿಜವಾಗಿದ್ದರೆ ಅದರ ಬೆಲೆಯ ಇನ್ನಮಿತಿಯಾಗುವುದು.

ಮುಗಿಯುವದು

~~~~~~~~

ಪತ್ರವ್ಯವಹಾರ

~~~~~~~~

ಒಬ್ಬ ಕನ್ಯಾಪಿತನ ವಿಜ್ಞಾಪನೆ

~~~~~~~~

ಮಹಾಸ್ವಾಮಿ,

ನಾನು ಒಬ್ಬ ಬ್ರಾಹ್ಮಣನು; ಎರಡಾರು ಸಾವಿರಕ್ಕಿಂತ ಮಿಕ್ಕಿದ ಧನಿಕನಲ್ಲ. ನನಗೆ ಆರು ಹೆಣ್ಣು ಮಕ್ಕಳು ಒಂದು ಗಂಡು ಮಗು. ಇಬ್ಬರು ಹುಡುಗಿಯರಿಗೆ ವಿವಾಹವಾಗಿದೆ. ಉಳಿದವರಿಗೆ ಇನ್ನೂ ಮದುವೆಯಾಗಿಲ್ಲ. ಮೂರನೆಯವಳ ಎಂಟನೆಯ ವರುಷದ ಮೊದಲುಗೊಂಡು ವರಶೋಧನೆಯ ಕೆಲಸಕ್ಕೆ ಪ್ರಾರಂಭ. ಆದರೆ ನನ್ನ ಸ್ಥಿತಿಗತಿಗೆ ತಕ್ಕ ಸ್ಥಳಗಳಲ್ಲಿ ಎಲ್ಲಿ ನೋಡಿದರೂ ಗ್ರಹಬಲವಿಲ್ಲವಂತೆ. ಬಲಿಷ್ಟನಾದ ಮಂಗಳನು ಅಮಂಗಳಕರನಂತೆ, ಮೂಲಾನಕ್ಷತ್ರ ಸರ್ವ ನಾಶವನ್ನು ತರುವುದಂತೆ. ಜೋತಿಷ್ಯ ಮಹಾಶಯರೆಲ್ಲ ಯಾರ ದೋಷಕ್ಕಾಗಿ ನನ್ನ ಮೇಲೆ ಟುಷ್ಕರ ಹಿಡಿದಿರುವರೋ ನಾನರಿಯೆ. ನಾಲ್ಕೈದು ವರ್ಷಗಳ ಶ್ರಮವು ನಿರರ್ಥಕ. ಕೆಲವು ಕಡೆಗಳಲ್ಲಿ ಜಾತಕ ಸಂದರ್ಭವಿದ್ದಿತೇನೋ ಖರೆ. ಆದರೆ ವಿಪರೀತ ಕನ್ಯಾಶುಲ್ಕ. ಜಾತಕವು ಸರಿಬೀಳುವ ಸಂದರ್ಭಗಳು ಕಡಿಮೆಯಾದುದಕ್ಕಾಗಿಯೇ ನಾಲ್ಕು ಸಾವಿರಕ್ಕಿಂತಲೂ ಅಧಿಕ, ಎರಡು ಮೂರು ಸಾವಿರ ರೂಪಾಯಿಗಳಿಗಿಂತ ಕಡಿಮೆ ಮಾತಿಲ್ಲ. ಒಮ್ಮೆಗೆ ಸರ್ವಸ್ವವನ್ನಾದರೂ ಕೊಟ್ಟು ಕನ್ಯಾ ವಿವಾಹವನ್ನು ಅನುಕೂಲಿಸುವೆನೆಂದರೆ ಮದುವೆಯಾಗದಿರುವ ಇನ್ನೂ ಮೂರು ಮಂದಿ ಬಾಲಕಿಯರನ್ನೂ ಚಿಕ್ಕ ಮಗನನ್ನೂ ಕಟ್ಟಿಕೊಂಡು ನಾನ್ಯಾವ ಗುಂಡಿಗೆ ಹಾರಲಿ? ಮಗನ ಮುಂದಿನ ವಿದ್ಯಾಭ್ಯಾಸಕ್ಕೆ ಏನು ಮಾಡಲಿ? ಈ ಹುಡುಗಿಯು ಧೃಡಕಾಯಳೂ ಪುಷ್ಟಳೂ ಆಗಿ ಬೆಳೆದುದೇ ಪ್ರಾಣಕ್ಕೆ ಬಂತು. ವಯಸ್ಸು ಹದಿನೈದ ಮೀರದಿದ್ದರೂ ನೋಡುವವರ ಕಣ್ಣಿಗೆ ಹದಿನೆಂಟು ವರ್ಷದವಳಂತೆ ಕಾಣುವಳು. ದುಷ್ಟ ಸಮಾಜದ ಸಾವಿರ ಕ್ರೂರ ನಾಲಗೆಗಳು ಒದರುತ್ತಿರುವುವು: "ಹುಡುಗಿಯು ಮದುನೆಯಾಗುವ ಅವಧಿಯು ದಾಟಿತು. ಆಕೆಯನ್ನು ವಿವಾಹವಾಗುವುದರಿಂದ ವರ್ಣಸಂಕರ ಪ್ರಾಪ್ತಿ" ಎಂಬಿತ್ಯಾದಿ ಕಟೂಕ್ತಿಗಳ ಮಳೆಗರೆಯತೊಡಗಿತು. ವರದಕ್ಷಿಣೆ ಮೊದಲಾದುವೆಲ್ಲವನ್ನೂ ನಿಶ್ಚಯಿಸಿ ಕನ್ಯೆಯನ್ನು ನೋಡಲು ಬಂದವರು ಕನ್ಯೆಯ ಬೆಳವಣಿಕೆಯನ್ನು ನೋಡಿ ಹೆದರಿ ಹಿಂದೆ ಹೋದರು. ಒಂದಿಸಿದ ಸಾವಿರ ಎರಡು ಸಾವಿರ ಕೊಡುವೆನೆಂದರೂ ಒಬ್ಬನೂ ಒಪ್ಪುವದಿಲ್ಲ. ಈಗ ಈ ದುರ್ಭಾಗ್ಯ ಬಾಲಿಕೆಗೆ ಹದಿನೆಂಟು ವರುಷ ಮಾತ್ರ. ಆದರೆ ಆಕೆಯ ದೇಹದ ಬೆಳವಣಿಕೆಯು—ದೂರ್ತ ಜನರು "ಹದಿನೆಂಟು ವರುಷಗಳ ಮೇಲೆ ಇಪ್ಪತ್ತು ನಾಲ್ಕು ಮೂವತ್ತಾರೊ ತಿಂಗಳುಗಳು" ಎಂದು ಪಾಪ ಭಯವಿಲ್ಲದೆ ಬೊಗಳುವುದನ್ನು ನಂಬಿಸುತ್ತದೆ. ಆದರೆ ವಾಚಕರೇ, ಅನೃತ ಮೋಸಗಳು ನನಗೆ ಬಾರವು. ಬಂದಿದ್ದರೆ ಆ ಅಮಂಗಳನನ್ನೂ ನಿರ್ಮೂಲಕರ ಮೂಲನಕ್ಷತ್ರವನ್ನೂ ಸಮೂಲವಾಗಿ "ಜಾತಕ"ದ ಹಾನಾವಾಂಕಿತ ಕ್ಷುದ್ರ ಪತ್ರದಿಂದ ಚಿತ್ತು ಮಾಡುತ್ತಿದ್ದೆನು. ವಿವಾಹ ಕಾಲದ ಅವಧಿಯು ಅವುದೋ ನಾನರಿಯೆ. ಆದರೆ ಹುಡುಗಿಯ ವಯಸ್ಸು ಇನ್ನೂ ಹದಿನೆಂಟು. ಈಕೆಗ ವಿವಾಹವಾಗದೆ, ಹದಿನಾರು ವರುಷಗಳ ಪ್ರಾಯದ ಈಕೆಯ ತಂಗಿಗೂ ಹದಿನಾಲ್ಕು ಹದಿನೆರಡು ವರುಷಗಳ ವಯಸ್ಸಿನ ಮತ್ತಿಬ್ಬರೀಗೂ ವಿವಾಹವಾಗಲು ಅನುಕೂಲವಿಲ್ಲ. ಕೊನೆಗಾಣದ ಭಯಂಕರ ಕಷ್ಟದಲ್ಲಿರುವೆನು. ವಾಚಕರಲ್ಲಿ ಕನ್ಯಾಪಿತರಾದರೂ ನನ್ನೀದುರವಸ್ಥೆಯಲ್ಲಿ ಸಹಸಂತಾಪವನ್ನು ತೋರಿ ನನಗ ತಿಳಿಯದ ಕೆಲವು ಪ್ರಶ್ನೆಗಳಿಗೆ ಉತ್ತರವನ್ನು ದಯಮಾಡಿರಿ.

ನನ್ನ ಈ ಹತಭಾಗ್ಯ ಬಾಲೆಯ ದುಃಸಹ ದುರವಸ್ಥೆಗೆ ಕಾರಣವು ಯಾರು? ಕನ್ಯಾಪಿತನೋ ಕನ್ಯೆಯೋ? ಗೃಹನಕ್ಷತ್ರ ದೋಷಗಳಿರುವ ಜಾತಕವೋ, ಅಥವಾ ಗ್ರಹಬಲವಿದ್ದು ಮಾಡುವ ವಿವಾಹಗಳಲ್ಲಿ ನಿತ್ಯವೂ ಹೆಚ್ಚುವ ವಿಧವೆಯರ ಸಂಖ್ಯೆಯನ್ನು ಕಣ್ಣಾರೆ ಕಾಣುವಂತೆ ಜಾತಕ ಸಂಘಟನೆಯೇ ಮಹತ್ವವೆಂದು ನಂಬಿರುವ ಮೂಢ ವಿಶ್ವಾಸವೋ? ವಿದ್ಯಾಬುದ್ಧಿಗಳನ್ನು ಕಲಿಸಿ ಪ್ರೀತಿಯಿಂದ ಬೆಳೆಸಿದ ಬಾಲೆಯೊಡನೆ ಕನ್ಯಾಪಿತನ ಸರ್ವಸ್ವವನ್ನೂ ಅಪಹರಿಸುವ ಹಿಂಸಕ ಪದ್ಧತಿಯೋ, ಅಥವಾ ಆರು ಹೆಣ್ಣು ಮಕ್ಕಳ ತಂದೆಯನ್ನು ಲಕ್ಷಾದಿಪತಿಯಾದರೂ ಮಾಡದೆ ಬಡತನವನ್ನಿತ್ತ ಈಶ್ವರನೊ? ಪ್ರಕೃತಿ ದೇವಿಯಿಂದ ಪೂರ್ಣವಾಗಿ ಅನುಗ್ರಹಿತವಾದ ಆಕೆಯ ದೇಹದ ಬೆಳವಣಿಕೆಯೋ? ಅವಮಾನ ಯುಕ್ತಾಯುಕ್ತತೆಯನ್ನರಿಯದೆ ಇತರರ ದೋಷವನ್ನು ಹುಡುಕಿ ಸಾರುವ ನಿರ್ದಯ ಸಮಾಜದ ಸಾವಿರ ನಾಲಗೆಗಳೋ? ವಾಚಕರೇ ಅದಾವುದು?

ನನ್ನ ಅವಸ್ಥೆಯೇ ಹೇರಳ ಜನಸಮುದಾಯವಿಲ್ಲದ ಜಾತಿಯ ಕನ್ಯಾಪಿತರಲ್ಲಿ ಕೆಲವರ ಮೇಲೆ ಒಂದಿರುವುದು. ಅನೇಕರ ಮೇಲೆ ಬರುತ್ತಲೂ ಇದೆ. ಈ ವಿಪತ್ತಿನ ಯಥಾರ್ಥವಾದ ವಿಶೇಷತೆಯು ನನ್ನ ಅನುಭವಕ್ಕೆ ಬರುವಂತೆ ತಮಗೂ ತಿಳಿಯುವದಾದರೆ ಇದರ ನಿವಾರಣೆಯನ್ನು ಹುಡುಕಲು ಇದೀಗ ಸಮಯ. ಸಮಾನ ನಡೆನುಡಿ ಆಚಾರಪದ್ಧತಿಗಳಿರುವ ಒಳಬೇದಗಳನ್ನು ಒಂದಾಗಿಸಿ ಸಮಾಜಾವರಣವನ್ನು ವಿಸ್ತರಿಸುವುದಕ್ಕೂ ತಕ್ಕ ವರನನ್ನು ದೊರಕಿಸಿಕೊಳ್ಳಲು ಹುಡುಕುವವನ ಎದುರು ಪ್ರತಿಬಂಧಕವಾಗಿರುವ ಜಾತಕ ನೋಡುವ ಪದ್ಧತಿಯ ಕೆಡಕುಗಳನ್ನು ಕಡಿಮೆಮಾಡುವುದಕೂ ಒಬ್ಬೊಬ್ಬರೂ ಪ್ರಯತ್ನಿಸಬೇಕಾಗಿದೆ. ಮುಂದೆ ಮಾನ್ಯಜನಾಂಗವಾಗತಕ್ಕ ನಮ್ಮ ತರುಣ ಮಂಡಲಿಯಲ್ಲಿ ವರದಕ್ಷಿಣೆಯ ಹೆಸರಿನಲ್ಲಿ ಮಾಡುವ ಕನ್ಯಾಪಿತನ ಸುಲಿಗೆಯು ನಿಂದನೀಯವೂ ಅಮಾನುಷವೂ ಎಂಬ ಸಂಗತಿಯನ್ನು ಆಗಾಗ ಲೇಖನಾದಿಗಳ ಮೂಲಕ ಸಾರುವುದಕ್ಕೂ ಇದು ಸಕಾಲ. ಬಾಲವಿವಾಹ ಪದ್ಧತಿಯು ತಾನಾಗಿಯೆ ಸಾಯಲು ಪ್ರಾರಂಭಿಸಿದಂತೆ ಕಾಣುತ್ತದೆ. ಹದಿಮೂರು ಹದಿನಾಲ್ಕು ವರುಷ ಪ್ರಾಯದ ಅವಿವಾಹಿತ ಹುಡುಗಿಯರು ಈಗ ಎಲ್ಲೆಲ್ಲಿಯೂ ಕಾಣಬರುತ್ತ ದೇಶದೇಳಿಗೆಯನ್ನು ವಿರೋಧಿಸಲು ಪ್ರಸ್ತುರ ಪ್ರಾಯವಾಗಿರುವ ಈ ಕ್ರೂರಪದ್ಧತಿಯನ್ನು ಬಹಿರಂಗವಾಗಿಯೂ ಧೈರ್ಯದಿಂದಲೂ ನಿರ್ನಾಮಮಾಡಿ ನನ್ನಂತಹ ಅನೇಕ ಕನ್ಯಾಪಿತರ ಸಂಕಷ್ಟ ನಿವಾರಣೆಯನ್ನು ಮಾಡಬಾರದೇಕೆ? ಇತಿ.
~~~~~~~~

ಯುದ್ಧ ಸಮಾಚಾರ.

ತಾ. ೨೦ನೇ ಮೇ.

ಮರ್ಮೋರದಲ್ಲಿ ಆಸ್ಟ್ರೇಲಿಯಾನರ E ೨ ಎಂಬ ಸಬ್‌ಮೆರಿನನ್ನು ತುರ್ಕರು ಮುಣುಗಿಸಿದ್ದರೆಂಬ ವಾರ್ತೆ ಸಿಜವಾದುದೆಂದೂ ೩ ಆಫೀಸರರೂ ೧೭ ಸೇನಿಕರೂ ತುರ್ಕರಿಂದ ಬಂಧಿಸಲ್ಪಟ್ಟಿರುವರೆಂದೂ ಬ್ರಿಟಿಷ ಸರಕಾರದವರು ಪ್ರಕಟಿಸಿರುತ್ತಾರೆ.

ಬೆಲ್ಜಿಯಮ್ ಎಡಪಾರ್ಶ್ವದ ರಣರಂಗದಲ್ಲಿ ಜರ್ಮನರ ಎರಡು ಸಾವಿರ ಸೇನಿಕರು ಹತರಾದರು. ಜರ್ಮನರ ಅನೇಕ ರೈಫಲ್ ತೋಪಿಗಳು ಮಿತ್ರರಿಗೆ ದೊರಕಿದವು. ಕಳೆದ ರಾತ್ರಿ ಜರ್ಮನರು ಪುನಃ ಹಲ್ಲೆ ಮಾಡಿ ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿದರು. ಅರ್‍ರ್ರಾಸಿನ ಉತ್ತರದಲ್ಲಿ ಕಠಿಣ ತೋಪುಕಾಳಗವು ನಡೆಯುತ್ತಿದೆ. ಜರ್ಮನರು ಮುಖ್ಯವಾಗಿ ಅರ್‍ರ್ರಾಸಿಗೆ ಗುಂಡು ಹಾರಿಸುವ ಕೆಲಸದಲ್ಲಿ ನಿರತರಾಗಿರುವರು. ಮಿತ್ರರು ಪುನಃ ಜರ್ಮನರ ಸೇನಿಕರನ್ನು ಸೆರೆ ಹಿಡಿದಿರುತ್ತಾರೆ.

ಒಪ್ರೋವ್ ಮತ್ತು ವಿಸ್ತುಲದ ಎಡಪಾರ್ಶ್ವದಲ್ಲಿಯೂ ಗೆಲೀಸಿಯದ ರಣರಂಗದಲ್ಲೆಲ್ಲಿಯೂ ಶತ್ರುಗಳ ಮಹಾ ಸೈನ್ಯವು ರುಶ್ಯನರ ಮೇಲೆ ಹಲ್ಲೆಮಾಡಿ ಪ್ರೈಜ್‌ಮೈಸ್ಲಿನ ದಕ್ಷಿಣದಲ್ಲಿರುವ ರುಶ್ಯನರ ನೆಲೆಗಳನ್ನು ಬಲಕಾಯಿಸಲು ನೋಡಿದರು. ಆದರೆ ರುಶ್ಯನರು ಪ್ರಚಂಡವಾದ ಜರ್ಮನ ಸೇನೆಯನ್ನು ಹಿಂದಕ್ಕಟ್ಟಿ ೩೦೦೦ ಸೇನಿಕರನ್ನೂ ಕೆಲವು ಫಿರಂಗಿಗಳನ್ನೂ ಸೆರೆ ಹಿಡಿದಿರುವರು. ಶತ್ರುಗಳಿಗೆ ಬಹಳ ನಷ್ಟವಾದರೂ ಅವರು ಸಾನ್‌ನದಿಯ ಬಲಕಡೆಯಲ್ಲಿ ತಮ್ಮ ನೆಲೆಯನ್ನು ಬಲಕಾಯಿಸಲು ನೋಡಿದರು. ಶತ್ರುಗಳು ಪ್ರೈಜ್‌ಮೈಸ್ಲಿನ ಪಶ್ಚಿಮಕಡೆಯ ಕೋಟೆಗಳಿಗೆ ಗುಂಡು ಹಾರಿಸುತ್ತಲಿದ್ದಾರೆ. ಪ್ರೈಜ್‌ಮೈಸ್ಲ್ ಮತ್ತು ಸೀಸ್ವರಿನ ಮಧ್ಯೆ ರುಶ್ಯನರು ಶತ್ರುಗಳ ಸೇನೆಯಲ್ಲಿ ವಿಶೇಷ ನಷ್ಟಪಡಿಸಿ ೨ ಸೇನಾಂಗಗಳ ಕಂದಕಗಳನ್ನು ಸ್ವಾಧೀನಮಾಡಿಕೊಂಡರು. ಇಡೀ ಪ್ರಾಂತ್ಯದಲ್ಲಿ ಶತ್ರುಗಳಲ್ಲಿ ೧೦ ಸಾವಿರಕ್ಕಿಂತಲೂ ಹೆಚ್ಚಿಗೆ ನಷ್ಟವಾಗಿರುವದು.

ತಾ. ೨೧ನೇ ಮೇ.

ಜರ್ಮನರ ಜಲಾಂತರ್ಗಾಮಿ ನಾವೆಯು ಬ್ರಿಟಿಷರ ಡ್ರುಮ್‌ಸ್ಸ್ರೀ ಮತ್ತು ಡಮ್‌ಪ್ರಿಸ್ ಎಂಬ ಹಡಗಗಳನ್ನೂ ಎರಡು ಟ್ರವಲರ್ ದೋಣಿಗಳನ್ನೂ ಮುಣುಗಿಸಿರುತ್ತದೆ.

ಜರ್ಮನರು ಮುಣುಗಿಸಿದ ಲುಸಿತಾನಿಯ ಎಂಬ ಹಡಗದಲ್ಲಿ ಅಮೇರಿಕದ ವಿಶ್ವವಿದ್ಯಾಶಾಲೆಯಲ್ಲಿ ಡಾಕ್ಟರ್ ಪರೀಕ್ಷೆ ಕೊಟ್ಟು ಇಂಗ್ಲಾಂಡಿಗೆ ಬರುತ್ತಿದ್ದ ಬಂಗಾಳದ ಚಂದಿಚರಣಬೆನರ್ಜಿಯವರ ಮಗ ಡಾಕ್ಟರ್ ಬೆನರ್ಜಿಯವರೂ ಇದ್ದರು. ಈ ಹಡಗದಲ್ಲಿ ರಕ್ಷಣೆಹೊಂದಿದವರ ಪಟ್ಟಿಯಲ್ಲಿ ಇವರ ಹೆಸರು ಸೇರಿಲ್ಲ.

ಮೈಸರಿನ ಪೂರ್ವದಲ್ಲಿ ಎರಡಾವರ್ತಿ ಮೇಲ್ಹಾಯಿದ ಜರ್ಮನರು ಹಿಮ್ಮೆಟ್ಟಿದರು.

ಗೆಲೀಸಿಯದ ರಣರಂಗದಲ್ಲೆಲ್ಲಾ ಕಠಿಣ ಕಾಳಗವು ನಡೆದಿರುತ್ತದೆ. ಒಪ್ರಾವೊ ಪ್ರಾಂತ್ಯದಲ್ಲಿ ಶತ್ರುಗಳ ಬಲವಾದ ಸೇನೆಯು ನಿವನಿಸ್ಕದತ್ತಕಡೆಗೆ ಓಡಿಹೋಗಿರುವದು.

ಜಾರ್‌ಸ್ಲೊ ಮತ್ತು ಜಾಕಶ್ಯೆ ಪ್ರಾಂತ್ಯದಲ್ಲಿದ್ದ ಶತ್ರುಗಳು ಸಾನ್ ನದಿಯ ಬಲಪಾರ್ಶ್ವದಲ್ಲಿ ಬಲಕಾಯಿಸಿಕೊಂಡಿರುವರು. ಜಾರ್‌ಸ್ಲೊದ ದಕ್ಷಿಣದಲ್ಲಿರುವ ನದಿಯ ಎರಡು ದಡಗಳನ್ನೂ ರುಶ್ಯನರು ಹಿಡಕೊಂಡಿರುವರು. ಶತ್ರುಗಳು ಪ್ರೈಜ್‌ಮೈಸ್ಲ್ ಕೋಟೆಗೆ ಗುಂಡು ಹಾರಿಸುತ್ತಲಿದ್ದಾರೆ. ಆದಿತ್ಯವಾರ ದಿನ ಜರ್ಮನರು ಹಿಡಕೊಂಡ ರುಶ್ಯನರ ಕಂದಕಗಳು ಪುನಃ ರುಶ್ಯನರಿಗೆ ಸಿಕ್ಕಿರುತ್ತವೆ.

ಇಟಲಿಯನರು ಯುದ್ಧಕ್ಕೆ ಸೇರುವ ಸಂಭವವಿದೆ.

ತಾ. ೨[illegible]ನೇ ಮೇ.

[illegible]ನಲ್ಲಿ ಬ್ರಿಟಿಷರ ಸೇನೆಯು ವಿಶೇಷ ನಷ್ಟಹೊಂದಿ[illegible] ಹಿಂದೂಸ್ಥಾನದ ದುರ್ಕರ ಸೇನೆಯು [illegible] ಮುಂದರಿದು [illegible] ನೆಲೆಗಳನ್ನು ಬಲಕಾ[illegible] ಎಂತ ಪ್ರಕಟವಾಗಿದೆ.

[illegible]

ಬ್ರಿಟಿಷ ಪ್ರಧಾನ ಮಂತ್ರಿಯವರಾದ ಅಸ್ಕ್ವಿತರವರು ಹಿಂದೂಸ್ಥಾನದವರು ಯುದ್ಧ ಕಾಲದಲ್ಲಿ ಮಾಡಿದ ಸಹಾಯವನ್ನು ಬಹಳವಾಗಿ ಶ್ಲಾಘಿಸಿರುತ್ತಾರೆ. ಭಾರತೀಯರ ೨೮ ಅಶ್ವಪಡೆ ರೆಜಿಮೆಂಟು ಸೇನಾಂಗವೂ ೧೨೪ ಕಾಲಾಳು ರೆಜಿಮೆಂಟೂ ರಣರಂಗಕ್ಕೆ ಹೋಗಿರುವವು ಎಂತ ಮಿ। ಅಸ್ಕ್ವಿತರವರ ಭಾಷಣದಿಂದ ತಿಳಿದು ಬಂದದೆ.

ಆಸ್ಟ್ರಿಯನರ ಮತ್ತು ಜರ್ಮನರ ಕೌನ್ಸಿಲ್ಲರುಗಳು ರೋಮ ನಗರವನ್ನು ಬಿಟ್ಟಿರುವರೆಂಬ ವಾರ್ತೆ ಬಂದಿರುತ್ತದೆ.

ರುಶ್ಯನರ ಬಾಲ್ಟಿಕ್ ಹಡಗುಪಡೆಯ ಕಮಾಂಡರರಾದ ವನ್ ಎಸ್ಸೆನ್‌ರವರು ಜ್ವರದಿಂದ ಕಾಲವಾದರು.

ತಾ. ೨೪ನೇ ಮೇ.

ಇಟಲಿಯು ಯುದ್ಧಕ್ಕೆ ತೊಡಗಿದರೆ ಆ ಸಂಬಂಧ ಸರಕಾರದವರು ಕೈಕೊಳ್ಳಬೇಕಾದ ವಿಶೇಷ ಅಧಿಕಾರ ಕಾನೂನನ್ನು ಸಿಗ್ನೊರ್ ಸಲಾಂದ್ರರವರು ಮಂತ್ರಿಸಭೆಯಲ್ಲಿ ಇಟ್ಟಿರುವರು. ಇದರಿಂದ ಮಂತ್ರಿಸಭೆಯಲ್ಲಿ ಹೆಚ್ಚಿನ ಉಲ್ಲಾಸ ಉಂಟಾಗಿರುವದು. ಸೆನೆಟ್ ಸಭೆಯಲ್ಲಿಯೂ ಹೆಚ್ಚಿನ ಉತ್ಸಾಹ ಉಂಟಾಗಿದೆ.

ಇಟಲಿಯ ಪ್ರಿನ್ಸ್ ಕೊಲೊನ್ನರವರೂ ಪಟ್ಟಣ ಪಾಲಕರೂ ಮುನ್ಸಿಪಾಲ್ ಕೌನ್ಸಿಲ್ಲರೂ ಪ್ರಧಾನಪುರದಿಂದ ೨೦೦ ಸಾವಿರ ಜನರೊಂದಿಗೆ ಮೆರವಣಿಗೆ ಹೊರಟು ಅರಸರಲ್ಲಿಗೆ ಹೋಗಿ ತಮ್ಮ ಸಂತೋಷವನ್ನು ತೋರ್ಪಡಿಸಿದರು. ಅರಸರು ಸ್ವದೇಶವಾತ್ಸಲ್ಯ ಯುಕ್ತವಾದ ಭಾಷಣವನ್ನು ಕೊಟ್ಟರು.

ಆಸ್ಟ್ರಿಯ, ಜರ್ಮನ್ ಮತ್ತು ಟರ್ಕಿ ರಾಯಭಾರಿಗಳು ರೋಮನಗರವನ್ನು ಬಿಟ್ಟಿರುವರು.

ಇಟಲಿ ಮಂತ್ರಿಸಭೆಯವರು ಆಸ್ಟ್ರಿಯದ ಮೇಲೆ ಯುದ್ಧ ಸಾರುವ ಪತ್ರದ ನಕಲು ತಯಾರಿಸಿರುವರು. ಸೇನೆಯನ್ನು ಒಟ್ಟುಗೂಡಲು ಅಪ್ಪಣೆಮಾಡಿರುವರು.

ತಾ. ೨೩ರಿಂದ ಇಟಲಿಯ ಉತ್ತರಪ್ರಾಂತ್ಯಗಳಲ್ಲಿಯೂ ದ್ವೀಪಗಳಲ್ಲಿಯೂ ಆದ್ರಿಯಾಟಿಕ್ ಕರಾವಳಿಯ ಆಜುಬಾಜಿನಲ್ಲಿಯೂ ಇಟಲಿಗೆ ಆಸ್ಟ್ರಿಯದ ಮೇಲೆ ಯುದ್ಧಪ್ರಾರಂಭವಾಗಿದೆ.

ಪೋಪಸ್ವಾಮಿಯವರು ರಿಲೀಫ್ ಫಂಡನ್ನು ತೆರೆದಿರುತ್ತಾರೆ.

ಅಲ್ಬಾನಿಯಾ ಕರಾವಳಿಯಲ್ಲಿದ್ದ ಆಸ್ಟ್ರಿಯಾನರ ಯುದ್ಧ ಹಡಗಗಳು ಕೆಟ್ಟಾರೋಗೆ ಹಿಂದೆ ಬಂದಿರುವವು.

ಸರಹದ್ದಿನಲ್ಲಿದ್ದ ಆಸ್ಟ್ರಿಯಾನರ ಮಿಲಿಟರಿ ಅಧಿಕಾರಿಗಳು ಇಟಲಿಯಾನರ ಟಪ್ಪಾಲನ್ನು ಹಿಂದೆ ಕಳುಹಿಸಿ, ರೈಲ್‌ಗಳನ್ನೂ ಟೆಲಗ್ರಾಫ್ ತಂತಿಗಳನ್ನೂ ನಾಶಪಡಿಸಿರುವರು.

ಜರ್ಮನರು ಇಟಲಿ ರಾಯಭಾರಿಯನ್ನು ಬೆರ್ಲಿನ್ ನಗರದಲ್ಲಿ ಅವಮಾನ ಪಡಿಸಿರುತ್ತಾರೆ. ಬ್ರಹಸ್ಪತಿವಾರ ಸಾಯಂಕಾಲ ಅವರು ತನ್ನ ಅರಮನೆಯಿಂದ ಹೊರಗೆ ಹೋಗುವಾಗ ಜರ್ಮನರು ಅವರ ಮೇಲೆ ಬಿದ್ದು ಅವರ ಟೊಪ್ಪಿಯನ್ನು ಕೆಳಕ್ಕೆ ಉದುರಿಸಿದರು. ಈ ಗಾತುಕರನ್ನು ಕೈದುಮಾಡಿ ಜರ್ಮನ್ ವಿದೇಶಿ ಸೆಕ್ರೆಟರಿಯು ಇಟಲಿ ರಾಯಭಾರಿಯ ಕೂಡೆ ಕ್ಷಮಾಪಣೆ ಕೇಳಿರುತ್ತಾರೆ.

ಇಟಲಿ ಪ್ರದೇಶದೊಳಗೆ ಪ್ರವೇಶಿಸಿದ ಆಸ್ಟ್ರಿಯ ಕಾವಲು ಸೈನಿಕರಿಗೂ ಇಟಲಿಯ ಸೈನಿಕರಿಗೂ ಕದನವೆಸಗಿ ಇಟಲಿಯಾನರು ಆಸ್ಟ್ರಿಯಾನರನ್ನು ಹಿಂದಕ್ಕಟ್ಟಿರುತ್ತಾರೆ.

ತಾ. ೨೩ನೇ ಮಧ್ಯಾಹ್ನ ೧ ಗಂಟೆ ೨೦ ನಿಮಿಷಕ್ಕೆ ಇಟಲಿಯು ಆಸ್ಟ್ರಿಯದ ಮೇಲೆ ಯುದ್ಧ ಸಾರಿರುತ್ತದೆ.

ಫ್ರಾನ್ಸಿನ ನೊಟ್ರೆ ಡೇಮ್ ಡೆ ಲೊರೆಟ್ಟೆಯಲ್ಲಿ ಮಿತ್ರರಿಗೆ ಜಯವಾಗಿರುವದು. ಮಿತ್ರರು ೨೫೦ ಸೇನಿಕರನ್ನೂ ಒಂದು ಫಿರಂಗಿಯನ್ನೂ ಸೆರೆಹಿಡಿದಿರುತ್ತಾರೆ. ಲೊರೆಟ್ಟೆಯಲ್ಲಿ ಜರ್ಮನರ ಕಂದಕಗಳನ್ನು ಮಿತ್ರರು ಹಿಡಿದಿರುತ್ತಾರೆ. ಕಂದಕಗಳಲ್ಲಿದ್ದ ಅನೇಕ ಜರ್ಮನರು ಹತರಾದರು. ಕೆಲವರು ಶರಣಾಗತರಾಗಿರುವರು. ಶತ್ರುಗಳು ಕೆಲವು ಸಾರಿ ಅವನ್ನು ಹಿಂದಕ್ಕೆ ಪಡೆಯುವ ಉದ್ದೇಶದಿಂದ ಹಲ್ಲೆಮಾಡಿ ಹಿಮ್ಮೆಟ್ಟಿದರು. ಲಾಬಾಸ್ಸೆಯ ಉತ್ತರದಲ್ಲಿ ಬ್ರಿಟಿಷ ಸೇನಿಕರು ಪ್ರಚಂಡವಾದ ಹಲ್ಲೆಮಾಡಿ ಜರ್ಮನರಲ್ಲಿ ಹೆಚ್ಚಿನ ನಷ್ಟಪಡಿಸಿರುತ್ತಾರೆ. ಜರ್ಮನರ ಬಲವಾದ ಗುಂಡಿನೇಟುಗಳನ್ನು ಲಕ್ಷ್ಯಮಾಡದೆ ಬ್ರಿಟಿಷರು ಎಸ್ಟ್ರೆನ್ ಪೂರ್ವ ದಿಕ್ಕಿನ ಅನೇಕ ಮನೆಗಳನ್ನು ಹಿಡಿದು ಶತ್ರು ಸೇನಿಕರನ್ನು ಸೆರೆಹಿಡಿದಿರು[illegible]

ಸಮುದ್ರ ಮತ್ತು ಅರ್‍ರ್ರಾಸಿನ ಮಧ್ಯ ಶತ್ರುಗಳು ಹಲವು ಸಾರಿ ಹಲ್ಲೆಮಾಡಿ ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುತ್ತಾರೆ. ಶತ್ರುಗಳಿಗೆ ಕ್ಷಣ ಮಾತ್ರಕ್ಕೆ ಕಾಲಿಡುವಷ್ಟು ಜಯವಾದರೂ ನಂತರ ಮಿತ್ರ ಸೇನಿಕರು ಅವರನ್ನು ಹಿಂದಕ್ಕೆ ಓಡಿಸಿದರು. ಅರ್ಗೋನ್ನೆಯಲ್ಲಿ ಜರ್ಮನರು ಹಲವು ಸಿಡಿಮದ್ದುಗಳನ್ನು ಹಾರಿಸಿ, ಕ್ರೇಟರ್ಸ್ ಎಂಬ ಪಟ್ಟಣವನ್ನು ಹಿಡಿಯಲು ಪ್ರಚಂಡವಾದ ಸೇನೆಯನ್ನು ಕಳುಹಿಸಿದರು. ಆದರೆ ಮಿತ್ರರ ಕಾಲಾಳು ಸೇನೆಯು ಶತ್ರು ಸೇನಿಕರ ಮೇಲೆ ಬೊಂಬಿನ ಮಳೆ ಗರೆದು ವಿಶೇಷ ನಷ್ಟಪಡಿಸಿ ಹಿಂದಕ್ಕಟ್ಟಿದರು. ಶತ್ರುಗಳು ಅಲ್ಲಿ ಪೂರ್ಣವಾಗಿ ಸೋತು ಹೋದರು.

ಮೈಪ್ರೆಸಿನ ಸಮೀಪ ಇರುವ ನದಿಗೆ ಜರ್ಮನರು ಎರ್‍ಸಾನಿಕ್ ಎಂಬ ಮದ್ದನ್ನು ಹಾಕಿರುವದರಿಂದ ಅದರ ನೀರು ವಿಷಕರವಾಗಿ ಪರಿಣಮಿಸಿರುವದೆಂದು ಬ್ರಿಟಿಷರಿಗೆ ವಾರ್ತೆ ಸಿಕ್ಕಿದ್ದರಿಂದ ಅವರು ಆ ನೀರನ್ನು ಪರೀಕ್ಷಿಸಿದಲ್ಲಿ ಈ ವಾರ್ತೆಯು ನಿಜವೆಂದು ತಿಳಿದು ಬಂದದೆ.

ಜರ್ಮನರು ಅಲ್ಸೇಸಿನಲ್ಲಿ ವಿಷಕರವಾದ ಗ್ಯಾಸಿನ ಕೊಳವಿಗಳನ್ನು ಮೂವತ್ತು ಮೈಲುಗಳ ವರೆಗೆ ಅಣಿಗೊಳಿಸಿ, ಅಲ್ಸೇಸಿನಲ್ಲಿ ಫ್ರೆಂಚರ ಮುಂದರಿಕೆಯನ್ನು ತಡೆ ಕಟ್ಟುವ ಯತ್ನ ನಡಿಸಿರುವರೆಂತಲೂ ಇದೇ ತರದ ಯತ್ನವು ಇಟಲಿ ಆಸ್ಟ್ರಿಯನ್ ಸರಹದ್ದಿನಲ್ಲಿಯೂ ನಡೆದಿರುವದೆಂತಲೂ ವಾರ್ತೆ ಇದೆ.

ಲಂಡನ್‌ನಿಂದ ಸೇನಿಕರನ್ನು ಕೊಂಡುಹೋಗುತ್ತಿದ್ದ ಅಗ್ಗಾಡಿಯು ಕಾರ್‌ಸ್ಟೆಲ್ ಎಂಬಲ್ಲಿ ಒಂದು ಲೋಕಲ್ ಟ್ರೇನಿಗೆ ತಾಗಿ ಕೆಲವು ಸೇನಿಕರು ಗಾಯ ಒಡೆದರು. ಕೆಲವರು ಸತ್ತರು ಎಂಬ ವಾರ್ತೆ ಬಂದಿರುವದು. ಒಟ್ಟಿಗೆ ಸತ್ತವರ ೭೯ ಶವಗಳು ದೊರೆಕಿರುವವು. ೩೦೦ ಮಂದಿ ಗಾಯ ಒಡೆದಿರುವರು. ಒಟ್ಟಿಗೆ ೧೬೪ ಸೇನಿಕರು ಸತ್ತಿರಬೇಕೆಂತ ತಿಳಿದು ಬಂದದೆ. ಸತ್ತವರ ಪೈಕಿ ೪ ಆಫೀಸರರು ಸೇರಿರುತ್ತಾರೆ.

ಜರ್ಮನರು ಎಂಟವರ್ಪಿನಿಂದ ಡಚ್ಚ ಪ್ರದೇಶಕ್ಕೆ ಗುಂಡುಗಳನ್ನು ಬಿಸಾಡಿರುವರೆಂದೂ ಇದಕ್ಕಾಗಿ ಜರ್ಮನರು ಡಚ್ಚ ಸರಕಾರದವರ ಕ್ಷಮಾಪಣೆ ಕೇಳಿರುವರೆಂದೂ ವಾರ್ತೆ ಇದೆ.

ವಿಸ್ತುಲದ ಎಡಪಾರ್ಶ್ವದಲ್ಲಿ ಪಿಲಿಟ್ಸದ ದಕ್ಷಿಣದಲ್ಲಿ ಮತ್ತು ಗೆಲೀಸಿಯದ ರಣರಂಗದಲ್ಲೆಲ್ಲಾ ತಾ. ೧೮ರಲ್ಲು ಕಠಿಣವಾದ ಕದನಗಳು ನಡೆದಿರುವವು. ಜರ್ಮನರು ಅಲ್ಲಿಗೆ ಹೊಸ ಸೇನೆಗಳನ್ನು ತಂದಿರುವರು ಎಂತ ರುಶ್ಯಾ ಸರಕಾರದವರು ಪ್ರಕಟಿಸಿರುತ್ತಾರೆ.

ಸಾನ್ ಮತ್ತು ವಿಸ್ತುಲ ಪ್ರಾಂತ್ಯದಲ್ಲಿ ರುಶ್ಯನರು ಶತ್ರುಗಳನ್ನು ಹಿಂದಕ್ಕೆ ಒತ್ತಿ ೪೦೦೦ ಮಂದಿಯನ್ನು ಸೆರೆಹಿಡಿದಿರುವರು. ಸಾನ್ ನದಿಯನ್ನು ದಾಟಿದ ಶತ್ರುಗಳ ದೊಡ್ಡ ಸೇನೆಯು ಜಾರ್‌ಸ್ಲೊ, ಸಡಾವ, ರೆಣೀವ ಎಂಬ ಸ್ಥಳಗಳ ಕಡೆಗೆ ಚದರಿರುವದು. ಶತ್ರುಗಳ ವಾಯುನಾವೆಗಳು ಪ್ರೈಜ್‌ಮೈಸ್ಲಿಗೆ ಗುಂಡು ಹಾರಿಸಿರುತ್ತವೆ. ಶತ್ರುಗಳು ಕಠಿಣ ಕಾಳಗ ಮಾಡಿ ಪ್ರೈಜ್‌ಮೈಸ್ಲಿನ ದಕ್ಷಿಣದ ಕೆಲವು ಕೋಟೆಗಳನ್ನು ಹಿಡಿದಿರುತ್ತಾರೆ.

ವಿಸ್ತುಲದ ದಕ್ಷಿಣದಲ್ಲಿರುವ ರುಶ್ಯನರು ಶತ್ರು ಸೇನೆಗೆ ಹತ್ತಿರ ಸರಿದು ರಾಡಮ್ ಕಲಸ ರೈಲ್ವೆಯತ್ತಕಡೆಗೆ ಶತ್ರುಗಳನ್ನು ಅಟ್ಟಲು ಪ್ರಯತ್ನಿಸಿರುತ್ತಾರೆ. ಗೆಲೀಸಿಯದ ಸರಹದ್ದಿನಲ್ಲಿ ತಾ. ೧೯ರಲ್ಲು ಜೀವದಮರವೆ ಇಲ್ಲದ ರೀತಿಯಲ್ಲಿ ಕದನ ನಡೆದಿರುವದು. ಸಾನ್ ನದಿಯ ಎಡದಲ್ಲಿ ರುಶ್ಯನರು ಒಂದು ಪ್ರಾಮುಖ್ಯವಾದ ಜಯವನ್ನು ಪಡೆದಿರುತ್ತಾರೆ. ಸ್ವಾಯಿ ಪ್ರಾಂತ್ಯದಲ್ಲಿಯೂ ಕಠಿಣ ಕಾಳಗ ನಡೆಯುತ್ತಿದೆ. ಇಲ್ಲಿ ರುಶ್ಯನರು ಕಳಕೊಂಡ ಕೆಲವು ಕಂದಕಗಳನ್ನು ಪುನಃ ಸ್ವಾಧೀನ ಮಾಡಿಕೊಂಡಿರುತ್ತಾರೆ.

ಕೌಕಾಸಸಿನಲ್ಲಿ ರುಶ್ಯನರ ಸೇನೆಯು ಸಾರೋಯಿ, ವಾನ್ ಮತ್ತು ಬಸ್ಕಲ್ಲಾ ಎಂಬ ಪಟ್ಟಣಗಳನ್ನು ಸ್ವಾಧೀನ ಮಾಡಿಕೊಂಡಿರುವದು. ತುರ್ಕರು ಬೆತ್ಲಿಸ್ ಮತ್ತು ದಕ್ಷಿಣ ಕಡೆಗೆ ಓಡಿರುತ್ತಾರೆ.

ಬ್ರಿಟಿಷರು ಪರ್ಶಿಯನ್ ಅರಬಿಸ್ಥಾನದಲ್ಲಿದ್ದ ಎಲ್ಲಾ ತುರ್ಕಿ ಸೇನಿಕರನ್ನು ಓಡಿಸಿರುತ್ತಾರೆ.

"ಅರಂಡ" ಎಂಬ ಹಡಗವು ಮಾರ್ಸೇಲಿಸಿನಿಂದ ಗಾಯ ಒಡೆದ ಸೇನಿಕರನ್ನು ತಾ. ೨೧ರಲ್ಲು ಮುಂಬಾಯಿಗೆ ತಂದಿರುವದು.

ಶತ್ರುಗಳಿಗೆ ಕೆಲವು [illegible] ಯುದ್ಧ[illegible]

[illegible]

ಬಂಗಾಳದ ವಲಂಟೀಯರ "ಬಂಗಾಳಿ" ಎಂಬ ಆಸ್ಪತ್ರಿ ಹಡಗವು ಬಿರುಗಾಳಿಗೆ ಸಿಕ್ಕಿ ಮುಣುಗಿಹೋಯಿತೆಂಬ ವಾರ್ತೆ ಬಂದಿರುವದು. ಈ ಹಡಗವು ತಾ. ೧೪ರಲ್ಲು ಕಲ್ಕತ್ತೆಯಿಂದ ಹೊರಟು, ಮುಂಬಾಯಿಗೆ ಪ್ರಯಾಣಬೆಳಸಿತ್ತು. ಸಮುದ್ರವು ಶಾಂತವಾಗಿತ್ತು. ಆನಂತರ ಸುಂಟರಗಾಳಿಯು ಬೀಸಿ, ಮದ್ರಾಸಿಗೆ ೩೬೦ ಮೈಲು ಪೂರ್ವದಲ್ಲಿ ಈ ಹಡಗವು ಮುಣುಗಿರುವದು. ಅದರಲ್ಲಿದ್ದ ನಾವಿಕರಿಗೆ ಅಪಾಯವಾಗಲಿಲ್ಲ.

ತಾ ೨೫ನೇ ಮೇ.

ಇಟಲಿಯು ಆಸ್ಟ್ರಿಯವನ್ನು ಯುದ್ಧಕ್ಕೆ ಕೆಣಕಿ ಜರ್ಮನಿಯೊಡನೆ ಇದ್ದ ಮಿತ್ರತ್ವವನ್ನು ಕಳೆದುಕೊಂಡಿರುವದು ಎಂತ ಜರ್ಮನ್ ಸರಕಾರದವರು ಪ್ರಕಟಿಸಿರುವರು. ಇಟಲಿಯಲ್ಲಿರುವ ಜರ್ಮನ್ ರಾಯಭಾರಿಗೆ ರೋಮ ನಗರವನ್ನು ಬಿಟ್ಟುಬರಬೇಕಾಗಿ ಜರ್ಮನ ಸರಕಾರದವರು ಅಪ್ಪಣೆ ಕೊಟ್ಟಿರುವರು.

ಇಟಲಿ ಬಂದರುಗಳಲ್ಲಿರುವ ೮೦ ಆಸ್ಟ್ರಿಯ ಮತ್ತು ಜರ್ಮನ್ ಹಡಗಗಳನ್ನು ಇಟಲಿಯು ಹಿಡಿಯುವದು. ಇದರ ಬೆಲೆಯು ೪ ಮಿಲಿಯ ಪವನುಗಳಷ್ಟಾಗಿದೆ ಎಂತ ರೋಮ ನಗರದಿಂದ ವಾರ್ತೆ ಬಂದದೆ.

ಇಟಲಿಯು ಯುದ್ಧವನ್ನು ಸಾರಿದ್ದರಿಂದ ಇಟಲಿಯ ಪ್ರತಿ ಒಂದು ಪ್ರಾಂತ್ಯದ ಜನರು ಬಹಳ ಉತ್ಸಾಹಗೊಂಡಿರುವರು. ಮಂತ್ರಿ ಸಭೆಯ ಮೆಂಬರರೂ ಶ್ರೀಮಂತರೂ ಸೇನೆಗೆ ಸೇರಿಕೊಳ್ಳುತ್ತಿದ್ದಾರೆ. ಹೆಂಗಸರು ಕಾರ್ಖಾನೆ ಮತ್ತು ಟ್ರಾಮ್‌ವೇಗಳಲ್ಲಿರುವ ಗಂಡಸರನ್ನು ಸೇನೆಗೆ ಸೇರಿಕೊಳ್ಳುವದಕ್ಕಾಗಿ ಕಳುಹಿಸಿ ತಾವು ಅವರ ಬದಲಿಗೆ ಕಾರ್ಖಾನೆಗಳಲ್ಲಿಯೂ ಟ್ರಾಮ್ ಬಂಡಿಗಳಲ್ಲಿಯೂ ಕೆಲಸ ಮಾಡುತ್ತಿರುವರು.

ಆಸ್ಟ್ರಿಯದ ಪ್ರಧಾನ ಮಂತ್ರಿಯಾಗಿರುವ ಬ್ಯಾರನ್ ಬರಿಯನರವರು ರಾಜನಾಮೆ ಕೊಟ್ಟಿರುವರೆಂದೂ ಇವರ ಬದಲಿಗೆ ಕೌಂಟ್ ಟೀಜರವರು ಪ್ರಧಾನ ಮಂತ್ರಿಯಾಗಿ ನೇಮಿಸಲ್ಪಟ್ಟಿರುವರೆಂದೂ ವಾರ್ತೆ ಇದೆ.

ಆಸ್ಟ್ರಿಯನರ ವಾಯುನಾವೆಗಳು ವೇನಿಸಿನ ಆಯುಧ ಶಾಲೆಯ ಮೇಲೆ ಬೊಂಬುಗಳನ್ನು ಬಿಸಾಡಿದವು. ಆದರೆ ಇಟಲಿಯನರು ಅವನ್ನು ಕೂಡಲೇ ಹಿಂದಕ್ಕಟ್ಟಿದರು. ಅದಲ್ಲದೆ ಆಸ್ಟ್ರಿಯನರ ವಾಯುನಾವೆಗಳು ಪೊರ್ಟೋ ಕೊರ್ಸಿನಿಯ ಮೇಲೆ ಹಲ್ಲೆ ಮಾಡಿದವು. ಇಟಲಿಯನರ ವಾಯುನಾವೆಗಳು ಅವನ್ನು ಓಡಿಸಿದವು.

ಆಸ್ಟ್ರಿಯನರ ಒಂದು ಯುದ್ಧ ಹಡಗವು ಬಾರ್ಲೆಟ್ಟಿ ಎಂಬ ಪಟ್ಟಣದ ಮೇಲೆ ಹಲ್ಲೆ ಮಾಡಿದವು. ಆದರೆ ಇಟಲಿಯನರ ಯುದ್ಧ ನಾವೆಯೂ ಟೊರ್ಪೆಡೋ ದೋಣಿಯೂ ಅದನ್ನು ಓಡಿಸಿದವು. ಜೆಸ್ಸಿಯಲ್ಲಿರುವ ವಾಯುನಾವೆಗಳ ಕೊಠಡಿಗೆ ಶತ್ರುಗಳು ಬೊಂಬು ಬಿಸಾಡಲು ಪ್ರಯತ್ನಿಸಿದರು. ಆದರೆ ಸಫಲ ಹೊಂದಲಿಲ್ಲ. ವೇನಿಸ್ ಆಯುಧ ಶಾಲೆಗೆ ೩ ವಾಯುನಾವೆಗಳು ಹಲ್ಲೆ ಮಾಡಿ ೧೧ ಬೊಂಬುಗಳನ್ನು ಬಿಸಾಡಿದವು. ಆದರೆ ಹೆಚ್ಚಿನ ನಷ್ಟವಾಗಲಿಲ್ಲ.

ಇಟಲಿಯಾನರ ಒಂದು ಡಿಸ್ಟ್ರೊಯರ್ ನಾವೆಯು ಪೊರ್ಟೊ ಬಸ್ಸೊ (ಸರಹದ್ದಿನ ಸಮೀಪವಿರುವ ಒಂದು ಸಣ್ಣ ದ್ವೀಪ) ಎಂಬಲ್ಲಿಗೆ ಪ್ರವೇಶಿಸಿ ಕೆಲವು ಮೋಟರ್ ಲೋಂಚುಗಳನ್ನು ಮುಣುಗಿಸಿ, ೪೭ ಮಂದಿಯನ್ನು ಸೆರೆಹಿಡಿದಿರುವರು.

ಫ್ರಾನ್ಸಿನಲ್ಲಿ ಬ್ರಿಟಿಷ ಸೈನಿಕರು ಲೊರೆಟ್ಟೊ ಚಪೆಲಿನಲ್ಲಿ ಕೆಲವು ನೂರು ಗಜ ಮುಂದರಿದಿರುತ್ತಾರೆ. ನ್ಯೂವಿಲ್ಲೆಯ ಉತ್ತರದಲ್ಲಿ ಶತ್ರುಗಳ ಕೆಲವು ಕಂದಕಗಳು ಬ್ರಿಟಿಷರ ಸ್ವಾಧೀನವಾಗಿದೆ. ಸ್ಟೀನ್‌ಸ್ಟ್ರಾಟೆ ಮತ್ತು ಯ್ಪ್ರೆಸಿನಲ್ಲಿ ಜರ್ಮನರು ವಿಷಕರವಾದ ಗ್ಯಾಸನ್ನು ಪ್ರಯೋಗಿಸಿ ಮಿತ್ರಸೇನೆಯ ಮೇಲೆ ಬಿದ್ದರೂ ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುತ್ತಾರೆ.

ಫ್ರೆಂಚರು ೧೪ ದಿವಸಗಳ ಕಠಿಣ ಯುದ್ಧಮಾಡಿ ಲೊರೆಟ್ಟೊಯನ್ನು ಹಿಡಿದಿರುವರು. ಇದನ್ನು ಪುನಃ ಹಿಂದಕ್ಕೆ ಪಡೆಯಲು ಶತ್ರುಗಳು ಜೀವದಮರವೆ ಇಲ್ಲದೆ ಕಾದಾಡಿದರು. ಈ ಕದನದಲ್ಲಿ ೩೦೦೦ ಜರ್ಮನ ಸೇನಿಕರು ಹತರಾದರು. ಸಾವಿರ ಸೇನಿಕರು ಫ್ರೆಂಚರಿಗೆ ಸೆರೆ ಬಿದ್ದರು; ಫ್ರೆಂಚರಿಗೂ ಅತಿರೇಕ ನಷ್ಟ ಉಂಟಾಗಿರುವದು.

ಫೀಲ್ಡ್ ಮಾರ್ಶಲ್ ಫ್ರೆಂಚರವರು ಈ ರೀತಿ ವಾರ್ತೆ ಕಳುಹಿರುವರು:— ತಮ್ಮ ಫಿರಂಗಿಗಳು ಈ ದಿನ ಜರ್ಮನರ ೩ ಬತ್ತೇರಿ[illegible] ವ್ಯಪ್ರೆಸಿನ ಪೂರ್ವದಲ್ಲಿ ಜರ್ಮನರು ವಿಷಕರವಾದ ಗ್ಯಾಸನ್ನು ಬಿಟ್ಟು ತಮ್ಮ ಕಾಲಾಳು ಸೇನೆಯನ್ನು ಹಿಮ್ಮೆಟ್ಟಿಸುತ್ತಿದ್ದರು. ನಮ್ಮ ಸೇನೆಯು ಬಲತ್ಕಾರದಿಂದ ಕೆಲವು ಕಂದಕಗಳನ್ನು ಬಿಟ್ಟು ಹೋಗಬೇಕಾಯಿತು. ಕದನವು ನಡೆಯುತ್ತಿದೆ. ನಮ್ಮ ಮೂಲಸಾಲಿನ ಒಂದು ಪಾರ್ಶ್ವವನ್ನು ನಾವು ಪುನಃ ಹಿಂದಕ್ಕೆ ಪಡೆದಿರುವವು.

ಇಂಗ್ಲಾಂಡಿನಲ್ಲಿ ರೈಲ್ವೆಬಂಡಿ ಅಪಗಡದಲ್ಲಿ ೧೫೮ ಮಂದಿ ಹತರಾದರು. ೧೫ ಮಂದಿ ಗಾಯಪಡೆದರು ಎಂತ ಪ್ರಕಟವಾಗಿದೆ.

ಶಾವಲಿ ಪ್ರಾಂತ್ಯದಲ್ಲಿ ಜರ್ಮನರು ತಮ್ಮ ನೆಲೆಗಳನ್ನು ಬಲಕಾಯಿಸಿಕೊಂಡಿರುವರು. ರುಶ್ಯನರು ಕಿಲ್ಸ್ ಒಪ್ಟೋವೊ ಪ್ರಾಂತ್ಯದಲ್ಲಿ ಮೇಲ್ವಾಯಿದ ಜರ್ಮನರ ಪ್ರಚಂಡಸೇನೆಯನ್ನೂ ಹಿಂದಟ್ಟಿ ೧೦೦೦ ಮಂದಿಯನ್ನು ಸೆರೆಹಿಡಿದಿರುವರು.

ಗೆಲೀಶಿಯದಲ್ಲಿ ಶತ್ರುಗಳು ತಮ್ಮನ್ನು ಬಲಕಾಯಿಸಿಕೊಳ್ಳುವ ಕೆಲಸದಲ್ಲಿ ನಿರತರಾಗಿರುವರು. ಪ್ರೈಜ್‌ಮೈಸ್ಲ್ ಮತ್ತು ನೀಸ್ಟರ್ ರಣರಂಗವನ್ನು ಪ್ರವೇಶಿಸಲು ಶತ್ರುಗಳು ಪ್ರಯತ್ನಿಸಿ ಸಫಲ ಹೊಂದಲಿಲ್ಲ. ನೀಸ್ಟರಿನಲ್ಲಿ ರುಶ್ಯನರು ಯುದ್ಧಕೊಟ್ಟು ೯೦೦ ಸೇನಿಕರನ್ನು ಸೆರೆಹಿಡಿದಿರುತ್ತಾರೆ.

ಗ್ರೀಸ್ ದೇಶದ ಅರಸರು ಅಸ್ವಸ್ಥದಲ್ಲಿರುವರು. ಬೆರ್ಲಿನಿನಿಂದ ಒಬ್ಬ ಪ್ರಾಮುಖ್ಯ ವೈದ್ಯನು ಅರಸರ ಚಿಕಿತ್ಸೆ ಬಗ್ಗೆ ಗ್ರೀಸಿಗೆ ಹೋಗಿರುವನು.

ವಿದೇಶ ವೃತ್ತಾಂತ.

ಆಸ್ಟ್ರಿಯಾ ಸೈನ್ಯದ ಹುದ್ದೆದಾರರುಗಳ ಪೈಕಿ ಮೇಲ್ದರ್ಜೆಯಲ್ಲಿದ್ದ ೬೫ ಮಂದಿ ಹುದ್ದೇದಾರರನ್ನು ಅವರ ಅಲಕ್ಷ ಕಾರ್ಯಕ್ಕಾಗಿ ಪೆನ್‌ಷನ್ ಮೇಲೆ ಕೆಲಸದಿಂದ ತೆಗೆದು ಹಾಕಿದರೆಂದು ಪ್ರಕಟವಾಗಿದೆ.

ಟರ್ಕಿಯ ಮಾಜಿ ಸುಲ್ತಾನರನ್ನು ಇದುವರೆಗೆ ಕನ್‌ಸ್ಟಾಂತಿನೋಪಲಿನಲ್ಲಿ ಸೆರೆ ಇಟ್ಟಿದ್ದರು. ಈಗ ಅವರನ್ನು ಎನವರ್ ಪಾಶರವರು ಸ್ಮರ್ನಾ ನಗರದಲ್ಲಿ ಮಿ। ರೀಸ್ ಎಂಬ ಬ್ರಿಟಿಷ ಪ್ರಜೆಯ ಮನೆಯಲ್ಲಿ ಕೆಲವು ದಿನ ಇಟ್ಟುಕೊಂಡಿದ್ದು ಈಗ ಎಲ್ಲಿಗೋ ಕೊಂಡುಹೋಗಿರುವರೆಂತ ವಾರ್ತೆ ಇದೆ.

ಪಶ್ಚಿಮ ರಣರಂಗದಲ್ಲಿ ಯುದ್ಧದ ಸಾಲು ೫೯೩॥ ಮೈಲು ಉದ್ದವಿದೆ. ಇದರಲ್ಲಿ ಬ್ರಿಟಿಷ ಸೈನ್ಯಗಳು ೩೧॥ ಮೈಲು ದೂರವೂ; ಬೆಲ್ಜಿಯನ್ ಸೈನ್ಯಗಳು ೧೭॥ ಮೈಲು ಉದ್ದಕ್ಕೂ; ಫ್ರೆಂಚರ ಸೈನ್ಯಗಳು ೫೪೩॥ ಮೈಲು ಉದ್ದಕ್ಕೂ ನಿಂತು ಶತ್ರು ಸೇನೆಯೊಡನೆ ಯುದ್ಧ ಮಾಡುತ್ತಿದೆ. ಪೂರ್ವ ರಣರಂಗದಲ್ಲಿ ರುಶ್ಯದವರ ಸೈನ್ಯಗಳು ೮೫೭ ಮೈಲು ಉದ್ದಕ್ಕೂ ಸರ್ವಿಯಾ ಮತ್ತು ಮಂಟಿನಿಗ್ರೋದವರ ಸೈನ್ಯಗಳು ೨೧೮॥ ಮೈಲು ಉದ್ದಕ್ಕೂ ನಿಂತು ಯುದ್ಧ ಮಾಡುವವು. ಎರಡು ಕಡೆಗಳ ಯುದ್ಧ ಸಾಲುಗಳನ್ನೂ ಕೂಡಿಸಿದರೆ ೧,೬೬೭॥ ಮೈಲು ಉದ್ದಕ್ಕೆ ಸೈನ್ಯಗಳು ನಿಂತು ಕಾರ್ಯಗಳನ್ನು ನಡಿಸುತ್ತಿರುವವೆಂದು ಗೊತ್ತಾಗುವದು ಎಂಬದಾಗಿ ಮೇಟಿನ್ ಎಂಬ ಫ್ರೆಂಚರ ಪತ್ರಿಕೆಯು ತಿಳಿಸುತ್ತದೆ.

ಸಿವೋನ ಎಂಬ ನಗರದಲ್ಲಿ ವರ್ತಮಾನ ಪತ್ರಿಕೆಗಳನ್ನು ಕೂಗಿ ಮಾರಿ ಜೀವಿಸುವ ಅನಸ್ತಾಸಿಯೋ ಚೆಟ್ಟಿ ಎಂಬವನು ತನ್ನ ೩೧ನೇ ಮಗನ ನಾಮಕರಣವನ್ನು ಮಾಡಿದನು. ಆ ಉತ್ಸವ ಕಾಲ್ಲದಲ್ಲಿ ಸೇರಿದ್ದ ಈ ೬೦ ವರ್ಷ ವಯಸ್ಸಿನ ಚೆಟ್ಟಿಯು ಕೂಡಿದ್ದವರಿಗೆ ಹೇಳಿದ್ದೇನಂದರೆ— ನಾನು ೨೧ನೇ ವಯಸ್ಸಿನಲ್ಲಿ ೧೫ ವರ್ಷದ ಹುಡುಗಿಯನ್ನು ಮದುವೆಯಾದೆನು. ಅವಳು ವರ್ಷಕ್ಕೊಂದರಂತೆ ೧೯ ಗಂಡು ಮಕ್ಕಳನ್ನು ಹೆತ್ತು ಕಾಲವಾದಳು. [illegible] ನನಗೆ ೪೦ ವರುಷ ತುಂಬುವದಕ್ಕೆ ಮುಂಚೆ ಎರಡನೇ ಮದುವೆ ಮಾಡಿಕೊಂಡೆನು. ಅವಳು ೧೨ ಮಕ್ಕಳನ್ನು ಹೆತ್ತಳು. ಈಗ ೧೯ ಗಂಡು ಮಕ್ಕಳು ಆರೋಗ್ಯವಾಗಿಯೂ ದೃಢಕಾಯರಾಗಿಯೂ ಇದ್ದಾರೆ. ನನ್ನ ೨೦ನೇ ಮಗನು ಲಿಬಿಯಾ ಕಾಡಿನಲ್ಲಿ ಯುದ್ಧದಲ್ಲಿ ಮಡಿದನು. ನನ್ನ ೮ ಗಂಡು ಮಕ್ಕಳು ಮದಿವೆ ಮಾಡಿಕೊಂಡು ಸುಖವಾಗಿದ್ದಾರೆ.

ಕೆನಡಾ ಎಂಬ ಬ್ರಿಟಿಷ ಸ್ವಾಧೀನ್ಯಕ್ಕೆ ಸೇರಿದ ವಾನ್‌ಕವರಿನಲ್ಲಿ ಹಿಂದೂಸ್ಥಾನದ ಜನರು ವಾಸಮಾಡಿಕೊಂಡಿರುವ ಭಾಗದಲ್ಲಿ ಡೈನಾಮೆಟ್ ಮದ್ದು ಹಾರಿ ಒಬ್ಬ ಹಿಂದುವು ಮೃತನಾದನು. ಇಬ್ಬರಿಗೆ ಗಾಯಗಳಾದವು. ೩೭ ಮನೆಗಳು ಅಲುಗಿ ಜಕಂ ಆದವು. ಆ ಬೀದಿಯಲ್ಲಿ ಉದ್ದಕ್ಕೂ ಅಡ್ಡಕ್ಕೂ ಇರುವ ಮನೆಗಳ ಕಿಡಿಕಿಗಳ ಒಂದು ಕನ್ನಡಿಯಾದರೂ ಉಳಿಯಲಿಲ್ಲ. ಅಲ್ಲಿರುವ ಹಿಂದೂಗಳಲ್ಲಿ ಎರಡು ಪಂಗಡಗಳಾಗಿರುವ ಪರಸ್ಪರ ದ್ವೇಷವೇ ಈ ಅನಾಹುತಕ್ಕೆ ಕಾರಣವೆಂದು ಪ್ರಕಟವಾಗಿದೆ.

ಫ್ರಾನ್ಸ್ ಸರಕಾರದವರು ತಮ್ಮ ದೇಶದಲ್ಲಿ ಯಾವ ವಿಧದ ಮದ್ಯಪಾನಗಳನ್ನು ಮಾಡಲೂ, ಮಾರಲೂ ಕೂಡದೆಂಬ ಕಾನೂನನ್ನು ಜಾರಿಗೆ ತರಬೇಕೆಂದಿರುವರೆಂತ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಜರ್ಮನರು ಪ್ರಯೋಗಿಸುತ್ತಿರುವ ವಿಷಕರವಾದಂಥಾ ಗಾಳಿಯಂಥಾದ್ದನ್ನು ಬ್ರಿಟಿಷರು ಜರ್ಮನರಿಗೆ ವಿರೋಧವಾಗಿ ಪ್ರಯೋಗಿಸಲು ಎತ್ತುಗಡೆ ಮಾಡುತ್ತಿರುವರೆಂಬ ವಾರ್ತೆ ಇದೆ.

ಜರ್ಮನರು ಈ ವಿಷಕರವಾದ ಗ್ಯಾಸ್ ಪ್ರಯೋಗಿಸುವದನ್ನು ನಿಲ್ಲಿಸದಿದ್ದರೆ ಫ್ರೆಂಚರೂ ಒಂದು ಹೊಸ ವಿಧಾನದ ರಸಾಯನವನ್ನು ಜರ್ಮನರಿಗೆ ವಿರೋಧವಾಗಿ ಪ್ರಯೋಗಿಸಬೇಕೆಂದಿರುವರು.

ಕಂದಕಗಳಿಂದ ಮೊದಲನೇ ಸಾಲಿಗೆ ಕೂಡಿರುವ ಲೋಹದ ನಳಿಗೆಗಳಿಂದ ಜರ್ಮನರು ವಿಷಕರವಾದ ಗ್ಯಾಸನ್ನು ಬಿಡುವರು. ಈ ಗ್ಯಾಸನ್ನು ಬಿಡಲು ಅಪ್ಪಣೆ ದೊರಕಿದಾಕ್ಷಣ ಈ ನಳಿಗೆಗಳಿಗೆ ಬೆಂಕಿ ತಾಗಿಸುವರು. ಕೆಂಪು ಜ್ವಾಲೆಯು ಹೊರಟು ೧೨ ಯಾರ್ಡ್ ದೂರಕ್ಕೆ ಹಾರುವದು. ಇದರ ಸಂಗಡಲೇ ದಪ್ಪನಾದ ಹಳದಿ ನೀಲ ಬಣ್ಣದ ಹೊಗೆಯು ಹೊರಡುವದು. ಇದರ ವಾಸನೆಯು ಕ್ಲೋರೈನಿನ ಹಾಗಿದೆ.

ಉತ್ತರ ಹಿಂದೂಸ್ಥಾನ.

ಹಿಂದೂಸ್ಥಾನದಿಂದ ಸ್ಕ್ಯಾಂಡಿನೇವಿಯಕ್ಕೆ [illegible] ಕೂಡದೆಂತ ನಿಯಮವಾಗಿರುವದು.

ನೋರ್ವೆ, ಡೆನ್‌ಮಾರ್ಕ್, ಸ್ವೀಡನ್ ದೇಶಗಳಿಗೆ ಹಿಂದೂಸ್ಥಾನದಿಂದ ಅಕ್ಕಿ ಕಳುಹಿಸ[illegible] ನಲ್ಲಿ ಪ್ರಕಟವಾಗಿದೆ.

[illegible]

ವಾಗಿದೆ. ಅಂದರೆ ೧,೬೮೯,೫೬,೦೦೦ ರೂಪಾಯಿಗಳಷ್ಟು ಕಡಿಮೆ ವ್ಯಾಪಾರವಾಗಿರುವದು.

~~~~~

ಕಳೆದ ವಾರ ಬಾರಿಸಾಲ್ ಡಿಸ್ಟ್ರಿಕ್ಟಿನಲ್ಲಿ ಪುನಃ ಎರಡು ದಕಾಯಿತಿಗಳು ನಡೆದಿರುವವು. ತಾ. ೧೪ರಲ್ಲು ಬಾಬು ಮೋಹಿನಿ ಕುಮಾರರೋಯ ಎಂಬವರ ಮನೆಗೆ ಸುಮಾರು ೩೦ ದಕಾಯಿತರು ನುಗ್ಗಿ, ಮನೆಯ ಬಾಗಿಲು ಒಡೆದು ೧೫೦೦ ರೂಪಾಯಿಯ ಚಿನ್ನಾಭರಣಗಳನ್ನು ಕೊಂಡುಹೋಗಿರುವರು. ಮತ್ತೊಂದು ದಕಾಯಿತಿಯು ತಾ. ೧೬ರಲ್ಲು ಅಖಿಲ ಚಂದದಾಸರವರ ಮನೆಯಲ್ಲಿ ನಡೆಯಿತು. ದಕಾಯಿತರನ್ನು ತಡೆದ ಅಖಿಲ ಚಂದದಾಸರಿಗೆ ದಕಾಯಿತರು ಹೊಟ್ಟೆಯನ್ನು ತಿವಿದಿರುತ್ತಾರೆ. ದಕಾಯಿತರು ಮನೆಯ ಹೆಂಗಸರನ್ನು ಬಹಳ ಹಿಂಸೆಪಡಿಸಿ ಖಜಾನೆ ಪೆಟ್ಟಿಗೆಯನ್ನು ಒಡೆದು ಸುಮಾರು ೮೦೦ ರೂಪಾಯಿ ಕ್ರಯ ಬಾಳುವ ಚಿನ್ನಾಭರಣಗಳನ್ನು ಕೊಂಡುಹೋಗಿರುವರು.

~~~~~

ಕಲ್ಕತ್ತೆಯ ಬಜ್‌ಬಜ್‌ನಲ್ಲಿರುವ ಒಂದು ಕೊಳದಲ್ಲಿ ಅಮೇರಿಕದ ಒಂದು ರಿವೋಲ್ವರ್ ದೊರಕಿರುವದು. ಕೊಮಗಾಟಮಾರು ಹಡಗದಲ್ಲಿ ದಂಗೆ ಎದ್ದವರು ಕಲ್ಕತ್ತೆಗೆ ಹೋಗುವಾಗ ಈ ರಿವೋಲ್ವರನ್ನು ಬಿಸಾಡಿರಬೇಕೆಂಬದಾಗಿ ತಿಳಿದುಬರುತ್ತದೆ.

~~~~~

ವೈಸರಾಯಪ್ರಭುಗಳ ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಿದ್ದ ಸರ್. ಹಾರ್ಕೋರ್ಟ್ ಬಟ್ಲರವರ ಬದಲಿಗೆ ಸರ್ ಶಂಕರನ್ ನಾಯರರು ನೇಮಿಸಲ್ಪಟ್ಟಿರುತ್ತಾರೆ.

~~~~~

ಹಿಂದೂಸ್ಥಾನದ ರೈಲ್ವೇ ಹುಟ್ಟುವಳಿಯು ಕಳೆದ ಎಪ್ರೀಲ್ ೧೯ರಿಂದ ೧೬|| ಕೋಟಿ ರೂಪಾಯಿಗೆ ಕಡಿಮೆಯಾಗಿರುತ್ತದೆ.

~~~~~

ಮುಂಬಾಯಿ ಪಟ್ಟಣದ ಮಗ್‌ಸನ್ ಎಂಬ ಪೋಲಿಸ್ ಕೋರ್ಟಿನ ಪೀಟರ್ ಜಾರ್ಜ್ ಎಂಬವನು ೧೮೦೦ ರೂಪಾಯಿಯನ್ನು ತಿಂದುಹಾಕಿರುತ್ತಾನೆಂದು ಅವನ ಮೇಲೆ ಕ್ರಿಮಿನಲ್ ಮೊಕದ್ದಮೆ ಬಂದು ವಿಚಾರಣೆಯಲ್ಲಿದೆ.

———o———

ಬರ್ಮಕ್ಕೆ ಸೇರಿದ ಮಯಿಂಗನ್ ಎಂಬ ಪಟ್ಟಣದ ಕೋರ್ಟಿಗೂ ಅದರ ಪಕ್ಕದಲ್ಲಿರುವ ಕಟ್ಟಡಗಳಿಗೂ ಬೆಂಕಿಬಿದ್ದು ಸುಟ್ಟುಹೋದವು. ಚಾಲತಿಯ ಮತ್ತು ಗುಟ್ಟಿನ ರಿಕಾರ್ಡುಗಳೂ ಕಾಗದ ಪತ್ರಗಳೂ ನಾಶವಾಗಿರುತ್ತವೆ.

~~~~~

ಮುಲ್ತಾನ್ ಡಿಸ್ಟ್ರಿಕ್ಟಿಗೆ ಸೇರಿದ ಕಬೀರ್‌ವಾಲ ಇಲಾಖೆಯ ಹಿಂದೂ ಪ್ರಜೆಗಳು ಅಲ್ಲಿನ ಮುಹಮ್ಮದೀಯರಿಂದ ಅನುಭವಿಸುತ್ತಿರುವ ಕಷ್ಟ ನಷ್ಟ ಉಪದ್ರಗಳನ್ನೂ ವಿವರಿಸಿ, ಅವನ್ನೆಲ್ಲಾ ನಿಲ್ಲಿಸಿಕೊಡಬೇಕೆಂದು ಅರ್ಜಿ ಬರೆದು ಲೆಫ್ಟನೆಂಟ ಗವರ್ನರರಿಗೆ ಒಪ್ಪಿಸಿರುತ್ತಾರೆ.

~~~~~

ಕಲ್ಕತ್ತಾ ಪಟ್ಟಣದಲ್ಲಿ ಒಬ್ಬ ಸಾರ್ಜಂಟನು ಯಾತಕ್ಕಾಗಿಯೋ ತನ್ನ ಬಂದೂಕನ್ನು ಹಾರಿಸಿದನು. ಅದರಿಂದ ಹೊರಟ ಗುಂಡು ದೂರದಲ್ಲಿ ತನ್ನ ಮನೇ ಜಗಲೀ ಮೇಲೆ ನಿಂತಿದ್ದ ಮಾರ್ವಾಡಿ ಹೆಂಗಸಿನ ತಲೆಗೆ ಬಡಿದು ಅವಳನ್ನು ಕೆಡವಿ ಬಿಟ್ಟಿತು. ಈ ವಿಷಯ ತನಿಕೆ ನಡೆಯುತ್ತಿದೆ.

~~~~~

ಮುಂಬಾಯಿ ಪಟ್ಟಣದಲ್ಲಿ ಕ್ಷಯರೋಗ ನಿವಾರಣೆಯ ಕಾರ್ಯಗಳು ಬಹಳ ಏಕಾಗ್ರತೆಯಿಂದ ನಡೆಯುತ್ತಿರುವದಾಗಿಯೂ ಆ ರೋಗವನ್ನು ಕೆಲವು ದಿನಗಳಲ್ಲಿ ಅಡಗಿಸಿಬಿಡುತ್ತಾರೆಂದೂ, ಈ ಕೆಲಸಕ್ಕೆ ಮುಂಬಾಯಿ ಸರಕಾರದವರು ಪ್ರಜೆಗಳು ಕೂಡಿಸುವ ಫಂಡಿಗೆ ಮೂರು ವರುಷಗಳ ತನಕ ೧೫,೦೦೦ ರೂಪಾಯಿಯಂತೆ ದ್ರವ್ಯ ಸಹಾಯ ಮಾಡಲು ಒಪ್ಪಿರುತ್ತಾರೆಂತಲೂ ತಿಳಿದುಬರುತ್ತದೆ.

~~~~~

ಕಳೆದ ತಾ. ೧೮ರ ವರೆಗೆ ಹಿಂದೂಸ್ಥಾನದಲ್ಲಿ ಯುದ್ಧದ ರಿಲೀಫ್ ಫಂಡಿಗೆ ರೂ. [illegible] ವಸೂಲು ಆಗಿರುವದು.

~~~~~

[illegible] ಎಂಬಲ್ಲಿ ಸಾವಧಾನ [illegible] ಸಣ್ಣ ವಯಸ್ಸಿನ [illegible] ಕೊಂಡು ಹೋಗಿ ಒಂದು ನೆಲಮಾಳಿಗೆ ಯೊಳಗೆ ಇಟ್ಟುಕೊಂಡನು. ಅದರೊಳಗೆ ಅವನು ಅವಳಿಗೆ ಬೇಕಾಗುವ ಆಹಾರ ವಸ್ತುಗಳನ್ನು ಒದಗಿಸಿಕೊಟ್ಟಿದ್ದನು. ಆದರೆ ಅವನ ಶತ್ರುವಿನಿಂದ ಪೋಲಿಸಿಗೆ ವರ್ತಮಾನ ತಿಳಿದು ಅವರು ಹೋಗಿ ಆ ಹುಡುಗಿಯನ್ನು ಬಂಧನದಿಂದ ಬಿಡಿಸಿ ಕರೆದು ತಂದಿದ್ದಾರೆ. ಆ ದುಷ್ಟನ ಮೇಲೆ ಮೊಕದ್ದಮೆ ಬಂದು ವಿಚಾರಣೆ ಆಗುತ್ತಿದೆ.

~~~~~

ದಕ್ಷಿಣ ಹಿಂದೂಸ್ಥಾನ.

ಮದ್ರಾಸ್ ಪಟ್ಟಣದ ಬೀದಿಗೆ ಹೋಗುವ ದಾರಿಯಲ್ಲಿ ಕಳೆದ ವಾರ ಮೂವರು ಗಂಡಸರೂ ಇಬ್ಬರು ಹೆಂಗಸರೂ ಒಂದೇ ಕಡೆ ಸತ್ತು ಬಿದ್ದಿದ್ದರು. ಅವರ ಬೈರಾಗಿಗಳೆಂದು ಗೊತ್ತಾದಾಗ ಪೋಲಿಸಿನವರು ಮದ್ರಾಸಿನಲ್ಲಿರುವ ಬೈರಾಗಿಗಳನ್ನೆಲ್ಲಾ ಕರತಂದು ಹೆಣಗಳನ್ನು ತೋರಿಸಿದಾಗ್ಯೂ ಸತ್ತವರು ಯಾರೆಂಬದು ತಿಳಿಯಲಿಲ್ಲ. ಶವಗಳ ಮೇಲೆ ಅನುಮಾನಾಸ್ಪದವಾದ ಗಾಯ ಮುಂತಾದೇನೂ ಇರಲಿಲ್ಲ.

~~~~~

ಸಿಲೋನ್ ದ್ವೀಪಕ್ಕೆ ಸೇರಿದ ಕೊಲಂಬೋ ಪಟ್ಟಣದಲ್ಲಿ ಲಕ್ಷ್ಮಣ ಶೆಟ್ಟಿ ಎಂಬ ವರ್ತಕನು ಬ್ರಿಟಿಷರಿಗೆ ಶತ್ರುವಾಗಿರುವ ಜರ್ಮನಿ ವರ್ತಕರ ಕಂಪೆನಿಗೆ ೨೪೪೨ ರೂಪಾಯಿ ಪಾವತಿಮಾಡಿ ಅವರಿಂದ ಕೆಲವು ವ್ಯಾಪಾರ ಸರಕುಗಳನ್ನು ತರಿಸಿಕೊಳ್ಳುವದಕ್ಕೆ ಪ್ರಯತ್ನ ಪಟ್ಟನು. ಶತ್ರುವಿನ ಕೂಡೆ ವ್ಯಾಪಾರ ನಡಿಸಕೂಡದೆಂದು ಪ್ರಕಟ ಮಾಡಿದ್ದರೂ ಈ ವರ್ತಕನು ಹುಕುಮನ್ನು ಉಲ್ಲಂಘಿಸಿದ್ದರಿಂದ ಅವನ ಮೇಲೆ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದು ಮಾಡಿದರು. ಮೆಜಿಸ್ಟ್ರೇಟರು ಅವನಿಗೆ ೭೫೦ ರೂಪಾಯಿ ಜುಲುಮಾನೆ ವಿಧಿಸಿದರು.

~~~~~

ಮದರಾಸಿನ ಹತ್ತಿರವಿರುವ ತಿರುವಳ್ಳೂರು ರಘೋತ್ತಮಕ್ಕೆ ಮೊನ್ನೆ ಅಮವಾಸ್ಯೆಯ ದಿನ ಅನೇಕರು ಹೋಗಿದ್ದರು. ಒಬ್ಬ ನಾಯಿಡುವು ತನ್ನ ಹೆಂಡತಿಯನ್ನೂ ಮಗುವನ್ನೂ ಕರೆದುಕೊಂಡು ಹೋಗಿ ದೇವಸ್ಥಾನದ ಬಳಿ ಇದ್ದ ಆನೆಯನ್ನು ನೋಡಿ ಅದರ ಮಾವಟಿಗನು ಇಲ್ಲದ್ದನ್ನು ಕಂಡು ತನ್ನ ಮಗುವಿನ ಸಮೇತ ಆ ಆನೆಯ ಮೇಲೆ ಕುಳಿತು ಅದರ ಮೇಲೆ ಸ್ವಲ್ಪ ದೂರ ಹೋದನು. ಅಷ್ಟರಲ್ಲೇ ಅದು ಅವರಿಬ್ಬರನ್ನೂ ಕೆಡವಿ ನಾಯಿಡುವನ್ನು ತುಳಿದು ಕೊಂದುಹಾಕಿತು ಮಗುವಿಗೆ ಏನೂ ಅಪಾಯವಾಗಿರಲಿಲ್ಲ. ತಾಯಿ ಮಗುವನ್ನೆತ್ತಿಕೊಂಡು, ಗಂಡನನ್ನು ಕಳೆದುಕೊಂಡದಕ್ಕಾಗಿ ಗೋಳಾಡುತ್ತಾ ಹೋದಳು.

~~~~~

ಇದೇ ತಾ ೨೫ರಲ್ಲು ಮದ್ರಾಸ್ ನ್ಯಾಯವಿಧಾಯಕ ಸಭೆಯು ಉದಕಮಂಡಲದಲ್ಲಿ ಕೂಡಿಬಂದಿರುವದು. ನ್ಯಾಯವಿಧಾಯಕ ಸಭೆಗೆ ಹೊಸ ಮೆಂಬರರಾಗಿ ನೇಮಿಸಲ್ಪಟ್ಟ ಮಿ|| ಜಿ. ಸಿ. ಬೆಡ್‌ಫೋರ್ಡರವರು ಸಭೆಯಲ್ಲಿ ಹಾಜರಿದ್ದು ನಿಯಮಿತ ಕ್ರಮಕ್ಕನುಸಾರವಾಗಿ ಮೆಂಬರರಾಗಿ ನೇಮಿಸಲ್ಪಟ್ಟರು ಅನಂತರ ನ್ಯಾಯವಿಧಾಯಕ ಸಭೆಯ ಮೆಂಬರರಿಂದ ಆಯಾ ಪ್ರಶ್ನೆಗಳು ಹಾಕಲ್ಪಟ್ಟು ಅದಕ್ಕೆ ತಕ್ಕ ಉತ್ತರವು ಕೊಡಲ್ಪಟ್ಟಾಯಿತು.

~~~~~

ರಂಗೂನಿನಲ್ಲಿ ಒಂದು ಖೂನಿ ಮೊಕದ್ದಮೆಯು ನಡೆದಿರುವದು. ಬರ್ಮ ಚೀಫ್ ಕೋರ್ಟಿನಲ್ಲಿ ಕ್ಲಾರ್ಕನಾಗಿದ್ದ ೨೬ ವರ್ಷ ವಯಸ್ಸಿನ ಮೊಂಗ ಮೊಂಗು ಎಂಬವನು ಕಳೆದ ಆದಿತ್ಯವಾರ ಮಧ್ಯ ರಾತ್ರಿ ರೋಯಲ್ ಹೊಟೆಲಿನ ಜೆಂಡಾಟ ಆಡುವ ಕೋಣೆಯ ಬಳಿ ಇಟ್ಟಿದ್ದ ಬೆಂಚಿಯ ಮೇಲೆ ಕುಡಿದು ಬಿದ್ದಿದ್ದನು. ಸೇವಕರು ಅವನನ್ನು ಎಬ್ಬಿಸಬೇಕೆಂದಿರುವಾಗ ಇಬ್ಬರು ಮುಹಮ್ಮದೀಯರು ಹತ್ತಿರ ಬಂದು ಮಲಗಿದ್ದವನು ತಮ್ಮ ಸ್ನೇಹಿತನೆಂದೂ ಅವನನ್ನು ಗಾಡಿಯಲ್ಲಿ ಹಾಕಿಕೊಂಡು ಹೋಗುತ್ತೇವೆಂದೂ ಹೇಳಿ ಒಂದು ಗಾಡಿಯನ್ನು ತಂದು ಗಾಡಿಯಲ್ಲಿ ಅವನನ್ನು ಹಾಕಿ ಕೊಂಡು ಹೋದರು. ಈ ಮುಹಮ್ಮದೀಯರು ಗಾಡಿಯನ್ನು ಹತ್ತಿರವಿದ್ದ ಒಂದು ಸರೋವರದ ಬಳಿಗೆ ಕೊಂಡುಹೋಗಿ ಕ್ಲಾರ್ಕನನ್ನು ಕೊಂದು ಸರೋವರಕ್ಕೆ ಬಿಸಾಡಿದರೆಂದು ತಿಳಿದು ಬಂದದೆ. ಕ್ಲಾರ್ಕನ ಶವವು ಸರೋವರದಲ್ಲಿ ದೊರಕಿರುವದು. ಗಾಡಿಯಲ್ಲಿ ರಕ್ತ ಕಲೆಗಳಿರುವ ತಲೆದಿಂಬುಗಳು ಸಿಕ್ಕಿರುತ್ತವೆ. ಪೋಲಿಸಿನವರು ಈ ವಿಷಯ ತನಿಕೆ ನಡಿಸುತ್ತಲಿದ್ದಾರೆ.

———:o:———

ಸರ್. ನಾರಾಯಣ ಚಂದಾವರ್ಕರರವರು "ಟೈಮ್ಸ್ ಆಫ್ ಇಂಡಿಯಾ" ಎಂಬ ಇಂಗ್ಲಿಷ್ ಪತ್ರಿಕೆಗೆ ಒಂದು ವೃತ್ತಾಂತವನ್ನು ಬರೆದಿರುವರು. ಮಲಬಾರಿನಲ್ಲಿ ಮುಟ್ಟಕೂಡದವರೆಂಬ ಪತಿತ ಜನರಲ್ಲಿ ಅತಿ ಕನಿಷ್ಠರೆಂದೆಣಿಸಲ್ಪಡುವ ನಾಯಾಡಿ ಎಂಬ ಒಂದು ಜಾತಿ ಇದೆ. ಇವರಿಗೆ ಪಟ್ಟಣದಲ್ಲಿ ಆಶ್ರಯ ದೊರಕದ್ದರಿಂದ ಪಟ್ಟಣದ ಹೊರಗೆ ಹೋಗಿ ಹಾಳುಬಿದ್ದ ಸುರಂಗಗಳಲ್ಲಿ ತಮ ಹೆಂಡತಿ ಮತ್ತು ಮಕ್ಕಳೊಡನೆ ವಾಸಿಸಬೇಕಾಗಿದೆ ಈ ಜಾತಿಯವರಿಗೆ ಯಾವ ಕೆಲಸ ಮಾಡಲೂ ಉತ್ತಮ ಕುಲದವರು ಬಿಡುವದಿಲ್ಲ. ವಾರಕ್ಕೆರಡಾವರ್ತಿ ಬುಧವಾರ ಮತ್ತು ಶನಿವಾರ ಮಾತ್ರ ಅವರು ಪಟ್ಟಣಕ್ಕೆ ಬಂದು ದೂರದಲ್ಲಿರುವ ಹೊಲ ಗದ್ದೆಗಳಲ್ಲಿ ನಿಂತು ಬೇಡುತ್ತಿರುವರು. ಇಂಥವರಲ್ಲಿ ಒಬ್ಬನ ಭೇಟಿಯು ಶುಕ್ರವಾರ ದಿನ ಸರ್ ನಾರಾಯಣರಿಗೆ ಆಯಿತು. ನೀನು ಯಾಕೆ ಈ ದಿನ ಪಟ್ಟಣಕ್ಕೆ ಬಂದು ಬೇಡುತ್ತಿ ಎಂದು ಸರ್. ನಾರಾಯಣರು ಕೇಳಿದರು. ಅದಕ್ಕವನು ಸರಕಾರದವರು ಅಡ್ಡಿ ಮಾಡುವದಿಲ್ಲ ಎಂದು ಉತ್ತರ ಕೊಡಲು ಸರ್ ನಾರಾಯಣರು ಸರಕಾರದವರು ನಿನ್ನನ್ನು ಪಟ್ಟಣಕ್ಕೆ ಬಂದು ಕೆಲಸಮಾಡಕೂಡದೆಂತ ಅಡ್ಡಿ ಮಾಡಿರುವರೋ ಎಂದು ಕೇಳಿದರು. ಅದಕ್ಕೆ ಅವನು ನಾನು ಪಟ್ಟಣಕ್ಕೆ ಬಂದು ಕೆಲಸ ಮಾಡಿ ಜೀವಿಸಿದರೆ ನನ್ನ ಎಲುಬುಗಳನ್ನು ಬೇಗನೇ ಪುಡಿ ಪುಡಿ ಮಾಡ್ಯಾರು, ನನ್ನ ಹೆಂಡತಿಯ ಮತ್ತು ಮಕ್ಕಳ ಅಂತ್ಯವು ಅಂದಿಗೆ ಆಗುವದು. ನಾವು ಜನರಿಗೆ ಭೀಡ. ಅವರು ನಮ್ಮನ್ನು ಲಕ್ಷ್ಯಮಾಡುವದಿಲ್ಲ ಆದುದರಿಂದ ನಾವು ಅವರ ಗೊಡವೆಗೆ ಹೋಗುವದಿಲ್ಲ ಎಂದು ಹೇಳಿದನು.

~~~~~

ದಕ್ಷಿಣ ಕನ್ನಡ.

ಹೊಸದುರ್ಗ:— ಇಲ್ಲಿ ಏನೋ ಒಂದು ಕೆಲಸದಿಂದ ಬಂದಿದ್ದ ಕಾಸರಗೋಡು ಲೋಕಲ್ ಫಂಡ್ ಕಂಟ್ರಾಕ್ಟರ ಕಣ್ಣಾರಿ ಎಂಬವನು ಅಕಸ್ಮಾತ್ ಹೃದಯ ಬೇನೆಯಿಂದ ಮೃತಪಟ್ಟ ಸಂಗತಿ ತಿಳಿಸುವರೆ ವಿಷಾದ ಪಡುತ್ತೇವೆ.

ಕೊಯಂಬತ್ತೂರು ಡಿವಿಜನ್ ವ್ಯವಸಾಯ ಸಂಘದ ದೊರೆಗಳವರು ಇಲ್ಲಿ ತಲಪಿ ೨ ದಿವಸಗಳ ಮೊಕ್ಕಾಂ ಬೆಳಸಿ ಅಜುಬಾಜು ಗ್ರಾಮಗಳನ್ನು ಅಂದರೆ ವ್ಯವಸಾಯ ವೃದ್ಧಿ ಸಮ್ಬಂಧ ಪರಿಶೋಧಿಸಿ ಹಿಂತೆರಳಿದರು.

ಕಳೆದ ಸಂಚಿಕೆಯಲ್ಲಿ ಪ್ರಸ್ತಾಪಿಸಲ್ಪಟ್ಟ ಮೇರೆಗೆ ಇಲ್ಲಿಯ ಶಾಲಾ ಉಪಾಧ್ಯಾಯರೊಬ್ಬರ ಬದಲಿಗೆ ಯೋಗ್ಯರಾದವರನ್ನು ನೇಮಕ ಮಾಡಲ್ಪಟ್ಟದ್ದು ಈಗಿನ ದಯಾಳು ಶಾಲಾ ಮೆನೆಜರರಿಗೆ ಶ್ಲಾಘನೀಯವಾದದ್ದು. ಆದರೆ ಇನ್ನೂ ಒಂದೆರಡು ಉಪಾಧ್ಯಾಯರನ್ನು ಮೊಕರ್ರರು ಮಾಡಿದಲ್ಲಿ ಶಾಲೆಯು ಹಿಂದಿನ ಸ್ಥಿತಿಯನ್ನು ಹೊಂದದೆ ಇರಲಾರದು.

ಇಲ್ಲಿಯ ಟೌನಿನಲ್ಲಿ ಕಳೆದ ಶನಿವಾರ ದಿವಸ ಒಂದು ಮನೆಗೆ ಕಳ್ಳರು ಒಳನುಗ್ಗಿ ಸುಮಾರು ೫೦ ರೂಪಾಯಿ ಮೌಲ್ಯದ ಚಿನ್ನಾಭರಣಗಳನ್ನು ಕದ್ದುಕೊಂಡಿರುವರಾಗಿ ಪೋಲಿಸ ಸ್ಟೇಶನಿನಲ್ಲಿ ಫಿರ್ಯಾದು ದಾಕಲು ಆಗಿಯದೆ. ಮನೆಯ ಯಜಮಾನನು ಪರವೂರಿಗೆ ಪ್ರಯಾಣ ಮಾಡಿದ್ದನು. ಆತನು ಮನೆಬಿಟ್ಟು ಹೊರಡುವಾಗ ಮೌಲ್ಯದ ಚರಜಿಂದಿಗೆಗಳನ್ನು ಬೇರೆ ಠಾಣ್ಯಕ್ಕೆ ಸಾಗಿಸಿದ್ದರೂ ಚಿನ್ನಾಭರಣಗಳನ್ನು ಕಳ್ಳರ ಪಾಲಿಗೆ ಇರಗೊಡಿಸಿದ್ದು ಬಹಳ ಸೋಜಿಗವಾದ್ದೆ ಸರಿ. ಪೋಲಿಸ್ ಆಫೀಸರರು ಇದರಲ್ಲಿ ಜಾಗ್ರತೆಯಿಂದ ತನಿಕೆ ನಡಿಸಿ ನಿಜವಾದ ಕಳ್ಳನನ್ನು ಬಯಲಿಗೆ ತರುವದು ಅತ್ಯಾಗತ್ಯ.

~~~~~

ಉಡುಪಿ:— ಇತ್ತಲಾಗೆ ಆಶ್ರಮ ಹೊಂದಿದ ಈ ಮಠದ ಸ್ವಾಮಿಗಳವರು, ಇನ್ನೂ ಮೈನರರಾಗಿರುವ ಪ್ರಯುಕ್ತ, ತಮ್ಮ ಆಧೀನದಲ್ಲಿದ್ದ ಫಲಿಮಾರು ಮಠದ ವಿಶಿಷ್ಟ ಆಡಳಿತೆಯನ್ನು ಶ್ರೀ [illegible]ರು ಶ್ರೀಗಳವರು [illegible]
~~~~~

ಕುಂಜೂರು ವ್ಯಾಸರಾಯರವರಿಗೆ ಕೈವರ್ತಿಸಿ, ಮಠದ ಘಾವತ್ತು ಸ್ಥಿರ ಚರ ಸೊತ್ತುಗಳನ್ನು ಅವರ ಸ್ವಾಧೀನ ಕೊಡಿಸಿರುವರು. ಅದಮಾರು ಮಠದ ಪಾರುಪತ್ಯಗಾರರಾಗಿದ್ದ ವ್ಯಾಸಾಚಾರ್ಯರವರು ಗತಿಸಿದ ಮೇಲೆ ಈ ರಾಯರು ಶ್ರೀಗಳವರಿಗೆ ಮಂತ್ರಿಸ್ಥಾನದಲ್ಲಿದ್ದು ಪಿತೃ ಲೌಕಿಕ ಕಾರ್ಯಗಳಲ್ಲಿ ಸಹಾಯಕರಾಗಿದ್ದರು. ಬೆಂಡಾರಿಕೇರಿ ಮಠದ ಆಡಳಿತೆಯನ್ನು ಸ್ವಲ್ಪ ಕಾಲ ನೋಡಿ ಶಿಥಿಲವಾಗಿದ್ದ ಆ ಮಠವನ್ನು ಜೀರ್ಣೋದ್ಧಾರ ಮಾಡಿಸಿ ಸುವ್ಯವಸ್ಥೆ ಮಾಡಿದರು. ಉಡುಪಿ ಮ. ಗಿ. ಸಂ. ಸಭೆಗೆ ಕಾರ್ಯದರ್ಶಿಗಳಾಗಿದ್ದು ಗೀರ್ವಾಣವಿದ್ಯಾಭಿವೃದ್ಧಿಗೆ ಪ್ರೋತ್ಸಾಹಿಸುತ್ತಿರುವರು. ಇವರು ಲಗರ್ಬ ಶ್ರೀಮಂತರಾಗಿಯೂ, ಕಾರ್ಯಕುಶಲರಾಗಿಯೂ, ಆಚಾರಶೀಲರಾಗಿಯೂ, ಪಾಪಭೀರುಗಳಾಗಿಯೂ ಇರುವದರಿಂದ ಇವರ ಆಡಳಿತೆಯಿಂದ ಪರಿಮಾರು ಮಠವು ಸರ್ವಪ್ರಕಾರದಲ್ಲಿಯೂ ಅಭಿವೃದ್ಧಿಯನ್ನು ಹೊಂದುವದೆಂಬುವದರಲ್ಲಿ ಸಂದೇಹವಿಲ್ಲ. ಇದರಿಂದ ಇವರು ಶ್ರೀಪಾದಂಗಳವರ ಅನುಗ್ರಹಕ್ಕೆ ಪಾತ್ರರಾಗುವರು ಮಾತ್ರವಲ್ಲದೆ, ಪುಣ್ಯಕೀರ್ತಿಗಳಿಗೂ ಮಹಾಜನಾನುರಾಗಕ್ಕೂ ಪಾತ್ರರಾಗುವರು.

~~~~

ಮಂಗಳೂರು

ನಮ್ಮ ಜಿಲ್ಲೆಯವರಾದ ರಾ. ಬಿ. ದಯಾನಂದ ಕಾಮತ್ ಮತ್ತು ರಾ| ಬಿ. ನರಸಿಂಹ ಶೆಣೈಯರವರು ಈ ವರ್ಷದ ಇಂಜಿನಿಯರಿಂಗ್ ಇಲಾಖೆಯ ಪ್ರಥಮ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವರು.

ಇದೇ ತಾ. ೨೨ನೇ ಮಧ್ಯಾಹ್ನ ೧೨ ಗಂಟೆಗೆ ಜಪ್ಪಿನಮೊಗ್ರಿನ್ ಹಂಚು ಕಾರ್ಖಾನೆಯಲ್ಲಿ ಕೆಲಸ ಮಾಡುವ ಕ್ರಿಸ್ತಿಯನ್ ದೇವದತ್ತ ಎಂಬವನಿಗೆ ಜೊನಥಾನ ಫರ್ನ್ ಮತ್ತು ವಿಲಿಯಂ ಬಂಗೇರ ಎಂಬ ಇಬ್ಬರು ಹೊಡೆದು ಗಾಯಪಡಿಸಿರುವರೆಂತಲೂ ಈ ಸಂಬಂಧ ಪೋಲಿಸಿಗೆ ರಿಪೋರ್ಟು ಆಗಿರುವದೆಂತಲೂ ಕೇಳುತ್ತೇವೆ. ಗಾಯ ಒಡೆದ ಕ್ರಿಸ್ತಿಯನ್ ದೇವದತ್ತನು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿರುತ್ತಾನೆ.

ಇದೇ ತಾ. ೨೪ರಲ್ಲಿ ವಾಮನ ಪುರುಷೋತ್ತಮ ಪೇಟೆಯಲ್ಲಿ ಚೊಗ್ರ ಎಂಬವನು ಸುಮಾರು ೩೦ ರೂಪಾಯಿ ಕ್ರಯ ಬಾಳುವ ಎಲಕ್ಕಿಯನ್ನು ಕಳವು ಮಾಡಿದ್ದಾನೆ. ಪೋಲಿಸಿನವರು ಇವನನ್ನು ಕೈದುಮಾಡಿರುವರು.

ಪೋಸ್ಟ್ ಆಫೀಸಿನ ಪಾಯಿಖಾನೆಯ ಹಲಿಗೆಗಳನ್ನು ಕಳವು ಮಾಡಿದ ಹಾಜಬ್ಬಾಗೆ ಇದೇ ತಾ. ೨೬ರಲ್ಲಿ ೬ ತಿಂಗಳ ಕಠಿಣ ಸಜೆಯಾಯಿತು.

ಕಂಕನಾಡಿಯ ವಠಾರದ ಒಂದು ಮನೆಯಲ್ಲಿ ಈಚೆಗೆ ೧೬೦ ರೂಪಾಯಿಗಳು ಕಳವಾಗಿದೆಂತ ಪೋಲಿಸಿನವರಿಗೆ ರಿಪೋರ್ಟು ಆಗಿತ್ತು. ಪೋಲಿಸಿನವರು ಈ ವಿಷಯ ತನಿಖೆ ನಡಿಸುತ್ತಿರುವಲ್ಲಿ ಕಳವಾದ ರೂಪಾಯಿಗಳು ಅದೇ ಮನೆಯಲ್ಲಿ ಯಾವ ಸ್ಥಳದಲ್ಲಿ ಕಳವಾಗಿರುವದೋ ಅಲ್ಲಿಯೇ ದೊರಕಿರುವದೆಂಬ ವಾರ್ತೆಯು ಪೋಲಿಸಿನವರಿಗೆ ಬಂದಿರುವದೆಂತ ತಿಳಿಯುತ್ತೇವೆ.

ಕಳೆದ ಸಂಚಿಕೆಯಲ್ಲಿ ತಿಳಿಸಿದಂತೆ ತಾ. ೨೪ನೇ ಸೋಮವಾರ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು ಜರಗಿತು. ಈ ಸಭೆಯಲ್ಲಿ ಮುಖ್ಯವಾಗಿ ಡಿಸ್ಟ್ರಿಕ್ಟ್ ಬೋರ್ಡು ಇಂಜನಿಯರರಿಂದ ಕಳುಹಿಸಲ್ಪಟ್ಟ ಆಯಾ ಕೆಲಸಗಳ ಅಂದಾಜು ಪಟ್ಟಿಗಳು ಸೇಂಕ್ಷನ್ ಆಗಿರುವವು.

ನಿನ್ನೆಯ ಸಾಯಂಕಾಲ ಒಂದು ಮದುವೆ ಮೆರವಣಿಗೆಯು ಪಟ್ಟಣದ ಬೀದಿಯೊಂದರಲ್ಲಿ ಹೋಗುತ್ತಿರುವಾಗ ಒಬ್ಬ ಬೈಸಿಕಲ್ ಸವಾರನು ಮೆರವಣಿಗೆಯ ಮಧ್ಯೆಯೇ ಬೈಸಿಕಲನ್ನು ಓಡಿಸಿದ್ದರಿಂದ ಬೈಸಿಕಲ್ ಒಬ್ಬ ಹೆಂಗಸಿಗೆ ತಗಲಿ ಆಕೆಗೆ ಜಖಂ ಆಗಿರುವದು. ಗಾಯ ಒಡೆದ ಹೆಂಗಸನ್ನು ಆಸ್ಪತ್ರೆಗೆ ಒಯ್ದಿರುತ್ತಾರೆ. ಪೋಲಿಸಿನವರು ಬೈಸಿಕಲ್ ಸವಾರನನ್ನು ಕೈದುಮಾಡಿರುತ್ತಾರೆಂದು ತಿಳಿಯುತ್ತೇವೆ.

ಹೆಕ್ನಿ ಕೆರೇಜುಗಳ ಡ್ರೈವರರು ಗಾಡಿಗಳನ್ನು ದಿಕ್ಕು ತೋರದೆ ಓಡಿಸುವ ಪದ್ಧತಿಯು ಪಟ್ಟಣದಲ್ಲಿ ತುಸ ಹೆಚ್ಚಿದಂತೆ ತೋರುತ್ತದೆ. ನಿನ್ನೆಯ ದಿನ ನಂಬ್ರ ೨೮/೫೪ ನೇ ಜಟ್ಕಾ ಡ್ರೈವರನು ಬಲ್ಮಠ ರಸ್ತೆಯಲ್ಲಿ ಜಟ್ಕಾವನ್ನು ನಾಗಾಲೋಟದಿಂದ ಓಡಿಸಿಕೊಂಡು ಹೋಗುವಾಗ ಸ್ವಲ್ಪ ಹೆಚ್ಚು ಕಡಿಮೆಯಾಗುತ್ತಿದ್ದರೆ ೬-೭ ವರ್ಷ ಪ್ರಾಯದ ಒಂದು ಮಗು ಗಾಡಿಯ ಅಡಿಯಲ್ಲಿ ಬೀಳುವ ಸಂಭವವಿತ್ತೆಂತ ತಿಳಿಯುತ್ತೇವೆ. ಶಾಲೆಗಳ ರಜೆಯು ತೀರಿ ಶಾಲೆಗಳು ಪುನಃ ಪ್ರಾರಂಭವಾದ ಈ ಕಾಲದಲ್ಲಿ ಜಟ್ಕಾ ಬಂಡಿಗಳ ಓಟವು ಹೆಚ್ಚಿದರೆ ಶಾಲೆಗೆ ಹೋಗುವ ಮಕ್ಕಳಿಗೆ ಅಪಾಯಗಳು ಸಂಭವಿಸಬಹುದಾದ್ದರಿಂದ ಹೆಕ್ನಿ ಕೆರೇಜು ಆಫೀಸರರು ಈ ವಿಷಯ ಲಕ್ಷ್ಯ ಕೊಡಬೇಕಾಗಿದೆ.

ಬಾಸೆಲ್ ಮಿಶ್ಯನಿನವರು ಹಲವು ವರ್ಷಗಳಿಂದ ಪ್ರಕಟಿಸುತ್ತಿದ್ದ 'ಸತ್ಯದೀಪಿಕೆ' ಎಂಬ ಕನ್ನಡ ವಾರಪತ್ರಿಕೆಯನ್ನು ಯುದ್ಧ ಸಂಬಂಧವಾಗಿ ಉಂಟಾದ ಕೆಲವು ತೊಂದರೆಗಳಿಂದ ಇದೇ ಬರುವ ಜುಲೈ ತಾ. ೧ರಿಂದ ನಿಲ್ಲಿಸಿಬಿಡುತ್ತಾರೆಂದು ತಿಳಿದು ವಿಷಾದಿಸುತ್ತೇವೆ.

ಅಲ್ಲಹಾಬಾದಿನ ಕಾಯಸ್ಥ ಕಾಲೇಜಿಯ ಪ್ರಿನ್ಸಿಪಾಲರಾಗಿರುವ ಮ. ರಾ. ರಾ. ಬಿ. ಸಂಜೀವರಾವ್ ಎಮ್. ಎ. (ಕೇಂಬ್ರಿಜ್)ರವರು ಗಣಪತಿ ಸೆಕೆಂಡರಿ ಶಾಲೆಯಲ್ಲಿ ವಿದ್ಯಾರ್ಥಿ ಭ್ರಾತೃ ಸಂಘದವರ ಆಮಂತ್ರಣದ ಮೇರೆಗೆ ಇದೇ ತಾ. ೨೪ನೇ ಸೋಮವಾರ ದಿನ ಡಾಕ್ಟರ್ ರವೀಂದ್ರನಾಥ ಟಾಗೋರರವರ ವಿಷಯವಾಗಿ ಉಪನ್ಯಾಸ ಕೊಟ್ಟರು.

ಕಳೆದ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಪ್ಲೇಗು ಮರಣವಿಲ್ಲ.

ಗವರ್ನಮೆಂಟ್ ಪೆನ್ಷನ್‌ದಾರರೂ ಕೆಲವು ವರ್ಷಗಳಿಂದ ಇಲ್ಲಿಯ ಮುನ್ಸಿಪಲ್ ಕೌನ್ಸಿಲರೂ ಆಗಿದ್ದ ರಾ| ಉದ್ಯಾವರ ಕೃಷ್ಣಯ್ಯನವರು ಇದೇ ತಾ. ೨೫ರಲ್ಲಿ ವಿಧಿವಶರಾದರೆಂದು ತಿಳಿದು ದುಃಖಾಕ್ರಾಂತರಾಗಿರುತ್ತೇವೆ. ಇವರ ಮರಣದ ಕೆಲವು ದಿವಸಗಳ ಹಿಂದೆ ಇವರ ಮಗ ಉಂಡಾಪುರ ಡಿಸ್ಟ್ರಿಕ್ಟ್ ಕೋರ್ಟು ಹೆಡ್ ಕ್ಲಾರ್ಕರಾಗಿದ್ದ ರಾ| ಯು. ವಿಶ್ವನಾಥಯ್ಯನವರು ತೀರಿಕೊಂಡಿದ್ದರು. ಮಗನು ತೀರಿಹೋದ ಶೋಕವೇ ರಾ| ಕೃಷ್ಣಯ್ಯನವರ ಮರಣಕ್ಕೆ ಕಾರಣವಾಯಿತೆಂದು ತಿಳಿಯುತ್ತೇವೆ.

~~~~

ಉಪಯುಕ್ತವಾದ ವಿಷಯಗಳು

ಸಿಂಹಳ (ಲಂಕಾ) ದ್ವೀಪದ ಕೆಲವು ಭಾಗದ ಜನರು ಸ್ನಾನ ಮಾಡುವಾಗ ನೀರಿನಲ್ಲಿ ಕೊಬ್ಬರಿ ಎಣ್ಣೆಯನ್ನು ಬೆರಸಿ ಉಪಯೋಗಿಸುತ್ತಿರುವದರಿಂದ, ಅವರಿಗೆ ಮಲೇರಿಯಾ ಜ್ವರವು ಬರುವದಿಲ್ಲವೆಂದು ಡಾಕ್ಟರ್ ಕುಂಜನಪಿಳ್ಳೆ ಎಂಬವರು ತಿಳಿಸುತ್ತಾರೆ.

~~~~

ಬೆಳ್ಳಿಯ ಪಾತ್ರೆಯ ಮೇಲಿರುವ ಗೀಚಾದ ಸಣ್ಣ ಸಣ್ಣ ಗೆರೆಗಳನ್ನು ಹೋಗಲಾಡಿಸಬೇಕಾದರೆ, ಷಾಮಾಯ್ ತೊಗಲನ್ನು ನಾಲ್ಕಾರು ಮಡಿಕೆಗಳಾಗಿ ಮಡಚಿ ಸೀಮೆಹಿಪ್ಪೆ ಎಣ್ಣೆ (Olive oil)ಯೊಂದಿಗೆ, ಪಾತ್ರೆಯ ಮೇಲೆ ಚೆನ್ನಾಗಿ ಉಜ್ಜಬೇಕು.

~~~~

ಇರುವೆಗಳನ್ನು ಓಡಿಸಲು ನಾನಾವಿಧವಾದ ಉಪಾಯಗಳಿರುವವು. ಅವುಗಳಲ್ಲಿ ಕೆಲವನ್ನು ಕ್ವೀನ್ಸ್‌ಲೇಂಡಿನ ವ್ಯವಸಾಯ ಪತ್ರಿಕೆಯು ತಿಳಿಸುವುದು:—(೧) ಇರುವೆಗಳು ವಿಶೇಷವಾಗಿರುವ ಕೋಠಡಿಯಲ್ಲಿ, ನೆಲದ ಮೇಲೆ ಅಲ್ಲಲ್ಲಿ ನಶ್ಯದ ಪುಡಿಯನ್ನುದುರಿಸಿದುದಾದರೆ, ಅವು ಅದರ ವಾಸನೆಗೆ ಹೊರಟುಹೋಗುವವು. (೨) ನುಣುಪಾದ ತೊಗಟೆಯುಳ್ಳ, ಯಾವುದಾದರೊಂದು ಗಿಡಕ್ಕಾಗಲಿ, ಹಲಗೆಗಾಗಲಿ, ಕಂಭಕ್ಕಾಗಲಿ ಇರುವೆ ಮುತ್ತಿದ್ದರೆ, ಆ ವಸ್ತುಗಳ ಸುತ್ತಲೂ ಸೀಮೆಸುಣ್ಣದಿಂದ ಗೆರೆಯನ್ನೆಳೆದುದಾದರೆ, ಇರುವೆಗಳು ಆ ಗೆರೆಯನ್ನು ದಾಟುವುದಿಲ್ಲ. (೩) ಇರುವೆಗಳು ಜಾಸ್ತಿಯಾಗಿರುವೆಡೆಗಳಲ್ಲಿ, ಪುಡಿಮಾಡಿದ ಬಿಳಿಗಾರ (Borax)ವನ್ನು ಉದುರಿಸಿದರೆ, ಕೆಂಪು ಇರುವೆಗಳೂ ಕರಿ ಇರುವೆಗಳೂ ಅಲ್ಲಿಗೆ ಪುನಃ ಬರಲಾರವು.

~~~~

ಕೇವಲ ಕಪ್ಪಾದಿಯೂ, ಕೊಳೆಯಾಗಿಯೂ ಇರುವ ಬಿಳಿಯ ಜೋಡುಗಳನ್ನು, ೨೦ ಟೇಬಲ್ ಚಂಚಗಳಷ್ಟು ನೀರು ಮಿಶ್ರವಾದ ಇಪ್ಪತ್ತು ತೊಟ್ಟು ಕೇಸರಿ ನೀರಿನಿಂದ ಉಜ್ಜಿದುದಾದರೆ, ಅವು ಮನೋಹರವಾದ ಪಿಂಗಲ (Brown) ವರ್ಣವನ್ನು ಹೊಂದುವುವು. ಹೆಚ್ಚಾಗಿ ಫಟಿಕೂಟ್ಟಂತಾಗಬೇಕಾದರೆ ಮೇಲೆ ಹೇಳಿದುದನ್ನು ಎರಡಾವೃತ್ತಿ ಉಪಯೋಗಿಸಬೇಕು.

~~~~

ಚೈನಾ ದೇಶದ ವೇಹೈವೇ ಎಂಬ ರೇವಿನಲ್ಲಿ ಜರ್ಮನಿಯಿಂದ ಕೂದಲನ್ನು ತರಿಸಿಕೊಂಡು ಬಲೆಗಳನ್ನು ಹೆಣೆಯುತ್ತಾರೆ. ತಯಾರಾದ ಹಾಗೆಲ್ಲಾ ಅವುಗಳನ್ನು ಅಂಚೆಯ ಮೂಲಕ ಜರ್ಮನಿಗೆ ಕಳುಹಿಸುತ್ತಾರೆ. ಈ ಉದ್ಯೋಗದಲ್ಲಿ ೫೦೦ ಮಂದಿ ಹೆಂಗಸರೂ ಮಕ್ಕಳೂ ತೊಡಗಿದ್ದಾರೆ. ಇವರೆಲ್ಲರೂ ಒಂದು ವಾರಕ್ಕೆ ೩೫,೦೦೦ ಬಲೆಗಳನ್ನು ಮಾಡುತ್ತಾರಂತೆ. ಒಂದು ಡಜನ್ ಬಲೆಗಳನ್ನು ಹೆಣೆಯುವದಕ್ಕೆ ೨|| ಆಣೆಯಿಂದ ೭|| ಆಣೆಯ ವರೆಗೆ ಕೂಲಿಯಾಗುತ್ತದೆ. ಉಪಯೋಗವಿಲ್ಲವೆಂದು ನಮ್ಮವರು ಅಲಕ್ಷ್ಯದಿಂದೆಸೆಯುವ ಪದಾರ್ಥಗಳಿಂದ ಕೂಡ ಅನ್ಯದೇಶದವರು ಕೆಲಸಮಾಡಿ ಲಾಭಪಡೆಯುವ ಸಂಗತಿಗಳನ್ನು ನಮ್ಮ ದೇಶೀಯರು ಪರ್ಯಾಲೋಚಿಸಬೇಕಾಗಿದೆ.

~~~~

ಜೀನಸು ಧಾರಣೆ. (ರಖಂ)

ಹೊಸ ಮಸ್ಕತಿ ಅಕ್ಕಿ .	5— 2—0	5—10—0
ಹೊಸ ಗಾಡಿ ರಾಶಿ ,, .	4— 6—0	4— 8—0
ಹೊಸ ಗುಡ್ಡು ,, .	4— 8—0	4—14—0
ಅವ್ವಲ್ ಬೆಳ್ತಿಗೆ ,, .	5— 6—0	5—10—0
ಗುಡ್ಡು ಬೆಳ್ತಿಗೆ ,, .	5— 1—0	5— 2—0
ರಂಗೂನು ಬೆಳ್ತಿಗೆ ಗೋಣಿ ಗರ	7— 12—0	8— 6—0
ಗೋದಿ ಗೋಣಿ ಗರ ...	13— 0—0	14— 0—0
ಹುರುಳಿ ಗೋಣಿ ಗರ ...	6— 4—0	7— 6—0
ಕಡಲೆ ಗೋಣಿ ಗರ. ,, .	9—0—0	10—12—0
ತೊಗರಿ ಗೋಣಿ ಗರ ...	10— 0—0	11— 8—0
ತೊಗರಿ ಬೇಳೆ ಗೋಣಿ ಗರ.	12— 8—0	16— 0—0
ಉದ್ದು ಗೋಣಿ ಗರ		10— 0—0
ಊರುಬೆಲ್ಲ ಖಂಡಿ ಗರ		75— 0—0
ಉಪ್ಪು ಗೋಣಿ ಗರ . .	3—12—0	3—14—0
ಕೊಬ್ರಿ ಖಂಡಿ ಗರ . .	70—0—0	75— 0—0
ಕೊಬ್ರಿ ಹಿಂಡಿ ಖಂಡಿ ಗರ		14— 0—0
ಎಳ್ಳಿಂಡಿ ಖಂಡಿ ಗರ .	25—0—0	31— 4—0
ಕೊಬ್ರಿ ಎಣ್ಣೆ ಮುಡಿ ಗರ .	5— 9—0	5—12—0
ಎಳ್ಳೆಣ್ಣೆ ಮುಡಿ ಗರ (ಕುಡಾಸನ)	3—10—0	3—14—0
ಚಿಮಣಿ ಎಣ್ಣೆ ಪೆಟ್ಟಿಗೆ ಗರ . .		5— 0—6
ಮೋರಸ್ ಸಕ್ಕರೆ ಮುಡಿ ಗರ		4—14—0
ಕಾಫಿ ಖಂಡಿ ಗರ	240—0—0	252— 0—0
ಹೊಸಬೀಗೋಟು ಖಂಡಿಗರ	94—0—0	98— 0—0
ಹೊಸ ಗೇರುಬೀಜ ಮುಡಿ ಗರ . . .		2— 2—0
ಕಬ್ಬಿಣ ಖಂಡಿ ಗರ		50— 0—0
ಕಾಂಬ್ರ ತಗಡುಮುಡಿ ಗರ .		19— 8—0
ಕಾಂಬ್ರ ಪಾತ್ರೆಗಳು ಮುಡಿ ಗರ		22— 0—0
ಚೀನ ಬೆಳ್ಳಿ ತೀರು ಗರ		18—12—0

~~~~

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂತ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳ ೮ ಪಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ

೨. ಪ್ರಮೇಹರಿಪು ಬಿಂದು ಉರಿಯ್ಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು ಬಾಟ್ಲಿಗೆ ೨-೮-೦.

...ನ್ಸಿಲುಗಳ ಮೆಂಬರರಾಗಿ ಕೆಲವು ಸಂದರ್ಭಗಳಲ್ಲಿ ಅಯೋಗ್ಯರು ಆರಿಸಲ್ಪಡುವದರಿಂದಲೂ ಚುನಾವಣೆಗಳು ನಡೆಯುತ್ತಿರುವಾಗ ಬಗೆಬಗೆಯ ಅನರ್ಥಗಳು ಕಂಡುಬರುವದರಿಂದಲೂ ಇವುಗಳ ನಿವಾರಣೆಗೋಸ್ಕರ ಸರಕಾರದವರು ಚುನಾವಣೆಯ ಹೊಸ ನಿಯಮಗಳನ್ನು ರಚಿಸಿರುತ್ತಾರೆ. ಇವುಗಳನ್ನು ಮಂಜೂರು ಮಾಡುವ ಮೊದಲು ಇವುಗಳ ವಿಷಯ ಪ್ರಜಾ ಜನರ ಅಭಿಪ್ರಾಯಗಳನ್ನು ತಿಳಕೊಳ್ಳುವರೆ ಈ ನಿಬಂಧನೆಗಳನ್ನು ಸರಕಾರದವರು ಪ್ರಕಟಿಸಿರುವರು. ಕೆಲವು ದಿವಸಗಳ ಹಿಂದೆ ಉದಕಮಂಡಲದಲ್ಲಿ ಕೂಡಿದ ನ್ಯಾಯನಿರ್ಮಾಣ ಸಭೆಯಲ್ಲಿ ಇವುಗಳ ವಿಷಯ ವಾದವು ನಡೆದಿರುವದು. ಆಡಳಿತೆಯ ಕಾರ್ಯನಿರ್ವಾಹದಲ್ಲಿ ಪ್ರಜೆಗಳಿಗೆ ಹೆಚ್ಚಿನ ಪ್ರವೇಶವು ಕೊಡೋಣಾಗಬೇಕೆಂಬ ಸದುದ್ದೇಶವು ಸರಕಾರದವರಲ್ಲಿ ಕಂಡು ಬರುತ್ತಿರುವಾಗ ಪ್ರಜೆಗಳಿಗೆ ತಮ್ಮಭಿಮತವನ್ನು ಸೂಚಿಸಲಿರುವ ಅನುಕೂಲತೆಗಳನ್ನು ಕಡಮೆಮಾಡುವದು ಈಗಿನ ದಿನಗಳಲ್ಲಿ ಸರಿಯಲ್ಲ. ಈ ಹೊಸ ನಿಯಮಗಳನ್ನು ಇದ್ದಂತೆಯೇ ಮಂಜೂರು ಮಾಡಿದರೆ ಇಂಥಾ ಅನುಕೂಲತೆಗಳು ಬಹಳ ಕಡಿಮೆಯಾಗಿ ಹೋಗುವವೆಂಬುದರಲ್ಲಿ ಸಂಶಯವಿರದು. ಕೌನ್ಸಿಲಿನ ಮೆಂಬರುತನಕ್ಕೆ ಉಮೇದ್ವಾರರಾಗಿ ನಿಲ್ಲುವಂಥವರು ಮತ್ತು ಇಂಥಾ ಉಮೇದ್ವಾರರನ್ನು ಆರಿಸಿ ಮೆಂಬರರನ್ನಾಗಿ ಮಾಡುವ ವೋಟರರುಗಳು ಈ ಹೊಸ ನಿಯಮಗಳ ಪ್ರಕಾರ ಹೆಚ್ಚಿನ ಯೋಗ್ಯತೆಯುಳ್ಳವರಾಗಿರಬೇಕಾಗುವದು. ವರುಷ ಒಂದಕ್ಕೆ ರೂ 4ರಂತೆ ಆಸ್ತಿಯ ಮೇಲಣ ತೆರಿಗೆ ಕೊಡುವಂಥವರಿಗೂ, ರೂ 2ನ್ನು ವೃತ್ತಿತೆರಿಗೆಯಾಗಿ ಕೊಡುವಂಥವರಿಗೂ ಆದಾಯ ತೆರಿಗೆಯನ್ನು ಸರಕಾರದವರಿಗೆ ಕೊಡುವವರಿಗೂ ತಿಂಗಳಿಗೆ 15ರ ಪ್ರಕಾರ ಪೆನ್ಶನು ಪಡೆಯುವ ಸರಕಾರದ ನೌಕರರಿಗೂ ರೂ 5ನ್ನು ಮನೆಬಾಡಿಗೆಯಾಗಿ ಕೊಡುವವರಿಗೂ ತಿಂಗಳಿಗೆ ರೂ 30 ಸಂಬಳವಿದ್ದಂಥವರಿಗೂ ಗ್ರ್ಯಾಜ್ಯುಯೇಟ್ಸರಿಗೂ ಕೌನ್ಸಿಲರರುಗಳ ಚುನಾವಣೆಯಲ್ಲಿ ವೋಟನ್ನು ಕೊಡುವ ಅಧಿಕಾರವಿತ್ತು. ವೋಟರರುಗಳಿಗೆ ಬೇಕಾಗಿರುವ ಯೋಗ್ಯತೆಗಳು ಹೆಚ್ಚಿಸೋಣ್ಣಾಗುವದರಿಂದ ಪೆನ್ಶನು ಪಡೆಯುವಂಥವರ ಮತ್ತು ಸರಕಾರದ ಸಂಬಳ ಹೊಂದುವ ನೌಕರರ ಹೆಸರುಗಳು ಹೊಸ ನಿಯಮಗಳ ಪ್ರಕಾರ ಓಟರರುಗಳ ಪಟ್ಟಿಯಿಂದ ತೆಗೆದುಹಾಕಲ್ಪಡೋಣಾಗುವವು. ಮುನ್ಸಿಪಲ್ ತೆರಿಗೆ ಕೊಡುವಂಥವರು ಆಯಾ ಮುನ್ಸಿಪಲ್ ಪಟ್ಟಣಗಳಲ್ಲಿ ವಾಸ್ತವ್ಯವನ್ನು ಮಾಡಿಕೊಂಡಿರದಿದ್ದರೆ ಇಂಥವರು ಹೊಸ ನಿಯಮಗಳ ಪ್ರಕಾರ ವೋಟರರಾಗುವದು ಅಸಾಧ್ಯವಾಗಿದೆ. ಆದ್ದರಿಂದ ಓಟರರುಗಳ ಸಂಖ್ಯೆಯು ಸರಾಸರಿ ಮೇಲೆ ಈಗಿನಕ್ಕಿಂತ ಕಡಿಮೆಯಾಗುವ ಸಂಭವಗಳಿವೆ. ಇದೇ ರೀತಿ ಕೌನ್ಸಿಲ್ ಮೆಂಬರುತನಕ್ಕೆ ಉಮೇದ್ವಾರರಾಗಿ ನಿಲ್ಲುವಂಥವರಿಗೆ ಬಹಳ ವಿಶೇಷವಾದ ಯೋಗ್ಯತೆಗಳು ಬೇಕಾಗಿವೆ. ವರುಷ ಒಂದಕ್ಕೆ ರೂ. ೧೫೦ಕ್ಕೆ ಕಡಿಮೆಯಾಗದಂಥಾ ಅಥವಾ ತಿಂಗಳಿಗೆ ರೂ ೧೫—೧೦—ಲಕ್ಕೆ ಕಡಮೆಯಾಗದ ಉತ್ಪತ್ತಿಯುಳ್ಳ ಆಸ್ತಿ ಮಾಲಿಕನು ಮೆಂಬರುತನಕ್ಕೆ ಉಮೇದ್ವಾರನಾಗಿ ನಿಲ್ಲಬಹುದಿತ್ತು. ಈಗ ರೂ. ೩೦೦ ಅಥವಾ ತಿಂಗಳು ಒಂದಕ್ಕೆ ರೂ. ೨೫ಕ್ಕೆ ಕಡಿಮೆಯಾಗದ ಉತ್ಪತ್ತಿಯುಳ್ಳವನು ಉಮೇದ್ವಾರನಾಗಲು ಅರ್ಹನಾಗಿರುವನು. ಇದೇ ರೀತಿ ಕಟ್ಟೋಣಗಳಿಗೆ ಬಾಡಿಗೆ ಕೊಡುವಂಥವರಲ್ಲಿ ರೂ. ೪೮೦ ಅಥವಾ ತಿಂಗಳೊಂದಕ್ಕೆ ರೂ. ೨೦ ಕೊಡುವವರು ಉಮೇದ್ವಾರಿಕೆಗೆ ಅರ್ಹರಾಗಿರರು. ರೂ. ೩೦೦ ಅಥವಾ ತಿಂಗಳಿಗೆ ರೂ ೨೫ ಬಾಡಿಗೆ ಕೊಡುವವರು ಮಾತ್ರ ಹೊಸ ನಿಯಮಗಳ ಪ್ರಕಾರ ಕೌನ್ಸಿಲ್ ಮೆಂಬರುತನಕ್ಕೆ ಉಮೇದ್ವಾರರಾಗುವರು. ವೃತ್ತಿತೆರಿಗೆ ಮತ್ತು ಆದಾಯ ತೆರಿಗೆಗಳನ್ನು ಕೊಡುವವರಲ್ಲಿ ರೂ ೨೦೦೦ ಉತ್ಪತ್ತಿಯುಳ್ಳವರಿಗೆ ಇನ್ನು ಮುಂದೆ ಉಮೇದ್ವಾರರಾಗಲು ಆಸ್ಪದವಿರದು. ರೂ ೩೬೦೦ ಉತ್ಪತ್ತಿಯುಳ್ಳವರು ಮಾತ್ರ ಈ ಪದವಿಗೆ ಯೋಗ್ಯರೆಂತ ಕಂಡುಬಂದದೆ. ಗ್ರ್ಯಾಜ್ಯುಯೇಟ್ಸರು ಉಮೇದ್ವಾರರಾಗಬೇಕಾದರೆ ಅವರು ಗ್ರ್ಯಾಜ್ಯುಯೇಟ್ಸರಾಗಿ ೫ ವರುಷಗಳನ್ನಾದರೂ ಕಳೆಯಬೇಕಾಗಿದೆ. ಪೆನ್ಶನ್ ಪಡೆಯುವಂಥವರು ಮೊದಲಾದವರು ಮೇಲಿನ ತರಗತಿಗಳಲ್ಲಿದ್ದರೆ ಮಾತ್ರ ಇಂಥವರಿಗೆ ಉಮೇದ್ವಾರರಾಗುವ ಯೋಗ್ಯತೆಯು ದೊರಕುವದು. ಮುನ್ಸಿಪಲ್ ಚುನಾವಣೆಯ ಹೊಸ ನಿಯಮಗಳು ಮುನ್ಸಿಪಾಲಿಟಿಗಳ ಪ್ರಜಾ ಜನರಿಗಿರುವ ಓಟು ಕೊಡುವ ಮತ್ತು ಕೌನ್ಸಿಲ್ ಮೆಂಬರುತನಕ್ಕೆ ಉಮೇದ್ವಾರರಾಗಿ ನಿಲ್ಲುವ ಸ್ವತಂತ್ರವನ್ನು ಹೇಗೆ ನಿರ್ಬಂಧಿಸುತ್ತವೆಂಬುದು ಮೇಲಿನ ವಿವರದಿಂದ ವ್ಯಕ್ತವಾಗಬಹುದು. ಚುನಾವಣೆ ಕಾಲಗಳಲ್ಲಿ ಸಂಭವಿಸುವ ಅನರ್ಥಗಳನ್ನು ನಿವಾರಿಸುವ ದಾರಿಯು ಇದಾಗಿರದು. ಈಜಾಡಲು ಕಲಿಯುವಂಥವರು ನೀರಲ್ಲಿ ಮುಳುಗಿ ಹೋಗುವ ಅಂಜಿಕೆಯಿಂದ ನದಿ ಹಳ್ಳಗಳ ಹತ್ತರ ಹೋಗದೆನೇ ಈ ಅಭ್ಯಾಸವನ್ನು ಕಲಿತುಕೊಳ್ಳುವದು ಹೇಗೆ ಅಸಾಧ್ಯವೋ ಹಾಗೆಯೇ ಚುನಾವಣೆ ಕಾಲದಲ್ಲಿ ಅನರ್ಥಗಳು ಬಾರದಂತೆ ಜನರಿಗೆ ಈ ಬಾಗದಲ್ಲಿರುವ ಹಕ್ಕು ಸ್ವಾತಂತ್ರ್ಯಗಳನ್ನು ಸಂಕೋಚಪಡಿಸುವದರಿಂದ ಅನರ್ಥಗಳ ನಿವಾರಣೆಯು ಅಸಾಧ್ಯವಾಗಿದೆ. ಅದಲ್ಲದೆ ಓಟರರುಗಳ ಮತ್ತು ಕೌನ್ಸಿಲು ಮೆಂಬರುತನದ ಉಮೇದ್ವಾರರ ಅರ್ಹತೆಯನ್ನು ಒರೇ ಸಂಪತ್ತಿನ ಯೋಗ್ಯತೆಗಳಿಂದ ನಿರ್ಧರಿಸಿ ಅಧಿಕ ಸಂಪತ್ತುಳ್ಳವರಿಗೆ ಮಾತ್ರ ಈ ಅರ್ಹತೆಯನ್ನು ಕೊಡುವದು ಉಚಿತವಲ್ಲ. ಏಕೆಂದರೆ, ಸಂಪತ್ತಿನ ಅನುಕೂಲತೆಯುಳ್ಳವರಿಗೆ ಮುನ್ಸಿಪಲ್ ಆಡಳಿತೆ ಮೊದಲಾದ ಸಾರ್ವಜನಿಕ ವಿಷಯಗಳಲ್ಲಿ ಅಭಿರುಚಿಯು ವಿಶೇಷವಾಗಿರದು. ಉಂಡು ತಿಂದು ಯಾರ ಗೋಜಿಗಾದರೂ ಹೋಗದೆ ಸಾಧ್ಯವಾದ ಸುಖ ಸೌಭಾಗ್ಯಗಳನ್ನು ಅನುಭವಿಸುವದೇ ಐಶ್ವರ್ಯವಂತರ ದರ್ಶನವಾಗಿದೆ. ಎಂಬ ಭಾವನೆಯು ಪ್ರಕೃತ ಸಂಪನ್ನವರ್ಗದ ಬಹುಪಕ್ಷದವರಲ್ಲಿರುವದರಿಂದ ಇಂಥವರ ಮೇಲೆ ಅವರ ದ್ರವ್ಯಾನುಕೂಲತೆಗಳ ವಿಚಾರದಿಂದ ಮಾತ್ರ ಮುನ್ಸಿಪಲ್ ಆಡಳಿತೆಯ ಜವಾಬ್ದಾರಿಯನ್ನು ವಿಶೇಷವಾಗಿರಿಸುವದು ಉಚಿತವೆಂತ ತೋರಿಬಾರದು. ಚುನಾವಣೆ ಕಾಲಗಳಲ್ಲಿ ಲಂಚ ಮೊದಲಾದ ಅನರ್ಥಗಳು ಕಂಡು ಬರುವ ಪಕ್ಷದಲ್ಲಿ ಇಂಥಾ ಅನರ್ಥಗಳನ್ನುಂಟು ಮಾಡುವಂಥವರನ್ನು ತಕ್ಕ ಶಿಕ್ಷೆಯಿಂದ ತಿದ್ದಬೇಕು. ಮತ್ತು ಜನಸಾಮಾನ್ಯರಲ್ಲಿ ಮುನ್ಸಿಪಲ್ ಆಡಳಿತೆಯ ವಿಚಾರವು ಸರಿಯಾಗಿ ಉಂಟಾಗುವಂತೆ ಇವರಿಗೆ ತಕ್ಕ ಶಿಕ್ಷಣದ ಏರ್ಪಾಡನ್ನು ಮಾಡಬೇಕು. ಆಗ್ಯೆ ಅನರ್ಥಗಳಿಗೆ ಆಸ್ಪದವು ಕಡಿಮೆಯಾಗುವದು. ಐದಾರು ವರುಷಗಳ ಹಿಂದೆ ಮುನ್ಸಿಪಲ್ ಚುನಾವಣೆಗಳ ನಿಯಮಗಳನ್ನು ತಿದ್ದುವ ವಿಷಯವು ಸರಕಾರದವರ ಪರ್ಯಾಲೋಚನೆಯಲ್ಲಿತ್ತು. ಈಗಿನ ಹೊಸ ನಿಯಮಗಳಷ್ಟೇ ನಿಕೃಷ್ಟವಾದ ನಿಯಮಗಳನ್ನು ಆಗ್ಯೆ ಸಹ ಮಾಡಿದ್ದರು. ಆದರೆ ಇವುಗಳ ಜ್ಯಾರಿಯನ್ನು ನಡಿಸಲು ಅನುಕೂಲವಾಗಲಿಲ್ಲ. ಪುನಹ ಈ ಪ್ರಸ್ತಾಪವನ್ನು ಸರಕಾರದವರು ತಮ್ಮ ಲಕ್ಷ್ಯಕ್ಕೆ ತಂದಿರುವರು. ಈ ಸಲ ಸಹ ಸರಕಾರದವರು ಸೂಚಿಸಿರುವ ತಿದ್ದುಪಡಿಯು ಬಹಳ ನಿಕೃಷ್ಟವಾಗಿದೆ. ದ್ರವ್ಯಾನುಕೂಲತೆಯ ವಿಚಾರದಿಂದ ಓಟು ಕೊಡುವವರ ಮತ್ತು ಮೆಂಬರುತನಕ್ಕೆ ಉಮೇದ್ವಾರರಾಗಿರುವವರ ಸಂಖ್ಯೆಯನ್ನು ತಗ್ಗಿಸುವದರಲ್ಲಿ ಪ್ರಜಾಜನರ ಸಮ್ಮತಿಯು ಎಂದೂ ಇರದು. ಚುನಾವಣೆಗಳಲ್ಲಿ ಪ್ರಕೃತ ಪ್ರಾಪ್ತಿಸುವ ಅನರ್ಥಗಳ ಮಾತು ಹಾಗಿರಲಿ. ಮುನ್ಸಿಪಲ್ ಕೌನ್ಸಿಲುಗಳಿಗೂ ಇತರ ಲೋಕಲ್ ಬೋರ್ಡುಗಳಿಗೂ ಸರಕಾರದವರು ಮೆಂಬರರನ್ನು ನೇಮಿಸುವರು. ಪ್ರಜೆಗಳಲ್ಲಿ ಈ ಪದವಿಗಳಿಗೆ ಯೋಗ್ಯರು ಯಾರೆಂತ ಅರಿಸುವ ಅನುಕೂಲವು ಸರಕಾರದವರಿಗೆ ತುಂಬಾ ಇದೆ. ಆದರೆ ಸರಕಾರದವರಿಂದಾಗುವ ಈ ನೇಮಕಗಳು ಸಹ ಅನೇಕ ಸಂದರ್ಭಗಳಲ್ಲಿ ಬಹಳ ಅತೃಪ್ತಿಕರವಾಗಿರುತ್ತವೆ. ಇಂಥಾ ನೇಮಕಗಳನ್ನು ಎಲ್ಲಾ ಸಂದರ್ಭಗಳಲ್ಲಿಯೂ ತೃಪ್ತಿಕರವಾದ ರೀತಿಯಲಿ ಮಾಡಿ ಪ್ರಜಾ ಜನರಿಗೆ ಈ ವಿಷಯಗಳಲ್ಲಿ ಸರಿಯಾದ ಮಾರ್ಗವನ್ನು ಸೂಚಿಸುವದ ಆಗತ್ಯ ಕಾಣುವದಲ್ಲದೆ ಚುನಾವಣೆಗಳ [illegible] ನಮಗೆ ತೋರದು.

ಕಾಲವಿಳಂಬ ನಿಗ್ರಹ.

ಕಳೆದ ಸಂಚಿಕೆಯಿಂದ ಮುಂದರಿಸಿದುದು

~~~~~~

ಕೋಓಪರೆಟಿವ್ ಸ್ಟೋರುಗಳ ಸಾಮ್ಯತೆ – ಮೇಲೆ ಹೇಳಿದ ಸೂಚನೆಯು ಸಹಕಾರ ಸಂಸ್ಥೆಗಳಿಗೆ ನೂತನವಾದ್ದಲ್ಲ. ಪ್ರತಿಕೃತ್ಯಕ್ಕೆ ಬೇಕಾಗಿರುವ ಸಾಮಗ್ರಿಗಳನ್ನು ವಗೈರೆ ಒದಗಿಸಿ ಕೊಡಲಿಕ್ಕೆ ಏರ್ಪಟ್ಟ ಸಂಸ್ಥೆಗಳಲ್ಲಿ ಇದರ ಗುಟ್ಟು ಗೂತ್ತಾಗಿದೆ. ಸಾಮಾನನ್ನು ಸಾಧ್ಯವಿದ್ದಷ್ಟು ಅಗ್ಗವಾಗಿ ಕೊಂಡುಕೊಂಡರೂ ಇಂಥ ಸಂಸ್ಥೆಗಳಲ್ಲಿ ಬಾಜಾರಿ ದರಕ್ಕಿಂತ ಕಡಿಮೆಯಾಗಿ ಅದನ್ನು ವಿಕ್ರಯಿಸುವುದಿಲ್ಲ. ಮೆಂಬರರು ಸ್ಥಳೀಯ ದರಗಳನ್ನೇ ತೆರಬೇಕಾಗುತ್ತದೆ. ಆದರೆ ಈ ಸ್ಟೋರಿನ ಮನಾಫೆಗೆ ಅವರು ಹಕ್ಕುದಾರರಾಗುತ್ತಾರೆ. ಅಂಥ ಮುನಾಫೆಯನ್ನು ಅದನ್ನು ಕೊಂಡುಕೊಂಡಾಗಲೇ ತೆರುವ ಬೆಲೆಯಲ್ಲಿ ವಜಾ ಮಾಡುವುದಿಲ್ಲ, ಆದರೆ ವರ್ಷಂಪ್ರತಿ ಅವನು ನಗದಾಗಿ ಪಡೆದ ಸಾಮಾನಿನ ಬೆಲೆಯ ದಾಮಾಶಾಯಲ್ಲಿ ವರ್ಷಾಂತ್ಯಕ್ಕೆ "ಬೋನಸ್" (ಮುನಾಫೆ)ಯಾಗಿ ಸಿಕ್ಕುವುದು. ಹೀಗೆ ಬೋನಸ್ ಕೊಡುವುದೇ ಹಲವು ಮಟ್ಟಿಗೆ ಇಂತಹ ಸಂಸ್ಥೆಗಳು ನೆಲೆಗೊಳ್ಳುವುದಕ್ಕೆ ಸಹಾಯಕವಾಗಿದೆ. ಇದರಿಂದ ಮೆಂಬರರು ತಮ್ಮ ಸ್ಟೋರಿನಿಂದಲೇ ಸಾಮಾನು ಕೊಂಡುಕೊಳ್ಳುವುದಕ್ಕೆ ಉತ್ಸುಕತೆ ತೋರಿಸುವುದಲ್ಲದೆ ಮಿತವ್ಯಯವನ್ನೂ ವಿವೇಕವನ್ನೂ ಕಲಿತುಕೊಳ್ಳುತ್ತಾರೆ. ಅಂಥ ಸಾಮುಗ್ರಿಗಳನ್ನು ಏನ್‌ಖರೀದಿಗೆನೆ ವಿಕ್ರಯಿಸಿದರೂ ಅಥವಾ ಸಾಮಾನು ಪಡಕೊಂಡ ಒಡನೆಯೇ ಅದರ ಲಾಭವನ್ನು ವಜಾ ಮಾಡಿದರೂ ಅಂಥ ಲಾಭವು ಅತಿ ಅಲ್ಪವಾಗುವದರಿಂದ ಅಷ್ಟು ಫಲಕಾರಿಯಾಗುತ್ತಿರಲಿಲ್ಲ. ಬಾಡಿಗೆಗಾಗಿ ಮನೆಗಳನ್ನು ಕಟ್ಟಿಸುವ ಸಂಘಗಳಲ್ಲಿಯೂ ಇದೇ ಕ್ರಮವು ಜಾರಿಯಲ್ಲಿದೆ. ಸ್ಥಳೀಯ ದರಗಳಲ್ಲಿ ಮೆಂಬರರಿಗೆ ಬಾಡಿಗೆಯನ್ನು ಹೊರಿಸಿದರೂ ಕ್ಲಪ್ತ ಕಾಲದಲ್ಲಿ ಬಾಡಿಗೆಯ ಹಣವನ್ನು ತೆತ್ತ ಹಣದ ದಾಮಾಶಾಯದಲ್ಲಿ ಅವರಿಗೆ ವರ್ಷದ ಮುನಾಫೆಯನ್ನು ಹಂಚಿ ಹಾಕುತ್ತಾರೆ. ಇದೇ ರೀತಿಯಲ್ಲಿ ಸ್ಥಳೀಯ ದರಗಳಲ್ಲಿಯೇ ಈ ಪರಸ್ಪರ ಸಹಾಯದ ಲೇವಾದೇವಿ ಸಂಘಗಳಲ್ಲಿ ಬಡ್ಡಿಯನ್ನು ಹೊರಿಸಿ, ಕ್ಲಪ್ತಕಾಲದಲ್ಲಿ ಹಣ ವಸೂಲು ಕೊಡುವವರಿಗೆ "ಬೋನಸ್" ಕೊಡುವುದು ಯಾಕಾಗದು? ಹೀಗೆ ಮಾಡುವುದರಿಂದ ಕಾಲತಪ್ಪುವ ದುರಭ್ಯಾಸವು ಕಡಿಮೆಯಾಗುವುದಲ್ಲದೆ, ಕೆಲವು ಲೇವಾದೇವಿ ಸಂಘಗಳು ಒತ್ತಾಯದಿಂದ ಠೇವಣಾತಿಗಳನ್ನು ಒದಮಾಡಿ ಮಿತವ್ಯಯವನ್ನು ಕಲಿಸುವ ಕ್ರಮಕ್ಕಿಂತ ಈ ಕ್ರಮವು ಬೇಗನೇ ಮಿತವ್ಯಯವನ್ನು ಕಲಿಸಿದ ವುದು.

ಕಾಲಹರಣಕ್ಕೆ ಮದ್ದು — ಕಾಲಕ್ಲಪ್ತತೆಯನ್ನು ಉತ್ತೇಜಿಸುವುದಲ್ಲದೆ ಕಾಲಹರಣ ಮಾಡುವವರನ್ನು ಶಿಕ್ಷಾರ್ಹರಾಗಿ ಮಾಡಿ ಕಾಲವಿಳಂಬವನ್ನು ಅಣಗಿಸಬೇಕು. ಸಾಮಾನ್ಯವಾಗಿ ರೂಢಿಯಲ್ಲಿರುವಂತೆ ದಂಡದ ಬಡ್ಡಿಯನ್ನು ಹೊರಿಸುವುದು, ಇನ್ನು ಮುಂದೆ ಸಾಲಕೊಡದಿರುವುದು, ಅಥವಾ ಮೆಂಬರಿಕೆಯನ್ನು ರದ್ದು ಮಾಡುವುದು, ಇವೇ ಮೊದಲಾದ ಶಿಕ್ಷೆಗೆ ಅವರನ್ನು ಗುರಿಪಡಿಸಬಹುದು. ಯಾವ ಬಗೆಯ ದಂಡನೆಯನ್ನು ಹೊರಿಸಿದರೂ ಅಂಥ ದಂಡನೆಯನ್ನು ಜಾರಿಗೆ ತರುವ ಸಾಮರ್ಥ್ಯವು ಸಂಘಕ್ಕೆ ಇರಬೇಕು. ಆದರೆ ವಾಯಿದೆ ತಪ್ಪಿದವನ ಮೇಲೆ ಹೊರಿಸುವ ದಂಡನೆಯ ಶರ್ತಗಳನ್ನು ಒಳಪಡಿಸಿ ಸಂಘದವರು ವ್ಯಾಜ್ಯ ಮಾಡಿದ್ದಲ್ಲಿ, ಹಲವು ಸಾರಿ ಅಂಥ ದಂಡನೆಯ ಶರ್ತಗಳಿಗೆ ಒಳಪಟ್ಟು ಫೈಸಲು ಮಾಡುವುದಕ್ಕೆ ಕೋರ್ಟಿನವರು ಒಪ್ಪದಿರುವುದರಿಂದ ವಾಯಿದೆ ತಪ್ಪುವವರು ಖಾಸಗಿಯಿಂದ ಲೇವಾದೇವಿ ಲೆಕ್ಕವನ್ನು ತೀರಿಸುವುದಕ್ಕಿಂತಲೂ ಕೋರ್ಟಿನ ಮೂಲಕ ತೀರಿಸುವುದಕ್ಕೆ ಸಂತೋಷಪಡುವುದುಂಟು. ಸ್ಥಳೀಯ ಸರಕಾರದವರು ಕೊಓಪರೇಟಿವ್ ಆಕ್ಟಿನ ೪೩ನೇ ಸೆಕ್ಷನ್ ಮೇರೆಗೆ ತಮಗಿರುವ ಅಧಿಕಾರವನ್ನು ಅನುಸರಿಸಿ ಈಗಿನ ಕಾನೂನಿನಲ್ಲಿ ಅಗತ್ಯವಿರುವ ಬದಲಾವಣೆಗಳನ್ನು ಮಾಡುವುದು ಅಗತ್ಯ.

ಪರಿಹಾರಕ್ಕಿಂತಲೂ ಪ್ರತಿಬಂಧಕವೇ ಲೇಸು. ಶಿಕ್ಷಾರೂಪವಾದ ಯಾವುದೊಂದು ಕಾಯಿದೆಯು ಜನರಿಗೆ ಹಿತವಾಗಿಲ್ಲ. ಅಂಥ ಕಾನೂನಿನ ಪೀಡನೆಗೆ ಒಳಪಡುವ ಮೆಂಬರುಗಳಲ್ಲಿ ವೈಮನಸ್ಸೂ, ಆ ಕಾಯಿದೆಯನ್ನು ಜಾರಿಗೆ ತರುವುದಕ್ಕೆ ಅಧಿಕಾರಿಗಳಿಗೆ ಒಂದು ಬಗೆಯ ಅಸಮಾಧಾನವೂ ದಾಕ್ಷಿಣ್ಯವೂ ಉಂಟಾಗುತ್ತದೆ. ಇದಲ್ಲದೆ ಕಾಲವಿಳಂಬವೇ ಸಾಮಾನ್ಯ ವಾಡಿಕೆಯಾಗಿರುವಲ್ಲಿ ಆ ನಿಬಂಧನೆಗಳೂ ನಿಷ್ಪ್ರಯೋಜಕವಾಗಿವೆ. ಹಲವು ತಲಾಂತರಗಳಿಂದ ಸಾಹುಕಾರರು ನಿರ್ದಾಕ್ಷಿಣ್ಯದಿಂದ ಸೆಳೆಯುವ ವಿಶೇಷ ಬಡ್ಡಿಯೇ ವಾಡಿಕೆಯಾಗಿದ್ದ ಜನರನ್ನು ಬರೆ ದಂಡನೆ ಬಡ್ಡಿಯನ್ನು ವಿಧಿಸುವುದರಿಂದ ಎಚ್ಚರಿಸಬಹುದೆಂದು ತಿಳಿಯಲಾಗದು. ಇನ್ನು ಮುಂದೆ ಸಾಲಕೊಡುವುದಕ್ಕೇ ನಿಲ್ಲಿಸಿಬಿಟ್ಟರೆಂದರೆ ಆ ಜನರನ್ನು ಆಗಲೇ [illegible] ದಾಕ್ಷಿಣ್ಯರಹಿತರಾದ ಬನಿಯಾರರ ಬಾಯಿಗೆ ತುತ್ತಾಗುವಂತೆ ಮಾಡುವುದಾಯಿತು. ಆದ್ದರಿಂದ ಕಾಲವಿಳಂಬವನ್ನು ಶಿಕ್ಷಿಸಬೇಕಾಗಿದ್ದರೂ ಕಾಲಕ್ಲಪ್ತತೆಯನ್ನು ಆದರೊಂದಿಗೆ ಎಲ್ಲಾ ವಿಧದಿಂದಲೂ ಉತ್ತೇಜಿಸಬೇಕು. ಇದಕ್ಕೆ ಪರಿಹಾರಕ್ಕಿಂತಲೂ ಪ್ರತಿಬಂಧಕವೇ ಲೇಸು, ಎಂಬ ನಾಣ್ಣುಡಿಯೇ ದೃಷ್ಟಾಂತವಾಗಿದೆ. ಲೇಣೆದಾರನು ಕಾಲತಪ್ಪದಂತೆ ಪಂಚಾಯತರು ಬಹು ವಿದದಿಂದ ಎಚ್ಚರವಿರಬೇಕು. ಸಾಲದ ತಗಾದೆಗಳನ್ನು ಕೂಲಂಕುಶವಾಗಿ ಪರಿಶೀಲಿಸಿ, ಆ ಸಾಲವನ್ನು ಪಡೆದ ಉದ್ದೇಶಕ್ಕೇನೇ ಆ ಹಣವು ಉಪಯೋಗಿಸಲ್ಪಡುತ್ತದೋ ಎಂದು ನೋಡುವುದಲ್ಲದೆ, ದುರ್ವಿನಿಯೋಗ ಮಾಡಿದವರನ್ನು ದಂಡಿಸಬೇಕು. ಲೇಣೆದಾರನಿಗೆ ವಾಯಿದೆಯ ಸಾಮೀಪ್ಯವನ್ನು ಸೂಚಿಸಿ ಅಗಾಗ ನೋಟೀಸು ಕೊಡಬೇಕು. ಇದಲ್ಲದೆ ಅವನ ಬಗ್ಗೆ ಜಾಮೀನುದಾರರು ವಹಿಸಿರುವ ಜವಾಬ್ದಾರಿಯನ್ನು ಅವರಿಗೆ ಸ್ಪಷ್ಟಗೊಳಿಸಬೇಕು.

ಜಾಮೀನುದಾರರೂ ಅವರ ಕರ್ತವ್ಯಗಳೂ. ಪರಸ್ಪರ ಸಹಾಯ ಸಂಘಗಳಲ್ಲಿ ಜಾಮೀನುದಾರರಿಗೆ ಎರಡು ಬಗೆಯ ಜವಾಬ್ದಾರಿಗಳಿವೆ. ಸಾಲಗಾರನು ವಾಯಿದೆ ತಪ್ಪುವುದರಿಂದ ಸಂಘದ ಕೆಲಸಗಳಿಗೆ ಅಡ್ಡಿಬಾರದಂತೆಯೂ ಸಾಲಗಾರನು ಅವಿಚಾರಿಯಾಗದಂತೆಯೂ ನೋಡಿಕೊಳ್ಳುವುದು ಅವರ ಕೆಲಸ. ಅಗತ್ಯವಿದ್ದ ಹಣಕ್ಕಿಂತ ಹೆಚ್ಚಿಗೆ ಸಾಲ ಪಡಕೊಳ್ಳದಂತೆಯೂ, ಯಾವ ನಿಮಿತ್ತವಾಗಿ ಸಾಲ ಪಡೆದಿರುವನೋ ಅದಕ್ಕೆ ಉಪಯೋಗಿಸದೆ ದುರ್ವಿನಿಯೋಗ ಮಾಡದಂತೆಯೂ ಜಾಮೀನುದಾರರು ಆತನಿಗೆ ಬುದ್ಧಿ ಹೇಳಬೇಕು, ಮತ್ತು ಅವನು ದುಡಿಯುವ ಹಣದಲ್ಲಿ ಹೇಗಾದರೂ ಒಂದಿಷ್ಟು ಉಳಿಸುವಂತೆ ಒತ್ತಾಯಪಡಿಸಿ ಸಾಲವನ್ನಾಗಲಿ ಅದರ ಕಂತುಗಳನ್ನಾಗಲಿ ಕ್ಲಪ್ತ ಸಮಯದಲ್ಲಿ ತೆರಲಿಕ್ಕೆ ಮೆಲ್ಲಗೆ ಸಾಧ್ಯವಾಗುವಂತೆ ಅವರು ಪ್ರಯತ್ನಿಸಬೇಕು. ಜಾಮೀನುದಾರರು ಸಾಲಪಡೆದವರನ್ನು ನೋಡಿಕೊಳ್ಳುವ ಕಣ್ಣುಗಳಂತಲೂ, ಕ್ರಮತಪ್ಪದಂತೆ ಅವರನ್ನು ಎಚ್ಚರಿಸುವ ನಾಲಗೆಗಳೆಂತಲೂ ವುಲ್ಫ್ ಎಂಬ ಪಂಡಿತರೊಬ್ಬರು ಹೇಳುತ್ತಾರೆ. ಜಾಮೀನುದಾರರು ತಮ್ಮ ಜವಾಬ್ದಾರಿಯನ್ನು ಚೆನ್ನಾಗಿ ತಿಳಿಯದಿದ್ದರೆ ಈ ಎರಡು ಕೆಲಸಗಳು ಸರಿಯಾಗಿ ನಡೆಯಲಾರವು. ಸಾಲ ಪಡೆದವನಿಂದ ಸಾಲದ ಹಣವನ್ನು ವಸೂಲು ಮಾಡುವುದಕ್ಕೆ ಮಾಡಿದ ಪ್ರಯತ್ನಗಳೆಲ್ಲ ನಿಷ್ಫಲವಾದ ಸಂದರ್ಭದಲ್ಲಿ ಮಾತ್ರವೇ ಆ ಹಣಕ್ಕೆ ತನ್ನ ಜವಾಬ್ದಾರಿಯು ಎದುರು ಬರುತ್ತದೆಂದು ಜಾಮೀನುದಾರರು ತಿಳಿದುಕೊಂಡರೆ ಸಂಘದ ಕಾರ್ಯನಿರ್ವಾಹಕ್ಕೆ ಅದು ಬಾಧಕಕರವೆಂದು ಎಣಿಸಬೇಕು. ಸಾಲವನ್ನು ತೆರುವ ವಾಯಿದೆ ತಪ್ಪಿದೊಡನೆ ಜಾಮೀನುದಾರರಿಗೆ ಆ ಕುರಿತು ನೋಟಿಸು ಕೊಟ್ಟು, ಅವರೇ ಸಾಲ ಪಡೆದವರಾಗಿದ್ದರೆ ಸಾಲದ ಹಣವನ್ನು ತೆರುವುದಕ್ಕೆ ಎಷ್ಟು ಬಲತ್ಕಾರ ಮಾಡಬೇಕಾಗಿತ್ತೋ ತದ್ರೀತಿಯಿಂದಲೇ ಅವರಿಗೆ ಬಲವಂತ ಪಡಿಸಬೇಕು. ಸಂಘದ ಕಾರ್ಯಾರಂಭದಲ್ಲಿ ಜಾಮೀನದಾರರು ತಮ್ಮ ಜವಾಬ್ದಾರಿಯು ಎಷ್ಟಿದೆ ಎಂದು ಕಣ್ಣಿಟ್ಟಿರುವುದಿಲ್ಲ.

ಆದರೆ ಅವರ ಅಶ್ರದ್ಧೆಯು ಅವರಿಗೆನೆ ನಷ್ಟಕ್ಕೆ ಕಾರಣವಾಗುವುದೆಂದು ತಿಳಿದಾಗ ಅವರು ಜಾಗರೂಕರಾಗಿರುತ್ತಾರೆ. ಆಗ ಹಿಂದು ಮುಂದು ನೋಡದೆ ಸಾಲಕ್ಕೆ ಹೊಣೆಯಾಗುವ ಪದ್ಧತಿಯು ನಿಂತುಹೋಗುವುದಲ್ಲದೆ, ಸಾಲ ಪಡೆಯುವವನು ಪ್ರಾಮಾಣಿಕನೆಂದೂ ಅಂಥವನನ್ನು ಮಿತವ್ಯಯ ಮತ್ತು ವಿಚಾರಶೀಲತೆಯ ಮಾರ್ಗಕ್ಕೆ ತರುವುದು ಸಾಧ್ಯವೆಂದೂ ದೃಢನಂಬಿಗೆ ಇದ್ದ ವಿನಹಾ ಯಾರೊಬ್ಬನೂ ಜಾಮೀನುದಾರನಾಗಲಿಕ್ಕೆ ಮುಂದರಿಸನು.

ಸಾಲ ಪಡೆಯುವವರನ್ನು ಒಳ್ಳೆ ದಾರಿಗೆ ತಿದ್ದಿ ತರುವಷ್ಟು ಅನುಕೂಲತೆಯಿಲ್ಲದ ಯಾವುದೊಂದು ಸಂಘವೂ ಪರಸ್ಪರ ಸಹಾಯ ಸಂಘವೆಂದೆನ್ನಿಸಿಕೊಳ್ಳಲಾರದು; ಮತ್ತು ಜಾಮೀನುದಾರರಾಗುವವರು ತಮ್ಮ ಜವಾಬ್ದಾರಿಯನ್ನು ಚೆನ್ನಾಗಿ ತಿಳಿದ ವಿನಹ, ಯಾವುದೊಂದು ಸಂಘದ ಲೇಣೆದಾರನೂ ಅಗತ್ಯವಿರುವ ತಿಳುವಳಿಕೆಯನ್ನು ಹೊಂದಲಾರನು. ಅವರು ತಮ್ಮ ಕರ್ತವ್ಯವನ್ನು ಬಲ್ಲವರಾದರೆ, ಅಗತ್ಯದ ಮೊಬಲಗಿನಗಿಂತ ಹೆಚ್ಚಿಗೆ ಸಾಲಕೇಳದ ಹಾಗೂ ಪಡೆದ ಹಣವನ್ನು ದುರ್ವಿನಿಯೋಗ ಮಾಡದ ಹಾಗೂ ವಾಯಿದೆಗೆ ಸಾಲ ಪರಿಹಾರ ಮಾಡುವ ಹಾಗೂ ಅವರು ಲೇಣೆದಾರನನ್ನು ಬಲವಂತಪಡಿಸುವರು. ಹೀಗೆ ಎಚ್ಚರವೂ ವಿವೇಚನವೂ ಕೂಡಿದ ಜಾಮೀನುದಾರರಿಂದ ಲೇಣೆದಾರರಿಗೆ ಹಲವು ಬಗೆಯಿಂದ ಹಿತವುಂಟಾಗುವುದು. ಹೀಗೆ ಪರಸ್ಪರ ಮೈತ್ರಿಯುಂಟಾಗಿ ಅದರಿಂದ ಇಡೀ ಸಂಘದಲ್ಲಿ ಸಹಕಾರ ಬುದ್ಧಿಯು ತೋರಿಬರುವುದಲ್ಲದೆ, ಅಂತೆ ಸಂಘದ ಸ್ಥಿತಿಯು ವೃದ್ಧಿಯಾಗುತ್ತ ಬಂದು ಆಕಡೆಗೆ ಆ ಸಂಘದ [illegible] ಬೆಳೆಯುತ್ತ ಬರುವುದು.
~~~~~~

ಸಂಘಗಳ ಮೇಲ್ವಿಚಾರ—ಸಹಕಾರ ಯಂತ್ರವನ್ನು ನಡಿಸುವ ಪಂಚಾಯ ಗಳ್ಳುಗರಲ್ಲವಾದರೆ ಅದು ಸರಿಯಾಗಿ ಕೆಲಸ ಮಾಡಲಾರದು. ಲೇಣೆದಾರರು ಬದ ತಪ್ಪದಿರುವುದಕ್ಕೆ ಇವರ ಜಾಗರೂಕತೆಯೇ ಕಾರಣವಾಗಿದೆ. ಶಿಥಿಲತೆಯು ಮ ಸಲ ತಲೆದೋರಿತೆಂದರೆ. ಅದು ಇಡೀ ಸಂಘದಲ್ಲಿ ಬಲುಬೇಗನೇ ಹೆಚ್ಚಿಕೊಳ್ಳು ವು. ಹೀಗಾಗಿ ತಕ್ಕ ವಿಚಾರವಿಲ್ಲದೆ ಸಾಲಗಳನ್ನು ಕೊಡುವುದೂ, ಕೊಟ್ಟ ಸಾಲ ವು ಕ್ಲಪ್ತ ಸಮಯದಲ್ಲಿ ವಸೂಲು ಮಾಡದಿರುವುದೂ ಇವೇ ಶಿಥಿಲತೆಯ ಕುರುಹು ಗಳು. ಸಾಲ ತೆರುವುದಕ್ಕೆ ಕ್ಲಪ್ತಕಾಲ ಮಾಡುವ ಅಶ್ರದ್ಧೆಗೆ ಹಲವು ಸಲ ತಾವೇ ಬಲಿಬಿದ್ದ ಪಂಚಾಯತರು ಇತರರಲ್ಲಿ ಆ ವಿಚಾರವನ್ನು ನಡಿಸುವುದಕ್ಕೆ ಪಾತ್ರರಾಗುವು ದಿಲ್ಲ. ಈ ರೀತಿಯಾಗಿ ಸಂಘಕ್ಕೆ ವ್ರಣಬಿದ್ದು ಅದು ಕೊಳೆಯದ ಹಾಗೆ ನೋಡಿ ಕೊಳ್ಳುವುದಕ್ಕೆ ಹೊರಗಿನ ಮೇಲ್ವಿಚಾರ ಅಗತ್ಯವಿದೆ. ಜರ್ಮನ್ ದೇಶದ ಸಂಘಗಳ ಲ್ಲಿ ಮೂರು ತಿಂಗಳಿಗೊಮ್ಮೆ ಪಂಚಾಯತರ ಕಾರ್ಯನಿರ್ವಾಹವನ್ನು ಪರಿಶೀಲಿಸುವ ಮೇಲ್ವಿಚಾರ ಸಭೆಯೊಂದು ಇದೆ. ಇಂಥ ಸಭೆಗಳನ್ನು ಏರ್ಪಡಿಸುವುದಕ್ಕೆ ತಕ್ಕ ಜನ ರು ಅತಿ ವಿರಳವಾಗಿರುವುದರಿಂದ ಅಂಥ ಸಭೆಗಳನ್ನು ಈಗೀಗಲೇ ಏರ್ಪಡಿಸಲು ಸಾಧ್ಯ ವಾಗಲಾರದು. ಆದರೆ ಅಂಥಾ ಮೇಲ್ವಿಚಾರವನ್ನು ಈಗ ತತ್ಕಾಲಕವಾಗಿ ಪ್ರತಿ ಯೊಂದು ಸಂಸ್ಥಾನದಲ್ಲಿಯೂ ರಿಜಿಸ್ತ್ರಾರರೂ ಅವರ ಕೈಕೆಳಗಿನ ಇತರ ಅಧಿಕಾರಿಗಳೂ ವಹಿಸಿದ್ದಾರೆ. ಆದರೆ ದಿನದಿನೆ ಕೆಲಸವೂ ಸಂಘಗಳ ಸಂಖ್ಯೆಯೂ ಹೆಚ್ಚಾಗುತ್ತ ಬರು ವುದರಿಂದ ಅಂಥ ಮೇಲ್ವಿಚಾರವನ್ನು ಸಮಾಧಾನಕರವಾದ ರೀತಿಯಲ್ಲಿ ಮಾಡುವುದು ರಿಜಿಸ್ತ್ರಾರರಿಗೂ ಅವರ ಕೈಕೆಳಗೆ ಬಹು ಕಡಿಮೆಯಾಗಿರುವ ಈಗಿನ ಸಿಬ್ಬಂದಿಗೂ ಸಲ ಭೆಸಾಧ್ಯವಲ್ಲವಾದ್ದರಿಂದ, ಆ ಕೆಲಸವನ್ನು ತೀರಾ ವಹಿಸಿಕೊಳ್ಳುವುದಲ್ಲವಾದರೂ ಆ ಸಿಬಂದಿಗೆ ಸಹಾಯಕರಾಗಿ ಕೆಲಸ ನಡೆಸುವ ಹೊಸ ಸಿಬಂದಿಯನ್ನು ಏರ್ಪಡಿಸುವುದು ಅಗತ್ಯವಿದೆ. ಹಲವು ಸಂಘಗಳು ಕೂಡಿ ಉಂಟಾದ ಒಂದು ಯೂನಿಯನಿನಿಂದ ನೇಮ ಕವಾದ ಸಿಬಂದಿಯು ರಿಜಿಸ್ತ್ರಾರರ ಅಧಿಕಾರಕ್ಕೆ ಒಳಪಟ್ಟ ಸಂಘಗಳ ಲೆಕ್ಕ ತನಿಖೆ ಯನ್ನು ಮಾಡುವುದು ಒಂದು ಒಳ್ಳೆ ಉಪಾಯ ಮಾತ್ರವಲ್ಲ; ಆ ಪರಿಮುಖವಾಗಿ ಹಲವರು ತರಬೇತಾಗಿ ಸಹಕಾರ ಜ್ಞಾನವುಳ್ಳವರ ಸಂಖ್ಯೆಯೂ ಹೆಚ್ಚುತ್ತ ಬರುವುದು. ಮಧ್ಯ ಶೀಮೆಯಲ್ಲಿಯೂ (Central Provinces) ಈ ಕ್ರಮವು ಈಚೆಗೆ ಜಾರಿ ಗೆ ಬಂದಿದೆ; ಮತ್ತು ಬಿಹಾರ, ಒರಿಸ್ಸೆ ಸೀಮೆಯ ರಿಜಿಸ್ತ್ರಾರರು ಇದನ್ನು ವಿಶೇಷ ವಿಚಾರಶೀಲತೆಯಿಂದ ಏರ್ಪಡಿಸಿದ್ದಾರೆ. ಇದರ ಪರಿಣಾಮವನ್ನು ಎಲ್ಲ ಕಡೆಗಳಲ್ಲಿ ಕಾಯುತ್ತಲಿದ್ದಾರೆ, ಆದರೂ ಇತರ ಸೀಮೆಗಳೂ ಈ ವಿಷಯದಲ್ಲಿ ನಿಗಾ ಕೊಡು ವುದು ಅಗತ್ಯ.

ಸಂಗ್ರಾಮದ ಕ್ರಮ ಹೇಗೆ—ಹಿಂದೆ ಹೇಳಿದ್ದನ್ನೆ ಸಂಕ್ಷೇಪವಾಗಿ ಪುನಃರುಚ್ಚ ರಿಸುವುದಾದರೆ ಕಾಲವಿಳಂಬದ ದುರ್ಗುಣವನ್ನು ನಿಗ್ರಹ ಮಾಡುವುದಕ್ಕೆ ಕಾಲಕ್ಲಪ್ತತೆ ಯನ್ನು ತಕ್ಕ ರೀತಿಯಿಂದ ಮನ್ನಿಸುವುದು, ವಾಯಿದೆ ತಪ್ಪುವುದನ್ನು ದಂಡಿಸುವುದು, ಜಾಮೀನುದಾರರಿಗೆ ತಮ್ಮ ಜವಾಬ್ದಾರಿಗಳ ನೆನಪು ಹುಟ್ಟಿಸುವುದು. ಆಡಳಿತೆಯನ್ನು ಉನ್ನತಿಕೆಗೆ ತರುವುದು, ಸಂಘಗಳ ಮೇಲೆ ಯೋಗ್ಯ ರೀತಿಯಿಂದ ಮೇಲ್ವಿಚಾರ ನಡೆ ಸುವುದು ಮುಂತಾದ ಹಲವು ಅಸ್ತ್ರಶಸ್ತ್ರಗಳನ್ನು ಉಪಯೋಗಿಸಬೇಕು. ಇವೆಲ್ಲವನ್ನು ಎಡೆಬಿಡದೆ ಏಕಪ್ರಕಾರವಾಗಿ ಉಪಯೋಗಿಸಬೇಕಲ್ಲದೆ ಯಾವುದೊಂದು ಕಡೆಯಲ್ಲಿ ಸ್ವಲ್ಪ ಉಪೇಕ್ಷೆ ಕಂಡು ಬಂದರೆ ಜಯಕ್ಕೆ ತೊಡಕು ಉಂಟಾಗುವುದು. ಈ ಸಂಗ್ರಾ ಮದಲ್ಲಿ ಸಂಪೂರ್ಣ ಜಯವನ್ನು ಕೊನೆಗಾಣಬೇಕಾದರೆ ಯಥೇಷ್ಟವಾದ ಅಸ್ತ್ರಶಸ್ತ್ರ ಗಳು ಮಾತ್ರವೇ ಅಲ್ಲ," ಕಿಚ್ನರ್ ಪ್ರಭುಗಳು ಜರ್ಮನರೊಡನೆ ಯುದ್ಧದ ವಿಷಯ ವಾಗಿ ಎಚ್ಚರಿಸಿದಂತೆ "ಮತ್ತೂ ಮತ್ತೂ ಯೋಧರು ಬೇಕು" ಇದಕ್ಕೆ ಜನರೆಲ್ಲ ಒಂದೇ ಸಲ ಮುಂದು ಬರಬೇಕಾಗಿ ನಾವು ಬಲಪಡಿಸುವುದಿಲ್ಲ, ಅದಕ್ಕೆ ಬದಲಾಗಿ "ಸ್ವೇಚ್ಛೆಯಿಂದ ಮುಂದು ಬರುವವರು ಬರಲಿ" ಎಂದು ಶಂಖನಾದವನ್ನು ಮಾಡು ತ್ತೇವೆ. ಈ ಸಂಗ್ರಾಮದಲ್ಲಿ ನಿಪುಣರಾದ ನಾಯಕರು ಮಾತ್ರವೇ ಅಲ್ಲ, ನಿರ್ಭೀತ ರಾಗಿ ಕೆಲಸವನ್ನು ಮಾಡಬಲ್ಲ ಮತ್ತು ಉತ್ಸಾಹದಿಂದ ತುಂಬಿತುಳುಕುವ ಅನೇಕಾ ನೇಕ ವೀರ ಸೈನಿಕರೂ ಬೇಕು.

ಸಹಕಾರ ಶಿಕ್ಷಣದ ಅಗತ್ಯ. ನಮ್ಮ ಜನರಿಗೆ ಸಹಕಾರವನ್ನು ಕುರಿತು ಒಳ್ಳೇ ಜ್ಞಾನವನ್ನು ಕೊಡಬೇಕು, ಸಹಕಾರ ತತ್ವಗಳನ್ನು ಬೋಧಿಸುವುದಕ್ಕೂ, ಅವುಗಳ ಲ್ಲಿ ಜನಸಾಮಾನ್ಯಕ್ಕೆ ಉತ್ಸಾಹ ಹುಟ್ಟಿಸುವುದಕ್ಕೂ, ಸಹಕಾರದ ಕೆಲಸಗಳಲ್ಲಿ ಜಯವನ್ನು ಕೊನೆಗಾಣಿಸುವುದಕ್ಕೂ ನಮಗೆ ಶಿಕ್ಷಣವು ಅಗತ್ಯ. ಆದ್ದರಿಂದ ಈಗ ಈ [illegible] ಕೈಕೊಳ್ಳಬೇಕೆಂದಿರುವವರೂ ಈ ಸಹ ಕಾರದ ತತ್ವಗಳನ್ನೂ ಉದ್ದೇಶಗಳನ್ನೂ ಚೆನ್ನಾಗಿ ಅರಿಯಬೇಕು. ಈ ಸಹಕಾರವು

ಜಯ ಹೊಂದಲಿಕ್ಕೆ ಇದರಲ್ಲಿ [illegible] ಪ್ರಯತ್ನಗಳೇ ಸಹಾಯಕವೆಂದೂ, ಯಾವನೊಬ್ಬನು ತನ್ನ ಪ್ರಯತ್ನಗಳಲ್ಲಿ [illegible] ಇದರ ಸಂಸ್ಥಾಪನೆಗೆ ಹಾನಿ ಬರಬಹುದೆಂದೂ ಅವರಿಗೆ ಚೆನ್ನಾಗಿ ಮನದಟ್ಟು ಮಾಡ ಬೇಕು. ಬರೇ ಓದುಬರಹ ಲೆಕ್ಕಗಳನ್ನು ಕಲಿಸಿದ ಮಾತ್ರದಿಂದಲೇ ಈ ಜ್ಞಾನವು ಹುಟ್ಟಲಾರದು. ವೂಲ್ಫ್ ಎಂಬ ಮಹಾ ಪಂಡಿತರೊಬ್ಬರು ಹೇಳಿದಂತೆ "ಬೇರೆ ಎಲ್ಲಾ ವಿಧಾನಗಳಿಂದ ದಾರಿದ್ರಪೀಡಿತರನ್ನು ಉಚ್ಛ್ರಾಯ ಸ್ಥಿತಿಗೆ ತರುವುದು ನಿಷ್ಫಲವಾದ್ದಲ್ಲಿ, ಅಂಥವರಿಗೆ ಕಾರ್ಯಗೌರವ, ಮಿತವ್ಯಯ, ಪಾನಾದಿಗಳಲ್ಲಿ ಮಿತಿ, ... ಮುಂ ತಾದುವುಗಳ ಮೂಲಕ ದಾರಿದ್ರ್ಯವಿಚ್ಛಿನ್ನರಾಗಿ ಮಾಡಿ, ಅವರನ್ನು ಸುಭಿಕ್ಷ, ಸಮೃದ್ಧಿಗೆ ತರುವುದಕ್ಕೆ ಸಹಕಾರ ಬುದ್ಧಿಯುಳ್ಳ ಜನರಿಂದ ಏರ್ಪಡಿಸಲ್ಪಟ್ಟು, ಸಹಕಾರದ ಸದ್ಗು ಣಗಳ ಅಭ್ಯಾಸದಿಂದ ಹಬ್ಬಿಕೊಳ್ಳುವ ಸಹಕಾರ ಶಿಕ್ಷಣವು ಅತಿ ಅಗತ್ಯವಾಗಿದೆ. ಎಂದು ಬೇರೆ ಹೇಳಬೇಕಾದ್ದಿಲ್ಲ.

ಪುತ್ತೂರು ಜೈನ ವಿದ್ಯಾರ್ಥಿಭವನ.

ಇಲ್ಲಿ ಜೈನ ವಿದ್ಯಾರ್ಥಿಭವನದ ಸ್ಥಾಪನೆಯ ಉತ್ಸವವು ಮೇ ತಿಂಗಳ ತಾ. 29 ನೇ ಮತ್ತು 30ನೇ ದಿವಸಗಳಲ್ಲಿ ಅತಿಸಂಭ್ರಮದಿಂದ ನೆರವೇರಿತು. ಡಿಪ್ಯುಟಿ ಕಲ್ಲೆಕ್ಟರವ ರಾದ ಮ. ರಾ. ರಾ. ಪಿ. ಸೀತಾರಾಮಯ್ಯನವರು ಅಧ್ಯಕ್ಷಪೀಠವನ್ನು ಅಲಂಕರಿಸಿ ದ್ದರು. ಅದಲ್ಲದೆ ಪುತ್ತೂರಿನ ಅನೇಕ ವಕೀಲರೂ ವರ್ಗದಾರರೂ, ಸಾಹುಕಾರರೂ, ಧರ್ಮಸ್ಥಳದ ಚಂದಯ್ಯ ಹೆಗ್ಗಡೆಯವರೂ, ಜಿಲ್ಲೆಯ ಇತರ ಕಡೆಗಳಿಂದ ಜೈನಮು ಖಂಡರೂ ಕೂಡಾ ದಯಪಾಲಿಸಿದ್ದರು. ಮೊದಲನೇ ದಿವಸ ಈ ಉತ್ಸವವು ಇಲ್ಲಿಯ ಟೌನ್ ಹೋಲಿನಲ್ಲಿ ಜರಗಿತ್ತು. ಆ ದಿವಸ ಅಧ್ಯಕ್ಷರು ಯಥೋಚಿತನುಡಿಗಳಿಂದ ವಿದ್ಯಾರ್ಥಿಭವನದ ಅವಶ್ಯಕತೆಯನ್ನು ವಿವರಿಸಿದಲ್ಲದೆ ಜೈನ ವಿದ್ಯಾರ್ಥಿಗಳ ವಿದ್ಯೆ ಗೋಸ್ಕರ ಸರ್ವ ಜೈನಗೃಹಸ್ಥರೂ ತನುಮನಧನಗಳಿಂದ ಸಹಾಯಮಾಡಿ ತಮ್ಮ ಜಾತಿ ಯನ್ನು ಅಭಿವೃದ್ಧಿಗೊಳಿಸಬೇಕಾಗಿ ಬುದ್ಧಿವಾದ ಪೂರ್ವಕವಾಗಿ ಕೆಲವು ಸವಿನುಡಿ ಗಳನ್ನಾಡಿದರು. ಅನಂತರ ಕೆಲವು ಗೃಹಸ್ಥರು ಈ ವಿಷಯವಾಗಿ ತಂತಮ್ಮ ಅಭಿ ಪ್ರಾಯಗಳನ್ನು ಸೂಚಿಸಿದರು. ಎರಡನೇ ದಿವಸ ನಾಲ್ಕು ಘಂಟೆಗೆ ಸರಿಯಾಗಿ ವಿದ್ಯಾ ರ್ಥಿಭವನದಲ್ಲೇ ಪುನಃ ಸಭೆಯು ಜರಗಿತು. ಈ ದಿವಸ ಕೂಡಾ ಹಲವು ಜೈನಗೃಹ ಸ್ಥರು ಭಾಷಣಗಳನ್ನು ಮಾಡಿದನಂತರ ಮ. ರಾ. ರಾ. ಪಿ. ಸೀತಾರಾಮಯ್ಯನವರು ವಿದ್ಯಾರ್ಥಿಭವನವನ್ನು ಪ್ರಥಮತಃ ತೆರೆಯುವ ಕಾರ್ಯವನ್ನು ಮಾಡಿದರು; ಮತ್ತು "ಜಯ, ಜಯ" ಎಂಬ ಘೋಷದೊಡನೆ ಎಲ್ಲರೂ ಒಳ ಪ್ರವೇಶಿಸಿದರು. ಸಭಿಕರ ಫೋಟೋಗ್ರಾಫ್ ತೆಗೆಯಲು ತುಸಹೊತ್ತು ಕಳೆದು ಹೋದ ಮೇಲೆ ಸುಮಾರು 6 ಘಂಟೆಗೆ ಫಲಾಹಾರ, ತಾಂಬೂಲ, ಗಂಧಲೇಪನ, ಮೊದಲಾದವುಗಳಿಂದ ಎಲ್ಲರನ್ನು ಸತ್ಕರಿಸಿದರು. ಜೈನರ ಪೈಕಿ ಅನೇಕರು ವಿದ್ಯಾರ್ಥಿಭವನದಗೋಸ್ಕರ ವರ್ಷಾವಧಿ ದ್ರವ್ಯಸಹಾಯವನ್ನು ಮಾಡುತ್ತೇವೆಂಬುದಾಗಿಯೂ, ಬೇರೆ ಕೆಲವರು ಮೂಲಧನ ವಾಗಿ ಹಣವನ್ನು ಕೊಡುತ್ತೇವೆಂಬುದಾಗಿಯೂ, ವಾಗ್ದತ್ತ ಮಾಡಿದರು. ಈ ರೀತಿ ಜೈನರು ತೋರಿಸಿದ ಸಾಹಸವು ಅತಿ ಶ್ಲಾಘನೀಯವಾದುದು. ಇವರ ಇಂತಹ ಸಾಹಸ ಕಾರ್ಯವು ಸುಫಲಪೂರಿತವಾಗಿ ಅಭಿವೃದ್ಧಿಗೊಳ್ಳದೆ ಇರಲಾರದು.

ಇತರ ಜಾತಿಯವರೂ ಕೂಡಾ ಸದರಿ ಜೈನ ಗೃಹಸ್ಥರನ್ನು ಮೇಲ್ ಪಂಕ್ತಿಯಾ ಗಿಟ್ಟುಕೊಂಡು ಪುತ್ತೂರಲ್ಲಿ ಸಾರ್ವಜನಿಕವಾದ ವಿದ್ಯಾರ್ಥಿಭವನವನ್ನು ಸ್ಥಾಪಿಸಿ, ವಿದ್ಯಾರ್ಥಿವೇತನಗಳನ್ನು ಏರ್ಪಡಿಸಿ, ಇಲ್ಲಿಯ ಎಲಿಮೆಂಟರಿ ಶಾಲೆಯನ್ನು ಸೆಕೆಂಡರಿ ಶಾಲೆಯಾಗಿ ಮಾಡುವರೆ ಕೂಡಾ ಪ್ರಯತ್ನಗಳನ್ನು ಮಾಡಿದರೆ ಎಷ್ಟೋ ಪ್ರಯೋ ಜನಕರವೂ ಶ್ರೇಯಸ್ಕರವೂ ಆದೀತು. ಹಣವಂತರು ಸಹಸ್ರ ಭೋಜನಾದಿಗಳಿಗೆ ವೆಚ್ಚ ಮಾಡುವ ಬದಲಿಗೆ ಬಾಲಕರ ವಿದ್ಯಾಭಿವೃದ್ಧಿಗೋಸ್ಕರವೂ ಏಳಿಗೆಗೋಸ್ಕರವೂ ಮನಸ್ಸು ಕೊಟ್ಟರೆ ಸದಾಸ್ಮಾರಕವಾದ ಲೋಕೋಪಕಾರ ಕೆಲಸವಾದೀತಲ್ಲದೆ ಇಹ ಪರದಲ್ಲಿ ಯಶಸ್ಸೂ ಕೀರ್ತಿಯೂ ಉಂಟಾದೀತೆಂಬುದಕ್ಕೆ ಲೇಶಮಾತ್ರವೂ ಸಂದೇಹವಿಲ್ಲ.

ಪತ್ರವ್ಯವಹಾರ.

ಖಾಸಗಿ ಕಲಿಸುವುದು

ಅಯ್ಯಾ, ಶ್ರೀಮಂತರೇ,

ಅವುದಾದರೊಂದು ದುರಾಚಾರವನ್ನು ಕಲಿತುಕೊಳ್ಳುವುದು ಬಹು ಬೇಗನೆಯ ಲ್ಲವೆ? ಪಾಶ್ಚಾತ್ಯರು, ಅವರೇನೂ [illegible]

ಅದನ್ನು ಕಂಡುಕೊಂಡು ನಮ್ಮ ತರುಣರು ಬಾಯೊಳಗೆ ಸಿಗರೆಟನ್ನೊ ಬೀಡಿಯನ್ನೊ ಫೂ ಫೂ ಮಾಡುತ್ತಿರುವರಷ್ಟೆ! ಏನೋ ಕೆಲವರು ಶ್ರೀಮಂತರು ಬಹು ಅಪೂರ್ವವಾಗಿ ಕಾಫಿಯನ್ನು ಕುಡಿವುದಕ್ಕಾರಂಭಿಸಿದರು. ಈಗಲೋ, ಕೈಯಲ್ಲಿ ಕಾಸಿಲ್ಲದವನಿಗೂ, ಇದ್ದ ಚೆಂಬುಚರಿಗೆಗಳನ್ನಾದರೂ ಒತ್ತೆಯಿಟ್ಟು, ಕಾಪಿ ಕುಡಿಯಲೇ ಬೇಕು. ಅಯ್ಯಾ, ದುರಾಚಾರವೆಂದರೆ ಎಷ್ಟು ಬೇಗನೆ ಹಬ್ಬಿಹೋಗುವುದು! ಇಂಥಾ ಸಂಗತಿಗಳೆಲ್ಲವೂ ದುರಾಚಾರಗಳೆಂದರೆ ಎಲ್ಲರು ಒಪ್ಪುವರು. ಆದರೆ ಇನ್ನೊಂದು ಬಗೆಯ ದುರಾಚಾರವಿರುವುದು ಅದು ಮಾತ್ರ ಸಿಹಿಯಾಗಿರುವ ಒಂದು ವಿಧವಾದ ವಿಷದಂತಿದೆ. ಅನೇಕರು ತಮ್ಮ ಮಕ್ಕಳಿಗೆ ಚೆನ್ನಾಗಿ ವಿದ್ಯೆ ಹತ್ತಬೇಕೆಂಬ ಉದ್ದೇಶದಿಂದ ಖಾಸಗಿ ಉಪಾಧ್ಯಾಯರನ್ನು ನೇಮಿಸಿ, ಅವರು ಮನೆಗೆ ಬಂದು ಕಲಿಸುವಂತೆ ಮಾಡುವರು ಇದು ಕೂಡ ಒಂದು ದುರಾಚಾರವೇ ಸರಿ

ಪೂರ್ವಕಾಲದಲ್ಲಿ ಮಕ್ಕಳು ವಿದ್ಯಾಭ್ಯಾಸಕ್ಕೆ ಗುರುವಿನ ಮನೆಗೆ ಹೋಗಿ, ಆತನ ಸೇವೆಮಾಡುತ್ತ, ಅಲ್ಲಿಯೇ ವಾಸಮಾಡಿಕೊಂಡಿರಬೇಕಿತ್ತು. ಇದಕ್ಕೆ ಗುರುಕುಲವಾಸವೆಂದು ಹೆಸರು. ಕ್ರಮೇಣ ಶ್ರೀಮಂತರೊಳಗೆ ಈ ಪದ್ಧತಿಯು ಶಿಥಿಲವಾಗುತ್ತ ಬಂದು, ಒಬ್ಬ ವಿದ್ಯಾವಂತನನ್ನು ಮನೆಯಲ್ಲಿ ಇರಿಸಿಕೊಂಡು ಮಕ್ಕಳಿಗೆ ವಿದ್ಯೆ ಹೇಳಿಸ ಹತ್ತಿದರು. ಬಡವರಾದವರು ತಮ್ಮ ಮಕ್ಕಳನ್ನು ದಿನಪ್ರತಿಯೂ ಅಲ್ಲಿಗೆ ಕಳುಹಿಸುತ್ತಿದ್ದರು. ಆ ಮೇಲೆ ಶಾಲೆಗಳ ಏರ್ಪಾಡು ನಡೆಯಿತು. ಈ ಶಾಲೆಗಳು ಧನಿಕರಿಗೂ ದರಿದ್ರರಿಗೂ ಅನುಕೂಲವಾಗಿದ್ದ ವಿಶೇಷ ಪ್ರಚಾರವನ್ನು ಹೊಂದಿದವು. ಹೀಗಾಗುವ ಕಾರಣವೇನಿರಬಹುದು? ಯೋಗ್ಯವಾದ ಶಿಕ್ಷಣ ದೊರಕುವುದೇ ಅಲ್ಲದೆ ಮತ್ತೇನಿರಬಹುದು?

ಹಾಗಾದರೆ ಖಾಸಗಿ ಉಪಾಧ್ಯಾಯರನ್ನು ನೇಮಿಸಿ ಮನೆಯಲ್ಲಿ ಕಲಿಸಿದರೆ ಯೋಗ್ಯವಾಗಲಾರದೆ? ಬೇಕಾದರೆ ಬಿ ಎ ಪಾಸಾದವರನ್ನೆ ಗೊತ್ತು ಮಾಡೋಣ, ಎಂದು ಕೆಲವರಿಗೆ ಅಭಿಪ್ರಾಯವಿರಬಹುದು. ಆದರೆ ಮನೆಯಲ್ಲಿ ಕಲಿತ ಗಿಡಕ್ಕೂ ತೋಟದಲ್ಲಿ ಬೆಳೆದ ಗಿಡಕ್ಕೂ ತುಂಬ ವ್ಯತ್ಯಾಸವಿರುವುದು. ಹುಡುಗನು ತಾನೊಬ್ಬನೇ ಕುಳಿತುಕೊಂಡು ಕಲಿವುದಕ್ಕೂ ಸಹಪಾಠಿಗಳೊಂದಿಗೆ ಕಲಿವುದಕ್ಕೂ ತುಂಬ ವ್ಯತ್ಯಾಸವಿರುವುದು. ಹಲವು ಹುಡುಗರು ಜತೆಯಾಗಿ ಕಲಿವಾಗ ಒಬ್ಬನಿಗಿಂತೊಬ್ಬ ಮೇಲಾಗಬೇಕೆಂದು ತುಂಬ ಶ್ರದ್ಧೆಯಿಂದ ಕಲಿವರು. ಅದು ಮಾತ್ರವಲ್ಲದೆ ಒಂದೇ ವ್ಯಾಸಂಗದಲ್ಲಿರುವ ಹಲವರೊಡನೆ ಬೆರೆಯುವುದರಿಂದ ವಿದ್ಯೆಯು ಬಹುಬೇಗನೆ ಹತ್ತುವುದು, ಸಭ್ಯಾಸಭ್ಯರೀತಿಗಳ ವಿವೇಚನೆಯುಂಟಾಗಿ ಬುದ್ಧಿಯು ವಿಕಸಿಸುವುದು. ಹಾಗಲ್ಲದೆ ಹುಡುಗನು ಮನೆಯಲ್ಲೇ ಕಲಿತವನಾದರೆ ನಾಲ್ಕು ಜನರೆದುರಿಗೆ ಸರಿಯಾಗಿ ಸಭ್ಯರೀತಿಯಿಂದ ವರ್ತಿಸುವಷ್ಟು ಸಾಹಸ ಕೂಡ ಇಲ್ಲದವನಾಗುವನು. ತಾನೆಷ್ಟು ಕಲಿತಿದ್ದರೂ ತಾನು ಕಲಿತಿರುವುದನ್ನು ಬೇರೆ ಜನರೆದುರಿನಲ್ಲಿ ಹೇಳಲು ಅಂಜಿಕೆ ಪಡುವನು. ಹೆಚ್ಚೇಕೆ? ಹುಡುಗನು ಕೇವಲ ಹೆಣ್ಣಿಗನಾಗುವನು! ಅದೂ ಅಲ್ಲದೆ ಆ ಹುಡುಗನಿಗೆ ತನಗಿಂತ ಮೇಲಾದವರಿರುವರೆಂಬ ಭಾವವುಂಟಾಗಲು ಅವಕಾಶವಿಲ್ಲದೆ, ತಾನೇ ತಾನೆಂಬ ಗ್ರಹಿಕೆಯುಂಟಾಗುವುದು. ಬಾವಿಯೊಳಗಿನ ಕಪ್ಪೆಯು ತಾನಿರುವ ಬಾವಿಯೇ ದೊಡ್ಡ ಸಮುದ್ರವೆಂದು ಭಾವಿಸುವುದಿಲ್ಲವೇ? ಎಷ್ಟಾದರೂ ಸರಿಯಾದ ಉಪಕರಣಗಳಿಲ್ಲದೆ ಎಲ್ಲವನ್ನು ಮನೆಯಲ್ಲೇ ಕಲಿಸಲು ಸಾಧ್ಯವಿಲ್ಲ. ಆದರಿಂದ ಶ್ರೀಮಂತರೇ ನಿಮ್ಮ ಮಕ್ಕಳು ಬಲು ಚಿಕ್ಕವರು. ಶಾಲೆಗೆ ಕಳುಹಿಸಿದರೆ ಎಲ್ಲಾದರೂ ಕಾಲುಜಾರಿ ಬಿದ್ದುಬಿಟ್ಟಾರು. ಮನೆಯಲ್ಲೇ ಕಲಿಸಿ ಆ ಮೇಲೆ ಶಾಲೆಯಲ್ಲಿ ಮೇಲಣ ಕ್ಲಾಸಿಗೆ ಹಾಕಿಸಬಹುದು—ಎಂಬ ಅಭಿಪ್ರಾಯ ಪಡೆಟ್ಟುಕೊಂಡು ಆ ಮಕ್ಕಳ ಭವಿಷ್ಯವನ್ನು ಕೆಡಿಸಬೇಡಿರಿ!

ಇನ್ನು ಕೆಲವರು ಮಕ್ಕಳನ್ನು ಶಾಲೆಗೂ ಕಳುಹಿಸುತ್ತಾರೆ ಮನೆಯಲ್ಲಿಯೂ ಪಾಠ ಹೇಳಿಸುತ್ತಾರೆ. ಇದೆಂಥಾ ಕ್ರೂರತನ! ತಮ್ಮ ಮಕ್ಕಳನ್ನು ಪ್ರವೀಣರನ್ನಾಗಿ ಮಾಡಬೇಕೆಂದು ಬಾಯೊಳಗೂ ಮೂಗಿನೊಳಗೂ ತಿಂಡಿ ತುರುಕಿ ಬಿಟ್ಟರೆ ಅಜೀರ್ಣವಾಗದಿರುವುದೆ? ಚಿಕ್ಕ ಮಕ್ಕಳು ಬಹಳ ಕಾಲ ಏಕಾಗ್ರ ಚಿತ್ತತೆಯಿಂದಿರಲಾರರು. ಹೀಗಿರುವಾಗ ಶಾಲೆಯಲ್ಲಿ ೫ ತಾಸುಗಳ ತನಕ ಪಾಠಗಳಿಗೆ ಮನಸ್ಸುಕೊಡುತ್ತಿದ್ದು ತುಂಬ ಬಳಲಿರುವಾಗ ಮನೆಗೆ ಒಂದೊಡನೆಯೇ ಪುನಃ ಪಾಠವೆಂದರೆ ಆ ಬಡಪ್ರಾಣಿಗಳು ಹೇಗೆತಾನೆ ಸಹಿಸಿಯಾರು? ಬೆಳಿಗ್ಗೆ ಅವರು ಶಾಲೆಯ ಪಾಠಗಳನ್ನು ಕಲಿಯಬೇಕೊ ಇಲ್ಲವೇ ಖಾಸಗಿ ಉಪಾಧ್ಯಾಯರ ಪಾಠಗಳನ್ನು ಕಲಿಯಬೇಕೊ? ಖಾಸಗಿ ಉಪಾಧ್ಯಾಯರು ಕೂಡ ಶಾಲೆಯ ಪಾಠಗಳನ್ನೆ ಕಲಿಸುವುದಾದರೆ ಆ ಮಕ್ಕಳು ಶಾಲೆಗೆ ಹೋಗುವುದರ ಉದ್ದೇಶವೇನು? ಅದೂ ಅಲ್ಲದೆ ಶಾಲೆಯಲ್ಲೊಂದು ಮನೆಯಲ್ಲೊಂದು ಹೀಗೆ ಎರಡು ಬಗೆಯಾಗಿ ಒಂದೇ ವಿಷಯವನ್ನು ಕಲಿಸಿಬಿಟ್ಟರೆ ಆ ಮಕ್ಕಳು ಯಾರು ಕಲಿಸಿದುದನ್ನು ನಂಬಿಕೊಂಡಿರಬೇಕು? ಎರಡು ದೋಣಿಗೆ ಕಾಲಿಟ್ಟಂತಾಗುವುದಿಲ್ಲವೆ? 'ಎತ್ತು ಏರಿಗೆ ಎಳೆಯಿತು, ಕೋಣ ಕೆರೆಗೆ ಎಳೆಯಿತು' ಎಂಬಂತಾದರೆ ಏನು ಫಲ ಪ್ರಯೋಜನ?

ಪಾಠಗಳನ್ನು ಯಾರೂ ಕಲಿಸಬಹುದು ಎಂದು ಕೆಲವರು ಅಭಿಪ್ರಾಯವಿರಬಹುದು ಅಂದವರಿಗೆ ಸರಿಯಾಗಿ ಖಾಸಗಿ ಉಪಾಧ್ಯಾಯರು ಬೇಕಾದಷ್ಟು ಮಂದಿ ಬಲು ಕಡಿಮೆ ದರಕ್ಕೆನೇ ದೊರಕುವರು. ತಾಲೂಕು ಆಫೀಸಿನಲ್ಲಿ ಬೆಳಗಿನಿಂದ ಸಂಜೆಯ ತನಕ ಬರೆಯುತ್ತಿರುವ ಗುಮಾಸ್ತನಾದರೂ ಆಗಬಹುದು; ಕೊನೆಗೆ ಮೇಲಿನ ಕ್ಲಾಸಿನ ಒಬ್ಬ ಹುಡುಗನಾದರೂ ಆಗಬಹುದು! ಇಂಥಾ ಜನರು ಎಷ್ಟರಮಟ್ಟಿನ ಶಿಕ್ಷಣವನ್ನು ಕೊಟ್ಟಾರು? ಶಿಕ್ಷಣಾ ಕ್ರಮವು ಅವರಿಗೆಲ್ಲಿಂದಗೊತ್ತು? ಇಂಥವರ ಶಿಕ್ಷಣದಿಂದ ಮಕ್ಕಳಿಗೇನು ಪ್ರಯೋಜನವುಂಟಾದೀತು? ಬಿ ಎ ಪಾಸಾದವನಾದರೂ ಶಿಕ್ಷಣಾ ಕ್ರಮವನ್ನು ಅರಿತವನಲ್ಲದಿದ್ದರೆ ಮಕ್ಕಳ ಬೋಧನೆಯನ್ನು ಕೈಕೊಳ್ಳಲು ಅರ್ಹನಲ್ಲ.

ಒಂದುವೇಳೆ ಆ ಮಕ್ಕಳಿಗೆ ಶಾಲೆಯಲ್ಲಿ ಕಲಿಸುವ ಉಪಾಧ್ಯಾಯರೇ ಮನೆಯಲ್ಲಿಯೂ ಕಲಿಸಿದರೆ ಏನಾಕ್ಷೇಪಣೆ—ಎಂದು ಕೆಲವರು ಕೇಳಬಹುದು. ಇದರಿಂದಲೂ ದೋಷವಿದೆ ಆ ಉಪಾಧ್ಯಾಯರು ತಾವು ಹೆಸರು ಪಡೆಯಬೇಕೆಂದು ಪರೀಕ್ಷೆಯ ಸಮಯದಲ್ಲಿ ಸವಾಲುಗಳನ್ನು ಮುಂಚಿತವಾಗಿಯೇ ಕಲಿಸಿಕೊಡುವುದಾಗಲಿ ಪಕ್ಷಪಾತದಿಂದ ಹೆಚ್ಚಿಗೆ ಮಾರ್ಕು ಕೊಟ್ಟು ಪಾಸ್ ಮಾಡುವುದಾಗಲಿ, ಕೇವಲ ವಿಷಾದಕರವಾದ ಸಂಗತಿಗಳಲ್ಲವೆ?

ಅಯ್ಯಾ ನವನಾಗರಿಕತೆಯ 'Huxley's Tonic ' Nerve Vigour, Penopepton' (ಹಕ್ಸ್ಲೇಸ್ ಟೋನಿಕ್, ನರ್ವವಿಗರ್, ಪೆನಪೆಪ್ಟನ್) ಮೊದಲಾದ ಪೌಷ್ಟಿಕ ರಸಾಯನಗಳು ಬರುವ ಮೊದಲು ಜನರು ದೃಢಕಾಯರಾಗಿರಲಿಲ್ಲವೆ? ಇವೆಲ್ಲವೂ ಉದಯಿಸಿದ ಮೇಲೆಯೇ ಕ್ಷೀಣಕಾಯರಾಗ ತೊಡಗಿರುವರು. ಅಂತೆಯೇ ಈ ಖಾಸಗಿ ಉಪಾಧ್ಯಾಯರುಗಳು ಮಕ್ಕಳಿಗೋಸ್ಕರ ಎಲ್ಲವನ್ನೂ ತಾವೇ ಮಾಡಿ, ಸ್ವಾವಲಂಬನಕ್ಕೆ ಅವಕಾಶಕೊಡದೆ, ಅವರ ಆಲೋಚನಾ ಶಕ್ತಿಗೆ ಮೃತ್ಯುಸ್ವರೂಪಿಗಳಾಗಿರುವರು ಹೆಚ್ಚೇಕೆ? ಶ್ರೀಮಂತರಿರಾ ನೀವು ಖಾಸಗಿ ಶಿಕ್ಷಣವನ್ನು ಕೊಡಿಸಿದ ನಿಮ್ಮ ಮಕ್ಕಳು ಏನು ಕಲಿತು ಉದ್ಧಾರಾಕಿರುವರು? ಹಾಗೆ ಅಂಥಾ ಶಿಕ್ಷಣವನ್ನು ಪಡೆಯದ ಇತರ ಮಕ್ಕಳಿಗೆ ಏನು ಕಡಿಮೆಯಾಗಿರುವುದು? ಆದುದರಿಂದ ನೀವು ನಿಮ್ಮ ಮಕ್ಕಳಿಗೆ ಖಾಸಗಿ ಶಿಕ್ಷಣವನ್ನು ಕೊಡಿಸಬಹುದೆಂಬ ಧೈರ್ಯದಿಂದ ಅವರಿಗೆ ಯೋಗ್ಯವಿಲ್ಲದ ಮೇಲಣ ತರಗತಿಗೆ ಅವರನ್ನು ಸೇರಗೊಳಿಸಿ, ಅವರ ಭವಿಷ್ಯವನ್ನು ಎಂದೂ ಕೆಡಿಸಬೇಡಿರಿ

ಇತಿ ಭಾರತೀಯ.

ಮಂಗಳೂರು ಹಿಂದೂ ಟ್ರೆನ್ಸಿಟ್ ಕಂಪೆನಿ,

ಅಯ್ಯಾ,

ಮಳೆಗಾಲದಲ್ಲಿ ಟ್ರೆನ್ಸಿಟಿನಲ್ಲಿ 5 ಜನರಿಗಿಂತ ಹೆಚ್ಚಿಗ ಪ್ರಯಾಣಸ್ಥರನ್ನು ಕಳುಹಿಸ ಕೂಡದಾಗಿ ಜಿಲ್ಲಾ ಕಲೆಕ್ಟರ ದೊರೆಗಳವರಿಂದ ಕಂಪೆನಿ ಪ್ರೊಪ್ರೈಟರು ಮ। ರಾ। ಸುಬ್ಬಯ್ಯ ಶೆಟ್ರಿಗೆ ತಲ್ಪಿರುವ ಹುಕುಮಿನ ಸಮ್ಮಂಧ ಸುಬ್ಬಯ ಶೆಟ್ರ ಟ್ರೆನ್ಸಿಟ್ ಲ್ಯಾನುಗಳು ನಡಿಯುವ ಎಲ್ಲಾ ಸ್ಟೇಶನುಗಳಿಗೂ ಪ್ರಕೃತ ಇರುವ ದರಗಳನ್ನು ಎರಡರಷ್ಟು ಹೆಚ್ಚಿಸುವ ಇರಾದೆಯಲ್ಲಿ ಇದ್ದಾರಾಗಿ ತಿಳಿಯುತ್ತೇವೆ ಈ ಮೊದಲು ಕತ್ತದ ಹಗ್ಗವನ್ನು ತೆಗೆದು ನೂಲಿನ ಹಗ್ಗವನ್ನು ಉಪಯೋಗಿಸಬೇಕಾಗಿ ಉಂಟಾದ ಹುಕುಮಿನ ದೆಶೆಯಿಂದ ಎಲ್ಲಾ ಕ್ಲಾಸಿನ ಟ್ರೆನ್ಸಿಟ್‌ಗಳ ದರಗಳಲ್ಲಿಯೂ 4 ಆಣೆಯಂತೆ ಏರಿಸಲ್ಪಟ್ಟಿತು. ಆದರೆ ಅದು ಹೆಚ್ಚಿನ ಸಂಕಷ್ಟವಾಗಿ ಪರಿಣಮಿಸದ್ದರಿಂದ ಜನರು ಟ್ರೆನ್ಸಿಟ್‌ನಲ್ಲಿ ಪ್ರಯಾಣಮಾಡುವುದನ್ನು ನಿಲ್ಲಿಸಲಿಲ್ಲ. ಆದರೆ ಪ್ರಕೃತ ಒಂದಿರುವ ಹುಕುಮಿನ ಫಲವು ಪ್ರೊಪ್ರೈಟರಿಗೆ ಹೆಚ್ಚಿನ ನಷ್ಟಕರವಾದ್ದರಿಂದ ಅವರು ಸ್ವಭಾವಿಕವಾಗಿ ಅವರ ನಷ್ಟವನ್ನು ಪ್ರಯಾಣಸ್ಥರ ಮೇಲೆ ಹೊರಿಸಲೆತ್ನಿಸುವದು ಅನ್ಯಾಯವೆಂದು ಹೇಳಲಾಗುವದಿಲ್ಲವಾದ್ದರಿಂದ ಈ ಕುರಿತು ಜಿಲ್ಲಾ ಕಲೆಕ್ಟರ ದೊರೆಗಳವರು ಆ ಹುಕುಮನ್ನು ಪುನರ್ವಿಮರ್ಶಿಸಿ ಪ್ರಯಾಣಸ್ಥರ ಸಂಖ್ಯೆಯನ್ನು ಮೊದಲಿನಂತೆಯೇ 8ಕ್ಕೆ ಏರಿಸಿದ್ದಲ್ಲಿ ಈ ಜಿಲೆಯ ಪ್ರಯಾಣಸ್ಥರಿಗೆ ದೊಡ್ಡ ಉಪಕಾರವನ್ನು ಮಾಡಿದಂತಾಗುವದು.

ಪ್ರಯಾಣಸ್ಥ.

ಯುದ್ಧ ಸಮಾಚಾರ.

ತಾ. ೨೭ನೇ ಮೇ.

೪೦೦೦ ಟನ್ ಭರಾವಣಿಯ ಅಮೇರಿಕದ "ನೆಬ್ರಸ್ಕ" ಎಂಬ ಹಡಗವನ್ನು ಜರ್ಮನರ ಜಲಂತರ್ಗಾಮಿ ನಾವೆಯು ಮುಣುಗಿಸಿರುವದು.

ಅರ್ರಾಸಿನ ಉತ್ತರದಲ್ಲಿ ಫ್ರೆಂಚರು ಜರ್ಮನರ ಬಲಕಾಯುವ ಕೆಲಸಗಳನ್ನು ಎರಡು ಕಡೆಗಳಲ್ಲಿ ಕೆಡಿಸಿ, ಕೆಲವು ಕಂದಕಗಳನ್ನು ಹಿಡಿದಿರುತ್ತಾರೆ.

ಪ್ರೈಪ್ರಿಸಿನ ಪೂರ್ವದಲ್ಲಿ ಬ್ರಿಟಿಷರ ನೆಲಿಗಳಲ್ಲಿ ಕೆಲವಂಶವನ್ನು ಜರ್ಮನರು ವಿಷಕರವಾದ ಗ್ಯಾಸ್ ಪ್ರಯೋಗಿಸಿ ಸ್ವಾಧೀನ ಮಾಡಿಕೊಂಡಿರುವರು. ಜರ್ಮನರು ಇಲ್ಲಿ ಪ್ರಯೋಗಿಸಿದಷ್ಟು ಗ್ಯಾಸನ್ನು ಹಿಂದೆ ಎಲ್ಲಿಯೂ ಪ್ರಯೋಗಿಸಿದ್ದಿಲ್ಲ. ೫ ಮೈಲುಗಳವರೆಗೆ ಜರ್ಮನರು ಗ್ಯಾಸ್ ಬಿಟ್ಟರು. ಇದೇ ರೀತಿ ಕೆಲವು ನೆಲಿಗಳ ಮೇಲೆ ಜರ್ಮನರು ವಿಷಕರವಾದ ಗುಂಡುಗಳನ್ನು ಹಾರಿಸಿದರು. ಕೆಲವು ಕಡೆಗಳಲ್ಲಿ ಈ ಗ್ಯಾಸಿನ ಹೊಗೆಯು ೪೦ ಅಡಿಗಳ ಎತ್ತರದವರೆಗೆ ವಿಸ್ತರಿಸಿತ್ತು. ಆದರೂ ಬ್ರಿಟಿಷ ನೆಲಿಗಳ ಕೆಲವು ಪಾರ್ಶ್ವವು ಇದ್ದಕ್ಕಿದ್ದ ಹಾಗೆ ಉಳಿದಿರುವದು ಎಂತ ಸರ್. ಜೊನ್ ಫ್ರೆಂಚರ ಪತ್ರದಿಂದ ತಿಳಿದುಬರುತ್ತದೆ.

ಬ್ರಿಟಿಷ್ ಕೆಬಿನೆಟ್ ಸಭೆಯಲ್ಲಿ ಆದ ಬದಲಾವಣೆಯು ಈ ರೀತಿಯಾಗಿರುವದು. ಮೆ| ಅಸ್ಕ್ವಿತರು ಪ್ರಧಾನ ಮಂತ್ರಿಯಾಗಿ ಮತ್ತು ತ್ರಿಜರಿಯ ಫಸ್ಟ್‌ಲೋರ್ಡ್; ಲೇನ್ಸ್‌ಡೌನ್ ಪ್ರಭುಗಳು ಸಹಾಯಕ ಮಂತ್ರಿ; ಸರ್. ಸ್ಟಾನ್ಲಿಬಕ್ ಮಾಸ್ಟರ್—ಲೋರ್ಡ್ ಚೇನ್ಸಲ್ಲರ್; ಲೋರ್ಡ್ ಕ್ರು—ಕೌನ್ಸಿಲಿನ ಪ್ರೆಸಿಡೆಂಟ್; ಲೋರ್ಡ್ ಕರ್ಜನ್—ಲೋರ್ಡ್ ಪ್ರೀವಿ ಸೀಲ್; ಮೆ| ಮೆಕೆನ್ನ—ಚೇನ್ಸಲ್ಲರ್ ಆಫ್ ದಿ ಎಕ್ಸ್‌ಚಕ್ಕರ್; ಸರ್. ಜೊನ್ ಸಿಮ್ಸನ್—ಹೋಮ್ ಸೆಕ್ರಟರಿ; ಸರ್. ಎಡ್ವರ್ಡ್‌ಗ್ರೇ—ವಿದೇಶಿ ಸೆಕ್ರಟರಿ; ಮೆ| ಬೊನರ್‌ಲಾ—ವಸಾಹತಿಗಳ ಸೆಕ್ರಟರಿ; ಮೆ| ಚೆಂಬರ್ಲೈನ್—ಹಿಂದೂಸ್ಥಾನದ ಸೆಕ್ರೆಟರಿ; ಲೋರ್ಡ್ ಕಿಚನರ್—ಯುದ್ಧ ಮಂತ್ರಿ; ಮೆ| ಲೊಯ್ಡ್ ಜೋರ್ಜ್—ಯುದ್ಧ ಸಾಮಗ್ರಿಗಳ ಮಂತ್ರಿ; ಮೆ| ಬಾಲ್‌ಫೂರ್—ನೌಕಾವಳಿ ಮಂತ್ರಿ; ಮೆ| ರುನ್ಸಿಮಾನ್—ವ್ಯಾಪಾರ ಸಂಬಂಧವಾದ ಬೋರ್ಡಿನ ಪ್ರೆಸಿಡೆಂಟ್; ಮೆ| ಚರ್ಚಿಹಿಲ್—ಚೆನ್ಸೆಲ್ಲರ್ ಡಚ್ಚಿ ಆಫ್ ಲೆಂಚಸ್ಟರ್; ಮೆ| ಲೋಂಗ್—ಸ್ಥಳೀಕ ಸರಕಾರದ ಬೋರ್ಡಿನ ಪ್ರೆಸಿಡೆಂಟ್; ಮೆ| ಬಿರ್ರೆಲ್—ಐರ್ಲ್ಯಾಂಡಿನ ಚೀಫ್ ಸೆಕ್ರಟರಿ; ಮೆ| ಮೆಕಿನ್ನೊನ್‌ವುಡ್—ಸ್ಕೊಟ್ಲಾಂಡದ ಸೆಕ್ರಟರಿ; ಲೋರ್ಡ್ ಸೆಲ್‌ಬೋರ್ನ್—ವ್ಯವಸಾಯ ಸಂಬಂಧವಾದ ಬೋರ್ಡಿನ ಪ್ರೆಸಿಡೆಂಟ್; ಮೆ| ಹಾರ್ಕೊರ್ಟ್—ಫಸ್ಟ್ ಕಮಿಷನರ್ ಆಫ್ ವರ್ಕ್; ಮೆ| ಹೆಂಡರ್ಸನ್—ವಿದ್ಯಾ ಸಂಬಂಧವಾದ ಬೋರ್ಡಿನ ಪ್ರೆಸಿಡೆಂಟರು; ಸರ್. ಎಡ್ವರ್ಡ್ ಕಾರ್ಸನ್—ಆಟರ್ನಿ ಜನರಲ್; ಮೆ| ರೆಡ್‌ಮೊಂಡ್—ಇವರಿಗೂ ಒಂದು ಕೆಲಸವು ಕೊಡೋಣಾಯಿತು. ಆದರೆ ಸ್ವೀಕರಿಸಲಿಲ್ಲ.

ಟಿರಾನೋ ಎಂಬಲ್ಲಿಗೆ ೩೦ ಮೈಲು ಪೂರ್ವದಲ್ಲಿ ಆಸ್ಟ್ರಿಯನರಿಗೂ ಇಟಲಿಯನರಿಗೂ ತಾ. ೨೪ರಲ್ಲಿ ಕದನ ನಡೆದಿರುವದು. ಇಟಲಿಯನ್ನು ಒಳನುಗ್ಗಿದ್ದ ಆಸ್ಟ್ರಿಯಾನರನ್ನು ಇಟಲಿಯನರು ಹಿಂದಕ್ಕೆ ಓಡಿಸಿ ಕೆಲವು ನೂರು ಆಸ್ಟ್ರಿಯನ್ ಸೇನಿಕರನ್ನು ಸೆರೆಹಿಡಿರುತ್ತಾರೆಂತ "ಟೈಮ್ಸ್" ಪತ್ರಿಕೆಗೆ ವಾರ್ತೆ ಬಂದಿರುವದು.

ಇಟಲಿಯನರು ೩-೪ ಮೈಲು ಮುಂದರಿದು ಪರ್ವತ ಕಣಿವೆಗಳನ್ನೂ, ಶಿಖರಗಳನ್ನೂ ಸ್ವಾಧೀನಮಾಡಿಕೊಂಡು ಕೆಲವು ಆಸ್ಟ್ರಿಯನ ಸೇನಿಕರನ್ನು ಸೆರೆಹಿಡಿದಿರುತ್ತಾರೆ. ಕೇಡೊರ್ ಎಂಬಲ್ಲಿ ಇಟಲಿಯನರು ಸರಹದ್ದಿನ ದಾರಿಯನ್ನು ಸ್ವಾಧೀನ ಮಾಡಿಕೊಂಡಿರುತ್ತಾರೆ. ಆಸ್ಟ್ರಿಯನರ ಮಧ್ಯಮ ತರದ ತೋಫುಗಳು ಎಡೆಬಿಡದೆ ಗುಂಡು ಹಾರಿಸುತ್ತಲಿವೆ. ಇಟಲಿಯನರು ಪಲಂಫೆರೋ ದಾರಿಯನ್ನು ಸ[illegible]ನ ಕಾಳಗ ಮಾಡಿ ಹಾರಿಸಿಬಿಟ್ಟಿರುತ್ತಾರೆ. ಟ್ರಿಸ್ಟ ಸರಹದ್ದಿನಲ್ಲಿರುವ ಇಟಲಿಯನರ ಸೇನೆಯು ಮುಂದರಿದು ಗುಡ್ಡ ಶಿಖರಗಳಲ್ಲಿ ಸೇರಿಕೊಂಡಿರುವವು. ಇಟಲಿಯನರು ಕೆಳಗಿನ ಸೊಗ್ಗೆ ಪ್ರಾಂತ್ಯಕ್ಕೆ ಹೋಗಲು ಪ್ರಯತ್ನಿಸುತ್ತಿದ್ದಾರೆ. ಆಸ್ಟ್ರಿಯನರು ಸಂಕಗಳನ್ನು ಹಾಳುಮಾಡಿ ಹಿಂದೆ ಓಡುತ್ತಿದ್ದಾರೆಂತ ಪ್ರಕಟವಾಗಿದೆ.

ಗೆಲಿಸಿಯದಲ್ಲಿ ತಾ. ೨೪ರಿಂದ ರುಷ್ಯನರಿಗೂ ಶತ್ರುಗಳಿಗೂ [illegible] ಕಾಳಗ ನಡೆಯಲು ಪ್ರಾರಂಭವಾಗಿದೆ. [illegible] ನದಿಯ ಎರಡು ದಡಗಳಲ್ಲಿಯೂ [illegible] ಮತ್ತು ಪ್ರೆಜೆಮ್ಮೆಸ್ಲ [illegible]

ತಾ. ೨೮ನೇ ಮೇ.

ಬ್ರಿಟಿಷರ "ಟ್ರಿಯಂಫ್" ಎಂಬ ಯುದ್ಧನಾವೆಯು ಗೆಲಿಪೋಲ್ಲಿಯಲ್ಲಿ ಇಳಿದಿರುವ ಆಸ್ಟ್ರೇಲಿಯನರ ಮತ್ತು ನ್ಯೂಜಿಲೇಂಡಿನ ಸೇನೆಗಳಿಗೆ ಸಹಾಯ ಮಾಡುತ್ತಿರುವಾಗ ಶತ್ರುಗಳ ಒಂದು ಜಲಂತರ್ಗಾಮಿಯ ಟೋರ್ಪೆಡೋ ದೋಣಿಯು ಅದನ್ನು ಮುಣುಗಿಸಿಬಿಟ್ಟಿತು. ಯುದ್ಧನಾವೆಯಲ್ಲಿದ್ದ ಹೆಚ್ಚಿನ ಆಫೀಸರರೂ ಕೆಪ್ತನ್ ಮತ್ತು ಮುಖ್ಯ ಸೇನಾಧಿಪತಿಯೂ ರಕ್ಷಣೆ ಹೊಂದಿರುತ್ತಾರೆ.

ಫ್ರೆಂಚರಿಗೆ ಈಚೆಗೆ ಅರ್ರಾಸಿನಲ್ಲಿ ಆದ ಜಯದಿಂದ ಜರ್ಮನರು ಹುರುಮಂಬಿ ಪ್ರಚಂಡವಾದ ಸೇನೆಯೊಂದಿಗೆ ಫ್ರೆಂಚರ ಮೇಲೆ ಹಲ್ಲೆ ಮಾಡಿದರು. ಫ್ರೆಂಚರು ಮಹತ್ವವಾದ ಧೈರ್ಯ ಸಾಹಸಗಳನ್ನು ತೋರಿಸಿ ತಮ್ಮ ನೆಲಿಗಳನ್ನು ಕಾಪಾಡಿಕೊಂಡರು. ಜರ್ಮನರು ತಿರಿಗಿ ತಿರಿಗಿ ಎಂಜಸ್ಸಿನಲ್ಲಿ ಫ್ರೆಂಚರ ಮೇಲ್ಬಾಯಿದರು. ಫ್ರೆಂಚರು ಡುವಾಲ್ ಪ್ರಾಂತ್ಯದಲ್ಲಿ ಹೆಚ್ಚುಕಡಿಮೆ ಎಲ್ಲಾ ನೆಲಿಗಳನ್ನು ಸ್ವಾಧೀನಮಾಡಿಕೊಂಡರು. ಜರ್ಮನರು ಪುನಃ ಕ್ರೋಧವನ್ನು ತಾಳಿ ಫ್ರೆಂಚರ ಮೇಲೆ ಬಿದ್ದರು. ಆದರೆ ಫ್ರೆಂಚರು ಲೊರೆಟ್ಟಿಯ ಉತ್ತರದಲ್ಲಿ ಮುಂದರಿದು ಸೌಚೆಜ್‌ನ ಹತ್ತಿರ ಜಯಪ್ರದರಾದರು. ಫ್ರೆಂಚರ ವಿಮಾನಗಾಮಿಗಳು ರಣರಂಗದಲ್ಲೆಲ್ಲಾ ವಿಶೇಷವಾದ ಪ್ರತಾಪವನ್ನು ತೋರಿಸುತ್ತಿದ್ದಾರೆ.

ಅರ್ರಾಸಿನ ಉತ್ತರದಲ್ಲಿ ಜರ್ಮನರು ಕಳಕೊಂಡ ನೆಲಿಗಳನ್ನು ಪಡೆಯಲು ಜೀವದ ಮರವೆ ಇಲ್ಲದೆ ಕಾದಾಡುತ್ತಿದ್ದಾರೆ. ಎಂಜರ್ಸ್ ಡಿಸ್ಟ್ರಿಕ್ಟಿನಲ್ಲಿ ದಿನವೆಲ್ಲಾ ಕಠಿಣ ಕಾಳಗ ನಡೆದಿರುವದು. ಒಂದು ಕಡೆಯಲ್ಲಿ ಫ್ರೆಂಚರು ಜರ್ಮನರಿಗೆ ಒಂದಿಷ್ಟು ಎಡೆಕೊಟ್ಟರು. ಆದರೆ ಒಂದು ತಾಸಿನ ನಂತರ ಫ್ರೆಂಚರು ಇದೇ ನೆಲಿಯನ್ನು ಸ್ವಾಧೀನಮಾಡಿಕೊಂಡರು. ಲೊರೆಟ್ಟೆ ಚೇಪೆಲ್ ಮತ್ತು ನ್ಯೂವಿಲ್ಲೆಯಲ್ಲಿಯೂ ಫ್ರೆಂಚರಿಗೆ ಜಯವಾಗಿರುವದು. ಪಾರಿಸಿನ ಕಡೆಗೆ ಹೋಗುತ್ತಿದ್ದ ಜರ್ಮನರ ವಾಯುನಾವೆಯನ್ನು ಫ್ರೆಂಚರು ಹಿಂದಕ್ಕೆ ಓಡಿಸಿ, ಸ್ವೊಸನ್ನಿನ ಹತ್ತಿರ ಅದನ್ನು ಕೆಡವಿದರು. ಜರ್ಮನರ ಇಬ್ಬರು ವಾಯುನಾವಿಕರು ಹತರಾದರು.

ಇಂಗ್ಲಾಂಡಿನ ಸೌತ್ ಎಂಡ್ ಎಂಬಲ್ಲಿಗೆ ಜರ್ಮನರ ಜೆಫಲಿನ್ ನಾವೆಯು ಬೊಂಬು ಹಾಕಿರುವದು. ಇದರಿಂದ ಅಲ್ಲಿಗೆ ಹೋಗಿದ್ದ ಒಬ್ಬ ಹೆಂಗಸು ಸತ್ತಳು. ಇತರ ಕೆಲವು ನಷ್ಟವೂ ಆಗಿರುತ್ತದೆ.

ಲಂಡನ್ ವರ್ತಮಾನ ಸಂಗ್ರಹ ಆಫೀಸಿನವರು ಈ ರೀತಿ ಪ್ರಕಟಿಸಿರುವರು:—ಸೌತ್ ಎಂಡಿನಲ್ಲಿ ಜೆಫಲಿನ್ ನಾವೆಯು ಹಾಕಿದ ಬೊಂಬಿನಿಂದ ಇಬ್ಬರು ಹೆಂಗಸರು ಹತರಾಗಿರುತ್ತಾರೆ. ಒಂದು ಮಗುವಿಗೆ ಕಠಿಣ ಗಾಯವಾಗಿದೆ. ಬ್ರಿಟಿಷ ವಾಯುನಾವೆಗಳು ಜೆಫಲಿನ್ ನಾವೆಯನ್ನು ಹಿಂದಟ್ಟಿತು. ಅದು ಪೂರ್ವ ದಿಕ್ಕಿಗೆ ಓಡಿ ತಪ್ಪಿಸಿಕೊಂಡಿತು.

ಇಟಲಿಯ ಅರಸರಾದ ವಿಕ್ಟರ್ ಇಮ್ಮಾನುವೇಲರು ನೆಲ ಮತ್ತು ಜಲ ಸೇನೆಗಳ ಶ್ರೇಷ್ಠ ಸೇನಾಧಿಪತಿಯಾಗಿ ರಣರಂಗಕ್ಕೆ ಹೋಗಿರುತ್ತಾರೆ.

ಆಸ್ಟ್ರಿಯ ಮತ್ತು ಅಲ್ಬಾನಿಯ ಕರಾವಳಿಗಳನ್ನು ಇಟಲಿಯವರು ಮುಚ್ಚಿರುತ್ತಾರೆಂತ ಪ್ರಕಟವಾಗಿದೆ.

ಇಟಲಿಯನರು ಯುದ್ಧ ಸಾರಿ ೪ ತಾಸುಗಳ ನಂತರ ಬ್ರಿಜಾನೋದ ಹತ್ತಿರ ಸರಹದ್ದನ್ನು ದಾಟಿದರು. ಅರ್ಧ ತಾಸು ಕದನ ಮಾಡಿ ಆಸ್ಟ್ರಿಯಾನರು ಹಿಮ್ಮೆಟ್ಟಿದರು. ಆಸ್ಟ್ರಿಯಾನರು ಬಹಳ ಕಠಿಣ ರೀತಿಯಿಂದ ಎದುರಾಡುವರೆಂದು ಇಟಲಿಯನರು ಭಾವಿಸಿದ್ದ ಸ್ಥಳವು ಮೊದಲನೇ ದಿವಸ ಇಟಲಿಯನರಿಗೆ ವಿಶೇಷ ಕಷ್ಟವಿಲ್ಲದೆ ಸ್ವಾಧೀನವಾಯಿತು.

ತಾ. ೨೪-೨೫ರಲ್ಲಿ ರುಷ್ಯನರು ವಿಸ್ತುಲದ ಎಡಭಾಗದಲ್ಲಿ ಶತ್ರುಗಳ ಕೆಲವು ಹಲ್ಲೆಗಳನ್ನು ಹಿಂದಕಟ್ಟಿರುತ್ತಾರೆ. ತಾ. ೨೫ರಲ್ಲು ಸಾನ್ ನದಿಯ ಎರಡು ದಡಗಳಲ್ಲಿಯೂ ಪ್ರೆಜ್‌ಮ್ಮೆಸ್ಲ ಮತ್ತು ಜಾರ್‌ಸ್ಲೋದಲ್ಲಿಯೂ ಕಠಿಣ ಕಾಳಗ ನಡೆದಿರುವದು. ಶತ್ರುಗಳು ಪ್ರೆಜ್‌ಮ್ಮೆಸ್ ಮತ್ತು ನೀಸ್ಟರಿನಲ್ಲಿ ಮಹಾ ಸೇನೆಯನ್ನು ತಂದೊಡ್ಡಿರುತ್ತಾರೆ.

ತಾ. ೨೯ನೇ ಮೇ.

ಗಲಿಪೋಲಿಯಲ್ಲಿ ಬ್ರಿಟಿಷರ "ಮೆಜೆಸ್ಟಿಕ್" ಎಂಬ ಯುದ್ಧ ಹಡಗವನ್ನು ಶತ್ರುಗಳ ಜಲಂತರ್ಗಾಮಿ ನಾವೆಯು ಮುಣುಗಿಸಿರುವದು. ಹೆಚ್ಚು ಕಡಿಮೆ ಎಲ್ಲಾ ಆಫೀಸರರೂ, ಸೇನಿಕರೂ ರಕ್ಷಣೆ [illegible] [illegible] ಸಮುದ್ರದಲ್ಲಿ ಆಯುಧ ಸಾಮಗ್ರಿಗಳ [illegible] ಎರಡು ನಾವೆಗಳನ್ನು ಮುಣುಗಿಸಿರುವದೆಂತಲೂ [illegible] ಪಲಿನಲ್ಲಿದ್ದ ನಾವೆಗಳಿಗೂ ಗುಂಡು ಹಾರಿಸಿರುವದೆಂತಲೂ ಪ್ರಕಟವಾಗಿದೆ.

ಹಿಯರ್‌ನೆಸ್ ಬಂದರಿನಲ್ಲಿ "[illegible]" ಎಂಬ ಬ್ರಿಟಿಷರ ಸಹಾಯಕ ಸೇನೆಯ ಹಡಗವು ಆಕಸ್ಮಾತ್ತಾಗಿ ಸಿಡಿದು ಹೋಗಿರುವದು. ಇದರಿಂದ ಸುಮಾರು ೩೦೦ ಮಂದಿ ನಾಶವಾದರು ಎಂಬ ವಾರ್ತೆ ಬಂದಿರುವದು.

ಮೈಸರ್ ಕಾಲಿವೆಯ ಸಮೀಪ ಬಿಟ್ಟು ಬಿಟ್ಟು ತೋಫು ಕಾಳಗವು ನಡೆದಿರುವದು. ಅರ್ರಾಸಿನ ಉತ್ತರದಲ್ಲಿ ಕೆಲವು ಕಠಿಣ ಕಾಳಗಗಳು ನಡೆದು ಫ್ರೆಂಚರಿಗೆ ಜಯವಾಗಿರುವದು. ಎಂಜ್ರಿಸಿನಲ್ಲಿ ಎರಡಾವರ್ತಿ ಮೇಲ್ಬಾಯಿದ ಜರ್ಮನರು ಹಿಮ್ಮೆಟ್ಟಿರುತ್ತಾರೆ. ಫ್ರೆಂಚರು ಕೆಲವು ಕಂದಕಗಳನ್ನೂ, ಎಬ್‌ಲೈನ್ ಎಂಬ ಗ್ರಾಮವನ್ನೂ ಹಿಡಿದಿರುತ್ತಾರೆ. ಫ್ರೆಂಚರ ಸೇನೆಯು ಮುಂದರಿದು ೪೦೦ ಮಂದಿಯನ್ನು ಸೆರೆಹಿಡಿದಿರುವದು. ಸೆರೆಹಿಡಿದವರಲ್ಲಿ ಕೆಲವು ಜರ್ಮನ ಆಫೀಸರರೂ ಸೇರಿದ್ದರು.

ಫ್ರೆಂಚರ ವಿಮಾನಗಾಮಿಗಳು ಲಡ್‌ವಿಗ್‌ಶೇವನ್ ಎಂಬಲ್ಲಿಯ ಜರ್ಮನರ ಗ್ಯಾಸ್ ಕಾರ್ಖಾನೆಗೆ ಬೊಂಬುಗಳನ್ನು ಹಾಕಿರುವರು. ಒಪ್ಪಾವು ಎಂಬಲ್ಲಿರುವ ಜರ್ಮನರ ಕಾರ್ಖಾನೆಗೂ ಫ್ರೆಂಚ ವಾಯುನಾವೆಗಳು ಹಲ್ಲೆ ಮಾಡಿರುವವು.

ಟೈರೊಲ್-ಟ್ರೆಂಟಿನೋ ಸರಹದ್ದಿನಲ್ಲಿ ಇಟಲಿಯನರು ಇದ್ರೊ ಮತ್ತು ಗಾರ್ಡ ಸರೋವರಗಳ ಉತ್ತರದಲ್ಲಿ ಮುಂದರಿದಿರುತ್ತಾರೆ. ಇಟಲಿಯನರು ಮುಂದರಿದ ಸ್ಥಳಗಳಲ್ಲಿರುವ ನಿವಾಸಿಕರೆಲ್ಲಾ ತಮ್ಮ ಸಂತೋಷವನ್ನು ಪ್ರದರ್ಶಿಸುತ್ತಿದ್ದಾರೆ. ಕಾರ್ನಿಕ್ ಸರಹದ್ದಿನಲ್ಲಿ ಇಟಲಿಯನರ ಅಲ್ಪಾಯಿನ್ ಸೇನೆಯು ಜಯ ಹೊಂದುತ್ತಾ ಆಸ್ಟ್ರಿಯನರ ಸೇನಿಕರನ್ನು ಸೆರೆಹಿಡಿದಿರುತ್ತದೆ. ಗ್ರೇಡ್‌ನೇ ಎಂಬ ಸ್ಥಳವನ್ನು ಇಟಲಿಯನರು ಹಿಡಿದಿರುತ್ತಾರೆ.

ಶೇವ್ಲೆ ಪ್ರಾಂತ್ಯದಲ್ಲಿ ರುಷ್ಯನರಿಗೆ ಜಯವಾಗಿರುವದು. ಇಲ್ಲಿ ರುಷ್ಯನರು ಕೆಲವು ನೂರು ಶತ್ರು ಸೇನಿಕರನ್ನು ಸೆರೆಹಿಡಿದಿರುತ್ತಾರೆ. ಜೆಡಾನೋ ಪ್ರಾಂತ್ಯದಲ್ಲಿ ಶತ್ರುಗಳು ವಿಷಕರವಾದ ಗ್ಯಾಸ್ ಪ್ರಯೋಗಿಸಿದರು. ಆದರೆ ಪ್ರಯೋಜನವಾಗಲಿಲ್ಲ.

ಗೆಲೀಸಿಯದಲ್ಲಿ ಸಾನ್ ಮತ್ತು ವಿಸ್ತುಲದ ಮಧ್ಯೆ ಶತ್ರುಗಳು ರಣರಂಗದಲ್ಲೆಲ್ಲಾ ಹಲ್ಲೆಗಳನ್ನು ಮಾಡಿ ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುತ್ತಾರೆ. ಪ್ರೆಮ್ಮೆಸ್ಲ ಮತ್ತು ಲುಬಾಸ್ಜೆವ್ಕ ಎಂಬ ನದಿಯ ಮಧ್ಯೆ ಕಠಿಣ ಕಾಳಗ ನಡೆಯುತ್ತಿದೆ. ಶತ್ರುಗಳಿಗೆ ಯಾವ ಕಡೆಯಲ್ಲಿಯೂ ಜಯವಾಗಲಿಲ್ಲ. ಶತ್ರುಗಳಿಗೆ ವಿಶೇಷ ನಷ್ಟವಾಗಿರುವದು.

ಕಾಕಾಸಸಿನಲ್ಲಿ ಡಿಲ್ಮಾನ್ ಮತ್ತು ವಾನ್ ಪ್ರಾಂತ್ಯದಲ್ಲಿ ರುಷ್ಯನರು ತುರ್ಕರನ್ನು ಸೋಲಿಸಿರುತ್ತಾರೆ. ಮಿಲಾಜರ್ದ್ ಎಂಬಲ್ಲಿಯ ದಕ್ಷಿಣದಲ್ಲಿ ರುಷ್ಯನರು ಕರ್ಡ್ಸ್ ಸೇನೆಯನ್ನು ಸೋಲಿಸಿರುತ್ತಾರೆ.

ತಾ. ೩೧ನೇ ಮೇ.

ಕಳದ ಶುಕ್ರವಾರ ಬೆಳಗ್ಗೆ ೯ ಗಂಟೆಗೆ "ಎತಿಯೋಪ್" ಎಂಬ ಹಡಗವನ್ನು ಇಂಗ್ಲಿಷ್ ಕಾಲಿವೆಯ ಉದ್ಗಮಸ್ಥಾನದಲ್ಲಿ ಜರ್ಮನರ ಜಲಂತರ್ಗಾಮಿ ನಾವೆಯು ಮುಣುಗಿಸಿತು. ಮುಖ್ಯ ಆಫೀಸರನೂ ೧೩ ನಾವಿಕರೂ ರಕ್ಷಣೆ ಹೊಂದಿದರು. ಉಳಿದವರು ಇತರ ದೋಣಿಗೆ ಸೇರಿಕೊಂಡರು.

ಕಾಲಿವೆಯಲ್ಲಿ ಹೋಗುತ್ತಿದ್ದ "ಅಗೋಲ್‌ಶೆಯರ್" ಎಂಬ ನಾವೆಯು ಎರಡು ಜಲಂತರ್ಗಾಮಿ ನಾವೆಗಳು ಮೇಲೆ ಎದ್ದದ್ದನ್ನು ದೂರದಿಂದ ನೋಡಿ ಪೂರ್ಣವೇಗದಿಂದ ಓಡಿ ತಪ್ಪಿಸಿಕೊಂಡಿತು. "ಟುಲಕ್‌ಮೊರು" ಎಂಬ ನಾವೆಯೂ "ಗ್ಲೆನ್ಲಿ" ಎಂಬ ನಾವೆಯೂ ಜಲಂತರ್ಗಾಮಿ ನಾವೆಗಳಿಂದ ಮುಣುಗಿಸಲ್ಪಟ್ಟಿರುವದು.

ಲಾಬಾಸ್ಸೆಯಲ್ಲಿ ಬ್ರಿಟಿಷ ಸೇನಕರು ಮುಂದರಿದಿರುತ್ತಾರೆ. ಎಂಜರ್ಸ್ ಪ್ರಾಂತ್ಯದಲ್ಲಿ ಶತ್ರುಗಳು ೨೪ ತಾಸಿನೊಳಗೆ ಏಳಾವರ್ತಿ ಹಲ್ಲೆ ಮಾಡಿ ಹಿಮ್ಮೆಟ್ಟಿದರು. ಎಂಜರ್ಸ್ ಮತ್ತು ಅರ್ರಾಸಿನ ಮಧ್ಯೆ ದಿನವೆಲ್ಲಾ ತೋಪಿನ ಕಾಳಗ ನಡೆದಿರುವದು. ಮಿತ್ರರು ಎಲ್ಲಾ ನೆಲಿಗಳನ್ನು ಕಾಪಾಡಿಕೊಂಡಿರುವರು. ಜರ್ಮನರು ಲೊರೆಟ್ಟೆ ಗುಡ್ಡದ ಮೇಲಿದ್ದ ಫ್ರೆಂಚ ನೆಲಿಗಳಿಗೆ ಗುಂಡುಹಾರಿಸಿದರು. ಫ್ರೆಂಚರು ಎಕ್ಸ್-ನೌಲೆಟ್ ದಾರಿಯಲ್ಲಿ ಮುಂದರಿದಿರುತ್ತಾರೆ. [illegible]ನ್‌ನಲ್ಲಿದ್ದ ಫ್ರೆಂಚ ನೆಲಿಗಳಿಗೆ ಜರ್ಮನರು ಮದ್ದು [illegible] ಗುಂಡು ಹಾರಿಸಿದರು.

ಕ್ಲೈಸರ್ ಕಾಲುವೆಯ ಬಲದಡದಲ್ಲಿ ಪಿಲ್ಕೆನ್ ಡಿಸ್ಟ್ರಿಕ್ಟಿನಲ್ಲಿದ್ದ ಜರ್ಮನ ಕಂದಕಗಳನ್ನೆಲ್ಲಾ ಮಿತ್ರರು ಹಿಡಿದಿರುತ್ತಾರೆ. ೫೦ ಸೇನಿಕರೂ ಮೂರು ಫಿರಂಗಿಗಳೂ ಮಿತ್ರರಿಗೆ ದೊರಕಿರುವವು

ಅರ್‍ರಾಸಿನ ಉತ್ತರದಲ್ಲಿ ಕಠಿಣ ತೋಪು ಕಾಳಗವು ನಡೆಯುತ್ತಿದೆ. ನ್ಯೂವಿಲ್ಲೆಯ ದಕ್ಷಿಣ ಪೂರ್ವದಲ್ಲಿ ಮಿತ್ರರ ೪೦೦ ಗಜ ಮುಂದರಿದು ಹಲವು ಶತ್ರು ಸೇನಿಕರನ್ನು ಸೆರೆಹಿಡಿದಿರುತ್ತಾರೆ ಬ್ವೋಸ್ ಲೀ ಪೊಟ್ರೆಯಲ್ಲಿ ಮಿತ್ರರು ಶತ್ರುಗಳ ಕೆಲವು ಕಂದಕಗಳನ್ನು ಸ್ವಾಧೀನ ಮಾಡಿಕೊಂಡು ೫೦ ಸೇನಿಕರನ್ನು ಸೆರೆಹಿಡಿದಿರುತ್ತಾರೆ ಅಲ್ಸೇಸಿನ ಸ್ಕೆನ್ಸೆಸ್ಟ್ರೆತ್ ಎಂಬಲ್ಲಿ ಮೇಲ್ಗಾಯಿದ ಜರ್ಮನರು ಹಿಮ್ಮೆಟ್ಟಿರುವರು

ತಾ ೨೭ರಿಂದ ಫೆಸ್ಟುಬರ್ಟಿನ ಪೂರ್ವದಲ್ಲಿ ಬ್ರಿಟಿಷರಿಗೆ ಕೆಲವು ಸಣ್ಣಪುಟ್ಟ ಜಯಗಳಾಗಿರುವವು ಒ ಷ ಬ್ರಿಟಿಷರ ವಾಯುನಾವೆಯು ಜರ್ಮನರ ಒಂದು ವಾಯುನಾವೆಯನ್ನು ಕೆಳಗೆ ದೊಬ್ಬಿ ನಾಶಮಾಡಿರುವದು ಎಂತ ಸರ್ ಜ್ಹೋನ್ ಫ್ರೆಂಚರ ವರದಿಯಿಂದ ತಿಳಿದು ಬರುತ್ತದೆ

ರುಶ್ಯನರು ಬಚ್ಚೆ ಎಂಬಲ್ಲಿ ಜರ್ಮನರ ಕೋಟೆ ಕೊತ್ತಲುಗಳಿಂದ ಬಲಕಾಯಿಸಿದ ಸ್ಥಳವನ್ನು ಸ್ವಾಧೀನ ಮಾಡಿಕೊಂಡು ಶತ್ರು ಸೇನಿಕರಲ್ಲಿ ೧೦೦೦ ಮಂದಿಯನ್ನು ಸೆರೆಹಿಡಿದಿರುತ್ತಾರೆ ಗೆಲಿಸಿಯದಲ್ಲಿ ಕಠಿಣ ಕಾಳಗವು ನಡೆಯುತ್ತಿದೆ ರುಶ್ಯನರು ಮೇ ತಾ ೨೭ನೇ ರಾತ್ರಿ ಯುದ್ಧಕ್ಕೆ ಬಂದ ಶತ್ರುಗಳಲ್ಲಿ ಅತಿರೇಕವಾದ ನಷ್ಟವನ್ನುಂಟು ಮಾಡಿದರು ತಾ ೨೮ರಲ್ಲಿ ರುಶ್ಯನರು ಬಿನಾವಿ ರಣರಂಗದಲ್ಲಿ ಶತ್ರುಗಳ ಕೋಟೆಗಳನ್ನು ಹಿಡಿದು ಆಸ್ಟ್ರಿಯ ಮತ್ತು ಜರ್ಮನರ ೬೦೦೦ ಸೇನಿಕರನ್ನೂ ೬ ಭಾರವಾದ ದೊಡ್ಡ ಫಿರಂಗಿಗಳನ್ನೂ ೬ ತೋಫುಗಳನ್ನೂ ಸೆರೆಹಿಡಿದಿರುತ್ತಾರೆ ನಂತರ ಪುನಃ ಸಾವಿರ ಸೇನಿಕರೂ ೫ ಫಿರಂಗಿಗಳೂ ರುಶ್ಯನರಿಗೆ ಸಿಕ್ಕಿದವು ಎಂತ ರುಶ್ಯ ಸರಕಾರದವರು ಪ್ರಕಟಿಸಿರುತ್ತಾರೆ

ಪ್ರೈಜ್‌ಮ್ಯಸ್ಲ ಮತ್ತು ಸೇನಿವದ ಮಧ್ಯೆ ನಡೆಯುವ ಕದನದಲ್ಲಿ ಬದಲಾವಣೆಯಾಗಲಿಲ್ಲ ಪ್ರೈಜ್‌ಮ್ಯಸ್ಲ ಮತ್ತು ನೀಸ್ಕರಿನ ಮಧ್ಯೆ ಮೇಲ್ಗಾಯಿದ ಪ್ರಚಂಡ ಜರ್ಮನ ಸೇನೆಯು ಹಿಮ್ಮೆಟ್ಟಿರುವದು ರುಶ್ಯನರು ಸ್ವಿತ್ರ ಮತ್ತು ಲೊಮಿನ್ಸ ನದಿಗಳ ಮಧ್ಯೆ ಜರ್ಮನರಿಗೆ ಯುದ್ಧಕೊಟ್ಟು ೮೩೨೩ ಮಂದಿಯನ್ನು ಸೆರೆಹಿಡಿದಿರುತ್ತಾರೆ

ರುಶ್ಯನರ ಪಕ್ಕಸೇ ಮೇಲ್ಗಾಯಿದ್ದರಿಂದ ಜರ್ಮನರು ಸ್ವಾಡಿಲಾರೆಯನ್ನು ಬಿಟ್ಟು ತೆರಳಬೇಕಾಯಿತೆಂದೂ ಜರ್ಮನರ ಫಿರಂಗಿಗಳು ರುಶ್ಯನರಿಗೆ ದೊರಕಿರುವವೆಂದೂ ಜರ್ಮನರು ಪ್ರಕಟಿಸಿರುತ್ತಾರೆ

ರುಶ್ಯನರು ಕೌಕಾಸಸಿನಲ್ಲಿ ವಾನ್ ಎಂಬ ಸ್ಥಳವನ್ನು ಸ್ವಾಧೀನಮಾಡಿಕೊಂಡಾಗ ಶತ್ರುಗಳ ೨೬ ಫಿರಂಗಿಗಳೂ ಯುದ್ಧ ಸಾಮಾಗ್ರಿಗಳೂ ಇತರ ಆಹಾರ ಸಾಮಾಗ್ರಿಗಳೂ ದೊರಕಿರುತ್ತವೆ ಸರಕಾರ ಖಜಾನೆಯ ಹೆಚ್ಚಿನ ಹಣವೂ ರುಶ್ಯನರಿಗೆ ದೊರಕಿರುತ್ತದೆ

ತಾ ೨೪ರಲ್ಲಿ ಪೋರ್ಟೊ ಕೋರ್ಸಿನಿಯಲ್ಲಿ ಮತ್ತು ಬಾರ್ಲೆಟ್ಟೆಯಲ್ಲಿ ಇಟಲಿಯನರಿಗೂ ಆಸ್ಟ್ರಿಯನರಿಗೂ ನೌಕಾವೇಳೆ ಕದನವು ನಡೆದಿರುವದು ಆಸ್ಟ್ರಿಯನರ ಟೋರ್ಪೆಡೋ, ೩ ಡಿಸ್ಟ್ರೋಯರ್ ಯುದ್ಧನಾವೆಗಳ ಮತ್ತೊಂದು ಯುದ್ಧನಾವೆಗೆ ವಿಶೇಷ ಹಾನಿಯಾಗಿದೆ ಇಟಲಿಯನರ 'ಟರ್ಬೈನ್' ಎಂಬ ಡಿಸ್ಟ್ರೋಯರ್ ನಾವೆಯು ನಾಶವಾಗಿರುವದು ಈ ನಾವೆಗೆ ಶತ್ರುಗಳ ನಾಲ್ಕು ನಾವೆಗಳು ಹಲ್ಲೆ ಮಾಡಿದವು ''ಟರ್ಬೈನ್''ನ ಮದ್ದುಗುಂಡುಗಳು ಮುಗಿದು ಹೋಗಿ ಬೆಂಕಿ ತಗಲಿತು ಅದರ ನಾವಿಕರಲ್ಲಿ ೯ ಮಂದಿ ರಕ್ಷಣೆ ಹೊಂದಿದರು ಆಸ್ಟ್ರಿಯನರು ೩೫ ನಾವಿಕರನ್ನು ರಕ್ಷಿಸಿದರು ಸೆಬಿನಿಕೊ ಎಂಬಲ್ಲಿ ಲಂಗರು ಹಾಕಿದ್ದ ಡಿಸ್ಟ್ರೋಯರ್ ನಾವೆಗಳ ಮೇಲೆ ಒಂದು ವಾಯು ನಾವೆಯು ಬೊಂಬುಗಳನ್ನು ಬಿಸಾಡಿರುವದು

ಆಸ್ಟ್ರಿಯನರ ಬಲಕಾಯಿಸಿಕೊಂಡ ನೆಲೆಗಳನ್ನು ಬಿಟ್ಟು ಎದುರು ಸಿಕ್ಕಿದ ಮನೆಗಳನ್ನೂ, ದಾರಿಗಳನ್ನೂ, ಸಂಕಗಳನ್ನೂ ಹಾಳುಮಾಡುತ್ತಾ ಹಿಂದೆ ಓಡುತ್ತಿದ್ದಾರೆ ಆಸ್ಟ್ರಿಯನರು ಸ್ಟೊರೋ ಎಂಬಲ್ಲಿ ಬಲವಾದ ಕೋಟೆಕೊತ್ತಲುಗಳಿಂದ ತಮ್ಮನ್ನು ಬಲಕಾಯಿಸಿಕೊಂಡಿದ್ದರು ಆದರೆ ಇಟಲಿಯನರೊಡನೆ ಸ್ವಲ್ಪ ಸಮಯ ಕಠಿಣ ಕಾಳಗಮಾಡಿ ಲಾ ಎಂಬಲ್ಲಿ ಜರ್ಮನರ ಬೆಂಬಲ ಸೇನೆ ಇದೆಂದು ಭಾವಿಸಿ ಅಲ್ಲಿಗೆ ಓಡಿದರು ಅಲ್ಲಿ ಜರ್ಮನರ ಸೇನೆಯ ಬದಲಿಗೆ ಇಟಲಿ ಸೇನೆ ಇರುವುದನ್ನು ನೋಡಿ ಪುನಃ ಹಿಂದಿರುಗಿ ಟ್ರೆಂಟಿನ ಕಡೆಗೆ ಓಡಿದರು. ಇಟಲಿಯನರು ಫ್ರೆಂಚರ ಹೊಸ ನಮೂನೆಯ ಫಿರಂಗಿಗಳನ್ನು ಉಪಯೋಗಿಸಿ ಹೆಚ್ಚಿನ ಪ್ರಯೋಜನವನ್ನು ಪಡೆದಿರುತ್ತಾರೆ.

ಟೈರೋಲಿನಲ್ಲಿ ಇಟಲಿಯನರು ಕೋಟೆಗಳನ್ನು ಹಾಳುಮಾಡಿ ಡಿಗೆ ನದಿಯ ಎರಡು ದಡಗಳನ್ನೂ ಆಕ್ರಮಿಸಿ ಟ್ರೆಂಟಿಗೆ ಹೋಗುವ ದಾರಿಯಲ್ಲಿರುವ ಲಾ ಎಂಬ ಸ್ಥಳವನ್ನು ಸ್ವಾಧೀನಮಾಡಿಕೊಂಡಿದ್ದಾರೆ ಮಧ್ಯಾಹ್ನದಿಂದ ಸಾಯಂಕಾಲದ ವರೆಗೆ ಈ ಕದನವು ನಡೆಯಿತು ಇಟಲಿಯನರಿಗೆ ಆದ ನಷ್ಟವು ಅತಿ ಕಡಿಮೆಯಾಗಿರುವದು

ಟೈರೊಲ್ — ಟ್ರೆನ್ಟಿನೋ ಸರಹದ್ದಿನಲ್ಲಿ ಇಟಲಿಯರು ಶ್ರೇಷ್ಠವಾದ ಒಂದು ನೆಲೆಯನ್ನು ಹಿಡಿದಿರುತ್ತಾರೆ ಇಟಲಿಯನರ ತೋಪುಗಳ ಲ ಸೆರ್ವದಲ್ಲಿದ್ದ ಒಂದು ಕೋಟೆಯನ್ನು ಹಾಳು ಮಾಡಿರುತ್ತದೆ ಕೋಟೆಯಲ್ಲಿದ್ದ ಸೇನೆಯು ಬಿಳೀ ಬಾವಟೆಯನ್ನು ತೋರಿಸಿರುತ್ತದೆ ಸಿವ ವೇಷ್ನ ಎಂಬಲ್ಲಿ ಇಟಲಿಯನರ ತೋಪು ಸೇನಾಂಗವು ಆಸ್ಟ್ರಿಯನರು ಬಲಕಾಯಿಸಿಕೊಂಡ ಸ್ಥಳವನ್ನು ಹಾಳ ಮಾಡಿ ಕಾಲಾಳು ಸೇನೆಯು ಮುಂದರಿದು ವೆಜ್ನ ಗ್ರಾಮವನ್ನು ಸ್ವಾಧೀನಮಾಡಿಕೊಂಡಿರುತ್ತದೆ ಕಾಡೋರು ಎಂಬಲ್ಲಿಯೂ ಇಟಲಿ ಸೈನಿಕರು ಕೆಲವು ಕಣಿವೆಗಳನ್ನೂ ತಗ್ಗುಗಳನ್ನೂ ಹಿಡಿದಿರುತ್ತಾರೆ

ಪೋರ್ಚುಗಲಿಗೆ ತಿಯೋಫಿಲ್ ಬ್ರಾಗ ಎಂಬವರು ಹೊಸ ಪ್ರೆಸಿಡೆಂಟರಾಗಿ ನೇಮಿಸಲ್ಪಟ್ಟಿರುತ್ತಾರೆ

ಜೂನು ತಾ ೧.

ಬ್ರಿಟಿಷರ ೧೧ L ಜಲಂತರ್ಗಾಮಿ ನಾವೆಯು ಈಚೆಗೆ ಕನ್ಸ್ಟಾಂಟಿನೋಪಲಿಗೆ ಹಲ್ಲೆಮಾಡಿ ಜರ್ಮನರ ಒಂದು ಸರಕು ನಾವೆಯನ್ನು ಮುಳುಗಿಸಿದ್ದರಿಂದ ಕನ್ಸ್ಟಾಂಟಿನೋಪಲಿನಲ್ಲಿ ವಿಶೇಷ ಗಲಿಬಿಲಿ ಉಂಟಾಗಿರುವದು ಎಲ್ಲಾ ಅಂಗಡಿಗಳನ್ನು ಮುಚ್ಚಿರುತ್ತಾರೆ ಹೆಚ್ಚಿನ ಹಡಗುಗಳು ಒಳಬಂದರುಗಳಲ್ಲಿ ಮರೆಸೊಕೊಂಡಿವೆ

ಸರ್ ಎಡ್ವರ್ಡ್ ಗ್ರೇಯವರು ಕಣ್ಣುದೃಷ್ಟಿ ಸಂಬಂಧ ಸ್ವಲ್ಪ ದಿವಸ ರಜೆ ತಕ್ಕೊಂಡಿರುವುದರಿಂದ ಕ್ರೂ ಪ್ರಭುಗಳವರು ವಿದೇಶಿ ಆಫೀಸಿನ ಚಾರ್ಜ ತಕ್ಕೊಂಡಿರುವರು ಲೇನ್ಸ್‌ಡೌನ್ ಪ್ರಭುಗಳವರು ಇವರಿಗೆ ಸಹಾಯಕರಾಗಿರಲು ಒಪ್ಪಿರುತ್ತಾರೆ

ರುಶ್ಯನರು ಜರ್ಮನರನ್ನು ಶಾವಿ ಪ್ರಾಂತ್ಯದಲ್ಲಿ ಹಿಂದಕ್ಕೆ ಒತ್ತಿರುತ್ತಾರೆ ಶುಕ್ರವಾರ ದಿನ ೯ ಫಿರಂಗಿಗಳನ್ನೂ ಯಂತ್ರ ಮೂಲಕ ಹಾರುವ ೭ ಫಿರಂಗಿಗಳನ್ನೂ ರುಶ್ಯನರು ಹಿಡಿದಿರುತ್ತಾರೆ

ಗೆಲೀಸಿಯದಲ್ಲಿ ಕಠಿಣ ಕದನವು ನಡೆಯುತ್ತಿದೆ ರುಶ್ಯನರು ಸಾನ್ ನದಿಯ ಬಲಪಾರ್ಶ್ವದಲ್ಲಿದ್ದ ಜರ್ಮನರನ್ನು ಹಿಂದಕ್ಕೆ ಓಡಿಸಿ ೩೦೬೦ ಸೈನಿಕರನ್ನೂ ಹೆಚ್ಚಿನ ಕೊಳ್ಳೆಯನ್ನೂ ಹಿಡಿದಿರುತ್ತಾರೆ ನೀಸ್ಟರಿನಲ್ಲಿ ಕಠಿಣ ಕಾಳಗ ನಡೆಯುತ್ತಿದೆ

ರುಶ್ಯನರು ಸಾನ್ ಪ್ರಾಂತ್ಯದಲ್ಲಿ ಜಯಪ್ರದರಾಗಿ ಲುಬಾಜ್ಯೋಂತ ನದಿಯನ್ನು ದಾಟಿ, ಒಂದು ಗ್ರಾಮವನ್ನು ಸ್ವಾಧೀನಮಾಡಿಕೊಂಡು ಶತ್ರುಗಳಲ್ಲಿ ಹೆಚ್ಚಿನ ನಷ್ಟವನ್ನು ಮಾಡಿರುತ್ತಾರೆ ಜಾರ್ಸ್ಲೊ ಮತ್ತು ರಾಡಿಮ್ನೊ ರಣರಂಗದಲ್ಲಿ ಯುದ್ಧಕ್ಕೆ ನಿಂತ ಜರ್ಮನರನ್ನು ರುಶ್ಯನರ ಫಿರಂಗಿಗಳು ತಡೆದಿರುವವು ರುಶ್ಯನರು ೭೦೦೦ಕ್ಕಿಂತಲೂ ಹೆಚ್ಚಿನ ಶತ್ರು ಸೇನಿಕರನ್ನು ಸೆರೆಹಿಡಿದಿರುವರಲ್ಲದೆ ಅನೇಕ ಫಿರಂಗಿಗಳೂ ಸಿಕ್ಕಿರುವವು

ಪಿಲೀಸಿಯ ಮತ್ತು ಮೇಲಿನ ವಿಸ್ತುಲದಲ್ಲಿ ರುಶ್ಯನರು ಮೇ ತಾ ೧೨ರಿಂದ ೨೪ರ ವರೆಗೆ ೨೦೯ ಆಫೀಸರರನ್ನೂ ೮೬೧೭ ಸೇನಿಕರನ್ನೂ ಸೆರೆಹಿಡಿದಿರುತ್ತಾರೆ

ರುಶ್ಯನರ ಜನರಲ್ ಇವರ್ಗನೋಫರು ಪುನಃ ೧೦೦೦ ಸೇನಿಕರನ್ನೂ ಇತರ ಯುದ್ಧ ಸಾಮಾಗ್ರಿಗಳನ್ನೂ ಸೆರೆಹಿಡಿದಿರುತ್ತಾರೆ

ಇಟಲಿಯನರ ವಾಯುನಾವಿಕರು ಪೋಲ ಎಂಬ ಆಸ್ಟ್ರಿಯನರ ಸ್ಥಳದ ಕಡೆಗೆ ಹಾರಿ ರೈಲ್ವೇ ಸ್ಟೇಶನಿನ ಮೇಲೆ ಬೊಂಬು ಹಾಕಿರುವರು ಮೊಂಟೆಪಾಲ್ಕೊನು ಎಂಬಲ್ಲಿ ಇಟಲಿಯನರ ಯುದ್ಧನಾವೆಯು ಧಾನ್ಯ ತುಂಬಿದ ಕೆಲವು ದೋಣಿಗಳನ್ನು ಮುಳುಗಿಸಿರುವದು

ಗ್ರೀಕ ದೇಶದ ಅರಸರು ಗುಣವಾಗುತ್ತಾ ಬರುತ್ತಾರೆ

ಈಚೆಗೆ ಕಾರ್ಫಥೇನಿಯದಲ್ಲಿ ನಡೆದ ಯುದ್ಧದಲ್ಲಿ ಒಬ್ಬ ಜರ್ಮನ ಆಫೀಸರನು ಹಿಡಕೊಂಡಿದ್ದ ಬೊಂಬು ಸಿಡಿದು ಹತ್ತಿರವಿದ್ದ ಆಸ್ಟ್ರೀಯ ರಾಜಕುಟುಂಬದವನ ಬಲಕಾಲಿಗೆ ತಗಲಿರುವದು. ಈ ಅವಗಡವನ್ನು ಆಸ್ಟ್ರಿಯದವರು ಗುಟ್ಟಿನಲ್ಲಿಡಲು ಪ್ರಯತ್ನಿಸಿರುತ್ತಾರೆ

ಡರ್ಡನೆಲ್ಸ್ ಮತ್ತು ಸಾಮೊಸ್ ಜಲಸಂಧುಗಳ ಮಧ್ಯ ಇರುವ ಕೆರಾವಳಿಯನ್ನು ಬ್ರಿಟಿಷರು ಮುಚ್ಚಿರುತ್ತಾರೆಂತ ಪ್ರಕಟವಾಗಿದೆ.

ಉತ್ತರ ಹಿಂದೂಸ್ಥಾನ.

ಕಲ್ಕತ್ತೆಯ ಬಂಕೂರ ಡಿಸ್ಟ್ರಿಕ್ಟಿನ ಸಸೌಗ ಗ್ರಾಮದ [illegible] ಚಂದ್ರಡೇ ಎಂಬ ಒಬ್ಬ ಬಂಗಾಳೀಯ ಶಿರಸ್ಸಿಲ್ಲದ ಮುಂಡವು ಅವನ ಮನೆಗೆ ಒಂದು ಮೈಲು ದೂರದಲ್ಲಿ ಬಿದ್ದಿರುವದು. ಪೋಲೀಸಿನವರು ಈ ವಿಷಯ ತನಿಕೆ ನಡಿಸುತ್ತಲಿದ್ದಾರೆ.

ಭವಾನಿಪುರದಲ್ಲಿ ಗಂಗಾರಾಮ ಎಂಬವನು ಒಬ್ಬ ಹೆಂಗಸನ್ನು ಮೋಟರಿನಲ್ಲಿ ಕೂಂಡ್ರಿಸಿ ಏಕಾಂತವಾದ ಸ್ಥಳಕ್ಕೆ ಕೊಂಡು ಹೋಗಿ ಅವಳ ಒಂದು ಜೋಡು ಚಿನ್ನದ ಬಳೆಯನ್ನು ಜಾರಿಸಿ, ಅವಳನ್ನು ಕೊಂದು ತಲೆತಪ್ಪಿಸಿಕೊಂಡಿರುವನು. ಈ ಗಂಗಾರಾಮನನ್ನು ಪತ್ತೆಮಾಡಿ ಕೊಟ್ಟವರಿಗೆ ಪೋಲಿಸಿನವರು ೧೦೦ ರೂಪಾಯಿ ಬಹುಮಾನ ಕೊಡುತ್ತೇವೆಂದು ಪ್ರಕಟಿಸಿರುತ್ತಾರೆ.

ಈ ವರ್ಷ ಕಲ್ಕತ್ತೆಯ ಡರ್ಬಿ ಎಂಬ ಪಂದ್ಯಾಟವನ್ನು ನಿಲ್ಲಿಸಿದುದರಿಂದ ಈ ಬಗ್ಗೆ ವಸೂಲಾದ ಹಣವು ಹಿಂದೆ ಕೊಡೋಣಾಗುವದು

ಕೂಚ್‌ಬಿಹಾರ್ ಮಹಾರಾಣಿಯವರ ಕಳವಾದ ಆಭರಣಗಳಲ್ಲಿ ೭೦,೦೦೦ ರೂಪಾಯಿ ಮತ್ತು ೫ ಪವನುಗಳ ಕ್ರಯ ಬಾಳುವ ಒಂದು ವಜ್ರದ ಉಂಗುರದ ಹೊರತು ಉಳಿದ ಎಲ್ಲಾ ಆಭರಣಗಳು ದೊರಕಿರುವವು ಎಂತ ಕಲ್ಕತ್ತೆಯ ಪೋಲಿಸ್ ಸುಪರಿಂಟೆಂಡೆಂಟರವರು ಪ್ರಕಟಿಸಿರುತ್ತಾರೆ

ಮೇ ತಿಂಗಳ ತಾರೀಕು ೨೨ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೧೧,೪೮೧ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೯೯೭೮ ಮಂದಿ ತೀರಿದರು. ಮುಂಬಾಯಿ ಸಂಸ್ಥಾನ ಮತ್ತು ಸಿಂಧ್‌ನಲ್ಲಿ ೩೩೧, ಮದ್ರಾಸ್ ೭, ಬಂಗಾಳ ೧೩೯, ಬಿಹಾರ್ ಮತ್ತು ಒರಿಸ್ಸ ೧೩೬, ಸಂಯುಕ್ತ ಸಂಸ್ಥಾನ ೪೮೨೯, ಪಂಜಾಬು ೮೮೦೧, ಬರ್ಮ ೪೩, ಮಧ್ಯ ಸಂಸ್ಥಾನ ೩೯, ಮತ್ತು ಕಾಶ್ಮೀರ ೮೫ ಮರಣಗಳಾದವು.

ಕಲ್ಕತ್ತೆಯ ರಾಧಾಚರಣ ಪ್ರಮಾಣಿಕ, ನಿರಂಜನದಾಸ, ಹಿರಾಲಾಲ ವಿಶ್ವಾಸ ಮತ್ತು ಪತಿತಪಾವನ ಗೋಸ್ ಎಂಬ ನಾಲ್ಕು ಮಂದಿ ಪಿಸ್ತೂಲುಗಳನ್ನು ಇಟ್ಟುಕೊಂಡಿದ್ದಾರೆಂಬದಾಗಿ ಆಪಾದಿಸಲ್ಪಟ್ಟಿದ್ದರು ಚೀಫ್ ಪ್ರೆಸಿಡೆನ್ಸಿ ಮೇಜಸ್ಟ್ರೇಟರು ಈ ಮೊಕದಮೆಯನ್ನು ತನಿಕೆ ನಡಿಸಿ ರಾಧಾಚರಣ ಮತ್ತು ಹಿರಾಲಾಲನಿಗೆ ಎರಡೆರಡು ವರ್ಷಗಳ ಕಠಿಣ ಸಜಾ ವಿಧಿಸಿ ಇತರರಿಬ್ಬರನ್ನು ಖುಲಾಸುಪಡಿಸಿದರು ಖುಲಾಸುಮಾಡಲ್ಪಟ್ಟವರಲ್ಲಿ ಪತಿತಪಾವನ ಗೋಸನು ಹೊರಗೆ ಹೋಗುತ್ತಲೇ ಸಿ. ಐ. ಡಿ. ಆಫೀಸರರು ಗಾರ್ಡನ್ ಬೀಚ್ ದರೋಡೆ ಮೊಕದಮೆಯಲ್ಲಿ ಸೇರಿದವನೆಂಬ ಅನುಮಾನದ ಮೇಲೆ ಅವನನ್ನು ಕೈದುಮಾಡಿರುವರು

ಈಚೆಗೆ ಡೈಮಂಡಹಾರ್ಬರಿನಲ್ಲಿ ನಡೆದ ದರೋಡೆ ಸಂಬಂಧ ಆಲಿಪುರ ಪೋಲಿಸಿನವರು ೬೦ ಮಂದಿಯನ್ನು ಕೈದುಮಾಡಿರುತ್ತಾರೆ

ಕಳೆದ ಬುಧವಾರ ಮಧ್ಯ ರಾತ್ರಿ ವಸಂತಿಯಬಾದ್ ಎಂಬ ಗ್ರಾಮದಲ್ಲಿ ಆಯುಧಪಾಣಿಗಳಾದ ೨೫ ದರೋಡೆಗಾರರು ರಾಮದಾಸ ಚಾಮರ್ ಎಂಬವನ ಮನೆಗೆ ನುಗ್ಗಿದರು ರಾಮದಾಸನ ಮಗ ಮತ್ತು ಸೋದರಳಿಯನು ದರೋಡೆಗಾರರನ್ನು ಎದುರಿಸಿದಲ್ಲಿ ದರೋಡೆಗಾರರು ಸೋದರಳಿಯನನ್ನು ಕೊಂದು ಮನೆಯ ಇತರರಿಗೆ ಚೆನ್ನಾಗಿ ಹೊಡೆದು, ಗ್ರಾಮದವರು ಸಹಾಯಕ್ಕೆ ಬಂದ ನಂತರ ಮನೆಯನ್ನು ಬಿಟ್ಟು ಹೋದರು

ಪೂರ್ಣಿಯ ಎಂಬಲ್ಲಿಯ ಸೆಶನ್ ಕೋರ್ಟಿನಲ್ಲಿ ಒಂದು ಕೌತುಕವಾದ ಕೊಲೆ ಮೊಕದಮೆಯ ತನಿಕೆ ನಡೆದಿರುವದು. ಪತ್ತೆದಾರಿ ಮತ್ತು ಇತರ ಇಬ್ಬರು ಫಿರ್ಯಾದೆಯರು ಸೇರಿ ಒಬ್ಬ ರೈತನನ್ನು ಜಮೀನ್ದಾರ ಖಚೇರಿಗೆ ಎಳೆದು ಅಲ್ಲಿ ರೈತನಿಗೆ ಹೊಡೆದ ಪೆಟ್ಟಿನಿಂದ ರೈತನು ಸತ್ತುಹೋದನೆಂದೂ ನಂತರ ರೈತನ ಶವವನ್ನು ನದಿಗೆ ಬಿಸಾಡಿದರೆಂದೂ ಆಪಾದಿತರ [illegible] ಒಬ್ಬ ಗಂಡ [illegible]

ಸ್ಸ ಹೇಳಿದನು. ಕಳೆದ ಸೋಮವಾರ ಈ ಮೊಕದ್ದಮೆಯು ವಿಚಾರಣೆಯಾಗುತ್ತಿರುವಾಗ ಕೊಲೆಯಾಗಿದ್ದನೆಂದು ಹೇಳಿದ್ದ ಮನುಷ್ಯನು ಹೈಕೋರ್ಟಿಗೆ ಹಾಜರಾಗಿ ಅಪಾದಿತರಿಗೂ ತನಗೂ ಜವಿಣ್ಣರ ಕಚೇರಿಗೆ ಹೋಗುವ ದಾರಿಯಲ್ಲಿ ಜಗಳವಾಗಿ ಉಭಯರೂ ಚೆನ್ನಾಗಿ ಹೊಡೆಕೊಂಡೆವು, ನಂತರ ತಾನು ನೇಪಾಳಕ್ಕೆ ಹೋಗಿ ಅಲ್ಲಿ ಒಂದು ಕೆಲಸದಲ್ಲಿದ್ದೆನು ಎಂದು ಹೇಳಿದನು. ಜಡ್ಜರು ಅವನ ವಾಗ್ಮೂಲದ ಪ್ರಕಾರ ಅಪಾದಿತರನ್ನು ಖುಲಾಸು ಪಡಿಸಿದ್ದರು

~~~~~~

ಮುಂಬಾಯಿಯ ಮೆಜಗೋನ್ ಪೋಲಿಸ್ ಸ್ಟೇಶನಿನ ಸುಮಾರು ೩೦೦೦ ರೂಪಾಯಿಯನ್ನು ದುರುಪಯೋಗ ಮಾಡಿದ್ದನೆಂಬದಾಗಿ ಅಪಾದಿಸಲ್ಪಟ್ಟ ಪೀಟರ್ ಜೋಚ್ ಎಂಬವನಿಗೆ ಒಂದು ವರ್ಷ ಕಠಿಣ ಸಜೆ ಮತ್ತು ೧,೧೯೦ ರೂಪಾಯಿ ಜುಲಮಾನೆ ವಿಧಿಸಲ್ಪಟ್ಟಿತು

~~~~~~

ರುಶ್ಯ ಮತ್ತು ಫ್ರಾನ್ಸಿಗೆ ಹಿಂದೂಸ್ಥಾನದಿಂದ ಕಳುಹಿಸುತ್ತಿರುವ ಸರಕುಗಳನ್ನು ಇನ್ನು ಮುಂದಕ್ಕೆ ಇಟಲಿಗೂ ಕಳುಹಿಸಬಹುದೆಂತ ಸ್ಟೇಟ ಸೆಕ್ರೆಟರಿಯವರ ಹುಕುಂ ಆಗಿರುತ್ತದೆ

~~~~~~

ದಿ ರೈಟ್ ಒನರೆಬಲ್ ವಿಲಿಯಮ್ ಲೈಗೊನ್ ಬ್ಯೂಚೆಂಪಿನ ೭ನೇ ಪ್ರಭು ಕೆ ಸಿ ಎಮ್. ಜಿ ಡಿ ಎಲ್ ಕೆ ಜ ಪಿ ಸಿ ಯವರು ಹಿಂದೂಸ್ಥಾನದ ವೈಸರಾಯರಾಗಿ ನೇಮಿಸಲ್ಪಡುವ ಸಂಭವವು ಇದೆ ಎಂತ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ ಇವರು ೧೮೭೨ನೇ ಇಸವಿಯಲ್ಲಿ ಹುಟ್ಟಿದರು ಈಗ ಇವರಿಗೆ ೪೩ ವರ್ಷ ವಯಸ್ಸಾಗಿರುವದು ೧೮೯೯ ಮತ್ತು ೧೯೦೧ರ ವರೆಗೆ ನ್ಯೂ ಸೌತ್‌ವೇಲ್ಸಿನ ಗವರ್ನರರಾಗಿಯೂ ಸರ್ವ ಸೇನಾಧಿಪತಿಯಾಗಿಯೂ ಕೆಲಸ ನೋಡಿ ನಂತರ ಅರಸರ ಸ್ಟ್ಯುವಾರ್ಡರಾಗಿ ನೇಮಿಸಲ್ಪಟ್ಟರು ೧೯೧೦ರಲ್ಲಿ ಫಸ್ಟ್ ಕಮಿಷನರ್ ಆಫ್ ವರ್ಕ್ಸ್ ಎಂಬ ಕೆಬಿನೆಟ್ ಸಭೆಯ ಹುದ್ದೆಯನ್ನು ಹೊಂದಿದ್ದರು

~~~~~~

ಬಂಗಾಳದ ಸಾಲ್‌ಪೂಕರ್ ಎಂಬ ಸ್ಥಳದಲ್ಲಿರುವ ಹೇಮಚಂದ್ರ ಕೇಯಾಳರ ಮನೆಗೆ ಸುಮಾರು ರಾತ್ರಿ ೧೦ ಗಂಟೆಯ ಸಮಯ ಆಯುಧಪಾಣಿಗಳಾದ ೪೦ ದರೋಡೆಕೋರರು ನುಗ್ಗಿ ಮನೆಯಲ್ಲಿದ್ದವರಿಗೆ ಹೊಡೆದು ಇದ್ದದ್ದನ್ನೆಲ್ಲಾ ಸೂರೆಮಾಡಿ ಮನೆಗೆ ಬೆಂಕಿ ಕೊಟ್ಟು ಸುಟ್ಟು ಬಿಟ್ಟರು ನಂತರ ಈ ದರೋಡೆಕೋರರು ಭುವನ್ ಮೊಂಡಾಲ ಎಂಬವರ ಮನೆಗೆ ನುಗ್ಗಿ ಕೆಲವು ಸಾವಿರ ರೂಪಾಯಿಯ ಚಿನ್ನಾಭರಣಗಳನ್ನು ಸೂರೆಮಾಡಿ ಮನೆಗೆ ಬೆಂಕಿ ಕೊಟ್ಟರು ಕಡೆಗೆ ಈ ಪಂಗಡದವರು ತ್ರೈಲೋಕನಾಥ ಎಂಬವರ ಮನೆಗೆ ನುಗ್ಗಿದರು ಗ್ರಾಮದವರು ಇವರನ್ನು ಎದುರಾಯಿಸಲಿಕ್ಕಾಗಿ ಕೆಲವು ಜನರನ್ನು ಕೂಡಿಸಿ ದರೋಡೆಕೋರರು ಮನೆಯಿಂದ ಹೊರಗೆ ಬರುವಾಗ ಅವರ ಮೇಲೆ ಬಿದ್ದರು ಉಭಯತರಿಗೂ ಚಟಾಪಟಿಯಾಗಿ ಉಭಯತರಲ್ಲಿಯೂ ಕೆಲವರು ಗಾಯ ಒಡೆದರು

~~~~~~

ಪನ್ನಾ ಎಂಬ ಸ್ಥಳದ ಮಹಾರಾಜರವರಿಗೆ ಒಬ್ಬ ಗಂಡು ಮಗನು ಹುಟ್ಟಿರುತ್ತಾನೆ. ಅರ್ಧ ಶತಮಾನಗಳಿಂದ ಈ ರಾಜ್ಯದ ಮಹಾರಾಜರಿಗೆ ಗಂಡು ಮಕ್ಕಳು ಹುಟ್ಟಿದ್ದಿಲ್ಲ

~~~~~~

ಹಿಂದೂಸ್ಥಾನದ ಕೋಶಾಧ್ಯಕ್ಷರಾದ ಸರ್ ವಿಲಿಯಂ ಮೆಯರ್‌ರವರು ಕೆಲಸದಿಂದ ನಿವೃತ್ತರಾಗುತ್ತಾರೆಂದೂ ಇವರ ಬದಲಿಗೆ ಸರ್ ಹರೋಲ್ಡ್ ಸ್ಟುವಾರ್ಟರವರು ನೇಮಿಸಲ್ಪಡುವರೆಂದೂ ವಾರ್ತೆ ಇದೆ.

~~~~~~

ನಾಡಿಯ ಖ್ರಿಶ್ಚನ್ ಮೊಕದ್ದಮೆ ಎಂಬ ಹೆಸರಿನಿಂದ ಕರೆಯಲ್ಪಟ್ಟ ಮೊಕದ್ದಮೆಯ ಅಪೀಲು ಕಲ್ಕತ್ತೆಯ ಹೈಕೋರ್ಟಿನಲ್ಲಿ ತನಿಖೆಗೆ ಬಂದಿರುವದು. ಒಬ್ಬ ಹಿಂದೂ ಹೆಂಗಸು ತನ್ನ ಗಂಡನು ಸತ್ತ ನಂತರ ೯ ವರ್ಷ ಮತ್ತು ೫ ವರ್ಷ ವಯಸ್ಸಿನ ತನ್ನ ಮಕ್ಕಳೊಡನೆ ಕ್ರೈಸ್ತ ಮತಕ್ಕೆ ಸೇರಿದಳು. ಈ ಹುಡುಗರ ಮಾವನು ಹುಡುಗರು ಪ್ರಾಯಭರಿತರಲ್ಲದ್ದರಿಂದ ಅವರನ್ನು ಕ್ರೈಸ್ತ ಮತಕ್ಕೆ ಸೇರಿಸಿದ್ದು ನ್ಯಾಯವಲ್ಲವೆಂಬ ವಾದದ ಮೇಲೆ ಅಪೀಲು ಮಾಡಿಕೊಂಡನು. ಹೈಕೋರ್ಟು ಜಡ್ಜರು ಅದರ ವಿಚಾರ ನಡಿಸಿ ಹುಡುಗರ ಮಾವನನ್ನು ತಾಯಿಯನ್ನು ಹುಡುಗರ ರಕ್ಷಕರಾಗಿ ನೇಮಿಸಿ [illegible] ಹುಡುಗನನ್ನು ಒಂದು ಹಿಂದೂ [illegible]ನಲ್ಲಿ [illegible] ೫ ವರ್ಷ ವಯಸ್ಸಿನವನನ್ನು ಪ್ರಾಯ ಬರುವ ತನಕ ತಾಯಿ [illegible] ಅಪ್ಪಣೆ ಮಾಡಿ, ಹಿಂದೂ ಮತದಿಂದ ಹುಡುಗರನ್ನು ದೂರ ಮಾಡುವ ಯಾವ ಸಂಗತಿಯಾದರೂ ನಡೆದರೆ ನಾದಿಯದ ಡಿಸ್ಟ್ರಿಕ್ಟ್ ಜಡ್ಜರಿಗೆ ತಿಳಿಸಬಹುದೆಂಬದಾಗಿ ಹುಡುಗರ ಮಾವನಿಗೆ ಅಪ್ಪಣೆವಿತ್ತರು

~~~~~~

ಕಳೆದ ಸಪ್ಟಂಬರ ತಾ ೨೦ರಲ್ಲು ಪೆರೋಜಪುರದ ಒಬ್ಬ ಮಹಮ್ಮದೀ ಹೆಂಗಸಿನ ಮನೆಯಲ್ಲಿ ಒಂದು ದರೋಡೆಯು ನಡೆಯಿತು ಈ ಸಂಬಂಧ ತನಿಕೆಗೆ ಹೋದ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಸುರೇಂದ್ರ ಮೋಹನ ಬೋಸನೆಂಬವನು ಒಂದು ದಿನ ಅಲ್ಲಿದ್ದು ತನ್ನ ಊಟದ ಖರ್ಚಿಗೆಂತ ಆ ಮಹಮ್ಮದೀ ಹೆಂಗಸಿನಿಂದ ೪ ರೂಪಾಯಿ ತಕ್ಕೊಂಡನು ಈ ವಿಷಯವನ್ನು ಆ ಹೆಂಗಸು ತನ್ನ ಕುಟುಂಬದವರಿಗೆ ಹೇಳಲು ಬಹುಮಾನಪಟ್ಟ ಎಫ್ ಹ್ಯಾಕರವರ ಪೋಲಿಸ್ ಇನ್ಸ್‌ಪೆಕ್ಟರ್ ಜನರಲರಿಗೆ ವರದಿ ಮಾಡಿದರು ಈ ಸಂಬಂಧ ತನಕಿ ನಡೆದು ಸಬ್‌ಇನ್ಸ್‌ಪೆಕ್ಟರ್ ಬೋಸನಿಗೆ ೬ ತಿಂಗಳ ಸಜಾ ವಿಧಿಸೋಣಾಯಿತು ಹೈಕೋರ್ಟಿಗೆ ಮಾಡಿಕೊಂಡ ಅಪೀಲಿನಲ್ಲಿಯೂ ಹಿಂದಿನ ಶಿಕ್ಷೆಯೇ ಕಾಯಂ ಆಯಿತು

~~~~~~

ಡಿಲ್ಲಿಯಲ್ಲಿ ತಾ ೩೧ರಲ್ಲು ಕಠಿಣ ಬಿರುಗಾಳಿ ಬೀಸಿ ಡಿಲ್ಲಿ ಮತ್ತು ಆಗ್ರದ ಮಧ್ಯೆ ಇರುವ ಟೆಲಿಗ್ರಾಫ್ ಸ್ತಂಬಗಳ ಅರ್ಧ ಮೈಲ ವಿಸ್ತೀರ್ಣದ ವರೆಗೆ ಬಿದ್ದಿರುತ್ತವೆ

~~~~~~

ಪಟಿಯಾಲದ ರಾಜ್ಯ ಕುಟುಂಬದಲ್ಲಿ ಈಚೆಗೆ ಎರಡು ಮರಣಗಳಾದವು ಮಹಾರಾಜರ ಎರಡನೇ ಮಗನೂ ಮಹಾರಾಣಿಯವರ ಒಬ್ಬ ಮಗನೂ ಒಬ್ಬರ ಹಿಂದೊಬ್ಬರು ಮೃತರಾದರು

~~~~~~

ರಂಗೂನು ಪೋಲಿಸ್ ಕಮಿಷನರರ ಮಗ ಲೆಫ್ಟನೆಂಟ ಟಿವಲ್ಲನರವರು ರಣರಂಗದಲ್ಲಿ ಜರ್ಮನರು ಪ್ರಯೋಗಿಸಿದ ವಿಷಕರವಾದ ಗಾಸಿಗೆ ತುತ್ತಾಗಿದ್ದರು ಈಗ ಇವರು ಗುಣಹೊಂದುತ್ತಾ ಬರುತ್ತಾರೆಂತ ವಾರ್ತೆ ಬಂದದೆ

~~~~~~

ಬಂಗಾಳ ಮತ್ತು ಅಸ್ಸಾಮು ನಿರಾಶ್ರಿತ ಜನಸಹಾಯಕ ಮಿಶ್ಯನಿಗೆ ಸಹಾಯ ಮಾಡುತ್ತಿರುವವರು ಆ ಸ್ಥಳದ ಬೇಸಾಯಗಾರರಾಗಿರುವರು ಆದರೆ ಈಗ ಸಣಬು ವ್ಯಾಪಾರವು ನಿಂತಿರುವದರಿಂದ ಈ ಸಂಘಕ್ಕೆ ಹಣದ ಕೊರತೆಯು ಹೆಚ್ಚಾಗಿ ೧೨೦೦ ರೂಪಾಯಿ ಸಾಲ ತಕ್ಕೊಂಡಿರುತ್ತಾರೆ ಹಿಂದಿನ ವರ್ಷದ ಸಾಲ ಮತ್ತು ಈ ಸಾಲ ಕೂಡಿ ಈ ಸಂಘಕ್ಕೆ ೧೮೫೦ ರೂಪಾಯಿಗಳ ಸಾಲವಿದೆ ಒಂದ ವರ್ಷಕಾಲದಲ್ಲಿ ಈ ಮಿಶ್ಯನಿನವರು ೧೯ ಶಾಲೆಗಳನ್ನು ಸ್ಥಾಪಿಸಿದರು ಒಟ್ಟಿಗೆ ಈ ಮಿಶ್ಯನಿಗೆ ೫೭ ಶಾಲೆಗಳು ಇವೆ ವರ್ಷಾಂತ್ಯದಲ್ಲಿ ಈ ಮಿಶ್ಯನಿನವರು ಕೆಲಸ ನಡಿಸುವ ಮಧ್ಯ ಸ್ಥಳವಾದ ಡಿಗ್ರಿಪಾರ ಎಂಬಲ್ಲಿ ಪಾಂತಿಭೇದಿ ಸೋಂಕಿ ಮತ್ತು ಚರ್ಮದ ವ್ಯಾಪಾರವು ಬಿದ್ದುಹೋದುದರಿಂದ ಸುಮಾರು ೩೦೦೦ ಜನರು ಊಟಕ್ಕಿಲ್ಲದೆ ಇರಬೇಕಾಯಿತು ಈ ಮಿಶ್ಯನಿಗೆ ಹಣವೂ ಸಹಾಯ ಮಾಡುವ ಜನರೂ ಅಗತ್ಯ ಬೇಕಾಗಿದೆ ವರ್ಷ ಕಾಲದಲ್ಲಿ ೬೦೦ ರೂಪಾಯಿ ಮಾತ್ರ ದಾನ ಬಂದಿರುವದು ಆಯಾ ಶಾಲೆಗಳಿಂದ ಸಹಾಯ ಕೇಳಿದ ೧೭೫ ಅರ್ಜಿಗಳು ನಿರಾಕರಿಸಲ್ಪಟ್ಟವು ಮರದ ಕೆಲಸ, ಚರ್ಮ ಹದ ಮಾಡುವದು, ಬುಟ್ಟಿ ಇತ್ಯಾದಿ ಕೈಗಾರಿಕೆಗಳನ್ನು ಕಲಿಸುವ ಏರ್ಪಾಡು ಈ ಶಾಲೆಗಳಲ್ಲಿ ಮಾಡಲ್ಪಟ್ಟಿದೆ ವರ್ಷದಲ್ಲಿ ಈ ಮಿಶನಿನವರಿಗೆ ಬೇಕಾದ ಅಂದಾಜು ಖರ್ಚು ರೂ ೯೦೦೦ವಾಗಿರುವದು

~~~~~~

ಸಂಯುಕ್ತ ಸಂಸ್ಥಾನದ ಸೆನಿಟರಿ ಕಮಿಷನರಿಂದ ಪ್ರಕಟಿಸಲ್ಪಟ್ಟ ಆಗ್ರ ಮತ್ತು ಆಯೋಧ್ಯೆಯ ಆರೋಗ್ಯ ಸಂಬಂಧವಾದ ವರದಿಯು ಈಗ ತಾನೇ ಪ್ರಕಟವಾಗಿರುವದು ಜನನ ಸಂಖ್ಯೆಯು ಹಿಂದಿನ ವರ್ಷಕ್ಕಿಂತಲೂ ೩ ೭೯ರಷ್ಟು ಹೆಚ್ಚಿದೆ ಕಳೆದ ೩೧ ವರ್ಷಗಳಲ್ಲಿ ೧೮೯೯ನೇ ಇಸವಿಯೊಂದನ್ನು ಬಿಟ್ಟು ಜನನ ಸಂಖ್ಯೆಯು ಹೆಚ್ಚಿದ ವರ್ಷವು ಇದೊಂದೇ ಆಗಿರುವದು ೧೯೧೩ನೇ ಇಸವಿಗಿಂತ ೪ ೯೩ರಷ್ಟು ಮರಣ ಸಂಖ್ಯೆಯು ಹೆಚ್ಚಿದರೂ ಈ ವರ್ಷ ಜನನ ಸಂಖ್ಯೆಯು ಮರಣ ಸಂಖ್ಯೆಗಿಂತ ೧೨ರಷ್ಟು ಹೆಚ್ಚಾಗಿರುವದು. ಜ್ವರದಿಂದ ಸತ್ತವರ ಸಂಖ್ಯೆಯು ವಿಶೇಷವಾದುದರಿಂದ ಮರಣ ಸಂಖ್ಯೆಯು ಹೆಚ್ಚಲು ಕಾರಣವಾಗಿರುವದು. ಪಾಂತಿಭೇದಿಯಿಂದ [illegible] ಅಧಿಕವಾಗಿದೆ.

~~~~~~

ಮಿ ಜ್ಹೊನ್ ಗಾಲ್ಸ್‌ವರ್ದಿ ಎಂಬವರು ಬೆಲ್ಜಿಯನರಿಗೆ ಬ್ರಿಟಿಷ್ ಸಾಮ್ರಾಜ್ಯವು ಸಹಾಯ ಮಾಡುವದರ ಹಂಗು ಏನು ಎಂಬ ಪ್ರಸ್ತಾಪದ ಮೇಲೆ ವರ್ತಮಾನ ಪತ್ರಿಕೆಗಳಿಗೆ ಲೇಖನವನ್ನು ಬರದಿರುವರು. ಬೆಲ್ಜಿಯಮಿನ ರಿಲೀಫ್ ಫಂಡಿಗೆ ಸಹಾಯ ಮಾಡುವ ತಟಸ್ಥ ರಾಜ್ಯಗಳ ಫಂಡಿನ ಚೇಯರ್‌ಮೇನರ ಮತ್ತು ಬ್ರುಸೆಲ್ಸಿನಲ್ಲಿರುವ ಕಮಿಟಿಯ ಚೇಯರ್‌ಮೇನರ ವರದಿಯ ಪ್ರಕಾರ ಬೆಲ್ಜಿಯಮಿನ ಒಂದೂವರೆ ಮಿಲಿಯ ಜನರು ನಿರ್ಗತಿಕರಾಗಿದ್ದಾರೆ ಎಂದು ಮಿ ಜ್ಹೋನರವರು ಬರದಿರುತ್ತಾರೆ ಮಾಂಸ ಮತ್ತು ಕಾಯಿಪಲ್ಯಗಳು ಬೇಗನೇ ಖರ್ಚು ಆಗುವದರಿಂದ ಇನ್ನೊಂದು ಕೊಯ್ಯುವ ಕಾಲದ ಮೊದಲು ೩,೫೦೦,೦೦೦ ಬೆಲಿಯನರಿಗೆ ಆಹಾರ ವಸ್ತ್ರ ಇತ್ಯಾದಿಗಳನ್ನು ರಿಲೀಫ್ ಫಂಡಿನ ಫಲೀ ಕೊಡಬೇಕಾದೀತು ಉಳಿದ ೪,೫೦೦,೦೦೦ ಬೆಲಿಯಾನರು ಕಮಿಷನಿನ ಮೂಲಕ ಒಂದಿಷ್ಟು ರೊಟ್ಟಿಯನ್ನು ಹೊಂದುತ್ತಿದ್ದಾರೆ ತಟಸ್ಥ ರಾಜ್ಯಗಳ ಕಮಿಷನಿನವರು ಬಹಳ ಜಾಗ್ರತೆಯಿಂದಲೂ ಚಾತುರ್ಯದಿಂದಲೂ ಅಮೇರಿಕ, ಇತರ ತಟಸ್ಥರಾಜ್ಯ ಮತ್ತು ಬ್ರಿಟಿಷ ವಸಾಹತಿಗಳಿಂದ ಹಣವನ್ನು ಕೂಡಿಸುತ್ತಿದ್ದಾರೆ ಆದರೆ ಇವರಿಗೆ ಯಥೇಷ್ಟ ಹಣವು ಬೇಕಾದುದರಿಂದ ಅವರ ಈ ಪ್ರಯತ್ನವು ಸೋತುಹೋಗುವಂತಿದೆ. ಇವರ ಪ್ರಯತ್ನದಿಂದ ಇಂಗ್ಲಾಂಡಿನಲ್ಲಿ ಒಂದು ಬೆಲ್ಜಿಯಮ್ ರಿಲೀಫ್ ಫಂಡ್ ತೆರೆಯೋಣಾಗಿದೆ ಇದರಲ್ಲಿ ಕೂಡುವ ಒಂದ ಪೆನ್ನಿ ಕೂಡಾ ಈ ಕಮಿಷನಿಗೆ ಕಳುಹಿಸೋಣಾಗಿ ಇದರ ಮೂಲಕ ಹೊಟ್ಟೆಗಿಲ್ಲದೆ ಬಳಲುವ ಬೆಲಿಯನರ ಕೈಸೇರುತ್ತದೆ ಈಗ ಹೀಗೆ ಬಳಲುತ್ತಿರುವ ಬೆಲ್ಜಿಯನರಿಗೆ ಸಹಾಯಯ ಮಾಡಲು ತಿಂಗಳು ಒಂದಕ್ಕೆ ೨೦೦೦೦೦ ಪವನುಗಳು ಬೇಕಾಗುವವು ಮುಂದಕ್ಕೆ ಇದರ ಎರಡಷ್ಟು ಹಣವು ಬೇಕಾಗುವದು ಎಂದು ಮಿ ಜ್ಹೋನರು ತಿಳಿಸಿರುತ್ತಾರೆ

~~~~~~

ದಕ್ಷಿಣ ಕನ್ನಡ

~~~~~~

ಕಾಪು —ಕಾಪು ಬೋರ್ಡು ಕನ್ನಡ ಶಾಲೆಯಲ್ಲಿ ಉಪಾಧ್ಯಾಯರುಗಳ ಮಹಾ ಸಭೆಯು ಮ ರಾ ಉಡ್ಪಿ ರೇಂಜು ಸ್ಕೂಲುಗಳ ಸ ಅ ಇನ್ಸ್‌ಪೆಕ್ಟರವರ ಅಧ್ಯಕ್ಷತೆಯಲ್ಲಿ ತಾ ೨೨ ೫ ೧೫ ರಲ್ಲು ಜರಗುವದಾಯಿತು ಸುಮಾರು ೩೦ ಜನ ಉಪಾಧ್ಯಾಯರುಗಳು ನೆರೆದಿದ್ದರು ಸಭೆಯಲ್ಲಿ ಶಾಲೆಗಳಲ್ಲಿ ಎಲ್ಲಾ ಕ್ಲಾಸುಗಳಿಗೆ ಬೇಕಾದ ಲೆಖ್ಖ ಮತ್ತು ಸಾಮಾನ್ಯ ತಿಳುವಳಿಕೆಯ ಪಾಠಗಳನ್ನ ವಿಷದವಾಗಿ ಅಧ್ಯಕ್ಷರವರು ತಿಳಿಸಿದೊಡನೆ ಉಪಾಧ್ಯಾಯರು ರಾಜಗೀತವನ್ನು ಹಾಡಿ ಸದರಿ ಶಾಲೆಯ ಮಾಸ್ತರುಗಳಿಂದ ತಯಾರಿಸಿದ ಸಕ್ಕರೆ ಪಾನಕ ಕಾಂಟ್ಬೂಲಾದಿಗಳನ್ನು ಸ್ವೀಕರಿಸಿಕೊಂಡು ಎಲ್ಲರೂ ಅಗಲುವವರಾದರು

~~~~~~

ಫರಂಗಿಪೇಟೆ:—ಕಳೆದ ಶನಿವಾರ ದಿನ ಫರಂಗಿಪೇಟೆ ಉಪಾಧ್ಯಾಯರ ಸಭೆಯು ಬೊಂಡಂತಿಲ ಎಲಿಮೆಂಟರಿ ಶಾಲೆಯಲ್ಲಿ ಮ। ರಾ। ಮಂಗಳೂರು ಸಬ್ ರೇಂಜ್ ಶಾಲಾ ಸುಪರ್‌ವ್ಯಾಜರವರ ಅಧ್ಯಕ್ಷತೆಯಲ್ಲಿ ಜರಗಿತು ದೇವರ ಪ್ರಾರ್ಥನೆಯಿಂದ ಸಭೆಯು ಪ್ರಾರಂಭವಾದ ನಂತರ ಸಂಘದ ಸೆಕ್ರೆಟರಿಯವರು ಕಳೆದ ಸಭೆಯ ವೃತ್ತಾಂತವನ್ನು ಓದಿ ತಿಳಿಸಿದರು ಬಳಿಕ ಪುದು ಶಾಲಾ ಹೆಡ್‌ಮಾಸ್ಟರ್ ಸು ಪರಮೇಶ್ವರಯ್ಯನವರು "ಸ್ವಾರ್ಥ, ಮತ್ತು ಪರಾರ್ಥ" ಎಂಬದರ ಕುರಿತು ಒಂದು ಉಪನ್ಯಾಸ ಕೊಟ್ಟರು. ಅದನ್ನು ಅನುಮೋದಿಸಿ ದೃಷ್ಟಾಂತ ಮೂಲಕ ಕಾವೂರು ಶಾಲಾ ಮಾಸ್ಟರ್ ಎ ಶಿವರಾಯರು ಮಾತನಾಡಿದರು. ಮೋಡಗಳೂ ಮಳೆಯೂ ಎಂಬದರ ಕುರಿತು ೨ನೇ ಕ್ಲಾಸಿಗೆ ನೀರುಮಾರ್ಗ ಶಾಲಾ ಹೆಡ್‌ಮಾಸ್ಟರ್ ಟಿ ಬ್ಯಾಗರಿಂದಲೂ ಹೂವುಗಳ ಬೀಜೋತ್ಪತ್ತಿಯ ಕುರಿತು ಕಳ್ಳಿಗೆ ಬೋರ್ಡು ಶಾಲಾ ಅಸಿಸ್ಟಾಂಟ್ ಮಾಸ್ಟರ್ ಪಿ ಲಕ್ಷ್ಮೀನಾರ್ಣಪ್ಪಯ್ಯರಿಂದಲೂ ಮಾದರಿ ಪಾಠಗಳು ಕೊಡಲ್ಪಟ್ಟವು. ಈ ಶಾಲೆಯ ಮಕ್ಕಳು ಒಂದು [illegible] ನಟಿಸಿ ತೋರಿಸಿದರು. ಉಪಾಧ್ಯಾಯರ ಪರಸ್ಪರ ಸಹಾಯಕ ಸಂಘದ ಕುರಿತು ಸ್ವದೇಶಾಭಿಮಾನಿಯಲ್ಲಿ ಪ್ರಕಟಿಸಲ್ಪಟ್ಟ ಲೇಖನ [illegible]
~~~~~~

[illegible] ಮುಂದಿನ ಸಭೆಯಲ್ಲಿ ನಿರ್ಣಯಿಸಬಹುದಾಗಿ ನಿಶ್ಚಯವಾಯಿತು. ಕೆಲವು ಉಪಾಧ್ಯಾಯರು ಗೈರಹಾಜರು ಆದ ಸಂಬಂಧ ಕೆಲವು ಸಂಗತಿಗಳನ್ನು ಸೂಚನಾ ಪತ್ರದಿಂದ ತಿಳಿಸಬೇಕಾಯಿತು. ಅಧ್ಯಕ್ಷರು ಉಪಾಧ್ಯಾಯರಿಗೆ ಉಪಯುಕ್ತವಾದ ಹಲವು ಅನುಭವಗಳನ್ನು ಕೊಟ್ಟು ಭಾಷಣಮಾಡಿದ ಬಳಿಕ ರಾಷ್ಟ್ರಗೀತೆಯನ್ನು ಹಾಡಿ ಸಭೆಯು ಮುಕ್ತಾಯ ಮಾಡಲ್ಪಟ್ಟಿತು. ಬಂದ ಸಭಿಕರಿಗೆ ಫಲಾಹಾರ ಇತ್ಯಾದಿಗಳಿಂದ ಉಪಚರಿಸಿದ ಬಳಿಕ ಮುಂದಿನ ಸಭೆಯು ಆಗೋಸ್ತು ತಾ ೨೮ಕ್ಕೆ ವೇಣೂರಮುಜಲ್ಲಾ ಶಾಲೆಯಲ್ಲಿ ಜರುಗುವದಾಗಿ ನಿರ್ಣಯಿಸಲ್ಪಟ್ಟಿತು.

ಮಂಗಳೂರು.

ಇದೇ ತಾ ೨೮ಲ್ಲು ನಂದಿಗುಡ್ಡೆಯ ಮಿ। ಗ್ರೆಗೋರಿ ಸಾಲ್ಡಾಂಞರ ಹಿತ್ತಲಲ್ಲಿನ ಒಂದು ಬಾವಿಗೆ ಕಲ್ಲುಕಟ್ಟುತ್ತಿರುವಾಗ ಮಣ್ಣು ಕುಸಿದು ಬಿದ್ದು ಬಾವಿಯಲ್ಲಿ ಕೆಲಸ ಮಾಡುತ್ತಿದ್ದ ಕೊಡಿಯಾಲಬೈಲ ಗ್ರಾಮದ ಬಾವಿ ಎಂಬವನು ಕೂಡಲೇ ಮೃತನಾದನು. ಇತರರಿಬ್ಬರಿಗೆ ಜಖಂ ಆಗಿದೆ.

ಸಬ್ ಕೋರ್ಟಿನ ಬೇಸಗೆಕಾಲದ ರಜೆಯು ಇದೇ ತಾ ೩೦ಕ್ಕೆ ಮುಗಿಯುವದಾದರೂ ಹೊಸದುರ್ಗದ ಒಂದು ದಾವೆಯ ಸಂಬಂಧ ಇದೇ ತಾ. ೯ಕ್ಕೆ ಸಬ್ ಕೋರ್ಟು ಪ್ರಾರಂಭವಾಗುವದು ಎಂತ ತಿಳಿಯುತ್ತೇವೆ.

ಪೋಲಿಸ್ ಆಸ್ಪತ್ರಿ ಮತ್ತು ಕೊರಂಟೈನ್ ಡ್ಯೂಟಿಯ ಮೇಲಿದ್ದ ಸಬ್ ಆಸಿಸ್ಟಾಂಟ ಸರ್ಜನ್ ರಾ। ೩. ಸರ್ವಪ್ಪಯ್ಯನವರು ಇಲ್ಲಿಯ ಮುನ್ಸಿಪಾಲ್ ಪ್ಲೇಗ್ ಡ್ಯೂಟಿಯ ದಾಕ್ತಾರರಾಗಿ ನೇಮಿಸಲ್ಪಟ್ಟಿರುತ್ತಾರೆ.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕಲೆಕ್ಟರರಾಗಿರುವ ಮಿ। ಲ್ಲೊಯಿಡ್ ದೊರೆಗಳವರು ಎಮಿಗ್ರೇಶನ್ ಕಮಿಟಿ ಮೆಂಬರರಾಗಿ ನೇಮಿಸಲ್ಪಟ್ಟಿರುವರೆಂಬದಾಗಿ ಕೇಳುತ್ತೇವೆ.

ರಜೆಯ ಮೇಲಿದ್ದ ಡಿಸ್ಟ್ರಿಕ್ಟ್ ಪೋಲಿಸ್ ಸುಪರಿಂಟೆಂಡೆಂಟರಾದ ರಾ. ಅರ್ನೆ ಸುಬ್ಬರಾಯರ ರಜೆ ತೀರಿ, ಇಲ್ಲಿಗೆ ಬಂದು ಚಾರ್ಜು ತಕ್ಕೊಂಡಿರುತ್ತಾರೆ.

ಡೆಪ್ಯುಟಿ ಪೋಲಿಸ್ ಸುಪರಿಂಟೆಂಡೆಂಟರಾದ ರಾ। ಗೋವಿಂದ ನಾಯರರು ಕೇಜುವಲ್ ರಜೆಯ ಮೇಲೆ ಉದಕಮಂಡಲಕ್ಕೆ ಹೋಗಿರುತ್ತಾರೆ.

ಕಳೆದವಾರ ಇಲ್ಲಿಯ ಬಂದರದಿಂದ ಒಂದು ದೊಡ್ಡ ನಾವೆಯನ್ನು ಸಮುದ್ರಕ್ಕೆ ಎಳಕೊಂಡು ಹೋಗುವ ಸಣ್ಣ ನಾವೆ ಹಿಂದೆ ಬರುವಾಗ ತುಫಾನಿಗೆ ಸಿಕ್ಕಿ ಒಬ್ಬ ಅಂಬಿಗನು ಮುಣುಗಿ ಸತ್ತನು. ಉಳಿದವರು ರಕ್ಷಿಸಲ್ಪಟ್ಟರು.

ಇಲ್ಲಿಯ ಗವರ್ನಮೆಂಟ್ ಕಾಲೇಜಿಯಲ್ಲಿ ಇಂಟರ್ ಮಿಡಿಯೆಟ್ ಪರೀಕ್ಷೆಗೆ ನಿಂತ ೩೯ ಮಂದಿಯಲ್ಲಿ ೯ ಮಂದಿಯೂ ಸೆಂಟ್ ಎಲೋಸಿಯಸ್ ಕಾಲೇಜಿಯಲ್ಲಿ ಅದೇ ಪರೀಕ್ಷೆಗೆ ನಿಂತ ೭೦ ಮಂದಿಯಲ್ಲಿ ೧೫ ಮಂದಿಯೂ ಪಾಸಾಗಿರುವರೆಂತ ತಿಳಿದು ಬಂದದೆ.

ಪೋರ್ಟಆಫೀಸ್ ಕ್ಲಾರ್ಕರಾದ ರಾ। ಜೆ ಎಸ್ ಸುವರ್ಣರವರು ಈ ವರ್ಷದ ಬಿ ಎ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು.

ದಕ್ಷಿಣ ಕನ್ನಡ ಜಿಲ್ಲೆಯಿಂದ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ನಿಂತವರಲ್ಲಿ ೩ ಮಂದಿ ಪಾಸಾಗಿರುತ್ತಾರೆ.

ದೇರೆಬೈಲಿನಲ್ಲಿ ಒಂದು ತೋಟದಲ್ಲಿ ಇಬ್ಬರು ರಿಜರ್ವ್ ಪೋಲಿಸಿನವರು ಒಂದು ತೆಂಗಿನಮರಕ್ಕೆ ಹತ್ತಿ, ತೆಂಗಿನಕಾಯಿ ಕಳವು ಮಾಡಲು ಯತ್ನಿಸಿದ್ದಾರಾಗಿ ಆಪಾದಿಸಲ್ಪಟ್ಟಿರುವರು. ಇಬ್ಬರ ಮೇಲೆಯೂ ಚಾರ್ಜಿ ಆಗಿಯದೆ.

ಆಸಿಸ್ಟಾಂಟ ಕಲೆಕ್ಟರರಾಗಿದ್ದ ಮಿ। ಪ್ರಿಸ್ಟ್ಲಿದೊರೆಗಳವರು ಕಾರೂರಿನ ಸಬ್ ಕಲೆಕ್ಟರರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ.

ಈ ವರ್ಷದ ಇಂಜಿನಿಯರಿಂಗ್ ಇಲಾಖೆಯ ಪ್ರಥಮ ವರ್ಷದ ಪರೀಕ್ಷೆಯಲ್ಲಿ ಪಾಸಾದವರಲ್ಲಿ ನಮ್ಮ ಜಿಲ್ಲೆಯವರಾಗಿದ್ದು ಕನೂರ ಹೈಸ್ಕೂಲಿನಲ್ಲಿ ಮತ್ತು ಗವರ್ನಮೆಂಟ ಕಾಲೇಜಿಯಲ್ಲಿ ಶಿಕ್ಷಣ ಪಡೆದಿದ್ದ ರಾ ಬಗಡೆ ಶ್ರೀಧರ ರಾಯರೂ ಒಬ್ಬರಾಗಿರುತ್ತಾರೆ.

ಇಲ್ಲಿಯ ಡಿಸ್ಟ್ರಿಕ್ಟ್ ರಿಜಿಸ್ಟ್ರಾರರಾಗಿದ್ದ ರಾ। ಪಿ ರಾಮಕೃಷ್ಣಯ್ಯನವರಿಗೆ ತಲಚೇರಿಗೆ ವರ್ಗವಾದುದರಿಂದ ಸಬ್ ರಿಜಿಸ್ಟ್ರಾರರಾಗಿದ್ದ ರಾ। ಎಮ್ ನಾರಾಯಣರಾಯರು ಡಿಸ್ಟ್ರಿಕ್ಟ್ ರಿಜಿಸ್ಟ್ರಾರರಾಗಿಯೂ ಉಡುಪಿ ಸಬ್ ರಿಜಿಸ್ಟ್ರಾರರಾಗಿದ್ದ ರಾ। ಸಂದೊಳಿಕೆ ದೇವರಾಯರು ಇಲ್ಲಿಯ ಸಬ್ ರಿಜಿಸ್ಟ್ರಾರರಾಗಿಯೂ ನೇಮಿಸಲ್ಪಟ್ಟಿರುತ್ತಾರೆಂತ ತಿಳಿಯುತ್ತೇವೆ.

ಇದೇ ತಾ ೨೫ರಲ್ಲು ಮಂಗಳೂರು ಮಹಿಳಾ ಸಭೆಯ ೪ನೇ ವರ್ಧಂತಿಯು ಇಲ್ಲಿಯ ಗಣಪತಿ ಸೆಕಂಡರಿ ಶಾಲೆಯಲ್ಲಿ ಕೂಡಿ ಬಂದಿರುವದು. ರಾವ್‌ಬಹದ್ದೂರ್ ಸವೂರು ಮಂಗೇಶರಾಯರು ಅಧ್ಯಕ್ಷರಾಗಿದ್ದು ಕಾಲೋಚಿತ ಭಾಷಣವನ್ನು ಕೊಟ್ಟರು. ಮಧ್ಯೆ ಮಧ್ಯೆ ಮಹಿಳಾ ಸಭೆಯ ಗಾಯನ ಮಂಡಲಿಯವರ ಗಾಯನಗಳು ಸಭಿಕರನ್ನು ಸಂತೋಷ ಸಾಗರದಲ್ಲಿ ಮುಳುಗಿಸಿದವು. ಅಧ್ಯಕ್ಷರ ಭಾಷಣದ ನಂತರ ರಾಜಗೀತೆಯು ಹಾಡಿ ಸಭೆಯು ಅಂತ್ಯವಾಯಿತು.

ಮಿ। ಎಸ್ ಎ ಕಾರ್ಟ್ಲಿಜ್ ಎಂಬವರು ಮದ್ರಾಸ್ ಸಂಸ್ಥಾನದಲ್ಲಿರುವ ಕಾರ್ಖಾನೆಗಳ ಆಸಿಸ್ಟಾಂಟ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಮಂಗಳೂರು ರೇಂಜ್ ಶಾಲೆಗಳ ಸಬ್ ಆಸಿಸ್ಟಾಂಟ ಇನ್ಸ್‌ಪೆಕ್ಟರರಾಗಿರುವ ಮ। ರಾ। ಪಿ ಮಂಗೇಶರಾಯರು V ಕ್ಲಾಸ್ ಖಾಯಂ ಸಬ್ ಇನ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಕಳೆದ ವಾರ ಮಂಗಳೂರು ಮ್ಯುನ್ಸಿಪಾಲಿಟಿಯಲ್ಲಿ ಪ್ಲೇಗುಮರಣವಿದ್ದಿಲ್ಲ.

ವಿವಿಧ ವಿಷಯಗಳು.

ಬರ್ಲಿನ್ ಪಟ್ಟಣದ ವಾಟ್ಸ್‌ಡೇಮರ್ ಪ್ಲಾಟ್ಸ್ ಎಂಬ ಬೀದಿಯು ಜನಗಳಿಂದ ಕೇವಲ ನಿಬಿಡವಾದುದಾಗಿಯೂ, ಅದರ ಒಂದು ಪಕ್ಕದಿಂದ ಮತ್ತೊಂದು ಪಕ್ಕಕ್ಕೆ ಭೂಮಿಯನ್ನು ಕೊರೆದು ಅದರಲ್ಲಿ ವಿದ್ಯುಚ್ಛಕ್ತಿಯ ಸಹಾಯದಿಂದ ಓಡುವ ರೈಲುಗಳನ್ನು ಬಿಡಬಹುದಾದಷ್ಟು ವಿಸ್ತಾರವಾಗಿಯೂ ಇದೆ!!

ಈ ನವೀನ ಗ್ರಂಥದಲ್ಲಿ ಪರಶುರಾಮಾವತಾರದ ಕಥೆಯೂ, ಸ್ಥಳನಾಪುರ ಮಹಾತ್ಮೆಯೂ, ಬೆರತಖಂಡದ ಕ್ಷತ್ರಿಯ ರಾಜವಂಶಾವಳಿಯೂ, ಧರ್ಮರಾಯನ ನಂತರ ಕಲಿಯುಗದಲ್ಲಿ ರಾಜ್ಯವಾಳಿದ 30 ಅರಸರ ಹೆಸರುಗಳೂ, ಕಾಲಗಳೂ ಪರಶುರಾಮನು ಸೃಷ್ಟಿಗೆ ತೇರಿದ 77 ದ್ವೀಪಗಳೂ, ಕನ್ನಡ ಜಿಲ್ಲೆಯ ಪೂರ್ವರಾಜರ ಸಂತತಿಯೂ, ಅವರು ಆಳಿದ ವರ್ಷಗಳೂ ಹೆಸರುಗಳೂ, ಕನಕವರ್ಮ ವೀರವರ್ಮರ ಚರಿತ್ರೆಯೂ, ವೀರವರ್ಮನು ಮಯೂರವರ್ಮನಾಗಿ ಬಂಟರ ವಂಶ ಸ್ಥಾಪಿಸಿದ ಕಥೆಗಳೂ, ಮಯೂರವರ್ಮನು ಮಾರ್ಕಾಂಡೇಯರಿಂದ ರಾಜನೀತಿಯನ್ನು ಕೇಳಿದ ಕಥೆಯೂ, ಅಹಿಕ್ಷೇತ್ರದಿಂದ ಬ್ರಾಹ್ಮಣರನ್ನು ತರಿಸಿದ ಕಥೆಯೂ, ಬ್ರಾಹ್ಮಣರಿಗೆ 32 ಗ್ರಾಮಗಳಲ್ಲಿ ನೇಮಿಸಿದ 326 ದೇವಗಳು (ಜನನಗಳೂ) ಅವರಿಗೆ ನೇಮಿಸಿದ ಬಹುಮಾನ ಮರ್ಯಾದೆಗಳೂ ಕೂಟ ಮರ್ಯಾದೆಗಳೂ, ಜೈನರಿಗೂ ಬ್ರಾಹ್ಮಣರಿಗೂ ದ್ವೇಷದ ಕಾರಣಗಳೂ ಬೂತಾಳ ಪಾಂಡ್ಯನ ಪೂರ್ವಚರಿತ್ರೆಯೂ, ದೇವಪಾಂಡ್ಯನ ಹಡಗಿನ ವಿವರಗಳೂ, ಬೂತಾಳಪಾಂಡ್ಯನ ಪೂರ್ಣಕಥೆಯೂ, ಭೂತರಾಜನಾದ ಕುಂಡೋದರನ ಪ್ರತಾಪಗಳೂ, ಬೂತಾಳಪಾಂಡ್ಯನ ಪಟ್ಟಾಭಿಷೇಕವೂ, ದೇವಪಾಂಡ್ಯನ ಹಡಗಿನ ವ್ಯಾಪಾರದ ಕಥೆಯೂ ಅಳಿಯ ಕಟ್ಟು ಆದ ಕಾರಣವೂ ಬೂತಾಳಪಾಂಡ್ಯನು ನೇಮಿಸಿದ 14 ಕಟ್ಟು 16 ಕಟ್ಟಳೆಗಳೂ, ಬೂತಾಳ ಪಾಂಡ್ಯನ ವಿವಾಹವೂ, ಕುಂಡೋದರನು ಮಹಿಷಾಸುರನಾದ ಕಥೆಯೂ ಬೂತಾಳ ಪಾಂಡ್ಯನು ಮಕ್ಕಳಿಗೆ ವಿಂಗಡಿಸಿದ ಸ್ಥಳ ಮಾನಮರ್ಯಾದೆಗಳೂ, ಅವನ ನಂತರ ಅಳಿಯ ವಿದ್ಯುಮ್ನಪಾಂಡ್ಯನ ಆಳಿಕೆಯೂ, ಅತನು ತನ್ನ ಮಕ್ಕಳಿಗೆ ವಿಂಗಡಿಸಿದ ಮಾನಮರ್ಯಾದೆಗಳೂ, ಚೌಟ ಬಂಗರ ಸಂಸ್ಥಾನದ ನಗರಗಳೂ, ಸ್ಥಳ ನಾಮಾವಳಿಗಳೂ, ಕೇರಳದ 43 ಜಾತಿಗಳೂ, ಹೋಬಳಿ ಮನೆತನಗಳೂ, ಮರ್ಯಾದೆಗಳ ಶಾಸನವೂ, ಪೂರ್ವ ಮರ್ಯಾದೆಗಳ ಕ್ರಮವೂ, 2ನೇ "ಬೂತಾಳಪಾಂಡ್ಯ"ನ ಚರಿತ್ರೆಯೂ, ಅಳಿಯಸಂತಾನದ 60 ಬಳಿಗಳೂ, ಚೌಟ ಬಂಗರ ಸಂಸ್ಥಾನದ ಮಾಗಣೆ, ಶೀಮೆ, ಒಳ ಅರಸರು, ಅವರ ಸ್ಥಳ ಮಾನಮರ್ಯಾದೆಗಳು ವಗೈರೆಯೂ ಜೈನ ಬಂಟರ 60 ಜನನ (ನಾಮಕೀರ್ತಿಗಳೂ) 7 ರಾಜದೈವಗಳ ಚರಿತ್ರೆಯೂ, ಉಡ್ಪಿಯ ಇತಿಹಾಸ, ವಿಜಯನಗರದ ಆಡಳಿತೆ ಕಂದಾಯಕ್ರಮ, ಪೂರ್ವದ ಕೆಲವು ಸಂಗ್ರಹಗಳು, ಬಂಗಾಡಿ ತಾಮ್ರಶಾಸನ, ಪಲ್ಲಿವಾಡಿ ಶಿಲಾಶಾಸನ, ಉಳ್ಳಾಲ ತಾಮ್ರಶಾಸನ, ಬಂಟಕಲ್ಲಿನ ಶಿಲಾಶಾಸನ, ನಂದಳ್ಕೆ ತಾಮ್ರ ಶಾಸನ, ವೇಣೂರಿನ ತಾಮ್ರಶಾಸನ, ಅನುಭವಗಳ ಸಂಗ್ರಹ, ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ದೇವಸ್ಥಾನಗಳು, ಬಾರ್ಕೂರು ಪಂಚಲಿಂಗೇಶ್ವರ ದೇವಸ್ಥಾನದ ಮರ್ಯಾದೆ ಪಟ್ಟಿ, ಮೊಗಲ್ ರಾಜರ ವಂಶಾವಳಿ, ಬರತಖಂಡಕ್ಕೆ ಅನ್ಯರಾಜರ ಪ್ರವೇಶ ಕಾಲಗಳು, ಈ ಜಿಲ್ಲೆಯ ಮಹನೀಯರ ಪಟ್ಟಿ, ಶ್ರೀಮನ್ ಪಂಚಮ ಜಾರ್ಜ ಬಾದಶಹರ ಚರಿತ್ರೆ ವಗೈರೆ ಅನೇಕಾನೇಕ ಸಂಗ್ರಹಗಳು ಬರಿತವಾದ ನವೀನ ಗ್ರಂಥ. 296 ಪುಟಗಳು ಭರಿತವಾಗಿ ಸದಾ ಕೈಯಲ್ಲಿರುವುದಕ್ಕೆ ಅನುಕೂಲವಾದ ಈ ಪುಸ್ತಕವು ಅಳಿಯಕಟ್ಟಿನವರಿಗೂ ಮಕ್ಕಳ ಕಟ್ಟಿನವರಿಗೂ ಶಾಲಾ ಉಪಾಧ್ಯಾಯರುಗಳಿಗೂ ವಿದ್ಯಾರ್ಥಿಗಳಿಗೂ ಸರ್ವರಿಗೂ ಅತ್ಯಗತ್ಯವುಳ್ಳದ್ದಾಗಿದೆ. **ಪ್ರತಿ ಒಂದಕ್ಕೆ ರೂ. 1—4—0.**

ಹೆಚ್ಚಿಗೆ ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಷನ್ ಕೊಡಲಾಗುವದು

ಕುಶಲಮಂದಿರ,
ಶ್ರೀರಾಜರಾಜೇಶ್ವರಿ ದೇವಸ್ಥಾನ,
ಪೊಳಲಿ

ಎನ್. ಎ. ಶೀನಪ್ಪ ಹೆಗ್ಗಡೆ,
ಅಮುಣೆಂಜೆಗುತ್ತು,
ಗುರುಪುರ ಪೋಸ್ಟು, ದ. ಕ.

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1 ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ, ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು

2 ಪರಿಶ್ರಮಾದಿಗಳಿಂದ ಕುಂದಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು ಮತ್ತು ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು

3 ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸ ವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತ ಬಂದಲ್ಲಿ ತಿಂದನ್ನವು ಜೀರ್ಣವಾಗುವದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವ ರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

4 ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು

5 ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು

6 ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು

7 ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು

ಆದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ

45 ಮಾತ್ರೆಗಳ ಪೊಟ 1ಕ್ಕೆ 0—2—0 200 ಮಾತ್ರೆಗಳ ಪೊಟ್ಣ 1ಕ್ಕೆ 0—7—0 8 ಮಾತ್ರೆಗಳ ಟಿನ್ 1ಕ್ಕೆ 0—4—0 550 ಮಾತ್ರೆಗಳ ಮರದಪೆಟ್ಟಿಗೆ1ಕ್ಕೆ 1—0—0
95 „ 0—4—0 200 ಟಿನ್ „ 0—9—0 100 „ „ 0—4—6 1200 „ „ „ 2—0—0

1 ರೂಪಾಯಿಗೆ ಕಡಿಮೆಯಾಗಿ ವಿ ಪಿ ಮೂಲಕ ಕಳುಹಿಸಲ್ಪಡುವುದಿಲ್ಲವು ಮತ್ತು ಪೋಸ್ಟೇಜ ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು

☞ ಬರತಖಂಡ ಬರ್ಮ ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲಾ ಬಾಗಗಳಲ್ಲೂ ಏಜಂಟರು ಬೇಕಾಗಿದೆ

ಸೋಲ್ ಏಜಂಟ್ಸ್ — ಸೆಶಿಂತಾನ್ ಡಿಪೋ,

ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ. 2.

ಐಶ್ವರ್ಯವಂತರೂ ಬಡವರೂ ಕೊಂಡುಕೊಳ್ಳಲು ಸಾಧ್ಯವಾಗಿರುವ

ಯುಕಲಿಪ್ಟಸ್ ತೈಲವು.

—o—

ತಲೆನೋವು ಕಣ್ಣು ಉರಿ, ಗಾಯ ಸಕಲ ವಿಧವಾದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ ಹೊಟೆಯಲ್ಲಿ ಜ್ವರಗಡ್ಡೆ, ಸ್ತ್ರೀಯರ ವ್ಯಾಧಿಸಂಬಂಧ ಪೀಡೆ ಮೊದಲಾದ ಮಹಾರೋಗಗಳ, ಕಿವಿಯಲ್ಲಿ ಕೀವು ಬರುವದು, ಹಂದಸರ ಹೊಟ್ಟೆನೋವು ಮೊದಲಾದ ರೋಗಗಳನ್ನು ಖಾತ್ರಿಯಾಗಿ ಗುಣಪಡಿಸುತ್ತದೆ ಔನ್ಸ್ ಸೀಸೆ 1ಕ್ಕೆ 0—5—0 ವಿ ಪಿ ಬೇರೆ ಡಜನ್ ಸೀಸೆಗಳಿಗೆ ವಿ ಪಿ ಸಹಿತ ರೂ 3—12—0 ಅನುಪಾನ ಪತ್ರಿಕೆ ಸೀಸೆಯೊಂದಿಗೆ

ಸಿಫಾರಸು ಪತ್ರ — ಎಸ್ ತಮ್ಮ ಯುಕಲಿಪ್ಟಸ್ ತೈಲವು ಅಮೃತದಂತೆ ಪ್ರತಿ ಮನೆಯಲ್ಲಿಯೂ ಇರಲೇಬೇಕೆಂದು ನಾನು ಖಚಿತವಾಗಿ ಹೇಳುತ್ತೇನೆ ಪಶುಗಳ ಸರ್ವ ರೋಗಗಳಿಗೆ ರಾಮಬಾಣದ ಶಿದೆ

ಇಕ್ಲಿಪ್ಸ್ ಬಾಮ್.

ತಲೆನೋವು, ಸೊಂಟದ ನೋವು ಸಂಧಿವಾತ, ದೇಹವಾತ, ನೆಗಡಿ, ಶೈತ್ಯ, ಚೇಳು, ಜಾಡರಹುಳ ಕಡಿತ, ಕುರು, ರಾಜಕುರು, ಮೊಡವೆ, ಘಾಯಿಗಳು, ಹಲ್ಲುನೋವು, ಆನೆಕಾಲು ಇತ್ಯಾದಿ ರೋಗಗಳಿಗೆ ಬಾಹ್ಯಲೇಪನವಾಗಿ ಉಪಯೋಗಿಸಬಹುದಾದ ಬಾಮಿನ ಕರಡಿಗೆ 1ಕ್ಕೆ ಆಣೆ 8 ವಿ ಪಿ. ಬೇರೆ ಡಜನ್ ಕರಡಿಗೆಗಳಿಗೆ ರೂ 4—12—0 ವಿ ಪಿ ಬೇರೆ

ವಿಳಾಸ:— ಏಜಂಟರು —

ಇಕ್ಲಿಪ್ಸ್ ಏಜನ್ಸಿ, ಮಂಗಳೂರು. ಸುಗಂಧವಿಲಾಸ, ರಥಬೀದಿ, ಮಂಗಳೂರು

ಅನೇಕ ಯೋಗ್ಯತಾಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡ್)

ರಾಜಸುಂದರಿ ರೋಜ.

ಕೂದಲು ಬೆಳೆಯುವ ಪರಿಮಳ ತೈಲವು. 50 ವಿಧವಾದ ಇನಾಂ ಸಾಮಾನುಗಳ ಸಮೇತ ಡಬ್ಬಿ 1ಕ್ಕೆ ರೂ. 1 ಮಾತ್ರ

ಸ್ತ್ರೀಗಳು ತಲೆಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು, ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರಿಯುವ ಕೀಳುತರವಾದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ, ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ. ಈ ಲೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಅದರ ಸುವಾಸನೆ ಹೇಳುವದಕ್ಕೆ ಬರೆಯುವದಕ್ಕೆ ಆಗುವದಿಲ್ಲ ಮತ್ತು ಇದರ ಪರಿಮಳ ವಾಸನೆ ಸುತ್ತು ಇರುವ ಮನೆಗಳಿಗೆ ಹೋಗುವದು ಇದಲ್ಲದೆ ದೇಹದಲ್ಲಿ ಇರುವ ಉಷ್ಣವನ್ನು ತೆಗದು ಕಣ್ಣಿಗೆ ತಂಪು ಕೊಡುವದು ತಲೆಯಲ್ಲಿ ಇರುವ ಹೊಟ್ಟನ್ನು ಸರಿ ಮಾಡುವದು ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ ಮನಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ ಬೇರೊಂದಿಲ್ಲ, ಬರೀ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ 1ನ್ನು ತರಿಸಿದರೆ ತಿಳಿಯುತ್ತೆ. ಇನಾಂ ಸಾಮಾನುಗಳ ತಪಸೀಲು:- ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿಗೆ 6, ವೈಭರಣೆ 1, ಅದ್ದಾ 1, ತಾಂಬೂಲ ಚೂರ್ಣ 30, ದಂತದ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರನೇಷನ್ ಪೆಟ್ಟಿಗೆ 1, ರವಿವರ್ಮ ಫೋಟೊ ಕಾರ್ಡ 8 ಸುವಾಸನೆ ಅತ್ತರು ಬಿಲ್ಲೆ 1, ಗಂಧ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೋಚ್.

ನಮ್ಮ ವಿಳಾಸ — ಮ್ಯಾನೇಜರ್ ಡೈಯರ್ ಲಕ್ಷ್ಮಿ ಅಂಡು ಕಂಪನಿ,

ನಂ 3 ಇರುಲಪ್ಪನ್ ಬೀದಿ, ಮದ್ರಾಸ

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಖು 11ನೇ ಜೂನ್ 1915.

ಇಟೆಲಿಯು ಯುದ್ಧವನ್ನು ಸೇರಿದುದರಿಂದ ಫಲವೇನು?

ಇಟೆಲಿಯು ಯುದ್ಧವನ್ನು ಸೇರಿದುದರಿಂದ ಫಲವೇನು ಎಂಬುವ ವಿಷಯವನ್ನು ಮೂರು ವಿಧವಾಗಿ ಪರ್ಯಾಲೋಚಿಸಬಹುದು. ಒಂದನೇದು ಇಟೆಲಿಯ ಸ್ವಪ್ರಯೋಜನ, ಎರಡನೇದು ಮಿತ್ರಮಂಡಲಿಯವರಿಗೆ ಇಟೆಲಿಯಿಂದ ದೊರಕುವ ಸಹಾಯ, ಮೂರನೇದು ಯುದ್ಧವು ಬೇಗನೆ ಶಾಂತವಾಗುವ ಕಾಲ—ಈ ವಿಚಾರಗಳಿಂದ ಇಟೆಲಿಯು ಯುದ್ಧಕ್ಕೆ ಉಪಕ್ರಮಿಸಿದುದರಿಂದ ಏನೇನೆಲ್ಲಾ ಉಂಟಾಗಬಹುದೆಂದು ನಿರೀಕ್ಷಿಸಬಹುದಾಗಿದೆ. ಇಟೆಲಿ, ಜರ್ಮನಿ, ಮತ್ತು ಒಸ್ಟ್ರಿಯಾ ಇವರೊಳಗೆ 1920ನೆಯ ವರುಷದ ವರೆಗೆ ನಡೆಯಬೇಕಾಗಿದ್ದ ಒಂದು ಒಪ್ಪಂದವು ಇತ್ತೆಂಬುದನ್ನು ವಾಚಕರು ತಿಳಿದಿರಬಹುದು. ಈ ಒಪ್ಪಂದದ ಪ್ರಕಾರ ಯೂರೋಪದ ಈ ಮೂರು ಪ್ರಬಲ ರಾಜ್ಯಗಳು ಒಂದು ಪಕ್ಷದಲ್ಲಿರ ಬೇಕಾಗಿತ್ತು. ಆದರೆ ಇತ್ತಲಾಗೆ ಹೊರಬಿದ್ದ ಹಲವು ಸಂಗತಿಗಳಿಂದ ಈ ಒಡಂಬಡಿಕೆಯು ಹೇಗಿದ್ದರೂ ಇಟೆಲಿಯ ಮತವು ಅಂತರಂಗದಲ್ಲಿ ಬೇರೆಯಾಗಿತ್ತೆಂಬುದಾಗಿ ತಿಳಕೊಳ್ಳಲು ಕಾರಣವಿದೆ. ರುಶ್ಯರ ಸಹಾಯದಿಂದ ಪ್ರಬಲಿಸುವ ಬಲ್ಕಾನ್ ಸಂಸ್ಥಾನಗಳಲ್ಲಿ ಅಂಜಿಕೆಯುಂಟಾಗುವಂತೆ ಇಟೆಲಿಯು ಈ ಒಪ್ಪಂದಕ್ಕೆ ಸಮ್ಮತಿಯನ್ನು ಕೊಟ್ಟಿದ್ದರೂ ತನ್ನ ನೆರೆಯಲ್ಲಿರುವ ಒಸ್ಟ್ರಿಯಾ ದೇಶದ ಮೇಲೆ ಇಟೆಲಿಗೆ ಅನುಮಾನವೇ ಇತ್ತು. ಅದಲ್ಲದೆ ಇಟೆಲಿಯಾನರು ಇರುವ ಕೆಲವು ಸರಹದ್ದುಗಳನ್ನು ಒಸ್ಟ್ರಿಯಾವು ಕೈವಶಮಾಡಿಕೊಂಡಿದ್ದ ಕಾರಣದಿಂದಲೂ ಇಟೆಲಿಯು ಒಸ್ಟ್ರಿಯದ ಮೇಲೆ ವೈರವನ್ನು ತಾಳಿತ್ತು. ಈ ಯುದ್ಧದಲ್ಲಿ ಒಂದುವೇಳೆ ಜರ್ಮನಿ ಮತ್ತು ಒಸ್ಟ್ರಿಯವು ಜಯಶೀಲರಾದರೆ ಇಟೆಲಿಯ ಅವಸ್ಥೆಯು ಪೂರ್ಣವಾಗಿ ಕೆಟ್ಟು ಹೋಗಬಹುದೆಂದು ಇಟೆಲಿಯನ್‌ರಲ್ಲಿ ಹಲವರು ಮಿತ್ರಮಂಡಳಿಯನ್ನು ಸೇರಬೇಕೆಂದು ಅಲ್ಲಿಯ ಸರಕಾರದವರನ್ನು ಒತ್ತಾಯಪಡಿಸುತ್ತಿದ್ದರು. ಹೀಗಿದ್ದರೂ ತನ್ನ ಉದ್ದೇಶಗಳನ್ನು ನೆರವೇರಿಸಿಕೊಳ್ಳುವದು ಯಾವ ವಿಧಾನದಿಂದ ಲೇಸೆಂದು ಕಳೆದ ಹತ್ತು ತಿಂಗಳುಗಳಿಂದ ಪರ್ಯಾಲೋಚಿಸುತ್ತಿತ್ತು. ಈ ತನ್ಮಧ್ಯ ಇಟೆಲಿಯು ನಡೆಸಿದ ಪತ್ರವ್ಯವಹಾರದಿಂದ ಜರ್ಮನಿ ಮತ್ತು ಒಸ್ಟ್ರಿಯ ದೇಶಗಳ ದುರಾಲೋಚನೆಗಳು ಗೊತ್ತಾದ್ದರಿಂದ ಮಿತ್ರಮಂಡಳಿಯನ್ನು ಸೇರಿಕೊಂಡು ಜರ್ಮನರ ಮತ್ತು ಒಸ್ಟ್ರಿಯನರ ದರ್ಪವನ್ನು ಈ ಸಂದರ್ಭದಲ್ಲಿ ಮುರಿಯದೆ ಇದ್ದರೆ ತನಗೆ ಉಳಿಗಾಲವಿಲ್ಲವೆಂಬುದೂ ನಿಶ್ಚಯವೆಂತ ಭಾವಿಸಿ ಇಟೆಲಿಯು ಯುದ್ಧದಲ್ಲಿ ಮಿತ್ರಮಂಡಳಿಯವರನ್ನು ಸೇರಿತು.

ಇಟೆಲಿಯ ಮನೋಗತವು ಮಿತ್ರರನ್ನು ಸೇರಿದುದರಿಂದ ನೆರವೇರಿ ಇಟೆಲಿಗೆ ಸುಫಲವು ಪ್ರಾಪ್ತವಾಗುವದರಲ್ಲಿ ಸಂಶಯವಿರದು. ಇಟೆಲಿಯ ಸಂಯೋಗದಿಂದ ಮಿತ್ರಮಂಡಲಿಗೆ ಯುದ್ಧದಲ್ಲಿ ದೊರಕುವ ಪ್ರಯೋಜನಗಳು ಬಹಳವಾಗಿ ಹೆಚ್ಚಿವೆ ಎಂತ ಹೇಳಬಹುದು. ಪೂರ್ವರಣರಂಗಕ್ಕಾಗಲಿ ಪಶ್ಚಿಮರಣರಂಗಕ್ಕಾಗಲಿ ಸೇನೆಯನ್ನು ವಿಶೇಷವಾಗಿ ಕಳುಹಿಸಿಕೊಡುವರೆ ಆಗದೆ ಹೋದರೂ ಇಟೆಲಿಯು ಒಂದು ಪಕ್ಕದಲ್ಲಿ ಒಸ್ಟ್ರಿಯಾದ ಮೇಲೆ ಬೀಳುವುದರಿಂದ ಒಸ್ಟ್ರಿಯಾವು ತನ್ನ ಸೇನೆಯನ್ನು ಇತ್ತಗಡೆ ತಿರುಗಿಸಬೇಕಾಗುವದು. ರುಶ್ಯದ ಭಾರವು ಇದರಿಂದ ಕಡಮೆಯಾಗುವದಲ್ಲದೆ ಒಂದು ಕಡೆಯಲ್ಲಿ ಇಟೆಲಿಯೊಡನೆಯೂ ಮತ್ತೊಂದು ಕಡೆಯಲ್ಲಿ ರುಶ್ಯದೊಡನೆಯೂ ಕಾದಾಡಿಕೊಂಡು ಒಸ್ಟ್ರಿಯವು ಜರ್ಮನರ ಹತ್ತಿರ ಸೇರಲಿಕ್ಕಾಗದೆ ಸುಮ್ಮನಿರಬೇಕಾಗುತ್ತದೆ. ಒಸ್ಟ್ರಿಯದ ಸಹಾಯವು ಇಲ್ಲದೆ ಹೋದರೆ ಜರ್ಮನಿಯ ಬಲವು ಕುಗ್ಗುವದು. ಇಟೆಲಿಯ ಅಂಜಿಕೆಯಿಂದ ಈ ವರೆಗೆ ಫ್ರಾನ್ಸು ತನ್ನ ಸರಹದ್ದುಗಳಲ್ಲಿ ಕಾವಲಿಗಾಗಿ [illegible] ಲಕ್ಷ ಸೇನೆಯನ್ನು ನಿಲ್ಲಿಸಿತ್ತು. ಈಗ ಇಂಥಾ ಕಾವಲು ಅಗತ್ಯವಿಲ್ಲ [illegible] ಯುದ್ಧರಂಗದಲ್ಲಿ ಈ ಸೇನೆಯನ್ನು ಜರ್ಮನರೊಡನೆ ಕಾದಾಡಲು [illegible] ಇಟೆಲಿಯ ಕೂಡ ನೌಕಾಬಲವು ವಿಶೇಷ[illegible]ವಾಗಿರುವದು. ತುರ್ಕಿಯ ಮೇಲೆ ನಡೆಸುವ ಕಾಳಗಗಳಲ್ಲಿ ಮಿತ್ರಮಂಡಳಿಯವರಿಗೆ ಈ ನೌಕಾಬಲದಿಂದ ಅನುಕೂಲವಾದ ಸಹಾಯವು ಇನ್ನು ಮುಂದೆ ದೊರಕುತ್ತದೆ. ಈ ರೀತಿ ಫ್ರಾನ್ಸು, ಇಂಗ್ಲೆಂಡ್ ರುಶ್ಯಾ ಮತ್ತು ಇಟೆಲಿ ಇವರ ಬಲವಾದ ಸಂಯೋಗದಿಂದ ಭೂಸೇನೆ, ನೌಕಾಬಲ, ಮದ್ದುಗುಂಡು, ಆಹಾರ ಸಾಮಾಗ್ರಿ ಮೊದಲಾದವುಗಳನ್ನು ಧಾರಾಳವಾಗಿ ಉಪಯೋಗಿಸಿಕೊಳ್ಳಲು ಮಿತ್ರರಿಗೆ ಅನುಕೂಲವಾಗಿದೆ.

ಇಟೆಲಿಯು ರಣರಂಗವನ್ನು ಸೇರಿದ್ದರಿಂದ ಯುದ್ಧವು ಬೇಗನೆ ಮುಗಿಯುವುದೋ? ಇಟೆಲಿಯ ವರ್ತನೆಯನ್ನು ನೋಡಿ ಬಲ್ಕಾನ್ ಸಂಸ್ಥಾನದ ಕೆಲವು ರಾಜ್ಯಗಳು ಮಿತ್ರರ ಸಹಾಯಾರ್ಥವಾಗಿ ರಣರಂಗಕ್ಕೆ ಇಳಿಯಬಹುದು. ಇದರಿಂದ ಯುದ್ಧವು ಮೊದಲಿನಿಗಿಂತ ಪ್ರಚಂಡವಾಗಿ ಬೆಳೆಯುವುದು. ಈ ಮೂಲಕ ಯುದ್ಧಾಸಕ್ತಿಯು ಬೇಗನೆ ಕಡಮೆಯಾಗುವದರಿಂದ ಯುದ್ಧವು ಶೀಘ್ರದಲ್ಲಿ ತೀರುವುದೆಂತ ಯುದ್ಧ ಶಾಸ್ತ್ರಜ್ಞರು ಹೇಳುತ್ತಿದ್ದಾರೆ. ಒಸ್ಟ್ರಿಯಾ ದೇಶವು ಈ ಮೊದಲೇ ಯುದ್ಧದಲ್ಲಿ ಕಂಗೆಟ್ಟು ಹೋಗಿಯದೆ. ಜರ್ಮನಿಯು ರುಶ್ಯದೊಡನೆ ಪ್ರತ್ಯೇಕವಾಗಿ ಸಂಧಾನವನ್ನು ಮಾಡುವ ಪ್ರಯತ್ನಗಳು ನಿಷ್ಫಲವಾಗಿ ಹೋದವೆಂಬ ವಾರ್ತೆಯನ್ನು ಕೇಳಿದರೆ ಜರ್ಮನಿಯೂ ಸಹ ಎದೆಗೆಟ್ಟಿರುವದೆಂಬುದು ನಿಶ್ಚಿತವಾಗುವುದು. ಆದ್ದರಿಂದ ಯುದ್ಧವು ಬೇಗನೆ ಮುಗಿಯುವ ಸಂಭವಗಳು ಹೆಚ್ಚಾಗಿವೆ ಎಂತ ಹೇಳಬಹುದು.

ಬ್ರಿಟಿಷ್ ಸಾಮ್ರಾಜ್ಯದ ಮಂತ್ರಿ ಮಂಡಲದಲ್ಲಾದ ಬದಲಾವಣೆಯು.

ಸಾಮ್ರಾಜ್ಯದ ಆಡಳಿತೆಯು ಲಿಬರಲ್ ಮತ್ತು ಕನ್ಸರ್ವೇಟಿವ್ ಈ ಎರಡು ಪಕ್ಷಗಳ ಪ್ರತಿನಿಧಿಗಳಿರುವ ಪಾರ್ಲಿಮೆಂಟ್ ಸಭೆಯ ಮೂಲಕ ನಡಿಸೋಣಾಗುವದು. ಪಾರ್ಲಿಮೆಂಟ್ ಸಭೆಯಲ್ಲಿ ಬಹುಮತವು ಯಾವ ಪಕ್ಷದಲ್ಲಿರುವದೋ ಆ ಪಕ್ಷದ ಪ್ರತಿನಿಧಿಗಳು ಸಾಮ್ರಾಜ್ಯದ ಪ್ರಧಾನರಾಗಿ ನೇಮಿಸಲ್ಪಡುವರು. ಯುದ್ಧದ ದೆಸೆಯಿಂದ ಪಾರ್ಲಿಮೆಂಟ್ ಸಭೆಯ ಪ್ರತಿನಿಧಿಗಳನ್ನು ಚುನಾಯಿಸಲು ಈ ಸಲ ಆಗದೆ ಹೋದ್ದರಿಂದ ಎರಡು ಪಕ್ಷದವರೂ ಸೇರಿಕೊಂಡು ರಾಜ್ಯಭಾರವನ್ನು ವಹಿಸಿಕೊಂಡಿದ್ದಾರೆ. ಮಂತ್ರಿ ಮಂಡಲದಲ್ಲಿ ಉಭಯ ಪಕ್ಷದ ಮುಂದಾಳುಗಳು ಮಂತ್ರಿಗಳಾಗಿ ನೇಮಿಸಲ್ಪಟ್ಟಿರುವರು. ಇವರು ಯಾರೆಂಬುದನ್ನು ಕಳೆದ ಸಂಚಿಕೆಯ ವರ್ತಮಾನ ಸಂಗ್ರಹದಲ್ಲಿ ಪ್ರಕಟಿಸಿರುವೆವು.

ಹಿಂದೂಸ್ಥಾನದ ಪ್ರಧಾನ ಮಂತ್ರಿಗಳಾಗಿ ಕ್ರೂಪ್ರಭುಗಳ ಸ್ಥಾನದಲ್ಲಿ ಮಿ| ಅಸ್ಟಿನ್ ಚೆಂಬರ್‌ಲೇನ್ ಎಂಬವರು ನೇಮಿಸಲ್ಪಟ್ಟಿರುವರು. ಮಿ| ಅಸ್ಟಿನ್ ಚೆಂಬರ್‌ಲೇನರು ಕ್ರೂಪಭುಗಳ ವಿರೋಧಪಕ್ಷದವರಾಗಿರುವರು. ಹಿಂದೂಸ್ಥಾನದ ಪ್ರಧಾನ ಮಂತ್ರಿಗಳು ಬ್ರಿಟಿಷ ಪಾರ್ಲಿಮೆಂಟ್ ಸಭೆಯ ಯಾವ ಪಕ್ಷದವರಾದರೂ ಇಲ್ಲಿಯ ಆಡಳಿತೆಗೆ ಇವರಿಂದ ವಿಶೇಷ ಸಾಧಕಬಾಧಕಗಳಿರವೆಂತ ಹೇಳಬಹುದಾದರೂ ತತ್ಕಾಲದಲ್ಲಿ ಕ್ರೂಪ್ರಭುಗಳವರು ಈ ಮಂತ್ರಿಪದವಿಯನ್ನು ಬಿಟ್ಟುಬಿಟ್ಟದ್ದು ಇಲ್ಲಿಯ ಪ್ರಜಾವರ್ಗಗಳಿಗೆ ಉಚಿತ ಕಾಣದು. ಕ್ರೂಪ್ರಭುಗಳವರು ತಮ್ಮ ಆಡಳಿತೆಯ ಕಾಲದಲ್ಲಿ ಭಾರತೀಯರ ಪರವಾಗಿ ತೋರಿಸಿದ ಸಹಾನುಭೂತಿಯಿಂದ ಇವರು ಜನರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿರುವರು. ಅದಲ್ಲದೆ ಇಲ್ಲಿಯ ವೈಸರಾಯಿಗಳಾದ ಹಾರ್ಡಿಂಗ್ ಪ್ರಭುಗಳೂ ಕ್ರೂಪ್ರಭುಗಳೂ ಒಂದೇ ಶಾಲೆಯಲ್ಲಿ ಕಲಿತ ಸಂಗಾತಿಗಳಾದ್ದರಿಂದ ಇವರೊಳಗೆ ಬಾಲ್ಯ ಪ್ರಾಯದಿಂದ ಬೆಳದ ಪರಸ್ಪರ ಸ್ನೇಹವು ವಿಶೇಷವಾಗಿತ್ತು. ಇವರ ಇಂಥಾ ಸ್ನೇಹದಿಂದ ಹಿಂದುಸ್ಥಾನಕ್ಕೆ ಅಧಿಕ ಪ್ರಯೋಜನ ಉಂಟಾಗಿದೆ. ಈ ಇಬ್ಬರು ಸ್ನೇಹಿತರ ಕಾಲದಲ್ಲಿ ಹಿಂದೂಸ್ಥಾನದ ಆಡಳಿತೆಯಲ್ಲಿ ಇವರು ಅನುಸರಿಸಿರುವ ಮಾರ್ಗವನ್ನು ಯುದ್ಧವು ಮುಗಿಯುವ ತನಕ ಹಾಗೆಯೇ ಇರಗೊಡಿಸುವುದು ಉಚಿತವಾಗಿತ್ತಾದ್ದರಿಂದ ಕ್ರೂಪ್ರಭುಗಳನ್ನು ಹಿಂದೂಸ್ಥಾನದ ಪ್ರಧಾನ ಮಂತ್ರಿಗಳಾಗಿ ಇರಗೊಡಿಸುವದು ಅಗತ್ಯವಾಗಿತ್ತು. ಮಂತ್ರಿಗಳ ಬದಲಾವಣೆಯಿಂದ ಹ್ಯಾಗೂ ಒಂದು ಪ್ರಯೋಜನವಿದೆ. ಕ್ರೂಪ್ರಭುಗಳು ಬ್ರಿಟಿಷ ಪಾರ್ಲಿಮೆಂಟ್ ಸಭೆಯ ಪ್ರಭುಸದನಕ್ಕೆ ಸೇರಿದವರು. ಸಾಮ್ರಾಜ್ಯದ ಸರಕಾರದ ಹೆಚ್ಚಿನ ಜವಾಬ್ದಾರಿಯುಳ್ಳ ಹೌಸ್ ಒಫ್ ಕೊಮನ್ಸ್, ಪ್ರಜಾಪ್ರತಿನಿಧಿಗಳ ಸಭೆಯ ಮುಂದೆ ಹಿಂದುಸ್ಥಾನ ವಿಷಯಗಳನ್ನು ಸ್ವತಹ ತರುವ ಅವಕಾಶವು ಕ್ರೂಪ್ರಭುಗಳಿಗೆ ಇದ್ದಿಲ್ಲ. ಮಿ| ಅಸ್ಟಿನ್ ಚೆಂಬರ್‌ಲೇನ್‌ರವರು ಪ್ರಜಾಪ್ರತಿನಿಧಿ ಸಭೆಯ ಮೆಂಬರರಾಗಿರುವದರಿಂದ ಇಂಥಾ ಅವಕಾಶವು ಇವರಿಗೆ ತುಂಬಾ ಇದೆ.

ಲೋಕಸೇವೆಯೇ ದೇವರ ಸೇವೆಯು.

1. ದೇವರು ಯಾವಾಗಲೂ ಲೋಕಹಿತಕ್ಕಾಗಿ ಕೆಲಸ ಮಾಡುತ್ತಿರುವನು

ನಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ ॥
ನಾನವಾಪ್ತಮವಾಪ್ತವ್ಯಂ ವರ್ತ ಏವ ಚ ಕರ್ಮಣಿ ॥ ಗೀತಾ III-22

ಎಂಬಂತೆ ದೇವರು ಪೂರ್ಣನು. ಆತನು ಮಾಡಬೇಕಾದ ಕರ್ತವ್ಯವಾಗಲಿ, ಹೊಂದಬೇಕಾದ ಇಷ್ಟಾರ್ಥವಾಗಲಿ, ಯಾವುದೂ ಇಲ್ಲವು. ಆತನು ಸರ್ವಜ್ಞನು, ತಿಳಿಯಬೇಕಾದದ್ದು ಏನೂ ಇಲ್ಲವು. ಆತನು ಸರ್ವಶಕ್ತಿವಂತನು, ಆತನ ಕೈಲಾಗದ್ದು ಏನೂ ಇಲ್ಲವು. ಆದರೂ ಆತನು ಯಾವಾಗಲೂ ಲೋಕಹಿತಕ್ಕಾಗಿ ಕೆಲಸ ಮಾಡುತ್ತಿರುವನು. ಆತನು ಕೆಲಸ ಮಾಡದಿದ್ದರೆ ಸೂರ್ಯನು ಉದಯಿಸನು, ಗಾಳಿಯು ಬೀಸದು, ಮಳೆಯು ಹೊಯ್ಯದು, ಸಸ್ಯಗಳು ಬೆಳೆಯವು, ನಾವು ಬದುಕಲಾರೆವು, ಪ್ರಪಂಚದಲ್ಲಿ ಯಾವುದೊಂದು ಕೆಲಸವೂ ನಡೆಯದು, ಪ್ರಪಂಚವೇ ನಿಲ್ಲದು. ಪ್ರಪಂಚವು ನಿಂತಿರುವುದೂ, ಅದರಲ್ಲಿನ ಸಕಲ ಕಾರ್ಯಗಳು ನಡೆಯುತ್ತಿರುವುದೂ ಸಹ ಆತನ ಕೆಲಸದಿಂದಲೇ.

2. ನಾವು ಲೋಕಸೇವೆಯನ್ನು ಮಾಡಬೇಕು

ಆತನೇ ಹಾಗೆ ಯಾವಾಗಲೂ ಲೋಕಹಿತಕ್ಕಾಗಿ ಕೆಲಸ ಮಾಡುತ್ತಿರುವಲ್ಲಿ ಆತನ ಮಕ್ಕಳಾದ ನಾವೂ ಸಹ ಆತನನ್ನು ತಿಳಿದು, ಪ್ರೀತಿಸಿ, ಆತನಂತೆ ದೊಡ್ಡವರಾಗಿ ಬೆಳೆದು ಪೂರ್ಣರಾಗಿ ಲೋಕಸೇವೆಯನ್ನು ಮಾಡಬೇಕಾದದ್ದು ಅವಶ್ಯಕವಲ್ಲವೆ? ಅಂತಹ ಪರಮಭಾಗ್ಯವು ಲಭಿಸಬೇಕಾದರೆ ಈಗಿನಿಂದಲೇ ನಮ್ಮ ನಮ್ಮ ಕೈಲಾಗುವ ಮಟ್ಟಿಗೂ "ಅಳಿಲು ಭಕ್ತಿ ಮೇಳಿಲು ಸೇವೆ" ಎಂಬಂತೆ ಭೂತಸೇವೆಯನ್ನು ಅಭ್ಯಾಸಿಸುತ್ತಾ ಬರಬೇಕು. ಈ ಅಂಶವು ನಮ್ಮ ಹಿಂದೂಗಳಲ್ಲಿ ಬಹಳಮಟ್ಟಿಗೆ ಮರೆತುಹೋಗಿ ಪ್ರತಿಯೊಂದರಲ್ಲೂ ಸ್ವಪ್ರಯೋಜನ ಪರತ್ವವು ಹೆಚ್ಚುತ್ತಾ ಬಂದಿದೆ. ಕೊನೆಗೆ ಮೋಕ್ಷವಿಚಾರದಲ್ಲಿಯೂ ಕೂಡ ಸ್ವಾರ್ಥಪರಾಯಣರಾಗಿದ್ದೇವೆ. ನಮ್ಮ ಮಟ್ಟಿಗೆ ನಮಗೆ ಮೋಕ್ಷವಾದರೆ ಸರಿ, ಮತ್ತೊಬ್ಬರ ಪಾಡು ನಮಗೇಕೆ ಎಂಬ ಭಾವವು ಬಹಳವಾಗಿದೆ ಇದರಿಂದಲೇ ಮಹೋನ್ನತ ಪದವಿಯಲ್ಲಿದ್ದ ಹಿಂದೂ ದೇಶವು ಈಗ ಹೀಗೆ ಹೀನಸ್ಥಿತಿಗೆ ಬರಲು ಅವಕಾಶವಾಯಿತು. ಈಗಲಾದರೂ ತಿಳಿದು ಎಚ್ಚೆತ್ತುಕೊಳ್ಳುವುದು ಉತ್ತಮವಲ್ಲವೆ? ನಮ್ಮ ಪೂರ್ವಿಕರಾದ ಮಹರ್ಷಿಗಳೂ ಸಹ ನಮ್ಮಂತೆಯೇ ಸ್ವಾರ್ಥಪರರಾಗಿ ತಮ್ಮ ಸುಖಮೋಕ್ಷಗಳಲ್ಲಿಯೇ ಗಮನವುಳ್ಳವರಾಗಿದ್ದಪಕ್ಷದಲ್ಲಿ ಇಂತಹ ಅಮೋಘವಾದ ವೇದಶಾಸ್ತ್ರ, ಪುರಾಣ, ಇತಿಹಾಸಗಳೊಂದೂ ನಮಗೆ ದೊರೆಯುತ್ತಿರಲಿಲ್ಲ ಹಿಂದೂಮತವು ಇಷ್ಟು ಘನತರವಾದದ್ದೆಂದು ಹೇಳುವುದಕ್ಕೂ ಅವಕಾಶವಿರುತ್ತಿರಲಿಲ್ಲ. ಅವರು ಭಕ್ತಿ, ಜ್ಞಾನ, ವೈರಾಗ್ಯಪೂರ್ಣರಾಗಿ ಮುಕ್ತರಾದಾಗ್ಯೂ ತಮ್ಮ ಮುಕ್ತಿಸುಖವನ್ನು ಕೂಡ ಬಿಟ್ಟು, ಅಜ್ಞಾನವೆಂಬ ಕಗ್ಗತ್ತಲೆಯಲ್ಲಿ ದಾರಿಗಾಣದೆ ದುಃಖದಿಂದ ಹೋರಾಡುತ್ತಿರುವ ಮನುಷ್ಯವರ್ಗದ ಮೇಲೆ ಕೃಪೆಯಿಟ್ಟು, ಈ ಲೋಕಕ್ಕೆ ಒಂದು ಅಮೋಘವಾದ ವೇದಶಾಸ್ತ್ರಾದಿಗಳ ದ್ವಾರಾ ಜ್ಞಾನದಾನವನ್ನು ಮಾಡಿರುವರು. ಈಗಲೂ ಮಾಡುತ್ತಿರುವರು. ಲೋಕಹಿತಕ್ಕೆ ಅಂದರೆ ಪರೋಪಕಾರಕ್ಕೆ ಸಹಾಯಕಾರಿಗಳಲ್ಲದ ಜ್ಞಾನ, ಭಕ್ತಿ, ವೈರಾಗ್ಯಗಳು, ಅಹಂಕಾರ, ಸ್ವಾರ್ಥತೆ, ನಿರ್ದಯತ್ವಗಳನ್ನು ಹೆಚ್ಚುಮಾಡುವವು. ಆದ್ದರಿಂದ ಲೋಕಸೇವೆಗೆ ಉಪಯುಕ್ತವಾದ ಭಕ್ತಿ, ಜ್ಞಾನ, ವೈರಾಗ್ಯಗಳೇ ಸಾರ್ಥಕವಾದವುಗಳು ಮನುಷ್ಯನಲ್ಲಿ ಈ ಗುಣಗಳು ಹೆಚ್ಚಿದ ಹಾಗೆಲ್ಲಾ ಪರಾರ್ಥವು ಹೆಚ್ಚಬೇಕು.

3. ಭೂತಸೇವೆಯೇ ದೇವರ ಪೂಜೆಯು.

ಭಗವತ್ಪೂಜೆಯು ಯಾವುದೆಂದು ಕೇಳಿದ್ದಕ್ಕೆ ಶ್ರೀ ಕೃಷ್ಣನು ಹೇಳಿದ ಉತ್ತರವನ್ನು ಯಾವಾಗಲೂ ಮನಸಿನಲ್ಲಿಡುವುದು ಒಳ್ಳೆಯದು. ಅದ್ಯಾವುದೆಂದರೆ:—

ಸೇವನಂ ಸರ್ವಭೂತಾನಾಂ ಪೂಜನಂಚ ಮಹಾತ್ಮನಾಂ ॥
ಕಾರ್ಯಂ ಸ್ವಾಭಾವಿಕಂ ಮತ್ವಾ ಕರ್ಮಸಂಧಾರಣಂ ಕುರು ॥
ಇದಮೇವಾಸ್ತಿ ಮತ್ಪೂಜಾ ಇದಮೇವ ಪರಂ ತಪಃ ॥

ಅಂದರೆ ಸಮಸ್ತ ಭೂತಗಳ ಸೇವೆಯೂ, ಮಹಾತ್ಮರ ಪೂಜೆಯೂ ನಿನ್ನ ಸ್ವಭಾವಕರ್ಮವೆಂದರಿತು ಕೆಲಸಮಾಡು; ಇದೇ ನನ್ನ ಪೂಜೆಯು, ಇದೇ ಶ್ರೇಷ್ಠವಾದ ತಪಸ್ಸು ಎಂದು ಹೇಳಿರುವನು.

ಭಗವಂತನ ಪಾದಸೇವೆಯನ್ನು ಮಾಡಬೇಕೆಂದು ಹೇಳುವುದು ಕೇವಲ ರೂಢಿಯಾಗಿದೆ. ಭಗವಂತನ ಪಾದವ್ಯಾವುದು? "ಪಾದೋಽಸ್ಯ ವಿಶ್ವಾಭೂತಾನಿ" ಅಂದರೆ ಈ ಸಮಸ್ತ ಭೂತಕೋಟಿಯೇ ಆತನ ಪಾದವೆಂದು "ಪುರುಷಸೂಕ್ತ"ದಲ್ಲಿ ಹೇಳಿರುವುದು. "ಅಸ್ಯಪದ್ಭ್ಯಾಂ ಪೃಥಿವೀ" ಈ ಭೂಮಿಯೇ ಆತನ ಪಾದವೆಂದು ಉಪನಿಷತ್ತಿನಲ್ಲಿ ಹೇಳಿರುವುದು. ಆದ್ದರಿಂದ ಸರ್ವಭೂತಸೇವೆಯೇ ದೇವರ ಪೂಜೆಯು.

4. ಲೋಕಸೇವೆಯೇ ದೇವರ ಸೇವೆಯು.

ಭಗವಂತನಿಗೆ ವಿಶ್ವಕುಟುಂಬಿಯೆಂದು ಹೆಸರು. ಈ ಪ್ರಪಂಚವೇ ಆತನ ಕುಟುಂಬವು. "ತ್ರಿಲೋಕೀಗೃಹಸ್ಥಿತಿ" ಎಂದು ಶ್ರೀ ಮದ್ರಾಮಾನುಜಾಚಾರ್ಯರು ಹೇಳಿರುವಂತೆ ಆತನು ಗೃಹಸ್ಥನು, ಈ ಮೂರು ಲೋಕಗಳೂ ಆತನ ಮನೆಯು, ಅವುಗಳಲ್ಲಿರುವ ಸಮಸ್ತ ಪ್ರಾಣಿಗಳೂ ಆತನ ಕುಟುಂಬವು. ಈ ಕುಟುಂಬರಕ್ಷಣೆಗಾಗಿ ಆತನು ಸದಾ ಕೆಲಸ ಮಾಡುತ್ತಿರುವನು. ಆತನ ಮಕ್ಕಳಾದ ನಮಗೆ ಆತನು ತನ್ನ ಈ ದೊಡ್ಡ ಕುಟುಂಬದಲ್ಲಿ ಒಂದೊಂದು ಸಣ್ಣ ಭಾಗವನ್ನು ಕೊಟ್ಟು, ಆತನ ಪ್ರತಿನಿಧಿಗಳಾಗಿ ನಾವು ಅದದನ್ನು ನೋಡಿಕೊಳ್ಳುವಂತೆ ಏರ್ಪಡಿಸಿರುವನು. ನಾವು ಕ್ರಮಕ್ರಮವಾಗಿ ಬೆಳೆದು ಆತನಂತೆ ಪೂರ್ಣರಾಗಿ ಲೋಕಸೇವೆ ಮಾಡಲು ಕಲಿಯುವುದಕ್ಕಾಗಿ ತಾನು ಮೇಲ್ಪಂಕ್ತಿಯಾಗಿದ್ದುಕೊಂಡು ಕೆಲಸಮಾಡಿ ತೋರಿಸುತ್ತಿರುವನು. ಆದ್ದರಿಂದ ನಾವು ಮಾಡುವ ಒಂದೊಂದು ಕಾರ್ಯವನ್ನೂ ಆತನೇ ಬಂದು ಮಾಡಿದರೆ ಎಷ್ಟು ಚೆನ್ನಾಗಿ ಮಾಡುವನೋ ಹಾಗೆ ಅಷ್ಟು ಚೆನ್ನಾಗಿ ಮಾಡಲು ಯತ್ನಿಸಬೇಕು. ನಮ್ಮ ಶಕ್ತಿ ಇರುವಷ್ಟೂ ಪೂರ್ತಿಯಾಗಿ ಪ್ರಯತ್ನಪಟ್ಟು ಮಾಡಿದ್ದಲ್ಲಿ ಭಗವಂತನು ಸಂತುಷ್ಟನಾಗಿ ಮುಂದೆ ಮಾಡಬೇಕಾದ್ದನ್ನು ಒಳಗಿನಿಂದ ತೋರಿಸುವನು. "ಪಿತನ ನಿಜಗುಣದಿ ತೋರ್ಪಿಪ ಸುತನೆ ಸುತಂ" ಅಂದರೆ ತಂದೆಯ ನಿಜವಾದ ಗುಣವನ್ನನುಸರಿಸಿ ಆತನಂತೆ ನಡೆಯುವ ಮಗನೇ ನಿಜವಾದ ಮಗನು ಎಂದು ಹೇಳುವರು. ಅದು ಸತ್ಯವು. ಏಕೆಂದರೆ, ನಾವು ದೇಹಗಳಲ್ಲವು, ಒಳಗಿರುವ ಶಾಶ್ವತರಾದ ಭಗವದಂಶರಾದ ಜೀವರು. ಆತನು ಸಕಲ ಕಲ್ಯಾಣಗುಣಪರಿಪೂರ್ಣನು. ಆದ್ದರಿಂದ ಆ ಗುಣಗಳೆಲ್ಲವೂ ನಮ್ಮಲ್ಲಿಯೂ ಒಳಗಡೆ ಅಡಗಿರುವವು. ಆದ್ದರಿಂದ ನಾವು ಪ್ರಯತ್ನಪಟ್ಟು ಕೈಲಾದಮಟ್ಟಿಗೂ ಲೋಕಸೇವೆಯನ್ನು ಮಾಡುತ್ತ ಬರಬೇಕು. ಇದೇ ನಿಜವಾದ ದೇವರ ಸೇವೆಯು, ದೇವರ ಪೂಜೆಯು.

ಕೆ. ನರಹರಿಶಾಸ್ತ್ರಿ.

ಹಳ್ಳಿಯ 'ಬೆಂಚ್' ಕೋರ್ಟುಗಳೂ, ಆರೋಗ್ಯಣೆಯ ವಿಚಾರವೂ.

ಮಂಗಳೂರು ತಾಲೂಕಿನ ಸುರತಕಲ್ಲು ಗ್ರಾಮದ ಪರಸ್ಪರ ಸಹಾಯಕ ಸಂಘದವರಾದ ರೆವರೆಂಡ್ ಡಿ. ಡಿ. ಎಫ್ ಕೊಯಿಲೊ ಎಸ್ ಜೆ. ಇವರು ಮೇಲೆ ಬರೆದ ಶಿರೋನಾಮೆಯುಳ್ಳ ಪತ್ರವನ್ನು ಕೊಯಮುತ್ತೂರು ಸರ್ಕಲಿನ ಪರಸ್ಪರ ಸಹಾಯಕ ಸಂಘದ ತೃತೀಯ ಪರಿಷತ್ತಿನ ಸಭೆಯಲ್ಲಿ ಓದುವಂತೆ ಕಳುಹಿಸಿದರು. ಇವರು ರೋಮನ್ ಕೆಥೊಲಿಕರ "ಸೊಸೈಟಿ ಒಫ್ ಜೀಸಸ್" ಸಂಘಕ್ಕೆ ಸೇರಿದವರಾಗಿದ್ದು ತಮ್ಮ ಜೀವಕಾಲವನ್ನು ಪರೋಪಕಾರದಲ್ಲಿ ಕಳೆಯುವ ದೀಕ್ಷೆಹಿಡಿದವರು. ಸುರತಕಲ್ ಗ್ರಾಮದಲ್ಲಿ ಇವರು ನಿವಾಸಕ್ಕೆ ತೊಡಗಿ ೧೫ ವರ್ಷಗಳು ಮೀರಿಹೋದುವು. ತಾಲೂಕು ಬೋರ್ಡಿನವರು ಕೈಬಿಡಲಿಕ್ಕಿದ್ದ ಪ್ರಾಥಮಿಕ ಪಾಠಶಾಲೆಯನ್ನು ಇವರು ತಮ್ಮ ಕೈಕೆಳಗೆ ಇಟ್ಟುಕೊಂಡು ಮೂಲಪಾಠಶಾಲೆಗಳಿಗೆ ಆದರ್ಶಸ್ವರೂಪವಾಗಿ ಅದರ ನಿರ್ವಾಹಗಳನ್ನು ನಡೆಸುತ್ತ ಬಂದುದರಿಂದ ಹಲವು ಖಾಸಗಿ ಶಾಲೆಗಳ ಉಪಾಧ್ಯಾಯರು ತಮ್ಮ ಶಾಲೆಗಳನ್ನು ಇವರ ಕೈಕೆಳಗೆ ಇಟ್ಟರು. ಹೀಗಾಗಿ ಈ ಶಾಲೆಗಳೂ ವೃದ್ಧಿಗೆ ಬಂದು ಇವರು ಸುತ್ತುಮುತ್ತಲಿನ ಜನರ ಪ್ರೀತಿಗೂ ವಿಶ್ವಾಸಕ್ಕೂ ಪಾತ್ರರಾಗಿ, ಬಡಜನರನ್ನು ಅಜ್ಞಾನದ ಬಲೆಯಿಂದ ಬಿಡಿಸಿ, ಅನೇಕಾನೇಕ ಜನರು ಸ್ವತಂತ್ರ ಜೀವನವನ್ನು ಮಾಡುವಂತೆ ಇವರು ಏರ್ಪಡಿಸಿದ ಸಂತೆ ಮೊದಲಾದ ಹಲವು ಸಂಸ್ಥೆಗಳು ಇವರ ಪರೋಪಕಾರ ಬುದ್ಧಿಗೆ ನಿದರ್ಶನಗಳಾಗಿವೆ. ಇಂತಹ ಸಂಸ್ಥೆಗಳನ್ನು ನೆಲೆಗೊಳಿಸುವ ಪ್ರಯತ್ನದಲ್ಲಿ ಜನಸಾಮಾನ್ಯರೊಡನೆ ಹೊಕ್ಕುಬಳಕೆಯುಂಟಾಗಿ, ಅವರ ಸ್ಥಿತಿಗತಿ ನಡತೆ ನಡವಳಿಕೆಯನ್ನು ಫಾದರ್ ಕೊಯಿಲೊ ಇವರು ಚೆನ್ನಾಗಿ ತಿಳಿದಿರುವರು. ಇವರು ಮಾಡುವ ಎಲ್ಲಾ ಕೆಲಸಗಳು ಸ್ವಾರ್ಥತ್ಯಾಗವನ್ನೂ ಪರಹಿತಾಕಾಂಕ್ಷೆಯನ್ನೂ ತೋರ್ಪಡಿಸುವುದರಿಂದ ಇವರ ಸ್ವಾನುಭವಗರ್ಭಿತವಾದ ಮಾತುಗಳು ಜನರ ಪರ್ಯಾಲೋಚನೆಗೆ ತಕ್ಕವಾಗಿವೆ. ಈಗ ಇವರು ವಯೋವೃದ್ಧರಾದರೂ ಅವರ ಉತ್ಸಾಹವು ಎಳ್ಳಷ್ಟಾದರೂ ಕಡಿಮೆಯಾಗಿಲ್ಲ. ಯಾವುದೊಂದು ನೂತನ ಅಭಿಪ್ರಾಯವು ಅವರ ತಿಳುವಳಿಕೆಗೆ ಬಂತೆಂದರೆ ಅದರ ಸಾಧಕಬಾಧಕಗಳನ್ನು ಚರ್ಚಿಸಿ [illegible] ಕುತೂಹಲವು ಅವರಲ್ಲಿ ತುಂಬಾ ಇದೆ. ೩ ಯಾ ೪ ವರ್ಷಗಳ ಹಿಂದೆ [illegible] ಲೇವಾದೇವಿ ಸಂಘಗಳನ್ನು ಸ್ಥಾಪಿಸುವುದಕ್ಕೆ ಕೆಥೊಲಿಕ ಗುರುಗಳು ಅದನ್ನು [illegible] ಬಿಡಬೇಕಾಗಿ ರೆವರೆಂಡ್ ಬಿಶೋಪ್ ಸಾಹೇಬರ ಕಡೆಯಿಂದ [illegible] ಅದೇ ಕಾಲದಲ್ಲಿ ಬಹುಮಾನಪಟ್ಟ ಸ್ವಾಮಿಕಣ್ಣುಪಿಳ್ಳೆಯವರ [illegible] ಕೊಯಿಲೊರವರಿಗೆ ದೊರೆತುದರಿಂದ ಕಾಲವೆಂಟು ಮಾಡಿದ [illegible]

ಅವರು ಒಂದು ಸಂಘವನ್ನು ಏರ್ಪಡಿಸಿಯೇ ಬಿಟ್ಟರು. ದಾರಿದ್ರ್ಯಪೀಡಿತರಾದ ಹಳ್ಳಿ ನಿವಾಸಿಕರ ಹಲವು ತೆರದ ಸಂಕಷ್ಟನಿವಾರಣೆಗೆ ಈ ಸಂಸ್ಥೆಯು ಅತ್ಯುತ್ತಮವಾದ ಉಪಾಯವೆಂದು ಅವರು ನಂಬುತ್ತಾರೆ. ಈ ಸಹಕಾರವೆಂಬುದು ಬೈಬಲಿನ ಮಾತುಗಳಿಂದ ವರ್ಣಿಸುವುದಾದರೆ "ಒಬ್ಬನು ಬಿತ್ತಿದ ಬಂದೇ ಒಂದು ಸಾಸಿವೆ ಕಾಳು; ಸಾಸಿವೆಯು ಎಲ್ಲಾ ಕಾಳುಗಳಲ್ಲಿ ಅತೀ ಅಲ್ಪವಾಗಿದೆ; ಒಂದು ಸಲ ಬೆಳೆಯಿತೆಂದರೆ ಗಿಡ ಮೂಲಿಕೆಗಳಲ್ಲಿ ಅಮೌಲ್ಯವುಳ್ಳದ್ದಾಗಿ ಮರವಾಗುವುದು; ಮತ್ತು ಖೇಚರಾದಿಗಳಿಗೆಲ್ಲ ತನ್ನ ರೆಂಬೆಕೊಂಬೆಗಳಲ್ಲಿ ಆಶ್ರಯಕೊಡುವುದು" ಎಂದು ಅವರ ಸ್ಪಷ್ಟವಾದ ನಂಬುಗೆ. ಆದರೆ ಜಾತಿಮತ ವೈಷಮ್ಯಗಳು ತುಂಬಿಕೊಂಡಿರುವ ಹಿಂದುಸ್ಥಾನದಲ್ಲಿ, ಅದರಲ್ಲಿಯೂ ತಮೋಗುಣದಿಂದ ವ್ಯಾಪಿಸಲ್ಪಟ್ಟ ಮದ್ರಾಸು ಸಂಸ್ಥಾನದಲ್ಲಿ ಈ ಸಹಕಾರ ಸಂಸ್ಥೆಯು ಇಷ್ಟು ಬೇಗನೆ ಹಬ್ಬಿ ಶಾಖೋಪಶಾಖೆಗಳಾಗಿ ಬೆಳೆಕೊಳ್ಳುವುದಕ್ಕೆ ಈ ಸಹಕಾರದಲ್ಲಿ ಗರ್ಭೀಕರಿಸಿರುವ ಆಂತರಿಕವಾದ ಪ್ರಭಾವವೇ ಕಾರಣವೆಂದು ಅವರು ತಿಳಿದುಕೊಳ್ಳುತ್ತಾರೆ. ಇಂತಹ ಸಹಕಾರದ ಬಲವನ್ನು ಗ್ರಾಮಪಂಚಾಯತರ ಕೋರ್ಟುಗಳಲ್ಲಿಯೂ ಹಳ್ಳಿಯ ಆರೋಗ್ಯಹೇಯ ವಿಚಾರದಲ್ಲಿಯೂ ಉಪಯೋಗಿಸುವುದು ಏತಕ್ಕೆ ಅತ್ಯಾವಶ್ಯಕವೆಂದು ಅವರು ಬಲು ಚೆನ್ನಾಗಿ ಚರ್ಚಿಸಿರುವರು.

ಈಗ ಸರಕಾರಕ್ಕೆ ಒಪ್ಪಿದ ಹಲವು ಬಗೆಯ ಅಧಿಕಾರಗಳನ್ನು ಹೇಗೆ ಜನರ ಕೂಟಗಳಿಗೆ ಒಪ್ಪಿಸಬಹುದು ಎಂದು ಮುಂತಾಗಿ ನಿರ್ಧರಿಸುವುದಕ್ಕೆ ಕೆಲವು ವರ್ಷಗಳ ಹಿಂದೆ ಇಂಡಿಯಾ ಗವರ್ನಮೆಂಟಿನವರು ನೇಮಿಸಿದ "ಡಿಸೆಂಟ್ರಲೈಜೇಶನ್ ಕಮಿಶನ್" ಎಂಬ ಕಮಿಟಿಯವರು ಗ್ರಾಮಪಂಚಾಯತರ ಕೂಟಗಳನ್ನು ಕುರಿತು ಈ ರೀತಿಯಾಗಿ ದೃಢವಾಗಿ ಹೇಳುತ್ತಾರೆ:—"ಗ್ರಾಮಗಳ ಆಡಳಿತೆಯ ಬಗ್ಗೆ ಗ್ರಾಮಪಂಚಾಯತರ ಕೂಟಗಳನ್ನು ಸ್ಥಾಪಿಸುವ ಪ್ರಯತ್ನವು ಅತಿ ಅಗತ್ಯವೆಂದು ನಾವು ನಿರ್ಧರಿಸುತ್ತೇವೆ. ರಾಜ್ಯಭಾರದ ಕ್ರಮದಲ್ಲಿ ಪ್ರಜಾಜನರೂ ಸಹಭಾಗಿಗಳಾಗಿ ನಿಶ್ಚಲರೀತಿಯಲ್ಲಿ ಕಾರ್ಯನಿರ್ವಾಹವು ಆಗಬೇಕೆಂದಿದ್ದರೆ ಅಂಥಾ ರಾಜ್ಯಭಾರದ ಅಸ್ತಿವಾರವನ್ನು ಗ್ರಾಮದಿಂದ ಕಟ್ಟಿಕೊಳ್ಳಬೇಕು; ಏತಕ್ಕೆಂದರೆ ತಾಲೂಕು, ಜಿಲ್ಲೆ ಮುಂತಾದ ನೂತನ ಕಲ್ಪಿತ ದೇಶವಿಭಾಗಕ್ಕಿಂತಲೂ ಗ್ರಾಮವು ಅನಾದಿಯಾಗಿರುವುದು ಮತ್ತು ಪ್ರತಿಯೊಂದು ಹಳ್ಳಿಯಲ್ಲಿರುವ ಜನರು ಪರಸ್ಪರ ಪರಿಚಿತರಾಗಿದ್ದು, ನೀರಾಶಯ, ಜಲವಿಸರ್ಜನ ಮುಂತಾದವುಗಳ ಬಗ್ಗೆ ಏರ್ಪಡಿಸುವ ಎಲ್ಲಾ ಸಂಸ್ಥೆಗಳಲ್ಲಿಯೂ ಏಕಪ್ರಕಾರವಾದ ಹಕ್ಕುಬಾಧ್ಯತೆಗಳುಳ್ಳವರು." ಹೀಗೆ ಈ ಕಮಿಟಿಯವರು ಕಂಠೋಕ್ತವಾಗಿ ಹೇಳಿದ ಮೇಲೆ ಈ ಗ್ರಾಮಪಂಚಾಯತರ ಕೂಟಗಳನ್ನು ಪುನರುಜ್ಜೀವಿಸುವಂತೆ ಮಾಡಲಿಕ್ಕೆ ಸಹಕಾರ ಸಮಾಜದವರು ಮುಂದರಿಸಬೇಕೆಂದು ಫಾದರ್ ಕೊಜಿಲೋರವರು ಸ್ಪಷ್ಟವಾಗಿ ಹೇಳಿರುವರು.

ಹಾಗಾದರೆ ಈಗ ಗ್ರಾಮಕೋರ್ಟುಗಳು ಹಳ್ಳಿಹಳ್ಳಿಗಳಲ್ಲಿ ಇಲ್ಲವೆ? ಅವುಗಳಲ್ಲಿ ಕುಂದುಕಗಳೇನು? ಎಂದು ಕೇಳುವುದಾದರೆ ಅದಕ್ಕೆ ಅವರು ನಿರ್ದಾಕ್ಷಿಣ್ಯದಿಂದ ಏನು ಹೇಳುತ್ತಾರೆಂದು ನೋಡೋಣ!—"ನನ್ನ ತಿಳಿವಳಿಕೆಯ ಮಟ್ಟಿಗೆ ಈಗಿನ ಗ್ರಾಮಕೋರ್ಟುಗಳಲ್ಲಿ ನಡೆಯುವ ಕೆಲಸವು ತುಂಬಾ ಅಸಮಾಧಾನಕರವಾಗಿದೆ. ಅನೇಕಾನೇಕ ಗ್ರಾಮ ಮುನ್ಸೀಫರಿಗೆ ತಮ್ಮ ಕರ್ತವ್ಯವೇನೆಂಬುದು ಏನೇನೂ ತಿಳಿಯದೆಂಬ ಮಾತು ಸರ್ವವಿದಿತವಾದ್ದೆ. ಗ್ರಾಮಮುನ್ಸೀಫನ ಕೆಲಸವು ಕುಟುಂಬ ಹಕ್ಕಾಗಿ ತಲಾಂತರಗಳಿಂದ ಬಂದುದೇ ಇಂಥಾ ಅನರ್ಥದ ಕಾರಣಗಳಲ್ಲೊಂದಾಗಿದೆ. ಕುಟುಂಬ ಹಕ್ಕಾಗಿ ಮೊತ್ತ ಮೊದಲು ಅದನ್ನು ಏರ್ಪಡಿಸುವುದಕ್ಕೆ ಸರಕಾರದವರಿಗೆ ಬಲವಾದ ಕಾರಣಗಳು ಇದ್ದಿರಬೇಕು. ಆ ಕಾಲದಲ್ಲಿ ಪ್ರತಿಯೊಂದು ಗ್ರಾಮದಲ್ಲಿಯೂ ಗೌರವಾಸ್ಪದದಾಗಿದ್ದು ಸರ್ವರಪ್ರೀತಿಗೂ ವಿಶ್ವಾಸಕ್ಕೂ ಪಾತ್ರರಾದ ಮತ್ತು ಸರಕಾರದ ಕೆಲಸವನ್ನು ಫಲಾಪೇಕ್ಷೆಯಿಲ್ಲದೆ ನಿರ್ವಂಚನೆಯಿಂದ ನಡೆಯಿಸಲಿಕ್ಕೆ ಯೋಗ್ಯರಾದ ಕುಟುಂಬದವರನ್ನೆ ಗ್ರಾಮಮುನ್ಸಿಫರ ಕೆಲಸಕ್ಕೆ ಆರಿಸಿರಬಹುದು. ಆದರೆ ಸ್ಥಿತಿಯೆಲ್ಲಾ ಈಗ ಮಾರ್ಪಟ್ಟಿದೆ. ಅನೇಕಾನೇಕ ಪಟೇಲರು ಆಯಾ ಗ್ರಾಮದಲ್ಲಿ ಅತೀ ಗೌರವಾಸ್ಪದರಾದ ಕುಟುಂಬಕ್ಕೆ ಅಥವಾ ಅಂಥಾ ಹಲವು ಕುಟುಂಬಗಳಲ್ಲಿ ಯಾವುದೊಂದಕ್ಕೆ ಸೇರಿದವರಾಗಿಲ್ಲ. ಆಗ ಅಂಥವರಲ್ಲಿ ಜನರಿಗೆ ವಿಶ್ವಾಸವೂ ಗೌರವವೂ ಇರಬೇಕಾದರೆ ಅವರ ಸ್ವಂತಯೋಗ್ಯತೆ, ಬುದ್ಧಿಚಾತುರ್ಯ, ಸಚ್ಚರಿತೆ, ಇವೇ ಕಾರಣವಾಗಬೇಕು. ಆದರೆ ಅಂಥಾ ಯೋಗ್ಯತೆಯುಳ್ಳವರನ್ನು ಪಟೇಲರಾಗಿ ನೇಮಿಸುವುದಕ್ಕೆ ಈ ಕುಟುಂಬದ ಹಕ್ಕು, ತಡೆಕಟ್ಟುತ್ತದೆ. ಅನೇಕಾನೇಕ ಸಲ ಈ ಪಟೇಲರ ದುರ್ನಡತೆ ಮತ್ತು ಅವಿಚಾರದ ದೆಸೆಯಿಂದ ಜನರು ನೀತಿಯನ್ನು ಹೊಂದುವುದಿಲ್ಲ. ಈಚೆಗೆ ಹಲವು ಪಟೇಲರು ದುರ್ನಡತೆ, ಸರಕಾರದ ದ್ರವ್ಯದ ದುರ್ವಿನಿಯೋಗ ಮುಂತಾದ ತಪ್ಪುಗಳ ನಿಮಿತ್ತ ಜುರುಮಾನೆ, ಅಮಾನತು, ಕೆಲಸದಿಂದ ವಜಾ ಮುಂತಾದ ಶಿಕ್ಷೆಗಳಿಗೆ ಒಳಗಾದ್ದುಂಟು. ಸರಕಾರದವರು ಇಂಥ ದುರ್ನಡತೆಯನ್ನು ಅಣಗಿಸುವುದಕ್ಕೆ ಹಿಂಜರಿಯುವುದಿಲ್ಲವೆಂದು ಇದರಿಂದ ಸ್ಪಷ್ಟವಾದರೂ, ಗ್ರಾಮ ಬೆಂಚ್ ಕೋರ್ಟಿನ ಅಧಿಕಾರವನ್ನು ನಡೆಯಿಸಲಿಕ್ಕಿರುವ ಜನರ ವಿಷಾದಾಸ್ಪದವಾದ ಸ್ಥಿತಿಯು ನಮ್ಮ ಕಣ್ಣಿಗೆ ಹೊಳೆಯುತ್ತದೆ. ಬೆಂಚ್ ಕೋರ್ಟಿನಲ್ಲಿ ತಮ್ಮ ಹರ್ಜಿಗಳ ತೀರ್ಮಾನಿಸಿಕೊಳ್ಳುವ ಕಕ್ಷಿಗಾರರು ತಮಗೆ ಯುಕ್ತತೋರುವ ಇಬ್ಬರು ಪಂಚಾಯತರನ್ನು ಆರಿಸಬಹುದೆಂಬ ಕಾಯಿದೆಯು ಮರೆಹೋಗಬಹುದೆಂದು ಕೆಲವರು ವಾದಿಸಬಹುದು. ಆದರೆ ಇಂಥಹ ದುರ್ನಡತೆಯುಳ್ಳ ಪಟೇಲನು ಅಧ್ಯಕ್ಷನಾಗಿರುವ ಕೋರ್ಟಿನಲ್ಲಿ ಪಂಚಾಯತರಾಗಿ ಪ್ರವೇಶಮಾಡಲಿಕ್ಕೆ ಸ್ವಾಭಿಮಾನವುಳ್ಳ ಯಾವಾತನು ಒಪ್ಪುವನು? ಹೀಗಿರುವುದರಿಂದ ಬೆಂಚ್ ಕೋರ್ಟುಗಳಿಗೆ ನಿಜವಾಗಿಯೂ ಯೋಗ್ಯರಾದವರನ್ನೇ ನೇಮಿಸುವುದು ನ್ಯಾಯಪರಿಪಾಲನೆಗೆ ತಕ್ಕ ಉಪಾಯ. ಅಂಥ ಮರ್ಯಾದಸ್ಥರನ್ನು ಹುಡುಕಬೇಕಾದರೆ ಆ ಗ್ರಾಮದಲ್ಲಿ ಪರಸ್ಪರ ಸಹಾಯಕ ಸಂಘದ ಪಂಚಾಯತನಾಗಿ ಹೆಸರುವಾಸಿಯಾದವರಲ್ಲದೆ ಮತ್ತಾರು ಯೋಗ್ಯರಿರಬಹುದು?"

ಮುಂದರಿಯುವುದು.

ಪತ್ರವ್ಯವಹಾರ.

ವಿದ್ಯಾರ್ಥಿಗಳ ಗತಿಯೇನು?

ಸ್ವಾಮಿ,

ಇಂಟರ್‌ಮಿಡಿಯೇಟ್, ಸ್ಕೂಲ್ ಫೈನಲ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗದೆ ಕಂಗೆಟ್ಟು ಹೋದ ವಿದ್ಯಾರ್ಥಿಗಳ ಹೆತ್ತವರಲ್ಲಿ ಅನೇಕರು ಇಂಗ್ಲಿಷ್ ಗೊತ್ತಿಲ್ಲದೆ ಇದ್ದವರು ತಮ್ಮ ಪತ್ರದ ವಾಚಕರಾಗಿರಬಹುದು. ಹಳ್ಳಿಗಳಲ್ಲಿ ತಮ್ಮಂತೆಯೇ ತಮ್ಮ ಮಕ್ಕಳು ಉಳಕೊಂಡರೆ ಜೀವನವು ಸರಿಯಾಗಿ ಸಾಗದೆಂದುಕೊಂಡು ಸ್ಥಿರಚರಸೊತ್ತುಗಳನ್ನಾದರೂ ಮಾರಿಕೊಂಡು ಹುಡುಗರನ್ನು ಶಹರುಗಳಿಗೆ ಶಿಕ್ಷಣದ ಬಗ್ಗೆ ಕಳುಹಿಸಿಕೊಡುವಂಥವರು ಈ ವರುಷದಲ್ಲಿ ಪ್ರಕಟವಾದ ಪರೀಕ್ಷೆಯ ಫಲಗಳಲ್ಲಿ ವಿದ್ಯಾರ್ಥಿಗಳ ಗತಿಯೇನೆಂದು ತಿಳಿದಿರುವರೋ? ಅಥವಾ ತಮ್ಮ ಮಕ್ಕಳ ಜಾತಕಗಳನ್ನು ತೋರಿಸುತ್ತಾ ಈ ವರುಷ ಕುಂಭರಾಶಿಯ ಬೃಹಸ್ಪತಿಯಿಂದ ಹುಡುಗನು ಪಾಸಾಗದೆ ಹೋದನೆಂದು ಸಮಾಧಾನಪಟ್ಟು ಬರುವ ವರುಷದಲ್ಲಿ ಶುಕ್ರನು ಕಣ್ಣೆತ್ತುವದರಿಂದ ಪಾಸಾಗುವದು ಖಂಡಿತವೆಂತ ನಂಬಿಕೊಂಡು ಸುಮ್ಮನಿರುವರೋ? ಮತ್ತೂ ಮತ್ತೂ ಪರೀಕ್ಷೆ, ಇನ್ನೂ ಇನ್ನೂ ಪರೀಕ್ಷೆಗಳಿಂದ ಆರೋಗ್ಯವು ಗಳಿತವಾಗಿ ಹೋಗಿ ಮೆದುಳು ಬೆಂಡಾಗಿ ಹೋದ ವಿದ್ಯಾರ್ಥಿಗಳು ಜಗತ್ತಿನಲ್ಲಿ ತನ್ನಷ್ಟು ಅದೃಷ್ಟಹೀನರು ಇರರೆಂಬ ಕುಗ್ಗಿದ ಭಾವನೆಯಿಂದ ಶಹರುಗಳಲ್ಲಿ ತಲೆ ಕೆಳಗೆ ಮಾಡಿ ತಿರುಗಾಡುತ್ತಿರುವದನ್ನು ನೋಡಿದರೆ ತನ್ನ ಮಗನಿಗೆ ವಿದ್ಯಾಭ್ಯಾಸವು ಸಾಕೆಂತ ಹೆತ್ತವರು ಮಕ್ಕಳಿಗೆ ಊರಿಗೆ ಹಿಂದಕ್ಕೆ ಬರಲು ಪತ್ರಗಳನ್ನು ಬರಿಯದೆ ಇರಲಾರರು. ಈ ವರುಷದ ಪರೀಕ್ಷೆಗಳ ಫಲವು ಬಹಳ ಭಯಂಕರವಾಗಿರುವದು. ಪರೀಕ್ಷೆಗಳು ಪ್ರತಿ ವರುಷದಲ್ಲಿಯೂ ಈ ರೀತಿ ಕಠಿಣವಾಗುತ್ತಿರುವದನ್ನು ನೋಡಿದರೆ ಇದರಿಂದ ಎರಡು ಮುಖ್ಯ ಸಂಗತಿಗಳು ವ್ಯಕ್ತವಾಗುತ್ತವೆ. ಬುದ್ಧಿಚಾತುರ್ಯವು ಅತಿವಿಶೇಷವಾಗಿವುಳ್ಳವರು ಅಥವಾ ಅಮಿತ ದ್ರವ್ಯರಾಶಿಯುಳ್ಳಂಥ ಸಾಮಾನ್ಯ ಬುದ್ಧಿಯವರು—ಈ ಎರಡು ವರ್ಗದವರಿಗೆ ಪರೀಕ್ಷೆಗಳು ಸಾಧ್ಯವಲ್ಲದೆ ಮಿಕ್ಕ ಯಾರಿಗೂ ಸಾಧ್ಯವಲ್ಲವೆಂತ ತಿಳಿಯಬಹುದು. ಇಂಥವರಲ್ಲಿ ಮೊದಲನೆ ತರಗತಿಯವರು ತಮ್ಮ ಬುದ್ಧಿಬಲದಿಂದಲೂ ಎರಡನೇ ತರಗತಿಯವರು ತಮ್ಮ ದ್ರವ್ಯಬಲದಿಂದ ಒಂದು ಸಲವಲ್ಲದಿದ್ದರೆ ನಾಲ್ಕಾರು ಸಲವಾದರೂ ಪರೀಕ್ಷೆಗಳನ್ನು ಎದುರಾಡಬಹುದು. ಮಿಕ್ಕಂಥವರಿಗೆ ಈ ಪರೀಕ್ಷೆಗಳು ಅಸಾಧ್ಯವಾಗಿ ಬಂದಿವೆ. ಯುನಿವರ್ಸಿಟಿಗಳೆಂಬ ವಿಶ್ವವಿದ್ಯಾಲಯಗಳಲ್ಲಿ ದೊರಕುವ ವಿದ್ಯಾಭ್ಯಾಸವು ಜನ ಸಾಮಾನ್ಯರಿಗೂ ಸಹ ಅಗತ್ಯವೆಂತ ಜರ್ಮನಿ, ಫ್ರಾನ್ಸ್, ಅಮೇರಿಕ ಮೊದಲಾದ ದೇಶಗಳು ತಿಳಿದಿರುವಂತೆಯೇ ಆಂಗ್ಲೇಯರು ಸಹ ತಿಳಿಕೊಳ್ಳುತ್ತ ಈ ಬಗ್ಯೆ ದೇಶಾ[illegible] ಏರ್ಪಾಡುಗಳನ್ನು ಮಾಡುತ್ತ ಬರುತ್ತಿರುವರು. ನಮ್ಮಲ್ಲಿ ಜನ ಸಾಮಾನ್ಯರ ಮಾತು ಹಾಗಿರಲಿ, ಮಧ್ಯಮ ತರಗತಿಯವರು ಸಹ ಕೋಲೇಜುಗಳ ಬಾಗಿಲ ಹತ್ತಿರ ಸೇರುವದು ತುಂಬಾ ಅಸಾಧ್ಯವಾಗಿ ಬರುತ್ತಿದೆ. ವಿದ್ಯಾವಿಷಯಗಳನ್ನು ಹೆಚ್ಚಾಗಿ ಬಲ್ಲವರ ವಿದ್ಯಾರ್ಜನೆ ಬಗ್ಯೆ ವಿದ್ಯಾರ್ಥಿಗಳಿಗೆ ಇರುವ ಕಷ್ಟಗಳನ್ನು ನೋಡಿಕೊಂಡು ಸುಮ್ಮನಿರುವರಲ್ಲದೆ ಈ ಪರವಾಗಿ ವಿಶ್ವಪ್ರಯತ್ನಗಳನ್ನು ಮಾಡಿ ವಿದ್ಯಾರ್ಥಿ ವರ್ಗದ ಗೋಳಾಟ ವನ್ನು ನಿವಾರಿಸಲು ಯಾವ ಪ್ರಯತ್ನವನ್ನೂ ಕೈಕೊಳ್ಳರು. ಇಂದಿನ ವಿದ್ಯಾರ್ಥಿವರ್ಗದ ಮೇಲೆ ದೇಶದ ಮುಂದಿನ ಅಭಿವೃದ್ಧಿಯು ಆದರಿಸಿಕೊಂಡಿರುವದರಿಂದ ವಿದ್ಯಾರ್ಥಿಗಳ ಗತಿಯು ಹಾಳಾಗಿ ಹೋದರೆ ಮುಂದಕ್ಕೆ ದೇಶದ ಗತಿಯೂ ಇದೇ ರೀತಿಯಾಗುವದು

ವೃತ್ತಿಹೀನತೆಯ ಈಗಲೆ ಅಲ್ಲಲ್ಲಿ ತುಂಬಿರುವದು. ಯಾವ ವೃತ್ತಿಯನ್ನಾದರೂ ತೃಪ್ತಿಕರವಾದ ರೀತಿಯಲ್ಲಿ ಅನುಸರಿಸಬೇಕಾದರೆ ತಕ್ಕ ಮಟ್ಟಿನ ವಿದ್ಯಾಭ್ಯಾಸವು ಅಗತ್ಯ. ಪರೀಕ್ಷೆಗಳ ಫಲಗಳು ಈ ರೀತಿ ಭೀಕರವಾಗಿ ವಿದ್ಯಾರ್ಥಿಗಳನ್ನು ಶಾಲಾ ಕೋಲೇಜು ಬಾಗಿಲು ಹತ್ತಿರ ಸಹ ಸೇರಲು ಬಿಡದಿದ್ದರೆ ಮುಂದಕ್ಕೆ ಇವರೆಲ್ಲರಿಗೂ ವೃತ್ತಿಯ ಉಪಾಯವೇನು? ಸರ್ವರೂ ಶಾಲಾ ಕೋಲೇಜುಗಳನ್ನು ಸೇರುವದೇ? ತಮ್ಮ ಹೆತ್ತವರ ವೃತ್ತಿಗಳನ್ನು ಮಾಡುತ್ತ ಸುಮ್ಮನಿರಬಾರದೇ ಎಂದನ್ನುವರು. ಇನ್ನು ಕೆಲವರು ಹೆತ್ತವರ ವೃತ್ತಿಯು ಈ ಕಾಲದಲ್ಲಿ ಲಾಭಕರವಾಗಿ ಪರಿಣಮಿಸಬೇಕಾದರೆ ಇದಕ್ಕೆ ಸಹ ಶಿಕ್ಷಣವು ಅಗತ್ಯವೆಂತ ಹೇಳುವರು. ಈಗಿನ ಶಾಲಾ ಕೋಲೇಜುಗಳಲ್ಲಿ ದೊರಿಯುವ ಶಿಕ್ಷಣದ ಹೊರತು ಇತರ ಯಾವ ವಿಧದ ಶಿಕ್ಷಣಕ್ಕಾದರೂ ವಿಶೇಷ ಆಸ್ಪದವಿಲ್ಲದೆ ವಿದ್ಯಾರ್ಥಿಗಳು ಬಹಳ ಸಂಕಷ್ಟಪಡುತ್ತಿರುವರು. ವಿದ್ಯಮಾನಗಳು ಹೀಗಿರುತ್ತಾ ವಿದ್ಯಾರ್ಥಿಗಳ ಗತಿಯೇನು ಎಂದು ಪ್ರಕೃತವಿಚಾರಿಸುವಂಥವರಿಗೆ ಈ ವಿಚಾರದ ಆದ್ಯಂತ್ಯವು ಕಂಡು ಬಾರದೆ ಮತಿಗೆಡುವುದು. ಹೆಚ್ಚೇನು ಬರಿಯಲಿ!

ವೀಕ್ಷಕ.

~~~~~~

ಅಯ್ಯಾ ಪತ್ರಿಕಾಕರ್ತರೇ,

ಕಳೆದ ವರ್ಷ ಮಳೆಗಾಲದಲ್ಲಿ ಹಂಪನಕಟ್ಟೆಯಿಂದ ರಾವ್ ಬಹದ್ದೂರ್ ಎನ್. ಸುಬ್ಬರಾವ್‌ರವರ ಮನೆಕೇರಿಗುಡ್ಡೆ ಒಂಗ್ಲೆಯ ವರೆಗಿನ ಸಾಲು ಮರಗಳಲ್ಲಿ ಅನೇಕವು ಕುಂಬಾಗಿ ಮುರಿದು ಬಿದ್ದುದರಿಂದ ಕುಂಬಾದ ಇತರ ಮರಗಳನ್ನು ಕಡಿಸಬೇಕೆಂದು ತಮ್ಮ ಪತ್ರಿಕೆಯಲ್ಲಿ ಆಗ್ಗಾಗ್ಗೆ ವಿಜ್ಞಾಪಿಸೋಣಾಗಿತ್ತು. ಆದರೆ ಒಂದು ಮಳೆಗಾಲ ದಾಟಿ ಇನ್ನೊಂದು ಮಳೆಗಾಲ ಸಮೀಪಿಸಿದರೂ ಅಧಿಕಾರಿಗಳು ಈ ವಿಷಯ ಲಕ್ಷ್ಯ ಕೊಡಲಿಲ್ಲವೆಂಬ ಸಿಟ್ಟಿನಿಂದಲೋ ಏನೋ ಎಂಬಂತೆ ಈ ಮಳೆಗಾಲ ಸಮೀಪಿಸುವಷ್ಟರಲ್ಲಿ ಮಿಶ್ಶನ್ ನೇಯುವ ಕಾರಖಾನೆಯ ಹಿಂಬದಿಯಿಂದ ಕಲೆಕ್ಟರ ಗೇಟಿನ ವರೆಗಿನ ಮಾರ್ಗದಲ್ಲಿ ಕಳೆದ ವಾರ ಕುಂಬಾದ ಎರಡು ಗೋಳಿಮರಗಳು ಬೀದಿಗೆ ಬಿದ್ದಿರುವವು. ಈ ಮರಗಳನ್ನು ಪರೀಕ್ಷಿಸಿದ್ದಲ್ಲಿ ಹುಳತಿಂದು ಕುಂಬಾದದ್ದೇ ಇದಕ್ಕೆ ಕಾರಣವೆಂದು ತಿಳಿದು ಬಂದದೆ. ಸ್ವಾಮಿಯಾ, ಅಷ್ಟೇ ಅಲ್ಲ; ಒಂದು ಮರಬೀಳುವಾಗ ಸ್ವಲ್ಪ ಹೆಚ್ಚು ಕಡಿಮೆಯಾಗುತ್ತಿದ್ದರೆ ಶಾಲೆಗೆ ಆ ದಾರಿಯಲ್ಲಿ ಹೋಗುತ್ತಿದ್ದ 7 8 ಮಕ್ಕಳ ಗುಂಪೇ ನಾಶಿಸಿ ಹೋಗುವ ಸಂಭವವಿತ್ತು. ಮಕ್ಕಳ ಪುಣ್ಯದಿಂದಲೋ ಹೆತ್ತವರ ಪುಣ್ಯದಿಂದಲೋ ಮುರಿದ ಕೊಂಬೆಯು ಮಕ್ಕಳ ಒಂದೆರಡು ಅಂಗುಲ ಮುಂದಕ್ಕೆ ಬಿದ್ದುದರಿಂದ ಮಕ್ಕಳು ದೈವವಶಾತ್ ಉಳಿದರು. ಇನ್ನು ಮಳೆಗಾಲ. ಮಳೆಗಾಲದ ಮೊದಲೇ ಒಂದೆರಡು ಗಾಳಿ ಬೀಸಿದ್ದರಿಂದ ಸಾಲು ಮರಗಳು ಕೆಲ ಸಮವಾದರೆ ಈ ಮಳೆಗಾಲದಲ್ಲಿ ಯಾವ ಪರಿಣಾಮವೋ ತಿಳಿಯದು. ಆದುದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ಸಾಲು ಮರಗಳನ್ನು ಪರಿಶೋಧಿಸಿ, ಕುಂಬಾದ ಮರಗಳನ್ನು ತ್ವರಿತದಲ್ಲಿ ಕಡಿಸಿ, ದಾರಿಗರ ಮತ್ತು ದಾರಿಯಲ್ಲಿ ಹಗಲುರಾತ್ರಿ ಅತ್ತಿತ್ತ ಓಡ್ಯಾಡುವ ಕುದುರೆ ಇತ್ಯಾದಿ ಮೃಗ ಪಶುಗಳ ಪ್ರಾಣ ಉಳಿಸುವಂತೆ ನೋಡುವದು ಅಗತ್ಯವಾಗಿದೆ. ಕಳೆದ ವರ್ಷ ಗವರ್ನಮೆಂಟ್ ಕಾಲೇಜಿನ ಎದುರಿನ ಸಾಲುಮರಗಳಲ್ಲಿ ಕುಂಬಾದ ಒಂದು ಕೊಂಬೆಯು ಮುರಿದು ಬಿದ್ದು ಒಂದು ಜಟ್ಕಾ ಕುದುರೆಯು ಸತ್ತು ಹೋದದ್ದನ್ನು ಈ ಸಂದರ್ಭದಲ್ಲಿ ಅಧಿಕಾರಿಗಳು ಚಿತ್ತಕ್ಕೆ ತಂದುಕೊಳ್ಳುವರೆಂದು ನಂಬುತ್ತೇನೆ.

ಸ್ವಾಮಿಯಾ, ಇನ್ನೊಂದು ಮಾತು. ಮುನ್ಸಿಪಾಲಿಟಿಯು ಮಾರ್ಗಗಳನ್ನು ಮಳೆಗಾಲದಲ್ಲಿ ದುರುಸ್ತಿ ಮಾಡುವ ಬಗ್ಗೆ ಬೀದಿಯಬದಿಯಲ್ಲಿ ಕಲ್ಲುಕುಪ್ಪೆಗಳನ್ನು ಹಾಕಿಡುವ ಪದ್ಧತಿಯು ಹಿಂದಿನ ವರ್ಷಗಳಂತೆ ಈ ವರ್ಷವೂ ರೂಢಿಗೆ ಬಂದಿದೆ. ಆದರೆ ರಾತ್ರಿಕಾಲ ಈ ಕಲ್ಲುಕುಪ್ಪೆಗಳಿಗೆ ದಾರಿಗರು ತಾಗಿ ಬಿದ್ದು ಜಖಂ ಹೊಂದುವ ವೃತ್ತಾಂತವು ಯಾ ಅನುಭವವು ಮುನ್ಸಿಪಾಲ್ ಅಧಿಕಾರಿಗಳಿಗೆ ಇಲ್ಲದ್ದರಿಂದಲೋ ಏನೋ ಈ ಕಲ್ಲು ಕುಪ್ಪೆಗಳ ಮುಂದೆ ಒಂದು ಕೆಂಪು ಲಾಂದರನ್ನಾದರೂ ಇಡಿಸಿರುವದಿಲ್ಲ. ಆದುದರಿಂದ ಅನೇಕರು ಈ ಕಲ್ಲುಕುಪ್ಪೆಗಳಿಗೆ ಬಿದ್ದು ಜಖಂ ಹೊಂದಿರುವರು. ಹಾಗೆಯೇ ಮುಂದಕ್ಕೂ ಲಾಂದರನ್ನು ಇಡಿಸದೆ ಹೋದರೆ ಈ ಮಳೆಗಾಲದ ಗಾಢಾಂಧಕಾರದಲ್ಲಿ ಎಷ್ಟು ಮಂದಿ ಈ ಕುಪ್ಪೆಗಳಿಗೆ ದಂಡಪ್ರಣಾಮವನ್ನು ಮಾಡಿ ಹಲ್ಲು ಮುರಿಸಿಕೊಳ್ಳಲಿಕ್ಕಿದೆಯೋ ನೋಡಲಿಕ್ಕಿದೆ.

ಪಟ್ಟಣಿಗ.

~~~~~~

ಖಾಸಗಿ ಕಲಿಸುವುದು.

:-0-:

ಅಯ್ಯಾ ಪತ್ರಾಧಿಪರೇ,

"ಭಾರತೀಯ"ರು ಈ ವಿಷಯವಾಗಿ ಬರೆದಿರುವ ಕೆಲವು ಯೋಗ್ಯ ಸೂಚನೆಗಳನ್ನು ತಮ್ಮ ಪತ್ರದ ಕಳೆದ ಸಂಚಿಕೆಯಲ್ಲಿ ಓದಿಕೊಂಡು ಬಹಳ ಸಂತೋಷಪಟ್ಟೆನು. "ಭಾರತೀಯ"ರು ಹೇಳಿದಂತೆ ಮಕ್ಕಳಿಗೆ ಮನೆಯಲ್ಲಿ ಸಹ ಕಲಿಸುವದು [illegible] ಸರಿ. ಆದರೆ ಈ ದುರಾಚಾರವು ರೂಢಿಗೆ ಬರಲು ಕಾರಣವೇನು! ಶಾಲೆಗಳಲ್ಲಿ ಸರಿಯಾದ ಶಿಕ್ಷಣವು ಮಕ್ಕಳಿಗೆ ದೊರಕದ್ದರಿಂದ ಖಾಸಗಿ ಕಲಿಸುವ ಈ ದುರಾಚಾರವು ಪ್ರಚಾರಕ್ಕೆ ಬಂದದ್ದಾಗಿದೆ. ಈ ಪ್ರಾಂತ್ಯಗಳಲ್ಲಿ ಬಾಲಕರ ದರ್ಜೆಗಳಲ್ಲಿ ಬಾಲಕರಿಗೆ ಶಿಕ್ಷಣವು ತಕ್ಕ ರೀತಿಕೊಡೋಣಾಗುವದಿಲ್ಲವೆಂಬದನ್ನು ನಾನಾ ಪ್ರಕಾರವಾಗಿ [illegible] ಮಾಡಬಹುದು. ಬಾಲಕರ ದರ್ಜೆಗಳ ಉಪಾಧ್ಯಾಯರ ಕೂಡೆ ಬಾಲಕರ ಶಿಕ್ಷಣದ ವಿಷಯ ಮಾತಾಡಿದರೆ ಅಧ್ಯಾಪಕರಿಗೆ ಶಿಕ್ಷಣ ವಿಷಯದಲ್ಲಿರುವ ಅಭಾವವು ಪ್ರತ್ಯಕ್ಷ ಕಂಡುಬರುವದು. ಶಿಕ್ಷಣ ಕ್ರಮಗಳು ಏಕೆ ಮಾರ್ಪಟ್ಟವೆ ಎಂಬದಾಗಿ ಪ್ರಥಮದಲ್ಲಿ ಇವರು ಮರುಗುವರು. ನಂತರ ಈ ಕ್ರಮಗಳ ಪ್ರಕಾರ ಮಕ್ಕಳಿಗೆ ಯಾವ ಅಭ್ಯಾಸವೂ ಸಾಧ್ಯವಲ್ಲವೆಂತ ಖಂಡಿತವಾಗಿ ಹೇಳುವರು. ನಂತರ ಇನ್ಸ್‌ಪೆಕ್ಟರ್, ಸಬ್‌ಆಸಿಸ್ಟಾಂಟ್ ಇನ್ಸ್‌ಪೆಕ್ಟರ ಮತ್ತು ಖಾಸಗಿ ಶಾಲೆಗಳಾದರೆ ಶಾಲಾ ಆಡಳಿತೆಯವರನ್ನು ದೂರುವರು. ಇಂಥಾ ಅಭಾವದಿಂದ ತುಂಬಿರುವ ಅಧ್ಯಾಪಕ ವರ್ಗದವರಿಗೆ ಬಾಲಕರ ಶಿಕ್ಷಣವು ಹ್ಯಾಗೆ ಸಾಧ್ಯ? ಶಾಲಾಧಿಕಾರಿಗಳಾದರೋ ಮೇಲು ದರ್ಜೆಗಳಿಗೆ ನಿಗಾಕೊಡುವರಲ್ಲದೆ ಕೆಳಗಿನ ದರ್ಜೆಗಳಲ್ಲಿ ಮಕ್ಕಳು ಯಾವ ಸ್ಥಿತಿಯಲ್ಲಿರುವರು, ಉಪಾಧ್ಯಾಯರೂ ಮಕ್ಕಳೂ ಸಹ ಕೂಡಿಕೊಂಡು ಏನೇನು ಮಾಡುತ್ತಾರೆಂಬುದಾಗಿ ನೋಡಿಕೊಳ್ಳುವದು ಸಹ ಇಲ್ಲ. ಚಿಕ್ಕಪ್ರಾಯದ ಅಂದರೆ ಸಾಧಾರಣ 18 ಯಾ 20 ವರುಷಗಳ ತರುಣ ಉಪಾಧ್ಯಾಯರನ್ನು ರೂ. 7 ಅಥವಾ ಹೆಚ್ಚಾದರೆ ರೂ. 8ರ ಮೇರೆ ಬಾಲಕ ದರ್ಜೆಗಳಿಗೆ ನೇಮಿಸುತ್ತಾರೆ. ತರುಣ ಪ್ರಾಯದವನಿಗೆ ಈ 8 ರೂಪಾಯಿಗಳಲ್ಲಿ ಹ್ಯಾಗೆ ಸಂತುಷ್ಟಿ ಇರುವದು? ಮಕ್ಕಳ ಮೇಲೆ ಇಂಥವರಿಗೆ ಹ್ಯಾಗೆ ಪ್ರೀತಿಯುಂಟಾಗುವದು? ಆದ್ದರಿಂದ ಇಂಥಾ ಅಧ್ಯಾಪಕರು ದಕ್ಷಿಣೆಗೆ ತಕ್ಕ ಪ್ರದಕ್ಷಿಣೆಯನ್ನು ಮಾಡುತ್ತಾ ವಿಮೆಕಂಪೆನಿಗಳಲ್ಲಿ ಏಜನ್ಸಿ, ದಸ್ತಾವೇಜುಗಳನ್ನು ಬರೆಯುವುದು, ಆಸ್ತಿಗಳನ್ನು ಮಾರಿಸುವದು, ಯಾವದಾದರೂ ಇತರ ಚಿಲ್ಲರೆ ವ್ಯಾಪಾರಗಳನ್ನು ನಡಿಸಿ ತಮಗೆ ಸಿಕ್ಕುವ ಎಂಟು ರೂಪಾಯಿಗಳ ಸಹಾಯಾರ್ಥವಾಗಿ ಇನ್ನಷ್ಟು ಹಣವನ್ನು ಕೂಡಿಸಲು ನೋಡುವರು. ಇಂಥಾ ವೃತ್ತಿಗಳನ್ನು ಮಾಡಲ್ಕು ಉಪಾಯವಿಲ್ಲದಂಥವರು ಬಾಲಕರ ಹೆತ್ತವರಿಗೆ ಶಾಲೆಯಲ್ಲಿ ಶಿಕ್ಷಣ ಸರಿಯಾಗಿ ದೊರಕುವದಿಲ್ಲವೆಂಬ ನಾನಾ ಬಗೆಯ ಶಾಲಾಛಿದ್ರಗಳನ್ನು ಹೇಳಿಕೊಟ್ಟು ಖಾಸಗಿ ಕಲಿಯುವ ವೃತ್ತಿಯನ್ನು ಕಲ್ಪಿಸಿಕೊಳ್ಳುವ ಉಪಾಯವನ್ನು ನಡಿಸಿ ಬಿಡುವರು. ಖಾಸಗಿ ಕಲಿಸುವ ದುರಾಚಾರವು ಈ ರೀತಿ ಹುಟ್ಟುತ್ತದೆ. ಶಾಲೆಗಳ ಅಧಿಕಾರಿಗಳಿಗೆ ಈ ದುರಾಚಾರವನ್ನು ನಿಲ್ಲಿಸಿಬಿಡಲು ತುಂಬಾ ಅನುಕೂಲವಿದೆ. ಬಾಲಕರ ದರ್ಜೆಗಳಿಗೆ ಯೋಗ್ಯ ಉಪಾಧ್ಯಾಯರನ್ನು ಇವರಿಗೆ ತಕ್ಕ ಸಂಬಳಕೊಟ್ಟು ನೇಮಿಸಬೇಕು. ಈ ಸಂದರ್ಭದಲ್ಲಿ ಒಂದು ಮಾತಿರುವದು. ಮಂಗಳೂರಲ್ಲಿ ಕೆಲವು ಖಾಸಗಿ ಸೆಕೆಂಡರಿ ಶಾಲೆಗಳೋ ಹೈಸ್ಕೂಲುಗಳೋ ಇರುವವು. ಇವುಗಳಲ್ಲಿ ಬಾಲಕರ ದರ್ಜೆಗಳಲ್ಲಿ ಎಲಿಮೆಂಟರಿ ಶಾಲೆಗಳ ದರಗಳಿಗಿಂತ ಅಧಿಕವಾದ ದರಗಳಲ್ಲಿ ಸಂಬಳಗಳನ್ನು ವಿದ್ಯಾರ್ಥಿಗಳಿಂದ ವಸೂಲು ಮಾಡುತ್ತಿರುವದಾದರೂ ಮೇಲು ದರ್ಜೆಗಳ ಉಪಾಧ್ಯಾಯರಿಗೆ ನೂರಕಟ್ಲೆಯಲ್ಲಿ ಸಂಬಳ ಕೊಡುವಾಗ ಬಾಲಕರ ದರ್ಜೆಗಳ ಉಪಾಧ್ಯಾಯರಿಗೆ ರೂಪಾಯಿ 8 ಅಂದರೆ ಒಬ್ಬ ಫಸ್ಟ್‌ಕ್ಲಾಸ್ ಪೇದೆಯಲ್ಲ, ಸೆಕೆಂಡ್ ಕ್ಲಾಸ್ ಪೇದೆಯ ಸಂಬಳವನ್ನು ಕೊಡುತ್ತಿದ್ದಾರೆ. ಶಾಲಾಧಿಕಾರಿಗಳಿಗೆ ಬಾಲಕರ ಶಿಕ್ಷಣದಲ್ಲಿ ಇಷ್ಟು ಉತ್ಸಾಹವಿದ್ದರೆ ನಿಜವಾಗಿಯೂ ಅಧ್ಯಾಪಕರಿಗೆ ಇವರಿಗಿಂತ ಅಧಿಕವಾದ ಉತ್ಸಾಹವು ಎಂದೂ ಇರದು. ಆದ್ದರಿಂದ 'ಭಾರತೀಯ'ರಂಥಾ ಮಹನೀಯರು ಖಾಸಗಿ ಶಾಲೆಗಳ ಅಧಿಕಾರಿಗಳನ್ನು ಅವರ ಗಾಢವಾದ ನಿದ್ರೆಯಿಂದ ಎಚ್ಚರಿಸಬೇಕು. ಶಾಲೆಗಳನ್ನು ನಡಿಸುವದಂದರೆ ಕೈಗಾರಿಗೆಯ ಕಾರ್ಖಾನೆಗಳನ್ನು ನಡಿಸುವಂತಲ್ಲ, ಅಥವಾ ಅಂಗಡಿ ವ್ಯಾಪಾರದ ರೀತಿಯಲ್ಲಿ ನಡಿಸುವದು ಅಲ್ಲ. ಶಾಲೆಗಳ ಲೆಕ್ಕ ಪತ್ರಗಳನ್ನು ನೋಡುವದು, ಟೋಪ್ಪಿ ಇಟ್ಟುಕೊಂಡು ಬರುವ ಉಪಾಧ್ಯಾಯರು ರುಮಾಲು ಕಟ್ಟಬೇಕೆಂದು ಹೇಳುವದು, ಶಾಲಾ ವರುಷಗಳ ಅಂತ್ಯಭಾಗದಲ್ಲಿ ಶಾಲಾವೃತ್ತಾಂತಗಳನ್ನು ಚಲೋದಾಗಿ ಮುದ್ರಿಸಿ, ಹುಡುಗರಿಂದ ನಾಟಕಗಳನ್ನಾಡಿಸಿ ಸಭಿಕರನ್ನು ವಿನೋದಗೊಳಿಸುವದು, ಸಾಧ್ಯವಾದರೆ ಒಂದೆರಡು ಚಲೋ ಭಾಷಣಗಳನ್ನು ಮಾಡುವದು, ತಮ್ಮ ಪರಿಶ್ರಮಗಳನ್ನು ಇಷ್ಟರಲ್ಲಿ ಮುಗಿಸಿಕೊಂಡು ಮಹಾಜನರ ಸಹಾಯವಿಲ್ಲವೆಂತ ಗುಣಗುಟ್ಟುವದು—ಇಷ್ಟರಲ್ಲಿ ಶಾಲಾ ಆಡಳಿತೆಯ ಕೆಲಸವು ಮುಗಿಯದೆಂಬುದನ್ನು 'ಭಾರತೀಯ'ರು ಶಾಲಾಧಿಕಾರಿಗಳು ತಿಳಿಯುವಂತೆ ತಮ್ಮ ಲೇಖನಗಳ ಮೂಲಕ ಅಧಿಕಾರಿಗಳ ಕಣ್ಣಿಗೆ [illegible] ಖಾಸಗಿ ಕಲಿಸುವ ದುರಾಚಾರವು ಕಡಮೆಯಾಗುವದೆಂಬುದರಲ್ಲಿ ಸಂಶಯವಿಲ್ಲ.

ಬಾಲಕರ [illegible]

ಯುದ್ಧ ಸಮಾಚಾರ.

ತಾ: ೨ನೇ ಜೂನ್ ೧೯೧೬.

ಡರ್ಡಾನೆಲ್ಸನಲ್ಲಿ ಮುಳುಗಿದ ಬ್ರಿಟಿಷರ "ಮೆಜೆಸ್ಟಿಕ್" ಯುದ್ಧನಾವೆಯಲ್ಲಿದ್ದ ಎಲ್ಲಾ ಬ್ರಿಟಿಷ ಆಫೀಸರರು ರಕ್ಷಿಸಲ್ಪಟ್ಟಿದ್ದಾರೆಂತ ಪ್ರಕಟವಾಗಿದೆ.

ಜರ್ಮನರ ಜಲಾಂತರ್ಗಾಮಿ ನಾವೆಯು ಬ್ರಿಟಿಷರ "ಡಿಕ್ಸಿಯೂನ್" ಎಂಬ ಹಡಗವನ್ನು ಮುಳುಗಿಸಿರುವದು. ನಾವಿಕರು ೨೪ ತಾಸು ದೋಣಿಗಳಲ್ಲಿದ್ದು ರಕ್ಷಣೆ ಹೊಂದಿರುತ್ತಾರೆ. ಉತ್ತರ ಸಮುದ್ರದಲ್ಲಿ ಡೆನ್ಮಾರ್ಕಿನವರ ಒಂದು ನಾವೆಯನ್ನೂ ಇಂಗ್ಲಿಷ್ ಕಾಲುವೆಯಲ್ಲಿ ಪೋರ್ತುಗೀಸರ ಒಂದು ನಾವೆಯನ್ನೂ ಜರ್ಮನರ ಜಲಾಂತರ್ಗಾಮಿ ನಾವೆಯು ಮುಳುಗಿಸಿರುತ್ತದೆ. ನಾವಿಕರು ರಕ್ಷಿಸಲ್ಪಟ್ಟಿರುತ್ತಾರೆ.

ಫ್ರೆಂಚ ರಣರಂಗದಲ್ಲಿ ಕಠಿಣ ಕಾಳಗ ನಡೆಯುತ್ತಿದೆ.

ಇಟಲಿಯನರು ಟೈರೊಲ್ ರಣರಂಗದಲ್ಲಿ ಮುಂದರಿಯುತ್ತಲಿದ್ದಾರೆ. ರೊವರೆಟೊ ಎಂಬಲ್ಲಿಯ ಆಸ್ಟ್ರಿಯನರ ಹೊಸ ಕೋಟೆಗಳಿಗೆ ಹೋಗುವ ದಾರಿಯಲ್ಲಿ ಪಿಲ ಎಂಬಲ್ಲಿಗೆ ಉತ್ತರದಲ್ಲಿರುವ ಒಂದು ಮುಖ್ಯ ಗುಡ್ಡವನ್ನು ಇಟಲಿಯನರು ಹಿಡದಿರುತ್ತಾರೆ. ಪ್ರಸ್ತ ಭೂಮಿಯಲ್ಲಿ ಕಠಿಣ ತೋಪು ಕಾಳಗವು ನಡೆಯುತ್ತಿದೆ. ಇಟಲಿಯನರ ಕಾಲಾಳು ಸೇನಿಕರು ತಮ್ಮನ್ನು ತಾವೇ ಬಲಕಾಯಿಸಿಕೊಂಡಿರುವರು. ಕಾರ್ನಿಕ್ ರಣರಂಗದಲ್ಲಿ ಆಸ್ಟ್ರಿಯನರು ಐದಾವರ್ತಿ ಹಲ್ಲೆಮಾಡಿದರು. ಇಟಲಿಯನರ ಅಲ್ಪೈನ್ ಸೇನೆಯು ಯುದ್ಧಕ್ಕೆ ನಿಂತು ಶತ್ರುಗಳನ್ನು ಓಡಿಸಿರುವದು. ಇಟಲಿಯನರಲ್ಲಿ ಸ್ವಲ್ಪ ಮಾತ್ರ ನಷ್ಟವಾಗಿರುವದು.

ಕಳದ ತಾ. ೩೧ರಲ್ಲು ಬ್ರಿಟಿಷರ ಸೇನೆಯು ಟೀಗ್ರಿಸ್ ನದಿಯ ವರೆಗೆ ಮುಂದರಿದು ತುರ್ಕ ಸೇನೆಯ ನಾಲ್ಕು ನೆಲೆಗಳನ್ನು ಸ್ವಾಧೀನಮಾಡಿಕೊಂಡಿರುವದು. ಇಲ್ಲಿ ಬ್ರಿಟಿಷರ ವಾಯುನಾವೆಗಳು ವಿಶೇಷ ಚಾತುರ್ಯವನ್ನು ತೋರಿಸಿರುವವು.

ತಾ. ೩ನೇ ಜೂನ್.

ಬ್ರಿಟಿಷರ ಜಲಾಂತರ್ಗಾಮಿ ನಾವೆಯು ಕನ್‌ಸ್ಟಂಟಿನೋಪಲಿನ ಮುಂದೆ ಸಂಚರಿಸುತ್ತಿರುವುದರಿಂದ ತುರ್ಕರು ಗಲಿಪೋಲಿಗೆ ಕಳುಹಿಸಲಿಕ್ಕಿದ್ದ ಸೇನೆ ಸಹಿತವಾದ ನಾವೆಗಳು ಕನ್‌ಸ್ಟಂಟಿನೋಪಲನ್ನು ಬಿಟ್ಟು ಹೊರಡಲಿಲ್ಲ.

ಜರ್ಮನರು ಕೆಲವು ದಿವಸಗಳಿಂದ ಪ್ರೈಜ್‌ಮ್ಯಸ್ಲ ಕೋಟೆಗೆ ಹಲ್ಲೆ ಮಾಡಲು ಸನ್ನಾಹಗಳನ್ನು ಮಾಡುತ್ತಿದ್ದು ಕಳದ ಮೇ ತಾ. ೩೦ರಲ್ಲು ಪ್ರೈಜ್‌ಮ್ಯಸ್ಲಿನ ಪಶ್ಚಿಮ ಮತ್ತು ವಾಯುವ್ಯ ದಿಕ್ಕಿನ ಕೋಟೆಗಳ ಮೇಲೆ ಬಿದ್ದರು. ತಾ. ೩೧ರ ಮಧ್ಯಾಹ್ನದ ವರೆಗೆ ಕಠಿಣ ಕಾಳಗವು ನಡೆದು ಶತ್ರುಗಳು ಮಹಾ ದೊಡ್ಡ ನಷ್ಟಪಟ್ಟು ಹಿಮ್ಮೆಟ್ಟಿದರು. ರುಷ್ಯನರು ಹತಶೇಷರಾದ ೬೨೩ ಸೇನಿಕರನ್ನು ಸೆರೆಹಿಡಿದಿರುತ್ತಾರೆ. ಸ್ಟ್ರೀಜ ಮತ್ತು ಸೀಸ್ಟರಿನ ಸುತ್ತಲೂ ಕಠಿಣ ಕಾಳಗವು ನಡೆಯುತ್ತಿದೆ. ಸಿವ್ಹ್ಲ ನದಿಯ ಸಮೀಪ ರುಷ್ಯನರಿಗೆ ಜಯವಾಗುತ್ತಲಿದೆ. ಮೇ ತಾ. ೨೮ರಿಂದ ತಾ. ೩೦ರ ವರೆಗೆ ೧೦,೬೬೦ ಶತ್ರು ಸೇನಿಕರು ರುಷ್ಯನರಿಗೆ ಸೆರೆ ಬಿದ್ದಿರುವರು. ತಾ. ೩೧ನೇ ಬೆಳಿಗ್ಗೆ ಶತ್ರುಗಳು ವಿಸ್ಟುಲದ ಎಡಕಡೆಯಲ್ಲಿ ವಿಷಕರವಾದ ಗ್ಯಾಸನ್ನು ಪ್ರಯೋಗಿಸಿದರು. ನಂತರ ಜೂರ ಮತ್ತು ರಾವ್ಕನದಿಗಳ ಸಮೀಪ ರುಷ್ಯನರ ಮೇಲೆ ಪ್ರಚಂಡವಾದ ಹಲ್ಲೆಮಾಡಿ ಹಿಮ್ಮೆಟ್ಟಿದರು.

ಮೆಸೊಪೊಟಾಮಿಯದಲ್ಲಿ ಬ್ರಿಟಿಷರು ತಾ. ೩೧ರಲ್ಲು ಶತ್ರುಗಳ ೩ ಫಿರಂಗಿಗಳನ್ನೂ ೨೪೧ ಸೇನಿಕರನ್ನೂ ಸೆರೆ ಹಿಡಿದಿರುವರು. ಬ್ರಿಟಿಷ ಸೇನೆಯಲ್ಲಿ ೨ ಮಂದಿ ಹತರಾಗಿರುವರು. ೨೧ ಮಂದಿ ಗಾಯಪಡೆದಿರುವರು. ಶತ್ರುಗಳು ಟೀಗ್ರಿಸ್ ನದಿಯ ವರೆಗೆ ಹಿಂದೆ ಸರಿದಿರುವರು. ಸಿಂಧಿಯಾ ಮಹಾರಾಜರಿಂದ ಕೊಡೋಣಾದ ವಾಯುನಾವೆಗಳು ಇಲ್ಲಿ ವಿಶೇಷ ಪ್ರತಾಪವನ್ನು ತೋರಿಸಿ ಕೀರ್ತಿಗೆ ಪಾತ್ರವಾದವು.

ತಾ. ೪ನೇ ಜೂನ್.

[illegible] ಸೇನೆಯನ್ನು ಕೊಂಡುಹೋಗುತ್ತಿದ್ದ ತುರ್ಕರ [illegible] ಜಲಾಂತರ್ಗಾಮಿ ನಾವೆಗಳು ಮರ್ಮೋರ [illegible] ಕನ್‌ಸ್ಟಂಟಿನೋಪಲಿನಿಂದ [illegible]

ಮೇ ತಾ. ೯ರಿಂದ ಜೂನ್ ತಾ. ೧೮ರ ವರೆಗೆ ಫ್ರೆಂಚರು ಕೆರನ್ಸಿ, ಎಬ್ಲೈನ್, ಮತ್ತು ಸೂಸೆಜನಲ್ಲಿ ೩೧೦೦ ಜರ್ಮನ ಸೇನಿಕರನ್ನು ಸೆರೆಹಿಡಿದರು. ೧೨,೬೦೦ ಜರ್ಮನ ಸೇನಿಕರ ಶವಗಳನ್ನು ಹೂಣಿಟ್ಟರು. ಜರ್ಮನರ ಒಂದು ಡಿವಿಜನ್ ಸೇನೆಯಲ್ಲೇ ೩೨೦೦ ಮಂದಿ ಪ್ರಾಣಾಪಾಯ ಹೊಂದಿರುವರು.

ಲಿರಿಟ್ಸಿಯ ಪೂರ್ವದಲ್ಲಿ ಕಠಿಣ ಕಾಳಗ ಪ್ರಾರಂಭವಾಗಿದೆ. ಲೈಬ್ರಿಂಕ್ ಎಂಬಲ್ಲಿ ಫ್ರೆಂಚರು ಕಳದ ಎರಡು ದಿವಸಗಳಲ್ಲಿ ೮೦೦ ಮಂದಿ ಶತ್ರುಸೇನಿಕರನ್ನು ಸೆರೆ ಹಿಡಿದಿರುತ್ತಾರೆ.

ಪ್ರೈಜ್‌ಮ್ಯಸ್ಲ ಕದನದ ವೃತ್ತಾಂತವು ಈ ದಿನದ ವಾರ್ತೆಯಲ್ಲಿ ಪ್ರಕಟಿಸಲ್ಪಟ್ಟಿರುವದು. ಜರ್ಮನರ ೧೬ ಅಂಗುಲ ಬಾಯಿಯ ದೊಡ್ಡ ಫಿರಂಗಿಗಳು ಪ್ರೈಜ್‌ಮ್ಯಸ್ಲಿನ ಉತ್ತರದಲ್ಲಿ ೭ ಮತ್ತು ೧೦ನೇ ಕೋಟೆಗಳ ಪ್ರಾಂತ್ಯದಲ್ಲಿ ಗುಂಡು ಹಾರಿಸಿದವು. ಆಸ್ಟ್ರಿಯಾನರು ಆ ಕೋಟೆಗಳನ್ನು ರುಷ್ಯನರಿಗೆ ಬಿಟ್ಟುಕೊಡುವ ಮೊದಲೇ ಹಾಳುಮಾಡಿಸಿದ್ದರು. ರುಷ್ಯನರು ಮೇಲ್ಬಾಯಿದ ಜರ್ಮನರನ್ನು ಹಿಂದಕ್ಕಟ್ಟಿದರು. ಆದರೆ ಕಡೆಯ ಗುಂಡು ಮುಗಿಯುವ ವರೆಗೆ ಜರ್ಮನರ ಸೇನೆಗೆ ಗುಂಡು ಹಾರಿಸಿದ ರುಷ್ಯನರ ಕೆಲವು ಫಿರಂಗಿಗಳನ್ನು ಜರ್ಮನರು ಹಿಡಿದರು. ೭ನೇ ಕೋಟೆಯಲ್ಲಿ ರುಷ್ಯನರು ಪುನಃ ೨೦೦ ಸೇನಿಕರನ್ನೂ ೮ ತೋಪುಗಳನ್ನೂ ಸೆರೆಹಿಡಿದರು.

ವಿಸ್ಟುಲ ಮತ್ತು ಪ್ರೈಜ್‌ಮ್ಯಸ್ಲಿನ ಕದನವು ಪುನಃ ಅತಿ ಕಠಿಣವಾಗಿ ಪರಿಣಮಿಸಿರುವದು. ಕೆಳಗಿನ ಸಾನಿನಲ್ಲಿ ರುಷ್ಯನರು ಸನೀಮುಕಾಳಗ ಮಾಡಿ ಕೆಲವು ಪ್ರಾಮುಖ್ಯವಾದ ಜಯಗಳನ್ನು ಪಡೆದರು. ಕಾಲಿಸ್ಕೋವೆ ಎಂಬ ಒಂದೇ ಗ್ರಾಮದಲ್ಲಿ ರುಷ್ಯನರು ೧೨೦೦ ಸೇನಿಕರನ್ನೂ ೨೨ ಆಫೀಸರರನ್ನೂ ೮ ತೋಪುಗಳ ಸಹಿತ ಸೆರೆಹಿಡಿದರು.

ಶತ್ರುಗಳು ದೊಡ್ಡ ದೊಡ್ಡ ಫಿರಂಗಿಗಳನ್ನೂ ಮಹಾ ದೊಡ್ಡ ಬೆಂಬಲ ಸೇನೆಯನ್ನೂ ಲೈಸ್‌ಮಿನಿಟ್ಜ ಮತ್ತು ಸ್ಟ್ರೀಯಿಯ ಮಧ್ಯೆ ತಂದೊಡ್ಡಿರುತ್ತಾರೆ. ತಾ. ೩೧ನೇ ರಾತ್ರಿ ಶತ್ರುಗಳ ಈ ಮಹಾ ಸೇನೆಗೆ ಕೆಲವುಕಡೆ ಜಯಗಳಾಗಿವೆ. ರುಷ್ಯನರು ಶತ್ರು ಸೇನಿಕರಲ್ಲಿ ಕೆಲವರನ್ನು ಸೆರೆಹಿಡಿದಿರುತ್ತಾರೆ.

ಇಟಲಿಯನರ ಯುದ್ಧ ನಾವೆಗಳು ಡಲ್ಮೇಶ್ಯನ್ ಆರ್ಕಿಪೆಲಾಗೋದ ಕಡೆಗೆ ಸಂಚರಿಸಿ ತಂತಿ ಇಲ್ಲದ ಟೆಲಗ್ರಾಫ್ ಸ್ಟೇಶನ್ ಇತ್ಯಾದಿಗಳನ್ನು ನಾಶಮಾಡಿಸಿರುವವು. ಶತ್ರುಗಳು ಕಾಣಿಸಿಕೊಳ್ಳಲಿಲ್ಲ.

ಆಸ್ಟ್ರಿಯಾನರು ಬಲಕಾಯಿಸಿಕೊಂಡಿದ್ದ ಒಂದು ಪ್ರಾಮುಖ್ಯ ಸ್ಥಾನವು ಇಟಲಿಯನರಿಗೆ ಸ್ವಾಧೀನವಾಗಿದೆ.

ಮೆಸೊಪೊಟಾಮಿಯದಲ್ಲಿ ಬ್ರಿಟಿಷ ಸೇನಿಕರು ತುರ್ಕರ "ಬುಲ್ ಬುಲ್" ಎಂಬ ಒಂದು ಹಡಗವನ್ನೂ ಮೂರು ದೊಡ್ಡ ನಗಗಳನ್ನೂ, ಮುಳುಗಿಸಿ ೩೦೦ ಸೇನಿಕರನ್ನು ಸೆರೆ ಹಿಡಿದಿರುವರು. ಶತ್ರುಗಳ ಹಲವು ಫಿರಂಗಿಗಳೂ, ಬ್ರಿಟಿಷ ಸೇನಿಕರ ಕೈಸೇರಿರುವವು.

ತಾ. ೫ನೇ ಜೂನು.

ಬ್ರಿಟಿಷ ಜಲಾಂತರ್ಗಾಮಿ ನಾವೆಯು ಈಗ ಮರ್ಮೋರ ಸಮುದ್ರದಲ್ಲಿ ಇದ್ದುಕೊಂಡು ಜರ್ಮನರ ಒಂದು ಸರಕಿನ ಹಡಗವನ್ನು ಪಂಡರ್ಮ ಆಖಾತದಲ್ಲಿ ಮುಳುಗಿಸಿರುವದು ಎಂತ ಪ್ರಕಟವಾಗಿದೆ.

ಜರ್ಮನರು ಬ್ರಿಟಿಷರ "ಲುಸಿಟಾನಿಯ" ಹಡಗವನ್ನು ಮುಳುಗಿಸಿದ ಸಂಬಂಧ ಅಮೇರಿಕ ಸರಕಾರದವರು ಜರ್ಮನರಿಗೆ ಕಳುಹಿಸಿಕೊಟ್ಟ ಪತ್ರಕ್ಕೆ ಜರ್ಮನ ಸರಕಾರದವರು ಅಸಮರ್ಪಕವಾದ ಉತ್ತರ ಕೊಡದ್ದರಿಂದ ಅಮೇರಿಕ ಸರಕಾರದವರು ಪುನಃ ಜರ್ಮನರಿಗೆ ಒಂದು ಪತ್ರವನ್ನು ಕಳುಹಿಸಿಕೊಡಲಿಕ್ಕಿದ್ದಾರೆ.

ಫ್ರೆಂಚರ ೨೯ ವಾಯುನಾವೆಗಳು ಜರ್ಮನ ಯುವರಾಜರ ಮುಖ್ಯ ಠಾಣ್ಯದ ಮೇಲೆ ೧೭೮ ಬೊಂಬುಗಳನ್ನು ಹಾಕಿ ಹಿಂತಿರುಗಿರುವವು.

ಬಾಲ್ಟಿಕ್ ಸಂಸ್ಥಾನದ ಲಿಬೋದಲ್ಲಿ ರುಷ್ಯನರಿಗೆ ದೊಡ್ಡ ಜಯವಾಗಿರುವದು. ಲಿಬೋದ ದಕ್ಷಿಣದಲ್ಲಿ ರುಷ್ಯನರು ಎರಡು ಪಟ್ಟಣಗಳನ್ನು ಹಿಡಿದಿರುವರು.

ಕೌಕಾಸಸಿನ ವಾನ್‌ಪ್ರಾಂತ್ಯದ ಕೂರಿಕ್ ಎಂಬಲ್ಲಿ ತುರ್ಕರನ್ನು ರುಷ್ಯನರು ಸೋಲಿಸಿರುತ್ತಾರೆ. ಮೆಂಗಲೋ ಎಂಬಲ್ಲಿ ರುಷ್ಯನರು ತುರ್ಕರನ್ನು ಸೋಲಿಸಿ ಹಿಂದಟ್ಟುತ್ತಿದ್ದಾರೆ.

ಪ್ರೈಜ್‌ಮ್ಯಸ್ಲ ಕೋಟೆಗಳು ರುಷ್ಯನರಿಗೆ ವಶವಾಗುವ ಮೊದಲೇ ಆಸ್ಟ್ರಿಯನರು ಅದನ್ನು ಪೂರ್ಣ ಹಾಳುಗೆಡಿಸಿ ಹೋದುದರಿಂದ ಈ ಸಾರಿ ಜರ್ಮನರು ಅದರ ಮೇಲೆ ದೊಡ್ಡ ಸೇನೆಯನ್ನು ತಂದೊಡ್ಡಿ ಹಲ್ಲೆಮಾಡಿದಾಗ ಬಲಕಾಯಿಸಿಕೊಂಡು ಎದುರಿಸುವದು ರುಷ್ಯನರಿಂದ ಅಸಾಧ್ಯವಾಯಿತು. ಶತ್ರುಗಳು ಜಾರೋಸ್ಲೊ ಮತ್ತು ಡಾಡ್ರಿಮೋಶನ್ನು ವಶಮಾಡಿಕೊಂಡು ನದಿಯ ಬಲಪಾರ್ಶ್ವದಲ್ಲಿ ತಪ್ಪಿಸಿದ್ದರಿಂದ ರುಷ್ಯನರಿಗೆ ಜರ್ಮನರ ಆ ಮಹಾ ಸೇನೆಯೊಡನೆ ಕಾದಾಡುವದು ಅತಿ ಕಷ್ಟವಾಯಿತು. ಹ್ಯಾಗೂ ರುಷ್ಯನರು ಬಹು ಕಷ್ಟದಿಂದ ಮುಂದರಿದು ಜೂನು ತಾ. ೨ರಲ್ಲು ಶತ್ರುಗಳ ನೆಲೆಯನ್ನು ಮುರಿದು ಶ್ಡಾಶಿಕ್ ಪ್ರಾಂತ್ಯದಲ್ಲಿ ಒಂದು ವಿಶೇಷ ಜಯವನ್ನು ಪಡೆದರು. ಶ್ಡಾಶಿಕ್ ಪಶ್ಚಿಮದಲ್ಲಿ ರುಷ್ಯನರು ೪೦೦೦ ಸೇನಿಕರನ್ನೂ ಅನೇಕ ಫಿರಂಗಿಗಳನ್ನೂ ಸೆರೆಹಿಡಿದರು. ಶತ್ರುಗಳ ಮೂರು ರೆಜಿಮೆಂಟ್ ಸೇನೆಗಳು ನಿರ್ನಾಮವಾದವು. ಕಡೆಗೆ ರುಷ್ಯನರು ಮೆಲ್ಲನೆ ಪ್ರೈಜ್‌ಮ್ಯಸ್ಲಿನ ಉತ್ತರ ಮತ್ತು ಪಶ್ಚಿಮ ದಿಕ್ಕುಗಳಿಂದ ಹಿಂದೆ ಸರಿದರು. ಆಸ್ಟ್ರಿಯನರಿಂದ ಅಲ್ಲಿ ಹಿಂದೆ ದೊರಕಿದ ಯುದ್ಧ ಸಾಮಾಗ್ರಿಗಳೆಲ್ಲವೂ ತಾ. ೨ರಲ್ಲು ರುಷ್ಯನರ ಹೊಸ ನೆಲೆಗೆ ಸಾಗಿಸಲ್ಪಟ್ಟವು. ಮರುದಿನ ರಾತ್ರಿ ರುಷ್ಯ ಸೇನಿಕರು ಪ್ರೈಜ್‌ಮ್ಯಸ್ಲಿನ ನೆಲೆಯನ್ನು ಬಿಟ್ಟು ಪೂರ್ವ ದಿಕ್ಕಿಗೆ ಸೇರಿದರು. ಶತ್ರುಗಳು ಸ್ಟ್ರೀಯಿಯ ಸಮೀಪ ದೊಡ್ಡ ಸೇನೆಯನ್ನು ತಂದೊಡ್ಡಿ ಮುಂದರಿಯ ನೋಡಿದರು. ಆದರೆ ವಿಶೇಷ ನಷ್ಟಪಟ್ಟರು. ರುಷ್ಯನರು ೧೦೦೦ ಸೇನಿಕರನ್ನು ಸೆರೆಹಿಡಿದರು.

ಜೂನು ತಾ. ೧ರಲ್ಲು ಶತ್ರುಗಳು ವಿಷಕರವಾದ ಗ್ಯಾಸನ್ನು ಬಿಟ್ಟರು. ಆದರೆ ಗಾಳಿ ತಿರಿಗಿ ವಿಷಕರವಾದ ಗ್ಯಾಸ್ ಶತ್ರುಗಳ ಕಂದಕಗಳಿಗೆನೇ ಹಿಂದಕ್ಕೆ ಬಡೆಯಿತು. ಜರ್ಮನರು ಕಂದಕಗಳನ್ನು ಬಿಟ್ಟು ಓಡುವಾಗ ರುಷ್ಯನರು ಫಿರಂಗಿ ಹಾರಿಸಿ ಅವರನ್ನು ನಾಶಮಾಡಿದರು.

ಬಲ್ಗೇರಿಯರು ಮಿತ್ರರ ಸಹಾಯಕ್ಕೆ ಸೇರುವರೆಂಬ ಅನುಮಾನವು ತುರ್ಕರಿಗೆ ಆದುದರಿಂದ ಚಟಲ್ಜದಲ್ಲಿ ತುರ್ಕರು ಸೇನೆಯನ್ನು ಕೂಡಿಸುತ್ತಿದ್ದಾರೆ. ಕನ್‌ಸ್ಟಂಟಿನೋಪಲಿನಲ್ಲಿರುವ ಬಲ್ಗೇರಿಯಾ ವಿದ್ಯಾರ್ಥಿಗಳು ಹಿಂದಕ್ಕೆ ಕರೆಯಲ್ಪಟ್ಟಿರುತ್ತಾರೆ.

ತಾ. ೭ನೇ ಜೂನು.

ತುರ್ಕರು ಕೌಕಾಸಸ್, ಸಿನಾಯಿ ಮತ್ತು ಸಿರಿಯದಲ್ಲಿದ್ದ ತಮ್ಮ ಸೇನಾಂಗಗಳನ್ನು ಕನ್‌ಸ್ಟಂಟಿನೋಪಲಿಗೆ ಹಿಂದೆ ತರಿಸಿರುತ್ತಾರೆ.

ಜೂನು ತಾ. ೨ಕ್ಕೆ ಅಂತ್ಯವಾಗುವ ವಾರದಲ್ಲಿ ಜರ್ಮನರ ಜಲಾಂತರ್ಗಾಮಿ ನಾವೆಗಳು ಬ್ರಿಟಿಷರ ೮ ವ್ಯಾಪಾರ ಹಡಗಗಳನ್ನು ಮುಳುಗಿಸಿದವು. ೧೩೮೨ ಹಡಗಗಳು ಬ್ರಿಟಿಷ ಬಂದರಗಳಿಗೆ ಹೋಗಿಬಂದವು.

"ಇಂತಮ್" ಎಂಬ ಬ್ರಿಟಿಷರ ವ್ಯಾಪಾರ ಹಡಗವನ್ನು ಲಿಜ್ಯಾರ್ಡಿನಲ್ಲಿ ಜಲಾಂತರ್ಗಾಮಿ ನಾವೆಯು ಮುಳುಗಿಸಿತು. ೪೦ ನಾವಿಕರು ರಕ್ಷಣೆ ಹೊಂದಿದರು.

ಬೆರ್ಲಿನಿನಲ್ಲಿದ್ದ ಅನೇಕ ಅಮೇರಿಕಾನರು ಬೆರ್ಲಿನ್ ನಗರವನ್ನು ಬಿಟ್ಟು ಸ್ವಿಜರ್‌ಲೆಂಡಿಗೆ ಬಂದಿರುವರು. ಜರ್ಮನರು ಅಮೇರಿಕದವರಿಗೆ ಬಹಿರಂಗವಾಗಿ ಅವಮಾನ ಪಡಿಸಿದುದೇ ಇದಕ್ಕೆ ಕಾರಣವಂತೆ.

ಫ್ರೆಂಚರು ಸೂಸೆಜನಲ್ಲಿ ಮುಂದರಿದಿರುತ್ತಾರೆ. ಜರ್ಮನರು ಇಲ್ಲಿ ಮೂರಾವರ್ತಿ ಹಲ್ಲೆ ಮಾಡಿ ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿದರು. ನ್ಯೂವಿಲ್ಲೆ ಗ್ರಾಮದ ಎರಡು ಮೂರನೇ ಅಂಶವು ಫ್ರೆಂಚರಿಗೆ ಸ್ವಾಧೀನವಾಗಿದೆ. ಈ ಸ್ಥಳಗಳಲ್ಲಿ ಕಠಿಣ ಕಾಳಗವು ನಡೆಯುತ್ತಿದೆ.

ಇಂಗ್ಲಾಂಡಿನ ದಕ್ಷಿಣ ಮತ್ತು ಪೂರ್ವ ಕರಾವಳಿಯ ಮೇಲೆ ಜರ್ಮನ ವಾಯುನಾವೆಗಳು ಹಲ್ಲೆ ಮಾಡಿ ಅನೇಕ ಕಡೆಗಳಲ್ಲಿ ಸಿಡಿಮದ್ದುಗಳನ್ನು ಎಸೆದಿರುವವು. ವಿಶೇಷ ನಷ್ಟವೇನೂ ಆಗಲಿಲ್ಲ. ಬರೇ ಸ್ವಲ್ಪ ಮಂದಿ ಮಾತ್ರ ಪ್ರಾಣಾಪಾಯ ಪಟ್ಟಿರುತ್ತಾರೆ.

ಜರ್ಮನ್ ಯುವರಾಜರ ಮುಖ್ಯ ಠಾಣ್ಯಕ್ಕೆ ವಾಯುನಾವೆಗಳು ಮಾಡಿದ ಹಲ್ಲೆಯಿಂದ ಕೆಲವು ಮಂದಿ ಹತರಾಗಿರುವರೆಂತ ಬೆರ್ಲಿನಿನಿಂದ ಅಮ್‌ಸ್ಟರ್‌ಡಮಿಗೆ ತಂತೀ ಬಂದಿರುವದು.

ಬ್ರಿಟಿಷ ಪ್ರಧಾನ ಮಂತ್ರಿಯರಾದ ಮಿ। ಅಸ್ಕ್ವಿತರವರು ಫ್ರಾನ್ಸಿಗೆ ಹೋಗಿ ಸೇನಾನೆಲೆಗಳನ್ನು ಸಂದರ್ಶಿಸಿದರು. ಮುಖ್ಯವಾಗಿ ಭಾರತೀಯ ಸೇನೆಯನ್ನು ನೋಡಿ ಬಹು ಸಂತೋಷಪಟ್ಟರು.

ಮೈಪ್ರಿಸಿನಲ್ಲಿ ಪುನಃ ಕಠಿಣ ಕಾಳಗ ಪ್ರಾರಂಭವಾಗಿರುವದೆಂತಲೂ ಜರ್ಮನರು ಸನೀಮು ಕಾಳಗದಲ್ಲಿ ಬಹಳ ನಷ್ಟ ಹೊಂದಿರುವರೆಂತಲೂ [illegible] ಶತ್ರುಗಳು [illegible]

ಇಂಗ್ಲಾಂಡಿನಲ್ಲಿ ಜರ್ಮನ ಗೂಢಾಚಾರರಾಗಿದ್ದ ಮುಲ್ಲರ್ ಮತ್ತು ಹಾನ್ ಎಂಬವರಿಗೆ ಯುದ್ಧ ಕಾನೂನು ಪ್ರಕಾರ ಶಿಕ್ಷೆಯು ಕೊಡೋಣಾಗಿರುವದು. ಮುಲ್ಲರನಿಗೆ ಮರಣ ದಂಡನೆಯೂ, ಹಾನ್ ಎಂಬವನಿಗೆ ೭ ವರ್ಷಗಳ ಸಜೆಯೂ ವಿಧಿಸೋಣಾಗಿದೆ. ಇಂಗ್ಲಾಂಡವನ್ನು ಬಿಟ್ಟು ಹೋಗಲಿಕ್ಕಿದ್ದ ಜರ್ಮನ್ ಗೂಢಾಚಾರನಾದ ರೊಬೆಟ್ ರೊಸೆನ್ಹಾಲ್ ಎಂಬವನನ್ನು ಕೈದ ಮಾಡಿರುತ್ತಾರೆ.

ಕೆಳ ಸಾನಿನಲ್ಲಿ ರುಶ್ಯನರಿಗೆ ಜಯವಾಗಿರುವದು. ರುಶ್ಯನರು ಶತ್ರುಗಳನ್ನು ಹಿಂದಕ್ಕಟ್ಟುವ ಕೆಲಸದಲ್ಲಿ ನಿರತರಾಗಿದ್ದಾರೆ. ಪ್ರೈಜ್‌ಮ್ಯಸ್ಲ್ ಮತ್ತು ನೀಸ್ಟರಿನ ಮಧ್ಯೆ ಮೇಲ್ಭಾಗದ ಶತ್ರುಗಳು ವಿಶೇಷ ನಷ್ಟಪಟ್ಟು ಹಿಂತೆಗೆದಿರುವರು.

ಇಟಲಿಯನರು ಮುಂದರಿಯುತ್ತಿದ್ದಾರೆ. ಆಸ್ಟ್ರಿಯನರು ಕಾರ್ಪಥೇನಿಯ ಮತ್ತು ಸ್ಲೀಯದಿಂದ ತಮ್ಮ ಸೈನ್ಯಗಳನ್ನು ಇಟಲಿಗೆ ವಿರೋಧವಾಗಿ ಕಾದಾಡಲು ಹಿಂದೆ ಕರೆಸಿರುತ್ತಾರೆ ಎಂಬ ವಾರ್ತೆ ಇದೆ.

ಜೂನು ತಾ ೩ರಲ್ಲು ಪಾರ್ಸಿಕೊಲ್ಲಿಯ ಅಮರ ಎಂಬಲ್ಲಿಯ ತುರ್ಕಿ ಗವರ್ನರರು ೩೦ ಆಫೀಸರರು, ೭೦೦ ಸೈನಿಕರ ಸಂಗಡ ಬ್ರಿಟಿಷ ಸೇನೆಗೆ ಶರಣಾಗತರಾಗಿರುತ್ತಾರೆ. ಅಮರವನ್ನು ಈಗ ಬ್ರಿಟಿಷ ಸೇನೆಯು ಸ್ವಾಧೀನ ಮಾಡಿಕೊಂಡಿರುತ್ತದೆ.

ಗ್ರೀಸ್ ದೇಶದ ಅರಸರ ಮೇಲೆ ಶಸ್ತ್ರಪ್ರಯೋಗ ಮಾಡಿ ಪಕ್ಕೆಲುಬಿನ ತುಂಡನ್ನು ತೆಗೆದಿರುವರು. ಅರಸರ ಸ್ಥಿತಿಯು ಮೋದಂಡವಾಗಿದೆಂತ ವಾರ್ತೆ ಬಂದಿರುವದು.

ತಾ. ೬ನೇ ಜೂನು.

ಗೆಲಿಪೊಲಿಯ ಬಳಿಯ ತುರ್ಕರ ಕಂದಕಗಳ ಮೇಲೆ ಮಿತ್ರರು ಹಲ್ಲೆ ಮಾಡಿ ಮಿತ್ರ ಸೇನೆಯು ೫೦೦ ಗಜ ಮುಂದರಿದಿರುತ್ತಾರೆ. ತುರ್ಕರ ಎರಡು ಸಾಲ ಕಂದಕಗಳೂ ಮಿತ್ರ ಸೈನಿಕರಿಗೆ ಸಿಕ್ಕಿರುವವು. ೪೦೦ ತುರ್ಕಿ ಸೈನಿಕರು ಸೆರೆಹಿಡಿಯಲ್ಪಟ್ಟಿರುತ್ತಾರೆ.

ಬಾಲ್ಟಿಕ್ ಸಮುದ್ರದಲ್ಲಿ ಜರ್ಮನರ ಯುದ್ಧನಾವೆಗಳು ಕಾಣಿಸಿಕೊಂಡು ಕರೆಗೆ ಸೇರಲು ಪ್ರಯತ್ನಿಸಿದವು. ರುಶ್ಯನರ ಜಲಾಂತರ್ಗಾಮಿ ನಾವೆಗಳು ಅವುಗಳ ಮೇಲೆ ಹಲ್ಲೆ ಮಾಡಿ ಜರ್ಮನರ ಮೂರು ಯುದ್ಧನಾವೆಗಳನ್ನು ಮುಣುಗಿಸಿದವು ಎಂಬ ವಾರ್ತೆ ಬಂದದೆ.

ಬ್ರಿಟಿಷರ ೧೭ ಟ್ರಾವಲರ್ ದೋಣಿಗಳನ್ನೂ ಸಕ್ಕರೆ ತುಂಬಿದ ಒಂದು ಹಡಗವನ್ನೂ ಜರ್ಮನರ ಜಲಾಂತರ್ಗಾಮಿ ನಾವೆಯು ಮುಣುಗಿಸಿರುವದು.

ಜರ್ಮನರ ಜೆಪಲಿನ್ ನಾವೆಗಳು ಇಂಗ್ಲಾಂಡಿನ ಪೂರ್ವ ಕರಾವಳಿಯಲ್ಲಿ ಕಾಣಿಸಿಕೊಂಡು ಸಿಡಿಮದ್ದುಗಳನ್ನು ಬೀರಾಡಿರುವವು. ಇದರಿಂದ ೫ ಮಂದಿ ಹತರಾಗಿರುವರು. ೪೦ ಮಂದಿ ಗಾಯ ಒಡೆದಿರುವರು. ಬ್ರಿಟಿಷರು ಬ್ರುಸೆಲ್ಸಿನ ಉತ್ತರದಲ್ಲಿ ಜರ್ಮನರ ಎರಡು ಜೆಪಲಿನ್ ನಾವೆಗಳನ್ನು ಹಾಳುಪಡಿಸಿರುತ್ತಾರೆ.

ಉತ್ತರ ಹಿಂದೂಸ್ಥಾನ.

ಶಿಕ್ಷೆಗಳನ್ನು ಮಾಡಿ ಬಂದಿಖಾನೆ ಶಿಕ್ಷೆ ಅನುಭವಿಸಿ, ಬಿಡುಗಡೆ ಹೊಂದಿದ ಬಂದಿವಾನರ ಸಹಾಯಾರ್ಥವಾಗಿ ಕಲ್ಕತ್ತೆಯಲ್ಲಿ ಒಂದು ಸಂಘವು ಏರ್ಪಡಿಸಲ್ಪಟ್ಟಿರುವದು. ಈ ಸಂಘದ ವಾರ್ಷಿಕ ಸಭೆಯು ಇದೇ ಕಳದ ಮೇ ತಾ ೨೮ರಲ್ಲು ಕಲ್ಕತ್ತೆಯ ಹೈಕೋರ್ಟಿನ ಹಳೇ ಸೆಶನ್ಸ್ ಕೋರ್ಟಿನಲ್ಲಿ ಜಸ್ಟಿಸ್ ಬೀಚ್‌ಕ್ರಾಫ್ಟರ ಅಧ್ಯಕ್ಷತೆಯಲ್ಲಿ ಕೂಡಿ ಬಂತು. ಈ ಸಂಘಕ್ಕೆ ಜಸ್ಟಿಸ್ ಬೀಚ್‌ಕ್ರಾಫ್ಟರವರೇ ಅಧ್ಯಕ್ಷರಾಗಿರುವರು. ೧೯೧೪ನೇ ಇಸವಿ ಜನವರಿ ತಾ. ೧ರಿಂದ ೧೯೧೫ನೇ ಮಾರ್ಚ ತಾ ೩೧ರ ವರೆಗೆ ಬಿಡುಗಡೆ ಹೊಂದಿದ ೯೪ ಕೈದಿಗಳಿಗೆ ಈ ಸಂಘದಿಂದ ಸಹಾಯವು ಆಗಿಯದೆ. ಈ ಪೈಕಿ ೩೨ ಮಂದಿ ಯೂರೋಪಿಯನ್ ಮತ್ತು ಯೂರೇಶಿಯನರು, ೬೨ ಮಂದಿ ಭಾರತೀಯರು. ಬಿಡುಗಡೆ ಹೊಂದಿದ ಯೂರೋಪಿಯನ ಬಂದಿಗಳ ಸಹಾಯ ಬಗ್ಗೆ ರೂ. ೨೫೧ ಈ ಸಂಘದಿಂದ ಕೊಡೋಣಾಗಿದೆ. ಈ ಸಂಘದ ಪರವಾಗಿ ಸ್ಥಾಪಿಸೋಣಾದ "ವರ್ಕ್‌ಶೋಪ"ನಲ್ಲಿ ೧೯೧೫ ಜನವರಿ ತಾ. ೧ರಲ್ಲು ಬಿಡುಗಡೆ ಹೊಂದಿದ ೧೩ ಮಂದಿ ಕೈದಿಗಳು ಕೆಲಸಕ್ಕೆ ಸೇರಿಸಲ್ಪಟ್ಟರು. ಕಳದ ೧೫ ತಿಂಗಳಲ್ಲಿ ೬೬ ಬಿಡುಗಡೆ ಹೊಂದಿದ ಬಂದಿವಾನರು ಈ ವರ್ಕ್‌ಶೋಪಿಗೆ ಸೇರಿಸಲ್ಪಟ್ಟರು. ಈ ೧೫ ತಿಂಗಳಲ್ಲಿ ಇವರನ್ನು ಕೆಲಸ ಮಾಡಿಸಿದ್ದರಿಂದ ರೂ. ೪೭೧೩—೨—೩ ಸಂಬಳ ದೊರಕಿರುತ್ತದೆ ಎಂಬದಾಗಿ ಸಂಘದ ವರದಿಯಿಂದ ತಿಳಿದುಬರುತ್ತದೆ.

ಇದೇ ತಾ. ೧ರಲ್ಲು ಬಂಗಾಳದಲ್ಲಿ ಬಿರುಮಳೆ ಬಂದಿರುವದ. ಸಾಮಾನನ್ನು ಕೊಂಡುಹೋಗುತ್ತಿದ್ದ ೧೩ ರೈಲ್ವೆಗಾಡಿಗಳು ಸಂತಹಾರ್‌ಹಾಲ್ ರೈಲ್ವೆಸ್ಟೇಶನಬಳಿ ಗಾಳಿಯಿಂದ ಕವುಚಿಬಿದ್ದಿರುವವು.

ಅರಬಿ ಮತ್ತು ಸಂಸ್ಕೃತ ಭಾಷಾ ಪಾಂಡಿತ್ಯವನ್ನು ಯೂರೋಪಿಗೆ ಹೋಗಿ ಕಲಿಯುವ ಮೂರು ವಿದ್ಯಾರ್ಥಿಗಳಿಗೆ ಇಂಡಿಯಾ ಸರಕಾರದವರು ವೇತನಗಳನ್ನು ಕೊಟ್ಟಿರುವರು. ಮುಂಬಾಯಿಯ ವಿನಾಯಕ ಸಖಾರಾಮ ಮತ್ತು ಪಂಜಾಬಿನ ಪಂಡಿತ ಹರಿರಾಮಚಂದ್ರ ಎಂಬ ಇಬ್ಬರು ಸಂಸ್ಕೃತ ಭಾಷೆಯ ಅಭ್ಯಾಸ ಮಾಡುವದಕ್ಕೂ ಪಂಜಾಬಿನ ಮೌಲ್ವಿ ಮಹಮ್ಮದ್ ಶಾಫಿಯವರು ಅರಬಿ ಭಾಷೆಯನ್ನು ಅಭ್ಯಾಸಿಸಲಿಕ್ಕೂ ಆರಿಸಲ್ಪಟ್ಟಿರುತ್ತಾರೆ.

ಚಿತಗೊಂಗಿನಲ್ಲಿ ಕಠಿಣ ಬಿರುಮಳೆ ಬಂದು ನೆರೆಬಂದಿರುವದು. ದಕ್ಷಿಣ ಸ್ಯಲೆಟಿನಲ್ಲಿ ಕೆಲವು ರೈಲ್ವೆ ಸಂಕಗಳು ನೆರೆಯಿಂದ ಹಾಳಾಗಿರುವವು.

ಜೋರ್ಜ ಚಕ್ರವರ್ತಿಯವರ ಜನನೋತ್ಸವವು ಇದೇ ತಾ ೩ರಲ್ಲು ಹಿಂದೂಸ್ಥಾನದ ಸರ್ವ ಕಡೆಗಳಲ್ಲಿಯೂ ವಿಶೇಷ ಆಡಂಬರವಿಲ್ಲದೆ ಆಚರಿಸಲ್ಪಟ್ಟಿರುವದು. ಹಿಂದಿನಂತೆಯೇ ಜನನ ದಿನದ ಬಹುಮಾನಾರ್ಥವಾಗಿ ಹಿಂದೂಸ್ಥಾನದ ಆಯಾ ಪ್ರಾಂತ್ಯದವರಿಗೆ ಬಿರುದುಗಳು ಕೊಡೋಣಾಗಿವೆ. ಮದ್ರಾಸ್ ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಿರುವ ಬಹುಮಾನಪಟ್ಟ ಪಿ ಎಸ್ ಶಿವಸ್ವಾಮಿ ಅಯ್ಯರ್, ಇಂಡಿಯಾ ಕೌನ್ಸಿಲಿನ ಸರ್ ವಿಲಿಯಂ ಡ್ಯೂಕ್, ಹಿಂದೂಸ್ಥಾನದ ಕೋಶಾಧ್ಯಕ್ಷರಾದ ಸರ್ ವಿಲಿಯಂ ಮೆಯರ್ ಮೊದಲಾದವರಿಗೆ ಸ್ಟಾರ್ ಆಫ್ ಇಂಡಿಯಾ ಎಂಬ ಬಿರುದು ಕೊಡೋಣಾಗಿರುವದು. ಕೆ ಸಿ ಐ ಈ ಬಿರುದು ಸಿಕ್ಕಿದವರಲ್ಲಿ ಮೈಸೂರು ದಿವಾನರಾಗಿರುವ ರಾ। ಎಮ್ ವಿಶ್ವೇಶ್ವರಯ್ಯನವರೂ ಸೇರಿರುತ್ತಾರೆ. ಮಾನ್ಯ ಗಾಂಧಿಯವರಿಗೆ ಕೈಸರ್ ಇ ಹಿಂದ್ ಚಿನ್ನದ ಪದಕವು ದೊರಕಿರುವದು.

೨ ಪಿಸ್ತೂಲುಗಳು ಮತ್ತು ೫೦ ತೋಟೆಗಳು ಕಲ್ಕತ್ತೆಯ ಯುನಿವರ್ಸಿಟಿಯ ಬಿ ಎಸ್ ಸಿ. ಪರೀಕ್ಷೆ ಪಾಸಾದ ಜೋಗೇಂದ್ರ ಕುಮಾರ ಎಂಬವನಲ್ಲಿ ಇದೆ ಎಂಬ ಅನುಮಾನದ ಮೇಲೆ ಪೋಲಿಸಿನವರು ಅವನನ್ನು ಕೈದು ಮಾಡಿರುತ್ತಾರೆ.

ಹಿಂದೂಸ್ಥಾನದ ಸೆಕ್ರೆಟರಿಯಾಗಿ ನೇಮಿಸಲ್ಪಟ್ಟ ಬಹುಮಾನಪಟ್ಟ ಎ ಚೇಂಬರ್ಲೇನರು ತಾನು ಹಿಂದೂಸ್ಥಾನದ ಸೆಕ್ರೆಟರಿಯಾಗಿ ನೇಮಿಸಲ್ಪಟ್ಟಿದ್ದೇನೆಂಬ ವಿಷಯವನ್ನು ಮುಂಬಾಯಿ ಗವರ್ನರರಿಗೆ ತಂತಿ ಮೂಲಕ ತಿಳಿಸಿ ತಾನು ಹಿಂದೂಸ್ಥಾನದ ಹಿತವನ್ನೇ ಬಯಸುವವನಾಗಿದ್ದೇನೆಂಬದನ್ನು ಶ್ರುತಪಡಿಸಿರುತ್ತಾರೆ.

“ಮದ್ರಾಸ್” ಆಸ್ಪತ್ರಿ ಹಡಗವು ಬಸ್ರಾದಿಂದ ತಾ ೨ರಲ್ಲು ಮುಂಬಾಯಿಗೆ ಬಂದು ತಲಪಿರುವದು. ಈ ಹಡಗದಲ್ಲಿ ಗಾಯ ಒಡೆದ ೮ ಬ್ರಿಟಿಷ ಆಫೀಸರರೂ ಗಾಯ ಒಡೆದ ಭಾರತೀಯ ಸೇನಿಕರೂ ೩ ಭಾರತೀಯ ಆಫೀಸರರೂ ೪೭ ಬ್ರಿಟಿಷ ಸೈನಿಕರೂ ಇಂಪೀರಿಯಲ್ ಸರ್ವಿಸ್ ಸೇನೆಯ ೫ ಸೈನಿಕರೂ ಇದ್ದರು.

ಈಚೆಗೆ ಮದ್ರಾಸ್ ಹೈಕೋರ್ಟಿನ ಚೀಫ್ ಜಸ್ಟಿಸರಾಗಿದ್ದ ಸರ್ ಚಾರ್ಲ್ಸ ಅರ್ನೊಲ್ಡ್ ವೈಟರವರನ್ನು ಹಿಂದೂಸ್ಥಾನದ ಸ್ಟೇಟ್ ಸೆಕ್ರೆಟರಿಯವರು ಇಂಡಿಯಾ ಕೌನ್ಸಿಲಿನ ಮೆಂಬರರಾಗಿ ನೇಮಿಸಿರುತ್ತಾರೆ.

ಹಿಂದೂಸ್ಥಾನದಲ್ಲಿ ಏರ್ಪಟ್ಟ ಹಿಂದೂಸ್ಥಾನದ ರಕ್ಷಣಾ ವಿಧಿಗನುಸಾರವಾಗಿ ಮೈಮನ್‌ಸಿಂಗಿನ ಡ್ಯುಪಿಟಿ ಕಲೆಕ್ಟರರ ಮಗನಾದ ಜನನೇಂದ್ರಚಂದ್ರ ಮೊಜುಮುದಾರ ಎಂಬ ವಿದ್ಯಾರ್ಥಿಯು ಚಿತಗೊಂಗಿನಲ್ಲಿ ಇರಬೇಕಾಗಿ ಸರಕಾರದವರು ಅಪ್ಪಣೆ ಮಾಡಿರುತ್ತಾರೆ.

ಮೇ ತಾ ೨೯ನೇಗೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ [illegible] ಮಂದಿಗೆ ಪ್ಲೇಗು ಬೇನೆಯು ಸೋಂಕಿ [illegible] ಮಂದಿ ಮೃತರಾದರು. ಈ ಪೈಕಿ ಮುಂಬಾಯಿಯಲ್ಲಿ ೧೫೫; ಮದ್ರಾಸ್ ೨; ಬಂಗಾಳ [illegible]; ಬಿಹಾರ್ ಮತ್ತು ಒರಿಸ್ಸಾ ೭೦; ಸಂಯುಕ್ತ ಸಂಸ್ಥಾನ ೧೯೩; ಪಂಜಾಬು [illegible]; ಮಧ್ಯಸಂಸ್ಥಾನ ೪; ಮೈಸೂರು ೮; ಹೈದರಾಬಾದ್ ೧; ವಾಯುವ್ಯ ಸರಹದ್ದು ೩೭; ಕಾಶ್ಮೀರ ೧೬೩ ಮರಣಗಳಾದವು.

ಹಿಂದೂಸ್ಥಾನದ ರಕ್ಷಣಾ ವಿಧಿಗನುಸಾರವಾಗಿ ಚಿತಗೊಂಗಿಗೆ ಹೋಗಿರಬೇಕೆಂದು ಆಜ್ಞೆ ಹೊಂದಿದ ಜನನೇಂದ್ರ ಚಂದ್ರ ಮೊಜುಮದಾರನು ತಾನು ಕ್ಷಯರೋಗಪೀಡಿತನಾಗಿದ್ದು ಕಲ್ಕತ್ತೆಯ ಮೆಡಿಕಲ್ ಕಾಲೇಜಿಯಲ್ಲಿ ಶೈತೋಪಚಾರ ಹೊಂದುತ್ತಿರುವದರಿಂದ ತನ್ನನ್ನು ಕಲ್ಕತ್ತೆಯಲ್ಲೇ ಇರಗೊಡಿಸುವರೆ ಆಜ್ಞೆ ಮಾಡಬೇಕೆಂದು ವೈಸರಾಯ ಪ್ರಭುಗಳವರಿಗೆ ಮನವಿ ಮಾಡಿಕೊಂಡಿರುವನು. ಆದರೆ ಕಳದ ಬುಧವಾರದ ವರೆಗೆ ಯಾವ ಹುಕುಂ ಬಾರದಿದ್ದುದರಿಂದ ಜನನೇಂದ್ರಚಂದ್ರ ಮೊಜುಮದಾರನು ಆಜ್ಞೆ ಪ್ರಕಾರ ಚಿತಗೊಂಗಿಗೆ ಹೋಗಿರುತ್ತಾನೆ.

ದಕ್ಷಿಣ ಡಕ್ಕ ಮತ್ತು ಸ್ಯಲೆಟ್ ಜಿಲ್ಲೆಗಳಲ್ಲಿ ನೆರೆಬಂದಿರುವದರಿಂದ ವಿಶೇಷ ನಷ್ಟ ಉಂಟಾಗಿರುವದು. ಹೆಚ್ಚಿನ ಜನರು ನಿರ್ಗತಿಕರಾಗಿರುವರೆಂಬ ವಾರ್ತೆ ಬಂದಿರುತ್ತೆ।

ರಣರಂಗದಲ್ಲಿರುವ ಭಾರತೀಯರಿಗೆ ಬೇಕಾದ ವಸ್ತುಗಳನ್ನು ಒದಗಿಸಿಕೊಡುವ ಬಗ್ಗೆ ಶಿರೋಹಿಯ ಮಹಾರಾಜರವರು ೨೫,೦೦೦ ರೂಪಾಯಿ ದಾನಮಾಡಿರುತ್ತಾರೆ.

ರಂಗೂನಿನಿಂದ ಕಲ್ಕತ್ತೆಗೆ ಬರುತ್ತಿದ್ದ “ಲಂಕೆ” ಎಂಬ ಹಡಗವು ಈರಾವದಿ ನದಿಯನ್ನು ದಾಟಿದ ಕೂಡಲೇ ಹಡಗದಲ್ಲಿದ್ದ ಒಬ್ಬ ಮಹಮ್ಮದೀ ಪ್ರಯಾಣಿಕನಿಗೂ ಇಬ್ಬರು ಸಿಕ್ಖ ಪ್ರಯಾಣಿಕರಿಗೂ ಮಾತಿಗೆ ಮಾತು ನಡೆದು ಮಹಮ್ಮದೀ ಪ್ರಯಾಣಿಕನು ಇಬ್ಬರು ಸಿಕ್ಖರನ್ನೂ ಚೂರಿಯಿಂದ ತಿವಿದನು. ಘಾತುಕನನ್ನು ಪೋಲಿಸಿನವರು ಕೈದು ಮಾಡಿರುತ್ತಾರೆ.

ದಕ್ಷಿಣ ಹಿಂದೂಸ್ಥಾನ.

ಸಿಲೋನು ದ್ವೀಪದ ಪ್ರಧಾನ ಪಟ್ಟಣವಾಗಿರುವ ಕೊಲೊಂಬೋ ಮತ್ತು ಆಜುಬಾಜಿನ ಡಿಸ್ಟ್ರಿಕ್ಟುಗಳಲ್ಲಿ ಕಠಿಣ ದಾಂದಲೆಯು ನಡೆದಿರುವದೆಂಬ ವಾರ್ತೆ ಬಂದಿರುವದು. ಕಳದ ವಾರಾಂತ್ಯದಲ್ಲಿ ಲೋಕೊ ವರ್ಕ್ಸ್ ಶಾಪಿನ ೧೭೦೦ ಮಂದಿ ಕೆಲಸಗಾರರು ಮುಷ್ಕರ ಹಾಕಿದ್ದೇ ಈ ಗೊಂದಲಕ್ಕೆ ಮುಖ್ಯ ಕಾರಣವಾಯಿತು. ಈ ಗೊಂದಲವು ಮಿತಿಮೀರಿ ಹೋದ್ದರಿಂದ ಮಿಲಿಟರಿ ಅಧಿಕಾರಿಗಳು ಉಪಾಯವಿಲ್ಲದೆ ಕೊಲೊಂಬೋದ ಪಶ್ಚಿಮ ಸಂಸ್ಥಾನಗಳಲ್ಲಿ ಯುದ್ಧಕಾಲದ ಕಾನೂನನ್ನೂ ಜಾರಿಗೆ ತರಬೇಕಾಯಿತು. ರೈಲ್ವೆ ವರ್ಕ್ಸ್ ಶಾಪಿನಲ್ಲಿ ಕೆಲವು ಕೆಲಸಗಾರರಿಂದ ಎದ್ದ ದಾಂದಲೆಯು ಘಕ್ಕನೇ ಕಿಚ್ಚಿನಂತೆ ಹರಡಿಕೊಂಡದ್ದರಿಂದ ಕೊಲೊಂಬೋ ಪಟ್ಟಣದ ಮತ್ತು ಆಜುಬಾಜಿನ ಡಿಸ್ಟ್ರಿಕ್ಟಿನ ಜನರು ಅದರಲ್ಲಿ ಪಾಲುಗೊಂಡರು. ಕಡೆಗೆ ಅಧಿಕಾರಿಗಳು ಬಲತ್ಕಾರದಿಂದ ದಂಗೆಯನ್ನು ಇಲ್ಲಿಸಬೇಕಾಯಿತು. ಈ ದಂಗೆಯಿಂದ ಅನೇಕರು ಸತ್ತು ಕೆಲವು ಮನೆಗಳು ಬೂದಿಯಾಗಿ ಹೋದವು. ಹಾಳುಬಿದ್ದ ಮನೆಗಳೂ, ಜೀವದಮರವೆ ಇಲ್ಲದೆ ಸಿಕ್ಕಿದವರ ಮೇಲೆ ಬೀಳುವ ಮನುಷ್ಯರೂ, ಸಹಾಯಹೀನರಾದ ಹೆಂಗಸರೂ, ಈ ದಂಗೆಯಿಂದ ಕೊಲೊಂಬೋ ಪಟ್ಟಣದಲ್ಲಿ ತೋರಿಬಂದರು. ಕೊಲೊಂಬೋ ಪಟ್ಟಣದ ಒಂದಂಶವನ್ನು ಗುರುತಿಸುವದೇ ಕಷ್ಟವಾಗಿದೆ. ಹೀಗೆ ದಂಗೆಗಾರರು ಸಿಕ್ಕಿಸಿಕ್ಕಿದ ಮನೆಗಳನ್ನು ನುಗ್ಗಿ ಲೂಟಿಮಾಡಿ ಸೂರೆಸುಲಿಗೆ ಮಾಡಿದ್ದರಿಂದ ಕಡೆಗೆ ಗವರ್ನರರು ಯುದ್ಧ ಕಾನೂನನ್ನು ಜಾರಿಗೆ ತಂದರು. ಈ ದಂಗೆಯನ್ನು ಅಣಗಿಸುವದಕ್ಕೆ ಬಹುಮಾನಪಟ್ಟ ಫ್ರಾಸರ್, ಮಿ। ಆರ್. ಡಬ್ಲ್ಯು. ಟ್ರೈಡ್, ಲೆಫ್ಟನೆಂಟ್ ಕರ್ನೆಲ್ ಜಯವರ್ಧನ್, ಮಿ। ಡಬ್ಲ್ಯು. ವೈಟ್, ಮಿ। ಇ. ಜೆ. ಜಯವರ್ಧನ್, ರೆವರೆಂಡ್ ಶ್ರೀ ನಾರಿಸಾರ ಮೊದಲಾದವರು ಬಹು ಪ್ರಯತ್ನ [illegible]. ಲೆಫ್ಟನೆಂಟ್ ಕರ್ನೆಲ್ ಜಯವರ್ಧನ್ ಮತ್ತು ಶ್ರೀ [illegible] ತಾ. ೪ನೇ ಸಾಯಂಕಾಲ ಕೆಲನಿಯ ಎಂಬಲ್ಲಿಯ [illegible]ನಕ್ಕೆ ಹೋಗಿ ಅಲ್ಲಿಯ ಮುಖ್ಯ [illegible] ಕೊಲೊಂಬೋ ಕಡೆಗೆ [illegible] ದಂಗೆ [illegible] ಕೆಲವು [illegible] ಮಂದಿ [illegible] ಮಾಗಿ [illegible]

[illegible] ವರ್ಕ್ಸ್ ಶಾಪುಗಳು ಮುಚ್ಚಲ್ಪಟ್ಟವು. ಸರಕಾರ ಕಾರ್ಖಾನೆಗಳೂ ಇತರ ಎಲ್ಲಾ ಕೆಲಸಗಳ ಕಾರ್ಖಾನೆಗೂ ಕೆಲಸಗಾರರಿಲ್ಲದೆ ಮುಚ್ಚಿಹೋಗಿವೆ. ಖಾಸಗಿ ಕಾರ್ಖಾನೆಗಳೂ ಕೆಲಸಗಾರರಿಲ್ಲದ ತೊಂದರೆಯಿಂದ ಮುಚ್ಚಲ್ಪಟ್ಟವೆ. ಮದ್ಯಪಾನದಂಗಡಿಗಳೂ, ಹೊಟೇಲುಗಳೂ ಮುಚ್ಚಲ್ಪಟ್ಟವೆ. ಬಳ್ಳಾರಿ ಡಿಸ್ಟ್ರಿಕ್ಟಿನಿಂದ ಕೊಲಂಬಕ್ಕೆ ಬಂದಿಳಿದಿದ್ದ ಇಬ್ಬರು ಭಾರತೀಯ ವಿದ್ಯಾರ್ಥಿಗಳನ್ನು ಈ ದಂಗೆಗಾರರು ತಡೆದು ಅವರ ಸುಮಾರು [illegible] ರೂಪಾಯಿಗಳನ್ನು ಸೂರೆಮಾಡಿದರು. ಈ ವಿದ್ಯಾರ್ಥಿಗಳು ಅಮೇರಿಕದ ವ್ಯವಸಾಯ ಕಾಲೇಜಿಗೆ ಹೋಗಿ ಸೇರುವವರಾಗಿದ್ದು ಸೀಲೋನಿಗೆ ಬಂದಿಳಿದರು. ಇವರ ವಸ್ತ್ರ ಹಣವೆಲ್ಲಾ ಸುಲಿಗೆಯಾದ್ದರಿಂದ ಅವರು ಪುನಃ ಹಿಂದೂಸ್ಥಾನಕ್ಕೆ ಹಿಂತಿರುಗಬೇಕಾಗಿದೆ.

ದಂಗೆಗಾರರ ಉಪಟಳವನ್ನು ನಿಲ್ಲಿಸುವರೆ ಮಾಡಿದ ಪ್ರಯತ್ನಗಳೆಲ್ಲವೂ ವ್ಯರ್ಥವಾದ ನಂತರ ದಂಗೆಗಾರರಿಗೆ ಗುಂಡುಹಾರಿಸಿ ದಂಗೆಯನ್ನು ಅಡಗಿಸಬೇಕೆಂಬ ಹುಕುಂ ಆಯಿತು. ಸೈನಿಕರೂ ಪೋಲಿಸಿನವರೂ ದಂಗೆಗಾರರಿಗೆ ಗುಂಡು ಹಾರಿಸಿ, ಅನೇಕ ಕಡೆಗಳಲ್ಲಿ ದಂಗೆಯನ್ನು ಅಡಗಿಸಿದರು. ಸಿಂಹಳಿಸ್ ಮತ್ತು ಮೂರರಲ್ಲಿ ಹತರಾದವರ ಸಂಖ್ಯೆ ಹೆಚ್ಚುಕಡಿಮೆ ಒಂದೇ ಆಗಿರುವದು. ಗಾಯಪಡೆದವರು ಆಸ್ಪತ್ರೆಗೆ ಸೈಯಲ್ಪಟ್ಟಿರುತ್ತಾರೆ. ಗುಂಡಿನೇಟಿಗೆ ಬಿದ್ದು ಹತರಾದವರ ಸಂಖ್ಯೆ ಸುಮಾರು ೫೦-೬೦, ಗಾಯಪಟ್ಟವರ ಸಂಖ್ಯೆ ೩೦೦-೪೦೦ ಆಗಬಹುದು. ಗಾಯಪಡೆದವರನ್ನು ಶೈತ್ಯೋಪಚಾರ ಮಾಡಲು ಜನರಲ್ ಆಸ್ಪತ್ರೆಯಲ್ಲಿ ಸ್ಥಳವು ಸಾಲದೆ ಹೋಗಿಯದೆ. ಡಾಕ್ಟರರ ಸಂಖ್ಯೆಯೂ ಸಾಲದೆ ಹೋದುದರಿಂದ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳೇ ಈ ಕೆಲಸವನ್ನು ಕೈಕೊಂಡರು.

~~~~~~

ಇದೇ ತಾ ೩ರಲ್ಲು ಬೆಂಗಳೂರಲ್ಲಿ ಬಿರುಮಳೆಗರೆದು ಪಟ್ಟಣದಲ್ಲೆಲ್ಲಾ ಮರಗಳು ಬೇರುಸಹಿತ ಬಿದ್ದವು. ವಿದ್ಯುಚ್ಛಕ್ತಿಯ ತಂತಿಗಳು ಕೆಲವು ಕಡೆಗಳಲ್ಲಿ ಹಾಳಾದುದ್ದರಿಂದ ರಾತ್ರಿ ಪಟ್ಟಣವೆಲ್ಲಾ ಬೆಳಕಿಲ್ಲದೆ ಇರಬೇಕಾಯಿತು. ಇನ್ನು ಇತರ ಕೆಲವು ಅವಗಡಗಳೂ ನಡೆದಿರುವವು. ಈ ಬಿರುಗಾಳಿ ಸಮಯ ಕಣ್ಣಮ್ಮ ಎಂಬ ಹೆಸರಿನ ೪೦ ವರ್ಷ ವಯಸ್ಸಿನ ಒಬ್ಬ ಹಿಂದೂ ಹೆಂಗಸು ತನ್ನ ಹಳೇ ಮನೆಯಲ್ಲಿ ತಟ್ಟಿ ಸರಿಮಾಡುತ್ತಿರುವಾಗ ಬಿರುಗಾಳಿಯು ತಟ್ಟಿಸಹಿತ ಆಕೆಯನ್ನು ಹಾರಿಸಿಕೊಂಡು ಹೋಯಿತು. ದಾರಿಯಲ್ಲಿ ಮೋದಂಡ ಸ್ಥಿತಿಯಲ್ಲಿ ಬಿದ್ದಿದ್ದ ಇವಳನ್ನು ಲೇಡಿಕರ್ಜನ್ ಆಸ್ಪತ್ರೆಗೆ ಸಾಗಿಸಿದರು. ಕ್ಯುಬನ್ ಫಾರ್ಕಿನಲ್ಲಿ ದಾರಿಗಳು ಮುರಿದು ಬಿದ್ದ ಮರದ ಕೊಂಬೆಗಳಿಂದ ಮುಚ್ಚಲ್ಪಟ್ಟವು. ಅನೇಕ ಅಂಗಡಿ ಮನೆಗಳು ಘೋರ ಹೆಚ್ಚಿನ ನಷ್ಟವುಂಟಾಗಿರುವದು. ಒಟ್ಟಿಗೆ ಮೂರು ಅಂಗುಲಕ್ಕಿಂತಲೂ ಹೆಚ್ಚಿಗೆ ಮಳೆಗರೆದಿರುವದು. ನಿಲಾಸಂದ್ರ ಎಂಬಲ್ಲಿ ಬಡವರು ವಾಸಿಸುವ ಮನೆಗಳೆಲ್ಲಾ ಬಿರುಗಾಳಿಗೆ ಸಿಕ್ಕಿ ನೆಲಸಮವಾದವು. ಅನೇಕರು ಮಾಡಿಲ್ಲದ ಮನೆಗಳ ಪಡಸಾಲೆಯಲ್ಲಿ ರಾತ್ರಿಕಾಲವನ್ನು ಕಳೆಯಬೇಕಾಯಿತು.

~~~~~~

ಮಲಬಾರಿನ ಜಮೂರಿನ್ ರಾಜರವರು ತನ್ನ ಆಸ್ತಿಯನ್ನೆಲ್ಲಾ ಸರಕಾರದ ಆಡಳಿತಗೆ ಒಪ್ಪಿಸಿಕೊಟ್ಟಿರುವರು. ಜಮೂರಿನ್ ಕುಟುಂಬದ ಎಲ್ಲಾ ಪ್ರಿನ್ಸರೂ ಇದಕ್ಕೆ ಒಪ್ಪಿಗೆ ಕೊಟ್ಟಿರುವರು.

~~~~~~

ಕೊಚ್ಚಿಯ ದಿವಾನರಾಗಿದ್ದ ಮ॥ ಜೆ. ಡಬ್ಲ್ಯು ಭೋರ್ ಐ. ಸಿ. ಎಸ್‌ರವರು ರಜೆಯಿಂದ ಹಿಂತಿರುಗಿ ತಾ ೧೭ರಲ್ಲು ಚಾರ್ಜು ತೆಕ್ಕೊಳ್ಳುವರೆಂಬ ವಾರ್ತೆ ಇದೆ.

~~~~~~

ಕೊಲ್ಲಂಗೋಡಿನ ರಾಜರ ಚಿಕ್ಕ ಸಹೋದರನಾದ ಮ॥ [illegible]ಗೋಪಾಲನ್‌ರವರು ಅಸಿಸ್ಟಾಂಟ್ ಪೋಲಿಸ್ ಸುಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟು ವೆಲ್ಲೂರಿನ ಪೋಲಿಸ್ ಟ್ರೈನಿಂಗ್ ಶಾಲೆಗೆ ಹೋಗಿರುತ್ತಾರೆ.

~~~~~~

ಮ॥ ರಾ॥ ಜಿ. ಕೃಷ್ಣರಾವ್ ಬೆರಿಷ್ಟರ್ ಎಟ್‌ಲಾರವರು ಮದ್ರಾಸ್ ಸ್ಮಾಲ್ ಕಾಸಸ್ ಕೋರ್ಟುಗಳ ರಿಜಿಸ್ಟ್ರಾರರಾಗಿ ನೇಮಿಸಲ್ಪಟ್ಟಿರುತ್ತಾರೆ. ಮ॥ ರಾ॥ ಕೃಷ್ಣರಾಯರು ಕೋಲಾರ್ ಡಿಸ್ಟ್ರಿಕ್ಟಿಗೆ ಸೇರಿದ [illegible] ಗಲ್ಲಿನೇ [illegible] ಜನವರಿ ತಾ [illegible] ಮೈಸೂರಿನ ಮಾನ್ಯಕುಟುಂಬದವರಾಗಿದ್ದು [illegible] ಮದ್ರಾಸ್ [illegible] ಕಾಲೇಜಿಯಲ್ಲಿ ಬಿ. ಎ. ಪರೀಕ್ಷೆ [illegible] ಅಲ್ಲಿಯೇ ಉಪಾಧ್ಯಾಯ [illegible] ಮದ್ರಾಸಿನಲ್ಲಿ ವಕೀಲ [illegible] ಇವರ

ವರೆಗೆ ವಕೀಲ ವೃತ್ತಿ ನಡಿಸಿ ನಂತರ ಇಂಗ್ಲಾಂಡಿಗೆ ಹೋಗಿ ೧೯೦೩ರಲ್ಲು ಬೆರಿಷ್ಟರ್ ಪರೀಕ್ಷೆ ಕೊಟ್ಟು, ಹಿಂದಿರುಗಿ ಬಂದು ಮದ್ರಾಸ್ ಹ್ಯಾಕೋರ್ಟಿನಲ್ಲಿ ಬೆರಿಷ್ಟರ್ ವೃತ್ತಿ ನಡಿಸಿದರು. ಅಮೇರಿಕ, ಕೆನಡಾ ಮೊದಲಾದ ದೇಶಗಳನ್ನೂ ಇವರು ಸಂಚರಿಸಿರುತ್ತಾರೆ.

~~~~~~

ಮದ್ರಾಸ್ ಹೈಕೋರ್ಟು ಜಡ್ಜರಾದ ಸರ್ ಸಿ ಶಂಕರನ್ ನಾಯರರು ೪ ತಿಂಗಳ ರಜೆ ತಕ್ಕೊಂಡಿರುವದರಿಂದ ಮದ್ರಾಸ್ ಹೈಕೋರ್ಟ್ ವಕೀಲರಾದ ಮ ರಾ ಕೆ ಶ್ರೀನಿವಾಸ ಐಯ್ಯಂಗಾರ್ ಬಿ ಎ ಬಿ ಎಲ್‌ರವರು ಟೆಂಪರರಿ ಜಡ್ಜರಾಗಿ ನೇಮಿಸಲ್ಪಡುವರೆಂಬ ವಾರ್ತೆ ಇದೆ.

~~~~~~

ಸೀಲೋನಿನ ಸಿಂಹಳಿ ಮತ್ತು ಮೂರರೊಳಗೆ ಆದ ದಾಂಧಲೆಯು ಸೈನಿಕರ ಸಹಾಯದಿಂದ ನಿಲ್ಲಿಸಲ್ಪಟ್ಟಿರುವದು. ಈ ಗೊಂದಲದಲ್ಲಿ ಹತರಾದವರಲ್ಲಿ ಹೆಚ್ಚಿನವರು ಸಿಂಹಳಿ ಮತ್ತು ಮೂರರು. ಯೂರೋಪಿಯನರಲ್ಲಿ ಒಬನು ಮಾತ್ರ ಹತನಾಗಿರುವನು. ಗಾಯ ಒಡೆದ ೨೦೦ ಮಂದಿ ಆಸ್ಪತ್ರೆಯಲ್ಲಿ ಶೈತ್ಯೋಪಚಾರ ಹೊಂದುತ್ತಿದ್ದಾರೆ.

~~~~~~

ಬಂಗಾಳದಲ್ಲಿ ಕಳೆದ ಆದಿತ್ಯವಾರ ಬಿರುಮಳೆ ಬಂದಿರುವದು. ಹೌರ ಮತ್ತು ಆಗ್ರಟಾಳದ ಸುತ್ತಲಿನ ಸ್ಥಳಗಳೂ ನೆರೆಯಿಂದ ಮುಣುಗಿದವು. ಗುಡ್ಡಗಳಲ್ಲಿದ್ದ ಜನರು ತಮ್ಮ ಮನೆಗಳನ್ನು ಬಿಟ್ಟು ಪಟ್ಟಣಕ್ಕೆ ಬಂದರು. ಟಿಪ್ಪರದ ಮಹಾರಾಜರು ಕಂಚ್ಚಾವನದಿಂದ ಕೆಳಬಂದು ನಿರ್ಗತಿಕರಾದವರಿಗೆ ಸಹಾಯ ಮಾಡಲು ತೊಡಗಿದ್ದಾರೆ. ಮಹಾರಾಣಿಯವರು ಕೂಡಾ ನಿರ್ಗತಿಕರಾಗಿರುವ ಹೆಂಗಸರಿಗೆ ಬಲು ಬಗೆಯಲ್ಲಿ ಸಹಾಯ ಮಾಡುತ್ತಿದ್ದಾರೆ. ಕೆಲವು ನೂರು ಹೆಂಗಸರಿಗೆ ಅರಮನೆಯಲ್ಲಿ ಆಶ್ರಯವು ಕೊಡೋಣಾಗಿದೆ. ಮಹಾರಾಜರವರು ಜನರಿಗೆ ಅನ್ನೋದಕಗಳನ್ನು ಕೊಡಿಸುತ್ತಿದ್ದಾರೆ. ನೆರೆಯಿಂದ ಅಸ್ಸಾಮ ಬಂಗಾಳ ರೈಲ್ವೆದಾರಿಯು ಕೆಲವು ಕಡೆಗಳಲ್ಲಿ ಹಾಳಾಗಿರುವವು ಎಂಬ ವಾರ್ತೆ ಬಂದದೆ. ಸಂಸ್ಥಾನದ ಮತ್ತು ಬುನೂರ್ಟಿಯ ಮಧ್ಯೆ ಇದ್ದ ರೈಲ್ವೆ ಸಂಕವು ನೆರೆಯಿಂದ ಕೊಚ್ಚಲ್ಪಟ್ಟಿದೆ. ನಯನಪುರದ ಮತ್ತೊಂದು ಸಂಕವೂ ತಕ್ಕ ಹಾಳಾಗಿದೆ.

~~~~~~

ದಕ್ಷಿಣ ಕನ್ನಡ ಮತ್ತು ಮಲಬಾರ್ ಜಿಲ್ಲೆಗಳಲ್ಲಿರುವ ೨೫ ಸಂಸ್ಕೃತ ಶಾಲೆಗಳ ಮೆನೇಜರರ ಕನ್ಫರೆನ್ಸ್ ಇದೇ ತಾ ೩ರಲ್ಲು ಬಹುಮಾನಪಟ್ಟ ದಿವಾನ್ ಬಹದ್ದೂರ್ ಪಿ ರಾಜಗೋಪಾಲಾಚಾರ್ಯರ್ ಎಮ್ ಎ ಬಿ ಎಲ್ ಸಿ ಐ ಇವರ ಅಧ್ಯಕ್ಷತೆಯಲ್ಲಿ ಪಟ್ಟಾಂಬಿಯದ ಕೊಲೀಜ್ ಸಭಾಸದನದಲ್ಲಿ ಕೂಡಿಬಂತು. ಸಂಸ್ಕೃತ ಭಾಷಾಭಿವೃದ್ಧಿಯನ್ನು ಮಾಡುವದು ಹೇಗೆ ಎಂಬುದೇ ಈ ಸಭೆಯ ಮುಖ್ಯ ಉದ್ದೇಶವಾಗಿತ್ತು. ಸೆಂಟ್ರಲ್ ಸಂಸ್ಕೃತ ಕಾಲೇಜಿಯ ಮುಖ್ಯೋಪಾಧ್ಯಾಯರೂ ಈ ಕನ್ಫರೆನ್ಸ್ ಸ್ಥಾಪನೆಗೆ ಮೂಲಪುರುಷರೂ ಆದ ಮ॥ ರಾ॥ ಪಿ ನೀಲಕಂಠ ಶರ್ಮರವರು ೧೯೦೮ನೇ ಇಸವಿಯಿಂದ ಇಂಥಾ ಕನ್ಫರೆನ್ಸುಗಳಲ್ಲಿ ಆದ ವೃತ್ತಾಂತವನ್ನು ಸಂಸ್ಕೃತ ಭಾಷೆಯಲ್ಲಿ ತಿಳಿಯ ಹೇಳಿದರು. ಅನಂತರ ಕೆಲವು ಠರಾವುಗಳು ಸಭೆಯಲ್ಲಿ ಮಂಜೂರಾದವು. ಕಡೆಗೆ ಸಭಾಧ್ಯಕ್ಷರ ಅರ್ಥಗರ್ಭಿತವಾದ ಭಾಷಣಕೊಟ್ಟರು.

~~~~~~

ದಕ್ಷಿಣ ಕನ್ನಡ.

~~~~~~

ಸಹಕಾರ

ಸರ್ಕ್ಯುಲರು ನಂಬ್ರ ೯.

ವಾಯಿದೆ ಕಳೆದು ಪಾವತಿಯಾಗದ ಸಾಲಗಳು

